ಮನುಷ್ಯ ಜಾತಿ
ತಾನೊಂದೆ ವಲಂ

ಶಿವಕೋಟ್ಯಾಚಾರ್ಯರ

ಸಮಾರಾಧನೆ

ಗದ್ಯಾನುವಾದ: ಟಿ. ಕೇಶವ ಭಟ್ಟ

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು-೫೬೦೦೧೯

ಶಿವಕೋಟ್ಯಾಚಾರ್ಯರ

ವಡ್ಡಾರಾಧನೆ

ಗದ್ಯಾನುವಾದ

ಟಿ. ಕೇಶವ ಭಟ್ಟ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು- ೫೬೦೦೧೮

Shivakotyacharyara **VADDARADHANE** - Original with prose rendering by : **T. Keshava Bhat** & published by **Kannada Sahitya Parishattu,** Pampa Mahakavi Road, Chamarajapete, Bengaluru - 560018 Pages : iv + 332 Price : **Rs. 140=00 ; 2015**

ಮುದ್ರಣದ ವರ್ಷ : ೨೦೧೫
ಪ್ರತಿಗಳು : ೨೦೦೦
ಬೆಲೆ : ಒಂದು ನೂರ ನಲವತ್ತು ರೂಪಾಯಿಗಳು

© ಹಕ್ಕುಗಳನ್ನು ಕಾಯ್ದಿರಿಸಿದೆ.

ಮುಖಪುಟ ವಿನ್ಯಾಸ : ಫ್ಲವರ್ ಗ್ರಾಫಿಕ್

ಪ್ರಕಟಣಾ ಸಮಿತಿ

ಅಧ್ಯಕ್ಷರು – ಶ್ರೀ ಪುಂಡಲೀಕ ಹಾಲಂಬಿ
ಸಮ್ಮೇಳನಾಧ್ಯಕ್ಷರು – ಡಾ. ಸಿದ್ಧಲಿಂಗಯ್ಯ
೮೧ನೇ ಅ.ಭಾ.ಕ.ಸಾ. ಸಮ್ಮೇಳನಾಧ್ಯಕ್ಷರು

ಸದಸ್ಯರು

ಶ್ರೀ ಬಿ.ಎಂ. ಸದಾಶಿವಪ್ಪ ಶ್ಯಾಗಲೆ
ಶ್ರೀ ನೀಲಾವರ ಸುರೇಂದ್ರ ಅಡಿಗ
ಡಾ. ಸೋ.ಮು. ಭಾಸ್ಕರಾಚಾರ್
ಶ್ರೀ ಎಸ್.ಜಿ. ಕೋಟಿ
ಡಾ. ಮಳಲಿ ವಸಂತಕುಮಾರ್
ಡಾ. ಮಾನಸ
ಡಾ. ಎ.ವಿ. ನಾವಡ
ಶ್ರೀ ಬಿ.ಎನ್. ರಾಮಸ್ವಾಮಿ
ಶ್ರೀ ಎನ್. ನಾರಾಯಣ
ಡಾ. ವಸುಂಧರಾ ಭೂಪತಿ
ಡಾ. ರಾಜೇಂದ್ರ ಎಸ್. ಗಡಾದ
ಡಾ. ಡಿ.ಕೆ. ಚಿತ್ತಯ್ಯ ಪೂಜಾರ್
ಡಾ. ಸುಜಾತಾ ಜಂಗಮಶೆಟ್ಟಿ
ಶ್ರೀ ಸಿ.ಕೆ. ರಾಮೇಗೌಡ
ಡಾ. ರಾಜಶೇಖರ ಹತಗುಂದಿ
ಶ್ರೀ ಪಿ. ಮಲ್ಲಿಕಾರ್ಜುನಪ್ಪ

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಶ್ರೀ ಜೆ.ಎನ್. ಶಾಮರಾವ್
ಸಂಚಾಲಕ

ಮುದ್ರಣ : ಬಿ.ಎಂ.ಶ್ರೀ. ಆಚ್ಚುಕೂಟ ಆಫ್‌ಸೆಟ್, ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತಿನಿಂದ ಮರುಮುದ್ರಣಗೊಳ್ಳುತ್ತಿರುವ ಮತ್ತು ಹೊಸದಾಗಿ ಮುದ್ರಿತವಾಗುತ್ತಿರುವ ವಿವಿಧ ಪ್ರಕಾರಗಳ ಪುಸ್ತಕಗಳನ್ನು ಸಹೃದಯರು ಮೆಚ್ಚಿ ಸ್ವೀಕರಿಸಲು ಯೋಗ್ಯವಾಗುವಂತೆ ಆಕರ್ಷಕ ವಿನ್ಯಾಸಗಳಲ್ಲಿ ಸಿದ್ಧಪಡಿಸುವ ಆಶಯ ನಮ್ಮದು.

ಸಮಗ್ರ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆ ಎಂಬ ಹೆಗ್ಗಳಿಕೆಗೆ ಭಾಜನವಾಗಿರುವ, ೧೯೧೫ರಲ್ಲಿ ಸ್ಥಾಪಿತವಾದ ಕನ್ನಡ ಸಾಹಿತ್ಯ ಪರಿಷತ್ತು, ಶತಮಾನೋತ್ಸವನ್ನು ಆಚರಿಸಿಕೊಳ್ಳುತ್ತಲಿದೆ. ಕಳೆದ ೯೯ ವರ್ಷಗಳಿಂದಲೂ ಕನ್ನಡ ಗ್ರಂಥಗಳ ಪ್ರಕಟಣೆಯನ್ನು ನಿರಂತರವಾಗಿ ಮಾಡುತ್ತಾ ಬಂದಿರುವ ಪರಿಷತ್ತು ಸುಮಾರು ಒಂದು ಸಾವಿರದ ನಾಲ್ಕುನೂರಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿರುತ್ತದೆ. ಸರಿಸುಮಾರು ಒಂದು ಶತಮಾನದಷ್ಟು ಕಾಲಾವಧಿಯ ನಿರಂತರತೆ ಹಾಗೂ ಕೃತಿಗಳ ಮೌಲಿಕತೆಯ ದೃಷ್ಟಿಯಿಂದ ಇದೊಂದು ಅಪೂರ್ವ ದಾಖಲೆಯಾಗಿದೆ. ಕನ್ನಡ ಪ್ರಕಟಣಾ ಚರಿತ್ರೆಯಲ್ಲಂತೂ ಅನನ್ಯವೇ ಸರಿ.

ಓದುಗರಿಂದ ಬರುತ್ತಿರುವ ಅಪಾರ ಬೇಡಿಕೆಯ ಹಿನ್ನೆಲೆಯಲ್ಲಿ 'ಶಿವಕೋಟ್ಯಾಚಾರ್ಯರ ವಡ್ಡಾರಾಧನೆ' ಮೂಲಪಠ್ಯ ಹಾಗೂ ಗದ್ಯಾನುವಾದದ ಕೃತಿಯನ್ನು ಪುನರ್ ಮುದ್ರಿಸಲಾಗುತ್ತಿದೆ.

ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಿದ ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿವರ್ಗಕ್ಕೆ ಹಾಗೂ ಈ ಕಾರ್ಯದಲ್ಲಿ ಸಹಕಾರ ನೀಡಿದ ಪ್ರಕಟಣ ಸಮಿತಿಯ ಎಲ್ಲಾ ಸದಸ್ಯರಿಗೆ ನನ್ನ ಕೃತಜ್ಞತೆಗಳು.

೮-೬-೨೦೧೫

ಪುಂಡಲೀಕ ಹಾಲಂಬಿ
ಅಧ್ಯಕ್ಷರು

ವಿಷಯ ಸೂಚಿ

	ಉಪೋದ್ಘಾತ	....	೧
	ಪೀಠಿಕೆ	....	೭
೧.	ಸುಕುಮಾರ ಸ್ವಾಮಿಯ ಕಥೆ	....	೮
೨.	ಸುಕೌಶಳ ಸ್ವಾಮಿಯ ಕಥೆ	....	೫೯
೩.	ಗಜಕುಮಾರನ ಕಥೆ	....	೯೨
೪.	ಸನತ್ಕುಮಾರಚಕ್ರವರ್ತಿಯ ಕಥೆ	....	೯೬
೫.	ಅಣ್ಣಿಕಾಪುತ್ರನ ಕಥೆ	....	೧೨೭
೬.	ಭದ್ರಬಾಹು ಭಟ್ಟಾರರ ಕಥೆ	....	೧೩೦
೭.	ಲಲಿತಘಟೆಯ ಕಥೆ	...	೧೬೬
೮.	ಧರ್ಮಘೋಷಭಟಾರರ ಕಥೆ	....	೧೭೮
೯.	ಸಿರಿದಿಣ್ಣನೆಂಬ ಭಟಾರರ ಕಥೆ	....	೧೮೪
೧೦.	ವೃಷಭಸೇನ ಭಟಾರರ ಕಥೆ	....	೧೯೧
೧೧.	ಕಾರ್ತಿಕ ಋಷಿಯ ಕಥೆ	....	೧೯೯
೧೨.	ಅಭಯಘೋಷರೆಂಬ ಮುನಿಯ ಕಥೆ	....	೨೦೬
೧೩.	ವಿದ್ಯುಚ್ಚೋರನೆಂಬ ರಿಸಿಯ ಕಥೆ	....	೨೦೯
೧೪.	ಗುರುದತ್ತ ಭಟಾರರ ಕಥೆ	....	೨೩೨
೧೫.	ಚಿಲಾತಪುತ್ರನ ಕಥೆ	....	೨೭೪
೧೬.	ದಂಡಕನೆಂಬ ರಿಸಿಯ ಕಥೆ	....	೨೮೪
೧೭	ಮಹೇಂದ್ರದತ್ತಾಚಾರ್ಯರ್ ಮೊದಲಾದ ಐನೂರ್ವರ್ ರಿಸಿಯರ್ಕಳ ಕಥೆ	....	೨೯೨
೧೮.	ಚಾಣಾಕ್ಯ ರಿಸಿಯ ಕಥೆ	....	೨೯೮
೧೯.	ವೃಷಭಸೇನರೆಂಬ ರಿಸಿಯರ ಕಥೆ	....	೩೧೭

ಅನುಬಂಧ

೧.	ಜೈನಪಾರಿಭಾಷಿಕ ಶಬ್ದಗಳ ಮತ್ತು ಸಂಖ್ಯಾರ್ಥಗಳ ಟಿಪ್ಪಣಿ	....	೩೧೯
೨.	ಶಬ್ದಕೋಶ	....	೩೨೪

ಉಪೋದ್ಘಾತ

ಕರ್ತೃ-ಕೃತಿ ವಿಚಾರಗಳು

ಕನ್ನಡ ಸಾಹಿತ್ಯದಲ್ಲಿ ವಡ್ಡಾರಾಧನೆ ಒಂದು ಅಪೂರ್ವ ಗದ್ಯಕೃತಿ. ಇದು ಹತ್ತೊಂಬತ್ತು ಕಥೆಗಳ ಗುಚ್ಛ. ಪ್ರತಿಯೊಂದು ಕಥೆಯ ಪ್ರಾರಂಭದಲ್ಲಿ ಪ್ರಾಕೃತನಿಬದ್ಧವಾದ ಒಂದು ಗಾಹೆ (ಗಾಥೆ)ಯಿರುತ್ತದೆ. ಅದು ಕಥೆಯ ಸಾರಸೂಚಿಯಾಗಿರುತ್ತದೆ. ಕಥೆಯ ನಡುವೆಯೂ ಪ್ರಾಕೃತ - ಸಂಸ್ಕೃತ- ಕನ್ನಡ ಭಾಷೆಯ ಪದ್ಯಗಳು ಬರುವುದೂ ಉಂಟು. ಒಟ್ಟಿನಲ್ಲಿ ಪದ್ಯ ಸಂಖ್ಯೆ ಕಡಮೆ, ಗದ್ಯವೇ ಉದ್ದಕ್ಕೂ ಹಾಸುಹೊಕ್ಕಾಗಿದೆ. ಗದ್ಯದ ಭಾಷೆ ಪೂರ್ವದ ಹಳಗನ್ನಡ ಮತ್ತು ಹಳಗನ್ನಡ ಮಿಶ್ರವಾಗಿ ಸಂಸ್ಕೃತವನ್ನೂ ಸಾಕಷ್ಟು ಬಳಸಿಕೊಂಡು ಕನ್ನಡದ ದೇಶೀಶಬ್ದಗಳ ಸೊಗಸಾದ ಬೆರಕೆಯಿಂದ ಚೆಲುವಾಗಿದೆ. ನಿರೂಪಣೆ ಮನಮುಟ್ಟುವಂತಿದೆ. ಅಡಕವಾದ ನೀತಿ-ತತ್ವವಿಚಾರವಂತೂ ಬಹಳ ಹಿರಿದು.

ಕಾಲದಲ್ಲಿ ವಡ್ಡಾರಾಧನೆಗಿಂತಲೂ ಹಿಂದಿನದಾಗಿ ಕನ್ನಡದ ಮೊತ್ತಮೊದಲ ಉಪಲಬ್ಧ ಲಕ್ಷಣಕೃತಿಯಾಗಿರುವ ಕವಿರಾಜಮಾರ್ಗವು (ಕಾಲ ೮೬೦) ಕನ್ನಡದಲ್ಲಿ 'ಗದ್ಯಾಶ್ರಮ ಗುರುತಾಪ್ರತೀತಿಯಂ ಕೆಯ್ಕೊಂಡ' ಗದ್ಯಕವಿಗಳ ನಾಮೋಲ್ಲೇಖವನ್ನು ಮಾಡಿದೆ (೧-೨೯). ಅಂಥವರ ಗದ್ಯಕೃತಿ ದೊರೆಯದಿರುವುದರಿಂದ ವಡ್ಡಾರಾಧನೆಗೇ ಈಗ ಪ್ರಥಮ ಗದ್ಯಕೃತಿ ಪಟ್ಟ ಸಲ್ಲುವಂತಾಗಿದೆ.

ಮೊತ್ತ ಮೊದಲಾಗಿ ಈ ಗದ್ಯಕೃತಿಯನ್ನು ಕಂಡ ಕೆ. ಬಿ. ಪಾಠಕರು ೧೮೮೩ರಲ್ಲಿ ಇಂಡಿಯನ್ ಆಂಟಿಕ್ವೆರಿಯಲ್ಲಿ (I.A. XXII) ಇದರ ಕರ್ತೃ ರೇವಕೋಟ್ಯಾಚಾರ್ಯನೆಂದು ಉಲ್ಲೇಖ ಮಾಡಿದ್ದಾರೆ. ಅದೇ ಆಂಟಿಕ್ವೆರಿಯ ಸಂಪುಟದಲ್ಲಿ ಡಾ. ಫ್ಲೀಟರು ಈ ಗದ್ಯಕೃತಿಯ ಹೆಸರು 'ಉಪಸರ್ಗ ಕೇವಲಿಗಳ ಕಥೆ' ಎಂದು ಪಾಠಕರು ತಮಗೆ ತಿಳಿಸಿರುವಂತೆ ಹೇಳಿದ್ದಾರೆ. ದಿ. ಆರ್. ನರಸಿಂಹಾಚಾರ್ಯರು ಕರ್ಣಾಟಕ ಕವಿಚರಿತೆಯ ಪ್ರಥಮ ಸಂಪುಟದಲ್ಲಿ (೧೯೨೪) ವಡ್ಡಾರಾಧನೆಯ ಕರ್ತೃ ರೇವಕೋಟ್ಯಾಚಾರ್ಯನೆಂತಲೇ ಬರೆದರು. (೧೯೬೧ರಲ್ಲಿ ಹೊರ ಬಂದ ಇದೇ ಗ್ರಂಥದ ಪರಿಷ್ಕೃತ ದ್ವಿತೀಯ ಮುದ್ರಣದಲ್ಲಿ (ಅನುಬಂಧ II-ಪುಟ ೫೫) ಕರ್ತೃನಾಮವನ್ನು ಶಿವಕೋಟ್ಯಾಚಾರ್ಯ ಎಂದು ತಿದ್ದುಪಡಿ ಮಾಡಲಾಗಿದೆ.) ಹರಿಷೇಣನ ಬೃಹತ್ಕಥಾಕೋಶದ ಸಂಪಾದಕರಾದ ಡಾ. ಆ.ನೇ. ಉಪಾಧ್ಯೆ ಅವರು ಅದರ ಪ್ರಸ್ತಾವನೆಯಲ್ಲಿ ವಡ್ಡಾರಾಧನೆ ಎಂಬ ಕನ್ನಡ ಗದ್ಯಕೃತಿಯ ಹೆಸರಿನ ಬಗೆಗೆ ಚರ್ಚಿಸಿ, 'ಉಪಸರ್ಗ ಕೇವಲಿಗಳ ಕಥೆ' ಎಂಬುದನ್ನೇ ಪುರಸ್ಕರಿಸಿದ್ದಾರೆ. ಅಡಕವಾದ ಕಥೆಗಳ ವಿಷಯದ ದೃಷ್ಟಿಯಿಂದ ಈ ಹೆಸರನ್ನು ಒಪ್ಪಿರುವ ಡಿ.ಎಲ್. ನರಸಿಂಹಾಚಾರ್ಯರು ಈ ಕೃತಿಯನ್ನು ಐದು ಮೂಲಪ್ರತಿಗಳಿಂದ ಸಂಪಾದಿಸಿ, ಕವಿಕೃತಿನಾಮಗಳ ಒಂದು ಇತ್ಯರ್ಥಕ್ಕೆ ಬಂದು, ವಡ್ಡಾರಾಧನೆ ಎಂಬುದು ಕೃತಿನಾಮವೆಂದೂ ಶಿವಕೋಟ್ಯಾಚಾರ್ಯ ಎಂಬುದು ಕರ್ತೃನಾಮವೆಂದೂ ತಾತ್ಕಾಲಿಕವಾದ ತೀರ್ಮಾನ ಮಾಡಿದ್ದಾರೆ.

ಡಿ.ಎಲ್.ಎನ್. ಅವರು ಮೂಲಪ್ರತಿಗಳನ್ನು ಎರಡು ವಿಭಾಗಮಾಡಿ, ಅವುಗಳಲ್ಲಿ ಒಂದು ವಿಭಾಗದ ಮೂರು ಪ್ರತಿಗಳಲ್ಲಿಯೂ ಶಿವಕೋಟ್ಯಾಚಾರ್ಯ ಎಂಬ ಹೆಸರಿರುವುದನ್ನು ತಿಳಿಸಿ ಪ್ರತಿಕಾರರು 'ಶಿ' ಎಂಬುದನ್ನು ರೂಪಸಾದೃಶ್ಯದಿಂದ 'ರೆ' ಎಂದು ಭಾವಿಸಿದ ಪ್ರಮಾದದಿಂದ 'ರೇವಕೋಟ್ಯಾಚಾರ್ಯ' ಆದುದಾಗಿ ತರ್ಕಿಸಿದ್ದಾರೆ. ಇದರಿಂದ ಶಿವಕೋಟ್ಯಾಚಾರ್ಯ ಎಂಬ ಹೆಸರು ದೃಢವಾಗಿದೆ. ಇದೂ ಅಲ್ಲದೆ, 'ಪುಣ್ಯಾಸ್ರವಕಥಾಕೋಶ'ವೆಂಬ ಗ್ರಂಥವನ್ನು ಸಂಸ್ಕೃತದಲ್ಲಿ ಬರೆದ ರಾಮಚಂದ್ರ ಮುಮುಕ್ಷುವಿನ ಹೇಳಿಕೆಯಂತೆ, ಶಿವಕೋಟ್ಯಾಚಾರ್ಯನೆಂಬವನು ಪ್ರಾಕೃತದಲ್ಲಿ 'ವಡ್ಡಾರಾಧನೆ' ಎಂಬ ಗ್ರಂಥವನ್ನು ಬರೆದಿದ್ದು ಅದನ್ನು ಭ್ರಾಜಿಷ್ಣು ಎಂಬವನು "ಆರಾಧನಾ ಕರ್ಣಾಟ ಟೀಕಾ" ಎಂಬ ಹೆಸರಿನಲ್ಲಿ ಪರಿವರ್ತಿಸಿದ್ದಾನೆ - ಎಂದು ತಿಳಿದು ಬರುತ್ತದೆ. ಡಾ. ಎಂ.ಎಂ. ಕಲಬುರ್ಗಿಯವರು 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ಗ್ರಂಥದಲ್ಲಿ (ಪುಟ ೨೩೨-೩೩) ಈ ಕೃತಿನಾಮ-ಕರ್ತೃನಾಮಗಳನ್ನೇ ಎತ್ತಿ ಹಿಡಿದಿದ್ದಾರೆ. ಈ ಅಭಿಪ್ರಾಯವನ್ನು ಇತರರು ಯಾರೂ ಸಕಾರಣವೆಂದು ಒಪ್ಪಿಲ್ಲ.

ಕನ್ನಡ ವಡ್ಡಾರಾಧನೆಯ ಕರ್ತೃವಿನ ಕಾಲದ ಕುರಿತೂ ಬಹಳ ಚರ್ಚೆ ನಡೆದಿದೆ. ಮಂಜೇಶ್ವರ ಗೋವಿಂದ ಪೈಯವರು ಈ ಕೃತಿಯನ್ನು ಭಾಷಾದೃಷ್ಟಿಯಿಂದ ವಿವೇಚಿಸಿ "ನನಗಾದರೊ ಕನ್ನಡ ವೊಡ್ಡಾರಾಧಣವು ಕ್ರಿ.ಶ. ಆರನೆಯ ಶತಮಾನಕ್ಕಿಂತ ಈಚೆಯದಲ್ಲವೆಂದು ತೋರುತ್ತದೆ" ಎಂದಿದ್ದಾರೆ (ಮೂರು ಉಪನ್ಯಾಸಗಳು, ೧೯೬೦, ಪುಟ ೧೧೮.) ಎಸ್. ಶ್ರೀಕಂಠಶಾಸ್ತ್ರಿಗಳು ಇದನ್ನು ಏಳನೆಯ ಶತಮಾನದ ರಚನೆ ಎಂದಿದ್ದಾರೆ. (Sources of Karnataka History, Vol. I-XX) ನೃಪತುಂಗನ ಕಾಲದಲ್ಲಿದ್ದ ಗುಣಭದ್ರಾಚಾರ್ಯರ ಗ್ರಂಥದ ಪದ್ಯಗಳು ಇದರಲ್ಲಿ ಬರುವುದರಿಂದ ಇದು ಕ್ರಿ.ಶ. ೮೫೦ಕ್ಕೆ ಹಿಂದಿನದಲ್ಲವೆಂದು ಕೆ.ಜಿ. ಕುಂದಣಗಾರರು ಅಭಿಪ್ರಾಯಪಟ್ಟರು (ಉಪಾಯನ, ೧೯೬೭, ಪುಟ ೪೩). ಡಿ.ಎಲ್.ಎನ್. ಅವರು ಇವೆಲ್ಲ ಕಾಲವಿಚಾರ ಸೂಚಿಗಳನ್ನೂ ಲಕ್ಷಿಸಿ, ಇದು ಪಂಪಭಾರತ (೯೪೧)ಕ್ಕಿಂತ ಹಿಂದಿನ ರಚನೆಯೆಂದೂ ಇದರ ರಚನಾಕಾಲಾವಧಿ ೮೯೮ - ೯೪೧ ಎಂದೂ ಆದುದರಿಂದಲೇ, ಈ ಗ್ರಂಥಕ್ಕೆ ೯೨೦ ಎಂಬ ಕಾಲವನ್ನು ಕೊಡಬಹುದೆಂದೂ ಹೇಳಿದ್ದಾರೆ. (ಡಿ.ಎಲ್.ಎನ್. - ವಡ್ಡಾರಾಧನೆ, ೧೯೭೦, ಪೀಠಿಕೆ, XXXII).

'ವಡ್ಡಾರಾಧನೆ' ಎಂಬ ಶಬ್ದದ ಮೂಲ 'ವೃದ್ಧಾರಾಧನೆ' ಅಥವಾ 'ಬೃಹದಾರಾಧನೆ" ಎಂದು ಅದರ ನಿಷ್ಪತ್ತಿಯಿಂದ ತಿಳಿಯಬಹುದು. ಗೋವಿಂದ ಪೈಗಳು 'ಬೃಹದಾರಾಧನ' ಎಂಬುದರ ಪ್ರಾಕೃತ ರೂಪವೆಂದು 'ವೊಡ್ಡಾರಾಧಣ' ಎಂಬ ಶಬ್ದರೂಪವನ್ನು ಮಾನ್ಯಮಾಡಿಕೊಂಡಿದ್ದಾರೆ. (ಮೂರು ಉಪನ್ಯಾಸಗಳು, ೧೯೬೦, ಪುಟ ೧೦೭). ವೃದ್ಧ + ಆರಾಧನೆ ಎನ್ನುವಾಗ ಅದರ ಶಬ್ದಾರ್ಥವನ್ನು ಲಕ್ಷಿಸಬೇಕು. 'ವೃದ್ಧ' ಎಂಬುದಕ್ಕೆ ವಯಸ್ಸಾದವನು (ಮುದುಕ), ಪೂರ್ಣವಾಗಿ ಬೆಳೆದವನು, ಪೂರ್ವಕಾಲದವನು, ಗೌರವಾರ್ಹ, ಶ್ರೇಷ್ಠ, ಜ್ಞಾನಿ, ಯತಿ, ಮಹಾಪುರುಷ ಎಂಬ ಅರ್ಥಗಳಿವೆ. ಹಾಗೆಯೇ

'ಆರಾಧನೆ' ಎಂಬುದಕ್ಕೆ ಸೇವೆ, ಪೂಜೆ, ಆದರಣೆ ಎಂಬಿವು ಸಾಮಾನ್ಯಾರ್ಥಗಳು. ಜೈನ ಸಿದ್ಧಾಂತದ ದೃಷ್ಟಿಯಿಂದ ಸಮ್ಯಗ್ದರ್ಶನ, ಸಮ್ಯಗ್ ಜ್ಞಾನ, ಸಮ್ಯಕ್ ಚಾರಿತ್ರ, ಸಮ್ಯಕ್ ತಪಸ್ಸು - ಈ ನಾಲ್ಕನ್ನು ಸಾಧಿಸುವುದೇ 'ಆರಾಧನೆ'. ವೃದ್ಧರು (ಜೈನಯತಿಗಳು, ಜ್ಞಾನಿಗಳು ಅಥವಾ ಮಹಾಪುರುಷರು) ಮಾಡಿದ ಸಫಲವಾದ ಆರಾಧನೆಗಳೇ ಈ ಗ್ರಂಥದ ಎಲ್ಲ ಕಥೆಗಳ ಸಾರವಾದುದರಿಂದ 'ವಡ್ಡಾರಾಧನೆ' ಈ ಗ್ರಂಥಕ್ಕೆ ಒಪ್ಪುವ ಹೆಸರಾಗಿದೆ. ಇದನ್ನು ಕೃತಿಕರ್ತನೇ ಗ್ರಂಥ ಪೀಠಿಕೆಯಲ್ಲಿ ಹೀಗೆ ಸ್ಪಷ್ಟಪಡಿಸಿದ್ದಾನೆ-

"ಶ್ರೀ ವೀರವರ್ಧಮಾನ ಭಟ್ಟಾರಕರ್ಗೆ ನಮಸ್ಕಾರಂಗೆಯ್ದು ದೇವೋಪಸರ್ಗ ಮನುಷ್ಯೋಪಸರ್ಗ ತಿರಿಕೋಪಸರ್ಗಮಚೇತನೋಪಸರ್ಗಮೆಂದಿಂತು ಚತುರ್ವಿಧ ಮಪ್ಪುಪಸರ್ಗಮುಮಂ ಪಸಿವುಂ ನೀರಟ್ಟಿಕ್ಕೆ ಮೊದಲಾಗೊಡೆಯ ಇಪ್ಪತ್ತೆರಡು ಪರೀಷಹಂಗಳುಮಂ ಸೈರಿಸಿ ಅಯ್ದುಮಿಂದ್ರಿಯಂಗಳಂ ಗೆಲ್ದು ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆದು ದ್ವಾದಶವಿಧಮಪ್ಪ ತಪದೊಳ್ ನೆಗಟ್ದು ಪ್ರಾಯೋಪಗಮನದಿಂ ಸಂನ್ಯಸನಂಗೆಯ್ದು ಕರ್ಮಕ್ಷಯಂ ಗೆಯ್ದು ಮೋಕ್ಷಕ್ಕೆವೋದ ಮತ್ತಂ ಸರ್ವಾರ್ಥಸಿದ್ಧಿಯೊಳ್ ಪುಟ್ಟಿದ **ಮಹಾಪುರುಷರ್ಕಳ** ಕಥೆಗಳಂ ಪೇೞ್ವಿಲ್ಲಿ..."

ಈ ಕಥಾನಾಯಕರು ಮಹಾಪುರುಷರು. ನಾಲ್ಕು ಬಗೆಯ ಉಪಸರ್ಗ (ತಪೋವಿಘ್ನ)ಗಳನ್ನು ಸಹಿಸಿದವರು. ಹಸಿವು, ಬಾಯಾರಿಕೆ ಮೊದಲಾದ ಇಪ್ಪತ್ತೆರಡು ಬಗೆಯಾಗಿರುವ ಪರೀಷಹ(ತೊಂದರೆ)ಗಳನ್ನು ಸೈರಿಸಿ ಪಂಚೇಂದ್ರಿಯಗಳನ್ನು ಹತೋಟಿಯಲ್ಲಿಟ್ಟು ಬಾಹ್ಯ ಮತ್ತು ಆಂತರಿಕ ಪರಿಗ್ರಹಗಳನ್ನು ತ್ಯಜಿಸಿದವರು. ಆರು ವಿಧದ ಬಾಹ್ಯತಪಸ್ಸನ್ನೂ ಆರು ಬಗೆಯ ಆಭ್ಯಂತರ ತಪಸ್ಸನ್ನೂ ಆಚರಿಸಿದವರು. ಇಂತಹ ತಪಸ್ಸಾಧನೆಯೇ **ತಪಸ್ಸಿನ ಆರಾಧನೆ.** ಜೈನಸಿದ್ಧಾಂತಗಳಲ್ಲಿ ದೃಢವಾದ ವಿಶ್ವಾಸ-ಅಭಿರುಚಿಗಳನ್ನಿಡುವುದು **ದರ್ಶನಾರಾಧನೆ.** ಸಮ್ಯಗ್ ಜ್ಞಾನವನ್ನು ಪಡೆಯಲು ಮಾಡುವ ಸಾಧನೆ **ಜ್ಞಾನಾರಾಧನೆ.** ಪಂಚಮಹಾವ್ರತ, ಪಂಚಸಮಿತಿ, ತ್ರಿಗುಪ್ತಿಗಳನ್ನು ಭಾವಶುದ್ಧಿಯಿಂದ ನಡೆಸುವುದು **ಚಾರಿತ್ರಾರಾಧನೆ.** ಈ ನಾಲ್ಕು ಬಗೆಯ ಆರಾಧನೆಗಳನ್ನೆಸಗಿದ ಮಹಾಪುರುಷರ ಕಥೆಗಳು ಇರುವುದರಿಂದ 'ವಡ್ಡಾರಾಧನೆ' ಎಂಬುದು ಸಾರ್ಥಕವಾದ ಹೆಸರಾಗಿದೆ.

ಈ ಕನ್ನಡ ವಡ್ಡಾರಾಧನೆಯ ಪ್ರತಿಯೊಂದು ಕಥೆಯ ಪ್ರಾರಂಭದಲ್ಲಿ ಬರುವ ಕಥಾಸಾರಸೂಚಿಯಾಗಿರುವ ಗಾಹೆಗಳು ಪ್ರಾಕೃತದಲ್ಲಿ 'ಭಗವತೀ ಆರಾಧನಾ' ಅಥವಾ 'ಮೂಲಾರಾಧನಾ' ಎಂಬ ಗ್ರಂಥದಲ್ಲಿ ಬರುವ 'ಕವಚ' ಎಂಬ ಭಾಗದ ೧೫೩೯ರಿಂದ ೧೫೫೭ರ ವರೆಗಿನ ಹತ್ತೊಂಬತ್ತು ಗಾಹೆಗಳೇ ಆಗಿವೆಯೆಂದು ತಿಳಿದುಬಂದಿದೆ.

ಕೃತಿಸ್ವರೂಪ ದೃಷ್ಟಿಯಿಂದಲೂ ಕನ್ನಡದ ವಡ್ಡಾರಾಧನೆಗೆ ಮಹತ್ವವಿದೆ. ಕನ್ನಡದಲ್ಲಿ ಗದ್ಯ ಪದ್ಯ ಮಿಶ್ರವಾದ ಚಂಪೂಕಾವ್ಯ ರಚನೆ ಪಂಪನಿಗಿಂತ (೯೪೧) ಹಿಂದೆಯೇ ಇದ್ದಿತೆಂದು ವಿದ್ವಾಂಸರು ಊಹಿಸುತ್ತಾರೆ. ಆದರೆ ಕವಿರಾಜ ಮಾರ್ಗದಲ್ಲಿ (೮೬೦) ಚಂಪು ಎಂಬ ಶಬ್ದದ ಉಲ್ಲೇಖವೇ ಇಲ್ಲ, ಚಂಪೂಕವಿಗಳನ್ನು ಹೇಳಿಲ್ಲ. ಆದರೆ 'ಗದ್ಯಕಥೆ' ಎಂಬ

ಕೃತಿರೂಪವನ್ನು ಹೇಳಿದೆ. ಅದು ಗದ್ಯ ಪದ್ಯ ಸಮ್ಮಿಶ್ರವಾದುದೆಂದೂ ತಿಳಿಸಿದೆ (೧-೨೭). ಮುಂದೆ 'ಉದಯಾದಿತ್ಯಾಲಂಕಾರ'ದಲ್ಲಿ (೧೧೫೦) ಗದ್ಯ ಪದ್ಯ ಮಿಶ್ರಕಾವ್ಯವನ್ನು ಚಂಪುವೆಂದು ಹೇಳಿ

"ಕನ್ನಡದೊಳ್ ಚಂಪೂಕೃತಿ
ಸನ್ನುತ ತರ ವಚನಕಾವ್ಯಮೆನಿಕುಂ..." ಎಂದು ಹೇಳಿದೆ.

ಇಲ್ಲಿ ಹೇಳಿದ 'ವಚನಕಾವ್ಯ' ಎಂಬುದು ಗದ್ಯಕಥೆಯನ್ನೇ ಲಕ್ಷಿಸಿ ಹೇಳಿದಂತಿದೆ. 'ಗದ್ಯಕಥೆ' ಎಂಬ ರಚನಾ ಸಂಪ್ರದಾಯವು ಕವಿರಾಜ ಮಾರ್ಗಕ್ಕಿಂತ ಹಿಂದೆಯೇ ಕನ್ನಡದಲ್ಲಿ ಪ್ರಚಲಿತವಿತ್ತೆಂದು ತೋರುತ್ತದೆ. ಅದರಲ್ಲಿ ಗದ್ಯವೇ ಅಧಿಕವಾಗಿದ್ದು ಪದ್ಯ ಸಂಖ್ಯೆ ಅತ್ಯಂತ ವಾಗಿ ಕಡಮೆಯಿದ್ದು ಕಥೆಯೇ ಪ್ರಧಾನವೆಂದು ತೀರ್ಮಾನಿಸಬಹುದು. ವಡ್ಡಾರಾಧನೆ ಅಂತಹ 'ಗದ್ಯಕಥೆ'ಗಳಲ್ಲಿ ಒಂದೆಂದು ಭಾವಿಸುವುದು ತಪ್ಪಲ್ಲ. 'ಚಾವುಂಡರಾಯ ಪುರಾಣ' ಕೂಡ, ಗದ್ಯಕಥೆಯೆಂದು ವಿದ್ವಾಂಸರ ಅಭಿಪ್ರಾಯವಿದೆ. ದಿ. ಗೋವಿಂದ ಪೈಗಳು ಇದನ್ನು ಸ್ಪಷ್ಟೀಕರಿಸಿದ್ದಾರೆ. ಇತರರೂ ಇದಕ್ಕೆ ಹುಂ ಗುಟ್ಟಿದ್ದಾರೆ (ಬೆಂಗಳೂರು ವಿಶ್ವವಿದ್ಯಾಲಯ - ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂ. ೧, ಪುಟ ೫೮).

ವಡ್ಡಾರಾಧನೆಯಲ್ಲಿ ಕವಿಯ ಕಥನಕೌಶಲ ಚೆನ್ನಾಗಿ ವ್ಯಕ್ತವಾಗಿದೆ. ಸಹಜತೆ ಸರಳತೆಗಳಿರಡೂ ಎದ್ದುಕಾಣುವ ಇದರ ರಚನೆಯಲ್ಲಿ ವರ್ಣನೆಗಳು ಹೆಚ್ಚಾಗಿಲ್ಲ. ನೀತಿ-ತತ್ವ-ತಪಸ್ಸಾಧನೆ-ಸಮ್ಯಕ್ತ್ವಗಳನ್ನು ಪ್ರತಿಪಾದಿಸುವುದೇ ಕವಿಯ ಉದ್ದೇಶ. ಈ ಕಥಾರಚನೆಯ ಒಂದೆರಡು ವಾಕ್ಯಗಳನ್ನು ದಾಟುವಾಗಲೇ ನಾವು ಹಲವು ವ್ಯಕ್ತಿಗಳ ಘಟನೆಗಳ ಪರಿಚಯಮಾಡಿಕೊಂಡು ಬೇಗ ಬೇಗನೇ ಮುಂದೆ ಸಾಗುತ್ತೇವೆ. ಅಲ್ಲಲ್ಲಿ ಬರುವ ಪಾತ್ರ ಸಂವಾದಗಳನ್ನು ನೋಡಿದಾಗ ಅವರು ನಮ್ಮ ಮುಂದೆಯೇ ಮಾತಾಡುತ್ತಿರುವರೋ ಎಂಬಂತೆ ನಾವು ಆ ಮಾತುಗಳಿಗೆ ಹತ್ತಿರದವರಾಗುತ್ತೇವೆ. ಕಥೆ ದೊಡ್ಡದಿರಲಿ ಚಿಕ್ಕದಿರಲಿ, ಅದರ ತಳಪಾಯ ಒಂದೇ ವಿಧ. ಕಥಾನಾಯಕನು ತಪೋಮಗ್ನನಾಗಿ ಪೂರ್ವ ವೈರಿಯೊಡ್ಡಿದ ಅಸಹ್ಯವೇದನೆಗಳನ್ನು ಶಾಂತಚಿತ್ತತೆಯಿಂದಲೇ ಅನುಭವಿಸಿ, ಸದ್ಗತಿ ಪಡೆಯುವುದು. ದೊಡ್ಡ ಕಥೆಯಲ್ಲಿ ಹಲವು ಪೂರ್ವಜನ್ಮಗಳ ಸ್ವಾರಸ್ಯಪೂರ್ಣ ಕಥೆಗಳೂ ಹೆಣೆದುಕೊಂಡಿರುತ್ತವೆ.

ಜಿನದೀಕ್ಷೆ ಪಡೆದು ತಪಸ್ಸಾಧನೆ ಮಾಡಿ ಏಕವಿಹಾರಿಯಾದ ಯತಿಯ ಸಂಚಾರವನ್ನು ಹೇಳುವಾಗ 'ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪತ್ತನ, ದ್ರೋಣಾಮುಖ'ಗಳ ಉಲ್ಲೇಖ ಎಲ್ಲ ಕಡೆಗೂ ಪರಿಭಾಷಕಗಳು. ಸ್ತ್ರೀ ಸೌಂದರ್ಯವನ್ನು ಪ್ರಸ್ತಾವಿಸುವಲ್ಲಿ 'ಅತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿ ಹಾವ ಭಾವ ವಿಲಾಸ ವಿಭ್ರಮಂಗಳನೊಡೆಯೊಳ್' ಎಂಬುದು ಸಾಮಾನ್ಯ. 'ಅಂತವರ್ಗಳಿಷ್ಟವಿಷಯ ಕಾಮಭೋಗಂಗಳನನುಭವಿಸುತ್ತಿರೆ', 'ಸುಖಸಂಕಥಾ ವಿನೋದದಿಂ ಕಾಲಂ ಸಲೆ' ಇತ್ಯಾದಿ ನಿರ್ದಿಷ್ಟವಾದ ಮಾತುಗಳು ಎಲ್ಲ ಕಥೆಗಳಿಗೂ ಅಯಾ ಸನ್ನಿವೇಶದಲ್ಲಿ ಅಂಟಿಕೊಂಡಿದ್ದರೂ ಅವು ಕಥೆಯ ಸ್ವಾರಸ್ಯಕ್ಕಾಗಲೀ ಗತಿಗಾಗಲೀ ಬಾಧಕವಾಗಿಲ್ಲ.

ವಡ್ಡಾರಾಧನೆಯ ಕಥೆಗಳಲ್ಲಿ ಐತಿಹಾಸಿಕ ಮೌಲ್ಯವುಳ್ಳವೂ ಕೆಲವಿವೆ. ಭದ್ರಬಾಹು ಭಟಾರರ ಕಥೆ, ಚಾಣಾಕ್ಯರಿಸಿಯ ಕಥೆ, ಚಿಲಾತಪುತ್ರನ ಕತೆ, ಗುರುದತ್ತ ಭಟಾರರ ಕಥೆ ಇವು ಅಂಥವು.

ಗ್ರಂಥ ಪ್ರಕಟನೆ :

ವಡ್ಡಾರಾಧನೆಯ ಕಥೆಗಳಲ್ಲಿ ಮೂರನ್ನು ಡಿ.ಎಲ್.ನರಸಿಂಹಾಚಾರ್ಯರು ೧೯೩೧ರಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಪ್ರಕಟಿಸಿದರು. ೧೯೪೯ರಲ್ಲಿ ಗ್ರಂಥವನ್ನು ಪೂರ್ಣವಾಗಿ ಪರಿಷತ್ಪತ್ರಿಕೆಯಲ್ಲಿಯೂ ಅದೇ ವರ್ಷ ಸ್ವತಂತ್ರ ಗ್ರಂಥರೂಪವಾಗಿಯೂ ಪ್ರಕಟಪಡಿಸಿದರು. ಆ ಮೇಲೆ ಅದು ೧೯೫೫, ೬೫, ೭೦, ೭೨ ಎಂಬೀ ವರ್ಷಗಳಲ್ಲಿ ಪುನರಾವೃತ್ತಿ ಮುದ್ರಣಗಳಾಗಿವೆ. ೧೯೭೦ ರಲ್ಲಾದ ನಾಲ್ಕನೆಯ ಮುದ್ರಣದ ವೇಳೆಗೆ ಡಿ.ಎಲ್.ಎನ್. ಅವರು ಇದಕ್ಕೆ ಪೀಠಿಕೆಯನ್ನು ವಿಸ್ತಾರವಾದ ಟಿಪ್ಪಣಿ, ಹರಿಷೇಣನ ಬೃಹತ್ಕಥಾಕೋಶದ ಕಥೆಗಳ ಸಾರಾಂಶ, ಕೆಲವು ಕಠಿನ ಪದಗಳ ಕೋಶ, ಜೈನ ಪಾರಿಭಾಷಿಕ ಶಬ್ದಕೋಶ, ಉದ್ಧೃತ ಪದ್ಯಗಳ ಅಕಾರಾದಿ - ಇವನ್ನೆಲ್ಲ ಬರೆದು ಸೇರಿಸಿ, ಓದುಗರಿಗೆ ಹೆಚ್ಚಿನ ಸೌಕರ್ಯವನ್ನು ಒದಗಿಸಿದ್ದಾರೆ. ಈ ಕುರಿತಾದ ಸಂಶೋಧನೆಗೆ ಡಾ. ಆ.ನೇ. ಉಪಾಧ್ಯೆ ಅವರು 'ಹರಿಷೇಣನ ಬೃಹತ್ಕಥಾಕೋಶ'ದ ಪ್ರಸ್ತಾವನೆಯಲ್ಲಿ ಬಹಳ ಸಾಮಗ್ರಿಯನ್ನು ಕಾಣಿಸಿದ್ದಾರೆ. ರಂ.ಶ್ರೀ. ಮುಗಳಿ ಅವರ 'ಕನ್ನಡ ಸಾಹಿತ್ಯ ಚರಿತ್ರೆ', ಹಂಪನಾ ಅವರ 'ವಡ್ಡಾರಾಧನೆ' ಮತ್ತು ಧವಳಶ್ರೀ ಅವರ 'ವಡ್ಡಾರಾಧನೆಯಲ್ಲಿ ಸ್ತ್ರೀ', ಆರ್. ಎಲ್. ಅನಂತರಾಮಯ್ಯನವರು ಬರೆದ 'ವಡ್ಡಾರಾಧನ ಕಥಾಲೋಕ' ಎಂಬ ಹೊಸಗನ್ನಡ ಕಥಾರೂಪ, ಕೆ. ನಾಗೇಂದ್ರಪ್ಪ ಅವರು ಬರೆದ 'ವಡ್ಡಾರಾಧನೆಯ ಕಥೆಗಳು', ಎಂ.ಎಂ. ಕಲಬುರ್ಗಿಯವರ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ಗ್ರಂಥದಲ್ಲಿ ಬರುವ ವಡ್ಡಾರಾಧನೆಯ ಕುರಿತಾದ ಭಾಗ, ಡಾ. ಕಡಬಡಿಯವರು ವಡ್ಡಾರಾಧನೆಯ ಕುರಿತು ಬರೆದ ಪಿ.ಎಚ್.ಡಿ. ಪ್ರಬಂಧ, ಐ.ಬಿ.ಎಚ್. ಪ್ರಕಾಶನದವರು ಪ್ರಕಾಶಕರಾಗಿದ್ದು ಮೂವರು ವಿದ್ವಾಂಸರು ಬರೆದ ಪೌಢಲೇಖನಗಳುಳ್ಳ 'ವಡ್ಡಾರಾಧನೆ', ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಿಸಿರುವ 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ'ಯ ದ್ವಿತೀಯ ಸಂಪುಟದಲ್ಲಿ ಬಂದಿರುವ ವಡ್ಡಾರಾಧನೆಯ ಕುರಿತ ಮೂವರ ಲೇಖನಗಳು - ಇತ್ಯಾದಿಯಾಗಿ ವಡ್ಡಾರಾಧನೆಯ ಕುರಿತ ಬರವಣಿಗೆಗಳು ಬಹು ಸಂಖ್ಯೆಯಲ್ಲಿವೆ. ಓದುಗರಿಗೆ ಅವೆಲ್ಲವೂ (ಇನ್ನೂ ಕೆಲವು ಅಲ್ಲಲ್ಲಿ ಬಂದಿರುವ ಬಿಡಿಲೇಖನಗಳು) ಈ ಕೃತಿಯ ಕುರಿತು ಒಂದೊಂದು ಬಗೆಯಲ್ಲಿ ಬೆಳಕು ಕೊಡುವವೇ ಆಗಿವೆ.

ಇಷ್ಟೆಲ್ಲ ಗ್ರಂಥಗಳು, ಲೇಖನಗಳು ಇದ್ದರೂ ಕನ್ನಡ ಸಾಹಿತ್ಯ ಪರಿಷತ್ತು ಹೊರತರುವ ಗ್ರಂಥಕ್ಕೆ ಇತರ ಪ್ರಕಟನೆಗಳಿಗಿಲ್ಲದ ಮಹತ್ತ್ವವಿದೆ. ಈ ಗ್ರಂಥದಲ್ಲಿ ಮೂಲವೂ ಇದೆ, ಜೊತೆಯಾಗಿ ಅನುವಾದವೂ ಇದೆ. ಕೇವಲ ಹಳಗನ್ನಡದಲ್ಲಿ ಪಾಂಡಿತ್ಯವುಳ್ಳವರಿಗೆ ಅವಗಾಹ್ಯವಾಗಿರುವ ವಡ್ಡಾರಾಧನೆ ಇಲ್ಲಿ ಜನಸಾಮಾನ್ಯರಿಗೂ ಓದಿ ತಿಳಿದುಕೊಳ್ಳಲು ಸಾಧ್ಯವಾಗುವಂತಾಗಿದೆ. ಭಾಷಾ ಪಾಂಡಿತ್ಯವನ್ನೂ ಸಾಹಿತ್ಯ ಪರಿಜ್ಞಾನವನ್ನೂ ಸ್ವಂತ

ಓದಿಯೇ ಹೆಚ್ಚಿಸಿಕೊಳ್ಳಲು ಸಹಾಯಕವಾಗಿದೆ. ಇದರ ಅನುಬಂಧದಲ್ಲಿ ಜೈನ ಪಾರಿಭಾಷಿಕ ಪದಗಳ ಹಾಗೂ ಸಂಖ್ಯಾಪದಗಳ ಅರ್ಥವಿವರ, ಶಬ್ದಕೋಶಗಳಿರುವುದು ಹೆಚ್ಚಿನ ವ್ಯಾಸಂಗಕ್ಕೆ ಸಹಾಯಕವಾಗುವುದರಲ್ಲಿ ಸಂಶಯವಿಲ್ಲ. ಈ ಗ್ರಂಥವನ್ನು ಈ ರೂಪದಲ್ಲಿ ನನ್ನ ಮೂಲಕ ಬರೆಯಿಸಿದವರು ಕನ್ನಡ ಸಾಹಿತ್ಯ ಪರಿಷತ್ತಿನವರು. ಬರೆದುದನ್ನು ಪರಾಮರ್ಶಿಸಿದವರು ಅನುವಾದ ಸಮಿತಿಯ ಅಧ್ಯಕ್ಷರಾದ ವಿದ್ವಾನ್ ಎನ್. ರಂಗನಾಥಶರ್ಮರು. ಇವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಜನಮಂಗೀಕರಿಸುಗೆ ಪೊಸ
ತನೆ ಪೊಸಗನ್ನಡದೆ ಮೂಲಯುತ ವಡ್ಡಾರಾ
ಧನೆಯೆನುತುಂ ಕೇಶವನಿಂ
ಕನೀಯನಿಂ ರಚಿತಮೆಂಬುದೊಂದಾದರದಿಂ

ಟಿ. ಕೇಶವಭಟ್ಟ

ವಡ್ಡಾರಾಧನೆ

ಪೀಠಿಕೆ

ನಮಃ ಶ್ರೀ ವರ್ಧಮಾನಾಯ ನಿರ್ಧೂತ ಕಲಿಲಾತ್ಮನೇ
ಸಾಲೋಕಾನಾಂ ತ್ರಿಲೋಕಾನಾಂ ಯದ್ವಿದ್ಯಾ ದರ್ಪಣಾಯತೇ ॥

ಶ್ರೀ ವೀರ ವರ್ಧಮಾನ ಭಟ್ಟಾರಕರ್ಗೆ ನಮಸ್ಕಾರಂಗೆಯ್ದು ದೇವೋಪಸರ್ಗ ಮನುಷ್ಯೋಪಸರ್ಗ ತಿರಿಕೋಪಸರ್ಗಮಚೇತನೋಪಸರ್ಗಮೆಂದಿಂತು ಚತುರ್ವಿಧಮಪ್ಪುಪಸರ್ಗಮುಮಂ ಪಸಿವುಂ ನೀರಟ್ಟಿ ಮೊದಲಾಗೊಡೆಯ ಇಪ್ಪತ್ತೆರಡು ಪರೀಷಹಂಗಳುಮಂ ಸೈರಿಸಿ ಅಯ್ದುಮಿಂದ್ರಿಯಂಗಳಂ ಗೆಲ್ದು ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆದು ದ್ವಾದಶವಿಧಮಪ್ಪ ತಪದೊಳ್ ನೆಗಟ್ದು ಪ್ರಾಯೋಪಗಮನದಿಂ ಸಂನ್ಯಸನಂಗೆಯ್ದು ಕರ್ಮಕ್ಷಯಂಗೆಯ್ದು ಮೋಕ್ಷಕ್ಕೆಯ್ದೋದ ಮತ್ತಂ ಸರ್ವಾರ್ಥಸಿದ್ಧಿಯೊಳ್ ಪುಟ್ಟಿದ ಮಹಾಪುರುಷರ್ಕಳ ಕಥೆಗಳಂ ಪೇೞ್ವಲ್ಲಿ ಮುನ್ನಂ ಸುಕುಮಾರಸ್ವಾಮಿಯ ಕಥೆಯಂ ಪೇೞ್ದಂ.

ಶ್ರೀ ವರ್ಧಮಾನ ತೀರ್ಥಂಕರನಿಗೆ ನಮಸ್ಕಾರ. ಯಾವುದು ಅಲೋಕವೆನಿಸುವ ಆಕಾಶದಿಂದ ಕೂಡಿದ ಸ್ವರ್ಗ-ಮರ್ತ್ಯ-ಪಾತಾಳ ಎಂಬ ಮೂರು ಲೋಕಗಳ ಇರುವು - ಆಗು - ಹೋಗುಗಳಿಗೆ ಕನ್ನಡಿಯಂತಿರುವುದೋ ಅಂತಹ ಕೇವಲಜ್ಞಾನದಿಂದ ಕೂಡಿದವನು ಆತನು. ಘಾತಿ-ಅಘಾತಿ ಎಂಬ ವಿಭಾಗವುಳ್ಳ ಸಕಲ ಕರ್ಮಗಳೆಂಬ ಮಲವನ್ನು ತೊಳೆದವನು. ಸಂಪತ್ತು ತೇಜಸ್ಸುಗಳಿಂದ ಅನ್ವಿತನಾದವನು. ಶ್ರೀ ವೀರವರ್ಧಮಾನ ಸ್ವಾಮಿಯನ್ನು ನಮಸ್ಕರಿಸಿ, ಮಹಾಪುರುಷರುಗಳ ಕಥೆಗಳನ್ನು ಹೇಳುವೆನು. ಅವರು ದೇವ, ಮನುಷ್ಯ, ಮನುಷ್ಯೇತರ ಜೀವಿ, ಅಚೇತನ ಎಂಬ ನಾಲ್ಕು ಬಗೆಯವುಗಳಿಂದ ಬರುವ ಉಪಸರ್ಗ (ತಪೋವಿಘ್ನ)ಗಳನ್ನು ಸೈರಿಸಿದವರು. ಹಸಿವು, ಬಾಯಾರಿಕೆ - ಮುಂತಾದ ಇಪ್ಪತ್ತೆರಡು ಬಗೆಯ ಪರೀಷಹ (ತೊಂದರೆ)ಗಳನ್ನು ಸಹಿಸಿದವರು. ಪಂಚೇಂದ್ರಿಯಗಳನ್ನು ಜಯಿಸಿದವರು, ಬಾಹ್ಯ ಆಭ್ಯಂತರ (ಹೊರಗಿನ ಮತ್ತು ಒಳಗಿನ) ಎಂಬ ಎರಡು ಬಗೆಯ ಪರಿಗ್ರಹಗಳನ್ನು ಬಿಟ್ಟು, ಹನ್ನೆರಡು ವಿಧದ ತಪಸ್ಸನ್ನು ಮಾಡಿ ಪ್ರಖ್ಯಾತರಾದವರು. ತಮ್ಮ ರೋಗಕ್ಕೆ ಚಿಕಿತ್ಸೆ ಮಾಡದೆ ಆಹಾರವನ್ನೂ ಸೇವಿಸದೆ ಧ್ಯಾನದಲ್ಲೇ ಅಚಲರಾಗಿದ್ದು ಸಂನ್ಯಾಸವನ್ನು ಕೈಗೊಂಡು, ಘಾತಿ-ಅಘಾತಿ ಕರ್ಮಗಳನ್ನು ನಾಶಗೊಳಿಸಿ ಮೋಕ್ಷಕ್ಕೆ ಹೋದವರು ಮತ್ತು **ಸರ್ವಾರ್ಥಸಿದ್ಧಿ** ಎಂಬ ಎಲ್ಲಕ್ಕೂ ಮೇಲಿನ ಲೋಕದಲ್ಲಿ ಜನಿಸಿದವರು. ಅಂತಹ ಮಹಾಪುರುಷರುಗಳ ಕಥೆಗಳನ್ನು ಹೇಳುವಲ್ಲಿ ಮೊದಲು **ಸುಕುಮಾರಸ್ವಾಮಿಯ ಕಥೆ**ಯನ್ನು ಹೇಳುವೆನು.

೧ ಸುಕುಮಾರಸ್ವಾಮಿಯ ಕಥೆ

ಗಾಹೆ ।। ಭಲ್ಲುಕ್ಕಿಯೇಣ ಣಿಚ್ಚಂ ಖಜ್ಜಂತೋ ಘೋರ ವೇದಣಟ್ಠೋಪಿ
ಆರಾಧಣಂ ಪವಣ್ಣೋ ಝಾಣೇಣ ಅವಂತಿ ಸುಕುಮಾರೋ।।

[ಭಲ್ಲುಕ್ಕಿಯೇಣ - ಮುನ್ನಿನ ಜನ್ಮಾಂತರದತ್ತಿಗೆಯಪ್ಪ ಪೆಣ್ಣರಿಯಿಂದಂ, ಣಿಚ್ಚಂ ಖಜ್ಜಂತೋ- ಮೂಜುದಿವಸಂ ನಿರಂತರಮಿರುಳುಂ ಪಗಲುಂ ತಿನೆಪಡುತಿರ್ದೊನಾಗಿಯುಂ, ಘೋರ ವೇದಣಟ್ಠೋಪಿ - ಕಡಿದವ್ಪ ವೇದನೆಯಿಂದಂ ಬಟ್ಟೆದೊನಾಗಿಯುಂ, ಆರಾಧಣಂ - ಸಮ್ಯಗ್ದರ್ಶನ ಜ್ಞಾನ ಚಾರಿತ್ರಾತ್ಮಕಮಪ್ಪಾರಾಧನೆಯಂ, ಝಾಣೇಣ - ಉತ್ತಮ ಧ್ಯಾನದಿಂದಂ, ಅವಂತಿ ಸುಕುಮಾರೋ - ಅವಂತಿಯೆಂಬ ಸುಕುಮಾರಸ್ವಾಮಿ, ಪವಣ್ಣೋ - ಪೊರ್ದಿದೊಂ] ಅದೆಂತೆಂದೊಡೆ

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ವತ್ಸೆಯೆಂಬುದು ನಾಡಲ್ಲಿ ಕೌಸಂಬಿಯೆಂಬುದು ಪೊಬಲದನಾಳ್ವೊನತಿಬಳನೆಂಬರಸನಾತನ ಮಹಾದೇವಿ ಮನೋಹರಿಯೆಂಬೊಳ್ ಪೆಸರ್ಗೆ ತಕ್ಕಂತೆ ನೋದಿದರೆಲ್ಲರ ಕಣ್ಣಾಲಿಗೆ ಸೊಗಯಿಸುವಳ್ ಸತ್ಯಶೌಚಾಚಾರಂಗಳಿಂ ಕೂಡಿದೊಳ್ ಅತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿ ಹಾವ ಭಾವ ವಿಲಾಸ ವಿಭ್ರಮಂಗಳನೊಡೆಯಳಂತವರ್ಗಳಿಷ್ಟವಿಷಯ ಕಾಮಭೋಗಂಗಳನನುಭವಿಸುತ್ತಿರೆ ಮತ್ತಾ ಅರಸನ ಮಂತ್ರಿ ಸೋಮಶರ್ಮನೆಂಬೊನಾತನ ಭಾರ್ಯೆ ಕಾಶ್ಯಪಿಯೆಂಬೊಳ್ - ಇರ್ವರ್ಗಂ ಮಕ್ಕಳಗ್ನಿಭೂತಿ ವಾಯುಭೂತಿಯೆಂಬವರ್ಗಳ್ ತಾಯ್ ತಂದೆವಿರ ಕೇಳ್ವಿಯಂ ಗೆಯ್ಯದಾ ವೇದಂ ಮೊದಲಾಗೊಡೆಯ ಶಾಸ್ತ್ರಂಗಳನೋದದೆ ತಂದೆ ಪಡೆದ ಕಸವರಮಂ ಬಯಂಗೆಯ್ಯುತ್ತುಂ ಸಪ್ತವ್ಯಸನಾಭಭೂತರಾಗಿ ನೆಗಟುತ್ತಿರೆಯಿರೆ ಪಲಕಾಲದಿಂ ತಂದೆ

[ಅವಂತಿ ಸುಕುಮಾರ ಎಂತಲೂ ಹೆಸರುಳ್ಳ ಸುಕುಮಾರಸ್ವಾಮಿಯನ್ನು ಹಿಂದಿನ ಜನ್ಮಾಂತರದಲ್ಲಿ ಅತ್ತಿಗೆಯಾಗಿದ್ದ ಹೆಣ್ಣುನರಿ ಎಡೆಬಿಡದೆ ಮೂರುದಿವಸ ಇರುಳೂ ಹಗಲೂ ಕಚ್ಚಿ ತಿನ್ನುತ್ತಿತ್ತು. ಈ ಕಠಿನವಾದ ನೋವಿನಿಂದ ಸತ್ತವನಾದರೂ ಶ್ರೇಷ್ಠವಾದ ಧ್ಯಾನದಿಂದ ಅವನು ಸಮ್ಯಗ್ದರ್ಶನ ಸಮ್ಯಗ್‌ಜ್ಞಾನ ಸಮ್ಯಕ್‌ಚಾರಿತ್ರ ಎಂಬ ರತ್ನತ್ರಯಗಳಿಂದ ಕೂಡಿದ ಆರಾಧನೆಯನ್ನು ನಡೆಸಿದನು.] ಅದು ಹೇಗೆಂದರೆ - ಈ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ವತ್ಸೆ ಎಂಬ ನಾಡಿದ್ದಿತು. ಆ ನಾಡಿನ ಪಟ್ಟಣ ಕೌಸಂಬಿ. ಅದನ್ನು ಅತಿಬಳನೆಂಬ ಅರಸನು ಆಳುತ್ತಿದ್ದನು. ಅವನ ಪಟ್ಟದ ರಾಣಿಯ ಹೆಸರು ಮನೋಹರಿ. ಆಕೆ ಹೆಸರಿಗೆ ತಕ್ಕಂತೆ ನೋಡಿದವರೆಲ್ಲರ ಕಣ್ಣಿಗೂ ಚೆಲುವೆಯಾಗಿದ್ದಳು. ಸತ್ಯ-ಶುಚಿತ್ವ-ಸದಾಚಾರಗಳಿಂದ ಕೂಡಿದ್ದಳು, ಅತ್ಯಂತ ರೂಪ - ಸೌಂದರ್ಯದಿಂದಲೂ ಸೌಭಾಗ್ಯ, ಕಾಂತಿ, ಹಾವ, ಭಾವ, ವಿಲಾಸ, ವಿಭ್ರಮಗಳನ್ನು ಉಳ್ಳವಳಾಗಿದ್ದಳು. ಅಂತು ಅವರಿಬ್ಬರು ತಮ್ಮ ಪ್ರೀತಿಯ ವಿಷಯದ ಸುಖಿಗಳನ್ನು ಅನುಭವಿಸುತ್ತಾ ಇದ್ದರು. ಆ ಅರಸನ ಮಂತ್ರಿ ಸೋಮಶರ್ಮನು. ಆತನ ಹೆಂಡತಿ ಕಾಶ್ಯಪಿಯೆಂಬವಳು. ಈ ಇಬ್ಬರಿಗೆ ಅಗ್ನಿಭೂತಿ ವಾಯುಭೂತಿ ಎಂಬಿಬ್ಬರು ಮಕ್ಕಳು. ಇವರು ತಂದೆತಾಯಿಗಳ ಮಾತನ್ನೇ ಕೇಳುತ್ತಿರಲಿಲ್ಲ. ವೇದ ಮುಂತಾದ ಯಾವ ಶಾಸ್ತ್ರಗಳನ್ನೂ ಓದಲಿಲ್ಲ. ತಂದೆ ಸಂಪಾದಿಸಿದ ಸಂಪತ್ತನ್ನೆಲ್ಲ ಪೆಚ್ಚಮಾಡುತ್ತ ಬೇಟೆ, ಜೂಜು, ಮಾಂಸಸೇವನೆ, ಮದ್ಯಪಾನ, ವೇಶ್ಯಾಗಮನ, ಕಳ್ಳತನ, ದುರ್ವಾಕ್ಯ - ಎಂಬ ಏಳು ಬಗೆಯ ಕೆಟ್ಟ ಚಟಗಳಿಗೆ ಬಲಿಯಾಗಿ ನಡೆಯುತ್ತಿದ್ದರು. ಹೀಗೆ ಹಲವು ಕಾಲ

ಕಟೆದೊಡೆ ಸೋಮಶರ್ಮಂಗೆ ಮಕ್ಕಳೊಳರಿಲ್ಲೆಂದರಸಂ ಬೆಸಗೊಂಡೊಡೊಳರೆಂದು ಪೇಟಿಂದವರ್ಗೆ ಬಚೆಯಟ್ಟವರಿಸಿ ಮಜ್ಜನದೊಳ್ ಮಿಸಿಸಿ ಉಡಿಸಿ ತುದಿಸಿಯೂಡಿ ತಂಬುಲಂಗೊಟ್ಟುಬ್ಬೆಗಂಬಡದಿರಿ ಮೆಂದು ನುಡಿದವರ್ಗಳ ದುಃಖಮನಾಱಿಸಿ ಬೀಡಿಂಗೆ ಪೋಗಲ್ವೇೞ್ದು ಕೆಲವು ದಿವಸದಿಂ ಬಚೆಯಟ್ಟವರಿಸಿ ನೀವಾ ವೋದುಗಳಂ ಬಲ್ಲಿರೆಂದಿರ್ದರುಮಂ ಬೆಸಗೊಂಡೊಡವರ್ಗಳ್ ತಲೆಯಂ ಬಾಗಿ ಮಱುಮಾತುಗುದದೆ ಕಣ್ಣ ನೀರಂ ತೀವಿ ನೆಲನಂ ಬರೆಯುತ್ತಿರೆ ಸಭೆಯೊಳಿರ್ದ್ದವರ್ಗಳೆಲ್ಲಂ - ಇವರ್ ಮೂರ್ಖರೇನುವೋದುಗಳನಱಿಯರ್ ಸಪ್ತವ್ಯಸನಾಭಿಭೂತರೆಂದರಸಂಗೆ ಪೇಟಿಂದರಸನವರ್ಗಳನಟ್ಟಿ ಕಳಿದವರ ದಾಯಿಗಂ ಶಾಸ್ತ್ರಂಗಳಂ ಬಲ್ಲೊಂಗಂ ಮಂತ್ರಿಪದವಿಯಂ ಬಾಱುಮಂ ಪ್ರತಿಪತ್ತಿಯುಮಂ ಕೊಟ್ಟುದಂ ಕೇಳ್ದಿರ್ವರುಮುಬ್ಬೆಗಂಬಟ್ಟು ವೈರಾಗ್ಯಪರಾಯಣರಾಗಿ ಕಪ್ಪದಮುಟ್ಟು ಬೈಕಂದಿರಿದಿನ್ನಪ್ಪೊಡವೋದುವಮೆಂದು ತಾಯ್ಗೆ ನುಡಿದೊಡಂತಪ್ಪೊದೆ ಮಕ್ಕಳಿರಾ ಮಗಧೆಯೆಂಬುದು ನಾಡಲ್ಲಿ ರಾಜಗೃಹಮೆಂಬುದು ಪೊಱಲದನಾಳ್ವಂ ಸುಬಲನೆಂಬರಸನಾತನ ಮಹಾದೇವಿ ಸುಪ್ರಭೆಯೆಂಬೊಳವರ್ಗೆ ಮಂತ್ರಿಯೆಮ್ಮಣ್ಣಂ ಸೂರ್ಯಮಿತ್ರನೆಂಬೊಂ ಎಲ್ಲಾ ಓದುಗಳುಮಂ ಬಲ್ಲೊನಾತಂ ನಿಮ್ಮನೋದಿಸಿ ಯೋಗ್ಯರಂ ಮಾಡುವಂತಿರೆ ನಿರೂಪಿಸಿ ಕಲ್ಪಿಸಿಯೋಲೆಯಂ ಬರೆಯಿಸಿ

ಕಳೆಯಿತು. ತಂದೆ ಸೋಮಶರ್ಮನು ತೀರಿಹೋದನು. ಅತಿಬಳ ಮಹಾರಾಜನು ಸೋಮಶರ್ಮನಿಗೆ ಮಕ್ಕಳಿದ್ದಾರೋ ಇಲ್ಲವೋ ಎಂದು ವಿಚಾರಿಸಿದನು ; ಇದ್ದಾರೆಂದು ತಿಳಿದು, ಒಡನೆ ದೂತರನ್ನು ಕಳುಹಿಸಿ ಅವರಿಬ್ಬರನ್ನೂ ಬರಿಸಿದನು. ಅವರಿಗೆ ಪೂರ್ಣಸ್ನಾನ ಮಾಡಿಸಿ, ಬಟ್ಟೆಯುಡಿಸಿ, ತಕ್ಕ ಭೂಷಣಗಳನ್ನು ಕೊಡಿಸಿ, ಊಟಮಾಡಿಸಿದನು, ತಾಂಬೂಲ ಕೊಟ್ಟು 'ನೀವು ದುಃಖಿ ಪಡದಿರಿ' ಎಂದು ಹೇಳಿ ಅವರ ವ್ಯಸನವನ್ನು ನಿವಾರಿಸಿ, ತಮ್ಮ ಮನೆಗೆ ಕಳುಹಿಸಿ ಕೊಟ್ಟನು. ಕೆಲವು ದಿನಗಳ ನಂತರ ರಾಜನು ಪುನಃ ದೂತರನ್ನು ಕಳುಹಸಿ ಅವರನ್ನು ಬರಮಾಡಿದನು. "ನೀವು ಯಾವ ವಿದ್ಯೆಗಳನ್ನು ಬಲ್ಲಿರಿ?" ಎಂದು ಇಬ್ಬರನ್ನೂ ಕೇಳಿದನು. ಆಗ ಅವರು ತಲೆಬಗ್ಗಿಸಿದರು ; ಪ್ರತ್ಯುತ್ತರ ಕೊಡಲಿಲ್ಲ. ಕಣ್ಣೀರನ್ನು ತುಂಬಿ ನಾಚಿಕೆಯಿಂದ ನೆಲದ ಮೇಲೆ ಕಾಲ ಬೆರಳಿನಿಂದ ಗೀರತೊಡಗಿದರು. ಆಗ ಸಭೆಯಲ್ಲಿದ್ದವರೆಲ್ಲರೂ ರಾಜನಿಗೆ ಹೀಗೆಂದರು - "ಇವರು ತಿಳಿಗೇಡಿಗಳು. ವಿದ್ಯೆಗಳೇನನ್ನೂ ತಿಳಿಯರು. ಸಪ್ತವ್ಯಸನಗಳ ಬಾಧೆಗೆ ಒಳಗಾದವರು" ಆಗ ರಾಜನು ಅವರನ್ನು ಅಲ್ಲಿಂದ ಓಡಿಸಿಬಿಟ್ಟನು. ಅವರ ದಾಯಾದಿಯಾಗಿದ್ದು ಶಾಸ್ತ್ರಗಳನ್ನೆಲ್ಲಾ ತಿಳಿದವನಾದ ಒಬ್ಬನಿಗೆ ಮಂತ್ರಿ ಪದವಿಯನ್ನೂ ಜೀವಿಕೆಯನ್ನೂ ಗೌರವವನ್ನೂ ಕೊಟ್ಟನು. ಈ ಸಂಗತಿಯನ್ನು ಅಗ್ನಿಭೂತಿ ವಾಯುಭೂತಿ ಇಬ್ಬರೂ ಕೇಳಿ ವ್ಯಸನಪಟ್ಟರು. ಅವರು ವೈರಾಗ್ಯದಿಂದ ಹರಕು ಬಟ್ಟೆಯನ್ನುಟ್ಟು, ಭಿಕ್ಷೆ ಬೇಡಿಕೊಂಡಾದರೂ ಇನ್ನಾದರೂ ಓದೋಣ ಎಂದುಕೊಂಡು, ತಮ್ಮ ತಾಯಿಗೆ ಈ ಸಂಗತಿಯನ್ನು ತಿಳಿಸಿದರು. ಆಗ ಕಾಶ್ಯಪಿ ಅವರೊಡನೆ ಹೀಗೆ ಹೇಳಿದಳು - "ಮಕ್ಕಳೇ, ಮಗಧೆ ಎಂಬ ನಾಡಿನಲ್ಲಿ ರಾಜಗೃಹ ಎಂಬ ಪಟ್ಟಣವಿದೆ. ಅದನ್ನು ಸುಬಲನೆಂಬ ರಾಜನು ಆಳುತ್ತಿರುವನು. ಅವರ ರಾಣಿ ಸುಪ್ರಭೆ. ಅವರಿಗೆ ಮಂತ್ರಿಯಾಗಿರುವ ಸೂರ್ಯಮಿತ್ರ ನನ್ನಣ್ಣ. ಅವನು ಎಲ್ಲ ವಿದ್ಯೆಗಳನ್ನೂ ಬಲ್ಲವನು. ಆತನು ನಿಮ್ಮನ್ನು ಓದಿಸಿ ಯೋಗ್ಯರನ್ನಾಗಿ ಮಾಡಲು ಹೇಳಿ ತಿಳಿಸಿ ಪತ್ರ ಬರೆಯಿಸಿ ನಿಮ್ಮ ಕೈಯಲ್ಲಿ ಕಳುಹಿಸುತ್ತೇನೆ. ನೀವು ಹೋಗಿ ನಿಮ್ಮ ಮಾವನ ಬಳಿಯಿದ್ದು ವಿದ್ಯೆ ಕಲಿಯಿರಿ".

ನಿಮ್ಮ ಕಯ್ಯೊಳಟ್ಟದಪೆಂ ನೀಮುಂ ಪೋಗಿ ನಿಮ್ಮ ಮಾವನ ಪಕ್ಕದೊಳೋದಿಮೆಂದೋಲೆಯಂ ಬರೆಯಿಸಿ ಕೊಟ್ಟೊಡವರ್ಗಳುಂ ತಾಯಂ ಬೀಳ್ಕೊಂದು ಕತಿಪಯ ದಿವಸಂಗಳಿಂ ರಾಜಗೃಹಮನೆಯ್ದಿ ಸೂರ್ಯಮಿತ್ರನ ಮನೆಯಂ ಬೆಸಗೊಂಡು ಪೋಗಿ ಕಂಡೋಲೆಯನಿಕ್ಕಿದೊಡೆ ಸೂರ್ಯಮಿತ್ರನೆಲ್ಲಿಂ ಬಂದಿರಾರೋಲೆಯೆಂದು ಬೆಸಗೊಂಡೊಡೆ - ಕೌಸಂಬಿಯಿಂ ಬಂದೆವು ನಿಮ್ಮ ತಂಗೆಯಪ್ಪ ಕಾಶ್ಯಪಿಯಟ್ಟದೋಲೆಯೆಂದೊಡೋಲೆಯಂ ಬಾಜಿಸಿ ನೋಡಿ ಸೋಮಶರ್ಮಂ ಕಟೆದುದುಮಂ ಮಂತ್ರಿಪದವಿ ಪೆಱರ್ಗಾದುದುಮಂ ಮಕ್ಕಳ್ ಸಪ್ತವ್ಯಸನಾಭಿಭೂತರಾಗಿ ಬಾಟಂ ಕೆಟ್ಟುದುಮಂ ಶಾಸ್ತ್ರಜ್ಞರುಂ ಬುದ್ಧಿಯೊಡೆಯರುಂ ಯೋಗ್ಯರುಮಪ್ಪಂತು ಮಾಡಿಮೆಂದು ಮಕ್ಕಳಂ ತನಗೆ ನಿರೂಪಿಸಿಯಟ್ಟದುದುಮನಿಂತಿವೆಲ್ಲಂ ಬಾಜಿಸಿ ನೋಡಿ-ಇವಂದಿರ್ಗ್ಗೆ ಪಸರಂಗೊಟ್ಟೆನಪ್ಪೊಡೆ ಮುನ್ನಿನಂತುರ್ಕಿ ಕಿಡುವರೆಂದು ಮನದೆ ಬಗೆದಗ್ನಿಭೂತಿ ವಾಯುಭೂತಿಗಳ್ಗಿಂತೆಂದಂ - ಕಾಶ್ಯಪಿಯೆಂಬೊಳಿನಗೆ ತಂಗೆಯಿಲ್ಲ ಸೋಮಶರ್ಮನೆಂಬೊಂ ಮಯ್ದುನನುಮಿಲ್ಲ ಸೂರ್ಯಮಿತ್ರನೆಂಬ ಪೆಸರೆನಗುಂಟು ನಿಮ್ಮ ಮಾವನಪ್ಪ ಸೂರ್ಯಮಿತ್ರನಲ್ಲೆನೆಂದವರ್ಗ್ಗೆ ನುಡಿದುಂ ಮತ್ತಮಿಂತೆಂದಂ ನೀಮಾರ್ಗ್ಗಾರಾದೊದಮೇಂ ವಿದ್ಯಾರ್ಥಿಗಳಾಗಿಯೋದಂ ಕಲ್ಪೆಮೆಂಬಟ್ಟೆಯೊಳ್ ಬಂದಿರಪ್ಪೊಡೆ ಬೈಕಂದಿರಿದು ಕಪ್ಪದಮುಟ್ಟಿರುಳುಂ ಪಗಲುಮಲಸದೆ ನಿರ್ಬಂಧದಿಂದೋದಲಾಪ್ಪೊಡೆ ನಿಮ್ಮನೋದಿಸಲಕ್ಕುಮೆಂದೊದವರ್ಗಳುಮಿಂ ದಯೆಗೆಯ್ಯಂ ಮಹಾಪ್ರಸಾದಮೆಂದು ಪೊಡೆಮಟ್ಟು

ಹೀಗೆಂದು ಆಕೆ ಪತ್ರ ಬರೆಸಿ ಕೊಟ್ಟಳು. ಅವರಿಬ್ಬರೂ ತಾಯಿಯನ್ನು ಬೀಳ್ಕೊಂಡರು. ಕೆಲವು ದಿವಸಗಳಲ್ಲಿ ರಾಜಗೃಹಕ್ಕೆ ಬಂದರು. ಅಲ್ಲಿ ಕೇಳಿಕೊಂಡು ಸೂರ್ಯಮಿತ್ರನ ಮನೆಗೆ ಹೋದರು. ಅವನನ್ನು ಕಂಡು ಪತ್ರವನ್ನು ಕೊಟ್ಟರು. ಆಗ ಸೂರ್ಯಮಿತ್ರನು "ನೀವು ಎಲ್ಲಿಂದ ಬಂದಿರಿ ? ಯಾರ ಪತ್ರವಿದು ?" ಎಂದು ಕೇಳಿದನು. ಅದಕ್ಕೆ ಇವರು "ನಾವು ಕೌಸಂಬಿಯಿಂದ ಬಂದೆವು. ಈ ಪತ್ರವನ್ನು ನಿಮ್ಮ ತಂಗಿ ಕಾಶ್ಯಪಿ ಕಳುಹಿಸಿದಳು" ಎಂದರು. ಸೂರ್ಯಮಿತ್ರನು ಆ ಪತ್ರವನ್ನು ಓದಿ ನೋಡಿದನು. ಸೋಮಶರ್ಮನು ತೀರಿಹೋದುದು, ಮಂತ್ರಿಪದವಿ ಬೇರೆಯವರಿಗೆ ಆದುದು, ಮಕ್ಕಳು ಕೆಟ್ಟ ಚಟಗಳಿಗೆ ಬಲಿಬಿದ್ದು ಜೀವನೋಪಾಯವನ್ನೇ ಕಳೆದುಕೊಂಡುದು, ಇವರನ್ನು ಶಾಸ್ತ್ರಜ್ಞರೂ ಬುದ್ಧಿವಂತರೂ ಯೋಗ್ಯರೂ ಆಗುವಂತೆ ಮಾಡಬೇಕೆಂದು ಸೂಚಿಸಿ ಮಕ್ಕಳನ್ನು ತನ್ನ ಬಳಿಗೆ ಕಾಶ್ಯಪಿ ಕಳುಹಿಸಿದುದು ಹೀಗೆ ಇವೆಲ್ಲವನ್ನೂ ಓದಿ ನೋಡಿದನು. ನಾನು ಇವರಿಗೆ ಸಲುಗೆ ಕೊಟ್ಟೆನಾದರೆ ಇವರು ಹಿಂದಿನಂತೆ ಗರ್ವಿಷ್ಠರಾಗಿ ಹಾಳಾಗುವರು - ಎಂದು ಮನಸ್ಸಿನಲ್ಲಿ ಯೋಚಿಸಿದನು. ಅಗ್ನಿಭೂತಿ ವಾಯುಭೂತಿಗಳಿಗೆ ಮತ್ತೆ ಹೀಗೆಂದನು - "ನನಗೆ ಕಾಶ್ಯಪಿ ಎಂಬ ತಂಗಿಯಿಲ್ಲ. ಸೋಮಶರ್ಮ ಎಂಬ ಹೆಸರುಳ್ಳ ಭಾವಮೈದುನನೂ ಇಲ್ಲ. ನನಗೆ ಸೂರ್ಯಮಿತ್ರನೆಂಬ ಹೆಸರಿದೆ. ನಿಮ್ಮ ಮಾವನಾಗಿರುವ ಸೂರ್ಯಮಿತ್ರ ನಾನಲ್ಲ". ಮತ್ತೆ ಹೀಗೆಂದನು - "ನೀವು ಯಾರ ಮಕ್ಕಳಾದರೇನು ? ಯಾರಾದರೇನು ? ವಿದ್ಯಾರ್ಥಿಗಳಾಗಿ ವಿದ್ಯೆ ಕಲಿವ ಪ್ರೀತಿಯಿಂದ ಬಂದಿದ್ದೀರಾದರೆ ಅಡ್ಡಿಯಿಲ್ಲ. ಭಿಕ್ಷಾಟನೆ ಮಾಡಿ ಹರಕುಬಟ್ಟೆಯುಟ್ಟು ಇರುಳೂ ಹಗಲೂ ಆಲಸ್ಯಗೊಳ್ಳದೆ ನಿಯಮಕ್ಕೆ ಅನುಸಾರವಾಗಿ ಕಲಿಯಲು ನೀವು ಸಾಧ್ಯತೆಯುಳ್ಳವರಾದರೆ ನಿಮಗೆ ವಿದ್ಯೆ ಕಲಿಸಬಹುದು". ಆಗ ಅವರು "ಇನ್ನು ದಯೆಮಾಡಿ. ಅನುಗ್ರಹವಿದು" ಎಂದು ನುಡಿದು ಸಾಷ್ಟಾಂಗ ವಂದಿಸಿದರು.

ಹರ್ಷಚಿತ್ತರಾಗಿ ಒಳ್ಳಿತಪ್ಪ ದಿವಸ ವಾರ ವಿದ್ಯಾನಕ್ಷತ್ರದಂದು ತಮ್ಮನುಕೂಲದೊಳೋಜರ್ಗೆಱಗಿ ಪೊಡೆವಟ್ಟು ವಿದ್ಯಾಪ್ರಾರಂಭಂಗೆಯ್ದರ್ ಸೂರ್ಮಿತ್ರನುಮವರನಿರುಳುಂ ಪಗಲುಂ ನಿರಂತರಂ ನಿರ್ಬಂಧದಿಂದೋದಿಸಿ ಏೞೆಂಟು ವರುಷದಿಂದೊಳಗೆ ನಾಲ್ಕು ವೇದಮುಮಾಱಿಂಗಮುಂ ಪದಿನೆಂಟು ಧರ್ಮಶಾಸ್ತ್ರಂಗಳುಂ ಮೀಮಾಂಸಾ ನ್ಯಾಯವಿಸ್ತರಂ ವ್ಯಾಕರಣಂ ಪ್ರಮಾಣಂ ಛಂದಮಲಂಕಾರಂ ನಿಘಂಟು ಕಾವ್ಯನಾಟಕಂಗಳುಂ ಚಾಣಕ್ಯಂ ಸಾಮುದ್ರಿಕಂ ಶಾಲಿಹೋತ್ರಂ ಪಾಳಕಾವ್ಯಂ ಹಾನಿತಂ ಚರಕಮಶ್ವಿನೀಮತಂ ಬಾಹಲಂ ಸುಸ್ರುತಂ ಕ್ಷಾರಪಾನೀಯಂ ಮೊದಲಾಗೊದೆಯ ನರವೈದ್ಯಂಗಳುಂ ಜ್ಯೋತಿಷಂ ಮಂತ್ರವಾದಂ ಮೊದಲಾಗೊದೆಯ ಶಾಸ್ತ್ರಂಗಳೆಲ್ಲಮಂ ನೆಜಿಯಿ ಕಲ್ಪಿಸಿ ಯೋಗ್ಯರ್ ಮಾಡಿದೊಡವರ್ ನಿಮ್ಮ ಪ್ರಸಾದದಿಂದೆಲ್ಲಾ ಶಾಸ್ತ್ರಮಂ ಕಲ್ತು ಪಂಡಿತರೆಮಾದೆಮೆಂದಾದಮಾನು ಮೊಸೆದುಮಿನ್ನೆಮ್ಮ ನಾಡ್ಗೆ ಪೋದಪೆಮೆಂದೋಜರ್ಗೆಱಗಿ ಪೊಡೆವಟ್ಟು ಬೀೞ್ಕೊಂಡಾಗಳೋಜರೆಂದರ್ – ನೀಮೆಮ್ಮ ತಂಗೆಯ ಮಕ್ಕಳಿರ್ ಸೋದರಳಿಯಂದಿರಪ್ಪಿರ್ ನಿಮಗಾಂ ಪಸರಂಗೊಟ್ಟಿನಿಲ್ಲೇಕೆಂದೊಡೆ ಮುನ್ನಿನಂತೆ ತಂದೆಯಲ್ಲಿಯುರ್ಕ್ಕಿ ಕೆಟ್ಟಂತಿರಿಲ್ಲಿಯುಮೆತ್ತಾನುಮುರ್ಕ್ಕಿ ಕೆಡುವಿರೆಂದಾಂ ನಿಮ್ಮಂ ಯೋಗ್ಯರಂ

ಮನಸ್ಸಿನಲ್ಲಿ ಸಂತೋಷಪಟ್ಟರು. ಒಳ್ಳೆಯ ದಿನ ವಿದ್ಯಾರಂಭಕ್ಕೆ ಯೋಗ್ಯವಾದ ನಕ್ಷತ್ರದಂದು ತಮಗೆ ಅನುಕೂಲವೆನಿಸಿದಂದು ಉಪಾಧ್ಯಾಯರಿಗೆ ನಮಸ್ಕರಿಸಿ, ಸಾಷ್ಟಾಂಗ ವಂದಿಸಿ ಅವರು ವಿದ್ಯಾಭ್ಯಾಸವನ್ನು ಪ್ರಾರಂಭಿಸಿದರು. ಸೂರ್ಯಮಿತ್ರನು ಅವರನ್ನು ಇರುಳೂ ಹಗಲೂ ಎಡೆಬಿಡದೆ ಕಟ್ಟುನಿಟ್ಟಿನಿಂದ ಓದಿಸಿದನು. ಏಳೆಂಟು ವರ್ಷಗಳೊಳಗೆ ನಾಲ್ಕು ವೇದಗಳನ್ನೂ ವೇದದ ಆರು ಅಂಗಗಳಾದ ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷಗಳನ್ನೂ ಹದಿನೆಂಟು ಧರ್ಮಶಾಸ್ತ್ರಗಳನ್ನೂ ಕಲಿಸಿದನು. ಮೀಮಾಂಸೆ, ತರ್ಕಶಾಸ್ತ್ರ, ವ್ಯಾಕರಣ, ಪ್ರಮಾಣ, ಛಂದಸ್ಸು, ಅಲಂಕಾರ ಶಾಸ್ತ್ರ, ಶಬ್ದಕೋಶ, ಕಾವ್ಯ ನಾಟಕಗಳು, ಕೌಟಿಲ್ಯನ ಅರ್ಥಶಾಸ್ತ್ರ, ಸಾಮುದ್ರಿಕ ಶಾಸ್ತ್ರ, ಶಾಲಿಹೋತ್ರ ಋಷಿಯ ಅಶ್ವಶಾಸ್ತ್ರ, ಪಾಳಕಾಪ್ಯ ಋಷಿ ಪ್ರಣೀತವಾದ ಗಜಶಾಸ್ತ್ರ, ಹಾನಿತ ಎಂಬ ವೈದ್ಯಶಾಸ್ತ್ರ, ಚರಕ ಅಶ್ವಿನೀ ಮತ ಎಂಬ ವೈದ್ಯಗ್ರಂಥಗಳು, ವಾಗ್ಭಟನ ಅಷ್ಟಾಂಗ ಹೃದಯ, ಸುಶ್ರುತಗ್ರಂಥ, ಬಿಡುಲವಣ ಅಥವಾ ಕೃಷ್ಣಲವಣದ ಪಾನಕ್ಕೆ ಸಂಬಂಧಿಸಿದ ವೈದ್ಯ ಮುಂತಾದ ಮನುಷ್ಯ ವೈದ್ಯಗಳನ್ನೂ ಕಲಿಸಿದನು. ಜ್ಯೋತಿಷ, ಮಂತ್ರವಾದ ಮುಂತಾದ ಎಲ್ಲ ಶಾಸ್ತ್ರಗಳನ್ನೂ ಪೂರ್ಣವಾಗಿ ಕಲಿಸಿ ಅವರನ್ನು ಯೋಗ್ಯರಾಗಿ ಮಾಡಿದನು. "ತಮ್ಮ ಅನುಗ್ರಹದಿಂದ ನಾವು ಎಲ್ಲಾ ಶಾಸ್ತ್ರಗಳನ್ನು ಕಲಿತು ವಿದ್ವಾಂಸರಾದೆವು" ಎಂದು ಅವರು ಹೇಳಿ ಅತ್ಯಂತ ಸಂತೋಷವನ್ನು ವ್ಯಕ್ತಪಡಿಸಿದರು. "ಇನ್ನು ನಾವು ನಮ್ಮ ನಾಡಿಗೆ ತೆರಳುವೆವು" ಎಂದು ಗುರುಗಳಿಗೆರಗಿ, ಸಾಷ್ಟಾಂಗ ವಂದಿಸಿ, ಹೋಗಲು ಹೊರಟರು. ಆಗ ಸೂರ್ಯಮಿತ್ರನು ಹೀಗೆಂದನು - "ನೀವು ನನ್ನ ತಂಗಿಯ ಮಕ್ಕಳು. ನನಗೆ ಸೋದರ ಅಳಿಯಂದಿರಾಗಿರುವಿರಿ. ನಿಮಗೆ ನಾನು ಸಲುಗೆಯನ್ನು ಕೊಡಲಿಲ್ಲ. ಏಕೆಂದರೆ, ನೀವು ಹಿಂದೆ ನಿಮ್ಮ ತಂದೆ ಕೊಟ್ಟ ಸಲುಗೆಯಿಂದ ಉನ್ಮತ್ತರಾಗಿ ಕೆಟ್ಟುಹೋದಿರಿ. ಇಲ್ಲಿ ಕೂಡ ಎಲ್ಲಿಯಾದರೂ ಸೊಕ್ಕಿ ಕೆಟ್ಟುಹೋಗುವಿರೆಂದು ಭಾವಿಸಿ, ನಾನು ನಿಮ್ಮನ್ನು ಯೋಗ್ಯರನ್ನಾಗಿ ಮಾಡುವ ಉದ್ದೇಶದ ಕಾರಣದಿಂದ ಸಲುಗೆ ಕೊಡಲಿಲ್ಲ. ಇದಕ್ಕೆ ನೀವು ಸಿಟ್ಟಾಗಬಾರದು. ನನ್ನ ತಪ್ಪನ್ನು ಕ್ಷಮಿಸಿರಿ".

ಮಾಡುವ ಕಾರಣಮಾಗಿ ನಿಮಗೆ ಪಸರಂಗೊಟ್ಟೆನಿಲ್ಲಿದರ್ಕ್ಕೆ ಮುಳಿಯದಿರಿಂ ಕ್ಷಮಿಯಿಸಿಮೆಂದುಡಲುಂ ತುಡಲುಂ ಸಂಬಳಮುಮಂ ಕೊಟ್ಟು ಕಟಿಪಿದಾಗಳ್ – ಪಿರಿಯಾತನಗ್ನಿಭೂತಿಯೆಂಬೊಂ ಮಾವನೆಮಗೆ ಪಸರಂಗುಡದಿರ್ವರುಮಂ ಯೋಗ್ಯರಂ ಮಾಡಿದನೆಂದುಪಕಾರಮಂ ಮನದೆ ಬಗೆದಾದಮಾನುಂ ಸಂತೋಷಂಬಟ್ಟಂ ಕಿಜೆಯಾತಂ ವಾಯುಭೂತಿ ಸೂರ್ಯಮಿತ್ರಂ ಗೆಯ್ದುದೆಲ್ಲಮುಪಕಾರಮೆಂದು ಬಗೆದೆಂದಪ್ಪೊಡಮೆಮ್ಮ ಮಾವಂ ಬೈಕಂದಿರಿದು ತಂದ ಕೂಟ್ಗಿ ನೆರಮೆಣ್ಣೆಯನಕ್ಕುಪ್ಪನಕ್ಕೆ ಕಟಿಯನಕ್ಕೆಂದಪ್ಪೊಡಮಿಕ್ಕಿಯುಮೆಜ್ಜಿಯಿಸಿಯುಮಜೆಯಂ ಕೆಜ್ಜಿಗೆವೋಗಿ ಮೀವಾಗಳ್ ತಲೆಯಂ ಪೂಸಲೆಣ್ಣೆಯನಪ್ಪೊಡಮೆಜ್ಜಿಯಿಸಿಯಜೆಯಂ ತಾಂ ದಿವ್ಯಮಪ್ಪಾಹಾರಂಗಳಂ ದೆವಸದೆವಸಕ್ಕಂ ಪಲಂಬರ್ ನಂಟರ್ಕ್ಕಳುಂ ಆಳ್ಗಳುಂ ಬೆರಸುಣ್ಗುಂ ಪರ್ವದಿವಸದೊಳಪ್ಪೊಡಮೆಂದಾನುಮಿವರ್ಗ್ಗುಣಲಿಕ್ಕಮೆಂದಜೆಯಂ ಪಂಚಮಹಾಪಾತಕನೆಮ್ಮನೇಬಿಂಟು ವರುಷಂಬರಂ ಪಗೆವರಂ ಬಗೆವಂತೆ ದಂಡಿಸಿದನೆಂದು ಮನದೊಳ್ ಮುಳಿಸಂ ಭಾವಿಸಿ ಪೊಱಮಟ್ಟು ಪೋದನ್ ಆಂತಿರ್ವರುಂ ಪೋಗಿ ಕತಿಪಯ ದಿವಸಗಳಿಂ ಕೌಶಂಬಯನೆಯ್ದಿ ತಮ್ಮ ಮನೆಯಂ ಪೊಕ್ಕು ತಾಯಂ ಕಂಡು ತುಟಿಲ್ಗೆಯ್ದು ಪಂಡಿತರಾಗಿ ಬಂದುದಂ ಪೇಟ್ದು ಮಿಂದುಂಡು ವಿಶ್ರಮಿಸಿಯೊಳ್ಳಿತಪ್ಪ ದಿವಸವಾರ ನಕ್ಷತ್ರದೊಳತಿಬಲ ಮಹಾರಾಜನಂ ಕಂಡಿರ್ವರುಂ ಬೇಱಬೇಱುಪಶ್ಲೋಕಿಸಿ ಕ್ರಿಯಾಕಾರಕಸಂಬಂಧದಿಂದಂ ವಖ್ಯಾಣಿಸಿ ತಮ್ಮ

ಸೂರ್ಯಮಿತ್ರನು ಹೀಗೆ ಹೇಳಿ ಅವರಿಗೆ ವಸ್ತ್ರ ಆಭರಣಗಳನ್ನು ಕೊಟ್ಟನು. ಪ್ರಯಾಣಕ್ಕೆ ಬೇಕಾಗುವ ಬುತ್ತಿಯನ್ನು ಕೊಟ್ಟು ಕಳುಹಿಸುವ ಸಂದರ್ಭದಲ್ಲಿ ಹಿರಿಯನಾದ ಅಗ್ನಿಭೂತಿ ಎಂಬುವನು "ಮಾವನು ನಮಗೆ ಸಲುಗೆ ಕೊಡದೆ ಇಬ್ಬರನ್ನೂ ಯೋಗ್ಯರನ್ನಾಗಿ ಮಾಡಿದನು" - ಎಂದು ಉಪಕಾರವನ್ನು ಮನಸ್ಸಿನಲ್ಲಿ ಭಾವಿಸಿಕೊಂಡು ಅತ್ಯಂತ ಸಂತೋಷಪಟ್ಟನು. ಕಿರಿಯವನಾದ ವಾಯುಭೂತಿ ತಮಗೆ ಸೂರ್ಯಮಿತ್ರನು ಮಾಡಿದುದೆಲ್ಲವೂ ಅಪಕಾರವೆಂದೇ ಬಗೆದನು. "ನಾವು ಭಿಕ್ಷೆ ಬೇಡಿ ಅಲೆದಾಡಿ ತಂದ ಅನ್ನಕ್ಕೆ ಸೇರಿಸಲು ಎಣ್ಣೆಯನ್ನಾಗಲೀ ಉಪ್ಪನ್ನಾಗಲೀ ಮಜ್ಜಿಗೆಯನ್ನಾಗಲೀ ನಮ್ಮ ಮಾವ ನಮಗೆ ಎಂದಿಗೂ ಕೊಡಲೂ ಇಲ್ಲ, ಕೊಡಿಸಲೂ ಇಲ್ಲ. ಕೆರೆಗೆ ಹೋಗಿ ಸ್ನಾನ ಮಾಡುವ ಸಂದರ್ಭದಲ್ಲಿ ತಲೆಗೆ ಹಚ್ಚಲು ಎಣ್ಣೆಯನ್ನಾದರೂ ಹೊಯಿಸಿದವನಲ್ಲ. ತಾನಾದರೋ ದಿವ್ಯವಾದ ಆಹಾರಗಳನ್ನು ಪ್ರತಿದಿನವೂ ಹಲವರು ನಂಟರನ್ನೂ ಆಳುಗಳನ್ನೂ ಕೂಡಿಕೊಂಡು ಉಣ್ಣುತ್ತಿದ್ದನು. ಹಬ್ಬದ ದಿವಸದಲ್ಲಾದರೂ 'ಇವರಿಗೆ ಊಟ ಹಾಕಿ' ಎಂದು ಎಂದಾದರೂ ಇವನು ಹೇಳಿದವನಲ್ಲ. ಇವನು ಪಂಚಮಹಾಪಾಪ ಮಾಡಿದವನು. ನಮ್ಮಿಬ್ಬರನ್ನೂ ಏಳೆಂಟು ವರ್ಷಗಳವರೆಗೆ ಶತ್ರುಗಳೆಂದು ಭಾವಿಸಿದಂತೆ ದಂಡಿಸಿದ್ದಾನೆ" - ಹೀಗೆ ವಾಯುಭೂತಿ ಮನಸ್ಸಿನಲ್ಲಿ ಕ್ರೋಧಭಾವವನ್ನಿಟ್ಟುಕೊಂಡು ಸಾಷ್ಟಾಂಗ ವಂದಿಸಿ ಹೊರಟುಹೋದನು. ಅಂತು ಅವರಿಬ್ಬರೂ ಹೋಗಿ ಕೆಲವು ದಿನಗಳಲ್ಲಿ ಕೌಶಂಬಿಗೆ ಬಂದರು. ತಮ್ಮ ಮನೆಗೆ ಹೊಕ್ಕು ತಾಯಿಯನ್ನು ಕಂಡು ವಂದಿಸಿದರು. ತಾವು ವಿದ್ವಾಂಸರಾಗಿ ಬಂದುದನ್ನು ತಿಳಿಸಿದರು. ಸ್ನಾನಮಾಡಿ, ಊಟಮಾಡಿ, ವಿಶ್ರಾಂತಿ ತೆಗೆದುಕೊಂಡರು. ಒಳ್ಳೆಯ ದಿನ ವಾರ ನಕ್ಷತ್ರ ಮುಹೂರ್ತದಲ್ಲಿ ಅತಿಬಲ ಮಹಾರಾಜನಲ್ಲಿಗೆ ಬಂದು ಅವನನ್ನು ಕಂಡು ಬೇರೆ ಬೇರೆಯಾಗಿ ಸ್ತುತಿ ರಚನೆ ಮಾಡಿದರು. ಅವನ್ನು ಕ್ರಿಯೆ -ಕಾರಕಗಳ ಸಂಬಂಧಪೂರ್ವಕ ವ್ಯಾಕರಣಶುದ್ಧವಾಗಿ ವ್ಯಾಖ್ಯಾನಮಾಡಿ, ತಮ್ಮ ಪಾಂಡಿತ್ಯವನ್ನು

ಪಂಡಿತಿಕೈಯನಜೆಪಿದೊಡೆ ಸಭೆಯೊಳಿರ್ದ ಪಂಡಿತಜನಮೆಲ್ಲಂ ಮೆಚ್ಚಿ ಬಚ್ಚಳಿಸಿ ಪೊಗಟ್ಪೊಡರಸಂ ಸಂತುಷ್ಟಚಿತ್ತನಾಗಿ ಒಸೆದು ನಿಮ್ಮ ತಂದೆಯ ಮಂತ್ರಿಪದಮಂ ಬಾಟುಮಂ ಕೈಕೊಳ್ಳಿಮೆಂದು ಕೊಟ್ಪೊಡೆ ಮಹಾಪ್ರಸಾದಮೆಂದೆಱಗಿ ಪೊಡವಟ್ಟು ಕೈಕೊಂಡು ಸುಖದೊಳ್ ಬಾಟುತ್ತಂ ಪಲಂಬರ್ ಪಂಡಿತರ್ಕಳ್ಗೋದುಗಳಂ ವಖ್ಯಾಣಿಸುತ್ತಂ ಲೋಕದೊಳರಮನೆಯೊಳಂ ಪೂಜ್ಯರಾಗಿ ಸುಖಸಂಕಥಾ ವಿನೋದದಿಂ ಕಾಲಂ ಸಲೆ ಮತ್ತಿತ್ತ ರಾಜಗೃಹದೊಳ್ ಸೂರ್ಯಮಿತ್ರಂ ಸುಬಲ ಮಹಾರಾಜನ ತೊಟ್ಪನರ್ಘ್ಯಮಪ್ಪ ಮಾಣಿಕ್ಯದುಂಗುರಮಂ ಕಳೆದು ತನಗೆ ತುಡಲ್ಕೆಂದು ಕೊಟ್ಪೊಡೊಂದು ದಿವಸಂ ಸಂಜೆವಾರಿಸಲೆಂದು ಪೋದಲ್ಲಿ ಆದಿತ್ಯಂಗಿದಿರಂ ನೀರಂ ಸೂಸುವಾಗಳ್ ಬೆರಲಿಂದಮುರ್ಚಿ ನೀರ್ವೆರಸು ಸೂಸಿ ತಾವರೆಯೊಳುಂಗುರಂ ಬಿಟ್ಟತ್ತು ತಾನುಂ ನೋಡದೆ ಬಗೆಯದೆ ಕೆಮ್ಮನೆ ಕೞೆದಂತರಮಂ ಪೋಗಿ ಕೈಯಂ ನೋಡಿ ಬೆರಲುಂಗುರಮಂ ಕಾಣದೆಲ್ಲಿ ಕೆಟ್ಟತ್ತೆಂದು ಪ್ರಮಾಣಮಱಯದೆ ಮಲ್ಲಲಂ ಮಱುಗುತ್ತಂಜಿ ದೆಸೆಗಳಂ ನೋಟ್ಪನ್ನೆಗಂ ದೂರಾಂತರದೊಳಿರ್ದ್ದ ಸುಧರ್ಮರೆಂಬಾಚಾರ್ಯರಂ ದಿವ್ಯಜ್ಞಾನಿಗಳಂ ಕಂಡಿವರೇನಾನುಮಂ ಬಲ್ಲೊರಪ್ಪೊಡೆ ಬೆಸಗೊಂಡು ನೋಟ್ಪೆನೆಂದು ಪೋಗಿ ಭಟ್ಟಾರರಂ ಕಂಡು ಪಕ್ಕದೊಳಿರ್ದ್ದಾಗಳ್ ಈತಂ ಭವ್ಯನೆಂದಱೆದು- ಏನಯ್ಯ ಅರಸರ ವಾರಕದ ಮಾಣಿಕದುಂಗುರಮಂ ಕಿಡಿಸಿ ಬಂದಿರೆ ಎಂದಾಗಳೆಱಗಿ ಪೊಡವಟ್ಟಂತಱೆವರೊಳರೆ ಎಂದು

ಪ್ರಕಟಿಸಿದರು. ಆಗ ರಾಜಸಭೆಯಲ್ಲಿದ್ದ ಪಂಡಿತರೆಲ್ಲರೂ ಮೆಚ್ಚಿ ಹಿರಿದಾಗಿ ಹೊಗಳಿದರು. ರಾಜನು ಮನಸ್ಸಿನಲ್ಲಿ ಸಂತೋಷಗೊಂಡು ಪ್ರೀತಿ ತಾಳಿದನು. "ನಿಮ್ಮ ತಂದೆಯ ಮಂತ್ರಿಸ್ಥಾನವನ್ನೂ ಜೀವಿಕೆಯನ್ನೂ ಸ್ವೀಕರಿಸಿ" - ಎಂದು ಅವರಿಗೆ ಕೊಟ್ಟನು. 'ದೊಡ್ಡ ಅನುಗ್ರಹವಿದು' - ಎಂದುಕೊಂಡು ಅವರು ನಮಸ್ಕರಿಸಿ, ರಾಜನಿತ್ತುದನ್ನು ಸ್ವೀಕರಿಸಿದರು. ಸುಖವಾಗಿ ಬಾಳುತ್ತ, ಅವರು ಹಲವಾರು ವಿದ್ವಾಂಸರಿಗೆ ವಿದ್ಯೆಗಳನ್ನು ವಿವರಣೆ ಮಾಡುತ್ತ ಲೋಕದಲ್ಲಿಯೂ ಅರಮನೆಯಲ್ಲಿಯೂ ಪೂಜ್ಯರಾದರು. ಸುಖಸಂಕಥಾ ವಿನೋದದಿಂದ ಹೀಗೆಯೇ ಕಾಲ ಕಳೆಯುತ್ತಿತ್ತು. ಇತ್ತ ರಾಜಗೃಹದಲ್ಲಿ ಸೂರ್ಯಮಿತ್ರನಿಗೆ ಸುಬಲ ಮಹಾರಾಜನು ತಾನು ತೊಟ್ಟ ಅಮೂಲ್ಯವಾದ ಮಾಣಿಕ್ಯದ ಉಂಗುರವನ್ನು ತೆಗೆದು, ಒಮ್ಮೆ ತೊಡಲು ಕೊಟ್ಟನು. ಸೂರ್ಯಮಿತ್ರನು ಒಂದುದಿವಸ ಸೂರ್ಯನಿಗೆ ಸಂಧ್ಯಾಕಾಲದ ಅರ್ಘ್ಯಕೊಡಲು ಹೋದನು. ಸೂರ್ಯನಿಗೆ ಅಭಿಮುಖವಾಗಿ ಅರ್ಘ್ಯವನ್ನು ಕೊಡುವಾಗ ಆ ಉಂಗುರ ಅವನ ಬೆರಳಿನಿಂದ ಹೊರಗೆ ಬಂದು ಅರ್ಘ್ಯದ ನೀರಿನೊಂದಿಗೆ ತಾವರೆಯ ಕೆರೆಯಲ್ಲಿ ಬಿದ್ದಿತು. ಅವನು ಅದನ್ನು ನೋಡಲಿಲ್ಲ, ಭಾವಿಸಲಿಲ್ಲ, ಸುಮ್ಮನೆ ಸ್ವಲ್ಪ ದೂರ ಹೋದನು. ಕೈಯನ್ನು ನೋಡಿದಾಗ ಬೆರಳಿನ ಉಂಗುರವನ್ನು ಕಾಣದೆ, ಎಲ್ಲಿ ಬಿದ್ದುಹೋಯಿತೋ ಎಂದುಕೊಂಡನು. ಅದು ಕಾಣೆಯಾಗಲು ಕಾರಣವನ್ನು ತಿಳಿಯದೆ, ಬಹಳ ವ್ಯಥೆಪಟ್ಟನು. ಭಯಗೊಂಡವನಾಗಿ ದಿಕ್ಕುಗಳನ್ನು ನೋಡಿದನು. ಹಾಗೆ ನೋಡುವಾಗ ದೂರದ ಒಂದು ಸ್ಥಳದಲ್ಲಿ ಇದ್ದ ದಿವ್ಯಜ್ಞಾನಿಗಳಾದ ಸುಧರ್ಮರೆಂಬ ಆಚಾರ್ಯರನ್ನು ಕಂಡನು. "ಇವರು ಏನಾದರೂ ತಿಳಿದಿದ್ದರೆ, ಕೇಳಿ ನೋಡುವೆನು" ಎಂದು ಹೋಗಿ ಆ ಮುನಿಗಳ ಪಕ್ಕದಲ್ಲಿ ಇದ್ದನು. ಆಗ ಸುಧರ್ಮಾಚಾರ್ಯರು ಈತನು ಭವ್ಯ, ಧರ್ಮ ವಿಚಾರವನ್ನು ಕೇಳಲು ಅರ್ಹನೆಂದು ತಿಳಿದು ಏನಯ್ಯಾ ಅರಸರು ಇಟ್ಟುಕೊಳ್ಳಲು ಕೊಟ್ಟ ಮಾಣಿಕ್ಯದ ಉಂಗುರವನ್ನು ಕಳೆದುಕೊಂಡು ಬಂದಿರೇ ? - ಎಂದರು. ಆಗ

2

ಪೊಗಟ್ಟೆರ್ದ್ದಿಂತು ಬೆಸಗೊಂಡಂ - ಭಟ್ಟಾರಾ ಬೆಸಸಿಮಾವುಂಗುರಮಂ ಕಾಣಲಕ್ಕುಮೆ ಎಂದಂಗೆ ಭಟಾರರ್ ಕಾಣಲಕ್ಕುಮೆಂದರ್ ನಿನ್ನೆ ನೀನಾದಿತ್ಯಂಗೆ ನೀರಂ ಸೂಸಿ ಪೊಡೆಮಡುವಾಗಳಾ ನೀರ್ವೆರಸು ಸೂಸಿ ತಾಮರೆಗೆಱೆಯೊಳಗೆ ಮುಱುಗಿರ್ದ್ದ ಮುಗುಳಮೇಗೆ ತಗುಳ್ದಿರ್ದುದು ನಾಳೆ ನೇಸಱು ಮೂಡುವಾಗಳ್ ನೀರಿಂದಂ ಮೇಗೆ ನೆಗೆದಿರ್ದ್ದುಂಗುರಮಂ ಕಾಣಲಕ್ಕುಮೆಂದೊಡೆ ಸಂತೋಷಂಬಟ್ಟು ಪೊಡೆಮಟ್ಟು ಪೋಗಿ ಕೊಳಕ್ಕೆ ಮಾನಸರಂ ಕಾಪಿಟ್ಟು ಮಱುದಿವಸಂ ಸಂಜೆಯೊಳ್ ಬಂದು ನೋಟ್ಟನ್ನೆಗಂ ತಾಮರೆಯ ಮುಗುಳ ಮೇಲೆ ತಗುಳ್ದಿರ್ದ್ದುಂಗುರಮಂ ಕಂಡು ಕೊಂಡರಸಂಗೊಪ್ಪಿಸಿ ತುರಿಪದಿಂದರಮನೆಯಂ ಪೊಱಮಟ್ಟು ಪೋಗಿ ಮನದೊಳಿಂತೆಂದು ಬಗೆದನೀ ಲೋಕದೊಳಿರ್ದ ಸೂಕ್ಷ್ಮಾಂತರಿತ ದೂರ ಪದಾರ್ಥ ವಸ್ತುಗಳಿಲ್ಲಮನಱಿವಂತಪ್ಪೀ ಸವಣನ ಜೋಯಿಸಮನೆಂತಪ್ಪೊಡಂ ಕ್ಷಪಣಕನಂ ಮಿಥ್ಯಾವಿನಯದಿಂದಿಳಿಸಿ ಕಲ್ಪೆನೆಂಬುದೊಂದು ಬುದ್ಧಿಯಿಂದಂ ಮನೆಗೆ ಬಂದು ಸುದೇವಿಯೆಂಬ ತನ್ನ ಪಾರ್ವಂತಿಗೆ ಸ್ವಾಭಪ್ರಾಯಮೆಲ್ಲಮಂ ಪೇಟ್ಟು ಜ್ಯೋತಿಷನಿಮಿತ್ತಂ ಮನೆಯಂ ಪೊಱಮಟ್ಟು ಸುಧರ್ಮಾಚಾರ್ಯರಲ್ಲಿಗೆ ಪೋಗಿ ಪೊಡೆವಟ್ಟು ಭಟ್ಟಾರಾ ನಿಮ್ಮ ಪಕ್ಕದೆ ಜ್ಯೋತಿಷಮಂ ಕಲ್ಪೆನೆಂಬುದೊಂದಟ್ಟಿಯಿಂ ಬಂದೆನೆನ್ನಂ ಜ್ಯೋತಿಷಮಂ ಕಲಿಪ್ಪುದೆಂದೊಡೆ ಭಟಾರರೆಂದರ್ - ತಮ್ಮಾ ಎಮ್ಮ ಜೋಯಿಸಮೆಮ್ಮಂತಪ್ಪ ರೂಪಿನ ಋಪಿಯರ್ಗಲ್ಲದೆ ಪೇಟಲುಂ ಕಲಲುಮಾಗದೆಂದೊಡೆ

ಸೂರ್ಯಮಿತ್ರನು ಅವರಿಗೆ ಸಾಷ್ಟಾಂಗವಂದಿಸಿ ಹೀಗೆ ತಿಳಿದವರು ಇರುವರೆ ? - ಎಂದು ಹೊಗಳಿ, ಹೀಗೆ ಕೇಳಿದನು - ಪೂಜ್ಯರೇ ಆ ಉಂಗುರವನ್ನು ಕಾಣಲು ಸಾಧ್ಯವೇ ? ತಿಳಿಸಿರಿ'. ಅದಕ್ಕೆ ಯತಿಗಳು - 'ಕಾಣಲು ಸಾಧ್ಯವಿದೆ' ಎಂದರು. 'ನಿನ್ನೆ ನೀನು ಸೂರ್ಯನಿಗೆ ಅರ್ಘ್ಯವನ್ನು ಕೊಟ್ಟು ಸಾಷ್ಟಾಂಗ ವಂದಿಸುವಾಗ ಆ ನೀರಿನೊಂದಿಗೆ ಉಂಗುರ ಕೆಳಗೆ ಬಿದ್ದು ತಾವರೆ ಕೆರೆಯೊಳಗೆ ಮುಳುಗಿದ್ದ ಮುಗುಳಿನ ಮೇಲೆ ಸಿಕ್ಕಿಕೊಂಡಿದೆ. ನಾಳೆ ಸೂರ್ಯೋದಯದ ವೇಳೆಗೆ ಆ ಉಂಗುರವು ನೀರಿನಿಂದ ಮೇಲಕ್ಕೆ ಎದ್ದುಕೊಂಡು ಕಾಣಿಸುವುದು' ಎಂದರು. ಆಗ ಸೂರ್ಯಮಿತ್ರನು ಸಂತೋಷದಿಂದ ಪೊಡಮಟ್ಟು ತೆರಳಿದನು. ಸರೋವರಕ್ಕೆ ಆಳುಗಳನ್ನು ಕಾವಲಿರಿಸಿ, ಮರುದಿನ ಬೆಳಗ್ಗೆ ನೋಡಲು ಬಂದನು. ಆಗ ತಾವರೆಯ ಮುಗುಳಿನ ಮೇಲೆ ಸಿಕ್ಕಿಕೊಂಡಿದ್ದ ಉಂಗುರವನ್ನು ಕಂಡನು. ಅದನ್ನು ತೆಗೆದುಕೊಂಡು ಸುಬಲ ಮಹಾರಾಜನಿಗೆ ಒಪ್ಪಿಸಿ ಬೇಗನೆ ಅರಮನೆಯಿಂದ ಹೊರಟಹೋದನು. ಅವನು ತನ್ನ ಮನಸ್ಸಿನಲ್ಲಿ ಹೀಗೆ ಯೋಚಿಸಿದನು. ಈ ಲೋಕದಲ್ಲಿರುವ ಚಿಕ್ಕದಾದ, ಗುಪ್ತವಾದ, ಹಾಗೂ ದೂರದಲ್ಲಿದ್ದ ಪದಾರ್ಥಗಳನ್ನು ಅಥವಾ ವಸ್ತುಗಳೆಲ್ಲವನ್ನೂ ತಿಳಿಯುವಂತಹ ಈ ಜೈನ ಸಂನ್ಯಾಸಿಯ ಜ್ಯೋತಿಷವಿದ್ಯೆಯನ್ನು ಹೇಗಾದರೂ ಕಲಿಯುವೆನು. ಈ ಸಂನ್ಯಾಸಿಯನ್ನು ಕಪಟ ನಮ್ರತೆಯಿಂದ ಒಲಿಸಿ ಕಲಿಯುವೆನು - ಎಂಬ ಒಂದು ಬುದ್ಧಿಯಿಂದ ಮನೆಗೆ ಬಂದನು. ಸುದೇವಿ ಎಂಬ ತನ್ನ ಹೆಂಡತಿಗೆ ತನ್ನ ಅಭಿಪ್ರಾಯವೆಲ್ಲವನ್ನೂ ತಿಳಿಸಿದನು. ಜ್ಯೋತಿಷ್ಯವನ್ನು ಕಲಿಯುವ ಕಾರಣದಿಂದ ಮನೆಯಿಂದ ಹೊರಟು ಸುಧರ್ಮಾಚಾರ್ಯರಲ್ಲಿಗೆ ಹೋದನು. ಅವರಿಗೆ ಸಾಷ್ಟಾಂಗವಂದನೆ ಮಾಡಿ - "ಪೂಜ್ಯರೇ, ನಿಮ್ಮ ಬಳಿಯಲ್ಲಿ ಜ್ಯೋತಿಷವನ್ನು ಕಲಿಯಬೇಕೆಂಬ ಒಂದು ಪ್ರೀತಿಯಿಂದ ನಾನು ಬಂದಿದ್ದೇನೆ. ನನಗೆ ಜ್ಯೋತಿಷವನ್ನು ಕಲಿಸುವುದು" ಎಂದು ಹೇಳಿದನು. ಆಗ ಭಟಾರರು ಹೀಗೆಂದರು - "ತಮ್ಮಾ ನಮ್ಮ

ಅಂತಪ್ಪ ದೀಕ್ಷೆಯಂ ದಯೆಗೆಯ್ಯಮೆಂದು ಬೇಡಿದೊಡೊಳ್ಳಿತಪ್ಪ ಮುಹೂರ್ತದೊಳ್ ದೀಕ್ಷೆಯಂ ಕೊಟ್ಟು ಪಂಚಮಹಾವ್ರತಂಗಳನೇಱಿಸಿ ಪಡಿಕಮಣಂ ವೇಲ್ಪ ತದನಂತರಮಿನ್ ಕಲ್ಪಿಸಿಮೆಂದೊಡೆ ನಮಸ್ಕಾರಂಗಳುಮಾಳೋಚನೆಗಳಂ ನಿಯಮಮುಮನೋದಿದೊಡಲ್ಲದೆ ಪೇಱಲಾಗದೆಂದೊಡೆಲ್ಲಮಂ ಬೇಗವೇಗಂ ಪಾಠಂಗೊಂಡು ಭಟ್ಟಾರಾ ಇನ್ ಪೇಟೆಮೆನೆ ಭಟ್ಟಾರರೆಂದರ್ ತ್ರಿಷಷ್ಟಿ ಶಲಾಕಾ ಪುರುಷರ್ಕಳ ಚರಿತಂಗಳುಮನಾಚಾರಮಾರಾಧನೆ ಮೊದಲಾಗೊಡೆಯ ಚರಣ ಗ್ರಂಥಂಗಳುಮಂ ಲೋಗಾಣೆ ಸಂಗಾಣೆ ಮೊದಲಾಗೊಡೆಯ ಕರಣಗ್ರಂಥಂಗಳುಮನಿವೆಲ್ಲಮಂ ಕಲ್ತೊಡಲ್ಲದೆ ಪೇಱಲಾಗದೆಂದೊಡೆ ಸೂರ್ಯಮಿತ್ರಂ ಪಂಡಿತನಪ್ಪುದಱಿಂದವೆಲ್ಲಮಂ ಕಱಿದೆ ಕಾಲದಿಂದೋದಿ ಕಲ್ತು ಭಟ್ಟಾರಾ ನಿಮ್ಮ ಪೇಟ್ದೋದುಗಳೆಲ್ಲಮಂ ಗ್ರಂಥಾರ್ಥಸ್ವರೂಪದಿಂದೋದಿ ಕಲ್ತೆಂ ಇನ್ ಜ್ಯೋತಿಷಮಂ ವಖ್ಯಾನಿಸಿಮೆಂದೊಂಗೆ ಭಟ್ಟಾರರೆಂದರ್ ಇನ್ನೊಂದಧಿಕಾರಮುಂಟು ದ್ರವ್ಯಾನುಯೋಗಮೆಂಬುದಂ ಕೇಳ್ದ ಬಟಿಕ್ಕೆ ಜ್ಯೋತಿಷಶಾಸ್ತ್ರಮಂ ವಖ್ಯಾನಿಸುವೆನೆಂದೊಡೆ ಮನದೊಳಾದಮಾನುಮೊಸೆದೊಂದಧಿಕಾರಮೆಂಬುದೆನಗೇಮುಟ್ಟಗಳೆ ಕಲ್ಪೆನೆಂದು ಬಗೆದು ಒಳ್ಳಿತಪ್ಪ

ಜ್ಯೋತಿಷ ವಿದ್ಯೆಯನ್ನು ನಮ್ಮ ಹಾಗೆಯೇ ಇರುವ ಋಷಿಗಳಿಗಲ್ಲದೆ ಹೇಳಬಾರದು, ಕಲಿಯಲೂ ಬಾರದು.'' ಹೀಗೆನ್ನಲು ಸೂರ್ಯಮಿತ್ರನು ''ಅಂತಹ ದೀಕ್ಷೆಯನ್ನು ದಯಪಾಲಿಸಿರಿ'' ಎಂದು ಬೇಡಿದನು. ಆಚಾರ್ಯರು ಒಳ್ಳೆಯ ಮುಹೂರ್ತದಲ್ಲಿ ದೀಕ್ಷೆಯನ್ನು ಕೊಟ್ಟರು. ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹಗಳೆಂಬ ಐದು ಬಗೆಯ ಮಹಾವ್ರತಗಳನ್ನು ಅನುಷ್ಠಾನ ಮಾಡಿಸಿದರು. ದೋಷಗಳಿಗೆ ಪ್ರಾಯಶ್ಚಿತ್ತಗಳನ್ನು ಹೇಳಿಸಿದರು. ಅನಂತರ ಸೂರ್ಯಮಿತ್ರನು ''ಇನ್ನು ಕಲಿಸಿ'' ಎಂದನು. ಅದಕ್ಕೆ ಆಚಾರ್ಯರು ''ಪಂಚನಮಸ್ಕಾರಗಳನ್ನೂ ಪ್ರಾಯಶ್ಚಿತ್ತಕ್ಕೆ ಮುಂದೆ ತನ್ನ ದೋಷಗಳನ್ನು ಗುರುವಿಗೆ ತಿಳಿಸುವ ಆಚರಣೆಯನ್ನೂ ಪ್ರತಿಜ್ಞೆಯನ್ನೂ ಆಚರಿಸಿದಲ್ಲದೆ, ಹೇಳಿ ಕೊಡಲಾಗುವುದಿಲ್ಲ'' ಎಂದರು. ಸೂರ್ಯಮಿತ್ರನು ಬೇಗ ಬೇಗನೆ ಅವೆಲ್ಲವನ್ನೂ ಪಾಠ ಹೇಳಿಸಿಕೊಂಡ ಮೇಲೆ ''ಪೂಜ್ಯರೇ, ಇನ್ನು ಹೇಳಿ'' ಎಂದನು. ಆಗ ಆಚಾರ್ಯರು ''ಅರುವತ್ತಮೂರು ಮಂದಿ ಶಲಾಕಾಪುರುಷರ ಚರಿತ್ರೆಗಳನ್ನು ಆಚಾರ ಆರಾಧನೆ ಮಾಡಲಾಗಿರುವ ಚರಣ ಗ್ರಂಥ (ಜೈನ ಶ್ರಾವಕರ ಮತ್ತು ಯತಿಗಳ ಆಚಾರಗಳನ್ನು ನಿರೂಪಿಸುವ ಗ್ರಂಥ)ಗಳನ್ನು ಲೋಗಾಣೆ (ಲೋಕಾಕಾರವನ್ನು ನಿರೂಪಿಸುವ ಗ್ರಂಥಗಳು) ಸಂಗಾಣೆ (ಸಪ್ತ ಪದಾರ್ಥಗಳ ಸ್ವರೂಪವನ್ನು ತಿಳಿಸುವ ಗ್ರಂಥಗಳು) ಮುಂತಾದ ಕರಣಗ್ರಂಥಗಳನ್ನು - ಇವೆಲ್ಲವನ್ನೂ ಕಲಿತಲ್ಲದೆ, ಹೇಳಿ ಕೊಡಲಿಕ್ಕಾಗದು'' ಎಂದರು. ಸೂರ್ಯಮಿತ್ರನು ಪಂಡಿತನಾದುದರಿಂದ ಅವೆಲ್ಲವನ್ನೂ ಸ್ವಲ್ಪವೇ ಕಾಲದಲ್ಲಿ ಓದಿ ಕಲಿತನು. ''ಪೂಜ್ಯರೇ, ನೀವು ಹೇಳಿಕೊಟ್ಟ ವಿದ್ಯೆಗಳೆಲ್ಲವನ್ನೂ ಗ್ರಂಥದ ಅರ್ಥಸ್ವರೂಪದಿಂದಲೇ ಓದಿ ಕಲಿತೆನು. ಇನ್ನು ಜ್ಯೋತಿಷವನ್ನು ವ್ಯಾಖ್ಯಾನಿಸಿರಿ'' ಎಂದನು. ಆಗ ಅವನಿಗೆ ಆಚಾರ್ಯರು ಹೀಗೆಂದರು - ''ಇನ್ನೊಂದು ಅರ್ಹತೆ ಉಳಿದಿದೆ. ಅದಕ್ಕೆ ದ್ರವ್ಯಾನುಯೋಗವೆಂದು ಹೆಸರು. ಅದನ್ನು ತಿಳಿದುಕೊಂಡ ನಂತರ ಜ್ಯೋತಿಷ ಶಾಸ್ತ್ರವನ್ನು ವ್ಯಾಖ್ಯಾನಿಸುವೆನು'' - ಹೀಗೆನ್ನಲು, ಸೂರ್ಯಮಿತ್ರನು ಮನಸ್ಸಿನಲ್ಲಿ ಬಹಳ ಸಂತೋಷಪಟ್ಟು - ಇನ್ನುಳಿದ ಒಂದು ಅರ್ಹತೆಯೆಂಬುದು ನನಗೆ ಏನು ಮಹಾ ! ಈಗಲೇ ಕಲಿಯುವೆನು-

ದಿವಸ ವಾರ ನಕ್ಷತ್ರ ಮುಹೂರ್ತದೊಳ್ ಸಿದ್ಧಾಂತಮಂ ತೊಡಗಿಸೆ ಎಂತಂತೆ ಕೇಳ್ದುಮಂತಂತೆ ಮಿಥ್ಯಾತ್ವಮಿನಿಸಿನಿಸು ಪಿಂಗೆ ಬಂಧಂ ಬಂಧಕಾರಣಂ ಮೋಕ್ಷಂ ಮೋಕ್ಷಕಾರಣಮಾ ಎರಡಱ ಫಲಮುಮೆಂದಿಂತು ಸಿದ್ಧಾಂತದೊಳ್ ಪೇಳ್ದ ವಸ್ತುಗಳೆಲ್ಲಮಂ ಕೇಳ್ದು ಜೀವಾಜೀವ ಪುಣ್ಯಪಾಪಾಸ್ರವ ಸಂವರ ನಿರ್ಜರ ಬಂಧ ಮೋಕ್ಷಮೆಂದಿಂತು ನವಪದಾರ್ಥಂಗಳುಂ ಪಂಚಾಸ್ತಿಕಾಯ ಷಡ್ದ್ರವ್ಯಂಗಳುಮೆಂಬವಱೊಳಾದಮಾನುಮಜೆತಮುಂ ಕುಶಲಿಕೆಯುಂ ನಂಬುಗೆಯುಮಾಗಿ ಆರ್ಹದ್ಭಟ್ಟಾರಕರ ಸಿದ್ಧಸ್ವರೂಪಮಂ ಗುಣಂಗಳುಮನಱೆದು ಶಂಕಾದ್ಯಷ್ಟಮಲಂಗಳುಮೆಂಟು ಮದಂಗಳುಂ ಮೂಱುಮೂಢಮುಮಾಱನಾಯತನ ಸೇವೆಗಳುಮೆಂದಿಂತು ಇಪ್ಪತ್ತೈದು ದೋಷಂಗಳಿಂದಗಲ್ದ ಸಮ್ಯಕ್ತ್ವಮನೊಡೆಯನಾಗಿ ಸಂಸಾರ ಭೋಗ ವೈರಾಗ್ಯ ವದಾಯಣನುಮಾಗಿ ಎಮ್ಮುಕ್ಕೆವ ತಪದಿಂದಮನಂತ ಸುಖಕ್ಕೆ ಕಾರಣಮಪ್ಪ ಸನ್ಮಾರ್ಗಮಂ ಪೆತ್ತೆನೆಂದತ್ಯಂತ ಹರ್ಷಚಿತ್ತನಾಗಿ ಗುರುಗಳ್ಗೆ ತಮ್ಮುಕ್ಕೆವದಿಂ ತಪಂಬಟ್ಟುದನಾಳೋಚಿಸಿ ಪ್ರಾಯಶ್ಚಿತ್ತಂಗೊಂಡು ಪಡಿಕಮಣಂಗೆಯ್ದು ಪರಮಾರ್ಥಯತಿವರರಾಗಿ ಪನ್ನೆರಡು ವರ್ಷಂಬರಂ ಗುರುಗಳನಗಲದೆ ತಪಂಗೆಯ್ದಾಚಾರ್ಯರಾಗಿ ಗುರುಗಳನುಮತದಿಂದೇಕವಿಹಾರಿಯಾಗಿ-ಗ್ರಾಮೇಽಕರಾತ್ರಂ ನಗರೇ ಪಂಚರಾತ್ರಮಟವ್ಯಾಂ ದಶರಾತ್ರಮೆಂಬೀ ತೆಱದಿಂದಂ ಗ್ರಾಮ

ಎಂದು ಭಾವಿಸಿಕೊಂಡನು. ಅನಂತರ ಒಳ್ಳೆಯ ದಿವಸ ವಾರ ನಕ್ಷತ್ರ ಮುಹೂರ್ತದಲ್ಲಿ ಭಟ್ಟಾರರು ಸಿದ್ಧಾಂತವನ್ನು ಉಪದೇಶಿಸಲು ಪ್ರಾರಂಭ ಮಾಡಿದರು. ಸೂರ್ಯಮಿತ್ರನು ಸಿದ್ಧಾಂತವನ್ನು ಕೇಳಿದಂತೆಲ್ಲ ಅಜ್ಞಾನವು (ಅಪನಂಬಿಕೆ) ಸ್ವಲ್ಪ ಸ್ವಲ್ಪವಾಗಿ ಹಿಂಗತೊಡಗಿತು. ಬಂಧವು ಬಂಧನಕ್ಕೆ ಕಾರಣವೆಂದೂ ಮೋಕ್ಷವು ಮೋಕ್ಷಕ್ಕೆ ಕಾರಣವೆಂತಲೂ ಆ ಎರಡರ ಪರಿಣಾಮವನ್ನೂ ಸಿದ್ಧಾಂತದಲ್ಲಿ ಹೇಳಿದ ವಿಚಾರವೆಲ್ಲವನ್ನೂ ಕೇಳಿಕೊಂಡನು. ಜೀವ, ಅಜೀವ, ಪುಣ್ಯ, ಪಾಪ, ಆಸ್ರವ, ಸುಂದರ, ನಿರ್ಜರ, ಬಂಧ, ಮೋಕ್ಷ ಎಂದು ಈ ರೀತಿಯಾದ ನವಪದಾರ್ಥಗಳು, ಪಂಚಾಸ್ತಿಕಾಯ ಷಡ್ದ್ರವ್ಯಗಳು - ಎಂಬವುಗಳಲ್ಲಿ ಹೆಚ್ಚಿನ ತಿಳುವಳಿಕೆಯೂ ಪ್ರಾವೀಣ್ಯವೂ ವಿಶ್ವಾಸವೂ ಅವನಲ್ಲಿ ಉಂಟಾದವು. ಜೈನ ತೀರ್ಥಂಕರರ ಸಿದ್ಧಸ್ವರೂಪವನ್ನೂ ಗುಣಗಳನ್ನೂ ತಿಳಿದುಕೊಂಡನು. ಸಂಶಯವೇ ಮೊದಲಾದ ಎಂಟು ಬಗೆಯ ಅನಾಯತನ ಸೇವೆಗಳು - ಎಂಬೀ ರೀತಿಯ ಇಪ್ಪತ್ತೈದು - ದೋಷಗಳಿಂದ ದೂರವಾದ ತತ್ತ್ವಜ್ಞಾನವುಳ್ಳವನಾದನು. ಸಂಸಾರಿಕ ಸುಖದಲ್ಲಿ ವೈರಾಗ್ಯವನ್ನು ತಾಳಿದನು, 'ನನ್ನ ಕಪಟದ ತಪಸ್ಸಿನಿಂದ ಅಂತ್ಯವಿಲ್ಲದ ಸುಖಕ್ಕೆ ಕಾರಣವಾಗಿರುವ ಒಳ್ಳೆಯ ದಾರಿಯನ್ನು ಪಡೆದುಕೊಂಡೆನು' - ಎಂದು ಅತ್ಯಂತ ಸಂತೋಷಮನಸ್ಕನಾದನು. ತಾನು ಕಪಟದಿಂದ ತಪಸ್ಸನ್ನು ಆಚರಿಸಿದ ಸಂಗತಿಯನ್ನು ಗುರುಗಳ ವಿಚಾರಕ್ಕೆ ತಂದು ಪ್ರಾಯಶ್ಚಿತ್ತ ಮಾಡಿಕೊಂಡು ಪಡಿಕಮಣ (ಪ್ರಾಯಶ್ಚಿತ್ತ) ವಿಧಿಯನ್ನು ನೆರವೇರಿಸಿ, ನಿಜವಾದ ಯತಿಯಾಗಿ ಹನ್ನೆರಡು ವರ್ಷಗಳವರೆಗೆ ಗುರುಗಳ ಒಟ್ಟಿಗಿದ್ದು ತಪಸ್ಸನ್ನು ಮಾಡಿ 'ಆಚಾರ್ಯರು' ಎನಿಸಿದನು. ಅನಂತರ ಸೂರ್ಯಮಿತ್ರಾಚಾರ್ಯರು ಗುರುಗಳಿಂದ ಒಪ್ಪಿಗೆ ಪಡೆದು, ಏಕವಿಹಾರಿ (ಪರಿವ್ರಾಜಕ ಒಬ್ಬನೇ ಸಂಚರಿಸುವವ) ಆಗಿ, ಹಳ್ಳಿಯಲ್ಲಿ ಒಂದು ರಾತ್ರಿಯಿದ್ದರೆ, ನಗರದಲ್ಲಿ ಐದು

ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತುಂ ಕೌಶಂಬಿಗೆ ವಂದುದಯಾವತ ಪರ್ವತದೊಳ್ ಸಿದ್ಧಕ್ಷೇತ್ರಂಗಳೆಲ್ಲಮಂ ಬಂದಿಸಿ ತೀರ್ಥೋಪವಾಸಂಗೆಯ್ದು ಭೈಕ್ಷಕ್ಕೆಂದು ಕೌಶಂಬನಗರಮಂ ಪೊಕ್ಕು ಕಿಱುಮನೆ ಪೆರ್ಮನೆಯೆನ್ನದುಣಲ್ತಕ್ಕ ಮನೆಗಳಂ ಚರಿಗೆದೊಟಲುತ್ತಮಾಗ್ನಿಭೂತಿ ಬ್ರಾಹ್ಮಣನ ಮನೆಯಂ ಪೊಕ್ಕೊಡಾತನುಂ ಕಂಡಿದಿರಂ ಪರಿತಂದಾದಮಾನುಂ ಭಕ್ತಿಯಿಂದಂ ನಿಜಿಸಿ ಕಾಲಂ ಕರ್ಚಿ ಪಡಿಹಪಮುಚ್ಚಂ ಠಾಣಮೆಂದೀವೊಂಬತ್ತು ತೆಱದಿಂದಂ ಪುಣ್ಯಮಂ ಕೈಕೊಂಡು ಶ್ರದ್ಧೆ ಮೊದಲಾಗೊಡೆಯ ಏೞುಂ ಗುಣಂಗಳಿಂ ಕೂಡಿ ಪ್ರಾಸುಕಮಪ್ಪಾಹಾರಮನಾದಮಾನುಂ ಭಕ್ತಿಯಿಂದಂ ಬಡ್ಡಿಸೆಯುಂಡಿನ್ ಬಟಿಕ್ಕಕ್ಷಯ ದಾನಮೆಂದು ಪರಸಿ ಪೋಪಾಗಳ್ ಭಟ್ಟಾರಾ ನಿಮ್ಮ ಕಿಱಿಯ ಗುಡ್ಡನುಂ ಪರಸಿ ಪೋಗಲ್ವೇೞ್ಕುಮೆಂದು ವಾಯುಭೂತಿಯ ಮನೆಗೊಡಗೊಂಡು ಪೋದೊಡಾತನುಂ ಪಿರಿಯ ಲೋಹಾಸನಮೇಜೆ ಪಲಂಬರ್ ಪಾರ್ವರ್ಗ್ಗೆ ವಖ್ಯಾನಿಸುತ್ತಿರ್ದ ಮಾನಗರ್ವದಿದಿರಂ ಬಂದು ಬಂದಿಸದಿರ್ದೊನಂ ಅಗ್ನಿಭೂತಿ ಪೋಗಿ ವಾಯುಭೂತಿಯ ಕೈಯಂ ಪಿಡಿದೆನ್ನುಂ ಭಟ್ಟಾರರ್ ನಮಗೆ ಸ್ವಾಮಿಗಳ್ ಭಟ್ಟಾರರ ಪ್ರಸಾದದಿಂದಂ

ರಾತ್ರಿ, ಕಾಡಿನಲ್ಲಿ ಹತ್ತು ರಾತ್ರಿ ಎಂಬೀ ರೀತಿಯಲ್ಲಿ ಸಂಚರಿಸುತ್ತ ಬಂದರು. ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪತ್ತನ, ದ್ರೋಣಾಮುಖಗಳಲ್ಲಿ* ಸುತ್ತಾಡುತ್ತ. ಕೌಶಂಬಿಗೆ ಬಂದರು. ಉದಯಾವತ ಪರ್ವತದಲ್ಲಿರುವ ಸಿದ್ಧಕ್ಷೇತ್ರಗಳಿಗೆ ಹೋಗಿ ಅಲ್ಲಿ ನಮಸ್ಕರಿಸಿ, ತೀರ್ಥವನ್ನು ಮಾತ್ರ ಸೇವಿಸುವ ಉಪವಾಸ ಮಾಡಿ ಭಿಕ್ಷೆಗಾಗಿ ಕೌಶಂಬಿನಗರವನ್ನು ಹೊಕ್ಕರು. ಅಲ್ಲಿ ಚಿಕ್ಕ ಮನೆ ದೊಡ್ಡಮನೆ ಎಂಬ ತಾರತಮ್ಯವಿಲ್ಲದೆ ಉಣಲು ತಕ್ಕುದಾದ ಮನೆಗಳಲ್ಲಿ ಭಿಕ್ಷಕ್ಕಾಗಿ ಸುತ್ತಾಡುತ್ತ ಅಗ್ನಿಭೂತಿ ಬ್ರಾಹ್ಮಣನ ಮನೆಯನ್ನು ಪ್ರವೇಶಿಸಿದರು. ಆತನು ಕಂಡು ಎದುರಿಗೆ ಓಡಿಬಂದು ಅತ್ಯಂತ ಭಕ್ತಿಯಿಂದ ವ್ಯವಸ್ಥೆಮಾಡಿ, ಕಾಲನ್ನು ತೊಳೆದು 'ಉನ್ನತ ಆಸನದಲ್ಲಿ ಕುಳ್ಳಿರಿ' ಎಂದು ನುಡಿದನು. ಒಂಬತ್ತು ವಿಧದ ಸತ್ಕಾರಗಳಿಂದ ಪುಣ್ಯವನ್ನು ಪಡೆದನು. ಶ್ರದ್ಧೆ, ಭಕ್ತಿ ಮುಂತಾದ ಏಳು ಗುಣಗಳಿಂದ ಕೂಡಿದವನಾಗಿ ಪರಿಶುದ್ಧವಾದ ಆಹಾರವನ್ನು ಅತ್ಯಂತ ಭಕ್ತಿಯಿಂದ ಬಡಿಸಿದನು. ಸೂರ್ಯಮಿತ್ರ ಆಚಾರ್ಯರು ಊಟ ಮಾಡಿ 'ದಾನ ಅಕ್ಷಯವಾಗಲಿ' ಎಂದು ಆಶೀರ್ವದಿಸಿದರು. ಅವರು ಹೋಗುವಾಗ ಅಗ್ನಿಭೂತಿ - "ಪೂಜ್ಯರೇ, ನಿಮ್ಮ ಕಿರಿಯ ಶಿಷ್ಯನನ್ನೂ ಹರಸಿ ಹೋಗಿರಿ" ಎಂದು ನುಡಿದು, ಅವರನ್ನು ವಾಯುಭೂತಿಯ ಮನೆಗೆ ಕರೆದುಕೊಂಡು ಹೋದನು. ಆಗ ವಾಯುಭೂತಿ ದೊಡ್ಡದಾದ ಒಂದು ಲೋಹಾಸನದಲ್ಲಿ ಕುಳಿತಿದ್ದನು. ಹಲವು ಮಂದಿ ಬ್ರಾಹ್ಮಣರಿಗೆ ವ್ಯಾಖ್ಯಾನ ಮಾಡುತ್ತಿದ್ದೇನೆಂಬ ಮಾನಗರ್ವದಿಂದ ಕೂಡಿದ್ದನು. ಅವನು ಸೂರ್ಯಮಿತ್ರಾಚಾರ್ಯರ ಎದುರಿಗೆ ಬಂದು ವಂದಿಸದೆ ಇದ್ದನು. ಅವನ ಬಳಿಗೆ ಅಗ್ನಿಭೂತಿ ಬಂದು, ಅವನ ಕೈಯನ್ನು ಹಿಡಿದು ಹೀಗೆಂದನು - "ಈ ಯತಿಗಳು ನಮಗೆ ಸ್ವಾಮಿಗಳು. ಇವರ ಅನುಗ್ರಹದಿಂದ ನಮಗೆ

---

*ಗ್ರಾಮ-ನೂರಕ್ಕೆ ಕಡಮೆಯಿಲ್ಲದೆ ಐನೂರಕ್ಕೆ ಹೆಚ್ಚಾಗದೆ ಕೃಷಿಕ ಕುಟುಂಬಗಳು ನೆಲಸಿರುವ ಹಳ್ಳಿ, ನಗರ-ರಾಜಧಾನಿ, ಖೇಡ-ಎತ್ತರವಾದ ಕೋಟೆಯುಳ್ಳ ಊರು, ಖರ್ವಡ-ಚಿಕ್ಕ ಸುತ್ತುಗೋಡೆಯಿರುವ ಊರು, ಮಡಂಬ-ದೂರಸ್ಥಲ ಸೀಮಾಂತದ ಪುರ, ಪತ್ತನ-ಬಂಡಿ ಅಥವಾ ನಾವೆಗಳಲ್ಲಿ ಹೋಗಿ ಸೇರಬಹುದಾದ ಪುರ, ದ್ರೋಣಾಮುಖ-ಜಲಸ್ಥಲ ಮಾರ್ಗಗಳುಳ್ಳ ಪುರ.

ನಮಗಿನಿವಿರಿದು ಶ್ರೀಯುಂ ಸಂಪತ್ತುಂ ವಿಭವಮುಮಾದುದಱಿಂದಮೆಬ್ಬು ಪೋಗಿ ಭಟ್ಟಾರರಂ ವಂದಿಸೆಂದೊಡವನಿಂತೆಂದಂ – ಇದೇನೊಳ್ಳಿದರ್ಗೆನ್ನಂ ಪೊಡೆವಡಿಸಿದಪ್ಪೈ ಪೇಟಿಂದುಮಶುಚಿಗಳ್ ಮಲಗ್ರಸ್ತರೆಂದಪ್ಪೊದಂ ಮಿಂದಱಿಯದವರಿವರ ಕಾಲ್ಗೆಱಗುವೆಂ ಗದಮೆಂದು ಪಾರ್ವರ ಸಭೆಯ ನದುವಿರ್ದು ಕನಿಷ್ಠ ನಿಷ್ಠುರವಚನಂಗಳಿಂ ನಾನಾ ಪ್ರಕಾರದಿಂ ನಿರಾಕರಿಸಿ ನುಡಿದು ಪೊಲ್ಲದಂ ಪೇಟ್ಟಟ್ಟ ಕಳಿಯೆ ಅಗ್ನಿಭೂತಿಯೆಂದಂ – ಕೊಯ್‌ತಲೆಯಧಮಾ ನೀಚಾ ಸ್ವಾಮಿಯನಿಂತೆಂಬಾ ಎಂದವನಂ ಬಯ್ದೊಡೆ ಭಟ್ಟಾರರೆನ್ನುಂ–

ಗಾಹೆ ॥ ಣಿಂದಂತಂ ಸಿಳಹಂತಂ ಸತ್ತುಂ ಮಿತ್ತುಂ ತಹೇವ ಸುಖ ದುಕ್ಖಂ ।
ಜೋ ಸಮಭಾವೇ ಪೆಚ್ಚ ಇ ಸೋ ಸಮಣೋ ಸೋಯ ಪವ್ವಯಿಓ ॥

ವೃತ್ತ ॥ ಆಕೃಷ್ಟವಿವ ವಚಸಾ ನ ತು ತಾಡಿತೋಽಸ್ಮಿ
ಸಂತಾಪಿತೋಽಸ್ಮಿ ನ ತು ಮೇ ಹೃತಮುತ್ತಮಾಂಗಂ
ಪ್ರಾಣಾ ಹೃತಾಃ ಮಮ ಪರೈರ್ನ ತು ಮೇ ಸಮಾಧಿಃ
ಇತ್ಯಾತ್ಮಚಿಂತನ ಪರಂಪರಯಾ ಕ್ಷಮೇತ

ಎಂದಿಂತು ಕ್ಷಮೆಯಂ ಭಾವಿಸಿದರ್ ಅಗ್ನಿಭೂತಿಯುಂ ಭಟ್ಟಾರರೊಡನುದಯಾವತ ಪರ್ವತಕ್ಕೆ ಪೋಗಿ ಇಂತೆಂದಂ – ಭಟ್ಟಾರಾ ನಿಮ್ಮಂ ವಂಚಮಹಾಪಾತಕನ ಮನೆಗೊದಗೊಂಡು ಪೋಗಿ ಬಯ್ಸಿದೆನದನಾತಂ ಬಯ್ದೊನಲ್ಲನಾಂ ಬಯ್ದೆನೀಯಪರಾಧಕ್ಕೆನಗೆ ಕ್ಷಮಿಯಿಸುವುದೀ ಬಯ್ಸುದ

ಇಷ್ಟೊಂದು ಹಿರಿದಾದ ತೇಜಸ್ಸೂ ಐಶ್ವರ್ಯವೂ ವೈಭವವೂ ಉಂಟಾಗಿವೆ. ಆದುದರಿಂದ ಎದ್ದು ಹೋಗಿ ಪೂಜ್ಯರನ್ನು ನಮಸ್ಕರಿಸು" ಎಂದು ನುಡಿಯಲು, ವಾಯುಭೂತಿ ಹೀಗೆಂದನು - "ಇದೇನು ? ಒಳ್ಳೆಯವರಿಗೆ ನನ್ನಿಂದ ನಮಸ್ಕಾರ ಮಾಡಿಸುತ್ತಿದ್ದೀಯಪ್ಪಾ! ಹೇಳು. ಇವರು ಎಂದಿಗೂ ಅಶುಚಿಯಾಗಿರುವವರು, ಮಲ ಹಿಡಿದವರು, ಎಂದಾದರೂ ಸ್ನಾನ ಮಾಡಿ ಅರಿಯದವರು ! ಇವರ ಕಾಲಿಗೆ ನಾನು ವಂದಿಸುವೆನು, ಅಲ್ಲವೆ?" ಎಂದು ಬ್ರಾಹ್ಮಣರ ಸಭೆಯ ನಡುವೆ ಇದ್ದುಕೊಂಡು ಅತ್ಯಂತ ಕೀಳಾದ ಕಠಿನವಾದ ಮಾತುಗಳಿಂದ ಹಲವು ರೀತಿಗಳಿಂದ ತುಚ್ಛೀಕರಿಸಿ ನುಡಿದು, ಹೇಳಬಾರದ ಕೆಟ್ಟ ಮಾತುಗಳನ್ನಾಡಿ, ಅವರನ್ನು ತಿರಸ್ಕರಿಸಿದನು. ಆಗ ಅಗ್ನಿಭೂತಿ "ತಲೆಹೋಕನಾದ ಅಧಮನೇ ನೀಚನೇ, ಸ್ವಾಮಿಯನ್ನು ಹೀಗೆನ್ನುವೆಯಾ?" ಎಂದು ಅವನನ್ನು ಬೈದನು. ಆಗ ಭಟ್ಟಾರರು ಹೀಗೆಂದರು - "ನಿಂದಿಸುವವನನ್ನೂ ಹೊಗಳುವವನನ್ನೂ ಶತ್ರುವನ್ನೂ ಮಿತ್ರನನ್ನೂ ಹಾಗೆಯೇ ಸುಖಿ ದುಃಖಿವನ್ನೂ ಯಾವನು ಸಮಭಾವದಿಂದ ಭಾವಿಸುವನೋ ಮತ್ತು ನೋಡುವನೋ ಅವನು ಸವಣನು (ಜೈನಯತಿ) ಅವನೇ ಪರಿವ್ರಾಜಕನು. ವಾಯುಭೂತಿ ನನ್ನನ್ನು ಮಾತುಗಳಿಂದ ನಿಂದಿಸಿದ್ದಾನಲ್ಲದೆ ಹೊಡೆದಿಲ್ಲ. ದುಃಖಿಕ್ಕೆ ಈಡು ಮಾಡಿದ್ದಾನಲ್ಲದೆ ನನ್ನ ತಲೆಯನ್ನು ಕತ್ತರಿಸಿಕೊಂಡು ಹೋಗಿಲ್ಲ. ನನ್ನ ಪ್ರಾಣಗಳು ಇತರರಿಂದ ಅಪಹರಿಸಟ್ಟಿವೆ, ಆದರೆ ನನ್ನ ಧ್ಯಾನಸ್ಥಿತಿ ಉಳಿದಿದೆ. ಈ ರೀತಿಯ ಆತ್ಮಚಿಂತನೆಗಳನ್ನು ಅನುಕ್ರಮವಾಗಿ ಮಾಡುತ್ತ, ಅವನನ್ನು ಕ್ಷಮಿಸಬೇಕು" ಎಂದು ಸೂರ್ಯಮಿತ್ರಯತಿಗಳು ಅವನನ್ನು ಕ್ಷಮಿಸಿದರು. ಅಗ್ನಿಭೂತಿ ಅವರೊಡನೆ ಉದಯಾವತ ಎಂಬ ಪರ್ವತಕ್ಕೆ ತೆರಳಿದನು. ಅಲ್ಲಿ ಅವರೊಡನೆ ಹೀಗೆಂದನು "ಪೂಜ್ಯರೇ, ನಿಮ್ಮನ್ನು ನಾನು ಅ

ಪಾವಮಿಂತಲ್ಲದೆ ಪಿಂಗದೆನಗೆ ದೀಕ್ಷೆಯಂ ದಯೆಗೆಯ್ಯಮೆಂದು ಕೀಜೆ ಬೇಡಿದೊಡೆ ಭಟ್ಟಾರರೊಳ್ಳಿ ತಪ್ಪ ಮುಹೂರ್ತದೊಳ್ ದೀಕ್ಷೆಯಂ ಕೊಟ್ಟೊಡಾತನುಂ ತಪಂಬಟ್ಟು ಕ್ರಿಯೆಗಳಿಲ್ಲಮಂ ಕಲ್ತು ಆಗಮಂಗಳನೋದುತ್ತುಂ ತಮ್ಮ ಗುರುಗಳೊಡನೆ ವಿಹಾರಿಸುತ್ತಿರ್ದಂ ಇತ್ತಲಗ್ನಿಭೂತಿಯ ಪಾರ್ವಂತಿ ಸೋಮದತ್ತೆಯೆಂಬೊಳ್ ತನ್ನೊಂದು ಸಲ್ಗೆಯಿಂದಮಬಲಿಂದಂ ವಾಯುಭೂತಿಯನಿಂತೆಂದಳ್ - ಸೂರ್ಯಮಿತ್ರ ಭಟ್ಟಾರಕರ್ ಮುನ್ ಬ್ರಾಹ್ಮಣರ್ ನಿಮ್ಮ ಸೋದರಮಾವಂಗಳೀಗಳ್ ಮಹಾ ತಪೋಧನರ್ ಗುಣವಂತರಪ್ಪರ್ ನಿಮ್ಮ ಮನೆಗೆ ವಂದೊಡೆ ಮಣಿಯಿಂದೆರ್ದ್ದಿದಿರಂ ಪೋಗಿ ಪೊಡೆವಟ್ಟಿರಿಲ್ಲೀ ಬಾಟುಂ ಸಂಪತ್ತುಂ ಶ್ರೀಯುಮೆಂಬುದವರ ಪ್ರಸಾದದಿಂದಮಾದುದಂತಪ್ಪ ಮಹಾಋಷಿಯರಂ ನಿಮಗೆ ಪಟಿಯಲುಂ ಬಯ್ಯಲುಂ ತಿರಸ್ಕರಿಸಿ ನುಡಿಯಲುಮಕ್ಕುಮೆ ಅಧಮರ ಪೊಲ್ಲಮಾನಸರ ದುರ್ಜನರ ಜಾರಜಾತರ ವಿಜಾತಿಗಳ್ಗೆ ಯೋಗ್ಯಮಪ್ಪಯೋಗ್ಯಮಂ ಗೆಯ್ದಿರೆಂದು ಪಾರ್ವರ ಸಭೆಯ ನಡುವೆ ನುಡಿದೊಡೆ ವಾಯುಭೂತಿಯುಂ ಮುಳಿದು ಬಯ್ದು ಜಡಿದು ಕಾಲಿಂದಂ ತಲೆಯನೊದೆದು ಮನೆಯೊಳುಳ್ಳುದೆಲ್ಲಮಂ ಕವರ್ದುಕೊಂಡು ನಿಮ್ಮ ಸವಣನಾಗಿರ್ದ್ದಾಣ್ಮನ ಪೋದಲ್ಲಿಗೆ ಪೋಗೆಂದಟ್ಟಿ ಕಳಿದೊಡಾಕೆಯುಂ ಮುಳಿದು ಕ್ರೋಧಾಗ್ನಿ ಪೆರ್ಚಿ ದುರಾತ್ಮಾ ಎನ್ನನೊದೆದ

ಪಂಚಮಹಾಪಾತಕನಾದ ವಾಯುಭೂತಿಯ ಮನೆಗೆ ಕರೆದುಕೊಂಡು ಹೋಗಿ ಅವನಿಂದ ಬಯ್ಯಿಸಿದೆನು. ಆದ್ದರಿಂದ ಬೈದುದು ಅವನಲ್ಲ, ನಾನೇ ಬೈದೆನು. ನನ್ನ ಈ ತಪ್ಪನ್ನು ಕ್ಷಮಿಸಬೇಕು. ಈ ಬೈಸಿದ ಪಾಪಪರಿಹಾರಕ್ಕೆ ಬೇರೆ ಮಾರ್ಗವಿಲ್ಲ. ನನಗೆ ದೀಕ್ಷೆಯನ್ನು ದಯಪಾಲಿಸಿರಿ" ಎಂದು ಕೂಗಿ ಬೇಡಿದನು. ಸೂರ್ಯಮಿತ್ರಭಟಾರರು ಒಳ್ಳೆಯ ಮುಹೂರ್ತದಲ್ಲಿ ಅವನಿಗೆ ದೀಕ್ಷೆಯನ್ನಿತ್ತರು. ಅಗ್ನಿಭೂತಿ ತಪವನ್ನೆಸಗಿ ಯತಿಗಳ ಆಚರಣೆಗಳೆಲ್ಲವನ್ನೂ ಕಲಿತು ಶಾಸ್ತ್ರಗಳನ್ನೆಲ್ಲ ಕಲಿಯುತ್ತ ತನ್ನ ಗುರುಗಳೊಂದಿಗೆ ಸಂಚರಿಸುತ್ತಿದ್ದನು. ಇತ್ತ ಅಗ್ನಿಭೂತಿ ಬ್ರಾಹ್ಮಣನ ಹೆಂಡತಿಯಾದ ಸೋಮದತ್ತೆ ಎಂಬವಳು ತನ್ನ ಒಂದು ಸಲುಗೆಯಿಂದಲೂ ಅಳಲಿನಿಂದಲೂ ವಾಯುಭೂತಿಯನ್ನು ಕುರಿತು ಹೀಗೆಂದಳು "ಸೂರ್ಯಮಿತ್ರಯತಿಗಳು ಮೊದಲೇ ಬ್ರಾಹ್ಮಣರು, ನಿಮ್ಮ ಸೋದರಮಾವನವರು. ಈಗ ಅವರು ಮಹಾತಪಸ್ಸೇ ಐಶ್ವರ್ಯವಾಗಿ ಉಳ್ಳವರು, ಒಳ್ಳೆಯ ಗುಣವಂತರೂ ಆಗಿದ್ದಾರೆ. ಅವರು ನಿಮ್ಮ ಮನೆಗೆ ಬಂದಾಗ ನೀವು ನಿಮ್ಮ ಪೀಠದಿಂದ ಎದ್ದು ಎದುರುಗೊಂಡು ಸಾಷ್ಟಾಂಗವಂದನೆ ಮಾಡಲಿಲ್ಲ. ಈ ಜೀವನೋಪಾಯವೂ ಐಶ್ವರ್ಯವೂ ತೇಜಸ್ಸೂ ಅವರ ಅನುಗ್ರಹದಿಂದ ಆಗಿವೆ. ಅಂತಹ ಮಹರ್ಷಿಗಳನ್ನು ಹಳಿಯಲೂ ಬೈಯಲೂ ತುಚ್ಛೀಕರಿಸಿ ನುಡಿಯಲೂ ನಿಮಗೆ ಯುಕ್ತವೇ? ಅಧಮರೂ ಕೆಟ್ಟ ಮನುಷ್ಯರೂ ದುಷ್ಟರೂ ಹಾದರಕ್ಕೆ ಹುಟ್ಟಿದವರೂ ಕುಲಗೆಟ್ಟವರೂ ಆದ ವ್ಯಕ್ತಿಗಳಿಗೆ ಯೋಗ್ಯವೆನಿಸುವ ಅಯೋಗ್ಯ ವರ್ತನೆಯನ್ನು ಮಾಡಿದಿರಿ" - ಹೀಗೆ ಬ್ರಾಹ್ಮಣರ ಸಭೆಯ ನಡುವೆ ಆಕೆ ಹೇಳಿದಳು. ಆಗ ವಾಯುಭೂತಿ ಸಿಟ್ಟಾಗಿ, ಬೈದು, ಗದರಿಸಿ, ತನ್ನ ಕಾಲಿನಿಂದ ಅವಳ ತಲೆಯನ್ನು ಒದೆದನು. ಅವಳ ಮನೆಯಲ್ಲಿದ್ದು ದೆಲ್ಲವನ್ನೂ ಸುಲಿದು, 'ನಿನ್ನ ಜೈನಯತಿಯಾದ ಗಂಡನು ಹೋದಲ್ಲಿಗೆ ನಡೆ' ಎಂದು ಹೊರಪಡಿಸಿದನು. ಆಗ ಸೋಮದತ್ತೆಯೂ ಕೋಪಗೊಂಡು, ಸಿಟ್ಟೆಂಬ ಬೆಂಕಿ ಹೆಚ್ಚಾಗಲು ಹೀಗೆಂದಳು - ಎಲೈ ದುಷ್ಟನೇ, ನನ್ನನ್ನು ಒದೆದ ನಿನ್ನನ್ನು ನಾನು ಮುಂದಿನ ಜನ್ಮದಲ್ಲಿಯಾದರೂ ನಾಯಿ

ನಿನ್ನ ಕಾಲ್ಗಳಂ ಜನ್ಮಾಂತರದೊಳಂ ನಾಯುಂ ನರಿಯುಮಾಗಿಯಪ್ಪೊಡಂ ಕೊಂದು ಮಕ್ಕಳ್ಗಿರಸು ತಿಂಬಿನಕ್ಕೆಂದು ನಿದಾನಂಗೆಯ್ದು ಮನೆಯಿಂದಂ ಮಕ್ಕಳ್ಗಿರಸು ಪೊಱಮಟ್ಟು ಪೋಗಿ ಕೆಲವು ಕಾಲದಿಂ ಬಟಿಕ್ಕೆ ಸತ್ತು ತಾನುಂ ಮಕ್ಕಳುಂ ಸಂಸಾರದೊಳ್ ತಿರಿಯುತ್ತಿರ್ದ್ದರ್. ಇತ್ತ ವಾಯುಭೂತಿಯುಮತಿಮಾನ ಗರ್ವದಿಂದಂ ಋಷಿಯರಂ ಪರಿಭವಿಸಿ ಬಯ್ದು ನುಡಿದು ಜಿನಧರ್ಮಮಂ ಪಟೆದ ಪಾಪದ ಫಲದಿಂದಮೇಱುಂ ದಿವಸದಿಂದೊಳಗೌದುಂಬರಕುಷ್ಠಮಾಗಿ ಪುಟೆತು ನಮೆದು ಸತ್ತು ಕೌಸಂಬಯೆಂಬ ಪೊಬಲೊಳ್ ಮಿಳಿಯ ಬದಿರ ಮೇಗೇಱಿಯಾಕಾಶದೊಳಾಡುವ ವಿದ್ಯಾಧರ ಲಂಗಿಗರ ಮನೆಯೊಳ್ ಪೆಣ್ಣತ್ತೆಯಾಗಿ ಪುಟ್ಟ ಪಿರಿಯವಪ್ಪ ಪೊಜೆಗಳಂ ಪೊತ್ತು ಪೋಗಿ ಬೆನ್ನೊಳ್ ನಾಳಿ ಬಿರ್ದ್ದು ಕಱಮೆಯಾಗಿ ಪುಟೆತು ನಮೆದು ಸತ್ತು ಮತ್ತಮಾ ಪೊಬಲೊಳ್ ಪೇವಂದಿಯಾಗಿ ಪುಟ್ಟ ಸತ್ತು ಮತ್ತಾ ಮಗಧೆಯೆಂಬುದು ನಾಡಲ್ಲಿ ಚಂಪಾನಗರಮೆಂಬುದು ಪೊಬಲಲ್ಲಿ ಪೆಣ್ಣಾಯಾಗಿ ಮಾದೆಗರ ಮನೆಯೊಳ್ ಪುಟ್ಟ ಸತ್ತು ಮತ್ತಮಾ ಪೊಬಲೊಳ್ ಮಾದೆಗರ್ಗೆ ವೃಧಾನನಪ್ಪ ನೀಳನೆಂಬ ಮಾದೆಗಂಗಂ ಕೇಶಿಯೆಂಬ ಮಾದೆಗಿಗಂ ಮಗಳ್ ದುರೂಪೆ ದುರ್ವರ್ಣೆ ದುರ್ಗಂಧೆ ದುಸ್ಸ್ವರೆ ಪುಟ್ಟುಂಗುರುಡಿ ಪೊಲತಿಯಾಗಿ ಪುಟ್ಟ ವ್ಯಾಧಿಪೀಡಿತೆ ಕ್ಷುಧಾಗ್ನಿಯಿಂ ಬಟ್ಟೆದೊಳೊಂದು ದಿವಸಮುದ್ಯಾನವನಕ್ಕೆ ವೋಗಿ ನೇಱಿಲ ಪಣ್ಗಳಂ ತಡವರಿಸಿಯಾಯ್ದಾಯ್ದು ತಿನ್ನುತ್ತಿರ್ಪಳ್

ಅಥವಾ ನರಿಯಾಗಿಯಾದರೂ ಹುಟ್ಟಿಬಂದು, ಕೊಂದು, ನನ್ನ ಮಕ್ಕಳೊಂದಿಗೆ ನಿನ್ನ ಕಾಲುಗಳನ್ನು ತಿನ್ನುವಂತೆ ಆಗಲಿ - ಎಂದು ಪ್ರತಿಜ್ಞೆ ಮಾಡಿದ್ದಳು. ಆಕೆ ಮನೆಯಿಂದ ಮಕ್ಕಳೊಡನೆ ಹೊರಟು ಹೋದಳು. ಕೆಲವು ಕಾಲಾನಂತರ ಸತ್ತು ತಾನೂ ಮಕ್ಕಳೂ ಸಂಸಾರದಲ್ಲಿ ಸುತ್ತುತ್ತಿದ್ದರು. ಇತ್ತ ವಾಯುಭೂತಿ ಅತಿಯಾದ ಉದ್ಧಟತನದ ಗರ್ವದಿಂದ ಋಷಿಗಳನ್ನು ತಿರಸ್ಕರಿಸಿ ಬೈದು ಮಾತಾಡಿ, ಜೈನಧರ್ಮವನ್ನು ನಿಂದಿಸಿದ ಪಾಪದ ಪರಿಣಾಮವಾಗಿ ಏಳು ದಿವಸಗಳೊಳಗಾಗಿ ಔದುಂಬರಕುಷ್ಠರೋಗಕ್ಕೆ ತುತ್ತಾದನು. ಹುಳುಗಳು ಉಂಟಾಗಿ ಯಾತನೆಪಟ್ಟು ಸತ್ತು ಕೌಸಂಬಿ ಎಂಬ ಪಟ್ಟಣದಲ್ಲಿ ಹಗ್ಗ ಕಟ್ಟಿದ ಬಿದಿರ ಗಣೆಯ ಮೇಲೆ ಆಡುವ ವಿದ್ಯೆಯನ್ನು ತೋರಿಸುವ ಡೊಂಬರ ಮನೆಯಲ್ಲಿ ಹೆಣ್ಣು ಕತ್ತೆಯಾಗಿ ಹುಟ್ಟಿದನು. ಆ ಕತ್ತೆ ದೊಡ್ಡ ದೊಡ್ಡ ಹೊರೆಗಳನ್ನು ಹೊತ್ತುಕೊಂಡು ಹೋಗಿ, ಬೆನ್ನಿನಲ್ಲಿ ನಾಳಿಹುಣ್ಣು ಉಂಟಾಗಿ, ಆ ಹುಣ್ಣು ಬಲಿತು ಹುಳುವಾಗಿ ಯಾತನೆಗೊಂಡು ಸತ್ತಿತು. ಅದು ಮತ್ತೆ ಆ ಪಟ್ಟಣದಲ್ಲಿ ಹೇಲು ತಿನ್ನುವ ಹಂದಿಯಾಗಿ ಹುಟ್ಟಿ ಸತ್ತು ಹೋದನಂತರ ಮಗಧೆ ಎಂಬ ನಾಡಿನಲ್ಲಿರುವ ಚಂಪಾನಗರ ಎಂಬ ಪಟ್ಟಣದಲ್ಲಿ ಮಾದಿಗರ ಮನೆಯಲ್ಲಿ ಒಂದು ಹೆಣ್ಣು ನಾಯಿಯಾಗಿ ಹುಟ್ಟಿತು. ಆ ನಾಯಿ ಸತ್ತು ಅನಂತರದಲ್ಲಿ ಅದೇ ಪಟ್ಟಣದಲ್ಲಿ ಮಾದಿಗರಿಗೆಲ್ಲ ಮುಖ್ಯಸ್ಥನಾದ ನೀಳನೆಂಬ ಮಾದಿಗನಿಗೂ ಕೇಶಿಯೆಂಬ ಮಾದಿಗಿತಿಗೂ ಮಗಳಾಗಿ ಹುಟ್ಟಿತು. ಆಕೆ ಕುರೂಪೆಯೂ ಕೆಟ್ಟಬಣ್ಣದವಳೂ ದುರ್ವಾಸನೆಯುಳ್ಳವಳೂ ಕೆಟ್ಟಸ್ವರವುಳ್ಳವಳೂ ಹುಟ್ಟುಕುರುಡಿಯೂ ಹೊಲತಿಯೂ ಆಗಿ ಹುಟ್ಟಿ ರೋಗದಿಂದ ಪೀಡಿತೆಯಾಗಿ ಹೊಟ್ಟೆಗೆ ಗತಿಯಿಲ್ಲದೆ ಹಸಿವೆಂಬ ಬೆಂಕಿಯಿಂದ ಬಳಲುತ್ತ, ಬದುಕಿದ್ದಳು. ಆಕೆ ಒಂದು ದಿವಸ ಉದ್ಯಾನವನಕ್ಕೆ ಹೋಗಿ ಅಲ್ಲಿ ನೇರಳೆ ಹಣ್ಣುಗಳನ್ನು ಕೈಯಿಂದ ತಡವರಿಸಿ ಹೆಕ್ಕುತ್ತ ತಿನ್ನುತ್ತಿದ್ದಳು. ಆ ವೇಳೆಗೆ ಇತ್ತ

ಅನ್ನೆಗಮಿತ್ತ ಸೂರ್ಯಮಿತ್ರಾಚಾರ್ಯರುಮಗ್ನಿಭೂತಿಮುನಿಯುಂ ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತುಂ ಚಂಪಾನಗರಮನೆಯ್ದಿ ವಾಸುಪೂಜ್ಯಭಟ್ಟಾರರ ನಿಸಿದ್ಧಿಗೆ ಸಂದ ತೀರ್ಥಸ್ಥಾನಮನಾದಮಾನುಂ ಶುದ್ಧ ಪರಿಣಾಮದಿಂದಂ ವಂದಿಸುತ್ತಿರ್ದ್ದ ಸೂರ್ಯಮಿತ್ರಾಚಾರ್ಯರ್ಗ್ಗವಧಿಜ್ಞಾನಂ ಪುಟ್ಟಿತ್ತು ಮತ್ತೆ ಬಹಿರುದ್ಯಾನದೊಳ್ ಸಂಬರನಾಗಠಾಣದೊಳ್ ಬಂದಿರ್ದ್ದರಂದಿನ ದಿವಸಂ ಸೂರ್ಯಮಿತ್ರಾಚಾರ್ಯರುಪವಾಸಂ ಗೆಯ್ದಿರ್ದ್ದರಗ್ನಿಭೂತಿಮುನಿಯುಂ ಭೈಕ್ಷಾನಿಮಿತ್ತಂ ಚರಿಗೆವೊಗುತ್ತವೆಡೆಯೊಳುದ್ಯಾನವನದೊಳ್ ನೇಱಲ ಮರದ ಕೆಳಗೆ ನೇಱಲ ಪಣ್ಗಳಂ ತಡವರಿಸಿ ಆಯ್ದಾಯ್ದು ತಿನ್ಪ ಜಾತ್ಯಂಧೆಯಪ್ಪ ಪೊಲೆಯರ ಕೂಸಂ ಕಂಡತ್ಯಂತ ಸ್ನೇಹಮಾಗಿ ಪರವಸದಿಂದಂ ಕಣ್ಣೀರ್ಗಳಂ ಸೂಸಿಯೆಯ್ತಂದು ಮನ್ಮುಮಿಕ್ಕು ಕರುಣದಿಂದೆ ಕುಂಚದ ಕೋಲೊಳ್ ಪರಿದಿರ್ದ ಪಣ್ಗಳಂ ಕೂಸಿನ ಮುಂದೆ ಸಾರ್ಚುತ್ತುಂ ನೀಡುಂ ಬೇಗಮಿರ್ದ್ದಿದೇಂ ಪಾಪದ ಫಲಮೊ ಎಂದು ಸಂಸಾರ ನಿರ್ವೇಗಮಾಗೆಯಂದಿನ ದಿವಸಮಲಾಭಂ ಮಾಡಿ ತಮ್ಮಾವಾಸಕ್ಕೆ ಪೋದೊಡೆ ಭಟ್ಟಾರರೆಂದರ್- ಏನು ಲಾಭಮಾದುದೆ ಎಂದು ಬೆಸಗೊಂಡೊಡೆ ಭಟ್ಟಾರರ್ಗ್ಗಿಂತೆಂದು ಪೇೞ್ದರ್ - ಚರಿಗೆವುಗುತ್ತಮೊಂದೆಡೆಯೊಳುದ್ಯಾನದೊಳ್ ನೇಱಲ ಮರದ ಕೆಳಗೆ ತಡವರಿಸಿ ನೇಱಲ ಪಣ್ಗಳಂ ತಿನ್ಪ ಜಾತ್ಯಂಧೆಯಪ್ಪ ಪೊಲೆಯರ ಕೂಸಂ ಕಂಡಾದಮಾನುಂ ಸ್ನೇಹಮಾಗಿ ಕರುಣದಿಂದಂ

ಸೂರ್ಯಮಿತ್ರಾಚಾರ್ಯರೂ ಅಗ್ನಿಭೂತಿ ಋಷಿಯೂ ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪತ್ತನ, ದ್ರೋಣಾಮುಖಗಳನ್ನು ಸಂಚರಿಸುತ್ತ ಚಂಪಾನಗರಕ್ಕೆ ಬಂದರು. ಅಲ್ಲಿ ವಾಸುಪೂಜ್ಯ ಯತಿಗಳ ಸಮಾಧಿಗಾಗಿ ಸಂದ ತೀರ್ಥಕ್ಷೇತ್ರವನ್ನು ಅತ್ಯಂತ ಪರಿಶುದ್ಧವಾದ ಭಕ್ತಿಯಿಂದ ವಂದಿಸುತ್ತಿದ್ದ ಸೂರ್ಯಮಿತ್ರಾಚಾರ್ಯರಿಗೆ ಅವಧಿಜ್ಞಾನವುಂಟಾಯಿತು. ಅನಂತರ ಅವರು ಪಟ್ಟಣದ ಹೊರಗಿನ ಉದ್ಯಾನದಲ್ಲಿದ್ದ ಶಂಬರ ಎಂಬ ಹೆಸರಿನ ನಾಗಾಲಯದಲ್ಲಿ ಬಂದು ಸೇರಿದ್ದರು. ಆ ದಿವಸ ಅವರು ಉಪವಾಸ ಮಾಡಿದ್ದರು. ಅಗ್ನಿಭೂತಿಮುನಿ ಭಿಕ್ಷೆಗಾಗಿ ಸಂಚಾರ ಮಾಡುತ್ತ, ನಡುವೆ ಉದ್ಯಾನದಲ್ಲಿ ನೇರಳೆ ಮರದ ಕೆಳಗೆ ನೇರಳೆ ಹಣ್ಣುಗಳನ್ನು ಕೈಯಿಂದ ತಡವರಿಸಿ ಅಯ್ದುಕೊಳ್ಳುತ್ತ ತಿನ್ನುವ ಹುಟ್ಟುಕುರುಡಿಯಾದ ಹೊಲತಿ ಕೂಸನ್ನು ಕಂಡು ಅತ್ಯಂತ ಪ್ರೀತಿಯುಂಟಾಗಿ ಮೈಮರೆಯುತ್ತ, ಕಣ್ಣೀರನ್ನು ಸುರಿಸಿಕೊಂಡು ಬಳಿಗೆ ಬಂದರು. ಅವರಿಗೆ ದುಃಖ ಹೆಚ್ಚಾಯಿತು. ಕರುಣೆ ತಾಳಿ ಅವರು ಅಲ್ಲಿ ಹರಡಿ ಬಿದ್ದಿದ್ದ ಹಣ್ಣುಗಳನ್ನು ನವಿಲುಗರಿಯ ಕಟ್ಟಿನ ಕೋಲಿನಿಂದ ಆ ಕೂಸಿನ ಮುಂದಕ್ಕೆ ತಳ್ಳುತ್ತ ಬಹಳ ಹೊತ್ತು ಅಲ್ಲೇ ಇದ್ದು 'ಇದು ಯಾವ ಪಾಪದ ಫಲವೋ' ಎಂದು ಸಂಸಾರದಲ್ಲಿ ವಿರಕ್ತಿ ತಾಳಿದರು. ಆ ದಿನ ಭಿಕ್ಷವೇ ಇಲ್ಲದಂತೆ ಆಚರಿಸಿ ತನ್ನ ವಾಸಸ್ಥಳಕ್ಕೆ ತೆರಳಿದರು. ಆಗ ಸೂರ್ಯಮಿತ್ರ ಯತಿಗಳು - "ಏನು, ಭಿಕ್ಷೆ ಇಲ್ಲದಾಯಿತೆ?" ಎಂದು ಕೇಳಲು ಭಟಾರರಿಗೆ ಅಗ್ನಿಭೂತಿಯತಿಗಳು ಹೀಗೆಂದರು - "ನಾನು ಭಿಕ್ಷೆಗಾಗಿ ಸಂಚರಿಸುತ್ತ ಒಂದೆಡೆ ಉದ್ಯಾನವನದಲ್ಲಿ ನೇರಳೆ ಮರದ ಕೆಳಗೆ ಹರಡಿದ್ದ ನೇರಳೆ ಹಣ್ಣುಗಳನ್ನಾಯ್ದು ತಿನ್ನುತ್ತಿದ್ದ ಹುಟ್ಟುಗುರುಡಿಯಾಗಿದ್ದ ಹೊಲೆಯರ ಹೆಂಗಸೊಬ್ಬಳನ್ನು ಕಂಡೆನು. ಆಗ ಅತ್ಯಂತ ಪ್ರೀತಿಯುಂಟಾಗಿ ವ್ಯಸನದಿಂದ ಮರುಕ ಹೆಚ್ಚಾಗಿ ಬೇರೆಲ್ಲವನ್ನೂ ಮರೆತೆನು. ಕಣ್ಣೀರು

ಮನ್ಮು ಮಿಕ್ಕು ಪರವಸದಿಂದಂ ಕಣ್ಗೆರ್ಗಳ್ ಬಂದು ನೀಡುಂ ಬೇಗಮಿರ್ದ್ದು ನೋಡಿ ಅಹೋವಿಧಾತ್ರಾ ಸಂಸಾರಮೆಂದು ಮುಟ್ಟುಪಡಂ ಮಾಡಿ ಬಂದೆನೆನೆ ಭಟ್ಟಾರರೆಂದರ್ - ಆ ಕೂಸೆಂಬುದು ನಿಮ್ಮ ತಮ್ಮನಪ್ಪ ವಾಯಭೂತಿಯ ಜೀವಮೆನೆ ಆದೆಂತು ಭಟ್ಟಾರಾ ಎಂದು ಬೆಸಗೊಂಡೊಡೆ ಭಟ್ಟಾರರಿಂತೆಂದು ಪೇೞ್ದರ್ - ವಾಯುಭೂತಿ ತನ್ನೊಂದು ಮಾನಗರ್ವದಿಂದೆಮ್ಮಂ ಪಟೆದು ಬಯ್ದು ನುಡಿದ ಪಾಪದ ಫಲದಿಂದೇೞು ದಿವಸದಿಂದೊಳಗೌದುಂಬರ ಕುಷ್ಠಮಾಗಿ ಪುಟೆತು ನಮೆದು ಸತ್ತಾ ಪೊಲಲೊಳೆ ಲಂಗಿಗರ ಮನೆಯೊಳ್ ಪೆಣ್ಗತ್ತೆಯಾಗಿ ಪುಟ್ಟ ನಮೆದು ಸತ್ತು ಪೇಪಂದಿಯಾಗಿ ಪುಟ್ಟ ಸತ್ತು ಪೆಣ್ಣಾಯಾಗಿ ಪುಟ್ಟ ಸತ್ತೀಗಳ್ ಜಾತ್ಯಂಧೆ ಪೊಲೆಯರ ಮಗಳಾಗಿ ಪುಟ್ಟದಳದಱಿಂ ಮುನ್ನಿನ ಸ್ನೇಹಂ ಕಾರಣಮಾಗಿ ಕೂಸಿನ ಮೇಗೆ ನಿಮಗೆ ಕೂರ್ಮೆಯಾದುದೆನೆ- ಭಟ್ಟಾರಾ ಅದೇಂ ಭವ್ಯಜೀವನೋ ಅಭವ್ಯಜೀವನೋ ಎಂದು ಬೆಸಗೊಂಡೊಡೆ ಭವ್ಯಜೀವಂ ನಿಮ್ಮ ಪೇೞಿ ಬ್ರತಂಗಳಂ ಕೈಕೊಳ್ಗುಮೆಂದೊಡೆ ಭಟ್ಟಾರರನುಮತದಿಂದಗ್ನಿಭೂತಿ ಋಷಿಯರ್ ಪೋಗಿ ತಮ್ಮ ಮುನ್ನಿನ ಜನ್ಮಾಂತರ ಸಂಬಂಧಮುಮಂ ಋಷಿಯರಂ ಏಳಿದು ನುಡಿದ ಪಾಪದ ಫಲದಿಂದೆಯ್ದಿದ ಭವಂಗಳ ದುಃಖಂಗಳುಮನಾ ಕೂಸಿಂಗಜೆವಂತು ತಿಳಿಯೆ ಪೇೞ್ದು ಮತ್ತಮಿಂತೆಂದರ್ ಮುನ್ನೆ ನೀನೀ ಭವದಿಂ ತೊಟ್ಟಯ್ದನೆಯ ಭವದೊಳ್ ವಾಯುಭೂತಿಯಪ್ಪುದು ಮಾನಗರ್ವದಿಂ ಋಷಿಯರಂ ಬಯ್ದ ಪಾಪದ ಫಲದಿಂದಿಂತಪ್ಪ ದುಃಖಂಗಳನೆಯ್ದಿದೆ ಇನ್ ಮತ್ತಂ ಮಧುಮದ್ಯಮಾಂಸಂಗಳಂ ಭಕ್ಷಿಸಿ ತಿರಿಕ ಮನುಷ್ಯ ಭವಂಗಳೊಳಪ್ಪ

ಸುರಿಯಿತು. ಬಹಳ ಹೊತ್ತು ಅಲ್ಲಿದ್ದು ನೋಡಿ, ಅಯ್ಯೋ ವಿಧಿಯೇ, ಈ ಸಂಸಾರವೇ! ಎಂದು ಭಿಕ್ಷೆಯೆತ್ತುವುದನ್ನೇ ಬಿಟ್ಟು ಬಂದೆನು". ಹೀಗೆನ್ನಲು ಸೂರ್ಯಮಿತ್ರಯತಿಗಳು "ಆ ಹೆಂಗುಸು ನಿಮ್ಮ ತಮ್ಮನಾದ ವಾಯುಭೂತಿಯ ಜೀವ" ಎಂದರು. 'ಪೂಜ್ಯರೇ, ಅದು ಹೇಗೆ?' ಎಂದು ಕೇಳಿದಾಗ ಯತಿಗಳು ಹೀಗೆ ಹೇಳಿದರು - "ವಾಯುಭೂತಿ ತನ್ನದೊಂದು ಔದ್ಧತ್ಯದ ಗರ್ವದಿಂದ ನಮ್ಮನ್ನು ಹಳಿದು ಬೈದು ನುಡಿದ ಪಾಪದ ಪರಿಣಾಮವಾಗಿ ಏಳುದಿವಸದೊಳಗೆ ಔದುಂಬರ ಕುಷ್ಠರೋಗಕ್ಕೆ ಗುರಿಯಾಗಿ ಹುಳುವಾಗಿ ಯಾತನೆಪಟ್ಟು ಸತ್ತನು. ಮತ್ತೆ ಆ ಪಟ್ಟಣದಲ್ಲೇ ಡೊಂಬರ ಮನೆಯಲ್ಲಿ ಹೆಣ್ಣು ಕತ್ತೆಯಾಗಿ ಹುಟ್ಟಿ ಯಾತನೆ ಪಟ್ಟು ಸತ್ತು ಹೇಲುಹಂದಿಯಾಗಿ ಹುಟ್ಟಿ ಸತ್ತು ಹೆಣ್ಣುನಾಯಾಗಿ ಹುಟ್ಟಿ ಸತ್ತು ಈಗ ಹುಟ್ಟುಗುರುಡಿಯಾಗಿ ಹೊಲೆಯರ ಮಗಳಾಗಿ ಆಕೆ ಹುಟ್ಟಿದ್ದಾಳೆ. ಆದುದರಿಂದ ಹಿಂದಿನ ಪ್ರೀತಿಯೇ ಕಾರಣವಾಗಿ ನಿಮಗೆ ಆ ಕೂಸಿನ ಮೇಲೆ ಪ್ರೀತಿಯುಂಟಾಯಿತು". ಆಗ ಅಗ್ನಿಭೂತಿ ಮುನಿಗಳು - ಪೂಜ್ಯರೆ, ಅದೇನು ಭವ್ಯ (ಮೋಕ್ಷಕ್ಕೆ ಅರ್ಹವಾದ) ಜೀವನೋ ? ಅಭವ್ಯ ಜೀವನೋ ? - ಎಂದು ಕೇಳಿದರು. "ಅದು ಭವ್ಯಜೀವವಾಗಿದೆ. ನೀವು ಉಪದೇಶ ಮಾಡಿದರೆ ಆಕೆ ವ್ರತಗಳನ್ನು ಸ್ವೀಕರಿಸುವಳು" ಎಂದು ಸೂರ್ಯಮಿತ್ರಾಚಾರ್ಯರು ಹೇಳಿದರು. ಅವರ ಅನುಮತಿ ಪಡೆದು ಅಗ್ನಿಭೂತಿ ಋಷಿಗಳು ಹೋಗಿ ತಮ್ಮ ಹಿಂದಿನ ಜನ್ಮಾಂತರದ ಸಂಬಂಧವನ್ನೂ ಸೂರ್ಯಮಿತ್ರಋಷಿಗಳನ್ನು ತಿರಸ್ಕಾರದಿಂದ ಕೆಟ್ಟ ಮಾತಾಡಿದ ಪಾಪದ ಪರಿಣಾಮವಾಗಿ ಉಂಟಾದ ಜನ್ಮಗಳ ದುಃಖಿಗಳನ್ನೂ ಆ ಹೆಂಗುಸಿಗೆ ಗೊತ್ತಾಗುವಂತೆ ತಿಳಿಸಿ ಅಮೇಲೆ ಹೀಗೆಂದರು - ನೀನು ಈ ಜನ್ಮದಿಂದ ಹಿಂದಿನ ಐದನೆಯ ಜನ್ಮದಲ್ಲಿ ವಾಯುಭೂತಿಯಾಗಿದ್ದಾಗ ಔದ್ಧತ್ಯಗರ್ವದಿಂದ ಋಷಿಗಳನ್ನು ನಿಂದಿಸಿದ ಪಾಪದ ಫಲದಿಂದ ಇಂತಹ ದುಃಖಿಗಳನ್ನು ಹೊಂದಿರುವೆ. ಅಲ್ಲದೆ, ಜೇನು-ಹೆಂಡ-ಮಾಂಸಗಳನ್ನು ಸೇವಿಸಿ ತಿರ್ಯಕ್ಕು - ಮನುಷ್ಯ

ದುಃಖಂಗಳನಂತನಂತಕಾಲಮನುಭವಿಸಿ ನೀಡಜೆಂದೆತ್ತಾನುಮಲ್ಲದೆ ಮನುಷ್ಯಭವಮಂ ಪೆಱದು ಪೆತ್ತೊಡಮಿಂತಾಗಿ ಪುಟ್ಟುಗುಂ-

ವೃತ್ತ ॥ ವೈರೂಪ್ಯಂ ದುರ್ಭಗತ್ವಂ ಕುಮತಿ ಕುಜನತಾಂ ಕುತ್ಸಿತತ್ವಂ ಕುಜಾತಿಂ
ಕ್ಷುತ್ತೃಷ್ಣಾಪೀಡಿತತ್ವಂ ವಿರಸ ವಿಕಳತಾಂ ವ್ಯಾಧಿತಾಂ ಚಾಬಲತ್ವಂ
ಹೀನತ್ವಂ ಪ್ರೇಷಣತ್ವಂ ಲಘುತರಮರಣಂ ಶೋಕ ಕಾಂಕ್ಷಾಲಯತ್ವಂ
ಮಾಂಸಾಶೀ ಪ್ರಾಣಘಾತೀತ್ಯನುಭವತಿ ಚಿರಂ ಪ್ರಾಪ್ಯ ಮಾನುಷ್ಯ ಜನ್ಮಂ ॥

ಆರ್ಯೆ ॥ ಪಾಪಾತ್ ಕಿಲ ಜಾಯಂತೇ
ವಾಮನ ಪಂಗ್ವಂಧ ಕುಬ್ಜ ಖಂಜ ಕರಾಲಾಃ
ಜಡ ಬಧಿರ ಮೂಕ ಕೃಶ ರೋ
ಮಶ ವಕ್ರ ನಿಬಡಾಳಿಸ್ತೇ (?) ॥

ವಸಂತ ತಿಲಕಂ ॥ ಉದ್ದಂತ ಕುಬ್ಜ ಕುಣಿಕುಂಡ ಕರಾಳ ಕಾಣಾಃ
ಸಂಸ್ಥೂಲ ದೀರ್ಘ ಕೃಶರೋಮಶ ರೂಕ್ಷರೂಪಾಃ
ಕುಷ್ಠಾರ್ದಿತಾಃ ಕೃಪಣ ವಾಮನ ಪಾಮನಾಶ್ಚ
ಪಾಪೇನ ಪೂರ್ವಚರಿತೇನ ನರಾ ಭವನ್ತಿ ॥

ಜನ್ಮಗಳಲ್ಲಿ ಒದಗುವ ದುಃಖಿಗಳನ್ನು ಹಾಗೆಯೇ ಕೊನೆಯಿಲ್ಲದಷ್ಟು ಕಾಲವೂ ಅನುಭವಿಸಿ, ದೀರ್ಘಕಾಲದ ನಂತರವೂ ಮನುಷ್ಯಜನ್ಮ ಪ್ರಾಪ್ತವಾಗದು. ಒಂದು ವೇಳೆ ಮನುಷ್ಯಜನ್ಮ ದೊರೆತರೂ ಹೀಗೆ (ಹುಟ್ಟುಗುರುಡಿ - ದುರ್ಗಂಧೆ - ದುಸ್ಥರೆ ಇತ್ಯಾದಿಯಾಗಿ) ಹುಟ್ಟಬೇಕಾಗುವುದು. ಅಂತಹ ಜೀವವು ಮನುಷ್ಯ ಜನ್ಮವನ್ನು ಪಡೆದು ವಿಕಾರ ರೂಪ, ಭಾಗ್ಯಹೀನತೆ, ಕೆಟ್ಟಬುದ್ಧಿ, ಕೇಡಿಗತನ, ನೀಚಸ್ವಭಾವ, ಕೆಟ್ಟಜಾತಿ, ಹಸಿವು, ಬಾಯಾರಿಕೆಗಳಿಂದ ಪೀಡಿತವಾಗಿರುವುದು, ರಸಹೀನವಾದ ಮನೋದುಃಖಿಗಳು, ರೋಗ, ಶಕ್ತಿಹೀನತೆ, ಕೊರತೆ, ಅನ್ಯರ ಆಳುತನ, ಬರೇ ಹಗುರವಾದ ಸಾವು, ದುಃಖ, ದುರಾಶೆಗಳಿಗೆ ಆಶ್ರಯವಾಗಿರುವುದು, ಮಾಂಸಸೇವನೆ, ಜೀವಹಿಂಸೆ - ಇವನ್ನೆಲ್ಲ ಗಳಿಸಿಕೊಂಡು ಬಹುಕಾಲ ಇವನ್ನು ಅನುಭವಿಸಿಕೊಂಡು ಇರಬೇಕಾಗುವುದಲ್ಲವೆ ? ಪಾಪದಿಂದಲೇ ಕುಳ್ಳರಾಗಿ, ಕೈಕಾಲಿಲ್ಲದವರಾಗಿ, ಕುರುಡರಾಗಿ, ಗಿಡ್ಡರಾಗಿ, ಕುಂಟರಾಗಿ, ಭಯಂಕರರಾಗಿ, ದಡ್ಡರಾಗಿ, ಕಿವುಡರಾಗಿ, ಮೂಕರಾಗಿ, ಕ್ಷೀಣರಾಗಿ, ಮೈಮೇಲೆಲ್ಲ ಕೂದಲುಳ್ಳವರಾಗಿ, ಡೊಂಕುಳ್ಳವರಾಗಿ - ಹುಟ್ಟುತ್ತಾರಲ್ಲವೆ ? ಮನುಷ್ಯರು ಹಿಂದೆ ಮಾಡಿದ ಪಾಪಕರ್ಮದಿಂದ ಉಬ್ಬುಹಲ್ಲುಳ್ಳವರು, ಕುಬ್ಜರು, ಮೋಟುಗೈಯವರು, ಹಾದರಕ್ಕೆ ಹುಟ್ಟಿದವರು, ಒಂದೇ ಕಣ್ಣಿನವರು, ತುಂಬಾ ದಪ್ಪವಾದವರು, ಉಗ್ರವಾಗಿರುವವರು, ಕೃಶವಾಗಿರುವವರು, ಕಾಡುಗೂದಲುಳ್ಳವರು, ಒರಟುರೂಪದವರು, ಕುಷ್ಠರೋಗಪೀಡಿತರು, ಜಿಪುಣರು, ಕುಳ್ಳರು, ಚರ್ಮರೋಗ ಪೀಡಿತರು ಆಗಿ ಹುಟ್ಟುತ್ತಾರೆ. ಅಹಿಂಸೆ ಮೊದಲಾದ ವ್ರತಗಳನ್ನು ಆಚರಿಸದವನು- ನೀಚಕುಲೋತ್ಪನ್ನನು, ಗೌರವ ಕಡಮೆಯಾದವನು, ತಿರಸ್ಕಾರಕ್ಕೆ ಗುರಿಯಾದ ವೈಭವವುಳ್ಳವನು, ಕೇಡಿಗನು, ಪಾಪಕೃತ್ಯವೆಸಗಿದವನು, ಕೊಳಕನು, ಕೆಟ್ಟನಾತವುಳ್ಳವನು, ಮಂದಬುದ್ಧಿಯವನು, ಕಿವುಡನು, ಹೆಳವನು, ಮೂಕ, ನಾಚಿಕೆಯಿಲ್ಲದವ, ಜಾರ, ಹೇಡಿ, ಅತ್ಯಾಶೆಯುಳ್ಳವ, ಕೆಟ್ಟವ, ಕಪಟ ಮನದವ,

ವೃತ್ತ ॥ ಕುಲಹೀನಂ ದೀನಮಾನಂ ವರಿಭವವಿಭವಂ ದುಷ್ಕೃತಂ ಪಾಪಕರ್ಮ
ಮಲಿನಂ ದುರ್ಗಂಧಗಂಧಂ ಜಡಮತಿ ಕಿವುಡಂ ಪಂಗು ಮೂಕಂ... ತಂ ನಾ
ಣಿಲಿ ಪಾಣ್ಡಂ ಪಂದೆ ಲೋಭಂ ಖಳನಳಿಕಮನಂ ವಂಚಕಂ ನಿತ್ಯರೋಗಾ
ಕುಲನೆಂಬೀ ನಾಮ ನಾಮಾವಳಿಗೆ ನಿಳಯನಕ್ಕುಂ ವ್ರತವ್ರಾತಹೀನಂ ॥

ಇಂತು ಪೂರ್ವಕೃತ ಪಾಪದ ಫಲದಿಂದಂ ವ್ರತಂಗಳಂ ಕೈಕೊಂಡಬೆದುದಱಿಂದಂ ಮನುಷ್ಯಜನ್ಮ
ದೊಳ್ ಪುಟ್ಟಿಯುಂ ದುಃಖಂಗಳನೆಯ್ದುಗುಂ ಜೀವಂ ಮತ್ತೆ ಧರ್ಮದ ಫಲದಿಂದಂ-

ವೃತ್ತ ॥ ಶ್ರೀವಕ್ಷಶ್ಚಾರುರೂಪಂ ಕುಲ ಬಲ ವಿನಯಂ ಖ್ಯಾತಿ ದೀರ್ಘಾಯುಷತ್ವಂ
ಪೂಜಾಂ ದೇವಾಸುರೇಂದ್ರೈಃ ಸುರನರವನಿತಾ ಪ್ರೀತಿಮಷ್ಟಾಂಗ ಭೋಗಂ
ಸ್ವರ್ಗೇ ಮರ್ತ್ಯೇ ಲಭಂತೇ ದ್ಯುತಿ ಮತಿ ಪಟುತಾಂ ರಾಜರಾಜಶ್ರೀಯಂಚ
ಸೌಭಾಗ್ಯಂ ಪೂಜ್ಯವಾಕ್ಯಂ ಜಗತಿ ಮಧು ಸುರಾ ಮಾಂಸ ಸೇವಾನಿವೃತ್ತಾಃ ॥

ಆರ್ಯೆ ॥ ಪುಣ್ಯಾದುತ್ಪದ್ಯಂತೆ ಜೀವಾ ವಿಖ್ಯಾತ ವಿಪುಲ ವಂಶೇಷ್ವೇಕೇ
ದ್ಯುತಿ ಮತಿ ಧೃತಿ ಕಾಂತಿ ಶ್ರೀ ಹ್ರೀ ರೂಪಾರೋಗ್ಯ ಸತ್ವಬಲ ಸಂಪನ್ನಾಃ

ಆಜ್ಞಾ ಯಶೋ ಧೃತಿ ಮತಿ ದ್ಯುತಿ ಕಾಂತಿ ಲಕ್ಷ್ಮೀ
ಶೌರ್ಯವ್ರತಾಪ ಪರಿವಾರ ಧನೋಪಭೋಗಾಃ
ತೇ ಲೋಕವೇದ ಸಮಯೇಷು ಸುನಿಶ್ಚಯೇನ
ಪುಣ್ಯೋದಯೇನ ಸುಲಭಾ ಇತಿ ವರ್ಣಯಂತಿ ॥

ಮೋಸಗಾರ ಯಾವಾಗಲೂ ರೋಗಿ, - ಎಂಬೀ ನಾಮಾವಳಿಗೆ ಆಶ್ರಯಸ್ಥಾನವಾಗುತ್ತಾನೆ. ಈ ರೀತಿಯಾಗಿ ಹಿಂದೆ ಮಾಡಿದ ಪಾಪದ ಪರಿಣಾಮವಾಗಿ ವ್ರತಗಳನ್ನು ಸ್ವೀಕರಿಸಿ ಸತ್ತುದರಿಂದ ಮನುಷ್ಯ ಜನ್ಮದಲ್ಲಿ ಬಂದರೂ ಜೀವನು ದುಃಖಿಗಳನ್ನು ಹೊಂದುವನು. ಆಮೇಲೆ ಧರ್ಮಾಚರಣೆಯಿಂದ ಏನಾಗುವುದೆಂದರೆ - ಲೋಕದಲ್ಲಿ ಜೇನು, ಮದ್ಯ, ಮಾಂಸಗಳನ್ನು ತಿನ್ನದೆ ಬಿಟ್ಟವರು - ಸಂಪದ್ಯುಕ್ತವಾದ ಎದೆ, ಮನೋಹರವಾದ ರೂಪ, ಕುಲ- ಬಲ - ವಿನಯಗಳು, ಕೀರ್ತಿ, ದೀರ್ಘಾಯುಷ್ಯ, ಇಂದ್ರನಿಂದಲೂ ರಾಕ್ಷಸರಾಜರಿಂದಲೂ ಪೂಜೆ, ದೇವತಾಸ್ತ್ರೀಯರ ಪ್ರೇಮ, ಅನ್ನ - ನೀರು, ತಾಂಬೂಲ, ಪುಷ್ಪ, ಚಂದನ, ವಸ್ತ್ರ, ಶಯ್ಯೆ, ಅಲಂಕಾರ ಎಂಬ ಎಂಟು ಬಗೆಯ ಸುಖ, ಕಾಂತಿಯುಕ್ತವಾದ ಬುದ್ಧಿಶಕ್ತಿ, ಕುಬೇರನ ಐಶ್ವರ್ಯ, ಸಂಪತ್ತು, ಗೌರವಯುಕ್ತವಾದ ಮಾತು -ಇವನ್ನು ಸ್ವರ್ಗ ಮರ್ತ್ಯಗಳೆರಡರಲ್ಲಿಯೂ ಪಡೆಯುವರು. ಮನುಷ್ಯರು ಪುಣ್ಯ ಸಂಪಾದನೆಯಿಂದಲೇ ಪ್ರಸಿದ್ಧವೂ ವಿಸ್ತಾರವೂ ಆಗಿರುವ ವಂಶಗಳಲ್ಲಿ ಒಂದರಲ್ಲಿ, ಪ್ರಕಾಶಯುಕ್ತವಾದ ಬುದ್ಧಿಯಿಂದಲೂ ಸ್ಥಿರತೆಯಿಂದಲೂ ತೇಜಸ್ಸಿನಿಂದಲೂ ಐಶ್ವರ್ಯದಿಂದಲೂ ಲಜ್ಜಾಗುಣದಿಂದಲೂ ಆಕಾರ ಆರೋಗ್ಯ ಸತ್ವಗುಣ ಶಕ್ತಿಗಳಿಂದಲೂ ಕೂಡಿದವರಾಗಿ ಹುಟ್ಟುತ್ತಾರೆ. ಲೌಕಿಕ ವೈದಿಕ ಸಂಪ್ರದಾಯಗಳಲ್ಲಿ ಆಜ್ಞೆಮಾಡುವ ಅಧಿಕಾರವೂ ಕೀರ್ತಿಯೂ ಸ್ಥಿರಬುದ್ಧಿಯೂ ಬುದ್ಧಿಪ್ರಕಾಶವೂ ತೇಜಸ್ಸೂ ಐಶ್ವರ್ಯವೂ ಪರಾಕ್ರಮ ಪ್ರತಾಪಗಳೂ ಸೇವಕರು ಐಶ್ವರ್ಯ ಮುಂತಾದ ಸುಖಿಗಳೂ ಅತ್ಯಂತ ನಿಶ್ಚಯವಾದ ಪುಣ್ಯದ ಏಳಿಗೆಯಿಂದ ಸುಲಭವಾಗಿ ದೊರೆಯುವುವು ಎಂದು

ವರ ಯುವತಿ ಭವನ ವಾಹನ ನಾಟಕ ಧನಕನಕ ರಜತಮಣಿ ಸುರಥಾಃ
ಅತಿ ಲಲಿತ ತುರಗ ಮದ ದಳಿತ ನಾಗ ಭೃತ್ಯಾ ಭವಂತಿ ಧರ್ಮೇಣ ॥

ಇಂತು ಧರ್ಮದ ಫಲದಿಂದಂ ದೇವಲೋಕದ ಮನುಷ್ಯಲೋಕದ ಸುಖಂಗಳನನುಭವಿಸಿ ಬಬಿಕ್ಕೆ ನಿರ್ವಾಣಸುಖಮನೆಯ್ದುಗುಂ ಜೀವಮಿನ್ನಾ ಧರ್ಮಮೆಂಬುದೆಂತೆಂದೊಡೆ-

ಗಾಹೆ ॥ ಸೋ ಧಮ್ಮೋ ಜತ್ಥ ದಯಾ ಸೋವಿ ತಓ ವಿಸಯಣಿಗ್ಗಹೋ ಜತ್ಥ
ದಸ ಅಟ್ಠ ದೋಸರಹಿ ಓ ಸೋದೇವ್ವೋ ಣತ್ಥಿ ಸಂದೇಹೋ ॥

ಎಂದಿಂತು ಪದಿನೆಂಟು ದೋಷಂಗಳನಿಲ್ಲದೊಂ ದೇವನಂತಪ್ಪ ದೇವನ ಪೇಳ್ದುದಾಗಮ ಮೆಂಬುದಕ್ಕುಮಾ ಆಗಮಂ ಪೇಳ್ದಿಂತು ಬಾಹ್ಯಾಭ್ಯಂತರ ಪರಿಗ್ರಹಂಗಳಿಲ್ಲಮಂ ತೊಱೆದು ದ್ವಾದಶವಿಧಮಪ್ಪ ತಪದೊಳ್ ನೆಗಳ್ದು ಅಯ್ದುಮಿಂದ್ರಿಯಂಗಳಂ ಗೆಲ್ದು ಪಸಿವುಂ ನೀರಱ್ಕೆ ಮೊದಲಾಗೊಡೆಯ ಇಪ್ಪತ್ತೆರಡು ಪರೀಷಹಂಗಳಂ ಸೈರಿಸಿ ಯಮ ನಿಯಮ ಸ್ವಾಧ್ಯಾಯ ಧ್ಯಾನಾನುಷ್ಠಾನ ನಿರತರಾಗಿ ತವಂಗೆಯ್ವ ಋಷಿಯರ್ಕಳ್ ತಪೋಧನರ್ ಕೊಲ್ಲದುದೆ ಧರ್ಮಮೆಂದಿಂತು ನಂಬ ವ್ರತಂಗಳಂ ಕೈಕೊಂಡು ನೆಗಳ್ವುದು ಧರ್ಮಮೆಂಬುದಕ್ಕುಂ-ಎಂದಗ್ನಿಭೂತಿರಿಸಿಯರ್ ತಿಳಿಯೆ ಧರ್ಮಮಂ ಪೇಳ್ದೊಡೆರ್ದೆಯೊಳ್ ಮೆಲ್ಲಿದಳಾಗಿ ತನ್ನ ಭವಾಂತರಂಗಳಂ ಧರ್ಮಮುಮಂ ಕೇಳ್ದಱೆದು ಸಂಸಾರ ಶರೀರ ವೈರಾಗ್ಯಮಾದಮಾನುಂ ಪೆರ್ಚಿ ತನ್ನಂ ತಾನೆ ಪಟೆದು ನಿಂದಿಸಿ ಪಾಪಕ್ಕಂಜಿ ಅಣುವ್ರತಂ

ವರ್ಣಿಸುತ್ತಾರೆ. ಧರ್ಮದಿಂದ ಶ್ರೇಷ್ಠಳಾದ ಸ್ತ್ರೀ, ಮನೆ, ವಾಹನಗಳು, ನೃತ್ಯಗಳು, ಐಶ್ವರ್ಯ, ಚಿನ್ನ, ಬೆಳ್ಳಿ, ರತ್ನ, ಒಳ್ಳೆಯ ರಥಗಳು, ಬಹಳ ಸುಂದರವೂ ಎತ್ತರವೂ ಆಗಿ ಮದಜಲದಿಂದ ಬೀಗಿದ ಆನೆಗಳು, ಸೇವಕರು - ಈ ಎಲ್ಲವೂ ದೊರೆಯುತ್ತವೆ. ಹೀಗೆ ಧರ್ಮದ ಫಲದಿಂದ ಜೀವವು ಸ್ವರ್ಗ ಮರ್ತ್ಯಗಳ ಸುಖವನ್ನು ಅನುಭವಿಸಿದ ಮೇಲೆ ಮೋಕ್ಷದ ಸುಖವನ್ನು ಪಡೆಯುವುದು. ಇನ್ನು ಆ ಧರ್ಮವೆಂಬುದು ಹೇಗೆಂದರೆ - ಎಲ್ಲಿ ದಯೆ ಇದೆಯೋ ಅದು ಧರ್ಮವು ಮತ್ತು ಎಲ್ಲಿ ಇಂದ್ರಿಯನಿಗ್ರಹವಿದೆಯೋ ಅದು ಕೂಡ ಧರ್ಮವು. ಹದಿನೆಂಟು ದೋಷಗಳಿಲ್ಲದವನು ದೇವನು. ಇದರಲ್ಲಿ ಸಂಶಯವಿಲ್ಲ. ಈ ರೀತಿಯಾಗಿ ಹಸಿವು, ಬಾಯಾರಿಕೆ, ಹೆದರಿಕೆ,ಹಗೆತನ, ಪ್ರೀತಿ, ಮೋಹ, ಚಿಂತೆ, ಮುಪ್ಪು, ರೋಗ, ಮರಣ, ಬೆವರು , ಖೇದ, ಮದ, ರತಿ, ಆಶ್ಚರ್ಯ, ಜನನ, ನಿದ್ರೆ, ವಿಷಾದ ಎಂಬೀ ಹದಿನೆಂಟು ದೋಷಗಳಿಲ್ಲದವನು ದೇವನು. ಅಂತಹ ದೇವನು ಹೇಳಿದುದು ಶಾಸ್ತ್ರವೆನಿಸುವುದು. ಆ ಶಾಸ್ತ್ರ ಹೇಳಿದಂತೆ ಬಾಹ್ಯ ಮತ್ತು ಆಭ್ಯಂತರ ಎಂಬ ಪರಿಗ್ರಹಗಳಿಲ್ಲವನ್ನೂ ಬಿಟ್ಟು ಹನ್ನೆರಡು ತೆರನಾದ ತಪಸ್ಸಿನಲ್ಲಿ ಪ್ರಖ್ಯಾತನಾಗಿ ಪಂಚೇಂದ್ರಿಯಗಳನ್ನು ಗೆದ್ದು ಹಸಿವು ಬಾಯಾರಿಕೆ ಮುಂತಾದ ಇಪ್ಪತ್ತೆರಡು ಪರೀಷಹಗಳನ್ನು ಸಹಿಸಿ ಯಮ, ನಿಯಮ, ಸ್ವಾಧ್ಯಾಯ, ಧ್ಯಾನಗಳ ಆಚರಣೆಯಲ್ಲಿ ತತ್ಪರರಾಗಿ ತಪಸ್ಸನ್ನು ಮಾಡುವ ಋಷಿಗಳು ತಪಸ್ಸೇ ಐಶ್ವರ್ಯವಾಗಿರುವವರು. ಕೊಲ್ಲದಿರುವುದೇ ಧರ್ಮ - ಹೀಗೆ ನಂಬಿಕೊಂಡು ವ್ರತಗಳನ್ನು ಸ್ವೀಕರಿಸಿ ಆಚರಿಸುವುದು ಧರ್ಮವು. ಎಂದು ಅಗ್ನಿಭೂತಿಋಷಿ ಆಕೆ ತಿಳಿಯುವಂತೆ ಧರ್ಮವನ್ನು ತಿಳಿಸಿದನು. ಆಗ ಅವಳು ಹೃದಯದಲ್ಲಿ ಮೃದುತ್ವವನ್ನು ತಾಳಿ, ತನ್ನ ಜನ್ಮಾಂತರಗಳನ್ನೂ ಧರ್ಮವನ್ನೂ ಕೇಳಿ ತಿಳಿದುಕೊಂಡು, ಸಂಸಾರದಲ್ಲಿಯೂ ತನ್ನ ಶರೀರದಲ್ಲಿಯೂ ಅತ್ಯಂತ ವೈರಾಗ್ಯಭಾವವು ಹೆಚ್ಚಾಗಲು, ತನ್ನನ್ನು

ಮೊದಲಾಗೊಡೆಯ ಶ್ರಾವಕಬ್ರತಂಗಳಂ ಕೈಕೊಂಡಾಗಳ್ ಭಟ್ಟಾರರುಂ ದೃಢವ್ರತೆಯಾಗು ಕರ್ಮಕ್ಷಯಮಕ್ಕೆಂದು ಪರಸಿ ತಮ್ಮಾವಾಸಕ್ಕೆ ಪೋದರಿತ್ತ ಜಾತ್ಯಂಧೆಯಪ್ಪ ಕೂಸುಮಹಿಂಸಾದಿ ವ್ರತಗಳಂ ಮೇಲ್ಕೊಂದು ತನ್ನ ಮನೆಗೆ ಪೋಪಾಗಳ್ ಅನ್ನೆಗಂ ಎಡೆಯೊಳರಸನ ಪುರೋಹಿತಂ ಸೋಮಶರ್ಮನೆಂಬೊಂ ತನ್ನ ಪರಿವಾರಂ ಬೆರಸು ಮಹಾವಿಭೂತಿ ವಿಸ್ತಾರದಿಂದಿಂ ಪಿರಿದು ಪೂಜೆಯಂ ಕೊಂದು ಮಕ್ಕಳಂ ಬೇಡಿ ಸಂಬರನಾಗಠಾಣಕ್ಕೆ ಪರಕೆಗುಡಲ್ ಪೋಪುದಂ ತನ್ನೊಡವೋಪ ಪೊಲೆಯರ ಕೂಸುಗಳ್ ಕಂಡು ತನಗೆ ವ್ಯಾವರ್ಣಿಸಿ ಪೇಟಿ ಕೇಳ್ದಜಿಂಳ್ ಮನಮಿಟ್ಟುಮವರ್ಗ್ಗೆ ಸತ್ತು ಪುಟ್ಟುವೆನಕ್ಕೆಂದು ಭೋಗಾಸಕ್ತೆಯಾಗಿ ನಿದಾನಂಗೆಯ್ದು ಮನೆಗೆವ್ಪೋಗಿ ಇರ್ಪನ್ನೆಗಮಾಯಿರುಳೊಳೆ ಪಾವು ಕೊಳೆ ಸತ್ತು ಚಂಪಾನಗರಮನಾಳ್ವಂ ಚಂದ್ರವಾಹನನೆಂಬೊನರಸನಾತನ ಮಹಾದೇವಿ ಚಂದ್ರಮತಿಯೆಂಬೊಳವರ ಪುರೋಹಿತಂ ಸೋಮಶರ್ಮನೆಂಬೊಂ ಭಟ್ಟನಾತನ ಪಾರ್ವಂತಿ ತ್ರಿವೇದಿಯೆಂಬೊಳಾಯಿರ್ವರ್ಗ್ಗಂ ನಾಗಶ್ರೀಯೆಂಬೊಳ್ ಮಗಳಾಗಿ ಪುಟ್ಟದೊಳತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿಯನೊಡೆಯಳ್ ಜನಂಗಳ್ಗಿಲ್ಲಮಾದಮಾನುಂ ಸೊಗಯಿಸುವಳ್ ನಾಗರ್ಗೆ ಪರಸಿ ಪೆತ್ತರಪ್ಪುದಜಿಂ ನಾಗಶ್ರೀಯೆಂದು ಪೆಸರನಿಟ್ಟರ್ ಮತ್ತಿತ್ತ ಸೂರ್ಯಮಿತ್ರಾಚಾರ್ಯರ್ ಅಗ್ನಿಭೂತಿ ಋಷಿಯರುಮಂತಿರ್ವರುಂ ಚಂಪಾನಗರಮಂ ಪೊಱಮಟ್ಟು ಗ್ರಾಮ ನಗರ ಖೇಡ ಖರ್ವಡ

ತಾನೇ ಹಳಿದುಕೊಂಡಳು. ಪಾಪಕ್ಕೆ ಹೆದರಿ ಅಣುವ್ರತವೇ ಮೊದಲಾದ ಶ್ರಾವಕ ವ್ರತಗಳನ್ನು ಕೈಕೊಂಡಳು. ಆಗ ಅಗ್ನಿಭೂತಿ ಋಷಿಗಳು "ನೀನು ದೃಢವಾದ ವ್ರತವುಳ್ಳವಳಾಗು, ನಿನ್ನ ಕರ್ಮ ನಾಶವಾಗಲಿ" ಎಂದು ಆಶೀರ್ವದಿಸಿ ತಮ್ಮ ವಾಸಸ್ಥಾನಕ್ಕೆ ತೆರಳಿದರು. ಇತ್ತ ಹುಟ್ಟುಗುರುಡಿಯಾದ ಆ ಹೆಂಗುಸು ಅಹಿಂಸೆ ಮೊದಲಾದ ವ್ರತಗಳನ್ನು ಸ್ವೀಕರಿಸಿ ತನ್ನ ಮನೆಗೆ ತೆರಳುತ್ತಿದ್ದಳು. ಆಗ ಅಷ್ಟರಲ್ಲಿ ರಾಜಪುರೋಹಿತನಾದ ಸೋಮಶರ್ಮನೆಂಬವನು ತನ್ನ ಪರಿವಾರದೊಂದಿಗೆ ಮಹಾವೈಭವದಿಂದ ಹೆಚ್ಚಾದ ಪೂಜಾದ್ರವ್ಯಗಳನ್ನು ತೆಗೆದುಕೊಂದು ತನಗೆ ಮಕ್ಕಳನ್ನು ಕೊಡಬೇಕೆಂದು ಪ್ರಾರ್ಥಿಸುತ್ತ ಶಂಬರ ನಾಗಸ್ಥಾನಕ್ಕೆ ಹರಕೆಯನ್ನೊಪ್ಪಿಸಲು ಹೋಗುತ್ತಿದ್ದನು. ಅದನ್ನು ತನ್ನೊಡನೆ ಬರುತ್ತಿದ್ದ ಹೊಲೆಯರ ಹೆಂಗುಸರು ಕಂಡು ತನಗೆ ವಿವರಿಸಿ ಹೇಳಲು ಆ ಕುರುಡಿಯು ಕೇಳಿ ಅದರಲ್ಲೇ ಮನಸ್ಸಿಟ್ಟು ತಾನು ಸತ್ತು ಅವರಿಗೆ ಹುಟ್ಟುವಂತಾಗಲಿ ಎಂದ ಮನದಲ್ಲಿ ಅಭಿಲಾಷೆಗೊಂಡು ಸಂಕಲ್ಪಿಸಿಕೊಂಡು ಮನೆಗೆ ಹೋದಳು. ಮನೆಯಲ್ಲಿ ಆಕೆ ಇರುತ್ತ ಅಂದಿನ ರಾತ್ರಿಯೆ ಹಾವು ಕಚ್ಚಿ ಸತ್ತಳು. ಚಂಪಾನಗರವನ್ನು ಆಳುವ ಚಂದ್ರವಾಹನನೆಂಬ ರಾಜನಿಗೆ ಚಂದ್ರಮತಿ ಎಂಬವಳು ಪಟ್ಟದ ರಾಣಿ. ಅವರ ಪುರೋಹಿತನು ಸೋಮಶರ್ಮನೆಂಬ ಭಟ್ಟನು. ಅವನ ಹೆಂಡತಿ ತ್ರಿವೇದಿಯೆಂಬಾಕೆ. ಆ ಇರ್ವರಿಗೆ ಇವಳು ನಾಗಶ್ರೀ ಎಂಬ ಹೆಸರಿನ ಮಗಳಾಗಿ ಹುಟ್ಟಿದಳು. ಇವಳು ಅತಿಶಯವಾದ ರೂಪ-ಲಾವಣ್ಯ ಸೌಭಾಗ್ಯ ಕಾಂತಿಯಿಂದ ಕೂಡಿದವಳಾಗಿ ಜನರಿಗೆಲ್ಲ ಅತ್ಯಂತ ಸುಂದರಿಯಾಗಿ ಕಾಣಿಸುತ್ತಿದ್ದಳು. ನಾಗದೇವತೆಗಳಿಗೆ ಹರಕೆ ಸಲ್ಲಿಸಿ, ಆಕೆಯನ್ನು ಪಡೆದುದರಿಂದ ಅವಳಿಗೆ ನಾಗಶ್ರೀ ಎಂದು ಹೆಸರನ್ನಿಟ್ಟರು. ಆಮೇಲೆ ಇತ್ತ ಸೂರ್ಯಮಿತ್ರಾಚಾರ್ಯರೂ ಅಗ್ನಿಭೂತಿ ಋಷಿಗಳೂ ಚಂಪಾನಗರದಿಂದ ಹೊರಟರು. ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪತ್ತನ, ದ್ರೋಣಾಮುಖಗಳನ್ನು

ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಏಱೆಂಟು ವರ್ಷದಿಂ ಮಗುಟ್ಟು ಚಂಪಾನಗರಕ್ಕೆ ವಂದು ಪೊಱವೊಱಲೊಳುದ್ಯಾನವನದೊಳ್ ಕಂಬಳನಾಗಂ ಶಂಬರನಾಗಂ ಪಾಂಡುಕನಾಗಮೆಂದೀ ನಾಗರ ಪೆಸರನೊಡೆಯ ಮುನ್ನಿರ್ದ್ದ ನಾಗಠಾಣದೊಳ್ ಬಂದಿರ್ದ್ದರ್ ಅನ್ನೆಗಂ ನಾಗಶ್ರೀಯುಂ ಪಂಚಮಿಯಂದು ಮಂತ್ರಿಯರ್ಕ್ಕಳ ಪೆರ್ಗಡೆಗಳ ರಾಜಶ್ರೇಷ್ಠಿಯರ ಪ್ರಧಾನರಪ್ಪ ನಿಯೋಗಿಗಳ ಪಲಂಬರುಂ ಪೆಣ್ಗೂಸುಗಳ್ವೆರಸು ಪಿರಿದುಮರ್ಚನೆಯುಂ ಕೊಂಡು ನಾಗಠಾಣಕ್ಕೆ ಪೋಗಿ ನಾಗರನರ್ಚಿಸಿ ಪೊಡೆವಟ್ಟು ಸೂರ್ಯಮಿತ್ರಾಚಾರ್ಯರುಮನಗ್ನಿಭೂತಿ ರುಷಿಯರುಮಂ ಕಂಡು ಜಾತಿಸ್ಮರೆಯಾಗಿ ತನ್ನ ಮುನ್ನಿನ ಪೊಲತಿಯಾಗಿ ಪುಟ್ಟಿದ ಭವಮನಱೆದು ಭಟ್ಟಾರರ ಕಾಲ್ಗಳಿಗಿ ಪೊಡೆವಟ್ಟು ಕುಳ್ಳಿರ್ದಾಗಳಾ ಕೂಸಂ ಕಂಡು ಅಗ್ನಿಭೂತಿರುಷಿಯರ್ಗತಿಸ್ನೇಹಮಾಗಿ ತಮ್ಮ ಗುರುಗಳಂ ಸೂರ್ಯಮಿತ್ರಾಚಾರ್ಯರನಿಂತೆಂದು ಬೆಸಗೊಂಡರ್ ಭಟ್ಟಾರಾ ಈ ಕೂಸಿನ ಮೇಗೆಮಗಾದಮಾನುಂ ಮೋಹಮಾದುದರ್ಕೆ ಕಾರಣಮೇನೆಂದು ಬೆಸಗೊಂಡೊಡೆ ಭಟ್ಟಾರರವಧಿಜ್ಞಾನಮಂ ಪ್ರಯೋಗಿಸಿ ಇಂತೆಂದು ಪೇೞ್ದರ್-ಈ ಕೂಸೆಂಬುದು ನಿಮ್ಮ ತಮ್ಮನಪ್ಪ ವಾಯುಭೂತಿಯ ಜೀವಂ ಅಭಿಮಾನಂ ಕಾರಣಮಾಗೆಮ್ಮನುೞಿಡೆ ಪರಿಭವಿಸಿ ಬಾಯ್ಗೆವಂದುದನೆ ಪೊಲ್ಲಮೆಯ ಬಯ್ಗುಳಂ ಬಯ್ದುಮಾ ಪಾಪದ ಫಲದಿಂದಮೇೞುದಿವಸದಿಂದೊಳ ಗೌದುಂಬರಕುಷ್ಠಮಾಗಿ ಪುಟೆತು ಸತ್ತು ಕೌಸಂಬಿಯೊಳೆ ಲಂಗಿಗರ ಮನೆಯೊಳ್ ಪೆಣ್ಗತ್ತೆಯಾಗಿ

ಸಂಚರಿಸುತ್ತ ಏಳೆಂಟು ವರ್ಷಗಳು ಕಳೆಯಲು ಮರಳಿ ಚಂಪಾನಗರಕ್ಕೆ ಬಂದರು. ಆ ಪಟ್ಟಣದ ಹೊರಗಿನ ಉದ್ಯಾನದಲ್ಲಿ ಕಂಬಳನಾಗ, ಶಂಬರನಾಗ, ಪಾಂಡುಕನಾಗ - ಎಂಬುದಾಗಿ ನಾಗರ ಹೆಸರನ್ನುಳ್ಳ ಮತ್ತು ಅವರು ಹಿಂದೆ ಇದ್ದ ನಾಗಸ್ಥಾನದಲ್ಲಿ ಅವರು ಬಂದು ಇದ್ದರು. ಆ ವೇಳೆಗೆ ಸರಿಯಾಗಿ ನಾಗಶ್ರೀಯು ನಾಗರ ಪಂಚಮಿಯಂದು ಮಂತ್ರಿಗಳ ಹೆಗ್ಗಡೆಗಳ ರಾಜರಂತಿರುವ ಶೆಟ್ಟಿಯರ ಹಾಗೂ ಮುಖ್ಯಸ್ಥರಾದ ಅಧಿಕಾರಿಗಳ ಹಲವು ಮಂದಿ ಹೆಣ್ಣುಮಕ್ಕಳನ್ನು ಕೂಡಿಕೊಂಡು ಪೆಚ್ಚಾದ ಪೂಜಾವಸ್ತುಗಳನ್ನು ತೆಗೆದುಕೊಂಡು ನಾಗಸ್ಥಾನಕ್ಕೆ ಹೋದಳು. ನಾಗರನ್ನು ಪೂಜಿಸಿದಳು. ಸಾಷ್ಟಾಂಗ ವಂದನೆ ಮಾಡಿದಳು. ಸೂರ್ಯಮಿತ್ರಾಚಾರ್ಯರನ್ನೂ ಅಗ್ನಿಭೂತಿಋಷಿಗಳನ್ನೂ ಕಂಡು ತನ್ನ ಪೂರ್ವಜನ್ಮದ ಸ್ಮರಣೆಯನ್ನು ತಾಳಿದಳು. ಅವಳು ಹಿಂದಿನ ಜನ್ಮದಲ್ಲಿ ಹೊಲತಿಯಾಗಿ ಹುಟ್ಟಿದುದನ್ನು ತಿಳಿದು, ಆಚಾರ್ಯರ ಪಾದಕ್ಕೆ ಸಾಷ್ಟಾಂಗ ವಂದಿಸಿ ಕುಳಿತುಕೊಂಡಳು. ಆಗ ಆ ಹೆಂಗುಸನ್ನು ನೋಡಿ ಅಗ್ನಿಭೂತಿಋಷಿಗಳಿಗೆ ಬಹಳ ಪ್ರೀತಿಯುಂಟಾಗಿ ತಮ್ಮ ಗುರುಗಳಾದ ಸೂರ್ಯಮಿತ್ರಾಚಾರ್ಯರೊಡನೆ ಹೀಗೆ ಕೇಳಿದರು - "ಸ್ವಾಮಿಗಳೇ, ಈ ಹೆಂಗುಸಿನ ಮೇಲೆ ನನಗೆ ಅತ್ಯಂತ ಪ್ರೀತಿಯುಂಟಾಗಲು ಕಾರಣವೇನು ?" ಹೀಗೆ ಕೇಳಿದಾಗ ಸೂರ್ಯಮಿತ್ರಾಚಾರ್ಯರು ತಮಗಿದ್ದ ಅವಧಿಜ್ಞಾನ (ತ್ರಿಕಾಲಜ್ಞಾನ)ವನ್ನು ಉಪಯೋಗಿಸಿ ಸಂಗತಿಯನ್ನು ತಿಳಿದು ಹೀಗೆ ಹೇಳಿದರು. "ಈ ಹೆಂಗುಸೆಂಬುದು ನಿಮ್ಮ ತಮ್ಮನಾದ ವಾಯುಭೂತಿಯ ಜೀವವು. ತನ್ನ ಗರ್ವದ ಕಾರಣದಿಂದ ನಮ್ಮನ್ನು ಅಲಕ್ಷ್ಯಮಾಡಿ ಅವಮಾನಿಸಿ ಬಾಯಿಗೆ ಬಂದ ಹೊಲಸಿನ ಬೈಗುಳನ್ನು ಬಯ್ದಿದ್ದನು. ಹಾಗೆ ಬೈದ ಆ ಪಾಪದ ಪರಿಣಾಮವಾಗಿ ಏಳು ದಿವಸದೊಳಗೆ ಔದುಂಬರ ಕುಷ್ಠರೋಗಕ್ಕೆ ಗುರಿಯಾಗಿ ಹುಳುವಾಗಿ ಸತ್ತನು. ಈ ಜೀವವು ಮತ್ತೆ ಕೌಶಂಬಿ ಪಟ್ಟಣದಲ್ಲಿ ಡೊಂಬರ ಮನೆಯಲ್ಲಿ ಹೆಣ್ಣು ಕತ್ತೆಯಾಗಿ ಹುಟ್ಟಿ ದೊಡ್ಡ ಹೊರೆಗಳನ್ನು ಹೊತ್ತುಕೊಂಡು ಹೋಗಿ ಬೆನ್ನಿನಲ್ಲಿ

ಪಿರಿಯ ಪೊಱೆಗಳಂ ಪೊತ್ತು ಪೋಗಿ ಬೆನ್ನೊಳ್ ಕಜುಮೆಯಾಗಿ ನಾಳಿಬರ್ದು ಪುಟಿತು ನಮೆದು ಸತ್ತು ಪೇಪಂದಿಯಾಗಿ ಪುಟ್ಟಿ ಸತ್ತು ಪೆಣ್ಣಾಯಾಗಿ ಪುಟ್ಟಿ ಸತ್ತು ಮತ್ತೀ ಚಂಪಾನಗರದೊಳ್ ಮಾದೆಗರ್ಗೆ ಪ್ರಧಾನನಪ್ಪ ನೀಳನೆಂಬ ಮಾದೆಗಂಗಂ ಕೇಶಿಯೆಂಬ ಮಾದೆಗಿಗಂ ದುರೂಪೆ ದುರ್ಗಂಧೆ ದುಸ್ಸರೆ ಜಾತ್ಯಂಧೆ ಪೊಲೆಯರ್ಗ್ಗೇ ಮಗಳಾಗಿ ಪುಟ್ಟಿ ನೀವು ಪ್ರತಿಬೋಧಿಸೆ ವ್ರತಂಗಳಂ ಕೈಕೊಂಡು ನಿದಾನಂಗೆಯ್ದು ಪಾವು ಕೊಳಿ ಸತ್ತು ಪುರೋಹಿತಂ ಸೋಮಶರ್ಮಂಗಂ ತ್ರಿವೇದಿಗಂ ಪುಟ್ಟಿದ ನಾಗಶ್ರೀಯೆಂಬೊಳ್ ಮಗಳಾದಳದಱಿಂ ನಿಮಗೀ ಕೂಸಿನ ಮೇಗತಿಸ್ನೇಹಮಾದುದೆಂದು ಪೇೞ್ದುದೆಲ್ಲಮಂ ನಾಗಶ್ರೀ ಕೇಳ್ದು ಕಟೆದಯ್ದುಭವಂಗಳುಂ ತನಗೆ ಪ್ರತ್ಯಕ್ಷಮಾದಂತಱಿದು ಭಟಾರರ ಕಾಲ್ಗೞಿಗಿ ಪೊಡೆವಟ್ಟು ಧರ್ಮಮಂ ಬೆಸಗೊಂಡು ಕೇಳ್ದಣುವ್ರತಂ ಮೊದಲಾಗೊಡೆಯ ಶ್ರಾವಕವ್ರತಂಗಳಂ ಸಮ್ಯಕ್ತ್ವಪೂರ್ವಕಂ ಕೈಕೊಂಡು ವಂದಿಸಿ ಮನೆಗೆ ಪೋಪಾಗಳ್ ಭಟ್ಟಾರರ್ ಮಗಳೆ ಎಮ್ಮ ಕೊಟ್ಟ ಬ್ರತಂಗಳಂ ನಿಮ್ಮಮ್ಮಂ ಬಸುದಲ್ಕೇಟ್ಟನಪ್ಪೊಡೆ ಪೆಱವುಟೆವಿಸುಡದಿರೆಮ್ಮಲ್ಲಿಗೆ ವಂದೆಮ್ಮ ಕೊಟ್ಟ ಬ್ರತಂಗಳನೆಮಗೊಪ್ಪಿಸುವುದೆನೆ ಕೇಳ್ದಂತೆಗೆಯ್ವೆನೆಂದು ಮನೆಗೆ ವ್ಗೋದೊಡೊಡನೆಯ ಕೂಸುಗಳ್ ಸೋಮಶರ್ಮಭಟ್ಟಂಗೆ-ನಿಮ್ಮ ಮಗಳ್ ರಿಸಿಯರ ಪಕ್ಕದೆ ಶ್ರಾವಕಬ್ರತಂಗಳಂ ಕೈಕೊಂಡು ಬಂದಳೆನೆ ಭಟ್ಟಂ ಕೇಳ್ದು ಮಗಳೆ ನಾಗಶ್ರೀ ನಾಮುಂ ಪಾರ್ವರೆಮುಂ ಲೋಕಕ್ಕೆಲ್ಲಮಗ್ಗಳಂ ಲೋಕದಿಂದಂ

ಹೆಚ್ಚಾದ ಒಡಕು ಬಿದ್ದು ಹುಳುವಾಗಿ, ಯಾತನೆ ಪಟ್ಟು ಸತ್ತಿತು. ಮುಂದಿನ ಜನ್ಮದಲ್ಲಿ ಹೇಲು ಹಂದಿಯಾಗಿ ಹುಟ್ಟಿ ಸತ್ತು ಮತ್ತೆ ಹೆಣ್ಣುನಾಯಿಯಾಗಿ ಹುಟ್ಟಿ ಸತ್ತು ಆಮೇಲೆ ಈ ಚಂಪಾನಗರದಲ್ಲಿ ಮಾದಿಗಂಗೆ ಮುಖ್ಯನಾದ ನೀಳನೆಂಬ ಮಾದಿಗನಿಗೂ ಕೇಶಿಯೆಂಬ ಮಾದಿಗಿತಿಗೂ ಹುಟ್ಟುಕುರುಡಿ ಹೊಲತಿಯಾಗಿ ಹುಟ್ಟಿತು. ಆಕೆ ಕೆಟ್ಟ ರೂಪಿನವಳೂ ದುರ್ಗಂಧವುಳ್ಳವಳೂ ಕೆಟ್ಟ ಸ್ವರವುಳ್ಳವಳೂ ಆಗಿದ್ದಳು. ನೀವು ಉಪದೇಶಿಸಿದ ವ್ರತಗಳನ್ನು ಸ್ವೀಕರಿಸಿ, ಮುಂದಿನ ಜನ್ಮದಲ್ಲಿ ಸೋಮಶರ್ಮನ ಮಗಳಾಗಬೇಕೆಂದು ನಿಶ್ಚಯಿಸಿದ್ದು ಹಾವು ಕಚ್ಚಿ ಸತ್ತು ಪುರೋಹಿತ ಸೋಮಶರ್ಮನಿಗೂ ಅವನ ಮಡತಿ ತ್ರಿವೇದಿಗೂ ನಾಗಶ್ರೀ ಎಂಬ ಹೆಸರಿನ ಮಗಳಾದಳು. ಆದುದರಿಂದ ನಿಮಗೆ ಈ ಕನ್ಯೆಯ ಮೇಲೆ ಹೆಚ್ಚಿನ ಪ್ರೀತಿಯುಂಟಾಯಿತು". ಹೀಗೆ ಸೂರ್ಯಮಿತ್ರಾಚಾರ್ಯರು ಹೇಳಿದ್ದೆಲ್ಲವನ್ನೂ ನಾಗಶ್ರೀ ಕೇಳಿ, ಹಿಂದಿನ ಐದು ಜನ್ಮಗಳೂ ತನಗೆ ಕಣ್ಣೆದುರಿನಲ್ಲಿ ಕಂಡಂತೆ ತಿಳಿದು ಆಚಾರ್ಯರ ಪಾದಕ್ಕೆ ಸಾಷ್ಟಾಂಗ ವಂದಿಸಿ ಧರ್ಮವನ್ನು ಉಪದೇಶಿಸಬೇಕೆಂದು ಪ್ರಾರ್ಥಿಸಿ ಕೇಳಿ ತಿಳಿದು, ಅಣುವ್ರತ ಮೊದಲಾಗುಳ್ಳ ಶ್ರಾವಕ ವ್ರತಗಳನ್ನು ಧರ್ಮದ ಕುರಿತು ಸರಿಯಾದ ತಿಳಿವಳಿಕೆಯೊಂದಿಗೆ ಕೈಕೊಂಡು, ವಂದಿಸಿ, ತನ್ನ ಮನೆಗೆ ಹೊರಟಳು. ಆಗ ಸೂರ್ಯಮಿತ್ರಾಚಾರ್ಯರು - "ಮಗಳೇ, ನಾವು ನಿನಗೆ ಉಪದೇಶಿಸಿ ಕೊಟ್ಟ ವ್ರತಗಳನ್ನು ನಿನ್ನ ತಂದೆ ಬಿಟ್ಟುಬಿಡೆಂದು ಹೇಳಿದವನಾದರೆ ಅವನ್ನು ಬೇರೆ ಕಡೆ ಬಿಟ್ಟು ಬಿಡದಿರು. ನಮ್ಮ ಬಳಿಗೆ ಬಂದು, ನಾವು ಕೊಟ್ಟ ವ್ರತಗಳನ್ನು ನಮಗೇ ಒಪ್ಪಿಸಬೇಕು". ಎಂದು ಹೇಳಲು 'ಹಾಗೆಯೇ ಮಾಡುವೆನು' ಎಂದು ಆಕೆ ಮನೆಗೆ ತೆರಳಿದಳು. ಆಕೆಯ ಜೊತೆಯಲ್ಲಿದ್ದ ಹುಡುಗಿಯರು ಸೋಮಶರ್ಮಭಟ್ಟನಿಗೆ "ನಿಮ್ಮ ಮಗಳು ಋಷಿಗಳ ಬಳಿಯಲ್ಲಿ ಶ್ರಾವಕ ವ್ರತಗಳನ್ನು ಸ್ವೀಕರಿಸಿಕೊಂಡು ಬಂದಿದ್ದಾಳೆ" ಎಂದರು. ಆಗ ಭಟ್ಟನು ಕೇಳಿ "ಮಗಳೆ ನಾಗಶ್ರೀ, ನಾವು ಬ್ರಾಹ್ಮಣರಾಗಿದ್ದೇವೆ ; ಲೋಕಕ್ಕೆಲ್ಲ ಶ್ರೇಷ್ಠರು. ಲೋಕದ

ಪೂಜಿತರೆಮುಮೆಮ್ಮಿಂದಗ್ಗಳಂ ಪೆಱರಿಲ್ಲದಱಿಂದಂ ಸವಣರ ಧರ್ಮಮಂ ನಮಗೆ ಕೊಳಲಾಗ ಬಿಸುಡು ಎನೆ ನಾಗಶ್ರೀಯೆಂದಳ್ - ಅಮ್ಮಾ ವ್ರತಂಗಳಂ ಕೊಟ್ಟ ರಿಸಿಯರ್ಗ್ಗೆ ಪೋಗಿಯೊಪ್ಪಿಸಿ ಬಿಸುಬ್ಪಿನೆನೆಯಂತೆಗೆಯ್ಂದು ಮಗಳ ಕೈಯಂ ಪಿಡಿದಿರ್ವರುಂ ರಿಸಿಯರಲ್ಲಿಗೆ ವ್ರತಂಗಳನೊಪ್ಪಿಸಲ್ಕೆಂದು ಪೋಪನ್ನೆಗಾವೆಡೆಯೊಳ್ ಬಟ್ಟೆಯೊಳೊರ್ವನಂ ಪೆದಂಗೆಯ್ದುಡಿಯೆ ಕಟ್ಟಯೊಂದೆವಜ್ಜಿಗುಟ್ಟ ಪೊಬಲ ಜನಂಗಳ್ ಮುಸುಜೆಕೊಂಡು ನೋಡುತ್ತಮೊಡವರೆ ನೊಂಕುತ್ತುಂ ಕೊಲಲುಯ್ವ ಪುರುಷನಂ ಯವ್ವನನಂ ತೇಜಸ್ವಿಯಂ ಕಂದು ನಾಗಶ್ರೀ ತಮ್ಮಮ್ಮನಂ ಬೆಸಗೊಳ್ಗುಮೀತನನೇಕೆ ಕೊಲಲುಯ್ವುಪ್ಪೊರಮ್ಮಾ ಬೆಸಗೊಳ್ಳಿಮೆನೆ ಸೋಮಶರ್ಮಂ ಕೊಲಲುಯ್ವ ತಳಾಜನಂ ಬೆಸಗೊಂಡು ತದ್ವೃತ್ತಾಂತಮೆಲ್ಲಮನಱಿದು ನಾಗಶ್ರೀಗಿಂತೆಂದು ಪೇಟ್ಟುಂ ಈ ಪೊಬಲ ಪ್ರಧಾನನಪ್ಪ ಶ್ರೇಷ್ಠಿ ಇಂದ್ರದತ್ತನೆಂಬೊಂ ಪದಿನಾಱುಂ ಕೋಟಿ ಕಸವರಮನೊಡೆಯೊನಾತನ ಮಗನೀತಂ ವರಸೇನನೆಂಬೊಂ ಜೂದಾಡಿಯಕ್ಷಧೂರ್ತನೆಂಬೊಂಗೆ ಸಾಸಿರ ದೀನಾರಮಂ ಸೋಲ್ತು ಸೋಲಮಂ ಕುಡಲಾಱದೆ ಅರಸನಾಜ್ಞೆಯಂ ಮಿಕ್ಕು ಪೋಪನ್ ಮುಂದಡ್ಡಮಾಗಿರ್ದೊನನಸಪರಾಧಿಯನಕ್ಷಧೂರ್ತನಂ ಕೊಂದನದಱಿಂದರಸನೀತನಂ ಕೊಲಲ್ವೇಱ್ಪನದಱಿಂ ಕೊಲಲುಯ್ವಪರ್ ಮಗಳೆ ಎಂದು ಪೇಟ್ಪೊಡೆ ನಾಗಶ್ರೀಯೆಂದಳ್-ಅಂತಪ್ಪೊಡಮಾನುಂ ರಿಸಿಯರ ಪಕ್ಕದೆ ಬ್ರತಮುಂ ಸಾವಿಂಗಂಜಿ ಜೀವಂಗಳಂ ಕೊಲ್ಲೆನೆಂಬ ಬ್ರತಮುಂ ಕೊಂಡೆನಾ

ಜನರಿಂದ ಪೂಜಿಸಲ್ಪಡುವವರಾಗಿದ್ದೇವೆ. ನಮಗಿಂತ ಶ್ರೇಷ್ಠರು ಯಾರೂ ಇಲ್ಲ. ಆದುದರಿಂದ ಜೈನ ಸನ್ಯಾಸಿಗಳ ಧರ್ಮವನ್ನು ನಾವು ಸ್ವೀಕರಿಸಲಾಗದು, ಅದನ್ನು ಬಿಟ್ಟುಬಿಡು" ಎಂದನು. ಆಗ ನಾಗಶ್ರೀ ಹೀಗೆಂದಳು - "ಅಪ್ಪಾ, ವ್ರತಗಳನ್ನು ನನಗೆ ಕೊಟ್ಟಿರುವ ಋಷಿಗಳಿಗೇ ಅವನ್ನು ಒಪ್ಪಿಸಿ ಬಿಟ್ಟು ಬರುವೆನು" - ಎನ್ನಲು "ಹಾಗೆಯೇ ಮಾಡು" ಎಂದು ಹೇಳಿ ಅವನು ಮಗಳ ಕೈಯನ್ನು ಹಿಡಿದುಕೊಂಡು ಇಬ್ಬರೂ ಋಷಿಗಳಲ್ಲಿಗೆ ವ್ರತಗಳನ್ನು ಹಿಂದಿರುಗಿಸುವುದಕ್ಕಾಗಿ ಹೋಗುತ್ತಿದ್ದರು. ಆಗ ಆ ಕಡೆಯಲ್ಲಿಯೇ ದಾರಿಯಲ್ಲಿ ಒಬ್ಬ ತೇಜೋವಂತನಾದ ಯುವಕನನ್ನು ಕೈಮುರಿವಂತೆ ಹಿಂದಕ್ಕೆ ಬಿಗಿದು ಕಟ್ಟಿ, ತಮಟೆಯೊಂದನ್ನು ಬಾರಿಸುತ್ತ, ತಳ್ಳುತ್ತ ಕೊಲ್ಲಲು ಒಯ್ಯುತ್ತಿದ್ದರು. ಆ ಪಟ್ಟಣದ ಜನರು ಮುತ್ತಿಕೊಂಡು ನೋಡುತ್ತ ಒಟ್ಟಿಗೆ ಬರುತ್ತಿದ್ದರು.. ಇದನ್ನು ನಾಗಶ್ರೀ ಕಂಡು ತನ್ನ ತಂದೆಯೊಡನೆ ಹೀಗೆ ಕೇಳಿದಳು - "ಅಪ್ಪಾ, ಈತನನ್ನು ಯಾಕೆ ಕೊಲ್ಲಲು ಕೊಂಡೊಯ್ಯುತ್ತಿದ್ದಾರೆ, ಕೇಳಿ" ಆಗ ಸೋಮಶರ್ಮನು ಕೊಲ್ಲುವುದಕ್ಕೆ ಒಯ್ಯುತ್ತಿದ್ದ ತಳಾರನನ್ನು ಕೇಳಿ ಆ ಸಂಗತಿಯೆಲ್ಲವನ್ನೂ ತಿಳಿದು, ನಾಗಶ್ರೀಗೆ ಹೀಗೆಂದನು - ಈ ಪಟ್ಟಣದಲ್ಲಿ ಇಂದ್ರದತ್ತನೆಂಬ ಶ್ರೇಷ್ಠನಾದ ಸೆಟ್ಟಿ ಹದಿನಾರು ಕೋಟಿ ಹೊನ್ನುಳ್ಳವನು. ಆತನ ಮಗನಾದ ವರಸೇನನೆಂಬವನಿವನು. ಇವನು ಅಕ್ಷಧೂರ್ತನೆಂಬವನೊಡನೆ ಜೂಜಾಡಿ ಸಾವಿರ ದೀನಾರ (ದೀನಾರ ಎಂಬ ನಾಣ್ಯ)ಗಳನ್ನು ಸೋತು, ಈ ಸೋಲವನ್ನು ಕೊಡಲಾರದೆ ರಾಜಾಜ್ಞೆಯನ್ನು ಮೀರಿ ಹೋಗುತ್ತಿದ್ದನು. ತನಗೆ ತಡೆಯಾಗಿ ಇದ್ದಂತಹ ನಿರಪರಾಧಿಯಾದ ಅಕ್ಷಧೂರ್ತನನ್ನು ಕೊಂದನು. ಆದುದರಿಂದ ರಾಜನು ಇವನಿಗೆ ಮರಣದಂಡನೆಯನ್ನು ವಿಧಿಸಿದನು. ಆದುದರಿಂದ ಇವನನ್ನು ಕೊಲ್ಲಲು ಕೊಂಡು ಹೋಗುತ್ತಿದ್ದಾರೆ ಮಗಳೇ!" ಎಂದು ಹೇಳಿದನು. ಆಗ ನಾಗಶ್ರೀ ಹೇಳಿದಳು - "ಹಾಗಾದರೆ ನಾನೂ ಋಷಿಗಳ ಬಳಿಯಲ್ಲಿ ವ್ರತವನ್ನು ಕೈಗೊಂಡಿದ್ದೇನೆ - ಸಾವಿಗೆ ಹೆದರಿ ಜೀವಿಗಳನ್ನು

ಬ್ರತಮನವರ್ಗೊಪ್ಪಿಸಿದೊಡಾನುಮವೋಘಂ ಜೀವಂಗಳಂ ಕೊಲಲ್ವೇಬ್ಕುಮಾ ಜೀವಂಗಳಂ ಕೊಂದೊಡೆನ್ನುಮನೀತನಂತೆ ಪೆಡಂಗಯ್ದುಡಿಯಿ ಕಟ್ಟಯೊಂದೆವಱಿಗುಟ್ಟಿ ನೀಮೆಲ್ಲ ನಂಟರ್ ನೋಡೆ ಶ್ಮಶಾನಕ್ಕುಯ್ದು ಸೂಲದೊಳಿಕ್ಕಿ ಕೊಲ್ವರೆನೆ ಅಂತಪ್ಪೊಡೆ ಈಯೊಂದು ಕೊಲ್ಲದ ವ್ರತಂ ನಿನಗಿರ್ಕೆ ಮಗಳೆ ಉಳಿದ ಬ್ರತಂಗಳೆಲ್ಲಮಂ ಪೋಗಿಯಾ ಕ್ಷಪಣಕಂಗೊಪ್ಪಿಸುವಮೆಂದು ಕಱಿದಂತರಮಂ ಪೋಪನ್ನೆಗಂ ಮತ್ತೊರ್ವನಂ ಮುನ್ನಿನಂತೆ ಕೊಲಲ್ಕೊಂದು ಪೋಪ ಪುರುಷನಂ ಕಂಡು ನಾಗಶ್ರೀ ತಮ್ಮಮ್ಮನಂ ಬಿಸಗೊಳಲ್ವೇಬ್ಕೊಡಾತನುಂ ಬಿಸಗೊಂಡೆಲ್ಲಮನಱಿದು ಮಗಳ್ಗಿಂತೆಂದು ಪೇಬ್ಗುಂ ಕೇಳ್ ಮಗಳೆ ವೈನಯಿಕನೆಂಬೊನೊರ್ವ ಪುರುಷಂ ಕನ್ನೆಯ ಬಂಟನ ವೃದ್ಧಸ್ತ್ರೀಯ ಮೂವರ ಚಿತ್ರಕಥೆಗಳಂ ಪಟದೊಳ್ ತೋಱಿ ಪೇಬ್ದು ಲೋಗರಂ ಡಂಬಿಸಿ ಮಾಱುಗೊಳ್ವ ಬತ್ತಮಂ ಕಳ್ದೊನಾ ಮೂಱುಂ ಕಥೆಗಳೊಳಗೆ ಕನ್ನೆಯ ಕಥೆಯಂ ಪೇಬ್ದಿನದೆಂತೆಂದೊಡೆ-ಕೌಶಂಬಿಯೆಂಬ ಪೊಟಲೊಳ್ ಸುಮಿತ್ರನೆಂಬೊಂ ಶ್ರೇಷ್ಠಿ ಕೋಟ ಕಸವರಮನೊಡೆಯೊನಾತನ ಮಗಂ ವಸುಮಿತ್ರನೆಂ ಬೊಂಗೆ ಸರ್ಪದಷ್ಟಮಾದೊಡೆ ಸತ್ತನೆಂದು ಶ್ಮಶಾನಕ್ಕೆ ಕೊಂಡು ಪೋಗಿ ಇಟಿಪಿದೊಡಲ್ಲಿ ಗರುಡನಾಭಿಯೆಂಬ ಮಂತ್ರವಾದಿ ಪೋಗಿ ನೋಡಿ ಈತನನಾಂ ನಾಳೆಯಭಿಮಂತ್ರಿಸಿ ಬಾಟಿಸುವೆನಂಜದಿರಿಮಿಲ್ಲಿಯೆ ಇರುಳೀ ದಾಷ್ಟಿಕಂಗೆ ಜಾವಮಿರಿಮೆಂದು ಪೇಬ್ದುಪೋದಂ

ಕೊಲ್ಲುವುದಿಲ್ಲವೆಂಬ ಅಹಿಂಸಾವ್ರತವನ್ನು ಸ್ವೀಕರಿಸಿದ್ದೇನೆ. ಆ ವ್ರತವನ್ನು ಅವರಿಗೇ ಒಪ್ಪಿಸಿದೆನಾದರೆ, ನಾನೂ ಬಿಡದೆಯೆ ಜೀವಿಗಳನ್ನು ಕೊಲ್ಲಬೇಕಾಗುತ್ತದೆ. ಆ ಜೀವಿಗಳನ್ನು ಕೊಂದರೆ ನನ್ನನ್ನೂ ಇವನಂತೆಯೆ ಕೈಗಳನ್ನು ಹೆಡಮುರಿ ಕಟ್ಟಿ ತಮಟೆಯನ್ನು ಹೊಡೆಯುತ್ತ ನಂಟರಾದ ನೀವೆಲ್ಲ ನೋಡುತ್ತಿರುವಂತೆಯೇ ಮಸಣಕ್ಕೆ ಕೊಂಡುಹೋಗಿ ಶೂಲಕ್ಕೆ ಹಾಕಿ ಕೊಂದಾರು". ಹೀಗೆ ನಾಗಶ್ರೀ ಹೇಳಿದಾಗ ಅವಳ ತಂದೆ "ಮಗಳೆ, ಹಾಗಾದರೆ ಈಯೊಂದು ಅಹಿಂಸಾವ್ರತ ನಿನಗಿರಲಿ. ಉಳಿದ ವ್ರತಗಳೆಲ್ಲವನ್ನೂ ನಾವು ಹೋಗಿ ಆ ಜೈನಸಂನ್ಯಾಸಿಗೆ ಕೊಟ್ಟುಬಿಡೋಣ" ಎಂದು ನುಡಿದು, ಅವರು ಸ್ವಲ್ಪ ದೂರ ಹೋಗುವಷ್ಟರಲ್ಲಿ ಮತ್ತೊಬ್ಬ ಗಂಡಸನ್ನು ಹಿಂದಿನಂತೆಯೇ ಕೊಲ್ಲಲು ಕೊಂಡು ಹೋಗುವುದನ್ನು ನಾಗಶ್ರೀ ಕಂಡಳು. ಕಾರಣವನ್ನು ತಿಳಿಯುವಂತೆ ಅವಳು ತಂದೆಗೆ ಹೇಳಲು, ಅವನು ಕೇಳಿ ಎಲ್ಲವನ್ನೂ ತಿಳಿದು ಮಗಳಿಗೆ ಹೀಗೆಂದನು- "ಮಗಳೇ ಕೇಳು. ವೈನಯಿಕನೆಂಬ ಒಬ್ಬ ಮನುಷ್ಯನು ಒಂದು ವಸ್ತ್ರದಲ್ಲಿ ಒರ್ವ ಕನ್ಯೆಯ, ಒರ್ವ ಸೇವಕನ ಒರ್ವ ಮುದುಕಿಯ ಹೀಗೆ ಮೂವರ ಚಿತ್ರಕಥೆಗಳನ್ನು ತೋರಿಸಿ, ಹೇಳಿ ಜನರನ್ನು ಮೋಸಮಾಡಿ ಬೆಲೆಗೆ ಕೊಳ್ಳುವ ಬತ್ತವನ್ನು ಕದಿಯುವನು. ಆ ಮೂರು ಕಥೆಗಳಲ್ಲಿ ಕನ್ಯೆಯ ಕಥೆಯನ್ನು ಹೇಳುವೆನು. ಅದು ಹೇಗೆಂದರೆ - ಕೌಶಂಬಿ ಎಂಬ ಪಟ್ಟಣದಲ್ಲಿ ಕೋಟಿ ಹೊನ್ನುಳ್ಳವನಾದ ಸುಮಿತ್ರನೆಂಬ ಸೆಟ್ಟಿಯಿದ್ದನು. ಅವನ ಮಗನಾದ ವಸುಮಿತ್ರನಿಗೆ ಹಾವು ಕಚ್ಚಿತು. ಅವನು ಸತ್ತನೆಂದು ಮಸಣಕ್ಕೆ ಒಯ್ದು ಇಳಿಸಿದಾಗ, ಅಲ್ಲಿಗೆ ಗರುಡನಾಭಿ ಎಂಬ ಮಂತ್ರವಾದಿ ಬಂದು ನೋಡಿ "ನಾನು ಇವನಿಗೆ ನಾಳೆ ಮಂತ್ರಪ್ರಯೋಗ ಮಾಡಿ ಬದುಕಿಸುವೆನು. ನೀವು ಹೆದರಬೇಡಿ. ಕಚ್ಚಿಸಿಕೊಂಡವನಿಗೆ ನೀವು ಇಲ್ಲಿಯೇ ರಾತ್ರಿ ಕಾವಲಾಗಿ ಇರಿ" ಎಂದು ಹೇಳಿ ಹೋದನು. ಸುಮಿತ್ರ ಸೆಟ್ಟಿ ನಾಲ್ಕು ಮಂದಿ ಒಳ್ಳೆಯವರಾದ

ಸುಮಿತ್ರಸೆಟ್ಟಿಯುಂ ನಾಲ್ವರೊಳ್ಳಿದರಪ್ಪ ಸುಭಟರಂ ಜಾವಮಿರಿಸಿ ಪೋದನಾ ನಾಲ್ವರುಂ ಜಾವಮಿರ್ದ ಭಟರೊಳಗೊರ್ವನಿರುಳ್ ಕುಜೆಯಂ ಕಳ್ದುತರಲ್ ಪೋದಂ ಮತ್ತೊರ್ವಂ ಪುಳ್ಳಿಯಂ ತರಲ್‌ಪೋದಂ ಮತ್ತೊರ್ವಂ ಕಚ್ಚಂ ತರಲ್‌ಪೋದಂ ಮತ್ತೊರ್ವಂ ದಾಪ್ಪಿಕನಾ ಪಕ್ಕದೆ ಕಾಪಿರ್ದನಂತಾ ನಾಲ್ವರುಂ ಕುಜೆಯಂ ಕೊಂದು ಸುಟ್ಟು ತಿಂದರೆಂಬ ಕಥೆಯುಮಂ ಪೊಬ್ಬಳೆನೆ ನೇಸರ್ಮೂಡೆ ಗರುಡನಾಭಿಯೆಂಬ ಮಂತ್ರವಾದಿ ಬಂದು ಪಜ್ಜೆಗುಟ್ಟಿ ಮಂತ್ರಿಸಿ ದಾಪ್ಪಿಕನನೆತ್ತಿದಂ ಸುಮಿತ್ರಸೆಟ್ಟಿಯುಮಿರುಳ್ ಜಾವಮಿರ್ದ ನಾಲ್ವರ್ ಸುಭಟರ್ಗೋರೊರ್ವರ್ಗೆ ಸಾಸಿರ ದೀನಾರದ ಪೊಟ್ಟಳಿಗೆಗಳಂ ಪ್ರಾಸಾದದ ಮೇಗಿರ್ದು ಜನಸಂಕೀರ್ಣದ ನಡುವೆ ನಾಲ್ಕು ಪೊಟ್ಟಳಿಗೆಯನೀಡಾಡಿದೊಡಾ ಪೊಟ್ಟಳಿಗೆಯಂ ಕೊಂಡು ಕೊಳ್ಳಿನೆಂದು ಪುಸಿದೊಡಾ ಶ್ರೇಷ್ಠಿಯುಮರಸರ್ಗೆ ಪೋಗಿ ಬನ್ನಪಂಗೆಯ್ದನ್ ಎನ್ನ ಸಾಸಿರ ದೀನಾರದ ಪೊಟ್ಟಳಿಗೆ ಕೆಟ್ಟುದದಂ ದೇವರಾರೈವುದೆಂದು ಪೇಳ್ದೊಡೆ ತಳಾಜಿನಂ ಕರೆದು ಬೇಗಂ ಕಳ್ಳನನಾರಯ್ಯಲ್ಲದಾಗಳ್ ಕಳ್ಗಂಗೆ ತಕ್ಕ ನಿಗ್ರಹಮಂ ನಿನಗೆ ಮಾಡ್ಪೆನೆಂದರಸನಾತನಂ ಬಗ್ಗಿಸಿ ನುಡಿದೊಡಾತನುಮಱಿಸಿ ಕಳ್ಳನನಾರಯ್ಯಲಾಱದೆ ನಾಲ್ವರ್ ಸುಭಟರುಮಂ ಮನೆಗೊಡಗೊಂಡು ಬಂದು ಭೀತನಾಗಿ ಬನ್ನನೆ ವೊಗಂ ಬಾಡಿ ಚಿಂತಿಸುತಿರ್ದೊಡಾತನ ಮಗಳ್ ಸುಮತಿಯೆಂಬಳಿಂತೇಕೆ ಬನ್ನನಾಗಿ ಚಿಂತಿಸುತ್ತಿರ್ದ್ದೆಯಮ್ಮಾ ಎಂದು ತಂದೆಯಂ ಬೆಸಗೊಂಡೊಡಾತನುಂ ತದ್ವೃತ್ತಾಂತಮನೆಲ್ಲಮಂ

ಯೋಧರನ್ನು ಕಾವಲಿರಿಸಿ ಹೋದನು.ಕಾವಲಾಗಿದ್ದ ಆ ನಾಲ್ಕುಮಂದಿ ವೀರರಲ್ಲಿ ಒಬ್ಬನು ರಾತ್ರಿಯಲ್ಲಿ ಕುರಿಯನ್ನು ಕದ್ದು ತರಲು ಹೋದನು. ಮತ್ತೊಬ್ಬನು ಕಟ್ಟಿಗೆ ತರಲು ಹೋದನು. ಮತ್ತೊಬ್ಬನು ಬೆಂಕಿ ತರಲು ಹೋದನು, ಇನ್ನೊಬ್ಬನು ಹಾವು ಕಚ್ಚಿದವನ ಬಳಿಯಲ್ಲಿ ಕಾವಲಾಗಿದ್ದನು. ಅಂತು ಆ ನಾಲ್ಕು ಮಂದಿ ಆ ಕುರಿಯನ್ನು ಸುಟ್ಟು ತಿಂದರು. ಹೊತ್ತಾರೆ ವೇಳೆಗೆ ಸೂರ್ಯೋದಯವಾದಾಗ ಗರುಡನಾಭಿಯೆಂಬ ಮಂತ್ರವಾದಿ ಬಂದು ಡೋಲು ಹೊಡೆದು, ಮಂತ್ರಪ್ರಯೋಗ ಮಾಡಿ ವಿಷವೇರಿದವನನ್ನು ಎಬ್ಬಿಸಿದನು. ಸುಮಿತ್ರ ಸೆಟ್ಟಿ ರಾತ್ರಿ ಕಾವಲಾಗಿದ್ದ ನಾಲ್ಕು ಮಂದಿ ಯೋಧರಿಗೆ ಒಬ್ಬೊಬ್ಬರಿಗೆ ಸಾವಿರ ದೀನಾರ ನಾಣ್ಯಗಳ ಪೊಟ್ಟಣಗಳನ್ನು ಕೊಡಲು ನಿರ್ಣಯಿಸಿದನು. ತಾನು ಉಪ್ಪರಿಗೆಯ ಮೇಲೆ ಇದ್ದುಕೊಂಡು ಜನಸಂದಣಿಯ ನಡುವೆ ಅವನ್ನು ಬಿಸಾಡಿದನು. ಆ ಕಟ್ಟಾಳುಗಳಲ್ಲಿ ಒಬ್ಬನು ಪೊಟ್ಟಣವನ್ನು ತೆಗೆದುಕೊಂಡಿದ್ದರೂ ತನಗೆ ಸಿಕ್ಕಿಲ್ಲವೆಂದು ಸುಳ್ಳಾಡಿದನು. ಆಗ ಸುಮಿತ್ರ ಸೆಟ್ಟಿ ರಾಜನಿಗೆ ವಿಜ್ಞಾಪನೆ ಮಾಡಿದನು - "ನನ್ನ ಸಾವಿರ ದೀನಾರಗಳ ಕಟ್ಟು ಕಳೆದುಹೋಗಿದೆ. ಅದನ್ನು ಪ್ರಭುಗಳು ವಿಚಾರಣೆ ಮಾಡಬೇಕು" ಎಂದನು. ಆಗ ರಾಜನು ತಳಾರ (ಪಟ್ಟಣದ ಕಾವಲುಗಾರ) ನನ್ನು ಕರೆದು - "ಬೇಗನೆ ಕಳ್ಳನನ್ನು ಪತ್ತೆ ಹಚ್ಚು, ನಿನ್ನಿಂದ ಆಗದಿದ್ದರೆ ಕಳ್ಳನಿಗೆ ಮಾಡುವ ಶಿಕ್ಷೆಯನ್ನು ನಿನಗೆ ಮಾಡುವೆನು" ಎಂದು ಗದರಿಸಿ ಆಜ್ಞಾಪಿಸಿದನು. ತಳಾರನು ಕಳ್ಳನನ್ನು ಹುಡುಕಿ ಹಿಡಿಯಲಾರದೆ ಆ ನಾಲ್ಕು ಮಂದಿ ಸುಭಟರನ್ನೂ ಮನೆಗೆ ಕರೆದುಕೊಂಡು ಬಂದನು. ಬೆದರಿದವನಾಗಿ ಶೂನ್ಯವಾದ ಮೋರೆಯುಳ್ಳವನಾಗಿ, ಬಾಡಿಹೋಗಿ, ಚಿಂತಿಸುತ್ತಿದ್ದನು. ಆಗ ಅವನ ಮಗಳು ಸುಮತಿ ಎಂಬವಳು - "ಅಪ್ಪಾ, ನೀನು ಹೀಗೇಕೆ ದಿಕ್ಕುತೋಚದೆ ಚಿಂತಿಸುತ್ತಿರುವೆ?" ಎಂದು ತಂದೆಯೊಡನೆ ಕೇಳಿದಳು. ಆಗ ಸುಮಿತ್ರನು ಆ ಸಂಗತಿಯೆಲ್ಲವನ್ನೂ ಮಗಳಿಗೆ ತಿಳಿಯುವ ಹಾಗೆ ಹೇಳಿದನು. ಅದಕ್ಕೆ ಆಕೆ "ಹೆದರಬೇಡಿ, ನಾನು ಇದೆಲ್ಲವನ್ನೂ ವಿಚಾರಿಸಿ ಕಳ್ಳನನ್ನೂ

ಮಗಳ್ಗಜೆಯೆ ಪೇಟ್ಪೊಡಂಜಲ್ವೇಡಿದನೆಲ್ಲಮನಾನಾರಯ್ದು ಕಳ್ಳನುಮಂ ಕಸವರಮುಮಂ ನಾಳೆ ನಿಮಗೊಪ್ಪಿಸುವೆಂ ನೀಮುಂ ನಿಶ್ಚಿಂತಮಿರಿಮೆಂದು ತಂದೆಯನೇಕಾಂತದೊಳ್ ನುಡಿದು ತಂದೆಯಂ ಸಂತವಿಸಿದಾಗಳ್ ಸುಮತಿಯುಮಿರುಳ್ ಕಳ್ಳರಂ ಪರೀಕ್ಷಿಸಲ್ವೇಡಿಯಾ ನಾಲ್ವರುಂ ಸುಭಟರ ಪಕ್ಕದಿರ್ದೇನೆಂದವರ್ಗೆ ಕಥೆಯಂ ಪೇಟ್ದಂ - ಪಾಟಳೀಪುತ್ರಮೆಂಬ ಪುರಮಲ್ಲಿ ಶ್ರೇಷ್ಠಿ ಸುದತ್ತನೆಂಬೊನಾತನ ಮಗಳ್ ಸುದಾಮೆಯೆಂಬ ಕನ್ನೆಯೊಂದು ದಿವಸಂ ಗಂಗೆಯಂ ಮೀಯಲ್ಪೋಗಿ ಮೀವಲ್ಲಿ ನೆಗಟ್ ಪಿಡಿದೊಡಾದವಮಾನುವುಂಜಿ ತಡಿಯೊಳಿರ್ದ ಧನದತ್ತನೆಂಬೊಂ ಸೋದರಮಯ್ದುನನಂ ಕಂಡೆನ್ನಂ ಬೇಗಂ ಬಿಡಿಸೆಂದೊಡಾತನಿಂತೆಂದನೆನ್ನ ಬೇಡಿದುದನೀವೊಡೆ ನಿನ್ನಂ ಕಾವೆನೆಂದೊಡಾಕೆಯುಮೀವೆನೆಂದು ಪೂಣ್ದೊಡೆ ಬೇಗಂ ನೀರಂ ಪೊಕ್ಕು ನೆಗಟಂ ಬಿಡಿಸಿದ ಬಳಿಕ್ಕಂ ಪೇಟೀನಂ ಬೇಡುವಯ್ ನಿನ್ನ ಬೇಡಿದುದನೆಲ್ಲಮನೀವೆನೆಂದು ಕನ್ನೆ ನುಡಿದೊಡಾತನಿಂತೆಂದಂ - ನಿನ್ನ ಮದುವೆಯಂದು ಪ್ರಥಮ ದಿವಸದ ಪಸದನಮನೆನಗೆ ವಂದು ತೋಱಲ್ವೇಡುಮೆಂದು ಬೇಡಿದೊಡಾಕೆಯುಮಂತೆಗೆಯ್ವೆನೆಂದು ಪೂಣ್ದಳಿಂತುಕಾಲಂ ಸಲೆ ಮತ್ತಾ ಕನ್ನೆಗೆ ಯೌವನಂ ನೆಱಿದಂದು ಮದುವೆಯಾದೊಡೆ ತನ್ನ ಪೂರ್ವೈಯಂ ನೆನೆದು ಸರ್ವಾಲಂಕಾರಭೂಷಿತೆಯಾಗಿಯಾದಮಾನುಂ ಕೈಗೆಯ್ದು ಚಿಲ್ವೆಯಾಗಿ ನಟ್ಟನಡುವಿರುಳ್ ಮನೆಯಿಂದಂ ಪೊಱಮಟ್ಟು ಮೈದುನನಿರ್ದಾಪಣಕ್ಕೆ ಪೋಪನ್ನೆಗವೆಡೆಯೊಳ್ ಕಳ್ಳನೊರ್ವಂ ಕಂಡು ನಿನ್ನ ತೊಟ್ಟಾಭರಣಮೆಲ್ಲಮಂ ಕೊಟ್ಟು ಪೋಗಲ್ಲದಾಂ ಪೋಗಲೀಯೆನೆಂದೊಡೀಗಳೆ ಪೋಗಿ ಬಂದು ನಿನಗೆನ್ನ ತುಡುಗೆಯೆಲ್ಲಮಂ ಕುಡುವೆನನ್ನೆಗಮಿಲ್ಲಿ

ಹಣವನ್ನೂ ನಾಳೆ ನಿಮಗೆ ಒಪ್ಪಿಸುವೆನು. ನೀವು ಚಿಂತೆಯನ್ನು ಬಿಟ್ಟುಬಿಡಿ" ಎಂದು ತಂದೆಗೆ ರಹಸ್ಯವಾಗಿ ತಿಳಿಸಿ, ತಂದೆಯನ್ನು ಸಮಾಧಾನಪಡಿಸಿದಳು. ಸುಮತಿ ರಾತ್ರಿಯಲ್ಲಿ ಕಳ್ಳನು ಯಾರೆಂದು ಪರೀಕ್ಷಿಸುವುದಕ್ಕಾಗಿ ಆ ನಾಲ್ಕು ಮಂದಿ ಸುಭಟರ ಬಳಿಯಲ್ಲಿದ್ದು ಅವರಿಗೆ ಏನೆಂದು ಕತೆ ಹೇಳಿದಳೆಂದರೆ - ಪಾಟಳೀಪುತ್ರವೆಂಬ ಪಟ್ಟಣ. ಅಲ್ಲಿ ಸುದತ್ತನೆಂಬ ಸೆಟ್ಟಿಯಿದ್ದನು. ಅವನ ಮಗಳು ಸುದಾಮೆ - ಇನ್ನೂ ಮದುವೆಯಾಗದವಳು. ಆಕೆ ಒಂದು ದಿವಸ ಗಂಗಾನದಿಯಲ್ಲಿ ಸ್ನಾನ ಮಾಡಲು ಹೋಗಿ, ಸ್ನಾನ ಮಾಡುತ್ತಿದ್ದಾಗ ಮೊಸಳೆ ಹಿಡಿಯಿತು. ಬಹಳ ಭಯಪಟ್ಟು ಆಕೆ ದಡದಲ್ಲಿದ್ದ ಸೋದರ ಮೈದುನನಾದ ಧನದತ್ತನೆಂಬವನನ್ನು ಕಂಡು "ನನ್ನನ್ನು ಬೇಗ ಬಿಡಿಸು" ಎಂದಳು. ಆಗ ಆತನು - "ನಾನು ಕೇಳಿದುದನ್ನು ನೀನು ಕೊಡುವೆಯಾದರೆ ನಿನ್ನನ್ನು ರಕ್ಷಿಸುವೆನು" ಎಂದನು. ಆಕೆ ಆಗಲಿ. ಕೊಡುವೆನು ಎಂತ ಶಪಥಮಾಡಲು ಧನದತ್ತನು ಕೂಡಲೆ ನೀರಿಗಿಳಿದು ಮೊಸಳೆಯಿಂದ ಅವಳನ್ನು ಬಿಡಿಸಿದನಂತರ ಆ ಕನ್ನಿಕೆ- "ಹೇಳು. ನೀನು ಏನನ್ನು ಬಯಸುತ್ತೀ? ನೀನು ಕೇಳಿದುದೆಲ್ಲವನ್ನೂ ಸಲ್ಲಿಸುವೆನು" ಎಂದು ನುಡಿದಳು. ಆಗ ಧನದತ್ತನು - "ನೀನು ಮದುವೆಯಾದಾಗ ಮೊದಲನೆಯ ದಿವಸದ ಅಲಂಕಾರವನ್ನು ನನಗೆ ಬಂದು ತೋರಿಸಬೇಕು" ಎಂದು ತಿಳಿಸಿದನು. 'ಹಾಗೆಯೇ ಮಾಡುವೆನು' ಎಂದು ಆಕೆ ಪ್ರತಿಜ್ಞೆಮಾಡಿದಳು. ಹೀಗೆಯೇ ಕಾಲ ಕಳೆಯಲು ಆ ಕನ್ಯೆಗೆ ಯೌವನ ಪ್ರಾಪ್ತಿಯಾದಾಗ ವಿವಾಹವಾಗಲು ಆಕೆ ತನ್ನ ಪ್ರತಿಜ್ಞೆಯನ್ನು ನೆನಪಿಟ್ಟುಕೊಂಡು ಎಲ್ಲಾ ಆಭರಣಗಳಿಂದ ಅಲಂಕೃತೆಯಾಗಿ ಅತ್ಯಂತವಾಗಿ ಶೃಂಗಾರ ಮಾಡಿಕೊಂಡು ಸೊಬಗುಗಾರ್ತಿಯಾಗಿ ಮಧ್ಯರಾತ್ರಿ ವೇಳೆಯಲ್ಲಿ ಮನೆಯಿಂದ ಹೊರಟಳು. ತನ್ನ ಮೈದುನನಿದ್ದ ಅಂಗಡಿ ಕಡೆಗೆ ಆಕೆ ಹೋಗುವಾಗ ನಡುವೆ ಒಬ್ಬ ಕಳ್ಳನು ಕಂಡು - "ನೀನು ತೊಟ್ಟುಕೊಂಡಿರುವ

ಎನ್ನ ಬರ್ಪನ್ನೆಗಮೆತ್ತಂ ಪೋಗದಿರೆಂದು ನಂಬಿ ನುಡಿದು ಸಂತೈಸಿ ಕಱೆದಂತರಮಂ ಪೋದೊಡೆ ತಳಾಱಂ ಕಂಡೀ ಪೊಟ್ತಿತ್ತ ಪೋದಪ್ಪಯ್ ಪೊಲ್ಲಮಾನಸಿಯೆ ಎಂದಾತಂ ಪಿಡಿದು ಕಾಡೆ ಪಿರಿದೊಂದು ಮನೆವಾಟ್ಗಿಯುಂಟೆನ್ನಂ ಕಾಡದೆ ಪೋಗಲೀಯಾನೀಗಳೆ ಪೋಗಿ ನಿನ್ನಲ್ಲಿಗೆ ಬಂದಪ್ಪೆಂ ಬಂದೊಡೆ ನಿನ್ನ ಮೆಚ್ಚುಗೆಯ್ದೆನೆಂದು ನಂಬಿ ನುಡಿದು ನನ್ನಿಗೊಟ್ಟು ಕಱೆದಂತರಮಂ ಪೋಪನ್ನೆಗಮೆಡೆಯೊಳ್ ಬ್ರಹ್ಮರಾಕ್ಷಸಂ ಕಂಡು ತನ್ನಂ ತಿನ್ನಲ್ ಬಗೆದೊಡೆ ಬ್ರಹ್ಮರಾಕ್ಷಸಂಗೆಂದಳ್ ಪಿರಿಯದೊಂದು ಮನೆ ವಾಟ್ಗಿಯುಂಟೀಗಳೆ ಪೋಗಿ ಬಂದಪ್ಪೆಂ ಬಂದ ಬಟೆಕ್ಕೆನ್ನಂ ಮೆಚ್ಚದಂತೆ ಮಾಡೆಂದು ನನ್ನಿಗೊಟ್ಟು ನಂಬಿಸಿ ಪೋದೊಡಾ ಕಳ್ಳನುಂ ತಳಾಱನುಂ ಬ್ರಹ್ಮರಾಕ್ಷಸನುಮಂತುಮೀಕೆಯೀ ಪೊಟ್ಟು ತುರಿಪದಿಂದಬ್ಗಳೆಂದೆತ್ತ ಪೋದಪ್ಪಳೆಂದು ಬಟೆವಟೆಯನೆ ನೋಡುತ್ತಂ ಪೋಪರನ್ನೆಗಂ ಮಯ್ಯುನಂ ಪಟ್ಟರ್ದ್ಯಾಪಣಕ್ಕೆ ಪೋಗಿ ಬಾಗಿಲಂ ತೆಱೆಯಿಮೆಂದಾಗಳವರಾರೆಂದು ಬೆಸಗೊಂಡಾಗಳಾನಲ್ತೆ ಸುದಾಮೆಯೆನೆಂದೊಡೆ ಬಾಗಿಲಂ ತೆಱೆದಾಪಣದೊಳಗಂ ಪೊಕ್ಕಳನೀ ಪೊಟ್ಟೀಕೆ ಬಂದೆಯೆಂದು ಬೆಸಗೊಂಡೊಡೆ ನೀನಲ್ತೆ ಎನ್ನ ನನ್ನಿಗೊಂಡಯ್ ಎನ್ನ ಮದುವೆಯಂದು ಪ್ರಥಮ ದಿವಸದ

ಆಭರಣಗಳಿಲ್ಲವನ್ನೂ ಕೊಟ್ಟುಹೋಗು. ಅದಲ್ಲದೆ ಹೋಗಲು ಬಿಡೆನು" ಎಂದನು. ಆಗ ಅವಳು ನಾನು ಈಗಲೇ ಹೋಗಿ ಬಂದು ನಿನಗೆ ಆಭರಣಗಳಿಲ್ಲವನ್ನೂ ಕೊಡುವೆನು. ಅದುವರೆಗೆ - ನಾನಿಲ್ಲಿಗೆ ಬರುವವರೆಗೆ ಎಲ್ಲಿಗೂ ಹೋಗದಿರು" ಎಂದು ನಂಬುವಂತೆ ನುಡಿದು ಸಮಾಧಾನಪಡಿಸಿ ಸ್ವಲ್ಪ ದೂರ ಮುಂದುವರಿದಳು. ಆಗ ತಳಾರನು (ಪಟ್ಟಣದ ಕಾವಲುಗಾರನು) ಕಂಡು - "ಎಲ್ಗೆ ಕೆಟ್ಟ ಮನುಷ್ಯಳೇ, ಈ ಹೊತ್ತಿಗೆ ಯಾವ ಕಡೆ ಹೋಗುತ್ತಿರುವೆ ?" ಎಂದು ಆಕೆಯನ್ನು ತಡೆದು ತೊಂದರೆಪಡಿಸಿದನು. ಅದಕ್ಕೆ ಅವಳು - "ನನಗೆ ಹಿರಿದಾದ ಒಂದು ಮನೆಗೆಲಸವಿದೆ. ನನ್ನನ್ನು ತೊಂದರೆ ಪಡಿಸದೆ ಹೋಗಲು ಬಿಡು. ನಾನು ಈಗಲೇ ಹೋಗಿ ನಿನ್ನ ಬಳಿಗೆ ಬರುವೆನು. ಬಂದಾಗ ನಿನಗೆ ಮೆಚ್ಚಿಕೆಯಾದುದನ್ನು ಮಾಡುವೆನು" ಎಂದು ನಂಬಿಕೆಯಾಗುವಂತೆ ಹೇಳಿ ಭಾಷೆ ಕೊಟ್ಟು ಸ್ವಲ್ಪ ದೂರ ಮುನ್ನಡೆದಳು. ಆ ಸಂದರ್ಭದಲ್ಲಿ ಒಬ್ಬ ಬ್ರಹ್ಮರಾಕ್ಷಸನು ಕಂಡು ಅವಳನ್ನು ತಿನ್ನಲು ಬಗೆದನು. ಆಗ ಅವಳು ಬ್ರಹ್ಮರಾಕ್ಷಸನಿಗೆ ಹೇಳಿದಳು - "ನನಗೆ ಹಿರಿದಾದ ಒಂದು ಮನೆಗೆಲಸವಿದೆ. ಈಗಲೇ ಹೋಗಿ ಬರುತ್ತೇನೆ. ಬಂದ ಮೇಲೆ ನನ್ನನ್ನು ನಿನ್ನ ಇಷ್ಟದಂತೆ ಮಾಡು" ಎಂದು ಸುದಾಮೆ ಭಾಷೆ ಕೊಟ್ಟು ನಂಬಿಸಿ ಹೋದಳು. ಆ ಕಳ್ಳನೂ ತಳಾರನೂ ಬ್ರಹ್ಮರಾಕ್ಷಸನೂ "ಅಂತೂ ಈಕೆ ಈ ಹೊತ್ತಿಗೆ ತ್ವರೆಯಿಂದಲೂ ಪ್ರೀತಿಯಿಂದಲೂ ಯಾವ ಕಡೆ ಹೋಗುತ್ತಿದ್ದಾಳೆ ?" ಎಂದುಕೊಂಡು ಅವಳ ದಾರಿ ದಾರಿಯನ್ನೇ ನೋಡುತ್ತ ಅನುಸರಿಸಿ ಹೋದರು. ಅಷ್ಟರಲ್ಲಿ ಅವಳು ಮೈದುನನಾದ ಧನದತ್ತನು ಮಲಗಿದ್ದ ಅಂಗಡಿಗೆ ಹೋಗಿ 'ಬಾಗಿಲು ತೆಗೆಯಿರಿ' ಎಂದಾಗ 'ಬಾಗಿಲು ತೆರೆಯಿರಿ ಎಂಬವರು ಯಾರು?' ಎಂದು ಕೇಳಲು, 'ನಾನು ಸುದಾಮೆಯಲ್ಲವೆ ?" ಎಂದಳು. ಬಾಗಿಲು ತೆರೆದೊಡನೆ ಅವಳು ಅಂಗಡಿಯ ಒಳಹೊಕ್ಕಳು. ಆಗ ಧನದತ್ತನು 'ಈ ಹೊತ್ತಿಗೆ ಯಾಕೆ ಬಂದೆ ? ಎಂದು ಕೇಳಿದನು. ಅದಕ್ಕೆ ಅವಳು 'ನೀನಲ್ಲವೆ ನನ್ನಿಂದ ಭಾಷೆ ತೆಗೆದುಕೊಂಡದ್ದು ? ನನ್ನ ಮದುವೆಯಂದು ಮೊದಲನೆಯ ದಿವಸದ

ಪಸದನಮನೆನಗೆ ತೋಱಲ್ವೇಱುಮೆಂದು ಬೇಡಿದೊಡಾಂ ಪ್ರತಿಜ್ಞೆಯಂ ನೆಱಪಲ್ ಬಂದೆನೆಂದು ತನ್ನಂ ತೋಱೆದೊಡಾತನುಮಾಕೆಯ ರೂಪಂ ನೋಡಿ ಮೆಚ್ಚಿ ವಿದ್ಯಾಧರಿಯ ದೇವಗಣಿಕೆಯ ರೂಪನೆ ಪೋಲ್ವೆ ಎಂದು ಪೊಗಟ್ಟು ಮತ್ತಮಿಂತೆಂದಂ ಪ್ರತಿಜ್ಞೆಯಂ ನೆಱಪಿದೆ ಒಳ್ಳಿತಾಯ್ತೇ ಪೊಱ್ತು ಪೊಲ್ಲದುವಂದೆ ನಟ್ಟನಡುವಿರುಳ್ ಕಳ್ಳರುಂ ತಳಾಱರುಂ ಕಾಡುವರ್ ಬೇಗಂ ಪೋಗೆಂದು ನುಡಿದು ಪೋಗಲ್ವೇಱೊಡದೆಲ್ಲಮನಾ ಮೂವರುಂ ಪೊಱಗೆ ಕೇಳ್ದು ಮತ್ತಂ ಬೇಗವೇಗಂ ಪೋಗಿ ತಮ್ಮಿರ್ದೆಡೆಗಳೊಳಿರ್ದರನ್ನೆಗಮಾ ಮದೆವಳ್ ರಕ್ಕಸನಲ್ಲಿಗೆ ಬಂದೇನೆನ್ನಂ ನೀಂ ಮೆಚ್ಚದಂತಂ ಮಾದೆಂದು ತನ್ನಂ ತೋಱೆದೊಡಾ ಬ್ರಹ್ಮರಾಕ್ಷಸನಿಂತೆಂದಂ ನೀ ಸತ್ಯಾವಾದಿಯಯ್ ಆದಮಾನುಂ ರೂಪು ಲಾವಣ್ಯ ಸೌಭಾಗ್ಯ ಕಾಂತಿ ಹಾವ ಭಾವ ವಿಲಾಸ ವಿಭ್ರಮಂಗಳನೊಡೆಯಯ್ ನಿನ್ನಂ ತಿಂದಾನಾವ ಗತಿಗೆ ಪೋಪೆಂ ನಿನ್ನ ರೂಪಸಟಿಯಲಾಱಿನದಱೆನಂಜದೆ ಪೋಗೆಂದು ಪೋಗಲ್ವೇಱ್ಪೊಡೆ ಬರ್ಪಳನ್ನೆಗಂ ತಳಾಱನಂ ಕಂಡಿನ್ನೆನ್ನಂ ನೀಂ ಮೆಚ್ಚುಗೆಯ್ಮೆಂದು ನುಡಿದೊಡಾತನಿಂತೆಂದಂ ನೀಂ ಪೊಲ್ಲಮಾನಸಿಯೆ ಎಂದು ಮನದೊಳೆ ಬಗೆದೆಂ ನಿನ್ನಂತೊಳ್ಳಿದರಾರುಮಿಲ್ಲ ನುಡಿದ ನನ್ನಿಯಂ ತಪ್ಪದೆ ಬಂದೆ ಸತ್ಯವಾದಿಯಯ್ ಪೋಗಬ್ಬಾ ಎಂದು ಪೋಗಲ್ವೇಱ್ಪೊಡೆ ಬರ್ಪಳನ್ನೆಗಂ ಕಳ್ಳನಂ ಕಂಡು ತನ್ನ ತೊಟ್ಟಾಭರಣಮನೆಲ್ಲಮಂ ಕಳೆದೊಪ್ಪಿಸೆಯಾತನಿಂತೆಂದನೆನಗೇನೊಂದೆ ಭವಮೆ ನಿನ್ನ ಕೈಯದಂ

ಅಲಂಕಾರವನ್ನು ತೋರಿಸಬೇಕೆಂದು ನೀನು ಕೇಳಿದ್ದಿ. ನಾನು ಆ ಪ್ರತಿಜ್ಞೆಯನ್ನು ಈಗ ಈಡೇರಿಸಲಿಕ್ಕಾಗಿ ಬಂದಿದ್ದೇನೆ' ಎಂದು ತನ್ನನ್ನು ತೋರಿಸಿದಳು. ಆಗ ಧನದತ್ತನು ಆಕೆಯ ರೂಪವನ್ನು ನೋಡಿ ಮೆಚ್ಚಿ- "ನೀನು ವಿದ್ಯಾಧರಿಯ ಅಥವಾ ದೇವತಾ ಸ್ತ್ರೀಯ ರೂಪವನ್ನು ಹೋಲುತ್ತಿರುವೆ" ಎಂದು ಹೊಗಳಿ ಮತ್ತೆ ಹೀಗೆಂದನು - "ನೀನು ಪ್ರತಿಜ್ಞೆಯನ್ನು ನಡೆಸಿದೆ,ಒಳ್ಳೆಯದಾಯಿತು. ಈ ಹೊತ್ತಿಗೆ ನೀನು ಬಂದುದು ಒಳ್ಳೆಯದಲ್ಲ. ಮಧ್ಯರಾತ್ರಿಯಲ್ಲಿ ಕಳ್ಳರೂ ತಳವಾರರೂ ತೊಂದರೆ ಕೊಡುವರು. ಬೇಗ ಹೋಗು" ಎಂದು ನುಡಿದ ಹೋಗಲು ಹೇಳಿದನು. ಈ ಮಾತೆಲ್ಲವನ್ನೂ ಆ ಮೂವರೂ ಹೊರಗಿನಿಂದ ಕೇಳಿ ಮತ್ತೆ ಬೇಗ ಬೇಗನೆ ಹೋಗಿ ತಾವು ಮೊದಲಿದ್ದ ಸ್ಥಳಗಳಲ್ಲಿಯೇ ಇದ್ದರು. ಅಷ್ಟರಲ್ಲಿ ಆ ಮದುಮಗಳು ಸುದಾಮೆ ರಾಕ್ಷಸನಲ್ಲಿಗೆ ಬಂದು 'ನೀನು ನನ್ನನ್ನು ಇಷ್ಟಬಂದಂತೆ ಮಾಡು' ಎಂದು ತನ್ನನ್ನು ತೋರಿಸಿದಳು. ಆಗ ಬ್ರಹ್ಮರಾಕ್ಷಸನು ಹೀಗೆಂದನು - "ನೀನು ಸತ್ಯವಾದಿಯಾಗಿರುವೆ. ಅತ್ಯಂತ ರೂಪ- ಲಾವಣ್ಯ - ಸೌಭಾಗ್ಯ - ಕಾಂತಿ ಹಾವ - ಭಾವ - ವಿಲಾಸ ವಿಭ್ರಮಗಳುಳ್ಳವಳು. ನಿನ್ನನ್ನು ತಿಂದು ಯಾವ ದುರ್ಗತಿಗೆ ಹೋಗುವೆನು! ನಿನ್ನ ರೂಪವನ್ನು ಕೆಡಿಸಲಾರೆನು. ಆದುದರಿಂದ ಹೆದರದೆ ಹೋಗು" - ಎಂದು ಹೋಗಲು ಹೇಳಿದನು. ಅವಳು ಮುಂದೆ ಬರುತ್ತ ತಳಾರನನ್ನು ಕಂಡು "ಇನ್ನು ನೀನು ನನ್ನನ್ನು ಇಷ್ಟಬಂದಂತೆ ಮಾಡು" ಎಂದು ಹೇಳಿದಳು. ಅದಕ್ಕೆ ಅವನು ಹೀಗೆಂದನು - "ನೀನು ಕೆಟ್ಟ ಹೆಂಗುಸೆಂದು ನಾನು ಮನಸ್ಸಿನಲ್ಲಿ ಭಾವಿಸಿದ್ದೆನು. ನಿನ್ನ ಹಾಗೆ ಒಳ್ಳೆಯವರು ಯಾರೂ ಇಲ್ಲ. ಕೊಟ್ಟ ಭಾಷೆಗೆ ತಪ್ಪದೆ ಬಂದಿರುವೆ. ಸತ್ಯವಾದಿಯಾಗಿದ್ದಿ. ಹೋಗು ತಾಯೇ" ಎಂದು ಹೋಗಲು ಹೇಳಿದನು. ಸುದಾಮೆ ಮುಂದೆ ಬರುವಷ್ಟರಲ್ಲಿ ಕಳ್ಳನನ್ನು ಕಂಡು, ತಾನು ಧರಿಸಿದ್ದ ತೊಡಿಗೆಗಳೆಲ್ಲವನ್ನೂ ಕಳಚಿ ಅವನಿಗೆ ಒಪ್ಪಿಸಿದಳು. ಆಗ ಅವನು ಹೀಗೆಂದನು - "ನನಗೇನು ಇದು ಒಂದೇ ಜನ್ಮವೇ ? ನಿನ್ನ ಕೈಯ ಆಭರಣಗಳನ್ನು

ಕೊಂಡಾನೇನಾಚುದ್ಯಾರ್ಕತಾರಂಬರಂ ಬರ್ದಪ್ಪೆನೆ ಎಣಿಕೊಂಡ ಕಸವರಂ ತವನಿಧಿಯಂತೆ ತವದಿರ್ದಪ್ಪುದೆ ನಿನ್ನ ಕೈಯಿಂದಂ ಕೊಳ್ಳೆ ಪೋಗಬ್ಪಾ ಎಂದು ಪೋಗಲ್ವೇಟ್ಟನಂತಾ ಮೂವರುಂ ಮದೆವಳಂ ಪೋಗಲ್ವೇಟ್ಟು ಪೂಜಿಸಿ ಕಟೆಪಿದೊಡಾಕೆಯುಂ ತನ್ನ ಮನೆಗೆ ಪೋದಳಿಂತವರೊಳ ಗೊಳ್ಳಿದರಾರಣ್ಣಂಗಳಿರಾ ಪೇಟೆವೆಂದು ಸುಮತಿಯೆಂಬ ಕನ್ನೆ ಬೆಸಗೊಂಡಾಗಳಾ ಸುಭಟರೊಳೊರ್ವನಿರುಳ್ ಕುಜೆಯುಂ ಕೊಂದವಂ ಬೊಮ್ಮರಾಕ್ಷಸನಾಕೆಯುಂ ತಿನ್ನದೆ ಕಟೆಪಿದೊಡಾತನೊಳ್ಳಿದನೆಂದಂ ಸರ್ಪದಷ್ಟನಂ ಕಾದಿರ್ದಾತಂ ತಳಾಱಂ ಕಾಡದೆ ಕಟೆಪಿದನಾತನೊಳ್ಳಿದ ನೆಂದಂ ಕಚ್ಚಂ ತರಲ್ ಪೋದಾತನಿಂತೆಂದಂ ಮದೆವಳಂ ಸೋದರ ಮಯ್ದುನನತ್ಯಂತ ರೂಪಲಾವಣ್ಯ ಕಾಂತಿ ಹಾವ ಭಾವ ವಿಲಾಸ ವಿಭ್ರಮಂಗಳನೊದೆಯೊಳಂ ಸೋದರಮಾವನ ಮಗಳಂ ತನ್ನಲ್ಲಿಗೆ ವಂದೊಳನೇಕಾಂತಂ ಸಮನಿಸಿದೊಡಾಕೆಗಳಿಪದೆ ಪೋಗಲ್ವೇಟ್ಟು ಧನದತ್ತನೊಳ್ಳಿದನೆಂದಂ ಪುಳ್ಳಿಯಂ ತರಲ್ ಪೋದಾತಂ ಸಾಸಿರದೀನಾರದ ಪೊಟ್ಟಳಿಗೆಯುಂ ಕಳ್ದಾತನಿಂತೆಂದಂ ಮದೆವಳ್ ತೊಟ್ಟಾಭರಣಮೆಲ್ಲಮಂ ಕೊಳ್ಳದೆ ಕಟೆಪಿದ ಕಳ್ಳನೊಳ್ಳಿದನೆಂದೊಡಾತನ್ ಕಳ್ಳನಪ್ಪುದನಱೆದು ಕರಿದು ಬೇಗಮಿರ್ದಾ ನುಡಿಗಳೆಲ್ಲಮಂ ಮಱೆಯಿಸಿ ಎಲ್ಲರುಮಂ ಮಱಲುಂದಿಸಿದ ಬಟೆಕ್ಕಮಾ ಕಳ್ಳನ

ತೆಗೆದುಕೊಂಡು ನಾನೇನು ಚಂದ್ರಸೂರ್ಯ ನಕ್ಷತ್ರಗಳಿರುವ ತನಕ (ಶಾಶ್ವತವಾಗಿ) ಬದುಕಿರುವೆನೆ ? ಎಣಿಕೆಮಾಡಿ ತೆಗೆದುಕೊಂಡ ಚಿನ್ನವು ಅಕ್ಷಯ ಸಂಪತ್ತಿನಂತೆ ನಾಶವಾಗದೆಯೇ ಇದ್ದೀತೆ ? ನಿನ್ನ ಕೈಯಿಂದ ತೆಗೆದುಕೊಳ್ಳೆನು ಹೋಗು ತಾಯೇ" ಎಂದು ಹೋಗಲು ಹೇಳಿದನು. ಅಂತು ಆ ಮೂವರೂ ಮದುಮಗಳನ್ನು ಹೋಗಲು ಹೇಳಿ ಮನ್ನಿಸಿ ಕಳುಹಿಸಿದರು. ಆಕೆ ತನ್ನ ಮನೆಗೆ ಹೋದಳು. ಎಲೈ ಅಣ್ಣಂದಿರೇ, ಹೀಗೆ ಅವರಲ್ಲಿ ಒಳ್ಳೆಯವರು ಯಾರು ? ಹೇಳಿ - ಎಂದು ಆ ಸುಮತಿ ಎಂಬ ಕನ್ಯೆ ಸುಭಟರೊಡನೆ ಕೇಳಿದಳು. ಆಗ ಅವರಲ್ಲಿ ಒಬ್ಬನು - ಕುರಿಯನ್ನು ರಾತ್ರಿಯಲ್ಲಿ ಕೊಂದವನು 'ಬ್ರಹ್ಮರಾಕ್ಷಸನು ಸುದಾಮೆಯನ್ನು ತಿನ್ನದೆ ಕಳುಹಿಸಿದುದರಿಂದ ಅವನು ಒಳ್ಳೆಯವನು' ಎಂದನು. ಬೆಂಕಿ ತರಲು ಹೋದವನು ಹೀಗೆಂದನು - "ಧನದತ್ತನು ಒಳ್ಳೆಯವನು. ಯಾಕೆಂದರೆ ಅವನು ಸೋದರ ಮೈದುನನಾಗಿದ್ದರೂ ತನ್ನ ಬಳಿಗೆ ಬಂದಂತಹ ಸೋದರಮಾವನ ಮಗಳನ್ನು ಮದುಮಗಳನ್ನು ಅತ್ಯಂತ ರೂಪ- ಲಾವಣ್ಯ - ಸೌಭಾಗ್ಯ - ಕಾಂತಿ - ಹಾವ - ಭಾವ - ವಿಲಾಸ - ವಿಭ್ರಮಗಳುಳ್ಳವಳನ್ನು ಏಕಾಂತದಲ್ಲಿ ಪ್ರಾಪ್ತವಾದವಳಾದರೂ ಆಕೆಯಲ್ಲಿ ಮೋಹಗೊಳ್ಳದೆ ಅವಳನ್ನು ಹೋಗಲು ಹೇಳಿದನು. ಆದುದರಿಂದ ಅವನು ಒಳ್ಳೆಯವನು" ಎಂದು ಹೇಳಿದನು. ಕಟ್ಟಿಗೆ ತರಲು ಹೋದವನು, ಸಾವಿರ ದೀನಾರದ ಪೊಟ್ಟಣವನ್ನು ಕದ್ದವನಾಗಿದ್ದು ಹೀಗೆಂದನು - "ಮದುಮಗಳು ಧರಿಸಿದ ತೊಡಿಗೆಗಳೆಲ್ಲವನ್ನೂ ತೆಗೆದುಕೊಳ್ಳದೆ ಕಳುಹಿಸಿದ ಕಳ್ಳನು ಒಳ್ಳೆಯವನು" ಎಂದನು. ಆಗ ಆತನು ಕಳ್ಳನಾಗಿರುವುದನ್ನು ತಿಳಿದು ಆಕೆ ಸ್ವಲ್ಪ ಹೊತ್ತು ಇದ್ದು, ಆ ಮಾತುಗಳೆಲ್ಲವನ್ನೂ ಮರೆತಂತೆ ವರ್ತಿಸಿ ಎಲ್ಲರನ್ನೂ ಮೈ ಮರೆತು ನಿದ್ದೆ ಮಾಡಿಸಿದ ನಂತರ ಆ ಕಳ್ಳನನ್ನು ಎಬ್ಬಿಸಿ ರಹಸ್ಯದಲ್ಲಿ ಹೀಗೆಂದಳು - "ನಿನ್ನನ್ನು ನಾನು ಪ್ರೀತಿಸಿದ್ದೇನೆ. ನನಗೆ ಬೇಕಾದಷ್ಟು ಆಭರಣವನ್ನು ಮಾಡಿಸಲು ತಕ್ಕ ಐಶ್ವರ್ಯ ನಿನ್ನಲ್ಲಿದ್ದರೆ, ನಾನು ನಿನ್ನ ಹೆಂಡತಿಯಾಗಿ

ನೆಟ್ಟೆ ಏಕಾಂತದೊಳಿಂತೆಂದು ನುಡಿಗುಂ ನಿನಗಾನಾಟಸಿದೆನೆನಗೆ ನೆಱೆಯೆ ತುಡುಗೆಯಂ ಮಾಡಿಸಲ್ ಭಾಗಸಮುಳ್ಕೊಡೆ ನಿನಗಾಂ ಪೆಂದತಿಯೆನಾಗಿ ನಿನ್ನೊದವರ್ಪೆನೆಂದವನನುರ್ಕೆವದಿಂದಂ ಮನಂಗೊಳೆ ನಂಬೆ ನುಡಿದೊಡಾತನುಂ ಮೆಯ್ಯಱೆಯದೆ ದೀನಾರದ ಸಹಸ್ರದ ಪೊಟ್ಟಳಿಗೆಯಂ ತೆಗೆದು ಕೊಟ್ಟಾನಿದಱೊಳಗೆ ನಿನಗೆ ತುಡುಗೆಯಂ ಮಾಡಿಸುವೆ. ಬಾ ಪೋಪಮಿರ್ವರುಮೆಂದೊದಂತೆಗೆಯ್ದೆನೆಂದು ಪೊನ್ನ ಪೊಟ್ಟಳಿಗೆಯಂ ತಂದೆಯ ಮಱಲುಂದಿದಲ್ಲಿಗೆ ಪೋಗಿ ಬರುಂಟ ಎಟ್ಟೆ ಪೊಟ್ಟಳಿಗೆಯಂ ತಂದೆಗೆ ಕೊಟ್ಟಳ್ ಕೊಟ್ಪೊಡಾತನುಂ ಕಳ್ಳನುಮಂ ದೀನಾರದ ಸಹಸ್ರದ ಪೊಟ್ಟಳಿಗೆಯುಮಂ ಕೊಂಡು ಪೋಗಿಯರಸಂಗೊಪ್ಪಿಸಿದನೆಂಬೀ ಚಿತ್ರಕಥೆಗಳುಮಂ ಜನಂಗಳ್ಗೆ ಪೇಟ್ದು ಬತ್ತಮಂ ಕಳ್ದೊಂ ವೈನಯಿಕನೆಂಬೊಂ ಕಳ್ಳನಿನ್ನುಮಾತನ ಪೇಱ್ದ ಕಥೆಗಳುಮಂ ಪೇಱ್ದೆಂ ಕೇಳ್ ಮಗಳೆ ಎಂದು ಸೋಮಶರ್ಮಭಟ್ಟಂ ನಾಗಶ್ರೀಗಿಂತೆಂದು ಪೇಟ್ದುಂ ಧರ್ಮಪುರಮೆಂಬುದು ಪೊಟಲಲ್ಲಿ ನಾಗದತ್ತನೆಂಬೊಂ ಶ್ರೇಷ್ಠಿಯಾತನ ಬಂಟಂ ವೈನಾಕನೆಂಬೊನಾತನೊಂದು ದಿವಸಂ ಕರ್ಬಿನ ಕೆಯ್ಯನುಱ್ಪೊಂ ನಿದಾನಮಂ ಕಂಡದಂ ಮಱಸಲ್ದೇದಿ ತನ್ನ ಪೆಂಡತಿಯ ಮನಮಂ ಪರೀಕ್ಷಸಲ್ದೇದಿ ಕೃತಕಗರ್ಭಮಂ ತಾಳ್ದಿರೆ ಪೆಂದತಿ ಕಂಡಿದೇನ್ ಬಸಿಱೊಳಿರ್ದುದೆಂದೊಡಾತನಾ ಮಾತಿನೊಳೇನೊ ಕೆಮ್ಮಗಿರೆಂದೊಡಾಕೆ ನಿರ್ಬಂಧದಿಂ ಕೀಜೆ ಬಿಸಗೊಳಿಯಾರ್ಗಂ ಪೇಱಿಯಪ್ಪೊದೆ ನಿನಗೆ ಪೇಱ್ದಿನೆಂದಿಂತೆಂದಂ ಪುರುಷರ್ಕಳ್ಗಾಗದುದೆನಗಾದುದೆಂದು ಪೇಱ್ದೊಡದಂ ಕೇಳ್ದು ಸೈರಿಸಲಾಱದೆ

ನಿನ್ನ ಜೊತೆಯಲ್ಲಿ ಬರುವೆನು" ಎಂದು ಅವನನ್ನು ಕಪಟದಿಂದ ಮನಸ್ಸಿಗೆ ಹಿಡಿಯುವಂತೆ ನಂಬಿಕೆಯಾಗುವಂತೆ ನುಡಿದಳು. ಆಗ ಅವನು ಮೈಮರೆತವನಾಗಿ ಸಾವಿರ ದೀನಾರದ ಕಟ್ಟನ್ನು ತೆಗೆದುಕೊಟ್ಟು "ನಾನು ಇದರಲ್ಲಿ ನಿನಗೆ ಆಭರಣವನ್ನು ಮಾಡಿಸುವೆನು ಬಾ ಇಬ್ಬರೂ ಹೋಗೋಣ" ಎಂದನು. ಆಗ ಸುಮತಿ 'ಹಾಗೆಯೇ ಮಾಡುವೆನು' ಎಂದು ಚಿನ್ನದ ಕಟ್ಟನ್ನು ತೆಗೆದುಕೊಂಡು ತನ್ನ ತಂದೆ ಮೈಮರೆತು ನಿದ್ರಿಸುತ್ತಿದ್ದಲ್ಲಿಗೆ ಹೋಗಿ, ಬೆರಲಿನಿಂದ ಚುಚ್ಚಿ ಎಬ್ಬಿಸಿ ಆ ಪೊಟ್ಟಣವನ್ನು ತಂದೆಗೆ ಕೊಟ್ಟಳು. ಆತನು ಕಳ್ಳನನ್ನೂ ಸಾವಿರ ದೀನಾರಗಳ ಪೊಟ್ಟಣವನ್ನೂ ತೆಗೆದುಕೊಂಡು ಹೋಗಿ ರಾಜನಿಗೆ ಒಪ್ಪಿಸಿದನು. ಈ ರೀತಿಯಾದ ಚಿತ್ರಕಥೆಗಳನ್ನು ಜನರಿಗೆ ಹೇಳಿ, ವೈನಯಿಕನೆಂಬ ಕಳ್ಳನು ಬತ್ತವನ್ನು ಕದಿಯುತ್ತಿದ್ದನು. ಇನ್ನೂ ಅತನ ಕಥೆಗಳನ್ನು ಹೇಳುವೆನು, ಮಗಳೇ ಕೇಳು - ಎಂದು ಸೋಮಶರ್ಮಭಟ್ಟನು ನಾಗಶ್ರೀಗೆ ಈ ರೀತಿಯಾಗಿ ಹೇಳಿದನು - ಧರ್ಮಪುರವೆಂಬ ಪಟ್ಟಣದಲ್ಲಿ ನಾಗದತ್ತನೆಂಬ ಸೆಟ್ಟಿಯಿದ್ದನು. ಅವನ ಆಳು ವೈನಾಕನೆಂಬವನು. ಆತನು ಒಂದು ದಿನ ಒಬ್ಬನ ಗದ್ದೆಯನ್ನು ಉಳುತ್ತಿದ್ದನು. ಅವನಿಗೆ ಒಂದು ನಿಕ್ಷೇಪ ದೊರಕಿತು. ಅದನ್ನು ಮರೆಮಾಚುವುದಕ್ಕಾಗಿ ಅವನು ತನ್ನ ಹೆಂಡತಿಯ ಮನಸ್ಸನ್ನು ಪರೀಕ್ಷಿಸಲು ಬಯಸಿ ತಾನು ಗರ್ಭ ತಾಳಿದವನಂತೆ ನಟಿಸಿದನು. ಹೆಂಡತಿ ಕಂಡು 'ಹೊಟ್ಟೆಯಲ್ಲಿ ಏನಿದೆ ?' ಎಂದು ಕೇಳಿದಳು. ಅದಕ್ಕೆ ಅತನು 'ಆ ಮಾತಿನಲ್ಲೇನು? ಸುಮ್ಮಗಿರು' ಎಂದನು. ಆದರೆ ಆಕೆ ಒತ್ತಾಯದಿಂದ ಕಿರಿಚಾಡುತ್ತ ಮತ್ತೆಯೂ ಕೇಳಲು 'ಯಾರಿಗೂ ಹೇಳುವುದಿಲ್ಲವಾದರೆ ನಿನಗೆ ಹೇಳುವೆನು' ಎಂದು ಹೀಗೆಂದನು - "ಗಂಡಸರಿಗೆ ಆಗದಿರುವಂಥದು ನನಗೆ ಆಗಿದೆ" - ಎಂದು ಹೇಳಲು ಅದನ್ನು ಆಕೆ ಕೇಳಿ ಸಹಿಸಲಾರದೆ ಪಟ್ಟಣದ ಜನರೆಲ್ಲರೂ ತಿಳಿಯುವ ಹಾಗೆ ಹೇಳಿದಳು. ಎರಡನೆಯ ಕಥೆಯನ್ನು ಹೇಳಿ

ಪೊಬಲ ಜನಂಗಳಿಲ್ಲಮಜೆವಂತು ಪೇಟ್ಬಳಿಂಬಿರಡನೆಯ ಕಥೆಯುಮಂ ಪೇಟ್ದು ಮೂಱನೆಯ ವ್ಯದ್ಧಸ್ತ್ರೀಯ ಕಥೆಯನಿಂತೆಂದು ಪೇಟಲ್ ತೊಡಂಗಿದಂ ಹರಿಪುರಿಯೆಂಬ ಪೊಬಲೊಳ್ ಗಂಭೀರೆಯೆಂಬೊಳೊರ್ವಳ್ ಬರ್ದ್ದಿಯಾಕೆಯ ಮಗಳ್ ಹರಿಣೆಯೆಂಬೊಳಾಕೆಯಂ ಜಯಂತಮೆಂಬ ಪೊಬಲೊಳ್ ವಸುದತ್ತನೆಂಬ ಪರದಂಗೆ ಕೊಟ್ಪಾಡಾಕೆಗೆ ಗರ್ಭ್ಭಮಾಗಿ ಮೋದಗೆಯ ಮೇಗೆ ಬಯಕೆಯಾದೊಡೆ ತಾಯ್ ಪಲವುಂ ತೆಱದ ಲಡ್ಡುಗೆಗಳ್ ಮಂಡಗೆಗಳುಂ ಮೊದಲಾಗೊಡೆಯ ಪಲವುಂ ಭಕ್ಷ ರೂಪಗಳುಮಂ ಕೊಂಡು ಗಂಭೀರೆಯೆಂಬ ಬರ್ದ್ದಿ ಹರಿಪುರದಿಂ ಪೊಱಮಟ್ಟು ಮಗಳಿದ್ದೂರ್ಗ್ಗೆ ಪೋಪಳನ್ನೆಗವೆಡೆಯೊಳಿರ್ಪ್ಪರ್ ಕಳ್ಳರಂ ಕಂಡವರೊಳಗೊರ್ವನಂ ಪಿಡಿದಟ್ಟಿನ್ನ ಮಗಂ ನಿನ್ನನೆ ಪೋಲ್ಕುಂ ಪನ್ನೆರಟ್ಟರಿಸಂ ಪೋದೊನೆತ್ತ ಪೋದನೆಂದಱಿಯೆನಾತನಂ ಕಾಣದಿರುಳುಂ ಪಗಲುಂ ನೆನೆದಟ್ಟು ಕಣ್ಗಳ್ ಬಾತಿರ್ಪುವಿಂದೆನಗೆ ಆತಂ ಬಂದಂತಿರೆ ನಿನ್ನಂ ಕಂಡು ಸಂತಸಮಾಯ್ತು ಮಗನ ನೀಮೆಲ್ಲಂ ಬನ್ನಿಂ ಪೋಪಂ ಸಾರೆಯೂರಂ ಮಿಂದುಂಡುಟ್ಟು ವಿಶ್ರಮಿಸಿ ನಾಳೆ ಪೋಪಿರೆಂದೊಡಗೊಂಡು ಪೋಗಿ ಮಗಳ ಮನೆಯನೆಯ್ದಿ ಅವರ್ಗೆಲ್ಲಂ ನೀರನಿಡಿಸಿ ತಲೆಯಂ ಪೂಸಿಸಿಯೊಲ್ಲಣೆಗೆಯನುಡಿಸಿ ತಲೆಯೊಳ್ ಕಟಿಯಂ ಪೊಯ್ದಾಗಳ್ ಬರ್ದ್ದಿ ಮನೆಯ ಮೇಗೇಱಿ ಕಳ್ಳರೆಂದು ಪುಯ್ಯಲಿಟ್ಟಾಗಳನಿಬರುಂ

ಮೂರನೆಯ 'ಮುದುಕಿಯ ಕಥೆ'ಯನ್ನು ಈ ರೀತಿಯಾಗಿ ಹೇಳತೊಡಗಿದನು- ಹರಿಪುರಿಯೆಂಬ ಪಟ್ಟಣದಲ್ಲಿ ಗಂಭೀರೆಯೆಂಬೊಬ್ಬಳು ಮುದುಕಿಯಿದ್ದಳು. ಅವಳಿಗೆ ಹರಿಣೆ ಎಂಬ ಮಗಳಿದ್ದಳು. ಆಕೆಯನ್ನು ಜಯಂತ ಎಂಬ ಪಟ್ಟಣದಲ್ಲಿದ್ದ ವಸುದತ್ತನೆಂಬ ವ್ಯಾಪಾರಿಗೆ ಕೊಟ್ಟಲ್ಲಿ ಆಕೆ ಗರ್ಭಿಣಿಯಾಗಿ ಅವಳಿಗೆ ಕಡುಬನ್ನು ತಿನ್ನಬೇಕೆಂಬ ಬಯಕೆಯುಂಟಾಯಿತು. ತಾಯಿ ಹಲವು ವಿಧದ ಲಾಡುಗಳು ಕಡುಬುಗಳು ಮುಂತಾಗಿರುವ ಹಲವು ತೆರದ ಭಕ್ಷ್ಯಗಳನ್ನು ಸಿದ್ಧಮಾಡಿಕೊಂಡು, ಆ ಮುದುಕಿ ಗಂಭೀರೆಯು ಹರಿಪುರದಿಂದ ಹೊರಟು ತನ್ನ ಮಗಳಿದ್ದ ಊರಿಗೆ ಹೋಗುತ್ತಿದ್ದಳು. ಅಕೆ ಹೋಗುವ ದಾರಿಯಲ್ಲಿ ಎಂಟು ಮಂದಿ ಕಳ್ಳರು ಎದುರಾದರು. ಅವರನ್ನು ಕಂಡು, ಅವರೊಳಗೆ ಒಬ್ಬನನ್ನು ಹಿಡಿದು ಅತ್ತಳು. "ನನ್ನ ಮಗ ನಿನ್ನನ್ನೆ ಹೋಲುತ್ತಿದ್ದ. ಅವನು ನನ್ನನ್ನಗಲಿ ಹನ್ನೆರಡು ವರ್ಷವಾಯಿತು. ಎಲ್ಲಿಗೆ ಹೋದನೆಂದು ತಿಳಿಯದಾಗಿರುವೆನು. ಅವನನ್ನು ಕಾಣದೆ ರಾತ್ರಿಯೂ ಹಗಲೂ ನೆನೆಸಿ ಅತ್ತು ಕಣ್ಣುಗಳು ಊದಿಕೊಂಡಿವೆ. ಇಂದು ನನಗೆ ನಿನ್ನನ್ನು ಕಂಡಾಗ ಆತನು ಬಂದ ಹಾಗೆಯೇ ಸಂತೋಷವಾಯಿತು. ಮಗನೇ, ನೀವೆಲ್ಲರೂ ಬನ್ನಿ ಹೋಗೋಣ ಸಮೀಪದ ಊರಿಗೆ ಹೋಗಿ ಸ್ನಾನ ಮಾಡಿ ಊಟ ಮಾಡಿ ಬಟ್ಟೆಯುಟ್ಟು ವಿಶ್ರಾಂತಿ ತೆಗೆದುಕೊಂಡು ನಾಳೆ ಹೋಗಬಹುದು" ಎಂದು ಅವರನ್ನು ಒಡಗೂಡಿಸಿಕೊಂಡು ಹೋಗಿ ಮಗಳ ಮನೆಗೆ ಬಂದು ಅವರಿಗೆಲ್ಲ ಬಿಸಿನೀರು ಸಿದ್ಧಪಡಿಸಿ, ತಲೆಗೆ ಎಣ್ಣೆ ಹಚ್ಚಿಸಿ, ಸ್ನಾನದ ಬಟ್ಟೆಯನ್ನುಡಿಸಿ, ತಲೆಯ ಮೇಲೆ ಅವರು ಕುದಿಗಂಜಿಯನ್ನು ಹಾಕುತ್ತಿರುವಾಗ ಆ ಮುದುಕಿ ಮನೆಯ ಮೇಲ್ಗಡೆ ಹತ್ತಿ 'ಕಳ್ಳರು, ಕಳ್ಳರು' ಎಂದು ಗಟ್ಟಿಯಾಗಿ ಕೂಗಿದಳು. ಆಗ ಅವರೆಲ್ಲರೂ ಭಯಪಟ್ಟು ತಟಕ್ಕನೆ ಹಾರಿ ದಿಕ್ಕುಗೆಟ್ಟು ಓಡಿದರು. 'ನಮ್ಮನ್ನು ಈ ಮುದುಕಿ ವಂಚಿಸಿದಳು' ಎಂದು ಹಗೆತನವನ್ನು ಹಿಡಿದಿದ್ದರು.

ತ್ರಸ್ತಾಭಿಭೂತರಾಗಿ ಪಟ್ಟನೆ ಪಾಜೆಯೋಡಿ ಕೆಟ್ಟೊಳ್ಳಿತ್ತೆಮ್ಮಂ ಬರ್ದ್ದಿ ಛಿದ್ರಿಸಿದಳೆಂದು ಪಗೆ ಸಾರಿರ್ದರಿತ್ತ ಬರ್ದ್ದಿಯುಂ ನೆಟ್ಟನಿರುಳ್ ಕಳ್ಳರ್ ಬರ್ಪರೆಂದಜಿತು ಕೂರಿತಪ್ಪ ಬಾಳಂ ಪಿಡಿದಿರ್ದಳನ್ನೆಗಮಿರುಳ್ ಕಳ್ಳರ್ ವಂದಾಕೆಯ ಲುಂದಿದ ಮನೆಯೊಳ್ ಕನ್ನಮಿಕ್ಕಿದೊಡೆ ಕನ್ನದ ಬಾಗಿಲೊಳಾ ಬಾಳನಡ್ಡಮಿಟ್ಟು ಪಿಡಿದಿರ್ದು ಪುಗುವ ಕಳ್ಳನ ಮೂಗನರಿದೊಡವಂ ಪೊಱಮಟ್ಟು ತನಗೆ ಪುಗಲ್ ಪಾಂಗಿಲ್ಲ ನೀಂ ಪುಗೆಂದು ಪೆಱನೊರ್ವನಂ ಪುಗಿಸಿದೊಡಾತನ ಮೂಗುಮಂ ಕೊಱಿದೊಡಾತನುಂ ಪೆಱನೊರ್ವನಂ ಪುಗಿಸೆ ಸೂಬುಸೂಬಿಳೆ ಪೊಕ್ಕೊಡನಿಬರ ಮೂಗುಮಂ ಕೊಱಿದಿಕ್ಕಿದೊಡನಿಬರುಂ ಮೂಗರಿಯೆ ಪಟ್ಟು ಪೊಱಮಟ್ಟು ಪೋಗಿಯೊರ್ವನಿಂದ್ರಜಾಲಿಗನ ಮನೆಯೊಳ್ ಕನ್ನಮಿಕ್ಕಿ ಪುದುಕೆಯಂ ತೆಗೆದು ಪೊತ್ತು ಪೋಗಿ ಪೊಱವೊಱಲೊಳ್ ಶ್ಮಶಾನದೊಳಿಟಿಪಿ ಕುಱಿಯಂ ಕಳ್ದು ತಂದಱುವರ್ ಕಳ್ಳರುಂ ಮಱಲುಂದಿದರೊರ್ವನಾ ಕುಱಿಯಂ ಕೊಂದು ಜಾವಮಿರ್ದು ಮಸಣದ ಕಿಚ್ಚನೊಳ್ ಪಿಶಿತಮಂ ಮಾಡುತ್ತಿರ್ದ್ದು ಪುದುಕೆಯಂ ತೆಱೆದು ನೋಟ್ಪನ್ನೆಗಮದಱೊಳಗಿರ್ದ ಇಂದ್ರಜಾಲಿಗರ ಪಾಪೆಗಳುಂ ಸೀರೆಗಳುಂ ಝಣಂಬಮಂ ಕೊಂಡೊಂದು ಪ್ರತಿಮುಖಮಂ ಕೊಂದು ತನ್ನ ಮುಖದೊಳಿಟ್ಟು ಪುಲಿಯ ಝಣಂಬಮುಮಂ ತೊಟ್ಟು ಶ್ಮಶಾನದೊಳುರಿವ ಕಿಚ್ಚನ ಪಕ್ಕದೆ ನಿಂದಿರ್ದನನ್ನೆಗಮೆಬ್ಬಿತ್ತು ಕಂಡಱುವರುಂ ಕಳ್ಳರುಂ ಬೇತಾಳನೆಂದಂಜಿ ಪ್ರಾಣಭಯದಿಂದೋಡಿ ಕೆಟ್ಟರಾತನುಮವರೋಡುವುದಂ ಕಂದು ಪಿಶಿತಮಂ ಕೊಂಡು ಬಟೆಯಂ ತಗುಳಿ ಎನಿತೆನಿತಾತನಂ ಕಾಣ್ಬರನಿತನಿತವೆ ಬೇತಾಳಂ ಬಟೆಯಂ ತಗುಳ್ದನೆಂದೋಡೆ ಪ್ರತಿಮುಖಮುಂ ಝಣಂಬಮುಮಂ ಕಳೆದೀಡಾಡಿ ತನ್ನ ಪೆಸರಂ

ಇತ್ತ ಮುದುಕಿ ನೆಟ್ಟಗೆ ಇಂದಿನ ರಾತ್ರಿಯಲ್ಲಿ ಕಳ್ಳರು ಬರುವರೆಂದು ತಿಳಿದು ಹರಿತವಾದ ಕತ್ತಿಯನ್ನು ಹಿಡಿದಿದ್ದಳು. ಹೀಗಿರಲು ರಾತ್ರಿಯಲ್ಲಿ ಕಳ್ಳರು ಬಂದು ಆಕೆ ನಿದ್ದೆ ಮಾಡುತ್ತಿದ್ದ ಮನೆಗೆ ಕನ್ನ ಹಾಕಿದರು. ಆಗ ಆ ಕನ್ನದ ತೂತಿನ ಬಾಗಿಲಲ್ಲಿ ಅವಳು ಆ ಕತ್ತಿಯನ್ನು ಅಡ್ಡವಾಗಿ ಹಿಡಿದು ಇಟ್ಟುಕೊಂಡು ಒಳಗೆ ನುಗ್ಗುವ ಕಳ್ಳನ ಮೂಗನ್ನು ಕತ್ತರಿಸಿದಳು. ಅವನು ಹಿಂದೆರಳಿ ತನಗೆ ಒಳನುಗ್ಗಲು ಅವಕಾಶವಿಲ್ಲ ನೀನು ನುಗ್ಗು ಎಂದು ಇನ್ನೊಬ್ಬನಿಗೆ ಹೇಳಿ ಅವನನ್ನು ನುಗ್ಗಿಸಿದಾಗ ಅವನ ಮೂಗನ್ನೂ ಮುದುಕಿ ಕತ್ತರಿಸಿ ಬಿಟ್ಟಳು. ಆ ಕಳ್ಳನು ಬೇರೊಬ್ಬನನ್ನು ನುಗ್ಗಿಸಿದನು. ಹೀಗೆ ಸರದಿಪ್ರಕಾರವಾಗಿ ಆ ಎಲ್ಲ ಕಳ್ಳರ ಮೂಗನ್ನೂ ಕತ್ತರಿಸಲು ಅವರೆಲ್ಲರೂ ಮೂಗು ಕತ್ತರಿಸಿಕೊಂಡವರಾಗಿ ಹೊರಟುಹೋದರು. ಅನಂತರ ಅವರು ಒಬ್ಬ ಇಂದ್ರಜಾಲಿಗನ ಮನೆಗೆ ಕನ್ನವಿಕ್ಕಿ ಒಂದು ಪೆಟ್ಟಿಗೆಯನ್ನು ತೆಗೆದು ಹೊತ್ತುಕೊಂಡು ಹೋಗಿ ಪಟ್ಟಣದ ಹೊರಗಿನ ಶ್ಮಶಾನದಲ್ಲಿ ಇಳಿಸಿದರು. ಕುರಿಯನ್ನು ಕದ್ದುತಂದ ಆರು ಮಂದಿ ಕಳ್ಳರೂ ನಿದ್ರಿಸಿದರು. ಒಬ್ಬನು ಕುರಿಯನ್ನು ಕೊಂದು ಒಂದು ಜಾವದಷ್ಟು ಸಮಯ ಇದ್ದುಕೊಂಡು ಸುಡುಗಾಡಿನ ಬೆಂಕಿಯಲ್ಲಿ ಮಾಂಸದ ಅಡುಗೆಯನ್ನು ಮಾಡುತ್ತ ಇದ್ದವನಾಗಿ ಆ ಪೆಟ್ಟಿಗೆಯನ್ನು ತೆರೆದು ನೋಡಿದನು. ಆಗ ಅದರೊಳಗೆ ಇಂದ್ರಜಾಲಿಗರ ಗೊಂಬೆಗಳೂ ಬಟ್ಟೆಗಳೂ ಕಾಣಿಸಿದವು. ಅವನ್ನು ತೆಗೆದುಕೊಂಡು ಒಂದು ಮುಖವಾಡವನ್ನು ಮಾಡಿ ತನ್ನ ಮುಖಕ್ಕೆ ಇಟ್ಟುಕೊಂಡು ಹುಲಿದೊಗಲನ್ನು ಧರಿಸಿ ಶ್ಮಶಾನದಲ್ಲಿ ಉರಿಯುತ್ತಿರುವ ಬೆಂಕಿಯ ಸಮೀಪ ನಿಂತುಕೊಂಡನು. ಅಷ್ಟರಲ್ಲಿ ಆರುಮಂದಿ ಕಳ್ಳರೂ ಎಚ್ಚತ್ತು ಕಂಡು, ಈ ಮುಖವಾಡವಿಟ್ಟುಕೊಂಡವನನ್ನು ಬೇತಾಳನೆಂದು ಭಾವಿಸಿ ಹೆದರಿ ಪ್ರಾಣದ ಅಂಜಿಕೆಯಿಂದ ಓಡಿಹೋದರು. ಅವರು ಓಡುವುದನ್ನು ಕಂಡು ಆತನು

ಪೇಟ್ಟವರಂ ಮಾಣಿಸಿಯೊಡಗೂಡಿ ತನ್ನ ಮಾಡಿದ ಪಿಶಿತಮನವರ್ಗ್ಗೆಲ್ಲಂ ಪರ್ಚುಗೊಟ್ಟುಮನಿಬರುಮೊಂದಾಗಿ ಪೋಪನ್ನೆಗಂ ಇತ್ತ ಗಂಭೀರೆಯೆಂಬ ಬರ್ದ್ದಿ ಬೈಗಿರುಳಿನೊಂದು ಜಾವಮುಂಟಿನೆ ಎಟ್ಟು ಪೊಬಲಂ ಪೊಱಮಟ್ಟು ತನ್ನೂರ್ಗೆವ್ಪೋಪಳ್ ನೆರಂ ಬೀಱದಂಜಿ ವಂದಾಲದ ಮರನನೇರಿರ್ದಳನ್ನೆಗಮಾ ಕಳ್ಳರಾಕೆಯೇಱಿರ್ದ್ದ ಮರಕ್ಕೆ ವಂದವರೊಳೊರ್ವಂ ಬಟ್ಟೆಯೊಳ್ ಬರ್ಪ ಜನಮಂ ನೋಡಲ್ವೇಡಿ ಮರದ ತುತ್ತತುದಿಯನೇಱಿ ನೋಟ್ಟನ್ನೆಗಂ ಮರದ ಮೇಗಿರ್ದ ವೃದ್ಧಸ್ತ್ರೀಯಂ ಕಂಡು ನೀನಾರ್ಗ್ಗೆಂದಾತಂ ಬೆಸಗೊಂಡೊಡಾಕೆಯುಾನೀ ಮಾರದೊಳಿರ್ಪ್ಪ ಯಕ್ಷದೇವತೆಯೆನೆಂದೊಡಾತನೆನಗೆ ಪೆಂಡತಿಯಪ್ಪಾ ಎಂದು ಬೆಸಗೊಂಡೊಡೊಂದು ಪಾಂಗಿನೊಳಪ್ಪೆನೀ ಪಿಶಿತದ ಖಂಡಮಂ ನಾಲಿಗೆಯಿಂ ಪಿಡಿದೆನ್ನ ಬಾಯೊಳಿಡುವೊಡೆ ನಿನಗಾಂ ಪೆಂಡತಿಯಪ್ಪೆನೆಂದು ನುಡಿದೊಡಾತನುಂ ನಾಲಿಗೆಯಿಂದಂ ಪಿಶಿತದ ಖಂಡಮಂ ಬಾಯೊಳಿಡೆ ನಾಲಗೆಯಂ ಪಱೆಯೆ ಕಚ್ಚಿದೊಡವಂ ಪುಯ್ಯಲಿಟ್ಟಂಜಿ ಬೀಟಿ ಅನಿಬರುಂ ಭಯದಿಂದೋಡೆ ವೃದ್ಧಸ್ತ್ರೀಯೆಂದಳ್ ಎನಗೆ ನಿಮ್ಮ ಕಳ್ವಲ್ಲಿಯೆಲ್ಲಮೆಂಟನೆಯ ಭಾಗಮಂ ತಂದೀ ಪೊಬಲೊಳಿಟ್ಟು ಪೋಪೊಡೆ ಬಾಟ್ಪೆರಲ್ಲದಾಗಳ್

ಮಾಂಸವನ್ನು ಹಿಡಿದುಕೊಂಡು ಅವರನ್ನು ಅನುಸರಿಸಿ ಬಂದನು.ಅವನನ್ನು ಎಷ್ಟೆಷ್ಟು ಮಟ್ಟಿಗೆ ಕಂಡರೋ ಅಷ್ಟು ಮಟ್ಟಿಗೆ ಬೇತಾಳನು ಬೆನ್ನಟ್ಟಿ ಬರುತ್ತಿದ್ದಾನೆಂದು ಭಾವಿಸಿ ಓಡಿದರು. ಆಗ ಅವನು ಮುಖವಾಡವನ್ನೂ ಹುಲಿದೊಗಲನ್ನೂ ತೆಗೆದು ಎಸೆದು, ತನ್ನ ಹೆಸರನ್ನು ಹೇಳಿ ಅವರ ಭಯವನ್ನು ಪರಿಹರಿಸಿ, ಜೊತೆ ಸೇರಿ ತಾನು ಮಾಡಿದ ಮಾಂಸದ ಅಡುಗೆಯನ್ನು ಅವರಿಗೆಲ್ಲ ಹಂಚಿಕೊಟ್ಟು ಅನಂತರ ಅವರೆಲ್ಲ ಒಂದಾಗಿ ಮುಂದೆ ಹೋಗುತ್ತಿದ್ದರು. ಇತ್ತ ಗಂಭೀರೆಯೆಂಬ ಮುದುಕಿ ಬೆಳಗಾಗಲು ಮೂರುಗಂಟೆಗಳಿವೆಯೆಂಬ ಹೊತ್ತಿಗೆ ಎದ್ದು ಪಟ್ಟಣದಿಂದ ತನ್ನ ಊರ ಕಡೆಗೆ ಹೋಗುತ್ತಿದ್ದಳು. ಆಕೆ ಸಹಾಯಕರು ಯಾರೂ ಇಲ್ಲದುದರಿಂದ ಹೆದರಿ ಒಂದು ಅಲದ ಮರವನ್ನೇರಿಕೊಂಡಳು. ಆ ವೇಳೆಗೆ ಆ ಕಳ್ಳರು ಆಕೆ ಹತ್ತಿದ ಮರದ ಬುಡಕ್ಕೆ ಬಂದರು. ಅವರಲ್ಲೊಬ್ಬನು ದಾರಿಯಲ್ಲಿ ಬರುವ ಜನರನ್ನು ನೋಡುವುದಕ್ಕಾಗಿ ಮರದ ತುತ್ತತುದಿಗೇರಿ ನೋಡುತ್ತಿದ್ದನು. ಅಷ್ಟರಲ್ಲಿ ಅತನು ಮರದ ಮೇಲೆ ಇದ್ದ ಮುದುಕಿಯನ್ನು ಕಂಡು 'ನೀನು ಯಾರು' ಎಂದು ಕೇಳಿದನು. ಅದಕ್ಕೆ ಆಕೆ "ನಾನು ಈ ಮರದಲ್ಲಿರುವ ಯಕ್ಷಿಣಿ" ಎಂದಳು. 'ನನಗೆ ನೀನು ಹೆಂಡತಿಯಾಗುವಿಯಾ?" ಎಂದು ಅತನು ಕೇಳಿದಾಗ, ಅವಳು "ಒಂದು ರೀತಿಯಲ್ಲಿ ಆಗುವೆನು. ಈ ಮಾಂಸದ ತುಂಡನ್ನು ನೀನು ನಾಲಗೆಯಿಂದ ಹಿಡಿದು ನನ್ನ ಬಾಯಿಯಲ್ಲಿ ಇಡುವೆಯಾದರೆ ನಾನು ನಿನಗೆ ಹೆಂಡತಿಯಾಗುವೆನು" ಎಂದಳು. ಅತನು ನಾಲಗೆಯಿಂದ ಮಾಂಸದ ತುಂಡನ್ನು ಅವಳ ಬಾಯಲ್ಲಿಡುವಾಗ ಅವನ ನಾಲಗೆ ಹರಿದುಹೋಗುವಂತೆ ಕಚ್ಚಿಬಿಟ್ಟಳು. ಅವನು ಕೂಗಾಡಿಕೊಂಡು ಬಿದ್ದುಬಿಟ್ಟನು. ಕಳ್ಳರೆಲ್ಲರೂ ಹೆದರಿ ಓಡತೊಡಗಿದರು. ಆಗ ಮುದುಕಿ ಹೇಳಿದಳು - "ನೀವು ಕದ್ದುದರಲ್ಲೆಲ್ಲ ಎಂಟನೆಯ ಒಂದು ಅಂಶವನ್ನು ನನಗೆ ತಂದು ಈ ಮರದ ಪೊಟರೆಯಲ್ಲಿಟ್ಟು ಹೋಗುವಿರಾದರೆ ಬದುಕುವಿರಿ. ಅದಲ್ಲವಾದರೆ ಸಾಯುವಿರಿ, ನಾನು ನಿಮ್ಮೆಲ್ಲರನ್ನೂ ತಿಂದು ಬಿಡುವೆನು" ಹೀಗೆ ಹೇಳಿದಾಗ ಕಳ್ಳರು ಹೆದರಿ "ಹಾಗೆಯೆ ಮಾಡುವೆವು" ಎಂದು ಒಪ್ಪಿಕೊಂಡರು. ಅವರು ಕಳ್ಳತನ ಮಾಡಿದಾಗಲೆಲ್ಲ ಎಂಟನೆಯ ಒಂದು ಅಂಶವನ್ನು ಮರದ

ಸತ್ತಿರ್ ನಿಮ್ಮೆಲ್ಲರುಮಂ ತಿಂದಪ್ಪೆನೆಂದೊಡಂಜಿ ಕಳ್ಳರಂತೆಗೆಯ್ವೆಮೆಂದೊಡಂಬಟ್ಟು ಕಳ್ಳರ್ಲಿಯೆಲ್ಲಮೆಂಟನೆಯ ಭಾಗಮಂ ಮರದ ಪೊಟಲೊಳಿಟ್ಟು ದಿವಸಕ್ಕಂ ಪೋಪರಾ ವೃದ್ಧ ಸ್ತ್ರೀಯುಂ ತನ್ನೂರಿಂದಂ ಬಂದು ಕಸವರಮಂ ಕೊಂಡು ಪೋಕುಮಿಂತಾ ಎಣ್ಬರ್ ಕಳ್ಳರನಾ ವೃದ್ಧಸ್ತ್ರೀ ಪಿಡಿದಾಳ್ದಳೆಂಬ ಕಥೆಗಳುಮಂ ಇಂತಿವು ಮೊದಲಾಗೊಡೆಯ ಚಿತ್ರಕಥೆಗಳಂ ಪಟದೊಳ್ ಬರೆದು ಜನಂಗಳ್ಗೆ ತೋಱಿ ಪೇಳ್ದು ಬತ್ತಮಂ ಕಳ್ಗೊನೀತಂ ವೈನಯಿಕನೆಂಬೊಂ ಕಳ್ಳಂ ಮತ್ತೊರ್ವಂ ವೈನಯಿಕನೆಂಬೊಂಗಾಸಕ್ತರಾಗಿ ಕೇಳ್ದ ಜನಂಗಳ ಧಾನ್ಯಮನಱುವತ್ತು ಬಳ್ಳಮನಿರ್ಪತ್ತು ಬಳ್ಳಮೆಂದಳೆಗುಮೀತನೊರ್ವಂ ವೈಕನೆಂಬೊಂ ಕಳ್ಳಂ ಮತ್ತೊರ್ವಂ ವ್ಯೋಮಕನೆಂಬೊಂ ವೈನಯಿಕನ ಕಳ್ದ ಧಾನ್ಯಮನೆಲ್ಲಮನಲ್ಲಿಯೆ ನೆಲಮನೆಯೊಳಗಿರ್ದು ಕಱೆದಾನುಮೊಂದು ಛಿದ್ರದ್ವಾರದೊಳಗಣ್ಗೆ ಬತ್ತಮಂ ಬರಿಕೊಳ್ಳಂ ಪೊಱಗಣಳೆದ ಬತ್ತಮಂ ನೋಟಕ್ಕೆ ಕಱೆದಪ್ಪಂತಿರೆ ಇಂತು ಮೂವರುಮೊಂದಾಗಿ ಬತ್ತಮಂ ಮಾಱುವರಾ ಬತ್ತಂಗಳಂ ಕಳ್ದುಕೊಳ್ವರೀ ಪ್ರಕಾರದಿಂ ಮೂವರ್ಗಂ ಕಾಲಂ ಸಲೆ ಮತ್ತೊಂದು ದಿವಸಂ ಕೌಶಳಮೆಂಬೂರ ಗಾಮುಂಡಂ ಜಗದ್ಗೃಹನೆಂಬೊಂ ತನ್ನ ಬತ್ತಮಂ ಚಂಪಾನಗರಕ್ಕೆ ಮಾಱಲೆಂದುಕೊಂದು ಪೋಗಿ ಬತ್ತಮನಳೆವಲ್ಲಿಯಾ ಮೂವರ ದೋಷಂಗಳುಂ ಪ್ರಕಟಮಾಗರಸುವರೆಗಮಾದೊಡೆ ಅರಸನಿವರ ಕಳವಿನ ಪುಸಿಯ ದೋಷಂ ಕಾರಣಮಾಗಿ ಮೂವರುಮಂ ಕೊಲಲ್ ಪೇಱ್ದೊಡೆ ಕೊಲಲುಯ್ಪರ್ ಮಗಳೆ ಎಂದು ಪೇಱ್ದೊಡೆ ನಾಗಶ್ರೀಯುಮೀ ತೆಱನಪ್ಪ ದುಃಖಕ್ಕಂಜಿ ಪುಸಿಯಂ ಕಳವುಮಂ ನಿವೃತ್ತಿಗೆಯ್ದೆನಮ್ಮಾ ಎಂದೊಡಂತಪ್ಪೊಡಾ ಎರಡುಂ ಬ್ರತಂಗಳ್ ನಿನಗಿರ್ಕೆ ಮಗಳೆ ಎಂದೊಡಂತೆಗೆಯ್ದೆನೆನೆ

ಪೊಟರೆಯಲ್ಲಿಟ್ಟು ಪ್ರತಿದಿನವೂ ಹೋಗುತ್ತಿದ್ದರು. ಆ ಮುದುಕಿ ತನ್ನ ಊರಿನಿಂದ ಬಂದು ಪೊಟರೆಯಲ್ಲಿದ್ದ ದ್ರವ್ಯವನ್ನು ಕೊಂಡು ಹೋಗುತ್ತಿದ್ದಳು. ಹೀಗೆ ಆ ಎಂಟು ಮಂದಿ ಕಳ್ಳರನ್ನು ಆ ಮುದುಕಿ ಹಿಡಿದು ಅಳಿದಳು ಎಂಬ ಕಥೆಗಳನ್ನೂ ಇಂತು ಇವೇ ಮೊದಲಾದ ಚಿತ್ರಕಥೆಗಳನ್ನೂ ವಸ್ತ್ರದಲ್ಲಿ ಬರೆದು ಜನರಿಗೆ ತೋರಿಸಿ ಹೇಳುತ್ತ ಬತ್ತವನ್ನು ಕದಿಯುತ್ತಿರುವ ಈತನು ವೈನಯಿಕನೆಂಬ ಕಳ್ಳನು. ಇನ್ನೊಬ್ಬನು ವೈಕನೆಂಬ ಕಳ್ಳನು. ಇವನು ವೈನಯಿಕನೆಂಬವನಲ್ಲಿ ಆಸಕ್ತರಾಗಿ ಕೇಳುತ್ತಿರುವ ಜನರ ಯೋಚನೆ ಬೇರೆ ಕಡೆ ಇರುವ ವೇಳೆಗೆ ಅರುವತ್ತು ಬಳ್ಳವನ್ನು ಇಪ್ಪತ್ತು ಬಳ್ಳ ಎನ್ನುತ್ತ ಅಳೆಯುವನು. ಮತ್ತೊಬ್ಬನು ವ್ಯೋಮಕನೆಂಬ ಕಳ್ಳನು. ಅವನು ವೈನಯಿಕನು ಕದ್ದ ಧಾನ್ಯವನ್ನೆಲ್ಲ ಅಲ್ಲೇ ನೆಲವನೆಯ ಒಳಗಿದ್ದುಕೊಂಡು ಸ್ವಲ್ಪ ಚಿಕ್ಕದಾಗಿರುವ ತೂತಿನ ಬಾಯಿಯೊಳಗೆ ಬತ್ತವನ್ನು ಬರುವಂತೆ ಮಾಡಿ ಅಪಹರಿಸುವನು. ಹೊರಗೆ ಅಳತೆ ಮಾಡಿದ ಬತ್ತವನ್ನು ನೋಡುವಾಗ ಕಡಮೆಯಾಗುವಂತೆ ಮಾಡಿ ಈ ಮೂವರು ಕಳ್ಳರೂ ಒಂದಾಗಿ ಬತ್ತವನ್ನು ಕದ್ದುಕೊಂಡು ಮಾರುತ್ತಿದ್ದರು. ಈ ರೀತಿಯಾಗಿ ಆ ಮೂವರಿಗೂ ಸ್ವಲ್ಪ ಕಾಲ ಕಳೆಯಲು, ಮತ್ತೊಂದು ದಿನ ಕೌಶಲವೆಂಬ ಊರಿನ ಗೌಡನಾದ ಜಗದ್ಗೃಹನೆಂಬುವನು ತನ್ನ ಬತ್ತವನ್ನು ಮಾರುವುದಕ್ಕಾಗಿ ಚಂಪಾನಗರಕ್ಕೆ ಕೊಂಡುಹೋದನು. ಬತ್ತವನ್ನು ಅಳೆಯುವ ವೇಳೆಗೆ ಆ ಮೂವರ ಕಳ್ಳತನವೂ ಪ್ರಕಟವಾಗಲು ರಾಜನ ತನಕವೂ ಈ ಸಂಗತಿ ತಿಳಿಯಿತು. ರಾಜನು ಇವರ ಕಳ್ಳತನದ ಮತ್ತು ಸುಳ್ಳಿನ ತಪ್ಪಿಗಾಗಿ ಮೂವರನ್ನೂ ಕೊಲ್ಲಲು ಆಜ್ಞೆ ಮಾಡಿದನು. ಆದುದರಿಂದ ಇವರನ್ನು ಕೊಲ್ಲಲು ಒಯ್ಯುತ್ತಿದ್ದಾರೆ, ಮಗಳೆ - ಎಂದು ಸೋಮಶರ್ಮನು ಮಗಳಾದ ನಾಗಶ್ರೀಗೆ ಹೇಳಿದನು. ಆಗ ಅವಳು - 'ಈ ರೀತಿಯಾದ

ಮತ್ತಂ ಕಿಱಿದಂತರಮಂ ಪೋಪನ್ನೆಗಂ ಗಂಡನುಮಂ ಪೆಂಡತಿಯನೊಡಗೂಡಿ ಇರ್ವರುಮಂ ಪೆಡಂಗಯ್ಯುಡಿಯೆ ಕಟ್ಟಕೊಂದು ಪೋಪರಂ ಕಂಡೇಂ ದೋಷಂಗೆಯ್ದರವರಂ ಬಿಸಗೊಳ್ಳಿಮೆಂದು ತಂದೆಗೆ ಪೇಱಿ೦ದಾತನುಮದೆಲ್ಲಮಂ ಬಿಸಗೊಂಡು ಮಗಳ್ಗಿಂತೆಂದು ಪೇಱುಂ ಚಂಪಾನಗರದ ಸಾರೆ ಶ್ವೇತಪುರಮೆಂಬ ಪೊಱಲಲ್ಲಿ ಮತ್ಸ ನೆಂಬ ಪರದನಾತನ ಪೆಂಡತಿ ಜೈಸೆಯೆಂಬೊಳ್ ಇರ್ವರ್ಗ್ಗಂ ಮಕ್ಕಳ್ ನಂದನುಂ ಬೋದನೆಂಬವರ್ಗಳ್ ಮತ್ತಮಾ ಪೊಱಲೊಳ್ ಸೂರದತ್ತನೆಂಬ ಪರದಂಗಂ ವಸುದತ್ತೆಯೆಂಬ ಪರದಿಗಂ ಮಗಳ್ ಮೋದಾಳಿಯೆಂಬೊಳಾಕೆಯಂ ಬಸಿಱಿಂಳಿರ್ದಂತೆ ಸೋದರಮಾವನ ಮಗಂ ನಂದನೆಂಬೊಂಗೆ ಕುಡುವಮೆಂದು ನುಡಿದರಿಂತು ಕಾಲಂ ಸಲೆ ನಂದನೊಂದು ದಿವಸಂ ದ್ರವ್ಯಂಬಡೆವುದು ಕಾರಣಮಾಗಿ ಸುವರ್ಣದ್ವೀಪಕ್ಕೆ ವೋಗುತ್ತಂ ಮಾಮಂಗೆಂದಂ ಪನ್ನೆರಡು ವರುಷಕ್ಕಾಂ ಬಾರದಾಗಳ್ ಎಮ್ಮ ಕಿಱಿಯ ತಮ್ಮ ಬೋದಂಗೆ ಕೂಸಂ ಕುಡಿಮೆಂದು ಪೇಱ್ದು ಪೋದಂ ಇಂತು ಕಾಲಂ ಸಲೆ ಪನ್ನೆರಡು ವರುಷಂ ನೆಱಿದಂದು ನಂದಂ ಬಂದನಿಲ್ಲೆಂದು ಕೂಸಂ ಬೋದಂಗೆ ಕೈನೀರೆಱಿದು ಕುಡುವ ಪ್ರಸ್ತಾವಕ್ಕಾಗಳ್ ನಂದಂ ಬಂದೊಡಾತಂಗೆ ಕುಡಲ್ ತಗುಳ್ದೊಡೆ ತಮ್ಮನ ಪೆಂಡತಿಯನೆಮಗೆ ಕೊಳಲಕ್ಕುಮೆ ಎಂದು ಕೊಂಡನಿಲ್ಲ ಬೋದನುಮಣ್ಣನ ಪೆಂಡತಿಯನೆಂತು ಕೊಳ್ವೆನೆಂದಾತನುಂ ಕೊಂಡನಿಲ್ಲಿಂತಿರ್ವರುಂ ಬಿಸುಟ್ಟೊಡೆ ಮೋದಾಳಿ ತನ್ನ ತವರ್ಮನೆಯೊಳಿರ್ದಳ್ ಮತ್ತಮಾ ಪೊಱಲೊಳ್ ನಾಗದತ್ತನೆಂಬೊಂ ಪರದನಾತನ ಭಾರ್ಯೆ ಗಂಗೆಯೆಂಬೊಳಾ ಇರ್ವರ್ಗಂ ಮಗಂ ನಾಗಸೂರನೆಂಬೊನಾತಂಗೆಣ್ಬರ್ ಪೆಂಡಿರ್ ತನ್ನ ಪೆಂಡಿರೊಳ್ ಸಂತೋಸಂಬಡೆಯದೆ

ದುಃಖಕ್ಕೆ ಹೆದರಿ ಸುಳ್ಳನ್ನೂ ಕಳ್ಳತನವನ್ನೂ ಬಿಟ್ಟಿದ್ದೇನಪ್ಪಾ' ಎಂದು ಹೇಳಿದಳು. 'ಹಾಗಾದರೆ ಆ ಎರಡೂ ವ್ರತಗಳು ನಿನಗಿರಲಿ ಮಗಳೇ," ಎಂದು ಸೋಮಶರ್ಮನು ಹೇಳಲು ಆಕೆ "ಹಾಗೆಯೇ ಮಾಡುವೆನು" ಎಂದಳು. ಆ ಮೇಲೆ ಸ್ವಲ್ಪ ದೂರ ಹೋಗುವಷ್ಟರಲ್ಲಿ ಗಂಡ ಹೆಂಡತಿ ಇಬ್ಬರನ್ನೂ ಒಟ್ಟಿಗೆ ಕೈಮುರಿಯುವಂತೆ ಹಿಂದಕ್ಕೆ ಕಟ್ಟಿಕೊಂಡು ಹೋಗುವುದನ್ನು ನಾಗಶ್ರೀ ಕಂಡಳು. "ಅವರು ಏನು ತಪ್ಪು ಮಾಡಿದ್ದಾರೆ ಕೇಳಿ" ಎಂದು ತಂದೆಗೆ ತಿಳಿಸಲು ಆತನು ಅದೆಲ್ಲವನ್ನೂ ಕೇಳಿ ತಿಳಿದುಕೊಂಡು ಮಗಳಿಗೆ ಹೀಗೆ ಹೇಳಿದನು. ಚಂಪಾನಗರದ ಹತ್ತಿರ ಶ್ವೇತಪುರವೆಂಬ ಪಟ್ಟಣವಿದೆ. ಅಲ್ಲಿ ಮತ್ಸ್ಯನೆಂಬ ವರ್ತಕನಿದ್ದನು. ಅವನಿಗೆ ಜೈಸೆ ಎಂಬುವಳು ಹೆಂಡತಿ. ಇವರಿಗೆ ನಂದ ಮತ್ತು ಬೋದ ಎಂಬಿಬ್ಬರು ಮಕ್ಕಳಿದ್ದರು. ಅದಲ್ಲದೆ ಆ ಪಟ್ಟಣದಲ್ಲಿ ಸೂರದತ್ತನೆಂಬ ವರ್ತಕನಿಗೂ ಅವನ ಪತ್ನಿಯಾದ ವಸುದತ್ತೆಗೂ ಮೋದಾಳಿ ಎಂಬ ಮಗಳಿದ್ದಳು. ಆಕೆ ತಾಯಿಯ ಗರ್ಭದಲ್ಲಿರುವಾಗಲೇ ಸೋದರಮಾವನ ಮಗನಾದ ನಂದನೆಂಬವನಿಗೆ ಕೊಡೋಣ ಎಂದು ಆ ದಂಪತಿಗಳು ಆಡಿಕೊಂಡರು. ಹೀಗೆಯೇ ಕಾಲ ಕಳೆಯಲು ನಂದನು ಒಂದು ದಿವಸ ಹಣವನ್ನು ಸಂಪಾದಿಸುವ ಕಾರಣಕ್ಕಾಗಿ ಸುವರ್ಣದ್ವೀಪಕ್ಕೆ ಹೋಗಲು ಸಿದ್ಧನಾಗಿ ತನ್ನ ಮಾವನಿಗೆ ಹೀಗೆಂದನು - "ನಾನು ಹನ್ನೆರಡು ವರ್ಷಗಳವರೆಗೂ ಬಾರದಿದ್ದರೆ ನಿಮ್ಮ ಮಗಳನ್ನು ನನ್ನ ಚಿಕ್ಕತಮ್ಮನಾದ ಬೋದನಿಗೆ ಕೊಡಿ" - ಹೀಗೆ ಹೇಳಿ ತೆರಳಿದನು. ಈ ರೀತಿಯಾಗಿ ಹಲವು ಕಾಲ ಕಳೆಯಿತು. ಹನ್ನೆರಡು ವರ್ಷಗಳು ಪೂರ್ಣವಾದಾಗ ನಂದನು ಬಂದಿಲ್ಲವೆಂದು ಮಗಳನ್ನು ಬೋದನಿಗೆ ಧಾರೆಯೆರೆದುಕೊಡುವ ಸಂದರ್ಭದಲ್ಲಿ ನಂದನು ಬಂದುಬಿಟ್ಟನು. ಆಗ ಆತನಿಗೆ ಕೊಡಲು ಉದ್ಯುಕ್ತರಾಗಲು ನಂದನು "ತಮ್ಮನ ಹೆಂಡತಿಯನ್ನು ನನಗೆ ಸ್ವೀಕರಿಸಲು ಬರುವುದೇ ?" ಎಂದು ಹೇಳಿದನು. ಆಕೆಯನ್ನು ಸ್ವೀಕರಿಸದಾದನು. ಬೋದನು

ಮೋದಾಳಿಯೊಳ್ ಮಱುವಾಬುತ್ತಿರ್ಪುದಂ ಇಂತು ಕಾಲಂ ಸಲೆ ಮತ್ತೊಂದು ದಿವಸಂ ನಾಗಸೂರಂ ಮೋದಾಳಿಯನೊಡಗೊಂಡು ಚಂಪಾನಗರಕ್ಕೆ ವಂದೊಡೆ ತಳಾಱಂ ಕಂಡಾಯಿರ್ವರುಮಂ ಪಿಡಿದು ಕೊಂಡು ಪೋಗಿ ಅರಸಂಗೆ ತೋಱೆದೊಡರಸನುಮಿರ್ವರುಮನೆರಡು ಕಾಯ್ದ ಕರ್ಬೊನ್ನ ಪ್ರತಿಮೆಗಳ ನಪ್ಪವೇಱಿಂದು ತಳಾಱಂಗೆ ಬೆಸವೇಱ್ದೊಡವರಿರ್ವರುಮಂ ಕೊಲಲ್ ಕೊಂದು ಪೋಪರ್ ಮಗಳೆ ಎಂದು ಪೇಱ್ದೊಡಾನುಮಿಂತಪ್ಪ ಭಯಕ್ಕಂಜಿ ಪರಪುರುಷ ಪ್ರಸಂಗಮಂ ತೊಱೆದೆನೆಂದೊಡಂತಪ್ಪೊಡಾ ಬ್ರತಮುಂ ನಿನಗಿರ್ಕ್ ಮಗಳೆ ಎಂದೊಡುಱೆದ ಬ್ರತಂಗಳಂ ಬಿಸುಬ್ರುವೆಂದು ಪೇಱ್ದು ಕಱೆದಂತರಮಿರ್ವರ್ ಪೋಪರನ್ನೆಗಂ ಮತ್ತೊರ್ವನಂ ಕೊಲಲ್ ಕೊಂದು ಪೋಪ ಪುರುಷನಂ ಕಂಡೀತನೇದೋಪಂಗೆಯ್ದನಾಗಿ ಕೊಲಲ್ ಕೊಂದು ಪೋದಪ್ಪೆಂದು ಬೆಸಗೊಳ್ಳಿಯಮ್ಮಾ ಎಂದು ತಂದೆಗೆ ಪೇಱ್ದೊಡಾತನುಮದೆಲ್ಲಮಂ ಬೆಸಗೊಂಡು ಮಗಳ್ಗಿಂತೆಂದು ಪೇಱ್ದುಂ ಈ ಕೊಲೆಪಡುವಾತನರಸರ ಗೋಮಂದಳಮಂ ಕಾವೊಂ ವೀರಪೂರ್ಣನೆಂಬೊನರಸನೊಂದು ದಿವಸಮಾತಂಗೊಸೆದು ತನ್ನ ಗೋಮಂದಳದೊಳಗೊಳ್ಕಿದುವಪ್ಪ ಪತ್ತು ಪಯನುಮಂ ಮೂಸಾಸಿರಗಂದುಗ ಬತ್ತಮುಮಂ ಪ್ರಮಾಣಂ ಮಾಡಿ ಕೊಟ್ಪೊಡಾ ಪಸರದೊಳರಸಂ ದಾಯಂಗೊಟ್ಪನೆಂದು ಸಾಮಂತರ ನಿಯೋಗಿಗಳ ಅರಸಿಯರ ಗೋವುಗಳೊಳೊಳ್ಕಿದುವಪ್ಪ ಎಮ್ಮೆಯುಂ ಪಸುಗಳುಮನಾಯ್ದುಕೊಂಡರಸರ ಮಂದಲದೊಳಗೆ

"ನಾನು ಅಣ್ಣನ ಹೆಂಡತಿಯನ್ನು ಹೇಗೆ ಸ್ವೀಕರಿಸುವೆನು ?" ಎಂದು ಅತನೂ ಸ್ವೀಕರಿಸಲಿಲ್ಲ. ಹೀಗೆ ಇಬ್ಬರೂ ಬಿಟ್ಟ ಕಾರಣ ಮೋದಾಳಿ ತನ್ನ ತಾಯಿಯ ಮನೆಯಲ್ಲಿಯೇ ಇದ್ದಳು. ಆ ಪಟ್ಟಣದಲ್ಲಿ ನಾಗದತ್ತನೆಂಬ ವರ್ತಕನಿದ್ದನು. ಅವನ ಪತ್ನಿ ಗಂಗೆಯೆಂಬವಳು. ಆ ಇಬ್ಬರಿಗೆ ಮಗನು ನಾಗಸೂರನೆಂಬವನು. ಅತನಿಗೆ ಎಂಟುಮಂದಿ ಹೆಂಡಿರಿದ್ದರು. ತನ್ನ ಹೆಂಡಿರಲ್ಲಿ ನಾಗಸೂರನು ತೃಪ್ತನಾಗದೆ ಮೋದಾಳಿಯೊಂದಿಗೆ ಗುಟ್ಟಾಗಿ ಸೇರಿ ಬಾಳುತ್ತಿದ್ದನು. ಹೀಗೆಯೇ ಹಲವು ಕಾಲ ಕಳೆಯಿತು. ಒಂದು ದಿವಸ ನಾಗಸೂರನು ಮೋದಾಳಿಯನ್ನು ಕೂಡಿಕೊಂಡು ಚಂಪಾನಗರಕ್ಕೆ ಬಂದನು. ಆಗ ಪಟ್ಟಣದ ಕಾವಲುಗಾರನು ಕಂಡು ಆ ಇಬ್ಬರನ್ನೂ ಹಿಡಿದು ಕೊಂಡೊಯ್ದು ಅರಸನಿಗೆ ತೋರಿಸಿದನು. ಅರಸನು ಆ ಇಬ್ಬರನ್ನೂ ಎರಡು ಕಾದ ಕಬ್ಬಿಣದ ಪ್ರತಿಮೆಗಳನ್ನು ಅಪ್ಪುವಂತೆ ಹೇಳಿಂದು ತಳಾರನಿಗೆ ಆಜ್ಞೆಮಾಡಿದನು. ಅದರಂತೆ ಅವರಿಬ್ಬರನ್ನೂ ಕೊಲ್ಲಲು ಕೊಂಡೊಯ್ಯುತ್ತಿದ್ದಾರೆ ಮಗಳೇ - ಎಂದು ಸೋಮಶರ್ಮನು ಹೇಳಿದನು. ಆಗ ನಾಗಶ್ರೀ "ನಾನೂ ಇಂತಹ ಭಯಂಕರ ಸಂಗತಿಗೆ ಹೆದರಿ ಬೇರೆ ಗಂಡಸರ ಸಂಸರ್ಗವನ್ನು ಬಿಟ್ಟಿದ್ದೇನೆ" ಎಂದಳು. "ಹಾಗಾದರೆ ಆ ವ್ರತವೂ ನಿನಗಿರಲಿ ಮಗಳೇ" ಎಂದು ಸೋಮಶರ್ಮನು ಹೇಳುತ್ತ ಇನ್ನುಳಿದ ವ್ರತಗಳನ್ನು ಬಿಸಾಡು ಎಂದು ಹೇಳಿ ಇಬ್ಬರೂ ಸ್ವಲ್ಪ ದೂರ ಹೋದರು. ಅಷ್ಟರಲ್ಲಿ ಮತ್ತೊಬ್ಬ ಗಂಡುಸನ್ನು ಕೊಲ್ಲಲು ಒಯ್ಯುತ್ತಿರುವುದನ್ನು ನಾಗಶ್ರೀ ಕಂಡಳು. "ಅಪ್ಪಾ ಈತನು ಏನು ತಪ್ಪು ಮಾಡಿರುವುದರಿಂದ ಕೊಲ್ಲಲು ಕೊಂಡೊಯ್ಯುತ್ತಿದ್ದಾರೆ ? - ಎಂದು ಕೇಳಿರಿ" ಎಂದು ತಂದೆಗೆ ಹೇಳಿದಳು. ಅತನು ಅದೆಲ್ಲವನ್ನೂ ವಿಚಾರಿಸಿ ತಿಳಿದು ಮಗಳಿಗೆ ಹೀಗೆಂದನು. ಈ ಕೊಲ್ಲಲ್ಪಡುವ ಮನುಷ್ಯನು ರಾಜರ ಹಸುಗಳ ಮಂದೆಯನ್ನು ಕಾಯತಕ್ಕವನು. ವೀರಪೂರ್ಣನೆಂದು ಹೆಸರು. ರಾಜನು ಒಮ್ಮೆ ಅವನ ಮೇಲೆ ಪ್ರೀತಿಪಟ್ಟು ತನ್ನ ಆಕಳ ಮಂದೆಯೊಳಗೆ ಚೆನ್ನಾಗಿರುವ ಹತ್ತು ಕರೆವ ಹಸುಗಳನ್ನೂ ಮೂರುಸಾವಿರ ಖಂಡುಗ

ಪುಗಿಸಿಯುಣುತ್ತಮಿರ್ಕುಂ ಮತ್ತಂ ಲೋಭಾಭಭೂತಂ ಪೊಲಿಲ ಪಸುಗಳನರಸರ ಗೋಮಂಡಳಮಂ ಪೊಕ್ಕವೆಲ್ಲಮಂ ಬಂಡಾರಂಪೊಕ್ಕವೆಂದುಂ ಪೊಜಮಡವೆಂದುಂ ಜಡಿದು ಬಗ್ಗಿಸಿಕೊಂಡುಣ ಮತ್ತೊಂದು ದಿವಸಂ ಮಹಾದೇವಿಯ ಗೋಮಂಡಳದೊಳಗಗ್ಗಳಮಪ್ಪ ಕಾಮಧೇನುವನಾಯ್ದೊಂದು ದಿವಸಂ ವೀರಪೂರ್ಣಂ ಮೂದಲಿಸೆ ಮಹಾದೇವಿಯರಸಂಗೆನ್ನ ಕಾಮಧೇನುವಂ ವೀರಪೂರ್ಣಂ ಕೊಂಡೊಯ್ದನೆಂದೊಡರಸಂ ಸಾವಂತರುಮರಸಿಯರುಂ ನಿಯೋಗಿಗಳುಂ ಪೊಲಿಲ ಜನಂಗಳು ಮೆಲ್ಲರೆಮ್ಮೆಮ್ಮ ಪಸುಗಳೆಲ್ಲಮಂ ಕೊಂಡನೆಂದನಿಬರುಂ ಪೇಳಿಯರಸಂ ಮುಳಿದವನೆನ್ನ ಕೊಟ್ಟುದಱಿಂ ಸಂತೋಷಂಬಟ್ಟನಿಲ್ಲ ಲೋಗರ ಪಶುಗಳಂ ಕೊಳಲ್ ತಗುಳ್ದೊನ್ ಮಹಾ ಲೋಭಾಭಭೂತನಸಂತುಷ್ಟಚಿತ್ತನಿವನಂ ಕೊಲ್ಲಿವೆಂದು ತಳಾಜಂಗೆ ಬೆಸವೇೞ್ದೊಡೆ ಸೂಲದೊಳಿಕ್ಕಲೊಯ್ದಪ್ಪರ್ ಮಗಳೆ ಎಂದು ಪೇೞ್ದೊಡೆ ನಾಗಶ್ರೀಯೆಂದಳ್ ಕೊಲ್ಲದ ಪುಸಿಯದ ಕಳ್ಳದ ಸ್ವದಾರ ಸಂತೋಷಂ ಪರಿಮಿತಪರಿಗ್ರಹಮಿಂತೆಯ್ದುಮಣುವ್ರತಂಗಳಂ ಕೊಂಡೆನೀ ವ್ರತಂಗಳಂ ರಿಸಿಯರ್ಗೊಪ್ಪಿಸಿದೊಡಾನುಮೀಯಯ್ದುಂ ಪಾಪಂಗಳೊಳಪ್ಪ ಸೇಡೆಯಂ ಕಟ್ಟುಪಡುವುದುಂ

ಬತ್ತವನ್ನೂ ಲೆಕ್ಕಮಾಡಿ ಕೊಟ್ಟನು. ವೀರಪೂರ್ಣನು ಆ ಸಲುಗೆಯಿಂದ ರಾಜನು ತನಗೆ ಕೊಟ್ಟಿದ್ದಾನೆಂದು ಹೇಳಿಕೊಂಡು ಅಧೀನ ರಾಜರ, ಅಧಿಕಾರಿಗಳ ಹಾಗೂ ಅರಸಿಯರ ಆಕಳುಗಳೊಳಗೆ ಉತ್ತಮವಾದ ಎಮ್ಮೆಗಳನ್ನೂ ಹಸುಗಳನ್ನೂ ಆಯ್ದುಕೊಂಡು ರಾಜನ ಹಸುಗಳ ಮಂದೆಯೊಳಗೆ ಸೇರಿಸಿಕೊಂಡು ಉಣ್ಣುತ್ತಿದ್ದನು. ಅಷ್ಟೂ ಅಲ್ಲದೆ ದುರಾಶೆಗೆ ವಶನಾಗಿ ಅರಸನ ಆಕಳ ಮಂದೆಯನ್ನು ಹೊಕ್ಕ ಪಟ್ಟಣದ ಹಸುಗಳೆಲ್ಲವನ್ನೂ ರಾಜಭಂಡಾರಕ್ಕೆ ಸೇರಿದವೆಂದೂ ಅವು ಹೊರಗೆ ಹೋಗಲಾರವೆಂದೂ ಹೆದರಿಸಿ ಮಣಿಸಿಕೊಂಡು ಅನುಭವಿಸುತ್ತಿದ್ದನು. ಮತ್ತೊಂದು ದಿನ ವೀರಪೂರ್ಣನು ಮಹಾರಾಣಿಯ ಹಸುಮಂದೆಯಲ್ಲಿ ಶ್ರೇಷ್ಠವೆನಿಸಿದಂತಹ ಕಾಮಧೇನುವನ್ನು ವಶಪಡಿಸಿಕೊಂಡನು. ಮಹಾರಾಣಿ ಆಕ್ಷೇಪಿಸಿದಾಗ ಅವಳನ್ನೇ ಮೂದಲಿಸಿದನು. ಅರಸಿಯು 'ನನ್ನ ಕಾಮಧೇನುವನ್ನು ವೀರಪೂರ್ಣನು ಕೊಂಡುಹೋಗಿದ್ದಾನೆ' ಎಂದು ರಾಜನಿಗೆ ಹೇಳಿದಳು. ಅದಲ್ಲದೆ, ಅಧೀನರಾಜರೂ ಅರಸಿಯರೂ ಅಧಿಕಾರಿಗಳೂ ಪಟ್ಟಣದ ಜನರೂ ಎಲ್ಲರೂ "ನಮ್ಮ ಎಮ್ಮೆಗಳನ್ನೂ ಹಸುಗಳನ್ನೂ ವೀರಪೂರ್ಣನು ತೆಗೆದುಕೊಂಡನು" ಎಂದು ಹೇಳಿದರು. ಆಗ ರಾಜನು ಕೋಪಗೊಂಡು "ಇವನು ನಾನು ಕೊಟ್ಟುದರಲ್ಲಿ ತೃಪ್ತಿ ಪಡಲಿಲ್ಲ. ಜನರ ಹಸುಗಳನ್ನು ವಶಮಾಡಲು ಉದ್ಯುಕ್ತನಾಗಿದ್ದಾನೆ. ಇವನು ಮಹಾಪಿಪುಣನು, ಅತೃಪ್ತವಾದ ಮನಸ್ಸಿನವನು, ಇವನನ್ನು ಕೊಂದಿಕ್ಕಿ" ಎಂದು ತಳಾರನಿಗೆ ಆಜ್ಞೆಮಾಡಿದನು. ಹೀಗೆಂದು ಸೋಮಶರ್ಮನು ಹೇಳಿದಾಗ ನಾಗಶ್ರೀ ಹೀಗೆಂದಳು "ಅಹಿಂಸೆ, ಸತ್ಯ, ಅಸ್ತೇಯ, ಪರದಾರ ನಿವೃತ್ತಿ, ಮಿತಿಯುಳ್ಳ ಸ್ವೀಕರಣ ಎಂಬ ಈ ಐದು ಅಣುವ್ರತಗಳನ್ನು ಸ್ವೀಕರಿಸಿರುತ್ತೇನೆ. ಈ ವ್ರತಗಳನ್ನು ಋಷಿಗಳಿಗೆ ಹಿಂದಕ್ಕೆ ಕೊಟ್ಟರೆ ನಾನು ಈ ಐದು ಪಾಪಗಳಿಂದಾಗುವ ಆಯಾಸವನ್ನೂ ಬಂಧನಕ್ಕೆ ಒಳಗಾಗುವುದನ್ನೂ ಕೊಲೆಯನ್ನೂ ಇವರ ಹಾಗೆಯೇ ಪಡೆಯಬೇಕಾಗುವುದು". ಹೀಗೆನ್ನಲು ಸೋಮಶರ್ಮನು "ಈ ಐದು ಅಣುವ್ರತಗಳನ್ನು ಅನುಸರಿಸಿಕೊಂಡು ದೃಢವಾದ ವ್ರತದವಳಾಗು, ಒಳ್ಳೆಯ ವ್ರತದವಳಾಗು ಮಗಳೇ ಇದನ್ನು ನೀನು ಅವರಿಗೆ ಒಪ್ಪಿಸುವುದು ಬೇಡ. ಹೇಗಿದ್ದರೂ ಆ ನಾಚಿಕೆಗೇಡಿಯೂ

ಕೊಲೆಯುಮನಿವರಂತೆಯ್ದಲ್‌ವೇಟ್ಕುಮೆಂದೊಡೆ ಸೋಮಶರ್ಮನೆಂದನೀಯಯ್ದುಮಣುವ್ರತಮುಂ ಕೈಕೊಂಡು ದೃಢವ್ರತೆಯಾಗು ಸುವ್ರತೆಯಾಗು ಮಗಳೆ ಅವರ್ಗೊಪ್ಪಿಸಲ್ವೇಡೆಂತುಮಾ ನಿರ್ಲಜ್ಜಂ ಬತ್ತಲಿಗನಪ್ಪ ಸವಣನಲ್ಲಿಗೆವೋಗಿ ಕಂಡು ನುಡಿದು ಕಾಡಿ ಬರ್ಪಂ ಬಾ ಮಗಳೆ ಎಂದು ಮಗಳನೊಡಗೊಂಡು ರಿಸಿಯರಲ್ಲಿಗೆ ಪೋಗಿ ಕಂಡು ಗೆಂಟಱಿಳಿರ್ದಿಂತೆಂಗುಂ ಎಲೆ ತಪಸ್ವಿ ಎನ್ನ ಮಗಳ್ಗೆ ನಿಮ್ಮ ಬ್ರಂತಗಳನೇಕೆ ಕೊಟ್ಪರೆನೆ ಸೂರ್ಯಮಿತ್ರಭಟಾರರೆಂದರ್ ನಿಮ್ಮ ಮಗಳ್ಗೇಕಕ್ಕುಮೆಮ್ಮ ಮಗಳಿಂಗೆಮ್ಮ ಬ್ರತಂಗಳನಾಮುಂ ಕೊಟ್ಪೊಡೆ ನಿನಗೆ ಬೇನೆ ಮೂಡಿತ್ತೆ ಎಂದು ನುಡಿದು ಇತ್ತ ಬಾ ನಾಗಶ್ರೀ ಎಂದು ಕರೆದೊಡಾಕೆಯುಂ ಪೋಗಿ ಇರ್ವರ್ ಭಟ್ಟಾರಕರ ಕಾಲ್ಗಳಂ ಪಿಡಿದೆೞಗಿ ಪೊಡೆವಟ್ಟವರ ಕೆಲದೊಳಿರ್ದೊಡೆ ಸೋಮಶರ್ಮಭಟ್ಟಂ ಬೆಜಗಾಗಿ ಕೀಲಿಸಿದಂತಿರ್ದೊನಂ ಭಟ್ಟಾರರೆಂದರ್ ಈ ಎಡೆಯಿಂದಂ ಬೇಗಂ ಪೋಗು ದುಷ್ಟಬ್ರಾಹ್ಮಣಾ ಅರಸರ್ಗೆ ಪೇೞ್ದು ನೀನಟ್ಟಾಡದನ್ನೆಗಮೆಂದೊಡಲ್ಲಿಂದಮೆೞ್ದು ಪೋಗಿ ಸೋಮಶರ್ಮಭಟ್ಟಂ ಪಿರಿದೊಂದು ತೊವಲಂ ಪಿಡಿದಬ್ರಹ್ಮಣ್ಯಂ ಭೋ ಅಬ್ರಹ್ಮಣ್ಯಂ ಭೋ ಎಂದೞುತ್ತಮಂಗಡಿಯ ಜನಂಗಳ್ಗೆ ಪುಯ್ಯಲಿಡುತುಮರಮನೆಗೆ ಪೋಗಿ ಚಂದ್ರವಾಹನನೆಂಬರಸನಂ ಕಂಡಿಂತೆಂದು ಬಿನ್ನಪಂಗೆಯ್ದುಂ ಮಹಾರಾಜಾ ಆಂ ಬತ್ತಲೆ ಸವಣರಿಂದಂ ಕೋಳ್ಪಟ್ಟೆನೆನ್ನ ಮಗಳ್ ನಾಗಶ್ರೀಯಂ ತನ್ನ ಮಗಳೆಂದು ಕೈಕೊಂಡಿರ್ದರ್ ಮತ್ತವರ್ ಕೂಸಂ ಕೊಂಡೋಡದನ್ನೆಗಂ ಪೋಪಂ ಬನ್ನಿಮೆಂದರಸನನೊಡಗೊಂಡು

ಬತ್ತಲೆಯಾಗಿರುವವನೂ ಅದ ಜೈನ ಸನ್ಯಾಸಿಯಲ್ಲಿಗೆ ಹೋಗಿ, ಅವನನ್ನು ಕಂಡು ಮಾತಾಡಿ ಪೀಡಿಸಿ ಬರೋಣ ಬಾ ಮಗಳೇ" ಎಂದನು. ಅವನು ಮಗಳನ್ನು ಕೂಡಿಕೊಂಡು ಋಷಿಗಳಲ್ಲಿಗೆ ಹೋಗಿ ಕಂಡು ದೂರದಲ್ಲಿಯೇ ಇದ್ದು ಹೀಗೆಂದನು - "ಎಲೈ ತಪಸ್ವಿಯೆ, ನನ್ನ ಮಗಳಿಗೆ ನಿಮ್ಮ ವ್ರತಗಳನ್ನು ಯಾಕೆ ಕೊಟ್ಟಿರಿ?" ಎನ್ನಲು ಸೂರ್ಯಮಿತ್ರ ಋಷಿಗಳು ಹೀಗೆಂದರು - "ನಿಮ್ಮ ಮಗಳಿಗೆ ಯಾಕೆ ಕೊಡುತ್ತೇವೆ ? ನಮ್ಮ ಮಗಳಿಗೆ ನಮ್ಮ ವ್ರತಗಳನ್ನು ನಾವು ಕೊಟ್ಟಲ್ಲಿ ನಿನಗೆ ನೋವು (ಸಂಕಟ)ಮೂಡಿತೆ ?" ಎಂದು ಹೇಳಿ ನಾಗಶ್ರೀಯನ್ನು 'ಇತ್ತ ಬಾ' ಎಂದು ಕರೆದರು. ಆಕೆ ಹೋಗಿ ಇಬ್ಬರೂ ಋಷಿಗಳ ಕಾಲುಗಳನ್ನು ಹಿಡಿದು ಸಾಷ್ಟಾಂಗ ವಂದಿಸಿ ಅವರ ಬಳಿಯಲ್ಲಿ ಇದ್ದುಕೊಂಡಳು. ಆಗ ಸೋಮಶರ್ಮಭಟ್ಟನು ಆಶ್ಚರ್ಯಪಟ್ಟು, ಅಲುಗಾಡದೆ ಇದ್ದನು. ಅವನನ್ನು ಕುರಿತು ಋಷಿಗಳು ಹೀಗೆಂದರು - "ಎಲೈ ಕೆಟ್ಟ ಬ್ರಾಹ್ಮಣನೇ, ರಾಜರಿಗೆ ಹೇಳಿ ನೀನು ಅಲುಗಾಡುವ ಮೊದಲೇ ಈ ಸ್ಥಳದಿಂದ ತೊಲಗು" ಎಂದರು. ಸೋಮಶರ್ಮನು ಅಲ್ಲಿಂದ ಎದ್ದುಹೋದನು. ದೊಡ್ಡದೊಂದು ಚಿಗುರನ್ನು ಹಿಡಿದು ಬ್ರಾಹ್ಮಣನಿಗೆ ಅನರ್ಥವಾಯಿತು ಭೋ ಎಂದು ಅಳುತ್ತ ಅಂಗಡಿಯ ಜನರಿಗೆಲ್ಲ ಮೊರೆಯಿಡುತ್ತ ಅರಮನೆಗೆ ಹೋಗಿ ಚಂದ್ರವಾಹನನೆಂಬ ರಾಜನನ್ನು ಕಂಡು ಈ ರೀತಿಯಾಗಿ ವಿಜ್ಞಾಪನೆ ಮಾಡಿದನು - "ಮಹಾರಾಜನೇ ನಾನು ಬತ್ತಲೆಯ ಜೈನಸನ್ಯಾಸಿಗಳಿಂದ ಸುಲಿಗೆಗೆ ಒಳಗಾದೆನು. ನನ್ನ ಮಗಳಾದ ನಾಗಶ್ರೀಯನ್ನು ಅವರು ತನ್ನ ಮಗಳೆಂದು ವಶದಲ್ಲಿಟ್ಟುಕೊಂಡಿದ್ದಾರೆ. ಮತ್ತೆ ಅವರು ಆಕೆಯನ್ನು ಕರೆದುಕೊಂಡು ಓಡಿಹೋಗುವುದಕ್ಕೆ ಮುಂಚಿತವಾಗಿ ಹೋಗೋಣ, ಬನ್ನಿ" - ಎಂದು ಅರಸನನ್ನು ಒಡಗೊಂಡು ಹೋಗಲು ಸಾಮಂತರು, ಮಹಾಸಾಮಂತರು, ಸೆಟ್ಟಿಗಳು,

ಪೋಗೆ ಸಾಮಂತ ಮಹಾಸಾಮಂತ ಶ್ರೇಷ್ಠಿ ಸೇನಾಪತಿ ತಳಾಜ ದಂಡನಾಯಕ ಪ್ರಭೃತಿ ಚಂಪಾನಗರದ ಸಬಾಳಪೃದ್ಧಜನಮೆಲ್ಲರುಮರಸನೊದನೆ ನಾಗರತಾಣಕ್ಕೆ ಪೋಗಿ ಸೂರ್ಯಮಿತ್ರಾಚಾರ್ಯರಗ್ನಿಭೂತಿ ರಿಸಿಯರನರಸಂ ಕಂದವರ ಪಕ್ಕದೆ ಕುಳ್ಳಿರ್ದ್ದುದೇನ್ ಸಂಬಂಧಂ ಪೇಟೆಮೆಂದು ಮುನೀಂದ್ರನಂ ಬೆಸಗೊಂಡೊಡೆ ಸೂರ್ಯಮಿತ್ರಭಟ್ಟಾರಕರೀ ಕೂಸೆಂಬುದು ನಮ್ಮ ಮಗಳೆಂದೊಡೆ ಸೋಮಶರ್ಮಭಟ್ಟನ್ ನಾಗಶ್ರೀ ಎನ್ನ ಮಗಳ್ ನಾಗರಿತ್ತರೆಂದೊಡೆ ಭಟ್ಟಾರರಿಂತೆಂದರ್ ನಿನ್ನ ಮಗಳಪ್ಪೊಡೆ ನಾಲ್ಕು ವೇದಮುಮಾಱಂಗಮುಂ ಪದಿನೆಂಟು ಧರ್ಮಶಾಸ್ತ್ರಂಗಳುಂ ಮೀಮಾಂಸಾ ನ್ಯಾಯಶಾಸ್ತ್ರಂ ವ್ಯಾಕರಣಂ ಪ್ರಮಾಣಂ ಕಾಬ್ಯಂ ನಾಟಕಂ ಛಂದಮಲಂಕಾರಂ ಅಭಧಾನಂ ಸಾಮುದ್ರಿಕಂ ಶಾಳಿಹೋತ್ರಂ ಪಾಳಕಾಪ್ಯಂ ಹಾನಿತಂ ಚರಕಮಶ್ವಿನೀಮತಂ ಬಾಹಟಂ ಶುಶ್ರುತಮುಮೆಂದಿವು ಮೊದಲಾದ ನರವೈದ್ಯಮುಮುಂ ಚಾಣಕ್ಯಂ ಜ್ಯೋತಿಷಂ ಮಂತ್ರವಾದಂ ಮೊದಲಾಗೊಡೆಯ ಶಾಸ್ತ್ರಂಗಳೆಲ್ಲಮನೇನೀ ಕೂಸನೋದಿಸಿದಾ ಎಂದೊಡಾತನಿಲ್ಲೋದಿಸಿದೆನೆಂದಂ ಮತ್ತಿನಿತುಮನಾ ಕೂಸನಾವೋದಿಸಿದೆಮದಱಿಂದೆಮ್ಮ ಕೂಸೆಂದೊಡೆ ಅರಸನೋದಿಸಿ ತೋಱೆಮೆಂದೊಡೆ ಅಗ್ನಿಭೂತಿ ಎಮ್ಮೋದಿಸಿದ ವೇದಮನೀ ಪೊಬಲ ನೆರೆದ ನೆರವಿಯ ನಡುವೆ ಓದಿ ತೋಱು ಮಗಳೆ ಎಂದೊಡಾ ನಾಗಶ್ರೀಯುಮಂತೆಗೆಯ್ದೆನೆಂದು ಪ್ರಣವಮನುಚ್ಚರಿಸಿ ಸ್ವರಪರ್ಣಭೇದದಿಂದಂ ಪ್ರಥಮಂ ಚತುಃಷಷ್ಟಿ ಸಂಹತಿಗಳುಂ ಪದಕ್ರಮಭೇದದಿಂ

ಸೇನಾಪತಿ, ದಂಡನಾಯಕರು, ಪುರದ ಕಾವಲುಗಾರರು, ಮುಂತಾದ ಚಂಪಾನಗರದ ಬಾಲಕರಿಂದ ಮುದುಕರವರೆಗೆ ಎಲ್ಲರೂ ರಾಜನೊಡನೆ ನಾಗಸ್ಥಾನಕ್ಕೆ ಹೋದರು. ರಾಜನು ಸೂರ್ಯಮಿತ್ರಾಚಾರ್ಯರನ್ನೂ ಅಗ್ನಿಭೂತಿ ಋಷಿಗಳನ್ನೂ ಕಂಡು ಅವರ ಬಳಿಯಲ್ಲಿ ಕುಳಿತು 'ನಾಗಶ್ರೀಗೂ ನಿಮಗೂ ಏನು ಸಂಬಂಧವಿದೆ ? ಹೇಳಿ ' ಎಂದು ಕೇಳಿದನು. ಆಗ ಸೂರ್ಯಮಿತ್ರ ಮುನಿಗಳು 'ಈ ಕನ್ಯೆ ನಮ್ಮ ಮಗಳು' ಎಂದರು.ಸೋಮಶರ್ಮಭಟ್ಟನು 'ನಾಗಶ್ರೀ ನನ್ನ ಮಗಳು. ನನಗೆ ನಾಗದೇವತೆಗಳು ಕೊಟ್ಟರು' ಎಂದನು. ಆಗ ಮುನಿಗಳು ಹೀಗೆಂದರು - "ನಿನ್ನ ಮಗಳಾದರೆ ನಾಲ್ಕು ವೇದಗಳನ್ನೂ ಆರು ವೇದಾಂಗಗಳನ್ನೂ ಹದಿನೆಂಟು ಧರ್ಮಶಾಸ್ತ್ರಗಳನ್ನೂ ಮೀಮಾಂಸೆ, ವ್ಯಾಕರಣ, ಪ್ರಮಾಣ ,ಕಾವ್ಯ, ನಾಟಕ, ಛಂದಸ್ಸು, ಅಲಂಕಾರಶಾಸ್ತ್ರ, ನಿಘಂಟು, ಸಾಮುದ್ರಿಕ, ಅಶ್ವಶಾಸ್ತ್ರ, ಗಜಶಾಸ್ತ್ರ, ಹಾನಿತ ಚರಕ ಅಶ್ವಿನೀ ಮತಗಳೆಂಬ ವೈದ್ಯಶಾಸ್ತ್ರಗಳು, ವಾಗ್ಭಟನ ಅಷ್ಟಾಂಗ ಹೃದಯ ಶುಶ್ರುತಪ್ರಣೀತ ವೈದ್ಯಗಳು - ಇವೇ ಮೊದಲಾದ ಮಾನವ ವೈದ್ಯವನ್ನೂ ಕೌಟಿಲ್ಯನ ಅರ್ಥಶಾಸ್ತ್ರ, ಜ್ಯೋತಿಷ, ಮಂತ್ರವಾದ ಮುಂತಾಗಿರುವ ಶಾಸ್ತ್ರಗಳೆಲ್ಲವನ್ನೂ ನೀನು ಈ ಕನ್ಯೆಗೆ ಕಲಿಸಿರುವೆಯಾ ?" ಎಂದು ಕೇಳಿದರು. ಆಗ ಅವನು ಓದಿಸಿಲ್ಲವೆಂದು ಹೇಳಿದನು. ಆಗ ಋಷಿಗಳು "ನಾವು ಮತ್ತಿವೆಲ್ಲವನ್ನೂ ಆ ಕನ್ಯೆಗೆ ಕಲಿಸಿದ್ದೇವೆ. ಆದುದರಿಂದ ಅವಳ ನಮ್ಮ ಮಗಳು" ಎಂದರು. ರಾಜನು 'ಆಕೆಯಿಂದ ಇವೆಲ್ಲವನ್ನೂ ಹೇಳಿಸಿ ಪ್ರತ್ಯಕ್ಷಪಡಿಸಿರಿ' ಎನ್ನಲು, ಅಗ್ನಿಭೂತಿಯು "ಮಗಳೇ ನಾವು ಕಲಿಸಿರುವ ವೇದವನ್ನು ಇಲ್ಲಿ ಸೇರಿದ ಪಟ್ಟಣಿಗರ ಗುಂಪಿನ ನಡುವೆ ಹೇಳಿ ತೋರಿಸು" ಎಂದನು. ಆಗ ನಾಗಶ್ರೀ 'ಹಾಗೆಯೇ ಮಾಡುವೆನು' ಎಂದು ಓಂಕಾರವನ್ನು ಉಚ್ಚಾರಣೆ ಮಾಡಿ ಸ್ವರ ವರ್ಣಗಳ ಭೇದದಿಂದ ಮೊದಲು ಅರುವತ್ತನಾಲ್ಕು ವಿಧದ ಸಂಹತಿ[೧]ಗಳನ್ನೂ ಪದಕ್ರಮಗಳ ಭೇದದಿಂದ ಬ್ರಾಹ್ಮಣ ಅರಣ್[೨]

೧. ಸಂಹಿತೆ ೨. ಆರಣ್ಯಕ

ಬ್ರಾಹ್ಮಣ ಆರಣ ಸೂತ್ರಂ ಮೊದಲಾಗೊಡೆಯವನೋದಿ ಋಗ್ಯಜುಸ್ಸಾಮಾಥರ್ವಣ ವೇದಂಗಳಂ ಸ್ವರವರ್ಣಭೇದದಿಂದಂ ಮಂತ್ರಸಹಿತ ಪಾಳಿ ಪದಕ್ರಮ ಜಟೆ ಭೇದದಿಂದಂ ಶತಸೂತ್ರಂ ಮೊದಲಾಗೆಲ್ಲಮಂ ಯಥಾಕ್ರಮದಿಂದುಚ್ಚರಿಸಿ ಪದಿನೆಂಟು ಪುರಾಣಂಗಳುಂ ಪದಿನೆಂಟು ಧರ್ಮಸಂಹತಿಗಳುಂ ಮೀಮಾಂಸಾ ನ್ಯಾಯಸೂತ್ರಮಿವೆಲ್ಲಮನೋದಿ ಕ್ರಿಯಾಕಾರಕ ಸಂಬಂಧದಿಂದೆಲ್ಲಮಂ ವಕ್ಕಾಣಿಸಿ ತೋಪೆದೊಡರಸಂ ಮೊದಲಾಗಿ ನೆರೆದ ನೆರವಿಯುಂ ಪಂಡಿತರ್ಕಳೆಲ್ಲಂ ವಿಸ್ಮಯಂಬಟ್ಟು ಪೊಗಟ್ಟು ಮತ್ತಮರಸನಿಂತೆಂದನೀ ಕೂಸಿನಿತು ಶಾಸ್ತ್ರಂಗಳನೆಂತು ಕಲ್ತಳೆಂತು ಭಟಾರಾ ಇದನಱಿಯೆ ಬಿಸಸಿವೆನೆ ಸೂರ್ಯಮಿತ್ರ ಭಟ್ಟಾರರಿಂತೆಂದರ್ ಈಯಿರ್ದ್ದ ರಿಸಿಯರ ಸಹೋದರಂ ವಾಯುಭೂತಿಯೆಂಬೊನಾನಾಮೋದಿಸಿದೆಮೆಮ್ಮೊಳವ್ವ ಮಾನಕ[illegible]ಂ ಕಾರಣಮಾಗಿ ಸತ್ತು ಬೆಳ್ಗತ್ತೆಯುಂ ಪೇಪಂದಿಯುಂ ನಾಯುಂ ಪೊಲೆಯರ ಕೂಸುಮಾಗಿ ರಿಸಿಯರ ಪ್ರಬೋಧನೆಯಿಂದಂ ಬ್ರತಂಗಳಂ ಕೈಕೊಂಡೀಗಳ್ ನಾಗಶ್ರೀಯಾದಳೆಂದು ಮುನ್ನಿನ ಭವದ ಸಂಬಂಧಮೆಲ್ಲಮಂ ಸವಿಸ್ತರಂ ಪೇಳ್ದು ಮತ್ತಮಿಂತೆಂದರ್ ಮಿಥ್ಯಾತ್ವ ಸಂಯಮ ಕಷಾಯ ಯೋಗಂ ಕಾರಣಮಾಗಿ ಜೀವಂಗಳ್ ಸಂಸಾರಸಮುದ್ರದೊಳ್ ತೊಟಲ್ಗುಮೆಂದು ಸವಿಸ್ತರಂ ಧರ್ಮಮಂ ಪೇಳೆ ಕೇಳ್ದು ಚಂದ್ರವಾಹನನೆಂಬರಸಂಗೆ ವೈರಾಗ್ಯಂ ಪುಟ್ಟ ಮಗಂಗರಸುಗೊಟ್ಟು ಪಲಂಬರರಸು ಮಕ್ಕಳ್ಕಿರಸು ಭಟ್ಟಾರರ ಪಕ್ಕದೆ ತಪಂಬಟ್ಟಂ ಕೆಲರ್ ಶ್ರಾವಕವ್ರತಂಗಳಂ ಕೆಲಂಬರ್ ಸಮ್ಯಕ್ತ್ವಮಂ ಕೈಕೊಂಡರಾಗಳಾ

ಸೂತ್ರ ಮುಂತಾಗಿರುವವನ್ನೂ ಹೇಳಿದಳು. ಋಗ್ವೇದ ಯಜುರ್ವೇದ ಸಾಮವೇದ ಅಥರ್ವವೇದಗಳನ್ನೂ ಸ್ವರಗಳ ಮತ್ತು ವರ್ಣಗಳ ಭೇದದಿಂದ ಮಂತ್ರ ಸಮೇತವಾಗಿ ಪಾಳಿ - ಪದಕ್ರಮ - ಜಟೆ ಮುಂತಾದ ವೇದಪಠನದ ರೀತಿಯಲ್ಲಿ ಶತಸೂತ್ರ ಮುಂತಾಗಿ ಎಲ್ಲವನ್ನೂ ಸರಿಯಾದ ಕ್ರಮದಿಂದ ಉಚ್ಚಾರಣೆ ಮಾಡಿದಳು. ಹದಿನೆಂಟು ಪುರಾಣಗಳು, ಹದಿನೆಂಟು ಧರ್ಮಶಾಸ್ತ್ರಸಂಗ್ರಹಗಳು, ಮೀಮಾಂಸೆ, ನ್ಯಾಯಸೂತ್ರ ಇವೆಲ್ಲವನ್ನೂ ಹೇಳಿ, ಕ್ರಿಯಾಪದ ಕಾರಕಪದಗಳ ಸಂಬಂಧ ಸರಿಯಾಗಿರುವಂತೆ ಎಲ್ಲವನ್ನೂ ವ್ಯಾಖ್ಯಾನಮಾಡಿ ತೋರಿಸಿದಳು. ಆಗ ರಾಜನೂ, ನೆರೆದ ಜನರೂ, ವಿದ್ವಾಂಸರೂ ಎಲ್ಲರೂ ಆಶ್ಚರ್ಯಪಟ್ಟು ಹೊಗಳಿದರು. ಆ ಮೇಲೆ ರಾಜನು ಹೀಗೆಂದನು. "ಈ ಕನ್ಯೆ ಇಷ್ಟೊಂದು ಶಾಸ್ತ್ರಗಳನ್ನು ಹೇಗೆ ಕಲಿತುಕೊಂಡಳು ? ಋಷಿಗಳೇ, ಇದನ್ನು ನನಗೆ ತಿಳಿಯುವಂತೆ ಅಪ್ಪಣೆಮಾಡಿ" ಎನ್ನಲು, ಸೂರ್ಯಮಿತ್ರ ಋಷಿಗಳು ಹೀಗೆಂದರು "ಇದೇ ಇಲ್ಲಿರುವ ಅಗ್ನಿಭೂತಿ ಋಷಿಗಳ ಸಹೋದರ ವಾಯುಭೂತಿಯೆಂಬವನಿಗೆ ನಾವು ವಿದ್ಯೆ ಕಲಿಸಿದ್ದೆವು. ನಮ್ಮಮೇಲೆ ಅವನು ತಾಳಿದ ಗರ್ವ ಕೋಪಗಳ ಕಾರಣದಿಂದ ಸತ್ತು ಬಿಳಿಕತ್ತೆ, ಹೇಲುಹಂದಿ, ನಾಯಿ, ಹೊಲೆಯರ ಕನ್ಯೆಯಾಗಿ ಹುಟ್ಟಿಬಂದು, ಋಷಿಗಳ ಉಪದೇಶದಿಂದ ವ್ರತಗಳನ್ನು ಸ್ವೀಕರಿಸಿ, ಈಗ ನಾಗಶ್ರೀಯಾದಳು" ಹೀಗೆ ಹಿಂದಿನ ಜನ್ಮದ ಸಂಬಂಧವೆಲ್ಲವನ್ನೂ ವಿಸ್ತಾರವಾಗಿ ತಿಳಿಸಿ ಮತ್ತೆ ಹೀಗೆಂದನು "ಜೀವಗಳು ಮಿಥ್ಯಾತ್ವ, ಸಂಯಮವಿಲ್ಲದಿರುವುದು, ಗರ್ವಕೋಪಾದಿಗಳ ಕಾರಣದಿಂದ ಸಂಸಾರವೆಂಬ ಸಮುದ್ರದಲ್ಲಿ ಸುತ್ತಾಡುವವು." ಹೀಗೆಂದು ವಿಸ್ತಾರವಾಗಿ ಧರ್ಮದ ರಹಸ್ಯವನ್ನು ಹೇಳಲು ಕೇಳಿದ ಚಂದ್ರವಾಹನ ರಾಜನಿಗೆ ವೈರಾಗ್ಯವುಂಟಾಯಿತು. ಅವನು ತನ್ನ ಮಗನಿಗೆ ಅರಸುತನವನ್ನು ಕೊಟ್ಟು ಹಲವು ಮಂದಿ ರಾಜಕುಮಾರರೊಂದಿಗೆ ಋಷಿಗಳ ಸಮೀಪದಲ್ಲಿದ್ದು ತಪವನ್ನೆಸಗಿದನು. ಕೆಲವರು ಶ್ರಾವಕವ್ರತಗಳನ್ನೂ ಕೆಲವರು ಸಮ್ಯಗ್ದರ್ಶನ ಸಮ್ಯಗ್‌ಜ್ಞಾನ ಸಮ್ಯಕ್‌ಚಾರಿತ್ರಗಳನ್ನು

ಸೋಮಶರ್ಮಭಟ್ಟಂ ರಿಸಿಯರೊಳಾದ ಮಾನಗರ್ವದ ದೋಷದಿಂದೆಯ್ದಿದ ದುಃಖಂಗಳಂ ಕೇಳ್ದಱೆದಾ ಭಟ್ಟಾರರ ಪಕ್ಕದೆ ತಪಂಬಟ್ಟಂ ನಾಗಶ್ರೀಯುಂ ನಾಗಶ್ರೀಯ ತಾಯ್ ತ್ರಿವೇದಿಯುಂ ಬ್ರಹ್ಮಿಲೆಯೆಂಬ ಕಂತಿಯರ ಪಕ್ಕದೆ ತಪಂಬಟ್ಟರ್ ಮತ್ತೆ ಸೂರ್ಯಮಿತ್ರ ಭಟ್ಟಾರರಗ್ನಿಭೂತಿ ಭಟ್ಟಾರರುಮಿರ್ವರುಂ ಪಲಕಾಲಂ ತಪಂಗೆಯ್ದು ಅಗ್ರಮಂದಿರವೆಂಬ ಪರ್ವತದೊಳ್ ಮೋಕ್ಷವನೆಯ್ದಿದರ್ ಮತ್ತಂ ಸೋಮಶರ್ಮರಿಸಿಯರುಮುಗ್ರೋಗ್ರ ತಪಶ್ಚರಣಂಗೆಯ್ದು ಸನ್ಯಸನವಿಧಿಯಿಂದಂ ಮುಡಿಪಿ ಅಚ್ಯುತಕಲ್ಪದೊಳಿರ್ಪತ್ತೆರಡು ಸಾಗರೋಪಮ ಯುಷ್ಯಮನೊಡೆಯೊಂ ಸಾಮಾನಿಕದೇವನಾಗಿ ಪುಟ್ಟದೊಂ ಮತ್ತೆ ನಾಗಶ್ರೀಯುಂ ಭುಕ್ತ ಪ್ರತ್ಯಾಖ್ಯಾನವಿಧಿಯಿಂ ರತ್ನತ್ರಯಮಂ ಸಾಧಿಸಿ ಅಚ್ಯುತಕಲ್ಪದೊಳ್ ದೇವನಾಗಿ ಪುಟ್ಟದೊಳ್ ಮತ್ತಾ ಸ್ವರ್ಗದೊಳ್ ತ್ರಿವೇದಿಯುಂ ನಾಗಶ್ರೀ ಎನಗೆ ಜನ್ಮಾಂತರದೊಳಪ್ಪೊಡಂ ಮಗನಕ್ಕೆಂದು ನಿದಾನಂಗೆಯ್ದು ಮುಡಿಪಿ ದೇವನಾದೊಳಿಂತಾ ಯಿರ್ವರುಂ ಇರ್ಪತ್ತೆರಡು ಸಾಗರೋಪಮಾಯುಷ್ಯಮನೊಡೆಯೊರಾಗಿ ದೇವರಾಗಿ ಪುಟ್ಟಿದರ್ ಮತ್ತಂ ಸೋಮಶರ್ಮನಪ್ಪ ದೇವಂ ಪಲಕಾಲಂ ದೇವಲೋಕದ ಭೋಗಮನನುಭವಿಸಿ ಬಂದಿಲ್ಲಿ ಈ ಜಂಬೂದ್ವೀಪದ ದಕ್ಷಿಣ ಭರತದೊಳವಂತಿಯೆಂಬುದು ನಾಡುಜ್ಜೇನಿಯೆಂಬುದು ಪೊಬಲಲ್ಲಿ ಇಂದ್ರದತ್ತನೆಂಬೊಂ ಪರದನಾತನ ಭಾರ್ಯೆ ಗುಣಮತಿಯೆಂಬೊಳಾಯಿರ್ವರ್ಗ್ಗಂ ಸೂರದತ್ತನೆಂಬೊಂ ಮಗನಾಗಿ ಪುಟ್ಟದೊಂ ಮತ್ತಮಾ ಪೊಬಲೊಳ್ ಮೂವತ್ತೆರಡು ಕೋಟಿ ಕಸವರಮನೊಡೆಯೊಂ ಸುಭದ್ರನೆಂಬೊಂ ಸೆಟ್ಟಿಯಾತನ

ಪಡೆದುಕೊಂಡರು. ಆ ಸಂದರ್ಭದಲ್ಲಿ ಸೋಮಶರ್ಮಭಟ್ಟನು ಋಷಿಗಳ ಮೇಲೆ ಉಂಟಾದ ಗರ್ವಕ್ರೋಧಗಳ ತಪ್ಪಿನಿಂದ ಉಂಟಾಗತಕ್ಕ ದುಃಖಿಗಳನ್ನು ಕೇಳಿ ತಿಳಿದು ಆ ಋಷಿಗಳ ಪಕ್ಕದಲ್ಲಿ ತಪಸ್ಸನ್ನು ಮಾಡಿದನು. ನಾಗಶ್ರೀಯೂ ಅವಳ ತಾಯಿಯಾದ ತ್ರಿವೇದಿಯೂ ಬ್ರಹ್ಮಿಲೆ ಎಂಬ ಜೈನ ಸಂನ್ಯಾಸಿನಿಯ ಬಳಿಯಲ್ಲಿ ತಪಸ್ಸನ್ನು ಮಾಡಿದರು. ಸೂರ್ಯಮಿತ್ರ ಋಷಿಗಳು ಅಗ್ನಿಭೂತಿ ಋಷಿಗಳು ಇವರಿಬ್ಬರೂ ಹಲವು ವರ್ಷಗಳ ಕಾಲ ತಪಸ್ಸನ್ನು ಮಾಡಿ ಅಗ್ರಮಂದಿರವೆಂಬ ಬೆಟ್ಟದಲ್ಲಿ ಮೋಕ್ಷಕ್ಕೆ ಹೋದರು. ಆ ಮೇಲೆ ಸೋಮಶರ್ಮ ಋಷಿಯು ಅತ್ಯಂತ ಘೋರವಾದ ತಪಸ್ಸನ್ನು ಆಚರಿಸಿ ಸನ್ಯಸನ ವಿಧಿಯಿಂದ ಸತ್ತು ಅಚ್ಯುತ ಎಂಬ ಹೆಸರಿನ ಸ್ವರ್ಗದಲ್ಲಿ ಇಪ್ಪತ್ತೆರಡು ಸಾಗರಕ್ಕೆ ಸಮಾನವಾದ ಆಯುಷ್ಯವನ್ನು ಉಳ್ಳ ಸಾಮಾನಿಕದೇವನಾಗಿ ಹುಟ್ಟಿದನು. ಮತ್ತೆ ನಾಗಶ್ರೀಯು ಕ್ರಮದಿಂದ ಆಹಾರ ಪಾನೀಯಗಳನ್ನು ತ್ಯಾಗಮಾಡುವ 'ಭುಕ್ತ ಪ್ರತ್ಯಾಖ್ಯಾನ' ಎಂಬ ವ್ರತನಿಯಮದಿಂದ ಸಮ್ಯಗ್ದರ್ಶನ ಚಾರಿತ್ರಗಳೆಂಬ ರತ್ನತ್ರಯವನ್ನು ಪಡೆದು, ಅಚ್ಯುತಕಲ್ಪದಲ್ಲಿ ದೇವತೆಯಾಗಿ ಹುಟ್ಟಿದಳು. ಮತ್ತು ಆ ಸ್ವರ್ಗದಲ್ಲಿ ತ್ರಿವೇದಿಯು ನನಗೆ ಬೇರೆ ಜನ್ಮದಲ್ಲಿಯಾದರೂ ನಾಗಶ್ರೀಯು ಮಗನಾಗಿ ಜನಿಸಲಿ ಎಂದು ಸಂಕಲ್ಪಿಸಿ ಸತ್ತು ದೇವನಾದಳು. ಹೀಗೆ ಆ ಇಬ್ಬರೂ ಇಪ್ಪತ್ತೆರಡು ಸಾಗರಕ್ಕೆ ಸಮಾನವಾಗುವ ಆಯುಷ್ಯವುಳ್ಳವರಾಗಿ ದೇವರುಗಳಾಗಿ ಜನಿಸಿದರು. ಅನಂತರ ಸೋಮಶರ್ಮನಾಗಿದ್ದ ದೇವನು ಹಲವು ಕಾಲದವರೆಗೆ ದೇವಲೋಕದ ಸುಖವನ್ನು ಅನುಭವಿಸಿದ ನಂತರ ಭೂಲೋಕದಲ್ಲಿ ಜನಿಸಿದನು. ಈ ಜಂಬೂದ್ವೀಪದ ದಕ್ಷಿಣ ಭರತಭೂಮಿಯಲ್ಲಿ ಅವಂತಿಯೆಂಬ ನಾಡಿದೆ. ಅಲ್ಲಿ ಉಜ್ಜೇನಿಯೆಂಬ ಪಟ್ಟಣದಲ್ಲಿ ಇಂದ್ರದತ್ತನೆಂಬ ವರ್ತಕನಿದ್ದನು. ಅವನ ಹೆಂಡತಿ ಗುಣಮತಿ ಎಂಬವಳು ಆ ಇಬ್ಬರಿಗೂ ಸೂರದತ್ತನೆಂಬ ಮಗನಾಗಿ (ಸೋಮಶರ್ಮನಾಗಿದ್ದ ದೇವನು) ಹುಟ್ಟಿದನು. ಅದಲ್ಲದೆ ಆ ಪಟ್ಟಣದಲ್ಲಿ ಮೂವತ್ತೆರಡು ಕೋಟಿ ಹೊನ್ನನ್ನುಳ್ಳ ಸುಭದ್ರನೆಂಬ

ಭಾರ್ಯೆ ಸರ್ವಯಶಿಯೆಂಬೊಳಾಯಿರ್ವರ್ಗ್ಗಂ ತ್ರಿವೇದಿಯಪ್ಪ ದೇವಂ ಬಂದು ಯಶೋಭದ್ರೆಯೆಂಬೊಳ್ ಮಗಳಾಗಿ ಪುಟ್ಟಿದೊಳಾ ತ್ರಿವೇದಿ ತಪಶ್ಚರಣದ ಫಲದಿಂದಂ ದೇವತ್ವಮನೆಯ್ದಿಯುಂ ನಿದಾನಂ ಕಾರಣಮಾಗಿ ಮಿಥ್ಯಾತ್ವಕ್ಕೆ ಸಂದು ಸ್ತ್ರೀತ್ವಮನೆಯ್ದಿದಳಾ ಯಶೋಭದ್ರೆಯಂ ಸೂರದತ್ತಂಗೆ ಕೊಟ್ಟೊರಾಯಿರ್ವರ್ಗ್ಗಂ ನಾಗಶ್ರೀಯಪ್ಪ ದೇವಂ ಬಂದು ಸುಕುಮಾರಸ್ವಾಮಿಯೆಂಬೊಂ ಮಗನಾಗಿ ಪುಟ್ಟಿದನಾತನ ಪುಟ್ಟಿದಂದೆ ವೈರಾಗ್ಯಂ ಕಾರಣಮಾಗಿ ಸೂರದತ್ತಸೆಟ್ಟಿ ಸುಕುಮಾರಸ್ವಾಮಿಗೆ ಸೆಟ್ಟಿಪಟ್ಟಂಗಟ್ಟಿ ತಪಂಬಟ್ಟಂ ಸುಕುಮಾರಸ್ವಾಮಿಯುಂ ಯೌವನನಾಗಿ ಅತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿಯಿಂದಂ ಕೂಡಿದೊನಾತಂಗೆ ಮೂವತ್ತೆರಡು ಬಳ್ಳಿಮಾಡಂಗಳತ್ಯಂತ ರೂಪಲಾವಣ್ಯ ಸೌಭಾಗ್ಯ ಕಾಂತಿ ಹಾವ ಭಾವ ವಿಲಾಸ ವಿಭ್ರಮಂಗಳನೊಡೆಯ ದೇವಗಣಿಕೆಯರನೆ ಪೋಲ್ವ ಮೂವತ್ತಿರ್ವರ್ ದಿವ್ಯಸ್ತ್ರೀಯರ್ಕಳ್ ಮೂವತ್ತೆರಡು ನಾಟಕಂಗಳ್ ಮೂವತ್ತೆರಡು ಕೋಟಿ ಕಸವರಮುಂ ಪಂಚರತ್ನಂಗಳಿಂಬಿನಿತಱೊಳಂ ಕೂಡಿ ಭೋಗೋಪಭೋಗ ಸುಖಂಗಳನನುಭವಿಸುತ್ತುಮಿರೆ ಮತ್ತೊಂದು ದಿವಸಮೊರ್ವ ನೈಮಿತ್ತಿಕನಿಂತೆಂದಾದೇಶಂಗೆಯ್ದನೀ ಸುಕುಮಾರಸ್ವಾಮಿ ಆವುದೊಂದು ಕಾಲದೊಳ್ ರಿಸಿಯರ ರೂಪಂ ಕಾಣ್ಗುಮಂದೀತನುಂ ತಪಂಬಡುಗುಮೆಂದೊಡಾ ಮಾತಂ ತಾಯ್ ಕೇಳ್ದು ತನ್ನ ಮನೆಯಂ ರಿಸಿಯರಂ ಪುಗಲೀಯದಂತು ಬಾಗಿಲ ಕಾಪಿನವರಂ ಕಲ್ಪಿಸಿದೊಳಂತು ಕಾಲಂ ಸಲೆ ಮತ್ತೊಂದು ದಿವಸಂ ರತ್ನದ್ವೀಪದಿಂದೊರ್ವ

ಸೆಟ್ಟಿಯಿದ್ದನು. ಅವನ ಹೆಂಡತಿ ಸರ್ವಯಶಿಯೆಂಬವಳು. ಆ ಇಬ್ಬರಿಗೆ ತ್ರಿವೇದಿಯಾಗಿದ್ದ ದೇವನ ಜೀವದಿಂದ ಯಶೋಭದ್ರೆಯೆಂಬ ಮಗಳು ಜನಿಸಿದಳು. ಆ ತ್ರಿವೇದಿ ತನ್ನ ತಪಸ್ಸಿನ ಆಚರಣೆಯ ಫಲದಿಂದ ದೇವತ್ವವನ್ನು ಪಡೆದರೂ ತನ್ನ ಸಂಕಲ್ಪದ ಕಾರಣದಿಂದ ಮಿಥ್ಯಾತ್ವಕ್ಕೆ ಒಳಗಾಗಿ ಹೆಣ್ಣುತನವನ್ನು ಹೊಂದಿದ್ದಳು. ಆ ಯಶೋಭದ್ರೆಯನ್ನು ಸೂರದತ್ತನಿಗೆ ಕೊಟ್ಟರು. ಆ ಇಬ್ಬರಿಗೂ ನಾಗಶ್ರೀಯಾಗಿದ್ದ ದೇವನು ಬಂದು ಸುಕುಮಾರಸ್ವಾಮಿಯೆಂಬ ಮಗನಾಗಿ ಹುಟ್ಟಿದನು. ಅವನು ಹುಟ್ಟಿದ ದಿನವೇ ವೈರಾಗ್ಯವುಂಟಾಗಿ ಸೂರದತ್ತ ಸೆಟ್ಟಿಯು ಸುಕುಮಾರಸ್ವಾಮಿಗೆ ಸೆಟ್ಟಿ ಪಟ್ಟವನ್ನು ವಹಿಸಿಕೊಟ್ಟು ತಪಸ್ಸಿಗೆ ತೆರಳಿದನು. ಸುಕುಮಾರಸ್ವಾಮಿ ತಾರುಣ್ಯವನ್ನು ಪಡೆದು ಅತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿಯಿಂದ ಕೂಡಿದವನಾದನು. ಅವನಿಗೆ ಮೂವತ್ತೆರಡು ಲತಾಗೃಹಗಳೂ ಅತ್ಯಂತ ರೂಪ, ಲಾವಣ್ಯ, ಸೌಭಾಗ್ಯ, ಕಾಂತಿ, ಹಾವ, ಭಾವ, ವಿಲಾಸ, ವಿಭ್ರಮಗಳಿಂದ ಕೂಡಿ ದೇವತಾಸ್ತ್ರೀಯನ್ನು ಹೋಲುವ ಮೂವತ್ತೆರಡು ಮಂದಿ ದಿವ್ಯರಾದ ಸ್ತ್ರೀಯರೂ ಇದ್ದರು, ಮೂವತ್ತೆರಡು ಬಗೆಯ ನಾಟ್ಯಗಳು, ಮೂವತ್ತೆರಡು ಕೋಟಿ ಹೊನ್ನು, ಐದು ಬಗೆಯ ರತ್ನಗಳು ಎಂಬಿವೆಲ್ಲವುಗಳಿಂದ ಕೂಡಿ ಸುಕುಮಾರಸ್ವಾಮಿ ಎಲ್ಲಾ ರೀತಿಯ ಸುಖಗಳನ್ನು ಅನುಭವಿಸುತ್ತಿದ್ದನು. ಮತ್ತೊಂದು ದಿನ ಒಬ್ಬ ಜೋಯಿಸನು ಈ ರೀತಿಯಾಗಿ ಭವಿಷ್ಯವನ್ನು ಹೇಳಿದನು. 'ಈ ಸುಕುಮಾರಸ್ವಾಮಿ ಯಾವಾಗ ಋಷಿಗಳ ರೂಪವನ್ನು ಕಾಣುವನೋ ಅಂದೇ ತಪಸ್ಸಿಗೆ ತೆರಳುವನು' ಹೀಗೆಂದ ಮಾತನ್ನು ತಾಯಿ ಯಶೋಭದ್ರೆ ಕೇಳಿ ತನ್ನ ಮನೆಗೆ ಋಷಿಗಳನ್ನು ಪ್ರವೇಶಿಸಲು ಬಿಡದ ಹಾಗೆ ಬಾಗಿಲು ಕಾಯುವವರಿಗೆ ಆಜ್ಞೆ ಮಾಡಿದಳು. ಹಾಗೆಯೇ ಕಾಲ ಕಳೆಯಿತು. ಮತ್ತೊಂದು ದಿವಸ ರತ್ನದ್ವೀಪದಿಂದ ಒಬ್ಬ

ವರದಂ ಸರ್ವರತ್ನಕಂಬಳಂಗಳಂ ಲಕ್ಷದೀನಾರಂಗಳ್ ಬೆಲೆಯಪ್ಪವನುಜ್ಜೇನಿಗೆ ಮಾಱಲ್ ಕೊಂಡುಬಂದೊನಾ ಪೊಟಲನಾಳ್ವಂ ವೃಷಭಾಂಕನೆಂಬೊನರಸಂಗಂ ಜ್ಯೋತಿರ್ಮಾಲೆಯೆಂಬ ಮಹಾದೇವಿಗಮಿಂತಿರ್ವರ್ಗ್ಗಂ ತೋಱಿದೊಡೆ ಅವಱ ಬೆಲೆಯಂ ಬಿಸಗೊಂಡೊಡೆ ಲಕ್ಷ ದೀನಾರಂಗಳ್ ಬೆಲೆಯೆಂದು ಪೇಱಿದೊಡೆ ಕೊಳಲಾಱದರಸಂ ಪೋಗಲ್ವೇಱ್ದನಂತು ಪೊಟಲೊಳಗೆಲ್ಲಂ ತೋಱಿ ಯಾರುಂ ಕೊಳಲಾಱದಿರ್ದೊಡೆ ರತ್ನಕಂಬಳಂಗಳಂ ಕೊಂಡು ಪೋಗಿ ಯಶೋಭದ್ರೆಗೆ ತೋಱಿದೊಡೆ ಲಕ್ಷದೀನಾರಂಗಳಂ ಕೊಟ್ಟು ರತ್ನಕಂಬಳಂಗಳಂ ಕೊಂಡೋರೊಂದಱೊಳಂ ನಾಲ್ಕು ಖಂದಮಾಗೆ ಮೂವತ್ತೆರಡು ಖಂಡಂಗಳಂ ಮಾಡಿ ಮೂವತ್ತಿರ್ವರ್ ಸೊಸೆವಿರ್ಕಳ್ಗೆ ಪಚ್ಚುಗೊಟ್ಟೊಡವರುಂ ತಂತಮ್ಮ ಕಿರ್ಪುಗಳೊಳ್ ತಗುಳ್ದಿದರೆಂಬ ಮಾತನರಸಂ ಕೇಳ್ದು ಚೋದ್ಯಂಬಟ್ಟವರ ವಿಭೂತಿಯಂ ನೋಟಿಪೆನೆಂದು ಮನೆಗೆವರ್ಪುದಂ ಯಶೋಭದ್ರೆ ಕೇಳ್ದರಸರ್ ಬರ್ಪ ಬಟ್ಟೆಯೊಳೆಲ್ಲಂ ಪಂಚರತ್ನಂಗಳಂ ರಂಗವಲ್ಲಿಯನಿಕ್ಕಿ ನೇತ್ರವಟ್ಟು ದುಕೂಲ ಚೀನಾದಿ ದಿವ್ಯವಸ್ತ್ರಂಗಳಂ ಪಾಸಿ ಮಣಿಭದ್ರಮಪ್ಪ ಹೇಮ ಮುಕ್ತಾಹಾರಂಗಳಿಂ ತೋರಣಂಗಟ್ಟಿಸಿಯರಸರ ಬರವಂ ಪಾರುತ್ತಿರೆ ನೃಪತಿಯುಂ ಬಂದು ಸುರೇಂದ್ರಭವನೋಪಮಮಪ್ಪ ಪ್ರಾಸಾದಮಂ ಪೊಕ್ಕು ವಿಸ್ಮಯಚಿತ್ತನಾಗಿ ಸುರಲೋಕಂಬೊಕ್ಕ ಪುಣ್ಯವಂತಂಬೊಲಾಗಳ್ ಮಹಾವಿಭೂತಿಯಿಂ ಶಯ್ಯಾತಳದೊಳಿರ್ದು ಸುಕುಮಾರನಿಲ್ಲಿದನೆಂದು

ವರ್ತಕನು ಲಕ್ಷದೀನಾರ (ಚಿನ್ನದ ನಾಣ್ಯ)ಗಳ ಬೆಲೆ ಬಾಳತಕ್ಕ ಎಲ್ಲಾ ರತ್ನಗಳಿಂದ ಕೂಡಿದ ಕಂಬಳಿಗಳನ್ನು ಮಾರಲು ಉಜ್ಜಯಿನಿಗೆ ತೆಗೆದುಕೊಂಡು ಬಂದನು. ಆ ಪಟ್ಟಣವನ್ನಾಳುವ ವೃಷಭಾಂಕನೆಂಬ ರಾಜನಿಗೂ ಜ್ಯೋತಿರ್ಮಾಲೆಯೆಂಬ ಮಹಾರಾಣಿಗೂ ಹೀಗೆ ಇಬ್ಬರಿಗೂ ರತ್ನದ ಕಂಬಳಿಗಳನ್ನು ತೋರಿಸಲು, ಅದರ ಬೆಲೆಯೇನೆಂದು ಕೇಳಿದಾಗ ಲಕ್ಷದೀನಾರಗಳೆಂದು ಹೇಳಿದನು. ರಾಜನು ಅವನ್ನು ಕ್ರಯಕ್ಕೆ ಕೊಳ್ಳಲಾರದೆ ಆ ವರ್ತಕನನ್ನು ಹೋಗಲು ಹೇಳಿದನು. ಅಂತೂ ಪಟ್ಟಣದಲ್ಲೆಲ್ಲಾ ತೋರಿಸಿದರೂ ಯಾರೂ ಕೊಂಡುಕೊಳ್ಳಲಾರದೆ ಇದ್ದಾಗ ಆ ರತ್ನಕಂಬಳಿಗಳನ್ನು ಕೊಂಡುಹೋಗಿ ಯಶೋಭದ್ರೆಗೆ ತೋರಿಸಿದಾಗ, ಆಕೆ ಲಕ್ಷದೀನಾರಗಳನ್ನು ಕೊಟ್ಟು ಅವನ್ನು ಕೊಂಡಳು. ಅಮೇಲೆ ಅವುಗಳಲ್ಲಿ ಪ್ರತಿಯೊಂದನ್ನೂ ನಾಲ್ಕು ತುಂಡುಗಳಾಗಿ ಮಾಡಿ ಒಟ್ಟು ಮೂವತ್ತೆರಡು ತುಂಡುಗಳನ್ನು ಮಾಡಿ ತನ್ನ ಮೂವತ್ತೆರಡು ಸೊಸೆಯಂದಿರಿಗೆ ಹಂಚಿಕೊಟ್ಟಳು. ಅವರು ಆ ತುಂಡುಗಳನ್ನು ತಂತಮ್ಮ ಪಾದುಕೆಗಳಿಗೆ ಸಿಕ್ಕಿಸಿದರು. ಈ ಸಂಗತಿಯನ್ನು ರಾಜನು ಕೇಳಿ ಆಶ್ಚರ್ಯಪಟ್ಟು ಅವರ ವೈಭವವನ್ನು ನೋಡುವೆನೆಂದು ಸುಕುಮಾರಸ್ವಾಮಿಯ ಮನೆಗೆ ಬರುತ್ತಿದ್ದನು. ರಾಜರು ಬರುವುದನ್ನು ಯಶೋಭದ್ರೆ ಕೇಳಿ, ರಾಜರು ಬರುವ ದಾರಿಯಲ್ಲೆಲ್ಲ ನೀಲ, ವಜ್ರ, ಪದ್ಮರಾಗ, ಮುತ್ತು, ಹವಳ - ಎಂಬ ಐದು ಬಗೆಯ ರತ್ನಗಳಿಂದ ರಂಗೋಲೆ ಹಾಕಿಸಿದಳು. ನೇತ್ರ, ಪಟ್ಟು, ದುಕೂಲ, ಚೀನ - ಎಂಬ ಬಗೆಬಗೆಯ ರೇಷ್ಮೆಯ ದಿವ್ಯವಾದ ಬಟ್ಟೆಗಳನ್ನು ಹಾಸಿದಳು. ರತ್ನಗಳಿಂದ ಚಿಲುವಾದ ಚಿನ್ನದ ಮುತ್ತಿನ ಸರಗಳಿಂದ ತೋರಣ ಕಟ್ಟಿಸಿದಳು. ರಾಜನ ಆಗಮನವನ್ನು ಎದುರು ನೋಡುತ್ತಿರಲು ರಾಜನು ಬಂದು, ಇಂದ್ರನ ಅರಮನೆಯನ್ನು ಹೋಲುವ ಉಪ್ಪರಿಗೆ ಮನೆಯನ್ನು ಪ್ರವೇಶಿಸಿದನು. ಆಗ ರಾಜನು ಅಚ್ಚರಿಗೊಂಡವನಾಗಿ ದೇವಲೋಕವನ್ನು ಪ್ರವೇಶಿಸಿದ ಪುಣ್ಯಶಾಲಿಯಂತೆ ಮಹಾ ವೈಭವದಿಂದ ಹಾಸಿಗೆಯ ಮೇಲೆ ಕುಳಿತು, 'ಸುಕುಮಾರನು ಎಲ್ಲಿದ್ದಾನೆ ?' ಎಂದು

ಬಿಸಗೊಂಡೊಡೆ ಸ್ವಾಮಿ ಆತಂ ಕರಂ ಸಾಡು ನಿಮ್ಮ ಬರಮನಱಿಯಂ ಪ್ರಾಸಾದದ ಮೇಗಣ ನೆಲೆಯೊಳಿರ್ದನೆಂದೊಡರಸಂ ಬಟಿಯನಟ್ಟಿಮೆನೆ ತಾಯ್ ಪೋಗಿ ಮಗನೆ ಅರಸರ್‌ವಂದರ್ ಬಾ ಪೋಪಮೆನೆ ಅರಸರೆಂಬೊರಾರೆನೆ ತಾಯೆಂದಳ್ ನಮ್ಮನಾಳ್ವೊರೆಂದೊಡೆ ನಮ್ಮನಾಳ್ವರುಮೊಳರೆ ಎಂಡು ವಿಸ್ಮಯಂಬಟ್ಟು ತಾಯ ವಚನಮಂ ಮಾರ್ಕೊಳಲಾಱದೆ ಬರ್ಪೊನಂ ನರೇಶ್ವರಂ ಕಂಡು ಕಣ್ಗೆತ್ತ ಫಲಮನಿಂದು ಪೆತ್ತೆನೆಂದು ಪ್ರತ್ಯಕ್ಷ ಕಾಮದೇವನನಪ್ಪಿಕೊಳ್ವಂತಪ್ಪಿಕೊಂಡು ದಿವ್ಯ ಶಯ್ಯಾತಳದ ಮೇಗೊಡನಿರಿಸಿದಾಗಳ್ ಸ್ವಜನ ಪರಿಜನಂಗಳ್ ಸಿದ್ಧಾರ್ಥಂಗಳಂ ಮಾಂಗಲ್ಯಮೆಂದಿರ್ವರ್ಗ್ಗಂ ಸೇಸೆಯನಿಕ್ಕಲಾಗಳಾ ಸಿದ್ಧಾರ್ಥಂಗಳ್ ಸುಕುಮಾರಸ್ವಾಮಿಯಾಸನಮನೊತ್ತಿ ಕಟವಮನಲುಗಿಸುವುದುಮಂ ಸೊಡರಂ ನೋಡಿದಾಗಳ್ ಕಣ್ಣೀರ್ಗಳ್ ಸುರಿವುದುಮಂ ಕಂಡೀಗಳೀತಂಗೆ ಬ್ಯಾದಿಗಳೆಂದು ಬಗೆದಿರ್ಪಿನಂ ಮಜ್ಜನಕ್ಕೆಟ್ಟನ್ನಿಮೆಂದೊಡಂತೆಗೆಯ್ವಿಮೆಂದು ಮಜ್ಜನಂಗೊಂಡಮರಸನ್ನಿಭ ಮಣಿಕುಟ್ಟಿಮಮಪ್ಪ ಬಾವಿಯಂ ಪೊಕ್ಕು ಮಿಂದಲ್ಲಿಯನರ್ಘ್ಯಮಪ್ಪ ತನ್ನ ಬೆರಲ ಮಾಣಿಕದುಂಗುರಂ ಬಱ್ಪುದನಱಿಸಲ್ಬೇಡಿ ಛಿದ್ರಕದ್ವಾರದ ತೂಂತನುರ್ಬ ನೀರಂ ಕಳೆದಾಗಳಿಂದ್ರನ ಭಂಡಾರಂ ತೆಱೆದಂತಪ್ಪ ಲೇಸಪ್ಪ ನಾನಾಮಣಿಯ ವಿಚಿತ್ರ ಭೂಷಣಂಗಳಂ ಪಲವುಮಂ ಕಂಡು ಮಹಾಶ್ಚರ್ಯಭೂತನಾಗಿ ನೋಡುತ್ತಿರ್ಪನ್ನೆಗಮಾರೋಗಿಸಲೆಟ್ಟನ್ನಿ

ಕೇಳಿದನು. ಅದಕ್ಕೆ ಉತ್ತರವಾಗಿ "ಸ್ವಾಮಿ, ಅವನು ಬಹಳ ಸಾಧು, ನೀವು ಬಂದುದನ್ನು ಅವನು ತಿಳಿದಿಲ್ಲ. ಉಪ್ಪರಿಗೆಯ ಮೇಲೆ ಇದ್ದಾನೆ" ಎಂದು ಹೇಳಲು ದೂತರೊಡನೆ ಹೇಳಿ ಕಳುಹಿಸಿ ಅವನನ್ನು ಬರಮಾಡಿ ಎಂದನು. ಆಗ ತಾಯಿ ಯಶೋಭದ್ರೆ ಹೋಗಿ "ಮಗನೇ, ರಾಜರು ಬಂದಿದ್ದಾರೆ ಬಾ, ಹೋಗೋಣ" ಎಂದಳು. ಆಗ ಸುಕುಮಾರನು "ರಾಜರೆಂದರೆ ಯಾರು ?" ಎಂದು ಕೇಳಲು, ತಾಯಿಯು "ನಮ್ಮನ್ನು ಆಳುವವರು" ಎಂದಾಗ ಸುಕುಮಾರನು "ನಮ್ಮನ್ನು ಆಳುವವರೂ ಇರುವರೆ ?" ಎನ್ನುತ್ತ ಆಶ್ಚರ್ಯಪಟ್ಟನು. ತಾಯಿಯ ಮಾತನ್ನು ವಿರೋಧಿಸಲಾರದೆ ಬಂದನು. ಅವನನ್ನು ರಾಜನು ಕಂಡು "ಕಣ್ಣನ್ನು ಪಡೆದದ್ದು ಇಂದು ಸಫಲವಾಯಿತು" ಎಂದುಕೊಂಡು ಪ್ರತ್ಯಕ್ಷವಾಗಿ ಮನ್ಮಥನನ್ನೇ ಅಪ್ಪಿಕೊಳ್ಳುವಂತೆ ಅವನನ್ನು ಅಪ್ಪಿಕೊಂಡು ಶ್ರೇಷ್ಠವಾದ ಆ ಹಾಸಿಗೆಯ ಮೇಲೆ ತನ್ನ ಜೊತೆಯಲ್ಲಿ ಕುಳ್ಳಿರಿಸಿದನು.ಆಗ ಸ್ವಜನರೂ ಸೇವಕರೂ ಬಿಳಿ ಸಾಸವೆಗಳನ್ನು ಮಂಗಳಕರವೆಂದು ಇಬ್ಬರಿಗೂ ಮಂತ್ರಾಕ್ಷತೆಯನ್ನು ಹಾಕಿದರು. ಆ ಬಿಳಿ ಸಾಸವೆಕಾಳುಗಳು ಸುಕುಮಾರಸ್ವಾಮಿಯ ಆಸನದಲ್ಲಿ ಒತ್ತಿದುದರಿಂದ ಸೊಂಟ ಅಲ್ಲಾಡಿಸಿದುದನ್ನೂ ದೀಪ ನೋಡಿದಾಗ ಕಣ್ಣೀರು ಸುರಿವುದನ್ನೂ ಕಂಡು ಈತನಿಗೆ ರೋಗಗಳಿವೆಯಂದು ಭಾವಿಸಿಕೊಂಡಿದ್ದನು. ಅಷ್ಟರಲ್ಲಿ 'ಸ್ನಾನಕ್ಕೆ ಏಳಿ, ಬನ್ನಿ' ಎನ್ನಲು 'ಹಾಗೆಯೇ ಮಾಡುವೆವು' ಎಂದು ಸ್ನಾನ ಮಾಡಲು ಉದ್ಯುಕ್ತನಾಗಿ ದೇವಲೋಕದ್ದಕ್ಕೆ ಸಮಾನವಾದ ರತ್ನಮಯವಾದ ನೆಲಗಟ್ಟುಳ್ಳ ಕೆರೆಗೆ ಹೋಗಿ ಸ್ನಾನ ಮಾಡಿದನು. ಆಗ ತನ್ನ ಬೆರಳಿನಲ್ಲಿದ್ದ ಅಮೂಲ್ಯವಾದ ಉಂಗುರ ಬಿದ್ದು ಹೋಗಲು, ಅದನ್ನು ಹುಡುಕುವುದಕ್ಕಾಗಿ ಆ ಕೆರೆಯ ಎದುರಿನ ತೂಬನ್ನು ತೆಗೆದು ನೀರನ್ನು ಬಿಟ್ಟನು. ಆಗ ಅಲ್ಲಿ ದೇವೇಂದ್ರನ ಖಜಾನೆಯನ್ನೇ ತೆರೆದ ರೀತಿಯಲ್ಲಿ ಶ್ರೇಷ್ಠವಾದ ಬಗೆಬಗೆಯ ರತ್ನಗಳ ವಿಚಿತ್ರವಾದ ಹಲವು ಆಭರಣಗಳನ್ನು ಕಂಡು ಬಹಳ ಆಶ್ಚರ್ಯಪಟ್ಟವನಾಗಿ ನೋಡುತ್ತಿದ್ದನು. ಅಷ್ಟರಲ್ಲಿ ರಾಜನನ್ನೂ ಸುಕುಮಾರನನ್ನೂ 'ಊಟಕ್ಕೆ

ಮೆಂದಾಗಳ್ ಪರಿಯಣದ ಮೊದಲೊಳ್ ಸುಕುಮಾರಂ ಬೆರಸು ನಾನಾವ್ಯಕಾರದಿನಿಯವಪ್ಪುಣಿಸು
ಗಳನುಣುತ್ತಂ ಸುಕುಮಾರಸ್ವಾಮಿ ಅರ್ಧಾಹಾರಮಂ ನುಂಗುಗುಮರ್ಧಾಹಾರಮನುಗುಬ್ಬು ಮದಂ
ನೋಡಿ ಇದುವುಮೊಂದು ಕುತ್ತಂ ಆಹಾರದ ಮೇಗರುಚಿಯೆಂದು ಬಗೆದುಣಿಸು ಸಮೆದ ಬಟಿಕ್ಕೆ
ಗಂಧ ತಾಂಬೂಲ ಮಾಲ್ಯ ವಸ್ತ್ರಾಭರಣಂಗಳಂ ತಂದು ಕೊಟ್ಟಾಗವಂ ತೊಟ್ಟುಟ್ಟು ಪಸದನಂಗೊಂಡು
ಸುಖಸಂಕಥಾವಿನೋದದಿಂದಿರ್ದೊಡೆ ಯಶೋಭದ್ರೆಯನರಸನಿಂತೆಂದು ಬೆಸಗೊಂಡನಬ್ಬಾ ಎಮ್ಮ
ತಮ್ಮನ ಕಟಪ್ರದೇಶದ ರೋಗಕ್ಕಂ ಕಣ್ಣ ನೀರ್ ಬರ್ಪುದರ್ಕಂ ಅರುಚಿಗಮೇಕೆ ಮರ್ದಂ ಮಾಡಿಸಿದಿರಿಲ್ಲೆನೆ
ದೇವಾ ಆತಂಗಿವು ಕುತ್ತಮಲ್ಲವು ಸೇಸೆಯಿಕ್ಕಿದ ಸರುಸಪಂಗಳೊತ್ತೆ ಸೈರಿಸಲಾಱಂ ಮತ್ತೆ ಆವ
ಕಾಲಮುಂ ಮಾಣಿಕದ ಬೆಳಗಿನೊಳಿರ್ಪುದಱಿಂದಂ ಸೊದರ ಬೆಳಗಿಂಗೆ ಸೈರಿಸದೆ ಕಣ್ಣ ನೀರ್
ಬರ್ಕುಂ ಮತ್ತಂ ಕಮಳ ನೀಳೋತ್ಪಳದೊಳ್ ವಾಸಿಸಿದಕ್ಕಿಯೊಳ್ ಪೆಱವಕ್ಕಿಯಂ ನೀಪುಂ ಬಂದೊಡೆ
ಬೆರಸಿಯಟ್ಟುದು ಕೂಬುವುಪ್ಪುದಱಿಂ ವಾಸಿಸಿದಕ್ಕಿಯ ಕೂಟಂ ನುಂಗುಗುಮುಟಿದ
ಕೂಬನುಗುಬ್ಬುಮದಱಿಂದೀತಂಗೀಯವಸ್ಥೆಗಳಾದುವೆನೆ ಕೇಳ್ದು ವಿಸ್ಮಯಂಬಟ್ಟು ಈತನ ಕ್ಷಣಮಾತ್ರದ
ಭೋಗಕ್ಕಂ ಸುಖಕ್ಕಂ ಎಮ್ಮೆಲ್ಲಾ ಕಾಲಮರಸುತನಂ ಗೆಯ್ವಲ್ಲಿಯೊಳಪ್ಪ ಭೋಗೋಪಭೋಗಂಗಳ್

ಬನ್ನಿರಿ' ಎಂದು ಕರೆಯಲು ರಾಜನು ಸುಕುಮಾರನೊಂದಿಗೆ ಊಟದ ತಟ್ಟೆಯ ಮುಂದೆ ಕುಳಿತುಕೊಂಡು ಹಲವು ವಿಧದ ಸವಿಯಾದ ಆಹಾರವನ್ನು ಉಣ್ಣುತ್ತ ಇರಲು, ಸುಕುಮಾರಸ್ವಾಮಿ ಆಹಾರದ ಅರ್ಧಾಂಶವನ್ನು ನುಂಗುತ್ತಿದ್ದನು, ಇನ್ನುಳಿದ ಅರ್ಧಾಂಶ ಆಹಾರವನ್ನು ಉಗುಳುತ್ತಿದ್ದನು. ಅದನ್ನು ಅರಸನು ನೋಡಿ "ಇದು ಒಂದು ಬಗೆಯ ರೋಗ, ಊಟದ ಮೇಲೆ ರುಚಿಯಿಲ್ಲದುದು" ಎಂದು ಭಾವಿಸಿಕೊಂಡನು. ಊಟವಾದ ನಂತರ ಗಂಧ, ತಾಂಬೂಲ, ಹೂಮಾಲೆ, ಉಡಿಗೆ, ತೊಡಿಗೆಗಳನ್ನು ತಂದು ಕೊಡಲು, ಅವನ್ನು ತೊಟ್ಟು ಉಟ್ಟು ಅಲಂಕಾರ ಮಾಡಿಕೊಂಡು ಸಂತೋಷದ ಮಾತುಗಳ ವಿನೋದದಿಂದ ಇದ್ದರು. ಆಗ ಅರಸನು ಯಶೋಭದ್ರೆಯನ್ನು ಕುರಿತು ಹೀಗೆ ಪ್ರಶ್ನಿಸಿದನು: "ಅಮ್ಮಾ ನನ್ನ ತಮ್ಮನಾದ ಸುಕುಮಾರನಿಗೆ ಸೊಂಟದ ರೋಗಕ್ಕೂ ಕಣ್ಣೀರು ಸುರಿಯುವುದಕ್ಕೂ ಊಟ ಸೇರದಿರುವುದಕ್ಕೂ ಏಕೆ ಔಷಧ ಮಾಡಿಸಿಲ್ಲ ?" ಎಂದು ಕೇಳಿದಾಗ ಆಕೆ "ಒಡೆಯರೆ, ಅವನಿಗೆ ಇವು ರೋಗಗಳಲ್ಲ. ಮಂತ್ರಾಕ್ಷತೆಯಾಗಿ ಹಾಕಿದ ಬಿಳಿ ಸಾಸವೆಗಳು ಒತ್ತಿದುದರಿಂದ ಸಹಿಸದಾದನು. ಅಲ್ಲದೆ ಯಾವಾಗಲೂ ಮಾಣಿಕ್ಯ ರತ್ನದ ಬೆಳಕಿನಲ್ಲಿ ಅವನು ಇರುವುದರಿಂದ ದೀಪದ ಬೆಳಕಿಗೆ ಸಹಿಸಲಾರದೆ ಅವನ ಕಣ್ಣಿನಲ್ಲಿ ನೀರು ಬರುತ್ತದೆ. ಅದೂ ಅಲ್ಲದೆ ನೀವು ಬಂದ ಸಂದರ್ಭದಲ್ಲಿ ತಾವರೆ ನೈದಿಲೆ ಹೂಗಳ ಸುವಾಸನೆಯಿಂದ ಕೂಡಿದ ಅಕ್ಕಿಯೊಂದಿಗೆ ಬೇರೆ ಅಕ್ಕಿಯನ್ನು ಮಿಶ್ರಮಾಡಿ ಬೇಯಿಸಿದ ಅನ್ನವನ್ನು ಬಡಿಸಿದ್ದರಿಂದ ಅವನು ಸುವಾಸನೆಯ ಅಕ್ಕಿಯ ಅನ್ನವನ್ನು ನುಂಗುತ್ತಿದ್ದನು. ಉಳಿದ ಅನ್ನವನ್ನು ಉಗುಳುತ್ತಿದ್ದನು. ಆದುದರಿಂದಲೇ ಇವನಿಗೆ ಈ ಅವಸ್ಥೆಗಳಾಗಿವೆ" ಎಂದು ಹೇಳಿದಳು. ಅರಸನು ಇದನ್ನು ಕೇಳಿ ಆಶ್ಚರ್ಯಪಟ್ಟನು. "ಈತನ ಒಂದು ಕ್ಷಣದ ಭೋಗಕ್ಕೂ ಸುಖಕ್ಕೂ ನನ್ನ ಎಲ್ಲಾ ಕಾಲವೂ ಅರಸುತನ ನಡೆಸಿದಾಗ ಉಂಟಾದ ಭೋಗ-ಉಪಭೋಗಗಳು ಸಮಾನವಾಗವು. ಆದುದರಿಂದ ಲೋಕದಲ್ಲಿ

ದೊರೆಯಲ್ಲವದಱಿಂದೀ ಲೋಕದೊಳೀತನೆ ಪರಮಾರ್ಥಂ ಸುಖಿಯೆಂದೊಸೆದರಸನವಂತಿ ಸುಕುಮಾರನೆಂದು ಪೆಸರನಿಟ್ಟಂ ಯಶೋಭದ್ರೆಯುಮರಸನನನೇಕ ವಸ್ತುವಾಹನಂಗಳಿಂದಂ ಪೂಜಿಸಿ ಕಟಿಪಿದೊಳಿಂತು ಸುಕುಮಾರಸ್ವಾಮಿಗೆ ಸುಖದಿಂದಂ ಕಾಲಂ ಸಲೆ ಮತ್ತೊಂದು ದಿವಸಂ ಯಶೋಭದ್ರೆಯ ಭ್ರಾತರರಪ್ಪ ದಯಾಭದ್ರರೆಂಬ ರಿಸಿಯರ್ ಮುನ್ನಮವರ ಪಕ್ಕದೆ ಸೂರದತ್ತಂ ಧರ್ಮಂ ಕೇಳ್ದು ವೈರಾಗ್ಯಮಾಗಿ ಪುತ್ರಮುಖಂಗಂಡು ತಪಂಬಟ್ಟೊನಾತನ ಮಗನುಂ ರಿಸಿಯರಂ ಕಂಡಾಗಳೆ ತಪಂಬಡುಗುಮೆಂಬುದಂ ಮುನ್ನೆ ನೈಮಿತ್ತಿಕರಾದೇಶಂಗೆಯ್ದಿರ್ದರ್ ಮತ್ತಂ ದಯಾಭದ್ರರೆಂಬ ರಿಸಿಯರ್ ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪ ದಿವ್ಯಜ್ಞಾನಿಗಳ್ ಸುಕುಮಾರಸ್ವಾಮಿಗೆ ನಾಲ್ಕುತಿಂಗಳುಮೈದುದಿವಸಮಾಯುಷ್ಯಪ್ರಮಾಣ ಮನಱಿದುಪಕಾರಾರ್ಥಮುಜ್ಜೇನಿಗೆ ವಂದು ಸುಕುಮಾರಸ್ವಾಮಿಯ ಮಾಡದ ಪೞಿಗಣ ನಂದನ ವನದೊಳಗಣ ಜಿನಾಲಯದೊಳಾಷಾಢ ಮಾಸದ ಚತುರ್ದಶಿಯ ದಿವಸದಂದು ಪೞಿವೊಯ್ದು ಬಂದು ಜೋಗುಗೊಂದಿರ್ದರನ್ನೆಗಂ ವನಪಾಲಕರ್ ಪೋಗಿ ಯಶೋಭದ್ರೆಗೆ ರಿಸಿಯರ ಬರವಂ ಪೇೞ್ದೊಡಾಕೆಯುಂ ಬಂದು ದೇವರುಮಂ ರಿಸಿಯರುಮಂ ಬಂದಿಸಿ ಭಟ್ಟಾರಾ ನೀಮಿಲ್ಲಿಗೇಕೆ ಬಂದಿರಿಲ್ಲಿಂದಂ ಪೊಱವೊಲೊಳ್ ಪೞವುಚೆ ಬಸದಿಯಿಲ್ಲಾ ಎಂದೊಡೆ ಭಟ್ಟಾರರೆಂದರಬ್ಯಾ ನಿದುವಯಣಂ ಬಂದು ಸೇದೆಗೆಟ್ಟೆಂತಾನುಮಿಲ್ಲಿಗೆಯಾಸತ್ತು ಜೋಗಿನ ಪೊಟ್ಟೞಿಲೊಳೆಯ್ದಿ ಬಂದು

ನಿಜವಾಗಿಯೂ ಈತನೇ ಸುಖಿ" ಎಂದು ಪ್ರೀತಿಗೊಂಡವನಾಗಿ ಅರಸನು ಅವನಿಗೆ 'ಅವಂತಿ ಸುಕುಮಾರ' ಎಂದು ಹೆಸರನ್ನಿಟ್ಟನು. ಯಶೋಭದ್ರೆ ರಾಜನನ್ನು ಹಲವಾರು ವಿಧದ ವಸ್ತುಗಳಿಂದಲೂ ವಾಹನಗಳಿಂದಲೂ ಸತ್ಕರಿಸಿ ಕಳುಹಿಸಿದಳು. ಹೀಗೆ ಸುಕುಮಾರಸ್ವಾಮಿಗೆ ಕಾಲವು ಸುಖಮಯವಾಗಿ ಸಾಗುತ್ತಿತ್ತು. ಅನಂತರ ಒಂದು ದಿವಸ ಯಶೋಭದ್ರೆಯ ಸಹೋದರರಾದ ದಯಾಭದ್ರರೆಂಬ ಋಷಿಗಳು ಉಜ್ಜಯಿನಿಗೆ ಬಂದರು. ಹಿಂದೆ ಅವರ ಬಳಿಯಲ್ಲಿದ್ದು ಸೂರದತ್ತನು (ಸುಕುಮಾರನ ತಂದೆ) ಧರ್ಮಶ್ರವಣ ಮಾಡಿ, ವೈರಾಗ್ಯ ತಾಳಿ, ಮಗನು ಹುಟ್ಟಿದೊಡನೆ ತಪಸ್ಸಿಗೆ ತೆರಳಿದ್ದನು. ಆತನ ಮಗನಾದ ಸುಕುಮಾರನೂ ಋಷಿಗಳನ್ನು ಕಂಡ ಕೂಡಲೇ ತಪಸ್ಸಿಗೆ ತೆರಳುವನೆಂಬುದನ್ನು ಹಿಂದೆಯೇ, ಜ್ಯೋತಿಷ್ಯ ತಿಳಿದವರು ತಿಳಿಸಿದ್ದರು. ಆಮೇಲೆ ದಯಾಭದ್ರರೆಂಬ ಋಷಿಗಳು ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪತ್ತನ, ದ್ರೋಣಾಮುಖಗಳಲ್ಲಿ ಸಂಚಾರ ಮಾಡುತ್ತ, ದಿವ್ಯಜ್ಞಾನಿಗಳಾದ ಅವರು ಸುಕುಮಾರಸ್ವಾಮಿಗೆ ನಾಲ್ಕು ತಿಂಗಳು ಐದು ದಿವಸ ಮಾತ್ರ ಆಯುಷ್ಯವಿರುವುದನ್ನು ತಿಳಿದು ಉಪಕಾರ ಮಾಡುವುದಕ್ಕಾಗಿಯೇ ಉಜ್ಜಯಿನಿಗೆ ಬಂದರು. ಹಾಗೆ ಬಂದು ಸುಕುಮಾರಸ್ವಾಮಿಯ ಮನೆಯ ಹಿಂದಣ ಉದ್ಯಾನದೊಳಗಿರುವ ಜಿನಾಲಯದಲ್ಲಿ ಆಷಾಢಮಾಸದ ಚತುರ್ದಶಿಯ ದಿವಸ ಸಂಜೆ (ಹರೆ ಬಾರಿಸುವ ಹೊತ್ತು) ಬಂದು ಯೋಗಸ್ಥರಾಗಿದ್ದರು. ಅಷ್ಟರಲ್ಲಿ ಉದ್ಯಾನಪಾಲಕರು ಹೋಗಿ, ಋಷಿಗಳು ಬಂದ ಸಂಗತಿಯನ್ನು ಯಶೋಭದ್ರೆಗೆ ತಿಳಿಸಿದರು. ಆಕೆ ಬಂದು ಜಿನೇಂದ್ರರನ್ನೂ ಋಷಿಗಳನ್ನೂ ವಂದಿಸಿ ಋಷಿಗಳೊಡನೆ - "ಸ್ವಾಮೀ, ನೀವು ಈ ಸ್ಥಳಕ್ಕೆ ಯಾಕೆ ಬಂದಿರಿ? ಇಲ್ಲಿಗಿಂತ ಈ ಪಟ್ಟಣದ ಹೊರಗೆ ಬೇರೆ ಕಡೆ ಜಿನದೇವಾಲಯವಿರಲಿಲ್ಲವೆ?" ಎಂದು ಕೇಳಿದಳು. ಆಗ ಋಷಿಗಳು "ಅವ್ವಾ, ನಾವು ಬಹಳ ದೂರದಿಂದ ಪ್ರಯಾಣ

ಜೋಗುಗೊಂಡಿರ್ದೆಮೆತ್ತಲುಂ ಪೋಗಲಾಗದೆನೆ ಅಂತಪ್ಪೊಡೆ ಭಟಾರಾ ನಿಮ್ಮನೊಂದಂ ಬೇಡಿದಪ್ಪೆ ನಾಲ್ಕುತಿಂಗಳುಮೇನುಮನೋದದೆ ಮೋನಂಗೊಂಡು ಬಸದಿಯಂಗಳದೊಳ್ ನಡಪಾಡ ದೊಳಗಣಡಂಗಿರ್ದು ಜೋಗು ನೆಱೆದಂದು ಬಜಯಂಗೆಯ್ಯಮೆಂದೊಡಂತೆಗೆಯ್ವೆಮೆಂದು ಭಟಾರರಿರ್ದರ್ ಮತ್ತಿತ್ತಲ್ ಸುಕುಮಾರಸ್ವಾಮಿಯುಂ ಸರ್ವತೋಭದ್ರಮೆಂಬುತ್ತುಂಗ ವಿಚಿತ್ರಮಾಗಿರ್ದ ಪ್ರಾಸಾದದ ಮೇಗೇಱನೆಯ ನೆಲೆಯೊಳ್ ಕಾರ್ತಿಕಮಾಸದ ಪುಣ್ಣಮಿಯಂದು ಸುಖದಿಂದೆ ಲುಂದಿರ್ದನನ್ನೆಗಮಿತ್ತ ದಯಾಭದ್ರ ಭಟಾರರ್ಗ್ಗೆ ಜೋಗು ನೆಱೆದು ಯಶೋಭದ್ರೆಯ ಬೇಡಿದ ಮೋನದ ದಿವಸದ ಪ್ರಮಾಣಾವಸಾನದೊಳ್ ಬೈಗಿರುಳಿನ ಪಂಚಮಹಾಶಬ್ದದ ಪೊಱಮೊಳ್ ತ್ರಿಲೋಕಪ್ರಜ್ಞಪ್ತಿಯೆಂಬುದಂ ಮೃದು ಮಧುರ ಗಂಭೀರ ಸ್ವರದಿಂ ಭಟಾರರ್ ಪರಿವಿಡಿಗೆಯ್ವಾಗಳ್ ಅಧೋಲೋಕ ತಿರ್ಯಗ್ಲೋಕಂಗಳಿರ್ದ ಸ್ವರೂಪಪಮಂ ಪ್ರಮಾಣಮುಮಮನೋದಿ ಊರ್ದ್ವಲೋಕವ್ಯಾವರ್ಣನೆಯಂ ಪೇಟ್ಪಾಗಳಚ್ಯುತಕಲ್ಪದ ಪದ್ಮಗುಲ್ಮ ವಿಮಾನಮಂ ವ್ಯಾವರ್ಣಿಸುವುದಂ ಸುಕುಮಾರಸ್ವಾಮಿ ಕೇಳ್ದು ಜಾತಿಸ್ಮರನಾಗಿಯಾನಿಲ್ಲಿ ಪುಟ್ಟಿರ್ದ್ದೆನೆಂಬುದನಱೆದು ಅಹೋ ಸುರಲೋಕಮೆಂಬಮೃತಸಮುದ್ರದ ನೀರೆಲ್ಲಮಂ ಕುಡಿದು ತಣಿಯದನೀ ಮನುಷ್ಯಭವದ ಸುಖಮೆಂಬ

ಮಾಡಿಕೊಂಡು ಬಂದುದರಿಂದ ಬಹಳ ಬಳಲಿದ್ದೇವೆ. ಹೇಗಾದರೂ ಈ ಸ್ಥಳಕ್ಕೆ ಆಯಾಸಗೊಂಡು ಯೋಗಾಭ್ಯಾಸದ ಹೊತ್ತಿಗೆ ಬಂದು ತಲುಪಿ ಯೋಗಮಗ್ನರಾಗಿದ್ದೇವೆ. ಇಲ್ಲಿಂದ ಎಲ್ಲಿಗೂ ಹೋಗಲಾಗದು" ಎಂದು ಹೇಳಿದರು. ಆಗ ಆಕೆ - "ಹಾಗಿದ್ದರೆ ಪೂಜ್ಯರೇ, ನಿಮ್ಮಲ್ಲಿ ಒಂದನ್ನು ನಾನು ಬೇಡಿಕೊಳ್ಳುತ್ತೇನೆ. ನೀವು ನಾಲ್ಕು ತಿಂಗಳು ಏನನ್ನೂ ಪಠಿಸದೆ, ಮೌನವ್ರತ ತಾಳಿ, ಜಿನಾಲಯದ ಅಂಗಳದಲ್ಲಿ ಅಡ್ಡಾಡದೆ ಒಳಗೆಯೇ ಅಡಗಿದ್ದು ತಪಸ್ಸು ಕೊನೆಗೊಂಡಾಗ ನಿಮ್ಮ ಪ್ರಯಾಣ ಬೆಳೆಸಿರಿ" ಎಂದಳು. "ಹಾಗೆಯೇ ಮಾಡುವೆವು" ಎಂದು ನುಡಿದು ಋಷಿಗಳಿದ್ದರು. ಆಮೇಲೆ ಇತ್ತ ಸುಕುಮಾರಸ್ವಾಮಿ ಸರ್ವತೋಭದ್ರವೆಂಬ ಅತ್ಯಂತ ಎತ್ತರವಾದ ಮತ್ತು ವಿಶೇಷ ಆಶ್ಚರ್ಯಕರವಾದ ಉಪ್ಪರಿಗೆಯ ಮನೆಯ ಮೇಲೆ ಏಳನೆಯ ಅಂತಸ್ತಿನಲ್ಲಿ ಕಾರ್ತಿಕಮಾಸದ ಹುಣ್ಣಿಮೆಯಂದು ಸುಖವಾಗಿ ಮಲಗಿದ್ದನು. ಅದೇ ಸಮಯಕ್ಕೆ ಈ ಕಡೆಯಲ್ಲಿ ದಯಾಭದ್ರಮುನಿಗಳ ತಪಸ್ಸು ಪೂರ್ಣವಾಯಿತು. ಯಶೋಭದ್ರೆ ಪ್ರಾರ್ಥಿಸಿಕೊಂಡ ಮೌನ ದಿವಸದ ಅವಧಿ ಕೊನೆಗೊಂಡಿತು. ಅಂದಿನ ರಾತ್ರಿಯ ಕೊನೆಯ ವೇಳೆ (ಮುಂಜಾವದಲ್ಲಿ) ಶೃಂಗ, ತಮಟೆ, ಶಂಖ, ಭೇರಿ, ಜಯಘಂಟೆ- ಎಂಬ ಐದು ಬಗೆಯ ವಾದ್ಯಗಳ ಬಾಜನೆಯ ಸಮಯದಲ್ಲಿ ಋಷಿಗಳು ಮೂರುಲೋಕಗಳ ಆಕಾರಾದಿಗಳನ್ನು ನಿರೂಪಿಸುವ ಶಾಸ್ತ್ರವನ್ನು ಮೆಲ್ಲು ಇಂಪು ಗುಣ್ಪುಳ್ಳ ಸ್ವರದಿಂದ ಅನುಕ್ರಮವಾಗಿ ಪಠನ ಮಾಡಿದರು. ಕೆಳಗಿನ ಲೋಕ, ಮೃಗಪಕ್ಷಿ (ತಿರ್ಯಕ್) ಲೋಕಗಳು ಇರುವ ಸ್ವರೂಪವನ್ನೂ ಅವುಗಳ ಪ್ರಮಾಣವನ್ನೂ ಪಠಿಸಿದರು. ಅನಂತರ ಮೇಲಿನ ಲೋಕದ ವರ್ಣನೆಯನ್ನು ಹೇಳಿ, ಮತ್ತೆ ಅಚ್ಯುತಕಲ್ಪದ 'ಪದ್ಮಗುಲ್ಮ' ಎಂಬ ಮಹಾಭವವನ್ನು ವರ್ಣನೆ ಮಾಡಿದರು. ಇದೆಲ್ಲವನ್ನೂ ಸುಕುಮಾರಸ್ವಾಮಿ ಕೇಳಿದನು. ಆಗ ಅವನಿಗೆ ಪೂರ್ವಜನ್ಮಸ್ಮರಣೆಯುಂಟಾಯಿತು. ತಾನೀಗ ಇಲ್ಲಿ ಹುಟ್ಟಿದ್ದೇನೆ - ಎಂಬುದನ್ನು ಅವನು ತಿಳಿದುಕೊಂಡನು. "ಆಹಾ, ನಾನು ದೇವಲೋಕವೆಂಬ ಸುಧಾಸಮುದ್ರದ ನೀರನ್ನೆಲ್ಲ ಕುಡಿದೂ ತೃಪ್ತಿಗೊಳ್ಳದೆ ಈ ಮನುಷ್ಯಜನ್ಮದ ಸುಖವೆಂಬ

ಪುಲ್ಲನಿಯೊಳ್ ಸಿಲ್ಕಿ ಶಿವಸುಖಮನೆಯ್ದಿಸುವ ಸಚ್ಚಾರಿತ್ರದಿಂ ಬಚ್ಚಿದೆನೆಂದು ತನ್ನಂ ತಾಂ ನಿಂದಿಸುತ್ತಂ ಮಂಚದಿಂದಿಳಿದು ಮಾಡದೊಳಗಿರ್ದ ವಸ್ತ್ರಂಗಳಂ ತೆಗೆದುಕೊಂಡು ಪ್ರಾಸಾದದ ಪೆಱಗಣ ಗವಾಕ್ಷಜಾಳದೊಳ್ ಕಟ್ಟಿಕೊಂಡೊಂದೊಂದಱ ತುದಿಯೊಳೊಂದೊಂದು ವಸ್ತ್ರಮಂ ತಗುಚ್ಚಿ ಪಿಡಿದಿಟ್ಟಿದು ಜಿನಾಲಯಮನೆಯ್ದಿ ದೇವರ್ಗೆ ನಮಸ್ಕಾರಂಗೆಯ್ದು ದಯಾಭದ್ರಭಟಾರರ್ಗೆಱಗಿ ಪೊಡೆವಟ್ಟು ದೀಕ್ಷೆಯಂ ಪ್ರಸಾದಂಗೆಯ್ದೆನ್ನಂ ಸಂಸಾರಾರ್ಣವದತ್ತಣಿಂದೆತ್ತಿಮೆಂದೊಂಗೆ ಭಟಾರರ್ ಮೂಱು ದಿವಸಂ ನಿನಗಾಯಷ್ಯಮೆಂದೊಡೀಗಳೀ ನಿಸ್ಸಾರಮಪ್ಪ ದೇಹದಿಂ ಸಾರಮಪ್ಪ ತಪಮಂ ಕೈಕೊಂದು ಪಲಕಾಲಂ ನೆಗಲಿಲ್ ಪೆತ್ತೆನಿಲ್ಲ ನಿಸ್ಸಾರಮಪ್ಪ ಭೋಗದೊಳ್ ಸಿಲ್ಕಿ ಅಮೇಧ್ಯದೊಳ್ ಕ್ರೀಡಿಸುವ ಬಾಳಕಂಬೊಲ್ ಕಾಲಮಂ ಬಱಿದೆ ಕಳೆದೆನೆಂದು ತನ್ನನಾದಮಾನುಂ ನಿಂದಿಸಿ ತತ್ಪಾದಮೂಲದೊಳ್ ತಪಂಬಟ್ಟು ಪಂಚಮಹಾವ್ರತಂಗಳನೇಱಿಸಿಕೊಂಡು ಪಡಿಕಮಣಂಗೇಳ್ದ ತದನಂತರಂ ನಿಶ್ಚಯ ಸಮ್ಯಕ್ತ್ವಮಂ ಕೈಕೊಂದಿಂ ಬಟಿಕ್ಕೆ ಮಹಾಕಾಳಮೆಂಬ ಶ್ಮಶಾನಕ್ಕೆ ಪೋಗಿ ಯಾವಜ್ಜೀವಮಾಹಾರಕ್ಕೆ ನಿವೃತ್ತಿಗೆಯ್ದು ಪ್ರಾಯೋಪಗಮನ ವಿಧಾನದಿಂ ಪ್ರಚ್ಛನ್ನಮಪ್ಪೆಡೆಯೊಳ್ ಮೃತಕ ಸೆಜ್ಜೆಯೊಳಿರ್ದು ಸನ್ಯಸನಂಗೆಯ್ದು ಧರ್ಮ್ಯಧ್ಯಾನ ಶುಕ್ಲಧ್ಯಾನಂಗಳಂ ಧ್ಯಾನಿಸುತ್ತಿರ್ಪನ್ನೆಗಂ ಇತ್ತ ವಾಯುಭೂತಿಯಪ್ಪ ಭವದಂದಿನತ್ತಿಗೆಯಪ್ಪ ಸೋಮದತ್ತೆಯೆಂಬೊಳ್ ನಿದಾನಂಗೆಯ್ದು ತನ್ನ ನಾಲ್ವರ್ ಮಕ್ಕಳುಂ ತಾನುಂ ಸಂಸಾರಸಮುದ್ರದೊಳ್

ಹುಲ್ಲಿನ ಹನಿಗೆ ಸಿಕ್ಕಿ ಮಂಗಳಕರಸುಖವನ್ನು ಒದಗಿಸುವ ಒಳ್ಳಡತೆಯಿಂದ ಕೆಳಕ್ಕೆ ಜಾರಿಹೋಗಿದ್ದೇನೆ"- ಎಂದು ತನ್ನನ್ನು ತಾನೇ ನಿಂದಿಸಿಕೊಂಡನು. ಮಂಚದಿಂದ ಇಳಿದು, ಮನೆಯಲ್ಲಿದ್ದ ಬಟ್ಟೆಗಳನ್ನೆಲ್ಲ ತೆಗೆದುಕೊಂಡು ಉಪ್ಪರಿಗೆ ಮನೆಯ ಹಿಂಗಡೆಯ ಕಿಟಕಿಗೆ ಕಟ್ಟಿಕೊಂಡು ಒಂದೊಂದರ ತುದಿಗೆ ಒಂದೊಂದು ಬಟ್ಟೆಯನ್ನು ಕಟ್ಟಿ, ಅದನ್ನು ಹಿಡಿದು ಕೆಳಗಿಳಿದು ಜಿನಾಲಯಕ್ಕೆ ಬಂದು ಜಿನೇಶನನ್ನು ವಂದಿಸಿದನು. ದಯಾಭದ್ರಮುನಿಗಳಿಗೆ ಸಾಷ್ಟಾಂಗ ವಂದಿಸಿ "ನನಗೆ ದೀಕ್ಷೆಯನ್ನು ಅನುಗ್ರಹಿಸಿ ನನ್ನನ್ನು ಸಂಸಾರಸಮುದ್ರದಿಂದ ಎತ್ತಿರಿ" ಎಂದು ಹೇಳಿದನು. ಆಗ ಭಟಾರರು ಅವನೊಡನೆ - "ನಿನಗೆ ಮೂರು ದಿವಸದ ಆಯುಷ್ಯ ಮಾತ್ರವಿರುವುದು" ಎಂದರು. ಆಗ ಸುಕುಮಾರಸ್ವಾಮಿ - "ಈಗ ಈ ನಿಸ್ಸಾರವಾದ ಶರೀರದಿಂದ ಸಾರವತ್ತಾದ ತಪಸ್ಸನ್ನು ಕೈಕೊಂಡು ನಾನು ಬಹಳಕಾಲ ಆಚರಿಸಲಿಲ್ಲ. ನಿಸ್ಸಾರವಾದ ಸುಖಾನುಭವದಲ್ಲಿ ಸಿಕ್ಕಿಕೊಂಡು ಹೇಲಿನಲ್ಲಿ ಆಟವಾಡುವ ಬಾಲಕನ ಹಾಗೆ ವ್ಯರ್ಥವಾಗಿ ಕಾಲವನ್ನು ಕಳೆದನು" ಎಂದು ತನ್ನನ್ನು ಅತಿಶಯವಾಗಿ ಹಳಿದುಕೊಂಡನು. ಆ ಮುನಿಗಳ ಪಾದದ ಬುಡದಲ್ಲಿ ತಪಸ್ಸಿನ ಆಚರಣೆಯನ್ನು ಸ್ವೀಕರಿಸಿ, ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ - ಎಂಬ ಐದು ಮಹಾವ್ರತಗಳನ್ನು ಕೈಕೊಂಡು ದೋಷಗಳಿಗೆ ಪ್ರಾಯಶ್ಚಿತ್ತಗಳನ್ನು (ಪಡಿಕಮಣ) ಕೇಳಿದ ನಂತರ ಜೈನತತ್ವವನ್ನು ಸ್ವೀಕರಿಸಿ ಮಹಾಕಾಳವೆಂಬ ಶ್ಮಶಾನಕ್ಕೆ ಹೋಗಿ ಜೀವವಿರುವವರೆಗೂ ಆಹಾರವನ್ನು ಸೇವಿಸದೆ, ಅಮರಣ ಉಪವಾಸ ವಿಧಾನದಿಂದ ಗುಪ್ತವಾದ ಸ್ಥಳದಲ್ಲಿ ಶವಾಸನದಲ್ಲಿದ್ದು, ಸಂನ್ಯಾಸವನ್ನು ಮಾಡುತ್ತ ಧರ್ಮ್ಯಧ್ಯಾನ ಶುಕ್ಲಧ್ಯಾನ ಎಂಬ ಧ್ಯಾನಗಳಲ್ಲಿ ಮಗ್ನನಾಗಿದ್ದನು. ಆ ಕಡೆಯಲ್ಲಿ ವಾಯುಭೂತಿಯಾಗಿದ್ದ ಜನ್ಮದಂದಿನ ಅತ್ತಿಗೆಯಾಗಿದ್ದ ಸೋಮದತ್ತೆ ಎಂಬವಳು (ಜನ್ಮಾಂತರದಲ್ಲಿ ನರಿಯಾಗಿ ಮಕ್ಕಳೊಂದಿಗೆ ನಿನ್ನ ಕಾಲುಗಳನ್ನು ತಿನ್ನುವವಳಾಗುವೆನೆಂದು) ಪ್ರತಿಜ್ಞೆಮಾಡಿ ತನ್ನ ನಾಲ್ಕು ಮಂದಿ ಮಕ್ಕಳೂ ತಾನೂ

ನೀಡುಂ ತಿಜ್ಜನೆ ತಿರಿದು ಬಂದು ಪೆಣ್ಣರಿಯಾಗಿ ಪುಟ್ಟ ತನ್ನ ನಾಲ್ಕು ಮಱಿಗಳ್ಗರಸಾಹಾರಮನಱಸಿ ತೊಬಲುತ್ತಂ ಬರ್ಪುದನ್ನೆಗಂ ಸುಕುಮಾರಸ್ವಾಮಿಯುಂ ಮಹಾಕಾಳಕ್ಕೆ ಪೋಪನೆಲ್ಲಾ ಕಾಲಮುಂ ಮಣಿಕುಟ್ಟಿಮಭೂಮಿಯೊಳ್ ಪಾಸಿದ ನೇತ್ರಪಟೆಯ ಮೇಗೆ ನಡೆದ ಮೃದು ಲಲಿತಮಪ್ಪ ಚರಣದ್ವಯದೊಳ್ ಮುನ್ನೆಂದುಂ ನೆಲನಂ ಕಟ್ಟಯಱೆಯದೊಂ ಕಠಿನಭೂಮಿಯೊಳ್ ನಡೆದೊಡೆ ಕಿಱುಗಲ್ಗಳುಂ ಪೆಟ್ಟಿಗಳುಮಗುಚ್ಚು ಪುಗುಳೊಡೆದು ಪೊಱಮಟ್ಟು ಕರಗದ ದಾರೆವೊಲೆಡೆವಱೆಯದೆ ಮಹಾಕಾಳಶ್ಮಶಾನಂಬರೆಗಮೊಕ್ಕ ನೆತ್ತರ ದಾರೆಯ ಗಂದದಿಂದಂ ನರಿಗಳ್ ಬಂದು ಕಂಡು ರಾಗಿಸಿ ಮಱಿಗಳ್ಬೆರಸಡಿಯಿಂದಂ ತೊಟ್ಟೆರಡುಂ ಕಾಲ್ಗಳಂ ಮೊಬಿಕಾಲ್ಗರೆಗಮೊಂದುದಿವಸಂ ತಿಂದತ್ತೆರಡನೆಯ ದಿವಸಂ ಮೊಬಿಕಾಲಿಂ ತೊಟ್ಟು ಕಟವರೆಗಂ ತಿಂದತ್ತು ಮೂರನೆಯ ದಿವಸಂ ಬಸಿಱಿಂ ಪೋಟ್ಟು ಕರುಳಂ ತೋಡಿ ತಿನೆ ಪೃಥಕ್ತ್ವವಿತರ್ಕವೀಚಾರಮೆಂಬ ಪ್ರಥಮ ಶುಕ್ಲಧ್ಯಾನದೊಳ್ ಕೂಡಿಯುಪಶಾಂತ ಗುಣಸ್ಥಾನದೊಳಿರ್ದು ರತ್ನತ್ರಯಮಂ ಸಾದಿಸಿ ಸಯಸತ್ತಮ ದೇವನಾಗಿ ಪುಟ್ಟಿದೊಂ ಮತ್ತಿತ್ತ ತಾಯುಂ ಪೆಂಡಿರುಂ ಪರಿವಾರಮುಮೆಲ್ಲಾ ದೆಸೆಗಳೊಳಂ ಪರಿವರಿದು ಪೋಗಿ ಸುಕುಮಾರಸ್ವಾಮಿಯನಹೊ ಸೂರಾ ಅಹೋ ಮಹಾಪುರುಷ ಅಹೊ ಧೈರ್ಯವಂತ ಅಹೊ

ಸಂಸಾರವೆಂಬ ಸಮುದ್ರದಲ್ಲಿ ವಿಶೇಷವಾಗಿ ತಿರ್ರನೆ ಸುತ್ತುತ್ತ ಬಂದು, ಹೆಣ್ಣು ನರಿಯಾಗಿ ಹುಟ್ಟಿ ತನ್ನ ನಾಲ್ಕು ಮರಿಗಳೊಂದಿಗೆ ಅದು ಆಹಾರವನ್ನು ಹುಡುಕುತ್ತ ಸುತ್ತಾಡುತ್ತಾ ಬರುತ್ತಿತ್ತು. ಸುಕುಮಾರಸ್ವಾಮಿ ಮಹಾಕಾಳವೆಂಬ ಶ್ಮಶಾನದ ಕಡೆಗೆ ಹೋಗುತ್ತಿದ್ದವನು. ಅವನು ಯಾವ ಕಾಲದಲ್ಲಿ ನೋಡಿದರೂ ರತ್ನಮಯವಾದ ಜಗಲಿಯ ಮೇಲೆ ಹಾಸಿದ ರೇಷ್ಮೆ ವಸ್ತ್ರದ ಮೇಲೆ ನಡೆದ ತನ್ನ ಮೆತ್ತಗಾದ ಮತ್ತು ಚಿಲುವಾದ ಎರಡು ಪಾದಗಳಲ್ಲಿ ಹಿಂದೆ ಎಂದೂ ನೆಲವನ್ನು ಮುಟ್ಟಿಯೂ ಅರಿಯದವನು, ಅವನು ಈಗ ಕಠಿನವಾದ ನೆಲದಲ್ಲಿ ನಡೆಯಲು, ಹರಳುಕಲ್ಲುಗಳೂ ಹೆಂಟೆ (ಗಟ್ಟಿ)ಗಳೂ ನಾಟಿಕೊಂಡು ಗುಳ್ಳೆಯೆದ್ದು ಒಡೆದು ಅದರಿಂದ ಹೊರಟ ರಕ್ತವು ಕರಗದಿಂದ ಇಳಿಯುವ ನೀರಿನ ಧಾರೆಯಂತೆ ನಿರಂತರವಾಗಿ ಸುರಿದಿತ್ತು. ಮಹಾಕಾಳ ಶ್ಮಶಾನದವರೆಗೂ ಸುರಿದ ರಕ್ತದ ಧಾರೆಯ ವಾಸನೆಯಿಂದ ನರಿಗಳು ಬಂದು ನೋಡಿದವು. ಆ ಹೆಣ್ಣುನರಿ ಸಂತೋಷಗೊಂಡು ತನ್ನ ಮರಿಗಳ ಸಮೇತವಾಗಿ ಮೊದಲನೆಯ ದಿನ ಸುಕುಮಾರ ಸ್ವಾಮಿಯ ಎರಡು ಕಾಲುಗಳನ್ನು ಪಾದದಿಂದ ಪ್ರಾರಂಭಿಸಿ ಮೊಣಕಾಲುಗಳವರೆಗೆ ತಿಂದಿತು. ಎರಡನೆಯ ದಿವಸ ಮೊಣಕಾಲುಗಳಿಂದ ಪ್ರಾರಂಭಿಸಿ ಸೊಂಟದವರೆಗೂ ತಿಂದಿತು. ಮೂರನೆಯ ದಿವಸ ಹೊಟ್ಟೆಯನ್ನು ಸೀಳಿ ಕರುಳನ್ನು ತೋಡಿ ತಿನ್ನುತ್ತಿತ್ತು. ಆಗ ಸುಕುಮಾರಸ್ವಾಮಿಯು ಪೃಥಕ್ತ್ವ, ವಿತರ್ಕ, ವೀಚಾರ - ಎಂಬ ಮೊದಲನೆಯ ಶ್ಲೋಕಧ್ಯಾನದಲ್ಲಿ ಸೇರಿಕೊಂಡು ಉಪಶಾಂತಿ ಎಂಬ ಗುಣಸ್ಥಾನದಲ್ಲಿದ್ದು ಸಮ್ಯಗ್ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್ಚಾರಿತ್ರ- ಎಂಬ ರತ್ನತ್ರಯವನ್ನು ಸಾಧನೆ ಮಾಡಿ ಅತ್ಯಂತ ಶ್ರೇಷ್ಠ ದೇವತೆಯಾಗಿ ಜನಿಸಿದನು. ಆ ಮೇಲೆ ಇತ್ತಲಾಗಿ ಸುಕುಮಾರಸ್ವಾಮಿಯ ತಾಯಿಯೂ ಹೆಂಡಿರೂ ಪರಿವಾರವೂ ಎಲ್ಲಾ ದಿಕ್ಕುಗಳಲ್ಲಿಯೂ ಸಂಚರಿಸಿಕೊಂಡು ಹೋಗಿ ಸುಕುಮಾರಸ್ವಾಮಿಯನ್ನು ಎರಡು ದಿವಸ ಇರುಳು ಹಗಲೂ ಹುಡುಕಿದರು. ಆದರೆ ಕಾಣಲಿಲ್ಲ. ಮೂರನೆಯ ದಿವಸದಂದು ಸಂಜೆ ಹೊತ್ತಿನಲ್ಲಿ ದೇವತೆಗಳು ಬಂದು ಸುಕುಮಾರಸ್ವಾಮಿಯನ್ನು "ಆಹಾ ಶೂರನೇ, ಆಹಾ

ಸಂಸಾರಭೀರು ನಿನ್ನಂತುಪಸರ್ಗಮನಾರಪ್ಪೊಡಂ ಸೈರಿಸಿ ರತ್ನತ್ರಯಮಂ ಸಾಧಿಸಿದೊರಿಲ್ಲೆಂದು ದೇವತೆಗಳ್ ಪೊಗಳ್ದ ಕಳಕಳಧ್ವನಿಯುಮಂ ದೇವದುಂದುಭಿಯ ರವಮುಮಂ ಯಶೋಭದ್ರೆ ನೋಡಿ ದೇವಸಂಘಾತಮಂ ಕಂಡು ಮಗನ ಸಾವನಱಿದು ಬಯ್ಗುರುಳಾದಾಗಳ್ ಮೂವತ್ತಿರ್ವರ್ ಸೊಸೆವಿರ್ಕಳ್ಗಂ ಪೇೞ್ದಟ್ಟಿ ಸುಕುಮಾರಸ್ವಾಮಿ ನಿಮಗೆಲ್ಲರ್ಗೆ ಮುಳಿದು ಪೋಗಿಯಡಂಗಿರ್ದೊನನಾನಱಿವೆಂ ನೀವೆಲ್ಲಂ ನೆಱಿಯೆ ತೊಟ್ಟುಟ್ಟು ಪಸದನಂಗೊಂದು ಚೆಲ್ವೆಯರಾಗಿ ಬನ್ನಿಂ ಪೋಪಂ ತಿಳಿಪಿಕೊಂಡು ಬರ್ಪಂ ನಿಮ್ಮ ಸ್ವಾಮಿಯನೆಂದೊಡವರ್ಗಳನಿಬರುಂ ರಾಗಿಸಿ ಕೈಗೆಯ್ತೆಯೊಡನೆ ಪರಿವಾರಸಹಿತಂ ಮಹಾಕಾಳಕ್ಕೆ ಪೋಗಿ ನೋಟ್ಪರನ್ನೆಗಂ ನಮೇರು ಮಂದಾರ ಸಂತಾನಕ ಪಾರಿಯಾತ್ರಮೆಂಬ ದೇವರ್ಕಳ್ ಸುರಿದ ಪುಷ್ಪವೃಷ್ಟಿಯಿಂದಂ ಮುಚ್ಚಿಪಟ್ಟನಾಗಿ ಕಂಪಿಂಗೆೞಗಿದ ತುಂಬಿಯ ಸಮೂಹಮಂ ಮೇಗೆ ಸುೞಿವುದಂ ಕಂಡಿಲ್ಲಿರ್ದ್ದನೆಂದು ಯಶೋಭದ್ರೆ ತೋಱಿದೊಡೆ ಪೋಗಿ ತೆಱೆದು ನೋಟ್ಪರನ್ನೆಗಂ ಮೃತಕಮಂ ಕಂಡನಿಬರುಂ ಮೂರ್ಛೆಪೋಗಿ ನೀಡಱಿಂದೆಚ್ಚರ್ತು ತಮ್ಮ ಬಸಿಱುಮಂ ತಲೆಯುಮಂ ಬಡಿದುಕೊಂಡು ಸುಕುಮಾರಸ್ವಾಮಿಯ ರೂಪಮಂ ತೇಜಮುಮಂ ಯೌವನಮಂ ಲಾವಣ್ಯಮಂ ಸೌಭಾಗ್ಯಮಂ ಯಶಮಂ ಮೆಲ್ವಂ ನುಡಿಯ ಬಲ್ಮೆಯಂ ಶುಚಿತ್ವಮಂ ಶೌಚಮಂ ಶ್ರೀಯಂ ಸಂಪತ್ತಂ ಸೊಬಗಂ ಒಲ್ಮೆಯಂ ಧೈರ್ಯಮಂ ಎಂದಿವು ಮೊದಲಾಗೊಡೆಯವಾತನೊಳ್ ನೆಲಸಿರ್ದ ಗುಣಂಗಳಂ

ಧೈರ್ಯಶಾಲಿಯೇ, ಆಹಾ ಸಂಸಾರಕ್ಕೆ ಹೆದರಿದವನೇ, ನಿನ್ನ ಹಾಗೆ ಉಪಸರ್ಗಗಳನ್ನು ಸಹಿಸಿಕೊಂಡು ರತ್ನತ್ರಯವನ್ನು ಸಾಧಿಸಿದವರು ಯಾರೂ ಇಲ್ಲ" ಎಂದು ಹೊಗಳುತ್ತಿದ್ದರು. ಹಾಗೆ ಹೊಗಳುವ ಗದ್ದಲದ ಧ್ವನಿಯನ್ನೂ ದೇವಲೋಕದ ದುಂದುಭಿವಾದ್ಯದ ಶಬ್ದವನ್ನೂ ಯಶೋಭದ್ರೆ ಕೇಳಿ, ದೇವತಾಸಮೂಹವನ್ನು ಕಂಡು ತನ್ನ ಮಗನು ಸತ್ತುದು ನಿಜವೆಂದು ತಿಳಿದುಕೊಂಡಳು. ಅಂದು ರಾತ್ರಿ ಮೂವತ್ತೆರಡು ಮಂದಿ ಸೊಸೆಯಂದಿರಿಗೂ ಅವಳು ಹೇಳಿಕಳುಹಿಸಿದಳು. ಅವರೊಡನೆ ಹೀಗೆಂದಳು - "ಸುಕುಮಾರಸ್ವಾಮಿ ನಿಮ್ಮೆಲ್ಲರ ಮೇಲೆಯೂ ಕೋಪಿಸಿಕೊಂಡು ಹೋಗಿ ಅಡಗಿರುತ್ತಾನೆ. ಅವನು ಎಲ್ಲಿರುವನೆಂದು ನಾನು ಬಲ್ಲೆ. ನೀವೆಲ್ಲರೂ ವಿಶೇಷವಾಗಿ ಉಡಿಗೆತೊಡಿಗೆಗಳನ್ನು ಧರಿಸಿ ಶೃಂಗಾರಮಾಡಿಕೊಂಡು ಚೆಲುವೆಯರಾಗಿ ಬನ್ನಿ, ಹೋಗೋಣ. ನಿಮ್ಮ ಒಡೆಯನಾದ ಸುಕುಮಾರನನ್ನು ಸಂತಯಿಸಿಕೊಂಡು ಬರೋಣ" ಹೀಗೆನ್ನಲು ಅವರೆಲ್ಲರೂ ಸಂತೋಷಗೊಂಡು ಸಿಂಗರಿಸಿಕೊಂಡು ಅತ್ತೆ (ಯಶೋಭದ್ರೆ) ಯೊಂದಿಗೆ ಮಹಾಕಾಳ ಶ್ಮಶಾನಕ್ಕೆ ಹೋಗಿ ನೋಡಿದರು. ಆಗ ಸುರಪುನ್ನಾಗ, ಮಂದಾರ, ಕಲ್ಪವೃಕ್ಷ, ಪಾರಿಯಾತ್ರಗಳ ಹೂಮಳೆಯನ್ನು ದೇವತೆಗಳು ಸುರಿಸಲು ಅದರಿಂದ ಮುಚ್ಚಲ್ಪಟ್ಟವನಾಗಿ, ಹೂಗಂಪಿಗೆ ಬಂದೆರಗಿದ ತುಂಬಿಗಳ ಹಿಂಡು ಮೇಲುಗಡೆ ಸುಳಿಯುವುದನ್ನು ಕಂಡು ಸುಕುಮಾರನು ಇಲ್ಲಿದ್ದಾನೆ ಎಂದು ಯಶೋಭದ್ರೆ ತೋರಿಸಿದಳು. ಆಗ ಇವರು ಹೋಗಿ, ಮುಚ್ಚಿದ್ದನ್ನು ತೆರೆದು ನೋಡಿದರು. ಹೆಣವನ್ನು ಕಂಡು ಅವರೆಲ್ಲರೂ ಮೂರ್ಛೆ ಹೋದರು. ಬಹಳ ಹೊತ್ತಾದನಂತರ ಎಚ್ಚರಗೊಂಡು ತಮ್ಮ ಹೊಟ್ಟೆಯನ್ನೂ ತಲೆಯನ್ನೂ ಬಡಿದುಕೊಂಡು ಸುಕುಮಾರಸ್ವಾಮಿಯ ರೂಪ, ಕಾಂತಿ, ಯೌವನ, ಲಾವಣ್ಯ, ಸೌಭಾಗ್ಯ, ಕೀರ್ತಿಗಳನ್ನೂ ಮೃದುಸ್ವಭಾವವನ್ನೂ ಮಾತಿನ ಪ್ರೌಢಿಮೆಯನ್ನೂ ಶುಚಿತ್ವವನ್ನೂ ಶುದ್ಧಗುಣವನ್ನೂ, ಶೋಭೆಯನ್ನೂ, ಸಂಪತ್ತನ್ನೂ ಸೊಬಗನ್ನೂ ಪ್ರೀತಿಯನ್ನೂ ಧೈರ್ಯ ಮುಂತಾಗಿರುವ

ನೆನೆನೆನೆದನಿಬರುಂ ಪ್ರಲಾಪಂಗೆಯ್ಯುತ್ತಂ ಸೈರಿಸಲಾಱದೆ ನಿರಂತರಂ ಮೂರ್ಛೆವೋಗುತ್ತಂ ನೀಡುಂ ಬೇಗಂ ದುಃಖಂಗೆಯ್ದಳ್ತು ನೀರಿಬೆದಣ್ಬರ್ ಬಸಿಱಿ ಪೆಂದಿರುಬೆಯೆ ಇರ್ಪತ್ತು ನಾಲ್ವರ್ ಪೆಂದಿರುಂ ಮತ್ತಂ ಪೆಱರ್ ನಂಟರ್ಕಳುಂ ಪರಿವಾರಮುಂ ಯಶೋಭದ್ರೆಯೊಡನೆ ದಯಾಭದ್ರರ್ ಗುರುಗಳಾಗೆ ಕಮಳಶ್ರೀ ಕಂತಿಯರ್ ಕಂತಿಯರಾಗೆ ತಪಂಬಟ್ಟುಗ್ರೋಗ್ರತಪಂಗೆಯ್ದನಿಬರುಂ ಸೌಧರ್ಮಕಲ್ಪಂ ಮೊದಲಾಗೊಡೆಯ ಕಲ್ಪಂಗಳೊಳ್ ಪುಟ್ಟಿದರ್ ಮತ್ತಿಂತಪ್ಪುದಂ ಚಿಂತಿಸಲುಂ ಸೈರಿಸಲುಮಾಗದ ತಿರಿಕೋಪಸರ್ಗಮನವಂತಿ ಸುಕುಮಾರಸ್ವಾಮಿ ಮೂಱು ದಿವಸಮಿರುಳುಂ ಪಗಲುಂ ಸೈರಿಸಿ ರತ್ನತ್ರಯಮನೆಂತು ಸಾದಿಸಿದನಂತೆ ಸನ್ಯಸನಂಗೆಯ್ದಿರ್ದಾರಾಧಕರಪ್ಪ ಮಹಾಪುರುಷರುಮವಂತಿ ಸುಕುಮಾರಸ್ವಾಮಿಯ ಪರಮಸುಖಿಯಪ್ಪುಪಸರ್ಗಮಂ ವಿಜಯವಿಧಾನಮಂ ಮನದೊಳನವರತಂ ಚಿಂತಿಸುತ್ತಾಪ್ತಾಗಮ ಪದಾರ್ಥರ್ಧಿಗಳೊಳತೀವಸ್ಥಿರರಾಗಿ ಪರಮ ಸಹಜ ನಿಜ ರತ್ನತ್ರಯದೊಳ್ ಕೂಡಿ ಅಭೇದವಾಗೆಯ್ದೆ ಕೂಡಿ ಶರೀರಂ ಮೊದಲಾಗೊಡೆಯ ಸಮಸ್ತ ಬಾಹ್ಯಾಭ್ಯಂತರ ಪರಿಗ್ರಹಂಗಳಂ ನೆಱೆ ತೊಱೆದು ಅಪೂರ್ವಾಪವರ್ಗಸುಖಂಗಳನೆಯ್ದುಗೆ ಮತ್ತುಜ್ಜೇನಿಯ ತೆಂಕಣ ದೆಸೆಯೊಳವಂತಿ ಸುಕುಮಾರಸ್ವಾಮಿಯ ಕಾಲಂಗೆಯ್ದೆಡೆ ಈಗಳುಂ ಪುಣ್ಯಮುಂ ಪವಿತ್ರಮುಮಾದುದು ಮತ್ತಂ

ಆತನಲ್ಲಿ ನೆಲಸಿಕೊಂಡಿದ್ದ ಗುಣಗಳನ್ನೂ ಮತ್ತು ಮತ್ತೂ ನೆನಸಿಕೊಳ್ಳುತ್ತ, ಅವರೆಲ್ಲರೂ ಗೋಳಾಡುತ್ತ ಸಹಿಸಲಾರದೆ ಎಡೆಬಿಡದೆ ಆಗಾಗ ಮೂರ್ಛೆಗೊಳ್ಳುತ್ತ, ಬಹಳ ಹೊತ್ತಿನ ತನಕ ದುಃಖಿಪಡುತ್ತ ಅತ್ತು, ಸ್ನಾನ ಮಾಡಿದರು. ಅವರಲ್ಲಿ ಎಂಟು ಮಂದಿ ಗರ್ಭಿಣಿ ಸ್ತ್ರೀಯರನ್ನು ಬಿಟ್ಟು ಉಳಿದ ಇಪ್ಪತ್ತನಾಲ್ಕು ಮಂದಿ ಹೆಂಡಿರೂ ಮತ್ತಿತರ ನೆಂಟರೂ ಪರಿವಾರದವರೂ ಯಶೋಭದ್ರೆಯೊಂದಿಗೆ ತಪಸ್ಸನ್ನು ಕೈಗೊಂಡರು. ಅವರಿಗೆ ದಯಾಭದ್ರರು ಗುರುಗಳಾದರು. ಕಮಲಶ್ರೀ ಕಂತಿಯರು ಮಾರ್ಗದರ್ಶಿಗಳಾದ ಸನ್ಯಾಸಿನಿಯರಾದರು. ಹೀಗೆ ಯಶೋಭದ್ರೆಯೊಂದಿಗೆ ಅತ್ಯಂತ ಘೋರವಾದ ತಪಸ್ಸನ್ನು ಮಾಡಿ ಅವರೆಲ್ಲರೂ ಸೌಧರ್ಮಕಲ್ಪವೇ ಮೊದಲಾಗಿರುವ ಸ್ವರ್ಗಗಳಲ್ಲಿ ಹುಟ್ಟಿದರು. ಆಮೇಲೆ ಈ ರೀತಿಯಾಗಿರುವುದನ್ನು ಯೋಚಿಸಲೂ ಸಹಿಸಲೂ ಸಾಧ್ಯವಾಗದಂತಹ ಪ್ರಾಣ್ಯುಪದ್ರವ (ತಿರಿಕೋಪಸರ್ಗ)ವನ್ನು ಅವಂತಿ ಸುಕುಮಾರನು ಮೂರುದಿವಸ ಇರುಳೂ ಹಗಲೂ ಸಹಿಸಿಕೊಂಡು ರತ್ನತ್ರಯ (ಸಮ್ಯಗ್ದರ್ಶನ - ಜ್ಞಾನ - ಚಾರಿತ್ರ)ವನ್ನು ಹೇಗೆ ಸಾಧಿಸಿದನೋ ಹಾಗೆಯೇ ಸಂನ್ಯಾಸನ ಕೈಗೊಂಡು ಆರಾಧನೆ ಮಾಡತಕ್ಕ ಇದರ ಮಹಾಪುರುಷರೂ ಸುಕುಮಾರಸ್ವಾಮಿಗೆ ಪರಮ ಸುಖವನ್ನೊದಗಿಸಿದ ಉಪಸರ್ಗವನ್ನೂ ಅದನ್ನು ಗೆಲ್ಲುವ ಕ್ರಮವನ್ನೂ ಮನಸ್ಸಿನಲ್ಲಿ ಯಾವಾಗಲೂ ಯೋಚಿಸುತ್ತ ಆತ್ಮೀಯವಾದ ಆಗಮ (ಶಾಸ್ತ್ರ)ಗಳಲ್ಲಿಯೂ ನವಪದಾರ್ಥಗಳಲ್ಲಿಯೂ ಋದ್ಧಿ (ಸಿದ್ಧಿ)ಗಳಲ್ಲಿಯೂ ಅತ್ಯಂತ ಸ್ಥಿರರಾಗಿದ್ದುಕೊಂಡು ಸಹಜವಾದ ಮತ್ತು ನಿಜವಾದ ರತ್ನತ್ರಯದಲ್ಲಿ ಒಂದಾಗಿ, ಭೇದವಿಲ್ಲದಂತೆ ಕೂಡಿ ದೇಹವೇ ಮೊದಲಾದ ಎಲ್ಲಾ ಹೊರಗಿನ ಮತ್ತು ಒಳಗಿನ ಪರಿಗ್ರಹಗಳನ್ನು ವಿಶೇಷವಾಗಿ ಬಿಟ್ಟು ಅಪೂರ್ವವೆನಿಸುವ ಮುಕ್ತಿ ಸುಖಿಗಳನ್ನು ಪಡೆಯಲಿ! ಆಮೇಲೆ, ಉಜ್ಜಯಿನಿಯ ದಕ್ಷಿಣ ದಿಶಾಭಾಗದಲ್ಲಿ ಅವಂತಿ ಸುಕುಮಾರಸ್ವಾಮಿ ದೇಹತ್ಯಾಗ ಮಾಡಿದ ಸ್ಥಳ ಇಂದಿಗೂ ಪುಣ್ಯಕರವೂ ಪವಿತ್ರವೂ ಆಯಿತು. ಅದಲ್ಲದೆ, ಆ

ಮಹಾಪುರುಷನ ಶರೀರಮಂ ಚತುರ್ನಿಕಾಯಾಮರತತಿಗಳ್ ಭಕ್ತಿಯಿಂದಗರು ಕಾಳಾಗರು ಗೋಶೀರ್ಷ ಚಂದನಂ ಮೊದಲಾಗೊಡೆಯ ಅನೇಕ ಸುಗಂಧ ದ್ರವ್ಯಂಗಳಿಂದಂ ಪೂಜಿಸಿದ ವಸ್ತುಗಳ್ ಕಾಲಾಂತರದಿಂ ಕರಗಿ ಬಿಟ್ಟುದಾ ಸ್ಥಾನಮೆಂಬುದು ಗಂಧವತಿಯೆಂಬ ತೊಱಿಯಾದುದು ದೇವರ್ಕಳ್ ಪೊಗಟ್ಟ ಕಳಕಳಧ್ವನಿಯಿಂ ಪೆಂಡಿರ್ಕಳ ಪ್ರಳಾಪಂಗೆಯ್ದಟ್ಟ ಕಳಕಳಧ್ವನಿಯಿಂದಂ ಕಳಕಳಾಯತಮೆಂದು ಸಿದ್ಧಾಯತನಮಾದುದು.

ಮಹಾಪುರುಷನ ದೇಹವನ್ನು ಭವನಪತಿ, ವ್ಯಂತರಿಕ, ಜ್ಯೋತಿಷ್ಕ ಮತ್ತು ವಿಮಾನವಾಸಿಗಳೆಂಬ ನಾಲ್ಕು ಬಗೆಯ ದೇವತೆಗಳು ಭಕ್ತಿಯಿಂದ ಅಗರು, ಕಾಳಾಗರು, ಗೋರೋಚನ, ಗಂಧ, ಶ್ರೀಗಂಧ- ಮುಂತಾಗಿರುವ ಹಲವಾರು ಸುವಾಸನೆಯ ದ್ರವ್ಯಗಳಿಂದ ಪೂಜಿಸಿದ ವಸ್ತುಗಳು ಕೆಲವು ಕಾಲಾನಂತರ ಕರಗಿ ಬಿದ್ದುವು. ಹಾಗೆ ಬಿದ್ದ ಸ್ಥಳವು 'ಗಂಧವತಿ' ಎಂಬ ಹೆಸರಿನ ಹೊಳೆಯಾಗಿ ಪರಿಣಮಿಸಿತು. ದೇವತೆಗಳು ಕೊಂಡಾಡಿದ ಕಳಕಳ ಧ್ವನಿಯಿಂದಲೂ ಸುಕುಮಾರಸ್ವಾಮಿಯ ಹೆಂಡಿರು ದುಃಖಿಸಿ ಅತ್ತ ಕಳಕಳ ಶಬ್ದದಿಂದಲೂ 'ಕಳಕಳಾಯತ' ಎಂಬ ಹೆಸರುಳ್ಳ ಸಿದ್ಧಕ್ಷೇತ್ರವೂ ಆಯಿತು.

೨. ಸುಕೌಶಳಸ್ವಾಮಿಯ ಕಥೆ

ಸುಕೌಶಳಸ್ವಾಮಿಯ ಕಥೆಯಂ ಪೇೞ್ದಿಂ :

ಗಾಹೆ ॥ ಮೊಗ್ಗಳಗಿರಿಮ್ಹಿಯ ಸುಕೌಸಳೋ ಏ ಸಿದ್ಧತ್ಥ ದಯಿದಗೋ ಭಗವಂ
ವಗ್ಘೀಯೆ ಖಯಿದಂ ಪದಿದೋ ಪಡಿವಣ್ಣೋ ಉತ್ತಮಂ ಅಟ್ಠಂ

[ಮೊಗ್ಗಳ ಗಿರಿಮ್ಹಿಯ-ಮೊಗ್ಗಳಮೆಂಬ ಪರ್ವತದೊಳ್, ಸುಕೌಸಳೋಪಿ-ಸುಕೌಸಳ ಸ್ವಾಮಿಯುಂ, ಸಿದ್ಧತ್ಥದಯಿದಗೋ-ಸಿದ್ಧಾರ್ಥನೆಂಬ ಪರದನ ಕಾವಲಿಸೆ ಪಡುವ ಮಗಂ, ಭಗವಂ-ಪೆರ್ಮೆಯನೊಡೆಯೊಂ, ವಗ್ಘೀಯೆ ಖಯಿದಂ ಪದಿದೋ-ಮುನ್ನಿನ ಭವದ ತಾಯಪ್ಪ ಪೆಣ್ಬುಲಿಯಿಂದಂ ತಿನೆ ಬರ್ದಿದೊನಾಗಿಯುಂ, ಪಡಿವಣ್ಣೋ-ಪೊರ್ದಿದೊಂ, ಉತ್ತಮಂ ಅಟ್ಠಂ-ಮಿಕ್ಕ ಜ್ಞಾನ ಚಾರಿತ್ರಾರಾಧನೆಯಂ]

ಅದೆಂತೆಂದೊಡೆ :

ಈ ಜಂಬೂದ್ವೀಪದ ದಕ್ಷಿಣ ಭರತಕ್ಷೇತ್ರದೊಳಂಗವೆಂಬುದು ನಾಡಲ್ಲಿ ಚಂಪಾನಗರಮೆಂಬುದು ಪೊಲಿಲದನಾಳ್ವಂ ಗಂಧಭಾಜನನೆಂಬರಸನಿಂದ್ರನೊಳೋರಂತಪ್ಪ ಭೋಗೈಶ್ವರ್ಯ ವಿಭವಮನೊಡೆಯೊಂ ನ್ಯಾಯದಿಂದಂ ಪ್ರಜೆಗಳಂ ಪ್ರತಿಪಾಳಿಸುವೊನಧಿಗಮ ಸಮ್ಯಕ್‌ದೃಷ್ಟಿಯಪ್ಪ ನೇೞುಗುಣಂಗಳಿಂದಂ ಕೂಡಿದೊನಾಯೇೞುಂ ಗುಣಂಗಳೆಂಬುವಾವುವೆಂದೊಡೆ

ಗಾಹೆ ॥ ಸಮ್ಮದ್ದಸ್ಸಣಸುದ್ಧೋ ಕವವಧ ಕಮ್ಮೋ ಸುಸೀಲಗುಣಣಿಳಯೊ
ಉಜುಗತ್ತೋ ಗುರಭತ್ತೋ ಪವಯಣ ಕುಸಳೋ ಮದಿಪ್ಪಗಬ್ಭೋಯ

ಎಂದೇೞುಂ ಗುಣಂಗಳಿಂದಂ ಕೂಡಿದೊನಂತಪ್ಪರಸಂ ಶರತ್ಕಾಲದ ಮುಗಿಲೊಳೋರಂತಪ್ಪು ದನಾದಮಾನುಂ ವಿಚಿತ್ರಮಪ್ಪುದಂ ಸಹಸ್ರಕೂಟಮೆಂಬ ಜಿನಾಲಯಮಂ ಮಾಡಿಸಿ ಅದರ್ಕನ

ಸುಕೌಶಳ ಸ್ವಾಮಿಯ ಕಥೆಯನ್ನು ಹೇಳುವೆನು :(ಸಿದ್ಧಾರ್ಥನೆಂಬ ವರ್ತಕನ ಪ್ರೀತಿಯ ಮಗ ಸುಕೌಶಳಸ್ವಾಮಿ ; ಹಿರಿಮೆಯನ್ನುಳ್ಳವನು. ಆತನು ಮೊಗ್ಗಳವೆಂಬ ಬೆಟ್ಟದಲ್ಲಿ ಇದ್ದಾಗ ಅವನನ್ನು ಹಿಂದಿನ ಜನ್ಮದ ತಾಯಿಯಾಗಿದ್ದ ಒಂದು ಹೆಣ್ಣು ಹುಲಿ ತಿನ್ನಲು ಸತ್ತವನಾಗಿ ಶ್ರೇಷ್ಠವಾದ ಜ್ಞಾನ - ಚಾರಿತ್ರ- ಆರಾಧನೆಯನ್ನು ಪಡೆದನು.) ಅದು ಹೇಗೆಂದರೆ : ಈ ಜಂಬೂದ್ವೀಪದಲ್ಲಿ ದಕ್ಷಿಣಕ್ಕಿರುವ ಭರತಕ್ಷೇತ್ರಲ್ಲಿ ಅಂಗರಾಜ್ಯವಿದೆ. ಅಲ್ಲಿ ಚಂಪಾನಗರವೆಂಬ ಪಟ್ಟಣವನ್ನು ಗಂಧಭಾಜನನೆಂಬ ರಾಜನು ಆಳುತ್ತಿದ್ದನು. ಅವನು ಇಂದ್ರನಿಗೆ ಸಮಾನವಾದ ಸುಖ-ಐಶ್ವರ್ಯ - ಸಂಪತ್ತುಗಳುಳ್ಳವನಾಗಿ ಪ್ರಜೆಗಳನ್ನು ನ್ಯಾಯದಿಂದ ಆಳುತ್ತಿದ್ದನು. ಸಂಪಾದಿಸಿದ ಜ್ಞಾನವುಳ್ಳವನಾಗಿ ಏಳು ಗುಣಗಳಿಂದ ಕೂಡಿದವನಾಗಿದ್ದನು. ಆ ಏಳು ಗುಣಗಳು ಯಾವುವೆಂದರೆ - ಸಮ್ಯಗ್ದರ್ಶನ ಶುದ್ಧನಾಗಿರುವವನು, ಉತ್ತಮವಾದ ಕರ್ಮವುಳ್ಳವನು, ಒಳ್ಳೆಯ ಶೀಲಕ್ಕೂ ಗುಣಕ್ಕೂ ಮನೆಯಾಗಿರುವವನು, ಪ್ರಯತ್ನದಲ್ಲಿ ಆಸಕ್ತಿಯುಳ್ಳವನು, ಗುರುಭಕ್ತನು, ಪ್ರವಚನದಲ್ಲಿ ಕುಶಲನು, ಪಾಂಡಿತ್ಯವುಳ್ಳವನು. ಈ ವಿಧವಾದ ಏಳು ಗುಣಗಳಿಂದ ಕೂಡಿದ ಗಂಧಭಾಜನರಾಜನು ಶರತ್ಕಾಲದ ಮೋಡದಂತೆ ಬೆಳ್ಳಗಿರುವ ಮತ್ತು ಅತ್ಯಂತ ರಮ್ಯವಾಗಿರುವ 'ಸಹಸ್ರಕೂಟ' ಎಂಬ ಜಿನಮಂದಿರವನ್ನು

ವರತಂ ಮಹಾಪೂಜೆಯುಮಂ ಮಹಿಮೆಯುಮಭಿಷೇಕಂಗಳುಮಂ ಸಲಿಸುತಿರ್ಪೊಂ ವುತ್ತಾಪ್ಪೊಟಲೊಳೊರ್ವಂ ಸಾಗರದತ್ತನೆಂಬೊಂ ಸೆಟ್ಟಿಯಾತನ ಭಾರ್ಯೆ ಸುಭದ್ರೆಯೆಂಬೊಳಾಯಿರ್ವರ್ಗ್ಗಂ ಮಗಳ್ ಸುರೂಪೆಯೆಂಬೊಳ್ ಮತ್ತಾ ಪೊಟಲೊಳ್ ಪೆಜನೊರ್ವಂ ಸೆಟ್ಟಿ ನಾಗದತ್ತನೆಂಬೊನಾತಂಗೆ ಸುರೂಪೆಯಂ ಕೊಟ್ಟೊಡಾಯಿರ್ವರ್ಗ್ಗಂ ಸುಕೇಶಿನಿಯೆಂಬ ಮಗಳಾದಳಾಕೆ ಬಳೆದತ್ಯಂತ ರೂಪಲಾವಣ್ಯ ಸೌಭಾಗ್ಯ ಕಾಂತಿ ಹಾವಭಾವವಿಲಾಸ ವಿಭ್ರಮಂಗಳನೊಡೆಯೊಳ್ ಪಲವುಂ ತೆಱದ ಶುಭಲಕ್ಷಣಂಗಳಿಂದಂ ಕೂಡಿದ ಮೆಯ್ಯನೊಡೆಯೊಳ್ ನವಯೌವನೆ ದೇವಗಣಿಕೆಯನೆ ಪೋಲ್ವಳೊಂದು ದಿವಸಂ ಅಷ್ಟಮಿಯುಂ ನೋಂತು ದೇವರನರ್ಚಿಸಲೆಂದು ಸಹಸ್ರಕೂಟಚೈತ್ಯಾಲಯಕ್ಕರ್ಚನೆಯಂ ಕೊಂಡು ಪೋದಳನ್ನೆಗಮರಸನುಮಾಗಳೆ ದೇವರಂ ಬಂದಿಸಲ್ ಬಂದೊಡರಸಂಗೆ ನಾಣ್ಚಿ ಬಸದಿಯೊಳಗಣ ಕಂಬದ ಮಱೆಯೊಳ್ ಕೇರಂ ಸಾರ್ದು ಪೊನ್ನ ಬೆಳಗುಪ ಗಳಂತಿಗೆಯನಾದಮಾನುಮೊಪ್ಪುತ್ತಿರ್ದುದಂ ಪಿಡಿದು ನಿಂದಿರ್ದೊಳನರಸಂ ಕಂಡಿಲ್ಲಿಯ ಚಿತ್ರದ ಲೆಪ್ಪದ ಕಾಷ್ಠಕರ್ಮದ ರೂಪುಗಳೊಳಿಲ್ಲಮೀ ಸ್ತ್ರೀಯ ಜೀವವಿದ್ಧಮಿಂತುಟತಿಶಯಮೆಂದರಸನಾಕೆಯ ರೂಪಿಂಗಚ್ಚಿವಟ್ಟು ಪೊಗಟೆ ಕೆಲದೊಳಿರ್ದ ಕಶ್ಚದೇವದತ್ತನೀಕೆ ಕನ್ನೆಯಿರ್ದೊಳೆಂದು ಪೇಟಿಸ್ದೊಡಾರ ಮಗಳೆಂದು ಬೆಸಗೊಂಡೊಡೀ ಪೊಟಲ್ಗೆ ಪ್ರಧಾನಂ ನಾಗದತ್ತಸೆಟ್ಟಿಯ ಮಗಳೆಂದು

ಮಾಡಿಸಿದನು. ಆ ಜಿನಮಂದಿರಕ್ಕೆ ಯಾವಾಗಲೂ ಮಹಾಪೂಜೆಯನ್ನೂ ಮಹಿಮೆಯನ್ನೂ (ವಿಶೇಷವಾದ ಉತ್ಸವಗಳನ್ನು) ಅಭಿಷೇಕಗಳನ್ನೂ ಸಲ್ಲಿಸುತ್ತಿದ್ದನು. ಆ ಪಟ್ಟಣದಲ್ಲಿ ಸಾಗರದತ್ತನೆಂಬ ಒಬ್ಬ ಸೆಟ್ಟಿಯಿದ್ದನು. ಅವನ ಹೆಂಡತಿ ಸುಭದ್ರೆಯೆಂಬವಳು. ಅವರಿಬ್ಬರಿಗೆ ಸುರೂಪೆಯೆಂಬುವಳು ಮಗಳು. ಮತ್ತು, ಅದೇ ಪಟ್ಟಣದಲ್ಲಿ ನಾಗದತ್ತನೆಂಬ ಇನ್ನೊಬ್ಬ ಸೆಟ್ಟಿಯಿದ್ದನು. ಅವನಿಗೆ ಸುರೂಪೆಯನ್ನು ಕೊಡಲು, ಆ ಇಬ್ಬರಿಗೆ ಸುಕೇಶಿನಿ ಎಂಬ ಮಗಳಾದಳು. ಆಕೆ ದೊಡ್ಡವಳಾಗಿ ಹೆಚ್ಚಾದ ರೂಪ, ಲಾವಣ್ಯ, ಸೌಭಾಗ್ಯ, ಕಾಂತಿ, ಹಾವ, ಭಾವ, ವಿಲಾಸ, ವಿಭ್ರಮಗಳುಳ್ಳ ನವಯುವತಿಯಾಗಿ ದೇವವಾರಾಂಗನೆಯನ್ನು ಹೋಲುತ್ತಿದ್ದಳು. ಅವಳು ಒಂದು ದಿವಸ ಅಷ್ಟಮಿಯ ವ್ರತವನ್ನು ಆಚರಿಸಿ ಜಿನೇಂದ್ರನನ್ನು ಪೂಜಿಸುವುದಕ್ಕಾಗಿ ಸಹಸ್ರಕೂಟ ಜಿನಮಂದಿರಕ್ಕೆ ಪೂಜಾದ್ರವ್ಯಗಳನ್ನು ತೆಗೆದುಕೊಂಡು ಹೋದಳು. ಅಷ್ಟರಲ್ಲಿ ಅದೇ ವೇಳೆಗೆ ಗಂಧಭಾಜನರಾಜನು ಜಿನೇಶ್ವರನನ್ನು ವಂದಿಸುವುದಕ್ಕಾಗಿ ಬಂದನು. ಸುಕೇಶಿನಿ ರಾಜನನ್ನು ಕಂಡು ನಾಚಿಕೆಪಟ್ಟು ಬಸದಿಯೊಳಗಿನ ಕಂಬದ ಮನೆಯಲ್ಲಿ ಗೋಡೆಯ ಬಳಿಗೆ ಹೋಗಿ ಚೆನ್ನಾಗಿ ಶೋಭಿಸುವ ಚಿನ್ನದ ಗಡಿಗೆಯನ್ನು ಹಿಡಿದು ನಿಂತುಕೊಂಡಿದ್ದಳು. ಅವಳನ್ನು ರಾಜನು ಕಂಡು "ಇಲ್ಲಿ ಚಿತ್ರಿಸಿಯೂ ಲೇಪ್ಯವಸ್ತುಗಳಿಂದಲೂ ಮರಗೆಲಸದಿಂದಲೂ ಮಾಡಿರುವ ರೂಪಗಳಲ್ಲೆಲ್ಲ ಈ ಹೆಂಗುಸಿನ ಸಜೀವವೆನಿಸುವ ಶಿಲ್ಪದ ಪ್ರತಿಮೆ ಬಹಳ ಶ್ರೇಷ್ಠವಾದುದು" ಎಂದು ಆಕೆಯ ರೂಪಕ್ಕೆ ಆಶ್ಚರ್ಯಪಟ್ಟು ಹೊಗಳಿದನು. ಆಗ ಅವನ ಪಕ್ಕದಲ್ಲಿದ್ದ ದೇವದತ್ತನೆಂಬ ಯಾವನೋ ಒಬ್ಬನು "ಈಕೆ ಅವಿವಾಹಿತೆಯಾದ ಓರ್ವ ಬಾಲಿಕೆ" ಎಂದು ಹೇಳಿದನು. ರಾಜನು ಅವಳನ್ನು ಯಾರ ಮಗಳೆಂದು ಕೇಳಿದಾಗ, ಅವನು - "ಈಕೆ ಈ ಪಟ್ಟಣದಲ್ಲಿ ಶ್ರೇಷ್ಠನಾದ ನಾಗದತ್ತ ಸೆಟ್ಟಿಯ ಮಗಳು" ಎಂದು ಹೇಳಿದನು. ರಾಜನು ಇದನ್ನು ಕೇಳಿ ಸುಮ್ಮಗಿದ್ದು,

ಪೇಟ್ಟೊಡರಸಂ ಕೇಳ್ದು ಕೆಮ್ಮಗಿರ್ದು ದೇವರ್ಗೆ ನಮಸ್ಕಾರಂಗೆಯ್ದು ಋಷಿಯರಂ ಬಂದಿಸಿ ತನ್ನ ಮನೆಗೆವ್ಪೋದನ್ ಇತ್ತ ಸುಕೇಶಿನಿಯುಂ ದೇವರನರ್ಚಿಸಿ ಬಂದಿಸಿ ಗುರುಪರಿವಿಡಿಯಿಂದಂ ರಿಸಿಯರಂ ಬಂದಿಸಿ ವ್ರತಂಗಳನೇಱಿಸಿಕೊಂಡು ಸಿದ್ಧಶೇಸೆಯಂ ತಾಯ್ಗಂ ತಂದೆಗಂ ಪೋಗಿ ಕೊಟ್ಪೊಡವರ್ಗಳುಂ ತಲೆಯೊಳಿಟ್ಟುಕೊಂಡು ಯೌವನಂ ನೆಱೆದ ಕೂಸಿನ ರೂಪಂ ನೋಡುತ್ತಿರ್ದಾರ್ಗೆ ಕುಡುವಮೆಂದು ತಮ್ಮೊಳ್ ನುಡಿಯತ್ತಿರ್ಪಿನಮರಸಂ ಕನ್ನೆಯ ರೂಪಂ ಕಂಡಾಟಸಿ ಕೂಸಿನ ತಾಯಪ್ಪ ಸುರೂಪೆಗೆ ಬಟೆಯನಟ್ಟಿ ಬರಿಸಿ ಕೂಸನಾರ್ಗೆ ಕೊಟ್ಪಿರೆಂದು ಬೆಸಗೊಂಡೊಡೆನ್ನ ತಮ್ಮಂ ವರಾಂಗನೆಂಬೊನಾತನ ಮಗಂ ಜಿತರಂಗನೆಂಬೊನೆನ್ನ ಸೋದರಳಿಯನಾತಂಗೆ ಕೊಟ್ಪಪೆನೆಂದು ಪೇಟ್ಪೊಡರಸಂ ಮಧುಸೇನಂ ಮಧುಸೂದನರೆಂಬಿರ್ವರ್ ಪ್ರಧಾನವರ್ಗದೆಗಳಂ ನಾಗದತ್ತಸೆಟ್ಟಿಯಲ್ಲಿಗೆ ಕೂಸಂ ಬೇಡಿಯಟ್ಟಿಯುತ್ತವಳನಾಗಿಯವರ ಬಟೆಯನೆ ತಾನುಂ ನಾಗದತ್ತನ ಮನೆಗೆ ಪೋಗಿ ಕೂಸಂ ಬೇಡಿ ಪೆತ್ತಂ ನಾಗದತ್ತನುಮಷ್ಟಾಹ್ನಿಕ ಮಹಾಮಹಿಮೆಯನೆಂಟು ದಿವಸಂ ಮಾಡಿ ಪ್ರಶಸ್ತ ದಿನ ವಾರ ನಕ್ಷತ್ರ ಮುಹೂರ್ತ ಹೋರಾಲಗ್ನದೊಳ್ ಕೂಸಿನನುಕೂಲದೊಳ್ ಪಾಣಿಗ್ರಹಣಪುರಸ್ಸರಂ ಸುಕೇಶಿನಿಯಂ ಗಂಧಭಾಜನನೆಂಬರಸಂಗೆ ಕೊಟ್ಟನಿಂತು ಮಹಾವಿಭೂತಿಯಿಂದಂ ಮದುವೆನಿಂದು ಗಂಧಭಾಜನನೃಪತಿಯುಂ ಸುಕೇಶಿನಿಯೊಳಿಷ್ಟವಿಷಯಕಾಮಭೋಗಂಗಳಂ ಪಲಕಾಲಮನುಭವಿಸುತ್ತಿರೆ

ದೇವರಿಗೆ ನಮಸ್ಕಾರ ಮಾಡಿ, ಋಷಿಗಳಿಗೆ ವಂದಿಸಿ, ತನ್ನ ಮನೆಗೆ ತೆರಳಿದನು. ಇತ್ತ ಸುಕೇಶಿನಿ ದೇವರನ್ನು ಪೂಜಿಸಿ, ವಂದಿಸಿದಳು. ಗುರುಪರಂಪರೆಯ ಕ್ರಮದಿಂದ ಋಷಿಗಳನ್ನು ವಂದಿಸಿ, ವ್ರತಗಳನ್ನು ಧಾರಣೆ ಮಾಡಿಕೊಂಡು ಸಿದ್ಧರನ್ನು ಅರ್ಚಿಸಿದ ಮಂತ್ರಾಕ್ಷತೆಯನ್ನು ತೆಗೆದುಕೊಂಡು ಹೋಗಿ ತನ್ನ ತಾಯಿತಂದೆಗಳಿಗೆ ಕೊಟ್ಟಳು. ಅವರು ಅದನ್ನು ತಮ್ಮ ತಲೆಯಲ್ಲಿ ಇಟ್ಟುಕೊಂಡರು. ತಾರುಣ್ಯದಿಂದ ಕೂಡಿದ ಮಗಳ ರೂಪವನ್ನು ನೋಡುತ್ತ, 'ಈಕೆಯನ್ನು ಯಾರಿಗೆ ಮದುವೆ ಮಾಡಿ ಕೊಡಲಿ' ಎಂದು ತಮ್ಮೊಳಗೆ ಮಾತಾಡಿಕೊಳ್ಳುತ್ತಿದ್ದರು. ಅಷ್ಟರಲ್ಲಿ ರಾಜನು ಆ ಕನ್ನಿಕೆಯ ಸೌಂದರ್ಯವನ್ನು ಕಂಡು ಆಸೆಪಟ್ಟು ಆಕೆಯ ತಾಯಿಯಾದ ಸುರೂಪೆಯ ಬಳಿಗೆ ದೂತರನ್ನು ಕಳುಹಿಸಿ ಬರಮಾಡಿಸಿದನು. ಈ ಕನ್ಯೆಯನ್ನು ಯಾರಿಗೆ ಕೊಡುತ್ತೀರಿ ? - ಎಂದು ಕೇಳಿದನು. ಅದಕ್ಕೆ ಆಕೆ - "ನನಗೆ ವರಾಂಗನೆಂಬ ತಮ್ಮನಿದ್ದಾನೆ. ಅವನ ಮಗ ಜಿತರಂಗನೆಂಬುವನು, ನನಗೆ ಸೋದರಳಿಯನು. ಅವನಿಗೆ ಕೊಡುತ್ತೇವೆ" ಎಂದಳು. ರಾಜನು ಮಧುಸೇನ ಮಧುಸೂದನ ಎಂಬಿಬ್ಬರು ಪ್ರಮುಖರಾದ ಹೆಗ್ಗಡೆಗಳನ್ನು ನಾಗದತ್ತಸೆಟ್ಟಿಯಲ್ಲಿಗೆ ಆತನ ಮಗಳನ್ನು ತನಗೆ ಕೇಳುವುದಕ್ಕಾಗಿ ಕಳುಹಿಸಿದನು. ತನ್ನ ಉತ್ಕಂಠತೆಯಿಂದ ಅವರ ಬಳಿಯಲ್ಲೇ ತಾನೂ ನಾಗದತ್ತನ ಮನೆಗೆ ಹೋಗಿ ಆ ಕನ್ಯೆಯನ್ನು ತನಗೆ ಕೊಡುವಂತೆ ಕೇಳಿ ಅವನ ಸಮ್ಮತಿ ಪಡೆದುಕೊಂಡನು. ನಾಗದತ್ತನು ಎಂಟು ದಿವಸಗಳ ಅಷ್ಟಾಹ್ನಿಕಮಹೋತ್ಸವಗಳನ್ನು ಮಾಡಿ, ಶುಭಕರವಾದ ದಿನ, ವಾರ, ನಕ್ಷತ್ರ, ಮುಹೂರ್ತ, ಹೋರೆ, ಲಗ್ನಗಳು ತನ್ನ ಮಗಳಿಗೂ ಅನುಕೂಲವಾಗಿ ಇರುವಂದು ಪಾಣಿಗ್ರಹಣ ಪೂರ್ವಕವಾಗಿ ಸುಕೇಶಿನಿಯನ್ನು ಗಂಧಭಾಜನನೆಂಬ ರಾಜನಿಗೆ ಕೊಟ್ಟನು. ಹೀಗೆ ಮಹಾವೈಭವದಿಂದ ಮದುವೆಯಾದ ನಂತರ ಗಂಧಭಾಜನರಾಜನು ಸುಕೇಶಿನಿಯೊಂದಿಗೆ ಇಷ್ಟವಿಷಯಗಳ ಕಾಮಸುಖಗಳನ್ನು ಹಲವು ಕಾಲ ಅನುಭವಿಸುತ್ತಿದ್ದನು. ಹೀಗಿರಲು

ಮತ್ತೊಂದು ದಿವಸಂ ಕೌಶಲಾಧಿಪತಿಯಪ್ಪತಿಬಳನೆಂಬರಸಂಗಂ ಕಳಿಂಗಾಧಿಪತಿಯಪ್ಪ ಕಳಿಂಗನೆಂಬರಸಂಗಂ ತಮ್ಮೊಳ್ ವಿಗ್ರಹಮಾದೊಡೆ ಗಂಧಭಾಜನನೃಪತಿ ತನ್ನ ಮತಿಶ್ರುತನೆಂಬ ಮಂತ್ರಿಯನಟ್ಟಿ ಇರ್ವರ್ಗಂ ಸಂಧಿವಮಾಡಿದೊಡೆ ಕಳಿಂಗನೆಂಬರಸಂ ಮಧುಸೂದನನೆಂಬ ಪೆರ್ಗಡೆಯ ಕೆಯ್ಯೊಳ್ ಮದಾಂಧಗಂಧಹಸ್ತಿಯ ಗಂಧಭಾಜನನೃಪತಿಗೆ ಪಾಗುಡಮಟ್ಟದೊಡದಂ ಸೊರ್ಕಿನಿಂದಂ ಮಸಗಿದುದಂ ಗಂಧಹಸ್ತಿಯಂ ಸುಕೇಶಿನಿ ಕಂಡು ಜಾತಿಸ್ಮರೆಯಾಗಿ ಮೂರ್ಛೆವೋಗಿರ್ದಳಂ ದಾದಿ ಮೊದಲಾಗಿ ಕೆಲದೊಳಿರ್ದೊರೆಲ್ಲಂ ಚಂದನದ ನೀರ್ಗಳಂ ತಳಿದು ಬೀಸೆ ನೀಡಱಿಂದೆಚ್ಚತ್ತಳನ್ನೆಗಮರಸನುತ್ತವಳನಾಗಿ ಪರಿತಂದಿದೇನೀಕೆಗೇಕಿಂತಾಯ್ತೆಂದು ಬೆಸಗೊಳೆ ದಾದಿಯೆಂದಳ್ ಸೊರ್ಕಾನೆಯಂ ಕಂಡು ಮೂರ್ಛೆವೋದಳೆಂದು ಪೇಳ್ದೊಡಾ ಮಾತನರಸಂ ಕೇಳ್ದು ಮಜಿಸೂಬನಾನೆಯಂ ಕಂಡಂಜದಂತಿರೆ ಸುಕೇಶಿನಿಯ ಮಾಡದ ಕೇರ್ಗಳೆಲ್ಲಾಯೆಡೆಗಳೊಳಂ ವ್ಯಾಳಂಗಳಪ್ಪಾನೆಗಳಂ ತನ್ನ ಚಿತ್ತಾರಿಗರಿಂದಂ ಬರೆಯಿಸಿದಂ ಮತ್ತೆ ಸುಕೇಶಿನಿಯುಂ ತನ್ನ ಮುನ್ನಿನ ಜನ್ಮದೊಳ್ ನೆಗಟ್ಟುದೆಲ್ಲಮಂ ಪಟದೊಳ್ ತಾನೆ ಬರೆದಾರುಮಱೆಯದಂತಿರೇಕಾಂತದೊಳ್ ನೋಡುತ್ತಿರ್ಪುಮಿಂತು ಕಾಲಂ ಸಲೆ ಮತ್ತೊಂದು ದಿವಸಂ ಮುನ್ನಿನ ಗಂಧಹಸ್ತಿಯೊಡನೆ ಬಾರಿಯೊಳ್ ಮವತ್ತೆರಡು ಗಜಕ್ರೀಡೆಗಳಿಂದಂ ನೀಡುಂ ಬೇಗಂ ಕ್ರೀಡಿಸಿಯಾನೆಯಂ ಸೇದೆಗೆಡಿಸಿ ತನ್ನ ಬಸಕೈ ಮಾಡಿಯೇಱೆಯಂಕುಸಮುಂ

ಮತ್ತೊಂದು ದಿನ ಕೌಶಲದೇಶಕ್ಕೆ ಒಡೆಯನಾದ ಅತಿಬಳನೆಂಬ ರಾಜನಿಗೂ ಕಳಿಂಗ ದೇಶದ ಒಡೆಯನಾದ ಕಳಿಂಗನೆಂಬ ಅರಸನಿಗೂ ತಮ್ಮೊಳಗೆ ಯುದ್ಧವಾಯಿತು. ಆ ಸಂದರ್ಭದಲ್ಲಿ ಗಂಧಭಾಜನರಾಜನು ಮತಿಶ್ರುತನೆಂಬ ತನ್ನ ಮಂತ್ರಿಯನ್ನು ಕಳುಹಿಸಿ ಇಬ್ಬರಿಗೂ ಸಂಧಿಯನ್ನು ಮಾಡಿದನು.ಕಳಿಂಗರಾಜನು ಮಧುಸೂದನನೆಂಬ ಅಧಿಕಾರಿಯ ಕೈಯಲ್ಲಿ ಸೊಕ್ಕಿ ಕಂಗೆಟ್ಟ ಗಂಧವಾರಣವನ್ನು ಗಂಧಭಾಜನರಾಜನಿಗೆ ಕಾಣಿಕೆಯಾಗಿ ಕಳುಹಿಸಿಕೊಟ್ಟನು. ಗರ್ವೋದ್ರೇಕದಿಂದ ಕೂಡಿದ ಆ ಮದ್ದಾನೆಯನ್ನು ಸುಕೇಶಿನಿ ಕಂಡು ಪೂರ್ವಜನ್ಮದ ಸ್ಮರಣೆ ಬಂದವಳಾಗಿ ಮೂರ್ಛಿತಳಾದಳು. ಆಗ ಬಳಿಯಲ್ಲಿದ್ದ ದಾದಿಯರು ಮುಂತಾದವರು ಶ್ರೀಗಂಧದ ನೀರನ್ನು ಸೇಚಿಸಿ ಗಾಳಿ ಹಾಕಲು ಬಹಳ ಹೊತ್ತಿನ ನಂತರ ಎಚ್ಚೆತ್ತಳು. ಅಷ್ಟರಲ್ಲಿ ರಾಜನು ಉತ್ಕಂಠಿತನಾಗಿ ಬಂದು 'ಇವರಿಗೆ ಹೀಗೆ ಆಗಲು ಕಾರಣವೇನು ?' ಎಂದು ಕೇಳಿದನು. ಆಗ ದಾದಿಯು "ಈಕೆ ಮದ್ದಾನೆಯನ್ನು ಕಂಡು ಮೂರ್ಛೆಹೋದಳು" ಎಂದು ಹೇಳಿದಳು. ಆ ಮಾತನ್ನು ರಾಜನು ಕೇಳಿ ಆಕೆ ಮತ್ತೊಂದು ಬಾರಿ ಆನೆಯನ್ನು ಕಂಡಾಗ ಹೆದರದಂತೆ ಮಾಡುವುದಕ್ಕಾಗಿ ಸುಕೇಶಿನಿಯ ಮನೆಯ ಗೋಡೆಗಳ ಎಲ್ಲಾ ಕಡೆಗಳಲ್ಲಿಯೂ ತುಂಟಾಟ ಮಾಡತಕ್ಕ ಆನೆಗಳನ್ನು ತನ್ನ ಚಿತ್ರಕಾರರಿಂದ ಬರೆಯಿಸಿದನು. ಆಮೇಲೆ ಸುಕೇಶಿನಿ ತನ್ನ ಹಿಂದಿನ ಜನ್ಮದಲ್ಲಿ ನಡೆದುದೆಲ್ಲವನ್ನೂ ಪಟದಲ್ಲಿ ತಾನೇ ಬರೆದು ಯಾರೂ ತಿಳಿಯದ ಹಾಗೆ ಒಬ್ಬಳೇ ಇದ್ದು ಹೀಗೆಯೇ ಕಾಲಕಳೆಯಿತು. ಮತ್ತೊಂದು ದಿವಸ ಗಂಧಭಾಜನನು ಹಿಂದಿನ ಮದ್ದಾನೆಯೊಡನೆ ಖೆಡ್ಡಾದಲ್ಲಿ ಮೂವತ್ತೆರಡು ಸಾರಿ ಗಜಕ್ರೀಡೆಗಳನ್ನು ಬಹಳ ಹೊತ್ತಿನವರೆಗೆ ನಡೆಸಿ ಆನೆಯನ್ನು ಬಳಲಿಸಿ ತನ್ನ ವಶಕ್ಕೆ ತಂದನು. ಅದರ ಮೇಲೇರಿ ಅಂಕುಶವನ್ನು ಹೊಳೆಯಿಸುತ್ತ, ರಾಣಿಯ ಬಳಿಗೆ ಬಂದು ನಿಂತನು. "ನಾನು ಹೀಗೆ ಮಾಡಿದ್ದು ಆಗಬಹುದೇ ? ಮೆಚ್ಚಿದೆಯಾ ?" ಎಂದು ತನ್ನ ಸಾಹಸವನ್ನು ಹೇಳಿ ಮೆರೆದುಕೊಂಡನು. ಆಗ ಸುಕೇಶಿನಿ ಹೀಗೆಂದಳು -

ಪೊಳೆಯಿಸುತ್ತಮರಸಿಯಲ್ಲಿಗೆ ವಂದು ನಿಂದಿತಂಕ್ಕುಮೆ ಮಚ್ಚದಾ ಎಂದು ತನ್ನ ಸಾಹಸಮಂ ಪೇಟ್ದು ಮೆಱೆಯೆ ಸುಕೇಶಿನಿಯೆಂದೊಳಿದೇನೆಂಬಾನೆ ತಗರೊಳೋರಂತಪ್ಪುದು ಚಂದನಮಲಯಮೆಂಬ ಪಿರಿಯ ವರ್ವತದೊಳ್ ಇಂದ್ರನೀಲವಾಣಿಕದೊಳೋರಂತಪ್ಪ ಬಣ್ಣಮನೊಡೆಯದು ಮಲಯಸುಂದರನೆಂಬಾನೆಯುಂಟು ಹಸ್ತಿಯೂಥಕ್ಕೆಱೆಯನಪ್ಪುದು ಎಲ್ಲಾ ಕಾಲಮುಂ ಮದದಿಂದಂ ಪೆರ್ಚುತ್ತಿರ್ದುದು ಕೆಂದಾವರೆಯ ವಣ್ಣದೊಳೋರಂತಪ್ಪ ಬಣ್ಣಮನೊಡೆಯ ಪದ್ಮಾವತಿಯೆಂಬ ಪಿಡಿಯೊಡನೆ ಕ್ರೀದಿಸುತ್ತಿರ್ಪಾನೆಯಂ ನಿನ್ನ ವಸಕ್ಕೆ ಮಾಡಿ ಪಿಡಿದೇಱಿಕೊಂಡು ವಂದೊಡೆ ನಿನ್ನ ಗಜಪ್ರಿಯತೆಯುಮೇಱೆಯಾಡಲ್ ಬಲ್ಮೆಯುಂ ಕಲಿತನಮುಂ ಸಾಹಸಮುಂ ಗಂಡಗುಣಮುಮು ನಱೆಯಲಕ್ಕುಮಾಯಾನೆಯುಂ ತಂದಂದು ಗಂಡರ್ ನಿನ್ನನ್ನರೀ ಭುವನದೊಳಾರುಮಿಲ್ಲೆಂದೊಸೆದು ಮಚ್ಚ ಪೊಗಟ್ಪಿನೆಂದೊಡರಸನಿಂತೆಂದಂ ನೀನಪ್ಪೊಡಿಲ್ಲಿ ಪುಟ್ಪದೆ ಆಯಾನೆಯುಮನೆಲ್ಲಿ ಕಂಡೆಯೆಂತಱೆವೆಯೆಂದು ಬೆಸಗೊಳೆ ಸುಕೇಶಿನಿಯಿಂತೆಂದಳ್ ಆಂ ಮುನ್ನಿನ ಜನ್ಮದೊಳ್ ಮನೋವೇಗೆಯೆನೆಂಬ ವಿದ್ಯಾಧರಿ ಎನ್ನಂದಿನ ಭರ್ತಾರಂ ಮಣಿಚೂಳನೆಂಬೊಂ ವಿದ್ಯಾಧರನಾತನೊಡನೆ ಭೌಮವಿಹಾರಾರ್ಥಂ ತೊಲಲ್ದಲ್ಲಿ ಚಂದನಮಲಯಮೆಂಬ ವರ್ವತದೊಳ್ ಕರಿಣೀವೃಂದಂಬೆರಸಾಡುವ ಕರಿಪತಿಯನ್ಯೈರಾವಣಸನ್ನಿಭಮಂ ಕಂಡೆನೆಂದುರ್ಕವದಿಂದಂ ಪೇಳ್ದೊಡಾ ಮಾತನರಸಂ ಕೇಳ್ದು ಪೂರ್ವಜನ್ಮಾಂತರದೊಳ್ ಕಟ್ಟಿಪಟ್ಟ ಮುಳಿಸನೊಡೆಯೊಂ ತನ್ನುಳ್ಳ ಸಮಸ್ತಬಲಂಬೆರಸು ಪೋಗಿ

"ಇದೇನು ಮಹಾ ! ಕ್ಷುಲ್ಲಕವಾದ ಆನೆ. ಇದು ಟಗರಿನಂತಿರುವುದು. ಚಂದನಮಲಯವೆಂಬ ದೊಡ್ಡ ಪರ್ವತದಲ್ಲಿ ಇಂದ್ರನೀಲಮಾಣಿಕ್ಯದ ಹಾಗಿರುವ ಬಣ್ಣವನ್ನುಳ್ಳ ಮಲಯಸುಂದರನೆಂಬ ಆನೆಯಿದೆ. ಅದು ಆನೆಗಳ ಹಿಂಡಿಗೆ ಒಡೆಯನಾಗಿರುವುದು. ಎಲ್ಲಾ ಕಾಲದಲ್ಲಿಯೂ ಸೊಕ್ಕೇರಿಕೊಂಡಿರುವುದು. ಕೆಂಪು ತಾವರೆಯ ಬಣ್ಣದ ಹಾಗಿರುವ ಬಣ್ಣವುಳ್ಳ ಪದ್ಮಾವತಿಯೆಂಬ ಹೆಣ್ಣಾನೆಯೊಡನೆ ಆಡುತ್ತಿರುವ ಆ ಆನೆಯನ್ನು ನೀನು ವಶಮಾಡಿ ಹಿಡಿದು ಅದನ್ನೇರಿಕೊಂಡು ಬಂದರೆ ಆನೆಸವಾರಿಯಲ್ಲಿ ನಿನಗಿರುವ ಪ್ರೀತಿಯನ್ನೂ ಸವಾರಿಯ ಪ್ರೌಢಿಮೆಯನ್ನೂ ಪೌರುಷವನ್ನೂ ತಿಳಿಯಬಹುದು. ಆ ಆನೆಯನ್ನು ನೀನು ತಂದೆಯಾದರೆ, ನಿನ್ನಂತಹ ಗಂಡುಗಲಿಗಳು ಈ ಲೋಕದಲ್ಲಿ ಯಾರೂ ಇಲ್ಲ -ಎಂದು ಪ್ರೀತಿಪಟ್ಟು ಮೆಚ್ಚಿ ನಿನ್ನನ್ನು ಹೊಗಳುವೆನು- " ಎಂದಳು. ಆಗ ರಾಜನು ಹೀಗೆಂದನು - "ನೀನಾದರೆ ಹುಟ್ಟಿದ್ದು ಇಲ್ಲಿ. ಆ ಆನೆಯನ್ನು ಎಲ್ಲಿ ಕಂಡೆ ಮತ್ತು ಅದು ನಿನಗೆ ಹೇಗೆ ಗೊತ್ತು ?" ಎಂದು ಕೇಳಲು ಸುಕೇಶಿನಿ ಹೀಗೆಂದಳು - "ನಾನು ಹಿಂದಿನ ಜನ್ಮದಲ್ಲಿ ಮನೋವೇಗೆ ಎಂಬ ವಿದ್ಯಾಧರಿಯಾಗಿದ್ದೆನು. ಆಗಿನ ನನ್ನ ಗಂಡನು ಮಣಿಚೂಳನೆಂಬ ವಿದ್ಯಾಧರನು. ನಾನು ಆತನೊಡನೆ ಭೂಮಿಯ ಮೇಲೆ ಸಂಚಾರ ಮಾಡುವ ವಿನೋದಕ್ಕಾಗಿ ಸುತ್ತುಡಾತ್ತಿದ್ದಾಗ ಚಂದನಮಲಯವೆಂಬ ಬೆಟ್ಟದಲ್ಲಿ ಹೆಣ್ಣಾನೆಗಳ ಹಿಂಡನ್ನು ಕೂಡಿಕೊಂಡು ಕ್ರೀಡಿಸತಕ್ಕ ಆನೆಗಳೊಡೆಯನನ್ನು ಕಂಡೆನು. ಅದು ಇಂದ್ರನ ಐರಾವತದಂತೆ ಕಾಣುತ್ತಿತ್ತು-" ಎಂದು ಕಪಟದಿಂದ ಹೇಳಿದನು. ಆ ಮಾತನ್ನು ರಾಜನು ಕೇಳಿ ಹಿಂದಿನ ಯಾವುದೋ ಜನ್ಮದಲ್ಲಿ ಕಟ್ಟಲ್ಪಟ್ಟ ಕೋಪವುಳ್ಳವನಾಗಿ ತನ್ನಲ್ಲಿದ್ದ ಎಲ್ಲಾ ಸೈನ್ಯವನ್ನೂ ಕೂಡಿಕೊಂಡು ಹೋಗಿ ಮಲಯಪರ್ವತವೆಲ್ಲವನ್ನೂ ಆವರಿಸಿ ಸುತ್ತಲೂ ಮುತ್ತಿಗೆ ಹಾಕಿದನು. ಆಗ ಮೋಡದ ಶಬ್ದದಂತೆ ಮೃದು ಮತ್ತು ಗಂಭೀರವಾದ

ಮಲಯಪರ್ವತಮೆಲ್ಲಮಂ ಬಳಸಿ ಸುತ್ತಿಮುತ್ತಿದಾಗಳಿಂದ್ರನೀಲಮಾಣಿಕದ ತೇಜದೊಳೋರಂತಪ್ಪ ಮೆಯ್ಯನೊಡೆಯ ಗಜಪತಿಯುಂ ಮುಗಿಲಧ್ವನಿಯ ಮೆಲ್ಗಂಭೀರಮಪ್ಪ ಗರ್ಜನೆಯನೊಡೆಯದುಂ ಬಂದು ಪಡೆಯೆಲ್ಲಮಂ ಹತವಿತತಕೋಳಾಹಳಮೆಬಿದು ಕೊಲ್ಲುದನಾದಮಾನುಂ ಕಲಿಯಪ್ಪುದನರಸಂ ಕಂಡು ಪಿಡಿಯಲಾಱದಾನೆಯಂ ಕೊಂದೆರಡುಂ ನಿಡಿಯ ತೋರಮಪ್ಪ ಕೊಂಬುಗಳುಮಂ ಕುಂಭಸ್ಥಳದ ಮುತ್ತುಗಳುಮಂ ಕೊಂಡೊಸಗೆಯಿಂದಂ ಬೇಗಂ ಚಂಪಾಪುರಕ್ಕೆ ವಂದರಮನೆಯಂ ಪೊಕ್ಕರಸಿಯಂ ಕಂಡು ನಿನ್ನ ನಚ್ಚುವ ಮಲಯ ಕೊಂಬುಗಳುಮಂ ಮುತ್ತುಗಳುಮಂ ಕೊಳ್ಳೆಂದವಂ ಸುಕೇಶಿನಿಯ ಮುಂದೆ ತಂದಿಟ್ಟೊಡೆ ಸುಕೇಶಿನಿಯುಂ ಹಾ ಮಲಯಸುಂದರಾ ಹಾ ಎನ್ನ ನಲ್ಲನೆ ಹಾ ಎನ್ನ ಮಲಯಸುಂದರನಪ್ಪ ಸ್ವಾಮಿಯೆಂದು ಪ್ರಳಾಪಂಗೆಯ್ದು ಎರಡು ಕೊಂಬುಗಳುಮಂ ತಬ್ಕಿ ಸಿಯಾದ ಮಾನುಂ ಬಿಗಿದಪ್ಪಿಕೊಂಡು ಸತ್ತಳ್ ಸುಕೇಶಿನಿ ಸತ್ತುದರ್ಕ್ಕರಸಂ ಮೊದಲಾಗಿ ಪರಿವಾರಮೆಲ್ಲಮುಂ ಬಿಱಗಾಗಿ ವಿಸ್ಮಯಂಬಟ್ಟು ದುಃಖಂಗೆಯ್ದರ್ ಕೆಲವು ದಿವಸದಿಂ ಯಶೋಧರರೆಂಬ ಕೇವಲಜ್ಞಾನಿಗಳ್ ವಿಹಾರಿಸುತ್ತಮಾ ಚಂಪಾನಗರಕ್ಕೆ ವಂದು ಪ್ರಮದೋದ್ಯಾನವನದೊಳಿರ್ದರೆಂಬ ಮಾತನರಸಂ ರಿಸಿನಿವೇದಕನಿಂದಱೆದು ಸಪರಿವಾರಂಬೆರಸು ಬಂದರ್ಚಿಸಿ ಯಥೋಚಿತಸ್ಥಾನದೊಳಿರ್ದಂ ಮತ್ತಂ ನಾಗದತ್ತಸೆಟ್ಟಿಯುಂ ಸುರೂಪೆಯುಂ ವರಾಂಗನುಂ ಪ್ರಿಯಂಗುವುಂ ವೊದಲಾಗೊಡೆಯ ಶ್ರಾವಕಜನಂಗಳ್ ಬಂದರ್ಚಿಸಿ ತಂತಮ್ಮೆಡೆಯೊಳಿರ್ದು ಧರ್ಮಮಂ ಕೇಳ್ದು ತದನಂತರಮೆ ವೈರಾಗ್ಯಮಾಗಿ ಸುಕೇಶಿನಿಯ ದುಃಖಮಂ ಸೈರಿಸಲಾಱದೆ ಸುಕೇಶಿನಿಯ ತಂದೆಯಪ್ಪ ನಾಗದತ್ತಸೆಟ್ಟಿಯುಂ ತಾಯ್

ಗರ್ಜನೆಯನ್ನುಳ್ಳ, ಇಂದ್ರನೀಲ ಮಾಣಿಕ್ಯದ ಕಾಂತಿಯನ್ನು ಹೋಲುವ ದೇಹವುಳ್ಳ ಆನೆಗಳ ರಾಜನು ಬಂದು ರಾಜನ ಸೈನ್ಯವೆಲ್ಲಾ ಚಲ್ಲಾಪಿಲ್ಲಿಯಾಗುವಂತೆ ಹೊಡೆದು ಎಳೆದು ಕೊಲ್ಲಲು ತೊಡಗಿತು. ಈ ಆನೆ ಅತ್ಯಂತ ಶೌರ್ಯವುಳ್ಳದೆಂಬುದನ್ನು ರಾಜನು ಕಂಡು, ಅದನ್ನು ಹಿಡಿಯಲಾರದೆ ಆ ಆನೆಯನ್ನು ಕೊಂದು ಅದರ ಉದ್ದವಾದ ಮತ್ತು ದಪ್ಪವಾದ ಎರಡು ದಾಡೆಗಳನ್ನೂ ಅದರ ತಲೆಯ ಮುತ್ತುಗಳನ್ನೂ ತೆಗೆದುಕೊಂಡು, ಸಂತೋಷವಾರ್ತೆಯೊಂದಿಗೆ ಬೇಗನೆ ಚಂಪಾಪುರಕ್ಕೆ ಬಂದನು. ಅರಮನೆಯನ್ನು ಪ್ರವೇಶಿಸಿ ಅರಸಿಯನ್ನು ಕಂಡು "ನಿನ್ನ ಪ್ರೀತಿಯ ಮಲಯಸುಂದರನ ದಾಡೆಗಳನ್ನೂ ಮುತ್ತುಗಳನ್ನೂ, ಇದೋ, ತೆಗೆದುಕೋ" ಎಂದು ಅವನ್ನು ಸುಕೇಶಿನಿ ಎದುರಿಗೆ ತಂದಿಟ್ಟನು. ಆಗ ಅವಳು ಹಾ ಮಲಯಸುಂದರಾ, ಹಾ ನನ್ನ ಪ್ರಿಯನೇ ನನ್ನ ಮಲಯಸುಂದರನಾದ ಒಡೆಯನೇ!' ಎಂದು ಅತ್ತು ಎರಡು ದಾಡೆಗಳನ್ನೂ ಗಾಢವಾಗಿ ಅಪ್ಪಿಕೊಂಡು ಪ್ರಾಣಬಿಟ್ಟಳು. ಸುಕೇಶಿನಿ ಸತ್ತುದಕ್ಕಾಗಿ ರಾಜನೂ ಪರಿವಾರವೆಲ್ಲವೂ ಆಶ್ಚರ್ಯಪಟ್ಟು ದುಃಖಿಸಿದರು. ಕೆಲವು ದಿವಸಗಳ ನಂತರ ಯಶೋಧರರೆಂಬ ಕೇವಲಜ್ಞಾನವುಳ್ಳ ಋಷಿಗಳು ಸಂಚಾರ ಮಾಡುತ್ತ ಆ ಚಂಪಾನಗರಕ್ಕೆ ಬಂದು ಪ್ರಮದೋದ್ಯಾನದಲ್ಲಿ ಇದ್ದಾರೆ - ಎಂಬ ಸಂಗತಿಯನ್ನು ರಾಜನು ಋಷಿನಿವೇದಕನ ಮಾತಿನಿಂದ ತಿಳಿದು ಪರಿವಾರಸಮೇತನಾಗಿ ಬಂದು ಅವರನ್ನು ಪೂಜಿಸಿ ಯಥೋಚಿತವಾದ ಸ್ಥಾನದಲ್ಲಿ ಇದ್ದನು. ಆ ಮೇಲೆ ನಾಗದತ್ತ ಸೆಟ್ಟಿ, ಸುರೂಪೆ, ವರಾಂಗ, ಪ್ರಿಯಂಗು - ಮುಂತಾಗಿರುವ ಶ್ರಾವಕಜನರು ಬಂದು ಪೂಜಿಸಿ ತಮ್ಮ ತಮ್ಮ ಸ್ಥಾನಗಳಲ್ಲಿ ಇದ್ದು ಧರ್ಮಬೋಧನೆಯನ್ನು ಕೇಳಿದರು. ಅನಂತರ ವೈರಾಗ್ಯವುಂಟಾಗಿ, ಸುಕೇಶಿನಿಯ ಶೋಕವನ್ನು ಸಹಿಸಲಾರದೆ, ಅವಳ ತಂದೆ ನಾಗದತ್ತ ಸೆಟ್ಟಿ, ತಾಯಿಯಾದ ಸುರೂಪೆ,

ಸುರೂಪೆಯುಂ ಮಾವನಪ್ಪ ವರಾಂಗನುಂ ವರಾಂಗನ ಭಾರ್ಯೆಯಪ್ಪ ಪ್ರಿಯಂಗುವುಮಂತು ನಾಲ್ವರುಮೆಟ್ಟಿಭಮುಖರಾಗಿ ದೀಕ್ಷಾಪ್ರಸಾದಂಗೆಯ್ಯಂ ಭಟಾರಾ ಎಂದು ಬೇಡಿ ತಪಂಬಟ್ಟರ್ ಮತ್ತಂ ಸುಕೇಶಿನಿಯಾ ಮಲಯಸುಂದರನೆಂಬಾನೆಯ ಕೊಂಬುಗಳನಪ್ಪಿ ಸತ್ತಳೆಂಬ ಮಾತಂ ವರಾಂಗನುಂ ಕೇಳ್ದು ಜನ್ಮಾನುಬಂಧಿಯಪ್ಪ ಸ್ನೇಹಂ ಕಾರಣಮಾಗಿ ದುಃಖಮಂ ಸೈರಿಸಲಾಱದೆ ತಪಂಬಟ್ಟು ನಿದಾನಸಹಿತಂ ತಪಂಗೆಯ್ದನಿತ್ತ ಗಂಧಭಾಜನನ್ಯಪತಿ ಯಶೋಧರಕೇವಲಿಗಳನಿಂತೆಂದು ಬಿಸಗೊಂದಂ ಭಟಾರಾ ಸುಕೇಶಿನಿ ಮಲಯಸುಂದರನೆಂಬಾನೆಯ ಕೊಂಬುಗಳನಪ್ಪಿಕೊಂಡು ಸತ್ತುದರ್ಕೆ ಕಾರಣಮೇನೆಂದು ಬಿಸಗೊಂಡೊಡೆ ಕೇವಲಜ್ಞಾನಿಗಳಿಂತೆಂದು ಪೇೞ್ದರ್ ದಕ್ಷಿಣಾಪಥದೊಳ್ ದ್ರವಿಳವಿಷಯದೊಳ್ ದಕ್ಷಿಣಮಧುರೆಯೆಂಬುದು ಪೊಬಲದನಾಳ್ವಂ ಸುಂದರ ಪಾಂಡ್ಯನೆಂಬೊನರಸನಾತನರಸಿಯುಮ್ಮತಮಹಾದೇವಿಯೆಂಬೊಳಂತವರ್ಗ್ಗಳಿಷ್ಟವಿಷಯ ಕಾಮಭೋಗಂಗಳನನುಭವಿಸುತ್ತಿರೆ ಮತ್ತಮಾ ಪೊಬಲೊಳಾರ್ಯನಂದಿಯೆಂಬೊಂ ಸೆಟ್ಟಿಯಾತನ ಪರದಿಯವಿಧಿಯೆಂಬೊಳಾ ಇರ್ವ್ವರ್ಗ್ಗಂ ಸುಕೀರ್ತಿಯೆಂಬೊಳ್ ಮಗಳಾದಳ್ ಮತ್ತೊರ್ವನಾ ಪೊಬಲೊಳ್ ಸುದರ್ಶನನೆಂಬೊಂ ಪರದನಾತನ ಪರದಿ ವೀರಶ್ರೀಯೆಂಬೊಳಾಯಿರ್ವ್ವರ್ಗ್ಗಂ ಮಗಂ ಪ್ರಿಯದರ್ಶನನೆಂಬೊನಾತಂಗಾ ಸುಕೀರ್ತಿಯಂ ಕೊಟ್ಟರ್ ಸುಕೀರ್ತಿಯ ಕೆಳದಿ ಮಾಲೆಗಾರ್ತಿ ಪ್ರಿಯಸೇನೆಯೆಂಬೊಳಂತವರ್ಗ್ಗಳಿಷ್ಟವಿಷಯಕಾಮಭೋಗಂಗಳನನುಭವಿಸುತ್ತಿರೆ ಮತ್ತೊಂದು ದಿವಸಂ

ಮಾವನಾದ ವರಾಂಗ, ವರಾಂಗನ ಹೆಂಡತಿಯಾದ ಪ್ರಿಯಂಗು - ಅಂತು ನಾಲ್ಕು ಮಂದಿಯೂ ಎದ್ದು ಮುನಿಗಳಿಗೆ ಎದುರಾಗಿ "ಸ್ವಾಮೀ, ದೀಕ್ಷೆಯನ್ನು ಅನುಗ್ರಹಿಸಿರಿ" ಎಂದು ಪ್ರಾರ್ಥಿಸಿ ದೀಕ್ಷೆ ಪಡೆದು ತಪಸ್ಸು ಮಾಡಿದರು. ಆ ಮೇಲೆ ಸುಕೇಶಿನಿ ಆ ಮಲಯಸುಂದರನೆಂಬ ಆನೆಯ ಕೋಡುಗಳನ್ನು ಅಪ್ಪಿಕೊಂಡು ಸತ್ತಳೆಂಬ ಸುದ್ದಿಯನ್ನು ವರಾಂಗನು ಕೇಳಿ, ಜನ್ಮಾಂತರದಿಂದ ಬಂದಿದ್ದ ಪ್ರೀತಿಯೇ ಕಾರಣವಾಗಿ ವ್ಯಸನವನ್ನು ಸಹಿಸಲಾರದೆ ತಪಸ್ಸನ್ನು ಸ್ವೀಕರಿಸಿ ಸಂಕಲ್ಪದೊಡನೆ ತಪಸ್ಸನ್ನು ಮಾಡಿದನು. ಇತ್ತ ಗಂಧಭಾಜನರಾಜನು ಯಶೋಧರಮುನಿಗಳನ್ನು ಕುರಿತು "ಸ್ವಾಮೀ, ಸುಕೇಶಿನಿಯು ಮಲಯಸುಂದರನೆಂಬ ಆನೆಯ ದಾಡೆಗಳನ್ನು ಅಪ್ಪಿಕೊಂಡು ಸತ್ತುದಕ್ಕೆ ಕಾರಣವೇನು? - ಎಂದು ಕೇಳಿದನು. ಅದಕ್ಕೆ ಕೇವಲಜ್ಞಾನಿಗಳಾದ ಯಶೋಧರಮುನಿಗಳು ಹೀಗೆಂದರು - ದಕ್ಷಿಣಾಪಥದಲ್ಲಿರುವ ದ್ರಾವಿಡ ದೇಶದಲ್ಲಿ ದಕ್ಷಿಣಮಧುರೆ ಎಂಬ ಪಟ್ಟಣವಿದೆ. ಅದನ್ನು ಆಳುವವನು ಸುಂದರಪಾಂಡ್ಯನೆಂಬ ರಾಜನು. ಅವನ ಪತ್ನಿ ಮಹಾದೇವಿಯೆಂಬವಳು. ಅಂತು ಅವರು ತಮಗೆ ಪ್ರಿಯವಾದ ಸುಖಗಳನ್ನು ಅನುಭವಿಸುತ್ತ ಇದ್ದರು. ಮತ್ತು, ಆ ಪಟ್ಟಣದಲ್ಲಿ ಆರ್ಯನಂದಿಯೆಂಬ ಸೆಟ್ಟಿಯಿದ್ದನು. ಅವನ ಪತ್ನಿ ಅವಿಧಿ ಎಂಬವಳು. ಆ ಇಬ್ಬರಿಗೆ ಸುಕೀರ್ತಿ ಎಂಬ ಮಗಳಾದಳು. ಆ ಪಟ್ಟಣದಲ್ಲಿ ಸುದರ್ಶನನೆಂಬ ಮತ್ತೊಬ್ಬ ವರ್ತಕನಿದ್ದನು. ಅವನ ಹೆಂಡತಿ ವೀರಶ್ರೀಯೆಂಬಾಕೆ. ಆ ಇಬ್ಬರಿಗೂ ಪ್ರಿಯದರ್ಶನ ನೆಂಬವನು ಮಗನು. ಅವನಿಗೆ ಸುಕೀರ್ತಿಯನ್ನು ಕೊಟ್ಟರು. ಸುಕೀರ್ತಿಯ ಗೆಳತಿ, ಮಾಲೆಗಾರ್ತಿಯಾದ ಪ್ರಿಯಸೇನೆ ಎಂಬುವಳು. ಅಂತು ಅವರು ಇಷ್ಟವಿಷಯದ ಕಾಮಸುಖಗಳನ್ನು ಅನುಭವಿಸುತ್ತ ಇದ್ದರು. ಹೀಗಿರಲು ಮತ್ತೊಂದು ದಿನ ಸುಕೀರ್ತಿ

ಸುಕೀರ್ತಿ ತನ್ನ ಭರ್ತಾರನನಿಂತೆಂದಳಡವಿಯೊಳಂ ಪರ್ವತಂಗಳೊಳಂ ಪುಳಿನ ಸ್ಥಳಂಗಳೊಳಮೆನಗೆ ಕ್ರೀಡಿಸಲಬ್ಬೆಯಾದುದೆನೆ ನಿನ್ನಬ್ಬೆಯಂ ನೆಱವಲಕ್ಕುಮೆಂದು ಪ್ರಿಯದರ್ಶನನುಂ ಸುಕೀರ್ತಿಯುಂ ಪ್ರಿಯಸೇನೆಯುಮಂತು ಮೂವರುಂ ಪರಿವಾರಸಹಿತಮಡವಿಗೆ ಪೋಗಿಯಲ್ಲಿ ಕಾನನವನಸರಿತ್ಸರೋವರ ಪ್ರದೇಶಂಗಳೊಳ್ ಪರಿಜನಂಬೆರಸು ತದೀಪ್ಸಿತಪ್ರದೇಶಂಗಳೊಳ್ ವಿಹಾರಿಸಿ ರಮ್ಯಮಪ್ಪ ಗಿರಿನದಿಯ ಪುಷ್ಪಪಲ್ಲವಲತಾಕೀರ್ಣಮಪ್ಪ ಪುಳಿನಸ್ಥಳಂಗಳೊಳ್ ಕ್ರೀಡಿಸುತ್ತಿರ್ಪನ್ನೆಗಂ ಹಸ್ತಿಯೂಥಂ ಬರ್ಪುದಂ ಕಂಡಾಗಳೊಂದು ಮದಾಂಧ ಗಂಧಸಿಂಧುರಂ ಕರಿಣೀವೃಂದಂಗಳಿಂ ಪರಿವೇಷ್ಟಿತನಾಗಿ ಕರಿಣೀಗಣಂಗಳಾ ಕಾತಪುಷ್ಪಂಗಳಿಂ ಚಾಮರಮಿಕ್ಕೆ ಮೃದುಪಲ್ಲವಂಗಳಂ ಕಬಳಂಗೊಳುತ್ತುಂ ಲೀಲೆಯಿಂ ಬಂದು ಸ್ವಚ್ಛವಿಚ್ಛಳಾಕಾರಮಪ್ಪ ಮಡುವಂ ಪೊಕ್ಕು ಮನೋಹಾರಿಗಳಪ್ಪ ಕರಿಣೀಗಣದೊಡನೆ ಕ್ರೀಡಿಸುವುದಂ ಮೂವರುಂ ಕಂದು ಹಸ್ತಿಭೋಗಂಗಳೊಳಪ್ಪ ಕಾಂಕ್ಷೆಯಿಂದಂ ನಿದಾನಂಗೆಯ್ದು ತಿರ್ಯಗಾಯುಷ್ಯಮಂ ಕಟ್ಟಿದರಿಂತು ಕಾಲಂ ಸಲೆ ಮತ್ತೊಂದು ದಿವಸಂ ಬಜಿಸಿಡಿಲ್ ಪೊಡೆದು ಪ್ರಿಯಸೇನೆ ಸತ್ತಳ್ ಪ್ರಿಯದರ್ಶನನೊಂದು ದಿವಸಂ ತನ್ನ ಭಾರ್ಯೆವೆರಸು ಕದಳೀವನದೊಳ್ ಮಜಲುಂದಿದಲ್ಲಿಗೆ ಕಾಳಿಂಗನಾಗಂ ಬಂದೊಡದಱ ಮೇಗೆಕಾಲಂ ನೀಡಿದೊಡೆ ಕರ್ಚತ್ತಾತನುಮಾಗಳ್ ಪರವಶನಾಗಿ ಪ್ರಾಣಪರಿತ್ಯಾಗಂಗೆಯ್ದನಂ ಕಂಡು ಸುಕೀರ್ತಿಯುಂ ಕಾದಲನ ವಿಯೋಗಂ ಕಾರಣಮಾಗೆ ಪ್ರಾಣವಲ್ಲಭನ ಸುರಿಗೆಯಂ ಕೊಂಡು

ತನ್ನ ಗಂಡನೊಡನೆ ಹೀಗೆಂದಳು ಕಾಡು, ಗುಡ್ಡ, ಮರಳು ಜಾಗಗಳಲ್ಲಿ ಕ್ರೀಡಿಸಬೇಕೆಂದು ನನಗೆ ಬಯಕೆಯಾಗಿದೆ. ಹೀಗೆನ್ನಲು "ನಿನ್ನ ಬಯಕೆಯನ್ನೂ ಈಡೇರಿಸಬಹುದು" ಎಂದು ಪ್ರಿಯದರ್ಶನನು ಒಪ್ಪಿಗೆ ಕೊಟ್ಟನು. ಅದರಂತೆ ಪ್ರಿಯದರ್ಶನ, ಸುಕೀರ್ತಿ, ಪ್ರಿಯಸೇನೆ - ಅಂತು ಮೂವರು ಪರಿವಾರದೊಂದಿಗೆ ಕಾಡಿಗೆ ಹೋದರು. ಅಲ್ಲಿ ಕಾಡು, ಉದ್ಯಾನ, ನದಿ, ಸರೋವರ ಪ್ರದೇಶಗಳಲ್ಲಿ ಸೇವಕಜನರೊಂದಿಗೆ ಅವರಿಗೆ ಇಷ್ಟವಾದ ಸ್ಥಳಗಳಲ್ಲಿ ಸಂಚರಿಸಿ ಮನೋಹರವಾದ ಬೆಟ್ಟದ ಹೊಳೆಯ ಹೂ, ಚಿಗುರು, ಬಳ್ಳಿಗಳಿಂದ ಕೂಡಿದ ಮರಳಿನ ಸ್ಥಳಗಳಲ್ಲಿ ಕ್ರೀಡಿಸುತ್ತಿದ್ದರು. ಅಷ್ಟರಲ್ಲಿ ಒಂದು ಆನೆ ಹಿಂಡು ಬರುವುದನ್ನು ಕಂಡರು. ಆ ಹಿಂಡಿನಲ್ಲಿ ಒಂದ ಸೊಕ್ಕೇರಿ ಕಂಗಾಣದ ಆನೆ ಹೆಣ್ಣಾನೆಗಳ ಹಿಂಡಿನಿಂದ ಆವರಿಸಿದ್ದಿತು. ಹೆಣ್ಣಾನೆ ಹಿಂಡುಗಳು ನಾಣಲು ಹೂಗಳಿಂದ ಚಾಮರ ಬೀಸುತ್ತಿರಲು, ಮೆತ್ತಗಿನ ಚಿಗುರುಗಳನ್ನು ಮೆಲ್ಲುತ್ತ ವಿನೋದದಿಂದ ಬಂದು ಅದು ಸ್ವಚ್ಛವಾಗಿ ಹೊಳೆಯುವ ಸ್ವರೂಪವುಳ್ಳ ಮಡುವನ್ನು ಹೊಕ್ಕು ತನ್ನ ಮನಸ್ಸನ್ನು ಸೆಳೆಯತಕ್ಕ ಹೆಣ್ಣಾನೆಗಳ ಹಿಂಡಿನೊಡೆ ಕ್ರೀಡಿಸುತ್ತಿತ್ತು. ಅದನ್ನು ಮೂವರೂ ಕಂಡು, ಆನೆಗಳಾಗಿ ಸುಖವನ್ನು ಅನುಭವಿಸಬೇಕೆಂಬ ಬಯಕೆಯಿಂದ ಸಂಕಲ್ಪ ಮಾಡಿಕೊಂಡು ಪ್ರಾಣ ಜೀವನದ ಆಯುಷ್ಯವನ್ನು ಕಟ್ಟಿಕೊಂಡರು. ಹೀಗೆಯೇ ಕಾಲ ಕಳೆಯಲು ಮತ್ತೊಂದು ದಿನ ಬರಸಿಡಿಲು ಬಡಿದು ಪ್ರಿಯಸೇನೆ ಸತ್ತುಹೋದಳು. ಪ್ರಿಯದರ್ಶನನು ಒಂದು ದಿವಸ ತನ್ನ ಪತ್ನಿಯೊಂದಿಗೆ ಬಾಳೆತೋಟದಲ್ಲಿ ನಿದ್ರಿಸುತ್ತಿದ್ದನು. ಅಲ್ಲಿಗೆ ಒಂದು ಕಾಳಿಂಗಸರ್ಪ ಬಂತು. ಇವನು ಅದರ ಮೇಲೆ ತನ್ನ ಕಾಲನ್ನು ಚಾಚಿದಾಗ, ಅದು ಕಚ್ಚಿತು. ಅವನು ಆಗಲೇ ಮೂರ್ಛೆ ಹೋಗಿ ಪ್ರಾಣಬಿಟ್ಟನು. ಅವನನ್ನು ನೋಡಿ ಸುಕೀರ್ತಿ ತನ್ನ ಪ್ರಿಯನ ಅಗಲಿಕೆಯೇ ಕಾರಣವಾಗಿ ತನ್ನ ಗಂಡನ ಕತ್ತಿಯನ್ನು ತೆಗೆದು ತನ್ನನ್ನು ತಿವಿದುಕೊಂಡು ಸತ್ತುಹೋದಳು. ಅಂತು ಆ ಮೂವರು

ತನ್ನಂ ತಾನಿಜೆದು ಸತ್ತಳ್ ಅಂತಾ ಮೂವರುಂ ಸತ್ತು ತೆಂಕಣ ಪಡುವಣ ಸಮುದ್ರದ ತಡಿಯೊಳ್ ಚಂದನಮಲಯಮೆಂಬಾದಮಾನುಂ ರಮ್ಯಮಪ್ಪ ಪರ್ವತದೊಳ್ ಪ್ರಿಯದರ್ಶನನಿಂದ್ರನೀಲ ಮಾಣಿಕದೊಳೋರಂತಪ್ಪ ಮೆಯ್ಯನೊಡೆಯದಾಗಿ ಸುಭದ್ರಜಾತಿಯಜ್ಞಾನಿಗೆ ಮಲಯಸುಂದರನೆಂಬಾನೆಯಾಗಿ ಪುಟ್ಟದೊಂ ಸುಕೀರ್ತಿಯುಂ ಧವಳವರ್ಣಮಪ್ಪ ಮಲಯಾವತಿಯೆಂಬ ಪಿಡಿಯಾಗಿ ಪುಟ್ಟದಳ್ ಪ್ರಿಯಸೇನೆಯುಂ ಕೆಂದಾವರೆಯ ವರ್ಣದೊಳೋರಂತಪ್ಪ ಮೆಯ್ಯನೊಡೆಯ ಪದ್ಮಾವತಿಯೆಂಬ ಪಿಡಿಯಾಗಿ ಪುಟ್ಟದಳಾಯೆರಡುಂ ಪಿಡಿಗಳುಂ ಸುಭದ್ರ ಜಾತಿಯಜ್ಞಾನಿಗೆ ಪುಟ್ಟದವುತಾ ಮೂಱರ್ಕಮಾರಣ್ಯನಿವಾಸಿಗಳಪ್ಪ ಜನಂಗಳುಂ ತಾಪಸಾದಿಗಳುಮವಂ ಕಂಡೊರ್ಗ್ಗಳಿಲ್ಲಮೊಸೆದು ಮೆಚ್ಚಿ ತದ್ದೇಹಾನುಸಾರಿಗಳಪ್ಪ ಪೆಸರನಿಟ್ಟುದರಿಂದಾ ನಾಡೊಳ್ ಪ್ರಸಿದ್ಧಿಗೆ ಸಂದುವಂತವರ್ಕೆ ಕಾಲಂ ಸಲೆ ಮತ್ತಮಲ್ಲಿ ಯೂಥಾಧಿಪತಿ ಭದ್ರಜಾತಿಯಪ್ಪ ಸುಂದರನೆಂಬಾನೆ ಚಾರಣರಿಸಿಯರ್ಕ್ಕಳ ಪಾದಯುಗಳಂಗಳಂ ವಿದ್ಯಾಧರನರ್ಚಿಸಿ ಪೊಡೆವಟ್ಟು ಪೋಪುದಂ ಕಂಡು ತಾನುಂ ನಿಚ್ಚಮಾ ಸ್ಥಿತಿಯೊಳೆ ತಾಮರೆಯ ಪೂಗಳಂ ತಂದರ್ಚಿಸಿ ಪೂಜಿಸಿ ಪೊಡೆವಟ್ಟು ಪೋಕುಮಿಂತು ಪುಣ್ಯಮಂ ನೆರಪುತ್ತುಂ ಕಾಲಂ ಸಲೆ ಮತ್ತೊಂದು ದಿವಸಂ ಪ್ರಭಂಕರಿಯೆಂಬ ಸರೋವರದೊಳ್ ಮಲಯಸುಂದರಂ ಪೂರ್ವಭವದ ಪ್ರಾಣವಲ್ಲಭೆಯರ್ಕಳಂ ಕಂದತಿ ಸ್ನೇಹದಿಂದಂ ಪೊರ್ದಲಾಟಸುವುದಂ ಕಂಡು

ಸತ್ತು ನೈಋತ್ಯಸಮುದ್ರದ ತೀರದಲ್ಲಿರುವ ಚಂದನಮಲಯವೆಂಬ ಅತ್ಯಂತ ಮನೋಹರವಾದ ಪರ್ವತದಲ್ಲಿ ಪ್ರಿಯದರ್ಶನನು ಇಂದ್ರನೀಲ ಮಾಣಿಕ್ಯವನ್ನು ಹೋಲುವ ಮೈಬಣ್ಣವುಳ್ಳ ಸುಭದ್ರಜಾತಿಯ ಒಂದು ಆನೆಗೆ ಮಲಯಸುಂದರನೆಂಬ ಆನೆಯಾಗಿ ಹುಟ್ಟಿದನು. ಸುಕೀರ್ತಿಯು ಬಿಳಿಯ ಬಣ್ಣವುಳ್ಳ ಮಲಯಾವತಿಯೆಂಬ ಹೆಣ್ಣಾನೆಯಾಗಿ ಹುಟ್ಟಿದಳು. ಪ್ರಿಯಸೇನೆಯು ಬಣ್ಣವುಳ್ಳ ಮಲಯಾವತಿಯೆಂಬ ಹೆಣ್ಣಾನೆಯಾಗಿ ಹುಟ್ಟಿದಳು. ಪ್ರಿಯಸೇನೆಯು ಕೆಂಪುತಾವರೆಯ ಬಣ್ಣವನ್ನು ಹೋಲುವ ಶರೀರವುಳ್ಳ ಪದ್ಮಾವತಿಯೆಂಬ ಹೆಣ್ಣಾನೆಯಾಗಿ ಹುಟ್ಟಿದಳು. ಆ ಎರಡು ಹೆಣ್ಣಾನೆಗಳೂ ಆನೆಗಳಲ್ಲಿ ಉತ್ಕೃಷ್ಟ ಜಾತಿಯದಾದ ಸುಭದ್ರಜಾತಿಯ ಆನೆಗೆ ಹುಟ್ಟಿದವು. ಅಂತು ಆ ಮೂರು ಆನೆಗಳಿಗೂ ಕಾಡಿನಲ್ಲಿ ವಾಸಮಾಡತಕ್ಕ ಜನರೂ ಋಷಿಗಳು ಮುಂತಾದವರೂ ಅವನ್ನು ಕಂಡವರೆಲ್ಲರೂ ಪ್ರೀತಿಪಟ್ಟು ಮೆಚ್ಚಿ ಅವುಗಳ ದೇಹಗಳಿಗೆ ಅನುಸಾರವಾಗುವ ಹೆಸರುಗಳನ್ನು ಇಟ್ಟುದರಿಂದ ಆ ನಾಡಿನಲ್ಲಿ ಪ್ರಖ್ಯಾತವಾದವು. ಅಂತು ಅವುಗಳ ಕಾಲ ಹೀಗೆ ಕಳೆಯುತ್ತಿರಲು, ಅಲ್ಲಿ ಆನೆಗಳ ಹಿಂಡಿನೊಡೆಯನಾದ ಭದ್ರಜಾತಿಯದಾಗಿರುವ ಸುಂದರನೆಂಬ ಆನೆ ಚಾರಣ ಮುನಿಗಳ ಎರಡೂ ಪಾದಗಳನ್ನು ವಿದ್ಯಾಧರನೋರ್ವನು ಪೂಜಿಸಿ, ಸಾಷ್ಟಾಂಗ ವಂದಿಸಿ ಹೋಗುವುದನ್ನು ಕಂಡಿತು. ತಾನು ಕೂಡ, ನಿತ್ಯವೂ ಅದೇ ರೀತಿಯಲ್ಲಿ ತಾವರೆಯ ಹೂಗಳನ್ನು ತಂದು ಪೂಜಿಸಿ, ವಂದಿಸಿ ಹೋಗುತ್ತಿತ್ತು. ಹೀಗೆ ಪುಣ್ಯವನ್ನು ಕೂಡಿಸಿಕೊಳ್ಳುತ್ತ ಕಾಲ ಕಳೆಯಲು, ಮತ್ತೊಂದು ದಿನ ಮಲಯಸುಂದರನು ತನ್ನ ಹಿಂದಿನ ಜನ್ಮದ ಮಡದಿಯರನ್ನು ಕಂಡು ಅತಿಶಯವಾದ ಪ್ರೀತಿಯಿಂದ ಸೇರಲು ಇಷ್ಟಪಟ್ಟಿತು. ಅದನ್ನು ಸುಂದರನೆಂಬ ಆನೆ ಕಂಡು,ಹತ್ತಿರ ಹೋಗಲಿಕ್ಕೇ ಬಿಡಲಿಲ್ಲ. ಆದುದರಿಂದ ಮಲಯಸುಂದರನು ಆ ಹೆಣ್ಣಾನೆಗಳ ವಿರಹದಿಂದ ಪರಿತಾಪಗೊಂಡ ಮನಸ್ಸುಳ್ಳದಾಗಿತ್ತು

ಸುಂದರನೆಂಬಾನೆ ಸಾರಲೀಯದುದಱಿಂ ತದ್ವಿರಹಪರಿತಪ್ತಮನದಿಂದಂ ಸಲ್ದುದಂ ನವಯೌವನಮನೆಯ್ದಿ ಆತ್ಮಬಲಮನದಱಿ ಬಲದೊಳ್ ವೃಕ್ಷಭಂಜನ ಸಾಮರ್ಥ್ಯದಿಂ ಪರೀಕ್ಷಿಸಿ ಮಜೆಯಾನೆಗಳಿಂ ಪರಿಭವಮನದರ್ಕೆ ಕಂದು ವೃದ್ಧನಪ್ಪಾ ಸುಂದರನೊಳ್ ಯುದ್ಧಂಗೆಯ್ದು ಕೊಂದಾ ಯೂಥಕ್ಕೆಲ್ಲಮಧಿಪತಿಯಾಗಿ ಮಲಯಾವತಿಯುಂ ಪದ್ಮಾವತಿಯುಮನೊಡಗೊಂಡಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತ ಮಾಯೆರಡುಂ ಪಿಡಿಗಳ್ ತಮ್ಮೊಳನ್ಯೋನ್ಯ ಸ್ನೇಹದೊಳ್ ಕೂಡಿದುವು ಮಲಯ ಸುಂದರನ್ ಬಲವ ದೆಸೆಯೊಳ್ ಮಲಯಾವತಿಗೆ ಪೋಪ [illegible]ಮನೆಡದ ದೆಸೆಯೊಳ್ ಪದ್ಮಾವತಿಗೆ ಪೋಪ ದಾಯಮನಿತ್ತಂತು ಪ್ರಭಂಕರಿಯೆಂಬ ಸರೋವರದೊಳ್ ಸ್ವೇಚ್ಛೆಯಿಂ ಕ್ರೀಡಿಸಿ ಪೊಱಮಡುವಾಗಳ್ ಮಲಯಾವತಿಯ ಮಸ್ತಕದೊಳ್ ವಿಕಸಿತ ಸಹಸ್ರಪತ್ರಕುಸುಮವನಿಡುವ ದಾಯಮಂ ಕೊಟ್ಟು ಸಲಿಸುತ್ತಂ ಉಚಿತ ಪಿಡಿಗಳೆಲ್ಲಮಂ ತೊಱೆದಾಯೆರಡಱೊಳಮಾಸಕ್ತನಾಗಿ ಕಾಮಭೋಗಂಗಳನನುಭವಿಸುತ್ತಮಿಂತು ಸುಖದೊಳಿರ್ಪ ಕಾಲದೊಳ್ ಮತ್ತೊಂದು ದಿವಸಂ ಪ್ರಭಂಕರಿಯೆಂಬ ಕೊಳದೊಳ್ ಸ್ವೇಚ್ಛೆಯಿಂ ನೀಡುಂ ಕ್ರೀಡಿಸುತ್ತಂ ತಡಂಬಂದು ಮನಃಪೂರ್ವಕಮಲ್ಲದೆ ಪೊಱಮಡುವಾಗಳ್ ಪದ್ಮಾವತಿ ಬಲದ ದೆಸೆಯೊಳಾಗಿ ಮಲಯಾವತಿ ಯೆಡದ ದೆಸೆಯೊಳಾಗಿ

ಅದು ಹೊಸ ಜವ್ವನವನ್ನು ಪಡೆದು, ತನ್ನ ಶಕ್ತಿಯಿಂದ ಮರಗಳನ್ನು ಮುರಿದು ತನ್ನ ಶಕ್ತಿಯನ್ನು ಪರೀಕ್ಷಿಸಿಕೊಂಡಿತು. ಮುದಿಯಾಗಿರುವ ಸುಂದರನು ಮರಿಯಾನೆಗಳೊಂದಿಗೆ ಕಾದಾಡಿದಾಗಲೇ ಸೋತುಹೋಗುವುದನ್ನೂ ಕಂಡಿತು. ಮಲಯಸುಂದರನು ಈಗ ಸುಂದರನೆಂಬ ಆ ಮುದಿಯಾನೆಯೊಡನೆ ಯುದ್ಧಮಾಡಿ, ಅದನ್ನು ಕೊಂದು ಆ ಆನೆಗಳ ಹಿಂಡಿಗೆಲ್ಲ ಒಡೆಯನಾಯಿತು. ಮಲಯಾವತಿಯನ್ನೂ ಪದ್ಮಾವತಿಯನ್ನೂ ಕೂಡಿಕೊಂಡು ತನ್ನ ಪ್ರೀತಿಯ ವಿಷಯಗಳಾದ ಕಾಮಸುಖಿಗಳನ್ನು ಅನುಭವಿಸುತ್ತಿತ್ತು. ಆ ಎರಡೂ ಹೆಣ್ಣಾನೆಗಳು ತಮ್ಮೊಳಗೆ ಪರಸ್ಪರ ಪ್ರೀತಿಯಿಂದ ಕೂಡಿಕೊಂಡವು. ಮಲಯಸುಂದರನು ತನ್ನ ಬಲಗಡೆಯಲ್ಲಿ ಹೋಗುವ ಅವಕಾಶವನ್ನು ಮಲಯಾವತಿಗೂ ಎಡಗಡೆಯಲ್ಲಿ ಹೋಗುವ ಅವಕಾಶವನ್ನು ಪದ್ಮಾವತಿಗೂ ಕೊಟ್ಟು, ಅಂತು ಪ್ರಭಂಕರಿಸರೋವರದಲ್ಲಿ ತನ್ನ ಇಚ್ಛೆಯ ಪ್ರಕಾರ ಆಡಿ ಹೊರಟು ಬರುವಾಗ ಮಲಯಾವತಿಯ ತಲೆಯಲ್ಲಿ ಅರಳಿದ ಸಾವಿರದಳದ ಹೂವನ್ನು ಇಡುವ ಮರ್ಯಾದೆಯ ಅವಕಾಶಕೊಟ್ಟು, ಈ ಗೌರವವನ್ನು ನಿತ್ಯವೂ ಸಲ್ಲಿಸುತ್ತಿತ್ತು. ಉಳಿದ ಹೆಣ್ಣಾನೆಗಳೆಲ್ಲವನ್ನೂ ಬಿಟ್ಟು ಆ ಎರಡರಲ್ಲಿ ಮಾತ್ರ ಪ್ರೀತಿಯುಳ್ಳದಾಗಿ ಕಾಮಸುಖಗಳನ್ನು ಅದು ಅನುಭವಿಸುತ್ತಿತ್ತು. ಹೀಗೆ ಸುಖದಿಂದ ಇರುವ ಕಾಲದಲ್ಲಿ, ಆ ಮೇಲೆ ಒಂದು ದಿನ ಪ್ರಭಂಕರಿಯೆಂಬ ಸರೋವರದಲ್ಲಿ ತನ್ನ ಇಚ್ಛೆಯ ಪ್ರಕಾರ ಹೆಚ್ಚು ಕಾಲ ಆಡಿ ತಡಮಾಡಿ, ಗೊಡವೆಯೇ ಇಲ್ಲದೆ ಹೊರಡುವಾಗ ಪದ್ಮಾವತಿ ಅದರ ಬಲಗಡೆಯಾಗಿಯೂ ಮಲಯಾವತಿ ಎಡಗಡೆಯಾಗಿಯೂ ಹೊರಟು ಬಂದುವು. ಮದದಿಂದ ಸೊಕ್ಕೇರಿದ ಆ ಮಲಯಸುಂದರನು ಮತ್ತಿನಿಂದ ಮೈಮೇಲಿನ ಎಚ್ಚರವಿಲ್ಲದೆ, ಬಲಗಡೆಯಲ್ಲಿದ್ದ ಪದ್ಮಾವತಿಯನ್ನು ಮಲಯಾವತಿಯೆಂದು ಭ್ರಮಿಸಿ, ಆ ಪದ್ಮಾವತಿಯ ತಲೆಯಲ್ಲಿ ಅರಳಿದ ಸಾವಿರದೆಸಳಿನ ಹೂವನ್ನು ಇಟ್ಟಿತು. ಮಲಯಾವತಿ ಇದನ್ನು ನೋಡಿತು. ಮಲಯಸುಂದರನು ತನ್ನನ್ನು ತಿರಸ್ಕಾರಮಾಡಿದನೆಂದು ಭಾವಿಸಿತು

ಪೊಜಮಟ್ಟು ಬರೆ ಮದಾಂಧಗಂಧಸಿಂಧುರಂ ಮದದಿಂ ಮೆಯ್ಮಱೆಯದೆ ಬಲದ ದೆಸೆಯೊಳಿರ್ದ ಪದ್ಮಾವತಿಯಂ ಮಲಯಾವತಿಗೆತ್ತು ಪದ್ಮಾವತಿಯ ಮಸ್ತಕದೊಳ್ ವಿಕಸಿತ ಸಹಸ್ರಪತ್ರ ಕುಸುಮಮನಿಟ್ಟೊಡೆ ಮಲಯಾವತಿ ನೋಡಿ ತನ್ನಂ ಪರಿಭವಿಸಿದನೆಂದು ಪದ್ಮಾವತಿಯೊಳಪ್ಪ ಪುರುಡುಂ ಕಾರಣಮಾಗಿ ಮುಳಿಸಿನಿಂದಂ ಚಂದನಮಲಯಪರ್ವತದ ತುತ್ತ ತುದಿಯಂ ಬೇಗಂ ಪರಿದಡರ್ದಂತಲ್ಲಿಂದಂ ತನ್ನನಿಕ್ಕಿ ಮಲಯಾವತಿ ಶತಖಂಡಮಾಗಿ ಬಿಟ್ಟು ಸತ್ತತ್ತದಱ ಸತ್ತುದಂ ಮಲಯಸುಂದರಂ ಕಂಡು ಮಲಯಾವತಿಯ ವಿಯೋಗದೊಳಾದಮಾನುಂ ದುಃಖಂಗೈದು ಪದ್ಮಾವತಿಯನೊಡಗೊಂಡು ಪೋಯ್ತು ಮತ್ತಾ ಮಲಯಾವತಿಯೆಂಬ ಪಿಡಿ ಸತ್ತು ಸುಕೇಶಿನಿಯೆಂಬೊಳಾದಳಾ ಪದ್ಮಾವತಿಯೆಂಬ ಪಿಡಿಯುಮಾಯುಷ್ಕಾಂತದೊಳ್ ಸತ್ತು ಸುಕೇಶಿನಿಯ ತಾಯ್ ಸುರೂಪೆಯ ಸೋದರ ತಮ್ಮಂ ವರಾಂಗನಾದೊಂ ಮತ್ತಾ ಮಲಯಸುಂದರನಿಂದಂ ಕೊಲೆ ಸತ್ತ ಸುಂದರನೆಂಬಾನೆ ಸುವೇಗನೆಂಬ ವಿದ್ಯಾಧರನಿಂದಂ ಪೂಜಿಸಿಪಟ್ಟ ಚಾರಣರಿಷಿಯರ ಪಾದಪದ್ಮಯುಗಳಂಗಳುಮಂ ನೋಡಿಯುಪಶಮಕ್ಕೆ ಸಂದು ತಾನುಂ ತಾಮರೆಯ ಪೂಗಳಂ ತಂದು ಪ್ರತಿದಿನಮರ್ಚಿಸಿ ಪೂಜಿಸಿ ಪೊಡೆಮಟ್ಟು ಪೋಕುಮಾ ಚಾರಣರಿಷಯರಡಿವೊಣರನರ್ಚಿಸಿದ ಪುಣ್ಯದಿಂದಂ ಸತ್ತಿಲ್ಲಿ ನೀಂ ಚಂಪಾಪುರಕ್ಷಧಿಪತಿಯಯ್ ಗಂಧಭಾಜನನೆಂಬರಸನಾದಯ್ ಸುಕೇಶಿನಿಯುಂ ಜಾತಿಸ್ಮರೆಯಾಗಿ ತನ್ನ ಮುನ್ನಿನ ಭವದ ಭರ್ತಾರನಪ್ಪ ಮಲಯಸುಂದರನಂ ನೆನೆದು ನಿನ್ನಿಂದಂ ಕೊಲೆ ಸತ್ತುದಱ ಕೋಟ್ಯಳನಾದಮಾನುಂ ಬಿಗಿದಪ್ಪಿಕೊಂಡು ಸತ್ತುದರ್ಕಿದು ಕಾರಣಂ ಮತ್ತೆ ನೀಂ

ಪದ್ಮಾವತಿಯ ಮೇಲೆ ಉಂಟಾದ ಹೊಟ್ಟೆಕಿಚ್ಚು ಕಾರಣವಾಗಿ ಕೋಪಗೊಂಡು ಬೇಗನೆ ಹೋಗಿ ಚಂದನ ಮಲಯಪರ್ವತದ ತುತ್ತತುದಿಯನ್ನೇರಿ, ಅಲ್ಲಿಂದ ಕೆಳಕ್ಕೆ ಬಿದ್ದು, ಮಲಯಾವತಿಯು ನೂರಾರು ತುಂಡಾಗಿ ಸತ್ತುಹೋಯಿತು. ಅದು ಸತ್ತುದನ್ನು ಮಲಯಸುಂದರನು ಕಂಡು, ಮಲಯಾವತಿಯ ಅಗಲಿಕೆಯಿಂದ ಅತ್ಯಂತ ದುಃಖಿಸಿ, ಪದ್ಮಾವತಿಯನ್ನು ಕೂಡಿಕೊಂಡು ಹೋಯಿತು. ಅನಂತರ, ಆ ಮಲಯಾವತಿಯೆಂಬ ಹೆಣ್ಣಾನೆ ಸತ್ತು ಸುಕೇಶಿನಿ ಎಂಬವಳಾದಳು. ಆ ಪದ್ಮಾವತಿಯೆಂಬ ಹೆಣ್ಣಾನೆಯೂ ಆಯುಷ್ಯ ಕೊನೆಗೊಳ್ಳಲು ಸತ್ತು ಸುಕೇಶಿನಿಯ ತಾಯಿಯಾದ ಸುರೂಪೆಯ ಸೋದರ ತಮ್ಮನಾದ ವರಾಂಗನೆಂಬವನಾದನು. ಅಲ್ಲದೆ, ಆ ಮಲಯಸುಂದರನು ಕೊಂದುದರಿಂದ ಸತ್ತ ಸುಂದರನೆಂಬ ಆನೆ ತಾನು ಸಾಯುವುದಕ್ಕೆ ಮೊದಲು ಸುವೇಗನೆಂಬ ವಿದ್ಯಾಧರನಿಂದ ಪೂಜಿತನಾದ ಚಾರಣ ಋಷಿಗಳ ಎರಡು ಪಾದಕಮಲಗಳನ್ನು ನೋಡಿ, ಶಾಂತತೆಯನ್ನು (ಸಮತ್ವಭಾವವನ್ನು) ಹೊಂದಿ ತಾನು ಕೂಡ, ತಾವರೆಯ ಹೂಗಳನ್ನು ತಂದು ಪ್ರತಿದಿನವೂ ಅರ್ಚನೆ ಮಾಡಿ ಪೂಜಿಸಿ ವಂದಿಸಿ ಹೋಗುತ್ತಿತ್ತು. ಆ ಚಾರಣ ಋಷಿಗಳ ಪಾದಯುಗ್ಮವನ್ನು ಅರ್ಚಿಸಿದ ಪುಣ್ಯದಿಂದಾಗಿ ಸತ್ತ ಮೇಲೆ, ಇಲ್ಲಿ ನೀನು ಈಗ ಚಂಪಾಪುರಕ್ಕೆ ಒಡೆಯನಾದ ಗಂಧಭಾಜನನೆಂಬ ರಾಜನಾಗಿರುವೆ. ಸುಕೇಶಿನಿ ಪೂರ್ವಜನ್ಮದ ನೆನಪನ್ನು ಪಡೆದು, ತನ್ನ ಹಿಂದಿನ ಜನ್ಮದ ಗಂಡನಾದ ಮಲಯಸುಂದರನನ್ನು ಸ್ಮರಿಸಿ, ನೀನು ಕೊಂದುದರಿಂದ ಸತ್ತ ಮಲಯಸುಂದರನ ಕೊಂಬುಗಳನ್ನು ಅತಿಶಯವಾಗಿ ಬಿಗಿದಪ್ಪಿಕೊಂಡು ಸಾಯಲು ಇದು ಕಾರಣವಾಗಿದೆ. ಆಮೇಲೆ, ನೀನು ಪೂರ್ವಜನ್ಮದಲ್ಲಿ ಸುಂದರನೆಂಬ ಆನೆಯಾಗಿದ್ದು

ಮುನ್ನೆ ಸುಂದರನೆಂಬಾನೆಯಾಗಿ ಚಾರಣರಿಷಿಯರ ಪಾದಯುಗಳಂಗಳನರ್ಚಿಸುವಂದು ನಿನ್ನಂ ಕಂಡಾಯೆರಡುಂ ಪಿಡಿಗಳ್ ನಿನ್ನೊಡವೋಗಿಯರ್ಚಿಸಿ ಪುಣ್ಯಮಂ ನೆರಪಿದ ಫಲದಿಂದಂ ಸುಕೇಶಿನಿಯುಂ ವರಾಂಗನುಮಾದರೆಂದು ಯಶೋಧರಕೇವಲಿಗಳ್ ಸವಿಸ್ತರಂ ಪೇಟ್ಟೊಡೆ ಗಂಧಭಾಜನನೆಂಬರಸಂ ಕೇಳ್ದು ಮತ್ತಮಿಂತೆಂದಂ ಭಟಾರಾ ಸುಕೇಶಿನಿ ಸತ್ತೀಗಳಿಲ್ಲಿ ಪುಟ್ಟದಳಿಂದು ಬಿಸಗೊಂಡೊಡೆ ಭಟಾರರಿಂತೆಂದು ಪೇಟ್ದರ್ ಸುರಟಮೆಂಬುದು ನಾಡಲ್ಲಿ ಗಿರಿನಗರವೆಂಬುದು ಪೊಬಲದನಾಳ್ವಂ ನಿನ್ನಾಳ್ ಮಹಾಸಾಮಂತನತಿರಥನೆಂಬೊನಾತನರಸಿ ಗೌರಿಯೆಂಬಳಾ ಇರ್ವರ್ಗ್ಗಂ ಸುಕೇಶಿನಿ ಸತ್ತು ಮನೋಹರಿಯೆಂಬೊಳ್ ಮಗಳಾಗಿ ಪುಟ್ಟದಳ್ ಮತ್ತಾ ಅರಸನ ಮಂತ್ರಿ ವಿಜಯನೆಂಬೊನಾತನ ಭಾರ್ಯೆ ವೀರಶ್ರೀಯೆಂಬೊಳಾ ಇರ್ವರ್ಗ್ಗಂ ಮಲಯಸುಂದರಂ ಸತ್ತು ಕುಬೇರಕಾಂತನೆಂಬೊಂ ಮಗನಾಗಿ ಪುಟ್ಟದೊಂ ವಿಭವೈಶ್ವರ್ಯಂಗಳಿಂದಂ ಕುಬೇರನೊಳೋರನ್ನನಪ್ಪೊಂ ಮತ್ತಾ ಪೊಬಲೊಳ್ ರಾಜಶ್ರೇಷ್ಠಿ ಧನದನೆಂಬೊನಾತನ ಪರದಿ ಧನಶ್ರೀಯೆಂಬೊಳಾ ಇರ್ವರ್ಗ್ಗಂ ಮಲಯಸುಂದರಂ ಸತ್ತುದಂ ಸುಕೇಶಿನಿ ಕಂಡು ಸೈರಿಸಲಾಱದೆ ಪ್ರಾಣಪರಿತ್ಯಾಗಂಗೆಯ್ದಳಂ ನೆನೆದು ದ್ರವ್ಯತಪದೊಳ್ ಕೂಡಿ ತಪಂಗೆಯ್ದು ವರಾಂಗಂ ಸತ್ತು ಶ್ರೀಧರನೆಂಬೊಂ ಮಗನಾಗಿ ಪುಟ್ಟದೊನಾತನ ಭಾರ್ಯೆ ಕುಬೇರಶ್ರೀಯೆಂಬೊಳಾ ಶ್ರೀಧರಂ ಕುಬೇರಕಾಂತಂಗಿಷ್ಟಮಿತ್ರನಾಗಿ ಸಲೆ ಮತ್ತೊಂದು ದಿವಸಂ ಶ್ರೀಧರಂ ಕುಬೇರಕಾಂತನೊದನೆ ಮಱಲುಂದಿಯಾತನ ರತ್ನಕಂಬಳಮಂ ಪೊದೆದು ತನ್ನ ಮನೆಗೆ

ಚಾರಣಋಷಿಗಳ ಎರಡುಪಾದಗಳನ್ನು ಅರ್ಚಿಸುವಾಗ ನಿನ್ನನ್ನು ಕಂಡು ಆ ಎರಡೂ ಹೆಣ್ಣಾನೆಗಳು ನಿನ್ನ ಒಟ್ಟಿಗೆ ಹೋಗಿ ಪೂಜಿಸಿ ಪುಣ್ಯವನ್ನು ಗಳಿಸಿದ ಫಲದಿಂದ ಸುಕೇಶಿನಿಯೂ ವರಾಂಗನೂ ಆದರು. ಹೀಗೆಂದು ಯಶೋಧರಮುನಿಗಳು ವಿಸ್ತಾರವಾಗಿ ಹೇಳಲು ಗಂಧಭಾಜನನೆಂಬ ರಾಜನು ಕೇಳಿ, ಆಮೇಲೆ ಹೀಗೆಂದನು - ಸ್ವಾಮೀ, ಸುಕೇಶಿನಿ ಮಡಿದು ಈಗ ಎಲ್ಲಿದ್ದಾಳೆ ? - ಎಂದು ಕೇಳಿದನು. ಆಗ ಯಶೋಧರಮುನಿಗಳು ಹೀಗೆಂದರು - ಸುರಟ ಎಂಬ ನಾಡಿನಲ್ಲಿ ಗಿರಿನಗರ ಎಂಬ ಪಟ್ಟಣವಿದೆ. ಅದನ್ನು ಆಳುವವನು ನಿನ್ನ ಸೇವಕನೆನಿಸಿರುವ ಮಹಾಸಾಮಂತನಾದ ಅತಿರಥನೆಂಬವನು. ಅವನ ಪತ್ನಿ ಗೌರಿಯೆಂಬವಳು. ಸುಕೇಶಿನಿ ಸತ್ತು ಪುನರ್ಜನ್ಮದಲ್ಲಿ ಆ ಇಬ್ಬರಿಗೂ ಮನೋಹರಿ ಎಂಬ ಮಗಳಾಗಿ ಹುಟ್ಟಿದಳು. ಆ ಮೇಲೆ, ಆ ರಾಜನ ಮಂತ್ರಿ ವಿಜಯನೆಂಬವನು. ಅವನ ಪತ್ನಿ ವೀರಶ್ರೀ ಎಂಬವಳು. ಮಲಯಸುಂದರನು ಸತ್ತು, ಆ ಇಬ್ಬರಿಗೂ ಕುಬೇರಕಾಂತನೆಂಬ ಮಗನಾಗಿ ಜನಿಸಿದನು. ಅವನು ವೈಭವ ಸಂಪತ್ತುಗಳಿಂದ ಕುಬೇರನಿಗೆ ಸರಿಯಾದವನಾಗಿದ್ದನು. ಮತ್ತು ಆ ಪಟ್ಟಣದಲ್ಲಿ ಸೆಟ್ಟಿಗಳಿಗೆ ರಾಜನೆನಿಸಿದ ಧನದನೆಂಬವನಿದ್ದನು. ಅವನ ಮಡದಿ ಧನಶ್ರೀಯೆಂಬವಳು. ಮಲಯಸುಂದರನು ಸತ್ತುದನ್ನು ಸುಕೇಶಿನಿ ಕಂಡು ಸಹಿಸಲಾರದೆ ಪ್ರಾಣಬಿಟ್ಟುದನ್ನು ವರಾಂಗನು ನೆನಸಿಕೊಂಡು ಮಿಥ್ಯಾತಪಸ್ಸಿನಲ್ಲಿ ಸೇರಿಕೊಂಡು ತಪಸ್ಸುಮಾಡಿ ಸತ್ತು ಆ ಧನದ - ಧನಶ್ರೀಯೆಂಬ ಇಬ್ಬರಿಗೆ ಶ್ರೀಧರನೆಂಬ ಮಗನಾಗಿ ಹುಟ್ಟಿದನು. ಅವನ ಹೆಂಡತಿ ಕುಬೇರಶ್ರೀಯೆಂಬವಳು. ಆ ಶ್ರೀಧರನು ಕುಬೇರಕಾಂತನಿಗೆ ಪ್ರೀತಿಮಿತ್ರನಾಗಿದ್ದನು. ಹೀಗೆ ಕಳೆಯಲು, ಮತ್ತೊಂದು ದಿನ ಶ್ರೀಧರನು ಕುಬೇರಕಾಂತನೊಡನೆ ನಿದ್ರೆಮಾಡಿ ಅವನ ರತ್ನಕಂಬಳಿಯನ್ನು ಹೊದೆದುಕೊಂಡು ತನ್ನ ಮನೆಗೆ ಬಂದನು. ಅವನನ್ನು ಕುಬೇರಶ್ರೀ ಕಂಡು ತನ್ನ ಗಂಡನು

ಬಪ್ಪೊನಂ ಕಂದು ಸವತಿಯೊಳಪ್ಪ ಶಂಕೆಯಿಂದಂ ಪ್ರಾಸಾದದ ಮೇಗಣಿಂದಂ ನೆಲಕ್ಕಿಕ್ಕಿ ಬಿಟ್ಟು ಸತ್ತೊಳಾ ಸತ್ತೊಳಂ ಶ್ರೀಧರಂ ಕಂಡಾದಮಾನುಂ ದುಃಖಂಗೈದು ಶೋಕಾಭಿಭೂತನಾಗಿರ್ದೊನಂ ಕುಬೇರಕಾಂತಂ ಬಂದು ಕಂದು ಶ್ರೀಧರಾ ಪರಮಮಿತ್ರಾ ಇಂತೇಕೆ ಬರ್ದಿ ಬಂಬಳಂ ಬಾಡಿ ಪಾಡಟೆದುಬ್ಬಿಗಂಬಟ್ಟರ್ದ್ದೆಯೆಂದು ಬಿಸಗೊಂಡೊಡೆ ತನ್ನ ಕೆಳೆಯಂಗಿಂತೆಂದು ಶ್ರೀಧರಂ ಪೇಟ್ಪುಂ ನಿನ್ನ ರತ್ನಕಂಬಳಮಂ ಪೊದೆದು ಮನೆಗೆ ವಂದೊಡೆ ಸವತಿಯೊಳವ್ವ ಶಂಕೆಯಿಂದೆನ್ನ ಭಾರ್ಯೆ ಕುಬೇರಶ್ರೀ ಮಾಡದ ಮೇಗಣಿಂದಂ ತನ್ನಂ ನೆಲಕ್ಕಿಕ್ಕಿ ಬಿಟ್ಟು ಸತ್ತಳಿನ್ನುಮಾಯಿರ್ದ್ದಳೆಂದು ತೋಱೆದೊಡೆ ಕುಬೇರಕಾಂತಂ ನೋಡೆ ನೋಡೆ ಜಾತಿಸ್ಮರನಾಗಿ ಕೆಳೆಯಂಗಿಂತೆಂದು ಪೇಟ್ಪುಮೆನ್ನ ಪೆಂಡತಿ ಮಲಯಾವತಿಯಪ್ಪ ಪಿಡಿ ಪುರುದಿನಿಂದಂ ಚಂದನಮಲಯಮೆಂಬ ಪರ್ವತದ ಶಿಖರದಿಂದಂ ತನ್ನನಿಕ್ಕಿ ಸತ್ತಂತೆ ನಿನ್ನ ಪೆಂಡತಿಯುಂ ಸತ್ತಳೆಂದು ಪೇಟ್ಪುಬ್ಬಿಗಂಬಡಲ್ವೇಡೆಂದು ಸಂತಯಿಸಿ ತನ್ನ ಮನೆಗೆ ಪೋಗಿ ಜಾತಿಸ್ಮರನಪ್ಪುದಱಿಂ ಕುಬೇರಕಾಂತಂ ತನ್ನ ಮುನ್ನಿನ ಮಲಯಸುಂದರನಪ್ಪ ಭವದ ನೆಗಟ್ಪಿಗಳೆಲ್ಲಮಂ ಮಲಯಾವತಿ ಪದ್ಮಾವತಿ ಮೊದಲಾಗಿ ಕರಿಣೀವ್ಯಂದಸಹಿತಂ ವನಹಸ್ತಿಕ್ರೀಡೆಗಳೆಲ್ಲಮನೊಂದು ಪಟದೊಳ್ ಬರೆದದಂ ನೋದುತ್ತಂ ಪಾದುತ್ತಂ ಹಾ ಎನ್ನ ಮಲಯಾವತಿ ಹಾ ಎನ್ನ ನಲ್ಲಳೆ ನೀನೀಗಳೆಲ್ಲಿರ್ದ್ದೆಯೆಂದಱಸುತ್ತಂ ಮರುಳ್ಗೊಂದು ವ್ಯಳಾಪಂಗೆಯ್ಯುತ್ತಂ

ಸವತಿಯಲ್ಲಿ ಆಸಕ್ತನಾಗಿರುವನೆಂಬ ಸಂಶಯದಿಂದ ಮೇಲುಪ್ಪರಿಗೆಯಿಂದ ಕೆಳನೆಲಕ್ಕೆ ಹಾರಿ ಬಿದ್ದು ಸತ್ತಳು. ಹಾಗೆ ಸತ್ತವಳನ್ನು ಶ್ರೀಧರನು ಕಂಡು ಅತ್ಯಂತವಾಗಿ ಮರುಗಿ, ದುಃಖಿದಿಂದ ಹೊಡೆಯಲ್ಬಟ್ಟವನಾಗಿದ್ದನು. ಆಗ ಕುಬೇರಕಾಂತನು ಬಂದು ಅವನನ್ನು ಕಂಡು "ಪರಮ ಸ್ನೇಹಿತನಾದ ಶ್ರೀಧರನೇ, ಹೀಗೆ ಯಾಕೆ ಸೊರಗಿ ಬಹಳ ಬಾಡಿಹೋಗಿರುವೆ ? ಸ್ಥಿತಿಕೆಟ್ಟು ಉದ್ವೇಗಗೊಂಡಿರುವೆ?" ಎಂದು ಕೇಳಿದನು. ಶ್ರೀಧರನು ತನ್ನ ಗೆಳೆಯನಿಗೆ ಈ ರೀತಿಯಾಗಿ ಹೇಳಿದನು - ನಾನು ನಿನ್ನ ರತ್ನಗಂಬಳಿಯನ್ನು ಹೊದೆದುಕೊಂಡು ಮನೆಗೆ ಬಂದಾಗ ನನ್ನ ಮಡದಿ ಕುಬೇರಶ್ರೀಯು ಸವತಿಯಲ್ಲಿ ಆದ ಸಂಶಯದಿಂದ ಉಪ್ಪರಿಗೆಯ ಮೇಲಿನಿಂದ ಕೆಳಗೆ ಹಾರಿಬಿದ್ದು ಸತ್ತಳು. ಇನ್ನೂ ಅಗೋ ಅಲ್ಲಿದ್ದಾಳೆಂದು ಆಕೆಯ ದೇಹವನ್ನು ತೋರಿಸಿದನು. ಆಗ ಕುಬೇರಕಾಂತನು ನೋಡುನೋಡುತ್ತಲೇ ಪೂರ್ವಜನ್ಮದ ಸ್ಮರಣೆಯನ್ನು ಪಡೆದು ತನ್ನ ಗೆಳೆಯನಿಗೆ ಹೀಗೆಂದನು - "ನನ್ನ ಹೆಂಡತಿಯಾಗಿದ್ದ ಮಲಯಾವತಿಯೆಂಬ ಹೆಣ್ಣಾನೆ ಹೊಟ್ಟೆಕಿಚ್ಚಿನಿಂದ ಚಂದನಮಲಯವೆಂಬ ಪರ್ವತದ ತುದಿಯಿಂದ ತಾನೇ ಕೆಳಗೆ ಹಾರಿ ಬಿದ್ದು ಸತ್ತ ರೀತಿಯಲ್ಲಿಯೇ ನಿನ್ನ ಹೆಂಡತಿಯೂ ಸತ್ತಳು" - ಎಂದು ಹೇಳಿದನು. 'ವ್ಯಸನ ಪಡಬೇಡ' ಎಂದು ಅವನನ್ನು ಸಮಾಧಾನಪಡಿಸಿ ತನ್ನ ಮನೆಗೆ ಹೋದನು. ಪೂರ್ವಜನ್ಮದ ಸ್ಮರಣೆಯುಳ್ಳವನಾದುದರಿಂದ ಕುಬೇರಕಾಂತನು ತಾನು ಹಿಂದೆ ಮಲಯಸುಂದರನಾಗಿದ್ದ ಜನ್ಮದಲ್ಲಿ ಮಾಡಿದುದೆಲ್ಲವನ್ನೂ ಮಲಯಾವತಿ ಪದ್ಮಾವತಿ ಮುಂತಾದ ಹೆಣ್ಣಾನೆಗಳ ಹಿಂಡಿನೊಡನೆ ನಡೆಸಿದ ಆಟಗಳೆಲ್ಲವನ್ನೂ ಒಂದು ಚಿತ್ರಪಟದಲ್ಲಿ ಬರೆದು, ಅದನ್ನು ನೋಡುತ್ತ ಹಾಡುತ್ತಾ "ಹಾ, ನನ್ನ ಮಲಯಾವತೀ, ಹಾ ನನ್ನ ಪ್ರಿಯತಮಳೇ, ನೀನು ಈಗ ಎಲ್ಲಿರುವೆ?" ಎಂದುಕೊಂಡು ಹುಡುಕುತ್ತ ಹುಚ್ಚನಂತಾಗಿ ಗೋಳಾಡುತ್ತ ಉಜ್ಜಯಂತ

ಉಜ್ಜಯಂತಪರ್ವತಮಂ ಬಲಗೊಂದು ಬರ್ಪೊನಂ ಚಿತ್ರಾಂಗದನೆಂಬ ವಿದ್ಯಾಧರಂ ಕಂಡು ಕರುಣಿಸಿ ಧರ್ಮವಾತ್ಸಲ್ಯದಿಂದಂ ತನ್ನ ಕಾಮಮುದ್ರಿಕೆಯಂ ಸ್ವೀಪ್ಸಿತ ಕಾರ್ಯಸಿದ್ಧಿಯಂ ಮಾಡುವ ವಿದ್ಯೆಯಂ ಕುಬೇರಕಾಂತಂಗೆ ಕೊಟ್ಟಂ ಕುಬೇರಕಾಂತನುಂ ವಿದ್ಯಾದೇವತೆಯಂ ಬಿಸಗೊಂಡೆನ್ನ ಮುನ್ನಿನ ಭವದ ಪ್ರಾಣವಲ್ಲಭೆಯಲ್ಲಿರ್ದಳೆನೆ ವಿದ್ಯಾದೇವತೆಯೆಂದಳ್ ನಿನ್ನ ಪ್ರಾಣವಲ್ಲಭೆಯತಿರಥನೆಂಬರಸಂಗೆ ಮಗಳ್ ಮನೋಹರಿಯಾಗಿರ್ದಳೆಂದು ವಿದ್ಯಾದೇವತೆ ಪೇಳೆ ಕೇಳ್ದಲೆದು ಪಿಶಾಚವೇಷಮಂ ಕೈಕೊಂಡರಮನೆಯಂಗಣದೊಳಿರ್ದು ಪಟಮಂ ನಿಮಿರ್ಚಿಯೆತ್ತಿ ತೋಱೆ ಪಾಡುತ್ತಮಿರೆ ಮಲಯಾವತಿ ಹಾ ಎನ್ನ ಕಾದಲಳೆ ನೀನೀಗಳಿಲ್ಲಿರ್ದ್ದೆಯೆಂದು ಪಾದುವುದಂ ಕೇಳ್ದು ಪಟಮಂ ನೋದಿ ಮನೋಹರಿ ಜಾತಿಸ್ಮರೆಯಾಗಿ ತನ್ನ ಮುನ್ನಿನ ಭವಮನಱೆದು ದಾಮರಥಿಯೆಂಬ ತನ್ನ ದಾದಿಗೊಸಗೆಯಿಂದ ಮಿಂತೆಂದಳೀಯಂಗಣದೊಳ್ ಪಟಮಂ ತೋಱುವಾತನೆನ್ನ ಮುನ್ನಿನ ಭವದ ಭರ್ತಾರನೆಂದು ಪೇಟ್ದು ಮತ್ತಮಿಂತೆಂದಳಬ್ಬಾ ನೀನೆನ್ನ ಪ್ರಾಣಮಂ ಕಾವುದು ಕಾರಣಮಾಗಿ ಆತನಲ್ಲಿಗೆವ್ಪೋಗಿ ಏಕಾಂತದೊಳಿಂತೆಂದು ಪೇಟ್ ವದ್ಮಾವತಿಯ ತಲೆಯೊಳಟ್ಟಿಯಿಂದಂ ನೀಂ ತಾವರೆಯ ಪೂವಂ ಮುನ್ನವಿಟ್ಟು ಮಲಯಾವತಿ ಪ್ರಾಣವಲ್ಲಭೆ ಎಲ್ಲಿರ್ದ್ದೆಯೆಂದೀಗಳೀಕೆ ಮಲಯಸುಂದರಾ ನೀನಾರಯ್ದಪ್ಪೆಯೆಂದು ಪೇಟ್ದು ಮತ್ತಮಿಂತೆಂದು ಪೇಟ್ ನಿನ್ನ ಪ್ರಾಣವಲ್ಲಭೆ ನಿನ್ನನೆಯಱಿಸಿ

ಪರ್ವತವನ್ನು ಪ್ರದಕ್ಷಿಣ ಮಾಡುತ್ತ ಬರುತ್ತಿದ್ದನು. ಅವನನ್ನು ಚಿತ್ರಾಂಗದನೆಂಬ ವಿದ್ಯಾಧರನು ಕಂಡು ಕರುಣೆಗೊಂಡನು. ತನ್ನ ಧರ್ಮಕ್ಕೆ ಅನುಗುಣವಾದ ಪ್ರೀತಿಯಿಂದ, ಅವನು ಕುಬೇರಕಾಂತನಿಗೆ ತನ್ನ ಕಾಮಮುದ್ರಿಕೆಯನ್ನು ತಾನು ಬಯಸಿದ ಕಾರ್ಯವನ್ನು ಕೈಗೂಡಿಸುವ ವಿದ್ಯೆಯನ್ನು ಕೊಟ್ಟನು. ಕುಬೇರಕಾಂತನು ವಿದ್ಯಾದೇವತೆಯನ್ನು ಕುರಿತು "ನನ್ನ ಹಿಂದಿನ ಜನ್ಮದ ಪ್ರಾಣದರಸಿ ಎಲ್ಲಿದ್ದಾಳೆ" ಎಂದು ಕೇಳಿದನು. ಆಗ ವಿದ್ಯಾದೇವತೆ ಹೀಗೆ ಹೇಳಿದಳು - "ನಿನ್ನ ಪ್ರಾಣದರಸಿ ಅತಿರಥನೆಂಬ ಅರಸನಿಗೆ ಮನೋಹರಿಯೆಂಬ ಮಗಳಾಗಿ ಇದ್ದಾಳೆ" - ಹೀಗೆ ವಿದ್ಯಾದೇವತೆ ಹೇಳಲು, ಕುಬೇರಕಾಂತನು ಕೇಳಿ ತಿಳಿದುಕೊಂಡು ಹುಚ್ಚನ ರೂಪವನ್ನು ತಾಳಿಕೊಂಡು, ಅರಮನೆಯ ಅಂಗಳದಲ್ಲಿ ಇದ್ದ ಚಿತ್ರಪಟವನ್ನು ಸುರುಳಿಬಿಚ್ಚಿ ನೇರವಾಗಿರಿಸಿ, ಎತ್ತಿ ತೋರಿಸಿ ಹಾಡುತ್ತ - "ಎಲೆ ಮಲಯಾವತೀ, ಹಾ ನನ್ನ ಪ್ರಿಯಳೇ! ನೀನು ಈಗ ಎಲ್ಲಿರುವೆ?" - ಎಂದು ಹಾಡುತ್ತಿದ್ದನು. ಹಾಗೆ ಹಾಡುವುದನ್ನು ಕೇಳಿದ ಮನೋಹರಿ ಪಟವನ್ನು ನೋಡಿ ಪೂರ್ವದ ನೆನಪನ್ನು ಹೊಂದಿ, ತನ್ನ ಹಿಂದಿನ ಜನ್ಮವೃತ್ತಾಂತವನ್ನು ತಿಳಿದು ದಾಮರಥಿಯೆಂಬ ತನ್ನ ಸೇವಕಿಗೆ ಸಂತೋಷದಿಂದ ಹೀಗೆ ಹೇಳಿದಳು - "ಈ ಅಂಗಳದಲ್ಲಿ ಚಿತ್ರಪಟ ತೋರಿಸುವವನು ಹಿಂದಿನ ಜನ್ಮದಲ್ಲಿ ನನ್ನ ಗಂಡನಾಗಿದ್ದವನು." ಹೀಗೆ ಹೇಳಿ, ಅನಂತರ ಅವಳೊಡನೆ ಹೀಗೆಂದಳು- ತಾಯೇ ನೀನು ನನ್ನ ಪ್ರಾಣವನ್ನು ಉಳಿಸುವ ಕಾರಣಕ್ಕಾಗಿ ಅತನಲ್ಲಿಗೆ ಹೋಗಿ, ಅವನೊಬ್ಬನೇ ಇರುವ ವೇಳೆಯಲ್ಲಿ ಹೀಗೆ ಹೇಳು ಎಲೈ ಮಲಯಸುಂದರಾ, ನೀನು ಪದ್ಮಾವತಿಯ ತಲೆಯ ಮೇಲೆ ಮೊದಲು ತಾವರೆಯ ಹೂವನ್ನಿಟ್ಟು, ಪ್ರಾಣದರಸಿಯಾದ ಮಲಯಾವತಿಯೇ ಎಲ್ಲಿರುವೆ ? ಎಂದು ಯಾಕೆ ವಿಚಾರಿಸುತ್ತಿರುವೆ ? ಎಂದು ಹೇಳಿ, ಆಮೇಲೆ ಹೀಗೆ ಹೇಳು - ನಿನ್ನ ಪ್ರಾಣದರಸಿ ನಿನ್ನನ್ನೇ ಹುಡುಕಿಕೊಂಡು ಬಯಸಿಕೊಂಡು

ಬಯಸುತ್ತಿರ್ಪಳಾಕೆ ನಿನ್ನೊಳ್ ಕೂಡುವನ್ನೆಗಮೀ ಪಟಮಂ ತೋಱಿಯಾಕೆಯ ಪ್ರಾಣಮಂ ಕಾವೆನೆಂದು ಪಟವುಂ ಬೇಡಿಕೊಂಡು ಬಾ ಎಂದು ಕಲ್ಪಿಸಿಯುಟ್ಟಿದೊಡಾಕೆಯುಂ ಕಲ್ಪಿಸಿದ ಪಾಂಗಿನೊಳಾತನಲ್ಲಿಗೆವ್ವೋಗೇಕಾಂತದೊಳಿಲ್ಲಮಂ ನುಡಿದು ಕುಬೇರಕಾಂತನ ಕೆಯ್ಯ ಪಟಮಂ ಬೇಡಿ ಕೊಂಡು ಪೋಗಿ ಮನೋಹರಿಗೆ ಕೊಟ್ಟಳ್ ಮನೋಹರಿಯುಮಾ ಪಟಮಂ ಕೊಂಡು ದೆವಸಕ್ಕಮಟ್ಟುಱೊಳ್ ನೋಡುತ್ತಿರ್ಪುಂ ಮತ್ತಿತ್ತ ಕುಬೇರಕಾಂತಂ ತನ್ನ ಮರುಳ್ವೇಷಮಂ ತೊಱೆದು ಸ್ವಾಭಾವಿಕನಾಗಿ ತನ್ನ ಮನೆಗೆ ವಂದೊಡೆ ಪ್ರಸನ್ನರೂಪನಾಗಿರ್ದೊನಂ ವಿಜಯನಿಂತೆಂದು ಬೆಸಗೊಂಡಂ ಮಗನೆ ನೀನಿನಿತು ದಿವಸಮೇಕೆ ಮರುಳಾಗಿರ್ದೆ ಈಗಳೆಂತು ಮರುಳ್ತನಂ ಪಿಂಗಿತೆಂದು ಬೆಸಗೊಂಡೊಡೆ ಕುಬೇರಕಾಂತನಿಂತೆಂದು ಪೇೞ್ದನೀಯರಸರ ಮಗಳವ್ವ ಮನೋಹರಿ ಎನ್ನ ಮುನ್ನಿನ ಭವದ ಪೆಂಡತಿಯಾಕೆಯನಱಿಪಲ್ಕೇದಿ ಇನಿತು ದಿವಸಂ ಮರುಳ್ಗೊಂದಿರ್ದೆಂ ಮತ್ತೀಗಳಾರಯ್ದಱಿಸಿ ಕಂಡೆನಪ್ಪುದಱಿಂದಂ ಮರುಳ್ತನಂ ಪಿಂಗಿತೆಂದು ಪೇೞ್ದೊಡೆ ತಂದೆಯೆಂದಂ ಮಗನೆ ನಿನ್ನ ಮುನ್ನಿನ ಪೆಂಡತಿಯೆಂದಱೆದಯಪ್ಪೊಡಿಮೀಗಳಾಕೆಯರಸನ ಮಗಳಾಗಿರ್ಪುದಱಿಂ ನಿನಗತಿ ದುರ್ಲಭೆ ಭಾಗ್ಯಮಿಲ್ಲದುದಂ ಪೞಲಾಗ ನಿನಗಾಕೆಯೊಳಪ್ಪ ಬೇಂಟಮನಟೆವುದು ಮಗನೆ ಎಂದೊಡೆ ಕುಬೇರಕಾಂತಂ ಕಾಮವಿದ್ಯೆಯಿಂದಂ ಹಸ್ತ್ಯಶ್ವರಥಪದಾತಿಬಲಸಮೂಹಮನೆನಿತಾನುಮಂ

ಇದ್ದಾಳೆ. ಅವಳು ನಿನ್ನೊಡನೆ ಸೇರುವವರೆಗೆ ಈ ಚಿತ್ರಪಟಗಳನ್ನು ತೋರಿಸಿ ಆಕೆಯ ಪ್ರಾಣರಕ್ಷಣೆ ಮಾಡುವೆನೆಂದು ಚಿತ್ರಪಟವನ್ನು ಕೇಳಿ ತೆಗೆದುಕೊಂಡು ಬಾ ಎಂದು ತಿಳಿಸಿ ಕಳುಹಿಸಿದಳು. ದಾಮರಥಿಯು ಆಕೆ ಹೇಳಿಕೊಟ್ಟ ರೀತಿಯಲ್ಲಿ ಕುಬೇರಕಾಂತನ ಬಳಿಗೆ ಹೋದಳು. ಏಕಾಂತದಲ್ಲಿ ಎಲ್ಲ ಸಂಗತಿಗಳನ್ನೂ ಹೇಳಿ, ಕುಬೇರಕಾಂತನ ಕೈಯಲ್ಲಿದ್ದ ಚಿತ್ರಪಟವನ್ನು ಕೇಳಿ, ತೆಗೆದುಕೊಂಡುಹೋಗಿ ಮನೋಹರಿಗೆ ಕೊಟ್ಟಳು. ಮನೋಹರಿ ಆ ಚಿತ್ರಪಟವನ್ನು ತೆಗೆದುಕೊಂಡು ಪ್ರತಿದಿನವೂ ಪ್ರೀತಿಯಿಂದ ನೋಡುತ್ತಾ ಇದ್ದಳು. ಆ ಮೇಲೆ, ಇತ್ತ ಕುಬೇರಕಾಂತನು ತನ್ನ ಹುಚ್ಚನ ವೇಷವನ್ನು ಬಿಟ್ಟು, ಸಹಜವೇಷವನ್ನು ತಾಳಿ, ತನ್ನ ಮನೆಗೆ ಬಂದು ಸಂತೋಷದಿಂದ ಇರುತ್ತಿದ್ದನು. ತಂದೆಯಾದ ವಿಜಯನು ಅವನನ್ನು ಕುರಿತು ಹೀಗೆ ಹೇಳಿದನು - "ಮಗನೇ, ನೀನು ಇಷ್ಟು ದಿವಸವೂ ಯಾಕೆ ಹುಚ್ಚನ ಹಾಗೆ ಇದ್ದೆ ? ಈಗ ಹುಚ್ಚುತನವು ಹೇಗೆ ಹೋಯಿತು ?" ಎಂದು ಕೇಳಿದಾಗ, ಕುಬೇರಕಾಂತನು ಹೀಗೆ ಹೇಳಿದನು - "ಈಗ ರಾಜರ ಮಗಳಾಗಿರುವ ಮನೋಹರಿ ನನ್ನ ಹಿಂದಿನ ಜನ್ಮದ ಹೆಂಡತಿ. ಆಕೆಯನ್ನು ಹುಡುಕುವುದಕ್ಕಾಗಿ ಇಷ್ಟು ದಿವಸವೂ ನಾನು ಹುಚ್ಚುಗೊಂಡಿದ್ದೆನು. ಆ ಮೇಲೆ ಈಗ ವಿಚಾರಿಸಿ, ಹುಡುಕಿ ಕಂಡೆನಾದುದರಿಂದ ನನ್ನ ಹುಚ್ಚು ಹೋಗಿಬಿಟ್ಟಿತು." ಕುಬೇರಕಾಂತನು ಹೀಗೆ ಹೇಳಲು ಅವನ ತಂದೆ - "ಮಗನೆ, ನೀನು ಆಕೆಯನ್ನು ಪೂರ್ವಜನ್ಮದ ಪತ್ನಿಯೆಂದು ತಿಳಿದಿರುವೆಯಾದರೂ ಈಗ ಆಕೆಯು ರಾಜನ ಮಗಳಾಗಿರುವುದರಿಂದ ನಿನಗೆ ದೊರೆಯಲಾರಳು. ಅದೃಷ್ಟವಿಲ್ಲದುದನ್ನು ಪಡೆಯಲಿಕ್ಕಾಗುವುದಿಲ್ಲ. ಮಗನೇ , ನಿನಗೆ ಅವಳಲ್ಲಿರುವ ಪ್ರೀತಿಯನ್ನು ಬಿಟ್ಟುಬಿಡು" - ಎಂದು ಹೇಳಿದನು. ಆಗ ಕುಬೇರಕಾಂತನು ಕಾಮವಿದ್ಯೆಯಿಂದ ಆನೆ, ಕುದುರೆ, ರಥ, ಕಾಲಾಳುಗಳ ಎಷ್ಟೋ ಸೈನ್ಯದ ಸಮೂಹವನ್ನು, ವೈಭವಸಂಪತ್ತುಗಳಿಂದ ಕೂಡಿದವನಾಗಿ

ವಿಭವೈಶ್ವರ್ಯಸಮನ್ವಿತಂ ತಂದೆಗೆ ತೋಱೆದೊಡೆ ತಂದೆಯುಂ ಮಗನ ಸಾಮರ್ಥ್ಯಮುಂ ಕಂಡಾದಮಾನುಂ ಸಂತಸಂಬಟ್ಟರ್ದಂ ಮತ್ತೊಂದು ದಿವಸಂ ಅತಿರಥಮಹಾರಾಜಂ ಮಂತ್ರಿಯರ್ಕಳೊಡನೆ ಮಂತಣಮಿರ್ದಲ್ಲಿ ಮಂತ್ರಿಯರ್ಕಳನಿಂತು ಬಿಸಗೊಂಡಂ ಮನೋಹರಿಗೆ ಯೌವನಂ ನೆಱೆದುದು ಕೂಸು ಕುಡಲ್ಕಾದುದಾರ್ಗೆ ಕುಡುವಮೆಂದು ಮಂತ್ರಿಯರ್ಕಳಂ ಬಿಸಕೊಂಡೊಡೆ ಉಱೆದ ಮಂತ್ರಿಯರ್ಕಳೆಲ್ಲಂ ತಂತಮ್ಮ ಬಗೆದರಸುಗಳ ಪೆಸರ್ಗಳಂ ಪೇೞ್ದವರ್ಗೆ ಕುಡುವಮೆಂದೊಡೆ ಕುಬೇರಕಾಂತನ ತಂದೆಯಪ್ಪ ವಿಜಯನೆಂಬ ಮಂತ್ರಿಯುರ್ಕೆವದಿಂದವರ ಪೇೞ್ದ ಮದವಕ್ಕಳಂ ನಿರಾಕರಿಸಿ ಮನೋಹರಿಯ ರೂಪಿಂಗಂ ಜವ್ವನಕ್ಕಂ ಕಳಾಗುಣಂಗಳನಱೆವುದರ್ಕಮವರ್ ಯೋಗ್ಯರ್ ಮದವಕ್ಕಳಲ್ಲರ್ ಕೂಸಿಂಗೆ ಸ್ವಯಂಬರಮಂ ಪಣ್ಣುವಂ ಸ್ವಯಂಬರದೊಳ್ ತನ್ನ ಭಾಗ್ಯದೊಳ್ ಮೆಚ್ಚಿದವರಂ ಕಯ್ಕೊಳ್ಗಿಂದು ನುಡಿದೊಡರಸನುಮಾತನ ಮಾತನೊದಂಬಟ್ಟು ಸ್ವಯಂವರಸಾಲೆಯಂ ಮಾಡಿಸಿ ಅರಸುಗಳೆಲ್ಲಂ ಬಱೆಯನಟ್ಟಿ ಬರಿಸೆ ಸ್ವಯಂವರಸಾಲೆಯೊಳ್ ನೆರೆದಿರ್ದರಂಗ ವೆಂಗಿ ಕಳಿಂಗ ಕಾಂಭೋಜ ಕಾಶಿ ಕೌಶಲ ಪಲ್ಲವ ಪಾಂಚಾಳ ಮಗಧ ಮಾಳವ ವತ್ಸ ಮಹಾರಾಷ್ಟ್ರ ಕುಣಾಳ ಕುರುಜಾಂಗಣ ದ್ರವಿಳ ಲಾಳ ಕರ್ಣಾಟ ಗೌಳ ಸುಹುಮ ಸುರಕಾಂತ ಸೂರಸೇನೀಯ ಪ್ರಭೃತಿ ನಾನಾ ವಿಷಯಾಧಿಪತಿಗಳಪ್ಪರಸುಗಳೆಲ್ಲಂ ನೆರೆದಿರ್ದಲ್ಲಿಯಾರುಮಂ ಮೆಚ್ಚದೆ ದಾಂಟಿ ಪೋಗಿ ಕುಬೇರಕಾಂತಂಗೆ ಮಾಲೆಯಂ ಸೂಡಿದಳಾಗಳರಸುಗಳೆಲ್ಲಂ ನೆರೆದಾಮೇಕ್ಕೈಕಪ್ರಧಾನರೆಮಿರ್ದ್ದಂತಿರೆ

ತಂದೆಗೆ ತೋರಿಸಿದನು. ಮಗನ ಸಾಮರ್ಥ್ಯವನ್ನು ಕಂಡು ತಂದೆ ಅತಿಶಯವಾಗಿ ಸಂತೋಷಪಟ್ಟಿದ್ದನು. ಆಮೇಲೆ ಒಂದು ದಿವಸ ಅತಿರಥಮಹಾರಾಜನು ಮಂತ್ರಿಗಳೊಂದಿಗೆ ಮಂತ್ರಾಲೋಚನೆ ನಡೆಸುತ್ತಿದ್ದಾಗ ತನ್ನ ಮಂತ್ರಿಗಳೊಡನೆ ಹೀಗೆ ಕೇಳಿದನು - "ಮನೋಹರಿಗೆ ಯೌವನ ತುಂಬಿದೆ. ಮದುವೆ ಮಾಡಲಿಕ್ಕೆ ಆಗಿದೆ. ಯಾರಿಗೆ ಕೊಡೋಣ?" ಹೀಗೆ ಮಂತ್ರಿಗಳನ್ನು ಕೇಳಿದಾಗ ಉಳಿದ ಮಂತ್ರಿಗಳೆಲ್ಲರೂ ತಾವು ತಾವು ಭಾವಿಸಿಕೊಂಡ ರಾಜರುಗಳ ಹೆಸರುಗಳನ್ನು ಹೇಳಿ, ಅವರಿಗೆ ಕೊಡೋಣ ಎಂದು ಹೇಳಿದರು. ಕುಬೇರಕಾಂತನ ತಂದೆಯಾದ ವಿಜಯನೆಂಬ ಮಂತ್ರಿ ಉಪಾಯದಿಂದ ಆ ಇತರ ಮಂತ್ರಿಗಳು ಹೇಳಿದ ಮದುಮಕ್ಕಳನ್ನು ತಿರಸ್ಕರಿಸಿದನು. "ಅವರು ಮನೋಹರಿಯ ರೂಪಕ್ಕೂ ತಾರುಣ್ಯಕ್ಕೂ ತಕ್ಕವರಲ್ಲ. ಅವಳ ಕಲೆಗಳನ್ನು ಮತ್ತು ಗುಣಗಳನ್ನು ತಿಳಿಯುವುದಕ್ಕೂ ಅವರು ಯೋಗ್ಯರಾದ ಮದುಮಕ್ಕಳಲ್ಲ. ಕನ್ಯೆಗೆ ಸ್ವಯಂವರವನ್ನು ಮಾಡೋಣ. ಆ ಸ್ವಯಂವರದಲ್ಲಿ ಆಕೆ ತನ್ನ ಅದೃಷ್ಟದಂತೆ ಮೆಚ್ಚಿದವನನ್ನು ವರನಾಗಿ ಸ್ವೀಕರಿಸಲಿ ಎಂದು ಹೇಳಿದನು. ರಾಜನು ಅವನ ಮಾತಿಗೆ ಒಪ್ಪಿ ಸ್ವಯಂವರಶಾಲೆಯನ್ನು ಮಾಡಿಸಿದನು. ರಾಜರುಗಳಿಗೆಲ್ಲ ದೂತರನ್ನು ಕಳುಹಿಸಿ ಬರಮಾಡಿಸಿದನು. ಸ್ವಯಂವರಶಾಲೆಯಲ್ಲಿ ಅಂಗ, ವೆಂಗಿ, ಕಳಿಂಗ, ಕಾಂಭೋಜ, ಕಾಶಿ, ಕೌಶಲ, ಪಲ್ಲವ, ಪಾಂಚಾಳ, ಮಗಧ, ಮಾಳವ, ವತ್ಸ, ಮಹಾರಾಷ್ಟ್ರ, ಕುಣಾಳ, ಕುರುಜಾಂಗಣ, ದ್ರವಿಳ, ಲಾಳ, ಕರ್ಣಾಟ, ಗೌಳ, ಸುಹುಮ, ಸುರಕಾಂತ, ಶೂರಸೇನೀಯ - ಮುಂತಾದ ಹಲವಾರು ದೇಶಗಳ ಒಡೆಯರಾದ ಅರಸುಗಳೆಲ್ಲಾ ನೆರೆದಿದ್ದರು. ಹಾಗೆ ನೆರೆದಿದ್ದವರಲ್ಲಿ ಯಾರೊಬ್ಬನನ್ನು ಮೆಚ್ಚದೆ, ಮನೋಹರಿಯು ದಾಟುತ್ತ ಹೋಗಿ ಕುಬೇರಕಾಂತನಿಗೆ

ಬಡವಂಗೇನುಮಿಲ್ಲದೊಂಗೆ ಮಾಲೆಯುಂ ಸೂಡಿದಳೆಂದು ಸಭಾಕ್ಷೋಭವಾಗಿ ಕುಬೇರಕಾಂತನೊಳನಿಬರುಂ ನೆರೆದು ಯುದ್ಧಂಗೆಯ್ದೊಡೆ ಸಂಗ್ರಾಮರಂಗದೊಳ್ ಸುವರ್ಮವರ್ಮಂ ಮೊದಲಾಗೊಡೆಯರರ್ಕಳೆಲ್ಲರುಮಂ ಗೆಲ್ದು ಮನೋಹರಿಯಂ ಪಾಣಿಗ್ರಹಣಪುರಸ್ಸರಂ ಮದುವೆನಿಂದು ಸೊಪಾರಕ್ಕಧಿಪತಿಯಾಗಿರ್ದ್ದನ್ ಇಂತು ಕುಬೇರಕಾಂತಂ ಮನೋಹರಿಯೊಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತುಮಿರೆಯಿರೆ ಸುವರ್ಮವರ್ಮನೆಂಬರಸಂ ರಾಜ್ಯಪರಿಭ್ರಷ್ಟನಾಗಿ ತಾಪಸ ತಪಮಂ ಕೈಕೊಂಡು ನೆಗಟ್ಟು ಸತ್ತು ಪ್ರತಿಸೂರ್ಯನೆಂಬ ವ್ಯಂತರದೇವನಾಗಿ ಪುಟ್ಟದೊಂ ಮತ್ತೆ ಶ್ರೀಧರನುಂ ಕುಬೇರಕಾಂತನುಂ ಮನೋಹರಿಯುಮನ್ಯೋನ್ಯಾತಿ ಸ್ನೇಹದೊಳ್ ಕೂಡಿ ರಾಜ್ಯಂಗೆಯ್ದು ತಮ್ಮ ಗೆಯ್ದ ದಾನಧರ್ಮದ ಫಲದಿಂದಂ ಅನ್ಯಜನ್ಮದೊಳಿಂತಪ್ಪ ವಿದ್ಯೆಯಕ್ಕೆಂದು ಮೂವರುಂ ನಿದಾನಂ ಗೆಯ್ದು ಮುನ್ನಂ ಶ್ರೀಧರಂ ಸತ್ತು ವಿಜಯಾರ್ಧಪರ್ವತದ ಉತ್ತರ ಶ್ರೇಣಿಯೊಳ್ ಅಳಕಾಪುರವೆಂಬುದು ಪೂಬಲದನಾಳ್ವೊಂ ಗಗನವಲ್ಲಭನೆಂಬೊನಾತನ ಭಾರ್ಯೆ ಅನಂಗಮಾಲೆಯೆಂಬೊಳಾಯಿರ್ವ್ವರ್ಗ್ಗಂ ಶ್ರೀಧರಂ ಚಂಡವೇಗನೆಂಬೊಂ ಮಗನಾಗಿ ಪುಟ್ಟದೊಂ ಆ ಚಂಡವೇಗನ ಮಹಾದೇವಿ ವಿದ್ಯುಲ್ಲತೆಯೆಂಬೊಳಾಯಿರ್ವ್ವರ್ಗಂ ಕುಬೇರಕಾಂತಂ ಸತ್ತು ವಿದ್ಯುನ್ಮಾಳಿಯೆಂಬ ಮಗನಾಗಿ ಪುಟ್ಟದೊಂ ಮತ್ತಂ ದಕ್ಷಿಣಶ್ರೇಣಿಯೊಳ್ ವಿದುಲ್ಲತೆಯ ಸೋದರ

ವರಮಾಲಿಕೆಯನ್ನು ಮುಡಿಸಿದಳು. ಆಗ ಅರಸುಗಳೆಲ್ಲರೂ ಒಟ್ಟಾಗಿ ನಾವು ಒಬ್ಬೊಬ್ಬರೇ ಶ್ರೇಷ್ಠವ್ಯಕ್ತಿಗಳಾಗಿದ್ದೇವೆ. ನಾವು ಇದ್ದ ಹಾಗೆಯೇ ಏನೂ ಅಲ್ಲದಿರುವ ಬಡವನಿಗೆ ಮಾಲೆ ಹಾಕಿದಳು ಎಂದು ಸಭೆಯಲ್ಲಿ ಗದ್ದಲವಾಗಿ ಅವರೆಲ್ಲರೂ ಸೇರಿ ಕುಬೇರಕಾಂತನೊಡನೆ ಯುದ್ಧಮಾಡಿದರು. ಕುಬೇರಕಾಂತನು ಯುದ್ಧರಂಗದಲ್ಲಿ ಸುವರ್ಮವರ್ಮ ಮುಂತಾಗಿ ಉಳ್ಳವರೆಲ್ಲರನ್ನೂ ಗೆದ್ದು ಮನೋಹರಿಯನ್ನು ಕೈಹಿಡಿವ ಮೂಲಕವಾಗಿ ಮದುವೆಯಾಗಿ ಸೋಪಾರವೆಂಬ ದೇಶಕ್ಕೆ ಒಡೆಯನಾಗಿ ಇದ್ದನು. ಈ ರೀತಿಯಾಗಿ ಕುಬೇರಕಾಂತನು ಮನೋಹರಿಯಲ್ಲಿ ತನ್ನ ಪ್ರೀತಿಯ ವಿಷಯದ ಕಾಮಸುಖಗಳನ್ನು ಅನುಭವಿಸುತ್ತ ಇರುತ್ತಿರಲು ಸುವರ್ಮವರ್ಮ ಎಂಬ ರಾಜನು ರಾಜ್ಯವನ್ನು ಕಳೆದುಕೊಂಡು ಋಷಿಗಳ ತಪಸ್ಸನ್ನು ಸ್ವೀಕರಿಸಿ, ಆಚರಿಸಿ, ಸತ್ತು ಪ್ರತಿಸೂರ್ಯನೆಂಬ ಪಿಶಾಚದೇವತೆಯಾಗಿ ಹುಟ್ಟಿದನು. ಅನಂತರ ಶ್ರೀಧರನೂ ಕುಬೇರಕಾಂತನೂ ಮನೋಹರಿಯೂ ಪರಸ್ಪರವಾಗಿ ಕಡುಗೆಳೆತನದಿಂದ ಕೂಡಿ ರಾಜ್ಯವನ್ನಾಳಿದರು. ತಾವು ಮಾಡಿದ ದಾನಧರ್ಮದ ಫಲದಿಂದ ಬೇರೆ ಜನ್ಮದಲ್ಲಿ ಇದೇ ರೀತಿಯ ಇರವು ಉಂಟಾಗಲೆಂದು ಮೂವರೂ ಸಂಕಲ್ಪಮಾಡಿಕೊಂಡು ಸತ್ತರು. ಮೊತ್ತ ಮೊದಲು ಶ್ರೀಧರನು ಸತ್ತನು. ವಿಜಯಾರ್ಧ ಪರ್ವತದ ಬಡಗಣ ಸಾಲಿನಲ್ಲಿ ಅಳಕಾಪುರವೆಂಬ ಪಟ್ಟಣವಿದೆ. ಅದನ್ನು ಆಳುವವನು ಗಗನವಲ್ಲಭನೆಂಬವನು. ಅವನ ಹೆಂಡತಿ ಅನಂಗಮಾಲೆಯೆಂಬವಳು. ಆ ಇಬ್ಬರಿಗೆ ಶ್ರೀಧರನು ಚಂಡವೇಗನೆಂಬ ಮಗನಾಗಿ ಹುಟ್ಟಿದನು. ಆ ಚಂಡವೇಗನ ಪತ್ನಿ ವಿದ್ಯುಲ್ಲತೆ ಎಂಬವಳು. ಆ ಇಬ್ಬರಿಗೆ ಕುಬೇರಕಾಂತನು ಮಗನಾಗಿ ವಿದ್ಯುನ್ಮಾಳಿ ಎಂಬವನಾಗಿ ಹುಟ್ಟಿದನು. ಅಮೇಲೆ ವಿಜಯಾರ್ಧಪರ್ವತದ ತೆಂಕಣ ಸಾಲಿನಲ್ಲಿ ಮೇಘಕೂಟಕ್ಕೆ ಒಡೆಯನಾಗಿ ವಿದ್ಯುಲ್ಲತೆಯ ಸೋದರ ತಮ್ಮನು ಮೇಘಮಾಳಿ ಎಂಬ ವಿದ್ಯಾಧರನಿದ್ದನು.

ತಮ್ಮಂ ಮೇಘಕೂಟಾಧಿಪತಿ ಮೇಘಮಾಳಿಯೆಂಬೊಂ ವಿದ್ಯಾಧರನಾತನ ಮಹಾದೇವಿ ರತಿಬಿಂದುವೆಂಬೊಳಾಯಿರ್ವ್ವರ್ಗ್ಗಂ ಮನೋಹರಿ ಸತ್ತು ವಿರಳವೇಗೆಯೆಂಬೊಳ್ ಮಗಳಾಗಿ ಪುಟ್ಟಿದಳ್ ಮತ್ತೊಂದು ದಿವಸಂ ಚಂಡವೇಗನುಂ ವಿದ್ಯುನ್ಮಾಲಿಯುಮಂತು ತಮ್ಮಿರ್ವರುಂ ಉಜ್ಜಯಂತಪರ್ವತದ ಶಿಖರದೊಳ್ ಅರಿಷ್ಟನೇಮಿ ಭಟ್ಟಾರರ ಪರಿನಿರ್ವಾಣಭೂಮಿಯೊಳ್ ಭಕ್ತಿಯಿಂ ಪೂಜಿಸಲಿಂದರ್ಚ್ಚನೆಯಂ ಕೊಂಡು ಪೋದೊಡಾ ಪರ್ವತದ ಶಿಖರಮಂ ಕಂಡು ವಿದ್ಯುನ್ಮಾಲಿ ಮೂರ್ಛೆವೋಗಿ ಜಾತಿಸ್ಮರನಾಗಿ ಮನೋಹರಿಯಂ ನೆನೆದು ಮಾಸೋಪವಾಸಂಗೆಯ್ದು ಪ್ರಜ್ಞಪ್ತಿಯೆಂಬ ಮಹಾವಿದ್ಯೆಯಂ ಸಾಧಿಸಿದೊಡಾ ವಿದ್ಯೆ ಬೆಸನೇನೆಂದು ಮುಂದೆ ನಿಲೆ ಎನ್ನ ಮುನ್ನಿನ ಭವದ ಪ್ರಾಣವಲ್ಲಭೆಯಪ್ಪ ಮನೋಹರಿ ಈಗಳೀ ಲೋಕದೊಳಿರ್ದಳೆಂಬುದನಱಿಸಿ ಬೇಗಮೆನಗೆ ಪೇಱಿಂದೊಡಾ ವಿದ್ಯೆಯಿಂತೆಂದು ಪೇಳ್ದತ್ತು ವಿಜಯಾರ್ಧಪರ್ವತದ ದಕ್ಷಿಣಶ್ರೇಣಿಯೊಳ್ ಮೇಘಕೂಟಪುರಾಧಿಪತಿ ಮೇಘಮಾಳಿಯೆಂಬೊಂ ವಿದ್ಯಾಧರಂ ನಿನ್ನ ಸೋದರಮಾವನಾತಂಗೆ ಮನೋಹರಿ ಸತ್ತು ವಿರಳವೇಗೆಯೆಂಬೊಳ್ ಮಗಳಾಗಿರ್ದೊಳೆಂದೊದಂತಪ್ಪೊಡೆ ನೀನೆನ್ನ ಮಾವನ ಮನೆಗೆ ವೋಗಿ ವಿರಳವೇಗೆಗಿಂತೆಂದು ಪೇಳ್ ಎಲೆ ಮನೋಹರಿ ನೀಂ ಮುನ್ನಿನ ಭವದೊಳ್ ಕುಬೇರಕಾಂತನೊಡನೆ ಕ್ರೀಡಿಸಿದ ಕ್ರೀಡೆಗಳಂ ನೆನೆದಾ ಎಂದು ಪೇಳಿಂದು ವಿದ್ಯೆಯಂ ಕಲ್ಪಿಸಿಯಟ್ಟಿದೊಡಾ ವಿದ್ಯೆಯುಂ ಪೋಗಿ ಕಲ್ಪಿಸಿದ ಪಾಂಗಿನೊಳೆ ನುಡಿದೊಡೆ ವಿರಳವೇಗೆ ಮೂರ್ಛೆವೋಗಿರ್ದು ನೀದಱಿಂದೆಚ್ಚತ್ತು ಜಾತಿಸ್ಮರೆಯಾಗಿ

ಅವನ ಪತ್ನಿ ರತಿಬಿಂದು ಎಂಬುವಳು. ಆ ದಂಪತಿಗಳಿಗೆ ಮನೋಹರಿಯು ವಿರಳವೇಗೆ ಎಂಬ ಮಗಳಾಗಿ ಹುಟ್ಟಿದಳು. ಇಬ್ಬರೂ ಉಜ್ಜಯಂತಪರ್ವತದ ತುದಿಯಲ್ಲಿ ಅರಿಷ್ಟನೇಮಿ ಜಿನೇಂದ್ರರು ಮೋಕ್ಷಕ್ಕೆ ಹೋದ ಸ್ಥಳದಲ್ಲಿ, ಭಕ್ತಿಯಿಂದ ಪೂಜೆಮಾಡುವುದಕ್ಕಾಗಿ ಪೂಜಾವಸ್ತುಗಳನ್ನು ತೆಗೆದುಕೊಂಡು ಹೋದರು. ಆಗ ಆ ಪರ್ವತದ ತುದಿಯನ್ನು ನೋಡಿ ವಿದ್ಯುನ್ಮಾಲಿ ಮೂರ್ಛೆ ಹೋದನು. ಅವನಿಗೆ ಪೂರ್ವಜನ್ಮದ ಸ್ಮರಣೆಯುಂಟಾಯಿತು. ಅವನು ಮನೋಹರಿಯನ್ನು ನೆನೆಸಿಕೊಂಡು ಒಂದು ತಿಂಗಳು ಉಪವಾಸ ಮಾಡಿ ಪ್ರಜ್ಞಪ್ತಿಯೆಂಬ ಮಹಾವಿದ್ಯೆಯನ್ನು ಸಾಧಿಸಿದನು. ಆ ವಿದ್ಯೆ "ನನಗೇನಪ್ಪಣೆ?" ಎಂದು ಅವನ ಮುಂದೆ ಬಂದು ನಿಂತಿತು. ಆಗ ವಿದ್ಯುನ್ಮಾಲಿ - "ಹಿಂದಿನ ಜನ್ಮದಲ್ಲಿ ನನ್ನ ಪ್ರಾಣದರಸಿಯಾದ ಮನೋಹರಿಯು ಈಗ ಈ ಲೋಕದಲ್ಲಿ ಎಲ್ಲಿ ಇದ್ದಾಳೆ ಎಂಬುದನ್ನು ಹುಡುಕಿ ಹಿಡಿದು ನನಗೆ ಬೇಗ ಹೇಳು" ಎಂದನು. ಅದಕ್ಕೆ ಆ ವಿದ್ಯೆ ಈ ರೀತಿಯಾಗಿ ಹೇಳಿತು - "ವಿಜಾಯರ್ಧಪರ್ವತದ ತೆಂಕಣ ಸಾಲಿನಲ್ಲಿ ಮೇಘಕೂಟವೆಂಬ ಪಟ್ಟಣಕ್ಕೆ ಒಡೆಯನಾದ ಮೇಘಮಾಳಿಯೆಂಬ ವಿದ್ಯಾಧರನು ನಿನ್ನ ಸೋದರಮಾವನು. ಮನೋಹರಿ ಸತ್ತು ಆ ಮೇಘಮಾಳಿಗೆ ವಿರಳವೇಗೆಯೆಂಬ ಮಗಳಾಗಿ ಇದ್ದಾಳೆ" - ಎಂದು ಹೇಳಲು, ವಿದ್ಯುನ್ಮಾಲಿ ಹೀಗೆಂದನು - "ಹಾಗಾದರೆ ನೀನು ನನ್ನ ಮಾವನ ಮನೆಗೆ ಹೋಗಿ ವಿರಳವೇಗೆಗೆ ಈ ರೀತಿಯಾಗಿ ಹೇಳು - ಎಲೈ ಮನೋಹರಿಯೇ, ನೀನು ಹಿಂದಿನ ಜನ್ಮದಲ್ಲಿ ಕುಬೇರಕಾಂತನೊಡನೆ ಆಡಿದ ಆಟಗಳನ್ನು ನೆನಪಿಟ್ಟಿರುವೆಯಾ ಎಂದು ಹೇಳು" - ಎಂದು ವಿದ್ಯೆಗೆ ಹೇಳಿಕೊಟ್ಟು ಕಳುಹಿಸಿದನು. ಆ ವಿದ್ಯೆಯು ಹೋಗಿ, ಕಲಿಸಿ ಕೊಟ್ಟ ರೀತಿಯಲ್ಲಿಯೇ ಹೇಳಿತು. ಆಗ ವಿರಳವೇಗೆ ಮೂರ್ಛೆಹೋದಳು. ಹೆಚ್ಚು ಹೊತ್ತಿನ ಮೇಲೆ ಎಚ್ಚತ್ತಳು. ಪೂರ್ವಜನ್ಮದ ಸ್ಮರಣೆಯುಂಟಾಗಿ ಅವಳು ಅಗಲಿಕೆಯ ದುಃಖದಿಂದ

ವಿರಹಸಂತಾಪದಿಂ ತನ್ನ ಮುನ್ನಿನ ಭರ್ತಾರನಂ ನೆನೆಯುತ್ತಿರೆ ವಿದ್ಯುನ್ಮಾಳಿಯುಂ ತನ್ನ ಮನೆಗೆ ವೋಗಿ ತಂದೆ ಚಂಡವೇಗಂಗೆ ತನ್ನ ವೃತ್ತಾಂತಮೆಲ್ಲಮಂ ಪೇಳ್ದೊಡಾತನುಮಾದಮಾನಮೊಸೆದು ತನ್ನ ಮೈದುನನಪ್ಪ ಮೇಘಮಾಳಿ ವಿದ್ಯಾಧರನಲ್ಲಿಗೆ ಪೆರ್ಗಡೆಗಳಂ ಕೂಸಂ ಬೇಡಿಯಟ್ಟಿ ಪೆತ್ತು ವಿರಳವೇಗೆಯಂ ವಿದ್ಯುನ್ಮಾಲಿ ಮದುವೆನಿಂದಾಕೆಯೊಳಿಷ್ಟವಿಷಯ ಕಾಮಭೋಗಂಗಳನನುಭವಿಸುತ್ತಂ ಪಲಕಾಲಂ ಸಲೆ ಮತ್ತೊಂದು ದಿವಸಂ ವಿದ್ಯಾನಿರ್ಮಿತ ವಿಚಿತ್ರಮಾಗುತ್ತಿರ್ದ ವಿಮಾನಮನೇಱಿಕೊಂಡು ಪೋವಲ್ಲಿ ಹಿಮವಂತ ಪರ್ವತದ ಮೇಗೆ ಪಾಱುವ ವಿಮಾನಮಂ ಮು ಪೇಳ್ದಿ ಪ್ರತಿಸೂರ್ಯನೆಂಬ ವ್ಯಂತರದೇವಂ ಕಂಡು ತನ್ನ ಸುವರ್ಮವರ್ಮನಪ್ಪ ಭವದ ಪಗೆಯಂ ನೆನೆದಿರ್ವ್ವರುಮಂ ಕೂಡಿ ಕೊಂದನಿಂತಿರ್ವರುಂ ಸತ್ತು ಗಂಗೆಯೆಂಬ ಮಹಾನದಿಯ ತೆಂಕಣ ಪಡುವಣ ಕೋಣೊಳ್ ಸುಕೌಶಳವೆಂಬ ವಿಷಯದೊಳಯೋಧ್ಯಾಪುರಮೆಂಬ ಪೊಜಲೊಳ್ ಸಾಗರಸೇನನೆನೆಂಬೊಂ ರಾಜಶ್ರೇಷ್ಠಿಯಾತನ ಭಾರ್ಯೆ ಧರಣಿಯೆಂಬೊಳಾಯಿರ್ವರ್ಗ್ಗಂ ವಿದ್ಯುನ್ಮಾಳಿಯೆಂಬ ವಿದ್ಯಾಧರಂ ಕಾಲಂಗೆಯ್ದು ಸಿದ್ಧಾರ್ಥನೆಂಬೊಂ ಮಗನಾಗಿ ಪುಟ್ಟಿದೊಂ ಪಿತೃಮಾತೃಗಳೊಸಗೆಯಂ ಮಾಡುತ್ತಂ ಶ್ರೀ ವಿಭವ ರೂಪಕಾಂತಿ ಸೌಭಾಗ್ಯದಿ ಗುಣಂಗಳಿಂ ನೆಜೆದೊಂ ಮತ್ತಿತ್ತ ಮಗಧೆಯೆಂಬುದು ನಾಡಲ್ಲಿ ರಾಜಗೃಹಮೆಂಬ ಪೊಜಲೊಳ್ ಸಮುದ್ರವಿಜಯನೆಂಬೊಂ ರಾಜಶ್ರೇಷ್ಠಿಯಾತಂಗೆ ಸಾಗರಸೆಟ್ಟಿಯ ಸೋದರ ತಂಗೆ ಸುಮತಿಯೆಂಬೊಳಂ ಕೊಟ್ಟರಾಯಿರ್ವರ್ಗ್ಗಂ ವಿರಳವೇಗೆಯೆಂಬ ವಿದ್ಯಾಧರಿ

ತನ್ನ ಗಂಡನನ್ನು ಸ್ಮರಿಸುತ್ತ ಇದ್ದಳು. ಹೀಗಿರಲು ವಿದ್ಯುನ್ಮಾಲಿಯು ತನ್ನ ಮನೆಗೆ ತೆರಳಿ ತಂದೆಯಾದ ಚಂಡವೇಗನಿಗೆ ತನ್ನ ಎಲ್ಲಾ ಸಂಗತಿಯನ್ನೂ ಹೇಳಿದನು. ಆಗ ಚಂಡವೇಗನು ಬಹಳವಾಗಿ ಸಂತೋಷಪಟ್ಟು ತನ್ನ ಮೈದುನನಾದ ಮೇಘಮಾಳಿ ವಿದ್ಯಾಧರನಲ್ಲಿಗೆ ಕನ್ಯಾರ್ಥಿಯಾಗಿ ಹೆಗ್ಗಡೆ (ಅರಮನೆಯ ಅಧಿಕಾರಿ)ಗಳನ್ನು ಕಳುಹಿಸಿ ಒಪ್ಪಿಗೆಯನ್ನು ಪಡೆದನು. ವಿದ್ಯುನ್ಮಾಲಿಯು ವಿರಳವೇಗೆಯನ್ನು ಮದುವೆಯಾಗಿ ಅವಳಲ್ಲಿ ತನ್ನ ಇಚ್ಛೆಯ ವಿಷಯದ ಕಾಮಸುಖಗಳನ್ನು ಸವಿಯುತ್ತಿರಲು ಹಲವು ಕಾಲ ಸಂದಿತು. ಆಮೇಲೆ ಒಂದು ದಿವಸ ವಿದ್ಯೆಯಿಂದ ನಿರ್ಮಿತವಾದ ಆಶ್ಚರ್ಯಕರವಾಗಿದ್ದ ವಿಮಾನವನ್ನು ಹತ್ತಿಕೊಂಡು ವಿದ್ಯುನ್ಮಾಲಿಯು ವಿರಳವೇಗೆಯೊಡನೆ ಹೋಗುತ್ತಿದ್ದನು. ಹಿಮಾಲಯ ಪರ್ವತದ ಮೇಲೆ ಹಾರುವ ಅವನ ವಿಮಾನವನ್ನು ಹಿಂದೆ ಹೇಳಿದ ಪ್ರತಿಸೂರ್ಯನೆಂಬ ಪಿಶಾಚದೇವತೆ ಕಂಡು, ತಾನು ಸುವರ್ಮವರ್ಮನಾಗಿದ್ದ ಜನ್ಮದ ಹಗೆತನವನ್ನು ಸ್ಮರಿಸಿಕೊಂಡು, ಇಬ್ಬರನ್ನೂ ಒಟ್ಟಿಗೆ ಕೊಂದಿಕ್ಕಿದನು. ಹೀಗೆ ಇಬ್ಬರೂ ಸತ್ತರು. ಗಂಗೆಯೆಂಬ ದೊಡ್ಡ ನದಿಯ ನೈಋತ್ಯದ ಮೂಲೆಯಲ್ಲಿ ಸುಕೌಶಲವೆಂಬ ದೇಶದಲ್ಲಿ ಅಯೋಧ್ಯಾಪುರವೆಂಬ ಪಟ್ಟಣದಲ್ಲಿ ಸಾಗರಸೇನನೆಂಬ ರಾಜ ವರ್ತಕನಿದ್ದನು. ಆತನ ಹೆಂಡತಿ ಧರಣಿಯೆಂಬವಳು. ಆ ದಂಪತಿಗಳಿಗೆ ವಿದ್ಯುನ್ಮಾಳಿಯೆಂಬ ವಿದ್ಯಾಧರನು ಸತ್ತು ಸಿದ್ಧಾರ್ಥನೆಂಬ ಮಗನಾಗಿ ಹುಟ್ಟಿದನು. ಅವನು ತಂದೆ ತಾಯಿಗಳಿಗೆ ಸಂತೋಷವನ್ನು ಉಂಟುಮಾಡುತ್ತ ಸಂಪತ್ತು - ವೈಭವ-ಸೌಂದರ್ಯ-ತೇಜಸ್ಸು-ಅದೃಷ್ಟ ಮುಂತಾದ ಗುಣಗಳಿಂದ ಕೂಡಿದವನಾದನು. ಆ ಮೇಲೆ ಇತ್ತ ಮಗಧೆಯೆಂಬ ನಾಡಿದ್ದಿತು. ಅಲ್ಲಿ ರಾಜಗೃಹವೆಂಬ ಪಟ್ಟಣದಲ್ಲಿ ಸಮುದ್ರವಿಜಯನೆಂಬ ರಾಯಸೆಟ್ಟಿಯಿದ್ದನು. ಅವನಿಗೆ ಸಾಗರಸೆಟ್ಟಿಯ ಸೋದರ ತಂಗಿಯಾದ ಸುಮತಿ ಎಂಬವಳನ್ನು ಕೊಟ್ಟಿದ್ದರು. ಆ ಇಬ್ಬರಿಗೂ, ವಿರಳವೇಗೆಯೆಂಬ

ಕಾಲಂಗೆಯ್ದು ಶ್ರೀಕಾಂತೆಯೆಂಬೊಳ್ ಮಗಳಾಗಿ ಪುಟ್ಟಿದೊಳತ್ಯಂತ ರೂಪಲಾವಣ್ಯ ಸೌಭಾಗ್ಯ ಕಾಂತಿ ಹಾವಭಾವವಿಲಾಸವಿಭ್ರಮಗಳಿಂ ಕೂಡಿದೊಳ್ ದೇವಗಣಿಕೆಯನೆ ಪೋಲ್ವಳಾಕೆಯಂ ಸೋದರಮಾವನ ಮಗಂಗೆ ಪಿರಿದುಂ ವಿಸ್ತಾರದಿಂ ಸಿದ್ಧಾರ್ಥಂಗೆ ಕೊಟ್ಟರಂತು ಸಿದ್ಧಾರ್ಥನುಂ ಶ್ರೀಕಾಂತೆಯುಂ ತಮ್ಮೊಳನ್ಯೋನ್ಯ ಸ್ನೇಹದೊಳ್ ಕೂಡಿ ಇಷ್ಟವಿಷಯ ಕಾಮಭೋಗಂಗಳನನುಭವಿಸುತ್ತಂ ಪಲಕಾಲಂ ಸಲೆ ಮತ್ತೊಂದು ದಿವಸಂ ಸಪ್ತತಳ ಪ್ರಾಸಾದದ ಮೇಲಿರ್ದರುಮಿಷ್ಟಪರಿವಾರಸಹಿತಂ ದಿಶಾವಲೋಕನಂ ಗೆಯ್ಯುತ್ತಂ ಸುಖಸಂಕಥಾವಿನೋದದಿಂದಿರ್ಪನ್ನೆಗಂ ವಿಚಿತ್ರಮಾಗುತ್ತಿರ್ದ್ದ ವಿಮಾನಮನೇಜೆ ಆಕಾಶಪಥಕ್ಕೊಗೆದು ಮೇಗೆವ್ದೋಪ ವಿದ್ಯಾಧರಯುಗಳಮಂ ಕಂದಿರ್ದರುಂ ಮೂರ್ಛೆವೋಗಿ ನೀಡಜೆಂದೆಬ್ಬರ್ತು ಜಾತಿಸ್ಮರನಾಗಿ ತಮ್ಮ ಮುನ್ನಿನ ಭವಮಂ ನೆನೆದು ಸಂಸಾರದ ಪೊಲ್ಲಮೆಯುಮನನಿತ್ಯತೆಯುಮಂ ಬಗೆದು ವೈರಾಗ್ಯಪರರರಾಗಿ ಇರ್ವರುಂ ತಪಂಬಡುವ ಬುದ್ಧಿಯನೊದೆಯರಾಗಿ ಸ್ವಜನ ಪರಿಜನ ಮಂತ್ರಿ ಮಿತ್ರವರ್ಗಕ್ಕೆಲ್ಲಂ ಬಟೆಯನಟ್ಟಿ ಬರಿಸಿ ಸಂಸಾರದ ಪೊಲ್ಲಮೆಯುಮಂ ತಂತಮ್ಮ ಬಗೆದ ಕಾರ್ಯಮುಮನವರ ಮುಂದೆ ನುದಿದೊಡವರ್ಗ್ಗಳೆಲ್ಲಂ ನೆರೆದಿಂತೆಂದರವ್ಮಾ ಪೂರ್ವದಿಂದಂ ಬಂದ ಕುಲಸಂತತಿಯಂ ಕಾವೊರಾರುಮಿಲ್ಲಿನಿತು ಭಾರಮನಾರ್ಗ್ಗೊಪ್ಪಿಸಿ ತಪಂಬಟ್ಟಪ್ಪಿರದಜೆಂ ಕೆಲವು ಕಾಲದಿಂ ಮಗನಾದೊಡೆ ಮಗಂಗೆ ಸಮಸ್ತ

ವಿದ್ಯಾಧರಿ ಸತ್ತು ಶ್ರೀಕಾಂತೆಯೆಂಬ ಮಗಳಾಗಿ ಹುಟ್ಟಿದಳು. ಅವಳು ಹೆಚ್ಚಾದ ರೂಪ, ಸೌಂದರ್ಯ, ಅದೃಷ್ಟ, ತೇಜಸ್ಸು, ಒಯ್ಯಾರ, ಭಾವ, ಬೆಡಗು, ವಿಭ್ರಮಗಳಿಂದ ಕೂಡಿದವಳಾಗಿ ದೇವತಾ ವಾರನಾರಿಯನ್ನು ಹೋಲುತ್ತಿದ್ದಳು.ಅವಳನ್ನು ಸೋದರಮಾವನ ಮಗನಾದ ಸಿದ್ಧಾರ್ಥನಿಗೆ ಹಿರಿದಾದ ವೈಭವದ ವಿಸ್ತಾರದಿಂದ ಕೊಟ್ಟರು. ಅಂತೂ ಸಿದ್ಧಾರ್ಥನೂ ಶ್ರೀಕಾಂತೆಯೂ ತಮ್ಮೊಳಗೆ ಪರಸ್ಪರ ಪ್ರೀತಿಯಿಂದ ಕೂಡಿ ತಮ್ಮ ಇಚ್ಛೆಯ ವಿಷಯದ ಕಾಮಸುಖಿಗಳನ್ನು ಅನುಭವಿಸುತ್ತ ಹಲವು ಕಾಲ ಕಳೆದರು. ಹೀಗಿರಲು ಒಂದು ದಿವಸ, ಅವರಿಬ್ಬರೂ ಏಳು ಉಪ್ಪರಿಗೆಗಳುಳ್ಳ ಅರಮನೆಯ ಮೇಲುಗಡೆ ಇಷ್ಟರಾದ ಪರಿವಾರದವರೊಂದಿಗೆ ದಿಕ್ಕುಗಳನ್ನು ನೋಡುತ್ತ ಸುಖವಿಷಯದ ಕಥೆಗಳ ವಿನೋದದಿಂದ ಇದ್ದರು. ಆ ವೇಳೆಗೆ ಆಶ್ಚರ್ಯಕರವಾಗಿದ್ದ ವಿಮಾನವನ್ನು ಏರಿಕೊಂಡು ಆಕಾಶಮಾರ್ಗಕ್ಕೆ ಹಾರಿ ಮೇಲುಗಡೆ ಹೋಗತಕ್ಕ ಇಬ್ಬರು ವಿದ್ಯಾಧರರನ್ನು ಕಂಡು ಇಬ್ಬರೂ ಮೂರ್ಛೆ ಹೋದರು. ಬಹಳ ಹೊತ್ತಿನ ಮೇಲೆ ಎಚ್ಚರಗೊಂಡು ಜನ್ಮವೃತ್ತಾಂತದ ಸ್ಮರಣೆಯುಳ್ಳವರಾಗಿ ತಮ್ಮ ಪೂರ್ವ ಜನ್ಮವನ್ನು ನೆನಸಿ ಸಂಸಾರದ ಕೆಡುಕನ್ನು ಕ್ಷಣಿಕತೆಯನ್ನೂ ಭಾವಿಸಿಕೊಂಡು ವೈರಾಗ್ಯದಲ್ಲಿ ತತ್ಪರರಾಗಿ ಇಬ್ಬರೂ ತಪಸ್ಸುಮಾಡುವ ಬುದ್ಧಿಯುಳ್ಳವರಾದರು. ಬಂಧುಗಳನ್ನೂ ಮಂತ್ರಿವರ್ಗ ಸ್ನೇಹಿತರ ವರ್ಗಗಳನ್ನೂ ದೂತರನ್ನು ಕಳುಹಿಸಿ ಬರಮಾಡಿಸಿದರು. ಸಂಸಾರದ ಕೆಡುಕನ್ನೂ ತಾವು ಭಾವಿಸಿಕೊಂಡ ಕಾರ್ಯವನ್ನೂ ಅವರ ಎದುರಿನಲ್ಲಿ ತಿಳಿಸಿದರು. ಆಗ ಅವರೆಲ್ಲರೂ ಒಟ್ಟಾಗಿ ಹೀಗೆಂದರು - "ಅಪ್ಪಾ, ಹಿಂದಿನಿಂದಲೇ ಬಂದ ವಂಶದ ಸಂತತಿಯನ್ನು ಕಾಪಾಡುವವರು ಬೇರೆ ಯಾರೂ ಇಲ್ಲ. ಇಷ್ಟೊಂದು ಭಾರವನ್ನು ನೀವು ಯಾರಿಗೆ ಒಪ್ಪಿಸಿಕೊಟ್ಟು ತಪಸ್ಸು ಮಾಡುವಿರಿ ! ಆದುದರಿಂದ ಕೆಲವು ಕಾಲದ ಮೇಲೆ ನಿಮಗೆ ಮಗನು ಹುಟ್ಟಿದರೆ, ಆ ಮಗನಿಗೆ ಎಲ್ಲಾ ಭಾರವನ್ನು ತಿಳಿಸಿ (ವಹಿಸಿಕೊಟ್ಟು) ತಪಸ್ಸಿಗೆ ಹೋಗಬಹುದು" - ಹೀಗೆ ಹೇಳಲು,

ಭಾರಮಂ ನಿರೂಪಿಸಿ ತಪಂಡಬಡುವುದೆಂದು ನುಡಿದೊಡೆ ಸಿದ್ಧಾರ್ಥನೆಂದಂ ನಿಮ್ಮೆಲ್ಲರ ಪೇಟ್ದುದನಿಂಬುಗೆಯ್ದಪ್ಪೆನಂದು ಮಗನಾದಂದೆನ್ನ ತಪಂಬಡುವಂದಾರುಂ ವಕ್ಕಂ ಬರಸಲ್ಲೆಂದು ನುಡಿದೊಡಂಬಡಿಸಿ ಕೆಲವು ಕಾಲಂ ವರಿವಾರಂ ಬಾರಿಸೆ ಮೂಣ್ಮೆರ್ದಿಪ್ಪವಿಷಯ ಕಾಮಭೋಗಂಗಳನನುಭವಿಸುತ್ತಿರೆಯಿರೆ ಮತ್ತೆ ಸಿದ್ಧಾರ್ಥನ ಪಿರಿಯರಸಿ ಜಯಾವತಿಯೆಂಬೊಳ್ ಮಕ್ಕಳಂ ಬೇಡಿ ದೇವಗ್ಗಂ ದೇವತೆಗಳ್ಗಂ ಪರಸಿ ಪೂಜೆಯಂ ಮಾಡುತ್ತಿರ್ಪೊಳೊಂದು ದಿವಸಂ ವಿಜಯಭದ್ರರೆಂಬ ಭಟಾರರವಧಿಜ್ಞಾನಿಗಳ್ ಚರಿಗೆವೊಕ್ಕೊಡೆ ಕಂಡವರಂ ಜಯಾವತಿ ನಿಜೆಸಿಯಾವಮಾನುಂ ಭಕ್ತಿಯಿಂದಂ ಕೈಯಲಿಕ್ಕಿ ನಿರಂತರಂ ಮಾದಿ ಕುಳ್ಳಿರ್ದ ಬಟೆಕ್ಕಿಂತೆಂದು ಬೆಸಗೊಂಡಳ್ ಭಟಾರಾ ಎನಗೆ ಮಕ್ಕಳಕ್ಕುಮೋ ಆಗದೋ ಎಂದು ಬೆಸಗೊಂಡೊಡೆ ಭಟಾರರಿಂತೆಂದರ್ ವಿಭವೈಶ್ವರ್ಯರೂಪ ಕಾಂತಿ ಸೌಭಾಗ್ಯಾದಿಗುಣಗಳಿಂದಂ ಸಿದ್ಧಾರ್ಥನಿಂದಗ್ಗಳಂ ಕುಲತಿಲಕನಪ್ಪ ಮಗನಂ ಪೆಜುವಯ್ ಪೆತ್ತಾಗಳಿಂತು ಪುಣ್ಣಮಿಯಂದಿನ ಚಂದ್ರನಂ ಕಂಡಾಗಳಾದಿತ್ಯನಸ್ತಮಾನಕ್ಕೆ ಸಲ್ಗುಮಂತೆ ಮಗನಂ ಕಂಡಾಗಳೆ ನಿನ್ನ ಭರ್ತಾರನುಂ ತಪಂಬಡುಗುಮಾರಿಸಿಯರಂ ಕಂಡಾಗಳೆ ಮಗನುಂ ತಪಂಬಡುಗುಮೆಂದು ಭಟಾರರ್ ಪೇಟ್ದು ಪೋದರಿತ್ತ ಜಯಾವತಿಗೆ ಹರ್ಷವಿಷಾದಂಗಳೆರಡುಮೊರ್ಮೊದಲಾಗೆ ಕಾಲಂ ಸಲೆ ಮತ್ತಿತ್ತ ಚಂಡವೇಗಂ ಪಲಕಾಲಮರಸುಗೆಯ್ದು ಆಯುಷ್ಕಾಂತದೊಳ್ ಕಟೆದು ಜಯಾವತಿಯ ಗರ್ಭದೊಳ್ ನೆಲಸಿ ಗರ್ಭಮಾದೊಡೆ ಜಯಾವತಿ

ಸಿದ್ಧಾರ್ಥ ಹೇಳಿದನು - ನೀವೆಲ್ಲರು ಹೇಳಿದುದನ್ನು ಒಪ್ಪುತ್ತೇನೆ. ಮುಂದೆ ನನಗೆ ಮಗನಾದಾಗ ನಾನು ತಪಸ್ಸು ಮಾಡುವಾಗ ಯಾರೂ ಅಡ್ಡಿಬರಬಾರದು - ಎಂದು ಹೇಳಿ ಒಪ್ಪುವಂತೆ ಮಾಡಿದನು. ಕೆಲವು ಕಾಲ ಪರಿವಾರದವರು ತಡೆದುದರಿಂದ ತಪಸ್ಸಿಗೆ ಹೋಗುವುದನ್ನು ಬಿಟ್ಟಿದ್ದು ಇಷ್ಟವಾದ ವಿಷಯದ ಕಾಮಸುಖಗಳನ್ನು ಅನುಭವಿಸುತ್ತಿದ್ದನು. ಅನಂತರ ಸಿದ್ಧಾರ್ಥನ ಹಿರಿಯ ಹೆಂಡತಿಯಾದ ಜಯಾವತಿಯೆಂಬವಳು ಮಕ್ಕಳನ್ನು ಅಪೇಕ್ಷಿಸಿ ದೇವರಿಗೂ ದೇವತೆಗಳಿಗೂ ಹರಕೆ ಹೇಳಿ ಪೂಜೆಯನ್ನು ಮಾಡುತ್ತಿದ್ದಳು. ಒಂದು ದಿವಸ ಅವಧಿಜ್ಞಾನ (ತ್ರಿಕಾಲಜ್ಞಾನ)ವುಳ್ಳ ವಿಜಯಭದ್ರರೆಂಬ ಮುನಿಗಳು ಭಿಕ್ಷಕ್ಕಾಗಿ ಮನೆಯನ್ನು ಪ್ರವೇಶಿಸಿದರು. ಜಯಾವತಿ ನೋಡಿ ಅವರನ್ನು ನಿಲ್ಲಿಸಿ, ಅತ್ಯಂತ ಭಕ್ತಿಯಿಂದ ಪಾಣಿತಲ ಭೋಜಿಗಳಾದ ಅವರಿಗೆ ಕೈಯಲ್ಲಿ ಆಹಾರವನ್ನಿತ್ತಳು. ಎಡಬಿಡದೆ ಪ್ರತಿದಿನ ಹೀಗೆಯೇ ಮಾಡಿ ಅವರನ್ನು ಕುಳ್ಳಿರಿಸಿದ ನಂತರ ಹೀಗೆ ಕೇಳಿದಳು - "ಸ್ವಾಮಿಗಳೇ, ನನಗೆ ಮಕ್ಕಳಾದರೋ ಆಗಲಿಕ್ಕಿಲ್ಲವೋ?" ಎಂದು ಕೇಳಲು, ಸ್ವಾಮಿಗಳು ಹೀಗೆಂದರು - "ವೈಭವ, ಸಂಪತ್ತು, ಸೌಂದರ್ಯ, ತೇಜಸ್ಸು, ಅದೃಷ್ಟ ಮುಂತಾದ ಗುಣಗಳಿಂದ ತಂದೆಯಾದ ಸಿದ್ಧಾರ್ಥನಿಗಿಂತಲೂ ಶ್ರೇಷ್ಠನೂ ವಂಶಕ್ಕೆ ತಿಲಕದಂತಿರುವವನೂ ಆದ ಮಗನನ್ನು ನೀನು ಪಡೆಯುವೆ. ಹೆತ್ತಾಗ, ಹುಣ್ಣಿಮೆಯ ದಿನ ಚಂದ್ರನನ್ನು ಕಂಡಾಗ ಸೂರ್ಯನು ಹೇಗೆ ಅಸ್ತಮಿಸುವನೋ ಹಾಗೆಯೇ ಮಗನನ್ನು ಕಂಡೊಡನೆಯೇ ನಿನ್ನ ಗಂಡನು ತಪಸ್ಸನ್ನು ಕೈಗೊಳ್ಳುವನು. ಆ ಋಷಿಗಳನ್ನು ಕಂಡೊಡನೆಯೇ ಮಗನೂ ತಪಸ್ಸನ್ನು ಕೈಗೊಳ್ಳುವನು. ಎಂದು ಹೇಳಿ ಹೋದರು. ಇತ್ತ ಜಯಾವತಿಗೆ ಸಂತೋಷದುಃಖಗಳೆರಡೂ ಏಕಕಾಲದಲ್ಲಿ ಉಂಟಾದವು. ಹೀಗೆಯೇ ಕಾಲ ಕಳೆಯಿತು. ಆಮೇಲೆ, ಇತ್ತ ಚಂಡವೇಗನು ಪಲವು ಕಾಲ ರಾಜ್ಯವಾಳಿ ಆಯುಷ್ಯ ತೀರಲು ಸತ್ತು ಜಯಾವತಿಯ ಬಸಿರಿನಲ್ಲಿ ನೆಲಸಿ

ಮುಂ ನೆಲಮನೆಯಂ ಮಾದಿಸಿ ಎನಗೆ ಕುತ್ತಂ ಜಲೋದರಮಾಮದದರ್ಕೆ ವೈದ್ಯಂಗೆಯ್ಸಿದಪ್ಪೆನೆಂದು ಸಿದ್ಧಾರ್ಥಂಗೆ ಪೇಟ್ದು ಕುತ್ತಮಂ ಭಾವಿಸಿ ನೆಲಮನೆಯೊಳಗಿರ್ದು ನವಮಾಸಂ ನೆಱೆದಂದು ಪ್ರಸೂತೆಯಾಗಿ ಮಗನಂ ಪೆತ್ತು ತಾನುಂ ದಾದಿಯುಂ ಮತ್ತಂ ಬೆಸಕೆಯ್ವ ತೊಟ್ಟುಮಿಂತು ಮೂವರುಮಱೆವೊರುಬೆದರಾರುಮಱೆಯರಿಂತು ದಿವಸಂಗಳ್ ಸಲೆ ಮತ್ತೊಂದು ದಿವಸಂ ಬೆಸಕೈವ ತೊಟ್ಟು ನೀರಂ ತರಲ್ ಪೋದಲ್ಲಿ ನೀರ ಪೊಟೆಯೊಳಾಕೆಯ ಕೆಳದಿ ನಾಗಬ್ಬೆಯೆಂಬೊಳಾಕೆಯಂ ಕಂದಿಂತೆಂದು ಬೆಸಗೊಂಡಳಿತೆಗೆ ಕುಂದಬೆ ಪಲದಿವಸದಿಂದಂ ನಿನ್ನಂ ಕಂಡೆನಿಲ್ಲಿನಿತು ದಿವಸದಿಂ ಮುಂ ಕಾಣದುದರ್ಕೆ ಕಾರಣಮಂ ಪೇಟಿಂದು ಬೆಸಗೊಂಡಳ್ಗೆ ಕಾರಣಮಂ ನಿನಗೆ ಪೇೞ್ದಪ್ಪೆಂ ನೀನಾರ್ಗ್ಗಂ ಪೇೞಿಯಪ್ಪೊಡೆಂದು ಸೂರುಳಿಸಿ ಇಂತೆಂದು ಪೇೞ್ದಳ್ ನೋಡಾ ಎಮ್ಮ ಸೆಟ್ಟಿತಿ ಜಯಾವತಿ ಬೆಸಲೆಯಾದಳ್ ಕಱುಂಡೆಗನಂ ಪೆತ್ತಳಾರುಮನಱೆಯಲೀಯದೆ ನೆಲಮನೆಯೊಳಡಂಗಿರ್ಪ್ಪಳೆಂದು ಪೇೞ್ದೊಡಾ ಮಾತನಲ್ಲಿಯೊರ್ವಂ ಸಂಜೀವಾರಿಸುತ್ತಿದ್ದ ಬ್ರಾಹ್ಮಣಂ ದಾರಿದ್ರ್ಯಾಭಿಭೂತಂ ಸೋಮತರ್ಮನೆಂಬಾತಂ ಕೇಳ್ದಾದಮಾನುಂ ಸಂತೋಷಂಬಟ್ಟು ಪಿರಿದೊಂದು ಮಾದುಫಲಮಂ ಕೊಂದು ಪೋಗಿ ಸಿದ್ಧಾರ್ಥನಂ ಕಂದಿಂತೆಂದು ಬಿನ್ನವಿಕುಂ ಸಿದ್ಧಾರ್ಥಸೆಟ್ಟಿ ಮಹಾಪುರುಷಾ ನಿನಗಾನೊಂದೊಸಗೆಯುಂ ಪೇೞಲ್ ಬಂದೆಂ ಜಯಾವತಿ ಬೆಸಲೆಯಾದಳ್

ಗರ್ಭವಾಗಲು, ಜಯಾವತಿಯು ಮೊದಲಾಗಿ ನೆಲಮನೆಯನ್ನು ಮಾಡಿಸಿದಳು. "ನನಗೆ ಜಲೋದರರೋಗವಾಗಿದೆ. ಅದಕ್ಕೆ ಚಿಕಿತ್ಸೆ ಮಾಡಿಸುತ್ತೇನೆ" ಎಂದು ಸಿದ್ಧಾರ್ಥನಿಗೆ ಹೇಳಿ ರೋಗವೆಂಬ ಭಾವನೆ ಬರುವಂತೆ ಮಾಡಿ ನೆಲಮನೆಯೊಳಗೆ ಇದ್ದಳು. ಒಂಬತ್ತು ತಿಂಗಳು ತುಂಬಿದಾಗ ಪ್ರಸವವಾಯಿತು. ಮಗನನ್ನು ಹೆತ್ತು ತಾನು, ದಾದಿ, ಸೇವೆಮಾಡುವವಳು ಹೀಗೆ ಮೂವರು ಮಂದಿ ಮಾತ್ರ ಬಲ್ಲರು - ಉಳಿದ ಯಾರೂ ತಿಳಿಯರು ಹೀಗೆ ದಿವಸಗಳು ಕಳೆದುವು ಆಮೇಲೆ ಒಂದು ದಿವಸ ಚಾಕರಿ ಮಾಡುವ ದಾಸಿ ನೀರನ್ನು ತರಲು ಹೋದ ವೇಳೆಯಲ್ಲಿ ಹೊಳೆಯಲ್ಲಿ ಆಕೆಯ ಗೆಳತಿಯಾದ ನಾಗಬ್ಬೆಯೆಂಬವಳು ಆಕೆಯನ್ನು ಕಂಡು ಹೀಗೆ ಕೇಳಿದವಳು - "ಎಲೈ ಕುಂದಬ್ಬೆಯೇ, ಹಲವ ದಿವಸಗಳಿಂದ ನಾನು ನಿನ್ನನ್ನು ಕಂಡಿಲ್ಲ. ಇಷ್ಟುದಿವಸಗಳಿಂದಲೂ ಮೊದಲು ನೀನು ಕಾಣಿಸುದುದಕ್ಕೆ ಕಾರಣವನ್ನು ಹೇಳು" ಎಂದು ಕೇಳಿದಳು. ಅದಕ್ಕೆ ಕುಂದಬ್ಬೆ "ಕಾರಣವನ್ನು ನೀನು ಯಾರಿಗೂ ಹೇಳಕೂಡದು. ಹಾಗಿದ್ದರೆ ಮಾತ್ರ ಹೇಳುವೆನು" ಎಂದಳು. ಯಾರಿಗೂ ಹೇಳುವುದಿಲ್ಲವೆಂದು ನಾಗಬ್ಬೆಯಿಂದ ಪ್ರತಿಜ್ಞೆಮಾಡಿಸಿ ಅವಳು ಹೀಗೆಂದಳು - "ನೋಡು, ನಮ್ಮ ಸೆಟ್ಟಿತಿಯಾಗಿರುವ ಜಯಾವತಿಯ ಚಿಕ್ಕಸೆಟ್ಟಿ (ಮಗು)ವನ್ನು ಪೆತ್ತಿದ್ದಾಳೆ. ಈ ಸಂಗತಿಯನ್ನು ಯಾರಿಗೂ ತಿಳಿಯಲು ಬಿಡದೆ ನೆಲಮನೆಯಲ್ಲಿ ಅಡಗಿಕೊಂಡಿದ್ದಾಳೆ." ಈ ಮಾತನ್ನು ಅಲ್ಲಿಯೇ ಸಂಧ್ಯಾವಂದನೆಯನ್ನು ಮಾಡುತ್ತಿದ್ದ ಸೋಮಶರ್ಮನೆಂಬವನು ಕೇಳಿದನು. ಅತ್ಯಂತ ಬಡವನಾದ ಆ ಬ್ರಾಹ್ಮಣನು ಇದರಿಂದ ಬಹಳ ಸಂತೋಷಪಟ್ಟನು. ಅವನು ದೊಡ್ಡದೊಂದು ಮಾದಳದ ಹಣ್ಣನ್ನು ತೆಗೆದುಕೊಂಡು ಹೋಗಿ ಸಿದ್ಧಾರ್ಥನನ್ನು ಕಂಡು ಹೀಗೆ ವಿಜ್ಞಾಪನೆ ಮಾಡಿದನು. "ಎಲೈ ಮಹಾಪುರುಷನಾದ ಸಿದ್ಧಾರ್ಥಸೆಟ್ಟಿಯೇ, ನಿನಗೆ ನಾನು ಒಂದು ಶುಭವಾರ್ತೆಯನ್ನು ಹೇಳಲಿಕ್ಕಾಗಿ ಬಂದಿದ್ದೇನೆ. ನಿನ್ನ ಹೆಂಡತಿ ಜಯಾವತಿ ಗಂಡುಮಗುವನ್ನು ಹೆತ್ತಿದ್ದಾಳೆ" ಹೀಗ ಹೇಳಿದ ಬ್ರಾಹ್ಮಣನಿಗೆ ಸಿದ್ಧಾರ್ಥನು

ಮಗಂಬಿತ್ತಳೆಂದು ಪೇಟಿಪ್ಪೊಡೆ ಪೇಳ್ದ ಭಟ್ಟಂಗೆ ಕಟಕ ಕಟಸೂತ್ರಂ ಮೊದಲಾಗೊಡೆಯ ಅಂಗಚಿತ್ತಮುಮಂ ಪಿರಿದು ಕಸವರಮುಮಂ ಕೊಟ್ಟು ಪಾರ್ವಂಗೆ ದಾರಿದ್ರ್ಯಮೋಕ್ಷಮಂ ಮಾಡಿ ಸಿದ್ಧಾರ್ಥನೀ ಪಾರ್ವನ ಮಾತಂ ಕೇಳ್ದಾಗಳೆ ಪುತ್ರಮುಖಮಂ ನೋಟ್ಪೆನೆಂದು ಭೋಂಕನೆ ನೆಲಮನೆಯೊಳಗಂ ಪೊಕ್ಕು ನೋಟ್ಪನ್ನೆಗಂ ಜಯಾವತಿ ತನ್ನ ಸೋಂಕಿಲ ಮೇಗಿಟ್ಟಾದಿಸುತ್ತಿರ್ಪ ಕೂಸಂ ಎಳನೇಸಱ ತೇಜದೊಳ್ಪೋರಂತಪ್ಪನಂ ಕಂಡು ಪಲವು ಕಾಲಂ ಬಾಬ್ದಿಯಾಗೆಂದು ಮಗನಂ ಪರಸಿ ಮತ್ತಮಿಂತೆಂದನೆನ್ನ ಮೂವತ್ತೆರಡು ಕೋಟಿ ಕಸವರಕ್ಕಂ ರಾಜಶ್ರೇಷ್ಠವದಕ್ಕಮೆನ್ನ ಸಂತತಿಗಮೆಲ್ಲವಿನ್ನಿಂದಿತ್ತ ನೀನೆ ಅರಸನೆಂದು ನುಡಿದು ಸಮಸ್ತಭಾರಮೆಲ್ಲಮಂ ಕೂಸಿಂಗೆ ಸಮರ್ಪಿಸಿ ಸೋಂಕಿಲೊಳಗಿರ್ದ ಕೂಸಿಂಗೆ ಸೆಟ್ಟಿವಟ್ಟಂಗಟ್ಟಿ ಪರಸಿ ಸೇಸೆಯನಿಕ್ಕಿ ಸೋಂಕಿಲೊಳಿರ್ದನಂ ಕಂದನಪ್ಪುದಱಿಂ ಸುಕೌಶಲಸ್ವಾಮಿಯೆಂದು ಪೆಸರನಿಟ್ಟು ನೆಲಮನೆಯಂ ಪೊಱಮಟ್ಟು ಸ್ವಜನ ವರಿಜನ ಬುಧುವರ್ಗ್ಗಕ್ಕೆಲ್ಲಂ ನಿಶ್ಯಲ್ಯಂಗೆಯ್ದು ನೀಮಿನಿಬರುಂ ಸುಕೌಶಲಸ್ವಾಮಿಯಂ ಪಿಡಿದು ಬಾಟಮೆಂದು ಕಲ್ಪಿಸಿ ಸಂತಯಿಸಿ ವಿನಯಂಧರರೆಂಬಾಚಾರ್ಯರ ಪಕ್ಕದೆ ಪಲಂಬರುಂಬೆರಸು ತಪಂಬಟ್ಟಂ ಮತ್ತೆ ಶ್ರೀಕಾಂತೆ ಮೊದಲಾಗೊಡೆಯ ಪಲಂಬರ್ ಪೆಂಡಿರ್ಕ್ಕಳ್ ವಿನಯಂಧರ ಭಟ್ಟಾರರ್ ಗುರುಗಳಾಗೆ ಗುಣಮತಿಕಂತಿಯರ್ ಕಂತಿಯರಾಗೆ ತಪಂಬಟ್ಟು ಪಲಕಾಲಮುಗ್ರೋಗ್ರತಪಶ್ಚರಣಂಗೆಯ್ದು ಸಮಾಧಿಮರಣದಿಂದಂ ಮುಡಿಪಿ ದೇವಲೋಕದೊಳನಿಬರುಂ ಪುಟ್ಟಿದರ್ ಮತ್ತಿತ್ತ ಸಿದ್ಧಾರ್ಥ

ಚಿನ್ನದ ಬಳೆ, ಉಡಿದಾರ ಮುಂತಾಗಿರುವ ಮೈಮೇಲೆ ಧರಿಸುವ ಆಭರಣಗಳ ರೂಪದ ಬಹುಮಾನವನ್ನು ಕೊಟ್ಟು ಆ ಬ್ರಾಹ್ಮಣನನ್ನು ಬಡತನದಿಂದ ಬಿಡುಗಡೆ ಮಾಡಿದನು. ಅನಂತರ ಸಿದ್ಧಾರ್ಥನು ಒಡನೆಯೆ ಮಗನ ಮುಖವನ್ನು ನೋಡುವೆನೆಂದು ಬೇಗನೆ ನೆಲಮನೆಯ ಒಳಗೆ ಹೊಕ್ಕನು. ಆ ವೇಳೆಗೆ ಜಯಾವತಿ ಬಾಲಸೂರ್ಯನ ತೇಜಸ್ಸಿಗೆ ಸಮಾನವಾದ ಮಗುವನ್ನು ತನ್ನ ಮಡಿಲಲ್ಲಿ ಆಡಿಸುತ್ತಿರುವುದನ್ನು ಕಂಡನು. "ಚಿರಂಜೀವಿಯಾಗು ('ದೀರ್ಘಾಯುರ್ಭವ') ಎಂದು ಆಶೀರ್ವಾದ ಮಾಡಿದನು. ಆಮೇಲೆ ಹೀಗೆಂದನು. - "ನನ್ನ ಮೂವತ್ತೆರಡು ಕೋಟಿ ಹೊನ್ನಿಗೂ ರಾಜಶ್ರೇಷ್ಠಿ ಪದವಿಗೂ ನನ್ನ ಸಂತತಿಯವರಿಗೂ ಎಲ್ಲಾ ಇವತ್ತಿಂದ ಮುಂದೆ ನೀನೇ ಒಡೆಯನು." ಹೀಗೆ ಹೇಳಿ, ತನ್ನ ಎಲ್ಲ ಭಾರವನ್ನು ಮಗುವಿಗೆ ಸಲ್ಲಿಸಿದನು. ಮಡಿಲಿನಲ್ಲಿದ್ದ ಮಗುವಿಗೆ ಸೆಟ್ಟಿ ಪಟ್ಟವನ್ನು ಕಟ್ಟಿ ಆಶೀರ್ವದಿಸಿ ಮಂತ್ರಾಕ್ಷತೆಯನ್ನು ಹಾಕಿದನು. ಮಡಿಲಲ್ಲಿ ಇದ್ದ ಮಗುವನ್ನು ಕಂಡ ಕಾರಣದಿಂದ ಸುಕೌಶಲಸ್ವಾಮಿ ಎಂದು ಹೆಸರನ್ನಿಟ್ಟನು. ಸಿದ್ಧಾರ್ಥನು ಆಮೇಲೆ ನೆಲಮನೆಯಿಂದ ಹೊರಟು ಬಂದು ತನ್ನ ಜನರಿಗೂ ಸೇವಕರಿಗೂ ಬಂಧುವರ್ಗಕ್ಕೂ ತೊಂದರೆಗಳಿಲ್ಲದಂತೆ ಮಾಡಿ (ಸಂತೋಷವನ್ನುಂಟುಮಾಡಿ) ನೀವು ಈ ಎಲ್ಲರೂ ಸುಕೌಶಲ ಸ್ವಾಮಿಯನ್ನು ಕೂಡಿಕೊಂಡು ಬಾಳಿರಿ, ಎಂದು ಹೇಳಿಕೊಟ್ಟು ಸಮಾಧಾನಪಡಿಸಿದನು. ಆಮೇಲೆ ಅವನು ಹಲವರನ್ನು ಕೂಡಿಕೊಂಡು ವಿನಯಂಧರರೆಂಬ ಆಚಾರ್ಯರ ಬಳಿಯಲ್ಲಿ ತಪಸ್ಸಿನ ಆಚರಣೆಯನ್ನು ಪಡೆದನು. ಅನಂತರ ಶ್ರೀಕಾಂತೆ ಮುಂತಾಗಿರುವ ಹಲವರು ಹೆಂಡಿರು ವಿನಯಂಧರಸ್ವಾಮಿಗಳು ಗುರುಗಳಾಗಿರಲು ಗುಣಮತಿ ಕಂತಿಯರು ಭಿಕ್ಷುಣಿ ಸನ್ಯಾಸಿನಿಯರಾಗಿರಲು ತಪಸ್ಸಿಗೆ ಉಪದೇಶವನ್ನು ಪಡೆದು ಹಲವು ಕಾಲ ಅತ್ಯಂತ ಘೋರವಾದ ತಪಸ್ಸನ್ನು ಆಚರಿಸಿ, ಸಮಾಧಿಮರಣದಿಂದ ದೇಹತ್ಯಾಗ ಮಾಡಿದರು.

ರಿಸಿಯುಂ ಪನ್ನೆರಡು ವರುಷಂಬರಂ ಗುರುಗಳನಗಲದೆ ದ್ವಾದಶಾಂಗ ಚತುರ್ದಶ ಪೂರ್ವಮಪ್ಪಾಗಮಮೆಲ್ಲಮಂ ಕಲ್ತೇಕವಿಹಾರಿಯಪ್ಪೆಂ ಭಟಾರಾ ಎಂದು ಗುರುಗಳಂ ಬಿಸಗೊಂಡವರ ನುಮತದಿಂದೇಕವಿಹಾರಿಯಾಗಿ ಗ್ರಾಮೇ ಏಕರಾತ್ರಂ ನಗರೇ ಪಂಚರಾತ್ರಂ ಅಟವ್ಯಾಂ ದಶರಾತ್ರಮೆಂಬೀ ನ್ಯಾಯದಿಂ ವಿಹಾರಿಸುತ್ತಂ ಭಟ್ಟಾಮ ದಸಮ ದುವಾಳಸಾಷ್ಟೋಪವಾಸ ವಕ್ಕೋಪವಾಸ ಮಾಸೋಪವಾಸಂಗಳಂ ಮಾಡುತ್ತಂ ವಲಕಾಲಂ ತಪಂಗೆಯ್ಯುತ್ತಮಿರ್ದರ್, ಇತ್ತ ಜಯಾವತಿ ಮುಂ ಭಟ್ಟಾರರ್ ಪೇಟ್ಟಾದೇಶಮಂ ನೆನೆದು ತನ್ನ ಮನೆಯಂ ರಿಸಿಯರಂ ಪುಗಲೀಯದಂತಿರೆ ಬಾಗಿಲ್ಗಾಪಿನವರಂ ಕಲ್ಪಿಸಿದೊಳ್ ಮತ್ತೆ ಸಿದ್ಧಾರ್ಥರಿಸಿಯರ ಮೇಗೆ ಕ್ರೋಧಮಂ ಭಾವಿಸಿ ಬಾಲವದ್ದೆಯಂ ಕೂಸಂ ಸಿಸುವನವ್ಯಕ್ತನಂ ವಿಸುಟ್ಟೆಂತು ತಪಂಬಟ್ಟೆ ಪಾವ ಕರ್ಮ ದಯೆಯಿಲ್ಲದೊಂ ನಿಷ್ಕರುಣೆ ಎಂದು ಬಯ್ದಳ್ ಮತ್ತೆ ಸುಕೌಶಳಸ್ವಾಮಿಯಂ ವೊಲೆಯೂಡುವ ದಾದಿ ಸುಬ್ರತೆಯೆಂಬೊಳ್ ಸುಮತಿಯೆಂಬೊಳೂದುವ ದಾದಿ ನಂದೆಯೆಂಬೊಳಾಡಿಸುವ ದಾದಿ ಸುಪ್ರಭೆಯೆಂಬೊಳ್ ಮಜ್ಜನಂಬುಗಿಸುವ ದಾದಿ ಮೇಘಮಾಲೆಯೆಂಬೊಳ್ ಪಸದನಂಗೊಳಿಸುವ ದಾದಿ ಇಂತಯ್ವರ್

ಅವರೆಲ್ಲರೂ ದೇವಲೋಕದಲ್ಲಿ ಹುಟ್ಟಿದರು. ಆಮೇಲೆ ಇತ್ತ ಸಿದ್ಧಾರ್ಥ ಋಷಿ ಹನ್ನೆರಡು ವರ್ಷಗಳವರೆಗೆ ಗುರುಗಳ ಒಡನಾಟವನ್ನು ಬಿಡದೆ, "ಗುರುಗಳೇ, ಹನ್ನೆರಡು ಅಂಗಗಳೂ (ಆಚಾರಾಂಗ, ಸೂತ್ರಕೃತಾಂಗ....ಇತ್ಯಾದಿ) ಹದಿನಾಲ್ಕು ಪೂರ್ವಗಳೂ (ಉತ್ಪಾದಪೂರ್ವ, ಆಗ್ರಾಯಣೀ ಪೂರ್ವ....ಇತ್ಯಾದಿ) ಇರತಕ್ಕ ಶಾಸ್ತ್ರಗಳೆಲ್ಲವನ್ನೂ ಕಲಿತು ಒಂಟಿ ಪರಿವ್ರಾಜಕನಾಗುವೆನು" ಎಂದು ಗುರುಗಳನ್ನು ಕೇಳಿಕೊಂಡನು. ಅವರ ಅಪ್ಪಣೆಯಿಂತೆ ಏಕವಿಹಾರಿ (ಒಂಟಿ ಪರಿವ್ರಾಜಕನು) ಆಗಿ, 'ಗ್ರಾಮದಲ್ಲಿ ಒಂದು ರಾತ್ರಿ ನಗರದಲ್ಲಿ ಐದುರಾತ್ರಿ ಕಾಡಿನಲ್ಲಿ ಹತ್ತುರಾತ್ರಿ' ಎಂಬ ನ್ಯಾಯದಂತೆ ಸಂಚರಿಸುತ್ತಾ ಆರು, ಎಂಟು, ಹತ್ತು, ಹನ್ನೆರಡು ದಿನಗಳು ಮಾಡತಕ್ಕ ಅಷ್ಟೋಪವಾಸ, ಪಕ್ಷೋಪವಾಸ, ಮಾಸೋಪವಾಸಗಳನ್ನು ಮಾಡುತ್ತ ಹಲವು ಕಾಲದವರೆಗೆ ತಪಸ್ಸನ್ನು ಮಾಡುತ್ತಿದ್ದರು. ಇತ್ತಲಾಗಿ ಜಯಾವತಿ ಹಿಂದೆ ಸ್ವಾಮಿಗಳು ಹೇಳಿದ ಆಜ್ಞೆಯನ್ನು ಸ್ಮರಿಸಿಕೊಂಡು, ಋಷಿಗಳು ತನ್ನ ಮನೆಯನ್ನು ಪ್ರವೇಶಿಸಲಿಕ್ಕೆ ಬಿಡದ ಹಾಗೆ ದ್ವಾರರಕ್ಷಕರಿಗೆ ಹೇಳಿಕೊಟ್ಟಳು. ಆಮೇಲೆ ಸಿದ್ಧಾರ್ಥ ಋಷಿಗಳ ಮೇಲೆ ಕೋಪಗೊಂಡವಳಾಗಿ ಎಲೈ ಪಾಪ ಕೃತ್ಯ ಮಾಡಿದವನೇ, ದಯೆಯಿಲ್ಲದವನೇ, ಕರುಣಾಹೀನನೇ, ಬಾಣಂತಿಯಾಗಿರುವ ಹೆಂಡತಿಯನ್ನು ಬರೇ ಚಿಕ್ಕದಾಗಿದ್ದ ಶಿಶುವನ್ನು ತೊರೆದು ಹೇಗೆ ನೀನು ತಪಸ್ಸನ್ನು ಮಾಡಲು ಹೋದೆ ?- ಎಂದು ನಿಂದಿಸಿದಳು. ಆಮೇಲೆ, ಸುಕೌಶಳಸ್ವಾಮಿಗೆ ಸುಪ್ರತೆ ಎಂಬ ದಾದಿಯು ವೊಲೆಯೂಡುತ್ತಿದ್ದಳು. ಸುಮತಿ ಎಂಬವಳು ಲೇಪನಾದಿಗಳನ್ನು ಸಿದ್ಧಪಡಿಸಿ ಹಚ್ಚುವವಳಾಗಿದ್ದಳು. ನಂದೆ ಎಂಬವಳು ಆಟವಾಡಿಸುವ ದಾದಿಯಾಗಿದ್ದಳು. ಸುಪ್ರಭೆ ಎಂಬವಳು ಸ್ನಾನಮಾಡಿಸುವಳು. ಮೇಘಮಾಲೆಯೆಂಬವಳು ಅಲಂಕಾರ ಮಾಡತಕ್ಕವಳಾಗಿದ್ದಳು. ಈ ರೀತಿಯಾಗಿ ಐದು ಮಂದಿ ದಾದಿಗಳು (ಕ್ಷೀರ ಧಾತ್ರಿ, ಮಂಡನಧಾತ್ರಿ, ಮಜ್ಜನಧಾತ್ರಿ, ಕಿಳವನ (ಕ್ರೀಡೆಯ) ಧಾತ್ರಿ, ಮತ್ತು ಅಂಕಧಾತ್ರಿ - ಎಂಬವರು) ಸಾಕುತ್ತಿರಲು ಸುಕೌಶಳಸ್ವಾಮಿ ಸುಖದಿಂದ ಬೆಳೆದನು. ಅವನು ಹದಿನಾರು

ದಾದಿಯರ್ಕಳ್ ನದಪೆ ಸುಖದಿಂದಂ ಬಳೆದು ಪದಿನಾಱುಂ ವರುಷಂಬೋಗಿ ಯೌವನವಾದೊಡೆ ಮೂವತ್ತಿರ್ವರರಸುಮಕ್ಕಳ ಕೂಸುಗಳನತ್ಯಂತ ಲಾವಣ್ಯ ಸೌಭಾಗ್ಯ ಕಾಂತಿ ಹಾವ ಭಾವ ವಿಲಾಸ ವಿಭ್ರಮಂಗಳಿಂ ಕೂಡಿದೊರಂ ಬೇಡಿಯೊಂದೆ ಪಸೆಯೊಳ್ ಮದುವೆ ನಿಱಿಸಿದಳ್ ಮತ್ತೇಕಶಾಲ ದ್ವಿಶಾಲ ತ್ರಿಶಾಲ ಚತುಶ್ಶಾಲ ಸ್ವಸ್ತಿಕ ನಂದ್ಯಾವರ್ತಂ ಮೊದಲಾಗೊಡೆಯ ಮಾಡಂಗಳುಂ ಮೂವತ್ತೆರಬ್ಬಿಳ್ ಮಾಡಂಗಳುಮಂ ಮಾಡಿಸಿ ತನ್ನ ಮನೆಯಂಗಣದೊಳ್ ಸೆಂಡಾಡುವ ತಟಿಯುಮಾನೆಯನೇಱುವ ವಿನೋದಂ ಮೊದಲಾಗೊಡೆಯ ವಿನೋದಸ್ಥಾನಂಗಳೆಲ್ಲಮಂ ಮಾಡಿಸಿ ಪೊಱಮಡಲೀಯದಂತು ಕಾಪಂ ಮಾಡಿ ಮಗನೈಶ್ವರ್ಯಮಂ ವಿನೋದಮುಮನಚ್ಚೆಯಿಂದಂ ದಿವಸಕ್ಕಂ ನೋಮತಿರ್ಕುಮಾ ಸುಕೌಶಲಸ್ವಾಮಿಯುಂ ಮೂವತ್ತಿರ್ವ್ವರ್ ಪೆಂಡಿರ್ಕಳೊಡನೆ ಇಷ್ಟವಿಷಯ ಕಾಮ ಭೋಗ ಸುಖಂಗಳಂ ಪಲಕಾಲಮನುಭವಿಸುತ್ತಿರೆ ಮತ್ತೊಂದು ದಿವಸಂ ಸುಕೌಶಲಸ್ವಾಮಿಯುಂ ವೃಥ್ವೀಧರಮೆಂಬ ಪ್ರಾಸಾದದೇಱನೆಯ ನೆಲೆಯ ಮೇಗೆ ತಾನುಂ ತಾಯುಂ ಸುವ್ರತೆ ಮೊದಲಾಗೊಡೆಯ ಅಯ್ದರ್ ದಾದಿಯರುಂ ಸ್ವಯಂಪ್ರಭೆ ಮೊದಲಾಗೊಡೆಯ ಮೂದತ್ತಿರ್ವ್ವರ್ ಪೆಂಡಿರ್ಕಳಿಂತಿನಿಬರಿಂದಂ ಪರಿವೇಷ್ಟಿತನಾಗಿ ಗವಾಕ್ಷಜಾಲಾಂತರದೊಳ್ ದಿಶಾವಳೋಕನಂಗೆಯ್ಯುತ್ತುಂ ಸುಖಸಂಕಥಾವಿನೋದದಿಂದಿರ್ಪನ್ನೆಗಮಿತ್ತ ಸಿದ್ಧಾರ್ಥರಿಸಿಯರ್ ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಯೋಧ್ಯಾನಗರಮಂ ಬಂದು ಮಾಸೋಪವಾಸದ

ವರ್ಷ ಪ್ರಾಯದವನಾಗಿ ಯುವಕನಾನು. ಅವನಿಗೆ ಮೂವತ್ತೆರಡು ಮಂದಿ ರಾಜಕುಮಾರಿಯರನ್ನು - ಅತಿಶಯವಾದ ಲಾವಣ್ಯ, ಸೌಭಾಗ್ಯ, ಕಾಂತಿ, ಹಾವ, ಭಾವ, ವಿಲಾಸ, ವಿಭ್ರಮಗಳಿಂದ ಕೂಡಿದವರನ್ನು, ಕೇಳಿ ತಂದು ಒಂದೇ ಹಸೆಯಲ್ಲಿ (ಏಕಕಾಲದಲ್ಲಿ) ಜಯಾವತಿ ಮದುವೆ ಮಾಡಿಸಿದಳು. ಆಮೇಲೆ - ಒಂದು, ಎರಡು, ಮೂರು, ನಾಲ್ಕು ಕೊಠಡಿಗಳುಳ್ಳ ಸ್ವಸ್ತಿಕ, ನಂದ್ಯಾವರ್ತ ಮುಂತಾಗಿರುವ ಮನೆಗಳನ್ನು ಮೂವತ್ತೆರಡು ಬಗೆಯ ಸಾಲು ಕಟ್ಟಡಗಳನ್ನು ಮಾಡಿಸಿದಳು. ತನ್ನ ಮನೆಯ ಅಂಗಳದಲ್ಲಿ ಚೆಂಡಾಡುವುದಕ್ಕೆ ತಕ್ಕುದಾದ ಜಗಲಿಗಳನ್ನೂ ಆನೆಯ ಮೇಲೇರಿ ಸವಾರಿ ಮಾಡುವ ವಿನೋದ ಮುಂತಾಗಿರುವ ವಿನೋದಸ್ಥಾನಗಳೆಲ್ಲವನ್ನೂ ಮಾಡಿ ಅಲ್ಲಿಂದ ಹೊರಟುಹೋಗದಂತೆ ರಕ್ಷಣೆಯ ಏರ್ಪಾಡನ್ನು ಮಾಡಿ, ಮಗನ ಸಂಪತ್ತನ್ನೂ ವಿನೋದವನ್ನೂ ಪ್ರತಿದಿನವೂ ಆಕೆ ತಪ್ಪದೆ ನೋಡುತ್ತಿದ್ದಳು. ಆ ಸುಕೌಶಲಸ್ವಾಮಿ, ಮೂವತ್ತೆರಡು ಮಂದಿ ಹೆಂಡಿರೊಡನೆ ತನಗೆ ಪ್ರೀತಿಯುದೆನಿಸುವ ಕಾಮಸುಖಾನುಭವಗಳನ್ನು ಹಲವು ಕಾಲದವರೆಗೆ ಅನುಭವಿಸುತ್ತ ಇದ್ದನು. ಹೀಗಿರಲು ಆಮೇಲೆ ಒಂದು ದಿವಸ ಸುಕೌಶಲಸ್ವಾಮಿ ಪೃಥ್ವೀಧರ (ಪರ್ವತ) ಎಂಬ ಮನೆಯ ಏಳನೆಯ ಉಪ್ಪರಿಗೆಯ ಮೇಲೆ ತಾನೂ ತಾಯಿ ಜಯಾವತಿಯೂ ಸುವ್ರತೆ ಮುಂತಾಗಿ ಇರತಕ್ಕ ಐದು ಮಂದಿ ದಾದಿಯರೂ ಸ್ವಯಂಪ್ರಭೆ ಮೊದಲಾಗಿರುವ ಮೂವತ್ತೆರಡು ಮಂದಿ ಹೆಂಡಿರೂ ಹೀಗೆ ಇಷ್ಟು ಮಂದಿಯಿಂದ ಆವರಿಸಿಕೊಂಡು, ಗವಾಕ್ಷದ (ಗಾಳಿತೂತಿನ) ಬಲೆಯ ಎಡೆಯಲ್ಲಿ ದಿಕ್ಕುಗಳನ್ನೆಲ್ಲಾ ನೋಡುತ್ತ ಸುಖದ ಸಂಗತಿಯನ್ನೇ ಹೇಳುವ ವಿನೋದದಿಂದ ಇದ್ದನು. ಆ ವೇಳೆಗೆ ಇತ್ತಲಾಗಿ, ಸಿದ್ಧಾರ್ಥ ಋಷಿಗಳು ಸಂಚಾರಮಾಡುತ್ತ - ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪತ್ತನ, ದ್ರೋಣಾಮುಖ ಎಂಬ ಭೂವಿಭಾಗಗಳಲ್ಲಿ ಸಂಚರಿಸುತ್ತ, ಅಯೋಧ್ಯಾನಗರಕ್ಕೆ ಬಂದರು.

ಪಾರಣೆಯಂದು ಚರಿಗೆವೊಕ್ಕು ಕಿಜುಮನೆ ಪೆರ್ಮನೆಯೆನ್ನದುಣಲ್ ತಕ್ಕ ಮನೆಗಳಂ ಯಥಾಕ್ರಮದಿಂ ಪುಗುತ್ತಂ ಬರ್ಪರ್ ಸುಕೌಶಳಸ್ವಾಮಿಯ ಮನೆಯಂ ಪೊಕ್ಕು ಪೊಱಮಡುವರ್ ಗಿಡಿ ಗಿಡಿ ಜಂತ್ರಂ ಮಿಳಿಮಿಳಿನೇತ್ರರಪ್ಪ ಮಾಸೋಪವಾಸಂಗೆಯ್ದು ರಿಸಿಯರ್ ಪೋಪುದಂ ಸುಕೌಶಳಸ್ವಾಮಿ ಕಂಡೀ ಪೋಪರೇನೆಂಬರಬ್ಬಾ ಅಪೂರ್ವರೂಪರಿನ್ನರನೆಂಮಂ ಕಂಡಱಯೆನೆಂದು ತಾಯಂ ಬೆಸಗೊಂಡೊಡೆ ತಾಯ್ ಇಂತೆಂದು ಪೇೞ್ದಳ್ ಮಗನೆ ಈತನಂಗಡಿಯಲವಡಂ ಪೆಱುಕಿ ತಿಂದು ಬಾೞ್ವಂ ಬೈಕಂಗುಳಿ ಬೇಡಿ ಪೊಱಲೆಲ್ಲಮಂ ತೊಱಲ್ದು ಬಸಿಱಿಂ ಪೊರೆವೊಂ ದೇಸಿಗನಾರುಮಿಲ್ಲದೊಂ ಕೋವಣಕ್ಕಪ್ಪೊದಂ ಭಾಗಸಮಿಲ್ಲದೊನೆಂದು ಜಯಾವತಿ ಪೇೞ್ದೊಡೆ ಸುವ್ರತೆಯೆಂಬ ದಾದಿ ಮಾರ್ಕೊಂಡಿಂತೆಂದಳ್ ಹಾ ಪೊಲ್ಲದಂ ನುಡಿದಯ್ ಸ್ವಾಮಿಯಂ ಪರಮೇಶ್ವರನಂ ನೀಂ ಮೊದಲಾಗೊಡೆಯ ಮೂವತ್ತಿರ್ವರುಮೊಳ್ಪಿಂದಿರ್ಕ್ಕಳುಮಂ ಮೂವತ್ತೆರಟ್ಕೋಟಿ ಕಸಪರಮುಮಂ ಕೊಳದ ಪುಲ್ಲ ದರ್ಕ್ಕಂ ತೊಱೆವಂತನಿತುಮಂ ತೊಱೆದು ಕರ್ಮಕ್ಷಯಾರ್ಥಂ ತಪಂಬಟ್ಟಾತನನಿಳಿಸಿ ಪರಿಭವಿಸಿ ಮುಟ್ಟುಗಿಡಿಸಿ ನುಡಿಯಲ್ವೇಡೆಂದು ಬಾರಿಸಿದೊಳಂ ಜಯಾವತಿ ಕಣ್ಮಿತ್ತಿ ಬಾರಿಸಿದಡೆ ಕೆಮ್ಮಗಿರ್ದ್ದು ಪೆಱಪೆಱಮನೆ ನುಡಿಯಲ್ ತಗುಳ್ದೊಡೆ ಸುಕೌಶಳಸ್ವಾಮಿಯವರಿರ್ವರ ನುಡಿಗಳ್

ಒಂದು ತಿಂಗಳ ಉಪವಾಸದ ನಂತರ ಪಾರಣೆಯ ದಿನ ಭಿಕ್ಷೆಗೆ ಹೋದರು. ಚಿಕ್ಕ ಮನೆ ದೊಡ್ಡಮನೆ ಎನ್ನದೆ ಊಟಮಾಡಲು ತಕ್ಕುದಾದ ಮನೆಗಳನ್ನು ಯಥಾರೀತಿಯಾಗಿ ಪ್ರವೇಶಿಸುತ್ತ ಬರುತ್ತಿದ್ದವರು ಸುಕೌಶಳ ಸ್ವಾಮಿಯ ಮನೆಯನ್ನು ಹೊಕ್ಕು ಹೊರಟುಹೋಗುತ್ತಿದ್ದರು. ತಿಂಗಳುಗಟ್ಟಲೆ ಉಪವಾಸ ಮಾಡಿ ಕದಿರಕಡ್ಡಿಯಂತೆ ಕೃಶವಾದ ದೇಹವುಳ್ಳ ಮತ್ತು ಗುಳಿಬಿದ್ದ ಕಣ್ಣುಗಳಿಂದ ಮಿಳಮಿಳನೆ ನೋಡುತ್ತಿದ್ದ ಋಷಿಗಳು ಹೋಗುವುದನ್ನು ಸುಕೌಶಲ ಸ್ವಾಮಿ ಕಂಡು ತಾಯಿಯೊಂಡೆ - "ಅಮ್ಮಾ ಈಗ ಹೋಗುತ್ತಿರುವವರು ಯಾರು ? ಅಪೂರ್ವವಾದ ರೂಪುಳ್ಳವರು ; ಇಂಥವರನ್ನು ನಾನು ಎಂದಿಗೂ ಕಂಡಿಲ್ಲ, ತಿಳಿದಿಲ್ಲ" ಎಂದು ಕೇಳಿದನು. ಆಗ ತಾಯಿ ಈ ರೀತಿಯಾಗಿ ಹೇಳಿದಳು - ಇವನು ಅಂಗಡಿಯಲ್ಲಿ ಬಿಸಾಡಿದ ಅವಡೆ (ಅಲಸಂದೆ) ಬೀಜವನ್ನು ಹೆಕ್ಕಿತಿಂದು ಬದುಕುವವನು. ಭಿಕ್ಷೆ ಬೇಡುವುದೇ ಶೀಲವಾಗಿ ಇರುವವನು. ಬೇಡಿಕೊಂಡು ಪಟ್ಟಣವನ್ನೆಲ್ಲ ಸುತ್ತಾಡಿಕೊಂಡು ಹೊಟ್ಟೆ ಹೊರೆಯ ತಕ್ಕವನು. ಮನೆಮಾರು ಇಲ್ಲದವನು. ಕೌಪೀನ ಕೊಂಡುಕೊಳ್ಳುವುದಕ್ಕೂ ಹಣವಿಲ್ಲದವನು - ಎಂದು ಜಯಾವತಿ ಹೇಳಿದಳು. ಆಗ ಸುವ್ರತೆಯೆಂಬ ದಾದಿ ಪ್ರತಿಭಟಿಸಿ ಹೀಗೆಂದಳು - "ಅಹಾ! ಕೆಟ್ಟ ಮಾತನ್ನಾಡಿದೆಯಲ್ಲವೆ ? ನೀನೇ ಮೊದಲಾಗುಳ್ಳ ಮೂವತ್ತೆರಡು ಮಂದಿ ಒಳ್ಳೆಯ ಹೆಂಡಿರನ್ನೂ ಮೂವತ್ತೆರಡು ಕೋಟಿ ಹೊನ್ನನ್ನೂ ಕೊಳದ ಹುಲ್ಲಿನ ಕೂಳೆಯನ್ನು ಬಿಟ್ಟು ಬಿಡುವ ಹಾಗೆ ಅಷ್ಟೆಲ್ಲವನ್ನೂ ತೊರೆದು ಕರ್ಮವನ್ನು ನಾಶಪಡಿಸುವುದಕ್ಕಾಗಿ ತಪಸ್ಸನ್ನು ಕೈಗೊಂಡ ಸ್ವಾಮಿಯೂ ಪರಮೇಶ್ವರನೂ ಆದವನನ್ನು ಹೀನಯಿಸಿ ಅವಮಾನಗೊಳಿಸಿ ಅಸ್ಪೃಶ್ಯನನ್ನಾಗಿ ಭಾವಿಸಿ ನುಡಿಯಬೇಡ!"- ಎಂದು ಆತಂಕಮಾಡಿದಳು. ಅವಳನ್ನು ಜಯಾವತಿ ಕಣ್ಣಲುಗಿಸಿ ತಡೆಯಲು ಸುಮ್ಮನಿದ್ದು ಬೇರೆಬೇರೆಯಾದ ಮಾತುಗಳನ್ನಾಡಲು ಪ್ರಾರಂಭಿಸಿದಳು. ಆಗ ಸುಕೌಶಳಸ್ವಾಮಿ ಅವರಿಬ್ಬರ ಮಾತುಗಳು ಗೂಢಾರ್ಥವುಳ್ಳ ಮಾತುಗಳೆಂದು ತನ್ನ

ಸಗರ್ಭವಚನಂಗಳಿಂದು ತನ್ನ ಮನದೊಳೆ ಬಗೆಯುತ್ತಿರ್ಪಿನಂ ಬಾಣಸಿಗಂ ಬಂದು ಬೋನಮೆತ್ತಿಯೋಗರಮಾಜೆದಪ್ಪುದೆಂದು ಪೇಟ್ಟೊಡೆ ತಾಯುಂ ಸುವ್ರತೆ ಮೊದಲಾಗೊಡೆಯ ದಾದಿಯರಯ್ವರುಮಾತನ ಪೆಂಡಿರ್ಕಳ್ ಸ್ವಯಂಪ್ರಭೆ ಶ್ರೀದತ್ತೆ ಬಂಧುಮತಿ ಭಾನುಮತಿ ಮಿತ್ರಸೇನೆ ಪ್ರಿಯಂಗು ಸುಂದರಿ ಪ್ರಿಯದೆ ಶ್ಯಾಮಲತೆ ವಿದ್ಯುಲ್ಲತೆ ಅಚಲೆ ವಿಮಳಮತಿ ಶ್ರೀಕಾಂತೆ ಶಶಿಪ್ರಭೆ ಸೂರಸೇನೆ ಅನಂತಮತಿ ಸರಸ್ವತಿ ವಿಜಯೆ ವೈಜಯಂತೆ ಅವರಾಜಿತೆ ಕನಕಮಾಳೆ ಧಾನ್ಯೆ ವಸುಂಧರೆಯೆಂದಿವರ್ ಮೊದಲಾಗೊಡೆಯರೆಲ್ಲರ್ ನೆರೆದಿಂತೆಂದರ್ ವೇಳಾತಿಕ್ರಮಮಾದಪುದಾರೊಗಿ ಸಲ್ಗೇಟಿಮೆಂದು ನುಡಿದೊಡೆ ಸುಕೌಶಳಸ್ವಾಮಿಯಿಂತೆಂದನೀ ವೃತ್ತಾಂತಮೆಲ್ಲಮನಜೆದೊಡಲ್ದುಣ್ಬಿನಲ್ಲಿನ ದಱಿಂ ಪೇಱ್ ಸುವ್ರತೆ ಏನಂ ಕಂದಿರಾರುಳ್ಳುದನುಳ್ಳಂತೆ ಪೇಱಿಯಪ್ಪೊಡೆ ನಿನಗೆನ್ನಾಣೆಯೆಂದು ತನ್ನ ಮೇಗೆ ಸೂರುಳಿಸಿ ಬೆಸಗೊಂಡೊಡೆ ಸುವ್ರತೆಯೆಂಬೊಳ್ ಮೊಲೆಯೂಡಿದ ದಾದಿಯಿಂ ತೆಂದು ಪೇಟ್ದಳ್ ಕೇಳ್ ಮಗನೆ ಇವರ್ ನಿನ್ನ ತಂದೆವಿರ್ ಸಿದ್ಧಾರ್ಥರೆಂಬೊರ್ ನೀನ್ ತೊಟ್ಟಿಲೊಳಿರ್ದಂತೆ ನಿನಗೆ ಪೆಟ್ಟವಟ್ಟಂಗಟ್ಟಿ ಸಂಸಾರಕ್ಕೆ ಪೇಸಿ ಕರ್ಮ ಕ್ಷಯಾರ್ಥಂ ತಪಂಬಟ್ಟೀ ಮೆಯ್ಯಂ ನಿಱಿಸಲ್ಕೇದಿ ಪೊಱಮೊಳಗೆ ಚರಿಗೆವೊಕ್ಕು ಬಾವರಿವುಗುತ್ತುಂ ಬಂದು ನಿನ್ನ ಮನೆಯಂ ಪೊಕ್ಕು ಪೊಱಮಟ್ಟು ಪೋದರೆಂದು ಪೇಟ್ದೆನ್ನಾರೋಗಿಸಲ್ಕೇಟ್ಕುಂ ಏಟು ಮಗನೆ ಎಂದೊಡೆ

ಮನಸ್ಸಿನಲ್ಲಿ ಭಾವಿಸುತ್ತಿದ್ದನು. ಆ ವೇಳೆಗೆ ಅಡಿಗೆಯವನು ಬಂದು ಭೋಜನವನ್ನು ಬಡಿಸಿ, 'ಅನ್ನ ತಣ್ಣಗಾಗುತ್ತಿದೆ' ಎಂದು ಹೇಳಿದನು. ತಾಯಿಯೂ ಸುವ್ರತೆ ಮುಂತಾಗಿರುವ ಐದುಮಂದಿ ದಾದಿಯರೂ ಅವನ ಹೆಂಡಿರಾದ ಸ್ವಯಂಪ್ರಭೆ, ಶ್ರೀದತ್ತೆ, ಬಂಧುಮತಿ, ಭಾನುಮತಿ, ಮಿತ್ರಸೇನೆ, ಪ್ರಿಯಂಗು, ಸುಂದರಿ, ಪ್ರಿಯದೆ, ಶ್ಯಾಮಲತೆ, ವಿದ್ಯುಲ್ಲತೆ, ಅಚಲೆ, ವಿಮಳಮತಿ, ಶ್ರೀಕಾಂತೆ, ಶಶಿಪ್ರಭೆ, ಸೂರಸೇನೆ, ಅನಂತಮತಿ, ಸರಸ್ವತಿ, ವಿಜಯೆ, ವೈಜಯಂತೆ, ಅಪರಾಜಿತೆ, ಕನಕಮಾಳೆ, ಧಾನ್ಯೆ, ಧನಶ್ರೀ, ವಸುಂಧರೆ - ಎಂದು ಇವರೇ ಮೊದಲಾಗಿ ಉಳ್ಳ ಎಲ್ಲರೂ ಕೂಡಿ ಹೀಗೆ ಹೇಳಿದರು -"ಸಮಯ ಮೀರುತ್ತದೆ, ಊಟಮಾಡಲಿಕ್ಕೆ ಏಳಿರಿ" ಎಂದ ಹೇಳಲು ಸುಕೌಶಳಸ್ವಾಮಿ ಹೀಗೆಂದನು - "ಈ ಸಂಗತಿಯೆಲ್ಲವನ್ನೂ ತಿಳಿದ ಹೊರತು ಊಟಮಾಡೆನು. ಆದುದರಿಂದ ಎಲೈ ಸುವ್ರತೆ, ಹೇಳು. ಏನನ್ನು ಕಂಡಿದ್ದೀರಿ ? ಯಾರು ? ಇದ್ದುದನ್ನು ಇದ್ದಂತೆ ಹೇಳೆಯಾದರೆ ನಿನಗೆ ನನ್ನ ಆಣೆಯಿದೆ ." ಹೀಗೆ ತನ್ನ ಮೇಲೆ ಪ್ರತಿಜ್ಞೆಯನ್ನು ಮಾಡಿ ಕೇಳಿದನು. ಅದಕ್ಕೆ, ಮೊಲೆಕೊಟ್ಟ ದಾದಿಯಾದ ಸುವ್ರತೆಯೆಂಬವಳು ಹೀಗೆ ಹೇಳಿದಳು - "ಮಗನೇ, ಕೇಳು. ಇವರು ನಿನ್ನ ತಂದೆಯವರು, ಸಿದ್ಧಾರ್ಥ ಎಂಬ ಹೆಸರಿನವರು. ನೀನು ತೊಟ್ಟಿಲಲ್ಲಿ ಇದ್ದಹಾಗೆಯೇ ನಿನಗೆ ಸೆಟ್ಟಿಪಟ್ಟವನ್ನು ಕಟ್ಟಿ, ಸಂಸಾರಕ್ಕೆ ಜಿಗುಪ್ಸೆ ಪಟ್ಟು ಕರ್ಮವನ್ನು ಕುಗ್ಗಿಸುವುದಕ್ಕಾಗಿ ತಪಸ್ಸನ್ನು ಕೈಗೊಂಡರು. ಈ ದೇಹಧಾರಣೆಗೋಸ್ಕರವಾಗಿ ಭಿಕ್ಷೆ ಬೇಡುವುದಕ್ಕೆಂದು ಈ ಪಟ್ಟಣದ ಒಳಗೆ ಪ್ರವೇಶಿಸಿ, ತುಂಬಿ ಹೇಗೆ ಹೂವಿನಿಂದ ಹೂವಿಗೆ ಹೋಗುವುದೋ ಹಾಗೆಯೇ ಭಿಕ್ಷಾರ್ಥಿಯಾಗಿ ಮನೆಯಿಂದ ಮನೆಗೆ ಹೋಗುತ್ತ ಬಂದು, ನಿನ್ನ ಮನೆಯನ್ನು ಹೊಕ್ಕು ಹೊರಟುಹೋದರು" ಎಂದು ಹೇಳಿ, "ಇನ್ನು ಊಟಮಾಡಬೇಕು, ಮಗನೇ ಏಳು" - ಎಂದಳು. ಆಗ ಸುಕೌಶಳಸ್ವಾಮಿಯು -

ಸುಕೌಶಸ್ವಾಮಿಯಿಂದನಂತಪ್ಪೊಡಾನುಮವರಂತಪ್ಪ ರೂಪಂ ಕೈಕೊಂಡಲ್ಲದುಣ್ಣೆನೆಂದು ಪ್ರತಿಜ್ಞೆಗೆಯ್ದಿರ್ದೊಡೆ ಸ್ವಜನ ಪರಿಜನ ಬಂಧುವರ್ಗಮೆಲ್ಲಂ ನೆರೆದಿಂತೆಂದರ್ ನೀನಿನ್ನುಂ ಕೂಸಯ್ ಕಾಮಭೋಗಂಗಳನನುಭವಿಸುವ ದಿವಸಂಗಳ್ ತಪಂಬಡುವ ದಿವಸಮಲ್ಲಂ ಪ್ರಾಯಂಬೋದಿಂ ಬಟಿಕ್ಕೆ ನಿನ್ನಮ್ಮನೆಂತು ನಿನಗೆ ಮಗನಾದೊಡೆ ಮಗಂಗೆ ಸೆಟ್ಟಿವಟ್ಟಂಗಟ್ಟಿ ಸಮಸ್ತ ಭಾರಮಂ ನಿರೂಪಿಸಿ ತಪಂಬಡುವುದೆಂದೆಲ್ಲರುಂ ನುಡಿದೊಡಿಂತೆಂದನನ್ನೆಗಮೇಂ ಸಾವರೊ ಬಾಳ್ವರೊ ಎಂತಜೆಯಲಕ್ಕುಂ ಮಾನಸವಾಟಿಂಬುದು ಪನಿ ಪುಲ್ಲ ಮುಗಿಲ ಸಂಜೆಯೊಳ್ಗೋರಂತಪ್ಪುದಜೆಂದಾರ್ ಬಾರಿಸಿದೊಡಂ ನಿಲ್ದೆನಲ್ಲೆಂದು ಸ್ವಯಂಪ್ರಭೆಯೆಂಬೊಳ್ ಬಸಿಱ ಪೆಂಡತಿಯಾಕೆಯ ಬಸಿಱ ಕೂಸಿಂಗೆ ಸೆಟ್ಟಿವಟ್ಟಂಗಟ್ಟಿ ಮನೆಯಿಂದಂ ಪೊಱಮಟ್ಟು ರಿಸಿಯರಿರ್ದೆಡೆಯಂ ಬೆಸಗೊಳುತ್ತುಂ ಪೋಗಿ ಬಹಿರುದ್ಯಾನವನದೊಳ್ ಸ್ಫಟಿಕತಿಲಾತಲವ ಮೇಗಿರ್ದ ಸಿದ್ಧಾರ್ಥ ಭಟ್ಟಾರರಂ ಕಂದು ಸುಕೌಶಳಸ್ವಾಮಿ ಜಾತಿಸ್ಮರನಾಗಿ ದರ್ಶನವಿಶುದ್ಧಿಯೊಳ್ ಕೂಡಿದ ಶುಭಪರಿಣಾಮದಿಂದಂ ಬಂದಿಸಿದಾಗಳವಧಿಜ್ಞಾನ ಮುಮಾಗೆ ಅವರ ತನ್ನ ಮುನ್ನಿನ ಭವಾಂತರಗಳೆಲ್ಲಮಂ ಪ್ರತ್ಯಕ್ಷಮಾಗಲೆದು ಮನದೊಳಿಂತೆಂದು ಬಗೆದನಿವಂ ಮುನ್ನಿನ ಭವಾಂತರದೊಳ್ ಪ್ರಿಯದರ್ಶನನೆಂಬ ಸೆಟ್ಟಿ ಕಾಲಂಗೆಯ್ದು ಮಲಯ

"ಹಾಗಾದರೆ ನಾನೂ ಅವರಂತಹ ರೂಪವನ್ನು ಕೈಕೊಳ್ಳುವೆನು. ಅಲ್ಲದೆ ಊಟಮಾಡೆನು" ಎಂದು ಪ್ರತಿಜ್ಞೆ ಮಾಡಿದನು. ಹೀಗಿರಲು, ಸ್ವಜನರು ಸೇವಕರು ಬಂಧುಗಳು ಎಲ್ಲಾ ಒಟ್ಟಾಗಿ ಹೀಗೆಂದರು "ನೀನಿನ್ನೂ ಮಗುವಾಗಿರುವೆ. ಕಾಮಸುಖಿಗಳನ್ನು ಅನುಭವಿಸುವ ದಿವಸಗಳು, ತಪಸ್ಸನ್ನಾಚರಿಸುವ ದಿವಸಗಳಲ್ಲ. ಪ್ರಾಯಹೋದ ನಂತರ (ಮುದುಕನಾದ ಮೇಲೆ) ನಿನ್ನ ತಂದೆ ಹೇಗೆ ನಿನಗೆ ಸೆಟ್ಟಿಪಟ್ಟವನ್ನು ಕಟ್ಟಿ ಎಲ್ಲಾ ಭಾರವನ್ನೂ ವಹಿಸಿಕೊಟ್ಟು ತಪಸ್ಸಿಗೆ ತೆರಳಿದನೋ ಹಾಗೆಯೇ ನೀನೂ ನಿನಗೆ ಮಗನಾದಾಗ ಅವನಿಗೆ ಸೆಟ್ಟಿ ಪಟ್ಟವನ್ನು ಕಟ್ಟಿ ಎಲ್ಲಾ ಭಾರವನ್ನು ಸೂಚಿಸಿ ತಪಸ್ಸನ್ನು ಆಚರಿಸಬುಹುದು" - ಹೀಗೆ ಎಲ್ಲರೂ ಹೇಳಿದರು. ಆಗ ಸುಕೌಶಳನು ಹೀಗೆಂದನು - "ಅಷ್ಟರೊಳಗೆ ಏನು, ಸಾಯುತ್ತಾರೋ? ಬದುಕುತ್ತಾರೊ ? ತಿಳಿಯಲು ಹೇಗೆ ಸಾಧ್ಯ? ಮನುಷ್ಯನ ಜೀವನವೆಂಬುದು ಹುಲ್ಲುಮೇಲಿನ ಹನಿ, ಮೋಡ, ಸಂಜೆಗೆಂಪು- ಇವುಗಳಿಗೆ ಸಮಾನವಾದುದು. ಆದುದರಿಂದ ಯಾರು ತಡೆದರೂ ನಾನು ನಿಲ್ಲುವವನಲ್ಲ." ಹೀಗೆ ಹೇಳಿ, ಸ್ವಯಂಪ್ರಭೆ ಎಂಬ ಗರ್ಭಿಣಿಯಾದ ಪತ್ನಿಯ ಗರ್ಭದಲ್ಲಿದ್ದ ಶಿಶುವಿಗೆ ಸೆಟ್ಟಿ ಪಟ್ಟವನ್ನು ಕಟ್ಟಿ ಮನೆಯಿಂದ ಹೊರಟನು. ಋಷಿಗಳಿರುವ ಸ್ಥಾನವನ್ನು ಕೇಳಿ ತಿಳಿದುಕೊಳ್ಳುತ್ತ ಹೋಗಿ, ಪಟ್ಟಣದ ಹೊರಗಿನ ಉದ್ಯಾನದಲ್ಲಿ ಚಂದ್ರಕಾಂತಶಿಲಾಸ್ಥಳದ ಮೇಲೆ ಇದ್ದ ಸಿದ್ಧಾರ್ಥತಪಸ್ವಿಗಳನ್ನು ಕಂಡನು. ಆಗ ಸುಕೌಶಳಸ್ವಾಮಿ ತನ್ನ ಪೂರ್ವಜನ್ಮದ ಸ್ಮರಣೆಯನ್ನು ಹೊಂದಿ, ಸಮ್ಯಗ್ದರ್ಶನದಲ್ಲಿ ಕೂಡಿದ ಮಂಗಳಕರ ಪರಿಣಾಮದಿಂದ ವಂದಿಸಿದ ಕೂಡಲೇ ಅವನಲ್ಲಿ ಅವಧಿಜ್ಞಾನವುಂಟಾಯಿತು. ಸಿದ್ಧಾರ್ಥಮುನಿಯ ಮತ್ತು ತನ್ನ ಹಿಂದಿನ ಬೇರೆ ಬೇರೆ ಜನ್ಮಗಳ ವಿವರವೆಲ್ಲವನ್ನೂ ಪ್ರತ್ಯಕ್ಷವಾಗಿ ತಿಳಿದು ಮನಸ್ಸಿನಲ್ಲಿ ಹೀಗೆ ಭಾವಿಸಿದನು - "ಇವನು (ಸಿದ್ಧಾರ್ಥಭಟ್ಟಾರರು) ಹಿಂದಿನ ಒಂದು ಜನ್ಮದಲ್ಲಿ ಪ್ರಿಯದರ್ಶನನೆಂಬ ಸೆಟ್ಟಿಯಾಗಿದ್ದನು. ಅವನು ಸತ್ತು ಮಲಯಸುಂದರನೆಂಬ ಆನೆಯಾಗಿ ಹುಟ್ಟಿದನು. ಆಮೇಲೆ

ಸುಂದರನೆಂಬಾನೆಯಾಗಿ ಪುಟ್ಟಿದನಲ್ಲಿಂ ಬಟೆಯಂ ಕುಬೇರಕಾಂತನೆಂಬೊನಾದನಲ್ಲಿಂ ಬಟೆಯಂ ವಿದ್ಯುನ್ಮಾಳಿಯೆಂಬ ವಿದ್ಯಾಧರನಾದನಲ್ಲಿಂ ಬಟೆಯಂ ಸಿದ್ಧಾರ್ಥನೆಂಬೊನೀಗಳಾಗಿ ತಪಂಬಟ್ಟನಂತು ಸಿದ್ಧಾರ್ಥಭಟ್ಟಾರರ ಭವಂಗಳ್ಕೆದು ಮತ್ತಾಂ ಮುನ್ನಿನ ಭವದೊಳ್ ಪ್ರಿಯಸೇನೆಯೆಂಬ ಮಾಲೆಗಾರ್ತಿಯೆಂ ಕಾಲಂಗೆಯ್ದು ಪದ್ಮಾವತಿಯೆಂಬ ಪಿಡಿಯಾಗಿ ಪುಟ್ಟಿದೆನಲ್ಲಿಂ ಬಟೆಯಂ ವರಾಂಗನಾದೆನಲ್ಲಿಂ ಬಟೆಯಂ ಶ್ರೀಧರನಾದೆನಲ್ಲಿಂ ಬಟೆಯಂ ಚಂಡವೇಗನೆಂಬ ವಿದ್ಯಾಧರನಾದೆನಲ್ಲಿಂ ಬಟೆಯಂ ಸಿದ್ಧಾರ್ಥಂಗಂ ಜಯಾವತಿಗಂ ಮಗನೆನಾಂ ಸುಕೌಶಲಸ್ವಾಮಿಯಾಗಿ ಪುಟ್ಟಿದೆನಿಂತೆನ್ನ ಭವಾಂತರಮಾಱು ಮತ್ತಾಂ ಪ್ರಿಯಸೇನೆಯಪ್ಪಂದೆನ್ನ ಕೆಳದಿ ಸುಕೀರ್ತಿಯೆಂಬಳ್ ಪ್ರಿಯದರ್ಶನನ ಭಾರ್ಯೆ ಕಾಲಂಗೆಯ್ದು ಮಲಯಾವತಿಯೆಂಬ ಪಿಡಿಯಾಗಿ ಪುಟ್ಟಿದೊಳಲ್ಲಿಂ ಬಟೆಯಂ ಸುಕೇಶಿನಿಯಾದಳಲ್ಲಿಂ ಬಟೆಯಂ ಮನೋಹರಿಯಾದಳಲ್ಲಿಂ ಬಟೆಯಂ ವಿರಳವೇಗೆಯೆಂಬ ವಿದ್ಯಾಧರಿಯಾದಳಲ್ಲಿಂ ಬಟೆಯಂ ಶ್ರೀಕಾಂತೆಯಾದೊಳಾಕೆಯಂ ಸಿದ್ಧಾರ್ಥಂಗೆ ಕೊಟ್ಟುದಂತು ಶ್ರೀಕಾಂತೆಯ ಭವಾಂತರಮಾಱಿಂತು ಮೂವರ ಭವಾಂತರಂಗಳನಱೆದು ಸಂಸಾರಕ್ಕೆ ವೈರಾಗ್ಯಮಾಗಿ ಸಿದ್ಧಾರ್ಥಭಟ್ಟಾರರ ಪಕ್ಕದೆ ಸುಕೌಶಲಸ್ವಾಮಿ ತಪಂಬಟ್ಟುಂ ಸುಭದ್ರೆಯುಟೆಯೆ ಉಳಿದ ಮೂವತ್ತಿರ್ವ್ವರ್ ಪೆಂಡಿರುಂ ಸಿದ್ಧಾರ್ಥಭಟಾರರ್ ಗುರುಗಳಾಗೆ ಗುರುಮತಿ ಕಂತಿಯರ್ ಕಂತಿಯರಾಗೆ ತಪಂಬಟ್ಟು ಪಲಕಾಲಮುಗ್ರೋಗ್ರತಪಶ್ಚರಣಂಗೆಯ್ದು

ಕುಬೇರಕಾಂತನೆಂಬವನಾದನು. ಅನಂತರದಲ್ಲಿ ವಿದ್ಯುನ್ಮಾಳಿಯೆಂಬ ವಿದ್ಯಾಧರನಾದನು. ಅಲ್ಲಿಂದ ನಂತರ ಈಗ ಸಿದ್ಧಾರ್ಥನೆಂಬವನಾಗಿ ತಪಸ್ಸನ್ನು ಆಚರಿಸಿದನು. ಅಂತೂ ಸಿದ್ಧಾರ್ಥಮುನಿಗಳಿಗೆ ಇದುವರೆಗೆ ಆದ ಜನ್ಮಗಳು ಐದು. ಆಮೇಲೆ, ನಾನು ಹಿಂದಿನ ಒಂದು ಜನ್ಮದಲ್ಲಿ ಪ್ರಿಯಸೇನೆಯೆಂಬ ಮಾಲೆಗಾರ್ತಿಯಾಗಿದ್ದೆನು. ಅನಂತರ ಸತ್ತು ಪದ್ಮಾವತಿ ಎಂಬ ಹೆಣ್ಣಾನೆಯಾಗಿ ಜನಿಸಿದೆನು. ಆಮೇಲೆ ವರಾಂಗನಾದೆನು. ಅದಾದ ಮೇಲೆ ಶ್ರೀಧರನಾದೆನು. ಅಲ್ಲಿಂದ ಬಳಿಕ ಚಂಡವೇಗನೆಂಬ ವಿದ್ಯಾಧರನಾದೆನು. ಆಮೇಲೆ ಸಿದ್ಧಾರ್ಥನಿಗೂ ಜಯಾವತಿಗೂ ಮಗನಾದ ನಾನು ಸುಕೌಶಲಸ್ವಾಮಿಯಾಗಿ ಜನಿಸಿದೆನು. ಈ ರೀತಿಯಾಗಿ ನನ್ನ ಜನ್ಮಾಂತರಗಳು ಆರು ಆಮೇಲೆ, ನಾನು ಪ್ರಿಯಸೇನೆ ಎಂಬವಳಾಗಿದ್ದಾಗ ನನ್ನ ಗೆಳತಿಯಾದ ಸುಕೀರ್ತಿ ಎಂಬವಳು ಪ್ರಿಯದರ್ಶನನ ಪತ್ನಿಯಾಗಿದ್ದು ಸತ್ತಮೇಲೆ, ಮಲಯಾವತಿ ಎಂಬ ಹೆಣ್ಣಾನೆಯಾಗಿ ಹುಟ್ಟಿದಳು. ಆಮೇಲೆ ಸುಕೇಶಿನಿಯಾದಳು. ಅನಂತರ ಮನೋಹರಿ ಎಂಬವಳಾದಳು. ಆಮೇಲೆ ವಿರಳವೇಗೆಯೆಂಬ ವಿದ್ಯಾಧರಿಯಾದಳು. ಆ ಬಳಿಕ ಶ್ರೀಕಾಂತೆಯಾದಳು. ಅವಳನ್ನು ಸಿದ್ಧಾರ್ಥನಿಗೆ ಕೊಟ್ಟು ಮದುವೆಮಾಡಲಾಗಿತ್ತು. ಆ ರೀತಿಯಲ್ಲಿ ಶ್ರೀಕಾಂತೆಯ ಜನ್ಮಾಂತರಗಳು ಆರು. ಅಂತೂ ಮೂವರ ಬೇರೆ ಬೇರೆ ಜನ್ಮಗಳ ವಿಚಾರವನ್ನು ತಿಳಿದು, ಸಂಸಾರ ವಿಷಯದಲ್ಲಿ ವೈರಾಗ್ಯವುಂಟಾಗಿ ಸುಕೌಶಲಸ್ವಾಮಿ ಸಿದ್ಧಾರ್ಥಮುನಿಗಳ ಬಳಿಯಲ್ಲಿ ತಪಸ್ಸನ್ನು ಆಚರಿಸಿದನು. ಸುಭದ್ರೆ ಎಂಬವಳನ್ನು ಬಿಟ್ಟು ಉಳಿದ ಮೂವತ್ತೆರಡು ಮಂದಿ ಹೆಂಡಿರು, ಸಿದ್ಧಾರ್ಥಮುನಿಗಳೇ ಗುರುಗಳಾಗಲು ಗುಣಮತಿ ಕಂತಿಯರು, ಮಾರ್ಗದರ್ಶಕ ಭಿಕ್ಷುಣಿಯಾರಾಗಲೂ ತಪಸ್ಸನ್ನು ಸ್ವೀಕರಿಸಿ ಹಲವುಕಾಲ ಬಹಳ ಘೋರವಾದ ತಪಸ್ಸನ್ನು ಮಾಡಿ ಸಮಾಧಿಮರಣದಿಂದ ಸತ್ತು ದೇವಲೋಕದಲ್ಲಿ ಹುಟ್ಟಿದರು. ಆಮೇಲೆ ಇತ್ತ

ಸಮಾಧಿಮರಣದಿಂ ಮುಡಿಪಿ ದೇವಲೋಕದೊಳ್ ಪುಟ್ಟಿದರ್ ಮತ್ತಿತ್ತ ಜಯಾವತಿಯುಂ ತನ್ನಂ ಬಾರಿಸೆವಾರಿಸೆ ಸುಕೌಶಲಸ್ವಾಮಿ ತಪಂಬಟ್ಟನೆಂದು ಮುಳಿದು ಜಿನಧರ್ಮಮಂ ಪಟೆದು ಉನ್ಮಾರ್ಗೋಪದೇಶದಿಂದಾರ್ತಧ್ಯಾನದೊಳ್ ಕೂಡಿ ಸತ್ತು ಮೊಗ್ಗಳಗಿರಿಯೆಂಬ ಪರ್ವತದೊಳ್ ಪೆಣ್ಬುಲಿಯಾಗಿ ಪುಟ್ಟಿದಳ್ ಮತ್ತಿತ್ತ ಸುಕೌಶಲಸ್ವಾಮಿ ದ್ವಾದಶಾಂಗಚತುರ್ದಶಪೂರ್ವಮಪ್ಪಾಗಮಮೆಲ್ಲಮಂ ಕಲ್ತು ಗುರುಗಳೊಡನೆ ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹರಿಸುತ್ತಂ ಪಲಕಾಲಂ ತಪಂಬಟ್ಟು ದೊಗ್ಗಳಗಿರಿಯೆಂಬ ಪರ್ವತಕ್ಕೆ ವಂದು ಮಳೆಗಾಲದೊಳಿರ್ವರುವೊಂದೆ ಗುಹೆಯೊಳ್ ಜೋಗುಗೊಂಡು ನಾಲ್ಕು ತಿಂಗಳುಮಿರ್ವರುಮುಪ ವಾಸಂಗೆಯ್ದು ಜೋಗು ನೆಲೆಗೊಡೆ ಚಾತುರ್ಮಾಸದ ಪಾರಣೆಯೆಂದು ಸುಕೌಶಲಸ್ವಾಮಿಯಪ್ಪ ರಿಸಿಯರ್ ಗುಹೆಯಿಂದಂ ಮುನ್ನ ಪೊಱಮಟ್ಟು ದೆಸೆಗಳಂ ನೋಟ್ಪನನ್ನೆಗಂ ತಾಯಪ್ಪ ಪೆಣ್ಬುಲಿ ಪಲವುದಿವಸಮಾಹಾರಮಂ ಪೆಱದೆ ಪಸಿದು ಮಲ್ಕಲ ಮಱುಗುತ್ತಿರ್ದ್ದ ರಿಸಿಯರಂ ಕಂಡು ಮುಳಿದು ಮಸಗಿ ಮೇಲ್ಪಾಯಲ್ ಪರಿತಪ್ಪುದಂ ಕಂಡು ಸುಕೌಶಲಸ್ವಾಮಿ ಆ[illegible] ಶರೀರಕ್ಕೆ ಯಾವಜ್ಜೀವಂ ನಿವೃತ್ತಿಯೆಂದು ಕಾಯೋತ್ಸರ್ಗಂಗೆಯ್ದು

ಗಾಹೆ ॥ ಖಮ್ಮಾಮಿ ಸವ್ವಜೀವಾಣಂ ಸವ್ವೇ ಜೀವಾ ಖಮಂತು ಮೇ
ಮೆತ್ತೀ ಮೇ ಸವ್ವಭೂದೇಸು ವೇರಂ ಮಜ್ಝಣ ಕೇಣ ಚ ॥
ಮಜ್ಝಸಹಾವಂ ಣಾಣಂ ದಂಸಣ ಚರಣಂ ನ ಕಂಪಿ ಆವರಣಂ

ಜಯಾವತಿ ತಾನು ಎಷ್ಟೊಂದು ತಡೆದರೂ ಸುಕೌಶಳಸ್ವಾಮಿ ತಪಸ್ಸಿಗೆ ಹೋದನೆಂದು ಕೋಪಗೊಂಡಳು. ಜೈನಧರ್ಮವನ್ನು ನಿಂದಿಸಿದಳು. ಕುಟಿಲವಾದ ಉಪದೇಶದಿಂದ ಆರ್ತಧ್ಯಾನದಲ್ಲಿ ಸತ್ತು ಮೊಗ್ಗಳಗಿರಿ ಎಂಬ ಪರ್ವತದಲ್ಲಿ ಹೆಣ್ಣು ಹುಲಿಯಾಗಿ ಹುಟ್ಟಿದಳು. ಆಮೇಲೆ ಇತ್ತ ಸುಕೌಶಳಸ್ವಾಮಿ ಆಚಾರಾಂಗ, ಸೂತ್ರ ಕೃತಾಂಗ ಮುಂತಾದ ಹನ್ನೆರಡು ಅಂಗಗಳಿಗೂ ಉತ್ಪಾದಪೂರ್ವ ಮುಂತಾದ ಹದಿನಾಲ್ಕು ಬಗೆಯ ಪೂರ್ವಗಳಿಂದಲೂ ಕೂಡಿದ ಆಗಮಗಳೆಲ್ಲವೂ ಕಲಿತು ಗುರುಗಳೊಂದಿಗೆ ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖಿಗಳಲ್ಲಿ ಸಂಚರಿಸುತ್ತ ಹಲವು ಕಾಲ ತಪಸ್ಸನ್ನು ಮಾಡಿ, ಮೊಗ್ಗಳಗಿರಿಯೆಂಬ ಪರ್ವತಕ್ಕೆ ಬಂದು ಮಳೆಗಾಲದಲ್ಲಿ ಗುರುಶಿಷ್ಯರಿಬ್ಬರೂ ಒಂದೇ ಗುಹೆಯಲ್ಲಿ ಯೋಗಸ್ಥರಾದರು. ಇಬ್ಬರೂ ನಾಲ್ಕು ತಿಂಗಳ ಕಾಲ ಉಪವಾಸ ಮಾಡಿ ಯೋಗನಿರತರಾದರು. ಚಾತುರ್ಮಾಸದ ಪಾರಣೆಗಾಗಿ ಸುಕೌಶಳಸ್ವಾಮಿಯಾಗಿರುವ ಋಷಿಯು ಗುಹೆಯಿಂದ ಮೊದಲು ಹೊರಟು ದಿಕ್ಕುಗಳ ಕಡೆಗೆ ನೋಡುತ್ತಿದ್ದನು. ಆ ವೇಳೆಗೆ ಅವನ ತಾಯಿಯಾಗಿದ್ದ ಹೆಣ್ಣು ಹುಲಿಯು ಹಲವು ದಿವಸಗಳಿಂದ ಆಹಾರವನ್ನು ಪಡೆಯದೆ ಹಸಿದು ಅತ್ಯಂತ ಸಂತಾಪ ಪಡುತ್ತಿತ್ತು. ಅದು ಋಷಿಗಳನ್ನು ಕಂಡಿತು. ಕೋಪದಿಂದ ಉದ್ರೇಕಗೊಂಡು, ಮೈಮೇಲೆ ಹಾರಲು ಬರುತ್ತಿರುವುದನ್ನು ಸುಕೌಶಳಸ್ವಾಮಿ ಕಂಡು, ಆಹಾರಕ್ಕೂ ಈ ಶರೀರಕ್ಕೂ ಜೀವವಿರುವ ಪರ್ಯಂತ ನಿವೃತ್ತಿಯಾಗಲೆಂದು ದೇಹತ್ಯಾಗ ಮಾಡಲು ನಿಶ್ಚಯಿಸಿದನು- [ಎಲ್ಲಾ ಜೀವಗಳನ್ನೂ ನಾನು ಕ್ಷಮಿಸುತ್ತೇನೆ. ಸಮಸ್ತ ಜೀವಗಳೂ ನನ್ನನ್ನು ಕ್ಷಮಿಸಲಿ. ಎಲ್ಲಾ ಪ್ರಾಣಿಗಳಲ್ಲಿಯೂ ನನಗೆ ಸ್ನೇಹವಿದೆ. ಎಲ್ಲಿಯೂ ನನಗೆ ದ್ವೇಷವಿಲ್ಲ. ನನ್ನ ಸ್ವಭಾವವು ಸಮ್ಯಕ್‌ಜ್ಞಾನ, ಸಮ್ಯಗ್ದರ್ಶನ, ಸಮ್ಯಕ್

ಜೋ ಸಂವೇಯಣ ಗಾಹಿ ಸೋಹಂ ಣಾದಾ ಹವೇ ಆದಾ
ಛಿಜ್ಜಉ ಭಿಜ್ಜಉ ಜಾಉ ಖಉ ಜೋಇಯ ಏಹು ಸರೀರಂ
ಆಪ್ಪಾ ಭಾವಹಿಣಿಮ್ಮಲ ಉ ಜೇಂ ಪಾವಹಿ ಭವತೀರು ॥

ಎಂದಿಂತು ಕ್ಷಮೆಯಂ ಭಾವಿಸಿ ಧರ್ಮಧ್ಯಾನ ಶುಕ್ಲಧ್ಯಾನಂಗಳಂ ಧ್ಯಾನಿಸುತಮಿರೆ ಪುಲಿಬಂದು ಪಾಯ್ದು ಬಸಿಜಂ ಪೋಬ್ದು ನೆತ್ತರಂ ಕುಡಿದು ತೆಗಲೆಯಂ ಪೋಬ್ದು ತಿನ್ಬಾಗಳ್ ಸಿದ್ಧಾರ್ಥರಿಸಿಯುಂ ಗುಹೆಯಿಂ ಪೊಱಮಟ್ಟು ಬಂದು ಕಂಡು ಹಾ ಪಂಚಮಹಾಪಾತಕಿ ಮಗನನೇಕೆ ಕೊಂದು ತಿಂದೆ ಮುನ್ನೆ ಕುಂಕುಮಪಂಕಿತಮಪ್ಪ ದಿಬ್ಯದೇಹದೊಳ್ ಬಿಮರ ಬಿಂದುಗಳಂ ಕಂಡು ನೆತ್ತರೆಂದು ಬಗೆದು ಮೂರ್ಛೆಗೆ ಸಲ್ಬಾಕೆಯೇ ಈಗಳ್ ಮಗನಂ ಪೋಬ್ದು ತಿಂದಪ್ಪಯ್ ಅಹೋ ಕಷ್ಟಂ ಸಂಸಾರಮೆಂದು ಸಿದ್ಧಾರ್ಥಭಟ್ಟಾರರ್ ನುಡಿವ ವಚನಮಂ ಕೇಳ್ದು ವಕ್ಷಃಸ್ಥಳದ ಶ್ರೀಲಾಂಛನಮಂ ಕಂದು ಜಾತಿಸ್ಮರೆಯಾಗಿ ಮೂರ್ಛೆಗೆ ಸಂದು ನೀಡಱೆಂದೆಚ್ಚರ್ತು ಹಾ ಪಂಚಮಹಾಪಾತಕಿಯೆನೆನ್ನ ಮಗನಂ ಪೋಳ್ದು ತಿಂದೆನೆಂದು ತನ್ನಂ ತಾಂ ನಿಂದಿಸಿ ತಲೆಯಂ ಕಾಲ್ಗಳಂ ಪಾಷಾಣವೃಕ್ಷಂಗಳೊಳ್ ಶತಚೂರ್ಣಮಾಗೆ ಬಡಿದುಕೊಂದು ಹಾ ಮಗನೆ ಪೊಲ್ಲದಂಗೆಯ್ದೆನೆಂದು ಪ್ರಳಾಪಂಗೆಯ್ದು ಮಹಾಶೋಕಂಗೆಯ್ಯುತ್ತಿರೆ ಭಟ್ಟಾರರದರ್ಕೆ

ಚಾರಿತ್ರ - ಎಂಬವು. ನನಗೆ ಯಾವ ಕರ್ಮಲೇಪವೂ ಇಲ್ಲ. ಯಾವನು ಸಂವೇದನೆಯುಳ್ಳವನೋ ಅವನೇ ನಾನು. ಆತ್ಮನು ಜ್ಞಾತೃ (ತಿಳಿಯುವವನು) ಆಗುತ್ತಾನೆ. ಈ ಶರೀರ ಕತ್ತರಿಸಲ್ಪಡಲಿ, ಭೇದಿಸಲ್ಪಡಲಿ, ಸೀಳಲ್ಪಡಲಿ, ನಾಶವಾಗಲಿ, ಎಲೈ ಯೋಗಿಯೇ, ಯಾವುದರಿಂದ ಸಂಸಾರದ ಅಚಿಯ ದಡವನ್ನು ಪಡೆಯುವೆಯೋ ಆ ನಿರ್ಮಲವಾದ ಆತ್ಮನನ್ನು ಧ್ಯಾನಿಸು]. ಹೀಗೆನ್ನುತ್ತ ಕ್ಷಮೆಯನ್ನು ಭಾವಿಸಿಕೊಂಡು ಧರ್ಮಧ್ಯಾನ ಶುಕ್ಲಧ್ಯಾನಗಳನ್ನು ಧ್ಯಾನಿಸುತ್ತಿದ್ದನು. ಆಗ ಹುಲಿ ಬಂದು ಹಾರಿ ಹೊಟ್ಟೆಯನ್ನು ಸೀಳಿತು. ರಕ್ತವನ್ನು ಕುಡಿಯತೊಡಗಿತು. ಎದೆಯನ್ನು ಸೀಳಿ ತಿನ್ನುತ್ತಿರಲು ಸಿದ್ಧಾರ್ಥಮುನಿ ಗುಹೆಯಿಂದ ಹೊರಗೆ ಬಂದು ನೋಡಿ "ಅಹಾ ಪಂಚಮಹಾಪಾಪ ಮಾಡಿದ ಜಂತುವೇ, ಮಗನನ್ನು ಯಾಕೆ ಕೊಂದು ತಿಂದೆ ? ಹಿಂದೆ ನೀನು ಕುಂಕುಮದ ಕೆಸರಿನಿಂದ ಕೂಡಿದ ದಿವ್ಯವಾದ ಶರೀರದಲ್ಲಿ ಬೆವರಿನ ಹನಿಗಳನ್ನು ಕಂಡಾಗ ರಕ್ತವೆಂದು ಭಾವಿಸಿ ಮೂರ್ಛೆ ಹೋಗುವವಳಾಗಿದ್ದೆ ! ಅಂತಹ ನೀನು ಈಗ ಮಗನನ್ನು ಸೀಳಿ ತಿನ್ನುತ್ತಿರುವೆ ! ಆಹಾ, ಸಂಸಾರವೇ ! ಕಷ್ಟ!" ಎಂದು ಸಿದ್ಧಾರ್ಥಋಷಿಗಳು ಹೇಳುವ ಮಾತನ್ನು ಕೇಳಿ, ಎದೆಯ ಮೇಲಿರುವ ಶ್ರೀ ಲಾಂಛನವನ್ನು ಕಂಡು ಆ ಹೆಣ್ಣು ಹುಲಿಗೆ ಪೂರ್ವಜನ್ಮದ ಸ್ಮರಣೆಯುಂಟಾಯಿತು. ಅದು ಕೂಡಲೇ ಮೂರ್ಛೆ ಹೋಯಿತು. ಹೆಚ್ಚು ಹೊತ್ತಾದ ಮೇಲೆ ಎಚ್ಚೆತ್ತು "ಅಹಾ, ನಾನು ಪಂಚಮಹಾಪಾತಕಿಯಾಗಿರುತ್ತೇನೆ. ನನ್ನ ಮಗನನ್ನೇ ನಾನು ಸೀಳಿ ತಿಂದುಬಿಟ್ಟೆನು" ಎಂದು ತನ್ನನ್ನು ತಾನು ನಿಂದಿಸಿತು.ಆ ಮೇಲೆ ತನ್ನ ತಲೆಯನ್ನೂ ಕಾಲುಗಳನ್ನೂ ಕಲ್ಲುಗಳಿಗೂ ಮರಗಳಿಗೂ ಬಡಿದು ನೂರಾರು ಚೂರಾಗುವಂತೆ, ಮಾಡಿ, "ಹಾ ಮಗನೇ, ಕೆಟ್ಟುದನ್ನು ಮಾಡಿದೆನು ಎಂದು ಅಳುತ್ತ, ಮಹಾದುಃಖವನ್ನು ತಾಳಿರಲು, ಸಿದ್ಧಾರ್ಥಮುನಿಗಳು ಅದಕ್ಕೆ ಧರ್ಮವಿಚಾರವನ್ನು ತಿಳಿಸಿ, ಸಂಸಾರದ ಸ್ಥಿತಿಯನ್ನು

ಧರ್ಮಶ್ರವಣಂಗೆಯ್ದು ಸಂಸಾರಸ್ಥಿತಿಯನಱೆಯೆ ಪೇಟ್ದು ವ್ರತಂಗಳನೇಱಿಸಿದೊಡುಪಶಮಕ್ಕೆ ಸಂದಾಹಾರ ಶರೀರಕ್ಕೆ ಯಾವಜ್ಜೀವಂ ನಿವೃತ್ತಿಗೆಯ್ದು ಶುಭಪರಿಣಾಮದೊಳ್ ಕೂಡಿ ಮುಡಿಪಿ ಸೌಧರ್ಮಕಲ್ಪದೊಳ್ ಪುಟ್ಟಿತ್ತು ಸಿದ್ಧಾರ್ಥರಿಸಿಯರುಂ ಸಮ್ಯಗ್ದರ್ಶನಜ್ಞಾನಚಾರಿತ್ರಂಗಳಂ ಸಾಧಿಸಿ ಕರ್ಮಕ್ಷಯಂಗೆಯ್ದು ಮೋಕ್ಷವನೆಯ್ದಿದರ್ ಸುಕೌಶಲಸ್ವಾಮಿಯುಂ ತಿರಿಕೋಪಸರ್ಗಮಂ ಸೈರಿಸಿ ಸರ್ವಾರ್ಥಸಿದ್ಧಿಯೊಳ್ ಸಯಸತ್ತಮದೇವನಾಗಿ ಪುಟ್ಟಿ ಮೂವತ್ತುಮೂಱು ಸಾಗರೋಪ ಮಾಯುಷ್ಯಮನೊಡೆಯನಪ್ಪ ಅಹಮಿಂದ್ರನಾದೊನ್ ಎಂಬಿದೆಲ್ಲಮಂ ಯಶೋಧರಕೇವಲಿಗಳ್ ಪೇಳೆ ಚಂಪಾಪುರಾಧಿಪತಿಯಪ್ಪ ಗಂಧಭಾಜನನೆಂಬರಸಂ ಕೇಳ್ದಾದಮಾನುಂ ಸಂತುಷ್ಟಚಿತ್ತನಾಗಿ ಭಟಾರರ್ಗೆಱಗಿ ಪೊಡೆಮಟ್ಟು ಸಂಸಾರಶರೀರಭೋಗನಿರ್ವೇಗಪರಾಯಣನಾಗಿ ಧಾತ್ರಿವಾಹನನೆಂಬ ತನ್ನ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ನೂರ್ವರರಸು ಮಕ್ಕಳ್ವೆರಸು ಯಶೋಧರಕೇವಲಿಗಳ ಪಕ್ಕದೆ ತಪಂಬಟ್ಟಂ ಮತ್ತಪ್ಪರೆಯರ್ಕಳೊಳೋರನ್ನರಪ್ಪರಸಿಯರ್ ನೂರ್ವರುಂ ಯಶೋಧರಕೇವಲಿಗಳ್ ಗುರುಗಳಾಗೆ ಪದ್ಮಾವತಿ ಕಂತಿಯರ್ ಕಂತಿಯರಾಗೆ ತಪಂಬಟ್ಟು ಸಮಾಧಿಮರಣದಿಂದಂ ಮುಡಿಪಿ ಸೌಧರ್ಮಂ ಮೊದಲಾಗೊಡೆಯ ದೇವಲೋಕದೊಳ್ ಪುಟ್ಟಿದರಿತ್ತ ಗಂಧಭಾಜನಮುನಿಯುಂ ದ್ವಾದಶಾಂಗ ಚತುರ್ದಶ ಪೂರ್ವಮಪ್ಪಾಗಮಮೆಲ್ಲಮಂ

ತಿಳಿಯುವ ಹಾಗೆ ಹೇಳಿ ವ್ರತಗಳನ್ನು ಧರಿಸುವಂತೆ ಮಾಡಿದರು. ಆ ಹೆಣ್ಣುಹುಲಿ ಮನೋನಿಗ್ರಹಕ್ಕೆ ಒಳಗಾಗಿ ಬದುಕಿರುವವರೆಗೂ ಆಹಾರವನ್ನು ನಿವೃತ್ತಿಗೊಳಿಸಿ ಶುಭಕರವಾದ ಪರಿಣಾಮದಲ್ಲಿ ಕೂಡಿ, ಸತ್ತು ಸೌಧರ್ಮವೆಂಬ ಕಲ್ಪದಲ್ಲಿ ಹುಟ್ಟಿತು. ಸಿದ್ಧಾರ್ಥಋಷಿಗಳು ಸಮ್ಯಗ್ದರ್ಶನ ಸಮ್ಯಗ್ಜ್ಞಾನ ಸಮ್ಯಕ್ಚಾರಿತ್ರ ಎಂಬ ರತ್ನತ್ರಯವನ್ನು ಸಾಧಿಸಿ ಘಾತಿ - ಅಘಾತಿ ಎಂಬ ಕರ್ಮಗಳನ್ನು ನಾಶಗೊಳಿಸಿ ಮೋಕ್ಷವನ್ನು ಹೊಂದಿದರು. ಸುಕೌಶಲಸ್ವಾಮಿ ತಿರ್ಯಕ್ಕುಗಳಿಂದ ಒದಗುವ ತಪೋವಿಘ್ನಗಳನ್ನು ಸಹಿಸಿಕೊಂಡು 'ಸರ್ವಾರ್ಥಸಿದ್ಧಿ' ಎಂಬ ಎಲ್ಲಕ್ಕೂ ಮೇಲಿನದಾದ ಮತ್ತು ಅತ್ಯುತ್ತಮವಾದ ಸ್ಥಾನದಲ್ಲಿ ಸಯಸತ್ತಮನೆಂಬ ದೇವನಾಗಿ ಹುಟ್ಟಿ, ಮೂವತ್ತಮೂರು ಸಾಗರೋಪಮವಾದ ಆಯುಷ್ಯವನ್ನುಳ್ಳ ಅಹಮಿಂದ್ರನಾದನು. ಈ ರೀತಿಯ ಸಂಗತಿಯೆಲ್ಲವನ್ನೂ ಯಶೋಧರ ಕೇವಲಿಗಳು ಹೇಳಲು, ಚಂಪಾಪುರದ ರಾಜನಾದ ಗಂಧಭಾಜನನು ಕೇಳಿ ಅತ್ಯಂತ ಸಂತೋಷಪಟ್ಟ ಮನಸ್ಸುಳ್ಳವನಾಗಿ ಋಷಿಗಳಿಗೆ ಸಾಷ್ಟಾಂಗ ವಂದನೆ ಮಾಡಿದನು. ಸಂಸಾರ ಶರೀರದ ಸುಖದಲ್ಲಿ ವೈರಾಗ್ಯತತ್ಪರನಾದನು. ಧಾತ್ರಿವಾಹನನೆಂಬ ತನ್ನ ಹಿರಿಯ ಮಗನಿಗೆ ರಾಜ್ಯದ ಪಟ್ಟವನ್ನು ಕಟ್ಟಿ, ನೂರುಮಂದಿ ರಾಜಕುಮಾರರನ್ನೂ ಮಕ್ಕಳನ್ನೂ ಕೂಡಿಕೊಂಡು ಯಶೋಧರನೆಂಬ ತಪಸ್ವಿಗಳ ಬಳಿಯಲ್ಲಿ ತಪಸ್ಸನ್ನು ಕೈಗೊಂಡನು. ಆಮೇಲೆ, ದೇವಸ್ತ್ರೀಯರಿಗೆ ಸಮಾನರಾದ ನೂರು ಮಂದಿ ರಾಣಿಯರು ಯಶೋಧರಕೇವಲಿಗಳನ್ನೇ ಗುರುಗಳನ್ನಾಗಿ ಮಾಡಿಕೊಂಡು ಪದ್ಮಾವತಿ ಕಂತಿಯರು ಮಾರ್ಗದರ್ಶನ ಮಾಡುವ ಸನ್ಯಾಸಿನಿಯರಾಗಿರಲು ತಪಸ್ಸನ್ನು ಮಾಡಿ ಸಮಾಧಿಮರಣದಿಂದ ಸತ್ತು ಸೌಧರ್ಮ ಮುಂತಾಗಿ ಇರತಕ್ಕ ದೇವಲೋಕದಲ್ಲಿ ಹುಟ್ಟಿದರು. ಇತ್ತ ಗಂಧಭಾಜನ ಮುನಿ ಹನ್ನೆರಡು ಅಂಗಗಳು ಹದಿನಾಲ್ಕು ಪೂರ್ವಗಳು ಇರತಕ್ಕ ಶಾಸ್ತ್ರಗಳೆಲ್ಲವನ್ನೂ ಕಲಿತು ಹಲವು ಕಾಲ

ಕಲ್ಲು ಪಲಕಾಲಮುಗ್ರೋಗ್ರ ತಪಶ್ಚರಣಂಗೆಯ್ದು ಗ್ರಾಮ ನಗರ ಖೇದ ಖರ್ವದ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಪೋಗಿ ಪಾಂಡ್ಯವಿಷಯದೊಳ್ ಪಳಿಕುಂತಳೆಯೆಂಬ ಪರ್ವತದ ಮೇಗಿರ್ದು ಬಾಹ್ಯಾಭ್ಯಂತರ ಪರಿಗ್ರಹ ಪರಿತ್ಯಾಗಪೂರ್ವಕಂ ಕಾಯೋತ್ಸರ್ಗಂಗೆಯ್ದು ಧರ್ಮಧ್ಯಾನ ಶುಕ್ಲಧ್ಯಾನಂಗಳಂ ಜಾನಿಸಿ ಕರ್ಮಕ್ಷಯಂಗೆಯ್ದು ಸುರಸುರೇಂದ್ರರ್ಕ್ಕಳಿಂ ಪೂಜೆಯನೆಯ್ದಿ ಮೋಕ್ಷಕ್ಕೆವೋದರ್ ಮತ್ತಾರಾಧಕರಪ್ಪವರ್ಗಳ್ ಸುಕೌಶಲಸ್ವಾಮಿಯ ತಿರಿಕೋಪಸರ್ಗಮಂ ಮನದೆ ಬಗೆದು ಪಸಿವುಂ ನೀರಟ್ಟೆ ದಾಹ ವಾತಂ ಸೂಲೆಯೆಂದಿವು ಮೊದಲಾಗೊಡೆಯ ವೇದನೆಗಳಂ ಸೈರಿಸಿ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸಮಾಧಿಮರಣದಿಂ ಮುಡಿಪಿಯಭ್ಯುದಯ ನಿಃಶ್ರೇಯಸ ಸುಖಂಗಳನೆಯ್ದುಗೆ.

ಅತ್ಯಂತ ಘೋರವಾದ ತಪಸ್ಸನ್ನು ಮಾಡಿ, ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖ ಎಂಬ ಭೂಭಾಗಗಳಲ್ಲಿ ಸಂಚರಿಸುತ್ತ ಹೋಗಿ ಪಾಂಡ್ಯದೇಶದಲ್ಲಿ ಪಳಿಕುಂತಳೆ ಎಂಬ ಪರ್ವತದ ಮೇಲೆ ಇದ್ದು ಹೊರಗಿನ ಮತ್ತು ಒಳಗಿನ ಪರಿಗ್ರಹಗಳನ್ನು ತ್ಯಜಿಸಿ, ದೇಹತ್ಯಾಗ ಮಾಡಲು ನಿಶ್ಚಯಿಸಿ, ಧರ್ಮಧ್ಯಾನ ಶುಕ್ಲಧ್ಯಾನಗಳನ್ನು ಧ್ಯಾನಿಸುತ್ತ ಕರ್ಮಗಳನ್ನು ನಾಶಗೊಳಿಸಿ ದೇವತೆಗಳಿಂದಲೂ ದೇವತೆಗಳಲ್ಲದವರಿಂದಲೂ ಪೂಜಿತರಾಗಿ ಮೋಕ್ಷಕ್ಕೆ ತೆರಳಿದರು. ಮತ್ತೇನೆಂದರೆ, ಆರಾಧಕರಾಗಿರುವವರು ಸುಕೌಶಲಸ್ವಾಮಿ ಎಂತಹ ತಿರಿಕೋಪಸರ್ಗವನ್ನು ಸಹಿಸಿದನೆಂಬುದನ್ನು ಮನಸ್ಸಿನಲ್ಲಿ ಭಾವಿಸಿ ಹಸಿವು, ಬಾಯಾರಿಕೆ, ಸುಡುವಿಕೆ, ವಾತ, ಶೂಲೆ(ಸಿಡಿತ) - ಎಂದು ಇವೇ ಮೊದಲಾಗಿರುವ ನೋವುಗಳನ್ನು ಸಹಿಸಿ, ಸಮ್ಯಗ್ದರ್ಶನ - ಸಮ್ಯಗ್ಜ್ಞಾನ - ಸಮ್ಯಕ್ಚಾರಿತ್ರ ಎಂಬ ರತ್ನತ್ರಯವನ್ನು ಸಾಧಿಸಿಕೊಂಡು ಸಮಾಧಿಮರಣದಿಂದ ಸತ್ತು, ಅಭ್ಯುದಯಸುಖ ಮತ್ತು ಮೋಕ್ಷ ಸುಖ - ಎಂಬಿವೆರಡನ್ನೂ ಪಡೆಯಲಿ.

೩ ಗಜಕುಮಾರನ ಕಥೆ

ಗಜಕುಮಾರನ ಕಥೆಯಂ ಪೇಳ್ವೆಂ :

ಗಾಹೆ ॥ ಭೂಮೀಎ ಸಮಂ ಬೀಲಾಭಾ ಇದ ದೇಹೋವಿ ಅಲ್ಲಚಮ್ಮಂ ವ
ಭಗವಂ ಪಿ ಗಜಕುಮಾರೋ ಪಡಿವಣ್ಣೋ ಉತ್ತಮಂ ಅಟ್ಠಂ ॥

[ಭೂಮೀ ಎ ಸಮಂ-ನೆಲದೊಳೋರಂತಾಗೆ ಮಲರ್ಚಕ್ಕಿಯುರದಿಂ ತಗುಳ್ದು ನಾಭಿವರೆಗಂ ಬಸಿಱಂ ಪೋಲ್ದು, ಅಲ್ಲಚಮ್ಮಂ - ಪಂದೊವಲಂ ತೆಗೆದು, ಬೀಲಾಭಾ ಇದ ದೇಹೋವಿ-ಕಾಯ್ದ ಕರ್ಬೊನ್ನ ನಿಡಿಯುವುಂ ತೋರಮುಮಪ್ಪ ಕೀಲ್ಗಳಿಂದಂ ಮೆಯ್ಯೆಲ್ಲಮುಂ ನಿರಂತರಮುರ್ಚ ಪೋಗಿ ನೆಲನಂ ತಾಪಿನಂ ಕೀಲಿಜೆಯೆ ಪಟ್ಟ ಮೆಯ್ಯನೊಡೆಯನಾಗಿಯುಂ, ಭಗವಂ-ಪಿರಿದವ್ವ ಪೆರ್ಮೆಯನೊಡೆಯಂ, ಗಜಕುಮಾರೋಪಿ- ಗಜಕುಮಾರನುಂ, ಪಡಿವಣ್ಣೋ-ಪೊರ್ದಿದೊಂ, ಉತ್ತಮ ಅಟ್ಠಂ- ಮಿಕ್ಕ ದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯಂ]

ಅದೆಂತೆಂದೊಡೆ : ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಸುರಟಮೆಂಬುದು ನಾಡಲ್ಲಿ ದ್ವಾರಾವತಿಯೆಂಬುದು ಪೊಬಲದನಾಳ್ವಂ ವಿಷ್ಣು ಅರ್ಧಚಕ್ರಿಯಾತನ ತಂದೆ ವಸುದೇವ ಸ್ವಾಮಿಯೆಂಬೊನಾ ವಸುದೇವಸ್ವಾಮಿಯರಸಿ ಗಾಂಧರ್ವದತ್ತೆಯೆಂಬೊಳಾಯಿರ್ವರ್ಗ್ಗಂ ಗಜಕುಮಾರನೆಂಬೊಂ ಮಗನಪ್ಪೊನಂತವರ್ಗಳಿಷ್ಟವಿಷಯ ಕಾಮಭೋಗಂಗಳನನುಭವಿಸುತ್ತಂ ಕಾಲಂ ಸಲೆ ಮತ್ತಿತ್ತ ಸೂರದತ್ತಮೆಂಬುದು ನಾಡಲ್ಲಿ ಪೌದನಪುರಮೆಂಬುದು ಪೊಬಲದನಾಳ್ವೊ ನಪರಾಜಿತನೆಂಬೊನರಸನಾದಮಾನುಂ ಪ್ರಚಂಡ ಬಳಗರ್ವಿತನಾರುಮನುಜಿದೊಂ ವಿಷ್ಣುಗಂ

ಗಜಕುಮಾರನ ಕಥೆ ಹೇಳುವೆನು :

ನೆಲದ ಮೇಲೆ ಕ್ರಮವಾಗಿ ಮಗುಚಿ (ಅಂದರೆ, ಹೊಟ್ಟೆ ಮೇಲ್ಗಡೆಯಾಗುವಂತೆ) ಮಲಗಿಸಿ; ಎದೆಯಿಂದ ಹಿಡಿದು ಹೊಕ್ಕುಳಿನವರೆಗೆ ಹೊಟ್ಟೆಯನ್ನು ಸೀಳಿ, ಹಸಿಯ ಚರ್ಮವನ್ನು ಸುಲಿದು ತೆಗೆದು, ಕಾದ ಕಬ್ಬಿಣದ ಉದ್ದವಾದ ಮತ್ತು ದಪ್ಪವಾದ ಮೊಳೆಗಳಿಂದ ಶರೀರವೆಲ್ಲವೂ ಸ್ವಲ್ಪ ಬಿಡದೆ ಭೇದಿಸಿ ನೆಲವನ್ನು ತಾಗುವ ರೀತಿಯಲ್ಲಿ (ಮೊಳೆ) ಹೊಡೆದ ದೇಹವುಳ್ಳವನಾಗಿ, ಹಿರಿದಾದ ಗೌರವವನ್ನುಳ್ಳ ಗಜಕುಮಾರನು ಶ್ರೇಷ್ಠವಾದ ಸಮ್ಯಗ್ದರ್ಶನ, ಸಮ್ಯಕ್ ಜ್ಞಾನ ಸಮ್ಯಕ್ಚಾರಿತ್ರಗಳುಳ್ಳ ಆರಾಧನೆಯನ್ನು ಪಡೆದನು. ಹೇಗೆಂದರೆ : ಈ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ಸುರಟ ಎಂಬ ನಾಡಿದೆ. ಅಲ್ಲಿ ದ್ವಾರಾವತಿಯೆಂಬ ಪಟ್ಟಣವಿದೆ. ಅದನ್ನು ಭರತಕ್ಷೇತ್ರದ ಆರು ಖಂಡಗಳಲ್ಲಿ ಮೂರು ಖಂಡಗಳಿಗೆ ಒಡೆಯನಾಗಿ ಅರ್ಧಚಕ್ರಿಯೆನಿಸಿದ ವಿಷ್ಣು ಆಳುತ್ತಿದ್ದನು. ಅವನ ತಂದೆ ವಸುದೇವಸ್ವಾಮಿಯೆಂಬುವನು. ಆ ವಸುದೇವಸ್ವಾಮಿಯ ಪತ್ನಿ ಗಾಂಧರ್ವದತ್ತೆ ಎಂಬವಳು. ಆ ಇಬ್ಬರಿಗೂ ಗಜಕುಮಾರನೆಂಬವನು ಮಗನಾಗಿದ್ದನು. ಅಂತು ಅವರು ತಮ್ಮ ಪ್ರೀತಿ ವಿಷಯದ ಬಯಕೆ ಸುಖಿಗಳನ್ನು ಅನುಭವಿಸುತ್ತಿದ್ದರು. ಹೀಗೆ ಕಾಲ ಕಳೆಯುತ್ತಿತ್ತು. ಇನ್ನೊಂದೆಡೆ ಸೂರದತ್ತ ಎಂಬ ನಾಡಿನಲ್ಲಿ ಪೌದನಪುರ ಎಂಬ ಪಟ್ಟಣವಿತ್ತು. ಅದನ್ನು ಅಪರಾಜಿತನೆಂಬ ರಾಜನು ಆಳುತ್ತಿದ್ದನು. ಅವನು ಅತಿ ಪ್ರಚಂಡಬಲವುಳ್ಳವನೆಂಬ ಗಮನದಿಂದ ಯಾರನ್ನೂ ಲಕ್ಷ್ಯಮಾಡದಿದ್ದನು. ವಿಷ್ಣುಗೆ ಕೂಡ ಅವನು ಆಜ್ಞಾಧಾರಕನಾಗದೆ

ಬಿಸಕೆಯ್ಯನೊಂದು ದಿವಸಂ ವಿಷ್ಣು ಪೊಬಲೊಳ್ ಗೋಸಕೆಯಂ ತೊಬಲ್ಚಿದನಾವನೊರ್ವಂ ಪೌದನಪುರಾಧಿಪತಿಯಪ್ಪಪರಾಜಿತನಂ ಸಂಗ್ರಾಮದೊಳ್ ಕಾದಿ ಗೆಲ್ದು ಪಿಡಿಕೊಂಡು ಬರ್ಕು ಮಾತಂಗೆಯಾತನ ಬೇಡುವುದೆಲ್ಲಮಂ ಕುಡುವೆನೆಂದು ತೊಬಲ್ದ ಗೋಸಕೆಯಂ ಗಜಕುಮಾರಂ ಪಿಡಿದೊಡಾ ಮಾತನರಸಂ ಕೇಳ್ದು ಗಜಕುಮಾರನಂ ಕರೆಯಿಸಿಯಾತನೊಡನೆ ಚಾತುರ್ದಂತಬಳಮಂ ಕೂಡಿಯಟ್ಟದೊಡಾತನುಂ ಪೋಗಿಯಪರಾಜಿತನೊಡನೆ ಮಹಾಯುದ್ಧಂಗೆಯ್ದು ಗೆಲ್ದು ಪೆಡಂಗಯ್ಯುದಿಯೆ ಕಟ್ಟಿ ಗಜತುರಗ ವಸ್ತುವಾಹನ ಸಹಿತಂ ತಂದು ವಿಷ್ಣುಗೊಪ್ಪಿಸಿದೊಡಾತನುಮೊಸೆದು ನೀಂ ಮೆಚ್ಚದುದಂ ಬೇಡಿಕೊಳ್ಳೆನೆ ಪೆಜತೇನುಮನೊಲ್ಲೆನ್ ನಿಮ್ಮ ಪ್ರಸಾದದಿಂದೆನಗೆಲ್ಲಮುಂಟು ಒಂವಂ ಬೇಟ್ಪಿಂ ನಿಮ್ಮಂತಃಪುರಮುಟೆಯೆ ಪೊಬಲೊಳಗೆನ್ನ ಮೆಚ್ಚದ ಪೆಂಡಿರನೆ ಕೊಂಡನ್ನಿಚ್ಚಿಯೊಳ್ ಮೆಚ್ಚದಂತೆ ಬಾಟ್ಪಿನೀ ದಾಯಮಂ ಬೇಡಿರ್ದೆನಿದನೆನಗೆ ದಯೆಗೆಯ್ದು ಸಲಿಸುವುದೆಂದೊಡರಸನುಮಂತೆಗೆಯ್ಯೆಂದು ಗಜಕುಮಾರಂಗೆ ಬೇಡಿದುದಂ ಕೊಟ್ಟಂ ಗಜಕುಮಾರನುಂ ತನ್ನ ಬೇಡಿದ ವರಮಂ ಪೆತ್ತು ಪರದರ ಪಾರ್ವರೊಕ್ಕಲಿಗರ ಸಾಮಂತರ ಪೊಬಲೊಳಗುಳ್ಳ ಒಳ್ಪಿಂದಿರೆಲ್ಲರಂ ಕಣ್ಗಂ ಮನಕ್ಕಂ ಮೆಚ್ಚದವರೊಳ್ ತನ್ನಿಚ್ಛೆಯಿಂದಂ ಮೊಱೆದು ಮೊಟ್ಟಯಿಸಿಯುಯ್ದು ಬಾಬುತ್ತಿರೆ ಮತ್ತಮಾ ಪೊಬಲೊಳ್ ಪಂಗುಳನೆಂಬ ಸುವರ್ಣಕಾಜಿನ ಪೆಂಡತಿ ವಸುಂಧರಿಯೆಂಬೊಳತ್ಯಂತ ರೂಪ ಲಾವಣ್ಯ

ಇದ್ದನು. ಒಂದ ದಿವಸ ವಿಷ್ಣು ತನ್ನ ಪಟ್ಟಣದಲ್ಲಿ ಹೀಗೆ ಡಂಗೂರ ಸಾರಿಸಿದನು - ಪೌದನಪುರದ ರಾಜನಾದ ಅಪರಾಜಿತನನ್ನು ಯಾವಾತನು ಯುದ್ಧದಲ್ಲಿ ಹೋರಾಡಿ ಗೆದ್ದು ಹಿಡಿದುಕೊಂಡು ಬರುವನೋ ಅವನು ಕೇಳಿದ್ದೆಲ್ಲವನ್ನೂ ಕೊಡುವೆನು". ಈ ರೀತಿ ಸಾರುವ ಡಂಗೂರವನ್ನು ಗಜಕುಮಾರನು ಹಿಡಿದನು. ಈ ಸುದ್ದಿಯನ್ನು ರಾಜನು ಕೇಳಿ ಗಜಕುಮಾರನನ್ನು ಕರೆಯಿಸಿದನು. ಅವನೊಡನೆ ಚತುರಂಗಸೈನ್ಯವನ್ನು ಕೂಡಿಸಿ ಕಳುಹಿಸಿದನು. ಗಜಕುಮಾರನು ಹೋಗಿ, ಅಪರಾಜಿತನೊಡನೆ ಮಹಾಯುದ್ಧವನ್ನು ಮಾಡಿ ಗೆದ್ದು ಅವನನ್ನು ಹಿಡಿದು ಅವನ ಕೈಗಳು ಮುರಿಯುವ ಹಾಗೆ ಹಿಂಗಡೆಗೆ ಕಟ್ಟಿ ಆನೆ ಕುದುರೆ ಒಡವೆ ವಾಹನಗಳ ಸಮೇತನಾಗಿ ತಂದು ವಿಷ್ಣುಗೆ ಒಪ್ಪಿಸಿದನು. ಆಗ ವಿಷ್ಣು ಪ್ರೀತಿಪಟ್ಟು "ನಿನಗೆ ಇಷ್ಟವಾದುದನ್ನು ಬೇಡಿಕೋ" ಎಂದನು. ಅದಕ್ಕೆ ಗಜಕುಮಾರನು "ನನಗೆ ಬೇರೆ ಯಾವುದೂ ಬೇಡ. ನಿಮ್ಮ ಅನುಗ್ರದಿಂದ ಎಲ್ಲವೂ ನನಗಿದೆ. ಒಂದನ್ನು ಕೇಳಿಕೊಳ್ಳುವೆನು ; ನಿಮ್ಮ ರಾಣೀವಾಸವೊಂದನ್ನು ಬಿಟ್ಟು ಈ ಪಟ್ಟಣದಲ್ಲಿ ನಾನು ನನಗೆ ಮೆಚ್ಚಿಕೆಯಾದ ಹೆಂಡಿರನ್ನು ಸ್ವೀಕರಿಸಿ ನನ್ನ ಇಚ್ಛೆಗೆ ಮೆಚ್ಚಿಕೆಯಾದಂತೆ ಬಾಳುವೆನು. ಈ ಬಹುಮಾನವನ್ನು ಬಯಸಿದ್ದೇನೆ. ಇದನ್ನು ನನಗೆ ದಯಪಾಲಿಸಿಕೊಡಬೇಕು" ಎಂದು ಹೇಳಿದನು. ರಾಜನು "ಹಾಗೆಯೇ ಮಾಡು" ಎಂದು ಗಜಕುಮಾರನಿಗೆ ಆತನು ಬಯಸಿದುದನ್ನು ಕೊಟ್ಟನು, ಗಜಕುಮಾರನು ತಾನು ಬಯಸಿದ ವರವನ್ನು ಪಡೆದು, ಪಟ್ಟಣದಲ್ಲಿರತಕ್ಕ ವರ್ತಕರು, ಬ್ರಾಹ್ಮಣರು, ಒಕ್ಕಲಿಗರು, ಸಾಮಂತರಾಜರು - ಮುಂತಾದವರ ಒಳ್ಳೆಯ ಹೆಂಡಿರಲ್ಲಿ ತನ್ನ ಕಣ್ಣಿಗೂ ಮನಸ್ಸಿಗೂ ಮೆಚ್ಚಿಕೆಯಾದವರಲ್ಲಿ ತನ್ನ ಇಚ್ಛೆಯ ಪ್ರಕಾರ ಸಂಬಂಧ ಮಾಡಿಯೂ ಒಟ್ಟುಗೂಡಿಯೂ ಬಾಳುತ್ತಿದ್ದನು. ಮತ್ತೇನೆಂದರೆ, ಆ ಪಟ್ಟಣದಲ್ಲಿ ಪಂಗುಳನೆಂಬ ಅಕ್ಕಸಾಲಿಯಿದ್ದನು. ಅವನ ಹೆಂಡತಿ ವಸುಂಧರಿಯೆಂಬವಳು ಅತಿಶಯವಾದ ರೂಪ, ಲಾವಣ್ಯ, ಸೌಭಾಗ್ಯ, ಕಾಂತಿ, ಹಾವ,

ಸೌಭಾಗ್ಯ ಕಾಂತಿ ಹಾವ ಭಾವ ವಿಲಾಸ ವಭ್ರಮಂಗಳನೊಡೆಯೊಳಂ ಕಂಡು ಗಜಕುಮಾರನಾಕೆಗಾಟಿಸಿ ತನ್ನ ಮನೆಯೊಳಿಟ್ಟಾಕೆಗಾಸಕ್ತನಾಗಿ ಬಾಲುತ್ತಿರ್ಕುಮಾ ವಿರಣಿಗನುಂ ಪೆಂಡತಿಯ ವಿಯೋಗದೊಳ್ ಸಂತಾಪದಿಂದಮಿರುಳುಂ ಪಗಲುಮನವರತಂ ಬೇಯುತ್ತಮಸಮರ್ಥನಪ್ಪುದಱಿಂದಂ ಮನದೊಳ್ ಗಜಕುಮಾರಂಗೆ ಮುಳಿಯುತ್ತಿರ್ಕುಂ ಇಂತು ಪಲಕಾಲಂ ಸಲೆ ಮತ್ತೊಂದು ದಿವಸಮರಿಷ್ಟನೇಮಿ ಭಟ್ಟಾರರ ಸಮವಸರಣಂ ವಿಹಾರಿಸುತ್ತಂ ದ್ವಾರಾವತಿಗೆ ವಂದೊಡೆ ವಿಷ್ಣುವಿನೊಡನೆ ಗಜಕುಮಾರಂ ತ್ರಿಭುವನಪರಮೇಶ್ವರನಲ್ಲಿಗೆ ವೋಗಿ ವಂದಿಸಿ ಪೂಜಿಸಿರ್ದು ಭಟಾರರ್ ಧರ್ಮಮಂ ಪೇಳ್ವಲ್ಲಿ ಯಗಮ್ಯಾಗಮನಂಗೆಯ್ವೊಡಂ ಪೆಱರ ಸಜ್ಜನಂಗಳೊಳ್ ಬರ್ದೊಡಮೆಯುವ ದುರ್ಗತಿಗಳೊಳಪ್ಪ ದುಃಖಂಗಳಂ ಪೇಳ್ ಕೇಳ್ದು ನಾನ್ಯಥಾ ಜನಭಾಷಿತಮೆಂದು ನಂಬಿ ಭೋಗಂಗಳ್ಗೆ ಪೇಸಿ ವೈರಾಗ್ಯಮಾಗಿ ಎಲ್ಲಮಂ ತೊಱೆದರಿಷ್ಟನೇಮಿಭಟ್ಟಾರರ ಪಕ್ಕದೆ ತಪಂಬಟ್ಟುಗೋಗ್ರತಪಶ್ಚರಣಂಗೆಯ್ದು ಪನ್ನೆರಮ ವರ್ಷಂ ಪೋದೊಡೆ ಗ್ರಾಮನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹರಿಸುತ್ತುಂ ಮತ್ತಮಾ ದ್ವಾರಾವತಿಗೆ ವಂದು ರೇವತೋದ್ಯಾನವನದೊಳ್ ರಾತ್ರಿ ಪ್ರತಿಮೆನಿಂದೊನಂ ಸ್ವಜನ ಪರಿಜನ ಬಂಧುವರ್ಗಮುಂ ಶ್ರಾವಕರ್ಕಳುಂ ಬಂದರ್ಚಿಸಿ ಪೊವೆಪಂಟು ಪೋಪರಂ ಪಂಗುಳನೆಂಬ ಸುವರ್ಣಕಾರಕಂ ಕಂಡು ಬೆಸಗೊಂಡು ಭಟಾರರ ಬರವಂ ಕೇಳ್ದಜೆದು

ಭಾವ, ವಿಲಾಸ, ವಿಭ್ರಮಗಳಿಂದ ಕೂಡಿದ್ದಳು. ಗಜಕುಮಾರನು ಅವಳನ್ನು ಕಂಡು ಅಕೆಯಲ್ಲಿ ಆಸೆಪಟ್ಟು ತನ್ನ ಮನೆಯಲ್ಲಿ ಅವಳನ್ನು ಇಟ್ಟುಕೊಂಡು ಆಸಕ್ತನಾಗಿ ಬಾಳುತ್ತಿದ್ದನು. ಆ ಅಕ್ಕಸಾಲಿ ತನ್ನ ಹೆಂಡತಿಯ ಅಗಲಿಕೆಯ ದುಃಖದಿಂದ ಇರುಳೂ ಹಗಲೂ ಯಾವಾಗಲೂ ಬೇಯುತ್ತ, ತಾನು ಸಾಮರ್ಥ್ಯವಿಲ್ಲದವನಾಮದರಿಂದ ಮನಸ್ಸಿನಂತೆಯೇ ಗಜಕುಮಾರನ ಮೇಲೆ ಕೋಪಿಸಿಕೊಂಡಿದ್ದನು. ಹೀಗೆ ಹಲವು ಕಾಲ ಕಳೆಯಿತು. ಮತ್ತೊಂದು ದಿನ ಅರಿಷ್ಟನೇಮಿ ತೀರ್ಥಂಕರರ ಧರ್ಮೋಪದೇಶ ಸಭೆ ಸಂಚಾರಮಾಡುತ್ತ ದ್ವಾರಾವತಿಗೆ ಬಂದಿತು. ಗಜಕುಮಾರನು ವಿಷ್ಣುವಿನೊಂದಿಗೆ ಹೋಗಿ ಮೂರುಲೋಕಕ್ಕೂ ಪರಮೇಶ್ವರನೆನಿಸಿದ ಅರ್ಹಂತರನ್ನು ವಂದಿಸಿ ಪೂಜಿಸಿದನು. ಅಲ್ಲಿ ಅರಿಷ್ಟನೇಮಿ ಭಟ್ಟಾರರು ಧರ್ಮದ ಕುರಿತು ಹೇಳುವಾಗ, ಕೂಡಬಾರದವರಲ್ಲಿ ಕೂಡಿದರೂ ಅನ್ಯರ ಕುಲಾಂಗನೆಯರೊಂದಿಗೆ ಬಾಳುವೆ ನಡೆಸಿದರೂ ಪಡೆಯುವ ದುರ್ಗತಿಗಳಲ್ಲಿ ಆಗತಕ್ಕ ದುಃಖಿಗಳಲ್ಲಿ ಹೇಳುತ್ತಿದ್ದರು. ಅವನ್ನು ಗಜಕುಮಾರನು ಕೇಳಿ 'ಜಿನೇಶ್ವರನು ಹೇಳಿದ್ದು ಸುಳ್ಳಾಗದು' ಎಂದು ನಂಬಿ, ಭೋಗಗಳಿಗೆ ಹೇಸಿದನು. ಅವನಲ್ಲಿ ವೈರಾಗ್ಯವುಂಟಾಯಿತು. ಎಲ್ಲವನ್ನೂ ಬಿಟ್ಟು ಅರಿಷ್ಟನೇಮಿಸ್ವಾಮಿಗಳ ಬಳಿಯಲ್ಲಿ ತಪವನ್ನು ಕೈಗೊಂಡು ಅತ್ಯಂತ ಉಗ್ರವಾದ ತಪಸ್ಸನ್ನು ಆಚರಿಸಿ, ಹನ್ನೆರಡು ವರ್ಷಗಳಾದನಂತರ ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖಿಗಳಲ್ಲಿ ಸಂಚಾರಮಾಡುತ್ತ ಆಮೇಲೆ ದ್ವಾರಾವತಿಗೆ ಬಂದನು. ಅಲ್ಲಿ ರೇವತವೆಂಬ ಉದ್ಯಾನವನವಲ್ಲಿ ರಾತ್ರಿಯ ವೇಳೆ ಪ್ರತಿಮೆಯ ರೂಪದಲ್ಲಿ ತಪಸ್ಸಿಗೆ ನಿಂತನು. ಸ್ವಜನರೂ ಪರಿಜನರೂ ಬಂಧುಗಳೂ ಸದ್ಗೃಹಸ್ಥರೂ ಬಂದು ಅವನನ್ನು ಪೂಜಿಸಿ ಸಾಷ್ಟಾಂಗ ವಂದಿಸಿ ಹೋಗುತ್ತಿದ್ದರು. ಅವರನ್ನು ಪಂಗುಳನೆಂಬ ಅಕ್ಕಸಾಲಿ

ಪಗೆವನನಿಜೆಯಲ್ಪೆತ್ತನೆಂದು ರಾಗಿಸಿ ಪಲವು ನಿದಿಯವುಂ ತೋರಮುಮಪ್ಪ ಕರ್ಬೊನ್ನ ಕೀಲುಳಂ ಕೊಂದು ಬಂದು ಕ್ಷಮಾಂಗನಾಲಿಂಗಿತನಪ್ಪ ಮಹಾಮುನಿಯಂ ಮುಲರ್ಚಿ ಪಟ್ಟಿರಿಸಿಯುರಸ್ಥಲ ದಿಂ ನಾಭಿವರೆಗಂ ವಿದಾರಿಸಿ ಪಂದೊವಲ್ ಪೊರತಾಪಿನೆಗಂ ಸಮಂತವಯವಪ್ರದೇಶಂಗಳೊಳ್ ಕಾಯ್ದಿ ಕರ್ಬೊನ್ನ ಕೀಲ್ಗಳಂ ನೆಲನಂ ತಾಪಿನಮುರ್ವಿ ಪೋಗಿಜೆದೊಡೆ ಕ್ಷಮೆಯಂ ಭಾವಿಸಿ ಧರ್ಮಧ್ಯಾನ ಶುಕ್ಲಧ್ಯಾನಂಗಳಂ ಜಾನಿಸಿ ರತ್ನತ್ರಯಮಂ ಸಾಧಿಸಿ ಸಮಾಧಿಮರಣದಿಂ ಮುಡಿಪಿ ದೇವಲೋಕಮೆಂಬ ಪ್ರಾಸಾದಕ್ಕೆ ಕಳಸಮಾಗುತ್ತಿರ್ದ ಸರ್ವಾರ್ಥಸಿದ್ಧಿಯೆಂಬ ಸ್ವರ್ಗದೊಳ್ ಮೂವತ್ತುಮೂಱು ಸಾಗರೋಪಮಾಯುಷ್ಯಸ್ಥಿತಿಯನೊಡೆಯನೇಕಹಸ್ತಪ್ರಮಾಣನುಂ ಪುಂಡರೀಕವರ್ಣಂಗಳನೊಡೆಯೊನಹಮಿಂದ್ರ ದೇವನಾಗಿ ಪುಟ್ಟಿದೊಂ ಮತ್ತಂ ಪೆಱರುಮಾರಾಧಕರಪ್ಪವರ್ಗಳ್ ಗಜಕುಮಾರನ ಮುನುಷ್ಯೋಪಸರ್ಗದೊಳಾದ ವೇದನೆಯಂ ಮನದೊಳ್ ಭಾವಿಸುತ್ತಂ ಪಸಿವು ನೀರಱಿ, ದಾಹ ವಾತಂ ಸೂಲೆ ಮೊದಲಾಗೂಡೆಯ ವೇದನೆಗಳಂ ಸೈರಿಸಿ ದರ್ಶನ ಜ್ಞಾನ ಚಾರಿತ್ರಂಗಳಂ ಭಾವಿಸಿ ಸಮಾಧಿಸುರಣದಿಂದಂ ಮುಡಿಪಿ ಸ್ವರ್ಗಾಪವರ್ಗಸುಖಂಗಳನೆಯುಗೆ

ಕಂಡು ಪ್ರಶ್ನೆಮಾಡಿ ಗಜಕುಮಾರಮುನಿಗಳ ಬರುವಿಕೆಯನ್ನು ಕೇಳಿ ತಿಳಿದುಕೊಂಡನು. 'ಶತ್ರುವನ್ನು ಹೊಡೆಯಲು (ಕೊಲ್ಲಲು) ಅವಕಾಶವನ್ನು ಪಡೆದನು' ಎಂದು ಅವನು ಸಂತೋಷಪಟ್ಟು ಉದ್ದ ಮತ್ತು ದಪ್ಪವುಳ್ಳ ಕಬ್ಬಿಣದ ಹಲವು ಮೊಳೆಗಳನ್ನು ತಂದು, ಕ್ಷಮಾಗುಣವೆಂಬ ಸ್ತ್ರೀಯಿಂದ ಆಲಿಂಗನಗೊಂಡ ಆ ಮಹರ್ಷಿಯನ್ನು ಮಗುಚಿ (ಎದೆ ಮೇಲಕ್ಕಾಗಿ) ಮಲಗಿಸಿ ಎದೆಯಿಂದ ಹೊಕ್ಕುಳವರೆಗೆ ಸೀಳಿದನು. ಹಸಿಯಾದ ಚರ್ಮದ ಪದರಗಳು ತಾಗುವ ರೀತಿಯಲ್ಲಿ, ಚೆನ್ನಾಗಿ, ಅವಯವಗಳ ಸ್ಥಾನಗಳಲ್ಲಿ ಕಾದ ಕಬ್ಬಿಣದ ಮೊಳೆಗಳನ್ನು - ಅವು ನೆಲಕ್ಕೆ ತಗಲುವ ರೀತಿಯಲ್ಲಿ ಭೇದಿಸುವಂತೆ ಹೊಡೆದನು. ಆಗ ಗಜಕುಮಾರಮುನಿ ಕ್ಷಮೆಯನ್ನೇ ಭಾವಿಸಿಕೊಂಡು ಧರ್ಮಧ್ಯಾನ ಶುಕ್ಲಧ್ಯಾನಗಳನ್ನು ಧ್ಯಾನಿಸುತ್ತ, ರತ್ನತ್ರಯವನ್ನು ಸಾಧಿಸಿ ಸಮಾಧಿಮರಣದಿಂದ ಸತ್ತು ದೇವಲೋಕವೆಂಬ ಸೌಧಕ್ಕೆ ಕಲಶದಂತಿರುವ ಸರ್ವಾರ್ಥಸಿದ್ಧಿಯೆಂಬ ಸ್ವರ್ಗದಲ್ಲಿ ಮೂವತ್ತಮೂರು ಸಾಗರದಷ್ಟು ಆಯುಷ್ಯಸ್ಥಿತಿಯುಳ್ಳ ಒಂದೇ ಮೊಳ ಎಳತೆಯುಳ್ಳ, ಬಿಳಿಯ ತಾವರೆಯ ಬಣ್ಣವುಳ್ಳ ಅಹಮಿಂದ್ರದೇವನಾಗಿ ಹುಟ್ಟಿದನು. ಮತ್ತು, ಬೇರೆ ಆರಾಧಕರು - ಗಜಕುಮಾರನಿಗೆ ಮನುಷ್ಯ ಉಪಸರ್ಗದಿಂದ ಆದ ನೋವನ್ನು ಮನಸ್ಸಿನಲ್ಲಿ ಭಾವಿಸುತ್ತ, ಹಸಿವು, ಬಾಯಾರಿಕೆ, ಸುಡುವಿಕೆ, ವಾತ, ಸಿಡಿತ - ಮುಂತಾಗಿರುವ ನೋವುಗಳನ್ನು ಸಹಿಸಿ, ರತ್ನತ್ರಯವನ್ನು ಸಾಧಿಸಿ, ಸಮಾಧಿಮರಣದಿಂದ ಸತ್ತು, ಸ್ವರ್ಗ-ಮೋಕ್ಷ ಸುಖಗಳನ್ನು ಪಡೆಯಲಿ !

೪ ಸನತ್ಕುಮಾರ ಚಕ್ರವರ್ತಿಯ ಕಥೆ

ಸನತ್ಕುಮಾರಚಕ್ರವರ್ತಿಯ ಕಥೆಯಂ ಪೇೞ್ದಂ :

ಗಾಹೆ ।। ಕಚ್ಚು ಜರಖಾಸ ಸೋಸೋ ಭತ್ತಚ್ಛದಿ ಅಚ್ಛಿ ಕುಚ್ಛಿ ದುಕ್ಖಾಣಿ
ಅಧಿಯಾಸಿ ದಾಣಿ ಸಮ್ಮಂ ಸಣಂಕುಮಾರೇಣ ವಾಸಸದಂ ।।

[ಕಚ್ಚು-ಕೆರಕುಂ, ಜರ-ನರೆಯುಂ, ಖಾಸ-ಕೆಮ್ಮುಂ, ಸೋಸೋ-ಬಾಯ್ ಬತ್ತುವುದುಂ, ಭತ್ತಚ್ಛದಿ-ಭರ್ದಿಯುಂ, ಅಚ್ಛಿಕುಚ್ಛಿ ದುಕ್ಖಾಣಿ-ಕಣ್ಣಬಸಿಱಿ ಬೇನೆಗಳುಮೆಂದಿವು ಮೊದಲಾಗೊಡೆಯ. ಅಧಿಯಾಸಿದಾಣಿ-ಸೈರಿಸಪಟ್ಟವು. ಸಮ್ಮಂ-ಒಳ್ಪಿತ್ತಾಗಿ ಸಣಂಕುಮಾರೇಣ-ಸನತ್ಕುಮಾರ ಚಕ್ರವರ್ತಿರಿಸಿಯಿಂದಂ, ವಾಸಸದಂ-ನೂಱುವರುಷಂ]

ಅದೆಂತೆಂದೊಡೆ : ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಕುರುಜಾಂಗಣಮೆಂಬುದು ನಾಡಲ್ಲಿ ಹಸ್ತಿನಾಪುರಮೆಂಬುದು ಪೊಬಲದನಾಳ್ವಂ ವಿಶ್ವಸೇನಮಹಾರಾಜನೆಂಬರಸನಾತನ ಮಹಾದೇವಿ ಸಹದೇವಿಯೆಂಬೊಳಾಯಿರ್ವರ್ಗ್ಗಂ ಸನತ್ಕುಮಾರನೆಂಬೊಂ ಪುಟ್ಟದೊನಾತಂ ಸರ್ವಲಕ್ಷಣಸಂಪೂರ್ಣಂ ಸಕಳಕಳಾಪಾರಗಂ ಚೆಲ್ವಿನಿಂ ದೇವಾಸುರರ್ಕ್ಕಳಂ ಗೆಲ್ವ ರೂಪನೊಡೆಯನಾತಂಗೆ ಕೆಳೆಯಂ ಸಿಂಹವಿಕ್ರಮನೆಂಬ ಸಾಮಂತನ ಮಗಂ ಮಹೇಂದ್ರಸಿಂಹನೆಂಬೊನಂತವರ್ಗ್ಗನ್ಯೋನ್ಯಪ್ರೀತಿಯಿಂದಂ ಕಾಲಂ ಸಲೆ ಮತ್ತೊಂದು ದಿವಸಂ ಏಕಚಕ್ರಪುರಾಧೀಶಂ ಭೂರಾಮನಾಮಧೇಯನವ್ವ ಶತ್ರುಂದಮಂ ವಿಶ್ವಸೇನಮಹಾರಾಜಂಗೆ ಪಾಗುಡಮನಟ್ಟಿ ಪಟ್ಟವಾರಮರಗಮೆಂಬ ದುಷ್ಪಾಶ್ವಮಂ ಕುಮಾರನೇಱಲ್ಕೆ ಲಕ್ಷ್ಯಗೃಹಮೆಂಬುದ್ಯಾನವನದ ಮಧ್ಯಸ್ಥಮಪ್ಪ ಸ್ಥಲದೊಳ್ ಸಲ್ದನಾ ದುಷ್ಪಾಶ್ವಮಂ ಕೊಸೆಗೊಳೆಗಾಳಿಯಿಂದಂ ಬೇಗಮಾಗಿ ವಾರಿತಪೂರಿತಂ ಪರಿದು ಕುಮಾರನಂ ಕೊಂದು ಮಹಾಟವಿಯಂ

ಸನತ್ಕುಮಾರ ಚಕ್ರವರ್ತಿಯ ಕಥೆಯನ್ನು ಹೇಳುವೆನು : (ಸನತ್ಕುಮಾರ ಚಕ್ರವರ್ತಿ ಋಷಿಯು ತುರಿ (ಚರ್ಮರೋಗ), ನರೆ, ಕೆಮ್ಮು, ಬಾಯಾರಿಕೆ, ಭೇದಿ, ಕಣ್ಣುನೋವು, ಹೊಟ್ಟೆನೋವು - ಎಂದು ಇವೇ ಮೊದಲಾಗಿ ಉಳ್ಳವನ್ನು ನೂರುವರ್ಷ ಚೆನ್ನಾಗಿ ಸೈರಿಸಿಕೊಂಡನು). ಅದು ಹೇಗೆಂದರೆ : ಈ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ಕುರುಜಾಂಗಣ ಎಂಬ ಒಂದು ನಾಡಿದೆ. ಅಲ್ಲಿ ಹಸ್ತಿನಾಪುರ ಎಂಬ ಪಟ್ಟಣವಿದೆ. ಅದನ್ನು ವಿಶ್ವಸೇನಮಹಾರಾಜ ಎಂಬ ಅರಸನು ಆಳುತ್ತಿದ್ದನು. ಅವನ ಪಟ್ಟದ ರಾಣಿ ಸಹದೇವಿಯೆಂಬವಳು. ಆ ದಂಪತಿಗಳಿಗೆ ಸನತ್ಕುಮಾರನೆಂಬ ಮಗನು ಹುಟ್ಟಿದನು. ಅವನು ಎಲ್ಲ ಲಕ್ಷಣಗಳಿಂದ ತುಂಬಿದವನು, ಎಲ್ಲ ಕಲೆಗಳನ್ನೂ ಪೂರ್ಣವಾಗಿ ತಿಳಿದವನು. ದೇವತೆಗಳನ್ನೂ ದೇವತೆಗಳಲ್ಲದವರನ್ನೂ ಸೊಬಗಿನಿಂದ ಗೆಲ್ಲುವ ರೂಪುಳ್ಳವನು. ಅವನಿಗೆ ಸಿಂಹವಿಕ್ರಮನೆಂಬ ಸಾಮಂತನ ಮಗನಾದ ಮಹೇಂದ್ರಸಿಂಹನೆಂಬವನು ಸ್ನೇಹಿತನಾಗಿದ್ದನು. ಅಂತು ಅವರಿಬ್ಬರು ಪರಸ್ಪರವಾಗಿ ಪ್ರೀತಿಯಿಂದಿದ್ದು ಹೀಗೆಯೇ ಕಾಲ ಕಳೆಯುತ್ತಿತ್ತು. ಆಮೇಲೆ ಒಂದು ದಿವಸ ಏಕಚಕ್ರವೆಂಬ ಪಟ್ಟಣದ ಒಡೆಯನೂ ಶತ್ರುಗಳನ್ನು ದಮನ ಮಾಡತಕ್ಕವನೂ ಆದ ಭೂರಾಮನೆಂಬ ಹೆಸರುಳ್ಳ ರಾಜನು ವಿಶ್ವಸೇನ ಮಹಾರಾಜನಿಗೆ ಪಟ್ಟವಾರಮರಗ ಎಂಬ ಕೆಟ್ಟ ಕುದುರೆಯನ್ನು ಕಾಣಿಕೆಯಾಗಿ ಕಳುಹಿಸಿಕೊಟ್ಟನು. ಆ

ಪೊಕ್ಕೊಡಿತ್ತ ವಿಶ್ವಸೇನಮಹಾರಾಜನ ಮಹಾ ಸಾಮಂತರ್ಕಳುಂ ಪರಿವಾರಮುಮೆಲ್ಲಂ ಕುದುರೆವದಿವಜ್ಜೆಯಂ ನೋಡಿ ನಾಡೆಗೆಂಟುವೋಗಿ ಮೂಜಿನೆಯ ದಿವಸದಂದಂ ಅದಿವಜ್ಜೆ ಕೆಟ್ಟೊಡೆ ಪೋದ ದೆಸೆಯನಱಯದೆ ಹಾ ಪುತ್ರಾ ಎಂದು ಮಹಾ ದುಃಖಾಕ್ರಾಂತನಾಗಿ ಪ್ರಲಾಪಂಗೆಯ್ವ ನೃಪತಿಯಂ ಮಹೇಂದ್ರಸಿಂಹಂ ಸಂತಯಿಸಿ ಇಂತೆಂದು ನುದಿದಂ ಕುಮಾರನಂ ಪಾತಾಳಮಂ ಪೊಕ್ಕನಪ್ಪೊಡಮಱಸಿಕೊಂಡು ಬರ್ಪೆಂ ನಿಮ್ಮಡಿ ನೀಮುಬ್ಬಿಗಂಬಡದೆ ಮಗುಟಿಮೆಂದರಸನಂ ಮಗುಟ್ಟಿ ಪರಿವಾರಂಬೆರಸು ಮಹಾಟವಿಯಂ ಪೊಕ್ಕು ತೊಱಲ್ದು ನೋಟ್ಪೆನಂ ಪರಿಜನಂಗಳ್ ಕುಮಾರನನಱಸಿ ಕಾಣದೆ ಬೇಸತ್ತು ಮಹೇಂದ್ರಸಿಂಹನಂ ಬಸುಟು ಪೊಱಟಲ್ಕೆವ್ವೋದರ್ ಇತ್ತ ಮಹೇಂದ್ರಸಿಂಹನೊರ್ವನೆ ನಾನಾವಿಧ ಗಿರಿಗಹನ ವಿಪಯ ವಿಷಯ ಪ್ರದೇಶಂಗಳುಮಂ ವ್ಯಾಧನಿವಾಸಂಗಳುಮಂ ಯಥಾ ಕ್ರಮದಿಂದಂ ಕಳ್ದು ಪೋಗಿ ಪ್ರಿಯಂಗುಪಂಡಮೆಂಬ ವನಮನೆಯ್ದಿ ತದ್ವನಮಧ್ಯಸ್ಥ ಗೃಹದೊಳಿರುತಿರ್ದ್ದು ಮಿತ್ರನ ವಿಯೋಗದೊಳಪ್ಪ ದುಃಖದಿಂದಂ ಕಾರುಣ್ಯಮಾಗೆ ಪ್ರಳಾಪಂಗೆಯ್ದುಟ್ಟು ದೇವತೆಯ ಮುಂದೆ ನಿದ್ರೆಗೆಯ್ದೊಂ ಮನೋಹರಿಯೆಂಬ ಜಾವದಾಗಳ್ ಕರಿಣೀಶತಂಗಳಿಂ ಪರಿವೇಷ್ಟಿತನಾಗಿ ತಿಳಿನೀರ ಕೊಳದೊಳಗೆ ಕ್ರೀದಿಸುವ ಸೊರ್ಕಾನೆಯುಮಂ ಫಲಭರಿತಮಾದ ಮಾವಿನ ಮರನುಮಂ ಕನಸಿನೊಳ್

ಕುದುರೆಯನ್ನು ಸನತ್ಕುಮಾರನು ಲಕ್ಷ್ಮೀಗೃಹವೆಂಬ ಉದ್ಯಾನದ ಮಧ್ಯಸ್ಥಳದಲ್ಲಿ ಏರಿದಾಗ ಅದು ವಾರಿತ-ಪೂರಿತ ಎಂಬ ಅಶ್ವಗತಿಗಳಲ್ಲಿ ಓಡಿತು. ಸನತ್ಕುಮಾರನನ್ನು ಏರಿಸಿಕೊಂಡು ದೊಡ್ಡ ಕಾಡಿನೊಳಗೆ ಹೊಕ್ಕಿತು. ಇತ್ತ ವಿಶ್ವಸೇನಮಹಾರಾಜನ ದೊಡ್ಡಸಾಮಂತರೂ ಪರಿವಾರವೂ ಎಲ್ಲರೂ ಕುದುರೆಯ ಕಾಲಿನ ಹೆಜ್ಜೆಯನ್ನು ನೋಡಿಕೊಳ್ಳುತ್ತ ಬಹಳ ದೂರದವರೆಗೆ ಹೋದರು. ಮೂರನೆಯ ದಿವಸದಂದು ಕುದುರೆಯ ಅಡಿ ಹೆಜ್ಜೆಯ ಗುರುತೂ ಸಿಕ್ಕದಾಯಿತು. ಆಗ ವಿಶ್ವಸೇನರಾಜನು ತನ್ನ ಮಗನು ಹೋದ ದಿಕ್ಕನ್ನು ತಿಳಿಯದೆ "ಹಾ ಮಗನೇ!" ಎಂದು ಬಹಳ ವ್ಯಸನದಿಂದ ಗೋಳಾಡಿದನು. ಅವನನ್ನು ಮಹೇಂದ್ರಸಿಂಹನು ಸಮಾಧಾನಪಡಿಸಿ, ಹೀಗೆ ಹೇಳಿದನು. "ಎಲೈ ಪ್ರಭುವೇ, ಸನತ್ಕುಮಾರನು ಪಾತಾಳವನ್ನು ಹೊಕ್ಕಿದ್ದರೆ ಕೂಡಾ ಅವನನ್ನು ಹುಡುಕಿ ಕರೆದುಕೊಂಡು ಬರುವೆನು. ನೀವು ವ್ಯಸನವನ್ನು ತಾಳದಿರಿ. ಹಿಂದಕ್ಕೆ ತೆರಳಿರಿ" - ಎಂದು ರಾಜನನ್ನು ಹಿಂದಿರುಗಿಸಿದನು. ಆ ಮೇಲೆ ಮಹೇಂದ್ರಸಿಂಹನು ಪರಿವಾರವನ್ನು ಕೂಡಿಕೊಂಡು ದೊಡ್ಡ ಕಾಡನ್ನು ಹೊಕ್ಕು ಸುತ್ತಾಡಿ ನೋಡುತ್ತಿರಲು ಪರಿಜರು ಕುಮಾರನನ್ನು ಹುಡುಕಿ ಕಾಣದೆ ಬೇಸರಗೊಂಡು ಮಹೇಂದ್ರಸಿಂಹನನ್ನು ಬಿಟ್ಟು ಪಟ್ಟಣಕ್ಕೆ ಹೋದರು. ಇತ್ತ ಮಹೇಂದ್ರಸಿಂಹನೊಬ್ಬನೆ ಹಲವಾರು ಬೆಟ್ಟ,ಕಾಡುಗಳನ್ನೂ ಕಠಿನಕರವಾದ ಪ್ರದೇಶಗಳನ್ನೂ ಬೇಡರ ವಾಸಸ್ಥಾನಗಳನ್ನೂ ಯಥಾರೀತಿಯಿಂದ ದಾಟಿ ಹೋಗಿ 'ಪ್ರಿಯಂಗು ಷಂಡ' ಎಂಬ ಕಾಡಿಗೆ ಹೋದನು. ಆ ಕಾಡಿನ ನಡುವೆ ಇದ್ದ ದೇವಾಲಯದಲ್ಲಿದ್ದು, ತನ್ನ ಗೆಳೆಯನ ಅಗಲಿಕೆಯಿಂದುಂಟಾದ ವ್ಯಸನದಿಂದ ದೇವತೆಯ ಮುಂದೆ ಪ್ರಳಾಪಿಸುತ್ತ, ಅತ್ತು ನಿದ್ದೆ ಮಾಡಿದನು. ಸೊಗಸಾದ ಬೆಳಗಿನ ಜಾವದ ವೇಳೆಗೆ ಒಂದು ಕನಸನ್ನು ಕಂಡನು. ಅದರಲ್ಲಿ ನೂರಾರು ಹೆಣ್ಣಾನೆಗಳಿಂದ ಆವರಿಸಿಕೊಂಡು ತಿಳಿಯಾದ ನೀರಿನ ಕೊಳದಲ್ಲಿ ಆಡುವ ಮದ್ದಾನೆಯನ್ನೂ ಹಣ್ಣಿನಿಂದ ತುಂಬಿದ ಮಾವಿನ ಮರವನ್ನೂ ಕಂಡು ಇಷ್ಟಾರ್ಥ ಕೈಗೂಡಿತೆಂದು ಸಂತೋಷಪಟ್ಟು ಪುನಃ ನಿದ್ದೆ ಮಾಡಿದನು. ಅವನನ್ನು

ಕಂಡು ಮನೋರಥಸಿದ್ಧಿಯಾಯ್ತೆಂಮ ಒಸೆದು ಮಗುಟ್ಟು ನಿದ್ರಾವಶಗತನಾದೊನಂ ಕಂಡು ಕರುಣಿಸಿ ಭೂತಾಂಬರನೆಂಬ ವ್ಯಂತರದೇವನೆತ್ತಿಕೊಂಡು ಪೋಗಿ ವಿಜಯಾರ್ಧಪರ್ವತಕ್ಕಾಸನ್ನಮಪ್ಪ ಭೂತರಮಣಮೆಂಬ ವನದ ನಡುವಿನೊಳರ್ದ್ದ ಕ್ಷುಲ್ಲಕಮಾನಸಮೆಂಬ ಸರೋವರದ ತಡಿಯೊಳಿಕ್ಕಿ ಪೋದನ್ ಆಗಳಾತನುಂ ನೇಸರ್ಮೂಡುವಾಗಳ್ ತೂಂಕಡುಗೆಟ್ಟು ದೆಸೆಗಳಂ ನೋಟ್ಪುಂ ಸಮುದ್ರಮೊಳೋರಂತಪ್ಪ ಕೋಕನದ ಕುಮುವ ಕುವಲಯ ಕಲ್ಹಾರೇಂದೀವರಾದಿಗಳಿಂದಂ ಹಂಸ ಚಕ್ರವಾಕ ಬಳಾಕ ವಿಪಕ್ಷಿಗಣಂಗಳ್ ನೀರೊಳಗಾಮತ್ತುಂ ಮುಬುಗುತ್ತುಂ ನಾನಾಪ್ರಕಾರದಿಂದಂ ಮಾಜುಲಿಪ ದನಿಗಳಿಂದಮತಿ ರಮಣೀಯಮಪ್ಪ ಕೊಳನಂ ಕಂಡಾದಮಾನುಂ ವಿಸ್ಮಯಚಿತ್ತನಾಗಿ ಆ ಭೂತರಮಣದೆಂಬ ವನದೊಳತೋಕ ಪುನ್ನಾಗ ವಕುಲ ಚಂಪಕ ಸಹಕಾರ ಲವಂಗ ಕ್ರಮುಕ ನಾಳಕೇರ ನಾಗವಲ್ಲೀ ಪಿನದ್ಧ ದ್ರುಮಷಂಡ ಮುಂಡಿತಮನಿಂದ್ರವನದೋಳೋರಂತಪ್ಪುದಂ ನೋಡುತ್ತುಂ ತೊಬಲ್ಮೊಂ ತನಗನುಕೂಲಮಪ್ಪ ಶಕುನನಿಮಿತ್ತಂಗಳುಮಂ ಕಂಡಿಂದಮೋಘಮೆನ್ನ ಸ್ವಾಮಿಯಂ ಕಾಣ್ಪೆನೆಂದು ಸಂತುಷ್ಟಚಿತ್ತನಾಗಿಯಾ ಬನದ ನಡುವೆ ತೊಬಲ್ಮೊಂ ಮೃದು ಮಧುರ ಗಂಭೀರ ಧ್ವನಿಯೊಳ್ ಕೂಡಿದ ಮೃದಂಗ ವಂಶ ತಾಳಾದಿಗಳ ಧ್ವನಿಗಳುಮಂ ಮಂದ್ರ ತಾರ ಲಯಾನ್ವಿತಮಾಗೆ ಕಿವಿಗಂ ಮನಕ್ಕಂ ಸೊಗಯಿಸುವಂತಪ್ಪ ಪಾಟಮುಮಂ ಕೇಳ್ದು ಹರಿಚಂದನ ಕಾಳಾಗರು ಮಲಯಜ ತುರುಷ್ಕಾದಿಗಳ ಕಂಪು ಬಂದು ತೀದಿದೊಡಿದು ದೇವನಿವಾಸಮಕ್ಕುಮೆಂದು ಬಗೆದು ಭಯಾಶ್ಚರ್ಯದಿಂದಂ

ಭೂತಾಂಬರನೆಂಬ ಪಿಶಾಚದೇವನು ಕಂಡು ದಯೆಗೊಂಡು, ಎತ್ತಿಕೊಂಡು ಒಯ್ದು ವಿಜಯಾರ್ಧಪರ್ವತಕ್ಕೆ ಸಮೀಪದಲ್ಲಿರುವ 'ಭೂತರಮಣ' ಎಂಬ ಕಾಡಿನ ನಡುವಿನಲ್ಲಿದ್ದ ಕ್ಷುಲ್ಲಕ ಮಾನಸವೆಂಬ ಸರೋವರದ ತೀರದಲ್ಲಿ ಬಿಟ್ಟು ತೆರಳಿದನು. ಮಹೇಂದ್ರಸಿಂಹನಿಗೆ ಸೂರ್ಯೋದಯವಾಗುವ ವೇಳೆಗೆ ನಿದ್ದೆ ಬಿಟ್ಟಿತು. ದಿಕ್ಕುಗಳ ಕಡೆಗೆ ನೋಡಿದನು. ಆಗ ಸಮುದ್ರದ ಹಾಗೆಯೇ ಇರತಕ್ಕ ಒಂದು ಕೊಳವನ್ನು ಕಂಡನು. ಅದು ತಾವರೆ, ಕುಮುದ, ಕುವಲಯ, ಕನ್ನೈದಿಲೆ, ನೀಲೋತ್ಪಲ ಮುಂತಾದ ಹೂವುಗಳಿಂದ ಕೂಡಿಯೂ ಹಂಸ, ಚಕ್ರವಾಕ, ಕೊಕ್ಕರೆ ಮುಂತಾದ ವಿಶೇಷ ರೀತಿಯ ಹಕ್ಕಿ ಬಳಗಗಳು ನೀರಿನಲ್ಲಿ ಆಡುತ್ತ ಮುಳುಗುತ್ತ ಹಲವಾರು ರೀತಿಯಲ್ಲಿ ಪ್ರತಿಶಬ್ದಗಳನ್ನು ಮಾಡತಕ್ಕ ಧ್ವನಿಗಳಿಂದ ಕೂಡಿಯೂ ಬಹಳ ಮನೋಹರವಾಗಿದ್ದಿತು. ಮಹೇಂದ್ರಸಿಂಹನು ಆ ಕೊಳವನ್ನು ಕಂಡು ಮನಸ್ಸಿನಲ್ಲಿ ಬಹಳ ಆಶ್ಚರ್ಯಪಟ್ಟನು. ಆ ಭೂತರಮಣವೆಂಬ ಕಾಡಿನಲ್ಲಿ ಅಶೋಕ, ಪುನ್ನಾಗ, ಬಕುಳ (ರೆಂಜೆ), ಸಂಪಗೆ, ಮಾವು, ಲವಂಗ, ಅಡಕೆ ಮರ, ತೆಂಗಿನ ಮರ, ವೀಳ್ಯದೆಲೆ ಬಳ್ಳಿಗಳಿಂದ ಕೂಡಿದ ಮರಗಳ ಸಮೂಹದಿಂದ ಅಲಂಕೃತವಾಗಿದ್ದು ದೇವೇಂದ್ರನ ನಂದನವನದಂತಿದ್ದ ಆ ಕಾಡನ್ನು ನೋಡುತ್ತ ಸುತ್ತಾಡುತ್ತಿದ್ದನು. ತನಗೆ ಅನುಕೂಲವಾದ ಶಕುನಗಳನ್ನು ಕಂಡು, 'ಇಂದು ನಿಶ್ಚಯವಾಗಿಯೂ ನನ್ನ ಪ್ರಭುವನ್ನು ಕಾಣುವೆನು' ಎಂದುಕೊಂಡು ಮಹೇಂದ್ರ ಸಿಂಹನು ಮನಸ್ಸಿನಲ್ಲಿ ಸಂತೋಷಗೊಂಡು ಆ ಕಾಡಿನ ನಡುವೆ ಸಂಚರಿಸುತ್ತಿದ್ದನು. ಆಗ ಅವನು ಮೃದುವೂ ಮಧುರವೂ ಉದಾತ್ತವೂ ಆದ ನಾದದಿಂದ ಕೂಡಿದ ಮೃದಂಗ, ಕೊಳಲು, ತಾಳಾದಿಗಳ ಧ್ವನಿಗಳನ್ನೂ ಮಂದ್ರ - ತಾರ ಸ್ವರಗಳಿಂದ ಲಯಬದ್ಧವಾಗಿ ಕಿವಿಗೂ ಮನಸ್ಸಿಗೂ ಸುಖವನ್ನುಂಟುಮಾಡುವ ಹಾಡನ್ನು ಕೇಳಿದನು. ಶ್ರೀಗಂಧ, ಕಪ್ಪು ಅಗರು, ಗಂಧ, ಲೋಬಾನ ಮುಂತಾದವುಗಳ ಸುವಾಸನೆ

ವ್ಯಾಕುಳಿತದುನದೊನಾಗಿ ಇನ್ನಿದನವೋಷ್ಠಂ ನೋಟ್ಪೆನೆಂದಾ ದೆಸೆಗಾಗಿ ಸಲ್ವೊನ್ ಕನತ್ಕನಕವಿನಿರ್ಮಿತಮಂ ನಾನಾ ಮಣಿಗಣ ಖಿನದ್ಧಮಂ ಚಳತ್‌ಕೇತುಪತಾಕಾದ್ಯಮಂ ವಿದ್ಯಾಧರಯುವತೀಜನ ಕ್ರೀಡನಾರ್ಥಮಪ್ಪ ಪ್ರಾಸಾದಮಂ ಕಂಡು ವಿಸ್ಮಯಚಿತ್ತನಾಗಿಯದಜ ಸಮೀಪಕ್ಕೆ ಸಾರ್ದೊಂದು ಮರನಂ ಮಜ್ಜಿಗೊಂಡು ನೋಟ್ಪೊಂ ಶತುರಃಸ್ಥಿತಮಪ್ಪ ಮಣಿಮಂಟಪದೊಳ್ ದಿವ್ಯಸ್ತ್ರೀಜನಂಗಳ್ ವಿಲಾಸದಿಂ ಚಾಮರಮಿಕ್ಕೆ ದಿವ್ಯತಯ್ಯಾತಳದ ಮೇಗಿರ್ದು ನಾಟಕಮಂ ನೋಟ್ಪ ಕುಮಾರನಂ ಕಂದು ಹರ್ಷಚಿತ್ತದಿಂದಂ ಕುಸುಮಿತ ಕವಂಬವೃಕ್ಷಂಬೊಲ್ ಕಂಟಕಿತ ರೋಮಾಂಚಿತಗಾತ್ರನಾಗಿ ಪರಿದುವರ್ಪೊನಂ ಕಂದಿದಿರೆಯ್ದೆ ಯಾತನುಂ ಕುಮಾರನ ಚರಣಾರವಿಂದಂಗಳ್ಗೆಱಗಿ ಬಿರ್ದು ಮೂರ್ಛಾಗತನಾದೊಡಾಗಳ್ ಶೀತಳಕ್ರಿಯೆಗಳಿಂದೆಚ್ಚತ್ತಜುದಿಂಗಳಿಂ ಕಂಡೆಂ ಸ್ವಾಮಿ ನಿನ್ನಂ ನಂಬಿರ್ದೆ ನಾನೆಂದು ಮಹಾ ದುಃಖದಿಂದಚ್ಚನಂ ಸಂತಯಿಸಿ ವಿಪುಳಶ್ರೀಯೆಂಬ ವಿದ್ಯಾಧರವಿಳಾಸಿನಿಯಂ ಕರೆದಿಂತೆಂದು ಪೇಚ್ಚನೆನ್ನ ಸಹೋದರನೆಂತುಂ ಶ್ರಮಮುಂ ನೀಗಿ ಸುಖದಿಂ ತಣಿದೊನಕ್ಕುಮಂತಾಗೆ ಸ್ನಾನಪಾನ ಭೋಜನಾದಿ ಕ್ರಿಯೆಗಳಂ ಬೇಗಂ ಪಾಡೆಂದುಂ ಪೇಚ್ಚೊಡಾಕೆಯುಮಂತೆಗೆಯ್ದೆನೆಂದಾತನಂ ಮಹಾವಿಭೂತಿಯಿಂದಂ ವಿದ್ಯಾಧರ ವಿಲಾಸಿನಿ ಮಜ್ಜನಂಬುಗಿಸಿ ದಿವ್ಯಾಹಾರಮನೂದಿ ವಸ್ತ್ರಾಭರಣ ಗಂಧಮಾಲ್ಯಾದಿ ತಾಂಬೂಲಾದಿಗಳಿಂ

ಬಂದು ಅವನನ್ನು ನೋಕಿತು. ಆಗ ಇದು ದೇವಾಲಯವಾಗಿರಬೇಕೆಂದು ಭಾವಿಸಿದನು. ಭಯದಿಂದಲೂ ಆಶ್ಚರ್ಯದಿಂದಲೂ ಕದಡಿದ ಮನಸ್ಸುಳ್ಳವನಾಗಿ ನಿಶ್ಚಯವಾಗಿಯೂ ನಾನಿವನ್ನು ನೋಡುವೆನು - ಎಂದು ಅದೇ ಕಡೆಗಾಗಿ ತೆರಳಿದನು. ಅಲ್ಲಿ ಹೊಳೆದ ಚಿನ್ನದಿಂದ ಮಾಡಿದ್ದೂ ಹಲವಾರು ರತ್ನಗಳನ್ನು ಕೆತ್ತಿಸಿದ್ದೂ ಚಲಿಸುವ ಧ್ವಜ ಬಾವುಟಗಳುಳ್ಳದೂ ವಿದ್ಯಾಧರತರುಣಿಯರಿಗೆ ಆಡಲು ಉಪಯುಕ್ತವೂ ಆದ ಮಹಾಭವನವನ್ನು ಕಂಡು ಆಶ್ಚರ್ಯಪಟ್ಟನು. ಅದರ ಬಳಿಗೆ ಹೋಗಿ ಒಂದು ಮರದ ಮರೆಯಲ್ಲಿದ್ದು ನೋಡಿದನು. ಆ ಭವನದ ಎದುರುಗಡೆ ಇದ್ದ ರತ್ನಮಂಟಪದಲ್ಲಿ ದೇವತಾಸ್ತ್ರೀಯರು ಸೊಗಸಾಗಿ ಚಾಮರವನ್ನು ಬೀಸುತ್ತಿರಲು ದಿವ್ಯವಾದ ಹಾಸಿಗೆಯ ಮೇಲೆ ಕುಳಿತು ನಾಟಕವನ್ನು ನೋಡುವ ಸನತ್ಕುಮಾರನನ್ನು ಕಂಡು ಸಂತುಷ್ಟ ಮನಸ್ಕನಾದನು. ಮೂಬಿಟ್ಟ ಕಡವೆ ಮರದಂತೆ ರೋಮಾಂಚಗೊಂಡ ದೇಹವುಳ್ಳವನಾಗಿ ನಡೆದು ನಿಲುವಷ್ಟರಲ್ಲಿ ಕುಮಾರನು ಕಂಡು ಎದುರಿಗೆ ಬಂದನು. ಅವನು ಕುಮಾರನ ಪಾದಕಮಲಗಳಿಗೆ ಎರಗಿ ಬಿದ್ದು ಮೂರ್ಛೆ ಹೋದನು. ಆಗ ಶೀತಳಕ್ರಿಯೆಗಳಿಂದ ಎಚ್ಚರಗೊಂಡು "ಪ್ರಭುವೇ, ನಿನ್ನನ್ನು ಅರು ತಿಂಗಳನಂತರ ಇದೀಗ ಕಂಡೆನು. ನಾನು ನಿನ್ನನ್ನು ನಂಬಿದ್ದೇನೆ" ಎಂದು ಮಹಾವ್ಯಸನದಿಂದ ಅತ್ತನು. ಸನತ್ಕುಮಾರನು ಅವನನ್ನು ಸಮಾಧಾನಪಡಿಸಿ ವಿಪುಳಶ್ರೀ ಎಂಬ ವಿದ್ಯಾಧರ ಸ್ತ್ರೀಯನ್ನು ಕರೆದು ಹೀಗೆಂದನು - "ನನ್ನ ಸಹೋದರನಾದ ಇವನು ಹೇಗಾದರೂ ಆಯಾಸವನ್ನು ಕಳೆದು ಸುಖದಿಂದ ತೃಪ್ತಿಗೊಳ್ಳುವ ಹಾಗೆ ಅವನಿಗೆ ಸ್ನಾನ-ಪಾನ-ಭೋಜನ ಮುಂತಾದುವನ್ನು ಬೇಗನೆ ನಿರವೇರಿಸು." ಹೀಗೆ ಹೇಳಲು, "ಹಾಗೆಯೇ ಮಾಡುವೆನು" ಎಂದು ಆ ವಿದ್ಯಾಧರ ಸ್ತ್ರೀಯು ಮಹೇಂದ್ರ ಸಿಂಹನಿಗೆ ಮಹಾವೈಭವದಿಂದ ಸ್ನಾನವನ್ನು ಮಾಡಿಸಿ ದಿವ್ಯವಾದ ಆಹಾರವನ್ನು ಕೊಟ್ಟು ಉಡಿಗೆ, ತೊಡಿಗೆ, ಗಂಧ, ಹೂಮಾಲೆ, ಎಲೆಯಡಕೆ -

ತಣಿಪಿದಾಗಳಾತನುಂ ಮುನ್ನಿನ ದುಃಖಮೆಲ್ಲಮಂ ಮಱೆದಂ ಮುನ್ನಂ ಕ್ಲೇಶಭಾಗಿಯಪ್ಪ ಪುರುಷಂ ಸ್ವರ್ಗಮನೆಯ್ದಿ ಮಾಱಿಪ್ಪವೊಲೆ ಆಯ್ತಾಗಳಲ್ಲಿಂ ಬಂದು ಕುಮಾರನೋರಾಸನದೊಳಿರ್ದು ಸರ್ವಾಭರಣಭೂಷಿತನಾಗಿ ನೇತ್ರಮನೋಹರಿಯೆಂಬ ದಿವ್ಯಸಭೆಯಂ ನೋಡಿ ವಿಸ್ಮಯಚಿತ್ತನಾಗಿ ಇಂತೆಂದು ಸ್ವಾಮಿ ವ್ರತ ಶೀಲೋಪವಾಸ ತಪಶ್ಚರಣ ಸಂನ್ಯಸನಾದಿ ಶುಭಾನುಷ್ಠಾನಕ್ರಿಯೆಗಳಿಂ ಸತ್ಪುರುಷಂ ಮಱುಭವದೊಳ್ ದೇವಾಂಗನೆಯರ್ಕ್ಕಳಿಜಿಯನಕ್ಕುಂ ನೀಮೀ ಭವದಿಂದಿಂತಪ್ಪ ವಿಭವಮನೆಯ್ದಿರಿದೆನಗೆ ಮಹಾವಿಸ್ಮಯಮೆನೆ ಕುಮಾರನಿಂತೆಂದನಿವರ್ಗ್ಗಳ್ ದೇವಕನ್ನೆಯರಲ್ಲರ್ ವಿದ್ಯಾಧರಿಯರ್ಕ್ಕಳೆನೆ ಇವರ್ಗ್ಗಳಂ ನೀಮೆಂತು ಪೆತ್ತಿರೆಲ್ಲಿ ಮೇಣಾವ ಸ್ವರೂಪದಿಂ ಬಂದಿರಿದನೆನಗೆ ತಿಳಿಯೆ ಪೇೞಮೆನೆ ಕುಮಾರನಿರುಳೆಲ್ಲಮತಿರಂಜನೆಯೆಂಬ ನಾಟಕಮಂ ನೋಡಿ ನಿದ್ರಾಸುಖಮಂ ಪೆಱದೊನಾ ಕಮಳಮತಿಯೆಂಬ ವಿದ್ಯಾಧರ ವಿಳಾಸಿನಿಯಂ ವಿದಗ್ಧೆಯಂ ಕರೆದೆನ್ನ ಸಂಬಂಧಿಯಪ್ಪ ಕಥೆಯೆಲ್ಲಮಂ ಮಹೇಂದ್ರಸಿಂಹಂಗೆ ಪೇೞಿಂದು ನಿದ್ರಾವಶಗತನಾಗಿ ವಾಸಗೃಹಮಂ ಪೊಕ್ಕನಿತ್ತಾಕೆಯುಮಾತಂಗಿಂತೆಂದು ಪೇೞಲ್ ತಗುಳ್ದಳ್ ಕುಮಾರನಿಂದಾರೂಢಮಪ್ಪ ದುಷ್ಪಾಶ್ವಂ ಕುಮಾರನಂ ಕೊಂಡು ಮನೋವೇಗದಿಂ ಗಿರಿ ವನ ದರಿ ನದೀಪ್ರದೇಶಂಗಳೊಳ್ ಮೂಱುದಿವಸ ಮಿರುಳುಂ ಪಗಲುಂ ಪರಿಯುತ್ತಿರ್ದುದು ಕರುಳ್ ಪಱೆದು ತೆಗಲೆಯೊಡೆದು ಕಾಲಂಗೆಯ್ದುತ್ತಾಗಳ್ ಕುಮಾರನುಂ ಪಸಿವುಂ ನೀರಱ್ಕೆಯಿಂದಮಾನುಂ ಬಾಧಿಸಪಟ್ಟು ಬಸಮಟೆದು ಪಿರಿದೊಂದಾ

ಮುಂತಾದವುಗಳಿಂದ ತೃಪ್ತಿಪಡಿಸಿದಳು. ಅವನು ಆಗ ತನ್ನ ಹಿಂದಿನ ದುಃಖವೆಲ್ಲವನ್ನೂ ಮರೆತನು. ಹಿಂದೆ ಕಷ್ಟಗಳನ್ನು ಅನುಭವಿಸಿದವನು ಸ್ವರ್ಗಕ್ಕೆ ಹೋಗಿ ತನ್ನ ಹಿಂದಿನ ಕಷ್ಟಕ್ಕೆ ಸುಖವನ್ನು ವಿನಿಮಯ ಮಾಡಿಕೊಳ್ಳುವಂತೆಯೇ ಆಗ ಅವನಿಗಾಯಿತು. ಅಲ್ಲಿಂದ ಬಂದು ಸನತ್ಕುಮಾರನೊಂದಿಗೆ ಒಂದೇ ಪೀಠದಲ್ಲಿ ಕುಳಿತುಕೊಂಡು ಎಲ್ಲಾ ಆಭರಣಗಳಿಂದ ಅಲಂಕೃತನಾಗಿ ನೇತ್ರಮನೋಹರವಾದ ದಿವ್ಯ ಸಭೆಯನ್ನು ನೋಡಿ ಮನದಲ್ಲಿ ಆಶ್ಚರ್ಯಪಟ್ಟು ಹೀಗೆಂದನು - "ಪ್ರಭುವೇ, ವ್ರತ, ಶೀಲ, ಉಪವಾಸ, ತಪಸ್ಸು, ಸಂನ್ಯಾಸ - ಮುಂತಾದ ಶುಭಕರ ಆಚರಣೆಗಳಿಂದ ಸತ್ಪುರುಷನು ಮುಂದಿನ ಜನ್ಮದಲ್ಲಿಯೇ ದೇವತಾಸ್ತ್ರೀಯರಿಗೆ ಒಡೆಯನಾಗುವನು. ನೀವು ಈ ಜನ್ಮದಲ್ಲಿಯೇ ಇಂತಹ ವೈಭವವನ್ನು ಹೊಂದಿದ್ದೀರಿ ! ಇದು ನನಗೆ ಮಹದಾಶ್ಚರ್ಯ !." ಆಗ ಕುಮಾರನು ಹೀಗೆಂದನು - "ಇವರು ಸುರಕನ್ಯೆಯರಲ್ಲ ವಿದ್ಯಾಧರಿಯರು". ಅದಕ್ಕೆ ಮಹೇಂದ್ರಸಿಂಹನು - "ಇವರನ್ನು ನೀವು ಎಲ್ಲಿ ಹೇಗೆ ಪಡೆದಿರಿ ? ಅಲ್ಲದೆ ಯಾವ ರೀತಿಯಲ್ಲಿ ಇಲ್ಲಿಗೆ ಬಂದಿರಿ ? ಇದನ್ನು ನನಗೆ ತಿಳಿಸಿರಿ" ಎಂದನು, ಕುಮಾರನು ರಾತ್ರಿಯೆಲ್ಲ 'ಅತಿರಂಜನೆ' ಎಂಬ ನಾಟಕ ನೋಡಿ ನಿದ್ದೆ ಗೆಟ್ಟಿದ್ದುದರಿಂದ ಕಮಳಮತಿ ಎಂಬ ವಿದ್ಯಾಧರೆ ವಿದಗ್ಧೆಯಾದ ಸ್ತ್ರೀಯನ್ನು ಕರೆದು "ನನ್ನ ಸಂಬಂಧವಾದ ಎಲ್ಲ ಕಥೆಯನ್ನೂ ಮಹೇಂದ್ರಸಿಂಹನಿಗೆ ಹೇಳು" ಎಂದು ನುಡಿದು ನಿದ್ರೆಗೆ ವಶನಾಗಿ ಮಲಗುವ ಮನೆಯನ್ನು ಹೊಕ್ಕನು. ಇತ್ತ ಕಮಳಮತಿ ಮಹೇಂದ್ರಸಿಂಹನಿಗೆ ಈ ರೀತಿಯಾಗಿ ಹೇಳತೊಡಗಿದಳು - ಕುಮಾರನು ಕುಳಿತ ಪಟ್ಟದ ಕುದುರೆ ಕುಮಾರನನ್ನು ತೆಗೆದುಕೊಂಡು ಮನೋವೇಗದಿಂದ ಬೆಟ್ಟ, ಕಾಡು, ತಪ್ಪಲು, ಹೊಳೆಗಳ ಸ್ಥಳಗಳಲ್ಲಿ ಮೂರು ದಿವಸ ಇರುಳೂ ಹಗಲೂ ಓಡುತ್ತಿದ್ದು ಕರುಳು ತುಂಡಾಗಿ ಎದೆ ಒಡೆದು ಸತ್ತುಹೋಯಿತು. ಆಗ ಸನತ್ಕುಮಾರನು ಬಹಳವಾಗಿ ಹಸಿವು

ಲದ ಮರದ ಕೆಲಗೆ ಶಿಲಾತಳದ ಮೇಗೆ ಪಟ್ಟರ್ದ್ದನಾಗಳಲ್ಲಿಯಾ ವಟವೃಕ್ಷವಾಸಿಯಪ್ಪ ಮನೋಹರನೆಂಬ ಯಕ್ಷಂ ಕಂಡೀ ಪುರುವಂ ಸಕಲಚಕ್ರವರ್ತಿಯಪ್ಪನೆಂದಱೆದು ಗಂಧೋದಕಮಂ ಮೇಲೆ ತಳಿದು ತಣ್ಣಾಳಿಯಂ ಎಗುರ್ವಿಸಿ ದೇಹಕ್ಕಾಪ್ಯಾಯನಂ ಮಾಡಿ ಸ್ವರ್ಣಭಾಜನದಿಂದಾಮೋದಸುಗಂಧಮಪ್ಪ ಕೋಡುವ ನೀರನಾತಂಗೆ ಕುಡಿಯಲೆಱಿದನಾಗಳ್ ಕುಮಾರಂ ನೀನಾರ್ಗ್ಗೀ ನೀರನೆಲ್ಲಿಂ ತಂದಯ್ ಪೇಱಿಂದು ಬಿಸಗೊಂಡೊಂಡಾತನಿಂತೆಂದನಾನೀ ವಟವೃಕ್ಷನಿವಾಸಿಯೆನ್ ಮನೋಹರನೆಂಬ ಯಕ್ಷನೆನ್ ಕ್ಷುಲ್ಲಕಮಾನಸಮೆಂಬ ಸರೋವರದಿಂ ತಂದೆನೀ ನೀರನೆನೆ ಅಂತಪ್ಪೊಡೆ ನೀನೆನ್ನನಾ ಕೊಳಕ್ಕೊಡಗೊಂಡು ಪೋಗಲ್ಲಿಯಾ ನೀರಂ ಮಿಂದು ಕುಡಿವೊಡಲ್ಲದೆನಗೆ ನೀರಟ್ಕಿ ಕಡದೆಂದು ಪೇಱ್ದೊಡೆ ಕುಮಾರನನೆತ್ತಿಕೊಂಡು ಪೋಗಿ ಯಕ್ಷನಾ ಸರೋವರದ ತಡಿಯೊಳಿಟೆಪಿ ಪೊದನ್ ಆ ಅವಸರದೊಳ್ ಸಿತಯಕ್ಷನೆಂಬ ವ್ಯಂತರದೇವಂ ಕುಮಾರನ ಪೂರ್ವವೈರಿ ಭೌಮವಿ[illegible]ರಕ್ಕೆ ಬಂದು ಕುಮಾರನಂ ಕಂದು ಕ್ರೋಧಾಗ್ನಿ ಪೆರ್ಚಿ ಭೈರವರೂಪಧಾರಿಯಾಗಿ ಕಳಕಳಧ್ವನಿಯಿಂದಂ ಗರ್ಜಿಸಿ ಬರ್ಪೊನಂ ಕಂಡಾಗಳ್ ಸಿಂಹನಾದಂಗೆಯ್ದು ಬಲ್ಲಸನ್ನಿಭಮಪ್ಪ ಮಹಾಶಿಲೆಯಂ ಕಲ್ತಿತ್ತಿಕೊಂಡು ಪ್ರತಿರಾಕ್ಷಸಂಬೊಲ್ ನಿಂದ ಕುಮಾರನಂ ನೋಡಿ ವ್ಯಂತರದೇವಂ ನಾಗಪಾಶದಿಂದಂ ವೇಷ್ಟಿಸಿದೊಡೆ ಕುಮಾರನದಂ

ಬಾಯಾರಿಕೆಗಳಿಂದ ಬಾಧಿತನಾಗಿ ಶಕ್ತಿಗುಂದಿದ್ದನು. ಅವನು ದೊಡ್ಡದಾದ ಒಂದು ಆಲದ ಮರದ ಕೆಳಗಿನ ಕಲ್ಲಿನ ತಳದ ಮೇಲೆ ಮಲಗಿದ್ದನು. ಆಗ ಅಲ್ಲಿ ಆ ಆಲದ ಮರದಲ್ಲಿ ವಾಸವಾಗಿದ್ದ ಮನೋಹರನೆಂಬ ಯಕ್ಷನು ಅವನನ್ನು ಕಂಡನು. "ಈ ಪುರುಷನು ಭರತಕ್ಷೇತ್ರದ ಆರು ಖಂಡಗಳಿಗೂ ಅಧಿರಾಜನಾಗುವನು" ಎಂದು ತಿಳಿದುಕೊಂಡನು. ಕುಮಾರನ ಮೇಲೆ ಗಂಧದ ನೀರನ್ನು ಸೇಚಿಸಿದನು. ತಂಗಾಳಿಯನ್ನು ಮಾಯೆಯಿಂದ ಸೃಷ್ಟಿಸಿ ಅವನ ದೇಹಕ್ಕೆ ಹಿತವನ್ನುಂಟುಮಾಡಿ, ಚಿನ್ನದ ಪಾತ್ರೆಯಿಂದ ಸಂತೋಷಕರವೂ ಸುಗಂಧಯುಕ್ತವೂ ಆದ ತಣ್ಣೀರನ್ನೂ ಅವನಿಗೆ ಕುಡಿಯುವುದಕ್ಕಾಗಿ ಹೊಯ್ದನು. ಆಗ ಕುಮಾರನು "ನೀನು ಯಾರು ? ಈ ನೀರನ್ನು ಎಲ್ಲಿಂದ ತಂದೆ ? ಹೇಳು" ಎಂದು ಕೇಳಿದನು. ಅದಕ್ಕೆ ಅವನು - "ನಾನು ಈ ಆಲದ ಮರದಲ್ಲಿ ವಾಸಿಸುತ್ತಿರುವ ಮನೋಹರನೆಂಬ ಯಕ್ಷನಾಗಿರುವೆನು. ಈ ನೀರನ್ನು ಕ್ಷುಲ್ಲಕಮಾನಸವೆಂಬ ಕೊಳದಿಂದ ತಂದಿರುವೆನು" ಎಂದು ಹೇಳಿದನು. ಕುಮಾರನು ಅವನೊಡನೆ "ಹಾಗಾದರೆ ನೀನು ನನ್ನನ್ನು ಆ ಕೊಳಕ್ಕೆ ಕರೆದುಕೊಂಡು ಹೋಗು. ಅಲ್ಲಿ ಆ ನೀರಿನಲ್ಲಿ ಸ್ನಾನಮಾಡಿ ಜಲಪಾನ ಮಾಡಿದಲ್ಲದೆ ನನಗೆ ಬಾಯಾರಿಕೆ ಪರಿಹಾರವಾಗದು" ಎಂದು ಹೇಳಲು, ಯಕ್ಷನು ಕುಮಾರನನ್ನು ಎತ್ತಿಕೊಂಡು ಹೋಗಿ ಆ ಸರೋವರದ ದಡದಲ್ಲಿ ಇಳಿಸಿ ಹೋದನು. ಆ ಸಂದರ್ಭದಲ್ಲಿ ಸನತ್ಕುಮಾರನು ಪೂರ್ವಜನ್ಮದ ಶತ್ರುವಾದ ಸಿತಯಕ್ಷನೆಂಬ ವ್ಯಂತರದೇವನು ಭೂಮಿಯಲ್ಲಿ ಸಂಚರಿಸುವುದಕ್ಕಾಗಿ ಬಂದು, ಕುಮಾರನನ್ನು ಕಂಡನು. ಆಗ ಸಿಟ್ಟಿಂಬ ಬೆಂಕಿ ಹೆಚ್ಚಾಗಿ ಭೈರವರೂಪವನ್ನು ಧರಿಸಿ ಗರ್ಜಿಸುತ್ತ ಬಂದನು. ಅವನನ್ನು ಕುಮಾರನು ಕಂಡು ಸಿಂಹಗರ್ಜನೆ ಮಾಡಿ ಖಡ್ಗವನ್ನು ಹೋಲುವ ದೊಡ್ಡ ಕಲ್ಲನ್ನು ಕಿತ್ತು ಎತ್ತಿಕೊಂಡು ಎದುರಾಗಿ ರಾಕ್ಷಸನೇ ಬಂದ ಹಾಗೆ ನಿಂತನು. ವ್ಯಂತರದೇವನು ಕುಮಾರನನ್ನು ನೋಡಿ ನಾಗಪಾಶದಿಂದ ಅವನನ್ನು ಸುತ್ತುವರಿಯಲು (ಬಂಧಿಸಲು) ಕುಮಾರನು ಅದನ್ನು ತನ್ನ

ಹಸ್ತತಳದಿಂ ಪಱೆಯೆ ಪೊಯ್ಯನಾಗಳಾ ದೇವಂ ನಾನಾ ವಿಧ ಮಾಯಾಯುದ್ಧಂಗಳಿಂ ಕಾದೆ ಕುಮಾರನಂ ಯಷ್ಟಿಮುಷ್ಟಿ ಪ್ರಹಾರಾದಿಗಳಿಂ ಗೆಲ್ದಿರ್ದೊನನೆತ್ತಿಕೊಂಡು ಸಮುದ್ರದ ಬಡವಾಮುಖದೊಳಿಕ್ಕಿ ಕೊಲ್ವೆನಮೋಘಮೆಂದು ನೆಲದಿಂದುರ್ಬಿ ಬಂದಾಕಾಶಕ್ಕೆ ನೆಗಪಿದೊನ ಸ್ಕಂಧಮಂ ತಿವಿದೊಂ ಕುಮಾರನ ಅವಷ್ಟಿವಜ್ರಘಾತಂಬೊಲಪ್ಪ ಮುಷ್ಟಿಯಿಂ ದಿವ್ಯಪುರುಷನ ಹಸ್ತಪ್ರಹಾರಮೆಂಬ ಮುದ್ರಾಪೀಡೆಯಿಂ ತ್ರಸ್ತಾಭಿಭೂತನಾಗಿ ಬಿನ್ನಿತ್ತೋಡಿದನಾಗಳ್ ತನ್ನಿವಾಸಿಗಳಪ್ಪ ಯಕ್ಷಕಿನ್ನರಾದಿಗಳ್ ಮಸ್ತಕದೊಳ್ ನ್ಯಸ್ತಹಸ್ತರ್ಕ್ಕಳಾಗಿ ಜಯಜಯಶಬ್ದಂಗಳಿಂದಂ ಪುಷ್ಪಾದಿಗಳಿಂ ಕುಮಾರನಂ ಪೂಜಿಸಿದರ್ ಆ ಅವಸರದೊಳಿಂದ್ರಪ್ರಭನೆಂಬ ವಿದ್ಯಾಧರಂ ಬಂದು ಕುಮಾರನ ಚರಣಾರವಿಂ ದಂಗಳ್ಗೆಱಗಿ ಪೊಡೆದಟ್ಟುತೆಂದನ್ ಸ್ವಾಮಿ ಮೂವತ್ತಾಱುವರುಷಂ ನಿನ್ನ ಬರವನಾನೆನ್ನರಸನ ಬೆಸದಿಂ ಪಾರುತ್ತಿರ್ದ್ದಂ ನೀನೆನ್ನ ಭಾಗ್ಯದಿನಿಲ್ಲಿಗೆ ಬಂದಯ್ ವಿಜು ವಿಮಾನಮನೆನೆ ಅಂತೆಗೆಯ್ದೆನೆನ್ನ ಬಯಕೆಯಂ ತೀರ್ದಿದ ಬಬೆಕ್ಕೇಱುವೆನೆಂದು ಕೊಳನಂ ಪೊಕ್ಕು ಸ್ವೇಚ್ಛೆಯಿಂ ಕ್ರೀಡಿಸಿ ಪೊಱಮಟ್ಟನನಾ ಖೇಚರಂ ಕೊಂಡು ಪೋಗಿ ತದ್ವನದೊಳತಿ ರಮಣೀಯಮಪ್ಪ ಪ್ರದೇಶದೊಳಾದುತ್ತಿರ್ದ್ದ ವಿದ್ಯಾಧರ ಕನ್ನೆಯರ್ಕಳ ಪಕ್ಕದಿರಿಸಿ ಪೋದನ್ ಇತ್ತ ಖೇಚರ ಕನ್ನೆಯರ್ಕಳ ಕಣ್ಗಳೆಂಬ ಮೀಂಗಳ್ ಕುಮಾರನ ರೂಪೆಂಬ ಗಾಳದಿಂ ತೆಗೆಯೆಪಟ್ಟು ತಪನ ತಾಪನ ದಹನ ವಿಮೋಹನ ಮರಣ ಸ್ವರೂಪದ

ಅಂಗೈಯಿಂದ ಹೊಡೆದು ತುಂಡುಮಾಡಿದನು. ಆಗ ಸಿತಯಕ್ಷನು ಹಲವಾರು ರೀತಿಯ ಮಾಯೆಯ ಯುದ್ಧಗಳಿಂದ ಹೋರಾಡಲು ಕುಮಾರನು ದೊಣ್ಣೆ ಮುಷ್ಟಿಗಳ ಹೊಡೆತಗಳಿಂದ ಗೆದ್ದನು. ವ್ಯಂತರನು ಕುಮಾರನನ್ನು ಎತ್ತಿಕೊಂಡು, ಸಮುದ್ರದ ವಡಬಾಗ್ನಿಯ ಬಾಯಿಗೆ ಹಾಕಿ ಕೊಲ್ಲುವೆನು, ಈ ಕಾರ್ಯ ವ್ಯರ್ಥವಾಗದು - ಎಂದು ನೆಲದಿಂದ ಹಿಗ್ಗಿ ಬಂದು ಆಕಾಶಕ್ಕೆ ಎತ್ತಲು ಕುಮಾರನು ಅವನ ಹೆಗಲಿಗೆ ತಿವಿದನು. ಅವನ ಬರಸಿಡಿಲಿನ ಹೊಡೆತದಂತಹ ಮುಷ್ಟಿಯ ಹೊಡೆತದ ಹಿಂಸೆಯಿಂದ ಹೆದರಿದವನೂ ಹೊಡೆಯಲ್ಪಟ್ಟವನೂ ಆಗಿ ಬೆನ್ನುಕೊಟ್ಟು ಓಡಿಹೋದನು. ಆಗ ಅಲ್ಲಿ ವಾಸಮಾಡುತ್ತಿದ್ದ ಯಕ್ಷರು ಕಿನ್ನರರು ಮುಂತಾದವರು ತಲೆಯ ಮೇಲೆ ಕೈಯಿಟ್ಟವರಾಗಿ ಜಯ ಜಯ ಎಂಬ ಶಬ್ದಗಳಿಂದಲೂ ಹೂ ಮುಂತಾದವುಗಳಿಂದಲೂ ಸನತ್ಕುಮಾರನನ್ನು ಪೂಜಿಸಿದರು. ಆ ಸಂದರ್ಭದಲ್ಲಿ ಇಂದ್ರಪ್ರಭನೆಂಬ ವಿದ್ಯಾಧರನು ಬಂದು ಕುಮಾರನ ಪಾದಕಮಲಗಳಿಗೆ ಬಿದ್ದು ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಹೀಗೆ ಹೇಳಿದನು - "ಸ್ವಾಮೀ, ನಾನು ನನ್ನ ಅರಸನ ಆಜ್ಞೆಯ ಪ್ರಕಾರ ಮೂವತ್ತಾರು ವರ್ಷಗಳಿಂದ ನಿನ್ನ ಆಗಮನವನ್ನು ಎದುರು ನೋಡುತ್ತ ಇದ್ದೆನು. ನೀನು ನನ್ನ ಪುಣ್ಯದಿಂದ ಇಲ್ಲಿಗೆ ಬಂದಿರುತ್ತೀ. ಇಗೋ ವಿಮಾನ ಹತ್ತು ಹತ್ತು." ಹೀಗೆನ್ನಲು, "ಹಾಗೆಯೇ ಮಾಡುವೆನು ; ನನ್ನ ಬಯಕೆಯನ್ನು ತೀರಿಸಿ ಆದಮೇಲೆ ಹತ್ತುವೆನು" ಎಂದು ನುಡಿದು ಕುಮಾರನು ಸರೋವರವನ್ನು ಹೊಕ್ಕನು. ಅಲ್ಲಿ ತನ್ನ ಇಚ್ಛೆಗೆ ಬಂದಂತೆ ಜಲಕೇಳಿಯಾಡಿ ಹೊರಟನು. ಹೊರಟ ಅವನನ್ನು ವಿದ್ಯಾಧರನು ಎತ್ತಿಕೊಂಡು ಹೋಗಿ, ಆ ಕಾಡಿನಲ್ಲಿ ಅತ್ಯಂತ ಮನೋಹರವಾದ ಸ್ಥಳದಲ್ಲಿ ಆಡುತ್ತಿದ್ದ ಕನ್ಯೆಯರ ಬಳಿಯಲ್ಲಿರಿಸಿ ತೆರಳಿದನು. ಇತ್ತ ವಿದ್ಯಾಧರ ಕನ್ಯೆಯರ ಕಣ್ಣುಗಳೆಂಬ ಮೀನುಗಳು ಕುಮಾರನ ರೂಪವೆಂಬ ಗಾಳದಿಂದ ಹಿಡಿಯಲ್ಪಟ್ಟವು. ತಪನ, ತಾಪನ, ದಹನ, ವಿಮೋಹನ (ವಿಶೇಷವಾಗಿ ಮೋಹಗೊಳಿಸುವುದು), ಮರಣ - ಎಂಬ

ಕಾಮಶರಂಗಳವರ್ಗ್ಗಳಿರ್ದೆಯನುರ್ಚ ಪೋಗಿ ವರವಸೆಯರಾಗಿ ಮಱುಗಿದಱುನೀರ ಮೀಂಗಳ್ಗೊಲಾದರಿದೇಂ ಚೋದ್ಯಮೊ ಕುಸುಮಬಾಣ ಬಿಲ್ಬಲ್ಮೆ

ಶ್ಲೋಕ ॥ ಅಹೋ ಧನುಷಿ ಕೌಶಲ್ಯಂ ಮನ್ಮಥಸ್ಯ ಮಹಾತ್ಮನಃ
ಅಸ್ಪೃಶನ್ನಪಿ ಗಾತ್ರಾಣಿ ಭಿನತ್ತ್ಯಂತರ್ಗತಂ ಮನಃ ॥

ಇವರ್ಗ್ಗಳ್ ತನ್ಮುಖನಿರೀಕ್ಷಣದೊಳಾಸಕ್ತೆಯರಾಗಿರ್ದ್ದರಾಗಳಾ ಇಂದ್ರಪ್ರಭನೆಂಬ ವಿದ್ಯಾಧರಂ ಪ್ರಿಯಸಂಗಮಮೆಂಬ ಪೊಬಲನೆಯ್ದಿ ಭಾನುವೇಗನೆಂಬ ವಿದ್ಯಾಧರಂಗೆ ಪೇೞ್ದನಾದೇಶ ಪುರುಷನಂ ತಂದುಭೂತರಮಣದ ಜ್ಯೋತಿರ್ವಿತಾನಮೆಂಬ ಮಣಿಮಂಟಪದೊಳ್ ಕನ್ನೆಯರ ಪಕ್ಕದಿರಿಸಿ ಬಂದೆನೆನೆ ಆಗಳಾತಂಗೆ ತಣಿವಿನೆಗಂ ತುಷ್ಟಿದಾನಂಗೊಟ್ಟು ವಿಪುಳಶ್ರೀಯೆಂಬ ಬೀಚರಿಯಂ ಕರೆದಿಂತೆಂದು ಶೀಘ್ರಂ ಪೋಗಿ ಕೀರ್ತಿಧವಳಂಗೆ ಭೋಜನಾದಿ ವಿಧಿಯಂ ಮಾಡೆಂದು ಪೇೞ್ದೊಡಾಕೆಯುಮಂತೆಗೆಯ್ವೆನೆಂದು ಸಪರಿವಾರಂಬೆರಸು ಬಂದಾತಂಗೆ ಮಜ್ಜನ ಭೋಜನ ಪ್ರಸಾಧನಾದಿಗಳುಮಂ ಮಾದಿ ಮತ್ತೆ ಕುಮಾರನಂ ದಿವ್ಯಶಯ್ಯಾತಳದೊಳ್ ಸುಖದಿನಿರಿಸಿ ಅನಂಗಸುಂದರಿಯೆಂಬ ವಿದ್ಯಾಧರಿಯನಾಡವೇೞ್ದು ನಾಟಕಮನಭಿನಯಿಸುತ್ತುಂ ಕುಮಾರನ ಮುಂದೆ ವಿನಯಾನ್ವಿತೆಯಾಗಿರ್ದ್ದೊಳಂ

ಗುಣಸ್ವರೂಪವುಳ್ಳ[೧] ಕಾಮ ಬಾಣಗಳು ಆ ಕನ್ಯೆಯರ ಎದೆಗೆ ನಾಟಿ ಬೆನ್ನಿನಲ್ಲಿ ಹೊರಟು, ಅವರು ಮೂರ್ಛೆಹೋಗಿ, ಕುದಿದ ಬತ್ತಿದ ನೀರಿನ ಮೀನುಗಳಂತೆ ಆದರು. ಪುಷ್ಪಬಾಣನಾದ ಮನ್ಮಥನ ಬಿಲ್ಲಿನ ಸಾಮರ್ಥ್ಯ ಏನೊಂದು ಆಶ್ಚರ್ಯವೋ! [ಮಹಾತ್ಮನಾದ ಮನ್ಮಥನ ಬಿಲ್ಲುವಿದ್ಯೆಯ ನೈಪುಣ್ಯ ಆಶ್ಚರ್ಯಕರ. ಅವನು ದೇಹಗಳನ್ನು ಮುಟ್ಟದೆ ಇದ್ದರೂ ಒಳಗಿರತಕ್ಕ ಮನಸ್ಸನ್ನು ತುಂಡರಿಸುತ್ತಾನೆ.] ಇವರು ಸನತ್ಕುಮಾರನ ಮುಖವನ್ನು ನೋಡುವುದರಲ್ಲೇ ಆಸಕ್ತೆಯರಾಗಿದ್ದರು. ಆಗ ಇಂದ್ರಪ್ರಭನೆಂಬ ವಿದ್ಯಾಧರನು ಪ್ರಿಯಸಂಗಮವೆಂಬ ಪಟ್ಟಣಕ್ಕೆ ಹೋಗಿ ಭಾನುವೇಗವೆಂಬ ವಿದ್ಯಾಧರರಾಜನಿಗೆ ಹೀಗೆಂದನು - "ನಾನು ನಿಮ್ಮ ಆದೇಶದಂತೆ ಆ ಮನುಷ್ಯನನ್ನು (ಸನತ್ಕುಮಾರನನ್ನು) ತಂದು ಭೂತರಣವೆಂಬ ಕಾಡಿನ ಜ್ಯೋತಿರ್ವಿತಾನವೆಂಬ ರತ್ನಮಂಟಪದಲ್ಲಿ ಕನ್ಯೆಯರ ಸಮೀಪದಲ್ಲಿರಿಸಿ ಬಂದಿರುತ್ತೇನೆ." ಹೀಗೆ ಹೇಳಲು, ಅತನಿಗೆ ಭಾನುವೇಗನು ತೃಪ್ತಿಯಾಗುವ ಮಟ್ಟಿಗೆ ತೃಪ್ತಿಕರವಾದ ದಾನವನ್ನು ಕೊಟ್ಟು ವಿಪುಳಶ್ರೀ ಎಂಬ ವಿದ್ಯಾಧರಿಯನ್ನು ಕರೆದು - "ನೀನು ಬೇಗನೆ ಹೋಗಿ ಧವಳ ಕೀರ್ತಿಶಾಲಿಯಾದ ಅತನಿಗೆ ಊಟ ಮುಂತಾದ ವ್ಯವಸ್ಥೆಯನ್ನು ಮಾಡು" ಎಂದು ಹೇಳಿದನು. ಆಕೆ "ಹಾಗೆಯೇ ಮಾಡುವೆನು" ಎಂದು ಹೇಳಿ ಪರಿವಾರದೊಡನೆ ಬಂದು ಅವನಿಗೆ ಸ್ನಾನ - ಭೋಜನ - ಅಲಂಕಾರಾದಿಗಳನ್ನು ಮಾಡಿದ ನಂತರ, ಕುಮಾರನನ್ನು ದಿವ್ಯವಾದ ಹಾಸಿಗೆಯ ಮೇಲೆ ಸುಖದಿಂದ ಇರುವಂತೆ ಮಾಡಿದಳು. ಅನಂಗಸುಂದರಿಯೆಂಬ ವಿದ್ಯಾಧರಿಯನ್ನು ನಾಟ್ಯವಾಡಲು ಹೇಳಿ,

---

(೧. ಅರವಿಂದ, ಅಶೋಕ, ಚೂತ, ನವಮಲ್ಲಿಕಾ, ನೀಲೋತ್ಪಲ - ಇವು ಐದುಕಾಮ ಬಾಣಗಳು. ಉನ್ಮಾದನ, ತಾಪನ, ಶೋಷಣ, ಸ್ತಂಭನ, ಸಮ್ಮೋಹನ - ಇವು ಮನ್ಮಥನ ಪಂಚಬಾಣಗಳ ಗುಣಗಳು - ಹೀಗೆ ಅಮರಕೋಶದಲ್ಲಿ ಹೇಳಿದೆ.)

ಕುಮಾರಂ ನೋಡಿ ಇಂತೆಂದಂ ನೀಮೆನಗೀದ್ಗುಧಮಪ್ಪುಪಕಾರಮನೇಕೆ ಗೆಯ್ಯುಪ್ಪಿರ್ ನೀಮೇನಾರ್ಗ್ಗೆಂದು ಬೆಸಗೊಂಡೊಡಾಕೆಯಿಂತೆಂದಳ್ .ಕೇಳ್ ಪೇಱ್ಪೆಂ ಸ್ವಾಮಿ ವಿಜಯಾರ್ಧ ಪರ್ವತದೊಳ್ ಪ್ರಿಯಸಂಗಮಪುರಾಧಿಪತಿಯಪ್ಪ ಭಾನುವೇಗನೆಂಬ ವಿದ್ಯಾಧರಂಗೆ ಶ್ರೀಮಾಲೆ ಮೊದಲಾಗೊಡೆಯ ಮಹಾದೇವಿಯರೆಣ್ಬರವರ್ಗ್ಗೆ ಪುಟ್ಟಿದೊರೀಯೆಣ್ಬರುಂ ಕನ್ನೆಯರ್ಕಳ್ ಲಕ್ಷ್ಮೀಮತಿ ಕನಕಕಾಂತೆ ಮಂದಾರಸೇನೆ ಅಳಕೆ ಅಲಂಭೂಪೆ ಹೇಮವತಿ ಹೇಮಮಾಳಿನಿ ವಿಜಯಾರ್ಧವತಿಯೆಂದೀ ಪೆಸರ್ಗಳನೊಡೆಯರೆಣ್ಬರುಂ ಮಕ್ಕಳನಾರ್ಗೆ ಕುಡುವಮೆಂದೊಂದು ದಿವಸಂ ನೈಮಿತ್ತಿಕನಂ ಭಾನುವೇಗಂ ಬೆಸಕೊಂಡೊಡಾತನಿಂತೆಂದಂ ಕ್ಷುಲ್ಲಕಮಾನಸಮೆಂಬ ಕೊಳದೊಳ್ ಸಿತಯಕ್ಷನೆಂಬ ದೇವನಂ ಸಂಗ್ರಾಮದೊಳಾವೊಂ ಗೆಲ್ದುಮಾತಂಗೆ ಕೂಸುಗಳಂ ಕುಡಿಮೆಂದು ಪೇೞ್ದನದಱಿಂ ನೀನೆಮ್ಮ ಸ್ವಾಮಿಯೆಂದು ಪೇೞ್ವಸರದೊಳ್ ಮಹಾವಿಭೂತಿಯಿಂ ಬರ್ಪ ಖೇಚರೇಂದ್ರನಂ ತೋಱಿದೊಡೀತಂ ನಿಮ್ಮ ಮಾವನೆಂದಾಗಳ್ ಕುಮಾರನುಮಿದಿರೆೞ್ದು ತದ್ಯೋಗ್ಯಮಪ್ಪ ವಿನಯಮಂ ಗೆಯ್ದುರ್ದೋನಂ ವಿದ್ಯಾಧರೇಂದ್ರಂ ಕುಮಾರನಂ ನೋಡಿ ತ್ರಿಭುವನಕ್ಕೆಲ್ಲಂ ತಿಳಕಮಾಗಿರ್ದಳಿಯನಂ ನಾನೆ ಪೆತ್ತೆನೆಂದಾದ ಮಾನುಂ ಸಂತುಷ್ಟಚಿತ್ತನಾಗಿ ಕುಮಾರನಂ ಕೊಂಡು ಪೋಗಿ ತನ್ನ ಪೊಲಲಂ ಪೊಕ್ಕಾ ದೆಸದೊಳಿಣ್ಟರ್ ಕನ್ನೆಯರ್ಕಳಂ ಕೈನೀರೆಱಿದು ಕುಮಾರಂಗೆ ಕೊಟ್ಟಂ ಕುಮಾರನುಂ ದಿವ್ಯಾಂಗನೆಯರ್ಕಳೊಡನೆ

ನಾಟಕವನ್ನು ಅಭಿನಯಿಸುತ್ತ ಕುಮಾರನ ಮುಂದೆ ವಿನಯದಿಂದ ಕೂಡಿದವಳಾಗಿದ್ದಳು. ಅವಳನ್ನು ಕುಮಾರನು ನೋಡಿ - "ನೀವು ನನಗೆ ಈ ರೀತಿಯಾಗಿರುವ ಉಪಕಾರವನ್ನು ಯಾಕೆ ಮಾಡುತ್ತಿದ್ದೀರಿ ? ನೀವು ಯಾರು ? ಯಾರ ಸಂಬಂಧದವರು ?" ಎಂದು ಕೇಳಲು ಆಕೆ ಹೀಗೆಂದಳು - ಸ್ವಾಮಿಯೆ, ಕೇಳು ಹೇಳುತ್ತೇನೆ. ವಿಜಯಾರ್ಧಪರ್ವತದಲ್ಲಿ ಪ್ರಿಯಸಂಗಮವೆಂಬ ಪಟ್ಟಣದ ಒಡೆಯನಾದ ಭಾನುವೇಗನೆಂಬ ವಿದ್ಯಾಧರನಿಗೆ ಶ್ರೀಮಾಲೆ ಮೊದಲಾಗುಳ್ಳ ಎಂಟು ಮಂದಿ ರಾಣಿಯರು. ಅವರಿಗೆ ಹುಟ್ಟಿದ ಲಕ್ಷ್ಮೀಮತಿ, ಕನನಕಾಂತೆ, ಮಂದಾರಸೇನೆ, ಅಳಕೆ, ಅಲಂಭೂಷೆ, ಹೇಮವತಿ, ಹೇಮಮಾಳಿನಿ, ವಿಜಯಾರ್ಧವತಿ - ಎಂದು ಹೆಸರುಳ್ಳ ಎಂಟು ಮಂದಿ ಕನ್ಯೆಯರನ್ನು ಯಾರಿಗೆ ಕೊಡೋಣ ? ಎಂದು ಭಾನುವೇಗನು ಒಂದು ದಿನ ಜೋಯಿಸನನ್ನು ಕೇಳಲು ಆತನು "ಕ್ಷುಲ್ಲಕಮಾನಸವೆಂಬ ಸರೋವರದಲ್ಲಿ ಸಿತಯಕ್ಷನೆಂಬ ವ್ಯಂತರದೇವನನ್ನು ಯಾವನು ಯುದ್ಧದಲ್ಲಿ ಗೆಲ್ಲುವನೋ ಅವನಿಗೆ ಹೆಣ್ಣುಮಕ್ಕಳನ್ನು ಕೊಡಿ" ಎಂದು ಹೇಳಿದನು. ಆದುದರಿಂದ ನೀನು ನಮಗೆ ಒಡೆಯನು - ಎಂದು ಹೇಳಿದಳು. ಅದೇ ಸಂದರ್ಭದಲ್ಲಿ ಬಹಳ ವೈಭವದಿಂದ ಬರುತ್ತಿದ್ದ ವಿದ್ಯಾಧರರಾಜನಾದ ಭಾನುವೇಗನನ್ನು ತೋರಿಸಿ, "ಈತನು ನಿಮ್ಮ ಮಾವ" ಎಂದು ಹೇಳಿದಳು. ಕಮಾರನು ಆಗ ಇದಿರೆದ್ದು ಆತನಿಗೆ ಯೋಗ್ಯವೆನಿಸತಕ್ಕ ವಿನಯವನ್ನು ತೋರಿಸಿದನು. ಅಂತಹ ಸನತ್ಕುಮಾರನನ್ನು ವಿದ್ಯಾಧರರಾಜನು ನೋಡಿ, ಮೂರುಲೋಕಗಳಿಗೆಲ್ಲ ತಿಲಕದಂತೆ ಶ್ರೇಷ್ಠನಾಗರಿವ ಅಳಿಯನನ್ನು ನಾನೇ ಪಡೆದಿದ್ದೇನೆ - ಎಂದು ಅತ್ಯಂತವಾಗಿ ಸಂತೋಷಪಟ್ಟನು. ಕುಮಾರನನ್ನು ಕರೆದುಕೊಂಡು ಹೋಗಿ ತನ್ನ ಪಟ್ಟಣವನ್ನು ಪ್ರವೇಶಿಸಿ ತನ್ನ ಎಂಟು ಮಂದಿ ಕನ್ಯೆಯರನ್ನೂ ಕುಮಾರನಿಗೆ ಧಾರೆಯೆರೆದು ಕೊಟ್ಟನು. ಕುಮಾರನು ಆ ದಿವ್ಯ ಸ್ತ್ರೀಯರೊಂದಿಗೆ ಸುಖದಿಂದ ಕೂಡಿದನು.

ಸುಖದಿಂದೊಂದಿದನಾಗಳೊಂದು ವನದೇವತೆ ಬಂದು ಸುನಂದೆಯೆಂಬ ಕನ್ನೆಯ ದುಃಖಮಂ ಕಾಣಲಾರದೆ ಕರುಣಿಸಿ ಕುಮಾರನನೆತ್ತಿಕೊಂಡು ಪೋಗಿ ಹರಿಕೂಟಮೆಂಬ ಪರ್ವತದ ಜ್ಯೋತಿರ್ವನದೊಳ್ ದಿವ್ಯಶಯ್ಯಾತಳಮಂ ವಿಗುರ್ವಿಸಿಯದಱ ಮೇಗೆ ಕುಮಾರನನಿಟ್ಟು ಪೋದೊಡಾತನುಂ ಪ್ರಭಾತಸಮಯದೊಳೆಚ್ಚತ್ತು ದೆಸೆಗಳಂ ನೋಟಿಪ್ಪಿನಾ ವನಮುಮಂ ತನ್ನಿರ್ದ ಲತಾಮಂಟಪಮುಮಂ ನೋಡಿ ಎನಗಿದು ಮಹಾವಿಸ್ಮಯಂ ರಾತ್ರಿಯೊಳ್ ವಿವಾಹಕಲ್ಯಾಣಮೆನಗೆ ಸ್ವಪ್ನದೊಳಾದುದೊ ನಿರುತಮೊ ಎಂದು ಸಂದೇಹಚಿತ್ತನಾಗಿ ತನ್ನ ಕೈಯೊಳ್ ಕಟ್ಟಿದ ಕಂಕಣಮಂ ನೋಡಿ ಕಂಡು ಕುಮಾರನಿಂತೆಂದು ಬಗೆದಂ

ಶ್ಲೋಕ ॥ ಭವಿತವ್ಯಂ ಭವತ್ಯೇವ ಕರ್ಮಣಾಮೇಷ ನಿಶ್ಚಯಃ
ವಿಪತ್ತೌ ಕಿಂ ವಿಷಾದೇನ ಸಂಪತ್ತೌ ವಿಸ್ಮಯೇನ ಕಿಂ ॥

ಎಂದಿಂತು ವಸ್ತುಸ್ವರೂಪಮಂ ಕುಮಾರಂ ಬಗೆಯುತ್ತಿರ್ಪಿನೆಗಂ ದೂರಾಂತರದೊಳ್ ಸಂಛನ್ನಮಾಗುತ್ತಿರ್ದ್ದ ವನದೊಳಿರ್ದ ಕನ್ನೆಯಿಂತೆಂದು ಪುಯ್ಯಲಿಟ್ಟಳ್‌ಸಾಕೇತಪುರಾಧಿಪತಿಯುಪ್ಪ ಸುರಥನೆಂಬರಸಂಗಂ ಚಂದ್ರಯಶಿಯೆಂಬ ಮಹಾದೇವಿಗಂ ಪುಟ್ಟಿದೆನ್ ಸನತ್ಕುಮಾರನ ಭಾರ್ಯೆಯೆನ್ ಸುನಂದೆಯೆನೆಂಬೆನೆನ್ನನನ್ಯಾಯದಿಂ ವಜ್ರವೇಗನೆಂಬ ವಿದ್ಯಾಧರಂ ತಂದು ಕಿನ್ನರ ಕಿಂಪುರುಷ ಗರುಡಗಂಧರ್ವ ಯಕ್ಷರಾಕ್ಷಸಾದಿ ದೇವರ್ಕಳಿರಾ ವಿದ್ಯಾಧರರ್ಕ್ಕಳಿರಾ ಶರಣಾಗಿಮಾರಪ್ಪೊದಮೆನ್ನಂ

ಆಗ ಒಂದು ವನದೇವತೆ ಬಂದು ಸುನಂದೆ ಎಂಬ ಒರ್ವ ಕನ್ಯೆಯ ವ್ಯಸನವನ್ನು ನೋಡಲಾರದೆ, ಆಕೆಯ ಮೇಲಿನ ಕರುಣೆಯಿಂದ ಕುಮಾರನನ್ನು ಎತ್ತಿಕೊಂಡು ಹೋಯಿತು. ಹರಿಕೂಟವೆಂಬ ಪರ್ವತದ ಜ್ಯೋತಿರ್ವನದಲ್ಲಿ ದಿವ್ಯವಾದ ಹಾಸಿಗೆಯನ್ನು ಮಾಯೆಯಿಂದ ಸೃಷ್ಟಿಸಿ, ಅದರ ಮೇಲೆ ಸನತ್ಕುಮಾರನನ್ನು ಇಟ್ಟು ತೆರಳಿತು. ಕುಮಾರನು ಪ್ರಾತಃಕಾಲದಲ್ಲಿ ಎಚ್ಚರಗೊಂಡು ದಿಕ್ಕುಗಳನ್ನು ನೋಡುತ್ತಿದ್ದನು. ಆ ಕಾಡನ್ನೂ ತಾನು ಇದ್ದ ಬಳ್ಳಿ ಮಂಟಪವನ್ನೂ ನೋಡಿ, "ನನಗೆ ಇದು ಬಹಳ ಆಶ್ಚರ್ಯ. ನನಗೆ ರಾತ್ರಿಯಲ್ಲಿ ಆದ ಮದುವೆ ಕನಸಿನಲ್ಲಿ ಆಯಿತೊ ! ಅಥವಾ ನಿಜವಾಗಿ ಆಯಿತೋ ?" ಎಂದು ಮನಸ್ಸಿನಲ್ಲಿ ಸಂಶಯಪಟ್ಟನು. ತನ್ನ ಕೈಯಲ್ಲಿ ಕಟ್ಟಿದ ಕಂಕಣವನ್ನು ನೋಡಿ, ಕುಮಾರನು ಹೀಗೆ ಭಾವಿಸಿದನು. (ಆಗಬೇಕಾದ್ದು ಆಗಿಯೇ ಆಗುತ್ತದೆ. ಕರ್ಮಗಳ ವಿಷಯದಲ್ಲಿ ಇದು ನಿಶ್ಚಯ. ವಿಪತ್ತು ಬಂದಾಗ ದುಃಖಿಸಿ ಪ್ರಯೋಜನವೇನು ? ಸಂಪತ್ತು ಬಂದಾಗ ಆಶ್ಚರ್ಯಪಡುವುದರಿಂದ ಉಪಯೋಗವೇನು ?) ಈ ರೀತಿಯಾಗಿ ಕುಮಾರನು ನಿಜಸಂಗತಿಯನ್ನು ಯೋಚಿಸುತ್ತ ಇರುತ್ತಿರಲು, ದೂರವಾದ ಪ್ರದೇಶದಲ್ಲಿ ದಟ್ಟವಾಗುತ್ತಿದ್ದ ಕಾಡಿನಲ್ಲಿ ಕನ್ಯೆ ಈ ರೀತಿಯಾಗಿ ಮೊರೆಯಿಟ್ಟಳು - "ಸಾಕೇತ ಪಟ್ಟಣದ ಒಡೆಯನಾದ ಸುರಥನೆಂಬ ರಾಜನಿಗೂ ಚಂದ್ರಯಶಿಯೆಂಬ ರಾಣಿಗೂ ನಾನು ಮಗಳಾಗಿ ಜನಿಸಿದೆನು. ನಾನು ಸನತ್ಕುಮಾರನ ಹೆಂಡತಿಯಾಗಿರುವೆನು. ಸುನಂದೆ ಎಂಬವಳಾಗಿರುವೆನು. ವಜ್ರವೇಗನೆಂಬ ವಿದ್ಯಾಧರನು ಅನ್ಯಾಯದಿಂದ ನನ್ನನ್ನು ತಂದಿದ್ದಾನೆ. ಕಿನ್ನರ ಕಿಂಪುರುಷ ಗರುಡ ಗಂಧರ್ವ ಯಕ್ಷರಾಕ್ಷಸರೇ, ದೇವತೆಗಳೇ, ವಿದ್ಯಾಧರರೇ, ನನಗೆ ಆಶ್ರಯವನ್ನು ಕೊಡಿ. ಯಾರಾದರೂ ನನ್ನನ್ನು ರಕ್ಷಿಸಿರಿ". ಹೀಗೆನ್ನತಕ್ಕ ಆರ್ತಧ್ವನಿಯನ್ನು ಕೇಳಿ ಕುಮಾರನು

ರಕ್ಷಿಸಿಮೆಂಬ ಕಾರುಣ್ಯಸ್ವರಮಂ ಕೇಳ್ದಾಶ್ಚರ್ಯಮನದೊನಾಗಿ ದೆಸೆಯಂ ನೋಡಿ ಸಲ್ಪಂ ಸ್ಫಟಿಕಮಯಮಪ್ಪ ಶಿಲಾಗೃಹದ ಕೆಲಗಿರ್ದ್ದ ಯಕ್ಷಕನ್ನೆಯಂ ಕಂಡು ನೀನಾರ್ಗ್ಗೇನೆಂಬೆಯಾ ಸನತ್ಕುಮಾರನೆಂಬೊನಾರ್ಗ್ಗೆಂದು ಕುಮಾರಂ ಬೆಸಗೊಂಡೊಡಾಕೆಯಿಂತೆಂದು ಪೇೞ್ದಳ್ ಅಯೋಧ್ಯಾಪುರಮನಾಳ್ವಂ ಸುರಥನೆಂಬೊನರಸನಾತನ ಮಹಾದೇವಿ ಚಂದ್ರಯಶೆಯೆಂಬೊಳಾಯಿರ್ವರ್ಗ್ಗಂ ಪುಟ್ಟಿದೆಂ ಸುನಂದೆಯೆಂಬೆಂ ಸನತ್ಕುಮಾರಂಗ ಗರ್ಭದೊಳಿರ್ದಂತೆ ನಿವೇದಿಸಿಪಟ್ಟೆನೆನ್ನಂ ಮದನೋದ್ಯಾನದೊಳುಯ್ಯಲಾಡುತ್ತಿರ್ದೊಳಂ ಭೌಮವಿಹಾರಾರ್ಥಂ ಬಂದು ವಜ್ರವೇಗನೆಂಬ ವಿದ್ಯಾಧರಂ ಕಂಡೆನ್ನನೆತ್ತಿಕೊಂಡು ಪುಯ್ಯಲಿಡೆಯಿಡೆ ಬಂದನಿಂದಿಂಗೇಱು ದಿವಸಮುಂಟು ಮತ್ತಾ ಸನತ್ಕುಮಾರನೆಂಬೊಂ ಹಸ್ತಿನಾಪುರವನಾಳ್ವಂ ವಿಶ್ವಸೇನ ಮಹಾರಾಜನೆಂಬೊನರಸನಾತನ ಮಹಾದೇವಿ ಸಹದೇವಿಯೆಂಬೊಳಾಯಿವ್ವರ್ಗ್ಗಂ ಪುಟ್ಟಿದಂ ಸನತ್ಕುಮಾರನೆಂಬೊನೆಂದು ಪೇೞ್ದೊಡೆ ಕುಮಾರನೆಂದನಾತನಂ ಕಂಡೊಡೇನಜೆವ್ಪೋ ಎಂದು ಬೆಸಗೊಂಡೊಡೆ ಸುನೆಂದೆಯಿಂತೆಂದಳ್ ಎನ್ನ ತಂದೆ ವಿಶ್ವಸೇನಮಹಾರಾಜನೊಳಪ್ಪ ಮಿತ್ರಸಂಬಂಧದಿನೊಂದು ದಿವಸಂ ಹಸ್ತಿನಾಪುರಕ್ಕೆ ಪೋಗಿ ಕುಮಾರನಂ ಕಂಡಾತನ ರೂಪಂ ಪಟದೊಳ್ ಬರೆದು ತಂದಾ ರೂಪನೆಲ್ಲಾ ಪೊೞ್ತುಂ ನೋಟ್ಟಿನುಂ ಬರೆದೆನುಂ ಭಾವಿಸುತ್ತಿರ್ಪೆ ನಪ್ಪುದಜೆಂದಜೆವೆನಾ ರೂಪುಂ ನಿಮ್ಮನೆ ಪೋಲ್ಕುಮೆನೆಯಂತಪ್ಪೊಡಾಂ ಸನತ್ಕುಮಾರನೆನಪೆನೆಂದಾಗಳ್ ಹರ್ಷರೋಮಾಂಚಕಂಚುಕಿತೆ ವಿಕಸಿತವದನೆಯಾಗಿಯಜಪ ಬಳ

ಮನಸ್ಸಿನಲ್ಲಿ ಆಶ್ಚರ್ಯವನ್ನು ತಾಳಿದನು. ದಿಕ್ಕುಗಳನ್ನು ನೋಡುತ್ತ ಇದ್ದನು. ಬಿಳಿಕಲ್ಲಿನಿಂದ ಕೂಡಿದ ಕಲ್ಲ ಮನೆಯ ಕೆಳಗೆ ಇದ್ದ ಯಕ್ಷ ಕನ್ಯೆಯನ್ನು ಕಂಡು "ನೀನು ಯಾರು ? ಏನು ಹೇಳುತ್ತಿರುವೆ ? ಆ ಸನತ್ಕುಮಾರನೆಂಬುವನು ಯಾರು ?" ಎಂದು ಕುಮಾರನು ಕೇಳಲು ಆಕೆ ಹೀಗೆ ನುಡಿದಳು - "ಅಯೋಧ್ಯಾಪಟ್ಟಣವನ್ನು ಆಳತಕ್ಕ ರಾಜನು ಸುರಥನೆಂಬುವನು. ಅವನ ರಾಣಿ ಚಂದ್ರಯಶಿಯೆಂಬುವಳು. ಆ ಇಬ್ಬರಿಗೆ ಹುಟ್ಟಿದ ಸುನಂದೆ ನಾನು. ನಾನು ಗರ್ಭದಲ್ಲಿದ್ದಾಗಲೇ ಸನತ್ಕುಮಾರನಿಗೆ ಅರ್ಪಿತಳಾಗಿದ್ದೇನೆ. ನಾನು ಮದನೋದ್ಯಾನದಲ್ಲಿ ಉಯ್ಯಾಲೆಯಾಡುತ್ತಿದ್ದಾಗ ವಜ್ರವೇಗನೆಂಬ ವಿದ್ಯಾಧರನು ಭೂಮಿಯಲ್ಲಿ ಸಂಚಾರ ಮಾಡುವುದಕ್ಕಾಗಿ ಬಂದು ನನ್ನನ್ನು ಕಂಡು ಎತ್ತಿಕೊಂಡನು. ನಾನು ಹುಯ್ಯಲಿಟ್ಟರೂ ಕೂಡ ಕೇಳದೆ ತೆಗೆದುಕೊಂಡು ಬಂದನು. ಇಂದಿಗೆ ಏಳು ದಿವಸಗಳಾಗಿವೆ. ಇನ್ನು ಆ ಸನತ್ಕುಮಾರನೆಂಬವನಾದರೋ, ಹಸ್ತಿನಾಪುರವನ್ನು ಆಳತಕ್ಕ ಮಹಾರಾಜ ವಿಶ್ವಸೇನನೆಂಬವನಿದ್ದನು. ಅವನ ಮಹಾರಾಣಿ ಸಹದೇವಿಯೆಂಬುವಳು. ಆ ಇಬ್ಬರಿಗೆ ಜನಿಸಿದವನು ಸನತ್ಕುಮಾರನೆಂಬವನು" ಎಂದು ಹೇಳಿದಳು. ಆಗ ಕುಮಾರನು "ಅವನನ್ನು ಕಂಡರೆ ನಿನಗೆ ಗೊತ್ತಾಗುವುದೇ ?" ಎಂದು ಕೇಳಲು ಸುನಂದೆ ಹೀಗೆಂದಳು - "ನನ್ನ ತಂದೆಯಾದ ಸುರಥನು ವಿಶ್ವಸೇನ ಮಹಾರಾಜನಲ್ಲಿದ್ದ ಸ್ನೇಹಸಂಬಂಧದಿಂದ ಒಂದು ದಿವಸ ಹಸ್ತಿನಾಪುರಕ್ಕೆ ಹೋಗಿ ಕುಮಾರನನ್ನು ಕಂಡು ಅವನ ರೂಪವನ್ನು ಪಟದಲ್ಲಿ (ಬಟ್ಟೆಯಲ್ಲಿ) ಬರೆದು ತಂದನು. ಆ ರೂಪವನ್ನು ನಾನು ಎಲ್ಲ ಹೊತ್ತಿನಲ್ಲಿಯೂ ನೋಡುತ್ತಿರುವೆನು, ಬರೆಯುತ್ತಿರುವೆನು, ಭಾವಿಸುತ್ತಿರುವೆನು - ಆದುದರಿಂದ ಬಲ್ಲೆನು. ಆ ರೂಪವು ನಿಮ್ಮನ್ನೇ ಹೋಲುತ್ತಿದೆ". ಸುನಂದೆ ಹೀಗೆ ಕೇಳಿದಾಗ ಕುಮಾರನು "ಹಾಗಾದರೆ ನಾನು ಸನತ್ಕುಮಾರನೇ ಆಗಿರುವೆನು" ಎಂದನು. ಸುನಂದೆ ಆಗ ಸಂತೋಷದ ರೋಮಾಂಚವೆಂಬ ರವಿಕೆಯುಳ್ಳವಳೂ ಅರಳಿದ ಮುಖವುಳ್ಳವಳೂ ಆಗಿ "ಹುಡುಕುವ

ಕಾಲ್ತೊದರ್ದತ್ತೆಂಬಂತೆಪೊಲಾಯ್ತನ್ನ ಭಾಗ್ಯದಿಂದಂ ಸ್ವಾಮಿ ನೀಮಿಲ್ಲಿಗೆ ಬಂದಿರಾ ವಜ್ರವೇಗಂ ತನ್ನ ತಂಗೆಯನೆನಗೆ ಕಾವಟ್ಟು ತನ್ನ ಪೊಬಲ್ಗೆ ನಿದ್ರೆಗೆಯ್ಯೆ ಪೋದನಾಕೆಯು ಜಳಕ್ರೀಡೆಗೆ ಪೋದಳವಳ್ ಬಾರದನ್ನೆಗಂ ಬೇಗಂ ಪೋಪಮೆನೆ ಕುಮಾರನಿಂತೆಂದನಂಜದಿರ್ ನಿನ್ನ ತಂದೊನನಮೋಘಂ ಮೃತ್ಯುಮುಖಕ್ಕುಯ್ದೊಡಲ್ಲದೆ ಪೋಗೆನೆನೆ ಭಯದಿಂದಂ ನಡುಗಿ ಇಂತೆಂದಳಾತನಾಕಾಶಗಾಮಿ ನೀಮೆಂತು ಕೊಲ್ವಿರೆನೆ ಕುಮಾರಂ ನಕ್ಕಿಂತೆಂದಂ ಆಕಾಶಗಾಮಿಯಪ್ಪ ಕಾಗೆಯನೇಂ ಕೊಲ್ವುದರಿದೆ ಎಂದು ನುಡಿಯುತ್ತಿರ್ಪನ್ನೆಗಂ ವಜ್ರವೇಗನ ಬರವಂ ಕಂದಾ ಕನ್ನೆಯಂಜಿ ಪ್ರಾಸಾದದೊಳಗೆ ಪೋಗಿ ಪೊಕ್ಕಿರ್ದಳ್ ಖೇಚರನುಂ ಕುಮಾರನಂ ಕಂಡು ಪುರುದಿಂ ಮುಳಿಸು ಪೆಚ್ಚಯೆನ್ನ ಪೆಂಡತಿಯೊಡನೆ ನುಡಿಯುತ್ತಿರ್ದ್ದೊನನಮೋಘಂ ಕೊಲ್ಲೆನೆಂದು ಕಟ್ಟು ಬಾಳ್ದೆರಸು ಬಂದೆಱಗಿ ಇಱದಾತನೇಱಂ ಬಂಚಿಸಿ ಸಿಂಹಲಂಘನದಿಂ ಮೇಗೆ ನೆಗೆದು ವಜ್ರಸಮಾನಮಪ್ಪ ಕೈಯಿಂದಂ ಕುಮಾರನಾತನ ತೆಗಲೆಯಂ ತಿವಿದೊಡಾತನಲ್ಲಿ ತನ್ನ ವಿದ್ಯಾಧರಕರಣಮಂ ತೋರ್ಪಂಬೊಲೆ ಮೇಗುಚ್ಚಳಿಸಿ ಬಿಬ್ಬಾಗದೆ ಮಡಿದಂ ಕುಮಾರನಿಂತೆಂದು ಬಗೆದನೊರ್ವಳೆ ಇರ್ದ ಸ್ತ್ರೀಯ ಪಕ್ಕದೆ ಸತ್ಪುರುಷಂಗಿರಲ್ ತಕ್ಕುದಲ್ಲೆಂದು ಮುನ್ನೆ ತನ್ನಿರ್ದ ಲತಾಮಂಟಪದೊಳ್ ಪೋಗಿರ್ದನನ್ನೆಗಮಿತ್ತ ವಜ್ರವೇಗನ ತಂಗೆ ಸಂಧ್ಯಾವಳಿಯೆಂಬೊಳ್ ಮಾನಸಸರೋವರದೊಳ್ ಜಲಕ್ರೀದೆಯಾಡಿ ಬರ್ಪೊಳನ್ನೆಗಂ ತಮ್ಮನ್ದಂ ಸತ್ತುದಂ ಕಂದು

ಬಳ್ಳಿ ಕಾಲಿಗೆ ತೊಡರಿತು (ಸಿಕ್ಕಿಕೊಂಡಿತು) ಎಂಬ ಹಾಗೆ ಆಯಿತು. ಸ್ವಾಮೀ, ನೀವು ನನ್ನ ಪುಣ್ಯದಿಂದ ಇಲ್ಲಿಗೆ ಬಂದಿದ್ದೀರಿ. ಆ ವಜ್ರವೇಗನು ತನ್ನ ತಂಗಿಯನ್ನು ನನಗೆ ಕಾವಲಿಟ್ಟು, ನಿದ್ದೆ ಮಾಡಲು ತನ್ನ ಪಟ್ಟಣಕ್ಕೆ ಹೋಗಿದ್ದಾನೆ. ಆಕೆ ಜಲಕ್ರೀಡೆಗೆ ಹೋಗಿದ್ದಾಳೆ. ಅವಳು ಬರುವುದರೊಳಗಾಗಿ ಬೇಗನೆ ಹೋಗೋಣ" ಎಂದು ಹೇಳಿದಳು. ಆಗ ಕುಮಾರನು - "ಹೆದರಬೇಡ. ನಿನ್ನನ್ನು ತಂದವನನ್ನು ನಿಶ್ಚಯವಾಗಿಯೂ ಮೃತ್ಯುವಿನ ಬಾಯಿಗೆ ಒಯ್ಯದೆ ನಾನು ಹೋಗುವವನಲ್ಲ" ಎಂದನು. ಸುನಂದೆ ಆಗ ಹೆದರಿಕೆಯಿಂದ ನಡುಗಿ "ಅತನು ಆಕಾಶದಲ್ಲಿ ಹೋಗಬಲ್ಲವನು, ಅವನನ್ನು ನೀವು ಹೇಗೆ ಕೊಲ್ಲುವಿರಿ" ಎಂದು ಕೇಳಿದಳು. ಕುಮಾರನು ನಕ್ಕು ಇಂತೆಂದನು - "ಆಕಾಶದಲ್ಲಿ ಹೋಗುವ ಕಾಗೆಯನ್ನು ಕೊಲ್ಲುವುದು ಅಸಾಧ್ಯವೇ?" ಹೀಗೆ ಮಾತಾಡುತ್ತಿರುವಾಗ ವಜ್ರವೇಗನು ಬರುವುದನ್ನು ಆ ಕನ್ಯೆ ಕಂಡು ಹೆದರಿ ಮಹಾಭವನದೊಳಗೆ ಹೋಗಿ ಹೊಕ್ಕು ಇದ್ದಳು. ವಜ್ರವೇಗನು ಕುಮಾರನನ್ನು ಕಂಡು ಹೊಟ್ಟೆಕಿಚ್ಚಿನಿಂದ ಕೋಪ ಹೆಚ್ಚಾಗಿ "ನನ್ನ ಹೆಂಡತಿಯೊಡನೆ ಮಾತಾಡುತ್ತಿದ್ದವನನ್ನು ನಿಶ್ಚಯವಾಗಿ ಕೊಲ್ಲುವೆನು" ಎಂದು ಹಿರಿದ ಏಪ್ಪಮೊಂದಿಗೆ ಬಂದು ಮೇಲೆ ಬಿದ್ದು ಹೊಡೆದನು. ಹಾಗೆ ಹೊಡೆದವನ ಏಟನ್ನು ತಪ್ಪಿಸಿಕೊಂಡು ಕುಮಾರನು ಸಿಂಹವು ಹಾರುವಂತೆ ಮೇಲಕ್ಕೆ ಹಾರಿ ವಜ್ರಾಯುಧಕ್ಕೆ ಸಮಾನವಾದ ತನ್ನ ಕೈಯಿಂದ ಅವನ ಎದೆಯನ್ನು ತಿವಿದನು. ಆಗ ವಜ್ರವೇಗನು ತನ್ನ ವಿದ್ಯಾಧರಕಾರ್ಯವನ್ನು ತೋರಿಸುತ್ತಾನೋ ಎಂಬಂತೆ ಮೇಲಕ್ಕೆ ನೆಗೆದು ಬಿದ್ದು ಆ ಕ್ಷಣವೇ ಸತ್ತುಹೋದನು. ಕುಮಾರನು "ಏಕಾಂಗಿಯಾಗಿ ಇದ್ದ ಹೆಂಗುಸಿನ ಬಳಿಯಲ್ಲಿ ಸತ್ಪುರುಷನು ಇರುವುದು ಯೋಗ್ಯವಲ್ಲ" ಎಂದು ಈ ರೀತಿಯಾಗಿ ಯೋಚಿಸಿ, ತಾನು ಮೊದಲು ಇದ್ದ ಬಳ್ಳಿಮಂಟಪಕ್ಕೆ ಹೋಗಿ ಅಲ್ಲಿದ್ದನು. ಅಷ್ಟರಲ್ಲಿ ಇತ್ತ ವಜ್ರವೇಗನ ತಂಗಿಯಾದ ಸಂಧ್ಯಾವಳಿಯೆಂಬುವಳು ಮಾನಸಸರೋವರಕ್ಕೆ ಜಲಕ್ರೀಡೆಯಾಡುವುದಕ್ಕಾಗಿ ಹೋಗಿದ್ದಳು. ಜಲಕ್ರೀಡೆ ಮುಗಿಸಿ

ಮೂರ್ಛಾಗತೆಯಾಗಿ ಬಿಟ್ಟು ನೀಡಟೆಂದೆಬ್ಬಿತ್ತು ಕ್ರೋಧಾಗ್ನಿ ಪೆರ್ಚ ಎಮ್ಮಣ್ಣನಂ ಕೊಂದ ದುರಾತ್ಮನಂ ಪಾತಾಳಮಂ ಪೊಕ್ಕರ್ದನಪ್ಪೊದಮಱಿಸಿ ಕೊಲ್ವೆನಮೋಘಮೆಂದು ಭಯಂಕರರೂಪಂ ಕೈಕೊಂಡು ದೆಸೆಗಳಂ ನೋಟ್ಪೊಳನ್ನೆಗಮಾರುಮಂ ಕಾಣದೆ ಸುನಂದೆಯಂ ಬೆಸಗೊಂಡೊಡಾಕೆಯಿಂತೆಂದಳ್ ದುಷ್ಟನಿಗ್ರಹ ಶಿಷ್ಟಪ್ರತಿಪಾಲನಸ್ವರೂಪದಿಂ ಪೃಥ್ವಿಯಂ ರಕ್ಷಿಸುವ ಸ್ವಾಮಿ ಚೋರ ಜಾರ ಪಾದರಿಗರ್ಕಳಂ ಕೊಲ್ಲದಿರ್ಕುಮೆ ಎಂದೊಡಾತನಾವೊನೆಲ್ಲಿದೊಂ ತೋಱೆಂದು ಬೆಸಗೊಂಡೊಡೆ ಸುನಂದೆಯುಂ ಪೋಗಿ ಕುಮಾರನಂ ತೋಱೆದೊಡಾಕೆಯುಮಸಿಬೇಟಕಹಸ್ತೆಯಾಗಿ ವಿಭೀಷಣಮಪ್ಪ ರೂಪುಮಂ ವಿಗುರ್ವಿಸಿ ಕೊಲ್ಟೆನೆಂದು ಸಾರ್ದಾಗಳ್ ಕುಮಾರಂ ಸೌಷ್ಠವದೊಳಿರ್ದ್ದೊನಂ ನೋಡಿ ಕ್ರೋಧಂಗೆಟ್ಟು ಸ್ನೇಹಂ ಪೆರ್ಚ ಕಾಮಶರಂಗಳಿಂ ಸ್ಮರವಶಹೃದಯೆಯಾಗಿ ಇಂತೆಂದು ತನ್ನೊಳ್ ಬಗೆದೊಳಿಮ್ಮಣ್ಣಂ ತನ್ನದೋಷದಿಂ ಸತ್ತೊನೀತಂಗೇನುಂ ದೋಷಮಿಲ್ಲೆಂದು ವಿಕಾರಮಪ್ಪ ರೂಪಮನುಪಸಂಹರಿಸಿ ತನ್ನ ಮುನ್ನಿನ ಸ್ವಾಭಾವಿಕಮಪ್ಪ ರೂಪಂ ಕೈಕೊಂಡು ತಮ್ಮಣ್ಣನಂ ಸಂಸ್ಕರಿಸಿ ನೀರಿಟೆದು ತದ್ದಿರಹಾನಳನಿಂ ಬೆಂದು ಕರಗಿ ಕೊರಗಿ ಬಸಮಟೆದಿರ್ದ್ದ ಮೆಯ್ಯನೊಡೆಯೊಳ್ ಬಂದು ಸುನಂದೆಗಿಂತೆಂದಳ್ ನಿನ್ನಪ್ರಸಾದದಿಂ ಬಾೞ್ದೆಂ ನೀನೆನಗೆ ಸೋದರಮುಂ ಕಲ್ಯಾಣಮಿತ್ರೆಯುಮಾದಯ್ ಅದಱಿಂ ನೀನೀ ಕುಮಾರಂಗೆ ಪೋಗಿ ಇಂತೆಂದು ಪೇೞು ವಿಜಯಾರ್ಧಪರ್ವತದೊಳಗ್ಗವಂದಿರ

ಬರುತ್ತ, ತನ್ನ ಅಣ್ಣನು ಸತ್ತುದನ್ನು ಕಂಡು ಮೂರ್ಛೆ ಹೋಗಿ ಬಿದ್ದಳು. ಬಹಳ ಹೊತ್ತಿನ ನಂತರ ಎಚ್ಚತ್ತಳು. ಸಿಟ್ಟಿನ ಬೆಂಕಿ ಹೆಚ್ಚಾಗಿ - "ನನ್ನ ಅಣ್ಣನನ್ನು ಕೊಂದ ದುಷ್ಟನನ್ನು, ಆತನು ಪಾತಾಳವನ್ನು ಹೊಕ್ಕಿದವನಾದರೂ ವ್ಯರ್ಥವಾಗದಂತೆ ಹುಡುಕಿ ಕೊಂದುಬಿಡುವೆನು" ಎಂದು ಭೀಕರವಾದ ರೂಪವನ್ನು ತಾಳಿದಳು. ದಿಕ್ಕುಗಳ ಕಡೆಗೆ ನೋಡಿದಳು. ಆ ಸಂದರ್ಭದಲ್ಲಿ ಯಾರನ್ನೂ ಕಾಣದೆ ಸುನಂದೆಯನ್ನು ಕೇಳಿದಾಗ ಅವಳು ಹೀಗೆಂದಳು - "ಕೆಟ್ಟವರನ್ನು ನಾಶಮಾಡುವ ಮತ್ತು ಸತ್ಪುರುಷರನ್ನು ರಕ್ಷಣೆ ಮಾಡುವ ಸ್ವರೂಪದಿಂದ ಲೋಕವನ್ನು ಕಾಪಾಡತಕ್ಕ ಪ್ರಭುವು ಕಳ್ಳರನ್ನೂ ಜಾರರನ್ನೂ ಹಾದರಿಗರನ್ನೂ ಕೊಲ್ಲದಿರುವನೆ ?" ಎಂದು ಹೇಳಿದಾಗ "ಆತನು ಯಾವನು ? ಎಲ್ಲಿದ್ದಾನೆ? ತೋರಿಸು" ಎಂದು ಕೇಳಿದಳು. ಸುನಂದೆ ಹೋಗಿ ಸನತ್ಕುಮಾರನನ್ನು ತೋರಿಸಿದಳು. ಆಗ ಸಂಧ್ಯಾವಳಿ ಕತ್ತಿ ಗುರಾಣಿಗಳನ್ನು ಹಿಡಿದುಕೊಂಡು ಮಾಯೆಯಿಂದ ಭಯಂಕರವಾದ ರೂಪವನ್ನು ತಾಳಿ "ಕೊಲ್ಲುತ್ತೇನೆ" ಎಂದು ಸಮೀಪಕ್ಕೆ ಬಂದಳು. ಸುಂದರವಾದ ರೂಪದಲ್ಲಿದ್ದ ಕುಮಾರನನ್ನು ನೋಡಿ, ಕೋಪವನ್ನು ಬಿಟ್ಟು ಪ್ರೀತಿ ಹೆಚ್ಚಾಗಿ ಕಾಮನ ಬಾಣಗಳಿಂದ ಮನ್ಮಥನಿಗೆ ಅಧೀನವಾದ ಮನಸ್ಸುಳ್ಳವಳಾಗಿ ತನ್ನಲ್ಲಿಯೇ ಹೀಗೆ ಯೋಚಿಸಿದಳು. "ನನ್ನ ಅಣ್ಣನು ತನ್ನ ದೋಷದಿಂದ ಸತ್ತನು. ಈತನಿಗೆ ಏನೂ ದೋಷವಿಲ್ಲ" ಎಂದುಕೊಂಡು ತನ್ನ ವಿಕಾರವಾದ ರೂಪವನ್ನು ಕೊನೆಗಾಣಿಸಿ, ಹಿಂದಿನ ನೈಜವಾದ ರೂಪವನ್ನು ತಾಳಿಕೊಂಡು ತನ್ನ ಅಣ್ಣನಿಗೆ ತಕ್ಕ ಶವಸಂಸ್ಕಾರವನ್ನು ಮಾಡಿ, ಸ್ನಾನಮಾಡಿ, ಕುಮಾರನ ವಿರಹದ ಬೆಂಕಿಯಿಂದ ಬೆಂದು ಕರಗಿ ಕೊರಗಿ ಶಕ್ತಿಕುಂದಿಹೋದ ಶರೀರವುಳ್ಳವಳಾಗಿ ಸುನಂದೆಯ ಬಳಿಗೆ ಬಂದು ಹೀಗೆಂದಳು - "ನಿನ್ನ ಅನುಗ್ರಹವಿದ್ದರೆ ಮಾತ್ರ ಬದುಕುವೆನು. ನೀನು ನನಗೆ ಸಹೋದರಿಯೂ ಮಂಗಳಕರಳಾದ ಗೆಳತಿಯೂ ಆಗಿರುವೆ. ಆದುದರಿಂದ ನೀನು ಈ ಕುಮಾರನಲ್ಲಿಗೆ ಹೋಗಿ ಹೀಗೆ ಹೇಳು - ವಿಜಯಾರ್ಧ ಪರ್ವತದಲ್ಲಿರುವ

ಪುರಾಧಿಪತಿಯಪ್ಪಶನಿವೇಗನೆಂಬ ವಿದ್ಯಾಧರಂಗಂ ವಿದ್ಯುತ್ಪ್ರಭೆಯೆಂಬ ಮಹಾದೇವಿಗಂ ಮಗಳ್ ಸಂಧ್ಯಾವಳಿಯೆಂಬೊಳ್ ನೀಮೆ ಶರಣೆಂದಿರ್ದೊಳಾಕೆಯಂ ನೀಮಮೋಘಂ ಕೈಕೊಳಲ್ವೇಬ್ಕುಮೆಂದಿಂತು ನುಡಿಯೆಂದು ಕಲ್ಪಿಸಿಯಟ್ಟದೊಡಾಕೆಯುಂ ಕುಮಾರಂಗೆ ತದ್ವೃತ್ತಾಂತಮೆಲ್ಲಮಂ ಪೇಳ್ದೊಡಾತನುಂ ಪಿತೃಮಾತೃಗಳೀಯದ ಸ್ತ್ರೀಯರಂ ಕೈಕೊಳ್ವುದೆನಗಯೋಗ್ಯಮೆಂದು ಮಱುಮಾತುಗೊಟ್ಟೊಡೆ ಸುನಂದೆಯೆಂಬೊಳ್ ಮಿತ್ರಸಂಬಂಧಿಗಳಪ್ಪ ಜನಂಗಳ್ ಮುಂತಿಟ್ಟು ಕುಡೆ ಕೊಳಲ್ ತಕ್ಕುದೆಂದು ನುಡಿದೊಡಂಬಡಿಸಿ ದಿವ್ಯದೇವತೆಗಳನೆ ಬಾಂಧವಜನಮಾಗೊಡೆಯಳಂ ಮಹಾವಿಭೂತಿಯಿಂದಂ ಪಾಣಿಗ್ರಹಣಪುರಸ್ಸರಂ ಸಂಧ್ಯಾವಳಿಯಂ ಕುಮಾರಂಗೆ ಕೊಟ್ಟಳ್ ಸಂಧ್ಯಾವಳಿಯಂ ಸುನಂದೆಯಂ ಕುಮಾರಂಗೆ ಕೊಟ್ಟಳಿಂತನ್ಯೋನ್ಯಸಂಬಂಧದಿಂ ಗಾಂಧರ್ವವಿವಾಹದಿಂ ಕಲ್ಯಾಣದೊಳ್ ಕೂಡಿ ಸುಖದಿಂದಿರ್ಪೊರ್ ಅನ್ನೆಗಮಿತ್ತಶನಿವೇಗಂ ತನ್ನ ಮಗಂ ಪಿರಿದು ಪೊಟ್ಟು ಪೋಗಿ ತಡೆದನೆಂದು ಮಗನವಸ್ಥೆಯನಱಿದು ಬಾಯೆಂದವಳೋಕಿನಿಯೆಂಬ ವಿದ್ಯೆಯನಾರಯ್ಯಲಟ್ಟದೊಡಾ ವಿದ್ಯೆಯುಂ ಪಾರಾವತರೂಪದಿಂದಾರ್ಕೈದು ಪೋಪುದಂ ಸಂಧ್ಯಾವಳಿಯಱಿದಿಂತೆಂದು ತನ್ನ ಭರ್ತಾರಂಗೆ ಪೇಟ್ಟುಂ ಸ್ವಾಮಿ ಎನ್ನ ತಂದೆ ವಿದ್ಯಾಧರನಾದಮಾನುಂ ವ್ರಚಂದಮಹಾಬಳಪರಾಕ್ರಮಂ ವಜ್ರವೇಗನ ಸಾವನಱಿದಮೋಘಂ ನಿಮ್ಮ ಮೇಲೆ ಬರ್ಕುಮದಱಿಂ ನೀಮೀ ಪ್ರಜ್ಞಪ್ತಿಯೆಂಬ ಮಹಾವಿದ್ಯೆಯಂ

ಅಗ್ರಮಂದಿರವೆಂಬ ಪಟ್ಟಣದ ಒಡೆಯನಾದ ಅಶನಿವೇಗನೆಂಬ ವಿದ್ಯಾಧರನಿಗೂ ವಿದ್ಯುತ್ಪ್ರಭೆಯೆಂಬ ಮಹಾರಾಣಿಗೂ ಮಗಳಾಗಿರುವ ಸಂಧ್ಯಾವಳಿ ಎಂಬವಳು ನೀವೇ ತನಗೆ ಆಶ್ರಯವೆಂದು ಇದ್ದಾಳೆ. ಅವಳನ್ನು ನೀವು ನಿಶ್ಚಯವಾಗಿಯೂ ಸ್ವೀಕರಿಸಬೇಕು - ಎಂದು ಈ ರೀತಿಯಾಗಿ ಹೇಳು" - ಹೀಗೆ ಹೇಳಿಕೊಟ್ಟು ಸುನಂದೆಯನ್ನು ಕಳುಹಿಸಿದಳು. ಸುನಂದೆ ಈ ಸಂಗತಿಯೆಲ್ಲವನ್ನೂ ಕುಮಾರನಿಗೆ ತಿಳಿಸಿದಳು. ಅದಕ್ಕೆ ಕುಮಾರನು - "ತಂದೆ ತಾಯಿಗಳು ಕೊಡದೆ ಇರತಕ್ಕ ಹೆಣ್ಣುಗಳನ್ನು ಸ್ವೀಕರಿಸುವುದು ನನಗೆ ಯೋಗ್ಯವಲ್ಲ" ಎಂದು ಪ್ರತ್ಯುತ್ತರ ಕೊಟ್ಟನು ಆಗ ಸುನಂದೆ ಕುಮಾರನೊಡನೆ "ಮಿತ್ರಸಂಬಂಧವುಳ್ಳ ಜನರು ಮುಂದೆ ಇದ್ದುಕೊಂಡು ಹೆಣ್ಣನ್ನು ಕೊಟ್ಟರೆ ಸ್ವೀಕರಿಸಲು ಯೋಗ್ಯವಾಗುತ್ತದೆ" ಎಂದು ಹೇಳಿ, ಅವನನ್ನು ಒಪ್ಪುವಂತೆ ಮಾಡಿದಳು. ದೇವಲೋಕದ ದೇವತೆಗಳೇ ಬಂಧು ಜನವಾಗಿರತಕ್ಕ ಸಂಧ್ಯಾವಳಿಯನ್ನು ಬಹಳ ವೈಭವದಿಂದ ಪಾಣಿಗ್ರಹಣ ಕ್ರಮಪೂರ್ವಕವಾಗಿ ಕುಮಾರನಿಗೆ ಮದುವೆಮಾಡಿಕೊಟ್ಟಳು. ಸಂಧ್ಯಾವಳಿ ಸುನಂದೆಯನ್ನು ಕುಮಾರನಿಗೆ ಮದುವೆಮಾಡಿಕೊಟ್ಟಳು. ಹೀಗೆ ಪರಸ್ಪರ ಸಂಬಂಧದಿಂದ ಗಾಂಧರ್ವವಿವಾಹ ಕ್ರಮದಿಂದ ಅವರು ಮಂಗಳದಲ್ಲಿ ಕೂಡಿ ಸುಖದಿಂದ ಇದ್ದರು. ಆ ವೇಳೆಗೆ ಇತ್ತ ಅಶನಿವೇಗನು ತನ್ನು ಮಗನು ಹೋಗಿ ಬಹಳ ಹೊತ್ತು ತಡೆದನೆಂದು ಮಗನ ಸ್ಥಿತಿಯೇನೆಂಬುದನ್ನು ವಿಚಾರಿಸಿ ತಿಳಿದುಬರುವಂತೆ ಅವಲೋಕಿನಿ ಎಂಬ ವಿದ್ಯೆಯನ್ನು ಕಳುಹಿಸಿದನು. ಆ ವಿದ್ಯೆ ಪಾರಿವಾಳರೂಪದಿಂದ ಬಂದು ವಿಚಾರಿಸಿ ಹೋಗುವುದನ್ನು ಸಂಧ್ಯಾವಳಿ ತಿಳಿದು ತನ್ನ ಗಂಡನಿಗೆ (ಸನತ್ಕುಮಾರನಿಗೆ) ಹೀಗೆಂದಳು -"ಸ್ವಾಮಿ, ನನ್ನ ತಂದೆ ಅಶನಿವೇಗ ವಿದ್ಯಾಧರನು ಅತ್ಯಂತ ಭಯಂಕರವಾದ ಮಹಾಶಕ್ತಿ ಸಾಮರ್ಥ್ಯವುಳ್ಳವನು. ಅವನು ವಜ್ರವೇಗನು ಸತ್ತುದನ್ನು ತಿಳಿದು ನಿಶ್ಚಯವಾಗಿಯೂ ನಿಮ್ಮಮೇಲೆ ದಂಡೆತ್ತಿ ಬರುವನು. ಆದುದರಿಂದ ನೀವು ಪ್ರಜ್ಞಪ್ತಿಯೆಂಬ ಈ ಮಹಾವಿದ್ಯೆಯನ್ನು ಸ್ವೀಕರಿಸಿಕೊಳ್ಳಿ" ಎಂದು

ಕೊಳ್ಳಿಮೆನೆ ಕುಮಾರಂ ನಕ್ಕು ಪ್ರಹಸಿತವದನನಾಗಿ ಏಚರರೆಂಬಿರಲೆಗಳಂ ನಿಪಾತಿಸಲ್ಕೆನಗೆ ವಿದ್ಯೆಯುಂ ಬೇಱುಮೆ ಎಂದೊಲ್ಲದಿರ್ದೊನ ಪಾದದ್ವಯಂಗಳ್ಗೆಱಗಿ ಪೊಡೆವಟ್ಟಮೋಘಂ ಕೊಳಲಿವೇಱುಮೆಂದು ಬಲಾತ್ಕಾರದಿಂ ವಿದ್ಯೆಯಂ ಕೊಟ್ಟೊಡಾ ಅವಸರದೊಳ್ ಮತ್ತಿತ್ತ ರಥನೂಪುರಚಕ್ರವಾಳಪುರಾಧಿಪತಿಯಪ್ಪ ಚಂದ್ರಯಶನೆಂಬ ವಿದ್ಯಾಧರಂಗಂ ವಿದ್ಯುದ್ವೇಗೆಯೆಂಬ ಮಹಾದೇವಿಗಮಂತಿರ್ವ್ವರ್ಗ್ಗಂ ಪುಟ್ಟಿದರ್ ಚಂದ್ರವೇಗನುಂ ಭಾನುವೇಗನುಮೆಂಬರ್ ವುಕ್ಕಳಾಗಿ ಇಂತಿಷ್ಟವಿಷಯುಕಾವು ಭೋಗಂಗಳನನುಭವಿಸುತ್ತಿರೆ ಮತ್ತೊಂದು ದಿವಸಂ ನೃಪತಿಗೆ ಸಂಸಾರ ವೈರಾಗ್ಯಮಾಗಿ ಚಂದ್ರವೇಗನೆಂಬ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ಕಿಱಿಯಾತನಪ್ಪ ಭಾನುವೇಗಂಗೆ ಯುವರಾಜಪಟ್ಟಮಂ ಕಟ್ಟಿ ಗುಣಧರರೆಂಬ ಚಾರಣರಿಸಿಯರ ಪಕ್ಕದೆ ಜೈನದೀಕ್ಷೆಯಂ ಕೈಕೊಂದು ಪಲಕಾಲಂ ತಪಂಗೆಯ್ದು ಸಮ್ಮೇದಪರ್ವತದೊಳ್ ಮೋಕ್ಷಕ್ಕೆ ವ್ಪೋದರ್ ಮತ್ತಾ ಚಂದ್ರವೇಗಂಗೆ ನೂರ್ವರ್ ಪೆಣ್ಗೂಸುಗಳಾದೊರವರ್ಗ್ಗಳತಿಶಯ ರೂಪು ಲಾವಣ್ಯಮನೊಡೆಯೊರವರನಾ ಅಶನಿವೇಗಂ ತನ್ನ ಮಗಂ ವಜ್ರವೇಗಂಗನವರತಂ ಪಾಗುಡಮಂ ಪೆರ್ಗ್ಗಡೆಗಳುಮನಟ್ಟುತ್ತಿರ್ಕ್ಕುಂ ಮತ್ತಂ ಪೆಱರುಂ ವಿದ್ಯಾಧರರ್ಕ್ಕಳನವರತಂ ಕೂಸುಗಳಂ ಬೇಡಿಯಟ್ಟುತ್ತಿರೆ ಅರ್ಗಂ ಕುದಲೊಲ್ಲದೆ ಮತ್ತೊಂದು ದಿವಸಂ ಮಕ್ಕಳನಾರ್ಗೆ ಕುಡುವಮೆಂದು ದೈವಜ್ಞನಂ ಬೆಸಗೊಂಡೊಡಾತನಿಂತೆಂದು ಪೇೞ್ದಂ

ಹೇಳಿದಳು. ಆಗ ಕುಮಾರನು ನಕ್ಕು, ನಗೆಯಿಂದ ಕೂಡಿದ ಮುಖವುಳ್ಳವನಾಗಿ "ವಿದ್ಯಾಧರರೆಂಬ ಹುಲ್ಲೆಮರಿಗಳನ್ನು ಬೀಳಿಸುವುದಕ್ಕೆ ನನಗೆ ವಿದ್ಯೆಯೂ ಬೇಕೆ?" ಎಂದು ನಿರಾಕರಿಸಿದನು. ಸಂಧ್ಯಾವಳಿ ಅವನ ಎರಡೂ ಪಾದಗಳಿಗೆ ಬಿದ್ದು ಸಾಷ್ಟಾಂಗ ವಂದಿಸಿ ನಿಶ್ಚಯವಾಗಿಯೂ ಸ್ವೀಕರಿಸಲೇಬೇಕು ಎಂದು ಒತ್ತಾಯದಿಂದ ವಿದ್ಯೆಯನ್ನು ಆ ಸಂದರ್ಭದಲ್ಲಿ ಕೊಟ್ಟಳು. ಅನಂತರ ಇತ್ತ ರಥನೂಪುರಚಕ್ರವಾಳ ಎಂಬ ಪಟ್ಟಣದ ಒಡೆಯನಾದ ಚಂದ್ರಯಶನೆಂಬ ವಿದ್ಯಾಧರನಿಗೂ ವಿದ್ಯುದ್ವೇಗೆ ಎಂಬ ಮಹಾರಾಣಿಗೂ ಅಂತೂ ಇಬ್ಬರಿಗೂ ಚಂದ್ರವೇಗ ಭಾನುವೇಗ ಎಂಬಿಬ್ಬರು ಮಕ್ಕಳಾಗಿ ಜನಿಸಿದರು. ಹೀಗೆ ಇಷ್ಟವಿಷಯದ ಕಾಮಸುಖಗಳನ್ನು ಅನುಭವಿಸುತ್ತ ಇರಲು, ಆಮೇಲೆ ಒಂದಾನೊಂದು ದಿವಸ ರಾಜನಿಗೆ ಸಂಸಾರದಲ್ಲಿ ವೈರಾಗ್ಯವುಂಟಾಗಿ ಹಿರಿಯ ಮಗನಾದ ಚಂದ್ರವೇಗನಿಗೆ ರಾಜ್ಯಪಟ್ಟವನ್ನು ಕಟ್ಟಿ ಕಿರಿಯ ಮಗನಾದ ಭಾನುವೇಗನಿಗೆ ಯುವರಾಜಪಟ್ಟವನ್ನು ಕಟ್ಟಿ ಗುಣಧರರೆಂಬ ಚಾರಣಋಷಿಗಳ ಬಳಿಯಲ್ಲಿ ಜೈನದೀಕ್ಷೆಯನ್ನು ಸ್ವೀಕರಿಸಿ, ಹಲವು ಕಾಲ ತಪಸ್ಸನ್ನು ಮಾಡಿ ಸಮ್ಮೇದಪರ್ವತದಲ್ಲಿ ಮೋಕ್ಷಕ್ಕೆ ತೆರಳಿದರು. ಆಮೇಲೆ ಚಂದ್ರವೇಗನಿಗೆ ನೂರು ಮಂದಿ ಹೆಣ್ಣುಮಕ್ಕಳಾದರು. ಅವರು ಹೆಚ್ಚಾದ ರೂಪ ಲಾವಣ್ಯವುಳ್ಳವರಾಗಿದ್ದರು. ಅವರನ್ನು ಅಶನಿವೇಗನು ತನ್ನ ಮಗನಾದ ವಜ್ರವೇಗನಿಗೆ ತರಬೇಕೆಂದು ಎಡೆಬಿಡದೆ ಕಾಣಿಕೆಯನ್ನೂ ಹೆಗ್ಗಡೆ (ಅರಮನೆಯ ಅಧಿಕಾರಿ)ಗಳನ್ನೂ ಕಳುಹಿಸುತ್ತಿದ್ದನು. ಅದಲ್ಲದೆ ಬೇರೆ ವಿದ್ಯಾಧರರೂ ಯಾವಾಗಲೂ ಆ ಕನ್ಯೆಯರನ್ನು ಕೇಳುವುದಕ್ಕೆ ಕಳುಹಿಸುತ್ತಲೇ ಇದ್ದರು. ಚಂದ್ರವೇಗನು ಅವರಲ್ಲಿ ಯಾರಿಗೂ ಕೊಡಲು ಒಪ್ಪದೆ ಅನಂತರ ಒಂದು ದಿವಸ ತನ್ನ ಹೆಣ್ಣುಮಕ್ಕಳನ್ನು ಯಾರಿಗೆ ಕೊಡೋಣ ಎಂದು ದೈವಜ್ಞನಾದ ಜೋಯಿಸನನ್ನು ಕೇಳಿದನು. ಆಗ ಅವನು ಹೀಗೆಂದನು -

ಮಾನಸಸರೋವರದೊಳ್ ಸಿತಯಕ್ಷನಂ ಯುದ್ಧದೊಳಾವೊಂ ಗೆಲ್ವೊಂ ಮತ್ತಶನಿವೇಗನ ಮಗಂ ವಜ್ರವೇಗನುಮಂ ಮುಷ್ಟಿಪ್ರಹಾರದಿಂ ಕೊಲ್ವೊನಾ ಅಶನಿವೇಗನುಮಂ ಸಂಗ್ರಾಮದೊಳ್ ನಿಪಾತಿಸುವನಾವನೊರ್ವ್ವನಾತಂಗೆ ನಿಮ್ಮ ಮಗಳಂ ಕುಡಿಮೆಂದು ದೇವಗುರುವೆಂಬ ನೈಮಿತ್ತಿಕಂ ಪೇಳ್ದಂ ಮತ್ತೆಯಾತನುಪದೇಶದಿಂ ತಱಿಸಂದ ಮನದೊನಾಗಿ ಸರ್ವಾಯುಧಸನ್ನದ್ಧರಾಗಿ ದಿವ್ಯರಥಂಬೆರಸು ಹರಿಶ್ಚಂದ್ರ, ಚಂದ್ರಸೇನರ್ಕಳೆಂಬ ಮಕ್ಕಳನಟ್ಟಿದೊಳವರ್ಗ್ಗಳುಂ ಬಂದು ಕುಮಾರಂಗೆಱಗಿ ಪೊಡೆವಟ್ಟಿಂತೆಂದರ್ ರಥನೂಪುರಚಕ್ರವಾಳ ಪುರೇಶ್ವರನಪ್ಪ ಚಂದ್ರವೇಗುಗಂ ಮಣಿದೇವಿಗಂ ಪುಟ್ಟಿದೆವು ಹರಿಶ್ಚಂದ್ರ ಚಂದ್ರಸೇನರ್ಕಳಿಮೆಮ್ಮಮ್ಮನ ಬಿಸದಿಂ ನಿಮ್ಮನೋಲಗಿಸಲ್ ಬಂದೆಮೆಂದು ಪೇಟ್ದು ಸುಖ ಸಂಕಥಾವಿನೋದದಿಂದಿರ್ಪ್ಪನ್ನೆಗಮವರ ಸಹೋದರರ್ಕಳಪ್ಪ ಚಂದ್ರವೇಗನುಂ ಭಾನುವೇಗನುಂ ತಮ್ಮುಳ್ಳ ಸಮಸ್ತ ಬಲಂ ಬೆರಸು ಕುಮಾರನಂ ಕೂಡಿದರ್ ಮತ್ತಿತ್ತಶನಿವೇಗಂ ತನ್ನ ಮಗನ ಕಟೆದ ವೃತ್ತಾಂತಮೆಲ್ಲಮನವಳೋಕಿನಿಯೆಂಬ ವಿದ್ಯೆ ಪೇಟೆ ಕೇಳ್ದಱಿದು ಮುಳಿದು ಗರ್ಜಿಸಿ ಮಸಗಿ ಸಮಸ್ತ ಬಲಂಬೆರಸಿಂದ್ರನ ಮಱುವೊಕ್ಕೊಡಮಮೋಘಂ ಕೊಲ್ವನೆಂದು ಮೇಲೆಟ್ಟುಂದನಂ ಚಂದ್ರವೇಗಂ ಕಂಡು ಸನತ್ಕುಮಾರಂಗಿಂತೆಂದಂ ದೇವಾ ನಾನಾವಿಧಮಪ್ಪ ವಿದ್ಯಾಧರಯುದ್ಧಮಂ ನೀಂ ಕೆಮ್ಮನೆ ನೋಡುತ್ತಿರಾನೆ ಸಾಲ್ವೆನೆಂದು ಸಂಗ್ರಾಮಕ್ಕಭಿಮುಖನಾಗಿ ಕಾದಲ್ ತಗುಳ್ದನಿತ್ತ ಕುಮಾರನುಂ

"ಮಾನಸಸರೋವರದಲ್ಲಿ ಸಿತಯಕ್ಷನನ್ನು ಯುದ್ಧದಲ್ಲಿ ಯಾವನು ಗೆಲ್ಲುವನೋ ಮತ್ತು ಅಶನಿವೇಗನ ಮಗನಾದ ವಜ್ರವೇಗನನ್ನು ಮುಷ್ಟಿಯ ಪೆಟ್ಟಿನಿಂದ ಯಾವನು ಕೊಲ್ಲುವನೋ ಆ ಅಶನಿವೇಗನನ್ನೂ ಯುದ್ಧದಲ್ಲಿ ಯಾವನೊಬ್ಬನು ಬೀಳಿಸುವನೋ ಆತನಿಗೆ ನಿಮ್ಮ ಮಕ್ಕಳನ್ನು ಕೊಡಿ" ಎಂದು ದೇವಗುರುವೆಂಬ ಜ್ಯೋತಿಷ್ಯನು ಹೇಳಿದನು. ಅನಂತರ ಅವನ ಉಪದೇಶದಿಂದ ನಿಶ್ಚಯಮಾಡಿದ ಮನಸ್ಸಿನವನಾಗಿ ತನ್ನ ಮಕ್ಕಳಾದ ಹರಿಶ್ಚಂದ್ರ ಚಂದ್ರಸೇನರೆಂಬವರನ್ನು ಎಲ್ಲ ವಿಧವಾದ ಆಯುಧಗಳಿಂದ ಸನ್ನದ್ಧರಾಗಿ ದಿವ್ಯವಾದ ರಥದಿಂದ ಕೂಡಿ ಕಳುಹಿಸಿದನು. ಅವರು ಬಂದು ಸನತ್ಕುಮಾರನಿಗೆ ಎರಗಿ ಸಾಷ್ಟಾಂಗ ವಂದನೆಯನ್ನು ಮಾಡಿ ಹೀಗೆ ಹೇಳಿದರು. - "ರಥನೂಪುರಚಕ್ರವಾಳವೆಂಬ ಪಟ್ಟಣದ ಒಡೆಯನಾದ ಚಂದ್ರವೇಗನಿಗೂ ಮಣಿದೇವಿಗೂ ಜನಿಸಿದ ಹರಿಶ್ಚಂದ್ರ ಚಂದ್ರಸೇನ ಎಂಬ ಮಕ್ಕಳು ನಾವು . ನಮ್ಮ ತಂದೆಯ ಆಜ್ಞೆಯಂತೆ ನಿಮ್ಮನ್ನು ನೋಡುವುದಕ್ಕಾಗಿ ಬಂದಿದ್ದೇವೆ." ಎಂದು ಹೇಳಿ ಸುಖ ಸಂಕಥೆಗಳ ವಿನೋದದಿಂದ ಇದ್ದರು. ಅವರ ಹಿಂದಿನಿಂದಲೇ ಸಹೋದರರಾದ ಚಂದ್ರವೇಗನೂ ಭಾನುವೇಗನೂ ತಮ್ಮಲ್ಲಿ ಇದ್ದ ಎಲ್ಲಾ ಸೈನ್ಯವನ್ನೂ ಕೂಡಿಕೊಂಡು ಸನತ್ಕುಮಾರನನ್ನು ಸೇರಿಕೊಂಡರು. ಆ ಮೇಲೆ ಅಶನಿವೇಗನು ತನ್ನ ಮಗನು ಸತ್ತುಹೋದ ಸಂಗತಿಯನ್ನೆಲ್ಲ ಅವಲೋಕಿನೀವಿದ್ಯೆ ಹೇಳಲು, ಕೇಳಿ ತಿಳಿದುಕೊಂಡು ಕುಪಿತನಾಗಿ ಗರ್ಜಿಸಿ ಉದ್ರೇಕಗೊಂಡು ಎಲ್ಲಾ ಸೈನ್ಯವನ್ನು ಕೂಡಿಕೊಂಡು ಸನತ್ಕುಮಾರನು ದೇವೇಂದ್ರನನ್ನು ಮರೆಹೊಕ್ಕರೂ ಕೊಲ್ಲುವೆನೆಂದು ದಂಡೆತ್ತಿಕೊಂಡು ಬಂದನು. ಹಾಗೆ ಬಂದವನನ್ನು ಚಂದ್ರವೇಗನು ಕಂಡು ಸನತ್ಕುಮಾರನಿಗೆ ಹೀಗೇಂದನು. -"ದೇವಾ, ನೀನು ಸಮ್ಮನೆ ಇದ್ದು ಹಲವಾರು ರೀತಿಯ ವಿದ್ಯಾಧರಯುದ್ಧವನ್ನು ನೋಡುತ್ತಿರು. ಈಗ ಹೋರಾಡಲು ನಾನೇ ಸಾಕಾಗುವೆನು" ಎಂದು ಯುದ್ಧಕ್ಕೆ ಅಭಿಮುಖನಾಗಿ ಕಾದಾಡಲು ಪ್ರಾರಂಭಿಸಿದನು. ಇತ್ತ ಕುಮಾರನು ಆಕಾಶ ತಳದಲ್ಲಿ ವಜ್ರಸಾರವೆಂಬ ರಥವನ್ನೇರಿ

ಗಗನತಳದೊಳ್ ವಜ್ರಸಾರಮೆಂಬ ರಥಮನೇಜೆ ಛತ್ರ ಚಾಮರ ಪಿಂಛಾತಪತ್ರ ಪಾಳಿಧ್ವಜ ಪತಾಕಾದ್ಯನೇಕ ಮಹಾವಿಭೂತಿಯೊಳ್ ಕೂಡಿ ಸಂಗ್ರಾಮಮಂ ನೋಡುತ್ತಮಿರೆ ಮತ್ತಶನಿವೇಗಂ ಕುಮಾರನಂ ಕಂಡು ಕ್ರೋಧಾಗ್ನಿ ಪೆರ್ಚ ಎನ್ನ ಮಗನಂ ಕೊಂದೊನಂ ಬೇಗಂ ಮೃತ್ಯುರಾಜನಂ ಕಾಣ್ಬಂತಿರೆ ಮಾಪ್ಪಿನೆಂದು ಮುಳಿದು ಮಸಗಿ ಬರ್ಪೊನಂ ಕುಮಾರಂ ಕಂಡಾಗಡೆ ಬಾಣಾಸನಹಸ್ತನಾಗಿ ಅರ್ಧಚಂದ್ರಮೆಂಬ ಸರದಿಂದಾತನ ತಲೆಯಂ ಮೊಕ್ಕನೆವ್ರೋಗೆಚ್ಚಂ ಅದು ಜ್ವಲನ್ಮಣಿಮಕುಟ ಕುಂಡಲಂಗಳಿಂದೊಪ್ಪುತ್ತಿರ್ದುದು ವಿದ್ಯುತ್ಪಾಲಂಬೊಲ್ ನೆಲದೊಳ್ ಬಿಟ್ಟತ್ತಾಗಳಾ ತಲೆಯಂ ಮಱುವಕ್ಕದರ್ ಕಂಡು ಕೆಲರಂಜಿ ತ್ರಸ್ತಾಭಭೂತರಾಗಿಯೋಡಿ ಕೆಲರ್ ಶರಣೆಂಮ ಕುಮಾರನ ಕಾಲ್ಗೆಱಗಿ ಪುಲ್ಲಂ ಕರ್ಚ ಪೊಡೆವಟ್ಟರಾ ಕುಮಾರನುಮಾಗಳಭಯಘೋಷಣೆಯಂ ಪೊಯ್ಸುಯವರ್ಗ್ಗಭಯದಾನಮಂ ಕೊಟ್ಟನಾಗಳ್ ಚಂದ್ರವೇಗನುಂ ಸಂಗ್ರಾಮಭೂಮಿಯನರ್ಚಿಸಿ ಮಹಾವಿಭೂತಿಯಿಂ ಕುಮಾರನನೊಡಗೊಂಡು ಪೋಗಿ ಪೊಟಲಂ ಪೊಕ್ಕು ಪ್ರಶಸ್ತ ದಿನ ವಾರ ನಕ್ಷತ್ರ ಹೋರಾಮುಹೂರ್ತ ಲಗ್ನದೊಳ್ ತನ್ನ ಮಕ್ಕಳ್ ಚಂದ್ರಮತಿ ಚಂದ್ರಶ್ರೀ ಚಂದ್ರಲೇಖೆ ಶಶಿಕಾಂತೆ ಮನೋಹಾರಿಣಿ ಹರಿಣಾಂಕೆ ಕಮಲಮುಖಿ ಪ್ರಿಯದರ್ಶನೆಯೆಂದಿವರ್ ಮೊದಲಾಗೊಡೆಯ ನೂರ್ವರ್ ಕನ್ನೆಯರ್ಕ್ಕಳಂ ಪಾಣಿಗ್ರಹಣಪುರಸ್ಸರಂ ಕೊಟ್ಟನಂತಾ ನೂರ್ವರ್ ಕನ್ನೆಯರ್ಕ್ಕಳುಂ

ಛತ್ರ (ಕೊಡೆ), ಚಾಮರ (ಚೌರಿ), ನವಿಲಗರಿಯ ಕೊಡೆ, ಪಾಳಿಧ್ವಜ, (ಹಾರ, ವಸ್ತ್ರ, ನವಿಲು, ಕಮಲ, ಹಂಸೆ, ಮೀನ, ಸಿಂಹ, ವೃಷಭ, ಆನೆ, ಚಕ್ರ - ಈ ಲಾಂಛನಗಳುಳ್ಳ ಬಾವುಟಗಳ ವ್ಯೂಹ), ಪತಾಕೆ - ಮುಂತಾದ ಮಹಾ ವೈಭವದಿಂದ ಕೂಡಿ ಯುದ್ಧವನ್ನು ನೋಡುತ್ತ ಇದ್ದನು. ಆ ಮೇಲೆ ಅಶನಿವೇಗನು ಕುಮಾರನನ್ನು ಕಂಡಾಗ ಕೋಪವೆಂಬ ಬೆಂಕಿ ಹೆಚ್ಚಾಗಿ "ನನ್ನ ಮಗನನ್ನು ಕೊಂದವನನ್ನು ಬೇಗನೆ ಮರಣದ ರಾಜನನ್ನು ಕಾಣುವ ಹಾಗೆ ಮಾಡುವೆನು" ಎಂದು ಕೋಪೋದ್ರೇಕಗೊಂಡು ಬರುತ್ತಿದ್ದರು. ಅವನನ್ನು ಕುಮಾರನು ಕಂಡೊಡನೆಯೇ ಬಿಲ್ಲನ್ನು ಹಿಡಿದು ಅರ್ಧಚಂದ್ರವೆಂಬ ಬಾಣದಿಂದ ಆತನ ತಲೆಯನ್ನು ಮೊಕ್ಕೆಂದು ಕತ್ತರಿಸಿ ಹೋಗುವಂತೆ ಹೊಡೆದನು. ಆ ತಲೆ ಹೊಳೆಯುವ ರತ್ನಗಳ ಕಿರೀಟಕುಂಡಲಗಳಿಂದ ಶೋಭಿಸುತ್ತಿದ್ದುದು ಮಿಂಚಿನ ತಲೆಬುರುಡೆಯೋ ಎಂಬಂತೆ ನೆಲದ ಮೇಲೆ ಬಿದ್ದಿತು ಆಗ ಆ ತಲೆಯನ್ನು ಪ್ರತಿಪಕ್ಷದವರು ಕಂಡರು. ಅವರಲ್ಲಿ ಕೆಲವರು ಹೆದರಿ, ಭಯದಿಂದ ಹೊಡೆಯಲ್ಪಟ್ಟವರಾಗಿ ಓಡಿದರು. ಕೆಲವರು 'ಶರಣು' ಎಂದು ಕುಮಾರನ ಕಾಲಿಗೆರಗಿದರು, ಕೆಲವರು ಹುಲ್ಲನ್ನು ಕಚ್ಚಿ ಸಾಷ್ಟಾಂಗವಂದನೆ ಮಾಡಿದರು. ಆಗ ಕುಮಾರನು ಅಭಯಘೋಷಣೆಯನ್ನು ಹೊಡೆಸಿ ಅವರಿಗೆಲ್ಲ ಅಭಯದಾನವನ್ನಿತ್ತನು. ಆಗ ಚಂದ್ರವೇಗನು ಯುದ್ಧರಂಗವನ್ನು ಪೂಜಿಸಿ ದೊಡ್ಡ ವೈಭವದಿಂದ ಕುಮಾರನನ್ನು ಕೂಡಿಕೊಂಡು ಹೋಗಿ ಪಟ್ಟಣವನ್ನು ಹೊಕ್ಕು ಒಳ್ಳೆಯ ದಿನ ವಾರ ನಕ್ಷತ್ರ ಹೋರಾ ಮುಹೂರ್ತ ಲಗ್ನದಲ್ಲಿ ತನ್ನ ಮಕ್ಕಳಾದ ಚಂದ್ರಮತಿ ಚಂದ್ರಶ್ರೀ ಚಂದ್ರಲೇಖೆ ಶಶಿಕಾಂತೆ ಮನೋಹಾರಿಣಿ ಹರಿಣಾಂಕೆ ಕಮಲಮುಖಿ ಪ್ರಿಯದರ್ಶನೆ - ಎಂದು ಇವರೇ ಮೊದಲಾಗಿರುವ ನೂರು ಮಂದಿ ಕನ್ಯೆಯರನ್ನು ಪಾಣಿಗ್ರಹಣಪೂರ್ವಕವಾಗಿ ಕೊಟ್ಟನು. ಅಂತು ಆ ನೂರು ಮಂದಿ ಕನ್ಯೆಯರೂ ಹಿಂದಿನ ಬೇರೆ ವಿದ್ಯಾಧರಯುವತಿಯರು -

ಮುನ್ನಿನ ಖೇಚರಿಯರ್ಕ್ಕಳುಂ ಪೆಱವುಮೆಂದಿವರೊಳ್ ಕೂಡಿ ಕುಮಾರಂ ವಿದ್ಯಾಧರಶ್ರೇಣಿಯೊಳ್ ಸುಖಮನನುಭವಿಸುತ್ತಿರ್ಪ್ಪನ್ನೆಗಂ ಮತ್ತೊಂದು ದಿವಸಂ ಚಂದ್ರವೇಗಂ ಸಿದ್ಧಕೂಟಕ್ಕೆ ವಂದನಾಭಕ್ತಿಗೆ ಪೋಗಿ ದೇವನನರ್ಚಿಸಿ ವಂದಿಸಿ ಸುಮಾಳಿಗಳೆಂಬವಧಿಜ್ಞಾನಿಗಳಪ್ಪ ಚಾರಣಸಿರಿಯರಂ ಗುರುಭಕ್ತಿಗೆಯ್ದು ವಂದಿಸಿ ಧರ್ಮಮಂ ಕೇಳ್ದು ತದನಂತರಮಿಂತೆಂದಂ ಭಟಾರಾ ಸನತ್ಕುಮಾರಂಗಂ ಸಿತಯಕ್ಷಂಗಂ ವೈರಸಂಬಂಧಕ್ಕೆ ಕಾರಣಮೇನೆಂದು ಬಿಸಗೊಂಡೊಡೆ ಭಟಾರರುಂ ತತ್ಸಂಬಂಧಿಯಪ್ಪ ಕಥೆಯನಿಂತೆಂದು ಪೇಟಲ್ ತೊಡಗಿದರ್ ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಮಗಧೆಯೆಂಬುದು ನಾಡಲ್ಲಿ ಕಾಂಚನಮೆಂಬುದು ಪೊಬಲದನಾಳ್ವಂ ಪ್ರತಿಮುಖನೆಂಬರಸಂನಷ್ಟಶತಮಂತಃಪುರಕ್ಕಧಿಪನಾಗಿ ಕಾಲಂ ಸಲೆ ಮತ್ತಾ ಪೊಬಲೊಳ್ ನಾಗಚಂದ್ರನೆಂಬೊಂ ಸಾರ್ಥಾಧಿಪತಿಯಾತನ ಭಾರ್ಕ್ಕೆ ವಿಷ್ಣುಶ್ರೀಯೆಂಬೊಳತ್ಯಂತ ರೂಪಲಾವಣ್ಯ ಸೌಭಾಗ್ಯ ಕಾಂತಿ ಹಾವ ಭಾವ ವಿಳಾಸ ವಿಭ್ರಮಂಗಳಿಂ ಕೂಡಿದೊಳೊಂದು ದಿವಸಂ ಅರಸನುದ್ಯಾನವನಕ್ಕೆ ಪೋಗುತ್ತಂ ಪ್ರಾಸಾದದೊಳಿರ್ದ ದೇವಾಂಗನಾಸನ್ನಿಭೆಯಪ್ಪಳಂ ಕಂಡು ಕಾಮಶರಂಗಳಿಂ ಜರ್ಝರಿತಹೃದಯನಾಗಿ ಮಂತ್ರಪ್ರಯೋಗದಿಂದಂ ವಿಷ್ಣುಶ್ರೀಯನೊಳಕೊಂಡ ನಾಕೆಯುಮಾತಂಗಗ್ರವಲ್ಲಭೆಯಾಗಿ ಸಲ್ಲೊಳಂ ಸಮಸ್ತಮಂತಃಪುರಮಾಕೆಗೆ ಮುಳಿಯುತ್ತಿರ್ಕುಮೊಂದು ದಿವಸಂ ಸಾರ್ವಭೌಮನೆಂಬ ಪಟ್ಟವರ್ದನಗಜಂ ಸೊರ್ಕಿ ಮಸಗಿ ಕಟ್ಟುಗಳೆಲ್ಲಮಂ ಪಱಿದು

ಎಲ್ಲರನ್ನೂ ಕೂಡಿಕೊಂಡು ಸನತ್ಕುಮಾರನು ವಿದ್ಯಾಧರರ ಸಾಲಿನಲ್ಲಿದ್ದು ಸುಖವನ್ನು ಅನುಭವಿಸುತ್ತ ಇದ್ದನು. ಹೀಗಿರಲು, ಮತ್ತೊಂದು ದಿವಸ ಚಂದ್ರವೇಗನು ಸಿದ್ಧರಿರತಕ್ಕ ಪರ್ವತಶಿಖಿರಕ್ಕೆ ವಂದನೆಯ ಭಕ್ತಿಗೋಸ್ಕರ ಹೋದನು. ಅಲ್ಲಿ ದೇವರನ್ನು ಪೂಜಿಸಿ, ನಮಸ್ಕರಿಸಿ ಸುಮಾಳಿಗಳೆಂಬ ಅವಧಿಜ್ಞಾನಿಗಳಾದ ಚಾರಣಋಷಿಗಳಲ್ಲಿ ಗುರುಭಕ್ತಿಯನ್ನು ಆಚರಿಸಿ ಅವರನ್ನು ವಂದಿಸಿ ಧರ್ಮೋಪದೇಶವನ್ನು ಕೇಳಿದನು. ಅನಂತರ ಹೀಗೆಂದನು - "ಪೂಜ್ಯರೇ ಸನತ್ಕುಮಾರನಿಗೂ ಸಿತಯಕ್ಷನಿಗೂ ದ್ವೇಷಸಂಬಂಧಕ್ಕೆ ಕಾರಣವೇನು?" ಎಂದು ಕೇಳಲು ಸ್ವಾಮಿಗಳು ಅದಕ್ಕೆ ಸಂಬಂಧಿಸಿದ ಕಥೆಯನ್ನು ಹೀಗೆ ಹೇಳತೊಡಗಿದರು. ಈ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ಮಗಧೆಯೆಂಬ ನಾಡಿನಲ್ಲಿ ಕಾಂಚನವೆಂಬ ಪಟ್ಟಣವಿದೆ. ಅದನ್ನು ಪ್ರತಿಮುಖನೆಂಬ ರಾಜನು ಆಳುತ್ತಿದ್ದನು. ಅವನು ಎಂಟುನೂರು ಅಂತಃಪುರ ಸ್ತ್ರೀಯರಿಗೆ ಒಡೆಯನಾಗಿದ್ದನು. ಹೀಗೆ ಕಾಲ ಕಳೆಯಿತು. ಆಮೇಲೆ, ಆ ಪಟ್ಟಣದಲ್ಲಿ ನಾಗಚಂದ್ರನೆಂಬ ವ್ಯಾಪಾರಿಯಿದ್ದನು. ಅವನು ಸಾರ್ಥಾಧಿಪತಿಯಾಗಿದ್ದನು. (ಊರಿಂದೂರಿಗೆ ಹೋಗಿ ಸರಕುಗಳನ್ನು ಮಾರುವವರ ಶ್ರೇಣಿಗೆ ಒಡೆಯ). ಅವನ ಪತ್ನಿಯಾದ ವಿಷ್ಣುಶ್ರೀಯೆಂಬವಳು ಅತಿಶಯ ರೂಪ, ಲಾವಣ್ಯ, ಸೌಭಾಗ್ಯ, ಕಾಂತಿ, ಹಾವ, ಭಾವ, ವಿಲಾಸ, ವಿಭ್ರಮಗಳಿಂದ ಕೂಡಿದವಳು. ಒಂದು ದಿನ ರಾಜನು ಉದ್ಯಾನಕ್ಕೆ ಹೋಗುವಾಗ ದೊಡ್ಡ ಮನೆಯಲ್ಲಿ ಇದ್ದ ದೇವತಾಸ್ತ್ರೀಯಂತಿದ್ದ ಆಕೆಯನ್ನು ಕಂಡನು. ಕಾಮನ ಬಾಣಗಳಿಂದ ನುಜ್ಜುಗುಜ್ಜಾದ ಮನುಸುಳ್ಳವನಾಗಿ ಮಂತ್ರಶಕ್ತಿಯನ್ನು ಉಪಯೋಗಿಸಿ ವಿಷ್ಣುಶ್ರೀಯನ್ನು ವಶಪಡಿಸಿಕೊಂಡನು. ಆಕೆ ಅವನಿಗೆ ಇತರರಿಗಿಂತ ಮೇಲಿನ ಹೆಂಡತಿಯಾಗಿ ನಡೆಯುತ್ತಿದ್ದಳು. ರಾಜನ ಅಂತಃಪುರದವರೆಲ್ಲ ಆಕೆಯ ಮೇಲೆ ಸಿಟ್ಟಿನಿಂದಿದ್ದರು. ಒಂದು ದಿವಸ ಸಾರ್ವಭೌಮ ಎಂಬ ಪಟ್ಟದಾನೆ ಸೊಕ್ಕಿ ಉದ್ರೇಕಗೊಂಡು

ಹತತವಿತತಕೋಳಾಹಳಮೆಬೆದು ಪೊಟಲೆಲ್ಲಮಂ ಕೊಲ್ಲುದನರಸಂ ಕೇಳ್ದನೆಯಂ ಕಟ್ಟಿಸಲೆಂದು ಪೋದನನ್ನೆಗಮಿತ್ತ ಅನಿಬರರಸಿಯರ್ಕಳ್ ನೆರೆದು ವಿಷಪ್ರಯೋಗದಿಂದಂ ಕೊಂದಾರುಮಱೆಯದಂತಿರೆ ಶ್ಮಶಾನದೊಳೀಡಾಡಿದೊರನ್ನೆಗಮರಸನುಮಾನೆಯುಮಂ ಕಟ್ಟಿಸಿ ಬಂದರಸಿಯಂ ಕಾಣದೆಲ್ಲಿರ್ದಳೆಂದು ಬೆಸಗೊಂಡೊಡೆ ಸತ್ತಳೆಂಬಾ ಮಾತಂ ಕೇಳ್ದು ಮೂರ್ಛಿತನಾಗಿ ನೀಡಱೆಂದೆಬ್ಬರ್ತು ಮಹಾದುಃಖಂಗೆಯ್ದು ಶ್ಮಶಾನಕ್ಕಾಕೆಯ ದೇಹಮಂ ನೋಡಲೆಂದು ಪೋಗಿಯದಱ ಬೀಭತ್ಸಮಂ ಕಂಡಾದಮಾನುಂ ಪೇಸಿ ಶರೀರವೈರಾಗ್ಯಮನೊಡೆಯನಾಗಿ ಅನ್ಯಾಯದಿಂ ಪರಸ್ತ್ರೀಹರಣಂ ಗೆಯ್ದಂ ಮಹಾಪಾತಕನೆನೆಂದು ತನ್ನ ತಾನಾದಮಾನುಂ ನಿಂದಿಸಿ ವಿಮಳವಾಹನನೆಂಬ ಪಿರಿಯ ಮಗಂಗೆ ರಾಜ್ಯ ಪಟ್ಟಂಗಟ್ಟಿ ಸುವ್ರತರೆಂಬಾಚಾರ್ಯರ ಪಕ್ಕದೆ ದೀಕ್ಷೆಯಂ ಕೈಕೊಂಡು ಪಲಕಾಲಂ ತಪಂಗೆಯ್ದು ಸಮಾಧಿಮರಣದಿಂ ಮುಡಿಪಿ ಪ್ರಾಣತಕಲ್ಪದೊಳಿರ್ಪತ್ತು ಸಾಗರೋಪಮಾಯುಷ್ಯಸ್ಥಿತಿಯ ನೊಡೆಯೊಂ ಪ್ರತೀಂದ್ರನಾಗಿ ಪುಟ್ಟಿ ದೇವಲೋಕದ ದಿವ್ಯಸುಖಮಂ ಪಲಕಾಲಮನುಭವಿಸಿ ಬಂದಿಲ್ಲಿ ಜಂಬೂದ್ವೀಪದ ಭರತಕ್ಷೇತ್ರದೊಳ್ ಮಗಧೆಯೆಂಬುದು ನಾಡಲ್ಲಿ ಕನಕವೆಂಬುದು ಪೊಬಲದನಾಳ್ವೊಂ ಹರಿವಾಹನನೆಂಬರಸಂ ಮತ್ತಮಾ ಪೊಬಲೊಳ್ ರಾಜಶ್ರೇಷ್ಠಿ ಅರ್ಹದ್ದಾಸನೆಂಬೊನಾತನ ಭಾರ್ಯೆ

ಕಟ್ಟುಗಳನ್ನೆಲ್ಲ ಕಡಿದುಕೊಂಡು ಯದ್ವಾತದ್ವಾ ಗದ್ದಲವನ್ನುಂಟುಮಾಡಿ ಎಳೆದುಕೊಂಡು ಪಟ್ಟಣದಲ್ಲೆಲ್ಲಾ ಸಿಕ್ಕಿಸಿಕ್ಕಿದವರನ್ನು ಕೊಲ್ಲತೊಡಗಿತು. ರಾಜನು ಇದನ್ನು ಕೇಳಿ ಆನೆಯನ್ನು ಹಿಡಿದು ಬಂಧಿಸುವುದಕ್ಕಾಗಿ ಹೋದನು. ಆ ವೇಳೆಯಲ್ಲಿ ಇತ್ತ ಅಂತಃಪುರದ ಅಷ್ಟೊಂದು ಮಂದಿ ಅರಸಿಯರು ಒಟ್ಟುಗೂಡಿ ವಿಷ್ಣುಶ್ರೀಯನ್ನು ವಿಷಪ್ರಯೋಗದಿಂದ ಕೊಂದು ಯಾರೊಬ್ಬರೂ ತಿಳಿಯದ ಹಾಗೆ ಶ್ಮಶಾನದಲ್ಲಿ ಬಿಸಾಡಿದರು. ಅಷ್ಟರಲ್ಲಿ ರಾಜನು ಆನೆಯನ್ನು ಕಟ್ಟಿಸಿ ಹಿಂದಕ್ಕೆ ಬಂದು ರಾಣಿಯನ್ನು ಕಾಣದೆ, 'ಆಕೆ ಎಲ್ಲಿದ್ದಾಳೆ?' ಎಂದು ಕೇಳಿದನು. 'ಸತ್ತಳು' ಎಂಬ ಸುದ್ದಿಯನ್ನು ಕೇಳಿ ಮೂರ್ಛೆಹೋದನು. ಹೆಚ್ಚು ಹೊತ್ತಿನ ಮೇಲೆ ಎಚ್ಚರಗೊಂಡು ಮಹಾದುಃಖವನ್ನು ತಾಳುತ್ತ ಆಕೆಯ ಶರೀರವನ್ನು ನೋಡುವುದಕ್ಕಾಗಿ ರುದ್ರಭೂಮಿಗೆ ಹೋದನು. ಅಲ್ಲಿ ಜುಗುಪ್ಸೆಯನ್ನುಂಟುಮಾಡುವ ಹೆಣದ ರೂಪವನ್ನು ಕಂಡು ಅತಿಶಯವಾಗಿ ಹೇಸಿಕೆ ಪಟ್ಟು ದೇಹದ ಮೇಲೆ ವೈರಾಗ್ಯವುಳ್ಳವನಾದನು. "ಅನ್ಯಾಯದಿಂದ ಬೇರೆಯವರ ಹೆಂಡತಿಯನ್ನು ಅಪಹರಣ ಮಾಡಿದೆನು, ಮಹಾಪಾಪಿಯಾಗಿರುವೆನು" ಎಂದು ತನ್ನನ್ನು ತಾನು ಅತ್ಯಂತವಾಗಿ ಹಳಿದುಕೊಂಡನು. ಆಮೇಲೆ ವಿಮಳವಾಹನನೆಂಬ ಹಿರಿಯ ಮಗನಿಗೆ ರಾಜ್ಯಪಟ್ಟವನ್ನು ಕಟ್ಟಿ ಸುವ್ರತರೆಂಬ ಆಚಾರ್ಯರ ಬಳಿಯಲ್ಲಿ ಜೈನದೀಕ್ಷೆಯನ್ನು ಸ್ವೀಕರಿಸಿದನು. ಹಲವು ಕಾಲದವರೆಗೆ ತಪಸ್ಸನ್ನು ಆಚರಿಸಿ ಸಮಾಧಿಮರಣದಿಂದ ಸತ್ತು ಪ್ರಾಣತವೆಂಬ ಸ್ವರ್ಗದಲ್ಲಿ ಇಪ್ಪತ್ತು ಸಾಗರವನ್ನು ಹೋಲುವ ದೀರ್ಘಕಾಲದ ಆಯುಷ್ಯವುಳ್ಳ ಪ್ರತಿದೇವೇಂದ್ರನಾಗಿ ಹುಟ್ಟಿದನು. ಹಲವು ಕಾಲ ದೇವಲೋಕದ ಸುಖವನ್ನನುಭವಿಸಿ ಬಂದನು. - ಇಲ್ಲಿ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ಮಗಧೆಯೆಂಬ ನಾಡಿನ ಕನಕಪುರವನ್ನು ಆಳುವ ಹರಿವಾಹನನೆಂಬ ರಾಜನಿದ್ದನು. ಅನಂತರ, ಅದೇ ಪಟ್ಟಣದಲ್ಲಿ ರಾಜಶ್ರೇಷ್ಠಿಯಾಗಿ ಅರ್ಹದ್ದಾಸನೆಂಬವನಿದ್ದನು. ಅವನ ಹೆಂಡತಿ ಜಿನದತ್ತೆ. ಆ ಇಬ್ಬರಿಗೆ ಜಿನವರ್ಮನೆಂಬ ಮಗನಾಗಿ (ಆ ಪ್ರತಿಮುಖನಾಗಿದ್ದವದು) ಹುಟ್ಟಿದನು. ಜಿನವರ್ಮನು ಹೆಚ್ಚಾದ ರೂಪ-

ಜಿನದತ್ತೆಯೆಂಬೊಳಾ ಇರ್ವರ್ಗಂ ಮಗಂ ಜಿನವರ್ಮನೆಂಬೊನಾಗಿ ಪುಟ್ಟಿ ರೂಪ ಲಾವಣ್ಯ ಸೌಭಾಗ್ಯ ಕಾಂತಿತ್ವದಿಂದಾದಮಾನುಂ ನೆಱೆದೊನಾಗಿ ಇಂತು ಕಾಲಂ ಸಲೆ ಅರ್ಹದ್ದಾಸಂಗೇನಾನುಮೊಂದು ಕಾರಣದಿಂದಂ ವೈರಾಗ್ಯಮಾಗಿ ಜಿನವರ್ಮಂಗೆ ರಾಜಶ್ರೇಷ್ಠಿಪದಮಂ ಕೊಟ್ಟು ಶಿವಗುಪ್ತಾಚಾರ್ಯರ ಪಕ್ಕದೆ ದೀಕ್ಷೆಯಂ ಕೈಕೊಂದು ತಪಂಗೈಯ್ದು ಮೋಕ್ಷಕ್ಕೆ ವೋದನ್ ಮತ್ತಿತ್ತ ಜಿನವರ್ಮನುಂ ಪಲವುಂ ಜಿನಾಲಯಂಗಳಂ ಮಾಡಿಸಿ ದಾನಶ್ರೀಯೆಂಬ ಪೂಜೆ ಶೀಲೋಪವಾಸಮೆಂದಿಂತು ಚತುರ್ವಿಧಮಪ್ಪ ಶ್ರಾವಕಧರ್ಮದೊಳಗ್ಗಳನಾಗಿ ನೆಗಟುತ್ತಮಿಂತು ಪಲಕಾಲಂ ಸಲೆ ಮತ್ತಾ ಮುನ್ನಿನ ಭವದ ನಾಗಚಂದ್ರನೆಂಬೊಂ ಸಾರ್ಥಾಧಿಪತಿ ವಿಷ್ಣು ತನ್ನ ಭಾರ್ಯೆಯ ವಿಯೋಗಂ ಕಾರಣಮಾಗಿ ಆರ್ತಧ್ಯಾನದಿಂ ಸತ್ತು ತಿರ್ಯಗ್ಭರಕಾದಿಗಳೊಳ್ ಪಲಕಾಲಂ ತೊಲಲ್ದೀ ಭರತಕ್ಷೇತ್ರದೊಳ್ ಕಪಿಲನೆಂಬ ಪಾರ್ವ್ವಂಗಂ ಗಂಗೆಯೆಂಬ ಪಾರ್ವ್ವಂತಿಗಂ ಭಾರದ್ವಾಜನೆಂಬ ಮಗನಾಗಿ ಪುಟ್ಟಿ ಕನಕದಂಡಿಯೆಂಬ ಪರಿವ್ರಾಜಕಂಗೆ ಶಿಷ್ಯನಾಗಿ ನಾನಾದೇಶಂಗಳಂ ವಿಹಾರಿಸುತ್ತಂ ಕನಕಪುರಕ್ಕೆ ವಂದು ಮಾಸೋಪವಾಸಂಗೆಯ್ಯುತ್ತಂ ಮಹಾತಪಸ್ವಿಯಾಗಿ ನೆಗಟುತ್ತಿರೆ ತತ್ಪುರಾಧಿಪಂ ಹರಿವಾಹನನೆಂಬರಸಂ ಕಂಡಾದಮಾನುಮಾ ತಪಸ್ವಿಗೆ ಭಕ್ತನಾಗಿ ಬಿಸಕೆಯ್ಗೆ ಕಾಲಂ ಸಲೆ ಮತ್ತೊಂದು ದಿವಸಮರಸ ನೊಡನೆ ಜಿನವರ್ಮನಾ ಪರಿವ್ರಾಜಕನ ನಿವಾಸಕ್ಕೆ ವೋದೊಡೆ ಜಿನವರ್ಮನಂ ಕಂಡು ಪೂರ್ವವೈರಸಂಬಂಧದಿಂದಾದ ಕ್ರೋಧಾಗ್ನಿ ಪೆರ್ಚಿ ಮಱುಗುತ್ತಿರ್ದ್ದ ಮನಮನೊಡೆಯ ತಪಸ್ವಿಯನರಸನಿಂತೆಂದಂ ನೀವೆಮ್ಮ ಮನೆಯೊಳ್ ಪಾರಿಸಲ್ವೇಳ್ವುದೆಂದು ಪ್ರಾರ್ಥಿಸಿದೊಡಾತನಿಂತೆಂದಂ ಒಂದು ಪಾಂಗಿನೊಳ್ ನಿಮ್ಮ ಮನೆಯೊಳ್ ಪಾರಿಸುವೆನೀ ಜಿನವರ್ಮನ ಬೆನ್ನೊಳಡಿಯಿಲ್ಲದ ತಳಿಗೆಯನಿಟ್ಟು ಬಿಸಿಯ ತುಯ್ಯಲನುಣ್ಬುದೆನ

ಲಾವಣ್ಯ - ಸೌಭಾಗ್ಯ - ತೇಜಸ್ಸುಗಳಿಂದ ಕೂಡಿದ್ದನು. ಹೀಗೆಯೇ ಕಾಲಕಳೆಯಲು ಅರ್ಹದ್ದಾಸನಿಗೆ ಏನೋ ಒಂದು ಕಾರಣದಿಂದ ವೈರಾಗ್ಯವುಂಟಾಯಿತು. ಅವನು ಜಿನವರ್ಮನಿಗೆ ರಾಜಶ್ರೇಷ್ಠಿ ಪದವಿಯನ್ನು ಕೊಟ್ಟು ಶಿವಗುಪ್ತಾಚಾರ್ಯರ ಬಳಿಯಲ್ಲಿ ದೀಕ್ಷೆಯನ್ನು ಸ್ವೀಕರಿಸಿ ತಪಸ್ಸನ್ನು ಮಾಡಿ ಮೋಕ್ಷಕ್ಕೆ ಹೋದನು. ಆಮೇಲೆ ಇತ್ತ ಜಿನವರ್ಮನು ಹಲವು ಜಿನಾಲಯಗಳನ್ನು ಮಾಡಿಸಿ ದಾನ, ಪೂಜೆ, ಶೀಲ, ಉಪವಾಸ, ಎಂಬ ನಾಲ್ಕು ವಿಧದ ಶ್ರಾವಕಧರ್ಮದಲ್ಲಿ (ಜೈನಗೃಹಸ್ಥಧರ್ಮದಲ್ಲಿ) ಶ್ರೇಷ್ಠನಾಗಿ ಆಚರಿಸುತ್ತ ಹೀಗೆಯೇ ಹಲವು ಕಾಲ ಕಳೆಯಿತು. ಆಮೇಲೆ, ಆ ಹಿಂದಿನ ಜನ್ಮದ ನಾಗಚಂದ್ರನೆಂಬ ವರ್ತಕನು ವಿಷ್ಣುಶ್ರೀಯೆಂಬ ತನ್ನ ಹೆಂಡತಿಯ ಅಗಲಿಕೆಯ ಕಾರಣದಿಂದ ಆರ್ತಧ್ಯಾನದಿಂದ ಸತ್ತು ಪ್ರಾಣಿಪಕ್ಷಿಜನ್ಮಗಳಲ್ಲಿಯೂ ನರಕಗಳಲ್ಲಿಯೂ ಹಲವು ಕಾಲ ಸುತ್ತಾಡಿ ಈ ಭರತಕ್ಷೇತ್ರದಲ್ಲಿ ಕಪಿಲನೆಂಬ ಬ್ರಾಹ್ಮಣನಿಗೂ ಗಂಗೆಯೆಂಬ ಬ್ರಾಹ್ಮಣೆತಿಗೂ ಭಾರದ್ವಾಜನೆಂಬ ಮಗನಾಗಿ ಹುಟ್ಟಿದನು. ಅವನು ಕನಕದಂಡಿಯೆಂಬ ಸಂನ್ಯಾಸಿಗೆ ಶಿಷ್ಯನಾಗಿ ಹಲವಾರು ದೇಶಗಳನ್ನು ಸಂಚಾರಮಾಡುತ್ತ ಕನಕಪುರಕ್ಕೆ ಬಂದು ಒಂದು ತಿಂಗಳ ಉಪವಾಸವನ್ನು ಮಾಡುತ್ತ ದೊಡ್ಡ ತಪಸ್ವಿಯಾಗಿ ಆಚರಿಸುತ್ತಿದ್ದನು. ಆ ಪಟ್ಟಣದ ಹರಿವಾಹನನೆಂಬ ರಾಜನು ಕಂಡು ಆ ತಪಸ್ವಿಗೆ ವಿಶೇಷ ಭಕ್ತನಾಗಿ ಸೇವೆಮಾಡುತ್ತಿದ್ದನು. ಕಾಲ ಕಳೆಯಲು ಮತ್ತೊಂದು ದಿನ ಜಿನವರ್ಮನು ಅರಸನೊಂದಿಗೆ ಆ ಸಂನ್ಯಾಸಿಯ ವಾಸಸ್ಥಳಕ್ಕೆ ಹೋದನು. ಆಗ ತಪಸ್ವಿಯು ಜಿನವರ್ಮನನ್ನು ಕಂಡು ಪೂರ್ವಜನ್ಮದ ವೈರದಿಂದ ಸಿಟ್ಟೆಂಬ ಬೆಂಕಿ ಹೆಚ್ಚಾಗಿ, ಕುದಿಯುವ ಮನಸುಳ್ಳವನಾಗಿದ್ದನು. ಅಂತಹ ತಪಸ್ವಿಯನ್ನು

ಗಚ್ಚಿಯೀ ಪಾಂಗಿನೊಳಿನ್ನನೂದಲಾರ್ಪೊದುಣ್ಬೆನಲ್ಲದಾಗಳುಣ್ಬೆನೆಂದು ಪೇಟ್ಪೊಡೆ ಕೇಳ್ದಚ್ಚಗನಾದರಸನಂ ಜಿನವರ್ಮಂ ಕಂದಿಂತೆಂದಂ ದೇವಾ ತಪಸ್ವಿಗಾವ ಪಾಂಗಿನೊಳ್ ಮೆಚ್ಚು ಮೆಚ್ಚದ ಪಾಂಗಿನೊಳುಣ್ಗೆಂದೊದಂಬಟ್ಟನಾಗಳಾ ಗರ್ಭಸುಖಿಯ ಬೆನ್ನೊಳ್ ಪಿರಿಯ ಪರಿಯಾಣಮನಿಟ್ಟವಂ ತೆಕ್ಕನೆ ತೀವಿ ಬಡ್ಡಿಸಿದೊಡೆ ಕುದಿಯುತ್ತಿರ್ದ್ದ ತುಯ್ಯಲಂ ತಣ್ಣಿತ್ತಾಗಿಯಾಜುವನ್ನೆಗಂ ಪಾರುತ್ತಿರ್ದ್ದು ನೀಡುಂ ಬೇಗಮುಂಡು ಸವೆದ ಬಟಿಕೆ, ತಳಿಗೆಯನೆತ್ತಿದೊಡಾ ತಳಿಗೆಯೊಡನೆ ಬೆನ್ನತೊವಲೆಲ್ಲಮೆರ್ದ್ದುಪೋದುದನರಸಂ ಕಂಡೀತಂ ತಪಸ್ವಿಯಲ್ಲಂ ರಾಕ್ಷಸಂ ಪಂಚಮಹಾಪಾತಕನನೀ ಪೊಬಲೊಳಿರಲೀಯದಟ್ಟಿ ಕಳೆಯಿವೆಂದು ನೃಪತಿ ಮುಳಿದೊಡೆ ಜಿನವರ್ಮಂ ತಪಸ್ವಿಗೆ ಮುಳಿಯಲ್ಬೇಡೆಂದು ಬಾರಿಸಿ ಈತಂಗೇನುಂ ದೋಷಮಿಲ್ಲೆನ್ನ ಪೂರ್ವಕೃತಕರ್ಮ್ಮಫಲವಿಪಾಕಮೆಂದು ನೃಪತಿಗೆ ಪೇಳ್ದು ಪರಿವ್ರಾಜಕಂಗೆ ನಿಶ್ಮಲ್ಯಂಗೆಯ್ದುರಸನುಮಂ ಸ್ವಜನ ಪರಿಜನ ಬಂಧುವರ್ಗಮುಮಂ ಬಿಡಿಸಿ ಶ್ರೀವರ್ಮರೆಂಬಾಚಾರ್ಯರ ಪಕ್ಕದೆ ದೀಕ್ಷೆಯಂ ಕೈಕೊಂದು ಮಹಿಷಗಿರಿಯೆಂಬ ಪರ್ವತದೊಳೀ ಪುಣ್ ತೀರ್ವನ್ನೆಗಂ ಕೈಯನೆತ್ತಿಕೊಳ್ಳೆನೆಂದು ಕಾಯೋತ್ಸರ್ಗದಿಂ ನಿಂದೊನಂ ಗೃಧ್ರವಾಯಸಾದಿಗಳ್ ಪುಣ್ಣಂ ತೋಡಿ ತಿನೆ ಮೇರುಪರ್ವತಂಬೊಲಚಳಿತಧೈರ್ಯನಾಗೊಂದು ತಿಂಗಳ್ವರೆಗಂ ಸೈರಿಸಿ

ಕುರಿತು ರಾಜನು - "ನೀವು ನಮ್ಮ ಮನೆಯ ಊಟವನ್ನು ಸ್ವೀಕರಿಸಬೇಕು" ಎಂದು ಪ್ರಾರ್ಥಿಸಿದನು. ಆಗ ಅವನು ಹೀಗೆಂದನು - "ಒಂದು ರೀತಿಯಲ್ಲಿ ನಿಮ್ಮ ಮನೆಯಲ್ಲಿ ಊಟ ಮಾಡುವೆನು- ಈ ಜಿನವರ್ಮನ ಬೆನ್ನಿನ ಮೇಲೆ ಅಡಿಯಿಲ್ಲದ ತಟ್ಟೆಯನ್ನಿಟ್ಟು ಬಿಸಿ ಪಾಯಸವನ್ನು ಉಣ್ಣುವುದು ನನಗೆ ಪ್ರೀತಿ ಈ ರೀತಿಯಲ್ಲಿ ನನಗೆ ಬಡಿಸುವುದಾದರೆ ಊಟಮಾಡುವೆನು, ಅದಲ್ಲವಾದರೆ ಉಣ್ಣೆನು" - ಎಂದು ಹೇಳಿದಾಗ ಕೇಳಿ ವ್ಯಥಿತನಾದ ಅರಸನನ್ನು ಜಿನವರ್ಮನು ಕಂಡು ಹೀಗೆಂದನು. - "ದೇವಾ, ಸಂನ್ಯಾಸಿಗೆ ಯಾವರೀತಿ ಮೆಚ್ಚುಗೆಯೋ ಅಂತಹ ಮೆಚ್ಚಿನ ರೀತಿಯಲ್ಲಿಯೇ ಉಣ್ಣಲಿ" ಎಂದು ಒಪ್ಪಿದನು. ಆಗ ಜನ್ಮಸುಖಿಯಾದ ಅವನ ಬೆನ್ನ ಮೇಲೆ ದೊಡ್ಡ ಹರಿವಾಣವನ್ನಿಟ್ಟು, ಕುದಿಯುವ ಪಾಯಸವನ್ನು ಅದು ಭರ್ತಿಯಾಗಿ ತುಂಬುವಂತೆ ಬಡಿಸಲು ಅದು ತಣ್ಣಗೆ ಆಗುವ ತನಕವೂ ನಿರೀಕ್ಷಿಸುತ್ತಿದ್ದು ಬಹಳ ಬೇಗ ಊಟಮಾಡಿ ಮುಗಿದ ಮೇಲೆ ತಟ್ಟೆಯನ್ನು ಎತ್ತಿದಾಗ ಆ ತಟ್ಟೆಯೊಂದಿಗೆ ಬೆನ್ನ ಚರ್ಮವೆಲ್ಲಾ ಎದ್ದುಹೋದುದನ್ನು ರಾಜನು ಕಂಡನು. "ಇವನು ಸಂನ್ಯಾಸಿಯಲ್ಲ ರಾಕ್ಷಸನು. ಪಂಚಮಹಾಪಾಪಮಾಡಿದವನು. ಇವನನ್ನು ಈ ಪಟ್ಟಣದಲ್ಲಿ ಇರಲಿಕ್ಕೆ ಬಿಡದೆ ಓಡಿಸಿಬಿಡಿ!" ಎಂದು ರಾಜನು ಕೋಪದಿಂದ ನುಡಿದನು. ಆಗ ಜಿನವರ್ಮನು - "ತಪಸ್ವಿಯ ಮೇಲೆ ಕೋಪಿಸಬೇಡ" ಎಂದು ಅವನನ್ನು ತಡೆದು, "ಇವನಿಗೆ ಏನೊಂದು ದೋಷವಿಲ್ಲ, ನಾನು ಹಿಂದೆ ಮಾಡಿದ ಕರ್ಮದ ಫಲದ ಪಕ್ವತೆಯಿದು" ಎಂದು ರಾಜನಿಗೆ ಹೇಳಿ, ಸಂನ್ಯಾಸಿಗೆ ತೊಂದರೆಯಾಗದಂತೆ ಮಾಡಿ, ರಾಜನನ್ನೂ ಸ್ವಜನರನ್ನೂ ಸೇವಕರನ್ನೂ ಬಂಧುವರ್ಗವನ್ನೂ ಬಿಡಿಸಿದನು. ಅಮೇಲೆ, ಶ್ರೀವರ್ಮರೆಂಬ ಆಚಾರ್ಯರ ಬಳಿಯಲ್ಲಿ ದೀಕ್ಷೆಯನ್ನು ಸ್ವೀಕರಿಸಿ, ಮಹಿಷಗಿರಿ ಎಂಬ ಪರ್ವತದಲ್ಲಿ "ಈ ಬೆನ್ನಿನ ಹುಣ್ಣು ಗುಣವಾಗುವವರೆಗೂ ಕೈಯನ್ನು ಎತ್ತಿಕೊಳ್ಳುವುದಿಲ್ಲ" ಎಂದು ದೇಹತ್ಯಾಗಕ್ಕಾಗಿ ನಿಂತುಕೊಂಡನು. ಹದ್ದು ಕಾಗೆಗಳು ಅವನ ಹುಣ್ಣನ್ನು ತೋಡಿ ತಿನ್ನುತ್ತಿರಲು, ಅವನು ಮೇರುಪರ್ವತದಂತೆ ಅಲುಗಾಡದಂತಹ ಧೈರ್ಯವುಳ್ಳವನಾಗಿ

ಸಮಾಧಿಮರಣದಿಂ ಮುಡಿಪಿಯಚ್ಯುತೇಂದ್ರನಾಗಿ ಪುಟ್ಟಿಯಲ್ಲಿಯ ದೇವಲೋಕದ ದಿವ್ಯಸುಖಮಂ ಪಲಕಾಲಮನುಭವಿಸಿ ಬಂದಿಲ್ಲಿ ಸನತ್ಕುಮಾರನಾದನಾ ಪರಿವ್ರಾಜಕನುಮಾಯಚ್ಯುತೇಂದ್ರಂಗೆ ವಾಹನದೇವನಾದೊನಲ್ಲಿಂ ಬಚ್ಚಿ ಬಂದಿಲ್ಲಿ ಚತುರ್ಗತಿ ಸಂಸಾರದೊಳ್ ನೀಡುಂ ತೊಟಲ್ದಂಜನಗಿರಿಯೆಂಬ ಪರ್ವತದ ತಟದೊಳ್ ತಾಪಸಾಶ್ರಮದೊಳ್ ವಸಿಷ್ಠನೆಂಬ ತಾಪಸಂಗಂ ಘೂಕೆಯೆಂಬ ತಾಪಸಿಗಂ ಬಕನೆಂಬೊಂ ಮಗನಾಗಿ ಪುಟ್ಟಿ ತಾಪಸತಪಮಂ ಕೈಕೊಂಡು ನೆಗಟ್ಟು ಮಾಡಿದು ಸಿತಯಕ್ಷನಾದನೆಂದಿಂತಿರ್ವ್ವರ ಪೂರ್ವಭವವೈರಸಂಬಂಧಿಯಪ್ಪ ಕಥೆಯಂ ಸವಿಸ್ತರಮಾಗಿ ಸುಮಾಳಿಗಳೆಂಬವಧಿಜ್ಞಾನಿಗಳಪ್ಪ ಚಾರಣರಿಸಿಯರ್ ಪೇಳೆ ಎನ್ನ ಸ್ವಾಮಿಯಪ್ಪ ಖಚರೇಂದ್ರಂ ಕೇಳ್ದಾದಮಾನುಂ ಸಂತುಷ್ಟಚಿತ್ತನಾಗಿ ಭಟಾರರಂ ಬಂದಿಸಿ ತನ್ನ ಪೊಬಲ್ಗೆವ್ಪೋದನ್ ಎಂದಿಂತು ಕಥಾಸಂಬಂಧಮೆಲ್ಲಮಂ ಕಮಳಮತಿಯೆಂಬ ಬೀಚರವಿಳಾಸಿನಿ ಸನತ್ಕುಮಾರಂ ಪೇಳಿವೇಳ್ಕೊಡೆ ಮಹೇಂದ್ರಸಿಂಹಂಗೆ ಪೇಳ್ಕೊಳಾ ಅವಸರದೊಳ್ ಕುಮಾರಂ ನಿದ್ರಾಸುಖವಿಮುಕ್ತನಾದೊಡಾತನ ಸಮೀಪಕ್ಕೆ ಮಹೇಂದ್ರಸಿಂಹಂ ಪೋಗಿ ಇಂತೆಂದಂ ನಿನ್ನ ಎಯೋಗದೊಳಪ್ಪ ದುಃಖದಿಂದಂ ವಿಶ್ವಸೇನಮಹಾರಾಜನುಂ ಸಹದೇವಿ ಮಹಾದೇವಿ ಮೊದಲಾಗೊಡೆಯವರ್ಗ್ಗಳ್ಗಿಲ್ಲಂ ಪ್ರಾಣಸಂದೇಹವಾಗಿಕ್ರ್ಮವದಱಿಂ ನಿಮ್ಮ ಪೊಬಲ್ಗೆ ಪೋಗಲ್ವೇಟ್ಕುವೆಂದು ಪೇಳ್ಕೊಡಾತನುಮಂತೆಗೆಯ್ವೆನೆಂದು ತಮ್ಮ ಮಾವಂಗಳಂ ಬಡಿಸಿ ವಿಚಿತ್ರಮಪ್ಪ ರಥಗಜತುರಗ

ಒಂದು ತಿಂಗಳವರೆಗೂ ಸಹಿಸಿದನು. ಅಮೇಲೆ ಸಮಾಧಿಮರಣದಿಂದ ಸತ್ತು ಅಚ್ಯುತ ಎಂಬ ಸ್ವರ್ಗದಲ್ಲಿ ಇಪ್ಪತ್ತೆರಡು ಸಾಗರದಷ್ಟು ಆಯುಷ್ಯವುಳ್ಳವನಾಗಿ ಅಚ್ಯುತೇಂದ್ರನಾಗಿ ಹುಟ್ಟಿದನು. ಅಲ್ಲಿಯ ದೇವಲೋಕದ ದಿವ್ಯವಾದ ಸುಖವನ್ನು ಹಲವು ಕಾಲ ಅನುಭವಿಸಿ ಮತ್ತೆ ಇಲ್ಲಿಗೆ ಬಂದು ಸನತ್ಕುಮಾರನಾದನು. ಆ ಸಂನ್ಯಾಸಿ ಆ ಅಚ್ಯುತೇಂದ್ರನಿಗೆ ವಾಹನದೇವತೆಯಾಗಿದ್ದನು. ಅವನು ಅಲ್ಲಿಂದ ಕೆಳಕ್ಕೆ ಜಾರಿ ಬಂದು ಇಲ್ಲಿ ನಾಲ್ಕು ಗತಿಗಳುಳ್ಳ ಈ ಪ್ರಪಂಚದಲ್ಲಿ ಬಹಳ ಕಾಲ ಸುತ್ತಿ ಅಂಜನಗಿರಿಯೆಂಬ ಪರ್ವತದ ತಪ್ಪಲಿನ ಋಷಿಯಾಶ್ರಮದಲ್ಲಿ ವಸಿಷ್ಠನೆಂಬ ಋಷಿಗೂ ಘೂಕೆಯೆಂಬ ಋಷ್ಯಾಂಗನೆಗೂ ಬಕನೆಂಬ ಮಗನಾಗಿ ಹುಟ್ಟಿದನು. ಅವನು ಋಷಿಯಂತೆ ತಪಸ್ಸನ್ನು ಆಚರಿಸಿ ಸತ್ತು ಸಿತಯಕ್ಷನಾದನು. ಹೀಗೆ ಇಬ್ಬರ ಪೂರ್ವಜನ್ಮದ ದ್ವೇಷಕ್ಕೆ ಸಂಬಂಧಿಸಿದ ಕಥೆಯನ್ನು ಸುಮಾಳಿ ಎಂಬ ತ್ರಿಕಾಲಜ್ಞಾನಿಗಳಾದ ಚಾರಣಋಷಿಗಳು ವಿಸ್ತಾರವಾಗಿ ಹೇಳಿದರು. ಆಗ ನನ್ನ ಸ್ವಾಮಿಯಾದ ವಿದ್ಯಾಧರರಾಜನು ಕೇಳಿ ಅತ್ಯಂತ ಸಂತೋಷಗೊಂಡ ಮನಸ್ಸಿನವನಾಗಿ ಋಷಿಗಳಿಗೆ ನಮಸ್ಕರಿಸಿ ತನ್ನ ಪಟ್ಟಣಕ್ಕೆ ತೆರಳಿದನು. ಸನತ್ಕುಮಾರನು ಹೇಳಲು ಸೂಚಿಸಿದ ಪ್ರಕಾರ ಕಮಳಮತಿಯೆಂಬ ವಿದ್ಯಾಧರಸ್ತ್ರೀಯು ಮಹೇಂದ್ರಸಿಂಹನಿಗೆ ಈ ರೀತಿಯಾಗಿ ಕಥೆಯ ಸಂಬಂಧವನ್ನೆಲ್ಲಾ ಹೇಳಿದಳು. ಆ ಸಂದರ್ಭದಲ್ಲಿ ಸನತ್ಕುಮಾರನು ನಿದ್ರೆಯ ಸುಖದಿಂದ ಬಿಡುಗಡೆ (ಎಚ್ಚರ)ಗೊಳ್ಳಲು ಅವನ ಬಳಿಗೆ ಮಹೇಂದ್ರಸಿಂಹನು ಹೋಗಿ ಹೀಗೆಂದನು - "ನಿನ್ನ ಅಗಲಿಕೆಯಿಂದಾದ ದುಃಖದಿಂದ ವಿಶ್ವಸೇನಮಹಾರಾಜನೂ ಸಹದೇವಿ ಮಹಾರಾಣಿ ಮುಂತಾಗಿರುವವರೆಲ್ಲ ಜೀವಿಸಿರುವುದೇ ಸಂಶಯವೆಂಬ ಸ್ಥಿತಿಯಲ್ಲಿದ್ದಾರೆ. ಆದುದರಿಂದ ನಿಮ್ಮ ಪಟ್ಟಣಕ್ಕೆ ಈಗ ಹೋಗಬೇಕಾಗಿದೆ" ಎನ್ನಲು ಸನತ್ಕುಮಾರನು "ಹಾಗೆಯೇ ಮಾಡುವೆನು" ಎಂದು ತನ್ನ ಮಾವನನ್ನು ಅಗಲಲು ಅಪ್ಪಣೆ ಪಡೆದನು.

ಗರುದ ಕಳಹಂಸ ಮಯೂರ ಮಕರ ಸಿಂಹ ವಿಮಾನಾಧಿರೂಢರ್ಕಳಪ್ಪ ವಿದ್ಯಾಧರರ್ಕಳುಮಷ್ಟ ಸಹಸ್ರ ಸಂಖ್ಯಾ ಪ್ರಮಾಣಮಪ್ಪರಸಿಯರ್ಕಳುಂಬೆರಸು ಮಹಾವಿಭೂತಿಯಿಂದಂ ಬಂದು ಹಸ್ತಿನಾಪುರಮಂ ಪೊಕ್ಕನಿಬರುಂ ವಿಶ್ವಸೇನಮಹಾರಾಜಂಗಂ ಸಹದೇವಿಮಹಾದೇವಿಗಂ ಸಾಷ್ಟಾಂಗಮೆಱಗಿ ಪೊಡೆವಟ್ಟು ಅವರಾಶೀರ್ವಚನಸಹಸ್ರಂಗಳನಾಂತು ಕೊಂಡು ಸುಖದಿಂದಿರೆ ಸನತ್ಕುಮಾರಂಗೆ ಚಕ್ರಂ ಪುಟ್ಟಿ ಸಕಳ ಚಕ್ರವರ್ತಿಯಾಗಿ ಭೋಗೋಪಭೋಗಂಗಳೆಂಬ ಮಹಾಸಮುದ್ರದೊಳ್ ಪಲಕಾಲಂ ಕ್ರೀಡಿಸುತ್ತಿರ್ಪನ್ನೆಗಂ ಮತ್ತೊಂದು ದಿವಸಂ ಸೌಧರ್ಮಕಲ್ಪದೊಳಾ ಸೌಧರ್ಮೇಂದ್ರಂ ತನ್ನ ದೇವಸಭೆಯ ನಡುವೆ ಸಿಂಹಾಸನಮಸ್ತಕಸ್ಥಿತಂ ದೇವರ್ಕಳಿಂ ಪರಿವೇಷ್ಟಿತನಾಗಿ ಸೌದಾಮಿನಿಯೆಂಬ ನಾಟಕಮಂ ನೋಡುತ್ತಿರ್ಪನ್ನೆಗಂ ಈಶಾನಕಲ್ಪದಿಂದಂ ಸಹೋತ್ಪನ್ನಸಂಗಮದೇವಂ ಬಂದು ಸೌಧರ್ಮೇಂದ್ರನ ಸಭೆಯನವಯವದಿಂ ಪೊಕ್ಕಿರ್ದಾಗಳಾ ಸಭೆಯೊಳಿರ್ದ್ದ ದೇವರ್ಕಳ ರೂಪುಂ ತೇಜಮುಂ ಲಾವಣ್ಯಮುಮೆಲ್ಲಮಂ ಮಾಸಿಸಿ ತನ್ನ ತೇಜಮೆಯಗ್ಗಳಮಾಗಿರ್ದ್ದೊಡೆಂತು ಚಂದ್ರನುದಯಂಗೆಯ್ದಾಗಳ್ ಗ್ರಹನಕ್ಷತ್ರತಾರೆಗಳ ತೇಜಂ ಕುಂದುಗುಮಂತೆಲ್ಲರ ತೇಜಮುಮಂ ಕುಂದಿಸಿ ತಾನೆಯಗ್ಗಳಮಾಗೆ ಬೆಳಗುತ್ತಿರ್ದೊನಂ ದೇವರ್ಕಳೆಲ್ಲಂ ವಿಸ್ಮಯಂಬಟ್ಟು ನೋಡಿ ಸೌಧರ್ಮೇಂದ್ರನಿನಿಂತೆಂದು ಬೆಸಗೊಂಡರ್ ಸ್ವಾಮಿ ಈ ಸಂಗಮನೆಂಬ ದೇವನತಿಶಯಮಪ್ಪ ರೂಪುಂ ಲಾವಣ್ಯಮುಂ ತೇಜಮುಂ ದ್ವಾದಶಾದಿತ್ಯರ್ಕಳೊರ್ಮೊದಲೆ ಉದಯಂಗೆಯ್ದಂತೆ ಬೆಳಗಿಪ್ಪುದೇ ಕಾರಣದಿಂದಾದುದೆಂದು ಬೆಸಗೊಂಡೊಡಿಂತೆಂದು ಸೌದರ್ಮೇಂದ್ರಂ ಪೇಟಲ್ ತೊದಂಗಿದನ್ ಈತಂ ಮುನ್ನಿನ ಭವದೊಳ್

ಆಶ್ಚರ್ಯಕರವಾದ ರಥ, ಆನೆ, ಕುದುರೆ, ಗರುಡ, ಹಂಸ, ನವಿಲು, ಮೊಸಳೆ, ಸಿಂಹ, ವಿಮಾನ - ಮುಂತಾದುವುಗಳಲ್ಲಿ ಕುಳಿತ ವಿದ್ಯಾಧರರನ್ನೂ ಎಂಟು ಸಾವಿರ ಸಂಖ್ಯೆಯ ಗಣನೆಯುಳ್ಳ ರಾಣಿಯರನ್ನೂ ಕೂಡಿಕೊಂಡು ಮಹಾ ವೈಭವದಿಂದ ಬಂದು ಹಸ್ತಿನಾಪುರವನ್ನು ಪ್ರವೇಶಿಸಿದನು. ಅವರೆಲ್ಲರೂ ವಿಶ್ವಸೇನಮಹಾರಾಜನಿಗೂ ಸಹದೇವಿ ಮಹಾರಾಜ್ಞಿಗೂ ಸಾಷ್ಟಾಂಗ ವಂದನೆಯನ್ನು ಮಾಡಿ ಅವರಿಂದ ಲಕ್ಷಗಟ್ಟಲೆಯ ಆಶೀರ್ವಾದಗಳನ್ನು ಸ್ವೀಕರಿಸಿಕೊಂಡು ಸುಖದಿಂದಿದ್ದನು. ಹೀಗಿರಲು ಅವನ ಆಯುಧಾಗಾರದಲ್ಲಿ ಒಂದು ಚಕ್ರ ಉದ್ಭವಿಸಿತು. ಅವನು ಸಮಸ್ತ ಭೂಮಂಡಲಕ್ಕೂ ಒಡೆಯನಾದ ಸಾರ್ವಭೌಮನಾಗಿ ಬೋಗ ಉಪಭೋಗಗಳೆಂಬ ದೊಡ್ಡ ಸಮುದ್ರದಲ್ಲಿ ಹಲವು ಕಾಲ ಅಡುತ್ತ ಇದ್ದನು. ಆ ಮೇಲೆ, ಒಂದಿ ದಿವಸ ಸೌಧರ್ಮವೆಂಬ ಸ್ವರ್ಗದಲ್ಲಿ ಸೌಧರ್ಮೇಂದ್ರನು ತನ್ನ ದೇವತೆಗಳ ಸಭೆಯ ಮಧ್ಯದಲ್ಲಿ ಸಿಂಹಾಸನದ ಮೇಲೆ ಕುಳಿತು ದೇವತೆಗಳಿಂದ ಸುತ್ತುವರಿಯಲ್ಪಟ್ಟವನಾಗಿ ಸೌದಾಮಿನಿ ಎಂಬ ನಾಟಕವನ್ನು ನೋಡುತ್ತಿದ್ದನು. ಆಗ ಈಶಾನ ಎಂಬ ಸ್ವರ್ಗದಿಂದ ತನ್ನ ಸಂಗಡವೇ ಹುಟ್ಟಿದ ಸಂಗಮದೇವನು ಬಂದು ಸೌಧರ್ಮೇಂದ್ರನ ಸಭೆಯನ್ನು ಸುಲಭವಾಗಿ ಪ್ರವೇಶಿಸಿದನು. ಆಗ ಆ ಸಭೆಯಲ್ಲಿದ್ದ ದೇವತೆಗಳ ರೂಪ, ಕಾಂತಿ, ಸೌಂದರ್ಯವೆಲ್ಲವನ್ನೂ ಮಸುಕಾಗಿ ಕಾಣಿಸುವ ತನ್ನ ಕಾಂತಿಯೇ ಅತಿಶಯವಾಗಿ ಕಾಣಿಸುತ್ತಿದ್ದು, ಚಂದ್ರನು ಮೂಡಿಕೊಂಡು ಬಂದಾಗ ಗ್ರಹ ನಕ್ಷತ್ರ ತಾರೆಗಳ ಕಾಂತಿ ಹೇಗೆ ಕುಗ್ಗಿದುದಾಗಿ ಕಾಣುವುದೋ ಹಾಗೆಯೇ ಸಂಗಮದೇವನ ಕಾಂತಿ ಇತರ ಎಲ್ಲರ ಕಾಂತಿಯನ್ನೂ ಕುಂದಿಸಿ ತನ್ನದೇ ಹೆಚ್ಚಾಗಿ ಕಾಣುತ್ತಿತ್ತು. ಈ ರೀತಿ ಬೆಳಗುತ್ತಿದ್ದವನನ್ನು ದೇವತೆಗಳೆಲ್ಲ ಆಶ್ಚರ್ಯಪಟ್ಟು ನೋಡಿ, ಸೌಧರ್ಮೇಂದ್ರನನ್ನು

ಈ ಜಂಬೂದ್ವೀಪದ ಪೂರ್ವವಿದೇಹದೊಳ್ ಸೀತೆಯೆಂಬ ತೊಱೆಯ ಬಡಗಣದೆಸೆಯೊಳ್ ಪುಷ್ಕಾಳಾವತಿಯೆಂಬುದು ನಾಡಲ್ಲಿ ಪುಂಡರೀಕಿಣಿಯೆಂಬುದು ಪೊಲಿಲದನಾಳ್ವೊಂ ಸಕಲ ಚಕ್ರವರ್ತಿ ವಿಮಳವಾಹನನೆಂಬರಸನಾತನ ಮಹಾದೇವಿ ವಿಮಳಮತಿಯೆಂಬೊಳಾ ಇವ್ವರ್ಗ್ಗಂ ಪುಟ್ಟದೊಂ ಮಗಂ ಕ್ಷೀರಕುಮಾರನೆಂಬೊನಾತಂ ವೈರಾಗ್ಯಮನೊಡೆಯನಾಗಿ ತಪಂಬಡಲ್ಕೆಂದು ಬಗೆದಿರ್ದೊಡೆ ತಾಯ್ ತಪಂಬಡಲೀಯದೆನಿತಾನುಂ ತೆಱದಿಂ ನುಡಿದು ತಗುಳ್ದೊಡೆ ತಾಯ ವಚನಮನತಿಕ್ರಮಿಸಲಾಱದೆ ಮನೆಯೊಳಿರ್ದ್ದಂತೆ ಬ್ರಹ್ಮಚರ್ಯಂ ಮೊದಲಾಗೊಡೆಯ ವ್ರತಂಗಳಂ ಪ್ರತಿಪಾಳಿಸಿ ಆಚಾಮ್ಲವರ್ಧನಮೆಂಬ ನೋಂಪಿಯಂ ಪನ್ನೆರಡು ವರ್ಷಂಬರಂ ನೋಂತು ಸಮಾಧಿಮರಣದಿಂದಂ ಮುಡಿಪೆ ಇಂತಪ್ಪ ರೂಪುಂ ತೇಜಮುಂ ಲಾವಣ್ಯಮುಮದಱಿಂದೀತಂಗಾದುದೆಂದು ಸೌಧರ್ಮೇಂದ್ರಂ ಪೇೞ್ದೊಡೆ ಮತ್ತಂ ದೇವರ್ಕ್ಕಳಿಂತೆಂದು ಬೆಸಗೊಂಡರ್ ಸ್ವಾಮಿ ಈತನಂತಪ್ಪ ರೂಪುಂ ತೇಜಮುಂ ಲಾವಣ್ಯಮುಮನೊಡೆಯರ್ ಪೆಱರಾರಾನುಮೊಳರೆ ಎಂದು ಬೆಸಗೊಂಡೊಡೆ ಸೌಧರ್ಮೇಂದ್ರನೆಂದನೊಳನ್ ಹಸ್ತಿನಾಪುರದೊಳ್ ಕುರುವಂಶದಾತಂ ಸನತ್ಕುಮಾರನೆಂಬೊಂ ಚಕ್ರವರ್ತಿಯಾತಂ ದೇವರ್ಕಳ ರೂಪುಂ ಲಾವಣ್ಯಮುಂ ತೇಜಮುಮನೊಡೆಯನಾದಮಾನುಮಗ್ಗಳಮೆಂದು ಪೇೞ್ದೊಡೆ ಇಂದ್ರನ ಮಾತಂ ನಂಬದೆ ವಿಜಯ ವೈಜಯಂತರೆಂಬರಿರ್ವರ್ ದೇವರ್ಕಳ್ ಪಾರ್ವರ ರೂಪು ಕೈಕೊಂಡು ಹಸ್ತಿನಾಪುರಕ್ಕೆ ಸನತ್ಕುಮಾರಚಕ್ರವರ್ತಿಯ ರೂಪಂ ನೋಡಲೆಂದು ಬಂದು ಬಾಗಿಲೊಳಿರ್ದ್ದ ಪಡಿಯಱಿರನೆಂದರ್-

ಹೀಗೆ ಕೇಳಿದರು - "ಪ್ರಭೂ, ಈ ಸಂಗಮದೇವನ ಹೆಚ್ಚಾದ ರೂಪವೂ ಸೌಂದರ್ಯಕಾಂತಿಯೂ ಹನ್ನೆರಡು ಸೂರ್ಯರು ಏಕಕಾಲದಲ್ಲಿ ಉದಯಿಸಿದ ಹಾಗೆ ಬೆಳಕು ಕೊಡುವುದಕ್ಕೆ ಕಾರಣವೇನು ?" ಎಂದು ದೇವತೆಗಳು ಕೇಳಲು, ಸೌಧರ್ಮೇಂದ್ರನು ಈ ರೀತಿ ಹೇಳತೊಡಗಿದನು - ಈತನು ಹಿಂದಿನ ಜನ್ಮದಲ್ಲಿ ಕ್ಷೀರಕುಮಾರನಾಗಿದ್ದನು. ಈ ಜಂಬೂದ್ವೀಪದ ಪೂರ್ವವಿದೇಹದಲ್ಲಿ ಸೀತಾನದಿಯ ಉತ್ತರ ದಿಕ್ಕಿನಲ್ಲಿ ಪುಷ್ಕಳಾವತಿ ಎಂಬ ನಾಡಿದೆ. ಅಲ್ಲಿ ಪುಂಡರೀಕಿಣಿಯೆಂಬ ಪಟ್ಟಣವನ್ನು ಇಡೀ ಭೂಮಂಡಲಕ್ಕೆ ಒಡೆಯನಾದ ವಿಮಳವಾಹನನೆಂಬ ರಾಜನು ಆಳುತ್ತಿದ್ದನು. ಅವನ ಮಹಾರಾಣಿ ವಿಮಳಮತಿ ಎಂಬವಳು. ಆ ದಂಪತಿಗಳಿಗೆ ಕ್ಷೀರಕುಮಾರನೆಂಬವನು ಮಗನು. ಅವನು ವೈರಾಗ್ಯವಂತನಾಗಿ ತಪಸ್ಸು ಮಾಡಬೇಕೆಂದು ಬಗೆದನು. ಆದರೆ ಅವನ ತಾಯಿ ಅವನನ್ನು ತಪಸ್ಸಿಗೆ ಹೋಗಲು ಬಿಡದೆ, ಎಷ್ಟೋ ರೀತಿಯಿಂದ ನುಡಿದು ಒತ್ತಾಯ ಪಡಿಸಿದಳು. ಕ್ಷೀರಕುಮಾರನು ತಾಯಿಯ ಮಾತನ್ನು ಮೀರಲಾರದೆ ಮನೆಯಲ್ಲಿದ್ದುಕೊಂಡೇ ಬ್ರಹ್ಮಚರ್ಯ ಮುಂತಾಗಿರುವ ವ್ರತಗಳನ್ನು ನಡೆಸಿಕೊಂಡು ಆಚಾಮ್ಲವರ್ಧನ ಎಂಬ ವ್ರತವನ್ನು ಹನ್ನೆರಡು ವರ್ಷಗಳವರೆಗೆ ನಡೆಸಿಕೊಂಡು ಬಂದು ಸಮಾಧಿಮರಣದಿಂದ ಸತ್ತುಹೋದನು. ಅದರಿಂದಲೇ ಈತನಿಗೆ ಇಂತಹ ರೂಪವೂ ಕಾಂತಿಯೂ ಸೌಂದರ್ಯವೂ ಆಗಿವೆ - ಎಂದು ಸೌಧರ್ಮೇಂದ್ರನು ಹೇಳಿದನು. ಅನಂತರ ದೇವತೆಗಳು ಹೀಗೆ ಕೇಳಿದರು - "ಪ್ರಭೂ, ಈ ಸಂಗಮದೇವನಂತಹ ರೂಪವೂ ಕಾಂತಿಯೂ ಸೌಂದರ್ಯವೂ ಉಳ್ಳವರು ಬೇರೆ ಯಾರಾದರೂ ಇರುವರೆ ?" ಎಂದು ಕೇಳಲು ಸೌಧರ್ಮೇಂದ್ರನು ಹೇಳಿದನು. "ಇರುವನು. ಹಸ್ತಿನಾಪುರದಲ್ಲಿ ಕುರುವಂಶದವನಾದ ಸನತ್ಕುಮಾರನೆಂಬ ಚಕ್ರವರ್ತಿ ಇರುವನು. ಅವನು ದೇವತೆಗಳ ರೂಪ, ಸೌಂದರ್ಯ, ಕಾಂತಿಗಳನ್ನು ಉಳ್ಳವನು.

ನಿಮ್ಮರಸಂಗಿಂತೆಂದು ಪೇಟಿಂ ಗೆಂಟಱಿಂ ಬಂದೆವು ನಿಮ್ಮ ರೂಪನಟ್ತೆವಟ್ಟು ನೋದಲ್ಕೆಂದೊಡವರುಂ ಪೋಗಿ ತಮ್ಮರಸಂಗಱಿಪಿದೊಡೆ ಅರಸನನುಮತದಿಂದವರರಮನೆಯಂ ಪೊಕ್ಕರಸನ ಸಾರೆವೋಗಿ ನೋಟ್ಪಾಗಳರಸಂ ಸುಗಂಧತೈಲದಿಂ ಮೆಯ್ಯನಭ್ಯಂಗನಂಗೆಯ್ದು ಮಜ್ಜನಂಬುಗಲೆಂದಿರ್ದ್ದವಸರದೊಳ್ ದೇವರ್ಕಳ್ ಸನತ್ಕುಮಾರ ಚಕ್ರವರ್ತಿಯ ರೂಪಂ ವಾಳಾಗ್ರದಿಂ ತೊಟ್ಟು ನಖಾಗ್ರಂಬರೆಗಗ್ರದಿಂ ತೊಟ್ಟು ವಾಳಾಗ್ರಂಬರೆಗಂ ಏಱಿಯುಮಿಟಿಯೆಯುಂ ನೀಡು ಭಾವಿಸಿ ನೋಡಿ ಚೋದ್ಯಂಬಟ್ಟಂತು ರೂಪುಂ ತೇಜಮುಂ ಗಾಡಿಯುಂ ಯೌವನಮುಂ ದೇವರ್ಕಳ್ಗಮಿಲ್ಲೆಂದು ಚಕ್ರವರ್ತಿಯ ರೂಪಂ ಪೊಗೞ್ದೊಡರಸನಿಂತೆಂದಂ ನೀಮಾರ್ಗ್ಗೇನೆಂಬರೆಲ್ಲಿಂ ಬಂದಿರೆಂದು ಬೆಸಗೊಂಡೊಡವರೆಂದರ್ ದೇವಲೋಕದಿಂ ಬಂದೆವು ದೇವರ್ಕಳೆವು ಸೌಧರ್ಮಕಲ್ಪದೊಳ್ ದೇವರ್ಕಳ ಸಭೆಯ ನಡುವೆ ಸೌಧರ್ಮೇಂದ್ರಂ ನಿಮ್ಮ ರೂಪನಾದಮಾನುಂ ನಚ್ಚಿ ಬಣ್ಣಿಸಿದೊಡಿಂದ್ರನ ಮಾತಂ ನಂಬದೆ ನಿಮ್ಮಂ ನೋದಲ್ ಬಂದೆಮಿಂದ್ರನ ವ್ಯಾವರ್ಣಿಸುವುದರ್ಕ್ಕಗ್ಗಳಮೆ ನಿಮ್ಮ ರೂಪುಂ ಯೌವನಮುಂ ಲಾವಣ್ಯಮುಮುಂ ಕಂಡೆಮೆಂದು ಪೇೞ್ವಮಿನ್ನೆಮ್ಮ ದೇವಲೋಕಕ್ಕೆ ಪೋಪೆಮೆಂದೊಡರಸಂ ಮನಂ

ಅವರಿಗಿಂತಲೂ ಅತ್ಯತಿಶಯನಾಗಿ ಶ್ರೇಷ್ಠನಾದವನು" - ಎಂದು ಹೇಳಿದನು. ಇಂದ್ರನು ಹೇಳಿದ ಮಾತನ್ನು ನಂಬದೆ, ವಿಜಯ ಮತ್ತು ವೈಜಯಂತ ಎಂಬ ಇಬ್ಬರು ದೇವತೆಗಳು ಬ್ರಾಹ್ಮಣರ ರೂಪವನ್ನು ತಾಳಿದರು. ಸನತ್ಕುಮಾರಚಕ್ರವರ್ತಿಯ ರೂಪವನ್ನು ನೋಡುವುದಕ್ಕಾಗಿ ಹಸ್ತಿನಾಪುರಕ್ಕೆ ಬಂದರು. ಅವರು ಬಾಗಿಲಿನಲ್ಲಿದ್ದ ದ್ವಾರಪಾಲಕರೊಡನೆ ಹೀಗೆಂದರು -"ನಿಮ್ಮ ರಾಜನಿಗೆ ಈ ರೀತಿಯಾಗಿ ತಿಳಿಸಿ - ನಿಮ್ಮ ರೂಪವನ್ನು ಆಸಕ್ತಿಯಿಂದ ನೋಡುವುದಕ್ಕಾಗಿ ನಾವು ದೂರದಿಂದ ಬಂದಿದ್ದೇವೆ" ಹೀಗೆ ಹೇಳಲು ಪ್ರತೀಹಾರರು ಒಳಗೆ ಹೋಗಿ ಅರಸನಿಗೆ ತಿಳಿಸಿದರು. ರಾಜನ ಅಪ್ಪಣೆಯಂತೆ ಆ ದೇವತೆಗಳು ಅರಮನೆಯೊಳಗೆ ಹೋದರು. ಅರಸನ ಸಮೀಪಕ್ಕೆ ಹೋಗಿ ನೋಡುವಾಗ, ಅರಸನು ಸುವಾಸಿತವಾದ ತೈಲವನ್ನು ಮೈಗೆ ಲೇಪಿಸಿದ್ದನು. ಸ್ನಾನಕ್ಕೆ ಹೋಗಲು ಸಿದ್ಧನಾಗಿದ್ದನು. ಈ ಸಂದರ್ಭದಲ್ಲಿ ದೇವತೆಗಳು ಸನತ್ಕುಮಾರಚಕ್ರವರ್ತಿಯ ರೂಪವನ್ನು ತಲೆಯ ಕೂದಲ ತುದಿಯಿಂದ ಹಿಡಿದು ಕಾಲ ಹೆಬ್ಬೆರಳಿನ ಉಗುರ ತುದಿಯವರೆಗೂ ಉಗುರುತುದಿಯಿಂದ ಹಿಡಿದು ತಲೆಗೂದಲ ತುದಿಯವರೆಗೂ ಏರುವಂತೆಯೂ ಇಳಿಯುವಂತೆಯೂ ಅತಿಶಯವಾಗಿ ಭಾವಿಸಿ ನೋಡಿದರು. ಆಶ್ಚರ್ಯಪಟ್ಟು "ಈ ರೀತಿಯ ರೂಪ, ಕಾಂತಿ, ಚೆಲುವು, ಯೌವನಗಳು ದೇವತೆಗಳಿಗೂ ಇಲ್ಲ" ಎಂದು ಸನತ್ಕುಮಾರ ಚಕ್ರವರ್ತಿಯ ರೂಪವನ್ನು ಹೊಗಳಿದರು. ಆಗ ಅರಸನು "ನೀವು ಯಾರು ? ಏನು ಹೇಳಲಿರುವಿರಿ? ಎಲ್ಲಿಂದ ಬಂದಿರಿ ?" ಎಂದು ಕೇಳಲು ಅವರು ಹೀಗೆಂದರು - "ನಾವು ದೇವಲೋಕದಿಂದ ಬಂದಿದ್ದೇವೆ, ದೇವತೆಗಳಾಗಿದ್ದೇವೆ. ಸೌಧರ್ಮವೆಂಬ ಸ್ವರ್ಗದಲ್ಲಿ ಸೌಧರ್ಮೇಂದ್ರನು ದೇವತೆಗಳ ಸಭೆಯ ನಡುವೆ ನಿಮ್ಮ ರೂಪವನ್ನು ಅತಿಶಯವಾಗಿ ನಂಬಿ ವರ್ಣಿಸಿದಾಗ, ನಾವು ಇಂದ್ರನ ಮಾತನ್ನು ನಂಬದೆ ನಿಮ್ಮನ್ನು ನೋಡುವುದಕ್ಕಾಗಿ ಬಂದಿದ್ದೇವೆ. ಇಂದ್ರನು ವರ್ಣಿಸಿದುದಕ್ಕಿಂತ ಶ್ರೇಷ್ಠವಾಗಿ ನಾವು ನಿಮ್ಮ ರೂಪ - ಯೌವನ-ಸೌಂದರ್ಯಗಳನ್ನು ಕಂಡೆವು" -ಎಂದು ಹೇಳಿ "ನಾವು ಇನ್ನು ನಮ್ಮ ದೇವಲೋಕಕ್ಕೆ ಹೋಗುವೆವು"

ಪೆರ್ಚ ತನ್ನೊಳ್ ತನ್ನ ರೂಪಂ ನಚ್ಚಿ ಕಿಜೆದು ಬೇಗಂ ಮಾಣಿಮಭ್ಯಂಗನಂಗೆಯ್ದು ರೂಪಂ ಕಂಡಿರಿಂ ಮಜ್ಜನಂಬೊಕ್ಕು ಪಸದನಂಗೊಂಡಿರ್ದ ರೂಪಂ ನೋದಿ ಪೋಗಿಮೆಂದರಸಂ ನುಡಿದೊಡಂತೆ ಗೆಯ್ವೆಮೆಂದು ದೇವರ್ಕಳಿರ್ದ್ದೊಡರಸನುಂ ಮಜ್ಜನಂಬೊಕ್ಕು ಬೇಗಂ ಸರ್ವಾಭರಣಭೂಷಿತನಾಗಿ ಆಸ್ಥಾನಮಂಟಪದೊಳ್ ಸಿಂಹಾಸನಮಸ್ತಕಸ್ಥಿತನಾಗಿ ಸಾಮಂತಮಹಸಾಮಂತರ್ ಮೂವತ್ತಿರ್ವ್ವಾಸಿರ್ವರ್ ಮಕುಟಬದ್ಧರ್ಕ್ಕಳುಂ ವಿದ್ಯಾಧರರರ್ಕ್ಕಳುಂ ಯಕ್ಷದೇವರ್ಕ್ಕಳುಂ ಬಳಸಿಯುಮಿರ್ದ್ದೊಲಗಿಸೆ ಮೂವತ್ತೆರಡುಂ ಚಾಮರಂಗಳಿಕ್ಕೆ ಸೌಧರ್ಮೇಂದ್ರನಿವ್ವಂತಿರ್ದು ದೇವರ್ಕಳ್ಗೆ ಬಚೆಯಟ್ಟಿ ಬರಿಸಿ ನೋದಿ ಮಿನ್ನೆನ್ನ ರೂಪನೆಂದು ತನ್ನಂ ತೋಱಿದೊಡೆ ದೇವರ್ಕಳ್ ನೋದಿ ವಿಸ್ಮಯಂಬಟ್ಟದೇಂ ಚೋದ್ಯಮೋ

ಶ್ಲೋ॥ ; ಅನೇಕ ರಾಗಸಂಕೀರ್ಣಂ ಘನಲಗ್ನಮಪಿ ಕ್ಷಣಾತ್
ಮಾನುಷಂ ಯೌವನಂ ಕಷ್ಟಂ ನಶ್ಯತೀಂದ್ರಧನುರ್ಯಥಾ ॥

ಎಂದೀ ಕ್ಷಣಮಾತ್ರದೊಳೆ ಮನುಷ್ಯರ ರೂಪುಂ ಗಾಡಿಯುಂ ಬೆಲ್ವುಂ ತೇಜಮುಂ ಯೌವನಮುಂ ಕುಂದಿತ್ತೆನೆ ಚಕ್ರವರ್ತಿಯೆಂದನೆನ್ನ ರೂಪಂ ಮುನ್ನ ನೀಮೆ ಪೊಗಟ್ಪೆರೀಗಳೀಕೆ ಪಟೆದಪ್ಪಿರೆನೆ ದೇವರೆಂದರ್ ಕೇಳರಸಾ ದೇವರ್ಕಳ ತೇಜಮುಂ ಲಾವಣ್ಯಮುಂ ಪುಟ್ಟಿದ ಪ್ರಥಮಸಮಯದಿಂ ತೊಟ್ಟು ಪೆರ್ಚುತ್ತುಂ ಪೋಕುಮಾಯುಷ್ಕದ ನಡುವರೆಗಮಲ್ಲಿಂದತ್ತ ಕುಂದುತ್ತುಂ ಪೋಕುಮಾಯುಷ್ಯಾಂತಂಬರೆಗಂ ಮತ್ತಾಮುಂ ನಿಮ್ಮ ರೂಪಂ ಯೌವನಭರದೊಳಿರ್ದ್ದುದುಮಂ ಕಂಡೆಮೀಗಳಾಯುಷ್ಕಮುಂ ತೇಜಮುಂ ರೂಪುಂ ಲಾವಣ್ಯಮುಂ ಯೌವನಮುಂ ಕಿಜೆದು ಕುಂದಿದುದಂ ಕಂಡೆಮೆನೆ ಚಕ್ರವರ್ತಿ ನೀಮೆಂತಱೆದಿರೆಂದು

ಎಂದರು. ಆಗ ರಾಜನು ಮನಸ್ಸಿನಲ್ಲಿ ಹಿಗ್ಗಿದನು. ತನ್ನ ರೂಪದ ಹಿರಿಮೆಯನ್ನು ತನ್ನಲ್ಲೇ ನಂಬಿ - "ಸ್ವಲ್ಪ ಹೊತ್ತು ತಡೆಯಿರಿ. ಮೈಗೆ ತೈಲ ಹಚ್ಚಿದ ರೂಪವನ್ನು ಕಂಡಿದ್ದೀರಿ. ಸ್ನಾನಮಾಡಿ ಅಲಂಕರಿಸಿಕೊಂಡ ರೂಪವನ್ನು ನೋಡಿದ ನಂತರ ಹೋಗಿ" ಎಂದು ಅರಸನು ಹೇಳಿದನು. 'ಹಾಗೆಯೇ ಮಾಡುವೆವು" ಎಂದು ನುಡಿದು ದೇವತೆಗಳು ನಿಂತುಕೊಂಡರು. ರಾಜನು ಸ್ನಾನವನ್ನು ಮಾಡಿ ಬೇಗನೆ ಎಲ್ಲಾ ಆಭರಣಗಳಿಂದ ಸಿಂಗರಿಸಿಕೊಂಡನು. ಆಸ್ಥಾನದ ಮಂಟಪದಲ್ಲಿ ಸಿಂಹಾಸನದ ಮೇಲೆ ಕುಳಿತುಕೊಂಡನು. ಸಾಮಂತರೂ ಮಹಾಸಾಮಂತರೂ ಮೂವತ್ತೆರಡು ಸಾವಿರ ಕಿರೀಟಧಾರಿಗಳಾದ ರಾಜರೂ ವಿದ್ಯಾಧರರೂ ಯಕ್ಷರೂ ದೇವತೆಗಳೂ ಆವರಿಸಿಕೊಂಡಿದ್ದು ಸಭೆಯಲ್ಲಿ ಸೇರಿದ್ದರು. ಮೂವತ್ತೆರಡು ಚಾಮರಗಳನ್ನು ಬೀಸುತ್ತಿರಲು ಸನತ್ಕುಮಾರನು ಸೌಧರ್ಮೇಂದ್ರನ ಹಾಗೆ ವೈಭವದಿಂದ ಇದ್ದು ದೇವತೆಗಳಿಗೆ ದೂತರನ್ನು ಕಳುಹಿಸಿ ಬರಮಾಡಿದನು. "ಇನ್ನು ನನ್ನ ರೂಪವನ್ನು ನೋಡಿ" ಎಂದು ಅವರಿಗೆ ತನ್ನನ್ನು ತೋರಿಸಿದನು. ಆಗ ಅವರು ಸನತ್ಕುಮಾರನನ್ನು ನೋಡಿ ಆಶ್ಚರ್ಯಪಟ್ಟರು. "ಇದೇನು ಆಶ್ಚರ್ಯವೋ ! (ಕ್ಲೇಶಕರವಾದ ಮನುಷ್ಯನ ಯೌವನವು ಹಲವಾರು ಪ್ರೀತಿ ಸಂಬಂಧಗಳಿಂದ ಕೂಡಿದ್ದರೂ ಗಟ್ಟಿಯಾಗಿ ಹೊಂದಿಕೊಂಡಿದ್ದರೂ, ಮಳೆಬಿಲ್ಲಿನ ಹಾಗೆ, ಅದು ಹಲವಾರು ಬಣ್ಣಗಳಿಂದ ತುಂಬಿದ್ದರೂ ಮೋಡಕ್ಕೆ ಅಂಟಿಕೊಂಡಿದ್ದರೂ ಹೇಗೆ ನಾಶವಾಗುವುದೋ ಹಾಗೆಯೇ ಕ್ಷಣದಲ್ಲಿ ನಾಶವಾಗುತ್ತದೆ.) ಕ್ಷಣದಲ್ಲೇ ಮನುಷ್ಯರ ರೂಪವೂ, ಸೌಂದರ್ಯವೂ ಸೊಬಗೂ ಕಾಂತಿಯೂ ಯೌವನವೂ ಕುಂದುತ್ತದೆ" ಎಂದು ಹೇಳಲು ಚಕ್ರವರ್ತಿಯು "ನನ್ನ

ಬಿಸಗೊಂಡೊಡೆ ದೇವರ್ಕಳಿಂದರೆವುಗವಧಿಜ್ಞಾನವುಂಟಪ್ಪುದಱಿಂದಱಿದೆವು ಮನುಷ್ಯರ್ಗಱಿಯಲಾಗದೆಂದೊಂದು ದ್ರೋಣಿಕೊಂಡಮಂ ತರಿಸಿ ನೀರಂ ತೆಕ್ಕನೆ ತೀವಿಯದಱೊಳಗೆ ಚಮರಿಯನರ್ದ್ದಿ ತೆಗೆದು ಬಳಸಿಯುಂ ಬೀಸಿದಾಗಳ್ ಸಭೆಯೊಳಿರ್ದ ಮಾನಸರ ಮೇಗೆಲ್ಲಂ ನೀರ್ ಪನಿತುದಂ ತೋಱಿ ದೇವರೆಂದರ್ ಪೇಟೆಮೀ ಚಮರಿಯೊಳ್ ತಗುಳ್ದು ಬಯಮಾದನಿತು ನೀರಂ ಕೊಂಡದೊಳ್ ಕುಂದಿದುದಂ ತೋಱಿಮೆಂದೊಡವರುಮಱಿಯದಿರ್ದ್ದೊಡೆಂತಿದಂ ನೀಮಱಿಯಲಾಗದಂತೆ ಮಾನಸರಾಯುಷ್ಯಮುಂ ತೇಜಮುಂ ಲಾವಣ್ಯಮುಂ ಯೌವನಮುಂ ಪ್ರತಿಸಮಯಂ ಕುಂದುತಿರ್ಕುಮಾ ವೀಚಿಮರಣಮಂ ನಿಮಗಱಿಯಲಾಗದೆಂದು ಪೇೞ್ದು ಹೇತು ದೃಷ್ಟಾಂತಂಗಳಿಂದಂ ಪ್ರತ್ಯಕ್ಷಮಂ ತೋಱಿ ಚಕ್ರವರ್ತಿಯಂ ನಂಬಿ ನುಡಿದು ದೇವರ್ಕಳ್ ತಮ್ಮ ಸೌಧರ್ಮಕಲ್ಪಕ್ಕೆ ವ್ಪೋದರ್ ಮತ್ತಿತ್ತ ಸನತ್ಕುಮಾರಚಕ್ರವರ್ತಿಗದುವೆ ನಿರ್ವೇಗಕ್ಕೆ ಕಾರಣಮಾಗಿ ಶರೀರಭೋಗಕ್ಕೆ ಪೇಸಿ ಇಂತೆಂದು ಮನದೊಳ್ ಬಗೆಗುಂ

ರೂಪವನ್ನು ಮೊದಲು ನೀವೇ ಹೊಗಳಿದಿರಿ, ಈಗ ಯಾಕೆ ನಿಂದಿಸುತ್ತೀರಿ?" ಎಂದು ಕೇಳಿದನು. ಅದಕ್ಕೆ ಅವರು - "ದೇವತೆಗಳ ಅರಸನೇ, ಕೇಳು. ಮನುಷ್ಯರ ಕಾಂತಿ ಸೌಂದರ್ಯಗಳು ಜನನದ ಮೊದಲ ಸಮಯದಿಂದ ಪ್ರಾರಂಭವಾಗಿ ಆಯುಷ್ಯದ ನಡುವಿನವರೆಗೆ ಹೆಚ್ಚುತ್ತ ಹೋಗುತ್ತವೆ. ಅಲ್ಲಿಂದ ನಂತರ ಆಯಷ್ಯದ ಕೊನೆವರೆಗೆ ಕಡಮೆಯಾಗುತ್ತ ಹೋಗುತ್ತವೆ. ನಾವು ಯೌವನದ ಭರದಲ್ಲಿದ್ದ ನಿಮ್ಮ ರೂಪವನ್ನು ಕಂಡೆವು. ಈಗ ಆಯುಷ್ಯವೂ ಕಾಂತಿಯೂ ರೂಪವೂ ಸೌಂದರ್ಯವೂ ಯೌವನವೂ ತುಸು ಕಡಮೆಯಾದುದನ್ನು ಕಂಡಿದ್ದೇವೆ" ಎಂದರು. "ನೀವು ಹೇಗೆ ತಿಳಿದುಕೊಂಡಿರಿ?" ಎಂದು ಚಕ್ರವರ್ತಿ ಕೇಳಿದನು. ಆಗ ದೇವತೆಗಳು - "ನಮಗೆ ಅವಧಿಜ್ಞಾನ (ತ್ರಿಕಾಲಜ್ಞಾನ) ವಿರುವುದರಿಂದ ತಿಳಿದಿದ್ದೇವೆ. ಮನುಷ್ಯರಿಗೆ ಇದನ್ನು ತಿಳಿಯಲು ಸಾಧ್ಯವಿಲ್ಲ" ಎಂದರು. ಆ ಮೇಲೆ ಒಂದು ದ್ರೋಣಿ ಕುಂಡವನ್ನು (ದೊನ್ನೆಯಂತಹ ಹರವಿಯನ್ನು)ತರಿಸಿ, ಅದರಲ್ಲಿ ನೀರನ್ನು ಭರ್ತಿಯಾಗಿ ತುಂಬಿಸಿ ಅದರೊಳಗೆ ಚಾಮರವನ್ನು ಅದ್ದಿ ತೆಗೆದು ಸುತ್ತಲೂ ಬೀಸಿದರು. ಆಗ ಸಭೆಯಲ್ಲಿದ್ದ ಮನುಷ್ಯರ ಮೇಲೆಲ್ಲ ನೀರು ಹನಿಗಳಾಗಿ ಬಿದ್ದುದನ್ನು ತೋರಿಸಿ ದೇವತೆಗಳು ಹೀಗೆಂದರು - "ಈ ಚಾಮರದಲ್ಲಿ ಸೇರಿಕೊಂಡು ವ್ಯಯವಾದುದು ಎಷ್ಟು ನೀರು ಎಂಬುದನ್ನು ಹರವಿಯಲ್ಲಿ ಕಡಮೆಯಾದುವನ್ನು ತೋರಿಸಿ" ಎನ್ನಲು ಅವರು ತಿಳಿಯದವರಾಗಿದ್ದರು. "ಇದನ್ನು ಹೇಗೆ ನೀವು ತಿಳಿಯಲಾರಿರೋ ಹಾಗೆಯೇ ಮನುಷ್ಯರ ಆಯುಷ್ಯವೂ ಕಾಂತಿ ಸೌಂದರ್ಯ ಯೌವನಗಳೂ ಪ್ರತಿಯೊಂದು ಹೊತ್ತಿನಲ್ಲೂ ಕುಂದಿಹೋಗುತ್ತಿರುವುದು. ಆ ಅಲೆಯ ಸಾವನ್ನು (ಕ್ಷಿಪ್ರಮರಣವನ್ನು) ನಿಮಗೆ ತಿಳಿಯಲು ಸಾಧ್ಯವಿಲ್ಲ" ಎಂದು ಆ ದೇವತೆಗಳು ಹೇಳಿ ಕಾರಣಗಳಿಂದಲೂ ದೃಷ್ಟಾಂತಗಳಿಂದಲೂ ಸಂಗತಿಯನ್ನು ಕಣ್ಣೆದುರಿನಲ್ಲಿ ಕಾಣಿಸಿ, ಚಕ್ರವರ್ತಿ ನಂಬುವ ಹಾಗೆ ಹೇಳಿ, ತಮ್ಮ ಸೌಧರ್ಮಸ್ವರ್ಗಕ್ಕೆ ತೆರಳಿದರು. ಆಮೇಲೆ, ಇತ್ತ ಸನತ್ಕುಮಾರಮಹಾರಾಜನಿಗೆ ಅದೇ ಘಟನೆ ವೈರಾಗ್ಯಕ್ಕೆ ಕಾರಣವಾಯಿತು. ಅವನು ದೇಹಸುಖಕ್ಕೆ ಅಸಹ್ಯಪಟ್ಟು ಮನಸ್ಸಿನಲ್ಲಿ ಹೀಗೆ ಭಾವಿಸಿದನು. (ರೂಪ, ಪ್ರಾಯ, ಆಯುಸ್ಸು, ಇಂದ್ರಿಯಗೋಚರವಿಷಯಗಳು,

ವೃತ್ತ ॥ ರೂಪಂ ಯೌವನಮಾಯುರಕ್ಷವಿಷಯಾ ಭೋಗೋಪಭೋಗಾ ವಪುಃ
ವೀರ್ಯಂ ಸ್ವೇಷ್ಟಸಮಾಗಮೋ ವಸುಮತಿಸ್ಸೌಭಾಗ್ಯ ಭಾಗ್ಯಾದಯಃ
ನೋ ನಿತ್ಯಾಃ ಸ್ಫುಟಮಾತ್ಮನಸ್ಸಮುದಿತ ಜ್ಞಾನೇಕ್ಷಣಾಭ್ಯಾಮ್ಯತೇ
ಶೇಷಾ ಇತ್ಯನುಚಿಂತಯುಂತು ಸುಧಿಯಃ ಸರ್ವೇ ಸದಾಽನಿತ್ಯತಾಂ

ಶ್ಲೋಕ ॥ ಆದೌ ಜನ್ಮಜರಾರೋಗೌ ಮಧ್ಯೇಷ್ಯಂತೇ ಖಳಾಂತಕಃ
ಇತಿ ಚಕ್ರೈಕ ಸಂಭ್ರಾಂತಿರ್ಜಂತೋರ್ಮಧ್ಯೇ ಭವಾರ್ಣವಂ

ಎಂದಿಂತು ವೈರಾಗ್ಯಮಂ ಭಾವಿಸಿ ವಿಜಯಕುಮಾರನೆಂಬ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ಪರಿವಾರಕ್ಕೆಲ್ಲಂ ನಿಶ್ಯಲ್ಯನಾಗಿ ಬಾಹ್ಯಾಭ್ಯಂತರಪರಿಗ್ರಹಂಗಳೆಲ್ಲಮಂ ತೊಱೆದು ಪಲಂಬರ್ ಮಕುಟಬದ್ಧರ್ಕಳಪ್ಪರಸುಮಕ್ಕಳ್ವೆರಸು ವಿನಯಂಧರಭಟಾರರ ಪಕ್ಕದೆ ತಪಂಬಟ್ಟು ದೀಕ್ಷೋಪವಾಸ ತ್ರಿರಾತ್ರಂಗೆಯ್ದು ಶರೀರಸಂಧಾರಣನಿಮಿತ್ತಂ ಚರಿಗೆವೊಕ್ಕೊಡೊರ್ವಳ್ ಬಡಬರ್ದಿನಿಱಿಸಿ ಪ್ರಥಮ ದಿವಸದೊಳೆ ಪಾರಕಿನ ಕೂಬುವುವರೆಯುವೆಣ್ಣೆಯುವುಮಾಡಿನಳಿಯುವುಮಂ ಬಡ್ಡಿಸಿ ದೊಡದನಮೃತಮನುಣ್ಬಂತುಂಡು ಮತ್ತಂ ತ್ರಿರಾತ್ರಕ್ಕೆ ಪಚ್ಚಖ್ಖಾಣಂಗೊಂಡರಾ ಕಾಲದಿ ತೊಟ್ಟಾಹಾರದೊಳಪ್ಪ ದೋಷದಿಂದಂ ಕಚ್ಚುಜರಯಾಸ ಸೋಸೋ ಭತ್ತಚ್ಛರ್ದಿ ಅಚ್ಚಿಕುಚ್ಚದುಕ್ಕಾಣಿ ಎಂದಿವು ಮೊದಲಾಗೊಡೆಯವೇಱುನೂಱು ಬ್ಯಾಧಿಗಳಂ ನೂಱುವರುಷಂಬರಂ ಒಳ್ಪಿತ್ತಾಗೆ ಸೈರಿಸಿ

ಸುಖಾನುಭವಗಳು, ದೇಹ, ಶಕ್ತಿ, ತನ್ನ ಪ್ರೀತಿಯವರ ಸಹವಾಸ ಭೂಮಿ (ರಾಜ್ಯಾಧಿಕಾರ), ಸೊಬಗು ಐಶ್ವರ್ಯಗಳು, ಶಾಶ್ವತಗಳಲ್ಲ. ಹೀಗೆ ಉಳಿದ ಎಲ್ಲಾ ಬುದ್ಧಿವಂತರು (ಜ್ಞಾನಿಗಳು) ತಮ್ಮಲ್ಲಿ ಸರಿಯಾಗಿ ಮೂಡಿದ ಜ್ಞಾನವೆಂಬ ಕಣ್ಣುಗಳಿಂದ ಸರಿಯಾಗಿ ಅನಿತ್ಯವೆಂಬುದನ್ನು ಸ್ಪಷ್ಟವಾಗಿ ಯೋಚಿಸಲಿ.) (ಮೊತ್ತ ಮೊದಲು ಜನಿಸುವುದು, ನಡುವೆ ಮುಪ್ಪು ಮತ್ತು ರೋಗಗಳು. ಮತ್ತು ಕೊನೆಯಲ್ಲಿ ಕೆಟ್ಟವನಾದ ಯಮನು, ಈ ರೀತಿಯಾಗಿ ಹುಟ್ಟುಸಾವುಗಳೆಂಬ ಪರಂಪರೆಯ ಸಮುದ್ರವು (ಭವಸಾಗರವು) ಜೀವಿಗಳ ನಡುವೆ ಚಕ್ರಾಕಾರದಲ್ಲಿ ತಿರುಗುತ್ತ ಇರುತ್ತದೆ.) ಎಂದು ಈ ರೀತಿಯಾಗಿ ಸನತ್ಕುಮಾರನು ವೈರಾಗ್ಯವನ್ನು ಯೋಚಿಸಿ ವಿಜಯಕುಮಾರನೆಂಬ ಹಿರಿಯ ಮಗನಿಗೆ ಅರಸುತನವನ್ನು ಕೊಟ್ಟು ಪರಿವಾರಕ್ಕೆಲ್ಲ ತೊಂದರೆಯಿಲ್ಲದಂತೆ ಮಾಡಿ, ಒಳಗಿನ ಮತ್ತು ಹೊರಗಿನ ಪರಿಗ್ರಹಗಳನ್ನೆಲ್ಲ ಬಿಟ್ಟು ಹಲವರು ರಾಜರನ್ನು ರಾಜಕುಮಾರರನ್ನು ಮಾಡಿ ವಿನಯಂಧರಸ್ವಾಮಿಗಳ ಬಳಿಯಲ್ಲಿ ತಪಸ್ಸನ್ನು ಸ್ವೀಕರಿಸಿ ಮೂರು ರಾತ್ರಿ ದೀಕ್ಷೆಯ ಉಪವಾಸವನ್ನು ಮಾಡಿ ದೇಹಧಾರಣೆಗಾಗಿ ಭಿಕ್ಷಾಟನಕ್ಕೆ ಹೋದನು. ಆ ಸಂದರ್ಭದಲ್ಲಿ ಓರ್ವ ಬಡ ಮುದುಕಿ ಅವನನ್ನು ಪಾರಣೆಗಾಗಿ ನಿಲ್ಲಿಸಿ, ಹಾರಕದ ಅಕ್ಕಿಯ ಅನ್ನವನ್ನೂ ಅವರೆಕಾಯಿ ಹುಳಿಯನ್ನೂ ಎಣ್ಣೆಯನ್ನೂ ಅಡಿನ ಮಜ್ಜಿಗೆಯನ್ನೂ ಬಡಿಸಿದಳು. ಸನತ್ಕುಮಾರಋಷಿ ಅಮೃತವನ್ನು ಉಣ್ಣುವ ಹಾಗೆ ಅದನ್ನು ಉಂಡು, ಆ ಮೇಲೆ ಮೂರು ರಾತ್ರಿಗಳ ಮಟ್ಟಿಗೆ ಆಹಾರನಿವೃತ್ತಿಯ ಪ್ರತಿಜ್ಞೆಯನ್ನು ಸ್ವೀಕರಿಸಿದರು. ಅಂದಿನಿಂದ ತೊಡಗಿ ಆಹಾರದಲ್ಲಿ ಆದ ದೋಷದಿಂದ ಕಜ್ಜಿ, ಜ್ವರ, ಕೆಮ್ಮು, ಉಬ್ಬಸ, ಅತಿಸಾರ, ಕಣ್ಣುನೋವು-ಹೊಟ್ಟೆನೋವುಗಳು ಎಂದು ಇವೇ ಮೊದಲಾದ ಏಳು ನೂರು ರೋಗಗಳನ್ನು ನೂರುವರ್ಷಗಳವರೆಗೆ ಚೆನ್ನಾಗಿ ಸಹಿಸಿ ಅತ್ಯಂತ ಭಯಂಕರವಾದ ದೀಪ್ತತಪ, ಮಹಾತಪ,

ಉಗ್ರೋಗ್ರತವದಿಂ ದೀಪ್ತತಪಂ ಮಹಾತಪಂ ಘೋರತಪಮೆಂದಿವು ಮೊದಲಾಗೊಡೆಯ ತಪಂಗಳಂ ಗೆಯ್ಕೆ ತಪದ ಮಹಾತ್ಮ್ಯದಿಂದಂ ಆಮೋಷಧಿ ಖೇಳೋಷಧಿ ಜವ್ಹೋಷಧಿ ವಿಪ್ಪೋಷಧಿ ಸರ್ವೋಷಧಿಯೆಂಬಿವು ಮೊದಲಾಗೊಡೆಯ ಋದ್ಧಿಗಳ್ ಪುಟ್ಟದೊಡಂ ವ್ಯಾಧಿಗೆ ತಕ್ಕ ಪ್ರತೀಕಾರಮುಂ ಮಾದದಿಂತು ಘೋರವೀರ ತಪಶ್ಚರಣಾಂಗೆಯ್ಕೆ ಮತ್ತೊಂದು ದಿವಸಂ ಸೌಧರ್ಮೇಂದ್ರಂ ತನ್ನ ಸಭೆಯೊಳ್ ಸಿಂಹಾಸನಮಸ್ತಕಸ್ಥಿತನಾಗಿ ಧರ್ಮಶ್ರವಣಾನಂತರಂ ರಿಸಿಯರ್ಕಳ ಗುಣಂಗಳಂ ವ್ಯಾವರ್ಣಿಸುತ್ತಿರ್ದು ಸನತ್ಕುಮಾರರಿಸಿಯ ಗುಣಗಣಮನಾದಮಾನುಂ ಕೈಕೊಂಡಿಂತೆಂದು ಪೇಬಿಲ್ ತಗುಳ್ದೊನ್ ವಾತಪಿತ್ತಶ್ಲೇಷ್ಮ ಶ್ವಾಸ ಖಾಸ ಜರಾರುಚ ಛರ್ದ್ಯತಿಸಾರಾಕ್ಷಿ ಕುಕ್ಷಿವೇದನಾಸ್ಫೋಟಕಂ ಪಿಟಕಂ ಶೂಲ ಭಗಂದರಂ ಕುಷ್ಠ ಕ್ಷಯ ಗಂಡ ಶಿರೋವೇದನೆ ಮೊದಲಾಗೊಡೆಯವೇಟುನೂಱು ವ್ಯಾಧಿಗಳೊರ್ಮೊದಲೆ ಮೆಯ್ಯೊಳ್ ಪುಟ್ಟದೊದಂ ತಾಮುಂ ಋದ್ಧಿಸಂಪನ್ನರಾಗಿಯುಂ ವ್ಯಾಧಿಗೆ ತಕ್ಕ ಪ್ರತೀಕಾರಂಗೆಯ್ಯದೆ ನೂಱುವರುಷಂಬರೆಗಂ ಒಳ್ಕಿತ್ತಾಗಿ ಸೈರಿಸಿ ತವಂಗೆಯ್ದಪ್ಪರೆಂದು ಸೌಧರ್ಮೇಂದ್ರಂ ಪೊಗಟ್ಪೊಡೆ ಕೇಳ್ದು ಮುನ್ನೆ ಬಂದ ದೇವರ್ಕಳಿರ್ವರುಂ ವೈದ್ಯರ ರೂಪಿನೊಳ್ ಮರ್ದುಗಳಂ ಪಸುಂಬೆಯೊಳ್ ತೆಕ್ಕನೆ ತೀವಿ ಪರೀಕ್ಷಿಸಲ್ಕೆಂದು ಸಾರೆವಂದು ವಂದಿಸಿ ಇಂತೆಂದರ್ ಭಟಾರಾ ನಿಮ್ಮ ಮೆಯ್ಯ ಕುತ್ತಂಗಳೆಲ್ಲಮಂ ಮರ್ದಂ ಮಾಡಿ ಕಿಡಿಸಲ್ ನೆಱಿವೆವು ಮರ್ದಂ ಮಾಡುವುದನೊಡಂಬಡವೇಟ್ಕು ಮೆಂದೊಡೆ ಭಟ್ಟಾರರುಂ ಮೋನಂಗೊಂಡು ನುಡಿಯದೆ ಕೆಮ್ಮಗಿರ್ದೊಡೆ ಪಿರಿದುಂ ಬೇಗಮಿರ್ದೆಟ್ಟು ಪೋಗಿ ಮಱುದಿವಸಂ ಮಗುಟ್ಟು ಬಂದಿಂತೆಂದರ್ ಭಟಾರಾ ವೈದ್ಯಶಾಸ್ತ್ರದೊಳಾದಮಾನುಂ ಕುಶಲರೆ

ಘೋರತಪ ಎಂದಿವೇ ಮೊದಲಾಗುಳ್ಳ ತಪಸ್ಸುಗಳನ್ನು ಮಾಡಿದರು. ತಪಸ್ಸಿನ ಮಹತ್ವದಿಂದ ಅವರಿಗೆ ಆಮೋಷಧಿ, ಖೇಳೋಷಧಿ, ವಿಪ್ಪೋಷಧಿ, ಸರ್ವೋಷಧಿ - ಎಂಬಿವೇ ಮುಂತಾಗಿರುವ ಸಿದ್ಧಿ ಸಂಪತ್ತುಗಳು (ದಿವ್ಯಶಕ್ತಿಗಳು) ಉಂಟಾದವು. ಆದರೂ ರೋಗಕ್ಕೆ ತಕ್ಕುದಾದ ಪರಿಹಾರೋಪಾಯವನ್ನು (ಚಿಕಿತ್ಸೆಯನ್ನು)ಮಾಡದೆ ಈ ರೀತಿಯಾಗಿ ಉಗ್ರರೀತಿಯ ವೀರತ್ವದ ತಪಸ್ಸನ್ನು ಮಾಡಿದರು. ಆಮೇಲೆ, ಒಂದು ದಿವಸ ಸೌಧರ್ಮೇಂದ್ರನು ತನ್ನ ಸಭೆಯಲ್ಲಿ ಸಿಂಹಾಸನದ ಮೇಲೆ ಮಂಡಿಸಿದ್ದು ಧರ್ಮವಿಚಾರವನ್ನು ಕೇಳಿದ ನಂತರ ಋಷಿಗಳ ಗುಣಗಳನ್ನು ವಿಶೇಷವಾಗಿ ವರ್ಣಿಸುತ್ತಿದ್ದನು. ಆ ಸಂದರ್ಭದಲ್ಲಿ ಸನತ್ಕುಮಾರಋಷಿಗಳ ಗುಣಗಳ ಸಮೂಹವನ್ನು ವಿಶೇಷವಾಗಿ ವರ್ಣಿಸಲು ಉದ್ಯುಕ್ತನಾಗಿ ಈ ರೀತಿಯಾಗಿ ಹೇಳತೊಡಗಿದನು. - "ಸನತ್ಕುಮಾರಋಷಿಗಳು ತಮ್ಮ ಶರೀರದಲ್ಲಿ ವಾತ (ವಾಯು), ಪಿತ್ತ, ಕಫ, ಕೆಮ್ಮು, ಮುಪ್ಪು, ಬಾಯಿರುಚಿಯಿಲ್ಲದಿರುವುದು, ವಾಂತಿ, ಭೇದಿ, ಕಣ್ಣುನೋವು, ಹೊಟ್ಟೆನೋವು, ಬಾವು, ಕುರು, ನೋವು, ಮೂಲವ್ಯಾಧಿ, ಕುಷ್ಠ, ಕ್ಷಯ, ಗಂಡಮಾಲೆ, ತಲೆಸಿಡಿತ - ಮುಂತಾಗಿರುವ ಏಳುನೂರು ರೋಗಗಳು ಒಮ್ಮೆಗೇ ಉಂಟಾದರೂ ತಾವು ಆ ರೀತಿ ತಪಸ್ಸಿದ್ಧಿ ಸಂಪತ್ತಿನಿಂದ ಕೂಡಿದವರಾಗಿದ್ದರೂ ರೋಗಕ್ಕೆ ತಕ್ಕುದಾದ ಚಿಕಿತ್ಸೆಯನ್ನು ಮಾಡದೆ, ನೂರುವರ್ಷಗಳವರೆಗೆ ಚೆನ್ನಾಗಿ ಸಹಿಸಿಕೊಂಡು ತಪಸ್ಸು ಮಾಡುತ್ತಿದ್ದಾರೆ" ಎಂದು ಸೌಧರ್ಮೇಂದ್ರನು ಹೊಗಳಿದನು. ಇದನ್ನು ಕೇಳಿ ಹಿಂದೆ ಒಮ್ಮೆ ಬಂದಿದ್ದ ದೇವತೆಗಳಿಬ್ಬರೂ ವೈದ್ಯರ ರೂಪದಲ್ಲಿ ಔಷಧಿಗಳನ್ನು ಹಸುಬೆ ಚೀಲದಲ್ಲಿ ಭರ್ತಿಯಾಗಿ ತುಂಬಿಸಿಕೊಂಡು ಪರೀಕ್ಷಿಸುವ ಉದ್ದೇಶದಿಂದ ಸಮೀಪಕ್ಕೆ

ವುಂ ಗ್ರಂಥಾರ್ಥಸ್ವರೂಪದಿಂದೆಲ್ಲಾ ಕುಶಲರೆವುಂ ಕರ್ಮಜ್ಞರೆವುಂ ಮರ್ದುಗಳುಮಭಿನವಂಗಳಾದಮೊಳ್ಪಿದವಿರ್ದುವುಂ ನಿಮ್ಮ ಮೆಯ್ಯ ಕುತ್ತಂಗಳೆಲ್ಲಮನೇಱು ದಿವಸದಿಂದೊಳಗೆ ಕಿಡಿಸಿ ನೀರೋಗಮಪ್ಪಂತಿರೆ ಮಾಡುವೆವು ಬಱೆಕ್ಕೇನುಂ ಸಂಕ್ಲೇಶಮಿಲ್ಲದೆ ತಪಂಗೆಯ್ಯಮೆಂದೊಡೆ ಭಟಾರರವರೊಡನೆ ನುಡಿವಾಗಳುಗುಱ ಸೀಕರಂಗಳ್ ತಮ್ಮ ಮುಂಗೆಯ್ಯ ಮೇಗೆ ಬಱ್ಪೊಡೆ ಬೆರಲಿಂ ಸೀಂಟ ತೋಱೆದಾಯೆಡೆ ಸುವರ್ಣಾಯಮಾನಮಾಗಿ ತೊಳಗುತ್ತಿರ್ದ ಮೆಯ್ಯ ತೇಜಮುಮಂ ದೇವರ್ಕಳ್ ವಿಸ್ಮಯಂಬಟ್ಟು ನೋಡುತ್ತಿರೆ ಭಟಾರರಿಂತೆಂದರೆಮಗೆ ಮರ್ದು ಬಾಬ್ತಿಯಪ್ಪೊಡೆಮಗಾಮೆ ಮರ್ದಂ ಬಲ್ಲೆಮೆಮಗದು ಬಾಬ್ತಿಯಲ್ತು ನೀಮುಂ ಜಾತಿಜರಾ ಮರಣಂಗಳೆಂಬೆಮ್ಮ ಕುತ್ತಮುಂ ಕಿಡಿಸಲಾರ್ಪೊಡಾ ಮರ್ದನೊಡಂಬದುವೆಮುಬೆದಾವ ಮರ್ದುಮನೊಡಂಬದುವೆಮಲ್ಲೆಮೆಂದೊಡೆ ದೇವರ್ಕಳುಮಿಂತೆಂದರ್ ಜಾತಿ ಜರಾಮರಣಂಗಳೆಂಬ ಕುತ್ತಮಂ ಕಿಡಿಸಲ್ಕಾಮಾಱಿಮಾ ಕುತ್ತಮಂ ಕಿಡಿಸಲ್ಕೆ ಭಟಾರಾ ನೀಮೆ ಸಮರ್ಥರಿರ್ ಪರಮ ವೈದ್ಯರಿರದರ್ಕೆಂದು ಮತ್ತಂ ದೇವರ್ಕಳೆಂದರ್ ಭಟಾರಾ ಸೌಧರ್ಮೇಂದ್ರಂ ನಿಮ್ಮ ತಪದೊಳಪ್ಪ

ಬಂದು ನಮಸ್ಕರಿಸಿ ಹೀಗೆಂದರು "ಪೂಜ್ಯರೇ, ನಿಮ್ಮ ದೇಹದ ರೋಗಗಳೆಲ್ಲವನ್ನೂ ಔಷಧ ಮಾಡಿ ಪರಿಹರಿಸಲು ನಾವು ಸಮರ್ಥರಾಗಿದ್ದೇವೆ. ಮದ್ದು ಮಾಡಲು ನೀವು ಒಪ್ಪಬೇಕು." ಹೀಗೆ ಹೇಳಿದಾಗ ಋಷಿಗಳು ಮೌನವನ್ನು ತಾಳಿ, ಮಾತಾಡದೆ ಸುಮ್ಮನಿರಲು, ಬಹಳ ಹೊತ್ತು ಇದ್ದು ಎದ್ದುಹೋದರು. ಮರುದಿವಸ ಆ ದೇವತೆಗಳು ಮರಳಿ ಬಂದು ಹೀಗೆಂದರು - "ಪೂಜ್ಯರೇ, ನಾವು ವೈದ್ಯಶಾಸ್ತ್ರದಲ್ಲಿ ಅತ್ಯಂತ ಪ್ರವೀಣರಾಗಿದ್ದೇವೆ, ಮತ್ತು ವೈದ್ಯಗ್ರಂಥಗಳ ಅರ್ಥವನ್ನು ತಿಳಿದು ಕುಶಲರಾಗಿದ್ದೇವೆ. ಕಾರ್ಯವನ್ನು ಬಲ್ಲವರೂ ಆಗಿದ್ದೇವೆ. ಮದ್ದುಗಳು ಹೊಸತಾಗಿವೆ, ಬಹಳ ಒಳ್ಳೆಯವಾಗಿವೆ. ನಿಮ್ಮ ಶರೀರದ ಎಲ್ಲ ರೋಗಗಳನ್ನೂ ಏಳುದಿವಸಗಳೊಳಗೆ ಗುಣಪಡಿಸಿ ರೋಗವೇ ಇಲ್ಲದವರನ್ನಾಗಿ ಮಾಡುವೆವು. ಆಮೇಲೆ ಏನೊಂದೂ ಕಷ್ಟವಿಲ್ಲದೆ ತಪಸ್ಸನ್ನು ಮಾಡಿ" ಎಂದು ಹೇಳಿದರು. ಹೀಗೆ ಹೇಳಿದಾಗ ಋಷಿಗಳು ಅವರೊಂದಿಗೆ ಮಾತಾಡುವಾಗ ಎಂಜಲಿನ ತುಂತುರು ಹನಿಗಳು ಅವರ ಮುಂಗೈಯ ಮೇಲೆ ಬೀಳಲು, ಅವನ್ನು ಬೆರಲಿನಿಂದ ತೊಡೆದರು. ಆಗ ಕಾಣಿಸಿದ ಆ ಸ್ಥಳ ಚಿನ್ನದ ಬಣ್ಣದಂತಾಗಿ ಹೊಳೆಯುತ್ತಿತ್ತು. ಅಂತಹ ಋಷಿಯ ದೇಹಕಾಂತಿಯನ್ನು ದೇವತೆಗಳು ಆಶ್ಚರ್ಯಪಟ್ಟು ನೋಡುತ್ತಿದ್ದರು. ಆಗ ಋಷಿಗಳು ಅವರೊಡನೆ ಹೀಗೆಂದರು - "ನಮಗೆ ಮದ್ದಿನಿಂದ ಉಪಯೋಗವಾಗುವುದಾದರೆ ನಮಗೆ ಬೇಕಾದ ಮದ್ದು ನಮಗೇ ಗೊತ್ತಿದೆ. ನಮಗದು ಪ್ರಯೋಜನವಿಲ್ಲ. ನೀವು ಹುಟ್ಟು - ಮುಪ್ಪು - ಸಾವುಗಳೆಂಬ ನಮ್ಮ ರೋಗವನ್ನು ಪರಿಹಾರಮಾಡಬಲ್ಲವರಾದರೆ ಆ ಮದ್ದನ್ನು ಮಾಡಲು ಒಪ್ಪುತ್ತೇವೆ. ಇನ್ನುಳಿದ ಯಾವ ಮದ್ದನ್ನು ಮಾಡುವುದಕ್ಕೂ ಒಪ್ಪುವುದಿಲ್ಲ" ಎಂದರು. ಅದಕ್ಕೆ ದೇವತೆಗಳು - "ಪೂಜ್ಯರೇ, ಹುಟ್ಟು -ಮುಪ್ಪು - ಸಾವುಗಳೆಂಬ ರೋಗಗಳನ್ನು ಪರಿಹಾರ ಮಾಡಲು ನಾವು ಸಮರ್ಥರಲ್ಲ. ಆ ರೋಗವನ್ನು ವಾಸಿಮಾಡಲು ನೀವೇ ಸಮರ್ಥರು. ಅದಕ್ಕೆ ನೀವು ಅತಿ ಶ್ರೇಷ್ಠ ವೈದ್ಯರಾಗಿರುವಿರಿ" ಎಂದರು. ಆಮೇಲೆ ದೇವತೆಗಳು ಹೀಗೆಂದರು - "ಋಷಿಗಳೇ, ಸೌಧರ್ಮೇಂದ್ರನು ನಿಮ್ಮ ತಪಸ್ಸಿನಿಂದಾದ ಗುಣಗಳನ್ನೂ (ಸಿದ್ಧಿ ಸಂಪತ್ತುಗಳನ್ನೂ) ರೋಗಗಳನ್ನು ಸಹಿಸಿಕೊಂಡು ಮಾಡುವ

ಗುಣಂಗಳುಮಂ ವ್ಯಾಧಿಗಳಂ ಸೈರಿಸಿ ನೆಗಟ್ಟು ನೆಗಟ್ಟಿಯುಮಂ ದೇವರ್ಕಳ ಸಭೆಯ ನಡುವೆಯಾದಮಾನಂ ಕೈಕೊಂಡು ಪೊಗಟ್ಪೊಡಾಮಿಂದ್ರನ ಮಾತಂ ನಂಬದೆ ನಿಮ್ಮಂ ಪರೀಕ್ಷಿಸಲ್ಕೆಂದು ಬಂದೆವು ಸೌಧರ್ಮೇಂದ್ರನ ಪೊಗಟ್ದುದೇನುಂ ತಪ್ಪಿಲ್ಲೆಂದು ನುಡಿದು ಗುಣಂಗೊಂಡು ಮಗುಟ್ದು ವಂದಿಸಿ ಮರ್ದುಗಳೆಲ್ಲಮನೊಂದು ಪಟವಾವಿಯೊಳ್ ಪೊಯ್ದು ದೇವರ್ಕಳ್ ತಮ್ಮ ದೇವಲೋಕಕ್ಕೆ ಪೋದೊರಾ ಮರ್ದಿನ ಬಾವಿಯ ನೀರಂ ಮಿಂದರ್ಗೆಲ್ಲಂ ಕುತ್ತಂಗಳ್ ಕಿಡುವುವಾದವು ಸನತ್ಕುಮಾರಭಟಾರರುಮೇಟುನೂಱುಂ ವ್ಯಾಧಿಗಳಂ ನೂಱುವರುಷಂಬರೆಗಂ ಸೈರಿಸಿ ಘೋರವೀರ ತಪಶ್ಚರಣಂಗೆಯ್ದು ಆಲದ ಮರದ ಕೆಲಗೆ ಸಂನ್ಯಸನಂಗೆಯ್ದು ಸಮಾಧಿಮರಣದಿಂ ಮುಡಿಪಿ ಮಿಕ್ಕ ರತ್ನತ್ರಯಂಗಳಂ ಸಾಧಿಸಿ ಸನತ್ಕುಮಾರಕಲ್ಪದೊಳ್ ಏಳು ಸಾಗರೋಪಮಾಯುಷ್ಯಸ್ಥಿತಿಯನೊಡೆಯೊನಿಂದ್ರನಾಗಿ ಪುಟ್ಟದೊಂ ಮತ್ತಾರಾಧಕರಪ್ಪ ಭವ್ಯರ್ಕಳೆಲ್ಲಂ ಸನತ್ಕುಮಾರಭಟಾರರಂ ಮನದೊಳ್ ಬಗೆದು ವ್ಯಾಧಿಗಳೊಳಪ್ಪ ವೇದನೆಗಳುಮಂ ವಸಿವುಂ ನೀರಬ್ಕಿ ಮೊದಲಾಗೊಡೆಯ ಬಾಧೆಯುಮಂ ಸೈರಿಸಿ ದೇವರಂ ಧ್ಯಾನಿಸುತ್ತಂ ಪಂಚನಮಸ್ಕಾರಮಂ ಮನದೊಳುಚ್ಚರಿಸುತ್ತಂ ಮಿಕ್ಕ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗಸುಖಂಗಳನೆಯ್ದುಗೆ

ಕಾರ್ಯಗಳನ್ನೂ ದೇವತೆಗಳ ಸಭಾಮಧ್ಯದಲ್ಲಿ ಅತಿಶಯವಾಗಿ ಹೇಳಲು ಉದ್ಯೋಗಿಸಿ, ಹೊಗಳಿದನು. ಆಗ ನಾವು ಇಂದ್ರನ ಮಾತನ್ನು ನಂಬದೆ ನಿಮ್ಮನ್ನು ಪರೀಕ್ಷಿಸಿ ತಿಳಿಯುವುದಕ್ಕಾಗಿ ಬಂದಿರುತ್ತೇವೆ. ಸೌಧರ್ಮೇಂದ್ರನು ಹೊಗಳಿದುದರಲ್ಲಿ ಏನೂ ತಪ್ಪಿಲ್ಲ" ಎಂದು ಹೇಳಿದರು. ಋಷಿಗಳ ಗುಣವನ್ನು ಅನುಗ್ರಹಿಸಿಕೊಂಡು ಪುನಃ ನಮಸ್ಕರಿಸಿ ಮದ್ದುಗಳನ್ನೆಲ್ಲ ಒಂದು ಹಳೆಯ ಬಾವಿಯೊಳಗೆ ಹೊಯಿದು, ಆ ದೇವತೆಗಳು ತಮ್ಮ ದೇವಲೋಕಕ್ಕೆ ತೆರಳಿದರು. ಆ ಮದ್ದಿನ ಬಾವಿಯ ನೀರಿನಲ್ಲಿ ಸ್ನಾನ ಮಾಡಿದವರಿಗೆಲ್ಲ ರೋಗಗಳು ಪರಿಹಾರಗೊಳ್ಳುವವಾದವು. ಸನತ್ಕುಮಾರಋಷಿಗಳು ಏಳುನೂರು ಬಗೆಯ ರೋಗಗಳನ್ನು ನೂರು ವರ್ಷಗಳವರೆಗೂ ಸಹಿಸಿಕೊಂಡು ಉಗ್ರವೂ ಶಕ್ತಿಶಾಲಿಯೂ ಆದ ತಪಸ್ಸನ್ನು ಆಚರಿಸಿ ಆಲದ ಮರದ ಕೆಳಗೆ ಸಂನ್ಯಾಸವನ್ನು ಸ್ವೀಕರಿಸಿ ಸಮಾಧಿಮರಣದಿಂದ ತೀರಿಹೋಗಿ, ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರಗಳೆಂಬ ಶ್ರೇಷ್ಠವಾದ ರತ್ನತ್ರಯವನ್ನು ಪಡೆದು ಸನತ್ಕುಮಾರ ಎಂಬ ಸ್ವರ್ಗದಲ್ಲಿ ಏಳು ಸಾಗರಕ್ಕೆ ಸಮಾನವಾದ ಆಯುಷ್ಯವನ್ನು ಉಳ್ಳ ಇಂದ್ರನಾಗಿ ಜನಿಸಿದನು. ಆರಾಧನೆ ಮಾಡತಕ್ಕವರಾದ ಭವ್ಯ (ಮೋಕ್ಷಾಪೇಕ್ಷಿ) ಜನರೆಲ್ಲರೂ ಸನತ್ಕುಮಾರಋಷಿಗಳನ್ನು ಮನಸ್ಸಿನಲ್ಲಿ ಧ್ಯಾನಿಸಿಕೊಂಡು ರೋಗಗಳು ಬಂದಾಗ ಉಂಟಾಗುವ ನೋವುಗಳನ್ನು ಹಸಿವು ಬಾಯಾರಿಕೆ ಮುಂತಾಗಿರುವ ತೊಂದರೆಯನ್ನೂ ಸಹಿಸಿ ದೇವರನ್ನು ಧ್ಯಾನಮಾಡುತ್ತ ಅರ್ಹಂತರು, ಸಿದ್ಧರು, ಆಚಾರ್ಯರು, ಉಪಾಧ್ಯಾಯರು, ಸಾಧುಗಳು - ಎಂಬ ಪಂಚಪರಮೇಷ್ಠಿಗಳಿಗೆ ಮಾಡುವ ಪಂಚನಮಸ್ಕಾರದ ಮಂತ್ರವನ್ನು ಮನಸ್ಸಿನಲ್ಲಿಯೇ ಉಚ್ಚಾರಣೆ ಮಾಡುತ್ತ ಶ್ರೇಷ್ಠವಾದ ದರ್ಶನ - ಜ್ಞಾನ - ಚಾರಿತ್ರಗಳೆಂಬ ಮೂರು ರತ್ನಗಳನ್ನು ಪಡೆದು ಸ್ವರ್ಗ - ಮೋಕ್ಷಗಳ ಸುಖಗಳನ್ನು ಪಡೆಯಲಿ !

೫೫ ಅಣ್ಣಿಕಾಪುತ್ರನ ಕಥೆ

ಅಣ್ಣಿಕಾಪುತ್ರನ ಕಥೆಯಂ ಪೇಱ್ದೆಂ :

ಗಾಹೆ ॥ ಣಾವಾ ಎ ಣಿಬ್ಬುಡಾಏ ಗಂಗಾಮಜ್ಝೇ ಅಮೂಢಮಾಣಮದೀ
ಆರಾಧಣಂ ಪವಣ್ಣೋ ಕಾಲಗದೋ ಏಣಿಯಾ ಪುತ್ತೋ ॥

[ಣಾವಾ ಎ - ನಾವೆ, ಣಿಬ್ಬುಡಾ ಏ - ಮುಟುಗಿದುದಾದೊಡೆ, ಗಂಗಾಮಜ್ಝೇ - ಗಂಗಾಮಹಾನದಿಯ ನಡುವೆ, ಅಮೂಢಮಾಣಮದೀ-ಮೋಹಿಸದ ಬುದ್ಧಿಯನೊಡೆಯನಾಗಿ, ಆರಾಧಣಂ - ನಿಜಾತ್ಮಾರಾಧನೆಯಂ, ಪವಣ್ಣೋ - ಲೇಸಾಗಿ ಪೊರ್ದಿದೊಂ, ಕಾಲಗದೊ - ಕಾಲಂಗೆಯ್ದೊನಾಗಿ, ಏಣಿಯಾಪುತ್ತೋ - ಅಣ್ಣಿಕೆಯ ಮಗಂ]

ಅದೆಂತೆಂದೊಡೆ : ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಮಗಧೆಯೆಂಬುದು ನಾಡಲ್ಲಿ ಉತ್ತರಮಧುರೆಯೆಂಬುದು ಪೊಬಲದನಾಳ್ವೊಂ ವ್ರಜಾವಾಳನೆಂಬೊನರಸನಾತನ ಮಹಾದೇವಿ ಸುಪ್ರಭೆಯೆಂಬೊಳಂತವರ್ಗ್ಗಳಿಷ್ಟವಿಷಯ ಕಾಮಭೋಗಂಗಳನನುಭವಿಸುತ್ತಿರೆ ಮತ್ತಾ ಪೊಬಲೊಳ್ ಸಾರ್ಥಾಧಿಪತಿ ಧನದತ್ತನೆಂಬೊಂ ಪರದಂ ಧನಕನಕಸಮೃದ್ಧನಾತನ ಭಾರ್ಯೆ ಧನಶ್ರೀಯೆಂಬೊಳಾಯಿರ್ವರ್ಗ್ಗಂ ಮಗಂ ಧನದೇವನೆಂಬೊನಂತವರ್ಗ್ಗಳ್ಗೆ ಸುಖದಿಂ ಕಾಲಂ ಸಲೆ ಮತ್ತೊಂದು ದಿವಸಂ ಧನದೇವಂ ಪರದಿಂಗೆಂದು ಪಿರಿದುಂ ಸಾರಮಪ್ಪ ಭಂಡಮಂ ತೀವಿಕೊಂಡು ಪಿರಿದುಂ ಸಾರ್ಥಂ ಬೆರಸು ದಕ್ಷಿಣ ಮಧುರೆಗೆವ್ಪೋದೊಡಾ ಪೊಬಲ ರಾಜಶ್ರೇಷ್ಠಿ ತಿಳಕಶ್ರೇಷ್ಠಿಯೆಂಬೊನಾತನ ಭಾರ್ಯೆ ನಂದೆಯೆಂಬೊಳಾಯಿರ್ವರ್ಗ್ಗಂ ಮಕ್ಕಳ್ ಪದ್ಮಾವತಿ ಸುಮತಿ ಗುಣಮತಿಯೆಂದಿವರ್ ಮೊದಲಾಗೊಡೆಯ ಎಣ್ಬರ್ ಪೆಣ್ಗೂಸುಗಳಾದೊಡವರೊಳಗೆಲ್ಲರಿಂ ಕಿಱಿಯಳಣ್ಣಿಕೆಯೆಂಬೊಳಾಕೆಯಂ

ಅಣ್ಣಿಕಾಪುತ್ರನ ಕಥೆಯನ್ನು ಹೇಳುವೆನು. (ಗಂಗಾನದಿಯ ನಡುವೆ ದೋಣಿ ಮುಳುಗಿಹೋದಾಗ ಅದರಲ್ಲಿದ್ದ ಮೋಹಗೊಳ್ಳದ ಬುದ್ಧಿಯುಳ್ಳ ಅಣ್ಣಿಕಾಪುತ್ರನೆಂಬ ಋಷಿ ಕಾಲವಶನಾಗಿ ತನ್ನ ಆತ್ಮದ ಆರಾಧನೆಯನ್ನು ನೆರವೇರಿಸಿದನು.) ಅದು ಹೇಗೆಂದರೆ. ಈ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ಮಗಧೆ ಎಂಬ ನಾಡಿದೆ. ಅಲ್ಲಿ ಉತ್ತರ ಮಧುರೆ ಎಂಬ ಪಟ್ಟಣವಿದೆ. ಅದನ್ನು ಪ್ರಜಾಪಾಳನೆಂಬ ಅರಸನು ಆಳುತ್ತಿದ್ದನು. ಅವನ ಮಹಾರಾಣಿ ಸುಪ್ರಭೆಯೆಂಬವಳು. ಅಂತು ಅವರು ತಮ್ಮ ಇಷ್ಟವಾದ ವಿಷಯದ ಬಯಸಿದ ಸುಖಗಳನ್ನು ಅನುಭವಿಸುತ್ತ ಇದ್ದರು. ಅದಲ್ಲದೆ, ಆ ಪಟ್ಟಣದಲ್ಲಿ ಸರಕಿನ ವ್ಯಾಪಾರಿಗಳಿಗೆ ಒಡೆಯನಾದ ಧನದತ್ತನೆಂಬ ವರ್ತಕನು ಐಶ್ವರ್ಯದಿಂದಲೂ ಹೊನ್ನಿನಿಂದಲೂ ಸಮೃದ್ಧನಾಗಿದ್ದನು. ಅಂತು ಸುಖದಿಂದ ಅವರ ಕಾಲ ಕೆಳೆಯುತ್ತಿತ್ತು. ಅನಂತರ ಒಂದು ದಿವಸ ಧನದೇವನು ವ್ಯಾಪಾರಕ್ಕಾಗಿ ಅಧಿಕವಾದ ಮೌಲ್ಯವುಳ್ಳ ಸರಕನ್ನು ತುಂಬಿಕೊಂಡು ಹೆಚ್ಚು ಮಂದಿ ಸರಕು ವ್ಯಾಪಾರಿಗಳೊಂದಿಗೆ ದಕ್ಷಿಣ ಮಧುರೆಗೆ ಹೋದನು. ಆ ಪಟ್ಟಣದಲ್ಲಿ ರಾಜಶ್ರೇಷ್ಠಿಯೆನಿಸಿಕೊಂಡು ತಿಳಕಶ್ರೇಷ್ಠಿ ಎಂಬವನಿದ್ದನು. ಅವನ ಪತ್ನಿ ನಂದೆ ಎಂಬುವಳು. ಆ ದಂಪತಿಗಳಿಗೆ ಪದ್ಮಾವತಿ, ಸುಮತಿ, ಗುಣಮತಿ ಎಂದು ಇವರೇ ಮೊದಲಾಗಿ ಉಳ್ಳ ಎಂಟುಮಂದಿ ಹೆಣ್ಣುಮಕ್ಕಳಾದರು. ಅವರಲ್ಲಿ ಎಲ್ಲರಿಂದಲೂ

ಧನದತ್ತನ ಮಗನಪ್ಪ ಧನದೇವನಂ ರೂಪಲಾವಣ್ಯ ಸೌಭಾಗ್ಯ ಕಾಂತಿಗುಣಂಗಳಿಂ ಕೂದಿದೊನಂ ತಿಳಕಶ್ರೇಷ್ಠಿಯುಂ ನಂದೆಯುಂ ಕಂಡಾತಂಗೆ ಬಯಸಿ ಅಣ್ಣಿಕೆಯೆಂಬ ಕೂಸಂ ಕೊಟ್ಟೊಡೆ ಕೆಲವು ದಿವಸಮಾ ಪೊಲಲೊಳಿರ್ದು ತಮ್ಮ ಕೊಂಡು ಪೋದ ಭಂಡಮಂ ಮಾಱೆ ಪೞದಂ ತಮ್ಮ ನಾಲ್ಮಪ್ರೂರ್ವಮಪ್ಪ ಭಂಡಮಂ ತೀವಿಕೊಂಡು ತಮ್ಮ ಪೊಲಲ್ಗುತ್ತರ ಮಧುರೆಗೆ ಬಂದಿರ್ದರನ್ನೆಗಮಣ್ಣಿಕೆಗೆ ಗರ್ಭಮಾಗಿ ಮಗಂ ಪುಟ್ಟದೊಡೆ ಧನದೇವನ ತಾಯುಂ ತಂದೆಯುಂ ನೆಂಟರುಮೆಲ್ಲಂ ನೆರೆದಣ್ಣಿಕೆಯ ಮಗನೆಂದಾತಂಗಣ್ಣಿಕಾಪುತ್ರನೆಂದು ಪೆಸರನಿಟ್ಟೊಡಾತಂ ಕ್ರಮಕ್ರಮದಿಂ ಸುಖದಿಂ ಬೞೆದು ನವಯೌವನನಾಗಿರ್ಪನ್ನೆಗಂ ಇತ್ತ ದಮಸೂರಿಗಳೆಂಬವರವಧಿಜ್ಞಾನಿಗಳಪ್ಪ ಅಚಾರ್ಯರ್ ಪಿರಿದುಂ ರಿಸಮುದಾಯಂ ಬೆರಸು ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪೊರುತ್ತರ ಮಧುರೆಗೆ ಬಂದು ಬಹಿರುದ್ಯಾನವನದೊಳಿರ್ದರನಣ್ಣಿಕಾಪುತ್ರಂ ಪೋಗಿ ವಂದಿಸಿ ಧರ್ಮಮಂ ಕೇಳ್ದು ಸಮ್ಯಕ್ತ್ವಪೂರ್ವಕಂ ಶ್ರಾವಕವ್ರತಂಗಳೆಲ್ಲಮಂ ಕೈಕೊಂಡು ತದನಂತರಮೆ ಭಟಾರಾ ಎನಗಾಯುಷ್ಯವೆನಿತೆಂದು ತನ್ನಾಯುಷ್ಯ ಪ್ರಮಾಣಮಂ ಬೆಸಗೊಂಡೊಡೆ ಭಟಾರರುಂ ಕೞೆದೆ ನಿನಗಾಯುಷ್ಯಮೆಂದು ಪೇೞ್ದೊಡೆ ವೈರಾಗ್ಯಪರಾಯಣನಾಗಿ ತಾಯುಂ ತಂದೆಯುಮಂ ನಂಟರುಮಂ ಬಿಡಿಸಿ ನಿಶ್ಶಲ್ಯಂಗೆಯ್ದು ದಮಸೂರಿಗಳೆಂಬಾಚಾರ್ಯರ ಪಕ್ಕದೆ ತಪಂಬಟ್ಟು

ಕಿರಿಯಳು ಅಣ್ಣಿಕೆ. ತಿಳಕಶ್ರೇಷ್ಠಿ ಮತ್ತು ನಂದೆ ಎಂಬುವರು ಧನದತ್ತನ ಮಗನೂ ರೂಪ ಸೌಂದರ್ಯ - ಸೌಭಾಗ್ಯ - ಕಾಂತಿ - ಗುಣಗಳಿಂದ ಕೂಡಿದವನೂ ಆದ ಧನದೇವನನ್ನು ಕಂಡು, ಆವನನ್ನು ಬಯಸಿ, ಆವನಿಗೆ ಅಣ್ಣಿಕೆಯೆಂಬ ತಮ್ಮ ಮಗಳನ್ನು ಮಡುವೆ ಮಾಡಿಕೊಟ್ಟರು. ಸರಕಿನ ವ್ಯಾಪಾರಿಗಳು ಕೆಲವು ದಿವಸಗಳವರೆಗೆ ಆ ಪಟ್ಟಣದಲ್ಲಿದ್ದು ತಾವು ಕೊಂಡು ಹೋದ ಸರಕನ್ನು ಮಾರಿ, ತಮ್ಮ ನಾಡಿಗೆ ಅಪೂರ್ವವೆನಿಸತಕ್ಕ ಬೇರೆ ಇತರ ಸರಕುಗಳನ್ನು ತುಂಬಿಕೊಂಡು ತಮ್ಮ ಪಟ್ಟಣವಾಗಿರುವ ಉತ್ತರಮಧುರೆಗೆ ಬಂದರು. ಹೀಗೆ ಇರುತ್ತಿರಲು ಅಣ್ಣಿಕೆಗೆ ಗರ್ಭವಾಗಿ ಮಗನು ಹುಟ್ಟಿದನು. ಧನದೇವನ ತಾಯಿಯೂ ತಂದೆಯೂ ನಂಟರೂ ಎಲ್ಲ ಸೇರಿ ಅಣ್ಣಿಕೆಯ ಮಗನಾದುದರಿಂದ ಆವನಿಗೆ ಅಣ್ಣಿಕಾ ಪುತ್ರನೆಂಬ ಹೆಸರಿಟ್ಟರು. ಆತನು ಅನುಕ್ರಮವಾಗಿ ಸುಖದಿಂದ ಬೆಳೆದು ಯೌವನಸ್ಥನಾದನು. ಹೀಗಿರಲು ಇತ್ತ ಅವಧಿಜ್ಞಾನಿಗಳಾದ ದಮಸೂರಿಗಳೆಂಬ ಆಚಾರ್ಯರು ಹೆಚ್ಚಾದ ಋಷಿಸಮೂಹವನ್ನು ಕೂಡಿಕೊಂಡು ಗ್ರಾಮ-ನಗರ-ಖೇಡ-ಖರ್ವಡ-ಮಡಂಬ-ಪಟ್ಟಣ-ದ್ರೋಣಾಮುಖ ಎಂಬ ಭೂಭಾಗಗಳಲ್ಲಿ ಸಂಚಾರ ಮಾಡುತ್ತ ಬರತಕ್ಕವರು ಉತ್ತರ ಮಧುರೆಗೆ ಬಂದು ಹೊರಗಿನ ಉದ್ಯಾನದಲ್ಲಿದ್ದರು. ಅಣ್ಣಿಕಾ ಪುತ್ರನು ಆವರ ಬಳಿಗೆ ಹೋಗಿ ವಂದಿಸಿ ಧರ್ಮಬೋಧನೆಯನ್ನು ಕೇಳಿ ತತ್ತ್ವವಿಚಾರದಲ್ಲಿ ನಂಬಿಕೆಯೊಂದಿಗೆ ಶ್ರಾವಕ (ಜೈನಗೃಹಸ್ಥ) ವ್ರತಗಳೆಲ್ಲವನ್ನೂ ಸ್ವೀಕರಿಸಿಕೊಂಡನು. ಆಮೇಲೆ "ಪೂಜ್ಯರೇ, ನನಗೆ ಆಯುಷ್ಯವು ಎಷ್ಟಿದೆ" ಎಂದು ತನ್ನ ಆಯುಷ್ಯದ ಪ್ರಮಾಣವನ್ನು ಕೇಳಿದನು. ಆಗ ಋಷಿಗಳು "ನಿನಗೆ ಆಯುಷ್ಯ ಇನ್ನು ಸ್ವಲ್ಪವೇ ಇದೆ" ಎಂದು ಹೇಳಿದರು. ಅಣ್ಣಿಕಾ ಪುತ್ರನು ವೈರಾಗ್ಯತತ್ಪರನಾಗಿ ತನ್ನ ತಾಯನ್ನೂ ತಂದೆಯನ್ನೂ ನಂಟರನ್ನೂ ಬಿಟ್ಟು ತೊಂದರೆಯಿಲ್ಲದಂತೆ ಮಾಡಿ, ದಮಸೂರಿಗಳೆಂಬ ಆಚಾರ್ಯರ ಬಳಿಯಲ್ಲಿ ತಪಸ್ಸನ್ನು

ದ್ವಾದಶಾಂಗ ಚತುರ್ದಶಪೂರ್ವಮಪ್ಪಾಗಮಮೆಲ್ಲಮಂ ಕಲ್ತು ಗುರುಗಳನೊಡಂಬಡಿಸಿ ಏಕವಿಹಾರಿಯಾಗಿ ಗ್ರಾಮೇಕರಾತ್ರಂ ನಗರೇ ಪಂಚರಾತ್ರಂ ಅಟವ್ಯಾಂ ದಶರಾತ್ರಮೆಂಬೀನ್ಯಾಯದಿಂ ಗ್ರಾಮನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ತೀರ್ಥಂಗಳೆಲ್ಲಮಂ ವಂದಿಸಲ್ಕೆಂದು ಗಂಗಾಮಹಾನದಿಯಂ ಪಾಯ್ದು ಪೋಪ ಬಗೆಯಿಂದಂ ನಾವೆಯನೇಜಿದೊಡದೊಂದುತ್ಪಾತವಾತದಿಂದಂ ಗಂಗಾಮಹಾನದಿಯ ನಡುವೆ ಮಡುವಿನೊಳ್ ಭಯಂಕರಮಾಗುತ್ತಿರ್ದ್ದ ತೆರೆಯನೊಡೆಯದಱೊಳ್ ಮುಳುಗಿದೊಡಾ ಅಣ್ಣಿಕಾಪುತ್ರನೆಂಬ ರಿಸಿ ಪಿರಿದಪ್ಪ ಮಹಾತ್ಮ್ಯಮಂ ಮೋಹಿಸದ ಬುದ್ಧಿಯನೊಡೆಯೊಂ ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಯಾವಜ್ಜೀವಂ ನಿವೃತ್ತಿಗೆಯ್ದು ಕಾಯೋತ್ಸರ್ಗಂ ನಿಂದು ಧರ್ಮಧ್ಯಾನ ಶುಕ್ಲಧ್ಯಾನಂಗಳಂ ಜಾನಿಸಿ ಸಕಳಕರ್ಮಂಗಳಂ ಕಿಡಿಸಿ ಅಂತರ್ಗತ ಕೇವಲಿಯಾಗಿ ಮೋಕ್ಷಕ್ಕೆವ್ವೋದರ್ ಮತ್ತಂ ಪೆಱರಾರಾಧಕರಪ್ಪವರ್ಗಳೆಲ್ಲಮಣ್ಣಿಕಾಪುತ್ರನೆಂಬ ರಿಸಿಯಂ ಮನದೊಳಿಟ್ಟು ಅಚೇತನೋಪಸರ್ಗಂ ಮೊದಲಾಗೊಡೆಯ ಉಪಸರ್ಗಂಗಳುಮಂ ನೀರಬಿಕ್ಕಿ ಮೊದಲಾಗೊಡೆಯ ಪರೀಷಹಂಗಳುಮಂ ಸೈರಿಸಿ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗದ ಸುಖಂಗಳಂ ಭವ್ಯರ್ಕಳೆಯ್ದುಗೆ

ಪಡೆದು ಹನ್ನೆರಡು ಅಂಗಗಳುಳ್ಳದೂ ಹದಿನಾಲ್ಕು ಪೂರ್ವಗಳುಳ್ಳದೂ ಆದ ಶಾಸ್ತ್ರಗಳನ್ನೆಲ್ಲಾ ಕಲಿತು ಗುರುಗಳು ಒಪ್ಪುವಂತೆ ಮಾಡಿ ಒಬ್ಬನೇ ಸಂಚಾರ ಮಾಡುತ್ತ "ಗ್ರಾಮದಲ್ಲಿ ಒಂದು ರಾತ್ರಿ, ನಗರದಲ್ಲಿ ಐದು ರಾತ್ರಿ, ಕಾಡಿನಲ್ಲಿ ಹತ್ತು ರಾತ್ರಿಗಳು" ಎಂಬ ಈ ನ್ಯಾಯದಂತೆ ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖಗಳೆಂಬ ಭೂಭಾಗಗಳನ್ನು ಸುತ್ತುತ್ತ ಪುಣ್ಯತೀರ್ಥಗಳಿಗೆಲ್ಲಾ ನಮಸ್ಕರಿಸುವುದಕ್ಕಾಗಿ ಗಂಗಾಮಹಾನದಿಗೆ ಬಂದರು. ಅದನ್ನು ದಾಟಿ ಹೋಗುವ ಭಾವನೆಯಿಂದ ದೋಣಿಯನ್ನು ಹತ್ತಿದರು. ಆಗ ಒಂದು ವಿಪತ್ಕಾರಕರಾದ ಬಿರುಗಾಳಿ ಎದ್ದಿತು. ಆ ಬಿರುಗಾಳಿಗೆ ಗಂಗಾನದಿಯ ನಡುವೆ ಭಯಂಕರವಾಗಿ ಕಾಣಿಸಿದ ಅಲೆಯುಳ್ಳ ಮಡುವಿನಲ್ಲಿ ದೋಣಿ ಮುಳುಗಿತು. ಮುಳುಗುತ್ತಿದ್ದಾಗ ಆ ಅಣ್ಣಿಕಾಪುತ್ರನೆಂಬ ಋಷಿ ಹಿರಿದಾಗಿರುವ ಮಹತ್ವಕ್ಕೆ ಮೋಹಗೊಳ್ಳದ ಬುದ್ಧಿಯುಳ್ಳವನಾಗಿ ಭಕ್ಷ್ಯ, ಭೋಜ್ಯ, ಚೋಷ್ಯ, ಲೇಹ್ಯ - ಎಂಬ ನಾಲ್ಕು ವಿಧವಾದ ಶರೀರಕ್ಕೂ ಆಹಾರಕ್ಕೂ ಪ್ರಾಣವಿರುವವರೆಗೂ ನಿವೃತ್ತಿ ಮಾಡಿ, ದೇಹತ್ಯಾಗಕ್ಕೆ ಸಿದ್ಧನಾಗಿ ಧರ್ಮಧ್ಯಾನ ಶುಕ್ಲಧ್ಯಾನಗಳನ್ನು ಮಾಡಿ ಎಲ್ಲಾ ಕರ್ಮಗಳನ್ನೂ ನಾಶಗೊಳಿಸಿ ತನ್ನೊಳಗೆ ಕೇವಲಜ್ಞಾನವನ್ನು ಪಡೆದು ಮೋಕ್ಷಕ್ಕೆ ತೆರಳಿದರು. ಆಮೇಲೆ, ಬೇರೆ ಆರಾಧಕರಾಗಿರುವ ಭವ್ಯರೆಲ್ಲರೂ ಅಣ್ಣಿಕಾಪುತ್ರನೆಂಬ ಋಷಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಅಚೇತನೋಪಸರ್ಗವೇ ಮೊದಲಾದ ಉಪಸರ್ಗಗಳನ್ನೂ, ಬಾಯಾರಿಕೆ ಮುಂತಾಗಿರುವ ಪರೀಷಹಗಳನ್ನೂ ಸಹಿಸಿಕೊಂಡು ಸಮ್ಯಗ್ದರ್ಶನ ಜ್ಞಾನ ಚಾರಿತ್ರಗಳೆಂಬ ಮೂರುರತ್ನಗಳನ್ನು ಸಾಧಿಸಿ ಸ್ವರ್ಗ ಮೋಕ್ಷ ಸುಖಗಳನ್ನು ಹೊಂದಲಿ.

೬ ಭದ್ರಬಾಹು ಭಟ್ಟಾರರ ಕಥೆ

ಭದ್ರಬಾಹು ಭಟ್ಟಾರರ ಕಥೆಯಂ ಪೇಟ್ಪಿಂ :

ಗಾಹೆ ॥ ಓಮೋದರಿ ಏ ಘೋರಾ ಎ ಭದ್ದಬಾಹೂ ಅಸಂಕಿಲಿಟ್ಠಮದೀ
ಘೋರಾ ಎ ತಿಗಿಂಚ್ಛಾ ಏ ಪದಿವಣ್ಣೋ ಉತ್ತಮಂ ಅಟ್ಠಂ ॥

[ಓಮೋದರಿ ಏ - ಅರೆಉಣಿಸಿನಿಂದಂ, ಘೋರಾ ಎ - ಆದಮಾನುಂ ಕಡಿದಪ್ಪುದ ಜೆಂದಂ, ಭದ್ದಬಾಹೂ - ಭದ್ರಬಾಹು ಭಟ್ಟಾರರ್, ಅಸಂಕಿಲಿಟ್ಠಮದೀ - ಸಂಕ್ಲೇಶ ಪರಿಣಾಮಮಿಲ್ಲದೊನಾಗಿ, ಘೋರಾ ಎ - ಕಡಿದವ್ರ, ತಿಗಿಂಚ್ಛಾ ಏ - ಪಸಿವಿನಿಂದಂ, ಪದಿವಣ್ಣೋ - ಪೊರ್ದಿದೊಂ, ಉತ್ತಮಂ ಅಟ್ಠಂ - ಮಿಕ್ಕದರ್ಶನಜ್ಞಾನ ಚಾರಿತ್ರಾರಾಧನೆಯಂ]

ಅದೆಂತೆಂದೊಡೆ : ಈ ಜಂಬೂದ್ವೀಪವ ಭರತಕ್ಷೇತ್ರದೊಳ್ ಪುರವರ್ಧನಮೆಂಬುದು ನಾಡಲ್ಲಿ ಕೌಂದಿನೀನಗರಮೆಂಬುದು ಪೊಟಿಲದನಾಳ್ವಂ ಪದ್ಮರಥನೆಂಬೊನರಸನಾತನ ಮಹಾದೇವಿ ಪದ್ಮಶ್ರೀಯೆಂಬೊಳಂತವರ್ಗಳಿಷ್ಟವಿಷಯ ಕಾಮ ಭೋಗಂಗಳನನುಭವಿಸುತ್ತಿರೆ ಮತ್ತಾ ಆರಸನ ಪುರೋಹಿತಂ ನಾಲ್ಕು ವೇದಮುಮಾಱಿಂಗಮುಂ ಪದಿನೆಂಟು ಧರ್ಮಶಾಸ್ತ್ರಂಗಳುಮಂ ಬಲ್ಲೊಂ ಸೋಮಶರ್ಮನೆಂಬೊಂ ಪಾರ್ವನಾತನ ಭಾರ್ಯೆ ಪ್ರತ್ಯಕ್ಷ ಶ್ರೀಯಾದೇವತೆಯೆನೆ ಪೋಲ್ವ ಸೋಮಶ್ರೀಯೆಂಬೊಳಾಯಿರ್ವರ್ಗ್ಗಂ ಮಗಂ ಪುಟ್ಟದೊಂ ತಾಯ್ಗಂ ತಂದೆಗಮೆಲ್ಲಾ ನಂಟರ್ಗೆಯುತ್ಸಾಹಮುಂ ಸುಖಮುಂ ವಿಭವಮುಮಂ ಪಡೆವುದಜೆಂದವಾ ಕೂಸಿಂಗೆ ಭದ್ರಬಾಹುವೆಂಬ ಪೆಸರನೆಲ್ಲರುಂ ನೆರೆದಿಟ್ಟೊಡಾತನುಂ ಬಿದಿಗೆಯ ಚಂದ್ರನಂತೆ ಕ್ರಮಕ್ರಮದಿಂ ಸುಖದಿಂ ಬಳೆದು ಮುಂಜಿಗಟ್ಟುವ ಪ್ರಾಯಮಾದೊಡೆ ಪ್ರಶಸ್ತ ದಿವಸ ವಾರ ನಕ್ಷತ್ರ ಮುಹೂರ್ತದೊಳ್

ಭದ್ರಬಾಹುಭಟ್ಟಾರರ (ಋಷಿಗಳ) ಕಥೆಯನ್ನು ಹೇಳುವೆನು : (ಭದ್ರಬಾಹು ಋಷಿ ಅರೆ ಉಣಿಸಿನಿಂದ ಅತ್ಯಂತ ಕಠಿನವಾದ ಕಷ್ಟದ ಪರಿಣಾಮವಿಲ್ಲದೆ ಅಂದರೆ ಪರಿಣಾಮವನ್ನು ಸಹಿಸಿ ತೀವ್ರವಾದ ಹಸಿವಿನಿಂದಲೇ ಶ್ರೇಷ್ಠವಾದ ದರ್ಶನ - ಜ್ಞಾನ - ಚಾರಿತ್ರಗಳ ಆರಾಧನೆಯನ್ನು ಮಾಡಿದನು.) ಅದು ಹೇಗೆಂದರೆ : ಈ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ಪುರವರ್ಧನವೆಂಬ ನಾಡಿದೆ. ಅಲ್ಲಿ ಕೌಂಜಿನೀನಗರವೆಂಬ ಪಟ್ಟಣವನ್ನು ಪದ್ಮರಥನೆಂಬ ರಾಜನು ಆಳುತ್ತಿದನು. ಅವನ ಮಹಾರಾಣಿ ಪದ್ಮಶ್ರೀ ಎಂಬವಳು. ಅಂತು ಅವರು ಇಷ್ಟವಿಷಯದ ಕಾಮಸುಖಗಳನ್ನು ಅನುಭವಿಸುತ್ತಿದ್ದರು. ಆ ರಾಜನ ಪುರೋಹಿತನಾದ ಸೋಮಶರ್ಮನೆಂಬ ಬ್ರಾಹ್ಮಣನು ನಾಲ್ಕು ವೇದಗಳನ್ನೂ ಆರು ವೇದಾಂಗಗಳನ್ನೂ ಹದಿನೆಂಟು ಧರ್ಮಶಾಸ್ತ್ರಗಳನ್ನೂ ಬಲ್ಲವನಾಗಿದ್ದನು. ಅವನ ಹೆಂಡತಿಯಾದ ಸೋಮಶ್ರೀ ಎಂಬವಳು ಪ್ರತ್ಯಕ್ಷ ಲಕ್ಷ್ಮೀದೇವಿಯನ್ನೇ ಹೋಲುತ್ತಿದ್ದಳು. ಆ ಇಬ್ಬರಿಗೆ ಒಬ್ಬ ಮಗನು ಹುಟ್ಟಿದನು. ತಾಯಿಗೆ, ತಂದೆಗೆ ಮತ್ತು ಎಲ್ಲ ನಂಟರಿಗೆ ಉತ್ಸಾಹವನ್ನೂ ಸುಖವನ್ನೂ ಐಶ್ವರ್ಯವನ್ನೂ ಉಂಟುಮಾಡುವವನೆಂಬ ಅರ್ಥದಿಂದ ಎಲ್ಲರೂ ಕೂಡಿ ಆ ಮಗುವಿಗೆ ಭದ್ರಬಾಹು ಎಂಬ ಹೆಸರನ್ನಿಟ್ಟರು. ಅವನು ಬಿದಿಗೆಯ ಚಂದ್ರನ ಹಾಗೆ ಕ್ರಮಕ್ರಮವಾಗಿ ಸುಖದಿಂದ ಬೆಳೆದನು. ಉಪನಯನ ಮಾಡುವ ಪ್ರಾಯವಾಗಲು ಉತ್ತಮವಾದ ದಿವಸ, ವಾರ, ನಕ್ಷತ್ರ, ಮುಹೂರ್ತದಲ್ಲಿ ಉಪನಯನ

ಮುಂಜಿಬಂಧನಕ್ರಿಯೆಯಂ ಮಾಡಿದ ಬಟಿಕೆ, ತನ್ನೋರಗೆಗಳಪ್ಪ ಪಲಂಬರ್ ಮಾಣಿಗಳ್ವೆರಸು ಪೊಱವೊಬಲೊಳ್ ಬಟ್ಟಾಡುತ್ತಿರೆ ಭದ್ರಬಾಹುವೆಂಬ ಮಾಣಿಯೊಂದುಬಟ್ಟನ ಮೇಗೆ ಪದಿನಾಲ್ಕು ಬಟ್ಟನೊಂದೊಂದಱ ಮೇಗೋಳಿಯೊಳಿಟ್ಟಾಡುತ್ತಿರ್ಪನ್ನೆಗಂ ಇತ್ತ ವರ್ಧಮಾನ ಭಟ್ಟಾರರ್ ಮೋಕ್ಷಕ್ಕೆವೋದಿಂ ಬಟಿಕೆ, ಚತುರ್ದಶ ಪೂರ್ವಧಾರಿಗಳಪ್ಪ ಶ್ರುತಕೇವಳಿಗಳ್ ನಾಲ್ಕನೆಯವರ್ ಗೋವರ್ಧನರೆಂಬ ಭಟಾರರುಜ್ಜಯಂತಮಂ ವಂದಿಸಲೆಂದು ವಿಹಾರಿಸುತ್ತುಂ ಬರ್ಪೊರಾ ಕೌಂಡಿನೀ ನಗರಕ್ಕೆವಂದು ಪೊಱವೊಬಲೊಳೊಂದು ಬಟ್ಟನ ಮೇಗೆ ಪದಿನಾಲ್ಕುಂ ಬಟ್ಟನೊಂದೊಂದಱ ಮೇಗೋಳಿಯೊಳಿಟ್ಟಾಡುತ್ತಿರ್ಪ್ಪ ಭದ್ರಬಾಹುಮಾಣಿಯಂ ಗೋವರ್ಧನ ಭಟ್ಟಾರರ್ ಪಿರಿದುಂ ಬೇಗಂ ನೋಡುತ್ತಿರ್ದಿಂತೆಂದುದ್ದೇಶಂ ಗೊಯ್ದೊರೀತನೆಮ್ಮಿಂ ಬಟಿಕೆ, ಚತುರ್ದಶಪೂರ್ವಧಾರಿಯಪ್ಪ ಮಹಾತ್ಮ್ಯಮನೊಡೆಯೊಂ ಭದ್ರಬಾಹು ಭಟಾರರೆಂಬೊರಪ್ಪೊರೆಂದು ಬಗೆದಾತನನವರ ಮನೆಗೊಡಗೊಂಡು ಪೋಗಿಯವರ ತಾಯ್ತಂದೆಗಮಿಂತೆಂದರೀತನನೆಮಗೊಪ್ಪಿಸಿಮೆಲ್ಲಾ ಶಾಸ್ತ್ರಂಗಳುಮಂ ಕಲ್ಪಿಸಿ ಪಂಡಿತನಂ ಮಾಡಿ ನಿಮಗೊಪ್ಪಿಸುವೊಮೆಂದೊಡವರುಮಂತೆಗೆಯ್ಮೆಂದೊಡಾತನನೊಡಗೊಂಡು ಪೋಗಿ ಕೆಲವು ದಿವಸದಿಂದೊಳಗೆ ವ್ಯಾಕರಣಂ ಪ್ರಮಾಣಂ ಛಂದಮಲಂಕಾರ ನಿಘಂಟು ಕಾವ್ಯ ನಾಟಕಂ ವೊದಲಾಗೊಡೆಯ ಲೋಕದೊಳುಳ್ಳ ಶಾಸ್ತ್ರಂಗಳೆಲ್ಲಮಂ ಕಲ್ಪಿಸಿದೊಡಧಿಗಮ

ಸಂಸ್ಕಾರವನ್ನು ಮಾಡಿದರು. ಆಮೇಲೆ, ತನ್ನ ಸಂಗಡಿಗರಾದ ಹಲವರು ಬ್ರಹ್ಮಚಾರಿಗಳನ್ನು ಕೂಡಿಕೊಂಡು ಪಟ್ಟಣದ ಹೊರಗೆ ಬಿಲ್ಲೆಯಾಟವನ್ನು ಆಡುತ್ತಿದ್ದಾಗ, ಭದ್ರಬಾಹುವೆಂಬ ವಟು ಒಂದು ಬಿಲ್ಲೆಯ ಮೇಲೆ ಒಂದೊಂದರಂತೆ ಮೇಲೆ ಮೇಲೆ ಹದಿನಾಲ್ಕು ಬಿಲ್ಲೆಗಳನ್ನು ಸಾಲಾಗಿಟ್ಟು ಆಡುತ್ತಿದ್ದನು. ಇತ್ತ ವರ್ಧಮಾನ ತೀರ್ಥಂಕರರು ಮೋಕ್ಷಕ್ಕೆ ಹೋದ ಮೈಲೆ ಜೈನಧರ್ಮಶಾಸ್ತ್ರದ ಹದಿನಾಲ್ಕು ಪೂರ್ವಗ್ರಂಥಗಳನ್ನು ಬಲ್ಲವರಾದ, ಜೈನಾಗಮದ ಪರಿಪೂರ್ಣ ಜ್ಞಾನವುಳ್ಳವರಾದ, ವರ್ಧಮಾನರಿಂದ ನಾಲ್ಕನೆಯವರಾದ ಗೋವರ್ಧನರೆಂಬ ಋಷಿಗಳು ಉಜ್ಜಯಂತವೆಂಬ ಪರ್ವತವನ್ನು ವಂದಿಸುವುದಕ್ಕಾಗಿ ಸಂಚಾರಮಾಡುತ್ತ ಬರುತ್ತಿದ್ದರು. ಅವರು ಕೌಂಡಿನೀನಗರಕ್ಕೆ ಬಂದು ಬಿಲ್ಲೆಯ ಮೇಲೆ ಇನ್ನೊಂದರಂತೆ ಹದಿನಾಲ್ಕು ಬಿಲ್ಲೆಗಳನ್ನು ಸಾಲಿನಲ್ಲಿ ಇಟ್ಟು ಆಡುತ್ತಿರುವುದನ್ನು ಕಂಡರು. ಅವರು ಭದ್ರಬಾಹು ಮಾಣಿಯನ್ನು ಬಹಳ ಹೊತ್ತು ನೋಡಿ ತಮ್ಮ ಮನಸ್ಸಿನಲ್ಲಿಯೇ ಹೀಗೆ ಹೇಳಿಕೊಂಡರು - "ಈತನು ನಮ್ಮನಂತರದಲ್ಲಿ ಹದಿನಾಲ್ಕು ಪೂರ್ವಗ್ರಂಥಗಳನ್ನು ಬಲ್ಲ ಮಾಹಾತ್ಮವನ್ನುಳ್ಳ ಭದ್ರಬಾಹುವೆಂಬ ಮಹರ್ಷಿಯಾಗಲಿರುವನು". ಹೀಗೆ ಭಾವಿಸಿ, ಆ ಋಷಿಗಳು ಭದ್ರಬಾಹುವನ್ನು ಕೂಡಿಕೊಂಡು ಅವನ ಮನೆಗೆ ಹೋಗಿ ಅವನ ತಾಯಿತಂದೆಯವರಿಗೆ ಹೀಗೆ ಹೇಳಿದರು - "ಈತನನ್ನು ನಮಗೆ ಕೊಡಿರಿ. ಇವನಿಗೆ ನಾವು ಎಲ್ಲಾ ಶಾಸ್ತ್ರಗಳನ್ನು ಅಭ್ಯಾಸ ಮಾಡಿಸಿ ವಿದ್ವಾಂಸನನ್ನಾಗಿ ಮಾಡಿ ನಿಮಗೆ ಒಪ್ಪಿಸುವೆವು." ಹೀಗೆನ್ನಲು ಅವರು "ಹಾಗೆಯೇ ಮಾಡಿ" ಎಂದರು. ಋಷಿಗಳು ಅವನನ್ನು ಕರೆದುಕೊಂಡು ಹೋಗಿ ಕೆಲವು ದಿವಸಗಳ ಒಳಗಾಗಿ ವ್ಯಾಕರಣ, ಪ್ರಮಾಣ, ಛಂದಸ್ಸು, ಅಲಂಕಾರ, ನಿಘಂಟು, ಕಾವ್ಯ, ನಾಟಕ ಮೊದಲಾಗಿ ಲೋಕದಲ್ಲಿ ಇರತಕ್ಕ ಎಲ್ಲ ಶಾಸ್ತ್ರಗಳನ್ನೂ ಕಲಿಸಿದರು. ಇದರಿಂದ ಭದ್ರಬಾಹು ಸಮ್ಯಕ್‌ದೃಷ್ಟಿಯನ್ನು ಪಡೆದು ಧರ್ಮಶಾಸ್ತ್ರಗಳೆಲ್ಲವನ್ನೂ ತಿಳಿದು ಸಂಸಾರದಲ್ಲಿಯೂ ಶರೀರದಲ್ಲಿಯೂ

ಸಮ್ಯಗ್‌ದೃಷ್ಟಿಯಾಗಿಯಾಗಮದೊಳಿಲ್ಲಮನಜೆದು ಸಂಸಾರ ಶರೀರ ಭೋಗ ವೈರಾಗ್ಯ ಪರಾಯಣನಾಗಿ ಭಟ್ಟಾರಾ ಎನಗೆ ದೀಕ್ಷೆಯಂ ದಯೆಗೆಯ್ಯಮೆನೆ ಭಟ್ಟಾರರೆಂದರೆಮಗಂತು ದೀಕ್ಷೆಯಂ ಕುದಲಾಗ ಮಗನೆ ನಿನ್ನ ಪೊಟಲ್ಗೆ ನೀಂ ಪೋಗಿ ನಿನ್ನ ಕಲ್ತ ವಿದ್ಯೆಯಂ ಪಂಡಿತಿಕ್ಕೆಯುಮನಾ ಪೊಟಲೊಳ್ ನೆಗಟ್ಟೆ ನೆಗಟ್ಟ ಪಂಡಿತರ್ಕಳೊಡನೆ ವಾದಂಗೆಯ್ದವರಂ ಗೆಲ್ದು ದಶದಿಶೆಗಳೊಳಿಲ್ಲಂ ನಿನ್ನ ಪಾಂಡಿತ್ಯದ ಯಶಮಂ ಪಸರಿಸಿ ನಿನ್ನ ಪೊಟಲೊಳ್ ನಾಮೊಡಗೊಂಡು ಬಂದುದರ್ಕೆ ತಾಯ್ತಂದೆಗಂ ಸಂತೋಸಂಮಾಡಿಯವರಂ ಬಿಡಿಸಿಯೊಡಂಬಡಿಸಿ ಬಂದೊಡೆ ತಪಮಂ ಕುದಲಕ್ಕುಮಂತೆ ಯಾಗದೆಂದೊಡೆ ಭದ್ರಬಾಹುಮಾಣಿಯುಂ ಭಟ್ಟಾರರಂ ವಂದಿಸಿ ತನ್ನ ಪೊಟಲ್ಗೆವ್ಪೋಗಿ ತಾಯುಂ ತಂದೆಯುಮಂ ಕಂಡು ಪೊಟಲೊಳ್ ನೆಗಟ್ಟ ಪಂಡಿತರ್ಕಳೊಡನೆ ವಾದಂಗೆಯ್ದು ಗೆಲ್ದು ದಶದಿಶೆಗಳೊಳಿಲ್ಲಂ ತನ್ನ ಪಾಂಡಿತ್ಯದ ಯಶಮಂ ಪಸರಿಸಿ ತಾಯ್ತಂದೆಗಂ ಸಂತೋಸಂ ಮಾಡಿಯವರನೊದಂಬಡಿಸಿ ಬಂದು ಗೋವರ್ಧನ ಭಟ್ಟಾರರ ಪಕ್ಕದೆ ಕುಮಾರಬ್ರಹ್ಮಚಾರಿಯಾಗಿ ಭದ್ರಬಾಹು ತಪಂಬಟ್ಟು ಕೆಲವು ದಿವಸದಿಂದೊಳಗೆ ದ್ವಾದಶಾಂಗ ಚತುರ್ದಶಪೂರ್ವಮಪ್ಪಾಗ ಮಮೆಲ್ಲಮಂ ಗ್ರಂಥಾರ್ಥಸ್ವರೂಪದಿಂ ಕಲ್ತು ಸಕಲಶಾಸ್ತ್ರಪಾರಾವಾರಗನಾಗಿ ಎಲ್ಲಾವ್ಪೋದುಗಳುಮಂ ನೆಱೆಯೋದಿ ಕಲ್ತು ಶ್ರುತದೊಳಪ್ಪ ಭಕ್ತಿಕಾರಣಮಾಗಿ ಪ್ರತಿಮಾಯೋಗಂನಿಂದೊರಂ ದೇವರ್ಕಳುಂ ಮನುಷ್ಯರ್ಕಳುಂ ಬಂದು ಪಿರಿದಪ್ಪ ಪೂಜೆಯಂ ಮಾಡಿಯರ್ಚಿಸಿ ಪೂಜಿಸಿ ಬಂದಿಸಿದೊಡೆಲ್ಲಾ

ಸುಖಾನುಭವದಲ್ಲಿಯೂ ವೈರಾಗ್ಯಾಸಕ್ತನಾಗಿ ಗೋವರ್ಧನ ಭಟಾರರೊಡನೆ "ಪೂಜ್ಯರೇ ನನಗೆ ಜೈನದೀಕ್ಷೆಯನ್ನು ಕರುಣಿಸಿರಿ" ಎಂದು ಕೇಳಿದನು. ಅದಕ್ಕೆ ಭಟಾರರು ಹೀಗೆಂದರು - "ನಮಗೆ ಹಾಗೆ ಸುಲಭದಲ್ಲಿ ದೀಕ್ಷೆ ಕೊಡಲಿಕ್ಕೆ ಆಗುವುದಿಲ್ಲ. ಮಗನೇ, ನೀನು ನಿನ್ನ ಪಟ್ಟಣಕ್ಕೆ ಹೋಗಿ ನಿನ್ನ ಕಲಿತ ವಿದ್ಯೆಯನ್ನೂ ವಿದ್ವತ್ತೆಯನ್ನೂ ಆ ಪಟ್ಟಣದಲ್ಲಿ ತೋರಿಸಿ ಪ್ರಸಿದ್ಧರಾದ ವಿದ್ವಾಂಸರೊಡನೆ ವಾದ ಮಾಡಿ, ಅವರನ್ನು ಸೋಲಿಸಿ ಹತ್ತು ದಿಕ್ಕುಗಳಲ್ಲೆಲ್ಲ ನಿನ್ನ ಪಾಂಡಿತ್ಯದ ಕೀರ್ತಿಯನ್ನು ಹಬ್ಬಿಸು. ನಿನ್ನನ್ನು ನಾವು ಕರೆದುಕೊಂಡು ಬಂದುದಕ್ಕೆ ನಿನ್ನ ತಂದೆತಾಯಿಗಳಿಗೆ ಸಂತೋಷವನ್ನುಂಟುಮಾಡಿ, ಅವರು ಒಪ್ಪುವಂತೆ ಮಾಡಿ ಅವರನ್ನು ಬಿಟ್ಟು ಬಂದರೆ, ತಪಸ್ಸನ್ನು ನಿನಗೆ ಉಪದೇಶಿಸಬಹುದು. ಅದಲ್ಲವಾದರೆ ಸಾಧ್ಯವಾಗದು" ಎಂದರು. ಭದ್ರಬಾಹು ವಟು ಋಷಿಗಳನ್ನು ನಮಸ್ಕರಿಸಿ ತನ್ನ ಪಟ್ಟಣಕ್ಕೆ ಹೋದನು. ತನ್ನ ತಾಯಿತಂದೆಯರನ್ನು ಕಂಡು ಪಟ್ಟಣದಲ್ಲಿ ಪ್ರಸಿದ್ಧರಾದ ವಿದ್ವಾಂಸರೊಡನೆ ವಾದಮಾಡಿ ಗೆದ್ದು ಹತ್ತು ದಿಕ್ಕುಗಳಲ್ಲೆಲ್ಲ ತನ್ನ ವಿದ್ವತ್ತಿನ ಕೀರ್ತಿಯನ್ನು ಹಬ್ಬಿಸಿದನು. ತಾಯಿತಂದೆಗಳಿಗೆ ಸಂತೋಷವನ್ನುಂಟುಮಾಡಿ, ಅವರನ್ನು ಒಪ್ಪುವಂತೆ ಮಾಡಿ ಬಂದು ಗೋವರ್ಧನ ಋಷಿಗಳ ಬಳಿಯಲ್ಲಿ ಭದ್ರಬಾಹು ಬಾಲಬ್ರಹ್ಮಚಾರಿಯಾಗಿ ತಪಸ್ಸನ್ನು ಮಾಡಿದನು. ಕೆಲವು ದಿವಸಗಳೊಳಗಾಗಿ ಹನ್ನೆರಡು ಅಂಗ ಮತ್ತು ಹದಿನಾಲ್ಕು ಪೂರ್ವಗಳು ಉಳ್ಳ ಶಾಸ್ತ್ರಗಳನ್ನೆಲ್ಲ ಗ್ರಂಥದ ಅರ್ಥದೊಂದಿಗೆ ಕಲಿತನು. ಎಲ್ಲ ಶಾಸ್ತ್ರಗಳಲ್ಲಿಯೂ ಪಾರಂಗತನಾಗಿ ಎಲ್ಲ ವಿದ್ಯೆಗಳನ್ನೂ ವಿಶೇಷವಾಗಿ ಓದಿ, ಶಾಸ್ತ್ರಗಳಲ್ಲಿರುವ ಭಕ್ತಿಯೇ ಕಾರಣವಾಗಿ ಕಲಿತು ಪ್ರತಿಮಾಯೋಗದಲ್ಲಿ ನಿಂತನು. ದೇವತೆಗಳೂ ಮನುಷ್ಯರೂ ಬಂದು ಭದ್ರಬಾಹು ಋಷಿಗಳನ್ನು ಅತಿಶಯವಾಗಿ ಗೌರವಿಸಿ, ಪೂಜಿಸಿದರು. ಎಲ್ಲಾ ಋಷಿಗಳ ಸಮೂಹಕ್ಕೂ

ಋಷಿಸಮುದಾಯಮುಮಂ ಪ್ರತಿಪಾಲಿಸಲ್ಕೆ ಸಮರ್ಥರಾಗಿರ್ಪ್ಪನ್ನೆಗಂ ಗೋವರ್ಧನ ಭಟ್ಟಾರರ್ ಸಮಾಧಿ ಮರಣದಿಂದಂ ರತ್ನತ್ರಯಮಂ ಸಾಧಿಸಿ ಮುದಿಪಿ ದೇವಲೋಕಕ್ಕೆ ವೋದರ್. ಇತ್ತ ಭದ್ರ ಬಾಹು ಭಟ್ಟಾರರ್ ಚತುರ್ದಶ ಪೂರ್ವಧಾರಿಗಳುಂ ಕಡೆಯಾ ರಿಸಿಯಯ್ದನೆಯ ಶ್ರುತಕೇವಳಿ ಗಳವಧಿಜ್ಞಾನಿಗಳುಂ ಪಲವುಂ ಋದ್ಧಿಗಳಿಂ ಕೂಡಿದೊರೆಲ್ಲಾ ಋಷಿಸಮುದಾಯಮುಮಂ ಪ್ರತಿಪಾಳಿಸುತ್ತುಂ ಗ್ರಾಮ ನಗರ ಖೇಡ ಖರ್ವದ ಮದಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಿರ್ಪ್ಪನ್ನೆಗಂ ಮತ್ತಿತ್ತ ಮಗಧೆಯೆಂಬುದು ನಾಡಲ್ಲಿ ಪಾಟಳೀಪುತ್ರಮೆಂಬುದುಪೊಬಲದನಾಳ್ದೊಂ ನಂದನೆಂಬರಸಂ ಪಲಕಾಲಮರಸುಗೆಯ್ಯುತ್ತಿರೆ ಮತ್ತೊಂದುದಿವಸಂ ಚಾಣಕ್ಯನೆಂಬ ಭಟ್ಟನಂ ನಂದಂ ಪರಿಭವಿಸಿ ನೂಂಕಿಯಟ್ಟಿ ಕಳೆಯಿಸಿದೊಡಾತನುಂ ಮುಳಿದು ನಂದನಂ ಕೆಡಿಸಿ ನಂದನ ರಾಜ್ಯಸ್ಥಾನದೊಳ್ ಪೆಱನೊರ್ವನಂ ಚಂದ್ರಗುಪ್ತನೆಂಬೊನಂ ನಿಱಿಸಿದೊಡಾತನುಂ ಪಲಕಾಲಮರಸುಗೆಯ್ದು ಕಟಿದೊಡಾತನ ಮಗಂ ಬಿಂದುಸಾಗರನೆಂಬೊನರಸುಗೆಯ್ದು ಕಟಿದ ಬಟಿಕ್ಕಾತನ ಮಗನಶೋಕನೆಂಬೊನರಸುಗೆಯ್ಯುತ್ತಿರೆ ಆತನ ಮಗಂ ಪ್ರತಾಪದಿಂ ತೇಜದಿಂದಾದಿತ್ಯನೊಳೋರನ್ನನಪ್ಪೊಂ ಕುಣಾಳನೆಂಬೊನಂತವರ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಂ ಕಾಲಂ ಸಲೆ ಮತ್ತೊಂದು ದಿವಸಮಶೋಕಮಹಾರಾಜಂ ಪರಚಕ್ರದ ಮೇಗೆತ್ತಿ ಪೋಗಿ ಅಲ್ಲಿಂದಂ ಮಂತ್ರಿ ಪುರೋಹಿತ ತಳವಜಿಾದಿಗಳ್ಗಿಂತೆಂದೋಲೆಯನಟ್ಟಿದೊ ನುಪಾಧ್ಯಾಯಂಗೆ ಕಟವಯ ಕೂಟಂ ತುಪ್ಪಮುಂ ತೊವೆಯುಮನುಣಲ್ ಕೊಟ್ಟು

ಪಾಲಕರಾಗಿ ಸಮರ್ಥರಾಗಿ ಭದ್ರಬಾಹು ಋಷಿಗಳು ಇದ್ದರು. ಆಗ ಗೋವರ್ಧನ ಋಷಿಗಳು ರತ್ನತ್ರಯವನ್ನು ಸಂಪಾದಿಸಿ ಸಮಾಧಿಮರಣದಿಂದ ಸತ್ತು ದೇವಲೊಕಕ್ಕೆ ಹೋದರು. ಇತ್ತ ಭದ್ರಬಾಹು ಋಷಿಗಳು ಹದಿನಾಲ್ಕು ಪೂರ್ವಗಳುಳ್ಳ ಶಾಸ್ತ್ರಗಳನ್ನರಿತವರೂ ಋಷಿ ಪರಂಪರೆಯಲ್ಲಿ ಐದನೆಯವರೂ ಕೇವಲಜ್ಞಾನ ಅವಧಿಜ್ಞಾನಗಳನ್ನು ಪಡೆದವರೂ ಹಲವು ತಪಸ್ಸಿದ್ಧಿಗಳುಳ್ಳವರೂ ಆಗಿ, ಎಲ್ಲ ಋಷಿ ಸಮೂಹವನ್ನೂ ಪಾಲಿಸುತ್ತ ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖಗಳಲ್ಲಿ ಸಂಚರಿಸುತ್ತ ಇದ್ದರು. ಹೀಗಿರಲು, ಇತ್ತ ಮಗಧೆ ಎಂಬ ನಾಡಿನಲ್ಲಿ ಪಾಟಳೀಪುತ್ರವೆಂಬ ಪಟ್ಟಣವನ್ನಾಳುವ ನಂದನೆಂಬ ರಾಜನಿದ್ದನು. ಅವನು ಹಲವು ಕಾಲ ರಾಜ್ಯಭಾರಮಾಡುತ್ತ ಇದ್ದನು. ಅನಂತರ, ನಂದನು ಒಂದು ದಿವಸ ಚಾಣಕ್ಯನೆಂಬ ಭಟ್ಟನನ್ನು ಅಪಮಾನಗೊಳಿಸಿ, ನೂಕಿ, ಅಟ್ಟಿ ಹೊರಪಡಿಸಿದನು. ಚಾಣಾಕ್ಯನು ಕೋಪಗೊಂಡು ನಂದನನ್ನು ನಾಶಗೊಳಿಸಿ ರಾಜ್ಯದ ಅಧಿಕಾರ ಸ್ಥಾನದಲ್ಲಿ ಚಂದ್ರಗುಪ್ತನೆಂಬ ಬೇರೊಬ್ಬನನ್ನು ನಿಲ್ಲಿಸಿದನು. ಆತನು ಹಲವು ಕಾಲ ಅರಸುತನವನ್ನು ನಡೆಸಿ ಸತ್ತುಹೋಗಲು, ಅವನ ಮಗನಾದ ಬಿಂದುಸಾಗರ ನೆಂಬಾತನು ರಾಜ್ಯಭಾರ ಮಾಡಿ ತೀರಿಹೋದನು. ಅವನ ನಂತರ, ಅವನ ಮಗನಾದ ಅಶೋಕನೆಂಬವನು ರಾಜ್ಯಭಾರಮಾಡುತ್ತಿದ್ದನು. ಅಶೋಕನ ಮಗನಾದ ಕುಣಾಳನು ಪರಾಕ್ರಮದಲ್ಲಿಯೂ ತೇಜಸ್ಸಿನಲ್ಲಿಯೂ ಸೂರ್ಯನಂತಿದ್ದನು. ಅಂತು ಅವರು ಇಷ್ಟವಾದ ವಿಷಯದ ಬಯಕೆಯ ಸುಖಗಳನ್ನು ಅನುಭವಿಸುತ್ತಿದ್ದು ಹೀಗೆಯೇ ಕಾಲ ಕಳೆಯಿತು. ಆಮೇಲೆ ಒಂದು ದಿವಸ ಅಶೋಕ ಮಹಾರಾಜನು ಶತ್ರುಗಳ ರಾಜ್ಯದ ಮೇಲೆ ದಂಡೆತ್ತಿಹೋದನು. ಅಲ್ಲಿಂದ ಮಂತ್ರಿ ಪುರೋಹಿತ - ನಗರ ರಕ್ಷಕ ಮುಂತಾದವರಿಗೆ ಈ ರೀತಿಯಾಗಿ ಪತ್ರವನ್ನು ಕಳುಹಿಸಿದನು - "ಉಪಾಧ್ಯಾಯನಿಗೆ ಕಳಮೆಯ ಅನ್ನ, ತುಪ್ಪ, ತೊವ್ವೆಗಳನ್ನು ಊಣಲಿಕ್ಕೆ ಕೊಟ್ಟು ರಾಜಕುಮಾರನನ್ನು (ಅಧ್ಯಾಪಯೇತ್)

ಕುಮಾರನನೋದಿಸುಗೆಂದೋಲೆಯನಟ್ಟಿದೊಡೆ ವಾಚಕನೋಲೆಯರ್ಥಮನಱಿಯದೆ ವಿಪರೀತಮಾಗಿಂತೆಂದು ಬಾಚಿಸಿದೆನ್ ಉಪಾಧ್ಯಾಯಂ ಶಾಲಿಂ ಕೂರಂ ಚ ಮಶಿಂ ಘೃತಂ ದೆತ್ವಾ ಕುಮಾರಮಂಧಾಪಯೇತ್ ಎಂದಿಂತು ವಿಪರೀತಮಾಗಿ ಲೇಖಾರ್ಥಮಂ ಬಾಚಿಸಿದೊಡನಿಬರುಂ ಕೇಳ್ದು ಅವ್ಯತಿಹತಶಾಸನನಪ್ಪ ನೃಪತಿಯಾಜ್ಞೆಗೆ ಭಯಸ್ಥರ್ಕಳಾಗಿ ಉಪಾಧ್ಯಾಯಂಗೆ ಕಲಮೆಯ ಕೂಬುಂ ಮಸಿಯುಂ ತುಪ್ಪಮುಮನುಣಲ್ಕೊಟ್ಟು ಕುಣಾಳನೆಂಬ ಕುಮಾರನೆರಡುಂ ಕಣ್ಗಳುಮನೊಡೆದು ಕುರುಡಂ ಮಾಡಿದ ಕೆಲವು ದಿವಸದಿಂದರಸಂ ಪರಚಕ್ರಮಂ ಸಾಧಿಸಿ ಬಂದು ಮಗಂ ಕುರುಡಾದುದಂ ಕಂಡಾದಮಾನುಮುಬ್ಬಿಗಂಬಟ್ಟು ಸೈರಿಸಲಾಱದೆ ಕುಣಾಳನರಸಿ ಚಂದ್ರಾನನೆಯೆಂಬೊಳ್ಗೆ ಮಗಂ ಪುಟ್ಟಿದೊಡಾತಂಗೆ ಸಂಪ್ರತಿ ಚಂದ್ರಗುಪ್ತನೆಂದು ಪೆಸರನಿಟ್ಟು ರಾಜ್ಯಾಭಿಷೇಕಂಗೆಯ್ದು ಪಟ್ಟಂಗಟ್ಟಿ ಸಮಸ್ತ ರಾಜ್ಯಭಾರಮೆಲ್ಲಮಂ ನಿರೂಪಿಸಿ ಕುಣಾಳನುಮನೆಂದಂ ಮಗನೆ ಬೇದು ನೀನೆಂದೊಡಾತನುಂ ಕಾಕಿಣೀರತ್ನಮಂ ಬೇಡಿದೊಡಾ ರತ್ನಂ ಚಕ್ರವರ್ತಿಗಲ್ಲದಿಲ್ಲೆಂದು ಮಗಂಗೆ ಮಱುಮಾತುಗೊಟ್ಟು ಸಂಸಾರವೈರಾಗ್ಯಮಾದಮಾನುಂ ಪೆರ್ಚ ಸುವ್ರತರೆಂಬ ಭಟ್ಟಾರರ ಪಕ್ಕದೆ ಜಿನದೀಕ್ಷೆಯಂ ಕೈಕೊಂದು ಪರತ್ರಯಂ ಸಾಧಿಸಿದೊಂ ಮತ್ತಿತ್ತ ಸಂಪ್ರತಿ ಚಂದ್ರಗುಪ್ತಮಹಾರಾಜನರಸುಗೆಯ್ಯುತ್ತಿರೆ ಸಮಾಧಿಗುಪ್ತರೆಂಬಾಚಾರ್ಯರವಧಿಜ್ಞಾನಿಗಳ್ ವಿಹಾರಿಸುತ್ತಂ ಬರ್ವರಾ ಪಾಟಳೀಪುತ್ರಕ್ಕೆ ವಂದು ಪೊಱವೊಲಲ ಬಹಿರುದ್ಯಾನವನದೊಳಿರ್ದೊರಂ ಸಂಪ್ರತಿ ಚಂದ್ರಗುಪ್ತಂ ಪೋಗಿ ವಂದಿಸಿ ಧರ್ಮಮಂ ಕೇಳ್ದು

ಓದಿಸತಕ್ಕದ್ದು". ಹೀಗೆ ಪತ್ರವನ್ನು ಕಳುಹಿಸಲು ಅದನ್ನು ಓದುವವನು ಪತ್ರದ ಅರ್ಥವನ್ನು ತಿಳಿಯದೆ ವ್ಯತ್ಯಸ್ತವಾಗಿ ಅದನ್ನು ಓದಿದನು. "ಉಪಾಧ್ಯಾಯನಿಗೆ ಶಾಲ್ಯನ್ನವನ್ನೂ ಮಸಿಯನ್ನೂ ತುಪ್ಪವನ್ನೂ ಕೊಟ್ಟು ರಾಜಕುಮಾರನನ್ನು (ಅಂಧಾಪಯೇತ್) ಕುರುಡನನ್ನಾಗಿ ಮಾಡತಕ್ಕದ್ದು" ಈ ರೀತಿಯಾಗಿ ನಿಜವಾದ ಅರ್ಥಕ್ಕೆ ವ್ಯತಿರಿಕ್ತವಾಗಿ ಆ ಬರವಣಿಗೆಯ ಅರ್ಥವನ್ನು ಓದಿದನು. ಅವರೆಲ್ಲರೂ ಇದನ್ನು ಕೇಳಿ ತಡೆಯಿಲ್ಲದ ಶಾಸನವುಳ್ಳವನಾದ ರಾಜನ ಆಜ್ಞೆಗೆ ಹೆದರಿ, ಉಪಾಧ್ಯಾಯನಿಗೆ ಶಾಲ್ಯನ್ನವನ್ನೂ ತುಪ್ಪವನ್ನೂ ಮಸಿ (ಶಾಯಿ)ಯನ್ನೂ ಉಣ್ಣಲು ಕೊಟ್ಟು ಕುಣಾಳನೆಂಬ ರಾಜಕುಮಾರನ ಕಣ್ಣುಗಳನ್ನು ಒಡೆದು ಕುರುಡನನ್ನಾಗಿ ಮಾಡಿದರು. ಕೆಲ ದಿನಗಳಲ್ಲಿ ಅಶೋಕರಾಜನು ಶತ್ರುಗಳ ರಾಜವನ್ನು ಗೆದ್ದು ಬಂದಾಗ ಮಗನು ಕುರುಡನಾದುದನ್ನು ಕಂಡನು. ಅವನು ಅತ್ಯಂತ ದುಃಖವನ್ನು ಹೊಂದಿ ಸಹಿಸಲಾರದಾದನು. ಕುಣಾಳನ ಪತ್ನಿಯಾದ ಚಂದ್ರಾನನೆ ಎಂಬವಳಿಗೆ ಒಬ್ಬ ಮಗನು ಹುಟ್ಟಲು ಅವನಿಗೆ ಸಂಪ್ರತಿ ಚಂದ್ರಗುಪ್ತನೆಂಬ ನಾಮಕರಣವನ್ನು ಮಾಡಿ, ರಾಜ್ಯಾಭಿಷೇಕ ಮಾಡಿ, ಪಟ್ಟವನ್ನು ಕಟ್ಟಿ ತನ್ನ ಸಮಸ್ತ ರಾಜ್ಯಭಾರವನ್ನು ಅವನಿಗೆ ಒಪ್ಪಿಸಿದನು. ಆಮೇಲೆ ಅಶೋಕನು ಕುಣಾಳನೊಡನೆ - "ಮಗನೇ ನಿನಗೆ ಏನು ಬೇಕು, ಕೇಳು" ಎಂದನು. ಆಗ ಕುಣಾಳನು ಅಶೋಕನ ವಶದಲ್ಲಿದ್ದ ಕಾಕಿಣಿ ಎಂಬ ಚಿಂತಾರತ್ನವನ್ನು ತನಗೆ ಕೊಡಬೇಕೆಂದು ಕೇಳಿದನು. ಅದಕ್ಕೆ ಅಶೋಕನು ಆ ರತ್ನವು ಚಕ್ರವರ್ತಿಗೆ ಮಾತ್ರ ಸಲ್ಲತಕ್ಕದ್ದು, ಇತರರಿಗೆ ಸಲ್ಲತಕ್ಕದ್ದಲ್ಲವೆಂದು ಮಗನಿಗೆ ಪ್ರತ್ಯುತ್ತರ ಕೊಟ್ಟು ಸಂಸಾರದಲ್ಲಿ ಅತಿಶಯ ವೈರಾಗ್ಯವು ಹೆಚ್ಚಾಗಿ ಸುವ್ರತರೆಂಬ ಋಷಿಗಳ ಬಳಿಯಲ್ಲಿ ಜಿನದೀಕ್ಷೆ ಸ್ವೀಕರಿಸಿ ಪರಗತಿಯನ್ನು ಪಡೆದನು. ಆಮೇಲೆ, ಇತ್ತ ಸಂಪ್ರತಿ ಚಂದ್ರಗುಪ್ತ ಮಹಾರಾಜನು ರಾಜ್ಯವಾಳುತ್ತ ಇದ್ದನು. ಹೀಗಿರಲು ಅವಧಿಜ್ಞಾನಿ (ತ್ರಿಕಾಲಜ್ಞಾನಿ)ಗಳಾದ

ತದನಂತರಂ ತನ್ನ ಭವಾಂತರಂಗಳಂ ಬಿಸಗೊಂಡೊದೆ ಭಟಾರರ್ ಪೇಬಲ್ ತೊಡಗಿದರ್ ಈ ಜಂಬೂದ್ವೀಪದ ಭರತಕ್ಷೇತ್ರದೊಳವಂತಿಯೆಂಬುದು ನಾದಲ್ಲಿ ವೈದಿಶಮೆಂಬುದು ಪೊಬಲದನಾಳ್ವೊಂ ಜಯವರ್ಮನೆಂಬೊನರಸನಾತನ ಮಹಾದೇವಿ ಧಾರಿಣಿಯೆಂಬೊಳಂತವರ್ಗಳಿಷ್ಪವಿಷಯ ಕಾಮ ಭೋಗಂಗಳನನುಭವಿಸುತ್ತಿರೆ ಮತ್ತಾ ಪೊಬಲ ಸಾರೆ ಪರಾಳಕೂಟಮೆಂಬೂರೊಳ್ ದೇವಿಲನೆಂಬೊಂ ಶಾಕಟಕಂ ಪರದನಾತನ ಭಾರ್ಕೆ ಪೃಥ್ವಿಶ್ರೀಯೆಂಬೊಳಾಕೆಯ ಗರ್ಭದೊಳ್ ಪಾಪಕರ್ಮಜೀವಂ ನೆಲಸಿದೊಡೇನುಂ ನೆವಮಿಲ್ಲದೆ ಕಸವರಮೆಲ್ಲಂ ಕೆಟ್ಟತ್ತು ಮತ್ತೊಂದು ದಿವಸಂ ಪಲಂಬರ್ ಶಾಕಟಕ ಪರದರುಂ ಬೆರಸು ಬಂಡಿಗಳೊಳ್ ಪಟ್ಟೆಯುಂ ಧಾನ್ಯಮಂ ತೀವಿಕೊಂಡು ಪೊಬಲ್ಗೆ ಮಾಱಲೆಂದು ಪೋಪನ್ನೆಗಮೆಡೆಯೊಳಡವಿಯೊಳ್ ಕಳ್ಳರ್ ಬಟ್ಟೆಗಟ್ಟಿ ಮೇಲ್ವಾಯ್ದಿಡೆದೊದೆ ದೇವಿಲಂ ಮೊದಲಾಗೊಡೆಯ ಪಲಂಬರ್ ಪರದರ್ ಸತ್ತರುಟಿದರೆಲ್ಲಮೋಡಿ ಕೆಟ್ಟೊದೆ ಬಂದಮುಮೆಬ್ಬುಗಳುಂ ಮೊದಲಾಗೆಲ್ಲಮಂ ಕಳ್ಳರ್ ಕೊಂಡುಪೋದರಾ ಪ್ರಸ್ತಾವದೊಳ್ ಪೃಥ್ವಿಶ್ರೀ ಬೆಸಲೆಯಾಗಿ ನಂದಿಮಿತ್ರನೆಂದಾ ಕೂಸಿಂಗೆ ಪೆಸರನಿಟ್ಟು ಎರಬ್ಬೂರು ತಿಂಗಳಿಂಗೆ ತಾಯ್ ಕಟೆದೊಡೆ ಬಂದ ನಂಟರ್ ನದಪೆ ಬಳೆದೊಡಾ ನಂಟರುಂ ಕಟೆದುಳ್ಳರೆಲ್ಲಂ ಸತ್ತು ಕುಲಕ್ಷಯಮಾದೊಡೂರವರೆಲ್ಲಮಿಂತೆಂದರೀ ತರುವಲಿ ನಮ್ಮೂರೊಳಿರೆ ನಮಗೆ ಸಾವುಂ ಕೇಡುಮೆಮೋಘಮಕ್ಕುಮಿವನನಟ್ಟಿ ಕಳೆಯಿಮೆಂದೂರಿಂದನಿಬರುಮಟ್ಟಿ

ಸಮಾಧಿಗುಪ್ತರೆಂಬ ಆಚಾರ್ಯರು ಸಂಚಾರಮಾಡುತ್ತ ಬರತಕ್ಕವರು ಪಾಟಲೀಪುತ್ರಕ್ಕೆ ಬಂದರು. ಅಲ್ಲಿ ಪಟ್ಟಣದ ಹೊರಗಿನ ಉದ್ಯಾನದಲ್ಲಿದ್ದರು. ಸಂಪ್ರತಿ ಚಂದ್ರಗುಪ್ತನು ಅವರಲ್ಲಿಗೆ ಹೋಗಿ ನಮಸ್ಕರಿಸಿ ಧರ್ಮಬೋಧನೆಯನ್ನು ಕೇಳಿದನಂತರ ತನ್ನ ಬೇರೆ ಬೇರೆ ಜನ್ಮಗಳ ಸಂಗತಿಯೇನೆಂದು ಕೇಳಿದನು. ಋಷಿಗಳು ಆಗ ಹೇಳತೊಡಗಿದರು. ಈ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ಅವಂತಿ ಎಂಬ ನಾಡಿದೆ. ಅಲ್ಲಿ ವೈದಿಶವೆಂಬ ಪಟ್ಟಣವಿದೆ. ಅದನ್ನು ಜಯವರ್ಮನೆಂಬ ಅರಸನು ಆಳುತ್ತಿದ್ದನು. ಅವನ ಮಹಾರಾಣಿ ಧಾರಿಣಿ ಎಂಬುವಳು. ಅಂತು ಅವರು ತಮಗೆ ಮೆಚ್ಚುಗೆಯಾದ ವಿಷಯದ ಇಷ್ಟಸುಖಿಗಳನ್ನು ಅನುಭವಿಸುತ್ತ ಇದ್ದರು. ಆ ಪಟ್ಟಣದ ಸಮೀಪದಲ್ಲಿರುವ ಪರಾಳಕೂಟವೆಂಬ ಊರಿನಲ್ಲಿ ದೇವಿಲನೆಂಬ ಸರಕು ಸಾಗಿಸುವ ಗಾಡಿಗಳನ್ನುಳ್ಳ ವರ್ತಕನಿದ್ದನು. ಅವನ ಹೆಂಡತಿ ಪೃಥ್ವಿಶ್ರೀ ಎಂಬುವಳು. ಆಕೆಯ ಬಸಿರಿನಲ್ಲಿ ಪಾಪಕೃತ್ಯವನ್ನು ಮಾಡಿದ ಒಂದು ಜೀವವು ನೆಲಸಿತು. ಇದರಿಂದ ಏನೊಂದು ಕಾರಣವೂ ಇಲ್ಲದೆ ಅವನ ಹೊನ್ನೆಲ್ಲ (ಐಶ್ವರ್ಯವೆಲ್ಲ) ಹಾಳಾಯಿತು. ಆಮೇಲೆ ಒಂದು ದಿವಸ ಅವನು ಹಲವು ಮಂದಿ ಗಾಡಿಯುಳ್ಳ ವ್ಯಾಪಾರಿಗಳನ್ನು ಕೂಡಿಕೊಂಡು ಗಾಡಿಗಳಲ್ಲಿ ಹತ್ತಿಯನ್ನೂ ಧಾನ್ಯವನ್ನೂ ತುಂಬಿಸಿಕೊಂಡು ಪಟ್ಟಣಕ್ಕೆ ಮಾರಲಿಕ್ಕೆಂದು ಹೋಗುತ್ತಿದ್ದನು. ಹಾಗೆ ಹೋಗುವಾಗ ನಡುವೆ ಕಾಡಿನಲ್ಲಿ ಕಳ್ಳರು ಇವರ ದಾರಿಯನ್ನು ಕಟ್ಟಿ ಮೇಲೆ ಹಾರಿ ಬಂದು ತಿವಿಯಲು ದೇವಿಲ ಮೊದಲಾಗಿ ಉಳ್ಳ ಹಲವರು ವರ್ತಕರು ಸತ್ತರು. ಉಳಿದವರೆಲ್ಲ ಓಡಿ ತಪ್ಪಿಸಿಕೊಂಡರು. ಸರಕುಗಳು ಎತ್ತುಗಳು ಮುಂತಾದ ಎಲ್ಲವನ್ನೂ ಕಳ್ಳರು ಕೊಂಡುಹೋದರು. ಆ ಸಂದರ್ಭದಲ್ಲಿ ಪೃಥ್ವಿಶ್ರೀ ಗಂಡುಮಗುವನ್ನು ಹೆತ್ತಳು. ಆ ಮಗುವಿಗೆ ನಂದಿಮಿತ್ರನೆಂದು ಹೆಸರಿಟ್ಟು, ಎರಡು ಮೂರು ತಿಂಗಳಾಗಲು ತಾಯಿ ಮಡಿದಳು. ನಂಟರು ಆ ಮಗುವನ್ನು ಸಾಕಿ ಸಲಹಲು ನಂದಿಮಿತ್ರನು ದೊಡ್ಡವನಾದನು. ಅವನನ್ನು ಸಾಕಿದ ನಂಟರೂ ಸತ್ತರು. ಇನ್ನೂ ಇದ್ದ ಇತರರೂ ಸತ್ತು ಅವರ ಕುಲವೇ

ಕಳೆದೊಡಾತಂ ಕೆಲದೂರ್ಗಳುಮಂ ನಾಟ್ಯಳುಮಂ ತೊಟಲ್ದು ಬೈಕಂದಿರಿದೆಲ್ಲಿಯಾನುಂ ಪೆತ್ತುಂ ಪೆಱದೆಯುಮಿಂತು ಬಾಲ್ತನಂ ಪದಿನೈದು ಪದಿನಾಱು ಪ್ರಾಯದಾತನಾಗಿ ವೈದಿಶಮೆಂಬ ಪೊಲಲ್ಗಿವರ್ಪೊನ್ ಅನ್ನೆಗಂ ಕಾಷ್ಠಕೂಟನೆಂಬ ಬೆಸದವಂ ಪುಳ್ಗಿಯ ಪೊಜೆಯಂ ಪೊತ್ತು ಪೊಲಲ್ಗಿವ ರ್ಪೊನಂ ಕಂಡಾತನೊಡನೆ ಗೊಟ್ಟಿಯೊಳ್ ಬಂದು ಪೊಜೆಪೊಲಲೊಳಾರವೆಯೊಳ್ ಕಾಷ್ಠಕೂಟಂ ಸೇದೆಗೆಟ್ಟು ಪುಳ್ಗಿಯ ಪೊಜೆಯನಿಟಿಪಿ ಪಟ್ಟರ್ದೊಡೆ ತಾನುಂ ಪಟ್ಟರಲಿಂದು ಬಗೆದು ತಲೆಯ ತ್ತಿಡಲ್ಕರಸಿಯೇನುಮಂ ಕಾಣದೆ ತರ್ಪೊನೆನ್ಬರಿಂದಂ ತಳರ್ಚಲಾಜಿದಂತಪ್ಪ ಪಿರಿದೊಂದುಸಿಲೆಯಂ ತಂದು ತಲೆಯತ್ತಿಟು ಪಟ್ಟರ್ದುದಂ ಕಾಷ್ಠಕೂಟನಾತನ ಬಲಮಂ ಕಂಡು ತನ್ನ ಮನೆಗೊಡಗೊಂಡು ಪೋಗಿಯೂಡಿ ನಿನಗೀ ಪೊಲಲೊಳಾರಾನುಂ ನಂಟರೊಳರೆಯೆಂದು ಬೆಸಗೊಂಡೊಡಾ ರುಮಿಲ್ಲೆಂದೊಡಂತಪ್ಪೊಡೆ ನೀನೆನ್ನೊಡನಿರೆತ್ತಲುಂ ಪೋಗದಿರೆಂದು ತಾಂಗಿ ತಾನುಮಾತನುಮಂ ತಿರ್ವರುಂ ದಿವಸಕ್ಕಂ ಪುಳ್ಗಿಯಂ ತರೆ ಪದಿಂಬರ್ ತರ್ಪ ಪೊಜೆಯನೊರ್ವನೆ ತರ್ಪನಂತು ಪಲವು ದಿವಸಂ ಸಲೆ ಕಾಷ್ಠಕೂಟಂ ತನ್ನ ಪೆಂಡತಿ ಜಯಘಂಟೆಯೆಂಬೊಳನಿಂತೆಂದು ಕಲ್ಪಿಸಿದ ನೀತಂಗೆ ನೀಂ ಬಸಿಜ್ತೀವೆ ಬಡ್ಡಿಸದಿರೆಣ್ಗೆಯಂ ತಿಣ್ಣಮೆಜೆಯದಿರ್ ಮೀಯಲ್ಬೇಡಿದೊಡ ಮೆಜೆಯದಿರೆಂದು ಕಲ್ಪಿಸಿದೊಡಾಕೆಯುಮಾ ಪಾಂಗಿನೊಳ್ ದಿವಸಕ್ಕಂ ಬಡ್ಡಿಸೆ ನಂದಿಮಿತ್ರನುಂ

ನಾಶವಾಯಿತು. ಆಗ ಊರಿನವರೆಲ್ಲ ಹೀಗೆ ಹೇಳಿಕೊಂಡರು - "ಈ ಬಾಲಕನು ನಮ್ಮ ಊರಿನಲ್ಲಿದ್ದರೆ ನಮಗೆಲ್ಲ ನಿಶ್ಚಯವಾಗಿಯೂ ಮರಣವೂ ಕೆಡುಕೂ ಉಂಟಾಗುವುದು. ಇವನನ್ನು ಇಲ್ಲಿಂದ ಓಡಿಸಿ ಕಳೆದು ಬಿಡಿ". ಹೀಗೆಂದು ಅವರೆಲ್ಲರೂ ನಂದಿಮಿತ್ರನನ್ನು ಊರಿನಿಂದ ಓಡಿಸಿಬಿಟ್ಟರು. ಅವನು ಸಮೀಪದ ಊರುಗಳನ್ನೂ ನಾಡುಗಳನ್ನೂ ಸುತ್ತಾಡುತ್ತ ಭಿಕ್ಷೆ ಬೇಡಿಕೊಂಡು ಅಲೆಯುತ್ತ ಎಲ್ಲಿಯಾದರೂ ಭಿಕ್ಷೆ ಸಿಕ್ಕಿದರೂ ಆಯಿತು ಸಿಕ್ಕದಿದ್ದರೂ ಆಯಿತು ಎಂಬ ರೀತಿಯಲ್ಲಿ ಬಾಳುತ್ತ ಹದಿನೈದು ಹದಿನಾರು ವರ್ಷ ವಯಸ್ಸಿನವನಾಗಿ ವೈದಿಶವೆಂಬ ಪಟ್ಟಣಕ್ಕೆ ಬರುತ್ತಿದ್ದನು. ಆ ವೇಳೆಗೆ ಕಾಷ್ಠಕೂಟನೆಂಬ ಕೆಲಸದವನು (ಕಾರ್ಮಿಕನು) ಸೌದೆಯ ಹೊರೆಯನ್ನು ಹೊತ್ತುಕೊಂಡು ಪಟ್ಟಣಕ್ಕೆ ಬರುತ್ತಿದ್ದನು. ನಂದಿಮಿತ್ರನು ಅವನನ್ನು ಕಂಡು, ಅವನ ಜೊತೆಯಲ್ಲಿ ಬಂದನು. ಪಟ್ಟಣದ ಹೊರಗಿನ ಉದ್ಯಾನದಲ್ಲಿ ಕಾಷ್ಠಕೂಟನು ಆಯಾಸದಿಂದ ಅಶಕ್ತನಾಗಿ ತಲೆಯಲ್ಲಿದ್ದ ಸೌದೆ ಹೊರೆಯನ್ನು ಇಳಿಸಿ ಮಲಗಿದನು. ಆಗ ನಂದಿಮಿತ್ರನು ತಾನೂ ಮಲಗಬೇಕೆಂದು ಯೋಚಿಸಿ ತಲೆಯ ಕಡೆ ಒತ್ತಾಗಿ (ತಲೆದಿಂಬಾಗಿ) ಇಡಲಿಕ್ಕೆ ಹುಡುಕಿ ಏನೂ ಕಾಣದೆ, ಎಂಟು ಜನರಿಂದ ಅಲುಗಾಡಿಸಲು ಕೂಡ ಸಾಧ್ಯವಾಗದಂತಹ ದೊಡ್ಡದೊಂದು ಕಲ್ಲನ್ನು ತರತೊಡಗಿದನು. ಅದನ್ನು ತಂದು ತಲೆಯ ಕಡೆ ಇಟ್ಟು ಮಲಗಿದನು. ಕಾಷ್ಠಕೂಟನು ಇದನ್ನು ನೋಡಿ, ಅವನ ಬಲವನ್ನು ಕಂಡು ತನ್ನ ಮನೆಗೆ ಅವನನ್ನು ಕರೆದುಕೊಂಡು ಹೋದನು. "ಈ ಪಟ್ಟಣದಲ್ಲಿ ನಿನಗೆ ಯಾರಾದರೂ ನಂಟರಿರುವರೆ ? ಎಂದು ಕೇಳಲು, "ಯಾರೂ ಇಲ್ಲ" ಎಂದು ನಂದಿಮಿತ್ರನು ಉತ್ತರ ಕೊಟ್ಟನು. ಆಗ ಕಾಷ್ಠಕೂಟನು - "ಹಾಗಾದರೆ ನೀನು ನನ್ನೊಡನೆ ಇರು. ಎಲ್ಲಿಗೂ ಹೋಗಬೇಡ" ಎಂದು ಅವನಿಗೆ ಆಶ್ರಯಕೊಟ್ಟನು. ತಾನೂ ಅವನೂ ಹೀಗೆ ಇಬ್ಬರೂ ಪ್ರತಿದಿನವೂ ಸೌದೆ ತರುತ್ತಿದ್ದರು. ಹತ್ತು ಮಂದಿ ತರತಕ್ಕ ಹೊರೆಯನ್ನು ನಂದಿಮಿತ್ರನೊಬ್ಬನೆ ತರುತ್ತಿದ್ದನು. ಅಂತೂ ಹಲವು

ಪಿರಿಯ ಪುಳ್ಳಿಯ ಪೊಜೆಗಳಂ ದಿವಸಕ್ಕಂ ತಂದು ಕುಡಲವಂ ಮಾಜೆ ಕಾಷ್ಮಕೂಟನೊಡೆಯೊ ನಾದೊನಿಂತು ದಿವಸಂಗಳ್ ಸಲೆ ಮತ್ತೊಂದು ದಿವಸಂ ಜಯಘಂಟೆ ಕರುಣಿಸಿ ತಣಿಯೆ ಬಡ್ಡಿಸಿದೊ ಡುಂದು ಮಱುದಿವಸಮಿರ್ವರುಂ ಪುಳ್ಳಿಗೆ ಪೋದಲ್ಲಿ ನಂದಿಮಿತ್ರನೆಂದನಯ್ಯಾ ಎನೆಗುಡಲಿಲ್ಲೇನು ಮೊಂದು ದಮ್ಮಕ್ಕಾದೊಡಂ ಪೀರೆಯಂ ಕೊಂಡೀಯಿಮೆಂದೊಡಂತೆಗೆಯ್ವಮೆಂದು ಮಱುಮಾತು ಗೊಟ್ಟರ್ವರುಂ ಪುಳ್ಳಿಯ ಪೊಜೆಯಂ ಮನೆಗೆ ತಂದ ಬಳಿಕ್ಕ ಕಾಷ್ಮಕೂಟಂ ಪೆಂಡತಿಯನೆಂದನೀ ತಂಗೆ ನೀಂ ಬಸಿಱ್ ತೀವೆಯುಣಲಿಕ್ಕಿದಾ ಎಂದೊಡೆ ಕರುಣಿಸಿ ಪರ್ವವೆಂದು ತಣಿಯುಣಲಿಕ್ಕಿದೆನೆಂದೊಡೆ ಮುಳಿದು ಹಾಯೆ ಬಡಿದು ಮನೆಯಿಂ ಪೆಂಡತಿಯನಟ್ಟಿ ಕಳಿದೊಡೆ ನಂದಿಮಿತ್ರಂ ಪೋಗಿ ಜಯಘಂಟೆಯಂ ಬೆಸಗೊಂಡನ್ ನಿನ್ನನೇಕೆ ಕಾಷ್ಮಕೂಟಂ ಬಡಿದನಬ್ಬಾ ಎಂದು ಬೆಸಗೊಂಡೊಡೆ ನಿನಗೆ ನಿನ್ನೆ ತಣಿಯೆಯುಣಲಿಕ್ಕಿದೆನೆಂದು ಮುಳಿದು ಬಡಿದಟ್ಟಿ ಕಳಿದೊನೆಂ ದೊಡಿಂತಪ್ಪ ಪಂಚಮಹಾಪಾತಕನ ಮನೆಯೊಳ್ ಮಾರಿಯಿರ್ಕೆಂದು ಕಾಷ್ಮಕೂಟನಂ ಬಸುಟ್ಟು ಪೋಗಿ ಬೇಱೆ ತನಗೆ ಪುಳ್ಳಿಗಳಂ ದಿವಸಕ್ಕಂ ತಂದು ಮಾಱಲ್ ತಗುಳ್ದೊಡೆಂಟು ದಮ್ಮದ ಪುಳ್ಳಿಯಂ ತಂದೊಡಮೊಂದು ವಣಮನಪ್ಪೊಡಂ ಪೆಱದೆ ಬಸಿರ್ಕೂಟ್ಟಮಂಬಲಿಗಮೆಣ್ಗೆಗಂ ಕಟಿಗಂ

ದಿವಸ ಕಳೆಯಲು ಕಾಷ್ಮಕೂಟನು ತನ್ನ ಹೆಂಡತಿಯಾದ ಜಯಘಂಟೆಗೆ ಹೀಗೆ ಹೇಳಿಕೊಟ್ಟನು - "ಈತನಿಗೆ ನೀನು ಹೊಟ್ಟೆ ತುಂಬುವಷ್ಟು ಬಡಿಸಬೇಡ. ಎಣ್ಣೆಯನ್ನು ಹೆಚ್ಚು ಹೊಯ್ಯಬೇಡ. ಸ್ನಾನಕ್ಕಾಗಿ ಕೇಳಿದರೆ ಕೂಡ ಎಣ್ಣೆಯನ್ನು ಹೊಯ್ಯಬೇಡ" ಹೀಗೆ ಹೇಳಿಕೊಡಲು, ಆಕೆ ಅದೇ ರೀತಿಯಲ್ಲಿಯೇ ಬಡಿಸುತ್ತಿದ್ದಳು. ನಂದಿಮಿತ್ರನು ಪ್ರತಿದಿವಸವೂ ಕಟ್ಟಿಗೆಯ ದೊಡ್ಡ ದೊಡ್ಡ ಹೊರೆಗಳನ್ನು ತಂದು ಕೊಡುತ್ತಿದ್ದನು. ಕಾಷ್ಮಕೂಟನು ಅವನ್ನು ಮಾರಿ ಧನಿಕನಾದನು. ಹೀಗೆ ದಿವಸಗಳು ಕಳೆದುವು. ಒಂದಿ ದಿನ ಜಯಘಂಟೆ ಕನಿಕರಪಟ್ಟು ನಂದಿಮಿತ್ರನಿಗೆ ತೃಪ್ತಿಯಾಗುವಷ್ಟು ಬಡಿಸಿದಳು. ಅದನ್ನು ಉಂಡು ಮಾರನೆಯ ದಿನ ಇಬ್ಬರೂ ಸೌದೆ ತರಲು ಹೋದಾಗ ನಂದಿಮಿತ್ರನು - "ಅಯ್ಯಾ, ನನಗೆ ಉಡಲಿಕ್ಕೆ ಗತಿಯಿಲ್ಲ, ಎಲ್ಲಾದರೊಂದು ದಮ್ಮಕ್ಕೆ (ದಮ್ಮ - ಒಂದು ನಾಣ್ಯ) ಸಿಗುವಷ್ಟಾದರೂ ಬಟ್ಟೆ ತಂದುಕೊಡಿ" ಎಂದನು. "ಹಾಗೆ ಮಾಡೋಣ" ಎಂದು ಕಾಷ್ಮಕೂಟನು ಪ್ರತ್ಯುತ್ತರ ಕೊಟ್ಟನು. ಇಬ್ಬರೂ ಸೌದೆಯ ಹೊರೆಯನ್ನು ಮನೆಗೆ ತಂದನಂತರ ಕಾಷ್ಮಕೂಟನು ತನ್ನ ಹೆಂಡತಿಯೊಡನೆ "ಇವನಿಗೆ ನೀನು ಹೊಟ್ಟೆತುಂಬ ಉಣಬಡಿಸಿದೆಯಾ?" ಎಂದು ಕೇಳಿದನು. ಅದಕ್ಕೆ ಆಕೆ - "ನಾನು ಕನಿಕರಪಟ್ಟು ಹಬ್ಬವೆಂದು ಅವನಿಗೆ ತೃಪ್ತಿಯಾಗುವಷ್ಟು ಉಣಬಡಿಸಿದೆನು" ಎಂದಳು. ಆಗ ಕಾಷ್ಮಕೂಟನು ಸಿಟ್ಟಾಗಿ ಸಾಯುವಂತೆ ಬಡಿದು ತನ್ನ ಮನೆಯಿಂದ ಹೆಂಡತಿಯನ್ನು ಓಡಿಸಿ ಬಿಟ್ಟನು. ನಂದಿಮಿತ್ರನು ಜಯಘಂಟೆ ಬಳಿಗೆ ಹೋಗಿ - "ತಾಯೇ, ನಿನ್ನನ್ನು ಕಾಷ್ಮಕೂಟನು ಯಾಕೆ ಬಡಿದನು?" ಎಂದು ಕೇಳಿದನು. "ನಿನ್ನೆ ನಿನಗೆ ತೃಪ್ತಿಯಾಗುವಷ್ಟು ಉಣಬಡಿಸಿದೆನೆಂದು ಕೋಪಗೊಂಡು ಅವನು ನನ್ನನ್ನು ಹೊಡೆದು ಓಡಿಸಿದನು" ಎಂದು ಜಯಘಂಟೆ ನುಡಿದಳು. ಆಗ ನಂದಿಮಿತ್ರನು - "ಇಂತಹ ಪಂಚಮಹಾಪಾಪ ಮಾಡಿದವನ ಮನೆಯಲ್ಲಿ ಮಾರಿದೇವತೆ ನೆಲಸಲಿ !" ಎಂದು ಹೇಳಿ, ಕಾಷ್ಮಕೂಟನನ್ನು ಬಿಟ್ಟು ಹೋದನು. ತಾನು ಬೇರೆಯಾಗಿ ಪ್ರತಿದಿನವೂ ಸೌದೆಹೊರೆಗಳನ್ನು ತಂದು ಮಾರಲು ತೊಡಗಿದನು. ಎಂಟು ದಮ್ಮದ ಸೌದೆಯನ್ನು ತಂದರೂ ಚಿಕ್ಕನಾಣ್ಯವಾದ ಒಂದು ಹಣವೂ ಸಂಪಾದನೆಯಾಗದೆ, ಅದನ್ನು ಹೊಟ್ಟೆಯ ಅನ್ನಕ್ಕೂ ಅನ್ನದ ಗಂಜಿಗೂ

ಕೊಟ್ಟು ಪೋಕುಮಿಂತು ಬಾಟುತ್ತುಮಿರೆ ಮತ್ತೊಂದು ದಿವಸಂ ಪುಳ್ಳಿಗೆ ಪೋಗಿ ಪುಳ್ಳಿಯ ಪೊಱೆಯಂ ಪೊತ್ತು ಬರ್ಪೊನನ್ನೆಗಮೆದೆಯೊಳ್ ಶಿವಗುಪ್ತಾಚಾರ್ಯರಪ್ಪಾಗ ನಿಮಿತ್ತಂಗಳಂ ಬಲ್ಲೊರಡವಿಗೆ ವೋಗಿ ಸಿದ್ಧಾಂತಮಂ ಪರಿವಿಡಿಗೆಯ್ದುಂದಿನ ದಿವಸಮಲ್ಲಿಯೆ ದೇವರಂ ವಂದಿಸಿ ಪಕ್ಕೋಪವಾಸದ ಪಾರಣೆಗೆಂದು ಪೊಬಲ್ಗೆ ಚರಿಗೆವುಗುತಂದೊಡೆ ನಂದಿಮಿತ್ರಂ ಕಂಡಾಶ್ಚರ್ಯಭೂತನಾಗಿ ನೀಡುಂ ನೋಡಿಯಿವರೆಲ್ಲಿಗೆ ವೋದಪ್ಪರೋ ಎಂದು ಬಟೆವಟೆಯನೆವಂದು ಪೊಱಪೊಬಲ ಬಸದಿಯ ಪ್ರಾಕಾರದೊಳಗೆ ಪುಳ್ಳಿಯ ಪೊಱೆಯನಿಕ್ಕಿ ನೋಟ್ಪನ್ನೆಗಮಿವರನೆಂದವರಂ ಬಟೆವಟೆಯನೆ ಬರ್ಪನ್ನೆಗಮಾ ದಿವಸಮರಸಂ ಶಿವಗುಪ್ತ ಭಟ್ಟಾರಕರ್ಗ್ಗಾಂ ಪಾರಣೆಯಂ ಮಾಡುವೆಂ ಪೆಱರಾರುಂ ನಿಱಿಸಲ್ ಸಲ್ದೆಂದು ಪೊಬಲೊಳಗೆಲ್ಲಂ ಗೋಸನೆಯಂ ತೊಬಲ್ಚಿದೊಡಂಜಿಯಾರುಂ ನಿಱಿಸುವರಿಲ್ಲದೆ ಭಟ್ಟಾರರುಂ ಕಿಱುಮನೆ ಪೆರ್ಮನೆಯೆನ್ನದುಣಲ್ತಕ್ಕ ಮನೆಗಳಂ ಚರಿಗೆವುಗುತ್ತಂ ಬರ್ಪೊರರಮನೆಯಂ ಪೊಕ್ಕಾಗಳ್ ಕಂಡರಸನುಂ ಮಹಾದೇವಿಯುಂ ಸುವರ್ಣಪೂರ್ಣಕಳಶಮುಂ ಕನ್ನಡಿಯುಂ ಪೂವುಮಕ್ಕಿಯುಂ ಮಾದುಫಲಮುಂ ಮೊದಲಾಗೊಡೆಯನೇಕಾರ್ಚನೆಯಿಂದಿದಿರಂ ಬಂದು ನಿಱಿಸಿ ಬಲಗೊಂಡು ಬಂದು ಭಟ್ಟಾರರ ಕಾಲಂ ಮಹಾದೇವಿ ನೀರ್ವೊಯ್ಯೆ ಅರಸಂ ತಾನೆ ಪ್ರಕ್ಷಾಳಿಸಿ ಬಟೆಕ್ಕೊಡವೋದ ಬೋಱದಲೆಯ ದೇಸಿಗನ ಕಾಲಂ ಬ್ರಹ್ಮಯ್ಯಾ ನೀಡಿಂ ನಿಮ್ಮ ಕಾಲಂ ತೊಳೆವೆಮೆಂದು ಮಹಾದೇವಿ

ಎಣ್ಣೆಗೂ ಹುಳಿಗಂಜಿಗೂ ಕೊಟ್ಟು ಹೋಗುತ್ತಿದ್ದನು. ಹೀಗೆ ಅವನು ಜೀವನ ಸಾಗಿಸುತ್ತಿದ್ದನು. ನಂದಿಮಿತ್ರನು ಒಂದು ದಿವಸ ಸೌದೆಗೆ ಹೋಗಿ, ಸೌದೆಯ ಹೊರೆಯನ್ನು ಹೊತ್ತುಕೊಂಡು ಬರುತ್ತಿದ್ದನು. ಆಗ ದಾರಿಯಲ್ಲಿ ಲಕ್ಷಣ, ಅಂಗ, ಸ್ವರ, ವ್ಯಂಜನ, ಭೌಮ, ಅಂತರಿಕ್ಷ, ಸ್ವಪ್ನ, ಛಿನ್ನ - ಎಂಬ ಎಂಟು ಅಂಗಗಳುಳ್ಳ ಶಕುನ ಶಾಸ್ತ್ರವನ್ನು ಬಲ್ಲವರಾದ ಶಿವಗುಪ್ತಾಚಾರ್ಯರು ಕಾಡಿಗೆ ಹೋಗಿ ಶಾಸ್ತ್ರಸಿದ್ಧಾಂತವನ್ನು ಅನುಕ್ರಮವಾಗಿ ಹೇಳಿ ಆ ದಿನ ಅಲ್ಲಿಯೇ ದೇವರನ್ನು ವಂದಿಸಿ, ಎರಡುವಾರಗಳ ಉಪವಾಸ ಮಾಡಿ, ಆ ಉಪವಾಸ ಮುಗಿಸುವ ಊಟಕ್ಕೆಂದು ಪಟ್ಟಣಕ್ಕೆ ಭಿಕ್ಷೆಗಾಗಿ ಪ್ರವೇಶಿಸುತ್ತಿದ್ದರು. ಅವರನ್ನು ನಂದಿಮಿತ್ರನು ಕಂಡು ಆಶ್ಚರ್ಯಪಟ್ಟು ಹೆಚ್ಚು ಹೊತ್ತು ನೋಡಿ "ಇವರು ಎಲ್ಲಿಗೆ ಹೋಗುತ್ತಾರೋ !" ಎಂದು ಹಿಂದಿನಿಂದಲೇ ಬಂದು ಪಟ್ಟಣದ ಹೊರಗಿನ ಬಸದಿಯ ದರೆಯ ಒಳಗೆ ಸೌದೆಹೊರೆಯನ್ನಿಟ್ಟು ನೋಡಿದನು. ಅವರ ಹಿಂದು ಹಿಂದಿನಿಂದಲೇ ಬಂದನು. ಆ ದಿವಸ ರಾಜನು ಶಿವಗುಪ್ತ ಋಷಿಗಳಿಗೆ ತಾನು ಪಾರಣೆಯ ಊಟ ಕೊಡುವೆನು, ಬೇರೆ ಯಾರೂ ಅವರನ್ನು ನಿಲ್ಲಿಸಕೂಡದೆಂದು ಪಟ್ಟಣದ ಹೊರಗೆಲ್ಲ ಡಂಗುರವನ್ನು ಸಾರಿಸಿದ್ದನು. ಇದರಿಂದ ಹೆದರಿ, ಯಾರೊಬ್ಬರೂ ನಿಲ್ಲಿಸುವವರಿಲ್ಲದೆ, ಋಷಿಗಳು ಚಿಕ್ಕಮನೆ ದೊಡ್ಡ ಮನೆ ಎನ್ನದೆ ಭೋಜನ ಮಾಡಲು ತಕ್ಕುದೆನಿಸಿದ ಮನೆಗಳನ್ನೆಲ್ಲಾ ಭಿಕ್ಷೆಗೆಂದು ಪ್ರವೇಶ ಮಾಡುತ್ತ ಬರುತ್ತಿದ್ದು ಅರಮನೆಯನ್ನು ಪ್ರವೇಶಿಸಿದರು. ಆಗ ರಾಜನು ಕಂಡು ಮಹಾರಾಣಿಯನ್ನು ಕೂಡಿಕೊಂಡು, ಚಿನ್ನದ ಪೂರ್ಣ ಕಳಶ, ಹೂವು, ಅಕ್ಕಿ, ಮಾದಳಹಣ್ಣು- ಮುಂತಾದವುಗಳುಳ್ಳ ಅನೇಕ ವಿಧವಾದ ಅರ್ಚನೆಯ ವಸ್ತುಗಳಿಂದ ಎದುರುಗೊಂಡು ಅವರನ್ನು ನಿಲ್ಲಿಸಿ, ಪ್ರದಕ್ಷಿಣೆ ಬಂದನು. ಮಹಾರಾಣಿ ನೀರು ಹೊಯ್ಯುತ್ತಿರಲು ರಾಜನು ಸ್ವತಃ ಋಷಿಗಳ ಕಾಲನ್ನು ತೊಳೆದು. ಆಮೇಲೆ ಒಟ್ಟಿಗೆ ಹೋದ ಬೋಳುತಲೆಯ ಈ ದೇಶಿಕನನ್ನು (ದೇಶವನ್ನು ಅಲೆದಾಡುವವನ) ಕುರಿತು ರಾಣಿಯು "ಬ್ರಹ್ಮಯ್ಯಾ ನಿಮ್ಮ ಕಾಲು ತೊಳೆಯುವೆನು, ನೀಡಿರಿ" ಎಂದು ಆ ಮಹಾದೇವಿ ಅವನ

ತಾನೆ ಕಾಲಂ ಕರ್ಚಿ ಭಟ್ಟಾರಕರ್ಗೆಱಿಗಿ ಕುಳ್ಳಿರಿಸಿ ಪಿರಿಯ ಪೊನ್ನ ತಳಿಗೆಯುಮಚ್ಚಮಪ್ಪದ್ದಣಿಗೆಯು ಮನಿಟ್ಟು ಬ್ರಹ್ಮಚಾರಿಗಂ ಪೊನ್ನತಳಿಗೆಯುಮದ್ದಣಿಗೆಯುಮನಿಟ್ಟು ಭಟ್ಟಾರಕರ್ಗರಸಂ ತಾನೆ ಬಡ್ಡಿಸಲ್ತಗುಳ್ದ ಬಟೆಯಂ ರಾಜಾನ್ನದ ಕೂಟುಂ ಪೆಸಱತೊವೆಯುಂ ಬೆಣ್ಣೆಗಾಸಿದಾಮೋದ ಸುಗಂಧ ಪರಿಮಳಂ ನಾರ್ಪ ತುಪ್ಪಮುಂ ಪಲವುಂ ತೆಱದ ಬಾಡುಗಳುಂ ತುಯ್ಯಲುಂ ಪೂರಿಗೆಯಿಡ್ದಲಿಗೆ ಸೋದಿಗೆ ಲಾವಣಿಗೆ ಘೃತಪೂರಂ ಲಡ್ಡುಗೆ ಮುಂಡಗೆ ಮೊದಲಾಗೊಡೆಯ ಪದಿನೆಂಟುಂ ತೆಱದ ಭಕ್ಷ ರೂಪಂಗಳುಮಂ ನಾನಾಪ್ರಕಾರದ ಪಾನಂಗಳುಮಂ ಭಟ್ಟಾರರ್ಗೆ ಬಡ್ಡಿಸಿದಂತೆ ಬ್ರಹ್ಮಯ್ಯಂಗೆ ಮಹಾದೇವಿ ಬಡ್ಡಿಸಿದೊಡೆ ದೇಸಿಗಂ ಕಂಡು ಬೆಱಗಾಗಿ ಪುಟ್ಟದಂದಿಂ ತೊಟ್ಟಂತಪ್ಪುದಿಸಂ ಕನಸಿನೊಳಪ್ಪೊಡಂ ಕಂದಱೆಯದ ಮಗಂ ಚೋದ್ಯಂಬಟ್ಟೆಂದಪ್ಪೊಡಂ ತಣಿಯೆಯುಣಲ್ದೆಱದ ದೇಸಿಗಂ ನಾನಾಪ್ರಕಾರದುಣಿಸಂ ಸುಗಂಧಮಪ್ಪ ದಿವ್ಯಾಹಾರಮನಾಕಂಠಪ್ರಮಾಣಂ ಬರೆಗಂ ತಣಿಯುಂದು ಬಟೆಕ್ಕೆ ಕರ್ಪೂರಸಮಿಶ್ರಮಪ್ಪ ನೆಲವತ್ತಿಯದಕೆಯ ಪೋೞ್ಗಳುಮಂ ಕೈತೀವಿದೆಲೆಯುಮಂ ಬ್ರಹ್ಮಯ್ಯಂಗೆ ಕೊಟ್ಟು ಭಟಾರರ್ ಚರಿಗೆ ಮಾಡಿದ ಬಟೆಕ್ಕರಸನುಮಂ ಮಹಾದೇವಿಯುಮಂ ಕರ್ಕ್ಷಯ ಮುಮಕ್ಷಯದಾನಮುಮಕ್ಕೆಂದು ಪರಸಿ ಪೊಱಮಟ್ಟು ಬಸದಿಗೆ ಪೋಪಾಗಳ್ ಭಟ್ಟಾರರ ಬಟೆವಟೆಯನೆ

ಕಾಲನ್ನು ತೊಳೆದಳು. ಋಷಿಗಳಿಗೆ ವಂದಿಸಿ ಕುಳ್ಳಿರಿಸಿದಳು. ದೊಡ್ಡದಾದ ಹೊಂದಟ್ಟೆಯನ್ನೂ ಎತ್ತರದ ಅಡ್ಡಣಿಗೆ (ತಟ್ಟೆಯಿಡಲು ಮೂರುಕಾಲಿನ ಮಣೆ)ಯನ್ನೂ ಇಟ್ಟಳು. ಬ್ರಹ್ಮಚಾರಿಗೂ ಚಿನ್ನದ ತಟ್ಟೆ ಅಡ್ಡಣಿಗೆಗಳನ್ನಿಟ್ಟಳು. ಋಷಿಗಳಿಗೆ ರಾಜನು ಸ್ವತಃ ಉಣಬಡಿಸಲು ಪ್ರಾರಂಭಿಸಿದ ನಂತರ ಮಹಾರಾಣಿ ಬಡಿಸತೊಡಗಿದಳು. ರಾಜಾನ್ನ ಎಂಬ ಅಕ್ಕಿಯ ಅನ್ನ, ಹೆಸರುಬೇಳೆಯ ತೊವ್ವೆ, ಬೆಣ್ಣೆಯನ್ನು ಕಾಸಿ ಬಹಳ ವಿಶೇಷವಾಗಿ ಮಗಮಗಿಸುತ್ತಿರುವ ತುಪ್ಪ, ಹಲವು ರೀತಿಯ ಕಾಯಿಪಲ್ಲೆಗಳು, ಪಾಯಸ, ಪೂರಿ, ಇಡ್ಡಲಿ, ಗೋಧಿರವೆಯ ಭಕ್ಷ್ಯ, ಉಪ್ಪಿನಕಾಯಿ, ತುಪ್ಪದ ಪೂರಿ, ಲಾಡು, ಮಂಡಿಗೆ - ಮುಂತಾಗಿ ಇರತಕ್ಕ ಹದಿನೆಂಟು ರೀತಿಯ ಭಕ್ಷ್ಯ ರೂಪಗಳನ್ನೂ ಹಲವಾರು ರೀತಿಯ ಪಾನೀಯಗಳನ್ನೂ ಮಹಾದೇವಿಯು ಋಷಿಗಳಿಗೆ ಬಡಿಸಿದಂತೆ ಬ್ರಹ್ಮಚಾರಿಗೂ ಬಡಿಸಿದಳು. ದೇಸಿಗನಾದ ನಂದಿಮಿತ್ರನು ಕಂಡು ಬೆರಗಾದನು. ಹುಟ್ಟಿದಂದಿನಿಂದ ಇಂಥದೊಂದು ಊಟವನ್ನು ಕನಸಿನಲ್ಲಿಯೂ ಕಂಡರಿಯದ ಮಗನೂ ಎಂದಿಗೂ ತೃಪ್ತಿಯಾಗುವಷ್ಟು ಊಟ ಮಾಡುವ ಯೋಗ್ಯತೆಯನ್ನೇ ಪಡೆಯದ ದೇಸಿಗನೂ ಆದ ನಂದಿಮಿತ್ರನು ಹಲವಾರು ವಿಧದ ಉಣಿಸನ್ನು - ಸುವಾಸನೆಯಿಂದ ಕೂಡಿದ ದಿವ್ಯವಾದ ಆಹಾರವನ್ನು ಕುತ್ತಿಗೆಯವರೆಗೂ ಪೂರ್ಣ ತೃಪ್ತಿಯಾಗುವತನಕವೂ ಉಂಡನು. ಆಮೇಲೆ ಕರ್ಪೂರದಿಂದ ಸರಿಯಾಗಿ ಬೆರಕೆಯಾದ ನೆಲವತ್ತಿಯ ಅಡಕೆಯ ಹೋಳುಗಳನ್ನೂ ಕೈತುಂಬ ವೀಳೆಯವನ್ನೂ ಬ್ರಹ್ಮಚಾರಿಗೆ ಕೊಟ್ಟರು ಶಿವಗುಪ್ತಾಚಾರ್ಯರು ಭಿಕ್ಷೆ ಸ್ವೀಕರಿಸಿ (ಊಟ ಮಾಡಿ) ಆದ ನಂತರ ಅರಸನನ್ನೂ ಮಹಾರಾಣಿಯನ್ನೂ "ನಿಮ್ಮ ಕರ್ಮವು ಅಳಿಯಲಿ! ದಾನವು ಅಕ್ಷಯವಾಗಲಿ !" ಎಂದು ಆಶೀರ್ವದಿಸಿ ಹೊರಟು ಬಸದಿಗೆ ಹೋಗುವಾಗ ಅವರ ಹಿಂದಿನಿಂದಲೇ ಅವನೂ ಹೋದನು. ಋಷಿಗಳು ಬಸದಿಗೆ ಪ್ರದಕ್ಷಿಣೆ ಮಾಡಿ, ಕಾಲು ತೊಳೆದು ಒಳಹೊಕ್ಕು ಈರ್ಯಾಪತ್ತಿಯನ್ನು ಬಿಡಿಸಿ (ಹಿಂಸೆಯಾಗದಂತೆ ಸೂಕ್ಷ್ಮಜೀವಿಗಳನ್ನು ಪರಿಹರಿಸಿಕೊಂಡು), ಸಾಧುವಿನ ಭಿಕ್ಷಾಕ್ರಮದಂತೆ ಗೋಚಾರ

ಪೋದಂ ಭಟ್ಟಾರರ್ ಬಸದಿಯಂ ಬಲಗೊಂಡು ಕಾಲಂ ಕರ್ಚಿಯೊಳಗಂ ಪೊಕ್ಕೀರ್ಯಾಪತ್ತಿಯಂ ಬದಿಸಿ ಗೋಚಾರ ನಿಯಮಂಗೆಯ್ದುದಂ ನಂದಿಮಿತ್ರಂ ನೋಡುತ್ತಿರ್ದಿಂತೆಂದು ಮನದೊಳ್ ಬಗೆದಪ್ಪನಿಂತಪ್ಪ ರೂಪುಮಂ ಕೈಕೊಂಡೊಡೆ ಲೋಕದೊಳ್ ಗೌರವಮುಂ ಪೂಜೆಯುಮಂ ಪೆಱಲಕ್ಕುಮೊಂದುಂ ಕ್ಲೇಶಮಿಲ್ಲದೆ ದಿವ್ಯಾಹಾರಮನೆಲ್ಲಾ ಕಾಲಮುಣಲ್ಪೆಱಲಕ್ಕುಮೆಂದು ಬಗೆದು ಭಟಾರರ್ ನಿಯಮಂಗೆಯ್ದು ಸಮೆದಿರ್ದ ಬೞಿಕ್ಕೆ ಬಂದು ಮುಂದೆ ನಿಂದು ಕೈಗಳಂ ಮುಗಿದಿಂತೆಂದನ್ ಭಟಾರಾ ಎನ್ನಂ ನಿಮ್ಮಂತೆ ಮಾದಿಮೆಂದೊಡೆ ಭಟಾರರಾತನಂ ನೋದಿಯಲ್ಲಾಯುಷ್ಯನುಮಾಸನ್ನ ಭವ್ಯನಪ್ಪುದನಱೆದೊಳ್ಳಿತವ್ವ ಮುಹೂರ್ತದೊಳ್ ತಪಂಬದಿಸಿದೊಡಾತನುಂ ತಪಂಬಟ್ಟು ದೀಕ್ಷೋಪವಾಸಂ ಗೆಯ್ದಿರ್ದನ್ ಅನ್ನೆಗಮರಸನುಮರಸಿಯುಂ ಭಟ್ಟಾರರೊಡವಂದ ಬ್ರಹ್ಮಚಾರಿ ತಪಂಬಟ್ಟನೆಂಬುದಂ ಕೇಳ್ದೊಸೆದು ಮುನ್ನೆಮ್ಮ ಮನೆಯೊಳುಂಡು ತಪಂಬಟ್ಟನಿಂ ನಾಳೆ ನಮ್ಮ ಮನೆಯೊಳ್ ಪಾನಿಗಟ್ಟುವಮೆಂದು ಬಗೆದಿರ್ದು ಮಱುದಿವಸಂ ಸಾಮಂತ ಮಹಾಸಾಮಂತರ್ಕಳುಂ ರಾಜ್ಯಚಿಹ್ನಂಗಳುಂ ಬೆರಸು ಮಹಾವಿಭೂತಿಯಿಂದರಸಂ ಪೊೞ್ತಿನ ಬೇಗಂ ಬಸದಿಗೆ ವಂದು ವಾಹನದಿಂದಿೞಿದು ಬಲಗೊಂಡು ಬಂದು ಗಂಧಪುಷ್ಪ ದೀಪ ಧೂಪಾಕ್ಷತೆಗಳಿಂ ದೇವರನರ್ಚಿಸಿ ಕ್ರಿಯಾಪೂರ್ವಕಂ ವಂದಿಸಿ ಭಟ್ಟಾರರ್ಗೆ ಗುರುಭಕ್ತಿಯನ್ನು ಪಂಚಮುಷ್ಟಿಯಿಂ ವಂದಿಸಿಯಂತೆ ಕಿತ್ತಯ್ಂಗಳುಮನಾ ಮಾರ್ಗದಿಂ ವಂದಿಸಿ ಭಟಾರರಲ್ಲಿಗೆ ವಂದು ಕುಳ್ಳಿರ್ದು ಧರ್ಮಮಂ ಕೇಳ್ದ

ನಿಯಮವನ್ನು ಮಾಡಿದರು. ನಂದಿಮಿತ್ರನು ಇದನ್ನು ನೋಡುತ್ತಿದ್ದು ಮನಸ್ಸಿನಲ್ಲಿ ಹೀಗೆ ಭಾವಿಸಿದನು. - "ಈ ರೀತಿಯ ರೂಪವನ್ನು ತಾಳಿದರೆ ಲೋಕದಲ್ಲಿ ಗೌರವವನ್ನೂ ಪೂಜೆಯನ್ನೂ ಪಡೆಯಬಹುದು. ಎನೊಂದೂ ಕಷ್ಟವಿಲ್ಲದೆ ದಿವ್ಯವಾದ ಆಹಾರವನ್ನು ಎಲ್ಲ ಕಾಲದಲ್ಲಿಯೂ ಉಣ್ಣಲು ಪಡೆಯಬಹದು." ಹೀಗೆ ಯೋಚಿಸಿ, ಋಷಿಗಳು ತಮ್ಮ ನಿಯಮಗಳನ್ನು ಮಾಡಿ ಮುಗಿಸಿದ ನಂತರ ಅವರ ಹತ್ತಿರಕ್ಕೆ ಬಂದು ಮುಂದೆ ನಿಂತು ಕೈಗಳನ್ನು ಮುಗಿದು ಅವರೊಡನೆ "ಪೂಜ್ಯರೇ ನನ್ನನ್ನು ನಿಮ್ಮ ಹಾಗೆಯೇ ಮಾಡಿ" ಎಂದನು. ಭಟಾರರು ಅವನನ್ನು ನೋಡಿ, ಅವನು ಸ್ವಲ್ಪ ಮಾತ್ರ ಆಯುಷ್ಯವುಳ್ಳವನೂ ಮೋಕ್ಷಕ್ಕೆ ಹೋಗುವ ಪುಣ್ಯಜೀವಿಯೂ ಆದುದರಿಂದ ಸುಮುಹೂರ್ತದಲ್ಲಿ ತಪಸ್ಸಿಗೆ ಉಪದೇಶಕೊಟ್ಟರು. ನಂದಿಮಿತ್ರನು ತಪಸ್ಸನ್ನು ಸ್ವೀಕರಿಸಿ ದೀಕ್ಷೆ - ಉಪವಾಸಗಳನ್ನು ಆಚರಿಸುತ್ತಿದ್ದನು. ಆ ವೇಳೆಗೆ ರಾಜನೂ ರಾಣಿಯೂ ಶಿವಗುಪ್ತ ಋಷಿಗಳೊಂದಿಗೆ ಬಂದ ಬ್ರಹ್ಮಚಾರಿ ತಪಸ್ಸನ್ನು ಆಚರಿಸಿದ್ದಾನೆ - ಎಂಬುದನ್ನು ಕೇಳಿ ಪ್ರೀತಿಪಟ್ಟು, ಹಿಂದೆ ನಮ್ಮ ಮನೆಯಲ್ಲಿ ಊಟಮಾಡಿ ತಪಸ್ಸು ಮಾಡಿದವನನ್ನು ನಾಳೆ ನಮ್ಮ ಮನೆಗೆ ಕರೆದು ಪಾದತೊಳೆದು ಊಟಹಾಕೋಣ ಎಂದು ಬಗೆದರು. ಮರುದಿನ ರಾಜನು ಹೊತ್ತಾರೆಯ ಸಮಯದಲ್ಲಿ ಸಾಮಂತರು, ಮಹಾಸಾಮಂತರು, ರಾಜ್ಯ ಚಿಹ್ನೆಗಳು - ಇವನ್ನು ಕೂಡಿಕೊಂಡು ಬಹಳ ವೈಭವದಿಂದ ಬಸದಿಗೆ ಬಂದನು. ವಾಹನದಿಂದ ಕೆಳಗಿಳಿದು ಪ್ರದಕ್ಷಿಣೆ ಮಾಡಿ ಬಂದು ಗಂಧ, ಪುಷ್ಪ, ದೀಪ, ಧೂಪ, ಅಕ್ಷತೆಗಳಿಂದ ಜಿನದೇವರನ್ನು ಪೂಜಿಸಿ, ಕ್ರಿಯೆಗಳನ್ನು ಮಾಡಿ ನಮಸ್ಕರಿಸಿದರು. ಶಿವಗುಪ್ತಾಚಾರ್ಯರಿಗೆ ಗುರುಭಕ್ತಿಯನ್ನು ಸಲ್ಲಿಸಿ ಕೈಮುಗಿದು, ಹಾಗೆಯೇ ಚಿಕ್ಕಸ್ವಾಮಿಗಳನ್ನು (ನಂದಿಮಿತ್ರನನ್ನು) ಅದೇ ರೀತಿಯಾಗಿ ನಮಸ್ಕರಿಸಿದನು. ಆಮೇಲೆ ಋಷಿಗಳ ಬಳಿಗೆ ಬಂದು ಕುಳಿತು ಧರ್ಮೋಪದೇಶವನ್ನು

ತದನಂತರಮಿವರ್ ಭಟಾರಾ ಬನ್ನಪಂ ಕಿತ್ತಯ್ಯಂಗಳನಿಂದೆಮಗೆ ಕಾರುಣ್ಯಂಗೆಯ್ದುದಾವು ನಿಜೆಸಿ ಪಾಸಿಗಟ್ಟಿ ಪುಣ್ಯಮಂ ನೆರಪಿಕೊಳ್ವಮೆಂದೊಡಂತೆಗೆಯ್ಯಮೆಂದಾನುಡಿಯಂ ಕಿತ್ತಯ್ಯಂಗಳ್ ಕೇಳ್ದು ಸಾಮಂತ ಮಹಾಸಾಮಂತರ್ಗೆ ಸ್ವಾಮಿಯಪ್ಪೀ ಪೃಥ್ವೀಶ್ವರಂ ಬಂದೆನ್ನುಮನರ್ಚಿಸಿ ಬಂದಿಸಿ ನೀಚವೃತ್ತಿಯಿಂ ಕಿಂಕುರ್ವಾಣಂಗೆಯ್ಪಪ್ಪನಹೋ ಆಶ್ಚರ್ಯಮೀ ತಪದ ಧರ್ಮದ ಫಲಮಿಲ್ಲಿಯೆ ಪ್ರತ್ಯಕ್ಷಮಾಯ್ತಿನ್ನುಂ ಮುಂಪೆ ಪಿರಿದಾಗದೆ ಮಾಣದೆಂದು ತನ್ನೊಳೆ ತಜಿಸಂದು ಮತ್ತಮಾ ದಿವಸಮುಪವಾಸಮಂ ಕೈಕೊಂಡರ್ ಇತ್ತಲ್ ಜಯವರ್ಮ ಮಹಾರಾಜಂ ಭಟಾರರುಮಂ ಕಿತ್ತಯ್ಯಂಗಳುಮಂ ಬಂದಿಸಿದುದಂ ಭಟಾರರಜೆದೆ ಕಿತ್ತಯ್ಯಂಗಳ್ಗೆ ವಿಷಣಾಸಮಿತಿ ಮೊದಲಾಗೊದೆಯ ವ್ರತಂಗಳಂ ಮತ್ತಂ ಸಂಕ್ಷೇಪದಿಂ ಪೇಜ್ದು ಕಿತ್ತಯ್ಯಂಗಳಿರಾ ನಿಮಗೆ ಶ್ರಮಮಾದಪ್ಪುದು ದೇವರಂ ಬಂದಿಸಿ ಚರಿಗೆಗೆ ಪೊಱಮಡುವುದೆನೆ ಮತ್ತಂ ತಾವು ಕೊಂದುಪವಾಸಮಂ ಗುರುಗಳ್ಗೆ ಪ್ರಕಟಿಸಿದನರಸಂ ಜಯವರ್ಮ ಮಹಾರಾಜಂ ಕೇಳ್ದು ಬನ್ನನೆ ಮೊಗಂ ಮಾಡಿ ಭಟಾರರುಮಂ ಕಿತ್ತಯ್ಯಂಗಳುಮಂ ಬಂದಿಸಿ ತನ್ನರಮನೆಗೆ ವೋಗಿ ಮಹಾದೇವಿಗೆಂದನಿಂದೆನಗೆ ರಿಸಿಯರಂನಿಜೆಸಿ ಪುಣ್ಯಂಗೊಳ್ವ ಭಾಗ್ಯಮಿಲ್ಲೆಂದೊಡೆ ಮಹಾದೇವಿಯಂತಪ್ಪೊಡೆ ನಾಳೆಯಾಂ ನಿಜೆಸಿ ಪುಣ್ಯಮಂ ಕೈಕೊಳ್ವೆನೆಂದೊಡರಸನೆಂದೊಂ ನಿನಗಮೆನಗಂ ಸಮಭಾಗಂ ಪುಣ್ಯಮೆಂಮಸಿರೆ ನೀಮೇಕೆನಗಿಂದು ಸಮಭಾಗಮೀಯದಾದಿರೀ ಪುಣ್ಯಮನಾನಿಂದುನಿಜೆಸಿ

ಕೇಳಿದನಂತರ ಎದ್ದು - "ಪೂಜ್ಯರೇ, ನನ್ನ ವಿಜ್ಞಾಪನೆಗಳು. ಚಿಕ್ಕಸ್ವಾಮಿಗಳನ್ನು ನಮಗೆ ಇಂದು ಕರುಣಿಸಬೇಕು. ನಾವು ಅವರನ್ನು ನಿಲ್ಲಿಸಿ ಕಾಲುತೊಳೆದು ಊಟ ಹಾಕಿ ಪುಣ್ಯವನ್ನು ಕೂಡಿಸುವೆವು" ಎಂದಾಗ, 'ಹಾಗೆಯೇ ಮಾಡಿ' ಎಂದರು. ಆ ಮಾತನ್ನು ಚಿಕ್ಕಸ್ವಾಮಿಗಳು ಕೇಳಿ- "ಸಾಮಂತರಿಗೂ ಮಹಾಸಾಮಂತರಿಗೂ ಒಡೆಯನಾಗಿರುವ ಈ ಭೂಪನು ಬಂದು ನನ್ನನ್ನು ಕೂಡ ಪೂಜಿಸಿ ವಂದಿಸಿರುತ್ತಾನೆ. ಕೀಳುವೃತ್ತಿಯಿಂದ ಸೇವೆಯನ್ನು ಮಾಡುತ್ತಾನೆ ! ಆಹಾ, ಆಶ್ಚರ್ಯವೆ ! ಈ ತಪೋಧರ್ಮದ ಫಲ ಇಲ್ಲಿಯೇ ಕಾಣುವಂತಾಯಿತು. ಇನ್ನೂ ಮುಂದೆ ಹೋದರೆ ಇದಕ್ಕಿಂತ ಹಿರಿದಾದ ಫಲ ಆಗದೆ ಇರದು" ಎಂದು ತನ್ನಲ್ಲಿಯೇ ನಿಶ್ಚಯ ಮಾಡಿಕೊಂಡು, ಆಮೇಲೆ ಆ ದಿವಸ ಉಪವಾಸವನ್ನು ಕೈಗೊಂಡರು. ಇತ್ತ ಜಯವರ್ಮ ಮಹಾರಾಜನು ಭಟಾರರನ್ನೂ ಚಿಕ್ಕ ಸ್ವಾಮಿಗಳನ್ನೂ ವಂದಿಸಿದ್ದನ್ನು ಭಟಾರರು ತಿಳಿದೇ ಚಿಕ್ಕಸ್ವಾಮಿಗಳಿಗೆ ವಿಷಣಾ ಸಮಿತಿ ಮುಂತಾಗಿರತಕ್ಕ ವ್ರತಗಳನ್ನು ಆಮೇಲೆ ಸಂಕ್ಷೇಪದಿಂದ ತಿಳಿಸಿದರು. "ಚಿಕ್ಕ ಸ್ವಾಮಿಗಳೇ ನಿಮಗೆ ಶ್ರಮವಾಗುತ್ತದೆ, ದೇವರನ್ನು ವಂದಿಸಿ ಭಿಕ್ಷಾಟನೆಗೆ ಹೊರಡಿರಿ" ಎಂದರು. ಆಗ ತಾನು ಸ್ವೀಕರಿಸಿರುವ ಉಪವಾಸದ ಸಂಗತಿಯನ್ನು ಗುರುಗಳಿಗೆ ತಿಳಿಸಿದನು. ಜಯವರ್ಮ ಮಹಾರಾಜನು ಕೇಳಿ, ಮೌನಮುಖಮುದ್ರೆಯನ್ನು ತಾಳಿ ಋಷಿಗಳನ್ನೂ ಚಿಕ್ಕಸ್ವಾಮಿಗಳನ್ನೂ ವಂದಿಸಿ ತನ್ನ ಅರಮನೆಗೆ ತೆರಳಿದನು. ಅರಸನು ರಾಣಿಯೊಡನೆ - "ಇಂದು ನನಗೆ ಋಷಿಗಳನ್ನು ನಿಲ್ಲಿಸಿ ಪುಣ್ಯವನ್ನು ಪಡೆಯುವ ಯೋಗ್ಯತೆಯಿಲ್ಲ" ಎಂದು ಹೇಳಿದನು ಆಗ ಮಹಾರಾಣಿ - "ಹಾಗಾದರೆ ನಾಳೆ ನಾನು ಅವರನ್ನು ಕರೆದು ನಿಲ್ಲಿಸಿ ಪುಣ್ಯವನ್ನು ಪಡೆಯುವೆನು" ಎಂದಳು, ಅದಕ್ಕೆ ರಾಜನು - "ನಿನಗೂ ನನಗೂ ಪುಣ್ಯವು ಸಮಪಾಲು" ಎಂದು ಹೇಳಲು ಆಕೆ ಹೀಗೆಂದಳು - "ನೀವು ಇಂದು ನನಗೆ ಯಾಕೆ ಸರಿಪಾಲನ್ನು ಕೊಡಲಿಲ್ಲ ? ಈ ಪುಣ್ಯವನ್ನು ನಾನು ಮರಿಸ್ವಾಮಿಗಳನ್ನು ಮನೆಗೆ ಕರೆದು ನಿಲ್ಲಿಸಿ

ಕೈಕೊಳ್ಳಂ ನೀಂ ನಾಳೆ ನಿಜೆಸೆಂದು ನುಡಿದು ಬಸದಿಗೆ ಪೋಗಿರೆನ್ನ ಭಾಗ್ಯಮೇಂ ಕಿಡಿಸುಗುಮೆ ನಾಳೆಯುಂ ನಿಜೆಸಿಯಾವಗಂ ಪುಣ್ಯಮಂ ಕೈಕೊಳ್ವೆನೆಂದರಸಂಗೆ ಮಜುಮಾತುಗೊಟ್ಟು ಮಜುದಿವಸಂ ಧಾರಿಣಿ ಮಹಾದೇವಿಯಯ್ನೂರ್ವರರಸಿಯರ್ಕಳುಂ ಪೆಂದವಾಸವಗ್ಗಳದ ಸೂಳೆಯರ್ಕಳುಂಬೆರಸು ವೇಸರಿಗಬ್ತಿಗಳುಂ ಪಿಡಿಗಳುಂ ಸಿಬಿಗೆಗಳುಮನೇಜೆ ಸೀಗುರಿಗಳುಮಂ ಕೊಡೆಗಳುಮಂ ಪಿಡಿಯಿಸಿ ಎಕ್ಕಮದ್ದಳೆಯ ಕೊಬಲ ಝುಂಕಾರದ ಪಜ್ಜಿಗಳ್ ಮುಂದೆ ಬಾಜಿಸುತ್ತಂ ಬಟೆಯಂ ಕಾಪಿನವರ್‌ವರೆ ಮುಂದಣ ಮಾನಸರಂ ಪಡಿಯಜಿರ್ ತೊಲಗಿಸುತ್ತಂ ಬರೆ ವಿದ್ಯಾಧರಿಯರ್ಕಳ್ ಬರ್ಪಂತೆ ಬಂದು ಬಾಗಿಲ್ಗಾದದ ಪೊಱಗಣ ದೆಸೆಯೊಳ್ ತಂತಮ್ಮ ವಾಹನಂಗಳಿಂದಿಟೆದು ಪೊಕ್ಕು ಬಸದಿಯಂ ಬಲಗೊಂತು ಬಂದೊಳಗಂ ಪೊಕ್ಕು ದರ್ಶನವಂದನೆಗಳುಮಂ ಪೇಟ್ಟೇರ್ಯಾಪತ್ತಿಯಂ ಬಿಡಿಸಿ ಗಂಧ ಪುಷ್ಪ ದೀಪ ಧೂಪಾಕ್ಷತಂಗಳಿಂ ದೇವರನರ್ಚಿಸಿ ಕ್ರಿಯಾಪೂರ್ವಕಂ ದೇವರಂ ಬಂದಿಸಿ ಶಿವಗುಪ್ತ ಭಟ್ಟಾರರುಮನರ್ಚಿಸಿ ಗುರುಭಕ್ತಿಗೆಯ್ದು ಬಂದಿಸಿ ಶ್ರಾವಕಬ್ರತಂಗಳನೇಜೆಸಿಕೊಂಡು ಬಟೆಕಂತೆಂದಳ್ ಭಟ್ಟಾರಾ ಇಂದೆಮ್ಮಲ್ಲಿಗೆ ನೀಮುಂ ಕಿತ್ತಯ್ಯಂಗಳನೊದಗೊಂಡು ಬಂದು ಪಕ್ಕದಿರ್ದು ದಾನಿಗಟ್ಟ ಮಾರ್ಗಮಂ ತೋಜೆ ಮಗುಟೆ ಬಜಯಂಗೆಯ್ಯಮೆನೆ ಕಿತ್ತಯ್ಯಂಗಳಂ ನೀಮೆ ಬೆಸಗೊಳ್ಳಿಮವರೊಡಂಬಟ್ಟೊಡಾಮೊದಗೊಂಡು ಬರ್ಪೆಮೆಂದೊಡೆ ಧಾರಿಣಿ ಮಹಾದೇವಿ

ಪಡೆಯುತ್ತೇನೆ. ನೀನು ನಾಳೆ ನಿಲ್ಲಿಸು ಎಂದು ಹೇಳಿ ಬಸದಿಗೆ ಹೋದರಿ. ಇದರಿಂದ ನನ್ನ ಭಾಗ್ಯ ಕೆಟ್ಟುಹೋಗುವುದೇ ? ನಾಳೆ ನಾನೇ ಅವರನ್ನು ನಿಲ್ಲಿಸಿ ಪುಣ್ಯವನ್ನು ಪಡೆಯುವೆನು" ಹೀಗೆ ರಾಣಿ ಪ್ರತ್ಯುತ್ತರಕೊಟ್ಟು ಮಾರನೆಯ ದಿನ ಧಾರಿಣಿ ಮಹಾದೇವಿ ಚಿಕ್ಕಸ್ವಾಮಿಗಳನ್ನು ಕರೆಯಲು ಹೊರಟಳು. ಐನೂರು ಮಂದಿ ಅರಸಿಯರೂ ರಾಣೀವಾಸದಲ್ಲಿದ್ದ ಶ್ರೇಷ್ಠರಾದ ದಾಸಿಯರೂ ಅವಳ ಒಡನಿದ್ದರು. ಅವರು ಹೇಸರಕತ್ತೆಗಳನ್ನೂ ಹೆಣ್ಣಾನೆಗಳನ್ನೂ ಪಲ್ಲಕ್ಕಿಗಳನ್ನೂ ಏರಿದ್ದರು. ಚಾಮರಗಳನ್ನೂ ಛತ್ರಗಳನ್ನೂ ಹಿಡಿಸಿಕೊಂಡು, ಮುಂಗಡಯಲ್ಲಿ ಎಕ್ಕಮದ್ದಳೆ ಕೊಳಲು ಝುಂಕಾರವನ್ನು ಕೊಡುವ ವಿರ್ಯವಾದ್ಯಗಳನ್ನು ಬಾರಿಸುತ್ತಿರಲು ಹಿಂದಿನಿಂದ ಅಂಗರಕ್ಷಕರು ಬರುತ್ತಿರಲು, ಮುಂದುಗಡೆ ಅಡ್ಡವಾಗಿ ಬರುತ್ತಿದ್ದವರನ್ನು ಪ್ರತೀಹಾರರು ತೊಲಗಿಸುತ್ತ ಬರಲು ವಿದ್ಯಾಧರಿಯರು ಬರುವ ರೀತಿಯಲ್ಲಿ ಅವರೆಲ್ಲರೂ ಬಂದರು. ಪಟ್ಟಣದ ಗೋಪುರದ ಹೊರಗಡೆಯಲ್ಲಿ ಅವರು ತಮ್ಮ ತಮ್ಮ ವಾಹನಗಳಿಂದ ಇಳಿದು ಹೊಕ್ಕರು. ಬಸದಿಗೆ ಪ್ರದಕ್ಷಿಣೆ ಮಾಡಿ ಬಂದು ಒಳಗೆ ಹೋಗಿ ದರ್ಶನ ವಂದನೆಗಳನ್ನು ಹೇಳಿ ದಾರಿಯನ್ನು ಸೂಕ್ಷ್ಮಜಂತುಗಳಿಲ್ಲದಂತೆ ಗುಡಿಸಿ ಗಂಧ ಪುಷ್ಪ ದೀಪ ಧೂಪ ಅಕ್ಷತೆಗಳಿಂದ ಜಿನದೇವರನ್ನು ಪೂಜಿಸಿ ಕ್ರಿಯೆಗಳ ಮೂಲಕ ದೇವರಿಗೆ ವಂದಿಸಿದರು. ಶಿವಗುಪ್ತಾಚಾರ್ಯರನ್ನೂ ಪೂಜಿಸಿ ಗುರುಭಕ್ತಿಯನ್ನು ತೋರಿಸಿ ನಮಸ್ಕರಿಸಿ ಶ್ರಾವಕ ವ್ರತಗಳನ್ನು ಸ್ವೀಕರಿಸಿಕೊಂಡು ಮಹಾರಾಣಿ [illegible] ಹೇಳಿದಳು- "ಪೂಜ್ಯರೇ, ಈ ದಿವಸ ನೀವು ಚಿಕ್ಕಸ್ವಾಮಿಗಳೊಂದಿಗೆ ನಮ್ಮಲ್ಲಿಗೆ ಬಂದು [illegible] ನಮ್ಮ ಆಹಾರವನ್ನು ಸ್ವೀಕರಿಸಿ ಮಾರ್ಗದರ್ಶನವನ್ನು ಮಾಡಿ ಆಮೇಲೆ [illegible]" ಎಂದು ಹೇಳಿದಳು. ಅದಕ್ಕೆ ಅವರು "ಚಿಕ್ಕಸ್ವಾಮಿಗಳನ್ನು ನೀವೇ [illegible]. ಅವರು ಬಿಟ್ಟುಬರಲಾರರು ನಾವು ಕೂಡಿಕೊಂಡು ಬರುವೆವು" ಎಂದರು. ಧಾರಿಣಿದೇವಿ [illegible] ಒಳಗೆ ಹೋದಳು. ಅವರನ್ನು ಪಾದಮುಟ್ಟಿ ವಂದಿಸಿದಳು.

ಕಿತ್ತಯ್ಯಂಗಳಲ್ಲಿಗೆ ಪೋಗಿ ಕಾಲಂಪಿಡಿದು ವಂದಿಸಿ ಇಂತೆಂದಳ್ ಕಿತ್ತಯ್ಯಾ ನಿಮಗಿಂದು ನಾಮ್ ಪಾನಿಗಟ್ಟುವೆಮೆಮ್ಮ ಮನೆಗೆಬ್ಬರವೇಬ್ಬುದೆಂದು ಕಾಲಂ ಪಿಡಿದು ಪೊಡೆವಟ್ಟರ್ದಾಗಳರಸಿಯ ಮೊಗಮಂ ನೋಡಿ ನಿಜಿಲೆಯಂತೊಟ್ಟುಟ್ಟು ಪಪದನಂಗೊಂದಿರ್ದ ದೇವಗಣಿಕೆಯರನೆ ಪೋಲ್ವಯಪೂರ್ವರಸಿಯರ್ಕಳಿಂದಂ ಸೂಳೆಯರ್ಕಳಿಂದಂ ಪರಿದೇಷ್ಟಿತೆಯಾಗಿರ್ದ ಶಚೀ ಮಹಾದೇವಿಯನೆ ಪೋಲ್ದ ಧಾರಿಣಿ ಮಹಾದೇವಿಯೆನ್ನ ಕಾಲ್ಗೆಜಗಿ ಪೊಡೆವಟ್ಟರ್ದಳಿದೆಲ್ಲಮೀ ತಪದ ಫಲಮಿನ್ನುಂ ಮುಂದೆ ಪಿರಿದುಂಟೆಂದು ಬಗವರಸಿಗೆಂದರಮ್ಮಾ ಇಂದೆಮಗುಣಲ್ಕೆ ಬಗೆಯಲ್ಲುಪವಾಸಂ ಗೆಯ್ತಪ್ಪೆಮೆಂದು ಪರಿಚ್ಛೇದಿಸಿ ನುಡಿದೊಡೆ ಬಿನ್ನನೆ ಮೊಗಂ ಮಾಡಿ ಭಟ್ಟಾರರಂ ವಂದಿಸಿ ಪೋಗಿಯರಸಂಗೆ ಕಿತ್ತಯ್ಯಗಳಂದುಪವಾಸಂಗೆಯ್ದೊರೆಂದು ಪೇಬ್ಯಾಗಳ್ ಮತ್ತಿದುಳಿನ ಕರಣವೇಳೆಯೊಳ್ ವಜ್ರಸೇನನೆಂಬ ಮಂತ್ರಿಯರಸಂಗಿಂತೆಂದು ಬಿನ್ನಪಂ ಗೆಯ್ದಂ ದೇವಾ ನಾಳೆಯಾಂ ನಿಜೆಸಿ ಕಿತ್ತಯಂಗಳ್ಗೆ ಪಾರಣೆಯಂ ಮಾದುವನೆನೆ ಅಂತೆಗೆಯ್ಯೆಂದೊಡೆ ಮಲ್ಲುದಿದಸಂ ಬಸದಿಗ ವಂದು ಭಟ್ಟಾರಾ ಕಿತ್ತಯ್ಯಂಗಳ ನಮ್ಮಲ್ಲಿಗೊಡಗೊಂಡು ಬಂದು ಚರಿಗೆದೋಜೆ ನೀಮುಂ ವಿಜಯಂಗೆ ಯ್ಯಿಮೆನೆ ಕಿತ್ತಯ್ಯಂಗಳೊಡಂಬಟ್ಟೊಡೊಡಗೊಂಡು ಬರ್ದೆಮವರನೊಡಂಬಡಿಸಿಮೆಂದೊಡೆ ಕಿತ್ತಯ್ಯಂಗಳಲ್ಲಿಗೆ ವೋಗಿ ಕಿತ್ತಯ್ಯಾ ಇಂದೆಮ್ಮ ಮನೆಯೊಳ್ ಪಾರಿಸಲ್ವೇಬ್ಕುಮೆಂದು ಕಾಲಂ

"ಚಿಕ್ಕಸ್ವಾಮಿಗಳೇ, ನಿಮಗೆ ಇಂದು ನಾವು ಭೋಜನ ಮಾಡಿಸಬೇಕೆಂದಿದ್ದೇವೆ. ನಮ್ಮ ಮನೆಗೆ ನೀವು ಬರಬೇಕು" ಎಂದು ಕಾಲು ಹಿಡಿದು ಸಾಷ್ಟಾಂಗ ವಂದನೆ ಮಾಡಿದಳು. ಆಗ ಚಿಕ್ಕಸ್ವಾಮಿಗಳು ಅವಳ ಮುಖವನ್ನು ನೋಡಿದರು. "ಅತ್ಯಂತ ವಿಶೇಷವಾಗಿ ಉಡಿಗೆ ತೊಡಿಗೆಗಳನ್ನು ಧರಿಸಿ ಶೃಂಗಾರ ಮಾಡಿಕೊಂಡಿರುವ ದೇವತಾಸ್ತ್ರೀಯರನ್ನು ಹೋಲುವಂತಹ ಐನೂರು ಮಂದಿ ರಾಣಿಯರಿಂದಲೂ ದಾಸಿಯರಿಂದಲೂ ಈಕೆ ಸುತ್ತುವರಿಯಲ್ಪಟ್ಟಿದ್ದಾಳೆ. ಇಂದ್ರನ ಪತ್ನಿಯಾದ ಶಚೀದೇವಿಯನ್ನೇ ಹೋಲುತ್ತಿದ್ದಾಳೆ. ಅಂತಹ ಧಾರಿಣಿ ಮಹಾದೇವಿ ನನ್ನ ಕಾಲಿಗೆ ಎರಗಿ ಸಾಷ್ಟಾಂಗ ವಂದನೆ ಮಾಡಿದ್ದಾಳೆ. ಇವೆಲ್ಲವೂ ಈ ತಪಸ್ಸಿನ ಫಲವಾಗಿದೆ. ಇನ್ನೂ ಮುಂದೆ ಇದಕ್ಕಿಂತ ಹೆಚ್ಚಿನ ಫಲ ಕಾಣಲಿಕ್ಕಿನೆ" ಎಂದು ಭಾವಿಸಿಕೊಂಡರು. ರಾಣಿಯೊಡನೆ - "ಅಮ್ಮಾ ಈ ದಿವಸ ನಮಗೆ ಊಟ ಮಾಡಲು ಮನಸ್ಸಿಲ್ಲ, ಉಪವಾಸ ಮಾಡುತ್ತೇವೆ" ಎಂದು ನಿಶ್ಚಯವಾಗಿ ಹೇಳಿದರು. ಆಗ ರಾಣಿಯು ಮಾತಿಲ್ಲದೆ ಮೋರೆ ಮಾಡಿಕೊಂಡು ಋಷಿಗಳಿಗೆ ವಂದಿಸಿ, ತೆರಳಿದಳು. ರಾಜನೊಡನೆ, ಚಿಕ್ಕಸ್ವಾಮಿಗಳು ಈ ದಿವಸ ಉಪವಾಸಕ್ಕೆಗೊಂಡಿದ್ದಾರೆ ಎಂದು ಹೇಳಿದಳು. ಆನಂತರ ರಾತ್ರಿಯ ಕರಣದ ಹೊತ್ತಿನಲ್ಲಿ (ಸುಮಾರು ಐದೂವರೆಗಳಿಗೆ) ವಜ್ರಸೇನನೆಂಬ ಮಂತ್ರಿಯು ರಾಜನಿಗೆ ಈ ರೀತಿಯಾಗಿ ವಿಜ್ಞಾಪನೆ ಮಾಡಿದನು - "ದೇವಾ, ನಾಳೆ ನಾನು ಚಿಕ್ಕಸ್ವಾಮಿಗಳನ್ನು ಕರೆದು ನಿಲ್ಲಿಸಿ ಭೋಜನ ಮಾಡಿಸುವೆನು." ಹೀಗೆ ನುಡಿದಾಗ "ಹಾಗೆಯೇ ಮಾಡು" ಎಂದು ಅರಸನು ಹೇಳಿದನು. ಮರುದಿವಸ ಮಂತ್ರಿ ಬಸದಿಗೆ ಹೋಗಿ ಶಿವಗುಪ್ತಾಚಾರ್ಯರೊಡನೆ "ಪೂಜ್ಯರೇ ಚಿಕ್ಕಸ್ವಾಮಿಗಳನ್ನು ಕೂಡಿಕೊಂಡು ನೀವು ನಮ್ಮಲ್ಲಿಗೆ ಬಂದು ಭಿಕ್ಷೆ ಮಾಡಿಸಿ ನೀವು ದಯಮಾಡಿಸಿ" ಎಂದು ಹೇಳಿದನು. ಅದಕ್ಕೆ ಋಷಿಗಳು "ಚಿಕ್ಕ ಸ್ವಾಮಿಗಳು ಬರಲು ಒಪ್ಪುವುದಾದರೆ ಒಟ್ಟಿಗೆ ಕರೆದುಕೊಂಡು ಬರುತ್ತೇವೆ. ಅವರು ಒಪ್ಪುವಂತೆ ನೀವೇ ಮಾಡಬೇಕು" ಎಂದರು. ಮಂತ್ರಿಯು ಚಿಕ್ಕಸ್ವಾಮಿಗಳ ಬಳಿಗೆ ಹೋಗಿ - "ಚಿಕ್ಕಸ್ವಾಮಿಗಳೇ, ಇಂದು ನಮ್ಮ ಮನೆಯಲ್ಲಿ ನೀವು ಪಾರಣೆ ಮಾಡಬೇಕು" ಎಂದು

ಪಿಡಿದು ಪೊಡೆವಟ್ಟಿರ್ದೊನಂ ನೋದಿ 'ರಾಜೋ ವಾ ಮುತ್ರೋ ವಾ' ಎಂಬೆ ಸಾಮಂತ ಮಹಾಸಾಮಂತರ್ಕಳಿಂ ಪರಿವೇಷ್ಟಿತನಾಗಿರ್ದ ಮಂತ್ರಿಯೆನಗೆ ಪೊಡೆಮಟ್ಟನಿದೆಲ್ಲಂ ತಪದ ಮಹಾತ್ಮ್ಯಮಿನ್ನುಂ ಮುಂದೆ ಪಿರಿದುಂಟೆಂದು ಬಗೆದಿಂತೆಂದರಾಮಿಂದುಪವಾಸಂಗೆಯ್ದಮೆಂದೊ ಡಾತನೆನಗೆ ಪುಣ್ಯಮಿಲ್ಲಾಗದೆ ಎಂದು ನುಡಿದು ಭಟ್ಟಾರರಂ ವಂದಿಸಿ ಪೋದಂ ಮತ್ತಮಿರುಳಿನ ಕರಣವೇಳೆಯೊಳರ್ಘದ್ಯಾಸನೆಂಬೊಂ ರಾಜಶ್ರೇಷ್ಠಿಯರಸಂಗೆ ಬನ್ನಪಂಗೆಯ್ದಂ ನಾಳೆಯಾಂ ಕಿತ್ತಯ್ಯಂಗಳ್ಗೆ ಪಾರಣೆಯಂ ಮಾಡುವೆನೆಂದೊಡರಸನಂತೆ ಗೆಯ್ಮಮೆಂದೊಡಾತನುಂ ಬಸದಿಗೆಪೋಗಿ ಭಟ್ಟಾರರಂ ವಂದಿಸಿ ಕಿತ್ತಯ್ಯಗಳುಮಂ ವಂದಿಸಿ ಗುರುಗಳನುಮತದಿಂವೆಮ್ಮ ಮನೆಗೆ ಚರಿಗೆ ವರಲ್ವೇಟ್ಕುಮೆಂದು ನುಡಿದೊಡುಪವಾಸಂಗೆಯ್ದಿನೆಂದೊಡಾತನುಂ ಭಟ್ಟಾರರಂ ವಂದಿಸಿಪ್ಪೋದಂ ಇತ್ತ ನಂದಿಮಿತ್ರ ಕಿತ್ತಯ್ಯಂಗಳ್ಗೆ ಶ್ರಮವುಮಂ ಭಟ್ಟಾರರಱಿದು ಕಿತ್ತಪೆಮ್ಮಾ ಪಂಚನಮಸ್ಕಾರಮಂ ವಮಾಣದಿರುಳುಂ ಪಲಗುವೋದುತ್ತಮಿರಿಮೆಂದು ಕಲ್ಪಿಸಿದೊವವರುಮಿರುಳುಂ ಪಗಲುಮೋದುತ್ತಿರೆ ಮತ್ತಿತ್ತ ಇರುಳಿನೋಲಗದೊಳ್ ನೆರೆದಿರ್ದ ನೆರವಿಯೊಳರಸನುಂ ಮಹಾದೇವಿಯುಂ ತಪಮುಂ ಗುಣಮುಮಂ ಪೊಗಟುತ್ತೆ ತಪಂಬಟ್ಟು ದಿವಸದಿಂ ತಗುಳ್ದಿಂದಿಗಯ್ದು ದಿವಸಮುಣ್ಣದಿಲ್ಲ ಕುದಿವುದಿಲ್ಲುಪ ವಾಸಂಗೆಯ್ದಿರ್ದರಾಮುನಿತು ಕೀಜೆ ನುಡಿದೊಡಂ ಚರಿಗೆಮಾಡಲೊಲ್ಲರಿನ್ನವು ಸಾಹಸಮುಂ

ಕಾಲುಹಿಡಿದು ಸಾಷ್ಟಾಂಗ ವಂದನೆ ಮಾಡಿದನು. ಅವನನ್ನು ಚಿಕ್ಕಸ್ವಾಮಿಗಳು ನೋಡಿ ತಮ್ಮ ಮನಸ್ಸಿನಲ್ಲಿ ಹೀಗೆ ಯೋಚಿಸಿದರು. "ರಾಜನೋ, ರಾಜನ ಜನವೋ ! ಎಂಬ ಹಾಗೆ ಸಾಮಂತರಿಂದಲೂ ಮಹಾಸಾಮಂತರಿಂದಲೂ ಸುತ್ತುವರಿದಿರುವ ಮಂತ್ರಿ ಬಂದು ನನಗೆ ನಮಸ್ಕರಿಸಿದ್ದಾನೆ. ಇವೆಲ್ಲವೂ ನನ್ನ ತಪಸ್ಸಿನ ಮಹಾತ್ಮ್ಯ ! ಇನ್ನು ಮುಂದೆ ಇದಕ್ಕಿಂತಲೂ ಹೆಚ್ಚಿನದು ಉಂಟು" ಈ ರೀತಿ ಭಾವಿಸಿ ಮಂತ್ರಿಯೊಡನೆ - "ನಾವು ಈ ದಿವಸ ಉಪವಾಸ ಮಾಡಿರುತ್ತೇವೆ" ಎನ್ನಲು, ಅತನು "ನನಗೆ ಪುಣ್ಯವಿಲ್ಲದಾಯಿತೆ" ! ಎಂದು ಹೇಳಿಕೊಂಡು ಋಷಿಗಳನ್ನು ವಂದಿಸಿ ತೆರಳಿದನು. ಅನಂತರದ ರಾತ್ರಿಯ ಕರಣದ ವೇಳೆಯಲ್ಲಿ ಅರ್ಘದ್ಯಾಸನೆಂಬ ರಾಜಶ್ರೇಷ್ಠಿ ಅರಸನಿಗೆ "ನಾಳೆ ನಾನು ಚಿಕ್ಕಸ್ವಾಮಿಗಳಿಗೆ ಪಾರಣೆಯನ್ನು ಏರ್ಪಡಿಸುವೆನು" ಎಂದು ವಿಜ್ಞಾಪನೆ ಮಾಡಿದನು. ರಾಜನು "ಹಾಗೆಯೇ ಮಾಡು" ಎನ್ನಲು ಅತನು ಬಸದಿಗೆ ಹೋಗಿ ಏವಗುಪ್ತ ಋಷಿಗಳನ್ನು ವಂದಿಸಿದನು. ಚಿಕ್ಕಸ್ವಾಮಿಗಳನ್ನೂ ವಂದಿಸಿ - "ನೀವು ಗುರುಗಳ ಒಪ್ಪಿಗೆಯಿಂದ ನಮ್ಮ ಮನೆಗೆ ಭಿಕ್ಷಕ್ಕೆ ಬರಬೇಕು" ಎಂದನು. ಆಗ 'ನಾನು ಉಪವಾಸದಲ್ಲಿದ್ದೇನೆ, ಎಂದು ಹೇಳಲು, ಅರ್ಘದ್ಯಾಸಸೆಟ್ಟಿಯು ಋಷಿಗಳಿಗೆ ವಂದಿಸಿ ಹೋದನು. ಇತ್ತ ನಂದಿಮಿತ್ರ ಚಿಕ್ಕಸ್ವಾಮಿಗಳಿಗೆ ಆದ ಶ್ರಮವನ್ನು ಋಷಿಗಳು ತಿಳಿದು "ಚಿಕ್ಕಸ್ವಾಮಿಗಳೇ, ನೀವು ಪಂಚನಮಸ್ಕಾರಗಳನ್ನು ಬಿಡದೆ ಇರುಳೂ ಹಗಲೂ ಹೇಳುತ್ತಾ ಇರಿ" ಎಂದು ತಿಳಿಸಿದರು. ಅವರು ಅದರಂತೆ ಇರುಳೂ ಹಗಲೂ ಅವನ್ನು ಹೇಳುತ್ತಾ ಇದ್ದರು. ಅಮೇಲೆ ಇತ್ತ ರಾಜನೂ ರಾಣಿಯೂ ರಾತ್ರಿಯ ಸಭೆಯಲ್ಲಿ ಸೇರಿದ್ದ ಸಮುದಾಯದ ಮುಂದೆ ಚಿಕ್ಕಸ್ವಾಮಿಗಳ ತಪಸ್ಸನ್ನೂ ಗುಣವನ್ನೂ ಹೊಗಳುತ್ತಿದ್ದರು. "ಅವರು ತಪಸ್ಸನ್ನು ಆಚರಿಸಿದ ದಿನದಿಂದ ಪ್ರಾರಂಭವಾಗಿ ಇಂದಿನ ತನಕ ಐದು ದಿವಸವೂ ಉಣ್ಣದೆ, ಕುಡಿಯದೆ ಉಪವಾಸ ಮಾಡಿದ್ದಾರೆ. ನಾವು ಎಷ್ಟು ಒತ್ತಾಯ ಮಾಡಿ ಹೇಳಿದರೂ ಭಿಕ್ಷೆ ಸ್ವೀಕರಿಸಲು ಒಪ್ಪಲಿಲ್ಲ. ಇಂತಹ ಸಾಹಸವೂ

ಸತ್ವವುಮಾರ್ಗಮೊಳವೆ ಎಂದರಸನುಮರಸಿಯುಂ ಪೊಗಟ್ಟುದಂ ಕೇಳ್ದು ಯುವರಾಜನೆದು ಬನ್ನಪಂಗೆಯ್ದು ದೇವಾ ಕಿತ್ತಯ್ಯಂಗಳ್ಗೆ ನಾಳೆಯುಂ ಪಾರಣೆಯುಂ ಪುಗಾದಿಸುವೆನೆಂದೊದರಸನಂತೆಗೆಯ್ಯೆಂದೊಡೆ ಮಱುದಿವಸಂ ಯುವರಾಜಂ ಮಹಾವಿಭೂತಿವೆರಸು ಬಸದಿಗ ವೋಗಿ ದೇವರಂ ಭಟ್ಟಾರರುಮನರ್ಚಿಸಿ ಬಂದಿಸಿ ಭಟಾರಾ ಕಿತ್ತಯ್ಯಂಗಳಿಂದೆಮ್ಮ ಮನೆಯೊಳ್ ಪಾರಿಸುವಂತಿರೆ ಬೆಸಸಿಮೆನೆ ಕಿತ್ತಯ್ಯಂಗಳನೊದಂಬಡಿಸಿ ನಿಜೆಸಿಮೆನೆ ಕಿತ್ತಯ್ಯಂಗಳ ಕಾಲಂಪಿಡಿದು ಪೊಡೆಮಟ್ಟು ಕಿತ್ತಯ್ಯಾ ಎಮ್ಮ ಮನೆಯೊಳೆಂದು ನೀಮುಂ ಪಾರಿಸಲ್ವೇಱುದೆಂದೊಡೆ ಕಿತ್ತಯ್ಯಂಗಳಾತನ ಶ್ರೀಯುಂ ವಿಭೂತಿಯುಂ ತೇಜಮುಮುಂ ಕಂದು ಇಂತಪ್ಪ ಕ್ಷತ್ರಿಯ ಪುತ್ರಾದಿಗಳಿಲ್ಲಮೆನಗೆಜಗಿ ಪೊಡೆಮಟ್ಟು ಕಿಂಕುರ್ವಾಣಂಗೆಯ್ದಪ್ಪರುಣ್ಬುದರ್ಕೇನೀಗಳ್ ಸಂಕಟಮೀ ತಪವ ಫಲಮಿನ್ನುಂ ಮುಂದ ಪಿರಿದುಂಟೆಂದು ಬಗೆದಿಂದುಪವಾಸಂಗೆಯ್ವೆಮಮ ಮಱುಮಾತುಗೊಟ್ಟೊಡೆ ವಿರಾಗನಾಗಿ ಯುವರಾಜಂ ಭಟಾರರಂ ವಂದಿಸಿ ಪೋದನಿಂತಾಱು ದಿವಸಂ ಪೋದ ಬಟಿಕ್ಕೇಱನೆಯ ದಿವಸದಂದು ನೇಸಱ್ ಮೂಡಿದೊಡೆ ಭಟಾರರಲ್ಲಿಗೆ ನಂದಿಮಿತ್ರಂ ವಂದು ಬಂದಿಸಿ ಇಂತೆಂದಂ ಭಟಾರಾ ಇನಿತುಕಾಲಮುಂಡುದು ಸಾಲ್ದುಮೆಮಗೆ ಯಾವಜ್ಜೀವಂ ಬಾೞ್ದನ್ನೆಗಮುಪವಾಸ ಪಚ್ಚಕ್ಖಾಣಂ ಗುಡುವುದೆಂದೊಡೆ ಭಟಾರರೆಂದರ್ ನೀಮುಂ ಮಹಾಪುರುಷರಿರ್ ನಿಮ್ಮನ್ನರ್ ಧೈರ್ಯವಂತರುಂ ಸತ್ವವಂತರುಮಾರುಮಿಲ್ಲಂ ಇನಿತುಕಾಲಂ ತವಂಗೆಯ್ದಪ್ಪೆವಮಗಪ್ಪೊಡಮಿನಿತು ಧೈರ್ಯಮುಂ

ಸತ್ವವೂ ಯಾರಿಗಾದರೂ ಇದೆಯೇ ?" ಎಂದು ಅರಸನೂ ಅರಸಿಯೂ ಹೊಗಳುವುದನ್ನು ಯುವರಾಜನು ಕೇಳಿ ಎದ್ದು ವಿಜ್ಞಾಪನೆ ಮಾಡಿದನು. "ಪಿತ್ರದೇವನೇ ಚಿಕ್ಕಮಸ್ವಾಮಿಗಳಿಗೆ ನಾನು ನಾಳೆ ಪಾರಣೆ ಮಾಡಿಸುವೆನು" ಎಂದು ಹೇಳಿದನು. "ಹಾಗೆಯೇ ಮಾಡು" ಎಂದು ರಾಜನು ಹೇಳಲು, ಮಾರನೆಯ ದಿನ ಯುವರಾಜನು ಬಹಳ ವೈಭವದಿಂದ ಕೂಡಿ ಬಸದಿಗೆ ಹೋದನು. ಅಲ್ಲಿ ಜಿನದೇವರನ್ನೂ ಋಷಿಗಳನ್ನೂ ವಂದಿಸಿ -"ಸ್ವಾಮಿ, ಚಿಕ್ಕಸ್ವಾಮಿಗಳು ಈ ದಿವಸ ನಮ್ಮ ಮನೆಯಲ್ಲಿ ಪಾರಣೆ ಮಾಡುವಂತೆ ಅಪ್ಪಣೆ ಮಾಡಿ" ಎಂದನು. ಋಷಿಗಳು ಆಗ "ಚಿಕ್ಕಸ್ವಾಮಿಗಳನ್ನು ಒಪ್ಪುವಂತೆ ಮಾಡಿಕೊಂಡು ಹೋಗಿ ನಿಲ್ಲಿಸಿ" ಎಂದರು. ಯುವರಾಜನು ಚಿಕ್ಕಸ್ವಾಮಿಗಳ ಕಾಲನ್ನು ಹಿಡಿದು ಸಾಷ್ಟಾಂಗ ವಂದಿಸಿ "ಚಿಕ್ಕಸ್ವಾಮಿಗಳೇ, ನಮ್ಮ ಮನೆಯಲ್ಲಿ ಇಂದು ನೀವು ಪಾರಣೆ ಮಾಡಬೇಕು" ಎಂದನು. ಚಿಕ್ಕಸ್ವಾಮಿಗಳು ಅವನ ಐಶ್ವರ್ಯ ವೈಭವ ತಪಸ್ಸುಗಳನ್ನು ಕಂಡು - "ಇಂತಹ ರಾಜಕುಮಾರ ಮುಂತಾದವರು ನನಗೆ ವಂದಿಸಿ ಅಡ್ಡಬಿದ್ದು ಸೇವೆ ಮಾಡುತ್ತಾರೆ. ಊಟ ಮಾಡುವುದಕ್ಕೆ ಈಗ ಸಂಕಷ್ಟವೇನಿದೆ? ಈ ತಪಸ್ಸಿನ ಫಲ ಮುಂದೆ ಇನ್ನೂ ಹೆಚ್ಚಾಗಲಿಕ್ಕಿದೆ" ಎಂದು ಭಾವಿಸಿದರು. "ಈ ದಿವಸ ನಾವು ಉಪವಾಸ ಮಾಡಿರುತ್ತೇವೆ" ಎಂದು ಪ್ರತ್ಯುತ್ತರ ಕೊಟ್ಟರು. ಯುವರಾಜನು ಬೇಸರಗೊಂಡು ಋಷಿಗಳಿಗೆ ವಂದಿಸಿ ಹೋದನು. ಈ ರೀತಿಯಾಗಿ ಆರು ದಿವಸಗಳು ಕಳೆದನಂತರ ಏಳನೆಯ ದಿವಸ ಸೂರ್ಯೋದಯದ ವೇಳೆಗೆ ನಂದಿಮಿತ್ರನು ಋಷಿಗಳ ಬಳಿಗೆ ಬಂದು ವಂದಿಸಿ ಹೀಗೆ ಹೇಳಿದನು - "ಪೂಜ್ಯರೇ. ಇಷ್ಟು ಕಾಲ ಊಟ ಮಾಡಿದ್ದು ಸಾಕು. ನನಗೆ ಪ್ರಾಣವಿರುವವರೆಗೆ ಬದುಕುವ ತನಕ ಉಪವಾಸವಿರಲು ಉಪದೇಶ ಕೊಡಿ" ಎಂದು ಹೇಳಲು, ಋಷಿಗಳು "ನೀವು ಮಹಾಪುರುಷರಾಗಿದ್ದೀರಿ. ನಿಮ್ಮಂತೆ ಧೈರ್ಯಶಾಲಿಗಳೂ ಸತ್ವವಂತರೂ ಯಾರೂ ಇಲ್ಲ.

ಸತ್ತಮುಮಿಲ್ಲೆಂದು ಗುರುಗಳ್ ಪೊಗಟ್ಟೊಡೆ ಗುರುಗಳ ಪೊಗಟ್ಗೆಗೆ ರಾಗಿಸಿ ಸಂತೋಸಂಬಟ್ಟರ್ಮೊದೆ ಭಟಾರರೆಂದರ್ ನಿಮಗಿಂದಿನ ದಿವಸದನಿತೆಯಾಯುಷ್ಯಮುಂದು ಪೇಟ್ಟುಂ ಜಾವಜ್ಜೀವಂ ಚತುರ್ವಿಧಮುಪ್ಪಾಹಾರಕ್ಕಂ ಶರೀರಕ್ಕಂ ನಿವೃತ್ತಿಗೆಯ್ಯೆಂದು ಪಚ್ಚಕ್ಖಾಣಂಗೊಟ್ಟು ಬಸದಿಯೊಳೊಂದು ಕೋಣೆಯೊಳೀ ಎದೆಯೊಳ್ ನೀದೊಂದು ಕೆಲದೊಳ್ ಮಗುಚದೆ ತಳರದೆ ಕೈಯುಂ ಕಾಲ್ಗಳುಮನುದುಗದೆ ನೀಡದೆ ಬಾಚ್ಚಿನ್ನೆಗಂ ಪಟ್ಟರ್ದು ಪಂಚನಮಸ್ಕಾರಮುಂ ಮನದೊಳೋದುತ್ತಿರಿಮೆಂದು ಕಲ್ಪಿಸಿ ಪಟ್ಟರಿಸಿ ಆರಾಧನೆಯನರ್ಚಿಸಿ ಭಟ್ಟಾರರಾರಾಧನೆಯಂ ನಕ್ಖಾಣಿಸುವುದುಂ ಕೇಳುತ್ತಿರ್ದಂ ಮತ್ತಿತ್ತ ಕಿತ್ತಯ್ಯಂಗಳ್ ಸಂನ್ಯಸನಂಗೆಯ್ದರೆಂಬಾ ಮಾತನರಸನಾದಿಯಾಗಿ ಪೊಬಿಲ ಜನಂಗಳೆಲ್ಲಂ ಕೇಳ್ದು ಪಿರಿದುಂ ಸಂಭ್ರಮದೊಳಾಗಿಯರಸನುಂ ಮಹಾದೇವಿಯುಂ ಮಂತ್ರಿಯುಂ ರಾಜಶ್ರೇಷ್ಠಿಯುಂ ಯುವರಾಜಂ ಮೊದಲಾಗಿ ಪೊಬಿಲ ಜನಮೆಲ್ಲಮಿರ್ದೊತ್ತುಮರ್ಚನೆಯಂ ಕೊಂಮುಬಂದರ್ಚಿಸಿ ಕಿಜೆದು ಬೇಗಮಿರ್ದಾರಾಧನೆಯಂ ಪಕ್ಖಾಣಿಸುವುದಂ ಕೇಳ್ದು ಮಿಥ್ಯಾದೃಷ್ಟಿಗಳಪ್ಪರ್ ಶಾವಕವ್ರತಂಗಳಂ ಕೈಕೊಂದರ್ ಶ್ರಾವಕರುಂ ದೃಢಸಮ್ಯಗ್ದೃಷ್ಟಿಗಳಾಗಿ ಬಂದಿಸಿ ಪೋದರ್ ಇತ್ತ ಸೇಸಜಿನ್ ಪಟ್ಟೊಡೆ ಕಿತ್ತಯ್ಯಂಗಳ್ಗಾಸನ್ನಕಾಲದೂದುದೆಂಬುದುಂ ಭಟಾರರಱೆದಿಂತೆಂದರ್ ಕಿತ್ತಯ್ಯಾ ನಿಮಗೀಗಳ್ ಪ್ರಾಣಂಪೋಗಲ್ ಬಗೆದಪ್ಪುದು ದೇವರಂ ಜಾನಿಸುವುದು

ಇಷ್ಟು ಕಾಲವೂ ತಪಸ್ಸು ಮಾಡುತ್ತಿರುವ ನಮಗಾದರೂ ಕೂಡ ಇಷ್ಟು ಧೈರ್ಯವೂ ಇಲ್ಲ" ಎಂದು ಶಿಷ್ಯನನ್ನು ಹೊಗಳಿದರು. ಗುರುಗಳ ಹೊಗಳಿಕೆಗೆ ಸಂದಿಮಿತ್ರನು ಪ್ರೀತಿಗೊಂಡು ಸಂತೋಷಪಟ್ಟು ಇತರು, ಋಷಿಗಳು ಅವನಿಗೆ ಹೀಗೆಂದರು - "ನಿಮಗೆ ಇಂದಿನ ದಿವಸದ ವರೆಗೆ ಮಾತ್ರವೇ ಆಯುಷ್ಯ. ಜೀವಮಿರುವ ತನಕವೂ ನಾಲ್ಕು ವಿಧವಾದ ಆಹಾರಕ್ಕೂ ದೇಹಕ್ಕೂ ಪರಿಹಾರ ಮಾಡಿ" ಎಂದು ಉಪದೇಶಕೊಟ್ಟರು. "ಈ ಬಸದಿಯ ಒಂದು ಮೂಲೆಯಲ್ಲಿ ಈ ಸ್ಥಳದಲ್ಲಿ ಬದಿಯಲ್ಲಿದ್ದು ಮಗುಚಿಕೊಳ್ಳದೆ, ಅಲುಗಾಡದೆ, ಕೈಕಾಲುಗಳನ್ನು ಮುದುಡಿಸಿಕೊಳ್ಳದೆ ಬದುಕಿರುವವರೆಗೂ ಮಲಗಿರಬೇಕು. ಮನಸ್ಸಿನಲ್ಲಿ ಅರ್ಹಂತರು, ಸಿದ್ಧರು, ಆಚಾರ್ಯರು, ಉಪಾಧ್ಯಾಯರು, ಸಾಧುಗಳು ಎಂಬ ಪಂಚಪರಮೇಷ್ಠಿಗಳಿಗೆ ಪಂಚನಮಸ್ಕಾರಗಳನ್ನು ಮನಸ್ಸಿನಲ್ಲಿಯೇ ಹೇಳುತ್ತಿರಬೇಕು" ಎಂದು ಹೇಳಿಕೊಟ್ಟು, ಮಲಗಿಸಿ ಆರಾಧನೆ ಮಾಡಿ, ಋಷಿಗಳು ಆರಾಧನೆಯನ್ನು ವ್ಯಾಖ್ಯಾನಿಸುವುದನ್ನು ಕೇಳುತ್ತಿದ್ದನು. ಇತ್ತ ಜಿಕ್ಕಸ್ವಾಮಿಗಳು ವೈರಾಗ್ಯ ಸ್ವೀಕರಿಸಿದರೆಂಬ ಮಾತನ್ನು ಅರಸನೇ ಮೊದಲಾಗಿ ಪಟ್ಟಣಿಗರೆಲ್ಲ ಕೇಳಿ ಬಹಳ ಸಂಭ್ರಮಗೊಂಡರು. ಅರಸ, ಅರಸಿ, ಮಂತ್ರಿ, ರಾಜಶ್ರೇಷ್ಠಿ, ಯುವರಾಜ ಮುಂತಾದ ಪಟ್ಟಣಿಗರೆಲ್ಲರೂ ಎರಪಿನ ಹೊತ್ತೂ ಪೂಜಾದ್ರವ್ಯಗಳನ್ನು ತೆಗೆದುಕೊಂಡು ಬಂದು ಪೂಜಿಸಿ ಸ್ವಲ್ಪ ಹೊತ್ತಿನವರೆಗೆ ಇದ್ದು ಆರಾಧನೆಯನ್ನು ವ್ಯಾಖ್ಯಾನಿಸುವುದನ್ನು ಕೇಳಿದ ಮಿಥ್ಯಾ ದೃಷ್ಟಿಯುಳ್ಳವರಾದ ಜನರು ಶ್ರಾವಕವ್ರತಗಳನ್ನು ಸ್ವೀಕರಿಸಿದರು. ಶ್ರಾವಕರಾದವರು ಈ ಗಾಥೆಯಿರುವ ಸಮ್ಯಕ್‌ದೃಷ್ಟಿಯುಳ್ಳವರಾಗಿ ವಂದಿಸಿ ತೆರಳಿದರು. ಇತ್ತ ಸಂಯಮಿಸ್ವಾಮಿಗಳು, ಜಿಕ್ಕಸ್ವಾಮಿಗೆ ಮರಣದ ಹೊತ್ತು ಬಂತೆಂಬುದನ್ನು ಋಷಿಗಳು ತಿಳಿಸಿ ಹೀಗೆಂದರು - "ಜಿಕ್ಕಸ್ವಾಮಿಗಳೇ ನಿಮಗೆ ಈಗ ಪ್ರಾಣವು ಹೋಗಲು ಏಳೆಂಟು ಘಳಿಗೆ ದೇವರನ್ನು ಧ್ಯಾನಿಸಿರಿ, ಪಂಚನಮಸ್ಕಾರವನ್ನು ಓದುತ್ತ ಉಚ್ಚಾರಣೆ

ಪಂಚನಮಸ್ಕಾರಮನೋಮತ್ತಮು ಚ್ಚಾರಿಸುವುದಂ ಕೇಳುತ್ತಮಿರಿಮೆಂದುಂ ಕಲ್ಪಿಸಿ ಭಟಾರರ್ ಪಂಚನಮಸ್ಕಾರಮಂ ಪಿರಿದು ಬೇಗಂ ಪೇಲಿ ಪ್ರಾಯೋಪಗಮನದಿನೆಂತಂತೆ ಶುಭಪರಿಣಾಮದಿಂ ಸಮ್ಯಗ್ದರ್ಶನ ಜ್ಞಾನಚಾರಿತ್ರಂಗಳಂ ಸಾಧಿಸಿ ಮುಡಿಪಿ ಸೌಧರ್ಮ ಕಲ್ಪದೊಳೆರಡು ಸಾಗರೋಪಮಾಯುಷ್ಯಮನೊಡೆಯೊಂ ಕನಕಧ್ವಜನೆಂಬೊಂ ದೇವನಾಗಿ ಪುಟ್ಟಿಯವಧಿಜ್ಞಾನದಿಂ ತನ್ನ ಭವಮನಱದೀ ಶರೀರದಿಂದಮಿಂತಪ್ಪ ದಿವ್ಯಶರೀರಮುಂ ದೇವಲೋಕದೊಳಪ್ಪ ಸುಖಮೈಶ್ವರ್ಯಮುಮಾದುದೆಂದು ಮೂಱುಕೋಟಿ ಪರಿವಾರ ದೇವರ್ಕಳುಂ ಮೂಱುಲಕ್ಷ ದೇವಿಯರಪ್ಪರಸಿಯರ್ಕಳುಂ ಗಣಿಕೆಯರ್ಕಳುಂ ಬೆರಸು ಸುರತ್ನಮಯಮಪ್ಪ ದಿವ್ಯವಿಮಾನಮುಂ ಘಂಟಾಜಾಳ ಮುಕ್ತಾಜಾಳ ಹೇಮಜಾಳಂಗಳಿಂದೊಪ್ಪುವ ವಿಮಾನಮನೇಜೆ ಮಹಾವಿಭೂತಿಯಿಂ ತಗುಳ್ದುರಗಾಮರಂಬೆರಸು ಪಾಮತ್ತಂ ಬರ್ಪನ್ನೆಗಮಿತ್ತ ವೈದಿಶಮೆಂಬ ಪೊಬಲೊಳ್ ನಂದಿಮಿತ್ರ ಕಿತ್ತಯ್ಯಂಗಳ್ ಮುಡಿಪಿದರೆಂಬುದಂ ಕೇಳ್ದರಸನುಂ ಮಹಾದೇವಿಯುಂ ಮಂತ್ರಿಯುಂ ಪೆರ್ಗಡೆಯುಂ ಮೊದಲಾಗಿ ಪೊಬಲೊಳಗುಳ್ಳ ಜನಮೆಲ್ಲಮರ್ಚನೆಗಳುಂ ಕೊಂದು ಬಂವರಸಂ ತಾಂ ಪಕ್ಕದಿರ್ದು ಕ್ಷಪಣಕನನುಯ್ದ ವಿಮಾನಮುಮಂ ಮತ್ತಂ ಶೋಭೆಗೆಂದು ಪಲವು ವಿಮಾನಂಗಳುಮನೊಳ್ಕಿದುವಾಗಿ ಮಾಡಿಸಿ ಪಲವುಂ ನೇತ್ರದ ಪಟೆವುಲ್ಲವಂಗಳ್ ಧ್ವಜ ಪತಾಕೆಗಳುಮನೆತ್ತಿಸಿ ಚಾತುರ್ವರ್ಣ ಶ್ರವಣ

ಮಾಡುವುದನ್ನು ಕೇಳುತ್ತಾ ಇರಿ" ಎಂದು ಕಲಿಸಿಕೊಟ್ಟು ಋಷಿಗಳು ಪಂಚನಮಸ್ಕಾರದ ಮಂತ್ರವನ್ನು ಬಹಳ ಬೇಗನೆ ಹೇಳಿದರು. ಆಗ ನಂದಿಮಿತ್ರನು ಪ್ರಾಣಾಂತ ಉಪವಾಸವ್ರತದಿಂದ ಹೇಗೋ ಹಾಗೆ ಶುಭವಾದ ಪರಿಣಾಮದಿಂದ ಸಮ್ಯಗ್ ದರ್ಶನ - ಜ್ಞಾನ- ಚಾರಿತ್ರಗಳೆಂಬ ರತ್ನತ್ರಯವನ್ನು ಪಡೆದು, ಸತ್ತು, ಸೌಧರ್ಮ ಎಂಬ ಸ್ವರ್ಗದಲ್ಲಿ ಎರಡು ಸಾಗರದಷ್ಟು ಆಯುಷ್ಯವುಳ್ಳ ಕನಕಧ್ವಜನೆಂಬ ದೇವನಾಗಿ ಹುಟ್ಟಿದನು. ಅವನು ಅವಧಿಜ್ಞಾನದಿಂದ ತನ್ನ ಜನ್ಮವಿಚಾರವನ್ನು ತಿಳಿದು, "ಈ ಶರೀರದಿಂದ ಇಂತಹ ದಿವ್ಯವಾದ ಶರೀರವೂ ದೇವಲೋಕದಲ್ಲಿ ಆಗತಕ್ಕ ಸುಖೈಶ್ವರ್ಯಗಳೂ ಆದುವು" ಎಂದುಕೊಂಡು, ಮೂರು ಕೋಟಿ, ಪರಿವಾರ ದೇವತೆಗಳನ್ನೂ ಮೂರು ಲಕ್ಷದೇವಾಂಗನೆಯರಾದ ರಾಣಿಯರನ್ನೂ ದಾಸಿಯರನ್ನೂ ಕೂಡಿಕೊಂಡು ಒಳ್ಳೆಯ ರತ್ನಗಳಿಂದ ಕೂಡಿದ ಮತ್ತು ಗಂಟೆ, ಮುತ್ತು, ಚಿನ್ನಗಳ ಸಮೂಹದಿಂದ ಮೆರೆಯುವ, ದಿವ್ಯವಾದ ವಿಮಾನವನ್ನೇರಿ ಮಹಾವೈಭವದಿಂದ ಅನುಸರಿಸಿ ಬರುತ್ತಿದ್ದ ಉರಗಲೋಕದವರೂ ದೇವಲೋಕದವರೂ ಸೇರಿಕೊಂಡಿದ್ದು, ಹಾಡುತ್ತ ಬರುತ್ತಿದ್ದನು. ಆ ವೇಳೆಗೆ ಇತ್ತ ವೈದಿಶವೆಂಬ ಪಟ್ಟಣದಲ್ಲಿ ನಂದಿಮಿತ್ರ ಚಿಕ್ಕಸ್ವಾಮಿಗಳು ಸತ್ತುಹೋದರೆಂಬುದನ್ನು ಕೇಳಿ ರಾಜನೂ ಮಹಾರಾಣಿಯೂ ಮಂತ್ರಿಯೂ ಹೆಗ್ಗಡೆ (ಅರಮನೆಯ ಅಧಿಕಾರಿ)ಯೂ ಮುಂತಾದ ಪಟ್ಟಣದಲ್ಲಿದ್ದ ಜನರೆಲ್ಲರೂ ಪೂಜಾವಸ್ತುಗಳನ್ನು ತೆಗೆದುಕೊಂಡು ಬಂದರು. ಅರಸನು ತಾನು ಪಕ್ಕದಲ್ಲೇ ಇದ್ದು ಜೈನಸನ್ಯಾಸಿಯನ್ನು ಒಯ್ಯುತ್ತಿದ್ದ ಮಂಟಪವನ್ನಲ್ಲದೆ ಮತ್ತೂ ಹೆಚ್ಚಿನ ಶೋಭೆಗಾಗಿ ಹಲವು ಮಂಟಪಗಳನ್ನು ಒಳ್ಳೆಯ ರೀತಿಯವಾಗಿ ಮಾಡಿಸಿದನು. ಹಲವು ಬಗೆಯ ನೇತ್ರವೆಂಬ ರೇಷ್ಮೆವಸ್ತ್ರದ ಮೇಲ್ಕಟ್ಟುಗಳನ್ನೂ ಧ್ವಜಪತಾಕೆಗಳನ್ನೂ ಎತ್ತಿಸಿದನು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರು ಜೈನಸನ್ಯಾಸಿಗಳ ವ್ಯಂಜ

ಸಂಘ ಸಹಿತಂ ಪಟು ಪಟಹ ತುಣವ ಭಂಭಾ ಮರ್ದಳೆ ಝಲ್ಲರಿ ಮುಕುಂದ ತಾಳ ಕಾಹಳ ಶಂಖ ವಂಶ ವೀಣಾಪ್ಸರಂಗಳೆಸೆಯೆ ಕವಿವರರುಂ ಪೆಂಡವಾಸದೊಳ್ನಿಂದಿರ್ಕಳುಂ ವಿಮಾನಂಗಳ ಮಂಡಾಡುತ್ತಂ ದಮ್ಮಮುಮಂ ಪೊನ್ನುಮಂ ಕೇಳಮಾಡಿ ಮುಂದೆ ಸೂಸುತ್ತಮೊಯ್ಯನಾ ಕನಕಧ್ವಜನೆಂಬ ದೇವಂ ಕಂಡೆನ್ನ ದೇಹಕ್ಕಿವರೆಲ್ಲಮಿನಿವಿರಿ ದರ್ಚನೆಯುಮುಮಂ ಪೂಜೆಯುಮುಂ ವೈಭವಮನುಂ ಪ್ರಭಾವನೆಯುಮುಂ ಮಾದಿವಪ್ಪರೆಂಮೊಡಾನೆನ್ನ ದೇಹಕ್ಕೆ ಮಾಡುರ್ಪನೆಂದು ಪಲವು ವಿಮಾನಂಗಳಂ ವಿಗುರ್ವಿಸಿ ಕ್ಷಪಣಕನ ವಿಮಾನದ ಮುಂದೆ ಬಳಸಿಯುಂ ಪೋಪಂತು ಮಾಡಿಯಾಕಾಶಮೆಲ್ಲಮಂ ವಿಮಾನಮಯಮಾಗೆ ವಿಗುರ್ವಿಸಿ ದೇವಲೋಕದ ಪಱೆಗಳಂ ಬಾಜಿಸುತ್ತಂ ನಮೇರು ಮಂದಾರ ಸಂತಾನಕ ಪಾರಿಜಾತಂಗಳೆಂಬ ಪೂಗಳಂ ಸುರಿಯುತ್ತಂ ದೇವರ್ಕಳ ದೇವಿಯರ್ಕಳ್ ಸಹಿತಂ ಕ್ಷಪಣಕನ ವಿಮಾನದ ಮುಂದೆ ಇಂತೆಂದು ಪೇಱ್ದಾಡಿದಂ :

ಗಾಪೆ ॥ ಪೆಚ್ಚಹ ಪೆಚ್ಚಹ ಓದಣ ಮುಂದಂ
ಅಚ್ಚರ ಮಜ್ಝಗಯಂ ರಮಣೀಜ್ಜಂ
ಜಂಜೆಣ ಮಂತೆಣ ಕಾರಣ ಯೇಣ
ಪಚ್ಚ ಇಯವ್ವಂಯೋ ಇಣರೇಣ

ಎಂದು ಛಂದಛಂದದಿಂ ಪೇಱ್ದಾಡುವುದಂ ಕಂಡರಸಂ ಮೊದಲಾಗಿ ಪೊಬಲ ಜನವೆಲ್ಲಂ ಬೀಱ್ದಾಡಿದುವು. ಬೀಱಗಾಗಿ ನೋಡುತ್ತಿರ್ದಿಂತೆಂದರಸಂ ಬೆಸಗೊಂಡಂ ನೀಮರ್ಗೇನೆಂಬಿರೆಲ್ಲಿಂ ಬಂದಿರಿಂತೇಕೆ

ಸಮೇತವಾಗಿದ್ದರು. ಸಮರ್ಥವಾದ ತಮಟೆ, ತುಣವ, ಭಂಭಾ (ಭೇರಿ), ಮದ್ದಳೆ, ಝಲ್ಲರಿ (ವಲಯಾಕರವಾದ ವಾದ್ಯ), ಮುಕುಂದ (ಒಂದು ಬಗೆಯ ಮದ್ದಳೆ), ತಾಳ ಕಾಹಳ (ತುತೂರಿ), ಶಂಖ, ಕೊಳಲು, ವೀಣೆ - ಇವುಗಳಿಂದ ನಾದ ಶೋಭಿಸುತ್ತಿತ್ತು. ಕವಿಶ್ರೇಷ್ಠರೂ ರಾಣೀವಾಸದ ಒಳ್ಳೆಯ ಹೆಂಡಿರೂ ಆ ಮಂಟಪಗಳ ಮುಂದೆ ಆಡುತ್ತ ದಮ್ಮ ಎಂಬ ನಾಣ್ಯಗಳನ್ನೂ ಹೊನ್ನುಗಳನ್ನೂ ಆಟದಂತೆ ಮುಂದೆ ಚೆಲ್ಲುತ್ತಿದ್ದರು. ಸಂದಿಮಿತ್ರನ ಶವವನ್ನು ಈ ರೀತಿಯಾಗಿ ಒಯ್ಯುವುದನ್ನು ಕನಕಧ್ವಜನೆಂಬ ದೇವನು ಕಂಡನು. "ನನ್ನ ಹಿಂದಿನ ಮೃತದೇಹಕ್ಕೆ ಇವರೆಲ್ಲ ಇಷ್ಟೊಂದು ಹಿರಿದಾದ ಅರ್ಚನೆಯನ್ನೂ ಪೂಜೆಯನ್ನೂ ವೈಭವವನ್ನೂ ಗೌರವವನ್ನೂ ಮಾಡುತ್ತಿರುವಾಗ ನಾನು ನನ್ನ ದೇಹಕ್ಕೆ ಮಾಡದಿರುವೆನೆ?" ಎಂದು ಕನಕಧ್ವಜನು ಹಲವು ವಿಮಾನಗಳನ್ನು ಮಾಯೆಯಿಂದ ಸೃಷ್ಟಿಸಿ ಜೈನಸಂನ್ಯಾಸಿ ಸಂದಿಮಿತ್ರನ ಶವದ ವಿಮಾನದ (ಮಂಟಪ) ಮುಂದೆ ಬಳಸಿ ಹೋಗುವಂತೆ ಮಾಡಿದನು. ಆಕಾಶವೆಲ್ಲವೂ ತುಂಬಿ ಹೋಗುವಂತೆ ಮಾಯೆಯಿಂದ ವಿಮಾನಗಳನ್ನು ಸೃಷ್ಟಿಸಿ ದೇವಲೋಕದ ಚರ್ಮವಾದ್ಯಗಳನ್ನು ಬಾರಿಸಿಕೊಂಡು, ಸುರಪುನ್ನಾಗ (ನಮೇರು), ಮಂದಾರ, ಸಂತಾನಕ, ಪಾರಿಜಾತ - ಎಂಬ ದೇವಲೋಕದ ಮರಗಳ ಹೂಗಳನ್ನು ಸುರಿಸುತ್ತ, ದೇವತಾಪುರುಷರಿಂದಲೂ ಸ್ತ್ರೀಯರಿಂದಲೂ ಕೂಡಿ ಸಂದಿಮಿತ್ರ ಜೈನ ಸಂನ್ಯಾಸಿಯ ಶವಮಂಟಪದ ಮುಂದೆ ಹೀಗೆ ಹೇಳಿಕೊಂಡು ನೃತ್ಯ ಮಾಡಿದನು- (ಅನ್ನಕ್ಕಾಗಿ ತಲೆಯನ್ನು ಬೋಳಿಸಿರುವ ಬೋಳನನ್ನು - ಅಪ್ಸರಸ್ತ್ರೀಯರ ನಡುವೆ ಸುಂದರನಾಗಿ ಇರುವವನನ್ನು ನೋಡು ನೋಡು. ಯಾವುದಾದರೂ ಕಾರಣದಿಂದ

ಪೇಜ್ಞಾದಿವಪ್ಪರೆಂದು ಬೆಸಗೊಂಡೊಡಾನಲ್ಲೆ ನಂದಿಮಿತ್ರನಪ್ಪ ಕಿತ್ತಯ್ಯನೆನುಣಿಪಿಂಗೆಂದು ತಪಂಬಟ್ಟೇಱುದಿಪಸಮುಪವಾಸಂಗೆಯ್ದು ಮುದಿಪಿ ಸಂನ್ಯಸನಂಗೆಯ್ದು ಮುದಿಪಿ ದೇವಲೋಕದೊಳ್ ಕನಕಧ್ವಜನೆಂಬೊಂ ದೇವನಾಗಿ ಪುಟ್ಟಿ ಎನ್ನ ದೇಹಮಂ ಪೂಜಿಸಲುಂ ನಿಮಗೆನ್ನ ವಿಭವಮಂ ತೋಱಲ್ ಬಂದೆನೆಂದು ಪೇೞ್ದು ತನ್ನ ಶರೀರಮಂ ದಿವ್ಯಮಪ್ಪ ಗಂಧ ಪುಷ್ಪ ದೀಪ ಧೂಪಾಕ್ಷತೆಗಳಿಂದರ್ಚಿಸಿ ತನ್ನ ಗುರುಗಳಪ್ಪ ಶಿವಗುಪ್ತರೆಂಬಾಚಾರ್ಯರುಮಂ ಪೂಜಿಸಿ ನಿಮ್ಮ ಪ್ರಸಾದವಿಂದೆನಗಿನಿವಿರಿದು ಶ್ರೀಯುಂ ಮಹಾವಿಭೂತಿಯುಮೈಶ್ವರ್ಯಮುಂ ದೇವತ್ವಮುಮಾದುದೆಂದು ಪೇೞ್ದು ಬಂದಿಸಿ ತನ್ನ ದೇವಲೋಕಕ್ಕೆ ಪೋದನ್ ಇತ್ತಲರಸನುಮದೆಲ್ಲಮಂ ಕಂದು ಸಂಸಾರ ಶರೀರ ಭೋಗ ವೈರಾಗ್ಯಪರಾಯಣನಾಗಿ ಶ್ರೀವರ್ಮನೆಂಬ ತನ್ನ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ಪಲಂಬರರಸುಮಕ್ಕಳುಂ ಮಹಾದೇವಿ ಮೊದಲಾಗಿ ಪಲಂಬರರಸಿಯರ್ಕಳುಂ ಪರಿವಾರದವರುಂ ಪೊಬಿಲ ಪಲಂಬರ್ ಜನಂಗಳೆಲ್ಲಂ ಬೆರಸು ಶಿವಗುಪ್ತ ಭಟ್ಟಾರರ ಪಕ್ಕದೆ ತಪಂಬಟ್ಟು ಸಮ್ಯಗ್ ಜ್ಞಾನ ಚಾರಿತ್ರಂಗಳೊಳಗೊಳ್ಳಿತಾಗಿ ನೆಗೞ್ದು ಪಶ್ಚಾತ್ಕಾಲದೊಳ್ ಸಂನ್ಯಸನಂಗೆಯ್ದು ಮುದಿಪಿಯನಿಬರುಂ ದೇವಲೋಕಕ್ಕೆ ಪೋದರ್ ಮತ್ತಂ ಕನಕಧ್ವಜನೆಂಬ ದೇವಂ ಪಲಕಾಲಂ ದೇವಲೋಕದ

ಮನುಷ್ಯನು ಇಂತಹದನ್ನು ನಂಬುತ್ತಾನೆ) ಈ ರೀತಿಯಾಗಿ ಬೇರೆ ಬೇರೆ ಛಂದಸ್ಸುಗಳಿಂದ (ಪದ್ಯ ಧಾಟಿಗಳಿಂದ) ಹೇಳಿ ನರ್ತಿಸುವುದನ್ನು ರಾಜನೇ ಮುಂತಾದ ಪಟ್ಟಣಿಗರೆಲ್ಲ ಆಶ್ಚರ್ಯಚಕಿತರಾಗಿ ನೋಡುತ್ತಿದ್ದರು. ರಾಜನು ಕನಕಧ್ವಜನೊಡನೆ - "ನೀವು ಯಾರ ಸಂಬಂಧದವರು ? ಏನು ಹೇಳಲಿದ್ದೀರಿ ? ಎಲ್ಲಿಂದ ಬಂದಿರಿ? ಈ ರೀತಿ ಹೇಳಿಕೊಂಡು ಯಾಕೆ ಕುಣಿದಾಡುತ್ತೀರಿ ?" ಎಂದು ಕೇಳಿದನು. ಆಗ ಅವನು "ನಾನು ನಂದಿಮಿತ್ರನೆಂಬ ಭಿಕ್ಷಾಸ್ವಾಮಿಯಾಗಿದ್ದವನಲ್ಲವೆ ? ಊಟಕ್ಕಾಗಿ ತಪಸ್ಸನ್ನು ಸ್ವೀಕರಿಸಿ ಏಳು ದಿವಸ ಉಪವಾಸ ಮಾಡಿ ಸತ್ತು ಸಂನ್ಯಾಸ ಕೈಕೊಂಡು ಸತ್ತು ದೇವಲೋಕದಲ್ಲಿ ಕನಕಧ್ವಜನೆಂಬ ದೇವನಾಗಿ ಹುಟ್ಟಿದೆನು. ನನ್ನ ಹಿಂದಿನ ಶರೀರವನ್ನು ಪೂಜಿಸುವುದಕ್ಕೂ ನಿಮಗೆ ನನ್ನ ವೈಭವವನ್ನು ತೋರಿಸುವುದಕ್ಕೂ ಬಂದಿದ್ದೇನೆ" ಎಂದು ಹೇಳಿದನು. ಆಮೇಲೆ ತನ್ನ ಶರೀರವನ್ನು ದೇವಲೋಕದಿಂದ ತಂದ ಗಂಧ, ಪುಷ್ಪ, ದೀಪ, ಧೂಪ, ಅಕ್ಷತೆಗಳಿಂದ ಪೂಜಿಸಿದನು. ತನ್ನ ಗುರುಗಳಾದ ಶಿವಗುಪ್ತರೆಂಬ ಆಚಾರ್ಯರನ್ನು ಪೂಜಿಸಿ, "ನಿಮ್ಮ ಅನುಗ್ರಹದಿಂದ ನನಗೆ ಇಷ್ಟೊಂದು ಹಿರಿದಾದ ಕಾಂತಿಯೂ ಐಶ್ವರ್ಯವೂ ಮಹಾಸಂಪತ್ತೂ ದೇವತ್ವವೂ ಆಗಿದೆ" ಎಂದು ಹೇಳಿ ವಂದಿಸಿ ತನ್ನ ದೇವಲೋಕಕ್ಕೆ ತೆರಳಿದನು. ಇತ್ತ ಜಯವರ್ಮ ಮಹಾರಾಜನು ಅದೆಲ್ಲವನ್ನೂ ಕಂಡು ಸಂಸಾರದಲ್ಲಿಯೂ ಶರೀರದಲ್ಲಿಯೂ ಸುಖದಲ್ಲಿಯೂ ವೈರಾಗ್ಯವೇ ಮುಖ್ಯ ಗುರಿಯಾಗುಳ್ಳವನಾಗಿ ಶ್ರೀವರ್ಮನೆಂಬ ತನ್ನ ಹಿರಿಯ ಮಗನಿಗೆ ರಾಜ್ಯಪಟ್ಟ ಕಟ್ಟಿದನು. ಅವನೂ ಹಲವು ಮಂದಿ ರಾಜಕುಮಾರರೂ ಮಹಾರಾಣಿ ಮುಂತಾದ ಹಲವು ಮಂದಿ ರಾಣಿಯರೂ ಪರಿವಾರದವರೂ ಪಟ್ಟಣದ ಹಲವು ಜನರೂ ಒಟ್ಟಾಗಿ ಶಿವಗುಪ್ತ ಋಷಿಗಳ ಬಳಿಯಲ್ಲಿ ತಪಸ್ಸನ್ನು ಸ್ವೀಕರಿಸಿದರು. ಸಮ್ಯಗ್ ಜ್ಞಾನ ಸಮ್ಯಕ್ ಚಾರಿತ್ರಗಳನ್ನು ಚೆನ್ನಾಗಿ ಆಚರಿಸಿ ಅನಂತರದ ಕಾಲದಲ್ಲಿ ಸಂನ್ಯಾಸವನ್ನು ಮಾಡಿ ಸತ್ತು ಅವರೆಲ್ಲರೂ ದೇವಲೋಕಕ್ಕೆ ಹೋದರು. ಆಮೇಲೆ ಕನಕಧ್ವಜನೆಂಬ ದೇವನು ಹಲವು ಕಾಲ ದೇವಲೋಕದ ಸುಖವನ್ನು ಅನುಭವಿಸಿ ಮತ್ತೆ ಈ ಭೂಮಿಗೆ ಬಂದು

ಸುಖಮನನುಭವಿಸಿ ಬಂದಿಲ್ಲಿ ನೀಂ ಸಂಪ್ರತಿ ಚಂದ್ರಗುಪ್ತನಾಗಿ ಪುಟ್ಟಿದೆಯೆಂದು ಸಮಾಧಿಗುಪ್ತ ಭಟ್ಟಾರರ್ ತನ್ನ ಭವಮಂ ಪೇಳ್ದೊಡಾದಮಾನುಮೊಸೆದು ಸಂತೋಷಂಬಟ್ಟು ಭಟ್ಟಾರರಂ ವಂದಿಸಿ ತನ್ನರಮನೆಗೆ ವೋಗಿ ಇಂತು ಸಂಪ್ರತಿ ಚಂದ್ರಗುಪ್ತ ಮಹಾರಾಜಂ ಪೃಥ್ವಿಯನೇಕಚ್ಛತ್ರಚ್ಛಾಯೆಯಿಂದ ಮಾಳುತ್ತಮುಜ್ಜೇನಿಯೊಳ್ ಸುಖದಿಂದಿರ್ಪನ್ನೆಗಂ ಇತ್ತ ದ್ವಾದಶಾಂಗ ಚತುರ್ದಶಪೂರ್ವಧಾರಿಗಳಪ್ಪ ಭದ್ರಬಾಹು ಭಟ್ಟಾರರ್ ಪಿರಿದು ಋಷಿಸಮುದಾಯಂ ಬೆರಸು ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪೊರುಜ್ಜೇನಿಗೆ ವಂದಾ ಪೊಬಲ ಬಹಿರುದ್ಯಾನವನದೊಳಿರ್ದರದನರಸಂ ಕೇಳ್ದು ಪರಿವಾರಸಹಿತಂ ಪೋಗಿ ಭಟಾರರಂ ವಂದಿಸಿ ಸದ್ಧರ್ಮಮಂ ಕೇಳ್ದು ಶ್ರಾವಕಬ್ರತಂಗಳನೇಜಿಸಿಕೊಂಡು ವಂದಿಸಿ ತನ್ನರಮನೆಗೆ ವೋದನಿತ್ತ ಭಟಾರರುಂ ಪಲವು ದಿವಸಮಾ ಪೊಬಲೊಳಿರೆ ಮತ್ತೊಂದು ದಿವಸಂ ಋಷಿಸಮುದಾಯವೆಲ್ಲಮಂ ಚರಿಗೆವೊಗಿಸುತ್ತಮೆಲ್ಲರುಮಂ ನಿಱಿಸಿ ತಾವೊರ್ವರೆಯೊಂದು ಮನೆಯಂ ಪೊಕ್ಕಾಗಳಾ ಮನೆಯೊಳಾರುಮಿಲ್ಲೋಸರಿಗೆಯೊಳ್ ತೊಟ್ಟಿಲೊಳಿರ್ದವ್ಯಕ್ತ ಕಿಱುಗೂಸು ಬೋಳಹ ಬೋಳಹ ಭಟ್ಟಾರಾ ಎಂದತ್ತಾಗಳಾ ವಚನಮಂ ಭಟ್ಟಾರರ್ ಕೇಳ್ದು ದಿವ್ಯವಾಕ್ಯಮೆಂದಱಿದು ಕಾಲಪ್ರಮಾಣಮಂ ಬಿಸಗೊಂಡೊಡೆ ದ್ವಾದಶವರ್ಷಮೆಂದು ಪೇಟ್ದತ್ತು ಭಟ್ಟಾರರ್ ಕಾಲದೋಷದಿಂ ಪ್ರಜಾಪೀಡೆಯಾದಪ್ಪುದೆಂದಱಿದು ಕಾರುಣ್ಯಬುದ್ಧಿಯಿಂದಾಹಾರಮಂ ಕೊಳ್ಳದೆ ಅಲಾಭಂ ಮಾಡಿಯಂತೆ ಬಸದಿಗೆ ವೋಗಿ

ನೀನೀಗ ಸಂಪ್ರತಿ ಚಂದ್ರಗುಪ್ತನಾಗಿ ಹುಟ್ಟಿರುತ್ತೀಯೆ - ಎಂದು ಸಮಾಧಿಗುಪ್ತ ಋಷಿಗಳು ಅವನ ಜನ್ಮವೃತ್ತಾಂತವನ್ನು ಹೇಳಿದರು. ಇದರಿಂದ ಅತ್ಯಂತ ಪ್ರೀತಿಗೊಂಡು ಸಂತೋಷಪಟ್ಟು ಸಂಪ್ರತಿ ಚಂದ್ರಗುಪ್ತ ಮಹಾರಾಜನು ಸಮಾಧಿಗುಪ್ತ ಋಷಿಗಳನ್ನು ವಂದಿಸಿ ತನ್ನ ಅರಮನೆಗೆ ಹೋಗಿ ಈ ರೀತಿಯಾಗಿ ಭೂಮಿಯನ್ನು ಏಕಚ್ಛತ್ರದ ನೆರಳಿನಲ್ಲಿ (ಚಕ್ರವರ್ತಿಯಾಗಿ) ಆಳುತ್ತ ಉಜ್ಜಯನಿಯಲ್ಲಿ ಸುಖದಿಂದ ಇದ್ದನು. ಇತ್ತ ಹನ್ನೆರಡು ಅಂಗಗಳನ್ನೂ ಹದಿನಾಲ್ಕು ಪೂರ್ವವೆನಿಸಿದ ಶಾಸ್ತ್ರಗಳನ್ನೂ ಬಲ್ಲ ಭದ್ರಬಾಹು ಋಷಿಗಳು ಹೆಚ್ಚು ಋಷಿಗಳ ಸಮೂಹವನ್ನು ಕೂಡಿಕೊಂಡು ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಮುಖಗಳನ್ನು ಸಂಚಾರಮಾಡುತ್ತ ಬರುತ್ತಿದ್ದವರು ಉಜ್ಜಯನಿಗೆ ಬಂದು ಆ ಪಟ್ಟಣದ ಬಾಹ್ಯೋದ್ಯಾನದಲ್ಲಿದ್ದರು. ಅವರು ಅಲ್ಲಿದ್ದುದನ್ನು ರಾಜನು ಕೇಳಿ ಪರಿವಾರದೊಡನೆ ಹೋಗಿ ಋಷಿಗಳನ್ನು ವಂದಿಸಿ ಅವರಿಂದ ಒಳ್ಳೆಯ ಧರ್ಮದ ಉಪದೇಶವನ್ನು ಕೇಳಿ, ಶ್ರಾವಕವ್ರತಗಳನ್ನು ಸ್ವೀಕರಿಸಿ, ವಂದಿಸಿ ತನ್ನ ಅರಮನೆಗೆ ತೆರಳಿದನು. ಇತ್ತ ಋಷಿಗಳು ಹಲವು ದಿವಸ ಆ ಪಟ್ಟಣದಲ್ಲಿದ್ದರು. ಹೀಗಿರಲು ಒಂದು ದಿವಸ ಅವರು ಋಷಿಸಮೂಹವನ್ನು ಅಲ್ಲಲ್ಲಿ ಭಿಕ್ಷೆಗೆ ಕಳುಹಿಸಿ ಅವರೆಲ್ಲರೂ ಅಲ್ಲಲ್ಲೇ ಊಟಮಾಡುವಂತೆ ಹೇಳಿ ತಾವು ಒಬ್ಬರೇ ಒಂದು ಮನೆಯನ್ನು ಹೊಕ್ಕರು. ಆ ಮನೆಯಲ್ಲಿ ಯಾರೂ ಇರಲಿಲ್ಲ. ಒಳಕೋಣೆಯಲ್ಲಿ ತೊಟ್ಟಿಲಲ್ಲಿ ಇದ್ದಂತಹ ಮತ್ತು ಅಸ್ಪಷ್ಟವಾಗಿ ಕಾಣುತ್ತಿದ್ದಂತಹ ಒಂದು ಚಿಕ್ಕ ಮಗು "ಎಲೈ ಋಷಿಯೇ, ಹೋಗು ಹೋಗು" ಎಂಬಂತೆ ಕೂಗಿತು. ಆ ಮಾತನ್ನು ಭದ್ರಬಾಹು ಭಟ್ಟಾರರು ಕೇಳಿ, ಇದು ದೇವರ ಮಾತೆಂತಲೇ ತಿಳಿದು "ಎಷ್ಟು ಕಾಲ?" ಎಂಬುದಾಗಿ ಕೇಳಿದರು. ಆಗ ಅದು "ಹನ್ನೆರಡು ವರ್ಷ" ಎಂದು ಹೇಳಿತು. ಕಾಲದೋಷದಿಂದ ಪ್ರಜೆಗಳಿಗೆ ತೊಂದರೆಯಾಗುವುದೆಂದು ಋಷಿಗಳು ತಿಳಿದು, ಕರುಣೆಯ ಬುದ್ಧಿಯಿಂದ ಆಹಾರವನ್ನು ಸ್ವೀಕರಿಸದೆ (ಅಲಾಭ ಮಾಡಿ) ಹಾಗೆಯೇ

ಗೋಚಾರನಿಯಮಂಗೆಯ್ದು ಬಟೆಕ್ಕೆ ರಿಸಿಯರ್ಕಳೆಲ್ಲಂ ಬಟೆಯನಟ್ಟಿ ಬರಿಸಿ ಇಂತೆಂದರೀ ನಾಡೊಳ್ ಪನ್ನೆರಡು ದರುಷಂಬರೆಗಮನಾದ್ಯಷ್ಟಿಯಾಗಿ ದುರ್ಭಿಕ್ಷಮಾದಪ್ಪುದೀ ನಾಡೊಳಗಿರ್ದ ರಿಸಿಯರ್ಕಳೆಲ್ಲಂ ಬೇಗಂ ಬಟೆಯಟ್ಟಿ ಬರಿಸಿಂ ಪೋಪಂ ದಕ್ಷಿಣಾಪಥಕ್ಕೆಂದು ರಿಸಿಯರ್ಕಳೆಲ್ಲಂ ಬಟೆಯನಟ್ಟಿದರಿತ್ತರಸುಮಾ ದಿವಸದಿರುಳ್ ಪದಿನಾಜುಂ ಪೊಲ್ಲಕನಸುಗಳಂ ಕಂಡನವಾವುವೆಂದೊಡೆ ಅದಿತ್ಯನಸ್ತಮಾನಕ್ಕೆ ಸಲ್ವುದುಮಂ ಕಲ್ಪವೃಕ್ಷದ ಕೋಡುದಿಪ್ಪುದುಮಂ ನೆಲಕ್ಕೆದರುತಿರ್ದ ವಿಮಾನಂ ಬಾರದೆಡೆಯಿಂದೆ ಮೇಗೆ ಮಗುಚ್ಪುದುಮಂ, ಪನ್ನೆರಡು ತಲೆಯ ಪಾವುಮಂ ಚಂದ್ರನೊಡೆದುದುಮಂ ಕಡುಗದಿಯವಪ್ಪೆರಡಾನೆಗಳ್ ತದ್ಕೊಳ್ ಪೋರಲ್ ಸಾರ್ದು ಪೆಜಿಪಿಂಗಿ ಪೋದುದುಮಂ ಮೀನಂ ಬುಟುವುಮಂ ನೀರಿಲ್ಲದ ಕೆಜಿಯ ನಡುವ್ಪುಮಂ ಪೊಗೆ ಪೆರ್ಚಿ ನೆಗೆದ ಕಾಟ್ಕೆರ್ಚುಮಂ ಸಿಂಹಾಸನದ ಮೇಗೇಜಿದ ಕೋಡಗಮುದುಂ ಪೊನ್ನ ತಳಿಗೆಯೊಳ್ ನಾಯ್ ತುಯ್ಯಲುಣ್ಪುದುಮಂ ಕೋಡಗವೇಜಿರ್ದ ಸೊರ್ಕಾನೆಯುಮಂ ಕಸಕುಪ್ಪೆಯೊಳ್ ತಾಮರೆ ಮೂಡಿದುದಂ ಸಮುದ್ರಂ ಮೇರೆದಪ್ಪಿಮದುಮಂ ಬೆಳ್ಗುಪ್ತೆಪ್ಪೂಡಿದ ಪೊನ್ನರಥಮಂ ಬೆಳ್ಗುಟ್ತಿಯನರಸರ್ಕಳೀಜುವ್ದುಮಂ- ಇಂತೀ ಪದಿನಾಜುಂ ಕನಸುಗಳಂ ಸಮ್ಯಗ್ದರ್ಶನ ಶುದ್ಧಿ ಮೊದಲಾಗೊಡೆಯ ಗುಣಂಗಳಿಂ ಕೂಡಿದ ಸಂಪ್ರತಿ ಚಂದ್ರಗುಪ್ತಮಹಾರಾಜಂ ಪೊಲ್ಲಕನಸುಗಳಂ ಕಂಡೆನೆಂದಂಜಿ ನೇಸಜ್ ಮೂಡಿದಾಗಳ್ ಭದ್ರಬಾಹು ಭಟ್ಟಾರರಲ್ಲಿಗೆ ಪೋಗಿ ವಂದಿಸಿ ತನ್ನ ಕಂಡ ಕನಸುಗಳಂ ಭಟಾರರ್ಗೆ ಜೇಬ್ದುದರ ಫಲಂಗಳಂ ಬಿಸಗೊಂಡೊಡೆ ಭಟಾರರಿಂತೆಂದು

ಬಸದಿಗೆ ಹೋಗಿ ಗೋಚಾರ ನಿಯಮವನ್ನು ಮಾಡಿ (ಬೇರೆ ಯಾವ ಕಡೆಗೂ ಮನಸ್ಸು ಕೊಡದೆ) ಮತ್ತೆ ಋಷಿಗಳಿಗೆಲ್ಲ ಕರೆ ಕಳುಹಿಸಿ ಬರಮಾಡಿ ಅವರೊಡನೆ ಹೀಗೆಂದರು - "ಈ ನಾಡಿನಲ್ಲಿ ಹನ್ನೆರಡು ವರ್ಷಗಳವರೆಗೆ ಮಳೆಬಾರದೆ ದುರ್ಭಿಕ್ಷ (ಬರಗಾಲ)ವುಂಟಾಗುವುದು. ಈ ನಾಡಿನಲ್ಲಿರುವ ಋಷಿಗಳಿಗೆಲ್ಲ ಬೇಗ ಕರೆ ಕಳುಹಿಸಿ ಬರಮಾಡಿ, ದಕ್ಷಿಣದೇಶಕ್ಕೆ ಹೋಗೋಣ." ಈ ರೀತಿಯಾಗಿ ಋಷಿಗಳಿಗೆಲ್ಲ ಕರೆ ಕಳುಹಿಸಿದರು. ಇತ್ತ ರಾಜನು ಅಂದಿನ ರಾತ್ರಿ ಹದಿನಾರು ದುಃಸ್ವಪ್ನಗಳನ್ನು ಕಂಡನು. ಅವು ಯಾವುವೆಂದರೆ : ೧. ಸೂರ್ಯನು ಅಸ್ತಂಗತನಾಗುವುದು, ೨. ಕಲ್ಪವೃಕ್ಷದ ಕೊಂಬೆ ಮುರಿಯುವುದು, ೩. ನೆಲಕ್ಕೆ ಬರುವ ವಿಮಾನ ಬಾರದೆ ಮಧ್ಯದಿಂದಲೇ ಮೇಲಕ್ಕೆ ತಿರುಗಿಹೋದುದು, ೪. ಹನ್ನೆರಡು ತಲೆಗಳುಳ್ಳ ಹಾವು ಕಾಣಿಸಿದುದು, ೫. ಚಂದ್ರಬಿಂಬ ಒಡೆದುದು, ೬. ಅತ್ಯಂತ ಬಲಿಷ್ಠವಾದ ಎರಡು ಆನೆಗಳು ತಮ್ಮೊಳಗೆ ಹೋರಾಡುವುದಕ್ಕಾಗಿ ಹತ್ತಿರ ಬಂದು ಹಿಂದಕ್ಕೆ ಸರಿದು ಹೋದುದು, ೭. ಮಿಂಚುಹುಳು ಕಾಣಿಸಿದುದು, ೮. ನೀರಿಲ್ಲದ ಕೆರೆಯ ಮಧ್ಯಭಾಗ, ೯. ಹೊಗೆ ಹೆಚ್ಚಾಗಿ ಮೇಲೆದ್ದ ಕಾಡುಗಿಚ್ಚು ೧೦. ಸಿಂಹಾಸನದ ಮೇಲೆ ಏರಿದ ನರಿ, ೧೧. ಚಿನ್ನದ ತಟ್ಟೆಯಲ್ಲಿ ನಾಯಿ ಪಾಯಸವನ್ನು ಉಣ್ಣುವುದು, ೧೨. ಮದ್ದಾನೆಯ ಮೇಲೆ ಕೋತಿ ಕುಳಿತುದು, ೧೩. ಕಸದ ರಾಶಿಯಲ್ಲಿ ತಾವರೆ ಹುಟ್ಟಿದುದು, ೧೪. ಸಾಗರವು ತನ್ನ ಎಲ್ಲೆ ದಾಟಿದುದು. ೧೫. ಬಿಳಿಯ ಕತ್ತೆಯನ್ನು ಕಟ್ಟಿದ ಚಿನ್ನದ ತೇರು, ೧೬. ರಾಜರುಗಳು ಬಿಳಿಕತ್ತೆಯ ಮೇಲೆ ಸವಾರಿಮಾಡುವುದು - ಈ ರೀತಿಯಾಗಿ ಹದಿನಾರು ಕೆಟ್ಟ ಕನಸುಗಳನ್ನು ಸಮ್ಯಗ್ದರ್ಶನ - ಶುದ್ಧಿ ಮುಂತಾಗಿರುವ ಗುಣಗಳಿಂದ ಕೂಡಿದ ಸಂಪ್ರತಿ ಚಂದ್ರಗುಪ್ತ ಮಹಾರಾಜನು ತಾನು ಕಂಡೆನೆಂದು ಹೆದರಿದನು. ಸೂರ್ಯೋದಯವಾದ ವೇಳೆಗೆ ಅವನು ಭದ್ರಬಾಹು ಋಷಿಗಳಲ್ಲಿಗೆ ಹೋಗಿ ನಮಸ್ಕರಿಸಿ, ತಾನು ಕಂಡ ಕನಸುಗಳನ್ನು ಋಷಿಗಳಿಗೆ ಹೇಳಿ ಅವುಗಳ ಫಲವೇನೆಂಬುದಾಗಿ

ಪೇಬುಲ್ ತೊಡಗಿದರ್ ಆದಿತ್ಯನಸ್ತಮಾನಕ್ಕೆ ಸಲ್ಲುದಂ ಕಂಡುದಜೆಂದೀ ಭರತಕ್ಷೇತ್ರದೊಳ್ ಚತುರ್ದಶಪೂರ್ವಧಾರಿಗಳುಮವಧಿಜ್ಞಾನಿಗಳುಮಿಲ್ಲಿಂದಿತ್ತಲಾಗರ್ ಕಲ್ಪವೃಕ್ಷದ ಕೋಡುದಿದುದುಮಂ ಕಂಡುದಜೆಂದಿಂದಿನ ದಿವಸಂ ಕಟೆದೊಡೆ ಕುಲಬಲವಿಭವದಿಂ ಪಿರಿಯರಪ್ಪ ಮಕುಟಬದ್ಧರಪ್ಪರಸುಗಳ್ ತಪಂಬಡುವರಲ್ಲರ್ ನೆಲಕ್ಕೆವರುತ್ತಿರ್ದ ವಿಮಾನದೆಡೆಯಿಂದಂ ಮೇಗೆ ಮಗುಚ್ಚುದಂ ಕಂಡುದಜೆಂ ದೇವರ್ಕಳುಂ ವಿದ್ಯಾಧರರ್ಕಳುಮಿಲ್ಲಿಂದಿತ್ತೀ ಕ್ಷೇತ್ರಕ್ಕೆ ವಾರರ್ .ವನ್ನೆರಡು ತಲೆಯ ಪಾವಂ ಕಂಡುದಜೆಂದಿಲ್ಲಿ ತೊಟ್ಟೀನಾಡೊಳ್ ಪನ್ನೆರಡು ವರ್ಷಂಬರಂ ರೌದ್ರ ಪಾಪಮಕ್ಕುಂ ಚಂದ್ರನೊದೆದುದಂ ಕಂಡುದಜೆಂ ಸದ್ಧರ್ಮದ ಮೊದಲ ಪೊರ್ದಿದ ಮಾರ್ಗದಿಂ ಬೆಳೆಯೊಳ್ ಪುಲ್ಲುಳ್ ಪಲವಕ್ಕುಂ ಕಡುಗದಿಯವಪ್ಪೆರಡಾನೆಗಳ್ ತಮ್ಮೊಳ್ ಪೋರಲ್ ಸಾರ್ದು ಪೆಜಪಿಂಗುವುದಂ ಕಂಡುವಜೆಂ ಪ್ರಜೆಗಳ ಮೆಚ್ಚದಂತೆ ಮಳೆಕೊಳ್ಳವು ಮಂಡಲ ವರ್ಷಂಗಳಕ್ಕುಂ ಮೀನಂಬುಬುವಂ ಕಂಡುದಜೆಂ ಮೀನಂಬುಬುವಿನೋಳೋರನ್ನವು ಶಾಸ್ತ್ರಂಗಳುಮಂಗ ಬಾಹ್ಯಮಪ್ಪ ಚತುರ್ದಶ ವಿದ್ಯಾಸ್ಥಾನಂ ಗಳುಂ ಕುಂದಿಯುಪದೇಶ ತನುಮಾತ್ರಮೆ ನಿಲ್ಕುಂ ನೀರಿಲ್ಲದ ಕೆಱೆಯ ನಡುವಂ ಕಂಡುದಜೆಂ ತೀರ್ಥಂಕರ ಚಕ್ರವರ್ತಿಗಳ ಪುಟ್ಟದ ಮಧ್ಯದೇಶದೊಳ್ ಪಿನ್ನ ನೆಗಚ್ತಿಯಾಗದು ಆ ಮಧ್ಯಪ್ರದೇಶಕ್ಕೆ ಸಂಬಂಧಿಯೀ ಗಾಹೆ :

ಪುವ್ವೇಣ ಅಂಗವಿಸಓ ದಕ್ಖಿಣ ದೋ ಜಾವಹೋ ಇ ಕೋಸಂಬೀ
ಅವರೇಣ ಜಾವ ದೂಣಾ ಕುಣಾಳ ವಿಸಯೋಯ ಉತ್ತರದೋ ॥

ಕೇಳಲು ಭದ್ರಬಾಹು ಮುನಿಗಳು ಹೀಗೆ ಹೇಳತೊಡಗಿದರು - ಸೂರ್ಯನು ಮುಳುಗುವುದನ್ನು ಕಂಡುದರಿಂದ ಈ ಭರತಕ್ಷೇತ್ರದಲ್ಲಿ ಹದಿನಾಲ್ಕು ಪೂರ್ವಗಳನ್ನು ತಿಳಿದವರೂ ಅವಧಿಜ್ಞಾನಿಗಳೂ ಇನ್ನು ಮುಂದೆ ಆಗರು. ಕಲ್ಪವೃಕ್ಷದ ಮರಕೊಂಬೆ ಮುರಿದುದನ್ನು ಕಂಡುದರಿಂದ ಈ ದಿವಸ ದಾಟಿದರೆ, ಕುಲ - ಸಾಮರ್ಥ್ಯ - ವೈಭವದಿಂದ ದೊಡ್ಡವರೆನಿಸಿದ ಕಿರೀಟಧಾರಿಗಳಾದ ರಾಜರುಗಳು ತಪಸ್ಸು ಮಾಡಲು ಉದ್ಯುಕ್ತರಾಗರು. ನೆಲಕ್ಕೆ ಬರುತ್ತಿದ್ದ ವಿಮಾನವು ಮಧ್ಯದಿಂದಲೇ ಮೇಲಕ್ಕೆ ತಿರುಗಿದುದನ್ನು ಕಂಡುದರಿಂದ ದೇವತೆಗಳೂ ವಿದ್ಯಾಧರರೂ ಇಲ್ಲಿಂದ ಮುಂದೆ ಈ ಕ್ಷೇತ್ರಕ್ಕೆ ಬರಲಿಕ್ಕಿಲ್ಲ.ಹನ್ನೆರಡು ತಲೆಗಳಿರುವ ಹಾವನ್ನು ಕಂಡುದರಿಂದ ಇಲ್ಲಿಂದ ಹಿಡಿದು ಈ ನಾಡಿನಲ್ಲಿ ಹನ್ನೆರಡು ವರ್ಷಗಳವರೆಗೆ ಘೋರವಾದ ಕ್ಷಾಮ ತಲೆದೋರುವುದು. ಚಂದ್ರಬಿಂಬ ಹೋಳಾದುದನ್ನು ಕಂಡುದರಿಂದ ಸದ್ಧರ್ಮದ ಮೂಲದ ಮಾರ್ಗದಲ್ಲಿರುವ ಬೆಳೆಯಲ್ಲಿ ಹಲವು ಹುಲ್ಲುಗಳು ಕಳೆಯಾಗಿ ಉಂಟಾಗಿರುವುವು (ಧರ್ಮ ಕೆಡುವುದು). ಬಲಿಷ್ಠವಾದ ಎರಡು ಆನೆಗಳು ಹೋರಾಡಲು ಬಂದು ಹಿಂಜರಿದುದನ್ನು ಕಂಡುದರಿಂದ ಪ್ರಜೆಗಳು ಇಚ್ಛಿಸಿದ ಹಾಗೆ ಮಳೆಗಳಾಗವು, ಕೆಲಕೆಲವು ಪ್ರದೇಶಗಳಲ್ಲಿ ಮಾತ್ರ ಮಳೆಗಳು ಸುರಿದಾವು. ಮಿಂಚು ಹುಳವನ್ನು ಕಂಡುದರಿಂದ ಮಿಂಚುಹುಳುವಿನಂತಾಗಿ ಶಾಸ್ತ್ರಗಳು ಕುಂದಿಹೋಗಿ ಹೊರ ಮೈ ಮಾತ್ರ ಕಾಣಿಸುವಂತಾಗಿ ಹದಿನಾಲ್ಕು ವಿದ್ಯಾಸ್ಥಾನಗಳು ಕುಂದಿ ಹೋಗಿ ಉಪದೇಶದ ಭಾಗ ಮಾತ್ರ ನಿಲ್ಲುವುದು. ನೀರಿಲ್ಲದ ಕೆರೆಯ ಮಧ್ಯಭಾಗವನ್ನು ಕಂಡುದರಿಂದ ತೀರ್ಥಂಕರ ಚಕ್ರವರ್ತಿಗಳು ಜನಿಸಿದ ಮಧ್ಯದೇಶದಲ್ಲಿ ಹಿಂದಿನ ಕಾಲದ ಖ್ಯಾತಿ ಇಲ್ಲವಾಗುವುದು. ಆ ಮಧ್ಯದೇಶವನ್ನು ಸಂಬಂಧಿಸಿದ ಗಾಹೆಯ ಅರ್ಥ ಹೀಗಿದೆ - (ಪೂರ್ವದಲ್ಲಿ ಅಂಗದೇಶ. ದಕ್ಷಿಣದಲ್ಲಿ ಕೌಶಂಬೀನಗರ. ಪಶ್ಚಿಮದಲ್ಲಿ ದಾಣ, ಉತ್ತರದಲ್ಲಿ ಕುಣಾಳ ದೇಶ - ಈ

ಎಂದು ಮುಧ್ಯದೇಶಪ್ರಮಾಣಂ ಮತ್ತಂ ಪೊಗೆಯಿಂದಂ ಪೆರ್ಚ ನೆಗೆದ ಕಾಮ್ಕೆರ್ಚಂ ಕಂಡುದಜೆಂ ಧೂರ್ತರಪ್ಪ ಪೊಲ್ಲಲಿಂಗಿಗಳ ಪೆರ್ಚಕ್ಕುಂ ಮತ್ತಂ ದಯೆ ಮೊದಲಾಗೊಡೆಯ ಸದ್ಧರ್ಮಕ್ಕೆ ವಿರುದ್ಧಮಾಗಿ ನೆಗಪ್ಪ ಪಿರಿದಪ್ಪ ಹಿಂಸಾದಿಗಳಂ ಗೆಯ್ವ ವೇದಾದಿಶಾಸ್ತ್ರಂಗಳ ಪೆರ್ಚಕ್ಕುಂ ಸಿಂಹಾಸನ ಮನೇಱೆರ್ದ ಕೋಡಗಮಂ ಕಂಡುದಜೆಂ ಕುಲಜರಲ್ಲದವರರಸುಗೆಯ್ವರ್ ಪೊನ್ನತಳಿಗೆಯೊಳ್ ನಾಯ್ ತುಯ್ಯಲನುಣ್ಬುದಂ ಕಂಡುದಜೆಂ ಪೊಲ್ಲಲಿಂಗಿಗಳರಸರ್ಕಳಿಂದಂ ಪೂಜಿಸಿ ಪಡುವರ್ ಕೋಡಗಮಾನೆಯನೇಱುವುದಂ ಕಂಡುದಜೆಂದಾದಮುಮುಂ ಶುದ್ಧಕುಲದೊಳ್ ಪುಟ್ಟದರಸು ಮಕ್ಕಳುತ್ತಮ ಕುಲದೊಳಪ್ಪಭಿಮಾನಮಂ ತೊಱೆದು ಬಾಯ್ಕಾರಣಮಾಗಿ ಕುಲಜರಲ್ಲದವರ್ಗಾಳಾಗಿ ಬಾಳ್ವರ್ ಕಪಕುಪ್ಪೆಯೊಳ್ ತಾಮರೆ ಮೂಡಿದುದಂ ಕಂಡುದಜೆಂ ದಯೆಯುಪಶಮಮುಂ ಪರಿಗ್ರಹ ಪರಿತ್ಯಾಗವುಂ ಸಮಾಧಿಯುಂ ಸತ್ಯಮುಂ ಶೌಚಮುಂ ಕ್ಷಮೆಯುಮೆಂದಿವು ಮೊದಲಾಗೊಡೆಯಪಜಿಂಳ್ ಕೂಡಿದ ಮಿಕ್ಕ ಸದ್ಧರ್ಮಮಾರ್ಗಮಂ ದ್ರವ್ಯಪತಿಗಳುಮರಸು ಮಕ್ಕಳುಂ ತಮ್ಮ ದ್ರವ್ಯಾದಿ ಮುದದಿಂದಂ ತೊಱೆವರ್ ನೀಚಜಾತಿಗಳುಂ ಬಡದರುಂ ಸದ್ಧರ್ಮಮಂ ಕೈಕೊಂಡು ನೆಗಪ್ಪರ್ ಸಮುದ್ರಂ ಮೇರೆದಪ್ಪುವುದಂ ಕಂಡುದಜೆಂದರಸುಮಕ್ಕಳ್ ತಮ್ಮ ಮರ್ಯಾದೆಯುಂ ಮಿಕ್ಕು ದ್ರವ್ಯಂ ಮೊದಲಾಗೊದೆಯವಜಿಂಳ್ ಲೋಭಿಷ್ಠರಪ್ಪರ್ ಒಳ್ಳಿತಪ್ಪ ಸತ್ಯ ಶೌಚ ಚಾರಿತ್ರವೆಂದಿದಜೆಂ ಕುಂದಿಯಾದಮಮಾನುಂ ನಿರ್ದಯರ್ಕಳಪ್ಪರ್ ಬೆಳ್ಗುಟ್ಟಿ ಪೂದಿಪ ಪೊನ್ನರಥಮಂ ಕಂಮವಜೆಂದಂ ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳಿಂದಂ ಪವಿತ್ರಮಪ್ಪ ನಿರ್ಗ್ರಂಥ ಲಿಂಗಮಪ್ಪುದನಱೆದೊಳ್ಳಿತಪ್ಪ

ಭಾಗವೇ ಮಧ್ಯದೇಶ.) ಮಧ್ಯದೇಶದ ಹರಹು ಹೀಗಿದೆ. ಅಮೇಲೆ ಹೊಗೆ ಹೆಚ್ಚಾಗಿ ಮೇಲೆದ್ದ ಕಾಡುಗಿಚ್ಚನ್ನು ಕಂಡುದರಿಂದ ದುಷ್ಪರಾದ ಕೆಟ್ಟ ಲಾಂಛನವುಳ್ಳವರು ಹೆಚ್ಚಳವಾಗುವುದು, ಮತ್ತು ದಯೆ ಮುಂತಾಗಿರುವ ಸದ್ಧರ್ಮಕ್ಕೆ ವಿರುದ್ಧವಾಗಿ ವರ್ತಿಸುವ ಹೆಚ್ಚಿನ ಹಿಂಸೆ ಮುಂತಾದುವನ್ನು ಮಾಡುವ ವೇದಶಾಸ್ತ್ರಗಳು ಹೆಚ್ಚಾಗುವುವು. ಸಿಂಹಾಸನವೇರಿದ ಕೋತಿಯನ್ನು ಕಂಡುದರಿಂದ ಕುಲೀನರಲ್ಲದವರು ರಾಜ್ಯವಾಳುವರು. ಹೊಂದಟ್ಟಿಯಲ್ಲಿ ನಾಯಿ ಪಾಯಸವುಣ್ಣುವುದನ್ನು ಕಂಡದ್ದರಿಂದ ಕೆಟ್ಟಲಾಂಛನದವರು ರಾಜರಿಂದ ಪೂಜಿಸಲ್ಪಡುವರು. ಮಂಗವು ಆನೆಯ ಮೇಲೆ ಏರಿದುದನ್ನು ಕಂಡುದರಿಂದ ಅತ್ಯಂತ ಪವಿತ್ರವಾದ ವಂಶದಲ್ಲಿ ಜನಿಸಿದ ರಾಜಕುಮಾರರು ತಮ್ಮ ಶ್ರೇಷ್ಠವಂಶದ ಗೌರವವನ್ನು ಬಿಟ್ಟು ಜೀವನೋಪಾಯಕ್ಕಾಗಿ ಕುಲೀನರಲ್ಲದವರಿಗೆ ದಾಸರಾಗಿ ಬಾಳುವರು. ಕಸದ ರಾಶಿಯಲ್ಲಿ ತಾವರೆ ಹುಟ್ಟಿದುದನ್ನು ಕಂಡುದರಿಂದ ದಯೆ, ಶಾಂತಿ, ಅಪರಿಗ್ರಹ, ಸಮಾಧಿ, ಸತ್ಯ, ಶುಚಿತ್ವ, ಕ್ಷಮೆ ಮುಂತಾದವುಗಳಿಂದ ಕೂಡಿದ ಶ್ರೇಷ್ಠವಾದ ಸದ್ಧರ್ಮದ ಹಾದಿಯನ್ನು ಶ್ರೀಮಂತರೂ ರಾಜಕುಮಾರರೂ ತಮ್ಮಲ್ಲಿರುವ ಧನ ಮುಂತಾದವುಗಳ ಮದದಿಂದ ಬಿಟ್ಟುಬಿಡುವರು. ಕೀಳುಜಾತಿಯವರೂ ಬಡವರೂ ಒಳ್ಳೆಯ ಧರ್ಮವನ್ನು ಸ್ವೀಕರಿಸಿಕೊಂಡು ಅದನ್ನು ಆಚರಿಸುವರು. ಸಮುದ್ರವು ತನ್ನ ಎಲ್ಲೆಯನ್ನು ಮೀರಿರುವುದನ್ನು ಕಂಡ ಕಾರಣ ರಾಜಕುಮಾರರು ತಮ್ಮ ಮರ್ಯಾದೆಯನ್ನು ಮೀರಿ ಧನ ಮುಂತಾಗಿರುವ ವಿಷಯಗಳಲ್ಲಿ ಮಹಾಲೋಭಿಗಳಾಗಿ ವರ್ತಿಸುವರು. ಒಳ್ಳೆಯದಾಗಿರುವ ಸತ್ಯ, ಶುಚಿತ್ವ, ಸಮತೆ - ಎಂಬವುಗಳಲ್ಲಿ ನ್ಯೂನತೆಯುಳ್ಳವರಾಗಿ ಅತ್ಯಂತ ದಯಾಹೀನರಾಗುವರು. ಬಿಳಿ ಕತ್ತೆಯನ್ನು ಕಟ್ಟಿದ ಚಿನ್ನದ ರಥವನ್ನು ಕಂಡುದರಿಂದ ಸಮ್ಯಗ್ದರ್ಶನ, ಸಮ್ಯಗ್ಜ್ಞಾನ,

ತಪಮುಂ ಕೈಕೊಳೆಪಟ್ಟುಂ ಪಿರಿದಪ್ಪ ಪುರುಷಕಾರಮುಂ ಸತ್ಯಮುಂ ಮನೋಬಲಮುಂ ವೀರ್ಯಮುಮೆಂದಿವಱಿಂದಂ ಕೂಡಿದವರ್ಗಳಿಂದಮೊಳ್ಪಿದರಪ್ಪ ತೀರ್ಥಕರ ಪರಮ ದೇವರ್ಕಳಿಂದಂ ಚಕ್ರವರ್ತಿಗಳಿಂದಂ ಚರಮದೇಹಧಾರಿಗಳಿಂದಂ ನೆಗೞ್ಪಟ್ಟುದನೊಳ್ಳಿತಪ್ಪ ಮೋಕ್ಷಮಾರ್ಗಮಂ ಪೊರ್ದಿಯುಂ ವಿಷಯ ಸುಖಂಗಳೊಳ್ ಮೋಹಿತರ್ಕಳಾಗಿ ಕಿಡುವರ್ ಬೆಳ್ಗುಟ್ಟಿಯನರಸರ್ಕಳೀಜುವುದಂ ಕಂಡುವಜೆಂದುತ್ತಮ ಕುಲವವರ್ಗಳ್ಗೆ ಕುಲಜರಲ್ಲದವರೊಡನೆ ಮದುವೆಯೊಳ್ ತೊಟ್ಟ ನಣ್ಬುಗಳಕ್ಕುಮೆಂದಿಂತು ಪದಿನಾಱುಂ ಕುಡ ಕನಸುಗಳ ಫಲಂಗಳಂ ಸಂಪ್ರತಿ ಚಂದ್ರಗುಪ್ತ ಮಹಾರಾಜಂಗೆ ಭದ್ರಬಾಹು ಭಟ್ಟಾರರ್ ಪೇೞ್ದು ಮತ್ತಮೀ ಕಲಿಯುಗ ಮಹಾರಾಜನ ಸ್ವರೂಪಮನಿಂತೆಂದು ಪೇೞಲ್ ತೊಡಗಿವರ್ :

ಹರಿಣಿ ॥ ಅನೃತವಚನೇ ನಿತ್ಯಾಭ್ಯಾಸಃ ಖಲೇಷು ವಿದಗ್ಧತಾ
ಗುಣವತಿ ಜನೇ ವೈರಬುದ್ಧಿಃ ಖಲೇಷ್ವತಿಗೌರವಂ
ಯತಿಷು ನಿಯತಂ ವಾಕ್ಪಾರುಷ್ಯಂ ವಿಪತ್ತಿಷು ಚ ಕ್ರಿಯಾ
ಕಲಿಯುಗ ಮಹಾರಾಜಸ್ಯೈತಾನಿ ರಾಜವಿಭೂತಯಃ ॥

ಕಾಲೇ ಸಂಪ್ರತಿವರ್ತತೇ ಕಲಿಯುಗೇ ಸತ್ಯಾ ನರಾ ದುರ್ಲಭಾ
ನಾನಾ ಚೋರಗಣಾ ಮುಪಂತಿ ಪೃಥಿವೀಮಾರ್ತೋ ಜನಃ ಕ್ಷೀಯತೇ
ದೇವಾಶ್ಚ ಪ್ರಲಯಂಗತಾಃ ಕರಭವಲ್ಲೋಲ್ಲಂ ಗತಾಃ ಪಾರ್ಥಿವಾಃ
ಪುತ್ರಸ್ಯಾಪಿ ನ ವಿಶ್ವಸಂತಿ ಪಿತರಃ ಕಷ್ಟಂ ಯುಗಂ ವರ್ತತೇ ॥

ಸಮ್ಯಕ್ಚಾರಿತ್ರಗಳಿಂದ ಪರಿಶುದ್ಧವೆನಿಸುವ ದಿಗಂಬರತ್ವದ ಲಾಂಛನವನ್ನೂ ಬಿಟ್ಟು ಒಳ್ಳೆಯ ತಪಸ್ಸನ್ನು ಸ್ವೀಕರಿಸಿಯೂ ಹಿರಿದಾದ ಪುರುಷ ಪ್ರಯತ್ನ, ಸತ್ಯ, ಮನಶ್ಶಕ್ತಿ, ವೀರ್ಯ ಎಂಬವುಗಳಿಂದ ಕೂಡಿದಂತಹ ಒಳ್ಳೆಯವರಾದ ತೀರ್ಥಂಕರರೆಂಬ ಶ್ರೇಷ್ಠ ದೇವತೆಗಳಿಂದಲೂ ಚಕ್ರವರ್ತಿಗಳಿಂದಲೂ ಚಮರ(ಕೊನೆಯ) ದೇಹಧಾರಿಗಳಿಂದಲೂ ಆಚರಿಸಲ್ಪಟ್ಟ ಒಳ್ಳೆಯದಾದ ಮೋಕ್ಷದ ದಾರಿಯನ್ನು ಹಿಡಿದಿದ್ದರೂ ಪಂಚೇಂದ್ರಿಯ ವಿಷಯಗಳ ಸುಖಗಳಲ್ಲಿ ಮೋಹಗೊಂಡವರಾಗಿ ಕೆಟ್ಟುಹೋಗುವರು. ಬಿಳಿ ಕತ್ತೆಯನ್ನು ರಾಜರು ಏರುವುದನ್ನು ಕಂಡುದರಿಂದ ಶ್ರೇಷ್ಠ ಕುಲದವರಿಗೆ ಕುಲಹೀನರೊಡನೆ ಮದುವೆಯ ನಂಟತನಗಳಾಗುವುವು. ಈ ರೀತಿಯಾಗಿ ಹದಿನಾರು ಕಂಡ ಕನಸುಗಳ ಫಲವನ್ನು ಸಂಪ್ರತಿ ಚಂದ್ರಗುಪ್ತ ಮಹಾರಾಜನಿಗೆ ಭದ್ರಬಾಹುಮುನಿಗಳು ಹೇಳಿದರು. ಆಮೇಲೆ ಈ ಕಲಿಯುಗವೆಂಬ ಮಹಾರಾಜನ ಸ್ವರೂಪವನ್ನು ಹೀಗೆ ಹೇಳತೊಡಗಿದರು - ಸುಳ್ಳಾಡುವವರಲ್ಲಿ ಎಡೆಬಿಡದೆ ಅಭ್ಯಾಸ, ದುಷ್ಟರಲ್ಲಿ ಪಾಂಡಿತ್ಯ, ಗುಣವಂತರಾದ ಜನರಲ್ಲಿ ದ್ವೇಷಬುದ್ಧಿ, ದುಷ್ಟರಲ್ಲಿ ಬಹಳ ಮರ್ಯಾದೆ, ಯತಿಗಳಲ್ಲಿ ಮಾತಿನ ಬಿರುಸುತನ, ಆಪತ್ತು ಒದಗಿದಾಗಲೂ ಕಾರ್ಯತತ್ಪರತೆ - ಇವೆಲ್ಲವೂ ಕಲಿಯುಗವೆಂಬ ಮಹಾರಾಜನ ರಾಜವೈಭವಗಳಾಗಿವೆ. ಈಗ ನಡೆಯುತ್ತಿರುವ ಕಲಿಯುಗದಲ್ಲಿ ಸತ್ಯವಂತರಾದ ಮನುಷ್ಯರು ದೊರಕಲಾರರು. ಹಲವು ಬಗೆಯ ಕಳ್ಳರ ಗುಂಪುಗಳು ಲೋಕವನ್ನೇ ಅಪಹರಿಸುವುವು. ಶ್ರೇಷ್ಠಜನರು ನಾಶಹೊಂದಿದ್ದಾರೆ. ದೇವತೆಗಳೂ ನಾಶವಾದಾರು. ರಾಜರು ಒಂಟೆಯಂತೆ ದುರಾಶೆಗೊಂಡಿದ್ದಾರೆ. ತಂದೆ ತಾಯಿಗಳು ಮಗನ ಮೇಲೂ ನಂಬಿಕೆಯಿಡರು. ಕಷ್ಟಕರವಾದ ಕಲಿಯುಗ ಹೀಗಿರುತ್ತದೆ. ಭೂಮಿ ಸತ್ವಹೀನವಾಗಿದೆ. ಔಷಧಿ (ಸಸ್ಯಗಳ) ರಸಗಳು

ನಿರ್ವೀರ್ಯಾ ಪೃಥಿವೀ ಗತೌಪಧಿರಸಾ ನೀಚಾ ಮಹತ್ತ್ವಂ ಗತಾಃ
ರಾಜಾನೋಽರ್ಥಪರಾಃ ಕುಧರ್ಮನಿರತಾ ವಿಪ್ರಾ ವಿಕರ್ಮಸ್ಥಿತಾಃ
ಭಾರ್ಯಾ ಭರ್ತರಿ ನೈವಬದ್ಧಹೃದಯಾ ಪುತ್ರಾಃ ಪಿತೃದ್ವೇಷಿಣಃ
ಇತ್ಯೇವಂ ಸಮುಪಸ್ಥಿತೇ ಕಲಿಯುಗೇ ಧನ್ಯಾ ವನಂ ಪ್ರಸ್ಥಿತಾಃ ॥

ಎಂದಿಂತು ಭಟ್ಟಾರರ್ ಪೇಜ಼್ ಸಂಪ್ರತಿ ಚಂದ್ರಗುಪ್ತ ಮಹಾರಾಜಂ ಕೇಳ್ದು ಮತ್ತಂದಿನ ದಿವಸಂ ಕಟೆದೊದೆ ಮಂಡಳಿಕರ್ ಜಿನದೀಕ್ಷೆಯಂ ಕೈಕೊಳ್ಪರೆಂಬುದಂ ಕೇಳ್ದಾವಮಾನುಂ ಭೀತನಾಗಿ ಸಿಂಹಸೇನನೆಂಬ ತನ್ನ ಪಿರಿಯ ಮಗಂಗೆ ರಾಜ್ಯಪ್ಪಟಂಗಟ್ಟಿ ಭದ್ರಬಾಹುಭಟ್ಟಾರಾರ ಪಕ್ಕದೆ ಪಲಂಬರರಸು ಮಕ್ಕಳ್ವೆರಸಾ ದಿವಸಮೆ ತಪಂಬಟ್ಟಂ ಮತ್ತಿತ್ತ ಮಧ್ಯದೇಶದೊಳಿರ್ದ ರಿಸಿಯರ್ಕಳ್ಗೆಲ್ಲಂ ಬಪೆಯಟ್ಟಿ ಬರಿಸಿ ಭಟ್ಟಾರರಿಂತೆಂದರ್ ಪನ್ನೆರಡು ವರ್ಷಂಬರೆಗಮೀ ನಾಡೊಳನಾವೃಷ್ಟಿಯಾಗಿ ಮಹಾರೌದ್ರ ಪಸಮಕ್ಕುಂ ಮಧ್ಯಮದೇಶಮೆಲ್ಲಂ ಪಾಬುಕ್ಕುಮೀ ನಾಡೊಳಿರ್ದ ರಿಸಿಯರ್ಕಳ್ಗೆ ಬ್ರತಭಂಗಮಪ್ಪುದದಱಿಂ ಪೋಪಂ ದಕ್ಷಿಣಾಪಥಕ್ಕೆಂದಾಚಾರ್ಯರ್ಕಳ್ ಸಹಿತಮಿರ್ಪ್ಪತ್ತಿರ ರಿಸಿಸಮುದಾಯಮುಂ ಸಂಪ್ರತಿ ಚಂದ್ರಗುಪ್ತ ಮುನಿಯುಂ ವಿಶಾಖ ದಕ್ಷಿಣಾಪಥಕ್ಕೆ ಪೋದರಿತ್ತ ರಾಮಿಲಾಚಾರ್ಯರುಂ ಸ್ಥೂಲಾಚಾರ್ಯರುಂ ಸ್ಥೂಲಭದ್ರಾಚಾರ್ಯರುಮಿಂತೀ ಮೂವರಾಚಾರ್ಯರುಂ ಭಟ್ಟಾರರೊಡನೆ ಪೋಗಲೊಲ್ಲದೆ ತಂತಮ್ಮ ಋಷಿಸಮುದಾಯಂವೆರಸು ಸಿಂಧುವಿಷಯಕ್ಕೆ ಪೋದರಿತ್ತ ಭಟ್ಟಾರರುಂ ಪಿರಿದು ಋಷಿಸಮುದಾಯಂ

ಇಲ್ಲವಾಗಿವೆ. ಕೀಳಾದ ಜನರು ಮಹತ್ವದ ಸ್ಥಾನವನ್ನು ಪಡೆದಿದ್ದಾರೆ. ರಾಜರು ಹಣದ ಆಸೆಯುಳ್ಳವರಾಗಿದ್ದಾರೆ. ಕೆಟ್ಟ ಧರ್ಮದಲ್ಲಿ ತತ್ಪರರಾದ ಬ್ರಾಹ್ಮಣರು ಅನ್ಯಾಯವಾದ ಕಾರ್ಯದಲ್ಲಿ ತೊಡಗಿದ್ದಾರೆ. ಹೆಂಡಿರು ಗಂಡನಲ್ಲಿ ಅನುರಾಗವುಳ್ಳ ಹೃದಯದವರಾಗಿಲ್ಲ. ಗಂಡುಮಕ್ಕಳು ತಂದೆಯಲ್ಲಿ ದ್ವೇಷವುಳ್ಳವರು. ಹೀಗಿರತಕ್ಕ ಕಲಿಯುಗದಲ್ಲಿ ಕಾಡಿಗೆ ಹೋಗಿ ನಿಂತವರು ಧನ್ಯಜೀವಿಗಳು. ಹೀಗೆ ಋಷಿಗಳು ಹೇಳಿದಾಗ ಸಂಪ್ರತಿ ಚಂದ್ರಗುಪ್ತ ಮಹಾರಾಜನು ಕೇಳಿ ಅಂದಿನ ದಿವಸ ವಾಟಿದರೆ ಅವನ ಸಾಮಂತರು ಜಿನದೀಕ್ಷೆಯನ್ನು ಸ್ವೀಕಾರ ಮಾಡಲಿಕ್ಕಿಲ್ಲವೆಂಬುದನ್ನು ತಿಳಿದು ಅತ್ಯಂತ ಭಯಪಟ್ಟನು. ಸಿಂಹಸೇನನೆಂಬ ತನ್ನ ಹಿರಿಯ ಮಗನಿಗೆ ರಾಜ್ಯಾಧಿಕಾರ ಕೊಟ್ಟು ಭದ್ರಬಾಹುಸ್ವಾಮಿಗಳ ಬಳಿ ಹಲವಾರು ರಾಜಕುಮಾರರೊಟ್ಟಿಗೆ ತಪಸ್ಸನ್ನು ಕೈಗೊಂಡನು. ಇತ್ತ ಮಧ್ಯದೇಶದಲ್ಲಿದ್ದ ಋಷಿಗಳೆಲ್ಲರ ಬಳಿಗೂ ಜನ ಕಳುಹಿಸಿ ಅವರನ್ನು ಬರಿಸಿ ಭದ್ರಬಾಹುಮುನಿಗಳು ಹೀಗೆಂದರು - "ಈ ನಾಡಿನಲ್ಲಿ ಹನ್ನೆರಡು ವರ್ಷಗಳವರೆಗೆ ಮಳೆಬಾರದೆ ಭಯಂಕರವಾದ ಕ್ಷಾಮವುಂಟಾಗುವುದು. ಮಧ್ಯದೇಶವೆಲ್ಲ ಹಾಳಾಗುವುದು. ಈ ನಾಡಿನಲ್ಲಿರುವ ಋಷಿಗಳ ವ್ರತ ಕೆಟ್ಟುಹೋಗುವುದು. ಆದುದರಿಂದ ದಕ್ಷಿಣ ಭಾರತದ ಕಡೆಗೆ ಹೋಗೋಣ". ಹೀಗೆ ಹೇಳಿ ಆಚಾರ್ಯರುಗಳೊಂದಿಗೆ ಎರಡು ಸಾವಿರ ಋಷಿಗಳ ಸಮೂಹವನ್ನೂ ಸಂಪ್ರತಿ ಚಂದ್ರಗುಪ್ತ ಮುನಿಯನ್ನೂ ಕೂಡಿಕೊಂಡು ದಕ್ಷಿಣ ದೇಶಕ್ಕೆ ತೆರಳಿದರು. ಇತ್ತ ರಾಮಿಲಾಚಾರ್ಯ, ಸ್ಥೂಲಾಚಾರ್ಯ, ಸ್ಥೂಲಭದ್ರಾಚಾರ್ಯ- ಈ ಮೂವರು ಆಚಾರ್ಯರು ಭದ್ರಬಾಹು ಮುನಿಗಳೊಂದಿಗೆ ಹೋಗಲು ಒಪ್ಪಲಿಲ್ಲ. ಅವರು ತಮ್ಮ

ಬೆರಸು ಗ್ರಾಮನಗರ ಖೇಡ ಖರ್ವಡ ಮುಡಂಬ ಪಟ್ಟಣ ದ್ರೋಣಾಮುಖಂಗಳಂ ಕಟೆದು ಪೋಗಿ ಕಟ್ಟಪ್ಪುನಾಡನೆಯ್ದಿ ಪೋಗುತ್ತಂ ಭವಬಾಹು ಭಟ್ಟಾರರ್ ತಮ್ಮಾಯುವಪ್ರಮಾಣ ಮುಚೆದಾಮಿಲಿ ಸಂನ್ಯಸನಂಗೆಯ್ತಪ್ಪೆವು ನೀಮೆಲ್ಲಂ ಪೋಗಿಮೆಂದು ತಮ್ಮ ಪಿರಿಯ ಶಿಷ್ಯರ್ ದಶಪೂರ್ವಧಾರಿಗಳ್ ವಿಶಾಖಾಚಾರ್ಯರೆಂಬೊರಲ್ಲಿಂ ಬಚೆಯಮಾರ್ಯ ಸುಹಸ್ತಿಗಳುಮಂ ಪ್ರಭವಮಿತ್ರರುಂ ಸುಭವ್ಯಮಿತ್ರರುಂ ಮಹಾಗಿರಿಯುಂ ಸುಮತಿಯುಂ ಮಹಾಮತಿಯುಂ ವಿಶಾಖಸಂವಿಯುಂ ಮೆಂದಿವರ್ಗಳೆಲ್ಲರುಮನಾಚಾರ್ಯರ್ ಮಾಡಿ ದ್ರವಿಬವಿಷಯಕ್ಕೆ ಪೋಗಿಮೆಂದು ವಿಶಾಖಾಚಾರ್ಯರೊಡನೆ ಎಣ್ಬಾಸಿರ್ವರ್ ರಿಸಿಯರನಟ್ಟಿದರ್ ಚಂದ್ರಗುಪ್ತಮುನಿಯುಮನವರೊಡನೆ ಪೋಗಿಮೆಂದು ಭಟ್ಟಾರರ್ ಕೀಜೆಪೋಗಲ್ಬೇಬ್ಬೊದಾಮುಂ ಪೋಗಲೊಲ್ಲೆವು ನಿಮ್ಮಡಿಗಳ್ಗೆ ವಿನಯಂ ಗೆಯ್ಯುತ್ತಮಿರ್ದಪೆಮೆಂದು ಪೋಗಲೊಲ್ಲದೆ ಪಕ್ಕದಿರ್ದರುಬೆದರೆಲ್ಲಂ ಪೋದರಿತ್ತ ಭದ್ರಬಾಹು ಭಟ್ಟಾರರ್ ಕಟ್ಟಪ್ಪುನಾಡದವಿಯ ಬೆಟ್ಟದ ಮೇಗಣೇಕಸಜೆಯಮೇಗಿರ್ದು ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಜಾಪಜ್ಜೀವಂ ನಿವೃತ್ತಿಪೂರ್ವಕಂ ಸಂನ್ಯಸನಂ ಗೆಯ್ದರ್ ಇತ್ತ ಚಂದ್ರಗುಪ್ತಮುನಿಯುಮಪ್ಪೋಪವಾಸಂಗೆಯ್ದಿರ್ದೊರಂ ಭಟ್ಟಾರರೆಂದರಾಮುಂ ನೋಂತಿರ್ಪೆವು ನೀಮುಂ ಚರಿಗೆಪುಗುವುದಲ್ತಿಯೆಂದೊಡೆ ಭಟ್ಟಾರಾ ಊರಿಲ್ ಕೇರಿಯಿಲ್ಲೀಯಡವಿಯೊಳಿಲ್ಲಿಗೆ ಚರಿಗೆವುಗುವುದೆಂದೊಡೆ ಭಟ್ಟಾರರೆಂದರ್ ಕಾಂತಾರಚ್ಛೈಕ್ಷಮೆಂಬುದಾಗಮದೊಳ್ ಪೇಟ್ಪುದಾರಾನುಂ ಬಟ್ಟೆವೋಪರ್ ಬೀಡಂ ಬಿಟ್ಟರ್ದರ

ತಮ್ಮ ಋಷಿವೃಂದದೊಡನೆ ಸಿಂಧುದೇಶಕ್ಕೆ ಹೋದರು. ಭದ್ರಬಾಹು ಋಷಿಗಳು ಇತ್ತ ದೊಡ್ಡದಾದ ಋಷಿ ಸಂಘೋಹದೊಡನೆ ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖಗಳೆಂಬ ಭೂಭಾಗಗಳನ್ನು ದಾಟಿ, ಕಟ್ಟಪ್ಪು ಎಂಬ ಹೆಸರುಳ್ಳ ಶ್ರವಣಬೆಳಗೊಳಕ್ಕೆ ಬಂದರು. ತಮ್ಮ ಆಯುಷ್ಯವೆಷ್ಟಿದೆಯೆಂಬುದನ್ನು ತಿಳಿದ ಭದ್ರಬಾಹು ಋಷಿಗಳು- "ತಾವು ಇಲ್ಲಿ ಸಂನ್ಯಾಸ ಕೈಗೊಳ್ಳುತ್ತೇವೆ. ನೀವೆಲ್ಲರೂ ಹೋಗಿ" ಎಂದು ಹೇಳಿ ತಮ್ಮ ಹಿರಿಯ ಶಿಷ್ಯರೂ ದಶಪೂರ್ವಗಳನ್ನರಿತವರೂ ಆದ ವಿಶಾಖಾಚಾರ್ಯರೆಂಬವರನ್ನಲ್ಲದೆ, ಶ್ರೇಷ್ಠರಾದ ಸುಹಸ್ತಿಗಳು, ಅರಭದ್ರರು, ಸುಭದ್ರಮಿತ್ರರು, ಮಹಾಗಿರಿ, ಸುಮತಿ, ಮಹಾಮತಿ, ವಿಶಾಖಸಂವಿ ಎಂಬ ಇವರೆಲ್ಲರನ್ನೂ ಆಚಾರ್ಯರನ್ನಾಗಿ ಮಾಡಿ, "ನೀವೆಲ್ಲ ದ್ರಾವಿಡ ದೇಶಕ್ಕೆ (ತಮಿಳು ನಾಡಿಗೆ) ಹೋಗಿ" ಎಂದು ವಿಶಾಖಾಚಾರ್ಯರೊಂದಿಗೆ ಎಂಟು ಸಾವಿರ ಮಂದಿ ಋಷಿಗಳನ್ನು ಕಳುಹಿಸಿದರು. ಚಂದ್ರಗುಪ್ತಮುನಿಯೊಡನೆ "ನೀವೂ ಅವರೊಡನೆ ಹೋಗಿ" ಎಂದು ಋಷಿಗಳು ಒತ್ತಾಯಮಾಡಿ ಹೋಗಲು ಹೇಳಿದಾಗ ಅವರು "ನಾನು ಹೋಗಲೊಲ್ಲೆವು. ನಿಮ್ಮ ಸೇವೆಮಾಡುತ್ತ ಇರುತ್ತೇವೆ" ಎಂದು, ಹೋಗಲು ಒಪ್ಪದೆ, ಜೊತೆಯಲ್ಲೇ ಇದ್ದರು. ಉಳಿದವರೆಲ್ಲ ಹೋದರು. ಇತ್ತ ಭದ್ರಬಾಹು ಋಷಿಗಳು ಕಟ್ಟಪ್ಪು (ಕಟವಪ್ರ = ಶ್ರವಣಬೆಳ್ಗೊಳ) ನಾಡಿನ ಕಾಡುಬೆಟ್ಟದ ಮೇಲಿನ ಒಂದು ಬಂಡೆಗಲ್ಲಿನ ಮೇಲೆ ಇದ್ದುಕೊಂಡು ನಾಲ್ಕು ವಿಧದ ಆಹಾರಕ್ಕೂ ಶರೀರಕ್ಕೂ ಜೀವಿಸಿರುವ ತನಕವೂ ಪರಿಹಾರ ಮಾಡಿ ಸಂನ್ಯಾಸವನ್ನು ಕೈಗೊಂಡರು. ಇತ್ತ ಚಂದ್ರಗುಪ್ತ ಋಷಿಗಳು - "ನಾವೂ ವ್ರತವನ್ನು ಧರಿಸಿದ್ದೇವೆ. ನೀವು ಭಿಕ್ಷಕ್ಕೆ ಹೋಗುವುದು ಒಳ್ಳೆಯದಲ್ಲವೆ ?" ಎಂದರು. ಅದಕ್ಕೆ ಉತ್ತರವಾಗಿ - "ಪೂಜ್ಯರೇ, ಇಲ್ಲಿ ಯಾರೂ ಇಲ್ಲ, ಬೀದಿಯೂ ಇಲ್ಲ. ಈ ಕಾಡಿನಲ್ಲಿ ಎಲ್ಲಿ ಭಿಕ್ಷಕ್ಕೆ ಹೋಗಲಿ ?"

ನಿಱೆಸುವರಪ್ಪುದಜೆಂದೆ ಚರಿಗೆವುಗುವುದೆಂದೊಡೆ ಅಂತೆಗೆಯ್ದೆನೆಂದು ದೇವರಂ ಬಂದಿಸಿ ಬರಿಗೆವೊಕ್ಕಡವಿಯಂ ತೊಟಿಲ್ವಲ್ಲಿಯೊಂದು ಮರದ ಪೊಟಲೊಳಿರ್ದು ಮಾಣಿಕದ ಮುತ್ತಿನ ಪಿಂಡುಗಂಕಣಮಂ ತೊಟ್ಟಕೈಯಿಂದಂ ಪೊನ್ನ ಸಟ್ಟುಗಮಂ ತೀವಿ ಭೈಕ್ಷಮಂ ಪಿಡಿಯೆಂದು ನೀಡಿದ ಕೈಯನಿತನೆ ಕಂದು ತೊಟಿಲ್ದಲಾಭಮಾಗಿ ತಮ್ಮಾವಾಸಕ್ಕೆ ಪೋದೊಡೆ ಭಟ್ಟಾರರ್ ನಿಲಿವಟ್ಟುದೆಯೆಂದು ಬೆಸಗೊಂಡೊಡವರುಂ ತಮ್ಮ ಕಂಡುದಂ ಪೇಟಿಂದೊಡೆ ಬೇಸಜಿದೆ ದಿವಸಕ್ಕಂ ಬರಿಗೆವೊಗುವುದೆಂದು ಭಟ್ಟಾರರ್ ಕಲ್ಪಿಸಿದೊಡಂತೆಗೆಯ್ವಮೆಂದು ಮಱುದಿವಸಂ ಬರಿಗೆವೊಕ್ಕಡವಿಯಂ ತೊಟಿಲ್ವಲ್ಲಿಯೊಂದು ಮರದ ಕೆಟಗೆ ಪೊನ್ನ ಮಡಕೆಯೊಳ್ ಬೋನವಮನೊಡ್ಡಿ ನೆಜೀಯೆ ತೊಟ್ಟುಟ್ಟು ಮಂಗಳವಸದನಂಗೊಂಡು ದಿವ್ಯಸ್ತ್ರೀ ಬಂದು ನಿಱೆಸಿದೊಡೆ ಇಂತೆಂದರಬ್ಬಾ ನೀನೊರ್ವಳೆಯೆ ಪೆಱರಾರುಮಿಲ್ಲಿಂತು ರಿಸಿಯರ್ಕಳ್ಗೆ ನಿಲಲಾಗದೆಂದು ಪೇಟ್ದು ತಮ್ಮಿರ್ದೆಡೆಗೆವೋದೊಡೆ ಭಟ್ಟಾರರಿಂತೆಂದರ್ ನಿಲೆವಟ್ಟುದೆ ಎಂದು ಬೆಸಗೊಂಡೊಡವರಿಂತೆಂದರ್ ಒರ್ವ್ಯಾಳ್ ದಿವ್ಯಸ್ತ್ರೀ ಸರ್ವಾಭರಣ ಭೂಷಿತೆಯೊಂದು ಮರದ ಕೆಟಗೆ ಬೋನವಮನೊಡ್ಡಿರ್ದಿರಂ ಬಂದು ನಿಱೆಸಿದೊಡೊರ್ವಳೆ ಪೆಱರಾರುಮಿಲ್ಲೆಂದೆನೆ ನಿಲ್ಲದೆ ಬಂದೆಮೆಂದೊಡೊಳ್ಳಿಕೆಯಿದ್ದರೆಂದೊರಿಂತುಪತ್ತು ಪವಾಸಂಗೆಯ್ದು ಪನ್ನೊಂದನೆಯ ದಿವಸದಂದು ಬರಿಗೆಪೊಕ್ಕಡವಿಯಂ ತೊಟಿಲ್ವನ್ನೆಗಂ ಪಿರಿದೊಂದು ಪೊಟಲುಂ ಧವಳಾರಂಗಳುಂ ನಿಲೆಯ ಮಾಡಂಗಳುಂ ಸೂಳೆಗೇರಿಗಳುಂ ದೇವಾಲಯಂಗಳುಮಾನೆ ಕುದುರೆಗಳುಂ ಮಾನಸರ ಬರವುಮಂ ಪೋಗುಮಂ ಕಂಡಿನಿತು ದಿವಸಮೀ ಮರಗಳ ಗಿದುಗಳ

ಎಂದರು. ಆಗ ಋಷಿಗಳು - "ಶಾಸ್ತ್ರದಲ್ಲಿ ಕಾಂತಾರಭೈಕ್ಷ (ಕಾಡಿನಲ್ಲಿ ಭಿಕ್ಷೆ ಬೇಡುವುದು) ಎಂಬುದನ್ನು ಹೇಳಿದೆ. ಯಾರಾದರೂ ದಾರಿ ಹೋಗುವವರು ಬೀಡುಬಿಟ್ಟಿರುತ್ತಾರೆ. ಅವರು ಊಟಕ್ಕಾಗಿ ನಿಲ್ಲಿಸುತ್ತಾರೆ - ಆದುದರಿಂದ ಭಿಕ್ಷೆಗೆ ಹೋಗಬಹುದು" ಎಂದರು. ಚಂದ್ರಗುಪ್ತ ಮುನಿಗಳು ಹಾಗೆಯೆ ಮಾಡುವೆನು ಎಂದುಕೊಂಡು ದೇವರನ್ನು ವಂದಿಸಿ ಭಿಕ್ಷೆಗೆಂದು ಕಾಡನ್ನು ಸುತ್ತಾಡುವಾಗ, ಒಂದು ಮರದ ಪೊಟ್ಟರೆಯೊಳಗಿದ್ದುಕೊಂಡು ಮಾಣಿಕ ಮುತ್ತುಗಳ ಹಿಂಡುಬಳೆಯನ್ನು ಧರಿಸಿದ ಕೈಯಿಂದ ಚಿನ್ನದ ಸೌಟಿನಲ್ಲಿ ತುಂಬಿದ ಭಿಕ್ಷೆಯನ್ನು 'ತೆಗೆದುಕೋ' ಎಂದು ನೀಡಿದ ಕೈಯನ್ನು ಮಾತ್ರವೇ ಕಂಡು, ಸುತ್ತಾಡಿ ಏನೂ ಭಿಕ್ಷೆ ಪಡೆಯದೆ, ತಮ್ಮ ವಾಸದ ಕಡೆಗೆ ಹೋದರು. ಆಗ ಭದ್ರಬಾಹು ಋಷಿಗಳು "ನಿಲ್ಲಿಸಲ್ಪಟ್ಟಿರೆ (ಭಿಕ್ಷಕ್ಕೆ ಯಾರಾದರೂ ನಿಲ್ಲಿಸಿದರೆ)?" ಎಂದು ಕೇಳಿದರು. ಆಗ ಅವರು ತಾವು ಕಂಡುದನ್ನು ಹೇಳಲು, ಪ್ರತಿದಿನವೂ ಬೇಸರ ಪಡದೆ ಭಿಕ್ಷಕ್ಕೆ ಹೋಗುವಂತೆ ಋಷಿಗಳು ಹೇಳಿದರು. "ಹಾಗೆಯೇ ಮಾಡೋಣ" ಎಂದು ಚಂದ್ರಗುಪ್ತ ಮುನಿಗಳು ಮರುದಿವಸ ಭಿಕ್ಷೆಗೆ ಹೋಗಿ ಕಾಡನ್ನೆಲ್ಲ ಸುತ್ತಾಡಿದಾಗ ಒರ್ವ ದೇವತಾ ಸ್ತ್ರೀ ಕಾಣಿಸಿದಳು. ಆಕೆ ಒಂದು ಮರದ ಕೆಳಗೆ ಚಿನ್ನದ ಪಾತ್ರೆಯಲ್ಲಿ ಭೋಜನವನ್ನು ಸಿದ್ಧಪಡಿಸಿ, ಪರಿಪೂರ್ಣವಾಗಿ ಉಡಿಗೆತೊಡಿಗೆಗಳನ್ನು ಧರಿಸಿ ಮಂಗಳಾಲಂಕಾರದಿಂದಿದ್ದಳು. ಆಕೆ ಊಟಕ್ಕೆ ನಿಲ್ಲುವಂತೆ ಹೇಳಿದಾಗ, ಚಂದ್ರಗುಪ್ತ ಮುನಿಗಳು - "ಅಮ್ಮಾ ನೀನು ಒಬ್ಬಳೇ ಇರುವೆಯಾ ? ಬೇರೆ ಯಾರೂ ಇಲ್ಲವೆ ? ಹೀಗಿದ್ದರೆ (ನಮ್ಮಂತಹ) ಋಷಿಗಳಿಗೆ ನಿಲ್ಲಲು ಸಾಧ್ಯವಿಲ್ಲ" ಎಂದು ಹೇಳಿ ತಾವು ಇದ್ದಲ್ಲಿಗೆ ತೆರಳಿದರು. ಭದ್ರಬಾಹು ಋಷಿಗಳು -

ಪೊದಱುಗಳ ಮಱೆಗಳೊಳೀ ಪೊಲಲಂ ಕಂಡೆಮಿಲ್ಲಿಂದು ಮನದೊಳ್ ಬಗೆದು ಪೊಲಲೊಳಗೆ ಚರಿಗೆಪೊಕ್ಕಾಗಳೊರ್ವಳ್ ದಿವ್ಯ ಸ್ತ್ರೀ ಪರಿವಾರಸಹಿತಮಿದಿರಂ ಬಂದು ನಿಱಿಸಿ ತನ್ನ ಮಾಡಕ್ಕೊಡಗೊಂಡು ಪೋಗಿಕಾಲಂ ಕರ್ಚಿಯರ್ಚಿಸಿ ಗುರುಭಕ್ತಿಗೆಯ್ದು ವಂದಿಸಿಯಾದಮಾನುಂ ಭಕ್ತಿಯಿಂದಂ ದಿವ್ಯಾಹಾರಮಂ ಮಗುೞ್ ಮಗುೞ್ ಬಡ್ಡಿಸೆ ಚರಿಗೆಮಾಡಿ ಪರಸಿ ತಮ್ಮಾವಾಸಕ್ಕೆ ಪೋದೊಡೆ ಭಟ್ಟಾರರ್ ನಿಲಿವಟ್ಟುದೆಯೆಂದು ಬೆಸಗೊಂಡೊಡೆ ನಿಲಿವಟ್ಟುದೆಂದೊಡಲ್ಲಿ ನಿಂದಿರೆಂದು ಬೆಸಗೊಂಡೊಡಿಂತೆಂದರ್ ಭಟ್ಟಾರಾ ಇನಿತು ದಿವಸಂ ಮರಂಗಳ ಪೊದಱುಗಳ ಮಱೆಗಳೊಳೀ ಪೊಲಲಂ ಕಂಡೆಮಿಲ್ಲಿಂದಿನಿಸಾನುಂ ತಿಣ್ಣಂ ತೊಲಲ್ವಲ್ಲಿ ಪಿರಿದೊಂದು ಪೊಲಲಂ ಕಂಡು ಚರಿಗೆಪೊಕ್ಕೊಡೊರ್ವಳ್ ದಿವ್ಯಸ್ತ್ರೀ ಪರಿವಾರಸಹಿತಮಿದಿರಂ ಬಂದು ನಿಱಿಸಿ ತನ್ನ ಮನೆಗೊಂಡುಪೋಗಿ ಕಾಲಂ ಕರ್ಚಿಯರ್ಚಿಸಿ ಗುರುಭಕ್ತಿಗೆಯ್ದು ವಂದಿಸಿಯಾದಮಾನುಂ ಭಕ್ತಿಯಿಂದಂ ದಿವ್ಯಾಹಾರಂಗಳಂ ಬಡ್ಡಿಸೆ ಶ್ರಮಂ ಪೋಗಿ ಚರಿಗೆಮಾಡಿ ಪರಸಿ ಬಂದೆಮೆಂದು ಭಟ್ಟಾರರ್ಗೆ ಪೇೞ್ದೊಡೊಳ್ಳಿತ್ತಾಯಿತ್ತೆಂದು ಸಂತೋಸಂ ಬಟ್ಟರ್ದರಿಂತು ದಿವಸಕ್ಕಂ ಪೊಲಲ್ಗೆ ವೋಗಿ ಚರಿಗೆ ಮಾಡುವರಿತ್ತ ಭದ್ರಬಾಹು ಭಟ್ಟಾರರ್ ಮುನ್ನೆ ತಮ್ಮ ತಪಂಗೆಯ್ದುಂದೆಲ್ಲಾ ಕಾಲಮುಮವಮೋದರ್ಯ ಚರಿಗೆಮಾಡಿ ಪಸಿವಂ ಸೈರಿಸಿ ತಮ್ಮ ಮೆಯ್ಯಂ ಕ್ಷಯಕ್ಕೆ ತಂದು ಸಂನ್ಯಸನಂಗೆಯ್ದು ಪಲವು ದಿವಸದಿಂದಂ ಪಸಿವುಂ ನೀರಟ್ಕೆಯುಮಂ ಸೈರಿಸಿ ಶುಭಪರಿಣಾಮದಿಂದಂ ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಮುಡಿಪಿ ಬ್ರಹ್ಮಕಲ್ಪದೊಳ್

"ಭಿಕ್ಷಕ್ಕೆ ಯಾರಾದರೂ ನಿಲ್ಲಿಸಿದರೆ ?" ಎಂದು ಕೇಳಿದರು. ಆಗ ಅವರು ಹೀಗೆಂದರು- "ಒಬ್ಬಳು ದೇವತಾಸ್ತ್ರೀ ಎಲ್ಲಾ ಆಭರಣಗಳಿಂದಲೂ ಅಲಂಕರಿಸಿಕೊಂಡು ಒಂದು ಮರದ ಕೆಳಗೆ ಊಟವನ್ನು ಸಿದ್ಧಮಾಡಿದವಳಾಗಿ ನನ್ನ ಎದುರಿಗೆ ಬಂದು ಊಟಕ್ಕೆ ನಿಲ್ಲುವಂತೆ ಹೇಳಿದಳು. ಆಕೆ ಒಬ್ಬಳೇ ಇದ್ದುದು, ಬೇರೆ ಯಾರೂ ಇಲ್ಲವೆಂದು ಆಕೆ ಹೇಳಿದ್ದರಿಂದ ನಾನು ನಿಲ್ಲಲಿಲ್ಲ, ಬಂದುಬಿಟ್ಟೆನು" ಎಂದು ಹೇಳಿದರು. ನೀವು ಒಳ್ಳೆಯದು ಮಾಡಿದಿರಿ - ಎಂದು ಋಷಿಗಳು ಹೇಳಿದರು. ಹೀಗೆ ಹತ್ತು ದಿನಗಳ ಉಪವಾಸವನ್ನು ಮಾಡಿ ಹನ್ನೊಂದನೆಯ ದಿವಸದಂದು ಭಿಕ್ಷೆಗೆ ಹೋಗಿ ಕಾಡನ್ನೆಲ್ಲ ಸುತ್ತಾಡುತ್ತಿರಲು, ಒಂದು ದೊಡ್ಡ ಪಟ್ಟಣ ಕಾಣಿಸಿತು. ಅಲ್ಲಿ ಸುಣ್ಣ ಬಳಿದು ಬಿಳುಪೇರಿದ ಮನೆಗಳೂ ಉಪ್ಪರಿಗೆ ಮನೆಗಳೂ ವೇಶ್ಯಾವಾಟಿಗಳೂ ದೇವಾಲಯಗಳೂ ಅನೆಕುದುರೆಗಳೂ ಮನುಷ್ಯರ ಬರುವಿಕೆ ಹೋಗುವಿಕೆಗಳೂ ಕಾಣಿಸಿದುವು. ಇವನ್ನೆಲ್ಲ ಕಂಡು, "ಇಷ್ಟು ದಿವಸವೂ ಈ ಮರಗಿಡ ಪೊದರುಗಳ ಮರೆಯಲ್ಲಿದ್ದ ಆ ಪಟ್ಟಣವನ್ನು ನಾವು ಕಂಡೇ ಇಲ್ಲ" ಎಂದು ಮನಸ್ಸಿನಲ್ಲಿ ಭಾವಿಸಿ, ಆ ಪಟ್ಟಣದಲ್ಲಿ ಭಿಕ್ಷೆ ಪಡೆಯಲು ಹೋದರು. ಆಗ ಒಬ್ಬಳು ದೇವತಾ ಸ್ತ್ರೀ ತನ್ನ ಪರಿವಾರದೊಡನೆ ಎದುರಿಗೆ ಬಂದು ಅವರನ್ನು ಊಟಕ್ಕೆ ನಿಲ್ಲಿಸಿ, ತನ್ನ ಮನೆಗೆ ಕರೆದುಕೊಂಡು ಹೋಗಿ ಕಾಲನ್ನು ತೊಳೆದು ಪೂಜಿಸಿ ಗುರುಭಕ್ತಿಯನ್ನು ಮಾಡಿದಳು. ನಮಸ್ಕರಿಸಿ ಅತಿಶಯವಾದ ಭಕ್ತಿಯಿಂದ ದಿವ್ಯವಾದ ಆಹಾರವನ್ನು ಮತ್ತೂ ಮತ್ತೂ ಬಡಿಸಿದಳು. ಚಂದ್ರಗುಪ್ತ ಮುನಿಗಳು ಊಟ ಮಾಡಿ ತಮ್ಮ ವಾಸಸ್ಥಳಕ್ಕೆ ತೆರಳಿದಾಗ ಭದ್ರಬಾಹು ಋಷಿಗಳು - "ಯಾರಾದರೂ ಊಟಕ್ಕೆ ನಿಲ್ಲಿಸಿದರೆ?" ಎಂದು ಕೇಳಲು "ನಿಲ್ಲಿಸಿದರು" ಎಂದು ಉತ್ತರ ಕೊಟ್ಟಾಗ, "ಎಲ್ಲಿ ಊಟಕ್ಕೆ ನಿಂತಿರಿ ?" ಎಂದು ಕೇಳಿದರು. ಆಗ ಚಂದ್ರಗುಪ್ತ ಮುನಿಗಳು -"ಪೂಜ್ಯರೇ, ಇಷ್ಟು ದಿವಸವೂ ಮರಗಳ

ಪತ್ತು ಸಾಗರೋಪಮಾಯುಷ್ಯಮನೊಡೆಯೊಂ ಅಮಿತಕಾಂತಿಯೆಂಬೊಂ ದೇವನಾಗಿ ಪುಟ್ಟದೊಂ ಚಂದ್ರಗುಪ್ತ ಮುನಿಯುಂ ಭಟ್ಟಾರರ ನಿಸಿದಿಗೆಯಂ ಬಂದಿಸುತ್ತಮಾ ದೇವತೆ ಬೆಸಕೆಯ್ಯೆ ಚರಿಗೆಮಾಡಿ ತಪಂಗೆಯ್ಯುತ್ತುಂ ವನ್ನೆರಡು ವರಪಂಬರೆಗಮಿಂತಿರ್ಪನ್ನೆಗಮಿತ್ತ ತಿಮುಟನಾಟ್ಗಿಪೋದ ಋಷಿಸಮುದಾಯಮೆಲ್ಲಂ ಪನ್ನೆರಡು ವರುಷಂಬರೆಗಂ ಸುಖದೊಳಿರ್ದು ನಿರುವಸರ್ಗದಿಂ ದರ್ಶನಜ್ಞಾನಚಾರಿತ್ರಂಗಳಿಂ ಪ್ರತಿಪಾಳಿಸಿ ಬಡಗನಾಡ ಪಸವು ತಿಳಿದುದೆಂಬುದನಾ ನಾಡಿಂದಂ ಬಂದರ್ ಪೇಳೆ ಕೇಳ್ದಱೆದು ಭಟ್ಟಾರರ ನಿಸಿದಿಗೆಯಂ ಬಂದಿಸಿ ಪೋಪಮೆಂದು ವಿಶಾಖಾಚಾರ್ಯರ್ ಮೊದಲಾಗೊಡೆಯ ಋಷಿಸಮುದಾಯಮೆಲ್ಲಂ ದಕ್ಷಿಣಾಪಥದಿಂದಂ ಬಂದು ಭಟ್ಟಾರರ ನಿಸಿದಿಗೆಯನೆಯ್ದಿದಾಗಳ್ ಚಂದ್ರಗುಪ್ತಮುನಿಯುಂ ರಿಸಿಯರ್ಕಳ ಬರವಂ ಕಂಡಿದಿರಂ ಬಂದು ಋಷಿಸಮುದಾಯಮೆಲ್ಲಮಂ ಬಂದಿಸಿದೊಡೆ ರಿಸಿಯರ್ಕಳಿಂತೆಂದು ಬಗೆದರೀಯಡವಿಯೊಳಿನ್ನೆಗಮಿವರ್ ಕಂದಮೂಲಫಲಂಗಳಂ ತಿಂದು ತೊಜ್ಜಿಯ ಪಳ್ಕದ ನೀರ್ಗಳಂ ಕುಡಿದು ಪನ್ನೆರಡು ವರುಷಂಬರೆಗಮೆಂತು ಬರ್ದೊರೆಂದು ತಮ್ಮೊಳ್ನುಡಿದು ಮತ್ತಂ ತಲೆನವಿರ್ ಬೆಳಿದುದುಮಂ ಕಂದಾರಪ್ಪೊಡಂ ಪ್ರತಿವಂದನೆಯಂ ಕೊಟ್ಟುದಿಲ್ಲ ಮತ್ತಾ ರಿಸಿಯರ್ಕಳನಿಬರುಮಾ ದಿವಸಮುಪವಾಸಂ ಗೆಯ್ದರ್ಚಿಸಿ ಕ್ರಿಯೆಗೆಯ್ದು ಭಟ್ಟಾರರ ನಿಸಿದಿಗೆಯಂ ಬಂದಿಸಿಯಾ ದಿವಸಮಲ್ಲಿಯೆ ಕೆಂದು ಮಱುದಿವಸಂ ಪೋಪಾಗಳ್ ಚಂದ್ರಗುಪ್ತಮುನಿಗಳೆಂದರ್ ಭಟಾರಾ ನಿನ್ನೆ ಬಟ್ಟೆವಂದುಪವಾಸಂಗೆಯ್ದು ಸೇದೆವಟ್ಟರಿಂದಿನ

ಮತ್ತು ಪೊದರುಗಳ ಮನೆಯಲ್ಲಿದ್ದ ಈ ಪಟ್ಟಣವನ್ನು ನಾನು ಕಂಡಿಲ್ಲ. ಆದರೆ ಇಂದು ಸ್ವಲ್ಪ ಹೆಚ್ಚಾಗಿ ಸುತ್ತಾಡಿದಾಗ ದೊಡ್ಡದೊಂದು ಪಟ್ಟಣವನ್ನು ಕಂಡು ಭಿಕ್ಷೆಗಾಗಿ ಹೋದೆನು. ಆಗ ಓರ್ವ ದೇವತಾಸ್ತ್ರೀ ತನ್ನ ಎದುರಿಗೆ ಪರಿವಾರದೊಡನೆ ಬಂದು ಊಟಕ್ಕೆ ನಿಲ್ಲಲು ಹೇಳಿ ತನ್ನ ಮನೆಗೆ ಕರೆದುಕೊಂಡು ಹೋದಳು. ಅಲ್ಲಿ ನನ್ನ ಕಾಲು ತೊಳೆದು, ಸತ್ಕರಿಸಿ ಗುರುಭಕ್ತಿಯಿಂದ ನಮಸ್ಕರಿಸಿ ಅತಿಶಯವಾದ ಭಕ್ತಿಯಿಂದ ದಿವ್ಯವಾದ ಭೋಜನವನ್ನು ಬಡಿಸಿದಳು. ನಾನು ನನ್ನ ಶ್ರಮವೆಲ್ಲ ಹೋಗುವ ಹಾಗೆ ಊಟಮಾಡಿ ಆಶೀರ್ವದಿಸಿ ಬಂದೆನು" ಎಂದು ಹೇಳಿದರು. ಭದ್ರಬಾಹುಗಳು 'ಒಳ್ಳೆಯದಾಯಿತು' ಎಂದು ಹೇಳಿ ಸಂತೋಷಗೊಂಡು ಇದ್ದರು. ಹೀಗೆ ಪ್ರತಿದಿವಸವೂ ಪಟ್ಟಣಕ್ಕೆ ಹೋಗಿ ಊಟಮಾಡುತ್ತಿದ್ದರು. ಇತ್ತ ಭದ್ರಬಾಹು ಋಷಿಗಳು ಹಿಂದೆ ತಾವು ತಪಸ್ಸು ಮಾಡುತ್ತಿದ್ದ ಎಲ್ಲಾ ಕಾಲದಲ್ಲಿಯೂ ಅವಮೋದರ್ಯ (ಹೊಟ್ಟೆ ತುಂಬುವುದಕ್ಕೆ ಬೇಕಾಗುವ ಮೂವತ್ತೆರಡು ತುತ್ತುಗಳಲ್ಲಿ ದಿನಕ್ಕೆ ಒಂದೊಂದೇ ತುತ್ತು ಕಡಮೆ ಮಾಡಿ ಊಟ ಮಾಡುವುದು) ಎಂಬ ವಿಧಾನದ ಊಟವನ್ನು ಮಾಡಿ ಹಸಿವನ್ನು ಸಹಿಸಿ, ದೇಹವನ್ನು ಕ್ಷೀಣಗೊಳಿಸಿ ಸಂನ್ಯಾಸ ಕೈಗೊಂಡು, ಹಲವು ದಿವಸಗಳಿಂದ ಹಸಿವು ಬಾಯಾರಿಕೆಗಳನ್ನು ಸಹಿಸಿದರು. ಮಂಗಳಕರ ಪರಿಣಾಮದಿಂದ ರತ್ನತ್ರಯವನ್ನು ಸಾಧಿಸಿ ಸತ್ತು ಬ್ರಹ್ಮಕಲ್ಪದಲ್ಲಿ ಹತ್ತು ಸಾಗರಕ್ಕೆ ಸಮಾನವಾದ ಆಯುಷ್ಯವುಳ್ಳ ಅಮಿತಕಾಂತಿ ಎಂಬ ದೇವನಾಗಿ ಹುಟ್ಟಿದನು. ಚಂದ್ರಗುಪ್ತಮುನಿ ಭದ್ರಬಾಹು ಋಷಿಗಳ ಸಮಾಧಿಯನ್ನು ನಮಸ್ಕರಿಸಿ, ಅಲ್ಲಿಯ ದೇವತೆಯ ಅಪ್ಪಣೆಯಂತೆ ಭಿಕ್ಷೆ ಮಾಡಿಕೊಂಡು ತಪಸ್ಸನ್ನು ಎಸಗಿ ಹನ್ನೆರಡು ವರ್ಷಗಳವರೆಗೆ ಹೀಗೆಯೇ ಇದ್ದರು. ಇತ್ತ ತಮಿಳುನಾಡಿಗೆ ಹೋದ ಋಷಿಸಮೂಹದವರೆಲ್ಲ ಹನ್ನೆರಡು ವರ್ಷಗಳವರೆಗೆ ಸುಖವಾಗಿದ್ದು ಉಪಸರ್ಗಗಳಿಲ್ಲದೆ ಸಮ್ಯಗ್ದರ್ಶನ ಸಮ್ಯಗ್ ಜ್ಞಾನ ಸಮ್ಯಕ್ ಚಾರಿತ್ರ ಎಂಬ ರತ್ನತ್ರಯವನ್ನು ನಡೆಸಿಕೊಂಡು ಬಂದರು. ಉತ್ತರಾಪಥದಲ್ಲಿ ಬಂದಿದ್ದ ಕ್ಷಾಮವು

ದಿವಸಮಿಲ್ಲಿರ್ದು ಚರಿಗೆಪೊಕ್ಕು ಸೇದೆಯನಾಱಿಸಿ ನಾಳೆ ಪೋಗಿಮೆಂದೊಡೆ ಭಟ್ಟಾರರಂದರೂರಿಲ್ಲ ಕೇರಿಯಿಲ್ಲೆಲ್ಲಿ ಚರಿಗೆವುಗುವಮಂತು ಕೆಮ್ಮನೇಕೆಮ್ಮಂ ತಾಂಗಿದಪಿರೆಂದೊಡೆ ಪಿರಿದೊಂದು ಪೊಬಲುಂಟು ನೀಮುಂ ಸಂಕ್ಲೇಶಂಬಡದಿರಿಂದಿನ ದಿವಸಮಿರ್ಕೆಂದೊದನಿಬರುಮೆಂದರಿಂದಿನ ದಿವಸಮುಪವಾಸಂ ಗೆಯ್ದಪ್ಪೊಡಮಿವರೆಂಬುದನಿಂಬುಕೆಯ್ವವೆಂದಿರ್ದೊಡೆ ಮಧ್ಯಾಹ್ನಮಱ್ಪಾಗಳ್ ದೇವರಂ ಬಂದಿಸವೇಱ್ಪೊದನಿಬರುಂ ಬಂದಿಸಿ ಚಂದ್ರಗುಪ್ತಮುನಿಯ ಬಚೆಯಂ ಋಷಿಸಮುದಾಯಮೆಲ್ಲಂ ತಗುಳ್ದು ಕಱೆದಂತರಮಂ ಪೋಪನ್ನೆಗಂ ಪಿರಿದೊಂದು ಪೊಬಲಂ ಕಂಡು ಚರಿಗೆಪೊಕ್ಕನಿಬರುಮಂ ನಿಱಿಸಿ ಕೆಲ ರಿಸಿಯರುಮಾಚಾರ್ಯರ್ಕಳುಂ ಬೆರಸುತಾಮೊಂಮ ಮನೆಯೊಳ್ ನಿಂದರಿಂತನಿಬರುಂ ದಿವ್ಯಾಹಾರಂಗಳಂ ಶ್ರಮಂ ವೋಗೆ ಚರಿಗೆ ಮಾಡಿ ತಮ್ಮಾವಾಸಕ್ಕೆ ಬಂದು ವಿಶಾಖಾಚಾರ್ಯರೆಂದರ್ ಬ್ರಹ್ಮಯ್ಯಾ ಕಾಲಂ ಕರ್ಚಲ್ ಗುಂಡಿಗೆಯಂ ಕೊಂಡು ಬನ್ನಿಮೆಂದೊಡೆ ಬ್ರಹ್ಮಯ್ಯನೆಂದಂ ಗುಂಡಿಗೆಯನುಂಡ ಮನೆಯೊಳ್ ಮಱೆದು ಬಂದೆನೆನೆ ಬೇಗಂ ಪೋಗಿ ಕೊಂಡು ಬಾಯೆನೆ ಬ್ರಹ್ಮಯ್ಯಂ ಪೋಗಿ ಪೊಬಲೆಡೆಯಂ ಕಾಣದದವಯೆಲ್ಲಮಂ ತೊಬಲ್ದು ನೋಡಿ ಗುಂಡಿಗೆಯಂ

ತೀರಿತೆಂದು ಆ ನಾಡಿನಿಂದ ಬಂದವರು ಹೇಳಿದುದನ್ನು ಕೇಳಿ ತಿಳಿದುಕೊಂಡು ಅವರು ಭದ್ರಬಾಹು ಭಟ್ಟಾರರ ಸಮಾಧಿಗೆ ವಂದನೆಯನ್ನು ಸಲ್ಲಿಸಿ ಹೋಗೋಣವೆಂದುಕೊಂಡು ವಿಶಾಖಾಚಾರ್ಯರೇ ಮೊದಲಾಗಿ ಉಳ್ಳ ಋಷಿಸಮೂಹದವರೆಲ್ಲ ದಕ್ಷಿಣ ದೇಶದಿಂದ ಬಂದು ಭಟ್ಟಾರರ ಸಮಾಧಿಯಿದ್ದಲ್ಲಿಗೆ ಬಂದರು . ಆಗ ಚಂದ್ರಗುಪ್ತ ಮುನಿಗಳು ಆ ಋಷಿಗಳ ಬರವನ್ನು ಎದುರುಗೊಂಡು ಋಷಿವೃಂದಗಳಿಗೆಲ್ಲ ವಂದನೆ ಮಾಡಿದರು. ಆಗ ಆ ಋಷಿಗಳು ತಮ್ಮೊಳಗೆ ಹೀಗೆ ಭಾವಿಸಿದರು - "ಇವರು ಈ ಕಾಡಿನಲ್ಲಿ ಇದುವರೆಗೂ ಗಡ್ಡೆ ಬೇರು ಹಣ್ಣುಗಳನ್ನು ತಿಂದು ಹೊಳೆಯ ಮತ್ತು ಹಳ್ಳದ ನೀರುಗಳನ್ನು ಕುಡಿದು ಹನ್ನೆರಡು ವರ್ಷಗಳವರೆಗೆ ಹೇಗೆ ಬಾಳಿದರು ?" ಹೀಗೆ ತಮ್ಮಲ್ಲೇ ಹೇಳಿಕೊಂಡು, "ತಲೆಯ ಕೂದಲು ಬೆಳೆದುದನ್ನು ನೋಡಿ ಯಾರೊಬ್ಬರಾದರೂ ಇವರಿಗೆ ನಮಸ್ಕಾರಕ್ಕೆ ಪ್ರತಿಯಾಗಿ ನಮಸ್ಕಾರವನ್ನು ಮಾಡಿಲ್ಲ" ಎಂದುಕೊಂಡರು. ಆಮೇಲೆ ಆ ಋಷಿಗಳೆಲ್ಲರೂ ಆ ದಿವಸ ಉಪವಾಸ ಮಾಡಿದರು. ಪೂಜೆ ಕ್ರಿಯೆಗಳನ್ನೆಲ್ಲ ಮಾಡಿ ಭದ್ರಬಾಹುಭಟ್ಟಾರರ ಸಮಾಧಿಗೆ ವಂದನೆ ಸಲ್ಲಿಸಿದರು. ಆ ದಿನ ಅಲ್ಲಿಯೇ ಮಲಗಿ ಮರುದಿವಸ ಹೋಗುವ ಸಂದರ್ಭದಲ್ಲಿ ಚಂದ್ರಗುಪ್ತ ಮುನಿಗಳು ಅವರೊಡನೆ (ವಿಶಾಖಾಚಾರ್ಯರೊಡನೆ) ಹೀಗೆಂದರು - "ಪೂಜ್ಯರೇ, ನಿನ್ನೆ ನೀವೆಲ್ಲ ದಾರಿ ನಡೆದು ಬಂದು ಉಪವಾಸ ಮಾಡಿ ಆಯಾಸಪಟ್ಟಿದ್ದೀರಿ. ಈ ದಿವಸ ಇಲ್ಲೇ ಇದ್ದು ಊಟಮಾಡಿ ಬಳಲಿಕೆಯನ್ನು ನಿವಾರಿಸಿ ನಾಳೆ ಹೋಗಬಹುದು". ಹೀಗೆ ಹೇಳಿದಾಗ ಅವರು - "ಇಲ್ಲಿ ಊರೂ ಇಲ್ಲ ಕೇರಿಯೂ ಇಲ್ಲ. ಎಲ್ಲಿ ಭಿಕ್ಷೆಗೆ ಹೋಗೋಣ? ಅಂತೂ ವ್ಯರ್ಥವಾಗಿ ನೀವು ನಮ್ಮನ್ನೇಕೆ ತಡೆಯುತ್ತೀರಿ?" ಎಂದು ಕೇಳಿದರು. ಅದಕ್ಕೆ ಚಂದ್ರಮುನಿಗಳು - "ದೊಡ್ಡದಾದ ಒಂದು ಪಟ್ಟಣವಿದೆ. ನೀವೇನೂ ಕಷ್ಟಪಡಬೇಕಾಗಿಲ್ಲ. ಈ ದಿವಸ ಇದ್ದು ಬಿಡಿ" ಎಂದರು. ಆಗ ಅವರೆಲ್ಲರೂ ಹೀಗೆಂದರು - "ಈ ದಿವಸ ಉಪವಾಸವನ್ನು ಮಾಡಿಯಾದರೂ ಇವರು ಹೇಳಿದ್ದನ್ನು ನೆರವೇರಿಸೋಣ". ಹೀಗೆಂದು ಅವರೆಲ್ಲ ನಿಂತಿರಲು ಮಧ್ಯಾಹ್ನವಾದಾಗ, ದೇವರನ್ನು ನಮಸ್ಕರಿಸಲು ಹೇಳಿದಾಗ, ಅವರೆಲ್ಲರೂ ವಂದಿಸಿ, ಆ ಋಷಿಗಳ ತಂಡದವರೆಲ್ಲ ಚಂದ್ರಗುಪ್ತಮುನಿಯ ಜೊತೆಯಲ್ಲಿ ಸೇರಿಕೊಂಡು ಸ್ವಲ್ಪದೂರ

ಕಾಣದತ್ತಮಿತ್ತಂ ನೋಬ್ಪನ್ನೆಗಮೊಂದು ಮರದ ತುತ್ತತುದಿಯೊಳಿರ್ದಬಿಲ್ಲ ಗುಂಡಿಗೆಯಂ ಕಂಡು ಬಂದು ಗುರುಗಳ್ಗಿಂತೆಂದಂ ಭಟ್ಟಾರಾ ನಾಮುಂಡೆಡೆಯೊಳಾ ಪೋಬಲಿಲ್ಲ ನಮ್ಮುಂಡ ಮನೆಯುಮಿಲ್ಲ ಗುಂಡಿಗೆಯುವೊಂದು ನಿಡಿಯ ಮರದ ತುತ್ತತುದಿಯೊಳಿರ್ದುದಾರಾನುವೇಱಲ್ ಬಲ್ಲೊರನಟ್ಟುಗೆಂದೊಡನಿಬರುಂ ರಿಸಿಯರ್ಕಳೆಲ್ಲಂ ಚೋದ್ಯಂಬಟ್ಟು ನೋಡಲ್ಪೋಗಿ ಪೊಬಲಂ ಕಾಣದಡವಿಯೊಳ್ ನಿಡಿಯ ಮರದ ತುತ್ತತುದಿಯೊಳಿರ್ದಬಿಲ್ಲ ಗುಂಡಿಗೆಯಂ ಕಂಡು ತೆಗೆಯಿಸಿಕೊಂಡು ಪೋಗಿ ಚಂದ್ರಗುಪ್ತಮುನಿಯನನಿಬರುಂ ರಿಸಿಯರ್ಕಳ್ ನೆರದಿಂತೆಂದರಾಮುಂ ನಿಮ್ಮನೀಯಡವಿಯೊಳ್ ಕಂದಮೂಲಫಲಂಗಳಂ ತಿಂದು ಪಳ್ಕದ ನೀರಂ ಕುಡಿದು ಇನಿತು ಕಾಲಂ ಬರ್ದಿರೆಂದು ನಿಮ್ಮಂ ಬಗೆದು ಬಂದಿಸಿದೆಮಿಲ್ಲಿದರ್ಕೆ ನೀಮುಂ ಮನದೊಳೇವಂಗೊಳ್ಳದೆ ಕ್ಷಮಿಯಿಸಿಮೆಂದು ನುಡಿದು ವಂದಿಸಿ ಮತ್ತಮಿಂತೆಂದರ್ ನೀಮುಂ ಸೇವಾಧಿಷ್ಠತರಿರ್ ನಿಮಗೆ ದೇವತೆಗಳ್ ಬಿಸಕೆಯ್ವುವು ದೇವತೆಗಳ್ ಮಾಡಿದಾಹಾರಮಂ ನೀಮಿನ್ನೆಗಮುಂಡು ತವಂಗೆಯ್ದಿರಿನ್ನುಣಲ್ವೇಡ ದೇವತೆಗಳ ಮಾಡಿದಾಹಾರಮಂ ರಿಸಿಯರ್ಗೆ ಚರಿಗೆ ಮಾಡಲಾಗದೆಂದು ಬಾರಿಸಿಯವರ್ಗೆ ಲೋಚಂಗೆಯ್ದು

ಹೋದರು. ಆಗ ದೊಡ್ಡದೊಂದು ಪಟ್ಟಣ ಕಾಣಿಸಿತು. ಭಿಕ್ಷೆಗೆ ಹೋದ ಅಪರೆಲ್ಲರನ್ನೂ ನಿಲ್ಲಿಸಿ ಕೆಲವು ಮಂದಿ ಋಷಿಗಳು ಮತ್ತು ಆಚಾರ್ಯರೂ ಕೂಡಿ ತಾವು ಒಂದು ಮನೆಯಲ್ಲಿ ನಿಂತರು. ಹೀಗೆ ಅವರೆಲ್ಲರೂ ತಮ್ಮ ದಣಿವು ಆರಿ ತೃಪ್ತಿಯಾಗುವವರೆಗೂ ದಿವ್ಯಾಹಾರಗಳನ್ನು ಉಂಡರು. ತಮ್ಮ ವಾಸಸ್ಥಳಕ್ಕೆ ಬಂದನಂತರ, ವಿಶಾಖಾಚಾರ್ಯರು ತಮ್ಮ ಶಿಷ್ಯನನ್ನು ಕರೆದು - "ಮಾಣಿಯೇ, ಕಾಲು ತೊಳೆಯಲು ಕಮಂಡಲು (ಜಲಪಾತ್ರೆ) ತೆಗೆದುಕೊಂಡು ಬಾ" ಎಂದುರು. ಆಗ ಆ ವಟುವು - "ಕಮಂಡಲುವನ್ನು ನಾನು ಊಟಮಾಡಿದ ಮನೆಯಲ್ಲಿ ಮರೆತು ಬಂದಿದ್ದೇನೆ" ಎಂದನು. "ಬೇಗನೆ ಹೋಗಿ ಅದನ್ನು ತೆಗೆದುಕೊಂಡು ಬಾ" ಎನ್ನಲು ಆ ಬ್ರಹ್ಮಚಾರಿ ಹೋಗಿ ಪಟ್ಟಣವಿರುವ ಸ್ಥಳವನ್ನೇ ಕಾಣದೆ, ಕಾಡನ್ನೆಲ್ಲ ಸುತ್ತಾಡಿ ನೋಡಿದನು. ಕಮಂಡಲವನ್ನು ಕಾಣದೆ ಅತ್ತಿತ್ತ ನೋಡುತ್ತಿದ್ದನು. ಆಗ ಒಂದು ಮರದ ತುತ್ತುತುದಿಯಲ್ಲಿದ್ದುಕೊಂಡು ನೇತಾಡುತ್ತಿರುವ ಕಮಡಂಲವನ್ನು ಕಂಡು ಬಂದು ತನ್ನ ಗುರುಗಳಿಗೆ ಹೀಗೆಂದನು - "ಪೂಜ್ಯರೇ, ನಾವು ಊಟ ಮಾಡಿದ ಸ್ಥಳದಲ್ಲಿ ಆ ಪಟ್ಟಣವಿಲ್ಲ. ನಾವು ಊಟ ಮಾಡಿದ ಮನೆಯೂ ಇಲ್ಲ ಕಮಂಡಲು ಮಾತ್ರ ಒಂದು ಉದ್ದವಾದ ಮರದ ತುತ್ತತುದಿಯಲ್ಲಿದೆ. ಮರವನ್ನು ಹತ್ತಬಲ್ಲ ಯಾರನ್ನಾದರೂ ಕಳುಹಿಸಬೇಕು" ಆಗ ಆ ಋಷಿಗಳೆಲ್ಲರೂ ಆಶ್ಚರ್ಯಪಟ್ಟು ನೋಡುವುದಕ್ಕೆ ಹೋಗಿ ಪಟ್ಟಣವನ್ನು ಕಾಣದೆ ಕಾಡಿನಲ್ಲಿ ಎತ್ತರವಾದ ತುತ್ತತುದಿಯಲ್ಲಿ ಜೋತಾಡುತ್ತಿರುವ ಕಮಂಡಲವನ್ನು ಕಂಡರು. ಅದನ್ನು ತೆಗೆಯಿಸಿಕೊಂಡು ಹೋಗಿ ಆ ಋಷಿಗಳೆಲ್ಲರೂ ಒಟ್ಟಾಗಿ ಚಂದ್ರಗುಪ್ತಮುನಿಯ ಬಳಿಗೆ ಬಂದರು. "ನೀವು ಈ ಕಾಡಿನಲ್ಲಿ ಗಡ್ಡೆ ಬೇರು ಹಣ್ಣುಗಳನ್ನು ತಿಂದು ಹಳ್ಳದ ನೀರನ್ನು ಕುಡಿದು ಇಷ್ಟುಕಾಲ ಬಾಳಿದ್ದೀರೆಂದು ನಿಮ್ಮನ್ನು ಕುರಿತು ಭಾವಿಸಿ ವಂದನೆಮಾಡಲಿಲ್ಲ. ಇದಕ್ಕೆ ನೀವು ಮನಸ್ಸಿನಲ್ಲಿ ಸಿಟ್ಟಾಗಬಾರದು, ಕ್ಷಮಿಸಬೇಕು" ಎಂದು ಹೇಳಿ ವಂದಿಸಿ ಆಮೇಲೆ ಹೀಗೆ ಹೇಳಿದರು - "ನೀವು ಸೇವೆಗೆ ಪಾತ್ರರಾಗಿದ್ದೀರಿ. ದೇವತೆಗಳು ನಿಮ್ಮ ಆಜ್ಞಾಪಾಲಕರಾಗಿ ನಡೆದುಕೊಳ್ಳುತ್ತಿರುವರು. ದೇವತೆಗಳು ಮಾಡಿದ ಆಹಾರವನ್ನು ಇದುವರೆಗೂ ನೀವು ಊಟ ಮಾಡಿ ತಪಸ್ಸನ್ನು

ಬ್ರತಂಗಳನೇಱಿಸಿ ಪಡಿಕಮಣಂಬೇಟಿಂ‌ದೊಡಗೊಂದುತ್ತರಾಪಥಕ್ಕೆ, ಪಯಣಂಬೋಗಿ ಕತಿಪಯದಿವಸಂಗಳಿಂದಂ ಮಧ್ಯದೇಶಮನೆಯ್ದುಯಾ ನಾಡೊಳ್ ಋಷಿಸಮುದಾಯಮೆಲ್ಲಂ ನಿರುಪಸರ್ಗಮಿರ್ದತ್ತು ಮತ್ತಿತ್ತ ರಾಮಿಲಾಚಾರ್ಯರುಂ ಸ್ಥೂಲಾಚಾರ್ಯರುಂ ಸ್ಥೂಲಭದ್ರಾಚಾರ್ಯರುಮಂತು ಮೂವರುಂ ಸಿಂಧುವಿವಯಕ್ಕೆ ತಂತಮ್ಮ ಋಷಿಸಮುದಾಯಂ ಬೆರಸು ಪೋದೊಡಾ ನಾಡೊಳ್ ಮಾನಸರ್ ಮಾನಸರಂ ತಿಂಬಂತುಟಪ್ಪ ಮಹಾಘೋರಂ ಪಸವಾದೊಡಲ್ಲಿಯ ಶ್ರಾವಕರೆಲ್ಲಂ ನೆರೆದು ರಿಸಿಯರಲ್ಲಿಗೆ ವೋಗಿ ಇಂತೆಂದರ್ ಭಟಾರಾ ಲವಟುಗಳ ಕೈಯಲ್ ಪಗಲುಣಲುಮಡಲುಂ ಪೆಱಲಾಗ ಮೇಲ್ಮಾಯೆಬಿದು ಕೊಂಡುಂಬರ್ ಲೋಗರೆಲ್ಲಮವರ ಭಯಕ್ಕೆ ಪಗಲಡುಗೆಯಂ ಬಿಸುಟ್ಟಿರುಳಟ್ಟುಣಲ್ ತಗುಳ್ದರದಱಿಂ ನೀಮುಮಿಂದಿತ್ತಿರುಳ್ ಭೈಕ್ಷಭಾಜನಂಗಳಂ ಕೊಂಡುಪೋಗಿ ಶ್ರಾವಕರ ಮನೆಗಳಂ ತೊಱಲ್ದು ಭೈಕ್ಷಂ ಬೇಡಿಕೊಂಡು ಕೂಬನಿರುಳ್ ತಂದಿಟ್ಟು ಪಗಲುಣ್ಬುದೆಂದೊಡಂತೆಗೆಯ್ವಮೆಂದು ಇರುಳ್ ತೊಱಲ್ದು ಭೈಕ್ಷಮಂ ತಂದು ಮಡಗಿಟ್ಟು ಪಗಲುಣ್ಗೊರಾದರಿಂತೀ ಪಾಂಗಿನೊಳ್ ಕಾಲಂ ಸಲೆ ಮತ್ತೊಂದು ದಿವಸಮೊರ್ವ ನಿರ್ಗ್ರಂಥಯತಿ ಭೈಕ್ಷಭಾಜನಮಂ ಕೊಂಡು ಶ್ರಾವಕರ ಮನೆಗಳನಿರುಳ್ ಭೈಕ್ಷಂ ಬೇಡಿ ತೊಱಲುತ್ತಂ ಪೋಪರೊಂದು

ಆಚರಿಸಿದ್ದೀರಿ. ಇನ್ನು ನೀವು ಅದನ್ನು ಊಣಬಾರದು. ದೇವತೆಗಳು ಮಾಡಿದ ಆಹಾರವನ್ನು ಋಷಿಗಳು ಊಣಬಾರದು" ಹೀಗೆ ಹೇಳಿ ಅವರನ್ನು ಪಡೆದು ಅವರಿಗೆ ಲೋಚು (ಕೂದಲು ಕೀಳುವುದು) ಕ್ರಿಯೆಯನ್ನು ಮಾಡಿ ವ್ರತ ಸ್ವೀಕಾರ ಮಾಡಿಸಿ ಪಡಿಕಮಣವನ್ನು (ಹಿಂದಿನ ಪಾಪಗಳಿಗೆ ಪಶ್ಚಾತ್ತಾಪ ಹೇಳಿಸುವುದು) ಹೇಳಿಸಿ, ಅವರನ್ನು ಕೂಡಿಕೊಂಡು ಉತ್ತರದೇಶಕ್ಕೆ ಪ್ರಯಾಣ ಮಾಡಿದರು. ಕೆಲವು ದಿವಸಗಳಲ್ಲಿ ಮಧ್ಯದೇಶಕ್ಕೆ ತಲಪಿದರು. ಅಲ್ಲಿ ಋಷಿ ಸಮೂಹದವರೆಲ್ಲರೂ ಉಪಸರ್ಗಗಳಿಲ್ಲದೆ ಇದ್ದರು. ಆಮೇಲೆ ಇತ್ತ ರಾಮಿಲಾಚಾರ್ಯರು ಸ್ಥೂಲಾಚಾರ್ಯರು ಸ್ಥೂಲಭದ್ರಾಚಾರ್ಯರು ಅಂತು ಈ ಮೂವರು ಸಿಂಧುದೇಶಕ್ಕೆ ತಮ್ಮ ತಮ್ಮ ಋಷಿಸಮೂಹವನ್ನು ಕೂಡಿಕೊಂಡು ಹೋದರಷ್ಟೆ. ಆ ಕಾಡಿನಲ್ಲಿ ಮನುಷ್ಯರು ಮನುಷ್ಯರನ್ನೇ ತಿಂದುಬಿಡತಕ್ಕಂತಹ ಅತಿ ಭಯಂಕರವಾದ ಕ್ಷಾಮ ತಲೆದೋರಿದ್ದಿತು. ಅಲ್ಲಿದ್ದ ಶ್ರಾವಕರೆಲ್ಲರೂ ಒಟ್ಟುಗೂಡಿ ಈ ಋಷಿಗಳ ಬಳಿಗೆ ಹೋಗಿ ಹೀಗೆಂದರು - "ಅನ್ಯದೇಶೀಯರಾದ ಕೆಟ್ಟವರಾದ ಇಲ್ಲಿಯ ಜನರೊಂದಿಗೆ ಹಗಲು ಹೊತ್ತಿನಲ್ಲಿ ಊಟಮಾಡಲೂ ಬಾರದು, ಅಡುಗೆ ಮಾಡಲೂ ಬಾರದು. ಮಾಡಿದರೆ, ಅವರು ಮೇಲೆ ಬಿದ್ದು ಎಳೆದು ತೆಗೆದುಕೊಂಡು ತಿಂದುಬಿಡುತ್ತಾರೆ. ಆದುದರಿಂದ ಜನರೆಲ್ಲರೂ ಅವರ ಭಯದಿಂದ ಹಗಲು ಅಡುಗೆ ಮಾಡುವುದನ್ನು ಬಿಟ್ಟು ರಾತ್ರಿ ಅಡುಗೆ ಮಾಡಿ ಉಣ್ಣಲು ತೊಡಗಿದ್ದಾರೆ. ಆದುದರಿಂದ ನೀವು ಇಂದಿನಿಂದ ರಾತ್ರಿ ವೇಳೆಯಲ್ಲಿ ಭಿಕ್ಷಾಪಾತ್ರೆಗಳನ್ನು ತೆಗೆದುಕೊಂಡು ಶ್ರಾವಕರ (ಜಿನಧರ್ಮದಲ್ಲಿ ನಿಷ್ಠೆಯುಳ್ಳ ಗೃಹಸ್ಥರ) ಮನೆಗಳಿಗೆ ಸುತ್ತಾಡಿ ಭಿಕ್ಷೆ ಬೇಡಿಕೊಂಡು, ಅನ್ನವನ್ನು ರಾತ್ರಿಯ ವೇಳೆಯಲ್ಲಿ ತಂದು ಇಟ್ಟುಕೊಳ್ಳಿರಿ. ಅದನ್ನು ಹಗಲು ಊಟಮಾಡಿ" ಹೀಗೆ ಹೇಳಲು ಅವರು 'ಹಾಗೆಯೇ ಮಾಡುವೆವು' ಎಂದುಕೊಂಡು ರಾತ್ರಿಯಲ್ಲಿ ಸುತ್ತಾಡಿ ಭಿಕ್ಷೆಯನ್ನು ತಂದು ಇಟ್ಟು ಅದನ್ನು ಹಗಲು ಊಟಮಾಡುವವರಾದರು. ಈ ರೀತಿಯಲ್ಲಿ ಸ್ವಲ್ಪ ಕಾಲ ಕಳೆಯಿತು. ಆಮೇಲೆ

ಮನೆಯಂ ಪೊಕ್ಕು ಭೈಕ್ಷವಮಂ ಬೇಡಿದೊಡೊರ್ವಳ್ ಪೊಸಶ್ರಾವಕಿ ಬಸಿರ್ವೆಂಡತಿ ವೇಳಾಸ್ವಾಮಿನಿಯೆಂಬೊಳ್ ಕರ್ದಿಂಗಳಿರುಳೊಳ್ ಕಟ್ಟಲೆಯೊಳ್ ನಿರ್ಗ್ರಂಥಮಪ್ಪ ರೂಪಂ ಕಂಡು ಬೆರ್ಚಿದೊಡಾಕೆಗೆ ಬಸಿಜೆಟೆದತ್ತದಂ ಕಂಡು ಶ್ರಾವಕರೆಲ್ಲಂ ನೆರೆದು ರಿಸಿಯರಲ್ಲಿಗೆ ವೋಗಿ ಇಂತೆಂದರ್ ಭಟ್ಟಾರಾ ಕಾಲಮಪ್ಪೊಡೆ ಕೆಟ್ಟತ್ತೊಳ್ಳಿತಪ್ಪ ಕಾಲಮಾದಂದು ಪ್ರಾಯಶ್ಚಿತ್ತಂಗೊಂಡು ನಿಮ್ಮ ತಪಂಗಳೊಳ್ ನಿಲ್ದಿಮೀಗಳೀ ಪಸವು ಕಟೆವನ್ನೆಗಂ ನೀಮುಮೆದದ ಕೈಯನೆಬಲಿಕ್ಕಿಯರ್ದ್ಧಗಪ್ಪಡಮನೆದದ ಮುಯ್ವಿನ ಮೇಗಿಕ್ಕಿ ಒಳಗೆ ನಿರ್ಗ್ರಂಥಮಪ್ಪ ರೂಪಂ ತಾಳ್ದಿ ಬಲದ ಕೈಯೊಳ್ ಭೈಕ್ಷದ ಭಾಜನಮಂ ಪಿಡಿದು ತೊಬಲ್ದು ಭೈಕ್ಷಮಂ ಬೇಡಿ ಮದಗಿಟ್ಟು ಪಗಲುಣ್ಣಿಮೆಂದೊಡವರ್ಗಳುಮಂತೆ ಗೆಯ್ವುಮೆಂದವರ ಪೇಟ್ದ ಪಾಂಗಿನೊಳ್ ನೆಗಟ್ದು ಪಸವಂ ನೀಗಿ ಕಾಲಮೊಳ್ಳಿತ್ತಾದೊಡೆ ರಾಮಿಲಾಚಾರ್ಯರುಂ ಸ್ಥೂಲಾಚಾರ್ಯರುಂ ಸ್ಥೂಲಭದ್ರಾಚಾರ್ಯರುಮಂತು ಮೂವರುಂ ತಂತಮ್ಮ ಋಷಿಸಮುದಾಯಂ ಬೆರಸು ವಿಹಾರಿಸುತ್ತಂ ಮಧ್ಯದೇಶಕ್ಕೆ ರಿಸಿಯರ್ಕಳಿರ್ದಲ್ಲಿಗೆ ಬಂದೊಡೆ ವಿಶಾಖಾಚಾರ್ಯರ್ ಮೊದಲಾಗೊಡೆಯ ಆಚಾರ್ಯರ್ಕಳವರನಿಂತೆಂದರ್ ನೀಮೆಲ್ಲರುಮರ್ದ್ಧಗಪ್ಪಡಮಂ ಬಿಸುಟ್ಟು ನಿರ್ಗ್ರಂಥ ರೂಪುಮಂ ಕೈಕೊಂಡು ವ್ರತಂಗಳನೇಜಿಸಿ ಪ್ರಾಯಶ್ಚಿತ್ತಂಗೊಂಡು ಪಡಿಕಮಣಂಗೇಳ್ದು ತಪದೊಳ್ ನಿಲ್ದಿಮೆಂದೊಡಂ ತೆಗೆಯ್ದುಮೆಂಮ ರಾಮಿಲಾಚಾರ್ಯರುಂ ಸ್ಥೂಲಾಚಾರ್ಯರುಂ ತಂತಮ್ಮ ಋಷಿಸಮುದಾಯಂ ಬೆರಸು

ಒಂದು ದಿವಸ ಒಬ್ಬ ದಿಗಂಬರ ಸಂನ್ಯಾಸಿಗಳು ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ಜೈನಗೃಹಸ್ಥರ ಮನೆಗಳಲ್ಲಿ ರಾತ್ರಿವೇಳೆ ಭಿಕ್ಷೆ ಬೇಡಿಕೊಂಡು ಸುತ್ತಾಡುತ್ತ ಇದ್ದರು. ಅವರು ಒಂದು ಮನೆಯನ್ನು ಪ್ರವೇಶಿಸಿ ಭಿಕ್ಷೆ ಬೇಡಿದರು. ಆಗ ಓರ್ವ ಗರ್ಭಿಣಿಯಾದ ಶ್ರಾವಕಿ ವೇಳಾಸ್ವಾಮಿನಿಯೆಂಬವಳು ಅಮಾವಾಸ್ಯೆಯ ಕತ್ತಲೆಯಲ್ಲಿ ಆ ಯತಿಯ ದಿಗಂಬರವಾಗಿರುವ (ಬಟ್ಟೆಬರೆಯಿಲ್ಲದ) ರೂಪವನ್ನು ಕಂಡು ಬೆಚ್ಚಿ ಬೀಳಲು, ಆಕೆಗೆ ಗರ್ಭಸ್ರಾವವಾಯಿತು. ಅದನ್ನು ಕಂಡು ಶ್ರಾವಕರೆಲ್ಲ ಒಟ್ಟಾಗಿ ಋಷಿಗಳಲ್ಲಿಗೆ ಹೋಗಿ ಹೀಗೆಂದರು - "ಪೂಜ್ಯರೇ, ಕಾಲವಾದರೋ ಕೆಟ್ಟುಹೋಗಿದೆ. ಒಳ್ಳೆಯ ಕಾಲ ಬಂದಾಗ ಪ್ರಾಯಶ್ಚಿತ್ತ ಮಾಡಿಕೊಂಡು ನಿಮ್ಮ ತಪಸ್ಸನ್ನು ಆಚರಿಸಿರಿ. ಈ ಬರಗಾಲ ಮುಗಿಯುವವರೆಗೂ ನೀವು ಎದಗೈಯನ್ನು ಜೋಲುವಂತೆ ಬಿಟ್ಟು ಅರೆಬಟ್ಟೆಯನ್ನು ಎದದ ಹೆಗಲ ಮೇಲೆ ಹಾಕಿ ಒಳಗೆ ದಿಗಂಬರ ರೂಪವನ್ನು ತಾಳಿ, ಬಲದ ಕೈಯಲ್ಲಿ ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ಸುತ್ತಾಡುತ್ತ ಭಿಕ್ಷೆಯನ್ನು ಬೇಡಿ, ಅದನ್ನು ಹಾಗೆಯೇ ಇಟ್ಟು ಹಗಲು ಹೊತ್ತಿನಲ್ಲಿ ಊಟಮಾಡಿ" ಹೀಗೆನ್ನಲು, ಋಷಿಗಳು "ಹಾಗೆಯೇ ಮಾಡೋಣ" ಎಂದು ಹೇಳಿ, ಅವರು ಹೇಳಿದ ರೀತಿಯಲ್ಲೇ ಮಾಡಿದರು. ಬರಗಾಲ ಕಳೆದು ಒಳ್ಳೆಯ ಕಾಲ ಬರಲು, ರಾಮಿಲಾಚಾರ್ಯರು ಸ್ಥೂಲಾಚಾರ್ಯರು ಸ್ಥೂಲಭದ್ರಾಚಾರ್ಯರು - ಅಂತು ಮೂರು ಮಂದಿಯೂ ತಮ್ಮ ತಮ್ಮ ಋಷಿಸಮೂಹವನ್ನು ಕೂಡಿಕೊಂಡು ಸಂಚಾರ ಮಾಡುತ್ತ ಮಧ್ಯದೇಶದಲ್ಲಿ ಋಷಿಗಳಿದ್ದಲ್ಲಿಗೆ ಬಂದರು. ಆಗ ವಿಶಾಖಾಚಾರ್ಯರು ಮೊದಲಾಗಿ ಉಳ್ಳ ಆಚಾರ್ಯರುಗಳು ಅವರೊಡನೆ ಹೀಗೆಂದರು - "ನೀವೆಲ್ಲರೂ ಅರೆಬಟ್ಟೆಯನ್ನು ಬಿಸಾಡಿ (ಅರೆಬತ್ತಲೆಯನ್ನು ಇಟ್ಟುಕೊಳ್ಳದೆ) ಪೂರ್ತಿಯಾಗಿ ದಿಗಂಬರತ್ವವನ್ನು ಸ್ವೀಕರಿಸಿಕೊಳ್ಳಿ. ವ್ರತಗಳನ್ನು ಧರಿಸಿ ಪ್ರಾಯಶ್ಚಿತ್ತ ಕೈಕೊಂಡು

ವಿಶಾಖಾಚಾರ್ಯರ ಪಕ್ಕದೆ ಅರ್ಧಗಪ್ಪಡಮಂ ಬಿಸುಟ್ಪು ಪಡಿಕಮಣಂಗೇಳ್ದು ಪ್ರಾಯಶ್ಚಿತ್ತಂ ಗೊಂಡು ಯಥೋಕ್ತಮಪ್ಪ ಚಾರಿತ್ರದೊಳ್ ನಿಂದರ್ ಸ್ಥೂಲಭದ್ರಾಚಾರ್ಯರ್ ಮೊದಲಾಗಿ ಕೆಲಂಬರ್ ಕೊಳಲೊಲ್ಲದವರ್ ಜಿನಕಲ್ಪಂ ಸ್ಥವಿರಕಲ್ಪಮೆಂದೆರಡು ಭೇದಂ ಮಾಡಿ ಅರ್ಧಗಪ್ಪಡದ ತೀರ್ಥಮಂ ನೆಗಳ್ಚಿದರ್ ಇಂತರ್ಧಗಪ್ಪಡದ ತೀರ್ಥ ಪಾರಂಪರ್ಯದಿಂದಂ ಸುರಥಮೆಂಬುದು ನಾಡಲ್ಲಿ ವಳಭಯೆಂಬುದು ಪೊಲಿಲದನಾಳ್ವಂ ವಪ್ರಪಾಳನೆಂಬೊನರಸನ ರಾಜ್ಯಂಬರೆಗಮರ್ಧಗವ್ಪಡದ ತೀರ್ಥಂ ನೆಗಟ್ಟುತ್ತು ಮತ್ತಂ ವಪ್ರಪಾಳನೆಂಬರಸಂ ಮಿಥ್ಯಾದೃಷ್ಟಿಯಾತನ ಮಹಾದೇವಿ ಸ್ವಾಮಿನಿಯೆಂಬೊಳರ್ಧಗಪ್ಪದದ ತೀರ್ಥದ ತಪಸ್ಸಿಯರ ಶ್ರಾವಕಿಯಾಗಿ ಇಂತು ಕಾಲಂ ಸಲೆ ಮತ್ತೊಂದು ದಿವಸಂ ನಡುವಗಲರಸನುಂ ಮಹಾದೇವಿಯುಮಿಂತಿರ್ವರುಂ ಪ್ರಾಸಾದದ ಮೇಗಿರ್ದು ಗವಾಕ್ಷ ಜಾಳಾಂತರಂಗಳಿಂದಂ ದಿಶಾವಲೋಕನಂಗೆಯ್ಯುತ್ತಿರ್ಪನ್ನೆಗಮರ್ಧಗಪ್ಪದದ ಸಂಘಂ ಭೈಕ್ಷಂ ಕಾರಣಮಾಗಿಯರಮನೆಯಂ ಪುಗುವುದನರಸಂ ಕಂಡರಸಿಯನಿಂತೆಂದನೆಲೆ ಮಹಾದೇವಿ ಈ ನಿನ್ನರ್ಧಗಪ್ಪದದ ಯತಿಯರ ಧರ್ಮಮೊಳ್ಳಿತಲ್ತವರುಟ್ಟರುಮಲ್ಲರ್ ಬತ್ತಲೆಗರುಮಲ್ಲರೆಂದು ನುಡಿದು ಮತ್ತೊಂದು ದಿವಸಮರ್ಧಗಪ್ಪಡದ ಸಂಘಮನರಸಂ ಬಟೆಯಟ್ಟವರಿಸಿ ಇಂತೆಂದಂ ನೀಮರ್ಧಗಪ್ಪಡಮಂ ಬಿಸುಟು ನಿರ್ಗ್ರಂಥಮವ್ವರಿಸಿ ರೂಪಂ ಕೈಕೊಂದು ಬಟೆಯೆ ತಪಂಗೆಯ್ವುದೆಂದೊಡವರೊಲ್ಲದಿರ್ದೊಡರಸಂ ಮತ್ತಮಿಂತೆಂದಂ ನಿರ್ಗ್ರಂಥವಮಪ್ಪರೂಪಂ ಕೈಕೊಳಲೊಲ್ಲಿರಪ್ಪೊಡರ್ಧಗಪ್ಪದಮಂ ಬಿಸುಟ್ಪು ಪಟೆಯಂ ಸಯ್ತುಟ್ಟುಕೊಂದಿರಿಮೆಂದೊದಂತೆ ಗೆಯ್ದೆಮೆಂದಾ ದಿವಸಂ ತಗುಳ್ದು ಬಡಗನಾಡವರ್ ವವ್ರಪಾಳನ

ಪಡಿಕಮಣವನ್ನು (ದೋಷಗಳಿಗೆ ಪಶ್ಚಾತ್ತಾಪವನ್ನು) ಮಾಡಿ ತಪೋನಿರತರಾಗಿರಿ". ಹೀಗೆನ್ನಲು ಅದಕ್ಕೆ ಒಪ್ಪಿ ರಾಮಿಲಾಚಾರ್ಯರೂ ಸ್ಥೂಲಾಚಾರ್ಯರೂ ತಮ್ಮ ತಮ್ಮ ಋಷಿಸಮೂಹವನ್ನು ಕೂಡಿಕೊಂಡು ವಿಶಾಖಾಚಾರ್ಯರ ಬಳಿಯಲ್ಲಿ ತಮ್ಮ ಅರೆಬಟ್ಟೆ (ಅರ್ಧಮಾತ್ರ ವಸ್ತ್ರಧಾರಣೆ)ಯನ್ನು ಬಿಟ್ಟರು. ಪಡಿಕಮಣವನ್ನು ಕೇಳಿ ಪ್ರಾಯಶ್ಚಿತ್ತವನ್ನು ಮಾಡಿ ಯೋಗ್ಯವಾದಂತಹ ಸಮ್ಯಕ್ ಚಾರಿತ್ರವನ್ನುಳ್ಳವರಾದರು. ಸ್ಥೂಲಭದ್ರಾಚಾರ್ಯರೇ ಮೊದಲಾದ ಕೆಲವರು ದಿಗಂಬರತ್ವವನ್ನು ಸ್ವೀಕರಿಸಲು ಒಪ್ಪದವರು, ಜಿನಕಲ್ಪ, ಸ್ಥವಿರಕಲ್ಪ - ಎಂದು ಎರಡು ಪ್ರಭೇದಗಳನ್ನು ಮಾಡಿ ಅರೆಬಟ್ಟೆಯನ್ನು ಧರಿಸುವ ಸಂಪ್ರದಾಯವನ್ನು ಮಾಡಿದರು. ಈ ಅರೆಬಟ್ಟೆಯ ಸಂಪ್ರದಾಯ ವಿಸ್ತಾರವಾಗತೊಡಗಿತು. ಸುರಥಿ ಎಂಬ ನಾಡಿನಲ್ಲಿ ವಳಭಿ ಎಂಬ ಪಟ್ಟಣವನ್ನು ವಪ್ರಪಾಳನೆಂಬ ರಾಜನು ಆಳುತ್ತಿದ್ದನು. ಅವನ ರಾಜ್ಯದವರೆಗೂ ಅರೆಬಟ್ಟೆಯ ಸಂಪ್ರದಾಯವು ವ್ಯಾಪಿಸಿಕೊಂಡಿತು. ವಪ್ರಪಾಳರಾಜನು ಮಿಥ್ಯಾದೃಷ್ಟಿ (ಧರ್ಮದಲ್ಲಿ ನಂಬಿಕೆಯಿಲ್ಲದವನು). ಅವನ ರಾಣಿಯಾದ ಸ್ವಾಮಿನಿಯೆಂಬವಳು ಅರ್ಧವಸ್ತ್ರದ ಸಂಪ್ರದಾಯದ ಯತಿಗಳ ಬೋಧನೆಯನ್ನು ಕೇಳುತ್ತಿದ್ದಳು.ಹೀಗೆ ಸ್ವಲ್ಪ ಕಾಲ ಕಳೆಯಿತು. ಆಮೇಲೆ ಒಂದು ದಿವಸ ನಡುಹಗಲಿನ ವೇಳೆ ರಾಜ ಮತ್ತು ರಾಣಿ ಇಬ್ಬರೂ ತಮ್ಮ ಅರಮನೆಯ ಉಪ್ಪರಿಗೆಯಲ್ಲಿದ್ದರು. ಅವರು ಕಿಟಕಿಯ ಬಲೆಯ ಒಳಗಿನಿಂದ ದಿಕ್ಕುಗಳ ಕಡೆ ನೋಡುತ್ತಿದ್ದಾಗ ಅರೆಬಟ್ಟೆಯುಳ್ಳ ಸಂಘ ಭಿಕ್ಷೆಗಾಗಿ ಅರಮನೆಯೊಳಗೆ ಬಂದುದನ್ನು ಕಂಡರು. ಆಗ ರಾಜನು ರಾಣಿಯೊಡನೆ - "ಎಲೈ ಮಹಾದೇವಿ, ಈ ನಿನ್ನ ಅರೆಬಟ್ಟೆಯ ಮುನಿಗಳ ಧರ್ಮ ಒಳ್ಳೆಯದಲ್ಲ. ಇವರು ವಸ್ತ್ರಧರಿಸಿದವರೂ ಅಲ್ಲ ನಗ್ನರೂ ಅಲ್ಲ" ಎಂದು ನುಡಿದನು. ಆಮೇಲೆ ಒಂದು ದಿವಸ

ರಾಜ್ಯದೊಳರ್ದಗಪ್ಪದವುಂ ಬಿಸುಟ್ಟು ಕಚ್ಚೆಗಟ್ಟದೆ ಸಯುಂತಡುವರುಂ ಕುಜೆವಡವಂ ಪೊದೆವರುಮಾದೊರಲ್ಲಿಂದಿತ್ತ ಕಂಬಳತೀರ್ಥಮೆಂಬುದಾದವರುಂ ಶ್ವೇತಪಟರೆಂಬೊರಾದರ್ ದಕ್ಷಿಣಾಪಥದೊಳ್ ಸಾಮಳಿಪುತ್ರನೆಂಬರಸನಪ್ಪನವರಯೆ ಸಂತತಿಯ ಶ್ವೇತಭಿಕ್ಷುಜಾಪುಲಿ ಸಂಘಕ್ಕೆ ಮೊದಲಿಗನಾದಂ ಮತ್ತಿತ್ತ ಸಂಪ್ರತಿಚಂದ್ರಗುಪ್ತಮುನಿಯುಮುಗ್ರೋಗ್ರ ತಪಶ್ಚರಣಂಗೆಯ್ದು ಸಂನ್ಯಸನವಿಧಾನದಿಂದಂ ಪರಮ ಶುದ್ಧ ಸಹಜ ರತ್ನತ್ರಯಮಂ ಸಾಧಿಸಿ ಮುಡಿಪಿ ಬ್ರಹ್ಮಕಲ್ಪದೊಳ್ ಪತ್ತುಸಾಗರೋಪಮಾಯುಷ್ಯಮನೊಡೆಯೊಂ ಶ್ರೀಧರನೆಂಬೊಂ ದೇವನಾಗಿ ಪುಟ್ಟದೊನಿಂತಿದು ಭದ್ರಬಾಹು ಭಟಾರರ ಕಥೆ ಪೇಟ್ದುದು. ಪೆಜರುಂ ಸಂನ್ಯಸನಂ ಗೆಯ್ದೊರೆಲ್ಲಂ ಭದ್ರಬಾಹು ಭಟಾರಕರ ಮನದೆ ಬಗೆದವರೆಂತು ಪಸಿವುಂ ನೀರಟ್ಕೆ ಶೀತಮುಷ್ಣವಂಪ ಮಸಕಾದಿ ಪರೀಷಹಂಗಳಂ ಸೈರಿಸಿ ಪರಮಶುದ್ಧ ರತ್ನತ್ರಯಮಂ ಸಾಧಿಸಿದರಂತೆ ಸಂನ್ಯಸನಂಗೆಯ್ದ ಭವ್ಯರ್ಕಳುಂ ಪಸಿವುಂ ನೀರಟ್ಕೆ ಮೊದಲಾಗೊಡೆಯ ಪರೀಷಹಂಗಳಂ ಸೈರಿಸಿ ಸಮಾಧಿ ಮರಣದಿಂ ಮುಡಿಪಿ ಪರಮ ಶುದ್ಧಸಹಜ ರತ್ನತ್ರಯಂಗಳಂ ಸಾಧಿಸಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

ರಾಜನು ಅರೆಬಟ್ಟೆಯ ಯತಿ ಸಂಘವನ್ನು ಕರೆಕಳುಹಿಸಿ ಬರಮಾಡಿ, ಹೀಗೆಂದನು - "ನೀವು ಅರೆಬಟ್ಟೆಯನ್ನು ಬಿಸಾಡಿ, ದಿಗಂಬರ ಯತಿ ಸ್ವರೂಪವನ್ನು ಕೈಕೊಂಡು, ಅನಂತರ ತಪಸ್ಸನ್ನು ಆಚರಿಸಿರಿ". ಹೀಗೆ ಹೇಳಿದಾಗ ಅವರು ಒಪ್ಪಲಿಲ್ಲ. ರಾಜನು ಆಮೇಲೆ ಅವರೊಡನೆ -"ನೀವು ಇಡೀ ಬತ್ತಲೆಯಾಗಿರುವ ರೂಪವನ್ನು ಸ್ವೀಕರಿಸಿಲು ಒಪ್ಪುವುದಿಲ್ಲವಾದರೆ ಅರ್ಧವಸ್ತ್ರ ಧಾರಣೆಯನ್ನು ಬಿಸಾಡಿ ವಸ್ತ್ರವನ್ನು ಸರಿಯಾಗಿ ಉಟ್ಟುಕೊಂಡಿರಿ" ಎಂದು ಹೇಳಿದನು. "ಹಾಗೆಯೆ ಮಾಡುವೆವು" - ಎಂದುಕೊಂಡು, ಆ ದಿನದಿಂದ ಹಿಡಿದು ಉತ್ತರ ದೇಶದವರು ವಪ್ರಪಾಳನ ರಾಜ್ಯದಲ್ಲಿ ಅರೆಬಟ್ಟೆ ಉಡುವುದನ್ನು ಬಿಟ್ಟು ಕಚ್ಚೆ ಹಾಕದೆ ಸರಿಯಾಗಿ ಧರಿಸುವವರೂ ಚಿಕ್ಕ ಮಡಿಬಟ್ಟೆಯನ್ನು ಹೊದೆಯುವವರೂ ಆದರು. ಅಲ್ಲಿಂದೀಚೆಗೆ ಕಂಬಳಿ ಹೊದೆಯುವ ಶಾಖೆಯೂ (ಸಂಪ್ರದಾಯವೂ) ಆಯಿತು. ಆ ಶಾಖೆಯವರು ಶ್ವೇತಾಂಬರರಾದರು. ದಕ್ಷಿಣ ದೇಶದಲ್ಲಿ ಸಾಮಳಿ ಪುತ್ರನೆಂಬ ರಾಜನು ಅವರದೇ ಪರಂಪರೆಗೆ ಸೇರಿದ ಶ್ವೇತಾಂಬರಯತಿಗಳ ಜಾಪುಲಿ ಎಂಬ ನಗರದ ಸಂಘಕ್ಕೆ ಮೂಲಪುರುಷನಾದನು. ಇತ್ತ ಸಂಪ್ರತಿ ಚಂದ್ರಗುಪ್ತಮುನಿ ಅತ್ಯಂತ ಘೋರವಾದ ತಪಸ್ಸನ್ನು ಆಚರಿಸಿ ಸಂನ್ಯಾಸ ಕ್ರಮದಿಂದ ಅತ್ಯಂತ ಪರಿಶುದ್ಧವೂ ಸಹಜವೂ ಆದ ಸಮ್ಯಗ್ದರ್ಶನದ ಜ್ಞಾನ - ಚಾರಿತ್ರಗಳೆಂಬ ರತ್ನತ್ರಯವನ್ನು ಪಡೆದು, ಸತ್ತು ಬ್ರಹ್ಮಕಲ್ಪದಲ್ಲಿ ಹತ್ತು ಸಾಗರದಷ್ಟು ಆಯುಷ್ಯವಿರತಕ್ಕ ಶ್ರೀಧರನೆಂಬ ದೇವನಾಗಿ ಹುಟ್ಟಿದನು. ಹೀಗೆ ಈ ಭದ್ರಬಾಹು ಋಷಿಗಳ ಕಥೆ ಹೇಳಲ್ಪಟ್ಟಿತು. ಸಂನ್ಯಾಸವನ್ನು ಕೈಗೊಂಡ ಬೇರೆಯವರು ಕೂಡ, ಭದ್ರಬಾಹುಋಷಿಗಳನ್ನು ಮನಸ್ಸಿನಲ್ಲಿ ಧ್ಯಾನಿಸಿಕೊಂಡು, ಹಸಿವು, ಬಾಯಾರಿಕೆ, ಶೀತ, ಸೊಳ್ಳೆ, ನೊಣ ಮುಂತಾದವುಗಳಿಂದ ಆಗತಕ್ಕ ಬಾಧೆಯನ್ನು ಸಹಿಸಿ, ಅತ್ಯಂತ ಪರಿಶುದ್ಧವಾದ ರತ್ನತ್ರಯವನ್ನು ಪಡೆದರು. ಹಾಗೆಯೇ ಸಂನ್ಯಾಸವನ್ನು ಮಾಡಿದ ಪುಣ್ಯವಂತರು ಹಸಿವು ಬಾಯಾರಿಕೆ ಮೊದಲಾಗಿ ಉಳ್ಳ ತೊಂದರೆಗಳನ್ನು ಸಹಿಸಿ, ಸಮಾಧಿ ಸ್ಥಿತಿಯಲ್ಲಿ ಸತ್ತು ಅತ್ಯಂತ ಪರಿಶುದ್ಧವೂ ಸಹಜವೂ ಆದ ರತ್ನತ್ರಯಗಳನ್ನು ಸಾಧಿಸಿ ಸ್ವರ್ಗ - ಮೋಕ್ಷ ಸುಖಗಳನ್ನು ಪಡೆಯಲಿ !

೭. ಲಲಿತಘಟೆಯ ಕಥೆ

ಲಲಿತಘಟೆಯ ಕಥೆಯಂ ಪೇಳ್ದಿಂ :

ಗಾಹೆ ॥ ಕೋಸಂಬೀ ಲಲಿತಘಟಾ ಓಢಾ ಣದೀಎ ಪೂರೇಣ ತಿವ್ವೇಣ
ಆರಾಧಣಂ ಪವಣ್ಣಾ ಪಾಓವಗಯಾ ಅಮೂಢಮದೀ ॥

[ಕೋಸಂಬೀ-ಕೌಶಾಂಬಿಯೆಂಬ ಪೊಬಲೊಳ್, ಲಲಿತಘಟಾ-ಲಲಿತಘಟೆ, ಓಢಾ-ಎಬಿಯೆ ಪಟ್ಟತ್ತು, ಣದೀವಿಪೂರೇಣ-ತೊಜೆಯ ಪೂರದಿಂದಂ, ತಿವ್ವೇಣ-ಆದಮಾನುಂ ಕಡಿದಪ್ಪುದಱಿಂದಂ, ಆರಾಧಣಂ-ನಿಜಾತ್ಮಾರಾಧನೆಯಂ, ಪವಣ್ಣಾ-ಪೊರ್ದಿತ್ತು, ಪಾಓವಗಯಾ-ಪ್ರಾಯೋಪಗಮನಕ್ಕೆ, ಸಂದುದಾಗಿ, ಅಮೂಢಮದೀ-ಮೋಹಿಸದ ಬುದ್ಧಿಯನೊಡೆಯದು]

ಅದೆಂತೆಂದೊಡೆ : ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ವತ್ಸೆಯೆಂಬುದು ನಾಡಲ್ಲಿ ಕೌಶಂಬಿಯೆಂಬುದು ಪೊಬಲದನಾಳ್ವಂ ಹರಿಧ್ವಜನೆಂಬೊನರಸನಾತನ ಮಹಾದೇವಿ ವಾರುಣಿಯೆಂಬೊಳಾಯಿರ್ವರ್ಗ್ಗಂ ಮಕ್ಕಳ್ ಶ್ರೀವರ್ಧನಂ ವಿಜಯಂಧರಂ ವೀರಾಬಾಹು ಮೊದಲಾಗಿ ಮೂವತ್ತಿರ್ವರ್ ಕುಮಾರರುಂ ಸಾಮಂತ ಮಹಾಸಾಮಂತರ ಮಕ್ಕಳುಮಂತೆಲ್ಲಮಯ್ನೂರ್ವರುಂ ರೂಪಿನೊಳಂ ತೇಜದೊಳಂ ಯೌವನದೊಳಂ ಶ್ರೀಯೊಳಂ ತವ್ಮೊಳೋರನ್ನರಪ್ಪರದಱಿಂ ಲಲಿತಘಟೆಯೆಂಬೊರನಿಬರುಂ ಮಿಥ್ಯಾದೃಷ್ಟಿಗಳ್ ಪಂಡಿತರುಮೊಂದು ದಿವಸಂ ಶ್ರೀಕಾಂತಮೆಂಬ ಪರ್ವತದದವಿಗನಿಬರುಂ ಬೇಂಟೆಯಾಡಲ್ ಪೋದಲ್ಲಿ ಇರ್ದೂರಭಯಘೋಷರೆಂಬ ಭಟಾರರವರ್ಗ್ಗಭಯಘೋಷರೆಂಬ ಪೆಸರೆಂತಾದುದೆಂದೊಡವರ್ ಗರ್ಭದೊಳಿರ್ದಂತೆ ಅವರ ತಾಯ್ಗೆ ಜೀವಂಗಳಂ ಕೊಲ್ಲದಂತವ್ವ ಬಯಕೆಯಾಗಿ ಅಭಯಘೋಷಣೆಯಂ ಪೊಬಲೊಳಂ ನಾಡೊಳಂ ಪೊಯ್ಸು ಜೀವಂಗಳ್ಗಭಯದಾನಂಗೊಟ್ಟು ಪುಟ್ಟಿದರಪ್ಪುದಱಿಂದವರ್ಗ್ಗಭಯಘೋಷರೆಂಬ

ಲಲಿತಘಟೆಯ ಕಥೆಯನ್ನು ಹೇಳುವೆನು. (ಕೌಶಾಂಬಿ ಎಂಬ ಪಟ್ಟಣದಲ್ಲಿ ಲಲಿತ ಘಟೆ ಹೊಳೆಯ ಪ್ರವಾಹದಿಂದ ತೊಳೆಯಲ್ಪಟ್ಟಿತು. ಮೋಹಗೊಳ್ಳದ ಬುದ್ಧಿಯುಳ್ಳುದಾಗಿ ಅತ್ಯಂತ ಕಠಿನವಾದ ತನ್ನ ಆತ್ಮಾರಾಧನೆಯನ್ನು ಆಚರಿಸಿತು.) ಅದು ಹೇಗೆಂದರೆ : ಈ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ವತ್ಸೆ ಎಂಬ ನಾಡು ಇದೆ. ಆ ನಾಡಿನಲ್ಲಿ ಕೌಶಂಬಿ ಎಂಬ ಪಟ್ಟಣವಿದೆ. ಅದನ್ನು ಹರಿಧ್ವಜನೆಂಬ ರಾಜನು ಆಳುತ್ತಿದ್ದನು. ಅವನ ರಾಣಿ ವಾರುಣಿ ಎಂಬವಳು. ಆ ದಂಪತಿಗಳಿಗೆ ಶ್ರೀವರ್ಧನ, ವಿಜಯಂಧರ, ವೀರಬಾಹು ಮುಂತಾದ ಮೂವತ್ತೆರಡು ಮಂದಿ ಮಕ್ಕಳಿದ್ದರು. ಆ ಮಕ್ಕಳೂ ಸಾಮಂತರ ಮತ್ತು ಮಹಾಸಾಮಂತರ ಮಕ್ಕಳೂ ಅಂತೂ ಎಲ್ಲ ಒಟ್ಟಿಗೆ ಐನೂರು ಮಂದಿಯಿದ್ದರು. ಅವರು ರೂಪದಲ್ಲಿಯೂ ತೇಜಸ್ಸಿನಲ್ಲಿಯೂ ತಾರುಣ್ಯದಲ್ಲಿಯೂ ಐಶ್ವರ್ಯದಲ್ಲಿಯೂ ತಮ್ಮಲ್ಲಿ ಸಮಾನರಾಗಿದ್ದರು. ಆದುದರಿಂದ ಲಲಿತಘಟೆ ಎಂದು ಅವರ ಗುಂಪಿಗೆ ಹೆಸರಾಗಿತ್ತು. ಅವರೆಲ್ಲರೂ ಜೈನಧರ್ಮದಲ್ಲಿ ವಿಶ್ವಾಸವಿಲ್ಲದ ಕುದೃಷ್ಟಿಗಳೂ ವಿದ್ವಾಂಸರೂ ಆಗಿದ್ದರು. ಅವರೆಲ್ಲರೂ ಒಂದು ದಿವಸ ಶ್ರೀಕಾಂತವೆಂಬ ಬೆಟ್ಟದ ಕಾಡಿಗೆ ಬೇಟೆಯಾಡಲು ಹೋದರು. ಅಲ್ಲಿ ಅಭಯಘೋಷರೆಂಬ ಋಷಿಗಳಿದ್ದರು. ಅವರಿಗೆ ಅಭಯಘೋಷರೆಂಬ ಹೆಸರು ಹೇಗಾಯಿತೆಂದರೆ:- ಅವರು ತಾಯಿಯ ಗರ್ಭದಲ್ಲಿದ್ದಾಗ ಆಕೆಗೆ ಪ್ರಾಣಿಗಳನ್ನು

ಪೆಸರಾದುದಂತಪ್ಪ ಭಟಾರರದವಿಯೊಳಿರೆ ಅವರ ತಪೋಮಾಹಾತ್ಮ್ಯದಿಂ ಲಲಿತಘಟೆಗೊಂದು ಮಿಗಮಪ್ಪೊದಂ ಬೇಂಟೆ ಸಮನಿಸದೆ ಪೊಬಲ್ಗೆಪ್ಪೋದೊರಿಂತೇಱುಂ ದಿವಸಮುಂ ಬಿದದದವಿಗೆ ಬೇಂಟೆಯಾದಲ್ ಪೋಗಿ ಒಂದು ಮೃಗಮಪ್ಪೊದಂ ಸಮನಿಸದೆ ಬೇಸತ್ತಬಲ್ದು ಪೊಬಲ್ಗೆಪ್ಪೋಗಿ ಎಂಟನೆಯ ದಿವಸದಂದು ಶ್ರೀಕಾಂತಮೆಂಬ ಪರ್ವತದದವಿಗೆ ಲಲಿತಘಟೆ ಬೇಂಟೆಯಾದಲ್ ಪೋಗಿ ಅದವಿಯೊಳ್ ಮೃಗಂಗಳನಱಸುತ್ತಂ ತೊಬಲ್ದರನ್ನೆಗಮಭಯಘೋಷ ಭಟಾರರಾಯತಿಯಿಂ ತೊಟ್ಪನೆ ಸರ್ವಾಂಗವುಲಧಾರಿಗಳೊಂದು ಶಿಲಾತಳದ ವೋಗಿರ್ದಾಗವುವುಂ ಪರಿವಿಡಿಗೆಯ್ಯುತ್ತುಮರ್ಥಮಂ ಭಾವಿಸುತ್ತಂ ಸ್ವಾಧ್ಯಾಯದೊಳ್ ತಗುಳ್ದಿರ್ದೊರಂ ಸಂಛನ್ನಮಪ್ಪಡವಿಯ ಮಱೆಯೊಳ್ ಗೆಂಟಱೆಂದಂ ಲಲಿತಘಟೆ ಕಂದಪೂರ್ವಮಿದೊಂದು ಕರಿಯಮೃಗಮಿರ್ದುದೆಂದು ಬಗೆದು ಶ್ರೀವರ್ಧನ ಕುಮಾರಂ ಮೊದಲಾಗನಿಬರುಂ ಬಿಲ್ಲಳನೇಱಿಸಿ ತಿರುವಾಯೊಳಂಬನಿಟ್ಟಸಲೆಂದು ತೆಗೆದಿಸುವನ್ನೆಗಮನಿಬರ ಬಿಲ್ಲಳುಂ ಮುಱಿದುದವರ್ಗ್ಗಳನಿಬರುಂ ಪೆಱಗಣ್ಗುರುಳ್ದು ಬಱ್ಗೊದಿದು ಮಹಾಚೋದ್ಯಂ ಸಾರೆ ಪೋಗಿ ನೋಟ್ಪಮೆಂದು ಪೋಪರನ್ನೆಗಂ ಋಷಿಯರ ರೂಪಂ ಕಂಡಿವರ್ ಋಷಿಯರ್ ಮೃಗವುಲ್ತೆಂದು ಸಾರೆಪೋಗಿ ಅವರುಪಶಮವುಮುಂ ತಪಮುಮುಂ

ಕೊಲ್ಲದಂತಹ (ಅಹಿಂಸೆಯ) ಬಯಕೆಯಾಗಿ ಪಟ್ಟಣದಲ್ಲಿಯೂ ನಾಡಿನಲ್ಲಿಯೂ ಅಭಯದ ಡಂಗುರವನ್ನು ಹೊಡೆಸಿ, ಜೀವಿಗಳಿಗೆಲ್ಲ ಅಭಯದಾನವನ್ನು ಕೊಟ್ಟು ಹುಟ್ಟಿದುದರಿಂದ ಅವರಿಗೆ ಅಭಯಘೋಷರೆಂಬ ಹೆಸರಾಯಿತು. ಅಂತಹ ಋಷಿಗಳು ಕಾಡಿನಲ್ಲಿ ಇದ್ದುದರಿಂದ ಅವರ ತಪಸ್ಸಿನ ಮಹಿಮೆಯಿಂದ ಲಲಿತಘಟೆಗೆ ಒಂದೇ ಒಂದು ಮೃಗವಾದರೂ ಬೇಟೆ ದೊರಕಲಿಲ್ಲ. ಅವರು ಪಟ್ಟಣಕ್ಕೆ ತೆರಳಿದರು. ಹೀಗೆ ಏಳು ದಿವಸವೂ ಬಿಡದೆ ಕಾಡಿಗೆ ಬೇಟೆಯಾಡಲು ಹೋಗಿ ಒಂದು ಮೃಗವಾದರೂ ಸಿಕ್ಕದೆ ಬೇಸರಪಟ್ಟು ದುಃಖಿಪಟ್ಟು ಪಟ್ಟಣಕ್ಕೆ ಹೋದರು. ಎಂಟನೆಯ ದಿವಸದಂದು ಲಲಿತಘಟೆ ಬೇಟೆಯಾಡುವುದಕ್ಕಾಗಿ ಶ್ರೀಕಾಂತವೆಂಬ ಪರ್ವತದ ಕಾಡಿಗೆ ಹೋಗಿ ಕಾಡಿನಲ್ಲಿ ಮೃಗಗಳನ್ನು ಹುಡುಕುತ್ತ ಅವರು ಸುತ್ತಾಡುತ್ತಿದ್ದರು. ಆಗ ಅಭಯಘೋಷ ಮಹರ್ಷಿಗಳು ಇಡೀ ಶರೀರದಲ್ಲಿ ಮಲಧಾರಿಗಳಾಗಿ (ಸ್ನಾನ ಶೌಚ ಮುಂತಾದವನ್ನು ಮಾಡದಿರುವ ತಪಸ್ವಿಗಳಾಗಿ) ಮನಸ್ಸಿನ ಏಕಾಗ್ರತೆಯಿಂದ ಇದ್ದುಕೊಂಡು ಒಂದು ಕಲ್ಲಿನ ಮೇಲೆ ಕುಳಿತು ಶಾಸ್ತ್ರವನ್ನು ಅನುಕ್ರಮವಾಗಿ ಹೇಳುತ್ತ, ಅದರ ಅರ್ಥವನ್ನು ಭಾವಿಸುತ್ತ, ಓದಿನಲ್ಲಿ ತತ್ಪರರಾಗಿದ್ದರು. ಅವರನ್ನು ದಟ್ಟವಾದ ಕಾಡಿನಲ್ಲಿ ಫಕ್ಕನೆ ದೂರದಿಂದ ಕಂಡ ಲಲಿತಘಟೆಯವರು ಅದೊಂದು ಅಪೂರ್ವವಾದ ಕಪ್ಪು ಮೃಗವಿರಬೇಕೆಂದು ಭಾವಿಸಿದರು. ಶ್ರೀವರ್ಧನಕುಮಾರ ಮೊದಲಾದ ಅವರೆಲ್ಲರೂ ಬಿಲ್ಲುಗಳನ್ನು ಏರಿಸಿ ಬಿಲ್ಲಿನ ಹಗ್ಗಕ್ಕೆ ಬಾಣವನ್ನು ಇಟ್ಟು ಹೊಡೆಯಲೆಂದು ಪ್ರಯೋಗಿಸುವಾಗ ಅವರೆಲ್ಲ ಬಿಲ್ಲುಗಳೂ ಮುರಿದುಹೋದವು- ಅವರೆಲ್ಲರೂ ಹಿಂಗಡೆಗೆ ಉರುಳಿಬಿದ್ದರು. ಇದು ಬಹಳ ಆಶ್ಚರ್ಯಕರ ಸಂಗತಿ; ಹತ್ತಿರ ಹೋಗಿ ನೋಡೋಣ-ಎಂದು ಹತ್ತಿರಕ್ಕೆ ಹೋದರು. ಆಗ ಋಷಿಯ ರೂಪವನ್ನು ಕಂಡು "ಇವರು ಋಷಿಗಳು, ಮೃಗವಲ್ಲ" - ಎಂದು ಬಳಿಗೆ ಹೋಗಿ ಅವರ ಸಮಾಧಾನಚಿತ್ತತೆಯನ್ನೂ

ಕಂಡನಿಬರ್ಗ್ಗುಪಶಮಮಾಗಿ ಕುಳ್ಳಿರ್ದು ಧರ್ಮಮಂ ಪೇಟೆಂ ಭಟ್ಟಾರಾ ಎಂದು ಬಿಸಗೊಂಡೊಡೆ ಭಟ್ಟಾರರಿಂತೆಂದು ಪೇಬಲ್ ತೊಡಗಿದರ್ :

ಗಾಹೆ ॥ ಸೋ ಧಮ್ಮೋ ಜತ್ಥದಯಾ ಸೋ ಏ ತಓ ಏಸಯಣಿಗ್ಗಹೋ ಜತ್ಥ
ದಸ ಆಟ್ಠ ದೋಸ ರಹಿಓ ಸೋ ದೇವೋ ಣತ್ಥಿ ಸಂದೇಹೋ

ಎಂದಿಂತು ಜೀವಂಗಳಂ ಕೊಲ್ಲದುದೆ ಧರ್ಮಂ ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆದಯ್ದುಮಿಂದ್ರಿಯಂಗಳಂ ಗೆಲ್ದು ಇರ್ಪ್ಪತ್ತೆರಡು ಪರೀಷಹಂಗಳು ಸೈರಿಸಿ ಯಮನಿಯಮ ಸ್ವಾಧ್ಯಾಯ ಧ್ಯಾನಾನುಷ್ಠಾನ ಪರಾಯಣರಾಗಿ ತಪಂಗೆಯ್ವ ರಿಸಿಯರ್ಕಳೆ ತಪಸ್ವಿಯರ್ ಪಸಿವು ನೀರಟ್ಟಿ ಮೊದಲಾಗೊಡೆಯ ಪದಿನೆಂಟು ದೋಷಂಗಳನಿಲ್ಲದೊಂ ಪರಮಾತ್ಮನೆಂದಿಂತು ಪೇಲ್ದು ಮತ್ತಮಿಂತೆಂದರ್ :

ಗಾಹೆ ॥ ಪಾವೇಣ ಣೆರಯತಿರಿಯಂ ಗುಮ್ಮ ಇ ಧಮ್ಮೇಣ ದೇವಲೋಗಂ ತು
ಮಿಸ್ಸೇಣ ಮಾಣುಸತ್ತಂ ದೊಣ್ಣಂ ಪಿ ಐಯೇಣ ಣಿವ್ವಾಣಂ

ಎಂಬುದಂ ಪಾಪಂಗೆಯ್ವವರುಂ ಬೇಂಟೆಯಾಡುವರುಂ ಮಧುಮದ್ಯಮಾಂಸಂಗಳಂ ಸೇವಿಸುವರುಂ ಬಾಲವಧೆ ಸ್ತ್ರೀವಧೆ ಗೋವಧೆ ಬ್ರಾಹ್ಮಣವಧೆ ಋಷಿವಧೆಯೆಂದೀ ಪಂಚಮಹಾಪಾತಕಂಗಳಂ ಗೆಯ್ವವರುಮಗಮ್ಯಾಗಮನಮಪೇಯಾಪೇಯಮಭಕ್ಷ್ಯ ಭಕ್ಷ್ಯ ಂ ಮೊದಲಾಗೊಡೆಯ ಪೊಲ್ಲಮಿಗಳೊಳ್

(ಶಾಂತಸ್ವಭಾವವನ್ನೂ) ತಪಸ್ಸನ್ನೂ ಕಂಡು ಅವರೆಲ್ಲರಿಗೂ ಮನಸ್ಸಿಗೆ ಶಾಂತಿ ಲಭಿಸಿತು. ಅವರೆಲ್ಲರೂ ಕುಳಿತು- "ಪೂಜ್ಯರೇ ನಮಗೆ ಧರ್ಮೋಪದೇಶ ಮಾಡಿ" ಎಂದು ಕೇಳಿದರು. ಆಗ ಋಷಿಗಳು ಈ ರೀತಿಯಾಗಿ ಹೇಳ ತೊಡಗಿದರು. (ಎಲ್ಲಿ ದಯೆ ಇದೆಯೋ ಅದು ಧರ್ಮ. ಮತ್ತು ಎಲ್ಲಿ ಇಂದ್ರಿಯನಿಗ್ರಹವಿದೆ ಅದು ಕೂಡ ಧರ್ಮ. ಹದಿನೆಂಟು ದೋಷಗಳಿಲ್ಲದವನು ದೇವತೆ-ಸಂಶಯವಿಲ್ಲ) ಎಂದು ಈ ರೀತಿಯಾಗಿ ಜೀವಗಳನ್ನು ಕೊಲ್ಲದಿರುವುದೇ (ಅಹಿಂಸೆಯೇ) ಧರ್ಮ. ಹನ್ನೆರಡು ವಿಧದ ತಪಗಳನ್ನು ಸ್ವೀಕರಿಸಿ, ಪಂಚೇಂದ್ರಿಯಗಳನ್ನು ಗೆದ್ದು ಹಸಿವು-ಬಾಯಾರಿಕೆ-ಚಳಿ ಮುಂತಾದ ಇಪ್ಪತ್ತೆರಡು ವಿಧದ ಪರೀಷಹಗಳನ್ನು (ತೊಂದರೆಗಳನ್ನು) ಸಹಿಸಿಕೊಂಡು ಯಮ, ನಿಯಮ, ಸ್ವಾಧ್ಯಾಯ, ಧ್ಯಾನ, ಅನುಷ್ಠಾನಗಳಲ್ಲಿ ತತ್ಪರರಾಗಿ ತಪಸ್ಸನ್ನು ಆಚರಿಸುವ ಋಷಿಗಳೇ ತಪಸ್ವಿಗಳು. ಹಸಿವು, ಬಾಯಾರಿಕೆ, ಭಯ, ದ್ವೇಷ-ಮುಂತಾದ ಹದಿನೆಂಟು ದೋಷಗಳಿಲ್ಲದ ಅರ್ಹಂತನೇ ಪರಮಾತ್ಮನು. ಹೀಗೆ ಹೇಳಿದನಂತರ, ಇಂತೆಂದರು : ಜೀವನು ಪಾಪದಿಂದ ನರಕವನ್ನೂ ಪ್ರಾಣಿಜನ್ಮಗಳನ್ನೂ ಪಡೆಯುತ್ತಾನೆ. ಧರ್ಮದಿಂದ ದೇವಲೋಕವನ್ನು ಪಡೆಯುತ್ತಾನೆ. ಪಾಪಪುಣ್ಯಮಿಶ್ರದಿಂದ ಮನುಷ್ಯತ್ವವನ್ನು ಪಡೆಯುತ್ತಾನೆ, ಮತ್ತು ಅವೆರಡರ ನಾಶದಿಂದ ಮೋಕ್ಷವನ್ನು ಹೊಂದುತ್ತಾನೆ. ಎಂಬುದನ್ನು ತಿಳಿಸಿದರು. ಅಲ್ಲದೆ, ಮದ್ಯಮಾಂಸಗಳನ್ನು ಸೇವಿಸುವವರು, ಬಾಲವಧೆ-ಸ್ತ್ರೀವಧೆ- ಗೋವಧೇ-ಬ್ರಾಹ್ಮಣ ವಧೆ-ಋಷಿವಧೆ ಎಂಬ ಈ ಐದು ಬಗೆಯ ಮಹಾಪಾಪಗಳನ್ನು ಮಾಡಿದವರು, ಪರಸ್ತ್ರೀಗಮನ- ಕುಡಿಯಬಾರದುದನ್ನು ಕುಡಿಯುವುದು - ತಿನ್ನಬಾರದುದನ್ನು ತಿನ್ನುವುದು

ನೆಗಬ್ದು ಘೋರಮಂ ಪಿರಿಯವುಮಪ್ಪ ಪಾಪಂಗಳಂ ಗೆಯ್ದೇಬನೆಯ ನರಕದೊಳ್ ಮೂವತ್ತುಮೂಱು ಸಾಗರೋಪಮಾಯುಷ್ಯಮನೊಡೆಯರ್ ನಾರಕರಾಗಿ ಪುಟ್ಟ ಛೇದನ ಭೇದನ ಪೂರಣ ಚೂರಣ ಪೀಡನ ಬಂಧಂಗಳುಮಂ ಮುಟ್ಟಿಗೆಯೊಳಿಟ್ಟು ತೆಗಪುವುದುಂ ಕೊಂತಂಗಳಿಂದಮಿಟ್ಟಿಗಳಿಂದಂ ಕರುಳ್ಗಳಂ ಸೋರೆ ಕುತ್ತುವುದುಂ ಚಕ್ರಗಳಿಂದಂ ತೆಗಲೆಯಂ ಮೊಕ್ಕನೆವೋಗಿಡುವುದುಂ ಮರಂಗಳಂ ಪೋಬ್ದಂತೆ ಕರಗಸಂಗಳಿಂದಮುದ್ದಂ ಪಿಡಿದು ಪೋಬ್ದುದುಮೆಂದಿವು ಮೊದಲಾಗೊಡೆಯ ದುಃಖಂಗಳಂ ಕಣ್ಗೆಮೆಯಿಕ್ಕುವನಿತು ಪೊಬ್ತಪ್ಪೊದಮುಸಿರ್ ಪೊತ್ತಿಲ್ಲದೆ ದುಃಖಂಗಳನನುಭವಿಸುವರ್ ಮತ್ತೊಯ್ದನೆ ಪಾಪಂಗಳಂ ಗೆಯ್ದವರಾನೆಯುಂ ಸಿಂಹಮುಂ ಪುಲಿಯುಂ ಕರಡಿಯುಂ ಪುಲ್ಲಿಯುಂ ಮೊಲನುಂ ಪಂದಿಯುಂ ತೋಳನುಂ ಸೀರ್ನಾಯುಂ ಮತ್ತಮೆಬ್ಬುಕಬಿಟ್ಟಿಯುಂ ಪಶುವುಮೆರ್ಮೆಯುಂ ಕುದುರೆನಾಯೊಟ್ಟೆಯುಮುಡುವುಂ ಪಾವುಮಿಲಿಯುಂ ಬಿರ್ಕುಮೊಂತಿಯುಂ ಕಪ್ಪೆಯುಂ ಮುಂಗುರಿಯುಂ ಮೊದಲಾಗೊಡೆಯ ಸ್ಥಲಚರಂಗಳುಂ ಮೀನುಂ ಪೊಸಳೆಯುಂ ನೆಗಬುಮಾಮೆಯುಂ ಮಕರಮುಂ ತಿಮಿತಿಮಿಂಗಿಳಂ ಮೊದಲಾಗೊಡೆಯ ಜಲಚರಂಗಳುಂ ಕಾಗೆ ಗೂಗೆ ಪದ್ರು ಚಕೋರಂ ಹಂಸೆ ಕುರ್ಕು ಗಿಳಿ ಪುರುಳಿ ಪೆಂಗುರು ಕಾರಂಡಮಾಂದೆ ಮೊದಲಾಗೊಡೆಯ

ಮುಂತಾಗಿ ಇರುವ ಕೆಟ್ಟ ಕೆಲಸಗಳನ್ನು ಆಚರಿಸಿ ಉಗ್ರವೂ ದೊಡ್ಡವೂ ಆದ ಪಾಪಗಳನ್ನು ಮಾಡಿದವರು ಏಳನೆಯ ನರಕದಲ್ಲಿ ಮೂವತ್ತಮೂರು ಸಾಗರದಷ್ಟು ಆಯುಷ್ಯವುಳ್ಳವರಾಗಿ ನರಕಜೀವಿಗಳಾಗಿ ಹುಟ್ಟುವರು. ಅವರು ಅಲ್ಲಿ ಕತ್ತರಿಸುವುದು, ಸೀಳುವುದು, ಮುಳುಗಿಸುವುದು, ಚೂರುಮಾಡುವುದು, ಹಿಂಸಿಸುವುದು, ಬಿಗಿದುಕಟ್ಟುವುದು-ಎಂಬೀ ಹಿಂಸೆಗಳನ್ನು ಅನುಭವಿಸುವರು. ಅಲ್ಲದೆ, ಕೊಡತಿಯಿಂದ ಹೊಡೆದು ಚಿಮ್ಮಟಿಗಳಿಂದ ಎಳೆಯುವುದು, ಈಟಿಗಳಿಂದಲೂ ಬರ್ಚಿಗಳಿಂದಲೂ ಕರುಳು ಹೊರಕ್ಕೆ ಜಾರಿಬರುವಹಾಗೆ ಕುತ್ತುವುದು, ಎದೆ ಮೊಕ್ಕನೆ ಸೀಳಿಹೋಗುವಂತೆ ಚಕ್ರಾಯುಧಗಳಿಂದ ಹೊಡೆಯುವುದು, ಮರಗಳನ್ನು ಸೀಳುವ ಹಾಗೆ ಗರಗಸಗಳಿಂದ ಮೇಲಿನಿಂದ ಕೆಳಗಿನವರೆಗೆ ದೇಹವನ್ನು ಹಿಡಿದು ಸೀಳುವುದು-ಎಂದು ಇವೇ ಮೊದಲಾಗಿ ಉಳ್ಳ ದುಃಖಗಳನ್ನು ಕಣ್ಣಿನ ರೆಪ್ಪೆ ಬಡಿಯುವಷ್ಟು ಹೊತ್ತುಕೂಡ ಅವಕಾಶ ಕೊಡದೆ ಮಾತಾಡಲು ಕೂಡ ಸಮಯ ಕೊಡದೆ ಸಂಕಟಗಳನ್ನು ಅನುಭವಿಸುವರು. ಮೆಲ್ಲನೆಯ ಅಥವಾ ಹಗುರವಾದ ಪಾಪಗಳನ್ನು ಮಾಡಿದವರು ಆನೆ, ಸಿಂಹ, ಹುಲಿ, ಕರಡಿ, ಜಿಂಕೆ, ಮೊಲ, ಹಂದಿ, ತೋಳ, ಕಾಡುನಾಯಿ ಅಥವಾ ನೀರುನಾಯಿಯಾಗಿಯೂ ಎತ್ತು, ಕತ್ತೆ, ಹಸು, ಎಮ್ಮೆ, ಕುದುರೆ, ನಾಯಿ, ಒಂಟೆ, ಉಡು, ಹಾವು, ಇಲಿ, ಬೆಕ್ಕು, ಓತಿ, ಕಪ್ಪೆ, ಮುಂಗುಸಿ ಮೊದಲಾದ ಸ್ಥಲಚರ (ನೆಲದ ಮೇಲೆ ಸಂಚರಿಸುವ) ಪ್ರಾಣಿಗಳಾಗಿಯೂ ಹುಟ್ಟುವರು. ಆದಲ್ಲವಾದರೆ, ಮೀನು, ಮೊಸಳೆ, ನೆಗಳು, ಆಮೆ, ಮಕರ, ತಿಮಿ ಎಂಬ ದೊಡ್ಡಮೀನು, ತಿಮಿಯನ್ನು ಸುಂಗತಕ್ಕ ತಿಮಿಂಗಿಳವೆಂಬ ಮೀನು ಮೊದಲಾದ ಜಲಚರ (ನೀರಿನಲ್ಲಿ ಸಂಚರಿಸುವ) ಪ್ರಾಣಿಗಳಾಗಿ ಹುಟ್ಟುವರು. ಅದಲ್ಲವಾದರೆ - ಕಾಗೆ, ಗೂಗೆ, ಹದ್ದು, ಚಕೋರ (ಬೆಳದಿಂಗುಳಹಕ್ಕಿ), ಹಂಸೆ, ನೀರುಹಕ್ಕಿ (ಭಾರದ್ವಾಜ ಹಕ್ಕಿ), ಗಿಳಿ, ಹೆಣ್ಣುಗಿಳಿ (ಸಾರಿಕೆ), ಕೊಕ್ಕರೆ, ನೀರುಕೋಳಿ, ಗೂಬೆ ಮುಂತಾಗಿರುವ ಪಕ್ಕಿಗಳಾಗಿ (ಆಕಾಶದಲ್ಲಿ

ಗಗನಚರಂ ಪಂಚೇಂದ್ರಿಯಂಗಳುಮಾಗಿ ಮತ್ತಮೇಕೇಂದ್ರಿಯ ದ್ವೀಂದ್ರಿಯ ತ್ರೀಂದ್ರಿಯ ಚತುರಿಂದ್ರಿಯಂಗಳಾಗಿ ತಿರಿಕಗತಿಯೊಳ್ ಪುಟ್ಟಿ ಜೀವಂಗಳಿಂತು ಮಾಡಿದ ಪಾಪದ ಫಲಂಗಳಿಂದಂ ದುಃಖಂಗಳನೆಯ್ದುಗುಂ ವಾಕ್ಯ ॥ ಮಿಸ್ಸೇಣ ಮಾಣುಸತ್ತಮೆಂಬುದು ಪುಣ್ಯಪಾಪಂಗಳಿರದುಮಂ ನೆಗಳ್ದರ್ ಮನುಷ್ಯಗತಿಯೊಳ್ ಪುಟ್ಟಿ ಮುಂಗೆಯ್ದ ಪಾಪಕರ್ಮದುದಯದಿಂದಂ ಶಾರೀರ ಮಾನಸಾಗಂತುಕ ಸಹಜಮಪ್ಪ ದುಃಖಂಗಳುಮನಿಷ್ಟಸಂಯೋಗಮಿಷ್ಟವಿಯೋಗಮುಂ ರಾಗಶೋಕಂಗಳುಂ ದಾರಿದ್ರ್ಯಮೆಂದಿವು ಮೊದಲಾಗೊಡೆಯವಱಿಂದಮಪ್ಪ ದುಃಖಗಳನೆಯ್ದಿ ಮತ್ತಮಾ ಜೀವಂಗಳ್ ಶುಭಕರ್ಮದುದಯದಿಂದಂ ಶ್ರೀಯುಂ ಸಂಪತ್ತುಂ ವಿಭವಮುಂ ಐಶ್ವರ್ಯಮುಮಾರೋಗ್ಯಶರೀರಂಗಳುಮಾಗಿ ಪುತ್ರ ಮಿತ್ರ ಕಳತ್ರ ಸ್ವಜನ ಬಂಧುವರ್ಗದೊಳ್ ಕೂಡಿ ಸುಖಂ ಬಾಳ್ದುದುಮಕ್ಕುಮಿಂತು

ಶ್ಲೋಕ ॥ ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಂ
ಚಕ್ರವತ್ ಪರಿವರ್ತಂತೇ ದುಃಖಾನಿ ಚ ಸುಖಾನಿ ಚ ॥

ಇಂತು ಮನುಷ್ಯಗತಿಯೊಳ್ ಪುಟ್ಟಿ ಸೂಟ್ಸೂಟಿಂಳಿ ಸುಖದುಃಖಂಗಳಂ ಜೀವಂಗಳನುಭವಿಸುವಂತೆ ಗಮ್ಮಿ ಧಮ್ಮೇಣ ದೇವಲೋಯಮ್ಮಿ ಎಂಬುದುಂ ಕೇವಳಮೆ ಧರ್ಮಗೆಯ್ದವರ್ ಸೌಧರ್ಮ ಈಶಾನ ಸನತ್ಕುಮಾರ ಮಾಹೇಂದ್ರ ಬ್ರಹ್ಮ ಬ್ರಹ್ಮೋತ್ತರ ಲಾಂತವ ಕಾಪಿಷ್ಠ ಶುಕ್ರ ಮಹಾಶುಕ್ರ ಶತಾರ

ಸಂಚರಿಸುವವಾಗಿ) ಕಣ್ಣು ಕಿವಿ ಮೂಗು ನಾಲಗೆ ಚರ್ಮ- ಎಂಬ ಐದು ಇಂದ್ರಿಯಗಳುಳ್ಳವಾಗಿ ಹುಟ್ಟುವರು. ಅದಲ್ಲದೆ, ಒಂದು ಇಂದ್ರಿಯ ಮಾತ್ರವುಳ್ಳವಾಗಿ ಅಥವಾ ಎರಡು ಇಂದ್ರಿಯ, ಮೂರು ಇಂದ್ರಿಯ, ನಾಲ್ಕು ಇಂದ್ರಿಯಗಳುಳ್ಳ ಪ್ರಾಣಿಗಳ ಗತಿಯಲ್ಲಿ ಹುಟ್ಟುವರು. ಜೀವಿಗಳು ಈ ರೀತಿಯಾಗಿ ಮಾಡಿದ ಪಾಪದ ಪರಿಣಾಮವಾಗಿ ದುಃಖಿಗಳನ್ನು ಪಡೆಯುವುವು. 'ಮಿಶ್ರೇಣ ಮನುಷ್ಯತ್ವಂ' ಎಂಬ ವಾಕ್ಯದಂತೆ ಪುಣ್ಯ ಪಾಪ ಎಂಬ ಎರಡನ್ನೂ ಮಾಡುವವರು ಮನುಷ್ಯಜನ್ಮದಲ್ಲಿ ಬಂದು, ಹಿಂದೆಮಾಡಿದ ಪಾಪಕೃತ್ಯದ ಫಲದಿಂದ ಶಾರೀರಿಕ ಮಾನಸಿಕವಾಗಿ ಬರತಕ್ಕ ಸಹಜವಾದ ದುಃಖಿಗಳನ್ನೂ ಪ್ರಿಯವಾದುದು ಕೂಡಿಬರುವುದು ಅಥವಾ ಅಗಲುವುದು, ಹರ್ಷವಿಷಾದಗಳು, ಬಡತನ-ಎಂಬವು ಮೊದಲಾಗಿ ಉಳ್ಳವುಗಳಿಂದಾಗುವ ದುಃಖಿಗಳನ್ನೂ ಹೊಂದುವರು. ಆ ಜೀವಗಳು ಮಂಗಳಕರವಾದ ಕಾರ್ಯಗಳಿಂದ ಕಾಂತಿ, ಸಂಪತ್ತು, ವೈಭವ, ಐಶ್ವರ್ಯಗಳನ್ನು ಪಡೆದು, ರೋಗವಿಲ್ಲದ ದೇಹವುಳ್ಳವಾಗಿ ಮಕ್ಕಳು, ಗೆಳೆಯರು, ಹೆಂಡತಿ, ಸ್ವಜನರು, ಬಂಧುವರ್ಗಗಳಿಂದ ಕೂಡಿ ಸುಖವಾಗಿ ಬಾಳುವಂತಾಗುವುದು. (ಸುಖಿವುಂಟಾದ ನಂತರ ದುಃಖಿ, ದುಃಖಿವುಂಟಾದನಂತರ ಸುಖ-ಹೀಗೆ ದುಃಖಿಗಳೂ ಸುಖಿಗಳೂ ಚಕ್ರದಂತೆ ತಿರುಗಿ ಬರುತ್ತ ಇರುತ್ತವೆ.) ಜೀವಗಳು ಈ ರೀತಿಯಾಗಿ ಮನುಷ್ಯಜನ್ಮದಲ್ಲಿ ಬಂದು ಬಾರಿಬಾರಿಗೂ ಸುಖಿಗಳನ್ನೂ ದುಃಖಿಗಳನ್ನೂ ಅನುಭವಿಸುವುವು. "ಗಚ್ಛತಿ ಧರ್ಮೇಣ ದೇವಲೋಕಂ ಹಿ" ಎಂಬ ವಾಕ್ಯದಂತೆ ಕೇವಲ (ಜೈನ) ಧರ್ಮವನ್ನು ಆಚರಿಸಿದವರು ಸೌಧರ್ಮ, ಈಶಾನ, ಸನತ್ಕುಮಾರ, ಮಾಹೇಂದ್ರ, ಬ್ರಹ್ಮ, ಬ್ರಹ್ಮೋತ್ತರ, ಲಾಂತವ, ಕಾಪಿಷ್ಠ, ಶುಕ್ರ, ಮಹಾಶುಕ್ರ, ಶತಾರ, ಸಹಸ್ರಾರ, ಆನತ, ಪ್ರಾಣ, ತಾರಣ, ಅಚ್ಯುತ-ಎಂಬ ಹದಿನಾರು ಕಲ್ಪ (ಸ್ವರ್ಗ)ಗಳಲ್ಲಿಯೂ ಅಲ್ಲಿಂದ

ಸಹಸ್ಸಾರ ಆನತ ಪ್ರಾಣತಾರಣಾಚ್ಯುತಮೆಂಬ ಪದಿನಾಱುಂ ಕಲ್ಪಂಗಳೊಳಮಲ್ಲಿಂ ಮೇಗಣ ಸುದರ್ಶನಾಮೋಘ ಸುಪ್ರಬುದ್ಧ ಯಶೋಧರ ಸುಭದ್ರ ಸುವಿಶಾಳ ಸುಮನಸ ಸೌಮನಸ ಪ್ರೀತಿಂಕರಮೆಂಬ ನವಗ್ರೈವೇಯಕಂಗಳೊಳಮಲ್ಲಿಂ ಮೇಗಣ ಲಚ್ಛಿ ಮಹಾಲಚ್ಛಿ ಮಾಳಿನಿ ವೈರ ವೈರೋಚನೆ ಸೋಮೆ ಸೋಮರೂಪೆ ಅಂಕೆ ಪಳಿಕೆ ಆಯಿಚ್ಛೆಯೆಂಬ ನವಾನುದ್ದಿಸೆಗಳೊಳಮಲ್ಲಿಂ ಮೇಗಣ ವಿಜಯವೈಜಯಂತ ಜಯಂತಾಪರಾಜಿತ ಸರ್ವಾರ್ಥಸಿದ್ಧಿಯೆಂದಿಂತು ಪಂಚಾನುತ್ತರೆಗಳೊಳಮೆರಡು ಘಳಿಗೆಯಿಂದೊಳಗೆ ಪಾಸಿನ ಪೊರೆಯೊಳ್ ಪುಟ್ಟಿ ಇಂದ್ರಪ್ರತೀಂದ್ರ ಸಾಮಾನಿಕ ತ್ರಯಸ್ತ್ರಿಂಶ ಪಾರಿಷದಾತ್ಮರಕ್ಷ ಲೋಕಪಾಲಾಹಮಿಂದ್ರತ್ವಮೆಂದೀ ಮಹರ್ದ್ಧಿಕದೇವರಾಗಿ ಅಣಿಮಾ ಮಹಿಮಾ ಲಘಿಮಾ ಪ್ರಾಪ್ತಿ ಪ್ರಾಗಲ್ಭ್ಯಮೀಶಿತ್ವ ವಶಿತ್ವ ಕಾಮರೂಪಿತ್ವಮೆಂದೀ ಅಷ್ಟಗುಣೈಶ್ವರ್ಯಂಗಳೊಳ್ ಕೂಡಿ ಅತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿತ್ವಮುಂ ಸುಗಂಧಮಪ್ಪ ಶ್ವಾಸನಿಶ್ವಾಸಂಗಳುಮನೊಡೆಯರಾಗಿ ಆಯುಷ್ಕಾಂತಂ ಬರೆಗಂ ನವಯೌವನರಾಗಿ ಮುಪ್ಪುಮಪಮೃತ್ಯು ಮೂತ್ರಪುರೀಷಂಗಳುಂ ಗಂದ ಕಕ್ಷಾ ಕುಕ್ಷಿಪ್ರದೇಶಂಗಳ ರೋಮಂಗಳುಂ ರೋಗ ಶೋಕ ದುಃಖಂಗಳುಂ ರಸರುಧಿರ ಮಾಂಸ ಮೇದೋಸ್ಥಿ ಮಜ್ಜ ಶುಕ್ಲಮೆಂದಿಂತು ಸಪ್ತಧಾತುಗಳುಮೆಂದಿವು ಮೊದಲಾಗೊಡೆಯವಿಲ್ಲದೊರ್ ಸಹಜಮಪ್ಪ ಕಟಕ ಕಟಸೂತ್ರ ಕುಂಡಲಾಭರಣಂ ಮೊದಲಾಗೊಡೆಯ ಪದಿನಾಱುಮಾಭರಣಂಗಳಂ ತೊಟ್ಟು ದಿವ್ಯವಸ್ತ್ರಂಗಳನುಟ್ಟಾದಿತ್ಯನ ತೇಜದಿಂದಗ್ಗಳಮಪ್ಪ ತೇಜದೊರಾಗಿ ಕಣ್ಗೆಮೆಯಿಕ್ಕುವನಿತು ಪೊಲ್ತಪ್ಪೊಡಂ

ಮೇಲೆ ಇರತಕ್ಕ ಸುದರ್ಶನ, ಅಮೋಘ, ಸುಪ್ರಬುದ್ಧ, ಯಶೋಧರ, ಸುಭದ್ರ, ಸುವಿಶಾಳ, ಸುಮನಸ, ಸೌಮನಸ, ಪ್ರೀತಿಂಕರವೆಂಬ ಗ್ರೈವೇಯಕಗಳಲ್ಲಿಯೂ ಅಲ್ಲಿಂದಲೂ ಮೇಲೆ ಇರತಕ್ಕ ಸ್ವರ್ಗಗಳಾದ ಲಚ್ಛಿ, ಮಹಾಲಚ್ಛಿ, ಮಾಳಿನಿ, ವೈರೆ, ವೈರೋಚನೆ, ಸೋಮೆ, ಸೋಮರೂಪೆ, ಅಂಕೆಪಳಿತೆ, ಅಯಿಚ್ಛೆ-ಎಂಬ ಒಂಬತ್ತು ವಿಧದ ಅನುದ್ದಿಸೆಗಳಲ್ಲಿಯೂ ಅಲ್ಲಿಂದಲೂ ಮೇಗಣ ಸ್ವರ್ಗಗಳಾದ ವಿಜಯ, ವೈಜಯಂತ, ಜಯಂತ, ಅಪರಾಜಿತ, ಸರ್ವಾರ್ಥಸಿದ್ಧಿ-ಎಂಬೀ ಐದು ಅನುತ್ತರೆಗಳಲ್ಲಿಯೂ ದೇಹತ್ಯಾಗ ಮಾಡಿದ ಎರಡು ಗಳಿಗೆಗಳೊಳಗೆ ಹಾಸಿಗೆಯ ಸಮೀಪವೇ ಹುಟ್ಟಿ ಇಂದ್ರ, ಪ್ರತೀಂದ್ರ, ಸಾಮಾನಿಕ, ತ್ರಯಸ್ತ್ರಿಂಶ, ಪಾರಿಷದ, ಆತ್ಮರಕ್ಷ, ಲೋಕಪಾಲ, ಅಹಮಿಂದ್ರ-ಎಂಬ ಮಹರ್ದ್ಧಿಕ ದೇವರಾಗುವರು. ಅಣಿಮಾ, ಮಹಿಮಾ, ಲಘಿಮಾ, ಪ್ರಾಪ್ತಿ, ಪ್ರಾಗಲ್ಭ್ಯ, ಈಶಿತ್ವ, ವಶಿತ್ವ, ಕಾಮರೂಪಿತ್ವ-ಎಂಬ ಎಂಟುಗುಣಗಳುಳ್ಳ ಐಶ್ವರ್ಯಗಳಿಂದ ಕೂಡಿ ಅತಿಶಯವಾದ ರೂಪ ಸೌಂದರ್ಯ ಸೌಭಾಗ್ಯ ತೇಜಸ್ಸನ್ನೂ ಸುವಾಸನೆಯುಳ್ಳ ಉಚ್ಛ್ವಾಸ ನಿಶ್ವಾಸಗಳನ್ನೂ ಉಳ್ಳವರಾಗಿ ಆಯುಷ್ಯದ ಕೊನೆಯವರೆಗೂ ತಾರುಣ್ಯವುಳ್ಳವರಾಗಿ ವೃದ್ಧಾಪ್ಯ ಅಪಮೃತ್ಯುಗಳಿಲ್ಲದವರೂ ಮೂತ್ರ, ಮಲಗಳೂ, ಕೆನ್ನೆ ಕಂಕುಳು ಹೊಟ್ಟೆಗಳಲ್ಲಿ ರೋಮಗಳೂ ರೋಗ ಶೋಕ ದುಃಖಿಗಳೂ ರಸ, ರಕ್ತ, ಮಾಂಸ, ಮೇಧಸ್ಸು, ಎಲುಬು, ಕೊಬ್ಬು, ವೀರ್ಯ ಎಂಬ ಏಳು ಬಗೆಯ ಧಾತುಗಳು ಮುಂತಾದವು ಇಲ್ಲದವರೂ ಆಗಿ ಜನಿಸುವರು. ಹುಟ್ಟುವಾಗಲೇ ಅವರು ಉಡಿನೂಲು, ಕುಂಡಲ, ಆಭರಣ ಮುಂತಾಗಿರುವ ಹದಿನಾರು ಬಗೆಯ ಆಭರಣಗಳನ್ನು ಧರಿಸಿ ದಿವ್ಯವಾದ ಉಡಿಗೆಗಳನ್ನು ಉಟ್ಟುಕೊಂಡಿರುವರು. ಸೂರ್ಯನ ತೇಜಕ್ಕಿಂತಲೂ ಹೆಚ್ಚಿನ ತೇಜಸ್ಸು ಉಳ್ಳವರಾಗಿ

ದುಃಖಮಿಲ್ಲದೊರೆರಡು ಸಾಗರೋಪಮಂ ಮೊದಲಾಗಿ ಮೂವತ್ತಮೂಱು ಸಾಗರೋಪಮಂ ಬರೆಗಮಾಯುಷ್ಯಮನೊಡೆಯರಾಗಿ ಆಟಪಾಟ ವಿನೋದಂಗಳಿಂದಂ ದೇವಿಯರಪ್ಸರಸಿಯರ್ಕಳೊಡನೆ ಪಲಕಾಲಂ ದಿವ್ಯಸುಖಮನನುಭವಿಸಿ ಆಯುಷ್ಕಾಂತದೊಳಿಂತಿಲ್ಲಿ ಮನುಷ್ಯಗತಿಯೊಳ್ ಕುರುವಂಶ ಭೋಜವಂಶಮಿಕ್ಷ್ವಾಕುವಂಶ ನಾಥವಂಶ ಹರಿವಂಶಮುಗ್ರವಂಶ ಸೂರ್ಯವಂಶ ಸೋಮವಂಶ ಮಯೂರವಂಶ ನಂದವಂಶಮೆಂದಿವು ಮೊದಲಾಗೊಡೆಯ ಉತ್ತಮ ಕುಲದೊಳ್ ಶ್ರಾವಕರ ಬಸಿಱೊಳ್ ಪುಟ್ಟ ಪೂರ್ವಕೋಟಿ ಪರಮಾಯುವ್ಯಮನೊಡೆಯರಾಗಿ ಅತ್ಯಂತ ರೂಪ ಲಾವಣ್ಯ ಸೌಭಾಗ್ಯಕಾಂತಿತ್ವದೊಳ್ ಕೂಡಿ ಏಕಚ್ಛತ್ರಚ್ಛಾಯೆಯಿಂದಂ ಪೃಥ್ವಿಯೆಲ್ಲಮನಾಳ್ದು ಪಶ್ಚಾತ್ಕಾಲದೊಳೇನಾನುಮೊಂದು ವೈರಾಗ್ಯಕಾರಣಮಾಗಿ ಮಗಂಗೆ ರಾಜ್ಯ ಪಟ್ಟಂಗಟ್ಟಿ ಬಾಹ್ಯಾಭ್ಯಂತರ ಪರಿಗ್ರಹಂಗಳೆಲ್ಲಮಂ ತೊಱೆದೆಲ್ಲರೊಳ್ ನಿಶ್ಮಲ್ಯಂಗೆಯ್ದು ತಪಂಬಟ್ಟು ಘೋರ ವೀರತಪಶ್ಚರಣಂಗೆಯ್ದು ಉತ್ಕೃಷ್ಟದಿಂದಂ ಮೂಱು ಭವಂಗಳೊಳ್ ಮಧ್ಯಮದಿಂದಮಯ್ದು ಭವಂಗಳೊಳ್ ಕನಿಷ್ಠದಿಂದೇಱು ಭವಂಗಳೊಳಗೆ ಅಷ್ಟವಿಧ ಕರ್ಮಂಗಳಂ ಕಡಿಸಿ ಮೋಕ್ಷಮನೆಯ್ದುವರ್ ದೊಣ್ಣಂಪಿ ಐಯೇಣ ಣಿವ್ಹಾಣಂ ಎಂದು ತಪದಿಂದಂ ಶುಭಾಶುಭ ಕರ್ಮಮೆಂದಿರ್ತೆಱೆದ ಕರ್ಮದ ಕೇಡಿನಿಂದಂ ಮೋಕ್ಷಮನೆಯ್ದುವರಂತಪ್ಪ ಮೋಕ್ಷಮೆಂತೆಂದೊಡೆ ಜಾತಿ ಜರಾ ಮರಣಂಗಳುಂ ಭಯಮುಮನಿಷ್ಟಸಂಯೋಗಮುಮಿಷ್ಟ ವಿಯೋಗಮುಂ ಶಾರೀರ ಮಾನಸಾಗಂತುಕ ಸಹಜಮಪ್ಪ

ಕಣ್ಣಿನ ರೆಪ್ಪೆ ಬಡಿಯುವಷ್ಟು ಹೊತ್ತು ಕೂಡ ದುಃಖವೆಂಬುದೇ ಇಲ್ಲದವರಾಗುವರು. ಎರಡು ಸಾಗರದಷ್ಟು ಆಯುಷ್ಯದಿಂದ ತೊಡಗಿ ಮೂವತ್ತಮೂರು ಸಾಗರದಷ್ಟರವರೆಗೆ ಆಯುಷ್ಯವುಳ್ಳವರಾಗುವರು. ಆಟ, ಪಾಟ, ವಿನೋದಗಳಿಂದ ದೇವತಾಸ್ತ್ರೀಯರೊಡನೆ ಹಲವು ಕಾಲ ದಿವ್ಯಸುಖವನ್ನು ಅನುಭವಿಸಿ, ಆಯುಷ್ಯವು ಮುಗಿದ ಮೇಲೆ, ಈ ಲೋಕದಲ್ಲಿ ಮನುಷ್ಯ ಜೀವನದಲ್ಲಿ ಬರುವರು. ಕುರುವಂಶ, ಭೋಜವಂಶ, ಇಕ್ಷ್ವಾಕುವಂಶ, ನಾಥವಂಶ, ಹರಿವಂಶ, ಉಗ್ರವಂಶ, ಸೋಮವಂಶ, ಮಯೂರವಂಶ, ನಂದವಂಶ-ಎಂದು ಇವೇ ಮೊದಲಾದ ಇರತಕ್ಕ ಒಳ್ಳೆಯ ಕುಲದಲ್ಲಿ ಜಿನಭಕ್ತರಾದ ಗೃಹಸ್ಥ ದಂಪತಿಗಳ ಗರ್ಭದಲ್ಲಿ ಜನಿಸುವರು. ಪೂರ್ವಕಾಲದ ಕೋಟಿ ಸಂಖ್ಯೆಯ ಪರಮಾಯುಷ್ಯವುಳ್ಳವರಾಗಿ ಅತಿಶಯವಾದ ರೂಪ ಸೌಂದರ್ಯ ಸೌಭಾಗ್ಯ ಕಾಂತಿಗಳಿಂದ ಕೂಡಿ ಏಕಚ್ಛತ್ರಾಧಿಪತಿಗಳಾಗಿ ಭೂಮಂಡಲವನ್ನು ಆಳುವರು. ಆಮೇಲಿನ ಕಾಲದಲ್ಲಿ ಏನಾದರೂ ಒಂದು ಕಾರಣದಿಂದ ವೈರಾಗ್ಯವನ್ನು ತಾಳಿ, ಮಗನಿಗೆ ರಾಜ್ಯದ ಪಟ್ಟಾಭಿಷೇಕವನ್ನು ಮಾಡಿ ಬಾಹ್ಯ ಮತ್ತು ಆಭ್ಯಂತರ ಎಂಬ ಎರಡೂ ಬಗೆಯ ಪರಿಗ್ರಹಗಳೆಲ್ಲವನ್ನೂ ಬಿಟ್ಟು ಎಲ್ಲರ ಮನೋವ್ಯಥೆಗಳನ್ನೂ ಇಲ್ಲದಂತೆ ಮಾಡಿಕೊಂಡು ತಪಸ್ಸನ್ನು ಸ್ವೀಕರಿಸಿ, ಉಗ್ರವೂ ಶ್ರೇಷ್ಠವೂ ಆದ ತಪಸ್ಸನ್ನು ಆಚರಿಸಿ ಅತಿ ಶ್ರೇಷ್ಠ ರೀತಿಯದಾಗಿ ಮೂರು ಜನ್ಮಗಳಲ್ಲಿ ಮಧ್ಯಮ ರೀತಿಯದಾಗಿ ಐದು ಜನ್ಮಗಳಲ್ಲಿ ಕನಿಷ್ಠವಾದ ರೀತಿಯಲ್ಲಿ ಏಳು ಜನ್ಮಗಳಲ್ಲಿ ಬಂದು, ಘಾತಿಕರ್ಮಗಳು ನಾಲ್ಕು ಅಘಾತಿಕರ್ಮಗಳು ನಾಲ್ಕು ಹೀಗೆ ಎಂಟು ಬಗೆಯವಾದ ಕರ್ಮಗಳನ್ನು ನಾಶಪಡಿಸಿ ಮೋಕ್ಷವನ್ನು ಹೊಂದುವರು. ತಪಸ್ಸಿನ ಮೂಲಕ ಶುಭ ಅಶುಭವೆಂಬ ಎರಡು ಬಗೆಯ ಕರ್ಮವನ್ನು ಕೆಡಿಸಿ ಮೋಕ್ಷವನ್ನು ಸೇರುವರು. ಅಂತಹ ಮೋಕ್ಷದ ಸ್ವರೂಪವೇನೆಂದರೆ:- ಹುಟ್ಟು ಮುಪ್ಪು ಸಾವುಗಳೂ

ದುಃಖಂಗಳುಂ ಆಹಾರ ಭಯ ಮೈಥುನ ಪರಿಗ್ರಹಂಗಳುಂ ವಾತ ಪಿತ್ತ ಶ್ಲೇಷ್ಮ ಶ್ವಾಸ ಶ್ವಾಸ ಜ್ವರಾರುಚ ಛರ್ದ್ಯತಿಸಾರಾಕ್ಷಿಕುಕ್ಷಿವೇದನಾ ಸ್ಫೋಟಕ ಶೂಲ ಭಗಂದರ ಕುಷ್ಠ ಕ್ಷಯ ಗಂಡ ತಿರೋವೇದನೆಯುಮೆಂದಿವು ಮೊದಲಾಗೊಡೆಯ ಅಯ್ದುಕೋಟಿಯುಮಜುವತ್ತೆಂಟು ಲಕ್ಷೆಯುಂ ತೊಂಬತ್ತೊಂಬಯ್ ನಾಸಿರದ ಇನ್ನೂರೆನ್ಬತ್ತುನಾಲ್ಕು ವ್ಯಾಧಿಗಳುಂ ಕ್ರೋಧ ಮಾನ ಮಾಯಾ ಲೋಭಂಗಳುಂ ರಾಗ ದ್ವೇಷ ಮೋಹಂಗಳ ಮಗುಚ್ಚು ದಗುಚ್ಚು ಬರವುಂ ಶೋಕಮೆಂದಿವು ಮೊದಲಾಗೊಡೆಯ ದುಃಖಂಗಳವಿಲ್ಲದುದರುಪಮಾರಹಿತಮಪ್ಪುದನಳವಿಯಿಲ್ಲದುದನಾವಕಾಲಮುಂ ಕಿದದುದಂ ಪಾಪದಿಂ ಪೊರೆಯದುದುಂ ಸುಖಮನೊಡೆತಪ್ಪುದುಂ ತನ್ನಿಂ ತಾನಾದುದನಂತಪ್ಪ ಮೋಕ್ಷಸುಖ ಮನೆಯ್ದಿ ಅನಂತಜ್ಞಾನ ಅನಂತದರ್ಶನ ಅನಂತವೀರ್ಯ ಅನಂತಸುಖಮೆಂಬ ಅನಂತಚತುಷ್ಟಯದೊಳ್ ಕೂಡಿ ಲೋಕಾಲೋಕಮನೆಲ್ಲಮನೊರ್ಮೊದಲೆ ಕಾಣುತ್ತಮಜೆಯುತ್ತುಮನಂತಕಾಲಂ ಮೋಕ್ಷದೊಳಿರ್ಪರೆಂಬುದುಮಂ ಅಭಯಘೋಷ ಭಟ್ಟಾರರ್ ಲಲಿತಘಟೆಗೆ ಧರ್ಮಶ್ರವಣಂ ಗೆಯ್ಯೆ ಕೇಳ್ದು ಶ್ರೀವರ್ಧನಂ ಮೊದಲಾಗಿ ಅನಿಬರುಂ ಪಶ್ಚಾತ್ತಾಪಮಾಗೆ ಪಂಚಮಹಾಪಾತಕರೆಮುಂ ಪೊಲ್ಲಕೆಯ್ದೆಮುಂ ಭಟ್ಟಾರರುಂ ಕೊಂದೆಮುಮವರ್ ತಪದ ಮಹಾತ್ಮ್ಯದಿಂದಂ ಬರ್ದುಂಕಿದರೆಂದನಿಬರುಂ ಮನದೆ ಬಗೆದೀಗೆಯ್ವ ಪಾಪಮಿಂತಲ್ಲದೆ ಪಿಂಗದಿದರ ಕಾಲಡಿಗಳನೆಮ್ಮ ತಲೆಗಳೆಂಬ ತಾಮರೆಯ

ಹೆದರಿಕೆಯೂ ಪ್ರೀತಿಯಪರ ಒಡನಾಟ ಅಗಲಿಕೆಗಳೂ ಶರೀರಕ್ಕೂ ಮನಸ್ಸಿಗೂ ಬರತಕ್ಕ ಸಹಜವಾಗಿರುವ ದುಃಖಿಗಳೂ ಆಹಾರ, ಭಯ, ಮೈಥುನ, ಪರಿಗ್ರಹಗಳೂ ವಾತ, ಪಿತ್ತ, ಕಫ, ಕೆಮ್ಮು, ಉಬ್ಬಸ, ಜ್ವರ, ಅಜೀರ್ಣ, ವಾಂತಿ, ಭೇದಿ, ಕಣ್ಣುನೋವು, ಹೊಟ್ಟೆನೋವು, ಒಡೆಯುಮಿಕೆ, ಸೆಳತ, ಭಗಂದರ, ಕುಷ್ಠ, ಕ್ಷಯ, ಗಂಡ, ತಲೆನೋವು- ಎಂದು ಇವೇ ಮುಂತಾಗಿರುವ ಐದುಕೋಟಿ ಅರುವತ್ತೆಂಟು ಲಕ್ಷದ ತೊಂಬತೊಂಬತ್ತು ಸಾವಿರದ ಇನ್ನೂರೆಂಬತ್ತು ನಾಲ್ಕು (೫,೬೮,೯೯,೨೦೪) ಬಗೆಯ ರೋಗಗಳೂ ಕೋಪ, ಅಭಿಮಾನ, ಕಪಟ, ಲೋಭಗಳೂ ಪ್ರೀತಿ ವೈರ ಮೋಹಗಳು ಮರಳಿ ಮರಳಿ ಬರುವಿಕೆ ಮತ್ತು ದುಃಖಿ-ಎಂದು ಇವೇ ಮುಂತಾಗಿರುವ ದುಃಖಿಗಳು ಇಲ್ಲದುದೇ ಮೋಕ್ಷ. ಅದು ಉಪಮೆಯಿಲ್ಲದುದು, ಅಳತೆಯಿಲ್ಲದುದು, ಯಾವ ಕಾಲದಲ್ಲಿಯೂ ಕೆಟ್ಟುಹೋಗದ ಇರುವಂಥದು, ಪಾಪದಿಂದ ತುಂಬದಿರುವಂಥದು, ಸುಖವನ್ನು ಒಟ್ಟಿಗೆ ತರುವಂಥದು, ತನ್ನಿಂದ ತಾನಾಗಿಯೇ ಆದಂಥದು, ಪುಣ್ಯಜೀವರು ಅಂತಹ ಮೋಕ್ಷದ ಸುಖವನ್ನು ಸೇರಿ ಅನಂತಜ್ಞಾನ, ಅನಂತದರ್ಶನ, ಅನಂತವೀರ್ಯ, ಅನಂತಸುಖ-ಎಂಬ ನಾಲ್ಕು ಬಗೆಯ ಅನಂತ (ಕೊನೆಯಿಲ್ಲದವು)ಗಳಲ್ಲಿ ಸೇರಿ, ಲೋಕವನ್ನೂ ಲೋಕವಲ್ಲದವುಗಳನ್ನೂ ಒಟ್ಟಿಗೇ ಕಾಣುತ್ತಲೂ ತಿಳಿಯುತ್ತಲೂ ಅನಂತಕಾಲದ ತನಕ ಮೋಕ್ಷದಲ್ಲಿರುತ್ತಾರೆ-ಎಂಬ ಸಂಗತಿಯನ್ನು ಅಭಯಘೋಷ ಋಷಿಗಳು ಲಲಿತಘಟಿಗ ಧರ್ಮೋಪದೇಶಮಾಡುತ್ತ ತಿಳಿಸಿದರು. ಇದನ್ನೆಲ್ಲ ಲಲಿತಘಟೆಯ ರಾಜಕುಮಾರರು ಕೇಳಿದರು. ಶ್ರೀವರ್ಧನ ಮೊದಲಾದ ಅವರೆಲ್ಲರೂ ಪಶ್ಚಾತ್ತಾಪಗೊಂಡರು. "ನಾವು ಪಂಚಮಹಾಪಾಪ ಮಾಡಿದವರಾಗಿದ್ದೇವೆ. ಕೆಟ್ಟದನ್ನು ಮಾಡಿದವರೂ ಋಷಿಗಳನ್ನು ಕೊಂದವರೂ ಆಗಿದ್ದೇವೆ. ಅವರು ತಮ್ಮ ತಪಸ್ಸಿನ ಮಹತ್ತ್ವದಿಂದ ಬದುಕಿದರು" ಎಂದು ಅವರೆಲ್ಲರೂ ಮನಸ್ಸಿನಲ್ಲಿ ಭಾವಿಸಿಕೊಂಡರು. "ನಾವು ಮಾಡಿದ ಈ ಪಾಪ

ಪೂಗಳಿಂದರ್ಚಿಸದೊಡಲ್ಲದೆ ಪಾಪಂ ಪಿಂಗದೆಂದು ಬಗೆದು ಕೈದುಗಳತ್ತ ಕೈಯಂ ನೀಡಲ್ ಬಗೆವನ್ನೆಗಂ ಭಟ್ಟಾರರ್ ವಾರಿಸಿದರಂತು ಬಗೆಯಲ್ಬೇಡೆಂದೊಡೆ ಶ್ರೀವರ್ಧನ ಕುಮಾರನಾಮೇನಂ ಬಗೆದೊಮೆಂದೊಡೆ ನೀಮುಂ ನಿಮ್ಮ ತಲೆಗಳನರಿದಮ್ಮ ಕಾಲಡಿ ಗಳನರ್ಚಿಸುವಮೆಂದು ಬಗೆದಿರೆಂದೊಡಿಂತು ಮನದೆ ಬಗೆದುದನಾರಾನುಮಱಿವರೊಳರೆ ಎಂದ ನಿಬರುಂ ಚೋದ್ಯಂಬಟ್ಟು ಭಟ್ಟಾರರ್ಗ್ಗೆಱಗಿ ಪೊಡೆವಟ್ಟು ಶ್ರೀವರ್ಧನ ಕುಮಾರನೆಂದಂ ಭಟ್ಟಾರಾ ನಿಮ್ಮಡಿಯನೆಮ್ಮ ತಲೆಗಳಿಂದರ್ಚಿಸದಾಗಳಿಮ್ಮಗೆಯ್ದ ಪಾಪಮೆಂತು ಕಿಡುಗುಮೆಂದೊಡಾ ಪಾಂಗಿನಿಂ ಕಿಡದೆನೆಯಂತಪ್ಪೊಡೆ ದೀಕ್ಷೆಯಂ ದಯೆಗೆಯ್ಮಮೆಂದೊಡೆ ಭಟಾರರೆಂದರೊಳ್ಳಿತ್ತಂ ಬಗೆದಿರ್ ನಿಮಗೆಲ್ಲರ್ಗ್ಗಂ ಕಿಱಿದೆಯಾಯುಷ್ಯಮೆಂದೊಡೆ ಶ್ರೀವರ್ಧನ ಕುಮಾರನ ತಮ್ಮಂ ಮೂವರ್ತಿರ್ವರಿಂ ಕಿಱಿಯೊಂ ನಂದಿಮಿತ್ರನೆಂಬೊಂ ಭಟಾರರ ಮಾತಂ ಕೇಳ್ದು ನಕ್ಕಿಂತೆಂದನಾಮೆಲ್ಲಂ ಕೂಸುಗಳೆಮುಂ ನವಯೌವನರಮುಂ ತೇಜದೊಳಂ ಸತ್ವದೊಳಂ ಬಲಪರಾಕ್ರಮದೊಳಂ ಕೂಡಿದೆವೆಮಗೆಲ್ಲೊರ್ಗ್ಗಂ ಕಿಱಿದೆಯಾಯುವ್ಯಮೆಂಬುದನೆಂತು ನಂಬಲಕ್ಕುಮೆಂದೊಡೆ ಭಟಾರರೆಂದರ್ ನೀನೇಕೆ ನಕ್ಕಪ್ಪೆಯಮ್ಮಾ ನಿಮಗೆಲ್ಲರ್ಗ್ಗಮಿರ್ಪತ್ತೊಂದು ದಿವಸಮಾಯುಷ್ಯಂ ನೀರದೆಸೆಯಿಂದಂ ನಿಮಗೆ ಸಾವಕ್ಕುಮೆಂದೊಡೆ ಶ್ರೀವರ್ಧನ ಕುಮಾರನೆಂದಂ

ಪರಿಹಾರವಾಗಬೇಕಾದರೆ, ಇವರ ಪಾದಗಳನ್ನು ನಮ್ಮ ತಲೆಗಳೆಂಬ ತಾವರೆ ಹೂಗಳಿಂದ ಅರ್ಚಿಸಬೇಕು. ಅದಲ್ಲದೆ, ಪಾಪ ಹಿಂಗಲಾರದು" ಎಂದು ಭಾವಿಸಿ ತಮ್ಮ ತಲೆಗಳನ್ನು ಕಡಿದುಕೊಳ್ಳಲಿಕ್ಕಾಗಿ ಆಯುಧಗಳ ಕಡೆಗೆ ಕೈಗಳನ್ನು ನೀಡಲು ಯೋಚಿಸಿದರು. ಆಗ ಋಷಿಗಳು "ಹಾಗೆ ಯೋಚಿಸುವುದು ಬೇಡ" ಎಂದು ತಡೆದರು. ಶ್ರೀವರ್ಧನ ಕುಮಾರನು "ನಾವು ಏನು ಯೋಚಿಸಿದ್ದೇವೆ?" ಎಂದು ಕೇಳಲು, ಋಷಿಗಳು - "ನೀವು ನಿಮ್ಮ ತಲೆಗಳನ್ನು ಕತ್ತರಿಸಿ ನಮ್ಮ ಪಾದಗಳನ್ನು ಅರ್ಚಿಸೋಣವೆಂದು ಯೋಚಿಸಿದ್ದೀರಿ" ಎಂದು ಹೇಳಿದರು. ಆಗ ಅವರೆಲ್ಲರೂ - "ಹೀಗೆ ಮನ್ಸಸಿನೊಳಗೆ ಯೋಚಿಸಿದುದನ್ನು ತಿಳಿಯುವವರು ಯಾರಾದರೂ ಇರುವರೆ!" ಎಂದು ಆಶ್ಚರ್ಯಪಟ್ಟರು. ಋಷಿಗಳಿಗೆ ಸಾಷ್ಟಾಂಗ ವಂದನೆ ಮಾಡಿ, ಶ್ರೀವರ್ಧನ ಕುಮಾರನು - "ಪೂಜ್ಯರೇ, ನಿಮ್ಮ ಪಾದವನ್ನು ನಮ್ಮ ತಲೆಗಳಿಂದ ಪೂಜಿಸದಿದ್ದಲ್ಲಿ ನಾವು ಮಾಡಿದ ಪಾಪ ಹೇಗೆ ಪರಿಹಾರವಾದೀತು?" ಎಂದು ಕೇಳಿದನು. "ಆ ರೀತಿಯಿಂದ ಪರಿಹಾರವಾಗದು" ಎಂದು ಅವರು ಹೇಳಲು, "ಹಾಗಾದರೆ ದೀಕ್ಷೆಯನ್ನು ದಯಪಾಲಿಸಿರಿ" ಎಂದನು. ಋಷಿಗಳು-"ನೀವು ಒಳ್ಳೆಯದನ್ನೇ ಯೋಚಿಸಿದಿರಿ; ನಿಮಗೆಲ್ಲ ಆಯುಷ್ಯವಿರುವುದು ಸ್ವಲ್ಪವೇ" ಎಂದು ಹೇಳಿದರು. ಶ್ರೀವರ್ಧನ ಕುಮಾರನ ತಮ್ಮನೂ ಮೂವತ್ತೆರಡು ಮಂದಿ ಸೋದರರಲ್ಲಿ ಕಿರಿಯವನೂ ಆದ ನಂದಿಮಿತ್ರನೆಂಬವನು ಅಭಯಘೋಷ ಋಷಿಗಳ ಮಾತನ್ನು ಕೇಳಿ ನಕ್ಕು ಹೀಗೆ ಹೇಳಿದನು-"ನಾವೆಲ್ಲರೂ ಚಿಕ್ಕವರಾಗಿದ್ದೇವೆ. ಹೊಸ ತರುಣರೂ ಆಗಿದ್ದೇವೆ. ತೇಜಸ್ಸು, ಸತ್ವ, ಶಕ್ತಿ, ಸಾಮರ್ಥ್ಯಗಳಿಂದ ಕೂಡಿದವರಾಗಿದ್ದೇವೆ. ನಮಗೆಲ್ಲರಿಗೂ ಆಯುಷ್ಯ ಸ್ವಲ್ಪವೇ ಇರುವುದೆಂಬುದನ್ನು ಹೇಗೆ ನಂಬಬಹುದು?" ಈ ರೀತಿ ಕೇಳಿದಾಗ ಋಷಿಗಳು- "ನೀನು ಯಾಕೆ ನಗುತ್ತಿದ್ದಿಯಪ್ಪಾ! ನಿಮಗೆಲ್ಲರಿಗೂ ಇನ್ನು ಇಪ್ಪತ್ತೊಂದು ದಿವಸ ಆಯುಷ್ಯವಿರುವುದು. ನೀರಿನಿಂದ ನಿಮಗೆ ಮರಣವುಂಟಾಗುವುದು" ಎಂದು ಹೇಳಿದರು. ಆಗ ಶ್ರೀವರ್ಧನ ಕುಮಾರನು- "ಪೂಜ್ಯರೇ, ನಮಗೆ ಇಪ್ಪತ್ತೊಂದು ದಿವಸ ಮಾತ್ರ ಆಯುಷ್ಯವೆಂಬುದಕ್ಕೆ

ಭಟಾರಾ ಎಮಗಿರ್ಪತ್ತೊಂದು ದಿವಸಮಾಯುಷ್ಯಮೆಂಬುದರ್ಕೆ ಸಾಭಜ್ಞಾನಮೇನೆಂದು ಬೆಸಗೊಂಡೊಡೆ ಭಟಾರರೆಂದರ್ ನೀಮೀಗಳ್ ಪೊಜಲ್ಗೆ ಪೋಪಾಗಳ್ ನಿಮಗೆರಬ್ಮಾಳಿಂಗ ನಾಗಂಗಳ್ ಪೆಡೆಗಳನೆತ್ತಿ ನಾಲಗೆಗಳಂ ಪೊಳೆಯಿಸುತ್ತಂ ಬಂದೂಡೆ ನೀವೊದಜೆಯುವಂ ಬಗ್ಗಿಸಿದೂಡದೃಶ್ಯಂಗಳಾಗಿ ಪೋಕುಮಿದೊಂದು ಸಾಭಜ್ಞಾನಂ ಮತ್ತಂತೆ ಪೋಪಾಗಳೊಂದು ಕಜುಗೂಸು ಕೋಲಂ ಪಿಡಿದು ನಿಮ್ಮಂ ಬಡಿಯಲ್ಕೆಂದು ಬಂದೊಡದಱ ಕೆಯ್ತಮಂ ಕಂಡು ನೀಮುಂ ನಕ್ಕೊಡೆ ನಿಮ್ಮ ನೋಡೆ ನೋಡೆ ಭಯಂಕರವಪ್ಪ ಪಿರಿದೂಂದು ಬೇತಾಳರೂಪಂ ಕೈಕೊಂಡಾಕಾಶಂ ಬರೆಗಂ ಬಳೆದದ್ಭುತಮಕ್ಕುಮಿದೊಂದು ಸಾಭಜ್ಞಾನಂ ಮತ್ತಂತೆ ಪೋಪನ್ನೆಗಂ ತೊಜೆತೀವುಗುಮಿದೊಂದು ಸಾಭಜ್ಞಾನಂ ಮತ್ತಮಿಂದಿನಿರುಳ್ ನಿಮ್ಮ ತಾಯ್ ನಿಮ್ಮ ಮೂವತ್ತಿರ್ವರುಮಂ ರಾಕ್ಷಸಂ ನುಂಗಿತಿಂಬುದಂ ಕನಸುಗಂಡು ಪೇಟ್ಗುಮಿದೊಂದು ಸಾಭಜ್ಞಾನಮೆಂದು ಪೇಬೊಡೆ ಅನಿಬರುಂ ಭಟಾರರಂ ವಂದಿಸಿ ತಮ್ಮ ಪೊಬಲ್ಗೆ ಪೋಪಾಗಳ್ ಭಟಾರರ್ ಪೇಟ್ದುದಲ್ಲಮಂ ಪೇಟ್ದ ಪಾಂಗಿನೊಳೆ ಬಟ್ಟೆಯೊಳ್ ಪೋಗುತ್ತುಂ ಕಂದು ಪ್ರತ್ಯಕ್ಷಮಾಗಿ ಮತ್ತಿರುಳ್ ತಮ್ಮ ಮೂವತ್ತಿರ್ವರುಮಂ ರಾಕ್ಷಸಂ ನುಂಗಿದುದಂ ತಾಯ್ ಕನಸುಗಂಡುದಂ ತಮಗೆ ನೇಸರ್ಮೂಡೆ ಪೇಬೊಡೆ ನಂಬುಗೆಯಾಗಿ ಉಬ್ಬೆಗಂಬಟ್ಟಂತಿರ್ಪನ್ನೆಗಂ ವರ್ಧಮಾನ ಭಟ್ಟಾರರ ತೀರ್ಥಂ ವಿಹಾರಿಸುತ್ತುಂ ಕೌಶಂಬಿಗೆ ವಂದೊಡೆ ಲಲಿತಘಟೆ ಪರಿದರ್ಚನೆಯಂ ಕೊಂದು ಪೋಗಿ ಭಟಾರರನರ್ಚಿಸಿ ಬಂದಿಸಿ ಧರ್ಮಶ್ರವಣಾನಂತರಮಿಂತೆಂದು ವರ್ಧಮಾನ

ಕುರುಹೇನು? ಎಂದು ಕೇಳಿದನು. ಋಷಿಗಳು ಹೇಳಿದರು- "ನೀವೀಗ ಪಟ್ಟಣಕ್ಕೆ ಹೋಗುವಾಗ ನಿಮ್ಮೆದುರಿಗೆ ಎರಡು ಕಾಳಿಂಗಸರ್ಪಗಳು ಪೆಡೆಗಳನ್ನೆತ್ತಿ ನಾಲಗೆಗಳನ್ನು ಹೊರಳಿಸುತ್ತ ಬರುವುವು. ಆಗ ನೀವು ಬೊಬ್ಬಿಟ್ಟು ಅವನ್ನು ಬೈದರೆ ಮಾಯವಾಗಿ ಹೋಗುವುವು. ಇದು ಒಂದು ಕುರುಹು. ಮತ್ತೆ ಹಾಗೆಯೇ ಹೋಗುತ್ತಿರುವಾಗ ಒಂದು ಚಿಕ್ಕ ಮಗು ಕೈಯಲ್ಲಿ ಕೋಲನ್ನು ಹಿಡಿದುಕೊಂಡು ನಿಮ್ಮನ್ನು ಹೊಡೆಯುವುದಕ್ಕೆ ಬರುವುದು. ಅದರ ಕೆಲಸವನ್ನು ಕಂಡು ನಕ್ಕರೆ, ನೀವು ನೋಡು ನೋಡುತ್ತಿದ್ದಂತೆಯೇ ಪಪರಿಕೆಯನ್ನು ಉಂಟುಮಾಡುವ ದೊಡ್ಡದಾದ ಒಂದು ಬೇತಾಳದ ರೂಪವನ್ನು ತಾಳಿ ಆಕಾಶದವರೆಗೂ ಬೆಳೆದು ದೊಡ್ಡದಾಗಿ ಮಾಯವಾಗುವುದು-ಇದೂ ಒಂದು ಕುರುಹು. ಮತ್ತೆ ಹಾಗೆಯೇ ನೀವು ಹೋಗುತ್ತಿರುವಾಗ ನದಿಯು ನೆರೆಯಿಂದ ತುಂಬಿ ಹರಿಯುವುದು - ಇದು ಇನ್ನೊಂದು ಕುರುಹು. ಆಮೇಲೆ ಇಂದಿನ ರಾತ್ರಿ ನಿಮ್ಮ ತಾಯಿ ನಿಮ್ಮನ್ನು ಮೂವತ್ತೆರಡು ಮಂದಿಯನ್ನೂ ರಾಕ್ಷಸನು ನುಂಗಿ ತಿನ್ನುವುದನ್ನು ಕನಸಿನಲ್ಲಿ ಕಂಡು, ತಿಳಿಸುವಳು-ಇದು ಒಂದು ಕುರುಹು" ಎಂದು ಹೇಳಿದರು. ಆಗ ಅವರೆಲ್ಲರೂ ಋಷಿಗಳಿಗೆ ನಮಸ್ಕರಿಸಿ ತಮ್ಮ ಪಟ್ಟಣದ ಕಡೆಗೆ ಹೊರಟರು. ಹೋಗುವಾಗ, ಋಷಿಗಳು ಹೇಳಿದುದೆಲ್ಲವನ್ನೂ ಹೇಳಿದ ರೀತಿಯಲ್ಲಿಯೇ ತಮ್ಮ ದಾರಿಯಲ್ಲಿ ಹೋಗುತ್ತ ಕಣ್ಣೆದುರಿನಲ್ಲಿಯೇ ಕಂಡರು. ಆಮೇಲೆ ರಾತ್ರಿಯಲ್ಲಿ ತಾವು ಮೂವತ್ತೆರಡು ಮಂದಿಯನ್ನೂ ರಾಕ್ಷಸನು ನುಂಗಿದುದನ್ನು ತಾಯಿ ಕನಸಿನಲ್ಲಿ ಕಂಡುದನ್ನು ತಮಗೆ ಸೂರ್ಯೋದಯದ ವೇಳೆಯಲ್ಲಿ ಹೇಳಿದುದರಿಂದ ಅವರಿಗೆ ನಂಬುಗೆಯುಂಟಾಯಿತು. ಅವರು ಉದ್ವೇಗಗೊಂಡವರಾಗಿ ಹೀಗೆಯೇ ಇರುತ್ತಿರಲು, ವರ್ಧಮಾನ ತೀರ್ಥಂಕರರ ಧರ್ಮಸಭೆ ಸಂಚಾರ ಮಾಡುತ್ತ ಕೌಶಂಬಿಗೆ

ಭಟ್ಟಾರರಂ ಬೆಸಗೊಂದರ್ ಭಟಾರಾ ಎಮಗಾಯುಷ್ಯಮೆನಿತುಂಟೆಂದು ಬೆಸಗೊಂಡೊಡೆ ಭಟಾರರೆಂದರ್ ನಿಮಗನಿಬರ್ಗಂ ಕಿಜೆದೆ ಆಯುಷ್ಯಮೆಂದು ವೇಱೊಡಾಮೇನೊ ಭವ್ಯರೆಮೊ ಅಭವ್ಯರೆಮೊ ಎಂದು ಬೆಸಗೊಂಡೊಡೆ ನೀಮೆಲ್ಲಂ ಭವ್ಯರಿರ್ ಭವ್ಯರಿರಾದೊಡಂ ಪರಮ ಶುದ್ಧ ಸಹಜ ದರ್ಶನ ಜ್ಞಾನ ಚಾರಿತ್ರಂಗಳಂ ಕೈಕೊಂಡು ನೆಗಟ್ಟಿೞ್ದಲ್ಲದೆ ಮೋಕ್ಷಮಾಗದೆಂತು ಸ್ವರ್ಣಪಾಷಾಣದೊಳ್ ಸುವರ್ಣಮುಂಟಾಗಿಯುಂ ದಹನ ತಾಪನ ಪಿಂಡಿಬದ್ಧನಾದಿ ಕ್ರಿಯೆವೆಱದನ್ನೆಗಂ ಪೊನ್ನಾಗದಂತೆ ತಪದಿಂದಲ್ಲದೆ ಮೋಕ್ಷಮಾಗದೆಂದು ಪೇೞ್ದೊಡನಿಬರುಂ ವರ್ಧಮಾನ ಭಟ್ಟಾರರ್ಗೆ ಶಿಷ್ಯರಾಗಿ ತಪಂಬಟ್ಟು ಪಂಚಮಹಾವ್ರತಂಗಳನೇಜೆಸಿ ಕೊಂಡು ಪ್ರಾಯೋಪಗಮನದ ಮರಣದ ವಿಧಾನಮಂ ಬೆಸಗೊಂಡೊಡೆ ಭಟಾರರಿಂತೆಂದು ಪೇೞ್ದರ್ :

ಶ್ಲೋಕ ॥ ಸ್ಥಿತಸ್ಯ ವಾ ನಿಷಣ್ಣಸ್ಯ ಯಾವತ್ ಸುಪ್ತಸ್ಯ ವಾ ಪುನಃ
ಸರ್ವಾಭೀಷ್ಟ ಪರಿತ್ಯಾಗಃ ಪ್ರಾಯೋಪಗಮನಂ ಸ್ಮೃತಂ ॥

ಇಂತುಟಾ ಪ್ರಾಯೋಪಗಮನದ ಲಕ್ಷಣಮೆಂದು ಭಟಾರರ್ ವಕ್ಕಾಣಿಸಿ ಪೇೞ್ ಕೇೞ್ದಜೆದು ಲಲಿತಘಟೆಯನಿಬರುಂ ಭಟಾರರ ಪಕ್ಕದೆ ಚತುರ್ವಿಧಮಪ್ಪಾಹಾರಮುಂ ಶರೀರಮುಮಂ ಯಾವಜ್ಜೀವಂ

ಬಂದಿತು. ಲಲಿತಘಟಿ ಪೆಬ್ಬಾದ ಪೂಜಾವಸ್ತುಗಳನ್ನು ತೆಗೆದುಕೊಂಡು ಹೋಗಿ ಋಷಿಗಳನ್ನು ಪೂಜಿಸಿ ಧರ್ಮೋಪದೇಶವನ್ನು ಕೇಳಿದನಂತರ ಅವರನ್ನು ಹೀಗೆ ಕೇಳಿದರು- "ಪೂಜ್ಯರೇ, ನಮಗೆ ಆಯುಷ್ಯವೆಷ್ಟಿದೆ?" ಆಗ ವರ್ಧಮಾನ ಭಟಾರರು- "ನಿಮಗೆ ಅಷ್ಟು ಮಂದಿಗೂ ಆಯುಷ್ಯವಿರುವುದು ಸ್ವಲ್ಪವೆ" ಎಂದು ಹೇಳಿದರು. ಅದಕ್ಕೆ ಅವರು- "ನಾವು ಭವ್ಯರೊ (ಮೋಕ್ಷಕ್ಕೆ ಅರ್ಹರೊ) ಅಭವ್ಯರೋ?" ಎಂದು ಕೇಳಿದರು. ಭಟಾರರು- "ನೀವೆಲ್ಲರೂ ಭವ್ಯರಾಗಿದ್ದೀರಿ. ಭವ್ಯರೇ ಆಗಿದ್ದರೂ ಶ್ರೇಷ್ಠವೂ ಪರಿಶುದ್ಧವೂ ಸಹಜವೂ ಆಗಿರುವ ದರ್ಶನ-ಜ್ಞಾನ-ಚಾರಿತ್ರಗಳನ್ನು ಸ್ವೀಕರಿಸಿಕೊಂಡು ಆಚರಿಸಿದಲ್ಲದೆ ಮೋಕ್ಷ ಲಭಿಸಲಾರದು. ಚಿನ್ನದ ಕಲ್ಲಿನಲ್ಲಿ (ಅದುರಿನಲ್ಲಿ) ಚಿನ್ನವಿದ್ದರೂ ಸುಡುವುದು, ಕಾಯಿಸುವುದು, ಮುದ್ದೆಗಟ್ಟುವುದು-ಮುಂತಾದ ಕ್ರಿಯೆಗಳನ್ನು ಅದು ಪಡೆಯುವವರೆಗೂ ಚಿನ್ನವಾಗುವುದಿಲ್ಲ, ಹಾಗೆಯೇ, ತಪಸ್ಸನ್ನು ಆಚರಿಸದೆ ಮೋಕ್ಷ ಪ್ರಾಪ್ತಿಯಾಗದು" ಎಂದು ಹೇಳಿದರು. ಆಗ ಅವರೆಲ್ಲರೂ ವರ್ಧಮಾನ ತೀರ್ಥಂಕರರಿಗೆ ಶಿಷ್ಯರಾಗಿ ತಪಸ್ಸನ್ನು ಸ್ವೀಕರಿಸಿದರು. ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯೆ, ಅಪರಿಗ್ರಹ ಎಂಬ ಐದು ಮಹಾವ್ರತಗಳನ್ನು ಕೈಕೊಂಡು ಪ್ರಾಯೋಪಗಮನದ ಪದ್ಧತಿಯಲ್ಲಿ ಮರಣದ ವಿಧಾನ ಹೇಗೆಂದು ಕೇಳಲು ಭಟಾರರು ಹೀಗೆಂದರು- (ನಿಂತಿರುವವನದಾಗಲಿ ಕುಳಿತಿರುವವನದಾಗಲಿ ಮತ್ತು ಮಲಗಿರುವವನ ದಾಗಲಿ ಯಾವಾಗ ಎಲ್ಲ ಆಕಾಂಕ್ಷೆಗಳನ್ನು ಬಿಟ್ಟುಬಿಡುವುದು ಆಗುತ್ತದೋ ಅದು [illegible] ಪಗಮನವೆಂದು ತಿಳಿಯಬಹುದು). ಆ ಪ್ರಾಯೋಪಗಮನದ ಲಕ್ಷಣ ಈ [illegible] ಭಟಾರರು ವ್ಯಾಖ್ಯಾನಿಸಿ ಹೇಳಲು, ಅವರೆಲ್ಲರೂ ಕೇಳಿ ತಿಳಿದುಕೊಂಡರು. ಲಲಿತಘಟೆಯವರೆಲ್ಲರೂ ಋಷಿಗಳ ಬಳಿಯಲ್ಲಿ ನಾಲ್ಕು ವಿಧದ ಆಹಾರವನ್ನೂ ಶರೀರವನ್ನೂ ಜೀವವಿರುವವರೆಗೂ ಬಿಟ್ಟು ಋಷಿಗಳಿಗೆ ವಂದಿಸಿ ಹೋಗಿ ವಿಶಾಳೆ ಎಂಬ

ತೊಱೆದು ಭಟಾರರಂ ಬಂದಿಸಿ ಪೋಗಿ ವಿಶಾಳೆಯೆಂಬ ತೊಱೆಯ ತಡಿಯೊಳನಿ ಬರುಮೇಕಪಾರ್ಶ್ವದೊಳ್ ಪಟ್ಟಿರ್ದು ಕೈಯುಂ ಕಾಲುಮನಾದಿಸದೊಂದು ಕೆಲದಿಂದೊಂದು ಕೆಲಕ್ಕ ಮಗುಚದೆ ಕುಳ್ಳಿರದೆ ನಿಂದಿರದೆ ನುಡಿಯದೆ ಕೆಲಂಗಳಂ ನೋದದಿಂತು ಪ್ರಾಯೋಪಗಮನಂಗೆಯ್ದು ಪದಿನಯ್ದು ದಿವಸಂ ಮೆಯ್ಯಂ ತೊಱೆದಿರ್ದೊರನ್ನೆಗಂ ಮೇಗೆ ಪಿರಿದೊಂದು ಮುಱಿಕೊಂದು ಪೊರಂ ಬಂದವರನೆಱಿಮಕೊಂಡು ಪೋಗಿ ಪಿರಿದೊಂದು ಮಡುವಿನೊಳಿಕ್ಕಿದೊಡೆ ನೀರೊಳಗಿರ್ದು ವೋಹಿಸದ ಬುದ್ದಿಯನೊಡೆಯರಾಗಿ ದೇವರಂ ಜಾನಿಸುತ್ತಂ ಪಂಚನಮಸ್ಕಾರಮಂ ಮನದೊಳುಚ್ಚರಿಸುತ್ತಂ ಶುಭಧ್ಯಾನದೊಳ್ ಪರಿಣತರಾಗಿ ದರ್ಶನ ಜ್ಞಾನ ಚಾರಿತ್ರಂಗಳನಾರಾಧಿಸಿ ಮುಡಿಪಿ ಅಯ್ವೂರ್ವರುಂ ವೈಜಯಂತಮೆಂಬ ಪಂಚಾಣುತ್ತರೆಯೊಳುತ್ಕೃಷ್ಟಮಪ್ಪ ಮೂವತ್ತುಮೂಱು ಸಾಗರೋಪಮಾಯುಷ್ಯಮನೊಡೆಯೊರೇಕಹಸ್ತಪ್ರಮಾಣ ಶ್ವೇತವರ್ಣದೊಳಹಮಿಂದ್ರ ದೇವರಾಗಿ ಪುಟ್ಟಿದರ್ ಮತ್ತೆ ಪೆಱರುಂ ರತ್ನತ್ರಯಂಗಳನಾರಾಧಿಸುವಾರಾಧಕರ್ಕಳುಂ ಲಲಿತಘಟೆಯಂ ಮನದೊಳ್ ಬಗೆದು ಚತುರ್ವಿಧಮಪ್ಪುಪಸರ್ಗಮಂ ಪಸಿವುಂ ನೀರಟ್ಟೆ ಮೊದಲಾಗೊಡೆಯವಿರ್ಪತ್ತೆರಡು ಪರೀಷಹಂಗಳಂ ಸೈರಿಸಿ ಶುಭ ಪರಿಣಾಮದಿಂ ಸಮ್ಯಗ್‌ದರ್ಶನ ಜ್ಞಾನ ಚಾರಿತ್ರಂಗಳನಾರಾಧಿಸಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ.

ಹೊಳೆಯದಡದಲ್ಲಿ ಅವರೆಲ್ಲರೂ ಒಂದು ಮಗ್ಗುಲಲ್ಲಿ ಮಲಗಿದರು. ಕೈಕಾಲುಗಳನ್ನು ಅಡಿಸದೆ, ಒಂದು ಮಗ್ಗುಲಿಂದ ಮತ್ತೊಂದು ಮಗ್ಗುಲಿಗೆ ಹೊರಳದೆ, ಕುಳಿತಿರದೆ, ನಿಂತಿರದೆ, ಮಾತಾಡದೆ ಅತ್ತಿತ್ತ ನೋದದೆ-ಹೀಗೆ ಪ್ರಾಯೋಪಗಮನವವನ್ನು ಮಾಡಿ ಹದಿನೈದು ದಿನ ಶರೀರದ ಗೊಡವೆಯನ್ನೇ ಬಿಟ್ಟಿದ್ದರು. ಹೀಗಿರಲು ಮೇಲೆ ದೊಡ್ಡದೊಂದು ಮಳೆಸುರಿದು, ಮಹಾಪ್ರವಾಹ ಬಂದು, ಅವರನ್ನು ಎಳೆದುಕೊಂಡು ಹೋಗಿ ದೊಡ್ಡದೊಂದು ಮಡುವಿಗೆ ಹಾಕಿತು. ಅವರು ಅಲ್ಲಿ ನೀರಿನೊಳಗೆ ಇದ್ದುಕೊಂಡು ಅಸೆಪಡದ ಬುದ್ಧಿಯುಳ್ಳರಾಗಿ ದೇವರನ್ನು ಧ್ಯಾನ ಮಾಡುತ್ತ ಪಂಚನಮಸ್ಕಾರ ಮಂತ್ರಗಳನ್ನು ಮನಸ್ಸಿನಲ್ಲಿಯೇ ಉಚ್ಚಾರಣೆ ಮಾಡುತ್ತ ಶುಭವಾದ ಧ್ಯಾನದಲ್ಲಿ ಕುಶಲರಾಗಿ ದರ್ಶನ-ಜ್ಞಾನ-ಚಾರಿತ್ರಗಳೆಂಬ ರತ್ನತ್ರಯವನ್ನು ನೆರವೇರಿಸಿ ಸತ್ತರು. ಅಯ್ನೂರುಮಂದಿಯೂ ಸತ್ತು ವೈಜಯಂತ ಎಂಬ ಐದು ಅನುತ್ತರೆಗಳಲ್ಲಿ ಶ್ರೇಷ್ಠವಾದ ಸ್ವರ್ಗದಲ್ಲಿ ಮೂವತ್ತಮೂರು ಸಾಗರದಷ್ಟು ಆಯುಷ್ಯವುಳ್ಳವರಾಗಿ ಒಂದು ಮೊಳ ಅಳತೆಯುಳ್ಳ ಬಿಳಿ ಬಣ್ಣವುಳ್ಳ ಅಹಮಿಂದ್ರ ಎಂಬ ದೇವರಾಗಿ ಹುಟ್ಟಿದರು. ರತ್ನತ್ರಯವನ್ನು ಆರಾಧಿಸತಕ್ಕ ಇನ್ನಿತರರೂ ಲಲಿತಘಟೆಯನ್ನು ಮನಸ್ಸಿನಲ್ಲಿ ಭಾವಿಸಿ ನಾಲ್ಕು ಬಗೆಯ (ದೇವ, ನಾರಕ, ತಿರ್ಯಕ್, ಮಾನುಷ ಎಂಬ) ಉಪಸರ್ಗಗಳನ್ನೂ (ತೊಂದರೆಗಳನ್ನೂ) ಹಸಿವು ಬಾಯಾರಿಕೆ ಮುಂತಾಗಿ ಇರುವ ಇಪ್ಪತ್ತೆರಡು ಬಗೆಯ ಪರೀಷಹಗಳನ್ನೂ ಸಹಿಸಿಕೊಂಡು ಶುಭಫಲದಿಂದ ಸಮ್ಯಗ್ದರ್ಶನ, ಸಮ್ಯಗ್‌ಜ್ಞಾನ, ಸಮ್ಯಕ್‌ಚಾರಿತ್ರಗಳನ್ನು ಆರಾಧಿಸಿ ಸ್ವರ್ಗಮೋಕ್ಷ ಸುಖಿಗಳನ್ನು ಪಡೆಯಲಿ!

೮. ಧರ್ಮಘೋಷ ಭಟಾರರ ಕಥೆ

ಧರ್ಮಘೋಷ ಭಟಾರರ ಕಥೆಯಂ ಪೇೞ್ವೆಂ :

ಗಾಹೆ ॥ ಚಂಪಾ ಎ ಮಾಸಖವಣಂ ಕರಿತ್ತು ಗಂಗಾತಟಮ್ಮಿ ತಣ್ಹಾ ಎ
ಘೋರಾ ಎ ಧಮ್ಮಘೋಸೋ ಪಡಿವಣ್ಣೋ ಉತ್ತಮಂ ಅಟ್ಠಂ ॥

[ಚಂಪಾ ಎ-ಚಂಪೆಯೆಂಬ ಪೊಲೆಲೊಳ್, ಮಾಸಖವಣಂ ಕರಿತ್ತು - ಮಾಸೋಪವಾಸಂ ಗೆಯ್ದು, ಗಂಗಾ ತಟಮ್ಮಿ-ಗಂಗಾ ಮಹಾನದಿಯ ತಡಿಯೊಳ್, ತಣ್ಹಾ ಎ-ನೀರಟ್ಕೆಯಿಂದಂ, ಘೋರಾಎ-ಆದಮಾನುಂ ಕಡಿದಪ್ಪುದಱಿಂದಂ, ಧಮ್ಮಘೋಸೋ-ಧರ್ಮಘೋಷನೆಂಬ ಭಟ್ಟಾರಕಂ, ಪಡಿವಣ್ಣೋ-ಪೊರ್ದಿದೊಂ, ಉತ್ತಮಂ ಅಟ್ಠಂ-ಮಿಕ್ಕ ದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯಂ]

ಅದೆಂತೆಂದೊಡೆ : ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಕೌಶಂಬಿಯೆಂಬುದು ನಾದಲ್ಲಿ ವಾರಣಾಸಿಯೆಂಬುದು ಪೊಲಲದನಾಳ್ವಂ ಕೀರ್ತಿಧರನೆಂಬೊನರಸನಾತನ ಮಹಾದೇವಿಯರ್ಕಳ್ ಆರತಿ ರತಿಯೆಂಬೊರಾ ಇರ್ವರ್ಗಂ ಮಕ್ಕಳ್ ಧರ್ಮಘೋಷನುಂ ಧರ್ಮಕೀರ್ತಿಯುಮೆಂಬೊರಂತವರ್ಗಳಿಪ್ಪ ವಿಷಯಕಾಮಭೋಗಂಗಳನನುಭವಿಸುತ್ತಿರ್ಪನ್ನೆಗಂ ಮತ್ತೊಂದು ದಿವಸಂ ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪೊರಾ ವಾರಣಾಸಿಗೆ ವಂದು ಬಹಿರುದ್ಯಾನವನದೊಳ್ ಸ್ಫಟಿಕ ಶಿಲಾತಲದ ಮೇಗೆ ಪಂಥಾತಿಚಾರ ನಿಯಮಂಗೆಯ್ದಿರ್ದ ಗುಣೋತ್ತಮರೆಂಬ ಭಟಾರರಂ ವನಕ್ಕೀಡೆಗೆ ವೋದ ಧರ್ಮಘೋಷನುಂ ಧರ್ಮಕೀರ್ತಿಕುಮಾರನುಂ ಕಂಡು ಬಂದಿಸಿ ಭಟಾರಾ ಎಮಗೆ ಧರ್ಮಮಂ ಪೇೞಮೆಂದೊಡೆ ಭಟಾರರಿಂತೆಂದು ಧರ್ಮಮಂ ಪೇೞ್ದರ್:

ಧರ್ಮಘೋಷ ಋಷಿಗಳ ಕಥೆಯನ್ನು ಹೇಳುವೆನು - (ಧರ್ಮಘೋಷನೆಂಬ ಋಷಿ ಚಂಪಾಪುರದಲ್ಲಿ ಮಾಸೋಪವಾಸವನ್ನು ಮಾಡಿ, ಗಂಗಾ ಮಹಾನದಿಯ ತೀರದಲ್ಲಿ ಅತ್ಯಂತ ತೀವ್ರವಾಗಿರುವ ಬಾಯಾರಿಕೆಯಿಂದ ಕೂಡಿ ಶ್ರೇಷ್ಠವಾದ ದರ್ಶನ ಜ್ಞಾನಚಾರಿತ್ರಗಳ ಆರಾಧನೆಯನ್ನು ಮಾಡಿದನು.) ಅದು ಹೇಗೆಂದರೆ - ಈ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ಕೌಶಂಬಿಯೆಂಬ ನಾಡಿದೆ. ಅಲ್ಲಿ ವಾರಣಾಸಿಯೆಂಬ ಪಟ್ಟಣವಿದೆ. ಅದನ್ನು ಕೀರ್ತಿಧರನೆಂಬ ರಾಜನು ಆಳುತ್ತಿದ್ದನು. ಅವನಿಗೆ ಆರತಿ, ರತಿ ಎಂಬವರು ರಾಣಿಯರು. ಈ ಇಬ್ಬರು ರಾಣಿಯರಲ್ಲಿ ಧರ್ಮಘೋಷ, ಧರ್ಮಕೀರ್ತಿ, ಎಂಬಿಬ್ಬರು ಮಕ್ಕಳು. ಅಂತು ಅವರು ತಮಗೆ ಇಷ್ಟವಾದ ವಿಷಯದಲ್ಲಿ ಬಯಸಿದ ಸುಖಗಳನ್ನು ಅನುಭವಿಸುತ್ತ ಇದ್ದರು. ಹೀಗಿರಲು ಗುಣೋತ್ತಮರೆಂಬ ಋಷಿಗಳು ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪತ್ತನ, ದ್ರೋಣಾಮುಖಗಳೆಂಬ ಭೂಭಾಗಗಳಲ್ಲಿ ಸಂಚಾರ ಮಾಡುತ್ತ ಬರತಕ್ಕವರು, ವಾರಾಣಸಿಗೆ ಬಂದರು. ಅಲ್ಲಿ, ಪಟ್ಟಣದ ಹೊರಗಿನ ಉದ್ಯಾನದಲ್ಲಿ ಚಂದ್ರಕಾಂತ ಶಿಲಾತಳದ ಮೇಲೆ ಕುಳಿತು ತಮ್ಮ ದಾರಿಯಲ್ಲಿ ಆಗಿರಬಹುದಾದ ಅತಿಚಾರ (ಧರ್ಮವಿರುದ್ಧವಾದ ಕೃತ್ಯ)ಗಳ ಪ್ರಾಯಶ್ಚಿತ್ತಗಳೆನಿಸಿದ ಪಂಥಾತಿಚಾರ ನಿಯಮಗಳನ್ನು ಆಚರಿಸುತ್ತಿದ್ದರು. ಆ ವೇಳೆಯಲ್ಲಿ ಉದ್ಯಾನ ಕೇಳಿಗೆಂದು ಹೋಗಿದ್ದ ಧರ್ಮಘೋಷನೂ ಧರ್ಮಕೀರ್ತಿಯೂ ಋಷಿಗಳನ್ನು ಕಂಡು ವಂದನೆಗೈದರು. "ಪೂಜ್ಯರೇ, ನಮಗೆ ಧರ್ಮೋಪದೇಶವನ್ನು ಮಾಡಿ" ಎಂದು ಕೇಳಿಕೊಂಡರು. ಆಗ ಭಟಾರರು ಈ ರೀತಿಯಾಗಿ

ವೃತ್ತ ॥ ಕೋ ಧರ್ಮಪ್ರವರೋ ದಯಾತ್ಮಸುಭಗಃ ಕಃ ಸ್ಯಾನ್ನರಃ ಪಂಡಿತಃ
ಕಾ ಯೋಷಿದ್ವಶಗಾ ಕಲಿಷ್ಯಯತಿ (?) ಚೇತ್ ಕ್ರೋಧೋSಶುಭಸ್ಯೋದಯಃ
ಕಾ S ಲಕ್ಷ್ಮೀರವಿಚಾರ ಕಾರ್ಯಘಟನಾ ಕಿಂ ಮಿತ್ರಮಾತ್ಮಾSತನಃ
ಕಿಂ ಸೌಖ್ಯಂ ಭುವಿ ಶಾಸ್ತ್ರವಾಚನಮತಿಃ ಕಾ ವಾ ಗತಿರ್ನಿರ್ವೃತಿಃ ॥

ಸಮ್ಯಕ್ತ್ವೋತ್ತಮ ಹಸ್ತಿ ಮಸ್ತಕ ಗತಃ ಸುಜ್ಞಾನಕೇತು ವ್ರಜೋ
ನಾನಾಶೀಲಗುಣವ್ರತೋರುಪೃತನಃ ಸ್ವಾಧ್ಯಾಯ ಶಂಖಧ್ವನಿಃ
ಭಾಸ್ವತ್ಸಂವರ ಭೂರಿ ಚಾರುಕವಚೋ ನಾತೀವ ತೀಕ್ಷ್ಣಾಯುಧಃ
ಸೇವ್ಯೋ ಧರ್ಮಮಹಾನೃಪೋ ಬುಧಭಟೈಃ ಸ್ವರ್ಮೋಕ್ಷವ್ಯಕ್ತಿಪ್ರದಃ ॥

ಶ್ಲೋಕ ॥ ಧರ್ಮಾರ್ಥಕಾಮಮೋಕ್ಷಾಣಾಂ ಯಸ್ಯೈಕೋSಪಿ ನ ವಿದ್ಯತೇ
ಅಜಾಗಲ ಸ್ತನಸ್ಯೈವ ತಸ್ಯ ಜನ್ಮ ನಿರರ್ಥಕಂ ॥

ವೃತ್ತ ॥ ಯೇಷಾಂ ನ ವಿದ್ಯಾ ನ ತಪೋ ನ ದಾನಂ
ನಾಪ್ಯೇವ ಶೀಲಂ ನ ಗುಣೋ ನ ಧರ್ಮಃ
ತೇ ಮರ್ತ್ಯಲೋಕೇ ಭುವಿ ಭಾರಭೂತಾ
ಮನುಷ್ಯರೂಪೇಣ ಮೃಗಾಶ್ಚರಂತಿ ॥

ಧರ್ಮವನ್ನು ವಿವರಿಸಿ ಹೇಳಿದರು- ಧರ್ಮದಲ್ಲಿ ಅತ್ಯಂತ ಶ್ರೇಷ್ಠನು ಯಾರು? - ದಯೆಯಿಂದ ಕೂಡಿದ ಆತ್ಮ ಸೌಭಾಗ್ಯವುಳ್ಳವನು. ಮನುಷ್ಯನು ಯಾವನು? - ಪಾಂಡಿತ್ಯವುಳ್ಳವನು. ಹೆಂಗುಸು ಯಾವಳು? - ವಶವರ್ತಿಯಾಗಿರುವವಳು. ಕೋಪದಿಂದ ಏನಾಗುತ್ತದೆ? - ಅಶುಭವುಂಟಾಗುತ್ತದೆ. ಅಲಕ್ಷ್ಮಿ(ದಾರಿದ್ರ್ಯ) ಯಾವುದು? - ವಿಚಾರವಿಲ್ಲದೆ ಕೆಲಸ ಮಾಡುವುದು. ತನ್ನ ಮಿತ್ರನು ಯಾವನು? - ತಾನೇ. ಲೋಕದಲ್ಲಿ ಸುಖ ಯಾವುದು? - ಶಾಸ್ತ್ರವನ್ನು ಓದುವ ಬುದ್ಧಿ. ಗತಿ (ಗುರಿ) ಯಾವುದು? - ಮೋಕ್ಷವು. ಸಮ್ಯಕ್ತ್ವವೆಂಬ ಆನೆಯ ತಲೆಯ ಮೇಲೆ ಕುಳಿತಿರುವ, ಸುಜ್ಞಾನವೆಂಬ ಧ್ವಜಸಮೂಹವುಳ್ಳ, ಹಲವು ಬಗೆಯ ಶೀಲ ಗುಣವ್ರತಗಳೆಂಬ ಸೈನ್ಯವುಳ್ಳ, ಶಾಸ್ತ್ರಾಭ್ಯಾಸವೆಂಬ ಶಂಖಿಧ್ವನಿಯುಳ್ಳ, ಹೊಳೆಯುವ ಸಂವರವೆಂಬ ಅತಿಸುಂದರವಾದ ಕವಚವುಳ್ಳ, ಅತಿ ತೀಕ್ಷ್ಣವಾದ ಆಯುಧಗಳಿಲ್ಲದ, ಸ್ವರ್ಗ ಮೋಕ್ಷಗಳ ಸ್ಥಿತಿಯನ್ನು ಕೊಡುವ, ಧರ್ಮವೆಂಬ ಮಹಾರಾಜನು ವಿದ್ವಾಂಸರೆಂಬ ಸೈನಿಕರಿಂದ ಸೇವೆಗೊಳ್ಳುವವನಾಗಿದ್ದಾನೆ. ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ನಾಲ್ಕು ವಿಧದ ಪುರುಷಾರ್ಥಗಳಲ್ಲಿ ಒಂದು ಕೂಡಾ ಯಾರಿಗೆ ಇಲ್ಲವೋ ಅವನ ಜನ್ಮ ಮೇಕೆಯ ಕೊರಳ ಮೊಲೆಯಂತೆ ಪ್ರಯೋಜನವಿಲ್ಲದುದು. ಯಾರಿಗೆ ವಿದ್ಯೆಯಿಲ್ಲವೋ ತಪಸ್ಸಿಲ್ಲವೋ ದಾನಗುಣವಿಲ್ಲವೋ ಶೀಲ ಕೂಡ ಇಲ್ಲವೋ ಧರ್ಮವಿಲ್ಲವೋ ಅವರು ಮೃತಿಹೊಂದುವ ಸ್ವಭಾವವುಳ್ಳ ಈ ಲೋಕದಲ್ಲಿ ಭಾರವಾಗಿ ಪರಿಣಮಿಸಿರುವವರು. ಅವರು ಮನುಷ್ಯರ ರೂಪದಲ್ಲಿರುವ ಮೃಗಗಳಾಗಿ ವರ್ತಿಸುತ್ತಾರೆ. ಒಂದನ್ನು ಮತ್ತೊಂದು ತಿನ್ನುತ್ತ ಕ್ರಿಮಿಗಳು ಬದುಕುತ್ತ ಇರುವುದಿಲ್ಲವೇನು? ಪರಲೋಕದ ಪ್ರಾಪ್ತಿಗೆ ವಿರೋಧವಾಗದ ರೀತಿಯಿಂದ ಯಾವನು ಜೀವಿಸುತ್ತಾನೋ ಅವನು ಸಾರ್ಥಕವಾಗಿ ಜೀವಿಸುತ್ತಾನೆ. ಯಾವ ಕಾರ್ಯದಿಂದ ಜನನಿಂದೆಯುಂಟಾಗುವುದೋ

ಶ್ಲೋಕ ॥ ಕಿಮಯಃ ಕಂ ನ ಜೀವಂತಿ ಭಕ್ಷಯಿತ್ವಾ ಪರಸ್ಪರಂ
ಪತಲೋಕಾವಿರುದ್ಧೇನ ಯೋ ಜೀವತಿ ಸ ಜೀವತಿ ॥
ಅಪವಾದೋ ಭವೇದ್ಯೇನ ಯೇನ ಚಾಪ್ರತ್ಯಯೋ ಭವೇತ್
ನರಕೋ ಗಮ್ಯತೇ ಯೇನ ತತ್ಕರ್ಮ ನ ಸಮಾಚರೇತ್ ॥

ಇಂತು ಸಂಕ್ಷೇಪದಿಂ ಭಟಾರರ್ ಧರ್ಮಮಂ ಪೇಱ್ ಕೇಳ್ದಿರ್ವ್ವರ್ಗ್ಗಂ ವೈರಾಗ್ಯಮಾಗಿ ತಾಯುಂ ತಂದೆಯುಂ ಸ್ವಜನ ಬಂಧುವರ್ಗಮುಮಂ ಬಿಡಿಸಿ ನಿಶ್ಕಲ್ಮಂಗೆಯ್ದು ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆದು ಗುಣೋತ್ತಮ ಭಟಾರರ ಪಕ್ಕದೆ ತಪಂಬಟ್ಟು ಪನ್ನೆರಡು ವರ್ಷಂಬರೆಗಂ ಗುರುಗಳೊಡನಿರ್ದು ಪ್ರಥಮಾನುಯೋಗ ಚರಣಾನುಯೋಗ ಕರಣಾನುಯೋಗ ದ್ರವ್ಯಾನುಯೋಗಂಗಳಂ ಕಲ್ತು ಶಾಸ್ತ್ರಪಾರಗರಾಗಿ ಭಟಾರರಂ ಬೆಸಗೊಂಡವರನುಮತದಿಂದಿರ್ವರುಂ ಬೇಱೆ ಬೇಱೆ ವಿಹಾರಿಸಲ್ ತಗುಳ್ದು ಗ್ರಾಮ ನಗರಬೇಡ ಖರ್ವಡ ಮದಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಚಂಪಾನಗರಕ್ಕೆ ಪೋಗಿ ತಾಮರೆಗೊಳವ ತದಿಯ ಮಱಿಯೊಳಿರ್ವರುಂ ಮಾಸೋಪವಾಸಂಗೆಯ್ದು ಪಾರಣೆಯ ದಿವಸದಂದು ಚಂಪಾನಗರದ ಶ್ರಾವಕರ್ಕಳೆಲ್ಲಂ ನಮ್ಮನೋಂತುದನಱಿವರದು ಕಾರಣದಿಂ ನಮಗೆ ಪಾರಣೆಯಂ ಮಾಟ್ಪಾಗಳಯಥಾಕೃದ ದೋಷಂ ಸಾರ್ತರ್ಕುಮದಱಿಂ ನಾವಿಲ್ಲಿ ಚರಿಗೆವ್ಗದೆ ಗಂಗೆಯ ತಡಿಯೊಳಿರ್ದ ತುಱುಪಟ್ಟಿಗೆ ಪೋಪಮೆಂದಿರ್ವರುಂ ಪೋಪರ್ ಅನ್ನೆಗಮಾ ತುರುಪಟ್ಟಿಯುಮಲ್ಲಿಂದೆರ್ದು ನಾಡೆ ಗೆಂಟು ಪೋದತ್ತು

ಮತ್ತೆ ಯಾವ ಕಾರ್ಯದಿಂದ ನರಕಕ್ಕೆ ಹೋಗಬೇಕಾಗುವುದೋ ಆ ಕಾರ್ಯವನ್ನು ಮಾಡಬಾರದು. ಹೀಗೆ ಸಂಕ್ಷೇಪವಾಗಿ ಋಷಿಗಳು ಧರ್ಮವನ್ನು ತಿಳಿಸಿದರು. ಅದನ್ನು ಕೇಳಿದ ಇಬ್ಬರಿಗೂ ವೈರಾಗ್ಯವುಂಟಾಯಿತು. ಅವರು ತಮ್ಮ ತಾಯಿ, ತಂದೆ, ಸ್ವಜನರು, ಬಂಧುಗಳ ಸಮೂಹವನ್ನು ಬಿಟ್ಟು, ಅವರಿಗೆ ಮನೋವ್ಯಥೆಯಿಲ್ಲದಂತೆ ಮಾಡಿ ಬಾಹ್ಯ ಮತ್ತು ಆಭ್ಯಂತರ ಎಂಬ ಎರಡೂ ಬಗೆಯ ಪರಿಗ್ರಹಗಳನ್ನು ತೊರೆದರು. ಗುಣೋತ್ತಮ ಋಷಿಗಳ ಬಳಿಯಲ್ಲಿ ದ್ವಾದಶವಿಧದ ತಪಸ್ಸನ್ನು ಸ್ವೀಕರಿಸಿದರು. ಹನ್ನೆರಡು ವರ್ಷಗಳವರೆಗೂ ಗುರುಗಳ ಒಟ್ಟಿಗಿದ್ದು ಪ್ರಥಮಾನುಯೋಗ, ಚರಣಾನುಯೋಗ, ಕರಣಾನುಯೋಗ, ದ್ರವ್ಯಾನುಯೋಗಗಳನ್ನು ಕಲಿತು ಶಾಸ್ತ್ರಗಳಲ್ಲಿ ಪಾರಂಗತರಾದರು. ಆಮೇಲೆ, ಋಷಿಗಳನ್ನು ಕೇಳಿಕೊಂಡು ಅವರ ಅನುಮತಿಯನ್ನು ಪಡೆದು ಇಬ್ಬರೂ ಬೇರೆ ಬೇರೆಯಾಗಿ ಸಂಚಾರಮಾಡಲು ಹೊರಟರು. ಗ್ರಾಮ, ನಗರ, ಬೇಡ, ಖರ್ವಡ, ಮಡಂಬ, ಪತ್ತನ, ದ್ರೋಣಾಮುಖಗಳಲ್ಲಿ ಸಂಚರಿಸುತ್ತ ಚಂಪಾನಗರಕ್ಕೆ ಹೋದರು. ಅಲ್ಲಿ ತಾಪರೆಕೊಳದ ತೀರದಲ್ಲಿ ಮರೆಯಾಗಿ ಇಬ್ಬರೂ ಒಂದು ತಿಂಗಳ ಉಪವಾಸವನ್ನು ಮಾಡಿದರು. "ಪಾರಣೆಯ ದಿವಸ ಚಂಪಾನಗರದ ಶ್ರಾವಕರೆಲ್ಲರೂ ನಾವು ವ್ರತಮಾಡಿರುವುದನ್ನು ತಿಳಿದಾರು. ಅದರಿಂದಾಗಿ ನಮಗೆ ಪಾರಣೆಮಾಡುವಾಗ ಸರಿಯಾದ ರೀತಿಯಲ್ಲಿ ಕರ್ಮವನ್ನು ಮಾಡದೆ ದೋಷ ಬಂದು ಸೇರುವುದು. ಆದುದರಿಂದ ನಾವು ಇಲ್ಲಿ ಭಿಕ್ಷೆಗಾಗಿ ಮನೆಗಳನ್ನು ಪ್ರವೇಶಿಸುವುದು ಬೇಡ. ನಾವು ಗಂಗಾತೀರದಲ್ಲಿದ್ದ ಹಸುಗಳ ಹಟ್ಟಿಗೆ ಹೋಗೋಣ" - ಎಂದುಕೊಂಡು ಅವರಿಬ್ಬರೂ ಗಂಗಾತೀರಕ್ಕೆ ಹೋದರು. ಅಷ್ಟರಲ್ಲಿ ಗಂಗಾತೀರದ ಹಸುಗಳ ಹಟ್ಟಿ ಆ ಸ್ಥಳದಿಂದ ಬೇರೊಂದು ಕಡೆಗೆ ಬಹಳ ದೂರಕ್ಕೆ ಹೋಗಿದ್ದಿತು. ಹಾಗೆ ಹೋದುದರಿಂದ ಧರ್ಮಕೀರ್ತಿ ಮುನಿಗಳು ಬೇರೆ ಒಂದು ಹಸು

ಪೋದೊಡೆ ಧರ್ಮಕೀರ್ತಿ ಭಟಾರರ್ ಪೆಱತೊಂದು ತುಱುಪಟ್ಟಿಗೆ ಪೋದರ್ ಧರ್ಮಘೋಷಭಟಾರರ್ ಪೋಗಲಾಱದೆ ಗಂಗೆಯ ತಡಿಯ ಮರದ ಕೆಬಗೆ ಪಸಿವು ನೀರಬ್ಕೆಯುಂ ಸೇದೆಗೆಟ್ಟು ಬಸಮಟೆದಿರ್ದೊರಂ ಗಂಗಾದೇವತೆ ಕಂಡನುಕಂಪೆಯುಂ ಭಕ್ತಿಯುಂ ಕಾರಣಾಗಿ ಸರ್ವಾಭರಣ ಭೂಪಿತೆಯಾಗಿ ದಿವ್ಯಮಪ್ಪ ಶ್ವೇತವಸ್ತ್ರಮನುಟ್ಟು ಸುವರ್ಣಮಯಮಪ್ಪ ಪಿರಿಯ ಕರಗಮಂ ತೆಕ್ಕನೆ ತೀವಿ ತಣ್ಣೆದವುಂ ಸುಗಂಧಮಪ್ಪ ನೀರ್ಗಳಂ ತಂದು ಧರ್ಮಘೋಷ ಭಟಾರರನಿಂತೆಂದಳ್ ಭಟಾರಾ ಪ್ರಾಸುಕಮಪ್ಪ ನೀರಂ ಪೊಟ್ಟದೊಳ್ ಬಂದುದಂ ಕುಡಿದು ನಿಮ್ಮ ಸೇದೆಯನಾಱಿಸಿಂ ನಿಮಗರಮನೆಗೆ ಪೋಗಿ ಕೂಡಿಂ ತಂದಪೆನನ್ನೆವರಂ ನೀರಂ ಕುಡಿದು ತೃಪೆಯುಂ ಪಿಂಗಿಸುವುದೆಂದೊಡೆ ಭಟಾರರಾಮೊಲ್ಲೆವಬ್ಬಾ ಕುಡಿಯಲ್ಕಾಗದೆಂದೊಡೆ ಗಂಗಾದೇವತೆ ಪೂರ್ವವಿದೇಹಕ್ಕೆ ಪೋಗಿ ಸೀಮಂಧರ ತೀರ್ಥಂಕರ ಪರಮದೇವರಂ ಕಂಡು ಬಂದಿಸಿ ಇಂತೆಂದು ಬೆಸಗೊಂಡಳ್ ಭಟಾರಾ ಒರ್ವರ್ ಋಷಿಯರ್ ನೀರಬ್ಕೆಯಿಂದಂ ಕರಂ ಸೇದೆಗೆಟ್ಟು ಬಸಮಟೆದಿರ್ದೊರಂ ಕಂಡು ಪಿರಿದೊಂದು ಪೊನ್ನ ಕರಗಮಂ ತೆಕ್ಕನೆ ತೀವಿಯಾದಮಾನುಂ ತಣ್ಣೆದುವುಂ ಕಮ್ಮಿದುವುಮಪ್ಪ ನೀರ್ಗಳಂ ಪೊಟ್ಟದೊಳ್ ಕೊಂದು ಪೋಗಿ ಕುಡಿಯಲೆಱೆಯೆ ಕೊಳ್ಳರಿಲ್ಲೆಂದೊಡೆ ಭಟಾರರೆಂದರ್ ಪ್ರಾಸುಕಮಾದೊಡಂ ಪೊಟ್ಟದೊಳ್ ತಂದೊಡುಂ ದೇವರ್ಕಳ ದೇವಿಯರ್ಕಳ ಕೈಯೊಳ್ ಋಷಿಯರ್ಕಳ್ಗೞಲುಂ ಕುಡಿಯಲುಂ

ಹಟ್ಟಿಗೆ ಹೋದರು. ಧರ್ಮಘೋಷಭಟಾರರು ಬೇರೆ ಕಡೆ ಹೋಗಲಾರದೆ ಗಂಗಾನದೀ ತೀರದ ಮರದ ಬುಡದಲ್ಲಿ ಹಸಿವು ಬಾಯಾರಿಕೆಗಳಿಂದ ಆದ ಆಯಾಸದಿಂದ ಕೆಟ್ಟು ಶಕ್ತಿಗುಂದಿದ್ದರು. ಅವರನ್ನು ಗಂಗಾದೇವಿ ನೋಡಿ ದಯೆಯ ಕಾರಣವಾಗಿ ಎಲ್ಲ ಆಭರಣಗಳಿಂದ ಅಲಂಕಾರಮಾಡಿಕೊಂಡು ದಿವ್ಯವಾದ ಬಿಳಿಯುಡುಪನ್ನು ಧರಿಸಿಕೊಂಡು ಚಿನ್ನದ ದೊಡ್ಡ ಕಲಶವನ್ನು-ಅದರಲ್ಲಿ ತಣ್ಣಗಾದುದೂ ಸುವಾಸನಾಯುಕ್ತವೂ ಆದ ನೀರನ್ನು ಪೂರ್ಣವಾಗಿ ತುಂಬಿಸಿಕೊಂಡು, ತೆಗೆದುಕೊಂಡು ಬಂದು ಧರ್ಮಘೋಷ ಭಟಾರರೊಡನೆ ಹೀಗೆಂದಳು- "ಋಷಿಗಳೇ, ಜೀವರಹಿತವಾಗಿರುವ ನೀರನ್ನು, ಚಿನ್ನದ ಪಾತ್ರೆಯಲ್ಲಿ ಬಂದುದನ್ನು ಕುಡಿದು ನಿಮ್ಮ ಆಯಾಸವನ್ನು ಶಮನಮಾಡಿಕೊಳ್ಳಿರಿ. ನಿಮಗಾಗಿ ನಾನು ಅರಮನೆಗೆ ಹೋಗಿ ಅನ್ನವನ್ನು ತರುವೆನು. ಅಲ್ಲಿಯವರೆಗೆ ನೀರನ್ನು ಕುಡಿದು ಬಾಯಾರಿಕೆಯನ್ನು ಪರಿಹಾರಮಾಡಿಕೊಳ್ಳಿರಿ" ಹೀಗೆ ಗಂಗಾದೇವತೆ ಹೇಳಿದಾಗ ಧರ್ಮಘೋಷ ಮುನಿಗಳು "ನಾವು ಅದನ್ನು ಸ್ವೀಕರಿಸಲೊಲ್ಲೆವಮ್ಮಾ! ಕುಡಿಯಲಿಕ್ಕಾಗದು" ಎಂದರು. ಆಗ ಗಂಗಾದೇವತೆ ಪೂರ್ವವಿದೇಹ ರಾಜ್ಯಕ್ಕೆ ಹೋಗಿ ಸೀಮಂಧರ ತೀರ್ಥಂಕರರನ್ನು, ಶ್ರೇಷ್ಠ ದೇವರಾದ ಅವರನ್ನು ಕಂಡು ನಮಸ್ಕರಿಸಿ ಹೀಗೆ ಕೇಳಿದಳು- "ಪೂಜ್ಯರೇ, ಒಬ್ಬರು ಋಷಿಗಳು ಬಾಯಾರಿಕೆಯಿಂದ ಬಹಳ ಆಯಾಸಗೊಂಡು ಶಕ್ತಿಗುಂದಿದ್ದರು. ಅವರನ್ನು ನಾನು ಕಂಡು, ತಣ್ಣಗಾದ ಮತ್ತು ಸುವಾಸನೆಯುಳ್ಳ ನೀರನ್ನು ದೊಡ್ಡದಾದ ಒಂದು ಚಿನ್ನದ ಕಲಶದಲ್ಲಿ ಪೂರ್ಣವಾಗಿ ತುಂಬಿಸಿಕೊಂಡು ತೆಗೆದುಕೊಂಡು ಹೋದೆನು. ಕುಡಿಯುವುದಕ್ಕಾಗಿ ನೀರನ್ನು ಹೊಯ್ದಾಗ ಅವರು ನೀರನ್ನು ಸ್ವೀಕರಿಸಲಿಲ್ಲ" ಎಂದಳು. ಆಗ ಸೀಮಂಧರ ಸ್ವಾಮಿಗಳು- "ನೀನು ಕೊಂಡುಹೋದ ನೀರು ಪ್ರಾಸುಕ (ಜೀವರಹಿತ) ವಾಗಿದ್ದರೂ ಚಿನ್ನದ ಪಾತ್ರೆಯಲ್ಲಿ ಕೊಂಡುಹೋಗಿದ್ದರೂ ಋಷಿಗಳು ದೇವರುಗಳ ಮತ್ತು ದೇವಿಯರುಗಳ ಕೈಯಿಂದ ಬಂದುದನ್ನು ಉಣ್ಣಬಾರದು, ಕುಡಿಯಲೂ

ತಗದು ನಿಮಗೆ ಸಮ್ಯಕ್ತ್ವಮುಂ ಪೂಜೆಯುಂ ಋಷಿಯರ್ಕಳ್ಗೆ ಪ್ರಾತಿಹಾರ್ಯಮಂ ಗೆಯ್ದುದುಂ ನಿಮ್ಮಭಿಪ್ರಾಯಮಿನಿತೆಯೆಂದು ಪೇಟ್ಪೊಡೆ ತೀರ್ಥಂಕರ ಪರಮದೇವರ ಮಾತಂ ಕೇಳ್ದು ಬೇಗಂ ಗಂಗಾದೇವತೆ ಧರ್ಮಘೋಷಭಟಾರರ್ಗೆ ತಣ್ಣಿತಪ್ಪ ಗಾಳಿಯುಂ ಸುಗಂಧಜಲವರ್ಷಮುಮಂ ಮಾಡಿದೊಡಾಪ್ತಾಯನಮಾಗಿ ಶುಕ್ಲಧ್ಯಾನಮಂ ಧ್ಯಾನಿಸಿ ಘಾತಿಕರ್ಮಂಗಳಂ ಕಿಡಿಸಿ ಕೇವಲಜ್ಞಾನಿಯಾದೊಡೆ ಚತುರ್ವಿಧಮಪ್ಪ ದೇವನಿಕಾಯಂ ಬಂದರ್ಚಿಸಿ ಪೂಜಿಸಿ ಪೋದೊವವರುಂ ಬಳಿಕ್ಕಘಾತಿಕರ್ಮಂಗಳಂ ಕಿಡಿಸಿ ಮೋಕ್ಷಕ್ಕೆ ವೋದರ್ ಮತ್ತಮವರಿಂ ಕಿಱಿಯರ್ ಧರ್ಮಕೀರ್ತಿ ಭಟಾರರ್ ಪೆಱತೊಂದು ತುಱುಪಟ್ಟಗೆ ಪೋದೊಡಾ ತುಱುಪಟ್ಟಯುಮಲ್ಲಿಂದೆರ್ದು ಪೆಱತೊಂದು ದೆಸೆಗೆ ನಾದೆ ಗೆಂಟು ಪೋದೊಡೆ ನಿರಾಶೆಯಾಗಿ ಪಸಿವುಂ ನೀರಟ್ಕಮಿಯಿಂದಂ ಬಾಧಿಸಿಪಟ್ಟೊರಾಗಿ ಸೇದೆಗೆಟ್ಟು ಬಸಮಟೆದು ಶುಭಪರಿಣಾಮಕ್ಕೆ ಸಂದೊರಂ ಮುನ್ನಿನ ದೇವತೆ ಕಂದಱೆದು ಪ್ರತಿಬೋಧಿಸಲ್ ತಗುಳ್ವವರುಂ ತಿಳಿವಲಾಱದೆ ಮತ್ತೆ ಪೂರ್ವವಿದೇಹಕ್ಕೆ ಪೋಗಿ ಸೀಮಂಧರ ತೀರ್ಥಕರ ಪರಮಸ್ವಾಮಿಯಂ ಕಂಡು ಪೊಡೆವಟ್ಟು ಅವರ ಸಮಾವಸ್ಥೆಯೆಲ್ಲಮಂ ಭಟಾರರ್ಗ್ಗೆ ಪೇೞ್ದು ಸಮಾಧಿಸಂಧಾನೋಪಾಯಮಂ ಬಿಸಗೊಂಡೊಡೆ ಸರ್ವಜ್ಞರಿಂತೆಂದು ಪೇೞ್ದರಾಸನ್ನಭವ್ಯರ್ ಮೂಱನೆಯ ಭವದೊಳ್ ಮೋಕ್ಷಕ್ಕೆ ವೋಪರೆಂದು ಸೀಮಂಧರ ತೀರ್ಥಂಕರ ಪರಮದೇವರ್ ಪೇೞ್ದರೆಂಬುವಂ ಕೇಳ್ದಾಗಡೆ ಅಶುಭ ಪರಿಣಾಮಮಂ ತೊಱೆದು ನೀಗಿ ಶುಭ ಪರಿಣಾಮದೊಳ್ ಕೂಡಿ ಸಮಾಧಿಯನೊಡೆಯರಪ್ಪರ್ ನೀಂ ಬೇಗಂ ಪೋಗಿ ಪ್ರತಿಬೋಧಿಸೆಂದು ಪೇೞ್ದೊಡೆ ಗಂಗಾದೇವತೆಯಂತೆಗೆಯ್ವೆನೆಂದು ಪೊದೆವಟ್ಟು

ಬಾರದು. ನಿಮ್ಮಂಥವರು ಜೈನಧರ್ಮವನ್ನು ತಿಳಿಯಬಹುದು. ಪೂಜೆಮಾಡಬಹುದು, ಋಷಿಗಳಿಗೆ ದೇವತೆಗಳು ಮಾಡತಕ್ಕ ಪೂಜೆ ಮಾಡಬಹುದು. ಇಷ್ಟು ಮಾತ್ರವೇ ನಿಮಗೆ ಅರ್ಹತೆ" ಯೆಂದರು. ಗಂಗೆಯು ಅವರ ಮಾತನ್ನು ಕೇಳಿ ಬೇಗ ಹೋದಳು. ಧರ್ಮಘೋಷಮುನಿಗಳಿಗೆ ತಂಗಾಳಿಯನ್ನೂ ಸುವಾಸನೆಯ ನೀರಿನ ಮಳೆಯನ್ನೂ ಉಂಟುಮಾಡಿದಳು. ಆಗ ಅದು ಧರ್ಮಘೋಷರಿಗೆ ಹಿತವಾಯಿತು. ಅವರು ಶುಕ್ಲಧ್ಯಾನವನ್ನು ಮಾಡಿ, ಘಾತಿಕರ್ಮಗಳನ್ನು ನಾಶಪಡಿಸಿ ಕೇವಲ ಜ್ಞಾನವನ್ನು ಪಡೆದರು. ನಾಲ್ಕು ವಿಧವಾದ ದೇವತೆಗಳ ಸಮೂಹವು ಅಲ್ಲಿಗೆ ಬಂದು ಭಟಾರರನ್ನು ಅರ್ಚಿಸಿ ಪೂಜಿಸಿ ಹಿಂದಿರಳಿದರು. ಧರ್ಮಘೋಷ ಋಷಿಗಳು ಆಮೇಲೆ ಅಘಾತಿಕರ್ಮಗಳನ್ನೂ ನಾಶಪಡಿಸಿ ಮೋಕ್ಷವನ್ನೈದಿದರು. ಅನಂತರ, ಅವರ ತಮ್ಮಂದಿರಾದ ಧರ್ಮಕೀರ್ತಿ ಭಟಾರರು ಬೇರೊಂದು ತುರು (ಹಸು) ಹಟ್ಟಿಗೆ ಹೋದಾಗ, ಆ ತರುಹಟ್ಟಿ ಅಲ್ಲಿಂದ ಎದ್ದು ಬೇರೊಂದು ಕಡೆಗೆ ಬಹಳವಾಗಿ ದೂರಕ್ಕೆ ಹೋಗಿದ್ದಿತು. ಇದರಿಂದ ಅವರಿಗೆ ನಿರಾಶೆಯುಂಟಾಯಿತು. ಹಸಿವು ಬಾಯಾರಿಕೆಗಳು ಅವರನ್ನು ಬಾಧಿಸಿದವು. ಆಯಾಸದಿಂದ ಕೆಟ್ಟು, ಶಕ್ತಿಗುಂದಿ ಅವರು ಶುಭಫಲವನ್ನು ಪಡೆದುಕೊಂಡಿರಲು, ಹಿಂದಿನ ಗಂಗಾದೇವತೆ ಕಂಡು, ತಿಳಿದು, ಅವರಿಗೆ ಅರಿವನ್ನು ಉಂಟುಮಾಡಲು ತೊಡಗಿದರೂ ತಿಳಿಸಲಾರದವಳಾದಳು. ಆಕೆ ಹಿಂದಿನಂತೆ ಪೂರ್ವವಿದೇಹಕ್ಕೆ ಹೋಗಿ ಪರಮಸ್ವಾಮಿಯಾದ ಸೀಮಂಧರ ತೀರ್ಥಂಕರರನ್ನು ಕಂಡು ಸಾಷ್ಟಾಂಗವಂದನೆ ಮಾಡಿ, ಅವರ ಸಮತೆಯ ಸ್ಥಿತಿಯೆಲ್ಲವನ್ನೂ ಹೇಳಿದಳು. ಅವರನ್ನು ಏಕಾಗ್ರತೆಗೆ ಸೇರಿಸುವ ಉಪಾಯವೇನೆಂದು ಕೇಳಿದಳು. ಆಗ ತೀರ್ಥಂಕರರು ಹೀಗೆಂದರು - "ಧರ್ಮಕೀರ್ತಿ ಮುನಿಗಳು ಆಸನ್ನ ಭವ್ಯರು (ಮೋಕ್ಷಕ್ಕೆ ಹೋಗಲು ಅರ್ಹರು). ಮೂರನೆಯ ಜನ್ಮದಲ್ಲಿ ಮೋಕ್ಷಕ್ಕೆ

ಪೋಗಿ ಆ ರಿಸಿಯರನೆಯ್ದಿ ಇಂತೆಂದಳ್ ಭಟಾರಾ ನೀಮೀ ಭವದಿಂ ತೊಟ್ಟು ಮೂಜನೆಯ ಭವದೊಳ್ ಕರ್ಕ್ಷಯಂ ಗೆಯ್ದು ಕೇವಳ ಜ್ಞಾನಿಯಾಗಿ ಮೋಕ್ಷಕ್ಕೆ ವೋದಪಿರೆಂದು ಸೀಮಂಧರ ತೀರ್ಥಕರ ಪರಮದೇವರ್ ಪೇಳ್ದರೆಂದೊಡಾ ಮಾತಂ ಧರ್ಮಕೀರ್ತಿ ಭಟಾರರ್ ಕೇಳ್ದು ಉನ್ಮಾರ್ಗದಿಂದಂ ಮನಮನುದುಗಿ ಸನ್ಮಾರ್ಗದೊಳ್ ನಿಜೆಸಿ :

ಗಾಹೆ ॥ ಹಾ ದುಟ್ಠು ಕಯಂ ಹಾ ದುಟ್ಠು ಕಾರಿಯಂ ಹಾ ದುಟ್ಠು ಅಣುಮೋದಿಯಂ
ಜೀವ್ವೋ ಅಂತೋ ಅಂತೋ ದಜ್ಜ ಇ ಪಚ್ಚತ್ತಾವೇಣ ವೇವಂತೋ

ಎಂದು ಪೊಲ್ಲದಂ ಬಗೆದೆನೆಂದು ತನ್ನಂ ತಾಂ ಪಟೆಯುತ್ತಂ ಸೀಮಂಧರ ಸ್ವಾಮಿಗಳ ನಾಮಗ್ರಹಣಂಗೊಂಡಾಗಳಾ ಶುಭಪರಿಣಾಮದಿಂ ಪಿಂಗಿ ಶುಭ ಶುದ್ಧ ಪರಿಣಾಮದೊಳ್ ಕೂಡಿ ಮಿಕ್ಕ ರತ್ನತ್ರಯಂಗಳನಾರಾಧಿಸಿ ಪದಿನಾಜನೆಯ ಕಲ್ಪದೊಳ್ ಉತ್ಕೃಷ್ಟಮಪ್ಪ ಇರ್ಪತ್ತೆರಡು ಸಾಗರೋಪಮಾಯುಷ್ಯಮನೊದೆಯೊನಚ್ಯುತೇಂದ್ರನಾಗಿ ಪುಟ್ಟಿದಂ ಮತ್ತಂ ಪೆಜರುಮಾರಾಧ ಕರಪ್ಪವರ್ಗಳ್ ಧರ್ಮಘೋಷಭಟಾರರಂ ಮನದೊಳ್ ಬಗೆದು ಪಸಿವುಂ ನೀರಟ್ಟಿ ಮೊದಲಾಗೊಡೆಯ ಪರೀಷಹಂಗಳಂ ಸೈರಿಸಿ ಸಮ್ಯಗ್‌ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗಸುಖಂಗಳನೆಯ್ದುಗೆ

ಹೋಗುವರೆಂದು ಸೀಮಂಧರ ತೀರ್ಥಂಕರ ಪರಮದೇವರು ಹೇಳಿದರು- ಎಂಬುದನ್ನು ಕೇಳಿದ ಕೂಡಲೇ ಅಶುಭವನ್ನೆಲ್ಲ ತೊರೆದುಬಿಟ್ಟು ಶುಭಫಲದಲ್ಲಿ ಸೇರಿ ಚಿತ್ತೈಕಾಗ್ರತೆಯನ್ನು ಉಳ್ಳವರಾಗುವರು. ನೀನು ಬೇಗನೆ ಹೋಗಿ ಅವರಿಗೆ ಎಚ್ಚರಿಸು (ಈ ಅರಿವನ್ನುಂಟುಮಾಡು)". ಹಾಗೆ ತೀರ್ಥಂಕರು ಹೇಳಲು ಗಂಗಾದೇವಿ "ಹಾಗೆಯೇ ಮಾಡುವೆನು" ಎಂದು, ನಮಸ್ಕರಿಸಿ ಹೋಗಿ ಆ ಋಷಿಗಳ ಬಳಿಗೆ ಹೋಗಿ ಹೀಗೆಂದಳು- "ಪೂಜ್ಯರೇ, ನೀವು ಈ ಜನ್ಮದಿಂದ ತೊಡಗಿ ಮೂರನೆಯ ಜನ್ಮದಲ್ಲಿ ಕರ್ಮವನ್ನು ನಾಶಗೊಳಿಸಿ ಕೇವಲಜ್ಞಾನವನ್ನು ಪಡೆದು ಮೋಕ್ಷಕ್ಕೆ ಹೋಗುವಿರಿ-ಎಂದು ಸೀಮಂಧರ ತೀರ್ಥಂಕರ ಪರಮದೇವರು ಹೇಳಿದ್ದಾರೆ" - ಹೀಗೆ ಗಂಗಾದೇವತೆ ಹೇಳಲು ಆ ಮಾತನ್ನು ಧರ್ಮಕೀರ್ತಿ ಋಷಿಗಳು ಕೇಳಿ, ದುಷ್ಟಮಾರ್ಗದಿಂದ ಮನಸ್ಸನ್ನು ಹಿಂದೆಗೆದು ಸನ್ಮಾರ್ಗದಲ್ಲಿ ನೆಲೆಗೊಳಿಸಿದರು. (ಅಯ್ಯೋ ದುಷ್ಟಕಾರ್ಯ ಮಾಡಲ್ಪಟ್ಟಿತು, ಅಯ್ಯೋ ದುಷ್ಟಕಾರ್ಯ ಮಾಡಿಸಲ್ಪಟ್ಟಿತು, ಅಯ್ಯೋ ದುಷ್ಟಕಾರ್ಯವು ಅನುಮೋದಿಸಲ್ಪಟ್ಟಿತು. ಜೀವನು ಒಳಗೊಳಗೆ ನಡುಗುತ್ತ ಪಶ್ಚಾತ್ತಾಪದಿಂದ ಸುಡುತ್ತ ಇರುತ್ತಾನೆ.) ಹೀಗೆನ್ನುತ್ತ, ಕೆಟ್ಟುದನ್ನು ಯೋಚಿಸಿದೆನೆಂದು ತನ್ನನ್ನು ತಾನೇ ನಿಂದಿಸುತ್ತ ಸೀಮಂಧರ ಸ್ವಾಮಿಗಳ ಹೆಸರನ್ನು ಕೇಳಿದಾಗ ಅಮಂಗಳಕರವಾದ ಫಲವು ಪರಿಹಾರವಾಗಿ ಮಂಗಲವೂ ಶುದ್ಧವೂ ಆದ ಫಲದಲ್ಲಿ ಸೇರಿ ಶ್ರೇಷ್ಠವಾದ ದರ್ಶನ-ಜ್ಞಾನ-ಚಾರಿತ್ರಗಳೆಂಬ ರತ್ನತ್ರಯವನ್ನು ಆಚರಿಸಿ ಹದಿನಾರನೆಯ ಸ್ವರ್ಗದಲ್ಲಿ ಅತ್ಯಂತ ಶ್ರೇಷ್ಠವೆನಿಸುವ ಇಪ್ಪತ್ತೆರಡು ಸಾಗರಕ್ಕೆ ಸಮಾನವಾದ ಆಯುಷ್ಯವನ್ನುಳ್ಳ ಅಚ್ಯುತೇಂದ್ರನಾಗಿ ಹುಟ್ಟಿದರು. ಆರಾಧಕರಾಗಿರತಕ್ಕ ಬೇರೆಯವರು ಕೂಡ, ಧರ್ಮಘೋಷಭಟಾರರನ್ನು ಮನಸ್ಸಿನಲ್ಲಿ ಭಾವಿಸಿ, ಹಸಿವು ಬಾಯಾರಿಕೆ ಮುಂತಾಗಿ ಇರುವ ಪರೀಷಹಗಳನ್ನು ಸಹಿಸಿ, ಸಮ್ಯಗ್‌ದರ್ಶನ, ಸಮ್ಯಗ್‌ಜ್ಞಾನ, ಸಮ್ಯಗ್‌ಚಾರಿತ್ರಗಳನ್ನು ಸಾಧಿಸಿ ಸ್ವರ್ಗಮೋಕ್ಷ ಸುಖಗಳನ್ನು ಪಡೆಯಲಿ!

೯. ಸಿರಿದಿಣ್ಣನೆಂಬ ಭಟ್ಟಾರರ ಕಥೆ

ಸಿರಿದಿಣ್ಣ ಭಟ್ಟಾರರ ಕಥೆಯಂ ಪೇಳ್ವೆಂ :

ಗಾಹೆ ॥ ಪೀದೇಣ ಪುವ್ವವೇರಿಯ ದೇವೇಣ ವಿಗುವ್ವಿದೇಣ ಘೋರೇಣ
ಸಂಪತ್ತೋ ಸಿರಿದಿಣ್ಣೋ ಪಡಿವಣ್ಣೋ ಉತ್ತಮಂ ಅಟ್ಠಂ ॥

[ಪೀದೇಣ - ಅಯ್ಮಿಲಿಂದಂ, ಪುವ್ವವೇರಿಯ ದೇವೇಣ - ಮುನ್ನಿನ ಭವದ ಪಗೆವನಪ್ಪ ದೇವನಿಂದಂ, ವಿಗುವ್ವಿದೇಣ - ವಿಗುರ್ವಿಸಪಟ್ಟುದಱಿಂದಂ, ಘೋರೇಣ - ಆದಮಾನುಂ ಕಡಿದಪ್ಪುದಱಿಂದಂ, ಸಂಪತ್ತೋ-ತಿಳಿಯಪಟ್ಟೊನಾಗಿ, ಸಿರಿದಿಣ್ಣೋ-ಸಿರಿದಿಣ್ಣನೆಂಬ ಭಟ್ಟಾರಕಂ, ಪಡಿವಣ್ಣೋ - ಪೊರ್ದಿದೊಂ, ಉತ್ತಮ ಅಟ್ಠಂ - ಮಿಕ್ಕ ದರ್ಶನ ಜ್ಞಾನಚಾರಿತ್ರಾರಾಧನೆಯಂ]

ಅದೆಂತೆಂದೊಡೆ : ಈ ಜಂಬೂದ್ವೀಪದ ಭರತಕ್ಷೇತ್ರದೊಳಂಗಮೆಂಬುದು ನಾಡಲ್ಲಿ ಚಂಪಾನಗರಮೆಂಬುದು ಪೊಬಲದನಾಳ್ವೊನಧಿಗಮ ಸಮ್ಯಗ್‌ದೃಷ್ಟಿಶ್ರಾವಕಂ ಸಿಂಹರಥನೆಂಬೊನರಸಂ ಮತ್ತಿತ್ತ ಮಗಧೆಯೆಂಬುದು ನಾಡಲ್ಲಿ ಸಾಕೇತವೆಂಬುದದನಾಳ್ವಂ ಶ್ರಾವಕಂ ಸುಮಂತನೆಂಬೊನರಸಂ ಮತ್ತಿತ್ತ ಮಂಗಳಾವತಿಯೆಂಬುದು ನಾಡಲ್ಲಿ ಇಳಾಪಟ್ಟಣಮೆಂಬುದು ಪೊಬಲದನಾಳ್ವೊನಧಿಗಮ ಸಮ್ಯಗ್ ದೃಷ್ಟಿ ಶ್ರಾವಕಂ ಜಿತಶತ್ರುವೆಂಬೊನರಸನಾತನರಸಿ ಇಳಾ ಮಹಾದೇವಿಯೆಂಬೊಳಾ ಅರಸನ ದಾದಿ ವಿನಯಮತಿಯೆಂಬೊಳಂತವರ್ಗಳಿಷ್ಟವಿಷಯ ಕಾಮ ಭೋಗಂಗಳನನುಭವಿಸುತ್ತಂ ಕಾಲಂ ಸಲೆ ಫಾಲ್ಗುನ ನಂದೀಶ್ವರಂ ಬಂದೊಡೆ ಮೂವರುಂ ಮಂಡಲಿಕರುಂ ತಂತಮ್ಮ ಪೊಬಲ್ಗಳೊಳಿಂಟು ದಿವಸಮರ್ಹದ್ಭಟ್ಟಾರಕರ್ಗೆ ಮಹಾಮಹಿಮೆಗಳಂ ಮಾಡಲ್ ತೊಡಗಿದರಿತ್ತ ಜಿತಶತ್ರುವುಂ ತನ್ನ

ಸಿರಿದಿಣ್ಣ ಭಟ್ಟಾರರ ಕಥೆಯನ್ನು ಹೇಳುವೆನು- (ಸಿರಿದಿಣ್ಣನೆಂಬ ಋಷಿಯು ಹಿಂದಿನ ಜನ್ಮದ ಶತ್ರುವಾದ ವ್ಯಂತರದೇವನಿಂದ ಮಾಯೆಯ ಸೃಷ್ಟಿಯಾದ ಕಠಿನವಾದ ಶೀತದಿಂದ ಕೂಡಿದ ಗಾಳಿ ಮಳೆಗಳಿಂದ ಸೇಚಿಸಲ್ಪಟ್ಟವನಾದರೂ ಶ್ರೇಷ್ಠವಾದ ದರ್ಶನ ಜ್ಞಾನಚಾರಿತ್ರಗಳ ಆರಾಧನೆಯನ್ನು ಮಾಡಿ ಮೋಕ್ಷ ಹೊಂದಿದನು.) ಅದು ಹೇಗೆಂದರೆ:- ಈ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ಅಂಗ ಎಂಬ ನಾಡಿದೆ. ಅಲ್ಲಿ ಚಂಪಾನಗರವೆಂಬ ಪಟ್ಟಣವನ್ನು ಸಮ್ಯಕ್ ದೃಷ್ಟಿಯನ್ನು ಪಡೆದ ಜೈನಗೃಹಸ್ಥನಾದ ಸಿಂಹರಥನೆಂಬ ರಾಜನು ಆಳುತ್ತಿದ್ದನು. ಇನ್ನೊಂದೆಡೆ ಮಗಧೆಯೆಂಬ ನಾಡಿನಲ್ಲಿ ಸಾಕೇತವೆಂಬ ಪಟ್ಟಣವಿದೆ. ಅದನ್ನು ಶ್ರಾವಕನಾದ ಸುಮಂತನೆಂಬ ರಾಜನು ಆಳುತ್ತಿದ್ದನು. ಇತ್ತ ಇನ್ನೊಂದೆಡೆ ಮಂಗಳಾವತಿ ಎಂಬ ನಾಡಿನಲ್ಲಿ ಇಳಾ ಎಂಬ ಪಟ್ಟಣವಿದೆ. ಅದನ್ನು ಸಮ್ಯಗ್ ದೃಷ್ಟಿಯನ್ನು ಸಂಪಾದಿಸಿರತಕ್ಕ ಶ್ರಾವಕನಾದ ಜಿತಶತ್ರು ಎಂಬ ರಾಜನು ಆಳುತ್ತಿದ್ದನು. ಜಿತಶತ್ರುವಿನ ಹೆಂಡತಿ ಇಳಾ ಮಹಾದೇವಿ ಎಂಬವಳು. ಆ ಅರಸನಿಗೆ ವಿನಯಮತಿ ಎಂಬ ಒಬ್ಬಳು ದಾದಿ ಇದ್ದಳು. ಅಂತು ಅವರೆಲ್ಲರೂ ತಮ್ಮ ಇಷ್ಟ ವಿಷಯದ ಸುಖಗಳನ್ನು ಅನುಭವಿಸುತ್ತ ಇದ್ದರು. ಹೀಗೆಯೇ ಕಾಲ ಕಳೆಯಿತು. ಒಮ್ಮೆ ಫಾಲ್ಗುಣ ಮಾಸದ ನಂದೀಶ್ವರ ಹಬ್ಬ ಬಂತು. ಆಗ ಮೂವರು ಮಾಂಡಲಿಕ ರಾಜರೂ ತಮ್ಮ ತಮ್ಮ ಪಟ್ಟಣಗಳಲ್ಲಿ ಎಂಟು ದಿವಸವೂ ಜೈನ ತೀರ್ಥಂಕರರಿಗೆ ಮಹತ್ತಾದ ಉತ್ಸವಗಳನ್ನು ಮಾಡತೊಡಗಿದರು. ಇತ್ತ ಜಿತಶತ್ರುವೂ ತನ್ನ ಪಟ್ಟಣದಲ್ಲಿ

ಪೊಬಲೊಳಿಂಟು ದಿವಸಂ ಜಿನಮಹಾಮಹಿಮೆಯಂ ಮಾಡಲ್ ತೊದಗಿದನಾತನ ದಾದಿ ವಿನಯಮತಿಯೆಂಬೊಳ್ ಗುಜ್ಜಿ ವಿರಳದಂತೆ ಆದಮಾನುಂ ವಿರೂಪೆ ಪೇಸೆಪಡುವಳ್ ನೋದಿದ ಜನಕ್ಕೆ ಭಯಮುಂ ಪಡೆವೊಳ್ ನಾಣಿಸೆಪಡುವೊಳಂತಪ್ಪಾಕೆ ಅರಸನೊಡನೆ ಜಿನಮಹಾಮಹಿಮೆಯಂ ನೋಡಲ್ ಪೋಪಾಗಳರಸನೆಂದೊನಬ್ಬಾ ನೀಮುಂ ಮಹಿಮೆಗೆ ಬರಲ್ವೇಡ ನಿಮ್ಮಂ ಕಂಡು ಮಹಿಮೆಗೆ ವಂದ ನೆರವಿಯಂಜುಗುಂ ಪೇಸುಗುಮಮಂಗಳಮೆಂಗುಮದಱಿಂ ನೀಮುಂ ಮನೆಯೊಳಿರಿಮೆಂದಿರಿಸಿ ತಾನುಂ ಸಹಸ್ರಕೂಟಮೆಂಬ ಚೈತ್ಯಾಲಯಕ್ಕೆ ಮಹಾಮಹಿಮೆಯಂ ಮಾಡಲ್ ಪೋದನ್ ಇತ್ತ ದಾದಿಯುಂ ಮಗನ ಮಾಡುವ ಮಹಾಮಹಿಮೆಯಂ ನೋಡಲ್ ಪೆತ್ತೆನಿಲ್ಲೆಂದುಬ್ಬೆಗಂ ಬಟ್ಟು ತನ್ನಂ ತಾಂ ಪಟಿದು ನಂದೀಶ್ವರದೆಂಟು ದಿವಸಮಭಿಷೇಕಮುಮರ್ಚನೆಯುಮಪ್ಪೋಪ ವಾಸಮುಮಂ ಮಾದಿ ದೇವರಂ ಬಂದಿಸುತ್ತಂ ಪೂಜಿಸುತ್ತಿರ್ದಳಿತ್ತರಸನುಮೆಂಟು ದಿವಸಂ ಮಹಾಮಹಿಮೆಯಭಿಷೇಕ ಮುಮಂ ಮಾಡಿ ಸವೆಯಿಸಿದ ಬಟಿಕ್ಕೆ ದಾದಿಗೆ ಬಟೆಯಟ್ಟವರಿಸಿ ಇಂತೆಂದನಬ್ಬಾ ನೀಮಿಂತೇಕೆ ಕರಂ ಬಡಪಟ್ಟಿರ್ದಿರೆಂದೊಡೆ ದಾದಿಯಿಂತೆಂದಳ್ ಮಗನೆ ಎಂಟು ದಿವಸಸಮುಪವಾಸಂ ಗೆಯ್ದು ಮನೆಯೊಳ್ ದೇವರ್ಗ್ಗಭಿಷೇಕಮುಂ ಪೂಜೆಯುಮುಂ ಮಾದಿಸುತ್ತಿರ್ದೆನೆಂದೊಡೆ ಅದಂ ಕೇಳ್ದಾದಮಾನುಮರಸನೊಸೆಮ ಬದವಾದುದುಮಂ ಕಂದು ಕರುಣಿಸಿ ಅಬ್ಬಾ ನಿಮಗೊಸೆದೆಂ ವರಮಂ ಬೇಡಿಕೊಳ್ಳಿಮೆಂದೊಡಾಕೆಯಿಂತೆಂದಳ್ ಮಗನೆ ನೀನೆನಗೊಸೆದೆಯಪ್ಪೊಡೆನಗೇಂದು ಮತ್ತಮೆಂಟುದಿವಸಂ ದೇವರ್ಗ್ಗೆ ಮಹಾಮಹಿಮೆಯಂ ಮಾಡೆಂದು ಪೇಬ್ಪೊದಂತೆಗೆಯ್ವೆನೆಂವರಸಂ

ಎಂಟು ದಿವಸವೂ ಜಿನ ಮಹೋತ್ಸವಗಳನ್ನು ಮಾಡಲು ಉಪಕ್ರಮಿಸಿದನು. ಅವನ ದಾದಿಯಾದ ವಿನಯಮತಿಯೆಂಬವಳು, ಕುಬ್ಜೆಯೂ ವಿರಳವಾದ ಹಲ್ಲುಗಳುಳ್ಳವಳೂ ಅತಿಶಯವಾಗಿ ಕೆಟ್ಟರೂಪಿನವಳೂ ಆಗಿ ಇತರರಿಂದ ಹೇಸಲ್ಪಡುವವಳಾಗಿದ್ದಳು. ನೋಡಿದ ಜನರಿಗೆ ಹೆದರಿಕೆಯುಂಟುಮಾಡುವವಳಾಗಿದ್ದಳು, ನಾಚಿಕೆಯುಂಟು ಮಾಡುವವಳಾಗಿದ್ದಳು. ಅಂತಪ ಆಕೆ ಅರಸನೊಡನೆ ಜಿನೇಂದ್ರನ ಮಹೋತ್ಸವವನ್ನು ನೋಡಲು ಹೋಗುತ್ತಿರುವಾಗ ಅರಸನು ಅವಳೊಡನೆ ಹೀಗೆಂದನು- "ಅಮ್ಮಾ, ನೀವು ಉತ್ಸವಕ್ಕೆ ಬರುವುದು ಬೇಡ. ಉತ್ಸವಕ್ಕೆ ಬಂದ ಜನಸಂದಣಿ ನಿಮ್ಮನ್ನು ಕಂಡು ಹೆದರೀತು, ಹೇಸಿಗೆ ಪಟ್ಟೀತು, ಅಶುಭವೆಂದು ಹೇಳೀತು. ಆದುದರಿಂದ ನೀವು ಮನೆಯೊಳಗೆ ಇದ್ದು ಬಿಡಿ". ಹೀಗೆ ಹೇಳಿ ಅವಳನ್ನು ಮನೆಯಲ್ಲೇ ನಿಲ್ಲಿಸಿ ರಾಜನು ಮಹಾಉತ್ಸವವನ್ನು ನೆರವೇರಿಸುವುದಕ್ಕಾಗಿ ಸಹಸ್ರಕೂಟವೆಂಬ ಚೈತ್ಯಾಲಯಕ್ಕೆ (ಜಿನಾಲಯಕ್ಕೆ) ತೆರಳಿದನು. ಇತ್ತ ದಾದಿಯು ತನ್ನ ಮಗನು ಮಾಡುವ ಮಹೋತ್ಸವವನ್ನು ನೋಡಲಾರದೆ ಹೋದೆನೆಂದು ತನ್ನನ್ನು ತಾನೇ ನಿಂದಿಸಿದಳು. ನಂದೀಶ್ವರ ಹಬ್ಬದ ಎಂಟು ದಿವಸವೂ ಅಭಿಷೇಕ, ಅರ್ಚನೆ, ಎಂಟು ದಿನಗಳ ಉಪವಾಸ-ಇವನ್ನೆಲ್ಲ ಮಾಡಿ, ದೇವರಿಗೆ ವಂದನೆ ಸಲ್ಲಿಸುತ್ತ, ಪೂಜಿಸುತ್ತ ಇದ್ದಳು. ಇತ್ತ ರಾಜನು ಎಂಟು ದಿವಸವೂ ಮಹಾಉತ್ಸವದ ಅಭಿಷೇಕವನ್ನು ಮಾಡಿ ಮುಗಿಸಿದ ಮೇಲೆ ದಾದಿಗೆ ಹೇಳಿ ಕಳುಹಿಸಿ, ಆಕೆಯನ್ನು ಬರಮಾಡಿ ಹೀಗೆಂದನು- "ನೀವು ಹೀಗೆ ಏಕೆ ಬಹಳ ಬಡವಾಗಿದ್ದೀರಿ?" ಆಗ ಅದಕ್ಕೆ ದಾದಿಯು ರಾಜನೊಡನೆ- "ಮಗನೇ, ನಾನು ಎಂಟು ದಿವಸ ಉಪವಾಸ ಮಾಡಿ, ಮನೆಯಲ್ಲಿಯೇ ದೇವರಿಗೆ ಅಭಿಷೇಕವನ್ನೂ ಪೂಜೆಯನ್ನೂ ಮಾಡಿಸುತ್ತ ಇದ್ದೆನು" ಎಂದಳು. ರಾಜನು ಅದನ್ನು

ದಾದಿಕಾರಣಮಾಗಿ ಮತ್ತಮೆಂಟು ದಿವಸಂ ಮಹಾಮಹಿಮೆಯಂ ಮಾಡಲ್ ತೊಡಂಗಿದೊದೆನ್ನ ಮಹಾಮಹಿಮೆಯೊಳೆಂತುಣ್ಟೆನೆಂದು ಪಾರಿಸದೆ ಮತ್ತಮಪ್ಪೋಪ ವಾಸಂಗೆಯ್ದು ಪಾರಣೆಯ ದಿವಸದಿಂದಾಕೆಯ ಶ್ರಮಮುಂ ಸೇದೆಯುಮಂ ಹಿಮವಂತ ಪರ್ವತದ ಪದ್ಮೆಯೆಂಬ ಕೊಳದೊಳ್ ವಸಿಯಿಸಿರ್ಪ ಶ್ರೀಯಾದೇವತೆ ಕಂಡಱೆದು ತನ್ನ ಪರಿವಾರ ಸಹಿತಂ ವಿಮಾನಂಗಳನೇಱೆ ಮಹಾವಿಭೂತಿಯಿಂ ಬಂದು ಸ್ವರ್ಣಪೀಠದೊಳ್ ದಾದಿಯನಿರಿಸಿ ಸುಗಂಧೋದಕಗಳಿಂ ತೀವಿದ ಸುವರ್ಣಕಲಶಗಳಿಂದಮಭಿಷೇಕಂಗೆಯ್ದು ನಮೇರು ಮಂದಾರ ಸಂತಾನಕ ಪಾರಿಯಾತ್ರಕಮೆಂಬ ಪೂಗಳಂ ಸುರಿದು ಕಮ್ಮಿತಪ್ಪ ತಂಬೆಲರ್ ವೀಸಿ ದೇವದುಂದುಭಿಗಳಂ ಬಾಜಿಸಿ ಶ್ರೀಯಾದೇವತೆ ತನ್ನಾವಾಸಕ್ಕೆ ವ್ಪೋದಳ್ ಇತ್ತ ದಾದಿಯುಂ ಶ್ರೀಯಾದೇವತೆಯ ವಿಭೂತಿಯಂ ಕಂಡು ನಿದಾನಂಗೆಯ್ದು ಕೆಲವು ದಿವಸದಿಂ ಕಾಲಂಗೆಯ್ದೀ ಜಂಬೂದ್ವೀಪದ ಹಿಮವಂತ ಪರ್ವತದ ಪದ್ಮೆಯೆಂಬ ಕೊಳದೊಳ್ ಶ್ರೀಯಾದೇವತೆಯಾಗಿ ಪುಟ್ಟಿ ಇಳಾಪಟ್ಟಣಕ್ಕೆ ಬಂದಾ ಪೊಬಲ ಜನಂಗಳ್ಗೆಲ್ಲಮಿರುಳ್ ಕನಸಿನೊಳಾಂ ಶ್ರೀಯಾದೇವತೆಯೆಂ ನಿಮ್ಮ ಪೊಬಲ್ಗೆವಂದೆನೆನಗೆ ಶ್ರೀ ವಿಹಾರಮಂ ಮಾಡಿ ಎನ್ನ ಪ್ರತಿಮೆಯನಿಟ್ಟು

ಕೇಳಿ ಅತಿಶಯವಾಗಿ ಪ್ರೀತಿ ತಾಳಿದನು. ಆಕೆ ಬಡಕಲಾದುದನ್ನು ಕಂಡು ಕರುಣೆಗೊಂಡು- "ಅಮ್ಮಾ ನಾನು ನಿಮಗೆ ಪ್ರೀತಿಗೊಂಡೆನು (ಮೆಚ್ಚಿದೆನು). ಇಷ್ಟಾರ್ಥವನ್ನು ಬೇಡಿಕೊಳ್ಳಿ" ಎಂದನು. ಆಗ ಆಕೆ ರಾಜನೊಡನೆ- "ಮಗನೆ, ನೀನು ನನಗೆ ಮೆಚ್ಚಿದೆಯಾದರೆ, ನನಗಾಗಿಯೇ ಇನ್ನು ಎಂಟು ದಿವಸ ದೇವರಿಗೆ ಮಹೋತ್ಸವವನ್ನು ಮಾಡು" ಎಂದು ಹೇಳಿದಳು. "ಹಾಗೆಯೇ ಮಾಡುವೆನು" ಎಂದು ರಾಜನು ಹೇಳಿ ಆ ದಾದಿಯ ಕಾರಣದಿಂದಲೇ ಮತ್ತೆ ಎಂಟು ದಿವಸ ಮಹೋತ್ಸವವನ್ನು ಆಚರಿಸಲು ತೊಡಗಿದನು. ವಿನಯಮತಿ ದಾದಿಯು ನನ್ನ ಪರವಾಗಿರುವ ಮಹೋತ್ಸವದಲ್ಲಿ ನಾನು ಹೇಗೆ ಊಟ ಮಾಡುವೆನು? ಎಂದು ಉಪವಾಸಾಂತ್ಯದ ಪಾರಣೆಯನ್ನು ಆಚರಿಸಲಿಲ್ಲ; ಮತ್ತೂ ಎಂಟು ದಿವಸ ಉಪವಾಸ ಮಾಡಿದಳು. ಪಾರಣೆಯ ದಿವಸ ಅವಳ ಶ್ರಮವನ್ನೂ ಆಯಾಸವನ್ನೂ ಹಿಮಾಲಯ ಪರ್ವತದ ಪದ್ಮ ಎಂಬ ಕೊಳದಲ್ಲಿ ವಾಸಿಸತಕ್ಕ ಶ್ರೀಯಾದೇವತೆ ಕಂಡು, ತಿಳಿದುಕೊಂಡಳು. ಆಕೆ ತನ್ನ ಪರಿವಾರದವರನ್ನು ಕೂಡಿಕೊಂಡು ವಿಮಾನಗಳನ್ನು ಹತ್ತಿ ಬಹಳ ವೈಭವದಿಂದ ಬಂದು ದಾದಿಯನ್ನು ಚಿನ್ನದ ಆಸನದಲ್ಲಿ ಕುಳ್ಳಿರಿಸಿ ಸುವಾಸನೆಯುಳ್ಳ ನೀರಿನಿಂದ ತುಂಬಿದ ಚಿನ್ನದ ಕಲಶಗಳಿಂದ ಅಭಿಷೇಕ ಮಾಡಿ ಸುರಪುನ್ನಾಗ, ಮಂದಾರ, ಸಂತಾನಕ, ಪಾರಿಯಾತ್ರಕ ಎಂಬ ದಿವ್ಯ ಪುಷ್ಪಗಳನ್ನು ಮಳೆಗರೆದಳು. ಪರಿಮಳಯುಕ್ತವಾದ ತಂಗಾಳಿಯನ್ನು ಬೀಸಿದಳು. ದೇವಲೋಕದ ಭೇರಿಗಳನ್ನು ಬಾಜಿಸಿ (ಬಜಾವಣೆ ಮಾಡಿ) ಶ್ರೀಯಾದೇವತೆ ತನ್ನ ವಾಸಸ್ಥಾನಕ್ಕೆ ತೆರಳಿದಳು. ಇತ್ತ ದಾದಿ (ವಿನಯಮತಿ) ಶ್ರೀಯಾದೇವತೆಯ ವೈಭವವನ್ನು ಕಂಡು ನಿಶ್ಚಯವನ್ನು ಮಾಡಿ ಕೆಲವು ದಿವಸಗಳಲ್ಲಿ ಕಾಲವಾದಳು. ಆಕೆ ಈ ಜಂಬೂದ್ವೀಪದ ಹಿಮಾಲಯ ಪರ್ವತದ ಪದ್ಮೆಎಂಬ ಕೊಳದಲ್ಲಿ ಶ್ರೀಯಾದೇವತೆಯಾಗಿ ಹುಟ್ಟಿ, ಇಳಾ ಪಟ್ಟಣಕ್ಕೆ ಬಂದು ಆ ಪಟ್ಟಣದ ಜನರಿಗೆಲ್ಲ ರಾತ್ರಿಯಲ್ಲಿ ಕನಸಿನಲ್ಲಿ ಕಾಣಿಸಿಕೊಂಡು ಹೀಗೆಂದಳು- "ನಾನು ಶ್ರೀಯಾದೇವತೆಯಾಗಿರುವೆನು ನಿಮ್ಮ ಪಟ್ಟಣಕ್ಕೆ ಬಂದಿರುವೆನು. ನನಗೆ ಶ್ರೀವಿಹಾರ ಎಂಬ ದೇವಾಲಯವನ್ನು ಮಾಡಿ, ನನ್ನ ಪ್ರತಿಮೆಯನ್ನು ಇಟ್ಟುಕೊಂಡು ಪೂಜಿಸುತ್ತ ಸೇವೆ ಮಾಡುತ್ತ

ಪೂಜಿಸುತ್ತುಮೋಲಗಿಸುತ್ತುಮಿರಿಮಾನುಂ ನಿಮಗೆ ಬೇಡಿದ ವರವನೀವೆನೆಂಮ ಕನಸಿನೊಳ್ ತೋಱೆದೊಡೆ ಪೊಲಲ ಜನಮೆಲ್ಲಂ ನೆರೆದು ಶ್ರೀವಿಹಾರಮಂ ಮಾಡಿ ಶ್ರೀಯಾದೇವತೆಯ ಪ್ರತಿಮೆಯಂ ಸ್ಥಾಪಿಸಿ ಮಹಿಮೆಯಂ ಮಾದುತ್ತಂ ಪೂಜಿಸುತ್ತಮೋಲಗಿಸುತ್ತ ಮಿರ್ಪುದುಂ ಕಂದಿಳಾಮಹಾದೇವಿ ಅಪುತ್ರಿಕೆ ಮಕ್ಕಳಂ ಬೇದಿ ಪನ್ನೆರಡು ವರುಷಂ ಬರೆಗಂ ನಿಚ್ಚಲುಂ ಶ್ರೀವಿಹಾರಕ್ಕೆ ಪೋಗಿ ಶ್ರೀಯಾದೇವತೆಯನರ್ಚಸುತ್ತಂ ಪೂಜಿಸುತ್ತಂ ಮಹಾಮಹಿಮೆಯಂ ಮಾಡುತ್ತಂ ಆಡುತ್ತಂ ಪಾಡುತ್ತಮೋಲಗಿಸುತ್ತಮಿರೆಯದಂ ಕಂಡಜೆದು ಶ್ರೀಯಾದೇವತೆ ಪೂರ್ವವಿದೇಹಕ್ಕೆ ಪೋಗಿ ಸ್ವಯಂಪ್ರಭರೆಂಬ ತೀರ್ಥಕರ ಪರಮದೇವರಂ ಕಂದೆಱಗಿ ಪೊಡೆಮಟ್ಟಿಂತೆಂದು ಬೆಸಗೊಂಡಳ್ ಭಟಾರಾ ಎನ್ನ ಪೊಲಲೊಳಿರ್ಪ ಇಳಾಮಹಾದೇವಿಗೆ ಮಕ್ಕಳೇನಕ್ಕುಮೊ ಎಂದು ಬೆಸಗೊಂಡೊಡೆ ಭಟಾರರಿಂತೆಂದರ್ ಸ್ವರ್ಗದಿಂದೆ ಬಚ್ಚೆಬಂದಿಲ್ಲಿ ಓರ್ವ ದೇವಂ ಇಳಾಮಹಾದೇವಿಗೆ ಮಗನಾಗಿ ಪುಟ್ಟಗುಮೆಂದೊಡದಂ ಕೇಳ್ದು ಭಟ್ಟಾರರ್ಗೆಱಗಿ ಪೊಡೆವಟ್ಟು ಇಳಾಪಟ್ಟಣಕ್ಕೆ ಪೋಗಿ ಇಳಾಮಹಾದೇವಿಗೆ ಕನಸಿನೊಳಿಂತೆಂದು ಪೇಟ್ಪಳಿಳಾಮಹಾದೇವಿ ನಿನಗೆನ್ನ ಪ್ರಸಾದದೆ ಸೌಧರ್ಮಕಲ್ಪದೊಳ್ ಮೇಘಮಾಲಮೆಂಬ ವಿಮಾನದಿಂ ಬಚ್ಚೆ ವರ್ಧಮಾನನೆಂಬ ದೇವಂ ಬಂದು ನಿನಗೆ ಮಗನಾಗಿ ಪುಟ್ಟುಗುಮೆಂದು ಶ್ರೀಯಾದೇವತೆ ಪೇಟ್ಪೊಡಿಳಾ ಮಹಾದೇವಿಯಾದಮಾನುಂ ಸಂತಸಂಬಟ್ಟರ್ದು ಕೆಲವು ದಿವಸದಿಂ

ನೀವಿರಬೇಕು. ನಾನು ನಿಮಗೆ ಬೇಡಿದ ಇಷ್ಟಾರ್ಥವನ್ನು ಕೊಡುವೆನು" ಈ ರೀತಿಯಾಗಿ ಅವಳು ಕನಸಿನಲ್ಲಿ ಕಾಣಿಸಿದಳು. ಇದರಿಂದ ಪಟ್ಟಣದ ಜನರೆಲ್ಲರೂ ಒಟ್ಟಾಗಿ ಶ್ರೀವಿಹಾರವೆಂಬ ದೇವಾಲಯವನ್ನು ನಿರ್ಮಿಸಿದರು. ಅಲ್ಲಿ ಶ್ರೀಯಾದೇವತೆಯ ಪ್ರತಿಮೆಯನ್ನು ಪ್ರತಿಷ್ಠೆಮಾಡಿ, ಉತ್ಸವವನ್ನು ಮಾಡುತ್ತ ಪೂಜಿಸುತ್ತ ಸೇವೆಗಳನ್ನು ಜರುಗಿಸುತ್ತ ಇದ್ದರು. ಮಕ್ಕಳಿಲ್ಲದವಳಾದ ಇಳಾ ಮಹಾದೇವಿ ಇದನ್ನು ಕಂಡು ತನಗೆ ಮಕ್ಕಳಾಗಲಿ ಎಂದು ಪ್ರಾರ್ಥಿಸುತ್ತ, ಹನ್ನೆರಡು ವರ್ಷಗಳವರೆಗೆ ನಿತ್ಯವೂ ಶ್ರೀವಿಹಾರಕ್ಕೆ ಹೋಗಿ ಶ್ರೀಯಾದೇವತೆಯನ್ನು ಅರ್ಚನೆ ಮಾಡುತ್ತ ಪೂಜಿಸುತ್ತ ದೊಡ್ಡ ಉತ್ಸವವನ್ನು ಮಾಡುತ್ತ ಆಡುತ್ತ ಹಾಡುತ್ತ ಸೇವೆಸಲ್ಲಿಸುತ್ತಿದ್ದಳು. ಶ್ರೀಯಾದೇವತೆ ಅದನ್ನು ನೋಡಿ ತಿಳಿದು ಪೂರ್ವವಿದೇಹ ರಾಜ್ಯಕ್ಕೆ ಹೋಗಿ ಸ್ವಯಂಪ್ರಭರೆಂಬ ತೀರ್ಥಂಕರ ದೇವರನ್ನು ಕಂಡು ವಂದಿಸಿ ಸಾಷ್ಟಾಂಗ ಪ್ರಣಾಮ ಮಾಡಿ ಹೀಗೆ ಕೇಳಿದಳು- "ಪೂಜ್ಯರೇ, ನನ್ನ ಪಟ್ಟಣದಲ್ಲಿರುವ ಇಳಾ ಮಹಾದೇವಿಗೆ ಮಕ್ಕಳಾಗುವರೇ ಏನು?" ಹೀಗೆ ಕೇಳಿದಾಗ ಋಷಿಗಳು- "ಒಬ್ಬ ದೇವನು ಸ್ವರ್ಗದಿಂದ ಜಾರಿ ಬಂದು ಇಲ್ಲಿ ಇಳಾಮಹಾದೇವಿಗೆ ಮಗನಾಗಿ ಜನಿಸುವನು"- ಎಂದು ಹೇಳಿದರು. ಅದನ್ನು ಕೇಳಿ ಋಷಿಗಳಿಗೆ ನಮಿಸಿ ಅಡ್ಡಬಿದ್ದು ಶ್ರೀಯಾದೇವತೆ ಇಳಾ ಪಟ್ಟಣಕ್ಕೆ ಹೋದಳು. ಇಳಾಮಹಾದೇವಿಗೆ ಕನಸಿನಲ್ಲಿ ಕಾಣಿಸಿ ಹೀಗೆಂದಳು- "ಎಲೈ ಇಳಾ ಮಹಾದೇವಿ, ನನ್ನ ಅನುಗ್ರಹದಿಂದ ವರ್ಧಮಾನನೆಂಬ ದೇವನು ಸೌಧರ್ಮ ಎಂಬ ಸ್ವರ್ಗದಲ್ಲಿ ಮೇಘಮಾಲ ಎಂಬ ವಿಮಾನದಿಂದಿಳಿದು ಬಂದು ನಿನಗೆ ಮಗನಾಗಿ ಜನಿಸುವನು" - ಹೀಗೆಂದು ಶ್ರೀಯಾದೇವತೆ ಹೇಳಿದಾಗ ಇಳಾಮಹಾದೇವಿ ಅತಿಶಯವಾದ ಸಂತೋಷವನ್ನು ತಾಳಿದಳು. ಹೀಗೆಯೇ ಇದ್ದು ಕೆಲವು ದಿನಗಳನಂತರ ಅವಳಿಗೆ ಗರ್ಭವುಂಟಾಯಿತು. ಒಂಬತ್ತು ತಿಂಗಳು ತುಂಬಿ

ಗರ್ಭಮಾಗಿ ನವಮಾಸಂ ನೆಱೆದು ಮಗನಂ ಪೆತ್ತೊಡೆ ಶ್ರೀಯಾದೇವತೆ ಮಗನಂ ಕೊಟ್ಟಳೆಂದು ಕೂಸಿಂಗೆ ತಾಯುಂ ತಂದೆಯುಂ ನಂಟರುಮೆಲ್ಲಂ ನೆರೆದು ಸಿರಿದಿಣ್ಣನೆಂದು ಪೆಸರನಿಟ್ಟರ್ ಆತನುಂ ಶುಕ್ಲಪಕ್ಷದ ಚಂದ್ರನಂತೆ ಕ್ರಮಕ್ರಮದಿಂ ಬಳೆದು ನವಯೌವನನುಂ ಸರ್ವಕಳಾ ಕುಶಳನುಮಾಗಿರ್ದನ್ನೆಗಮಿತ್ತ ಸಾಕೇತ ಪುರಾಧಿಪತಿಯಪ್ಪ ಸುಮಂತನೆಂಬರಸನ ಮಗಳ್ ಸುಮತಿಯೆಂಬೊಳಾಕೆಯ ಸ್ವಯಂವರಕ್ಕರಸುಮಕ್ಕಳೆಲ್ಲಂ ನೆರೆದಿರ್ದಲ್ಲಿಗೆ ಸಿರಿದಿಣ್ಣಂಗಂ ಬಲೆಯಟ್ಟ ಬರಿಸಿದೊಡೆ ಸ್ವಯಂಭರದೊಳ್ ಸುಮತಿಯೆಲ್ಲರಂ ನೋಡಿಯಾರುಮಂ ಮೆಚ್ಚದೆ ಸಿರಿದಿಣ್ಣಂಗೆ ಮಾಲೆಸೂಡಿದೊಡೆ ಮದುವೆಯಾಗಿ ಕೆಲವು ದಿವಸಮಲ್ಲಿರ್ದು ಮಾವನವರಂ ಬೆಸಗೊಂದಿಳಾ ಪಟ್ಟಣಕ್ಕೆ ಪೋಪೆಮೆಂದೊಡಾತಂ ತನ್ನ ಮಗಳಪ್ಪ ಸುಮತಿಗೆ ಬಲೆವಲೆಗೊಟ್ಟು ಮಗಳೊಡನೆ ವಾಚಾಳನಪ್ಪ ಗಿಳಿಯುಮನಟ್ಟಿದೊಡವರ್ಗಳುಂ ಕತಿಪಯ ದಿವಸಂಗಳಿಂದಿಳಾಪಟ್ಟಣಕ್ಕೆ ಪೋಗಿ ಸುಖದಿಂದಿರೆ ಮತ್ತೊಂದು ದಿವಸಂ ಗಿಳಿಯಂ ಸಾಕ್ಷಿಮಾಡಿ ಇರ್ವರುಂ ಚದುರಂಗಮಾಡುತ್ತಿರೆ ಅರಸಿಯರಸನಂ ಗೆಲ್ದೊಡೆ ಗಿಳಿ ನೆಲದೊಳೆರಡು ಬರೆಯುಂ ಬರೆಗುಮರಸನರಸಿಯುಂ ಗೆಲ್ದೊಡೆ ಒಂದೆ ಬರೆಯುಂ ಬರೆಗುಮಿಂತು ಪಿರಿದುಂ ಬೇಗಮಾಡಿ ಅರಸನರಸಿಯಂ ಗೆಲ್ದೊಡೆರಡು ಬರೆಯುಂ ತೆಗೆದುದನರಸಂ ಕಂಡು ಕಮಮುಳಿದದಱ ಗೋಣಂ ಮುಱಿದೊಡಾ ಗಿಳಿಯುಂ ಸತ್ತಾ ಪೊಱಲ ಬಹಿರುದ್ಯಾನವನದೊಳ್ ವ್ಯಂತರದೇವನಾಗಿ ಪುಟ್ಟುತಿಂತಿರ್ದರುಂ ಪಲಕಾಲಮಿಷ್ಟವಿಷಯ

ಗಂಡುಮಗುವನ್ನು ಹೆತ್ತಳು. ಶ್ರೀಯಾದೇವತೆ ಮಗನನ್ನು ಕೊಟ್ಟಳೆಂದು ಆ ಮಗುವಿಗೆ ತಾಯಿ, ತಂದೆ, ನಂಟರು ಎಲ್ಲರೂ ಸೇರಿಕೊಂಡು ಸಿರಿದಿಣ್ಣ ಎಂದು ಹೆಸರಿಟ್ಟರು. ಸಿರಿದಿಣ್ಣನು ಶುಕ್ಲಪಕ್ಷದ ಚಂದ್ರನ ಹಾಗೆ ಅನುಕ್ರಮವಾಗಿ ಬೆಳೆದು ಹೊಸ ಜವ್ವನಿಗನೂ ಎಲ್ಲಾ ಕಲೆಗಳಲ್ಲಿ ಪರಿಣತನೂ ಆಗಿದ್ದನು. ಹೀಗಿರಲು ಇತ್ತ ಸಾಕೇತವೆಂಬ ಪಟ್ಟಣದ ಒಡೆಯನಾದ ಸುಮಂತನೆಂಬ ರಾಜನಿಗೆ ಸುಮತಿ ಎಂಬ ಮಗಳಿದ್ದಳು. ಆಕೆಯ ಸ್ವಯಂವರಕ್ಕೆ ರಾಜಕುಮಾರರೆಲ್ಲ ಬಂದು ಸೇರಿದ್ದರು. ಅಲ್ಲಿಗೆ ಸಿರಿದಿಣ್ಣನನ್ನೂ ಕರೆಕಳುಹಿಸಿ ಬರಮಾಡಿದ್ದರು. ಸ್ವಯಂವರದಲ್ಲಿ ಸುಮತಿ ಎಲ್ಲರನ್ನೂ ನೋಡಿ ಯಾರೊಬ್ಬರನ್ನೂ ಮೆಚ್ಚದೆ ಸಿರಿದಿಣ್ಣನಿಗೆ ವರಣಮಾಲಿಕೆಯನ್ನು ತೊಡಿಸಿದಳು. ಸಿರಿದಿಣ್ಣನು ಅವಳನ್ನು ವರಿಸಿ ಕೆಲವು ದಿನ ಅಲ್ಲೆ ಇದ್ದು, ಮಾವನವರನ್ನು ಕೇಳಿ, ತಾನು ಇಳಾಪಟ್ಟಣಕ್ಕೆ ಹೋಗುವೆನು-ಎಂದನು. ಸುಮಂತನು ತನ್ನ ಮಗಳಾದ ಸುಮತಿಗೆ ಬಳುವಳಿಕೊಟ್ಟು, ಮಗಳೊಡನೆ ಒಳ್ಳೆ ಮಾತುಗಾರಿಕೆ ಬಲ್ಲ ಒಂದು ಗಿಳಿಯನ್ನೂ ಕಳುಹಿಸಿದನು. ಅವರು ಕೆಲವು ದಿವಸಗಳಲ್ಲಿ ಇಳಾಪಟ್ಟಣಕ್ಕೆ ಹೋಗಿ ಅಲ್ಲಿ ಸುಖವಾಗಿದ್ದರು. ಹೀಗಿರುತ್ತ ಆ ಮೇಲೆ ಒಂದು ದಿನ ಇಬ್ಬರೂ ಗಿಳಿಯನ್ನು ಸಾಕ್ಷಿಯಾಗಿ ಮಾಡಿಕೊಂಡು ಚದುರಂಗವನ್ನು ಆಡುತ್ತಿದ್ದರು. ಆಗ ರಾಣಿಯು ರಾಜನನ್ನು ಗೆದ್ದರೆ, ಗಿಳಿ ನೆಲದಲ್ಲಿ ಎರಡು ಗೆರೆಯನ್ನು ಎಳೆಯುತ್ತಿತ್ತು. ರಾಜನು ರಾಣಿಯನ್ನು ಗೆದ್ದರೆ, ಒಂದೇ ಗೆರೆಯನ್ನು ಬರೆಯುತ್ತಿತ್ತು. ಹೀಗೆ ಬಹಳ ಹೊತ್ತಿನವರೆಗೆ ಆಡಿ ರಾಜನು ರಾಣಿಯನ್ನು ಗೆದ್ದಾಗ ಗಿಳಿ ಎರಡು ಗೆರೆಯನ್ನು ಬರೆದುಬಿಟ್ಟಿದ್ದಿತು. ಇದನ್ನು ಸಿರಿದಿಣ್ಣರಾಜನು ಕಂಡು ಅತ್ಯಂತ ಕೋಪಾವಿಷ್ಟನಾಗಿ ಅವರ ಕತ್ತನ್ನು ಮುರಿದನು. ಆ ಗಿಳಿ ಸತ್ತು ಆ ಪಟ್ಟಣದ ಹೊರಗಿನ ಉದ್ಯಾನದಲ್ಲಿ ವ್ಯಂತರ ದೇವನಾಗಿ ಹುಟ್ಟಿತು. ಹೀಗೆ ಇಬ್ಬರೂ ಪಲವು ಕಾಲ ತಮ್ಮ ಇಷ್ಟ ವಿಷಯದ

ಕಾಮಭೋಗಂಗಳನನುಭವಿಸುತ್ತಿರ್ಪನ್ನೆಗಂ ಮತ್ತೊಂದು ದಿವಸಂ ಸಪ್ತತಳಪ್ರಾಸಾದದ ಮೇಗಿರ್ವರುಂ ದಿಶಾವಳೋಕನಂ ಗೆಯ್ಯುತ್ತಿರ್ಪನ್ನೆಗಂ ಸಹಸ್ರಕೂಟಾಕಾರಮಪ್ಪುದೊಂದು ಮುಗಿಲಂ ಕಂಡಿಂತುಟೊಂದು ಚೈತ್ಯಾಲಯಮುಂ ಮಾದಿಸುವೆನೆಂದು ಪಲಗೆಯೊಳ್ ರೇಖೆಗೊಂಡು ಮತ್ತೆ ನೋಡ್ಪನ್ನೆಗಂ ಕರಗಿದುವಂ ಕಂಡವುವೆ ನಿರ್ವೇಗಕ್ಕೆ ಕಾರಣಮಾಗಿ ತಾಯುಂ ತಂದೆಯುಂ ನಂಟರುಮಂ ಬಿದಿಸಿ ನಿಶ್ಚಲ್ಯಂಗೆಯ್ದು ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆದು ವರಧರ್ಮ ಭಟ್ಟಾರರ ಪಕ್ಕದೆ ತಪಂಬಟ್ಟು ಪನ್ನೆರಡು ವರುಷಂಬರಂ ಗುರುಗಳನಗಲದಿರ್ದು ದ್ವಾದಶಾಂಗ ಚತುರ್ದಶ ಪೂರ್ವಮುಮಾಗಮಮೆಲ್ಲಮುಂ ಕಲ್ದು ಬಹುಕ, ಗುರುಗಳಂ ಬೆಸಗೊಂಡವರನುಮತದಿಂದೇಕವಿಹಾರಿಯಾಗಿ ಗ್ರಾಮ ನಗರ ಖೇಡ ಖರ್ವತ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಮಾಘಮಾಸದಂದಿಳಾಪಟ್ಟಣಕ್ಕೆ ವಂದಾ ಪೊಱಲ ಬಹಿರುದ್ಯಾನವನದೊಳಿರ್ದು ರಾತ್ರಿ ಪ್ರತಿಮಾಯೋಗದೊಳ್ ನಿಂದರ್ ಅನ್ನೆಗಂ ಮುನ್ನವರ ಕೆಲ್ಲೊಳ್ ಸತ್ತ ಗಿಳಿ ವ್ಯಂತರದೇವನಾಗಿ ಅಲ್ಲಿ ಪುಟ್ಟರ್ದುದು ಕಂಡೇನುಂ ಕಾರಣಮಿಲ್ಲೆನ್ನಂ ಕೊಂದವನೆಂದು ಮುಳಿವಾದಮಾನುಂ ಘೋರಮಪ್ಪ ವಾತಮುಂ ಶೀತಮುಮಂ ವಿಗುರ್ವಿಸಿ ನೀರ್ಗಳಂ ಮೇಗ ಸುರಿದು ಪೀಸುತ್ತಮಿಂತು ನಾಲ್ಕು ಜಾವಮುಂ ಘೋರಾಕಾರಮಾಗಿಯುಪಸರ್ಗಮಂ ಮಾಡೆ ಭಟಾರರುಂ ಪೇಳ್ದೋಪಸರ್ಗಮೆಂಬುದನಱೆದು

ಕಾಮಸುಖಗಳನ್ನು ಅನುಭವಿಸುತ್ತ ಇದ್ದರು. ಆಮೇಲೆ ಒಂದು ದಿವಸ ಅವರಿಬ್ಬರೂ ಏಳು ಉಪ್ಪರಿಗೆಗಳುಳ್ಳ ಕಟ್ಟಡದ ಮೇಲೆ ಇದ್ದು ದಿಕ್ಕುಗಳನ್ನು ನೋಡುತ್ತಿರುವಾಗ ಸಾವಿರ ಶಿಖರದ ಆಕಾರವುಳ್ಳ ಒಂದು ಮೋಡವನ್ನು ಕಂಡು, ಸಿರಿದಿಣ್ಣನು "ಈ ರೀತಿಯಿರುವ ಒಂದು ಜಿನಾಲಯವನ್ನು ಮಾಡಿಸುವೆನು" ಎಂದು ಹೇಳಿಕೊಂಡು, ಚಿತ್ರದ ಹಲಗೆಯ ಮೇಲೆ ರೇಖಾಚಿತ್ರವನ್ನು ಬರೆದು, ಮತ್ತೆ ನೋಡುವ ಹೊತ್ತಿಗೆ ಅದು ಕರಗಿಹೋದುದನ್ನು ಕಂಡನು. ಅದುವೇ ಅವನಿಗೆ ವೈರಾಗ್ಯಕ್ಕೆ ಕಾರಣವಾಯಿತು. ತಾಯಿ, ತಂದೆ, ನಂಟರನ್ನು ಅಗಲಿ, ಮಾಯಾಶಲ್ಯ, ಮಿಥ್ಯಾಶಲ್ಯ, ನಿದಾನಶಲ್ಯ ಎಂಬ ಮೂರುಬಗೆಯ ಶಲ್ಯಗಳನ್ನು ಬಿಟ್ಟು, ಬಾಹ್ಯ ಪರಿಗ್ರಹಗಳನ್ನೂ (ಭೂಮಿ, ಮನೆ, ಧನ, ಧಾನ್ಯ, ದ್ವಿಪದ, ಚತುಷ್ಪದಗಳು, ವಾಹನ, ಶಯ್ಯೆ, ಆಸನ, ಕ್ಷುದ್ರಲೋಹಪಾತ್ರೆ, ಮಡಕೆ- ಎಂಬ ಹತ್ತು) ಮಿಥ್ಯಾತ್ವ, ಕಾಮಾಭಿಲಾಷೆ, ದ್ವೇಷ, ಅಪಹಾಸ್ಯ ಮುಂತಾದ ಆಂತರಂಗ ಪರಿಗ್ರಹಗಳನ್ನೂ ತೊರೆದು ವರಧರ್ಮ ಋಷಿಗಳ ಬಳಿ ತಪಸ್ಸನ್ನು ಸ್ವೀಕರಿಸಿದನು. ಹನ್ನೆರಡು ವರ್ಷಗಳವರೆಗೂ ಗುರುಗಳೊಡನಿದ್ದು ಹನ್ನೆರಡು ಅಂಗಗಳಿಂದಲೂ ಹದಿನಾಲ್ಕು ಪೂರ್ವಗಳಿಂದಲೂ ಕೂಡಿದ ಶಾಸ್ತ್ರಗಳನ್ನೆಲ್ಲ ಕಲಿತು, ಆಮೇಲೆ ಗುರುಗಳನ್ನು ಕೇಳಿ ಒಪ್ಪಿಗೆ ಪಡೆದು ಸಿರಿದಿಣ್ಣ ಋಷಿಗಳು ಒಬ್ಬರೇ ಸಂಚರಿಸುತ್ತ ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖಗಳಲ್ಲಿ ಸಂಚರಿಸುತ್ತ ಮಾಘಮಾಸದಲ್ಲಿ ಇಳಾಪಟ್ಟಣಕ್ಕೆ ಬಂದರು. ಬಂದು, ಆ ಪಟ್ಟಣದ ಬಾಹ್ಯೋದ್ಯಾನದಲ್ಲಿದ್ದು ರಾತ್ರಿಯಲ್ಲಿ ಪ್ರತಿಮಾಯೋಗದಲ್ಲಿ ನಿಂತರು. ಅಷ್ಟರಲ್ಲಿ ಪೂರ್ವಜನ್ಮದಲ್ಲಿ ಅವರು ಕೊಂದ ಗಿಳಿ ವ್ಯಂತರದೇವತೆಯಾಗಿ ಅಲ್ಲಿ ಹುಟ್ಟಿದ್ದುದು ಅವರನ್ನು ಕಂಡಿತು. "ಏನೂ ಕಾರಣವಿಲ್ಲದೆ ನನ್ನನ್ನು ಕೊಂದಿದ್ದಾನೆ" ಎಂದು ಕೋಪಗೊಂಡು ಬಹಳ ಭಯಂಕರವಾದ ಗಾಳಿಯನ್ನೂ ಶೈತ್ಯವನ್ನೂ ಮಾಯೆಯಿಂದ ಸೃಷ್ಟಿಸಿತು. ಧಾರಾಕಾರವಾಗಿ ಮೇಲಿನಿಂದ ಮಳೆಯನ್ನು ಸುರಿಸುತ್ತ, ಗಾಳಿಬೀಸುತ್ತ ಹೀಗೆ ನಾಲ್ಕು

ಗಾಹೆ ।। ಖಮ್ಮಾಮಿ ಸವ್ವಜೀವಾಣಂ ಸವ್ವೇಜೀವಾ ಖಮಂತು ಮೇ
ಮೆತ್ತೀ ಮೇ ಸವ್ವಭೂದೇಸು ವೇರಂ ಮಜ್ಝಣ ಕೇಣ ಚ

ಶ್ಲೋಕ।। ಅಚ್ಛೇದ್ಯೋಽನಂತ ಸೌಖ್ಯೋಽಹಂ ವೇತ್ತ್ಯಾಽಪೂರ್ವೋ ನಿರಂಜನಃ
ಸರ್ವದುಃಖಾಕರಂ ದೇಹಂ ತ್ಯಜಾಮೀತತ್ ಪರಿಸ್ಫುಟಂ ।।

ಎಂದಿಂತು ಸಮತ್ವೀಭಾವನೆಯಂ ಭಾವಿಸಿ ಶುಕ್ಲಧ್ಯಾನಮಂ ಜಾನಿಸಿ ಎಂಟು ಕರ್ಮಂಗಳಂ ಕೆಡಿಸಿ ಮೋಕ್ಷಕ್ಕೆವ್ವೋದರ್ ಮತ್ತಂ ಪೆಱರುಂ ರತ್ನತ್ರಯಂಗಳನಾರಾಧಿಸುವ ಭವ್ಯರ್ಕಳ್ ಸಿರಿದಿಣ್ಣ ಭಟ್ಟಾರರಂ ಮನದೊಳ್ ಬಗೆದು ದೇವೋಪಸರ್ಗ ಮನುಷ್ಯೋಪಸರ್ಗ ತಿರಿಕೋಪಸರ್ಗಮಚೇತನೋಪ ಸರ್ಗಮೆಂದಿತುಂ ಚತುರ್ವಿಧಮಪ್ಪುಪಸರ್ಗಮುಮಂ ಪಸಿವು ನೀರಟ್ಟಿ ಮೊದಲಾಗೊಡೆಯವಿರ್ಪತ್ತೆರಡು ಪರೀಷಹಂಗಳಂ ಸೈರಿಸಿ ವ್ಯಾಧಿಗಳಿಂದಪ್ಪ ವೇದನೆಯಂ ಸೈರಿಸಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

ಜಾವ (ಅರ್ಧದಿನ) ಭಯಂಕರವಾದ ರೀತಿಯಲ್ಲಿ ಉಪಸರ್ಗ (ತಪಸ್ಸಿಗೆ ವಿಘ್ನ)ವನ್ನು ಮಾಡಿತು. ಆಗ ಸಿರಿದಿಣ್ಣ ಋಷಿಗಳು - ಇದು ದೇವೋಪಸರ್ಗ ಎಂದು ತಿಳಿದರು. (ನಾನು ಎಲ್ಲ ಜೀವಗಳನ್ನೂ ಕ್ಷಮಿಸುತ್ತೇನೆ. ಎಲ್ಲ ಜೀವಗಳೂ ನನ್ನನ್ನು ಕ್ಷಮಿಸಲಿ. ಎಲ್ಲ ಪ್ರಾಣಿಗಳಲ್ಲಿಯೂ ನನಗೆ ಮೈತ್ರಿಯಿದೆ. ನನಗೆ ಎಲ್ಲಿಯೂ ದ್ವೇಷವಿಲ್ಲ.) (ನನ್ನನ್ನು ಕತ್ತರಿಸಲು ಸಾಧ್ಯವಿಲ್ಲ. ನಾನು ಕೊನೆಯಿಲ್ಲದ ಸುಖವುಳ್ಳವನು. ತಿಳಿದವನು, ಅನಾದಿ, ಕರ್ಮಲೇಪವಿಲ್ಲದವನು. ಎಲ್ಲ ದುಃಖಿಗಳಿಗೂ ಆಶ್ರಯವಾಗಿರುವ ಶರೀರವನ್ನು ತೊರೆಯುತ್ತೇನೆ-ಇದು ನಿಶ್ಚಯ) ಈ ರೀತಿ ಸುಖದುಃಖಿ ಸಮಭಾವವನ್ನು ಭಾವಿಸಿ, ಶುಕ್ಲಧ್ಯಾನವನ್ನು ಮಾಡಿ ಎಂಟು ಕರ್ಮಗಳನ್ನು ನಾಶಮಾಡಿ, ಮೋಕ್ಷವನ್ನೆಯ್ದಿದರು. ರತ್ನತ್ರಯವನ್ನು ಆರಾಧನೆ ಮಾಡುವ ಬೇರೆ ಭವ್ಯರು ಕೂಡ, ಸಿರಿದಿಣ್ಣ ಋಷಿಗಳನ್ನು ಮನಸ್ಸಿನಲ್ಲಿ ಭಾವಿಸಿ ದೇವ-ಮಾನವ-ತಿರ್ಯಕ್ಕು- ಅಚೇತನ ಎಂಬ ನಾಲ್ಕು ಬಗೆಯವರಿಂದ ಒದಗುವ ಉಪಸರ್ಗಗಳನ್ನೂ ಹಸಿವು- ಬಾಯಾರಿಕೆ ಮೊದಲಾಗಿ ಉಳ್ಳ ಇಪ್ಪತ್ತೆರಡು ಪರೀಷಹಗಳನ್ನೂ ಸಹಿಸಿಕೊಂಡು, ರೋಗಗಳಿಂದ ಉಂಟಾಗುವ ನೋವನ್ನೂ ಸಹಿಸಿ, ಸ್ವರ್ಗ ಮೋಕ್ಷ ಸುಖಗಳನ್ನು ಪಡೆಯಲಿ!

೧೦. ವೃಷಭಸೇನ ಭಟ್ಟಾರರ ಕಥೆ

ವೃಷಭಸೇನ ಭಟ್ಟಾರರ ಕಥೆಯಂ ಪೇಟ್ಪಂ :

ಗಾಹೆ ॥ ಉಣ್ಹಂ ವಾದಂ ಉಣ್ಹಂ ಸಿಳಾತಳಂ ಅದವಂ ಚ ಅತಿ ಉಣ್ಹಂ
ಸಹಿ ಊಣ ಉಸಹಸೇಣೋ ಪಡಿವಣ್ಣೋ ಉತ್ತಮಂ ಅಟ್ಠಂ ॥

[ಉಣ್ಹಂ ವಾದಂ-ಬಿಸಿದಪ್ಪ ಗಾಳಿಯುಮಂ, ಉಣ್ಹಂ-ಬಿಸಿದಪ್ಪುದಂ, ಸಿಳಾತಳಂ - ಯೋಗ ಪೀಠದ ಸಿಲೆಯ ಮೇಗುಮಂ, ಅದವಂ ಚ - ಬಿಸಿಲುಮಂ, ಅತಿ ಉಣ್ಹಂ - ಆದಂ ಬಿಸಿದಪ್ಪುದಂ, ಸಹಿಊಣ - ಲೇಸಾಗಿ ಸೈರಿಸಿ, ಊಸಹಸೇಣೋ-ವೃಷಭಸೇನರೆಂಬ ಮುನಿ, ಪಡಿವಣ್ಣೋ-ಪೊರ್ದಿದೊಂ, ಉತ್ತಮ ಅಟ್ಠಂ-ಮಿಕ್ಕ ದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯುಂ]

ಅದೆಂತೆಂದೊಡೆ : ಈ ಜಂಬೂದ್ವೀಪದ ಭರತಕ್ಷೇತ್ರದೊಳವಂತಿಯೆಂಬುದು ನಾಡಲ್ಲಿ ಉಜ್ಜೇನಿಯೆಂಬುದು ಪೊಬಲದನಾಳ್ವಂ ಪ್ರದ್ಯೋತನೆಂಬರಸನಾತನ ಮಹಾದೇವಿ ಜ್ಯೋತಿರ್ಮಾಲೆಯೆಂಬೊಳಂತವರ್ಗಳಿಷ್ಟವಿಷಯ ಕಾಮಭೋಗಂಗಳನನುಭವಿಸುತ್ತಂ ಕಾಲಂ ಸಲೆ ಮತ್ತೊಂದು ದಿವಸಮರಸಂ ಕಾಡಾನೆಯಂ ಪಿಡಿಯಲ್ವೇಡಿಯಾನೆಯನೇಱಿ ಅಡವಿಗವ್ಪೋದೊಡದು ಮದವಿಹ್ವಳಿತನಾಗಿ ಮೆಯ್ಯಱಿಯದೆ ದಿಶಾಪಟ್ಟಂಗೊಂಡೊಂದೆಸೆಗೆ ಕೊಂಡೋಡಿ ದಂಡಕಾರಣ್ಯಮ ಪ್ಪಡವಿಯ ನಡುವೆ ತನ್ನ ಬೇಗದಿಂ ಪರಿಯೆ ನಾಡೆಯಂತರಂಬೋದೊಡೊಂದು ಮರದಡ್ಡ ಬರ್ದ ಕೊಂಬಂ ಕಂಡರಸಂ ಪಿಡಿದು ನೇಲ್ದಿರ್ದೊಡಾನೆಯುಂ ಪೆಱತೊಂದು ದೆಸೆಗೆವ್ಪೋಯ್ತಂತರಸನುಂ ಮರದಿಂದಿಟಿದು ನಾಡ ಬಟ್ಟೆಯೊಳ್ ತಗುಳ್ದು ಆಡವಿಯಂ ಪೊಱಮಟ್ಟು ಬಂದೊಂದು

ವೃಷಭಸೇನ ಋಷಿಗಳ ಕಥೆಯನ್ನು ಹೇಳುವೆನು : (ವೃಷಭಸೇನರೆಂಬ ಋಷಿ ಬಿಸಿಯಾದ ಗಾಳಿಯನ್ನೂ ಬಿಸಿಯಾದ ಯೋಗಪೀಠ ಶಿಲೆಯ ಮೇಲಿನ ಭಾಗವನ್ನೂ ಅತ್ಯಂತ ಉಷ್ಣವಾಗಿರುವ ಬಿಸಿಲನ್ನೂ ಚೆನ್ನಾಗಿ ಸಹಿಸಿ ಶ್ರೇಷ್ಠವಾದ ದರ್ಶನ-ಜ್ಞಾನ-ಚಾರಿತ್ರಗಳ ಆರಾಧನೆಯನ್ನು ಮಾಡಿದರು.) ಅದು ಹೇಗೆಂದರೆ : ಈ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ಅವಂತಿ ಎಂಬ ನಾಡಿನಲ್ಲಿ ಉಜ್ಜೈನಿ ಎಂಬ ಪಟ್ಟಣವಿದೆ. ಅದನ್ನು ಪ್ರದ್ಯೋತನೆಂಬ ರಾಜನು ಆಳುತ್ತಿದ್ದನು. ಅವನ ರಾಣಿ ಜ್ಯೋತಿರ್ಮಾಲೆ ಎಂಬವಳು. ಅಂತು ಅವರು ತಮ್ಮ ಪ್ರೀತಿಯ ವಿಷಯದ ಕಾಮಸುಖಗಳನ್ನು ಅನುಭವಿಸುತ್ತ ಕಾಲ ಕಳೆಯುತ್ತಿದ್ದರು. ಹೀಗಿರಲು ಆಮೇಲೆ ಒಂದು ದಿವಸ ರಾಜನು ಕಾಡಾನೆಯನ್ನು ಹಿಡಿಯುವುದಕ್ಕಾಗಿ ಆನೆಯ ಮೇಲೇರಿಕೊಂಡು ಕಾಡಿಗೆ ಹೊರಟನು. ಅದು ಸೊಕ್ಕೇರಿದುದಾಗಿ ಮೈಮೇಲೆ ಎಚ್ಚರವಿಲ್ಲದೆ ಯಾವುದೋ ದಿಕ್ಕಿಗೆ ಓಡುತ್ತ ಹೋಯಿತು. ಒಂದು ದಿಕ್ಕಿನ ಕಡೆಗೆ ಓಡುತ್ತ ತನ್ನ ವೇಗದಿಂದ ದಂಡಕಾರಣ್ಯ ಎಂಬ ಕಾಡಿನ ನಡುವೆ ತೆರಳಿತು. ಮತ್ತೆಯೂ ದೂರಕ್ಕೆ ಅದು ಹೋಗುತ್ತಿರಲು ಒಂದ ಮರದ ಅಡ್ಡಕ್ಕೆ ಬಾಚಿದ್ದ ಅದರ ಕೊಂಬೆಯನ್ನು ರಾಜನು ಕಂಡು ಅದನ್ನು ಹಿಡಿದು ನೇತಾಡಿದನು. ಆನೆ ಬೇರೊಂದು ದಿಕ್ಕಿಗೆ ಹೋಯಿತು. ಅಂತೂ ರಾಜನು ಮರದಿಂದ ಇಳಿದು ನಾಡಿನ ದಾರಿಯನ್ನು ಹಿಡಿದು ಆ ಕಾಡಿನಿಂದ ಹೊರಟು ಖೇಡ ಎಂಬ ಒಂದು ಊರಿಗೆ ಹೋದನು. ಆ

ಬೀದಮೆಂಬೂರನೆಯ್ದಿಯದಱ ಸಾರೆಯೊಂದು ಕೆಯ್ಯಂಟದಱ ಸಾರೆಯೊಳ್ ಬಾವಿಯುಂಟದಱ ತದಿಯೊಳ್ ಬಂದು ಕುಳ್ಳಿರ್ದು ಪಸಿವಿನಿಂವಂ ತೃಪೆಯಿಂವಂ ಪಥಶ್ರಮದಿಂದಾದಮಾನುಂ ಸೇದೆಗೆಟ್ಟು ಬಂಬಳಬಾಡಿರ್ಪನ್ನೆಗಂ ಆವೂರ ಗಾವುಂಡಂ ಜಿನವಾದಿಕನೆಂಬೊನಾತನ ಗಾವುಂಡಿ ಜಿನಮತಿಯೆಂಬೊಳಾಯಿರ್ವರ್ಗ್ಗಂ ಮಗಳ್ ಜಿನದತ್ತೆಯೆಂಬೊಳತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿಯುಮೆಂದಿವನೊತೆಯೊಳ್ ನೀರಂ ತರಲ್ಕೆಂದು ಬಾವಿಗೆ ಪೋದಾಕೆಯುಂ ಕಂಡರಸನಿಲೆ ಕೂಸೆ ನೀರಂ ಕುಡಿಯಲೆಜಿಯಾ ಎಂದೊಡಂತೆಗೆಯ್ದೆನೆಂದಾತನ ರೂಪುಂ ಗಾದಿಯುಂ ತೇಜಮುಂ ಲಾವಣ್ಯಮುಮಂ ಕಂಡಾಟಿಸಿ ನೀರಂ ಸೇದಿಕೊಂದು ಬಂದು ಕುಡಿಯಲೆಜಿಯೆ ಕುಡಿಯೆಕುಡಿಯೆ ಕರಗದ ದಾರೆಯನುಗಿದುಕೊಂಡೊಡರಸನಾಕೆಯ ಮೊಗಮಂ ನೋದಿ ನಕ್ಕೇಕೆ ಕಾದುವೌ ಕೂಸೆ ಕಾದದೆ ಕುಡಿಯಲೆಜಿಯಾ ಎಂದೊಡಾಕೆಯುಂ ಕುಡಿಯಲ್ಕೆಜಿದು ತನ್ನ ಮನೆಗೆ ಪೋಗಿ ತನ್ನಂ ತಂದೆಗಿಂತೆಂದಳಮ್ಮಾ ಊರ ಪೊಜಿಗಣ ಬಾವಿಯೊಳೊರ್ವಂ ಮಹಾಪುರುಷಂ ಬಂದಿರ್ದೊನಾತನಂ ನೀಮೊಡಗೊಂದು ಮನೆಗೆ ಬನ್ನಿಮೆಂದೊಡುತೆಗೆಯ್ದೆನೆಂದಾತನುಂ ಪೋಗಿಯೊಡಗೊಂದು ಬಂದಾತನ ಶ್ರಮಂ ಪೋಗೆ ದಿವ್ಯಮಪ್ಪಾಹಾರಮನೂಡಿರ್ದನ್ ಅನ್ನೆಗಮರಸನದಿವಚ್ಚಿಯುಂ ನೋಡುತ್ತುಂ ಪೊಜಿಗಣಿಂವಂ ತಂತ್ರಮೆಲ್ಲಂ ಬಂದರಸನಿಲ್ಗೆವಂದೊನೆಯೆಂದೂರೊಳಗೆಲ್ಲಮಱಿಸಿ ಬಿಸಗೊಂಡವರರಸನಂ ಕಂಡೆಱಗಿ

ಊರಿನ ಸಮೀಪ ಬಂದು ಗದ್ದೆಯಿತ್ತು. ಅದರ ಹತ್ತಿರ ಒಂದು ಬಾವಿಯಿತ್ತು. ಅದರ ಕಟ್ಟೆಯಲ್ಲಿ ಬಂದು ಕುಳಿತು, ಹಸಿವಿನಿಂದಲೂ ಬಾಯಾರಿಕೆಯಿಂದಲೂ ದಾರಿ ನಡೆದ ಶ್ರಮದಿಂದಲೂ ಬಹಳವಾದ ಆಯಾಸದಿಂದ ಅತಿಯಾಗಿ ಬಾಡಿಹೋಗಿದ್ದನು. ಆ ಸಂದರ್ಭದಲ್ಲಿ .... ಆ ಊರಿನಲ್ಲಿ ಜಿನವಾದಿಕನೆಂಬ ಗೌಡನಿದ್ದನು. ಅವನ ಗೌಡಿತಿ ಜಿನಮತಿಯೆಂಬವಳು. ಆ ಇಬ್ಬರಿಗೂ ಜಿನದತ್ತೆ ಎಂಬ ಮಗಳಿದ್ದಳು. ಅವಳು ಅತ್ಯಂತ ರೂಪ-ಲಾವಣ್ಯ-ಸೌಭಾಗ್ಯ- ಕಾಂತಿಗಳಿಂದ ಕೂಡಿದವಳಾಗಿದ್ದಳು. ನೀರನ್ನು ತರುವುದಕ್ಕಾಗಿ ಬಾವಿಗೆ ಹೋದಂತಹ ಆಕೆಯನ್ನು ರಾಜನು ಕಂಡು - "ಎಲೈ ಕನ್ಯೆಯೇ ಕುಡಿಯುವುದಕ್ಕೆ ನೀರನ್ನು ಹೊಯ್ಯು" ಎಂದನು. 'ಹಾಗೆಯೇ ಮಾಡುವೆನು' - ಎಂದು ಆಕೆ ರಾಜನ ರೂಪವನ್ನೂ ಸೌಂದರ್ಯವನ್ನೂ ಕಾಂತಿ ಲಾವಣ್ಯಗಳನ್ನೂ ಕಂಡು ಪ್ರೀತಿಸಿ ಬಾವಿಯಿಂದ ನೀರನ್ನು ಸೇದಿಕೊಂಡು ಬಂದು ಕುಡಿಯುವುದಕ್ಕಾಗಿ ಹೊಯ್ದಳು. ಕುಡಿಯುತ್ತ ಇದ್ದ ಹಾಗೆ ಕೊಡದ ನೀರ ಧಾರೆಯನ್ನು ನಿಲ್ಲಿಸಲು, ರಾಜನು ಅವಳ ಮುಖವನ್ನು ನೋಡಿ ನಕ್ಕು - "ಯಾಕೆ ಮಗು ತೊಂದರೆಪಡಿಸುತ್ತೀ ? ತೊಂದರಪಡಿಸದೆ ಕುಡಿಯಲು ಎರೆ" ಎಂದು ಹೇಳಲು, ಆಕೆ ಕುಡಿಯಲಿಕ್ಕೆ ನೀರನ್ನು ಹೊಯ್ದು, ತನ್ನ ಮನೆಗೆ ಹೋಗಿ ತನ್ನ ತಂದೆಗೆ ಹೀಗೆಂದಳು - "ಅಪ್ಪಾ, ಊರ ಹೊರಗಿನ ಬಾವಿಯ ಬಳಿ ಒಬ್ಬ ಮಹಾಪುರುಷನು ಬಂದಿದ್ದಾನೆ. ಅತನನ್ನು ನೀವು ಮನೆಗೆ ಕರೆದುಕೊಂಡು ಬನ್ನಿ." ಹೀಗೆನ್ನಲು, ಜಿನವಾದಿಕನು 'ಹಾಗೆಯೇ ಮಾಡುವೆನು' ಎಂದುಕೊಂಡು ಅಲ್ಲಿಗೆ ಹೋಗಿ ಅರಸನನ್ನು ಒಟ್ಟಿಗೆ ಕರೆತಂದು ಅವನ ಶ್ರಮ ಪರಿಹಾರವಾಗುವಂತೆ ದಿವ್ಯವಾದ ಆಹಾರವನ್ನು ಉಣಲು ಕೊಟ್ಟಿದ್ದನು. ಅಷ್ಟರಲ್ಲಿ ರಾಜನ ಪಾದಚಿಹ್ನೆಗಳನ್ನು ನೋಡುತ್ತ ಹಿಂದಿನಿಂದ ಸೈನ್ಯವೆಲ್ಲ ಬರುತ್ತ "ರಾಜನು ಇಲ್ಲಿಗೆ ಬಂದನ?" ಎಂದು ಊರಿನಲ್ಲೆಲ್ಲ ಹುಡುಕುತ್ತ ಕೇಳುತ್ತ ಬಂದು, ಅವರು ರಾಜನನ್ನು ಕಂಡರು. ರಾಜನಿಗೆ ನಮಿಸಿ ಸಾಷ್ಟಾಂಗ ವಂದಿಸುವುದನ್ನೂ ಜೀಯಾ, ಅನುಗ್ರಹಿಸಬೇಕು

ಪೊಡೆವದುವುದುವುಂ ಜೀಯ ಮಹಾಪ್ರಸಾದವೆಂಬುದುಮುಂ ಗಾವುಂದು ಕಂಡೆಲೆ ಈತನರಸನೆಂದಜೆವಗ್ಗಳಂ ಪ್ರತಿಪತ್ತಿಯುಂ ಗೌರವಮುಮುಂ ಮಾಡಿದೊಡರಸಂ ತನ್ನ ಪೆಗ್ಗಡೆಗಳಿಂದಂ ಕೂಸಂ ಬೇಡಿ ಪೆತ್ತು ಮದುವೆನಿಂದಾಕೆಗೆ ಮಹಾದೇವಿಪಟ್ಟಂಗಟ್ಟಿ ತನ್ನ ಪೊಟಲ್ಗೆ ಪೋಗಿ ಕದುಮಾಡಮಂ ಬಳಸಿಯುಮಿರ್ದಂತಃಪುರದೊಳಗೊಂದೊಳ್ಳಿತಪ್ಪ ಮಾಡಮಂ ಕೊಟ್ಟರಿಸಿ ಎಲ್ಲಾ ಅರಸಿಯರ್ಕಳುಮ ನುಟಿವು ಜಿನದತ್ತೆಗಾಸಕ್ತನಾಗಿ ಪಲಕಾಲಮಾಕೆಯೊಳಿಪ್ಪವಿಪಯ ಕಾಮಭೋಗಂಗಳನನು ಭವಿಸುತ್ತಿರ್ಪನ್ನೆಗಮೊಂದು ದಿವಸಮುದವಿಯ ಸೊರ್ಕದಾನೆ ಗಣಿಯಾನೆಗಳ್ವೆರಸು ಒಂಮ ಬಾರಿಯಂ ಪೊಕ್ಕೊಡೆ ಪಿರಿಮಂ ಕಳಕಳಮಾಗಿ ಅರಸಂಗಜೆಪಿಮೊಡರಸನುಂ ಕೇಳ್ದು ತುರಿಪದಿಂ ಪೊಜಮಟ್ಟು ಕಾಡಾನೆಯಂ ಕಟ್ಟಸಲೆಂದು ಬಾರಿಗೆಪೋಪೊನಾ ಪ್ರಸ್ತಾಪದೊಳ್ ಜಿನದತ್ತೆ ಪಸದನಂಗೊಂಡಿರ್ದಾಕೆ ಎನ್ನಂ ಬಿಸುಟ್ಟರಸಂ ಪೋದೊನೆಂದು ಮುಳಿದು ನುಡಿವುದುಮರಸನಾಕೆಯನೊಡಗೊಂದು ಪೋಗದುದಂ ಕಂಡರಸಿಯರ್ಕಳೆಲ್ಲಂ ಸಂತೋಸವಮಾಗಿ ಇನ್ನೆದುಗದುರಸಂ ಸೂಟುಂ ಪಾಟಿಯುಮನೀಗುದೆಂದು ರಾಗಿಸಿ ನುಡಿವ ಮಾತುಗಳಂ ಜಿನದತ್ತೆ ಕೇಳ್ದು ಕಿನಿಸಿ ಇನ್ನಾತನಿನಗೆ ಬಾಟ್ಟಿಯಲ್ಲನೆಂದು ತನ್ನ ಮಾತದಿಂ ಪೊಜಮಟ್ಟು ಪಿಲಿತೊಂದು ಪ್ರಾಸಾದದೊಳ್ ಪೋಗಿರ್ದೊಳ್

ಎಂದು ಹೇಳುತ್ತಿರುವುದನ್ನೂ ಗೌಡನು ಕಂಡು "ಎಲಾ! ಈತನು ರಾಜನು!" ಎಂದು ತಿಳಿದು ಅವನಿಗೆ ಹೆಚ್ಚಿನ ಸತ್ಕಾರವನ್ನೂ ಮರ್ಯಾದೆಯನ್ನೂ ಮಾಡಿದನು. ರಾಜನು ತನ್ನ ಹೆಗ್ಗಡೆಗಳ ಮೂಲಕ ಕನ್ಯೆಯನ್ನು ಕೇಳಿ, ಪಡೆದು ಮದುವೆಯಾದನು. ಅವಳಿಗ ಸಟ್ಟುವ ರಾಣಿಯ ಪದವಿಯನ್ನು ಕೊಟ್ಟು, ತನ್ನ ಪಟ್ಟಣಕ್ಕೆ ತೆರಳಿದನು. ಅಲ್ಲಿ ರಾಣೀವಾಸ ಗೃಹಗಳಿಂದ ಅವರಿಸಿದ ಒಂದು ಉಪ್ಪರಿಗೆಮನೆಯನ್ನು ಅವಳಿಗೆ ಕೊಟ್ಟು ಅವಳನ್ನು ಅಲ್ಲಿ ಇರುವಂತೆ ಮಾಡಿದನು. ರಾಜನು ತನ್ನ ಎಲ್ಲಾ ರಾಣಿಯರನ್ನೂ ಬಿಟ್ಟು ಜಿನದತ್ತೆಯ ಮೇಲೆ ಆಸಕ್ತನಾಗಿ ಹಲವು ಕಾಲದವರೆಗೆ ಆಕೆಯಲ್ಲಿ ಇಷ್ಟವಾದ ಕಾಮಸುಖಿಗಳನ್ನು ಅನುಭವಿಸುತ್ತ ಇದ್ದನು. ಹೀಗಿರಲು ಒಂದು ದಿವಸ ಕಾಡಿನ ಒಂದು ಸೊಕ್ಕಾನೆ ತನ್ನ ಗುಂಪಿನ ಆನೆಗೊಳೊಂದಿಗೆ ಬಂದು ಆನೆಗಳನ್ನು ಹಿಡಿಯುವ ಲಕ್ಕಡಿ ಕೋಟಿಯನ್ನು ಹೊಕ್ಕಿತು. ಆಗ ಬಹಳ ಕೋಲಾಹಲವಾಯಿತು. ರಾಜನಿಗೆ ತಿಳಿಸಲು, ರಾಜನು ಕೇಳಿ ತ್ವರೆಯಾಗಿ ಹೊರಟು ಕಾಡಾನೆಯನ್ನು ಬಂಧಿಸುವುದಕ್ಕಾಗಿ ಬಾರಿಗೆ ಹೋದನು. ಆ ಸಂದರ್ಭದಲ್ಲಿ ಜಿನದತ್ತೆ ಅಲಂಕೃತಳಾಗಿದ್ದವಳು, "ನನ್ನನ್ನು ಬಿಟ್ಟು ರಾಜನು ಹೋದನು" ಎಂದು ಕೋಪಿಸಿ ನುಡಿದಳು. ರಾಜನು ಅವಳನ್ನು ಕೂಡಿಕೊಂಡು ಹೋಗಮುದನ್ನು ಕಂಡು ರಾಣಿಯರಿಗೆಲ್ಲ ಸಂತೋಷವಾಯಿತು. "ಇನ್ನು ರಾಜನು ನಮಗೂ ಸರದಿ ಪ್ರಕಾರದ ಭೋಗಾವಕಾಶವನ್ನು ಕೊಡುವನು" ಎಂದು ಆನಂದಗೊಂಡು ನುಡಿಯುವ ಮಾತನ್ನು ಜಿನದತ್ತ ಕೇಳಿ ಸಿಟ್ಟಾದಳು. "ಆತನು (ರಾಜನು) ಇನ್ನು ನನಗೆ ಪ್ರಯೋಜನನಲ್ಲ" ಎಂದು ಹೇಳಿಕೊಂಡು ತನ್ನ ಮನೆಯಿಂದ ಹೊರಟಳು. ಬೇರೊಂದು ಅರಮನೆಗೆ ಹೋಗಿ ಅಲ್ಲಿ ವಾಸಮಾಡಿದಳು. ಅಷ್ಟರಲ್ಲಿ ಇತ್ತ ರಾಜನು ಆನೆಯನ್ನು ಬಂಧಿಸಿ ಜಿನದತ್ತೆಯ ಭವನಕ್ಕೆ ಬಂದನು. ಅಲ್ಲಿ ರಾಣಿ ಕಾಣಿಸಲಿಲ್ಲ. ಆಕೆ ಎಲ್ಲಿದ್ದಾಳೆಂದು ಕೇಳಿದನು. ಆಗ ಒಬ್ಬನು

ಅನ್ನೆಗಮಿತ್ತರಸನಾನೆಯಂ ಕಟ್ಟಿಸಿ ಜಿನದತ್ತೆಯ ಮಾಡಕ್ಕೆ ವೋಗಿ ಅರಸಿಯಂ ಕಾಣದೆಲ್ಲಿರ್ದಳೆಂದು ಬೆಸಗೊಂಡೊಡೊರ್ವನಿಂತೆಂದಂ ನೀಮೊಡಗೊಂಡು ಪೋದಿರಿಲ್ಲೆಂದರಸಿ ಮುಳಿದು ಪುರುಪವ್ರತಮಂ ಕೊಂಡು ತಪಸ್ವಿನಿಯಾಗಿ ಪೆಱತೊಂದು ಮಾಡದೊಳಿರ್ದೊಳೆಂದು ಪೇೞ್ದೊಡಾ ಮಾತನರಸಂ ಕೇಳ್ದಾದಮಾನುಂ ಮುಳಿದಿಂತಪ್ಪ ವ್ರತಮುಂ ತವಮುಮೆನ್ನಲ್ಲಿ ಕೂಡದೆಂದು ನುಡಿದಾಕೆಯಂ ಬೆಳ್ಕಾಡೊಳ್ ಮಸಣದೊಳ್ ಕೊಂಡು ಪೋಗಿಕ್ಕಮೆಂದಾಳ್ಗಳ್ಗೆ ಬೆಸನಂ ಪೇೞ್ದೊಡವರುಮಂತೆ ಗೆಯ್ಮೆಮೆಂದರಸಿಯನೊದಗೊಂಡು ಪೋಗಿ ಮಸಣದೊಳೊಂಬತ್ತುತಿಂಗಳ ಗರ್ಭಿಣಿಯಂ ಪೊತ್ತು ಪೋಗಿಯಾಕೆಯನಲ್ಲಿಕ್ಕಿ ಇಂತೆಂದರಬ್ಬಾ ಎಮಗೇನುಂ ದೋಷಮುಂ ಪಾಪಮುಮಿಲ್ಲ ಕ್ಷಮಿಯಿಸಿ ಮರಸನ ಬೆಸದೊಳ್ ತಂದಿಕ್ಕಿದೆಮೆಂದು ನುಡಿದು ಪೋದರನ್ನೆಗಮಾ ಇರುಳೊಳರಸಿ ಬೆಸಲೆಯಾಗಿ ಮಗನಂ ಪೆತ್ತೊಳ್ ಇತ್ತರಸನುಮಾ ಇರುಳೊಳ್ ಶ್ವೇತವೃಷಭನಂ ಕನಸಿನೊಳ್ ಕಂಡು ಪೊಬ್ಬೞಿನೋಲಗದೊಳ್ ಆಸ್ಥಾನದ ನಡುವೆ ಸಿಂಹಾಸನಮಸ್ತಕಸ್ಥಿತನಾಗಿ ತನ್ನ ಕಂಡ ಕನಸಂ ಮಂತ್ರಿಗೆ ಪೇೞ್ದೊಡೆ ಮಂತ್ರಿಯುಮಿಂತೆಂದು ಕನಸಿನ ಫಲಮನರಸಂಗೆ ಪೇೞ್ದಂ ದೇವಾ ನಿಮಗಿಂದು ಪುತ್ರಲಾಭಮಾದುದೆಂದು ಪೇೞ್ದೊಡದಂ ಕೇಳ್ದರಸಿಯರ್ಕಳೊಳಗಾರ್ವಸಲೆಯಾಗಿ ಮಗನಂ ಪೆತ್ತಳೆಂದಾರಯ್ದು ಬನ್ನಿಮೆಂದು ವಡಿಯಜರ್ಗೆ ಬೆಸವೇೞ್ದೊಡವರ್ ರಾಣಿವಾಸಕ್ಕೆ ಪೋಗಿ

ಹೀಗೆ ಹೇಳಿದನು - "ನೀವು ಒಟ್ಟಿಗೆ ಕರೆದುಕೊಂಡು ಹೋಗಲಿಲ್ಲವೆಂದು ರಾಣಿ ಜಿನದತ್ತೆ ಕೋಪಗೊಂಡು ಬ್ರಹ್ಮಚಾರಿಣೀ ವ್ರತ ಕೈಕೊಂಡು ತಪಸ್ವಿನಿಯಾಗಿ ಬೇರೆ ಒಂದು ಅರಮನೆಯಲ್ಲಿದ್ದಾಳೆ" ಹೀಗೆ ಹೇಳಿದಾಗ, ಆ ಮಾತನ್ನು ರಾಜನು ಕೇಳಿ ಅತ್ಯಂತ ಕೋಪಾವಿಷ್ಟನಾದನು. "ಇಂತಹ ವ್ರತವೂ ತಪಸ್ಸೂ ನನ್ನಲ್ಲಿ ನಡೆಯದು" ಎಂದು ಹೇಳಿ "ಆಕೆಯನ್ನು ನಿರ್ಜನವಾದ ಕಾಡಿನಲ್ಲಿ ಸುಡುಗಾಡಿನಲ್ಲಿ ಕೊಂಡುಹೋಗಿ ಇರಿಸಿ" ಎಂದು ಆಳುಗಳಿಗೆ ಆಜ್ಞೆಮಾಡಿದನು. ಅವರು "ಹಾಗೆಯೇ ಮಾಡುವೆವು" ಎಂದು ಜಿನದತ್ತೆಯನ್ನು ಒಟ್ಟಿಗೆ ಕರೆದುಕೊಂಡೊಯ್ದರು. ಒಂಬತ್ತು ತಿಂಗಳ ಬಸುರಿಯಾದ ಆಕೆಯನ್ನು ಹೊತ್ತುಕೊಂಡು ಅಲ್ಲಿಗೆ ಹೋಗಿ ಇಳಿಸಿ ಹೀಗೆ ಹೇಳಿದರು - "ಅಮ್ಮಾ ನಮಗೇನೂ ದೋಷವಾಗಲೀ ಪಾಪವಾಗಲೀ ಇದರಲ್ಲಿಲ್ಲ, ಕ್ಷಮೆ ಕೊಡಿ. ಅರಸನ ಅಪ್ಪಣೆಯ ಪ್ರಕಾರ ನಿಮ್ಮನ್ನು ಇಲ್ಲಿಗೆ ತಂದುಬಿಟ್ಟಿದ್ದೇವೆ". ಹೀಗೆ ನುಡಿದು ಅವರು ಹೋದರು. ಅದೇ ರಾತ್ರಿಯಲ್ಲಿ ಅರಸಿಗೆ ಪ್ರಸವವಾಯಿತು, ಆಕೆ ಮಗನನ್ನು ಹೆತ್ತಳು. ಇತ್ತ ರಾಜನು ಅದೇ ರಾತ್ರಿಯಲ್ಲಿ ಕನಸಿನಲ್ಲಿ ಬಿಳಿಯ ಎತ್ತನ್ನು ಕಂಡನು. ಪ್ರಾತಃಕಾಲದ ರಾಜಸಭೆಯಲ್ಲಿ ಆಸ್ಥಾನದ ನಡುವೆ ಇದ್ದ ಸಿಂಹಾಸನದ ಮೇಲೆ ಕುಳಿತವನಾಗಿ ತಾನು ಕಂಡ ಕನಸನ್ನು ಮಂತ್ರಿಗೆ ತಿಳಿಸಿದನು. ಆಗ ಮಂತ್ರಿ ರಾಜನಿಗೆ ಕನಸಿನ ಫಲವನ್ನು ಈ ರೀತಿಯಾಗಿ ಹೇಳಿದನು - "ದೇವಾ, ನಿಮಗೆ ಇಂದು ಗಂಡುಮಗು ಲಾಭವಾಗಿದೆ"- ಎಂದು ಹೇಳಿದಾಗ ರಾಜನು ಕೇಳಿ, ತನ್ನ ರಾಣಿಯರಲ್ಲಿ ಯಾರು ಪ್ರಸವಗೊಂಡು ಮಗನನ್ನು ಹೆತ್ತಿದ್ದಾಳೆಯೆಂದು ವಿಚಾರಿಸಿ ಬನ್ನಿ - ಎಂದು ಬಾಗಿಲು ಕಾಯುವ ಸೇವಕರಿಗೆ ಆಜ್ಞೆಮಾಡಿದನು. ಅವರು ರಾಜನ ಅಂತಃಪುರಕ್ಕೆ ಹೋಗಿ ರಾಣಿಯರೆಲ್ಲರನ್ನೂ ಬೇರೆಬೇರೆಯಾಗಿ "ನಿಮಗೆ ಮಗನು

ಅರಸಿಯರ್ಕಳಿಲ್ಲರುಮಂ ಬೇಱೆವೇಱೆ ಮಗಂ ಪುಟ್ಟದನೆ ಎಂದು ಬೆಸಗೊಂಡೊಡವರ್ಗಳನಿಬರು ಮಿಂತೆಂದರೆಮಗೆ ಸೌಭಾಗ್ಯಮಿಲ್ಲದವರ್ಗೆ ಭರ್ತಾರನ ದೆಸೆಯಿಂದಪ್ಪ ಸೂಟುಂ ಪಾಟಿಯುಮಿಲ್ಲದೊರ್ಗೆ ಬಸಿಱುಂ ಮಗನುಮೆಂತಕ್ಕುಂ ನೀವಮಾರಾನುಂ ಸೌಭಾಗ್ಯಮುಳ್ಳೊರಲ್ಲಿ ಬಸಿಱುಂ ಮಗನುಮನಾರಯ್ಯಮೆಮ್ಮಲ್ಲಿ ಏನನಾರಯ್ದಿರೆಂದು ನುಡಿದೊಡವರ್ಗ್ಗಳುಂ ಶ್ಮಶಾನಕ್ಕೆ ಪೋಗಿ ಜಿನದತ್ತೆ ಬೆಸಲೆಯಾಗಿ ಮಗನಂ ಪೆತ್ತಿರ್ದೊಳಂ ಕಂಡರಸಂಗೆ ಪೋಗಿ ಇಂತೆಂದರ್ ದೇವಾ ಶ್ಮಶಾನದೊಳ್ ಜಿನದತ್ತೆಯರಸಿ ಬೆಸಲೆಯಾಗಿ ಮಗನಂ ಪೆತ್ತಿರ್ದಳೆಂದು ಪೇೞ್ದೊಡದಂ ಕೇಳ್ದರಸಂ ಕೂಸುಮನರಸಿಯುಮನೊಡಗೊಂಡು ಬನ್ನಿಮೆಂದು ತರಿಸಿ ಮುನ್ನಿನಂದದೊಳಿರಿಸಿ ಕನಸಿನೊಳ್ ವೃಷಭನಂ ಕಂಡುದಱಿಂದಾ ಕೂಸಿಂಗೆ ವೃಷಭಸೇನನೆಂದು ಪೆಸರನಿಟ್ಟರಸಿಯಂ ದಾನಸನ್ಮಾನಾದಿಗಳಿಂ ಪೂಜಿಸಿಯಾಕೆಯೊಳಿಪ್ಪ ವಿಷಯ ಕಾಮಭೋಗಂಗಳನನುಭವಿಸುತ್ತಮಿರೆ ವೃಷಭಸೇನ ಕುಮಾರನುಮೆಂಟು ವರುಷದ ಪ್ರಾಯದಾತನಾಗಿರ್ಪನ್ನೆಗಮೊಂದು ದಿವಸಮರಸಂ ತಪಂಬಡುವ ಬಗೆಯಿಂದಂ ವೃಷಭಸೇನ ಕುಮಾರಂಗಿಂತೆಂದಂ ಮಗನೆ ನಿನಗೆ ಪಟ್ಟಂಗಟ್ಟಲ್ ಬಗೆದಪ್ಪೆನೆಂದೊಡಾತನಿಂತೆಂದನಯ್ಯಾ ಎನಗೆ ನೀಮುಂ ರಾಜ್ಯಪಟ್ಟಂಗಟ್ಟದಪಿರೊ ಮೋಕ್ಷಪಟ್ಟಂಗಟ್ಟದಪಿರೊ ಎಂಮ ತಂದೆಯಂ ಬೆಸಗೊಂಡೊದೆ

ಹುಟ್ಟಿದನೆ?" ಎಂದು ಕೇಳಿದರು. ಆಗ ಅವರಲ್ಲಿ ಎಲ್ಲರೂ ಹೀಗೆ ಹೇಳಿದರು - "ನಾವು ಪುಣ್ಯವಿಲ್ಲದವರು. ಗಂಡನ ಕಡೆಯಿಂದ ಒದಗತಕ್ಕ ಸರದಿ ಪ್ರಕಾರದ ಸುಖಭೋಗಗಳಿಲ್ಲದವರು. ಅಂತಪ ನಮಗೆ ಗರ್ಭವೂ ಪುತ್ರೋತ್ಪತ್ತಿಯೂ ಆಗುವುದು ಹೇಗೆ? ಯಾರಾದರೂ ಪುಣ್ಯವುಳ್ಳವರಿದ್ದರೆ ಅವರಲ್ಲಿ ಬಸರಾದವರನ್ನೂ ಮಗನನ್ನು ಪಡೆದವರನ್ನೂ ನೀವು ವಿಚಾರಿಸಿರಿ. ನಮ್ಮಲ್ಲಿ ನೀವು ಏನು ಕೇಳುತ್ತಿದ್ದೀರಿ?" ಈ ರೀತಿಯಾಗಿ ಹೇಳಲು, ಅವರು ಶ್ಮಶಾನಕ್ಕೆ ಹೋದಾಗ ಜಿನದತ್ತೆ ಪ್ರಸವಿಸಿ ಗಂಡುಮಗುವನ್ನು ಪಡೆದುದನ್ನು ಕಂಡರು. ಕೂಡಲೇ ರಾಜನ ಬಳಿಗೆ ಹೋಗಿ ಹೀಗೆಂದರು- "ದೇವಾ ನಿಮ್ಮ ರಾಣಿಯಾದ ಜಿನದತ್ತೆಗೆ ಹೆರಿಗೆಯಾಗಿ ಮಗನನ್ನು ಪಡೆದಿದ್ದಾಳೆ" ಎಂದು ಹೇಳಿದಾಗ ರಾಜನು ಅದನ್ನು ಕೇಳಿ "ಮಗುವನ್ನೂ ರಾಣಿಯನ್ನೂ ಒಟ್ಟಿಗೆ ಕರೆದುಕೊಂಡು ಬನ್ನಿ" ಎಂದು ಹೇಳಿ, ಅವರಿಬ್ಬರನ್ನೂ ಕರೆತರಿಸಿದನು. ಹಿಂದಿನ ರೀತಿಯಲ್ಲೇ ಜಿನದತ್ತೆಯನ್ನು ಇರಿಸಿದನು. ಕನಸಿನಲ್ಲಿ ಎತ್ತನ್ನು ಕಂಡುದರಿಂದ ಆ ಮಗುವಿಗೆ ವೃಷಭಸೇನನೆಂದು ಹೆಸರಿಟ್ಟು ರಾಣಿಯಾದ ಜಿನದತ್ತೆಯನ್ನು ದಾನ ಸನ್ಮಾನ ಮುಂತಾದವುಗಳಿಂದ ಸತ್ಕರಿಸಿ ಅಕೆಯೊಡನೆ ಇಷ್ಟವಾದ ವಿಷಯದ ಕಾಮಸುಖಗಳನ್ನು ಅನುಭವಿಸುತ್ತ ಇದ್ದನು. ಹೀಗಿರಲು, ವೃಷಭಸೇನನು ಎಂಟು ವರ್ಷ ಪ್ರಾಯದವನಾಗಿ ಇರುತ್ತಿದ್ದಾಗ ಒಂದು ದಿವಸ ರಾಜನು ತಪಸ್ಸನ್ನು ಆಚರಿಸುವ ಮನೋಭಾವದಿಂದ ವೃಷಭಸೇನ ಕುಮಾರನಿಗೆ ಹೀಗೆಂದನು. "ಮಗನೇ, ನಿನಗೆ ಪಟ್ಟಗಟ್ಟಬೇಕೆಂದು ಭಾವಿಸಿರುತ್ತೇನೆ." ಆಗ ಅವನು- "ಅಪ್ಪಾ, ನನಗೆ ನೀವು ರಾಜ್ಯದ ಪಟ್ಟವನ್ನು ಕಟ್ಟುತ್ತಿದ್ದೀರೋ ಮೋಕ್ಷದ ಪಟ್ಟವನ್ನು ಕಟ್ಟುತ್ತಿದ್ದೀರೋ? ಎಂದು ತಂದೆಯನ್ನು ಕೇಳಿದನು. ಅದಕ್ಕೆ ಅವನು "ಮಗನೆ ನಿನಗೆ ಮನುಷ್ಯರ ರಾಜ್ಯಪಟ್ಟವನ್ನು ಕಟ್ಟುತ್ತಿದ್ದೇನೆ" ಎಂದನು. ಆಗ ವೃಷಭಸೇನನು- "ದೇವಾ ರಾಜ್ಯದ ಪಟ್ಟಗಟ್ಟುವಿಕೆಯೂ ಮೋಕ್ಷಸುಖದ ರಾಜ್ಯಪಟ್ಟ ಕಟ್ಟುವಿಕೆಯೂ ಹೇಗಿರುತ್ತದೆ?" ಎಂದು ಕೇಳಿದನು. ಅದಕ್ಕೆ ಆತನು - "ಮೋಕ್ಷಸುಖರಾಜ್ಯದ ಪಟ್ಟವನ್ನು ತಪಸ್ಸುಮಾಡುವವನಿಗೆ ಕಟ್ಟುವುದು ಪದ್ಧತಿ"

ಮಗನೆ ನಿನಗೆ ಮನುಷ್ಯರಾಜ್ಯಪಟ್ಟಂಗಟ್ಟಿದಪ್ಪೆನೆಂಬುದುಂ ದೇವಾ ರಾಜ್ಯಪಟ್ಟಬಂಧನಮುಂ ಮೋಕ್ಷ ಸುಖರಾಜ್ಯಪಟ್ಟಬಂಧನದುವೆಂತೆನೆ ಮೋಕ್ಷಸುಖರಾಜ್ಯಪಟ್ಟಮುಂ ತಪಂಗೆಯ್ದೊಂಗೆ ಕಟ್ಟುವುದೆಂದೊಡಂತಪ್ಪೊಡೆ ಮನುಷ್ಯರಾಜ್ಯಪಟ್ಟಮನೊಲ್ಲೆನೆನಗೆ ಮೋಕ್ಷರಾಜ್ಯಪಟ್ಟಂಗಟ್ಟಿಮೆಂದು ನುಡಿದೊಡರಸನೆಂದಂ ಮಗನೆ ನೀನಿನ್ನುಂ ಕೂಸನ್ಯೆ ಬಾಲವದ್ದೆಯನ್ನೆಗಂ ಬಳಿಕರಸುಗೆಯ್ವಪ್ಪ ವಿಷಯ ಕಾಮಭೋಗಂಗಳನನುಭವಿಸುತ್ತಂ ಬಳಿಕ್ಕ ಪಶ್ಚಾತ್ಕಾಲದೊಳ್ ತಪಂಬಡುವುದೆಂದೊಡೆ ಕುಮಾರನಿಂತೆಂದನನ್ನೆಗಂ ಸಾದರೊ ಬಾಟ್ಟರೊ ಎಂತಜೆಯಲಕ್ಕುಂ ಮನುಷ್ಯರ ಬಾಳುಂ

ಕಂದ ॥ ಪನಿಪುಲ್ಲ ಮುಗಿಲ ಸಂಜೆಯ
ಕನಸಿನ ಸುರಧನುವ ನೆಗೆದ ನೊರೆಗಳ ತೆಱನಂ
ತನಿತುಂ ನಿಲ್ಲದ ಬಗೆವೊಡೆ
ಮನುಜರ ಯೌವನಮುಮರ್ಥಮುಂ ಬಾಟ್ಕೆಗಳುಂ ॥

ಶ್ಲೋಕ ॥ ಭೋಗಸ್ಯ ತೃಷ್ಣಾಗ್ನಿ ಸಂಪ್ರದೀಪ್ತೈ ರ್ದೀಪನೀಯೋ ವನೋಪಮಃ
ವಿಭಃ ಸ್ತ್ರೀವೃದ್ಧತೃಷ್ಣಾಗ್ನಿ ವಾಂತೈ ರ್ಚಂತ್ಯಮಿಷಾಪರಂ ॥

ಗಾಹೆ ॥ ಸಣ್ಣಂ ವಾ ಬದರಂ ತಂ ಮಜ್ಝಂ ವಿಮುತ್ತಾಣ ಮುತ್ತಿಪಹಂ
ಅಮಿಸಾಮಂ (?) ಭೋಗ ಸುಹಲೋಹವಿರದೋ ಮೋಕ್ಖೇಮುದಿಂ ಕುಜ್ಜಾ

ಆರ್ಯೆ ॥ ಯದ್ಯಪಿ ನಿಜೇವ್ಯಮಾನಾ ಮನಸ್ಸಂತುಷ್ಟಕಾರಕಾ ವಿಷಯಾಃ
ಕಿಂಪಾಕ ಫಲಾಶನವದ್ಧವಂತಿ ಪಶ್ಚಾದತಿದುರಂತಾಃ

ಎಂಬುದಱಿಂ ಭೋಗಂಗಳುಂ ಕಿಂಪಾಕಫಳದೊಳೋರನ್ನವದು ಕಾರಣದಿಂ ರಾಜ್ಯದೊಳಪ್ಪ ಭೋಗಸುಖಂಗಳನೊಲ್ಲಂ ಜಾತಿಜರಾಮರಣಗಳಿಂದಪ್ಪ ಬಾಧೆಯಿನಗಲ್ಪ ಶಾಶ್ವತಮಪ್ಪ ಮೋಕ್ಷ

ನ್ನಲು, ಕುಮಾರನು - "ಹಾಗಾದರೆ ನಾನು ಮನುಷ್ಯರ ರಾಜ್ಯಪಟ್ಟವನ್ನು ಒಲ್ಲೆನು. ನನಗೆ ಮೋಕ್ಷರಾಜ್ಯದ ಪಟ್ಟವನ್ನು ಕಟ್ಟಿರಿ" ಎಂದು ಹೇಳಿದನು. ಆಗ ರಾಜನು - ಮಗನೆ, ನೀನಿನ್ನೂ ಮಗುವಾಗಿರುವೆ. ನವಯೌವನನಾಗುವವರೆಗೆ ಬೆಳೆದು ರಾಜ್ಯಭಾರ ಮಾಡಿ ಇಷ್ಟವಿಷಯದ ಕಾಮಸುಖಿಗಳನ್ನು ಅನುಭವಿಸಿದ ನಂತರ ಮತ್ತಿನ ಕಾಲದಲ್ಲಿ ತಪಸ್ಸು ಮಾಡಬಹುದು" ಎಂದನು. ಆಗ ಕುಮಾರನು ಹೀಗೆಂದನು - "ಆಗ ಸಾಯುತ್ತಾರೊ ಬದುಕಿರುತ್ತಾರೊ ಹೇಗೆ ತಿಳಿಯಲಿಕ್ಕಾಗುತ್ತದೆ ? [ಮನುಷ್ಯ ಜೀವನ, ಯೌವನ, ಧನ-ಇವು ಹುಲ್ಲಿನ ಮೇಲೆ ನಿಂತ ಹನಿಯಂತೆ, ಮುಗಿಲಂತೆ, ಸಂಜೆಹೊತ್ತಿನಂತೆ, ಕನಸಿನಂತೆ, ಮಳೆಬಿಲ್ಲಿನಂತೆ, ಮೇಲೆದ್ದ ನೀರುಗುಳ್ಳೆಗಳಂತೆ, ಕ್ಷಣಿಕವಾಗಿವೆ. ಯೋಚಿಸಿದರೆ ಅಂತು ಅಷ್ಟು ಹೊತ್ತೂ ನಿಂತಿರಲಾರವು.] [ಭೋಗವೆಂಬುದು ಆಶೆಯೆಂಬ ಅಗ್ನಿಯನ್ನು ಹೆಚ್ಚಿಸುವುದಕ್ಕಿಂತ ಸುಡುತ್ತಿರುವ ಕಾಡಿನಂತಿರುವುದು ಹೆಣ್ಣಿನಿಂದ ಹೆಚ್ಚುತ್ತಿರುವ ಭೋಗಲಾಲಸೆಯೆಂಬ ಬೆಂಕಿಯ ಶಮನಕ್ಕಾಗಿ ಇಹಪರ ಗತಿಗಳು ಆಲೋಚಿಸ ತಕ್ಕವಾಗಿವೆ.] ಮುಕ್ತಿಪಥದಲ್ಲಿ ಚಿಕ್ಕದಾಗಲಿ ದೊಡ್ಡದಾಗಲಿ - ಎಲ್ಲ ಸಂಬಂಧಗಳನ್ನು ತೊರೆದು ಸಂತತವಾಗಿ ಭೋಗಸುಖ ಲೋಭಗಳಲ್ಲಿ ಆಸಕ್ತಿಯಿಲ್ಲದವನಾಗಿ ಮೋಕ್ಷದಲ್ಲಿ ಮನಸ್ಸನ್ನು ಮಾಡಬೇಕು. ಮನಸ್ಸಿಗೆ ಸಂತೃಪ್ತಿಯುಂಟುಮಾಡುವ ವಸ್ತುಗಳು

ಸುಖಮನೆ ಬೇಟ್ಟಿನೆಂದು ತಜೆಸಂದು ನುದಿದೊತರಸಂ ಜ್ಯೋತಿರ್ಮಾಲೆಯೆಂಬರಸಿಯ ಮಗಂ ವಸುಪಾಳನೆಂಬೊಂಗೆ ರಾಜ್ಯಪಟ್ಟಂಗಟ್ಟಿ ತಂದೆಮಕ್ಕಳಿರ್ವರುಮೆಲ್ಲರೊಳಂ ನಿಶ್ಶಲ್ಯಂಗೆಯ್ದು ಬಾಹ್ಯಾಭ್ಯಂತರ ಪರಿಗ್ರಹ ಪರಿತ್ಯಾಗಂಗೆಯ್ದು ಗುಣಧರರೆಂಬಾಚಾರ್ಯರ ಪಕ್ಕದೆ ದೀಕ್ಷೆಯಂ ಕೈಕೊಂಡು ಪನ್ನೆರಡು ವರುಷಂ ಬರೆಗಂ ಗುರುಗಳನಗಲದಿರ್ದಾಗಮಂಗಳೆಲ್ಲಮಂ ಕಲ್ತು ಭಟಾರರಂ ಬೆಸಗೊಂಡವರನುಮತದಿಂ ವೃಷಭಸೇನ ಮುನಿಯುಂ ಗ್ರಾಮನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪೊರ್ ವತ್ಸೆಯೆಂಬುದು ನಾಡೊಳ್ ಕೌಶಂಬಿಯೆಂಬ ಪೊಲಿಲ್ಪೆಂದವಱ ಸಾರೆ ಉದಯಾವತ ಪರ್ವತಮೆಂಬ ಪರ್ವತಮುಂಟವಱ ಮೇಗೆ ವೃಷಭಸೇನ ಭಟಾರರ್ ನಾಲ್ಕು ತಿಂಗಳುಮಾತಪಸ್ಥಿತ ಯೋಗಮಂ ಕೈಕೊಂಡು ವಿವಸಕ್ಕಂ ಕಲ್ನಿಲೆನಿಲೆ ಪೊಲಿಲವರ್ಗಳ್ ಕಂಡನಿಬರುಂ ಶ್ರಾವಕಭಕ್ತರುಂ ಬೆಸಕೆಯ್ವರುಮಾದರ್ ಮತ್ತಾ ಪೊಲಿಲೊಳ್ ಬುದ್ಧಜನೆಂಬೊನುಪಾಸಕನಾತಂ ಋಷಿಯರೊಳಪ್ಪ ಮಾತ್ಸರ್ಯಂ ಕಾರಣಮಾಗಿ ಭಟಾರರ್ ಚರಿಗೆವ್ಪೋವರನ್ನೆಗಂ ಪಿಂದೆ ಪಾಪಕರ್ಮಂ ಯೋಗತಿಲೆಯ ಮೇಗುಮಂ ಕೆಲಗುಮಂ ಬಳಸಿಯುಂ ಪಲವುಂ ಪಿರಿಯವುಮಪ್ಪ ತಜೆಯ ಪುಳ್ಗಿಗಳಂ ಕಡಿದೊಟ್ಟಿ ಕಿಚ್ಚನಿಕ್ಕಿ ಸುಟ್ಟು ಕಿಚ್ಚನ ಬಣ್ಣಪಂತಾಗಿ ಸಿಲೆಯಂ ಮಾಡಿ ಕೆಂಡಂಗಳನೊಂದು ಕೆಲಂ ಸಾರ್ಚಿ ಪೋದನನ್ನೆಗಂ ಭಟಾರರ್ ಚರಿಗೆ ವ್ಪೋಗಿ ಬರ್ಪೊರ್ ಧಗದ್ಧಗಿಸುತ್ತಿರ್ದ ಕಿಚ್ಚಿನ

ಸೇವಿಸಲ್ಪಡುವವಾದರೂ, ಅವು ಅಮೇಲೆ ವಿಷಮಯವಾದ ಕಿಂಪಾಕಮರದ ಹಣ್ಣುಗಳನ್ನು ತಿಂದಂತೆ ಬಹಳ ದುಷ್ಪರಿಣಾಮವನ್ನು (ಪ್ರಾಣ ಹಾನಿಯನ್ನು) ಉಂಟು ಮಾಡುತ್ತವೆ. ಹೀಗೆನ್ನುವುದರಿಂದ, ಸುಖಿಗಳು ಕಿಂಪಾಕದ ಹಣ್ಣಿಗೆ ಸಮಾನವಾಗಿವೆ. ಆ ಕಾರಣದಿಂದ ರಾಜ್ಯಾಧಿಕಾರದಲ್ಲಿ ಉಂಟಾಗುವ ಸುಖಾನುಭವಗಳನ್ನು ನಾನೊಲ್ಲೆನು. ಹುಟ್ಟು-ಮುಪ್ಪು-ಸಾವುಗಳಿಂದಾಗುವ ತೊಂದರೆಯಿಂದ ಅಗಲಿದ (ದೂರವಾದ) ಚಿರಸ್ಥಾಯಿಯಾದಂತಹ ಮುಕ್ತಿಸುಖವನ್ನೇ ಬೇಡುವೆನು"- ಎಂದು ನಿರ್ಧಾರಮಾಡಿ ನುಡಿದನು. ಪ್ರಜ್ಯೋತರಾಜನು ಜ್ಯೋತಿರ್ಮಾಲೆ ಎಂಬ ರಾಣಿಯ ಮಗನಾದ ವಸುಪಾಳನೆಂಬವನಿಗೆ ರಾಜ್ಯಪಟ್ಟವನ್ನು ಕಟ್ಟಿದನು. ತಂದೆ ಮಕ್ಕಳಿಬ್ಬರೂ ಮಾಯಾಶಲ್ಯ, ಮಿಥ್ಯಾಶಲ್ಯ, ನಿದಾನಶಲ್ಯ ಎಂಬ ಶಲ್ಯಗಳನ್ನು ತೊರೆದು, ಬಾಹ್ಯ ಮತ್ತು ಆಂತರಿಕ ಪರಿಗ್ರಹಗಳನ್ನು ತ್ಯಾಗಮಾಡಿ ಗುಣಧರರೆಂಬ ಆಚಾರ್ಯರ ಬಳಿಯಲ್ಲಿ ದೀಕ್ಷೆಯನ್ನು ಸ್ವೀಕರಿಸಿದರು. ಹನ್ನೆರಡು ವರ್ಷಗಳವರೆಗೆ ಗುರುಗಳ ಜೊತೆಯಲ್ಲಿಯೇ ಇದ್ದು ಶಾಸ್ತ್ರಗಳನ್ನೆಲ್ಲ ಅಭ್ಯಾಸಮಾಡಿದರು. ವೃಷಭಸೇನ ಮುನಿಗಳು ಗುಣಧರ ಭಟಾರರನ್ನು ಕೇಳಿ, ಅವರ ಅನುಮತಿ ಪಡೆದು, ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖ ಎಂಬ ಭೂಭಾಗಗಳಲ್ಲಿ ಸಂಚಾರ ಮಾಡುತ್ತ ಬರತಕ್ಕವರು ವತ್ಸೆಯೆಂಬ ನಾಡಿನಲ್ಲಿರುವ ಕೌಶಂಬಿ ಎಂಬ ಪಟ್ಟಣಕ್ಕೆ ಬಂದರು. ಆ ಪಟ್ಟಣದ ಹತ್ತಿರ ಉದಯಾವತವೆಂಬ ಪರ್ವತವಿದೆ. ಅದರ ಮೇಲೆ ವೃಷಭಸೇನ ಮುನಿಗಳು ನಾಲ್ಕುತಿಂಗಳ ಕಾಲ ಆತಪಸ್ಥಿತಯೋಗವನ್ನು (ಬಿಸಿಲಿನಲ್ಲಿ ನಿಂತು ಮಾಡುವ ತಪಸ್ಸನ್ನು) ಕೈಕೊಂಡರು. ಪ್ರತಿದಿನವೂ ಕಲ್ಲು ನಿಂತಂತೆ ನಿಲ್ಲುತ್ತಿದ್ದರು. ಪಟ್ಟಣಿಗರೂ ಅಲ್ಲಿದ್ದ ಎಲ್ಲಾ ಶ್ರಾವಕಭಕ್ತರೂ ಅವರ ಸೇವೆ ಮಾಡುತ್ತ ಇರುವವರಾದರು. ಆ ಪಟ್ಟಣದಲ್ಲಿ ಬುದ್ಧಜನೆಂಬ ಒಬ್ಬ ಗೃಹಸ್ಥನು ಇದ್ದನು. ಋಷಿಗಳ ಮೇಲಿನ ದ್ವೇಷವೇ ಕಾರಣವಾಗಿ, ಋಷಿಗಳು ಭಿಕ್ಷೆಗೆ ಹೋದ

ಬಣ್ಣವಂತಪ್ಪ ಕೆಚ್ಚನಾಗಿರ್ದ ಶಿಲೆಯಂ ಕಂಡೆಮಗಿನಿತೆಯಾಯುಷ್ಯಮೆಂದಱಿದು ಕ್ರಿಯೆಗೆಯ್ದು ಚತುರ್ವಿಧಮಪ್ಪಾಹಾರಮುಂ ಶರೀರಮುಮಂ ಜಾವಜ್ಜೀವಂ ತೊಱೆದು ಕಾಯ್ದಿರ್ದ ಯೋಗಪೀಠಮನೇಱಿ ಕಾಯೋತ್ಸರ್ಗಂಗೆಯ್ದು ಜ್ಯೇಷ್ಠಮಾಸದ ಬಿಸಿಲುಂ ಝಳಮುಂ ಬೆಂಕೆಯುಂ ಕಿಚ್ಚುಮಂ ಸೈರಿಸಿ ನೀರೊಳಗಿರ್ಪಂತಿರ್ದು ಶುಕ್ಲಧ್ಯಾನಮಂ ಧ್ಯಾನಿಸಿ ಎಂಟು ಕರ್ಮಂಗಳಂ ಕೆಡಿಸಿ ಮೋಕ್ಷಕ್ಕೆ ಪೋದರ್ ಮತ್ತೆ ಪ್ರದ್ಯೋತನೆಂಬ ಋಷಿ ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸ್ವರ್ಗದೊಳ್ ಪುಟ್ಟಿದಂ ಮತ್ತಂ ಪೆಱರುಮಾರಾನುಂ ಸಹಜರತ್ನತ್ರಯಮನಾರಾಧಿಸುತ್ತಿರ್ದ ಭವ್ಯರ್ಕಳ್ ವೃಷಭಸೇನ ಭಟಾರರಂ ಮನದೊಳ್ ಬಗೆದು ಝಳಮಂ ಬೆಂಕೆಯುಮಂ ದಾಹಮುಷ್ಣಮುಂ ಶೀತಮುಂ ವಾತಮುಂ ಬೇನೆಯುಂ ಪಸಿವುಂ ನೀರಟ್ಟಿ ಮೊದಲಾಗೊಡೆಯವಿರ್ವತ್ತೆರಮ ಪರೀಷಹಂಗಳಂ ಸೈರಿಸಿ ಶುಭಪರಿಣಾಮದಿಂ ಸಮ್ಯಗ್ದರ್ಶನ ಜ್ಞಾನಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

ವೇಳೆಗೆ, ಹಿಂದೆ ಪಾಪಕೃತ್ಯಮಾಡಿದವನಾದ ಅವನು ಋಷಿಗಳ ಯೋಗಶಿಲೆಯ ಮೇಲೆಯೂ ಕೆಳಗೆಯೂ ಸುತ್ತಲೂ ಹಲವು ದೊಡ್ಡ ತರಿಯ ಮರದ ಸೌದೆಗಳನ್ನು ಕಡಿದು ತಂದು ರಾಶಿಹಾಕಿ, ಬೆಂಕಿಕೊಟ್ಟು ಸುಟ್ಟು, ಶಿಲೆಯನ್ನು ಬೆಂಕಿಯ ಬಣ್ಣದ ಹಾಗೆ ಆಗುವಂತೆ ಮಾಡಿ, ಕೆಂಡಗಳನ್ನೆಲ್ಲ ಮಗ್ಗುಲಿಗೆ ಸೇರಿಸಿ ಹೋದನು. ಅಷ್ಟರಲ್ಲಿ ವೃಷಭಸೇನ ಮುನಿಗಳು ಭಿಕ್ಷೆಗೆ ಹೋಗಿ ಬರತಕ್ಕವರು ಧಗಧಗಿಸುತ್ತಿದ್ದ ಬೆಂಕಿಯ ಬಣ್ಣದ ಹಾಗೆ ಕೆಂಪಾಗಿದ್ದ ಶಿಲೆಯನ್ನು ಕಂಡರು. ತಮಗೆ ಅಷ್ಟೇ ಆಯುಷ್ಯವಿರುವುದೆಂಬುದನ್ನು ತಿಳಿದು ಪಂಚನಮಸ್ಕಾರಾದಿ ಕ್ರಿಯೆಗಳನ್ನು ಮಾಡಿ, ನಾಲ್ಕು ವಿಧದ ಆಹಾರವನ್ನೂ ಶರೀರವನ್ನೂ ಜೀವವಿರುವವರೆಗೂ ಬಿಡಲು ನಿಶ್ಚಯಿಸಿ ಕಾದು ಕೆಂಪಾಗಿದ್ದ ಯೋಗದ ಶಿಲಾಪೀಠವನ್ನೇರಿ ದೇಹತ್ಯಾಗ ಮಾಡಿದರು. ಜ್ಯೇಷ್ಠಮಾಸದ ಬಿಸಿಲನ್ನೂ ಜಳವನ್ನೂ ಸೆಖೆಯನ್ನೂ ಬೆಂಕಿಯನ್ನೂ ಸಹಿಸಿ ನೀರಿನೊಳಗೆ ಇರುವಂತಿದ್ದು, ಶುಕ್ಲಧ್ಯಾನ ಮಾಡಿ, ಎಂಟು ಕರ್ಮಗಳನ್ನೂ ನಾಶಮಾಡಿ ಮೋಕ್ಷಕ್ಕೆ ಹೋದರು. ಆಮೇಲೆ ಪ್ರದ್ಯೋತ ಋಷಿ ಸಮ್ಯಗ್ದರ್ಶನ - ಸಮ್ಯಗ್‌ಜ್ಞಾನ-ಸಮ್ಯಕ್ ಚಾರಿತ್ರಗಳನ್ನು ಆಚರಿಸಿ ಸ್ವರ್ಗದಲ್ಲಿ ಹುಟ್ಟಿದನು. ಬೇರೆ ಯಾರೇ ಆಗಲಿ, ಸಹಜವಾಗಿ ರತ್ನತ್ರಯವನ್ನು ಆಚರಿಸತಕ್ಕ ಭವ್ಯಜನರು ವೃಷಭಸೇನ ಮುನಿಗಳನ್ನು ತಮ್ಮ ಮನಸ್ಸಿನಲ್ಲಿ ಭಾವಿಸಿಕೊಂಡು- ಝಳ, ಬೆಂಕಿ, ಸುಡುವಿಕೆ, ಉಷ್ಣ, ಶೀತ, ಗಾಳಿ, ನೋವು, ಹಸಿವು, ಬಾಯಾರಿಕೆ- ಮುಂತಾಗಿರುವ ಇಪ್ಪತ್ತೆರಡು ವಿಧದ ಪರೀಷಹಗಳನ್ನು ಸಹಿಸಿ, ಶುಭಪರಿಣಾಮದಿಂದ ಸಮ್ಯಗ್ ದರ್ಶನ - ಜ್ಞಾನ - ಚಾರಿತ್ರಗಳನ್ನು ಸಾಧನೆಮಾಡಿ, ಸ್ವರ್ಗ-ಮೋಕ್ಷ ಸುಖಗಳನ್ನು ಪಡೆಯುವಂತಾಗಲಿ !

೧೧. ಕಾರ್ತಿಕ ಋಷಿಯ ಕಥೆ

ಅಗ್ನಿರಾಜನ ಮಗನಪ್ಪ ಕಾರ್ತಿಕ ಋಷಿಯ ಕಥೆಯಂ ಪೇೞ್ವೆಂ :

ಗಾಹೆ ॥ ರೋಹೇದಯಮ್ಮಿ ಸತ್ತೀಎ ಹದೋ ಕೊಂಚೇಣ ಅಗ್ಗಿದಯಿದೋ ವಿ
ತವ್ವೇದಣಮಧಿಯಾಸಿಯ ಪದಿವಣ್ಣೋ ಉತ್ತಮಂ ಅಟ್ಠಂ ॥

[ರೋಹೇದಯಮ್ಮಿ-ರೋಹೇದಕಮೆಂಬ ಪೊಬಲೊಳ್, ಸತ್ತೀವಿಹದೋ-ಶಕ್ತಿಯೆಂಬಾ ಯುಧದಿಂದಿಜೆಯಿಪಟ್ಟೊನಾಗಿ, ಕೊಂಚೇಣ-ಕ್ರೌಂಚನೆಂಬರಸಿನಿಂದಂ, ಅಗ್ಗಿದಯಿದೋ ವಿ-ಅಗ್ನಿರಾಜನ ಕಾದಲಿಸಿಪಡುವ ಮಗಂ, ತವ್ವೇದಣಂ-ಆ ವೇದನೆಯಂ, ಅಧಿಯಾಸಿಯ-ಲೇಸಾಗಿ ಸೈರಿಸಿ, ಪಡಿವಣ್ಣೋ-ಪೊರ್ದಿರ್ದೋಂ, ಉತ್ತಮಂ ಅಟ್ಠಂ-ಮಿಕ್ಕ ದರ್ಶನ ಜ್ಞಾನಚಾರಿತ್ರಂಗಳಾರಾಧನೆಯಂ]

ಅದೆಂತೆಂದೊಡೆ : ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಲಾಳವಿಷಯದೊಳ್ ಕೃತ್ತಿಕಾಪುರವೆಂಬುದು ಪೊಬಲದನಾಳ್ವೊನಗ್ನಿರಾಜನೆಂಬರಸನಾತನ ಮಹಾದೇವಿ ವೀರಮತಿಯೆಂಬೊಳಾಯಿರ್ವ್ವರ್ಗ್ಗಂ ಮಕ್ಕಳ್ ಬಂಧುಮತಿ ಶಿವಸೇನೆ ಶ್ರೀಮತಿ ಸ್ವಯಂಪ್ರಭೆ ಲಕ್ಷ್ಮೀಮತಿ ಕೃತ್ತಿಕೆಯೆಂದಿಂತಱುವರ್ ಪೆಣ್ಗೂಸುಗಳಂತವರ್ಗ್ಗಳಿಷ್ಟವಿಷಯ ಕಾಮಭೋಗಂಗಳನನುಭವಿಸುತ್ತಂ ಕಾಲಂ ಸಲೆ ಮತ್ತೊಂದು ದಿವಸಂ ಫಾಲ್ಗುಣಮಾಸದ ನಂದೀಶ್ವರದಂದಱುವರುಂ ಕೊಡಗೂಸುಗಳುಪವಾಸಂಗೆಯ್ದು ಬಸದಿಗರ್ಚನೆಯಂ ಕೊಂಡು ಪೋಗಿ ದೇವರನರ್ಚಿಸಿ ನಂದೀಶ್ವರಂಗೆಯ್ದು ಬಂದಿಸಿ ರಿಸಿಯರ್ಕಳುಮಂ ಗುರುಪರಿವಿಡಿಯಿಂ ವಂದಿಸಿ ವ್ರತಂಗಳನೇಱಿಸಿ ಕೊಂಡು ಸಿದ್ಧಶೇಷೆಯಂ ಕೊಂಡು ಬಂದು ತಾಯ್ಗಂ ತಂದೆಗಂ ಕೊಟ್ಟು ಪೋಪಾಗಳರಸಂ

ಅಗ್ನಿರಾಜನ ಮಗನಾದ ಕಾರ್ತಿಕ ಋಷಿಯ ಕಥೆಯನ್ನು ಹೇಳುವೆನು: (ರೋಹೇದಕವೆಂಬ (ಕೋಗಳಿ ಎಂಬ) ಪಟ್ಟಣದಲ್ಲಿ ಅಗ್ನಿರಾಜನ ಪ್ರೀತಿಯ ಮಗನು ಕ್ರೌಂಚನೆಂಬ ರಾಜನಿಂದ ಶಕ್ತಿಯೆಂಬ ಆಯುಧದಿಂದ ತಿವಿಯಲ್ಪಟ್ಟವನಾಗಿ ಆ ವೇದನೆಯನ್ನು ಲೇಸಾಗಿ ಸಹಿಸಿಕೊಂಡು ಶ್ರೇಷ್ಠವಾದ ದರ್ಶನ - ಜ್ಞಾನ-ಚಾರಿತ್ರಗಳ ಆರಾಧನೆಯನ್ನು ನಡೆಸಿದನು.) ಅದು ಹೇಗೆಂದರೆ : ಈ ಜಂಬೂದ್ವೀಪದ ಭರತಕ್ಷೇತ್ರದಲ್ಲಿರುವ ಲಾಳದೇಶದಲ್ಲಿ ಕೃತ್ತಿಕಾಪುರ ಎಂಬ ಪಟ್ಟಣವಿದೆ. ಅದನ್ನು ಅಗ್ನಿರಾಜನೆಂಬ ಅರಸನು ಆಳುತ್ತಿದ್ದನು. ಅವನ ರಾಣಿ ವೀರಮತಿಯೆಂಬವಳು. ಆ ದಂಪತಿಗಳಿಗೆ ಬಂಧುಮತಿ, ಶಿವಸೇನೆ, ಶ್ರೀಮತಿ, ಸ್ವಯಂಪ್ರಭೆ, ಲಕ್ಷ್ಮೀಮತಿ, ಕೃತ್ತಿಕೆ - ಎಂದು ಈ ರೀತಿಯಾಗಿ ಆರು ಮಂದಿ ಹೆಣ್ಣುಮಕ್ಕಳಿದ್ದರು. ಅಂತು ಅವರು ತಮ್ಮ ಪ್ರೀತಿಯ ವಿಷಯದ ಮೆಚ್ಚುಗೆಯ ಸುಖಗಳನ್ನು ಅನುಭವಿಸುತ್ತಿದ್ದರು. ಹೀಗೆಯೇ ಕಾಲ ಕಳೆಯಿತು. ಅನಂತರ ಒಂದು ದಿವಸ ಫಾಲ್ಗುಣ ಮಾಸದ ನಂದೀಶ್ವರವೆಂಬ ಹಬ್ಬದ ದಿವಸ ಆ ಆರು ಮಂದಿ ಕನ್ಯೆಯರೂ ಉಪವಾಸವನ್ನು ಆಚರಿಸಿದರು. ಜಿನಾಲಯಕ್ಕೆ ಪೂಜಾವಸ್ತುಗಳನ್ನು ತೆಗೆದುಕೊಂಡು ಹೋಗಿ ದೇವರನ್ನು ಪೂಜಿಸಿ ನಂದೀಶ್ವರದ ಹಬ್ಬವನ್ನು ಮಾಡಿ ವಂದಿಸಿದರು. ಋಷಿಗಳನ್ನು ಗುರುಗಳ ತಾರತಮ್ಯಕ್ಕೆ ಅನುಗುಣವಾದ ಅನುಕ್ರಮದಿಂದ ವಂದಿಸಿ, ವ್ರತಗಳನ್ನು ಸ್ವೀಕರಿಸಿ ಪೂಜೆ ಮಾಡಿದ ಹೂ ಮುಂತಾದ ಪ್ರಸಾದವನ್ನು ತೆಗೆದುಕೊಂಡು ಬಂದು ತಾಯಿತಂದೆಯರಿಗೆ ಕೊಟ್ಟು ಹೋಗುವಾಗ ರಾಜನು

ಕಜೆಯ ಮಗಳಪ್ಪ ಕೃತ್ತಿಕೆಯ ರೂಪುಂ ತೇಜಮುಂ ಗಾಡಿಯುಮಂ ಕಂಡಾಕೆಗಾಟಸಿ ಸಾಮಂತ ಮಹಾಸಾಮಂತರ್ಕ್ಕಳ್ಗಂ ಪರಿವಾರಕ್ಕಂ ಮಂತ್ರಿವರ್ಗಕ್ಕಂ ವೀರಮತಿ ಮಹಾದೇವಿಗಮೆಲ್ಲ ಸಮಯಿಗಳ್ಗಂ ಬಟೆಯಟ್ಟಿ ಬರಿಸಿಯರಸನಿಂತೆಂದನೆನ್ನಾಳ್ವ ಮಂದಳಂಗಳೊಳ್ ಪುಟ್ಟಿದ ಲೇಸಪ್ಪ ವಸ್ತುವಾರ್ಗ್ಗಕ್ಕುಮೆಂದು ಬೇಱೆಬೇಱೆಯರಸನನಿಬರುಮಂ ಬೆಸಗೊಂಡೊಡವರ್ಗ್ಗಳಿಲ್ಲಮಿಂತೆಂದರೊಳ್ಳಿತಪ್ಪಾನೆಯುಂ ಕುದುರೆಯುಂ ಮುತ್ತುಂ ಮಾಣಿಕಮುಂ ಸ್ತ್ರೀರತ್ನಮುಂ ಮೊದಲಾಗೊಳ್ಳಿತಪ್ಪಗ್ಗಳ ವಸ್ತುವೆಲ್ಲಂ ಪೃಥ್ವಿಯನಾಳ್ವೊಂಗಕ್ಕುಮೆಂದು ಪೇಱೊಡರಸಂ ಋಷಿಯರುಮಂ ಬೆಸಗೊಂಡೊಡೆ ಋಷಿಯರೆಂದರಾವ ವಸ್ತು ಪೇಟೆಂ ಪೇಱೊಡೆ ತಕ್ಕುದು ತಗದುದುಮನಱೆಯಲಕ್ಕುಮೆಂದೊದರಸನಿಂತೆಂದನಿವರೆಲ್ಲರ ನೇಟ್ಟಿಂತು ಪೇಟ್ಟರಲ್ಲರೊಡಂಬದುವರಲ್ಲರ್ ಬಹುಪ್ರಳಾಪಿಗಳಿವರಂ ಪೊಬಲಿಂದಟ್ಟಿ ಕಳಿಯಮೆಂದಟ್ಟಿ ಕಳಿದುಬೆದರೆಲ್ಲರುಮಂ ಬೆಸಗೊಂಡೊಡನಿಬರುಮೊಡಂಬಟ್ಟೊಳ್ಳಿತ್ತಪ್ಪ ವಸ್ತು ನಿನಗಕ್ಕುಮೆಂದೊಡೆ ಅರಸನೆನಗಕ್ಕುಂ ವಲಮೆಂದು ಮೂಱು ಸೂಟ್ಟರಂ ಸಾರಿ ನುದಿದೊಡಂಬಡಿಸಿ ವೀರಮತಿ ಮಹಾದೇವಿಯಂ ಬೇಡಿ ಕೃತ್ತಿಕೆಯಪ್ಪ ಕಜೆಯ ಮಗಳಂ ಮದುವೆನಿಂದೊನಾ ದಿವಸಮೆ ವೀರಮತಿ ಮಹಾದೇವಿಯುಂ ಬ್ರಹ್ಮಚರ್ಯವ್ರತಮಂ ಕೈಕೊಂಡು ನೆಗಟ್ಟಳ್ ಮತ್ತೆ ಕೃತ್ತಿಕೆಗೆ ನವಮಾಸಂ ಗರ್ಭವಾದಂದು ಸರವಣಮೆಂಬುದ್ಯಾನವನದೊಳಗಣ ಸರವಣಮೆಂಬ ಬಾವಿಯೊಳ್

ಕಿರಿಮಗಳಾದ ಕೃತ್ತಿಕೆಯ ರೂಪ, ಕಾಂತಿ, ಬೆಲುವುಗಳನ್ನು ಕಂಡು ಆಕೆಯ ಮೇಲೆ ಪ್ರೀತಿ ಪಟ್ಟನು. ಸಾಮಂತರಿಗೂ ಮಹಾಸಾಮಂತರಿಗೂ ಪರಿವಾರದವರಿಗೂ ಮಂತ್ರಿಗಳ ಸಮೂಹಕ್ಕೂ ವೀರಮತಿ ಮಹಾರಾಣಿಗೂ ಎಲ್ಲ ಮತ ಧರ್ಮದವರಿಗೂ ದೂತರನ್ನು ಕಳುಹಿಸಿ ಅವರನ್ನೆಲ್ಲ ಬರಮಾಡಿ, ರಾಜನು ಹೀಗೆ ಹೇಳಿದನು- "ನಾನು ರಾಜ್ಯಭಾರ ಮಾಡತಕ್ಕ ಪ್ರದೇಶಗಳಲ್ಲಿ ಹುಟ್ಟಿ ಬಂದ ಶ್ರೇಷ್ಠವಾದ ವಸ್ತು ಯಾರಿಗೆ ಸೇರಬೇಕಾದುದು?" ಎಂದು ಬೇರೆಬೇರೆಯಾಗಿ ರಾಜನು ಅವರೆಲ್ಲರನ್ನೂ ಕೇಳಿದನು. ಆಗ ಅವರೆಲ್ಲ ಹೀಗೆ ಉತ್ತರ ಕೊಟ್ಟರು- "ಒಳ್ಳೆಯದಾದ ಆನೆಯೂ ಕುದುರೆಯೂ ಮುತ್ತೂ ಮಾಣಿಕ್ಯವೂ ಸ್ತ್ರೀರತ್ನ ಮುಂತಾದ ಒಳ್ಳೆಯದಾದ ಶ್ರೇಷ್ಠ ವಸ್ತುಗಳೆಲ್ಲವೂ ಭೂಮಿಯನ್ನು ಆಳತಕ್ಕವನಿಗೆ ಸೇರಬೇಕಾದುವು" ಎಂದು ಹೇಳಿದಾಗ ರಾಜನು ಋಷಿಗಳನ್ನು ಕೇಳಿದನು. ಆಗ ಅವರು - "ಯಾವ ವಸ್ತುವೆಂಬುದನ್ನು ಹೇಳಿದರೆ ಯೋಗ್ಯವಾದುದು ಯಾವುದು, ಯೋಗ್ಯವಲ್ಲದುದು ಯಾವುದು ಎಂಬುದನ್ನು ತಿಳಿದುಕೊಳ್ಳಬಹುದು" ಎಂದು ಹೇಳಿದರು. ಆಗ ರಾಜನು - "ಈ ಋಷಿಗಳು ಇವರೆಲ್ಲ ಹೇಳುವಂತೆ ಹೇಳುವವರಲ್ಲ; ಒಪ್ಪುವವರೂ ಅಲ್ಲ. ಬಹಳ ಮಾತಾಡುವವರು ! ಇವರನ್ನು ಪಟ್ಟಣದಿಂದ ಓಡಿಸಿ ಬಿಡಿ" ಎಂದು ಆಜ್ಞಾಪಿಸಿ ಓಡಿಸಿದನು. ಆ ಮೇಲೆ ಉಳಿದವರನ್ನೆಲ್ಲ ಕೇಳಲು ಅವರೆಲ್ಲರೂ ಒಪ್ಪಿದವರಾಗಿ "ಒಳ್ಳೆಯದಾದ ವಸ್ತು ನಿನಗೇ ಆಗಬೇಕಾದುದು ನಿಶ್ಚಯ" ಎಂದು ಮೂರು ಬಾರಿಯವರೆಗೆ ಘೋಷಿಸಿ ಹೇಳಿ ಒಪ್ಪಿಗೆ ಪಡೆದು, ವೀರಮತಿ ಮಹಾರಾಣಿಯನ್ನೂ ಕೇಳಿಕೊಂಡು ಕೃತ್ತಿಕೆ ಎಂಬ ಹೆಸರುಳ್ಳವಳಾದ ಕಿರಿಯ ಮಗಳನ್ನು ಮದುವೆಮಾಡಿಕೊಂಡನು. ಅದೇ ದಿವಸ ವೀರಮತಿ ಮಹಾರಾಣಿ ಬ್ರಹ್ಮಚರ್ಯವ್ರತವನ್ನು ಸ್ವೀಕರಿಸಿ ಆಚರಿಸಿದಳು. ಆ ಮೇಲೆ ಕೃತ್ತಿಕೆಗೆ ಒಂಬತ್ತು ತಿಂಗಳ ಗರ್ಭವಾಗಲು "ಸರವಣ ಎಂಬ ಹೂದೋಟದ ಒಳಗಿರುವ ಸರವಣವೆಂಬ ಬಾವಿಯಲ್ಲಿ ತನಗೆ ಜಲಕೇಳಿಯಾಡಲು ಬಯಕೆಯಾಗಿದೆ"

ಜಲಕ್ರೀಡೆಯಾಡಲ್ ಬಯಕೆ ಯಾದುದೆಂದರಸಂಗಱಿಪಿದೊಡರಸನನುಮತದಿಂ ಜಲಕ್ರೀಡೆಯಾಡಿ ಮಗನಂ ಪೆತ್ತೊಡಾತಂಗೆ ಸ್ವಾಮಿ ಕಾರ್ತಿಕನೆಂದು ಪೆಸರನಿಟ್ಟರ್ ಮತ್ತಾತನಿಂ ಬಱಿಯಂ ಪೆಣ್ಗೂಸುಮಂ ಪೆತ್ತೊಡೆ ಆಕೆಗೆ ವೀರಶ್ರೀಯೆಂದು ಪೆಸರನಿಟ್ಟು ಬಳಿದೊಡಾಕೆಯಂ ಕೋಗಳಿಯನಾಳ್ವ ಕ್ರೌಂಚನೆಂಬರಸಂಗೆ ಕೊಟ್ಟರಿಂತು ಕಾಲಂ ಸಲೆ ಮತ್ತಿತ್ತ ನಮಿ ಮೊದಲಾಗೊಡೆಯ ತಮ್ಮಂದಿರಪ್ಪ ಕುಮಾರರೊಡನೆ ಸ್ವಾಮಿ ಕಾರ್ತಿಕಂ ಬಳೆದು ಪದಿನಾಱು ವರುಷದ ಪ್ರಾಯಮಾದಂದು ಮತ್ತೊಂದು ದಿವಸಮನಿಬರುಂ ಕುಮಾರಕ್ಕಳುದ್ಯಾನವನಕ್ಕೆ ವನಕ್ರೀಡೆಯಾಡಲ್ ಪೋಗಿಯಾಮತ್ತಿರ್ಪನ್ನೆಗಮೆಲ್ಲಾ ಕುಮಾರಕ್ಕಳ್ಗಂ ತಾಯ್ತಂದೆಯಜ್ಜರ್ಕಳ ಮನೆಯಿಂದಂ ಪೂಸಲುಮುದಲುಂ ತುದಲುಂ ಪೂವುಂ ತಂಬುಲಮುಂ ತಿಂಬದಂಗಳುಂ ಬಂದುವು ಸ್ವಾಮಿ ಕಾರ್ತಿಕಂಗಾರುಮಟ್ಟದಿರ್ದೊಡೆ ಮನದೊಳ್ ಬಱ್ಪೆದೊನಾಗಿ ವನಕ್ರೀಡೆಯನಾದಿ ಮನೆಗೆ ವಂದು ತಾಯನಿಂತೆಂದನಬ್ಬಾ ನಿಮ್ಮ ತಂದೆಯಪ್ಪೆಮ್ಮಜ್ಜನೊಳನೊ ಇಲ್ಲೆಯೊ ಎಂದು ಬೆಸಗೊಂಡೊಡೆ ತಾಯ್ ಮನದೊಳ್ ಬಚ್ಚೆದೊಳಾಗಿ ಏನಂ ಪೇಜ್ರೆಂ ಮಗನೆ ನಿನಗೆ ತಂದೆಯಪ್ಪಾತನೆನಗಂ ತಂದೆಯೆಂದು ಪೇಜ್ಪೊದವಂ ಕೇಳ್ದು ಆದುವೆ ವೈರಾಗ್ಯಕಾರಣಮಾಗಿ ಶ್ರೀವರರೆಂಬಾಚಾರ್ಯರ ಪಕ್ಕದೆ ತಪಂಬಟ್ಟಾಗಮಂಗಳೆಲ್ಲಮಂ ಕಲ್ತು ಗುರುಗಳಂ ಬೆಸಗೊಂಡವರನು ಮತದಿಂದೇಕವಿಹಾರಿಯಾಗಿ ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ

ಎಂದು ಅವಳು ರಾಜನಿಗೆ ತಿಳಿಸಿದಳು. ರಾಜನ ಒಪ್ಪಿಗೆಯಂತೆ ಕೃತ್ತಿಕೆ ನೀರಿನಲ್ಲಿ ಆಡಿ ಮಗನನ್ನು ಪೆತ್ತಳು. ಅವನಿಗೆ ಕಾರ್ತಿಕನೆಂದು ಹೆಸರನ್ನಿಟ್ಟರು. ಅವನ ನಂತರ ಕೃತ್ತಿಕೆ ಹೆಣ್ಣುಮಗುವನ್ನು ಪೆತ್ತಳು. ಆ ಮಗುವಿಗೆ ವೀರಶ್ರೀ ಎಂದು ಹೆಸರಿಟ್ಟರು. ಆಕೆ ದೊಡ್ಡವಳಾಗಲು ಅವಳನ್ನು ಕೋಗಳಿ ಎಂಬ ಏಸೂರು ಗ್ರಾಮಗಳುಳ್ಳ ಪಟ್ಟಣವನ್ನು ಆಳತಕ್ಕ ಕ್ರೌಂಚನೆಂಬ ರಾಜನಿಗೆ ಕೊಟ್ಟರು. ಹೀಗೆಯೇ ಕಾಲ ಕಳೆಯಿತು. ಇತ್ತ ಕಾರ್ತಿಕನು ನಮಿ ಮುಂತಾಗಿರುವ ತನಗೆ ತಮ್ಮಂದಿರಾದ ಕುಮಾರರೊಂದಿಗೆ ಬಳೆಯುತ್ತ ಹದಿನಾರು ವರ್ಷ ಪ್ರಾಯದವನಾದನು. ಆ ಮೇಲೆ ಒಂದು ದಿವಸ ಆ ಎಲ್ಲಾ ಕುಮಾರರೂ ಉದ್ಯಾನದ ವನಕ್ಕೆ ವನಕೇಳಿಯನ್ನು ಆಡುವುದಕ್ಕಾಗಿ ಹೋಗಿ ಆಡುತ್ತಿದ್ದರು. ಆಗ ಎಲ್ಲಾ ಕುಮಾರರಿಗೂ ಅವರ ತಾಯಿ ತಂದೆಗಳ ಮತ್ತು ಅಜ್ಜಂದಿರ ಮನೆಯಿಂದ ಮೈಗೆ ಹಚ್ಚಲು, ಉಡಲು, ತೊಡಲೂ ಪುಷ್ಪ ತಾಂಬೂಲ ಖಾದ್ಯವಸ್ತುಗಳು ಬಂದವು. ಕಾರ್ತಿಕನಿಗೆ ಮಾತ್ರ ಯಾರೂ ಕಳುಹಿಸಿರಲಿಲ್ಲ. ಇದರಿಂದ ಅವನು ಮನಸ್ಸಿನಲ್ಲಿ ಸತ್ತವನಾದನು (ಸಾಯುವಷ್ಟು ದುಃಖಿತನಾದನು). ವನಕೇಳಿಯನ್ನಾಡಿ ಮನೆಗೆ ಬಂದನು. ತನ್ನ ತಾಯಿಯೊಡನೆ "ಅಮ್ಮಾ ನಿಮ್ಮ ತಂದೆಯಾಗಿರುವ ನನ್ನ ಅಜ್ಜನು ಇರುವನೋ ? ಇಲ್ಲವೋ ?" ಎಂದು ಕೇಳಿದನು. ಆಗ ತಾಯಿ ತನ್ನ ಮನಸ್ಸಿನಲ್ಲಿ ಸತ್ತವಳಾದಂತೆ ದುಃಖಿತಳಾಗಿ- "ಮಗನೇ, ಏನು ಹೇಳಲಿ! ನಿನಗೆ ತಂದೆಯಾಗಿರುವವನು ನನಗೂ ತಂದೆಯಾಗಬೇಕು" ಎಂದು ಹೇಳಿದಳು. ಅದನ್ನು ಕೇಳಿದ ಕಾರ್ತಿಕನಿಗೆ ಅದೇ ಸಂಗತಿ ವೈರಾಗ್ಯಕ್ಕೆ ಕಾರಣವಾಯಿತು. ಅವನು ಶ್ರೀವರರೆಂಬ ಆಚಾರ್ಯರ ಬಳಿಗೆ ಹೋಗಿ, ಅವರಿಂದ ತಪಸ್ಸನ್ನು ಕೈಗೊಂಡು ಶಾಸ್ತ್ರಗಳೆಲ್ಲವನ್ನೂ ಕಲಿತುಕೊಂಡನು. ಗುರುಗಳಿಂದ ಅನುಮತಿಯನ್ನು ಪಡೆದುಕೊಂಡು ಏಕವಿಹಾರಿ (ಒಬ್ಬನೇ ಸಂಚಾರ ಮಾಡುವ ಋಷಿ)ಯಾಗಿ, ಈ ಕಾರ್ತಿಕ ಋಷಿಗಳು ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಮುಖಗಳಲ್ಲಿ ಸಂಚರಿಸುತ್ತ ತೆಂಕನಾಡಿನ ಕಿಷ್ಕಿಂಧ

ವಿಹಾರಿಸುತ್ತಂ ತೆಂಕನಾಡ ಕಿಷ್ಕಿಂಧಮೆಂಬ ಪರ್ವತಮನೆಯ್ದಿಯದಱ ಮೇಗೆ ರಾತ್ರಿ ಪ್ರತಿಮಾಯೋಗಂ ಗೆಯ್ದೊರಾ ಇರುಳ್ ಪಿರಿದೊಂದು ಮೞೆ ಕೊಂಡು ಮೆಯ್ಯ ಮಳಮೆಲ್ಲಮಂ ಕರ್ಚ ಕಳೆದು ಪಾಷಾಣಮೆಂಬ ಮಡುವಂ ನೀರ್ ಪೊಕ್ಕಾಗಳಾ ಮಡುವಿನ ನೀರ್ ಸರ್ವೌಷಧಿಯಾದೊಡಂತಲ್ಲಿಯ ನೀರಂ ಮಿಂದವರ್ಗೆಲ್ಲಾ ವ್ಯಾಧಿಯುಂ ಕಿಡುವುವಾದುವಲ್ಲಿಂ ತೊಡಗಿ ದಕ್ಷಿಣಾಪಥದೊಳದು ತೀರ್ಥಮಾಯ್ತು ಮತ್ತೆ ಸ್ವಾಮಿ ಕಾರ್ತಿಕಋಷಿಯುಂ ವಿಹಾರಿಸುತ್ತಂ ಬಂದು ಕೋಗಳಿಯನೆಯ್ದಿಯಲ್ಲಿಯ ಬಸದಿಯೊಳ್ ಪಂಥಾತಿಚಾರನಿಯಮಂಗೆಯ್ದು ದೇವರಂ ಬಂದಿಸಿ ಮಧ್ಯಾಹ್ನದಾಗಳ್ ಚರಿಗೆವೊಕ್ಕು ಚಾತುರ್ವರ್ಣ್ಯದ ಮನೆಗಳುಮಂ ತೊಱಲುತ್ತಂ ಬಂದರಮನೆಯಂ ಪೊಕ್ಕಾಗಳಾ ಪ್ರಸ್ತಾವದೊಳ್ ಕರುಮಾಡದ ಮೇಗಣ ನೆಲೆಯೊಳಿರ್ದು ವೀರಶ್ರೀ ಮಹಾದೇವಿಯರಸನ ತಲೆಯಂ ತನ್ನ ತೊಡೆಯ ಮೇಲಿಟ್ಟುಗುರಿಸುತ್ತಿರ್ದ್ಯಾಕೆ ಭಟಾರರ ಬರವಂ ಕಂಡಜೆದೆಮ್ಮಣ್ಣಂಗಳಪ್ಪ ಭಟಾರರ್ ಚರಿಗೆಮದಪ್ಪೊರೆಂದು ಮಱಲುಂದಿದರಸನ ತಲೆಯಂ ಕೆಲಗೊಂದಾಧಾರಮನಿಟ್ಟು ನಿಜೆಸಲೆಂದು ಕರುಮಾಡದಿಂದಿಳಿದು ಪರಿತರ್ವನ್ನೆಗಂ ಭಟಾರರ್ ವಂದರಮನೆಯಂಗಣಮಂ ಪೊಕ್ಕು ಮಗುಟ್ಟು ಪೋಗಿ ಬಾಗಿಲ್‌ಮಾಡ ಮನೆಯ್ದಿದಾಗಳರಸಿ ಪೞಗಣಿಂ ಪರಿತಂದು ಬಂದು ಮುಂದೆ ನಿಂದು ಕೈಗಳಂ ಮುಗಿದೞಗಿ ನಿಲ್ಕೆ

ಪರ್ವತಕ್ಕೆ ಬಂದರು. ಆ ಪರ್ವತದ ತುದಿಯಲ್ಲಿ ರಾತ್ರಿಯಲ್ಲಿ ಪ್ರತಿಮಾಯೋಗವನ್ನು ಆಚರಿಸಿದರು. ಆ ರಾತ್ರಿಯಲ್ಲಿ ದೊಡ್ಡದೊಂದು ಮಳೆ ಬಂದು ಕಾರ್ತಿಕಋಷಿಯ ಮೈ ಮೇಲಿನ ಕೆಸರನ್ನೆಲ್ಲ ತೊಳೆದುಕೊಂಡು ಹರಿದು, ಆ ನೀರು ಪಾಷಾಣವೆಂಬ ಮಡುವನ್ನು ಹೊಕ್ಕಿತು. ಆಗ ಆ ಮಡುವಿನ ನೀರು ಸಕಲ ರೋಗಗಳಿಗೂ ಔಷಧಿಯಾಗಿ ಪರಿಣಮಿಸಿತು. ಅಂತೂ ಅಲ್ಲಿಯ ನೀರಿನಲ್ಲಿ ಸ್ನಾನಮಾಡಿದವರಿಗೆ ಎಲ ತರದ ರೋಗಗಳೂ ನಾಶವಾಗುವಂತಾದವು. ಅಂದಿನಿಂದ ಆ ಮಡು ದಕ್ಷಿಣದೇಶದಲ್ಲಿ ತೀರ್ಥವಾಯಿತು. ಆ ಮೇಲೆ ಸ್ವಾಮಿ ಕಾರ್ತಿಕ ಋಷಿಗಳು ಸಂಚಾರಮಾಡುತ್ತ ಬಂದು ಕೋಗಳಿಗೆ ಹೋದರು. ಅಲ್ಲಿಯ ಜಿನಾಲಯದಲ್ಲಿ ಪಂಥಾತಿಚಾರ ನಿಯಮವನ್ನು (ಚರಿಗೆಯಿಂದ ಹಿಂದಿರುಗಿ ದಾರಿಯಲ್ಲಾಗಿದ್ದ ಅತಿಚಾರಗಳ ಶುದ್ಧಿಗಾಗಿ ಆಚರಿಸುವ ನಿಯಮವನ್ನು) ಮಾಡಿ ದೇವರನ್ನು ವಂದಿಸಿ ಮಧ್ಯಾಹ್ನ ವೇಳೆ ಭಿಕ್ಷೆಗೆ ಹೋಗಿ, ನಾಲ್ಕೂ ವರ್ಣದ (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರ) ಮನೆಗಳಿಗೆ ಸುತ್ತುತ್ತ ಬಂದು, ಅರಮನೆಯನ್ನು ಹೊಕ್ಕರು. ಆ ಸಂದರ್ಭದಲ್ಲಿ ಅರಮನೆಯ ಮೇಲುಪ್ಪರಿಗೆಯಲ್ಲಿದ್ದುಕೊಂಡು ವೀರಶ್ರೀ ಮಹಾರಾಣಿ ರಾಜನ ತಲೆಯನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡು ಉಗುರಿನಿಂದ ಕೆರೆಯುತ್ತಿದ್ದಳು. ಅವರು ಕಾರ್ತಿಕ ಋಷಿಗಳು ಬಂದುದನ್ನು ಕಂಡು, ತಿಳಿದುಕೊಂಡು, "ನನ್ನ ಅಣ್ಣನವರಾದ ಋಷಿಗಳು ಭಿಕ್ಷೆಗೆ ಬರುತ್ತಿದ್ದಾರೆ" ಎಂದುಕೊಂಡು, ಮೈಮರೆತು ನಿದ್ದೆಮಾಡುತ್ತಿರುವ ರಾಜನ ತಲೆಯ ಕೆಳಗೆ ಒಂದು ಆಧಾರವನ್ನಿಟ್ಟು, ಋಷಿಗಳನ್ನು ಭಿಕ್ಷಕ್ಕೆ ನಿಲ್ಲಿಸಬೇಕೆಂದು ಉಪ್ಪರಿಗೆಯಿಂದ ಇಳಿದು ಬರುತ್ತಿದ್ದಳು. ಅಷ್ಟರಲ್ಲಿ ಋಷಿಗಳು ಬಂದು ಅರಮನೆಯ ಅಂಗಳವನ್ನು ಹೊಕ್ಕು, ಹಿಂದಿರುಗಿಹೋಗಿ ಹೊರಬಾಗಿಲ ಕಡೆಗೆ ಹೋಗಿದ್ದರು. ರಾಣಿಯು ಹಿಂದಿನಿಂದ ನಡೆದುಕೊಂಡು ಬಂದು ಅವರ ಮುಂದೆ ನಿಂದು ಕೈಗಳನ್ನು ಮುಗಿದು ಅಡ್ಡಬಿದ್ದು "ಋಷಿಗಳೇ, ಭಿಕ್ಷೆಗೆ ನಿಲ್ಲಿ" ಎಂದು ಕೇಳಿದಾಗ ಅವರು- "ಅವ್ವಾ, ಮನೆಯನ್ನು ಹೊಕ್ಕು

ಭಟಾರಾ ಎಂದು ನಿಜೆಸಿದೊಡೆ ಭಟಾರರೆಂದರಬ್ಪಾ ಮನೆಯಂ ಪೊಕ್ಕು ಬಂದೊಮಿನ್ನೆಮಗೆ ನಿಲಲಾಗದೆಂದೊಡರಸಿಯಿಂತೆಂದಳ್ ಭಟಾರಾ ನೀಮೆನಗೆ ದಯೆಗೆಯ್ದಮೋಘಂ ನಿಲಲ್ವೇಱುಮೆಂದು ಪೋಗಲೀಯದೆ ಕಾಲಂ ಪಿಡಿದು ತಾಂಗುತ್ತಿರ್ಪನ್ನೆಗಮ್ ಇತ್ತರಸನೆಟ್ಟತ್ತು ದೆಸೆಗಳಂ ನೋಡಿಯರಸಿಯಂ ಕಾಣದರಸಿಯೆಲ್ಲಿರ್ದೊಳೆಂದು ಕೆಲದವರಂ ಬೆಸಗೊಂಡೊಡವರೆಂದೊರರಸಿಯೊರ್ವ ಸವಣಂ ಬಂದೊಡಾತನಂ ಕಂಡು ಕರುಮಾಡದಿಂದಿಟೆದು ಪರಿದು ಬಟೆಯಂ ತಗುಱ್ದು ಬಾಗಿಲ್ ಮಾಡದಲ್ಲಿ ಸವಣನೊಡನಾ ಪೋರುತ್ತಿರ್ಪೊಳ್ ನೋಡಿಮೆಂದರಸಂಗೆ ತೋಱೆದೊಡರಸಂ ಕಂಡೆನ್ನನಗಲ್ದು ನಿಚ್ಚಲೀ ಸವಣನಲ್ಲಿಗೆ ಪರಿವಳೆಂದು ಕಿನಿಸಿ ಕರುಮಾದದಿಂದಿಟೆದು ರಿಸಿಯರಿರ್ದಲ್ಲಿಗೆವೋಗಿ ಶಕ್ತಿಯೆಂಬಾಯುಧದಿಂದುರವನುರ್ಚಿಪೋಗಿಟ್ಟರಸಿಯುವಮಂ ತಲೆಸಿವಿರಂ ಪಿಡಿದು ದಱದಱನೆಳೆದುಕೊಂಡು ಬಂದಂ ಸ್ವಾಮಿ ಕಾರ್ತಿಕ ಋಷಿಯುಂ ಕ್ಷಮೆಯಂ ಭಾವಿಸಿ ನೆತ್ತರೊಕ್ಕು ಬಸಮಟೆದು ಬೇಸಗೆಯ ಕದುವಿಸಿಲಿಂದಂ ಱುಳದಿಂದಂ ಬೆಂಕೆಯಿಂವಂ ನೀರಟ್ಕೆಯಧಿಕಮಾಗಿ ತಣ್ಪಿನೊಳೊಳ್ಳಿತ್ತು ಸಮಾಧಿಯಕ್ಕುಮೆಂದು ಮನದೊಳ್ ಬಗೆದಿರ್ದೊರನ್ನೆಗಂ ತಮ್ಮಜ್ಜಿಯಪ್ಪ ವೀರಮತಿ ಮಹಾದೇವಿ ಬ್ರಹ್ಮಚರ್ಯವ್ರತವಂ ಕೊಂಡು ಕಾಲಂಗೆಯ್ದು ವ್ಯಂತರದೇವತೆಯಾಗಿ ಪುಟ್ಟಿದಾಕೆಗಾಸನಕಂಪಮಾಗಿಯಱೆದು ಬಂದು ಭಟಾರಾ ಬೆಸನೇನಿವರೆಲ್ಲರುಮಂ ಕೊಂದಪ್ಪೆನೆಂದೊಡೆ

ಹಿಂದೆ ಬಂದಾಗಿಹೋಯಿತು, ಇನ್ನು ನಿಲ್ಲಲು ನಮಗೆ ಅಸಾಧ್ಯ" ಎಂದರು. ಆಗ ರಾಣಿ - "ಪೂಜ್ಯರೇ, ನನ್ನ ಮೇಲೆ ದಯೆಮಾಡಿ ನೀವು ನಿಶ್ಚಯವಾಗಿಯೂ ನಿಲ್ಲಬೇಕು" ಎಂದು ನುಡಿದು ಹೋಗಲಿಕ್ಕೆ ಬಿಡದೆ ಅವರ ಕಾಲನ್ನು ಹಿಡಿದು ತಡೆದಳು. ಅಷ್ಟರಲ್ಲಿ ಇತ್ತ ರಾಜನು ಎಚ್ಚರಗೊಂಡನು. ದಿಕ್ಕುಗಳ ಕಡೆಗೆ ನೋಡಿದಾಗ ರಾಣಿಯನ್ನು ಕಾಣದೆ, 'ರಾಣಿ ಎಲ್ಲಿದ್ದಾಳೆ?' ಎಂದು ತನ್ನ ಪಕ್ಕದಲ್ಲಿದ್ದವರನ್ನು ಕೇಳಿದನು. ಆಗ ಅವರು - "ರಾಣಿ ಓರ್ವ ಜೈನಸನ್ಯಾಸಿ ಬಂದಾಗ ಅವನನ್ನು ಕಂಡು ಅರಮನೆಯ ಉಪ್ಪರಿಗೆಯಿಂದ ಇಳಿದು ಬಂದು, ಅತನ ಹಿಂದೆ ಹಿಂದೆಯೇ ಹೋಗಿ ಹೊರಬಾಗಿಲ ಗೋಪುರದಲ್ಲಿ ಆ ಸನ್ಯಾಸಿಯೊಡನೆ ಅದೋ ಹೋರಾಡುತ್ತಿರುವಳು, ನೋಡಿರಿ" ಎಂದು ರಾಜನಿಗೆ ತೋರಿಸಿದರು. ರಾಜನು ಕಂಡು, "ಈಕೆ ನಿತ್ಯವೂ ನನ್ನನ್ನು ಅಗಲಿ, ಈ ಸವಣನಲ್ಲಿಗೆ ಹೋಗುತ್ತಾಳೆ ಎಂದು ಕೋಪಗೊಂಡು ಅರಮನೆಯ ಉಪ್ಪರಿಗೆಯಿಂದ ಇಳಿದು ಋಷಿಗಳಿದ್ದಲ್ಲಿಗೆ ಹೋದನು. ಶಕ್ತಿ (ಈಟಿ) ಎಂಬ ಆಯುಧದಿಂದ ಅವನ ಎದೆ ಸೀಳಿಹೋಗುವಂತೆ ಹೊಡೆದನು. ಅರಸಿಯ ತಲೆಗೂದಲನ್ನು ಹಿಡಿದು, ಅವಳನ್ನು ದರದರನೆ ಎಳೆದುಕೊಂಡು ಬಂದನು. ಸ್ವಾಮಿ ಕಾರ್ತಿಕಋಷಿ ಕ್ಷಮೆಯನ್ನು ಬಗೆದು, ರಕ್ತ ಹರಿದು ಶಕ್ತಿ ಕುಂದಿ ಬೇಸಗೆಯ ತೀವ್ರವಾದ ಬಿಸಿಲಿನಿಂದಲೂ ಅದರ ತಾಪದಿಂದಲೂ ಸೆಕೆಯಿಂದಲೂ ಬಾಯಾರಿಕೆ ಹೆಚ್ಚಾಗಲು ತಂಪಾದ ಸ್ಥಳದಲ್ಲಿ ಒಳ್ಳೆಯ ಸಮಾಧಿ ಸ್ಥಿತಿ ಒದಗಿಬರುವುದೆಂದು ಮನಸ್ಸಿನಲ್ಲಿ ಭಾವಿಸಿಕೊಂಡಿದ್ದರು. ಅಷ್ಟರಲ್ಲಿ ತಮ್ಮ ಅಜ್ಜಿಯಾದ ವೀರಮತಿ ಮಹಾದೇವಿ ಬ್ರಹ್ಮಚರ್ಯದ ವ್ರತವನ್ನು ಕೈಗೊಂಡು ಸತ್ತು ವ್ಯಂತರ ದೇವತೆಯಾಗಿ ಹುಟ್ಟಿದ್ದಳು. ಆಕೆ ಕುಳಿತ ಆಸನ ಅಲುಗಾಡಿದುದರಿಂದ ನಡೆದ ಸಂಗತಿಯನ್ನು ತಿಳಿದುಕೊಂಡು ಅವಳು ಬಂದು "ಋಷಿಗಳೇ, ನನಗೆ ಅಪ್ಪಣೆಯೇನು ? ಅಪ್ಪಣೆಕೊಟ್ಟರೆ ಇವರೆಲ್ಲರನ್ನೂ ಕೊಲ್ಲುತ್ತೇನೆ" ಎಂದಳು. ಆಗ ಋಷಿಗಳು - "ಹಾಗೇನೂ ಮಾಡುವುದು

ಭಟಾರರೆಂವರಂತೇನುಂ ಬೇದ ನೀನೆಮ್ಮಂ ತಣ್ಪೆನೆಡೆಗೆ ಕೊಂಡುಪೋಗೆಂದೊಡೆ ದೇವತೆ ನವಿಲ ರೂಪಿನಿಂದೆತ್ತಿಕೊಂಡು ಬೆನ್ನೊಳಿಟ್ಟು ಕೋಗಳಿಯ ಮೂಡಣ ದೆಸೆಯ ಪರ್ವತದ ಕೊಳದ ತದಿಯೊಳ್ ಲತಾಮಂಟಪದೊಳಿರಿಸಿ ಪೋದೊಡೆ ಬೆಟ್ಟದ ಮೇಗಣಿಂ ಪಾಯ್ತರ್ಪ ನಿರ್ಝರ ಶೀಕರಂಗಳಿಂ ಮೆಯ್ಯಾಪ್ಯಾಯನಮಾಗಿ ಸಂನ್ಯಸಂಗೆಯ್ದು ಶುಭಪರಿಣಾಮದಿಂ ಮುಡಿಪಿ ಸರ್ವಾರ್ಥ ಸಿದ್ಧಿಯೊಳ್ ಮೂವತ್ತುಮೂರು ಸಾಗರೋಪಮಾಯುಷ್ಯಮನೊಡೆಯೊನಹ ಮಿಂದ್ರನಾಗಿ ಪುಟ್ಟಿದೊಂ ಮತ್ತಿತ್ತ ಭಟಾರರ ತಂಗೆಯಪ್ಪ ವೀರಶ್ರೀಯುಂ ಹಾ ಭಟಾರ ಎಂದಿರುಳುಂ ಪಗಲುಂ ಪಲವುದಿವಸವೊಂದೆ ಪಾಂಗಿನೊಳ್ ಪ್ರಳಾಪಿಸಿ ದುಃಖಂಗೆಯ್ಯೆ ಅರಸನು ಮಾತೆಗೆ ಕಂಡನಲ್ಲನಪ್ಪುದಱಿಂದಾದಮಾನುಮುಬ್ಬಿಗಂಬಟ್ಟರ್ದಿಂತೆಂದನಾರೊರ್ವರರಸಿಯಬ್ಕೆಯಂ ಮಱ್ಪಿಸಿ ದುಃಖಮಂ ಮಱೆಯಿಸುವೊರವರೊಸಗೆಯಂ ಮಾಡುವೆನೆಂದು ಪೊಬಲೊಳಗೆ ಗೋಸಣೆಯಂ ತೊಬಲ್ದಿದೊಡದಂ ಕೇಳ್ದು ಲೋಗರ್ ಪಗರಣಿಗರಾಗಿ ಎನಿತಾನುಂ ತೆಱದ ರೂಪುಗಳಂ ಕೈಕೊಂಡು ಮರಮೊಗಂಗಳನಿಟ್ಟು ಬಂದು ಮುಂದೆ ಆಡಿಯುಂ ಪಾಡಿಯುಂ ನಗಿಸಿಯುಮೆಂತುಮಬ್ಕೆಮಬ್ಬದಿರ್ದೊಡೊರ್ವಂ ಕರಿಯ ಕಚ್ಚುಟಮನುಟ್ಟು ಮೆಯ್ಯೆಲ್ಲಂ ಮಸಿಯಂ ಪೂಸಿ ಬೋಬಿದಲೆವೆರಸು ಬಾಯೊಳ್ ಕವಡಿಕೆಗಳಂ ಪಲ್ಗಳಂತೆ ಮಾಡಿ ಕುಂಚಮಂ ಗುಂಡಿಗೆಯುಮಂ ಪಿಡಿದು ಬಪ್ಪೊನನರಸಂ ಕಂಡಿಂತೆಂವನೆಲೆಯರಸಿ ನಿನ್ನ ಸಹೋದರಂಗಳಪ್ಪ ಭಟಾರರಾ ಬಪ್ಪೊರೆಯೆಂದು

ಬೇಡ. ಸಮ್ಮನ್ನು ತಂಪಾದ ಸ್ಥಳಕ್ಕೆ ಕೊಂಡೊಯ್ಯಿ" ಎಂದರು. ಆ ದೇವತೆ ನವಿಲಿನ ರೂಪದಿಂದ ಋಷಿಗಳನ್ನು ಎತ್ತಿ ಬೆನ್ನಲ್ಲಿಟ್ಟುಕೊಂಡು ಕೋಗಳಿಯ ಪೂರ್ವದಿಕ್ಕಿನ ಪರ್ವತದ ಸರೋವರದ ದಡದಲ್ಲಿ ಬಳಿ ಮಂಟಪದಲ್ಲಿಟ್ಟು ತೆರಳಿತು. ಬೆಟ್ಟದ ತುದಿಯಿಂದ ಹರಿದು ಬರುವ ನೀರ ಝರಿಯ ತುಂತುರುಗಳಿಂದ ಅವರ ಶರೀರಕ್ಕೆ ಹಿತವಾಯಿತು. ಅವರು ಸಂನ್ಯಾಸವನ್ನು ಮಾಡಿ ಶುಭವಾದ ಪರಿಣಾಮದಿಂದ ಸತ್ತು ಸರ್ವಾರ್ಥಸಿದ್ಧಿ ಎಂಬ ಮೇಲುಮಟ್ಟದ ಸ್ವರ್ಗದಲ್ಲಿ ಮೂವತ್ತುಮೂರು ಸಾಗರದಂತಹ ಆಯುಷ್ಯವುಳ್ಳ ಅಹಮಿಂದ್ರನಾಗಿ ಹುಟ್ಟಿದ್ದರು. ಆಮೇಲೆ ಇತ್ತ ಋಷಿಗಳ ತಂಗಿಯಾದ ವೀರಶ್ರೀಯು 'ಹಾ ಋಷಿಯೇ !' ಎಂದು ಇರುಳೂ ಹಗಲೂ ಹಲವು ದಿವಸ ಒಂದೇ ರೀತಿಯಲ್ಲಿ ಅಳುತ್ತ, ದುಃಖಿಸುತ್ತಿದ್ದಳು. ಅರಸನು ಆಕೆಗೆ ಪ್ರಿಯತಮನಾದುದರಿಂದ ಅತ್ಯಂತ ದುಃಖಿಪಟ್ಟು ಹೀಗೆಂದನು - "ಯಾರಾದರೊಬ್ಬರು ರಾಣಿಯ ಅಳುವನ್ನು ಹೋಗಲಾಡಿಸಿ ದುಃಖವನ್ನು ಮರೆಯುವಂತೆ ಮಾಡಿದರಾದರೆ, ಅವರಿಗೆ ಪಾರಿತೋಷಕವನ್ನು ಕೊಡುವೆನು" - ಹೀಗೆ ಸಾರಿಸಿ ಡಂಗುರ ಹೊಡೆಯಿಸಿದನು. ಅದನ್ನು ಕೇಳಿ ಜನರು ಪಗರಣ (ಯಕ್ಷಗಾನ ಬಯಲಾಟ) ಎಂಬ ಆಟವಾಡುವವರಾಗಿ ಎಷ್ಟೋ ರೀತಿಯ ರೂಪಗಳನ್ನು (ವೇಷಗಳನ್ನು) ಧರಿಸಿಕೊಂಡು ಮರದ ಮೊಗವಾಡಗಳನ್ನು ಇಟ್ಟುಕೊಂಡು ಬಂದು ಅವಳ ಮುಂದೆ ಆಡಿಯೂ ಹಾಡಿಯೂ ನಗುವಂತೆ ಮಾಡಿಯೂ ಪ್ರಯೋಜನವಾಗಲಿಲ್ಲ. ಹೇಗೂ ಅವಳ ಅಳುವು ಪರಿಹಾರವಾಗಲಿಲ್ಲ. ಆಗ ಒಬ್ಬನು ಕಪ್ಪಾದ ಕೋವಣ (ಕೌಪೀನ)ವನ್ನು ಧರಿಸಿ ಮೈಗೆಲ್ಲ ಮಸಿ ಹಚ್ಚಿ ಬೋಳಾದ ತಲೆಯೊಂದಿಗೆ ಬಾಯಲ್ಲಿ ಕವಡೆಗಳನ್ನು ಹಲ್ಲಿನಂತೆ ಮಾಡಿ ನವಿಲುಗರಿಯ ಕುಂಚವನ್ನೂ ಕಮಂಡಲುವನ್ನೂ ಹಿಡಿದುಕೊಂಡು ಬರುತ್ತಿದ್ದನು. ಅವನನ್ನು ರಾಜನು ಕಂಡು ರಾಣಿಯೊಡನೆ - "ಎಲೆ ಅರಸಿ 'ನಿನ್ನ ಸೋದರರಾದ

ಪೇಟ್ಟಾಗಳಿಲ್ಲಿರ್ದರೆಂದೆಟ್ಟು ನೋಡಿ ಕಾಣದಾ ರೂಪಂ ಕಂಡು ನಕ್ಕು ದುಃಖಮಂ ಮಱೆದೊಳಾಗಳಾ ನಗಿಸಿದ ಪಗರಣಿಗಂಗೆ ಪಿರಿದು ಕಸವರಮನಿತ್ತೊ ನಂದಿಂದಿತ್ತ ಬಾದುಬ್ಬಿಯ ಪರ್ವಮುಂ ಪಗರಣದಾಟಪಾಟಮುಮಾದುವು ಮತ್ತೆ ಸ್ವಾಮಿ ಕಾರ್ತಿಕಋಷಿಯರ್ ಮುದಿಪಿದಲ್ಲಿಯವರ ತಂಗೆಯಪ್ಪ ವೀರಶ್ರೀ ಬಸದಿಯಂ ಮಾಡಿದೊಡಂದಿಂದಿತ್ತ ಸ್ವಾಮಿಯೆಂಬ ತೀರ್ಥಮಾಯ್ತು ಮತ್ತಿತ್ತ ಕೃತ್ತಿಕೆಯೆಂಬ ಪೊಬಿಲಾನಾಳ್ವಗ್ನಿರಾಜ ನೆಂಬರಸಂ ತನ್ನ ಮಗಳಂ ತಾನೆ ಕೊಂಡು ಮೊಱೆಯಟೆದನಪ್ಪುದಱಿಂದಲ್ಲಿಯ ಜನಮು

ಶ್ಲೋಕ ॥ ರಾಜ್ಞಿಧರ್ಮಿಣಿ ಧರ್ಮಿಷ್ಠಾಃ ಪಾಪೇ ಪಾಪಸಮಾಶ್ರಿತಾಃ
ರಾಜಾನಮನುವರ್ತಂತೇ ಯಥಾರಾಜಾ ತಥಾಪ್ರಜಾಃ ॥

ಎಂದರಸನುಂ ಕಂದು ಮೊಱೆಯಟೆದು ನೆಗಟಲ್ ತಗುಳ್ದೊಡಾ ಪೊಬಿಲ್ಗೆ ಭೋಗಂಕಾರೋಹಣಮೆಂದು ಪೆಸರನಿಟ್ಟರಿದು ಸ್ವಾಮಿ ಕಾರ್ತ್ತಿಕಋಷಿಯ ಕಥೆ ಮತ್ತೆ ಪೆಜರುಂ ಪರಮ ಸಹಜ ರತ್ನತ್ರಯಂಗಳನಾರಾಧಿಸುವವಗ್ಗಳ್ ಸ್ವಾಮಿ ಕಾರ್ತಿಕ ಋಷಿಯರಂ ಮನದೊಳ್ ಬಗೆದೇಱುಂ ಪುಣ್ಣುಂ ವ್ಯಾಧಿಯುಂ ಪಸಿವು ನೀರಟ್ಟಿ, ಶೀತವಾತೋಷ್ಣಂಗಳುಮಂ ಸೈರಿಸಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

ಋಷಿಗಳು ಅದೋ ಬರುತ್ತಿರುವರು" ಎಂದು ಹೇಳಿದನು. ಆಗ ಆಕೆ "ಎಲ್ಲಿದ್ದಾರೆ?" ಎಂದು ಎದ್ದು ನೋಡಿದಳು. ಸಹೋದರನನ್ನು ಕಾಣದೆ, ಆ ರೂಪವನ್ನು ಕಂಡು ನಕ್ಕು ದುಃಖವನ್ನು ಮರೆತುಬಿಟ್ಟಳು. ಆ ನಗಿಸಿದ ಪಗರಣಿಗನಿಗೆ ಹೆಚ್ಚು ಚಿನ್ನವನ್ನು ಕೊಟ್ಟನು. ಅಂದಿನಿಂದ ಈಚೆಗೆ ಬಾದುಬ್ಬೆ ಎಂಬ ದೇವತೆಯ ಹಬ್ಬವೂ ಪಗರಣದ ಆಟವೂ ಮತ್ತು ಮಾತುಗಾರಿಕೆಯೂ ಪ್ರಚಲಿತವಾದವು. ಸ್ವಾಮಿ ಕಾರ್ತಿಕ ಋಷಿಗಳು ಸತ್ತ ಸ್ಥಳದಲ್ಲಿ ಅವರ ತಂಗಿಯಾದ ವೀರಶ್ರೀಯು ಜಿನಾಲಯವನ್ನು ಕಟ್ಟಿಸಿದಳು. ಅಂದಿನಿಂದ ಈಚೆಗೆ ಅದು ಸ್ವಾಮಿ ಎಂಬ ತೀರ್ಥವಾಯಿತು. ಆಮೇಲೆ ಇತ್ತ ಕೃತ್ತಿಕಾಪುರವನ್ನು ಆಳುವ ಅಗ್ನಿರಾಜನು ತನ್ನ ಮಗಳನ್ನು ತಾನೆ ಸ್ವೀಕರಿಸಿ ನಂಟತನ (ಬಾಂಧವ್ಯ)ವನ್ನು ಹಾಳುಮಾಡಿದನಾದುದರಿಂದ ಅಲ್ಲಿಯ ಜನರು (ರಾಜನು ಧರ್ಮವಂತನಾದರೆ ಪ್ರಜೆಗಳೂ ಧರ್ಮದಲ್ಲಿ ಇರುವವರಾಗುತ್ತಾರೆ. ರಾಜನು ಪಾಪಿಯಾಗಿದ್ದರೆ ಪ್ರಜೆಗಳೂ ಪಾಪವನ್ನು ಆಶ್ರಯಿಸುವವರಾಗುತ್ತಾರೆ. ಪ್ರಜೆಗಳು ರಾಜನನ್ನು ಅನುಸರಿಸುತ್ತಾರೆ.) ರಾಜನು ಹೇಗೋ ಪ್ರಜೆಗಳೂ ಹಾಗೆಯೇ. ಎಂಬ ನೀತಿಯಂತೆ ರಾಜನನ್ನು ಕಂಡು ಅವರೂ ಬಾಂಧವ್ಯವನ್ನು ಕೆಡಿಸಿ ಆಚರಿಸಲು ಪ್ರಾರಂಭಿಸಿದರು. ಇದರಿಂದ ಆ ಪಟ್ಟಣಕ್ಕೆ ಭೋಗಂಕಾರೋಹಣ (ಭೋಗಪಟ್ಟಣ) ಎಂದು ಹೆಸರಿಟ್ಟರು. ಇದು ಸ್ವಾಮಿ ಕಾರ್ತಿಕ ಋಷಿಯ ಕಥೆ. ಅತ್ಯಂತ ಶ್ರೇಷ್ಠವೂ ಸಹಜವೂ ಆಗಿರತಕ್ಕ ಸಮ್ಯಗ್ದರ್ಶನ, ಸಮ್ಯಗ್‌ಜ್ಞಾನ, ಸಮ್ಯಕ್ ಚಾರಿತ್ರ ಎಂಬ ರತ್ನತ್ರಯವನ್ನು ಆರಾಧಿಸತಕ್ಕ ಇನ್ನು ಬೇರೆಯವರು ಕೂಡ, ಸ್ವಾಮಿ ಕಾರ್ತಿಕ ಋಷಿಗಳನ್ನು ಮನಸ್ಸಿನಲ್ಲಿ ಭಾವಿಸಿಕೊಂಡು ಗಾಯ, ಹುಣ್ಣು, ರೋಗ, ಹಸಿವು, ಬಾಯಾರಿಕೆ, ತಂಪು, ಗಾಳಿ, ಕಾವುಗಳನ್ನು ಸಹಿಸಿ, ಸ್ವರ್ಗ-ಮೋಕ್ಷ ಸುಖಗಳನ್ನು ಪ್ರಾಪ್ತಿಮಾಡಿಕೊಳ್ಳಲಿ.

೧೨. ಅಭಯಘೋಷರೆಂಬ ಮುನಿಯ ಕಥೆ

ಅಭಯಘೋಷರೆಂಬ ಮುನಿಯ ಕಥೆಯಂ ಪೇಳ್ವೆಂ :

ಗಾಹೆ ॥ ಕಾಕಂದಿ ಅಭಯಘೋಸೋ ಎ ಚಂಡವೇಗೇಣ ಛಿಣ್ಣ ಸವ್ವಂಗೋ
ತವ್ವೇದಣ ಮಧಿಯಾಸಿಯ ಪಡಿವಣ್ಣೋ ಉತ್ತಮಂ ಅಟ್ಠಂ ॥

[ಕಾಕಂದಿ-ಕಾಕಂದಿಯೆಂಬ ಪೊಬಲೊಳ್, ಅಭಯಘೋಸೋ ವಿ-ಅಭಯಘೋಷರೆಂಬ ರಿಸಿಯುಂ, ಚಂಡವೇಗೇಣ-ಚಂಡವೇಗನೆಂಬೊನರಸನಿಂದಂ, ಛಿಣ್ಣಸವ್ವಂಗೋ-ಕೊಜೆಯೆ ಪಟ್ಟೆಲ್ಲಾ ಮೆಯ್ಯನೊದೆಯನಾಗಿ, ತವ್ವೇವಣಂ - ಆ ವೇದನೆಯಂ, ಅಧಿಯಾಸಿಯ-ಲೇಸಾಗಿ ಸೈರಿಸಿ, ಪಡಿವಣ್ಣೋ-ಪೊರ್ದಿದೊಂ, ಉತ್ತಮಂ ಅಟ್ಠಂ-ಮಿಕ್ಕ ದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯಂ]

ಅದೆಂತೆಂದೊಡೆ : ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಮಗಧೆಯೆಂಬುದು ನಾಡಲ್ಲಿ ಕಾಕಂದಿಯೆಂಬುದು ಪೊಬಲದನಾಳ್ವೊನಭಯಘೋಷನೆಂಬೊನರಸನಾತನ ಮಹಾದೇವಿ ಅಭಯಮತಿಯೆಂಬೊಳಂತವರ್ಗ್ಗಳಿಷ್ಟವಿಷಯ ಕಾಮಭೋಗಂಗಳನನುಭವಿಸುತ್ತಂ ಕಾಲಂ ಸಲೆ ಮತ್ತೊಂದು ದಿವಸಮರಸಂ ಪೊಜಿಮಟ್ಟು ಪೊಜಿವೊಬಲ ಶೋಭೆಯಂ ತೊಬಲ್ಚು ನೋಡುತ್ತಿರ್ಪನ್ನೆಗಮೊರ್ವ ಮೀಂಗುಲಿಗನೊಂದಾಮೆಯಂ ಬಾಬಿವಾಬಿ ನಾಲ್ಕು ಕಾಲಂ ಕಟ್ಟಿ ಬಳ್ಳಿಯಂ ಕೊರಲೊಳ್ ತಗುಚ್ಚೆಯೆಬಲೆ ಪಿಡಿದುಕೊಂಡು ಪೊಬಲ್ಗಿದಿರಂ ಬರ್ಪೊನನರಸಂ ಕಂಡು ತನ್ನ ಬನ್ನಣಮಂ ನೆರೆದ ನೆರವಿಗೆ ಮೆಜ್ಜಿಯಲ್ದೇಡಿ ಗೆಂಟಜೆಂ ಚಕ್ರದಿಂ ನಾಲ್ಕು ಕಾಲುಮನೊರ್ಮೊದಲೆ ಪಜೆಯಿಟ್ಟೊಡೆ ಮೀಂಗುಲಿಗಂ ಪ್ರಾಣಮುಳ್ಳಂತಿರಾಮೆಯಂ ತನ್ನ ಮನೆಗೆ ಕೊಂಡು ಪೋದೊಡಾ

ಅಭಯಘೋಷರೆಂಬ ಮುನಿಯ ಕಥೆಯನ್ನು ಹೇಳುವೆನು : (ಕಾಕಂದಿಯೆಂಬ ಪಟ್ಟಣದಲ್ಲಿ ಅಭಯಘೋಷರೆಂಬ ಋಷಿ ಚಂಡವೇಗನೆಂಬ ರಾಜನಿಂದ ಕೊರೆಯಲ್ಪಟ್ಟ ಸರ್ವಾಂಗವುಳ್ಳವನಾಗಿ ಆ ವೇದನೆಯನ್ನು ವಿಶೇಷವಾಗಿ ಸಹಿಸಿ ಶ್ರೇಷ್ಠವಾದ ದರ್ಶನ ಜ್ಞಾನ ಚಾರಿತ್ರಗಳ ಆರಾಧನೆಯನ್ನು ಆಚರಿಸಿದನು.) ಅದು ಹೇಗೆಂದರೆ : ಈ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ಮಗಧೆ ಎಂಬ ನಾಡಿದೆ. ಅಲ್ಲಿ ಕಾಕಂದಿ ಎಂಬ ಪಟ್ಟಣವನ್ನು ಅಭಯಘೋಷನೆಂಬ ರಾಜನು ಆಳುತ್ತಿದ್ದನು. ಅವನ ಮಹಾರಾಣಿ ಅಭಯಮತಿಯೆಂಬವಳು. ಅಂತು ಅವರು ತಮ್ಮ ಇಷ್ಟವಾದ ವಿಷಯದ ಬಯಕೆಯ ಸುಖಗಳನ್ನು ಅನುಭವಿಸುತ್ತ ಅವರಕಾಲ ಕಳೆಯುತ್ತಿತ್ತು. ಅಮೇಲೆ ಒಂದು ದಿವಸ ರಾಜನು ಅರಮನೆಯಿಂದ ಹೊರಟು ಪಟ್ಟಣದ ಹೊರಗಿನ ಚೆಲುವನ್ನು ನೋಡುತ್ತ ಸುತ್ತಾಡುತ್ತಿದ್ದನು. ಆ ವೇಳೆಗೆ ಒಬ್ಬ ಬೆಸ್ತನು ಒಂದು ಆಮೆಯನ್ನು ಅದು ಜೀವಿಸಿಕೊಂಡಿದ್ದಂತೆಯೇ (ಸಜೀವವಾಗಿ) ನಾಲ್ಕು ಕಾಲುಗಳನ್ನೂ ಕಟ್ಟಿ, ಕೊರಳಿಗೆ ಹಗ್ಗ ಸಿಕ್ಕಿಸಿ, ಅದು ನೇತಾಡುವ ಹಾಗೆ ಹಿಡಿದುಕೊಂಡು ಪಟ್ಟಣಕ್ಕೆ ಇದಿರಾಗಿ ಬರುತ್ತಿದ್ದನು. ಅವನನ್ನು ರಾಜನು ಕಂಡು, ತನ್ನ ವಿಶೇಷವಾದ ಜ್ಞಾನವನ್ನು ಅಲ್ಲಿ ಸೇರಿದ್ದ ಜನಸಂದೋಹಕ್ಕೆ ಮೆರೆಯಿಸಬೇಕೆಂಬ ಉದ್ದೇಶದಿಂದ ದೂರದಿಂದ ತನ್ನ ಚಕ್ರಾಯುಧದಿಂದ ಅದರ ನಾಲ್ಕು ಕಾಲುಗಳೂ ಒಂದೇ ಸಲಕ್ಕೆ ತುಂಡಾಗುವಂತೆ ಹೊಡೆದನು. ಬೆಸ್ತನು ಆ ಆಮೆಯನ್ನು ಪ್ರಾಣವಿರುವ ಹಾಗೆಯೇ

ಇರುಳೊಳಾಮೆ ಪಿರಿದು ವೇದನೆಯಿಂದಂ ನವಮದು ಸತ್ತಾ ಪೊಬಲೊಳಭಯಘೋಷ ನೃಪತಿಗಭಯಮತಿ ಮಹಾದೇವಿಗಂ ಚಂಡವೇಗನೆಂಬ ಮಗನಾಗಿ ಪುಟ್ಟಿದನಂತವರ್ಗಳಿಷ್ಟವಿಷಯ ಕಾಮಭೋಗಸುಖಂಗಳನನುಭವಿಸುತ್ತಿರ್ಪನ್ನೆಗಂ ಮತ್ತೊಂದು ದಿವಸಮರಸನುಮರಸಿಯುಂ ಕರುಮಾಡದ ಮೇಗಣ ನೆಲೆಯೊಳ್ ಭೋಗೋಪಭೋಗ ಸುಖಂಗಳನನುಭವಿಸುತ್ತಂ ವಿನೋದದಿಂದಿರ್ಪನ್ನೆಗಂ ಚಂದ್ರಗ್ರಹಣಮಾದುದನರಸಂ ಕಂಡನಿತ್ಯಮಂ ಭಾವಿಸಿಯದುವೆ ವೈರಾಗ್ಯಕ್ಕೆ ಕಾರಣಮಾಗಿ ಚಂಡವೇಗನೆಂಬ ಮಗಂಗೆ ರಾಜ್ಯಪಟ್ಟಂಗಟ್ಟಿ ಬಾಹ್ಯಾಭ್ಯಂತರ ಪರಿಗ್ರಹ ಪರಿತ್ಯಾಗಂಗೆಯ್ದು ನಂದನರೆಂಬಾಚಾರ್ಯರ ಪಕ್ಕದೆ ತಪಂಬಟ್ಟು ಪನ್ನೆರಡು ವರುಷಮವರೊಡನಿರ್ದೆಲ್ಲಾ ವೋದುಗಳುಮಂ ಕಲ್ತು ಗುರುಗಳಂ ಬೆಸಗೊಂಡವ ರನುಮತದಿಂದೇಕವಿಹಾರಿಯಾಗಿ ಗ್ರಾಮನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾ ಮುಖಂಗಳಂ ವಿಹಾರಿಸುತ್ತಂ ಬರ್ಪೊರ್ ತಮ್ಮ ಮುನ್ನಿನ ಕಾಕಂದಿಯೆಂಬ ಪೊಬಲ್ಗವಂದು ದ್ಯಾನವನದೊಳ್ ವೀರಾಸನಮಿರ್ದೊರನ್ನೆಗಂ ಮುನ್ನಾಮೆಯಪ್ಪ ಜೀವನವರ ಮಗನಪ್ಪ ಚಂಡವೇಗಂ ಕರುಮಾಡದ ಮೇಗಣ ನೆಲೆಯೊಳಿರ್ದು ನೋಂಟಕ್ಕೆ ಗೆಂಟು ಪೋಗೆ ಚಕ್ರಮನಿಟ್ಟೊಡಾ ಚಕ್ರಂ ವಂದು ಋಷಿಯರೆರಡು ಕೆಯ್ಯುಂ ಕಾಲ್ಗಳುಮಂ ಮೊಕ್ಕನೆ ಪೋಗೆ. ಕೊಂಡೊಡೆ ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಜಾವಜ್ಜೀವಂ ನಿವೃತ್ತಿಗೆಯ್ದು ವೇದನೆಯಂ ಸೈರಿಸಿ

ತನ್ನ ಮನೆಗೆ ತೆಗೆದುಕೊಂಡು ಹೋದನು. ಆ ರಾತ್ರಿ ಅಮೆ ಹೆಚ್ಚಾದ ನೋವಿನಿಂದ ಯಾತನೆ ಪಟ್ಟು ಸತ್ತು ಆ ಪಟ್ಟಣದಲ್ಲಿ ಅಭಯಘೋಷ ರಾಜನಿಗೂ ಅಭಯಮತಿ ರಾಣಿಗೂ ಮಗನಾಗಿ ಜನಿಸಿತು. ಅಂತು ಅವರು ತಮ್ಮ ಪ್ರೀತಿಯ ವಿಷಯ ಬಯಕೆಯ ಸುಖಗಳನ್ನು ಅನುಭವಿಸುತ್ತ ಇದ್ದರು. ಹೀಗಿರಲು ಮತ್ತೊಂದು ದಿವಸ ರಾಜರಾಣಿಯರು ಅರಮನೆಯ ಮೇಲುಪ್ಪರಿಗೆಯ ನೆಲೆಯಲ್ಲಿ ಬಹುವಿಧವಾದ ಸುಖಗಳನ್ನು ಅನುಭವಿಸುತ್ತ ವಿನೋದದಿಂದ ಇದ್ದರು. ಆಗ ರಾಜನು ಚಂದ್ರಗ್ರಹಣವಾದುದನ್ನು ಕಂಡು ಈ ಸಂಸಾರ ಶಾಶ್ವತವಲ್ಲವೆಂದು ಭಾವಿಸಿದನು. ಅದುವೇ ಅವನಿಗೆ ವೈರಾಗ್ಯಕ್ಕೆ ಕಾರಣವಾಯಿತು. ಅವನು ಮಗನಾದ ಚಂಡವೇಗನಿಗೆ ಪಟ್ಟ ಕಟ್ಟಿ ಬಾಹ್ಯ ಮತ್ತು ಅಭ್ಯಂತರ ಎಂಬ ಎರಡು ಬಗೆಯ ಪರಿಗ್ರಹಗಳನ್ನು ತೊರೆದು ನಂದನರೆಂಬ ಗುರುಗಳ ಬಳಿಯಲ್ಲಿ ತಪಸ್ಸನ್ನು ಕೈಗೊಂಡನು. ಹನ್ನೆರಡು ವರ್ಷ ಅವರೊಡನೆ ಇದ್ದು ಎಲ್ಲ ವಿದ್ಯೆಗಳನ್ನೂ ಕಲಿತು, ಗುರುಗಳೊಡನೆ ಕೇಳಿ, ಅವರ ಅಪ್ಪಣೆ ಪಡೆದು, ಅಭಯಘೋಷ ಋಷಿಯಾಗಿ, ಅವರು ಒಬ್ಬರೇ ಸಂಚಾರ ಮಾಡುತ್ತ ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಮುಖ ಎಂಬ ಭೂಭಾಗಗಳಲ್ಲಿ ಸಂಚರಿಸಿಕೊಂಡು ಬರುತ್ತಿದ್ದವರು ತಮ್ಮ ಹಿಂದಿನ ಕಾಕಂದಿ ಎಂಬ ಪಟ್ಟಣಕ್ಕೆ ಬಂದರು. ಅಲ್ಲಿನ ಉದ್ಯಾನವನದಲ್ಲಿ ವೀರಾಸನದಲ್ಲಿ ಕುಳಿತಿದ್ದರು. ಆ ವೇಳೆಗೆ, ಹಿಂದೆ ಅಮೆಯ ಜೀವವಾಗಿದ್ದ, ಅವರ ಮಗನಾದ ಚಂಡವೇಗನು ಅರಮನೆಯ ಮೇಲುಪ್ಪರಿಗೆಯ ನೆಲೆಯಲ್ಲಿ ಇದ್ದುಕೊಂಡು, ಗುರಿಯಿಟ್ಟು ದೂರಕ್ಕೆ ಹೊಡೆಯುವುದಕ್ಕಾಗಿ ಚಕ್ರವನ್ನು ಪ್ರಯೋಗಿಸಿದನು. ಆ ಚಕ್ರ ಬಂದು ಅಭಯಘೋಷ ಋಷಿಗಳ ಎರಡು ಕೈಗಳೂ ಕಾಲೂಗಳೂ ಮೊಕ್ಕೆಂದು ಕತ್ತರಿಸಿ ಹೋಗುವಂತೆ ತಗುಲಿತು. ಆಗ ಋಷಿಗಳು ಭಕ್ಷ್ಯ, ಭೋಜ್ಯ, ಲೇಹ್ಯ, ಚೋಷ್ಯ ಎಂಬ ನಾಲ್ಕು ವಿಧದ ಆಹಾರಕ್ಕೂ ಶರೀರಕ್ಕೂ ಜೀವವಿರುವವರೆಗೂ ನಿವೃತ್ತಿ ಮಾಡಿ, ನೋವನ್ನು ಸಹಿಸಿ, ಶುಭ

ಶುಭಪರಿಣಾಮದಿಂ ರತ್ನತ್ರಯಮಂ ಸಾಧಿಸಿ ಪದಿನಾಲ್ಕನೆಯ ಪ್ರಾಣತಮೆಂಬ ಕಲ್ಪದೊಳಿರ್ಪತ್ತು ಸಾಗರೋಪಮಾಯುಷ್ಯಮನೊಡೆಯೊನಿಂದ್ರನಾಗಿ ವುಟ್ಟಿದೊಂ ಮತ್ತೆ ಪೆಱರುಮಾರಾಧಕರುಂ ರತ್ನತ್ರಯಮನಾರಾಧಿಸುತ್ತಿರ್ದ್ದ ಭವ್ಯರ್ಕಳಭಯಘೋಷ ಭಟಾರರಂ ಮನದೆ ಬಗೆದು ಪಸಿವುಂ ತೃಪೆಯುಮೇಱುಂ ವ್ಯಾಧಿಯುಂ ಶೀತವಾತೋಷ್ಣಂಗಳುಮೆಂದಿವು ಮೊದಲಾಗೊಡೆಯ ದುಃಖಂಗಳಂ ಸೈರಿಸಿ ಪರಮ ಶುದ್ಧ ಸಹಜ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

ಪರಿಣಾಮದಿಂದ ರತ್ನತ್ರಯವನ್ನು ಸಾಧಿಸಿ ಹದಿನಾಲ್ಕನೆಯದಾದ ಪ್ರಾಣತವೆಂಬ ಸ್ವರ್ಗದಲ್ಲಿ ಇಪ್ಪತ್ತುಸಾಗರ ಪರಿಮಾಣದ ಆಯುಷ್ಯವುಳ್ಳ ಇಂದ್ರನಾಗಿ ಹುಟ್ಟಿದರು. ರತ್ನತ್ರಯವನ್ನು ಆರಾಧಿಸುತ್ತಿರುವ ಭವ್ಯಜೀವಿಗಳಾದ ಇನ್ನಿತರ ಆರಾಧಕರೂ ಅಭಯಘೋಷ ಭಟ್ಟಾರರನ್ನು ಮನಸ್ಸಿನಲ್ಲಿ ಭಾವಿಸಿಕೊಂಡು ಹಸಿವು, ಬಾಯಾರಿಕೆ, ಗಾಯ, ರೋಗ, ಶೀತ, ವಾಯು, ಉಷ್ಣ - ಎಂದಿವೇ ಮುಂತಾಗಿರುವ ದುಃಖಿಗಳನ್ನು ಸಹಿಸಿ, ಶ್ರೇಷ್ಠವೂ ಪವಿತ್ರವೂ ಸಹಜವೂ ಆದ ದರ್ಶನ-ಜ್ಞಾನ-ಚಾರಿತ್ರಗಳನ್ನು ಸಾಧನೆ ಮಾಡಿ ಸ್ವರ್ಗ-ಮೋಕ್ಷ ಸುಖಿಗಳನ್ನು ಪಡೆಯಲಿ.

೧೩. ವಿದ್ಯುಚ್ಚೋರನೆಂಬ ರಿಸಿಯ ಕಥೆ

ವಿದ್ಯುಚ್ಚೋರನೆಂಬ ರಿಸಿಯ ಕಥೆಯಂ ಪೇೞ್ವಿಂ :

ಗಾಹೆ ॥ ದಂಸೇಹಿಯ ಮಸಕೇಹಿಯ ಖಜ್ಜಂತೋ ವೇದಣಂ ಪರಮಘೋರಂ
ವಿಜ್ಜುಚ್ಚೋರೋ ಅಧಿಯಾಸಿಯ ಪಡಿವಣ್ಣೋ ಉತ್ತಮಂ ಅಟ್ಠಂ ॥

[ದಂಸೇಹಿಯ-ಚಿಕ್ಕುಟುಗಳಿಂದಂ, ಮಸಕೇಹಿಯ-ಗುಂಗುಱುಗಳಿಂದಂ, ಖಜ್ಜಂತೋ-ತಿನೆಪಡುತಿರ್ದೊನಾಗಿ, ವೇದಣಂ-ವೇದನೆಯಂ, ಪರಮಘೋರಂ-ಆದಮಾನುಂ ಕಂದಿದಪ್ಪುದಂ, ವಿಜ್ಜುಚ್ಚೋರೋ-ವಿದ್ಯುಚ್ಚೋರನೆಂಬ ರಿಸಿ, ಆಧಿಯಾಸಿಯ-ಲೇಸಾಗಿ ಸೈರಿಸಿ, ಪಡಿವಣ್ಣೋ-ಪೊರ್ದಿದೊಂ, ಉತ್ತಮ ಅಟ್ಠಂ-ಮಿಕ್ಕ ದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯಂ]

ಅದೆಂತೆಂದೊಡೆ : ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ವಿದೇಹಮೆಂಬುದು ನಾಡಲ್ಲಿ ಮಿಥಿಳೆಯೆಂಬುದು ಪೊಬಲದನಾಳ್ವಂ ಪದ್ಮರಥನೆಂಬೊನರಸನ ಸಂತತಿಯಿಂ ಬಂದ ವಾಮರಥನೆಂಬೊನರಸನಾತನ ಮಹಾದೇವಿ ಬಂಧುಮತಿಯೆಂಬೊಳಂತಪರ್ಗ್ಗಳಿಷ್ಟವಿಷಯ ಕಾಮಭೋಗಂಗಳನನುಭವಿಸುತ್ತಂ ಪಲಕಾಲಂ ಸಲೆ ಮತ್ತಾ ಪೊಬಲೊಳ್ ಯಮದಂಡನೆಂಬೊಂ ತಳಾಱಂ ಮತ್ತಲ್ಲಿ ಇರ್ಪೊಂ ವಿದ್ಯುಚ್ಚೋರನೆಂಬೊಂ ಕಳ್ಳನಾತಂ ಜೃಂಭಿನಿ ಸ್ತಂಭಿನಿ ಮೋಹಿನಿ ಸರ್ಪಪಿ ತಾಳೋದ್ಘಾಟಿನಿ ವಿದ್ಯಾಮಂತ್ರಂ ಚೂರ್ಣ ಯೋಗ ಘಟಿಕಾಂಜನಮೆಂದಿಪ್ಪು ಮೊದಲಾಗೊಡೆಯ ತಸ್ಕರಶಾಸ್ತ್ರಂಗಳೊಳಾದಮಾನುಂ ಕುಶಲನಂತಪ್ಪ ಕಳ್ಳಂ ಪೊಬಲ ಕಸವರಂಗಳನಿರುಳ್ ಕಳ್ದು ಪೊಬಲ್ಗೆ

ವಿದ್ಯುಚ್ಚೋರನೆಂಬ ಋಷಿಯ ಕಥೆಯನ್ನು ಹೇಳುವೆನು : (ವಿದ್ಯುಚ್ಚೋರನೆಂಬ ಋಷಿ ಚಿಗಟ (ಗೊರಜು)ಗಳಿಂದಲೂ ಗುಂಗಾಡಿ ಹುಳು (ದೊಡ್ಡನೊಣ) ಗಳಿಂದಲೂ ಕಚ್ಚಿ ತಿನ್ನಲ್ಪಡುತ್ತಿದ್ದವನಾಗಿ ಅತ್ಯಂತ ಕಠಿನವಾದ ನೋವನ್ನು ಸಹಿಸಿ, ಶ್ರೇಷ್ಠವಾದ ದರ್ಶನ-ಜ್ಞಾನ-ಚಾರಿತ್ರ ಎಂಬ ರತ್ನತ್ರಯದ ಆರಾಧನೆಯನ್ನು ಆಚರಿಸಿದನು) ಅದು ಹೇಗೆಂದರೆ: ಈ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ವಿದೇಹ ಎಂಬ ಹೆಸರುಳ್ಳ ನಾಡು ಇದೆ. ಆ ನಾಡಿನಲ್ಲಿ ಮಿಥಿಳೆ ಎಂಬ ಪಟ್ಟಣವಿದೆ. ಅದನ್ನು ಪದ್ಮರಥನೆಂಬ ಅರಸನ ಸಂತತಿಯಿಂದ ಬಂದ ವಾಮರಥನೆಂಬ ಅರಸನು ಆಳುತ್ತಿದ್ದನು. ಅವನ ರಾಣಿ ಬಂಧುಮತಿ ಎಂಬವಳು. ಅಂತೂ ಅವರು ತಮ್ಮ ತಮ್ಮ ಮೆಚ್ಚಿನ ವಿಷಯದ ಬಯಕೆಯ ಸುಖಗಳನ್ನು ಅನುಭವಿಸುತ್ತ ಹೀಗೆಯೇ ಹಲವು ಕಾಲಕಳೆಯಿತು. ಆ ಪಟ್ಟಣದಲ್ಲಿ ಯಮದಂಡನೆಂಬ ತಳಾರ (ನಗರದ ಕಾವಲುಗಾರ) ನಿದ್ದನು ; ಮತ್ತು ವಿದ್ಯುಚ್ಚೋರನೆಂಬ ಕಳ್ಳನೂ ಇದ್ದನು. ಅತನು ಕಳವಿನ ಶಾಸ್ತ್ರಗಳಲ್ಲಿ ಬಹಳ ಪ್ರವೀಣನಾಗಿದ್ದನು. ಜೃಂಭಿನಿ (ಪ್ರತ್ಯಕ್ಷವಾಗುವುದು ಮತ್ತು ಮಾಯವಾಗುವುದು), ಸ್ತಂಭಿನಿ (ಗತಿನಿರೋಧ) ಮೋಹಿನಿ (ಮೂರ್ಛೆಯುಂಟು ಮಾಡುವುದು), ಸರ್ಷಪಿ (ವಿಷಪ್ರಯೋಗ), ತಾಳೋದ್ಘಾಟಿನಿ ವಿದ್ಯಾ (ಬೀಗ ತೆಗೆಯುವ ವಿದ್ಯೆ), ಮಂತ್ರಪ್ರಯೋಗ, ಚೂರ್ಣ (ಪುಡಿ ಎರಚುವುದು) ಯೋಗ (ವಂಚನೆ, ಇಂದ್ರಜಾಲ, ಗುಪ್ತಚಾರತ್ವ - ಮುಂತಾದವು), ಗುಳಿಗೆ, ಅಂಜನ (ಕಣ್ಣಿಗೆ ಹಚ್ಚುವ ಲೇಪನ) - ಎಂದಿವೇ ಮೊದಲಾಗಿ ಉಳ್ಳ ತಸ್ಕರ ವಿದ್ಯೆಗಳನ್ನು ಬಲ್ಲ ಅವನು ರಾತ್ರಿಯಲ್ಲಿ ಕಳವು ಮಾಡುತ್ತಿದ್ದನು. ಆ ಪಟ್ಟಣಕ್ಕೆ ಬಹಳ ದೂರದಲ್ಲಿ ಒಂದು ಪರ್ವತವಿದೆ. ಅಲ್ಲಿ

ನಾಡೆಯಂತರದೊಳೊಂದು ಪರ್ವತಮುಂಟಲ್ಲಿ ಪಿರಿದೊಂದು ಗುಹೆಯುಂಟದಱೊಳಗೆ ಕಳ್ದ ಕಸವರಂಗಳೆಲ್ಲಮಂ ಪೂಟ್ಟಿಟ್ಟು ಗುಹೆಯ ಬಾಗಿಲಂ ಪಿರಿದೊಂದು ಶಿಲೆಯಂ ತಂದಿಟ್ಟು ಮುಚ್ಚಿ ಬಂದು ಪಗಲೆಲ್ಲಂ ಪಾಟ್ವೀಗುಲದೊಳಂಜನಮನೆಚ್ಚ ತಾಂ ತೊನ್ನನಾಗಿ ಮುರುಂಟದ ಕೈಯುಂ ಕಾಲುಂ ಬೆರಸು ಮೂಗೊಳಗರ್ದು ರಸಿಗೆ ಸುರಿಯೆ ನೊಬವುಗಳ್ ಮುಸುಱಿಕೊಂಡು ತಿನೆ ಪೇಸಿದನಾಗಿ ಲೋಗರ ಮನೆಗಳೊಳ್ ಭೈಕ್ಷಮಂ ಬೇಡಿ ಮನೆಮನೆಯಂ ತೊಬಲ್ದು ತನ್ನ ತೊನ್ನುಗೊಂದಿರ್ಪುದನಱಿಪುತ್ತುಮಿಂತು ಪಗಲೆಲ್ಲಮಿರ್ದಿರುಳಪ್ಪಗಳ್ ದಿವ್ಯಮಪ್ಪ ತನ್ನ ಸ್ವಾಭಾವಿಕಮಪ್ಪ ಮುನ್ನಿನ ರೂಪಂ ಕೈಕೊಂಡು ಪುಟ್ಟಗೆಯನುಟ್ಟು ಮೆಯ್ಯಂ ಪೂಸಿ ಪೂವಂ ಮುಡಿದು ಕರ್ಪೂರ ಸಮ್ಮಿಶ್ರಿತಮಪ್ಪ ತಂಬುಲಂದಿನುತ್ತುಂ ಸೂಳೆಗೇರಿಗಳಂ ತೊಬಲ್ದು ತನ್ನಂ ಮೆಱೆಯುತ್ತುಂ ಮನಕ್ಕೆವಂದಗ್ಗಳದೊಳ್ಪಿಂದಿರೊಳೊತ್ತೆಯನಿಟ್ಟು ಭೋಗೋಪಭೋಗಂಗಳ್ಗೆ ಕಸವರಮಂ ಕೊಟ್ಟನುಭವಿಸುತ್ತಮಾರುಮಱೆಯದಂತಿರ್ದು ಬಚ್ಚರ ದೂಸಿಗರ ನಿಯೋಗಿಗಳ ಅಗ್ಗಳಿಲೆಯರಪ್ಪ ಸೂಳೆಯರ ಸಾವುಂತರ ಕಸವರಂಗಳೆಲ್ಲವುಂ ಕಳ್ದು ವುತ್ತೊಂದು ದಿವಸಂ ಪದ್ಮರಥಂಗೊಸೆದಚ್ಯುತೇಂದ್ರನಟ್ಟಿದ ದಿವ್ಯಮಪ್ಪ ಸರ್ವರುಜಾಪಹಾರಮೆಂಬ ಹಾರಂ ಸಂತತಿಯಿಂ ವಾಮರಥಂಗೆ ಬಂದುದಂ ವಾಮರಥಂ ಕರುಮಾಡದೇಟನೆಯ ನೆಲೆಯೊಳ್ ತನ್ನ ಲುಂದು

ದೊಡ್ಡದಾದ ಒಂದು ಗುಹೆಯಿದೆ. ವಿದ್ಯುಚ್ಚೋರನು ಕಳವು ಮಾಡಿದ ಹೊನ್ನುಗಳನ್ನೆಲ್ಲ ಆ ಗುಹೆಯೊಳಗೆ ಹೂಳಿಟ್ಟು ಗುಹೆಯ ಬಾಗಿಲನ್ನು ದೊಡ್ಡದಾದ ಒಂದು ಬಂಡೆ ಕಲ್ಲು ತಂದು ಇಟ್ಟು ಮುಚ್ಚಿ ಬಂದು ಹಗಲೆಲ್ಲಾ ಹಾಳು ದೇವಾಲಯದಲ್ಲಿ ಅಂಜನ ಹಚ್ಚಿ ತಾನು ತೊನ್ನುರೋಗದವನಾಗಿ ಕಾಣಿಸಿಕೊಳ್ಳುತ್ತಿದ್ದನು. ಮುದುಡಿದ ಕೈಕಾಲುಗಳುಳ್ಳವನಾಗಿ, ಮೂಗು ಒಳಕ್ಕೆ ಕುಸಿದು ಕೀವು ಸುರಿಯುತ್ತಿರಲು ನೊಣಗಳು ಕವಿದುಕೊಂಡು ತಿನ್ನುತ್ತಿರಲು ಅಸಹ್ಯ ಪಟ್ಟುಕೊಂಡು ಜನರ ಮನೆಗಳಿಗೆ ಹೋಗಿ ಭಿಕ್ಷೆಯನ್ನು ಬೇಡುತ್ತಿದ್ದನು. ಮನೆಮನೆಗಳಿಗೆ ಸುತ್ತಾಡುತ್ತ ತನಗೆ ತೊನ್ನುರೋಗ ಬಂದಿರುವುದನ್ನು ತಿಳಿಸುತ್ತ ಹೀಗೆ ಹಗಲೆಲ್ಲಾ ಇರುತ್ತಿದ್ದನು. ರಾತ್ರಿಯಾಗುವ ವೇಳೆಗೆ ದಿವ್ಯವಾದ ತನ್ನ ಸ್ವಾಭಾವಿಕವಾದ ಹಿಂದಿನ ರೂಪವನ್ನು ಧರಿಸುತ್ತಿದ್ದನು. ವಸ್ತ್ರವನ್ನುಟ್ಟು, ಮೈಗೆ ಸುಗಂಧಲೇಪನವನ್ನು ಮಾಡಿ, ಹೂವನ್ನು ಮುಡಿದು ಕರ್ಪೂರದಿಂದ ಬೆರಕೆಯಾದ ತಾಂಬೂಲವನ್ನು ತಿನ್ನುತ್ತ ಸೂಳೆಯರ ಬೀದಿಗಳಲ್ಲಿ ಸುತ್ತಾಡಿ, ತನ್ನನ್ನು ಮೆರೆಯಿಸುತ್ತ ತನ್ನ ಮನಸ್ಸಿಗೆ ಬಂದ ಶ್ರೇಷ್ಠರಾದ ಒಳ್ಳೆಯ ಹೆಂಗುಸರಲ್ಲಿ ಮುಂಗಡವಾಗಿ ದ್ರವ್ಯವನ್ನು ಕೊಟ್ಟು, ವಿಧವಿಧವಾದ ಸುಖಭೋಗಗಳಿಗಾಗಿ ಹೊನ್ನನ್ನು ಕೊಟ್ಟು ಸುಖವನ್ನು ಅನುಭವಿಸುತ್ತ ಯಾರೂ ತಿಳಿಯದ ಹಾಗೆ ಇದ್ದನು. ವೈಶ್ಯರು, ಬಟ್ಟೆಯ ವ್ಯಾಪಾರಿಗಳು, ಅಧಿಕಾರಿಗಳು, ಹೆಚ್ಚು ಹಣ ತೆಗೆದುಕೊಳ್ಳುವವರಾದ ಸೂಳೆಯರು, ಸಾಮಂತರು - ಇವರ ದ್ರವ್ಯಗಳನ್ನೆಲ್ಲ ಕದ್ದುಕೊಂಡನು. ಮತ್ತೊಂದು ದಿವಸ ಅಚ್ಯುತೇಂದ್ರನು ಪದ್ಮರಥನಿಗೆ ಪ್ರೀತಿಯಿಂದ ಕಳುಹಿಸಿದ ದಿವ್ಯವಾಗಿರತಕ್ಕ 'ಸರ್ವರುಜಾಪಹಾರ' (ಎಲ್ಲ ರೋಗಗಳನ್ನೂ ನಾಶಮಾಡುವಂಥದು) ಎಂಬ ಹೆಸರುಳ್ಳ ಮತ್ತು ವಂಶಪರಂಪರೆಯಿಂದ ವಾಮರಥನಿಗೆ ಬಂದಿದ್ದ ಮಾಲೆಯನ್ನು ವಾಮರಥನು ತನ್ನ ಅರಮನೆಯ ಏಳನೆಯ ಉಪ್ಪರಿಗೆಯ ನೆಲೆಯಲ್ಲಿ ತಾನು ಮಲಗುವ ಕೊಠಡಿಯಲ್ಲಿ

ವೋವರಿಗೆಯ ಪುಡಿಕೆಯೊಳಿಟ್ಟೆಲ್ಲಾಕಾಲಮುಂ ಗಂಧ ಪುಷ್ಪ ದೀಪ ಧೂಪಾಕ್ಷತಂಗಳಿಂವರ್ಚಿಸುತ್ತುಂ ಪೊದೆಮದುತ್ತಮಿರ್ಕ್ಕುಮಿಂತಪ್ಪ ಹಾರಮಂ ವಿದ್ಯುಚ್ಚೋರನಂಜನಮಂ ಕಣ್ಗೊಳೆಚ್ಚಿ ಯಾರುಂ ತನ್ನಂ ಕಾಣದಂತಾಗಿರೆ ಅರಮನೆಯುಂ ಪೊಕ್ಕರಸನ ಮಜಿಲುಂದುಪೋವರಿಯುಂ ಪೊಕ್ಕು ತಲೆದೆಸೆಯೊಳರ್ಚಿಸಿರ್ವ ಪುಡಿಕೆಯಂ ತೆಱೆದು ಹಾರಮುಂ ಕೊಂಡರಮನೆಯಿಂ ಪೊಱಮಟ್ಟು ಪೋಗಿ ಪೊಱವೊಬಿಲ ಗುಹೆಯೊಳ್ ಪೂಳ್ಪೆಟ್ಟು ಪೊಬಿಲ್ಗೆಪಂದು ಮುನ್ನಿನಂತೆ ತೊನ್ನರೂಪಂ ಕೈಕೊಂದಿರ್ದಂ ಮತ್ತಿತ್ತರಸು ನೇಸರ್ಮೂಡೆ ಹಾರಮಂ ಕಾಣದೆ ಆಸ್ಥಾನ ಮಂಟಪಮೊಳ್ ಸಿಂಹಾಸನ ಮಸ್ತಕಸ್ಥಿತನಾಗಿರ್ದು ತಳಾಜಿನಪ್ಪ ಯಮದಂಡಂಗೆ ಬಜೆಯಟ್ಟವರಿಸಿ ಇಂತೆಂದನೆಲವೋ ಯಮದಂಡಾ ಪೊಬಿಲ ಪಾರ್ವರ ಪರದರ ಸೂಳೆಯರ ಒಕ್ಕಲ ಮಕ್ಕಳ ಕಪವರವೆಲ್ಲಮಂ ಕಳ್ಳೊದವಮಾರಯ್ಯದೆ ಕೆಮ್ಮಗಿರ್ಪೆಯಲ್ಲದೆಯುಮೆಮ್ಮ ಸೆಜ್ಜೆಯೋವರಿಯಂ ಕಳ್ಳಂ ಪೊಕ್ಕು ಪುಡಿಕೆಯಂ ತೆಱೆದಚ್ಚುತೇಂದ್ರನಿತ್ತ ಕುಲಧನಮಪ್ಪ ಹಾರಮಂ ಕೊಂಡು ಪೋದಂ ಕಳ್ಳನನಾರಯ್ದು ಹಾರಮುಂ ಕೊಂಡು ಬಾ ಅಲ್ಲದಾಗಳ್ ಕಳ್ಳಂಗೆ ತಕ್ಕ ನಿಗ್ರಹಮಂ ನಿನಗೆ ಮಾಡಿದಪ್ಪೆನೆಂದೊಡೆ ತಳಾಜಿನೆಂದಂ ದೇವಾ ಏಱುದಿವಸಮೆನಗೆಡೆಯನೀವುದೇಱುದಿವಸದಿಂದೊಳಗೆ ಕಳ್ಳನನಾರಯ್ದಲಾಜಿದಾಗಳ್ ದೇವರೆನ್ನಂ ಮೆಚ್ಚುಕೆಯ್ದುವೆಂದೊದರಸನಂತೆಗೆಯ್ದೊಡರಮನೆಯಿಂದಂ ಪೊಱಮಟ್ಟು ಪೊಬಿಲೊಳಗೆ

ಪೆಟ್ಟಿಗೆಯಲ್ಲಿಟ್ಟು ಎಲ್ಲಾ ಕಾಲದಲ್ಲಿಯೂ ಗಂಧ-ಪುಷ್ಪ-ದೀಪ-ಧೂಪ-ಅಕ್ಷತೆಗಳಿಂದ ಪೂಜಿಸುತ್ತ ಸಾಷ್ಟಾಂಗ ವಂದಿಸುತ್ತ ಇರುತ್ತಿದ್ದನು. ಹೀಗಿರತಕ್ಕ ಮಾಲೆಯನ್ನು ವಿದ್ಯುಚ್ಚೋರನು ಕದ್ದನು. ಅವನು ತನ್ನ ಕಣ್ಣಿಗೆ ಅಂಜನ ಹಚ್ಚಿ ಯಾರೂ ತನ್ನನ್ನು ಕಾಣದ ಹಾಗೆ ಅರಮನೆಯನ್ನು ಹೊಕ್ಕು ಅರಸನು ನಿದ್ರಿಸುವ ಕೊಠಡಿಯನ್ನು ಹೊಕ್ಕು, ಅವನ ತಲೆಯ ಕಡೆ ಪೂಜೆಮಾಡಿದ್ದ ಪೆಟ್ಟಿಗೆಯನ್ನು ತೆರೆದು ಹಾರವನ್ನು ತೆಗೆದುಕೊಂಡು ಅರಮನೆಯಿಂದ ಹೊರಟು ಹೋಗಿ ಪಟ್ಟಣದ ಹೊರಗಿನ ಗುಹೆಯಲ್ಲಿ ಹೂಳಿಟ್ಟು ಪಟ್ಟಣಕ್ಕೆ ಬಂದು ಹಿಂದಿನ ರೀತಿಯಲ್ಲಿ ತೊನ್ನು ರೋಗಿಯ ರೂಪವನ್ನು ತಾಳಿಕೊಂಡಿದ್ದನು. ಆಮೇಲೆ, ಇತ್ತ ರಾಜ ವಾಮರಥನು ಸೂರ್ಯನುದಯಿಸುವ ವೇಳೆಗೆ ಮಾಲೆಯನ್ನು ಕಾಣದೆ ಆಸ್ಥಾನಮಂಟಪಕ್ಕೆ ಬಂದು ಸಿಂಹಾಸನದ ಮೇಲೆ ಕುಳಿತನು. ನಗರದ ಕಾವಲುಗಾರನಾದ ಯಮದಂಡನ ಬಳಿಗೆ ದೂತನನ್ನು ಕಳುಹಿಸಿ ಅವನನ್ನು ಬರಮಾಡಿ ಅವನೊಡನೆ ಹೀಗೆಂದನು - "ಎಲವೋ ಯಮದಂಡಾ, ನಮ್ಮ ಪಟ್ಟಣದ ಬ್ರಾಹ್ಮಣರು, ವರ್ತಕರು, ವೇಶ್ಯೆಯರು, ಒಕ್ಕಲಿನವರು ಮಕ್ಕಳು- ಮುಂತಾದವರ ಹೊನ್ನನ್ನೆಲ್ಲ ಕದ್ದರೂ ನೀನು ವಿಚಾರಿಸದೆ ಸುಮ್ಮನಿರುವೆಯಲ್ಲ! ನನ್ನ ಮಲಗುವ ಮನೆಯ ಕೊಠಡಿಯನ್ನು ಕಳ್ಳನು ನುಗ್ಗಿ ಪೆಟ್ಟಿಗೆ ತೆರೆದು, ಅಚ್ಯುತೇಂದ್ರನು ಕೊಟ್ಟ ಕುಲಧನವಾಗಿರುವ ಮಾಲೆಯನ್ನು ಕೊಂಡುಹೋಗಿದ್ದಾನೆ. ಕಳ್ಳನನ್ನು ಕಂಡುಹಿಡಿದು ಮಾಲೆಯನ್ನು ತೆಗೆದುಕೊಂಡು ಬಾ, ಅದಲ್ಲವಾದರೆ, ಕಳ್ಳನಿಗೆ ತಕ್ಕುದಾದ ದಂಡನೆಯನ್ನು ನಿನಗೆ ಮಾಡುತ್ತೇನೆ". ಹೀಗೆ ರಾಜನು ಹೇಳಿದಾಗ, ಯಮದಂಡನು - "ಪ್ರಭುವೇ, ನನಗೆ ಏಳುದಿವಸದ ಸಮಯವನ್ನು ಕೊಡಬೇಕು. ಏಳುದಿವಸದೊಳಗಾಗಿ ಕಳ್ಳನನ್ನು ಕಂಡುಹಿಡಿಯಲು ಸಾಧ್ಯವಾಗದೆ ಹೋದರೆ, ಪ್ರಭುಗಳು ನನ್ನ ಏನು ಬೇಕೋ ಹಾಗೆ ಮಾಡಬಹುದು" ಎಂದನು. ಅದಕ್ಕೆ ರಾಜನು 'ಹಾಗೆಯೇ ಮಾಡು' ಎಂದನು. ಯಮದಂಡನು ಅರಮನೆಯಿಂದ ಹೊರಟು ಪಟ್ಟಣದಲ್ಲಿ ಸೂಳೆಯರ ಬೀದಿಗಳಲ್ಲಿಯೂ

ಸೂಳೆಗೇರಿಗಳೊಳಮಂಗಡಿಗಳೊಳಂ ಬಸದಿಗಳೊಳಂ ವಿಹಾರಂಗಳೊಳಂ ಕೇರಿಗಳೊಳಮಾರಮೆಗಳೊಳಂ ದೇವಾಲಯಂಗಳೊಳಂ ಪೊಱವೊಟಲೊಳಂ ಕೆಲದ ಪೊಟಲ್ಗಳೊಳವಾಱುಂ ದಿವಸಂ ನಿರಂತರಮಾರಯ್ದೆಲ್ಲಿಯುಂ ಕಾಣದೇಱನೆಯ ದಿವಸದಂದು ಪಾಟ್ಟೀಗುಲದೊಳಿರ್ದು ತೊನ್ನಂ ಪೋಪಾಗಳಳಿಱುವಳ್ಳಮಂ ಕಂಡದಂ ವಿದ್ಯಾಧರಕರಣದಿಂ ಲಂಘಿಸಿ ಪೋಪುದಂ ಯಮದಂಡಂ ಗೆಂಟಱಿಂಗೊಳಿರ್ದು ಕಂದಿವನೆ ಕಳ್ಳನೆಂದು ನಿಶ್ಚಯಿಸಿ ಪಿಡಿದರಮನೆಗೆ ಪುಯ್ಯಲಿದೆಯಿದೆ ಕೊಂಡುಪೋಗಿಯರಸಂಗೆ ಕಳ್ಳನಂ ತಂದೆನೆಂದು ತೋಱೆ ಈತಂ ಕಳ್ಳನೆಂದರಸಂಗೆ ವೇಱೊಡೆ ತೊನ್ನನಿಂತೆಂದಂ ದೇವಾ ನಾಂ ಕಳ್ಳನಲ್ಲದುದರ್ಕೆ ಪೊಟಲೆಲ್ಲಮಱಿಗುಂ ಕಳ್ಳನನಾರಯ್ಯಲಾಱದೆನ್ನಂ ತನ್ನ ಸಾವಿಂಗಂಜಿ ಬಡವನಂ ದೇಸಿಗನಂ ಪೊಟಲೊಳ್ ಭೈಕಂದಿರಿದುಂಡು ಬಾೞ್ವನಂ ಪಿಡಿದು ಕೊಂಡು ಬಂದು ಕೊಲಿಸಿದಪ್ಪನೆಂದೊಡೆ ತಳಾಱಂ ಕಳ್ಳರನಾರಯ್ವ ಶಾಸ್ತ್ರಂಗಳೊಳಾದಮಾನುಂ ಕುಶಲನಪ್ಪುದಱಿಂದರಸಂಗಿಂತೆಂದನೀತಂ ತನ್ನ ರೂಪುಗರೆದಿರುಳ್ ಪೊಟಲೆಲ್ಲಮಂ ಕಳ್ಳು ದಿವಸಕ್ಕೀ ಪಾಂಗಿನೊಳ್ ತೊನ್ನನಾಗಿರ್ಪೆಂ ನೀಮುಂ ನಂಬದಾಗಳ್ ಪ್ರತ್ಯಯಮಂ ಮಾಡಿ ತೋರ್ಪೆನೆಂದಾಗಳ್ ಪ್ರತಿಘಟಕಾಂಜನಂಗಳಂ ತೊನ್ನನ ಕಣ್ಣಿನೊಳಿಚ್ಚಿದೊಡೆ ದಿವ್ಯಮಪ್ಪ ತನ್ನ ಮುನ್ನಿನ ರೂಪಾಗಿರ್ದಿಂತೆಂದನೀತಂ ಘಟಕಾಂಜನ ಕುಹಕಂ ಇಂದ್ರಜಾಲಂಗಳಂ ಬಲ್ಲೊನಪ್ಪುದಱಿಂದೆಲ್ಲಾ

ಅಂಗಡಿಗಳಲ್ಲಿಯೂ ಜಿನಾಲಯಗಳಲ್ಲಿಯೂ ವಿನೋದವಾಟಿಕೆಗಳಲ್ಲಿಯೂ ಬೀದಿಗಳಲ್ಲಿಯೂ ಉದ್ಯಾನಗಳಲ್ಲಿಯೂ ದೇವಾಲಯಗಳಲ್ಲಿಯೂ ಪಟ್ಟಣದ ಹೊರಗಡೆಯಲ್ಲಿಯೂ ಅಕ್ಕಪಕ್ಕದ ಪಟ್ಟಣಗಳಲ್ಲಿಯೂ ಆರುದಿವಸ ಎಡೆಬಿಡದೆ ವಿಚಾರಿಸಿದರೂ ಎಲ್ಲಿಯೂ ಕಾಣಲಿಲ್ಲ. ಏಳನೆಯ ದಿವಸದಂದು ಹಾಳು ದೇವಾಲಯದಲ್ಲಿದ್ದು ತೊನ್ನನು ಹೋಗುವಾಗ ಕೆಸರಿನ ಹಳ್ಳವನ್ನು ಕಂಡು ವಿದ್ಯಾಧರರು ವಿದ್ಯಾಬಲದಿಂದ ಹಾರಿ, ದಾಟಿ ಹೋಗುವುದನ್ನು ಯಮದಂಡನು ದೂರದಲ್ಲಿದ್ದು ಕಂಡನು. 'ಇವನೇ ಕಳ್ಳನು' ಎಂದು ನಿರ್ಣಯಿಸಿ ಅವನನ್ನು ಹಿಡಿದನು. ಕಳ್ಳನು ಕೂಗಿಕೊಳ್ಳುತ್ತಿದ್ದಂತೆಯೇ ಅವನನ್ನು ಅರಮನೆಗೆ ಕೊಂಡುಹೋಗಿ 'ಕಳ್ಳನನ್ನು ತಂದೆನು' ಎಂದು ಅರಸನಿಗೆ ತೋರಿಸಿ, 'ಈತನು ಕಳ್ಳನು' ಎಂದು ಅರಸನಿಗೆ ಹೇಳಿದನು. ಆಗ ತೊನ್ನನು ಹೀಗೆಂದನು - "ದೇವಾ, ನಾನು ಕಳ್ಳನಲ್ಲ ಎಂಬುದನ್ನು ಈ ಪಟ್ಟಣವೆಲ್ಲವೂ ತಿಳಿದಿದೆ. ಈ ತಳಾರನು ಕಳ್ಳನನ್ನು ಕಂಡುಹಿಡಿಯಲು ಅಸಮರ್ಥನಾಗಿ, ತನ್ನ ಸಾವಿಗೆ ಹೆದರಿ, ಬಡವನೂ ದಿಕ್ಕಿಲ್ಲದವನೂ ಪಟ್ಟಣದಲ್ಲಿ ಭಿಕ್ಷೆ ಬೇಡಿ ಹೊಟ್ಟೆ ತುಂಬಿಸಿಕೊಂಡು ಜೀವಿಸುತ್ತಿರುವವನೂ ಆದ ನನ್ನನ್ನು ಹಿಡಿದುಕೊಂಡು ಬಂದು ಕೊಲ್ಲಿಸುತ್ತಿದ್ದಾನೆ". ಹೀಗೆನ್ನಲು, ತಳಾರನು ಕಳ್ಳರನ್ನು ಕಂಡುಹಿಡಿವ ಶಾಸ್ತ್ರಗಳಲ್ಲಿ ಬಹು ಪ್ರವೀಣನಾಗಿರುವುದರಿಂದ ರಾಜನಿಗೆ ಹೀಗೆಂದನು - "ಈತನು ತನ್ನ ರೂಪವನ್ನು ಮರೆಮಾಡಿ ರಾತ್ರಿಯವೇಳೆ ಪಟ್ಟಣದಲ್ಲೆಲ್ಲ ಕಳವು ಮಾಡಿ ಹಗಲಿನ ವೇಳೆ ಈ ರೀತಿಯಲ್ಲಿ ತೊನ್ನನಂತೆ ಕಾಣಿಸುತ್ತಿರುವನು. ನೀವು ನಂಬುವುದಿಲ್ಲವಾದರೆ ನಂಬಿಕೆ ಬರುವಂತೆ ಮಾಡಿ ತೋರಿಸುವೆನು." ಹೀಗೆ ಹೇಳಿ ಯಮದಂಡನು ಆಗಲೇ ವಿರುದ್ಧವಾದ ಗುಳಿಗೆ ಕಾಡಿಗೆಗಳನ್ನು ತೊನ್ನನ ಕಣ್ಣಿಗೆ ಹಚ್ಚಿದನು. ಆಗ ದಿವ್ಯವಾದ ತನ್ನ ಹಿಂದಿನ ರೂಪಗೊಂಡು- "ಈತನು ಗುಳಿಗೆ ಅಂಜನಗಳ ಕಪಟವನ್ನೂ ಇಂದ್ರಾಜಾಲವನ್ನೂ ಬಲ್ಲವನಾಗಿರುವುದರಿಂದ ಯಾವ

ರೂಪುಗಳಂ ಮಾಡಲ್ ಬಲ್ಲೊನೆಂದೊಡೆ ತಳಾಜನೆಂದಂ ಪೆಜಗ್ಗೆ ಮಾಡೀ ಪ್ರತ್ಯಯಮಂ ತೋರ್ಪನೆಂದರಸನನುಮತದಿಂದರಸಿಯರ ಸೂಳೆಯರ ಕಣ್ಗಳೊಳ್ ಘಟಕಾಂಜನಂಗಳನೆಚ್ಚದೊಡ ನಿಬರುಂ ತೊನ್ನಿಯರಾಗಿರ್ಪನ್ನೆಗಂ ಮತ್ತಂ ಬಬಿಕ್ಕೆ ಪ್ರತಿಘಟಕಾಂಜನಂಗಳನೆಚ್ಚದೊಡೆ ಸ್ವಾಭಾವಿಕಮಪ್ಪ ತಮ್ಮ ಮುನ್ನಿನ ರೂಪುಗಳಂ ಕೈಕೊಂದಿರ್ದೊರಾಗಳರಸಂಗೆ ನಂಬುಗೆಯಾಗಿ ನೆಟ್ಟನಿವಂ ಕಳ್ಳನಪ್ಪೊನೀತನಂ ದಂಡಿಸೆಂದು ಯಮದಂಡಂಗೆ ಬಿಸವೇಟೊಡಾತನಂತೆ ಗೆಯ್ದೆನೆಂದಾತನಂ ತನ್ನ ಮನೆಗೊಡಗೊಂಡು ಪೋಗಿ ಮಾಘಮಾಸದಿರುಳ್ ಕದುಸೀತದೊಳ್ ಘೋರಮಪ್ಪ ಮೂವತ್ತೆರಡು ದಂಡನೆಗಳಿಂ ನೀಡುಂ ದಂಡಿಸೆಯನಿತುಮಂ ಬಾಬಿವಾಬಿ ಅವಯವದೆ ಸೈರಿಸಿಯುಂ ಕಳ್ಳನಲ್ಲೆನಯ್ಯೊ ಬಲ್ಲಾಳ್ಗನದಿಂದೆನ್ನಂ ತಳಾಜಂ ಕೊಂದಪ್ಪನೆಂದೊಳಜೆ ಪುಯ್ಯಲಿಡೆ ತಳಾಜಂಗೆ ಕಳ್ಳನೀತನಲ್ಲೆಂಬುದೊಂದು ನಂಬುಗೆಯಾಗಿ ನೇಸಜಿ ಮೂದೆಯರಮನೆಗೆ ಪೋಗಿ ಅರಸಂಗಿಂತೆಂದು ಬಿನ್ನಪಂಗೆಯ್ದಂ ದೇವಾ ಮೂವತ್ತೆರಡು ಘೋರಮಪ್ಪ ದಂಡನೆಗಳಿಂದಂ ಕಳ್ಳನಂ ದಂಡಿಸಿ ನೋಡಿದೆನಾತನಮೋಘಂ ಕಳ್ಳನಲ್ಲೆನ್ನಂ ದೇವರ್‌ಮೆಚ್ಚುಕೆಯ್ದುದೆಂದೊಡರಸಂ ಶ್ಮಶಾನದ ಸೂಲದೊಳ್ ಯಮದಂಡನ ನಿಕ್ಕಿಮೆಂದಾಳ್ಗಳ್ಗೆ ಬಿಸವೇಟೊಡವರುಮಾತನಂ ಶ್ಮಶಾನಕ್ಕೆಬಿದುಕೊಂಡು ಪೋಗಿ ದರ್ಕ್ಕಂ ಬಸಿದು

ರೂಪವನ್ನು ಬೇಕಾದರೂ ಮಾಡಬಲ್ಲನು" ಎಂದನು. ಆಗ ತಳಾರನು- "ಇದನ್ನು ನಾನು ಬೇರೆಯವರಿಗೆ ಮಾಡಿ ನಂಬಿಕೆಯುಂಟುಮಾಡುವೆನು" ಎಂದು ಹೇಳಿ ರಾಜನ ಒಪ್ಪಿಗೆಯಿಂದ ರಾಣಿಯರ ಮತ್ತು ಸೇವಕಿಯರ ಕಣ್ಣುಗಳಿಗೆ ಗುಳಿಗೆ ಅಂಜನಗಳನ್ನು ಹಚ್ಚಿದನು. ಆಗ ಅವರೆಲ್ಲರೂ ತೊನ್ನುರೋಗದವರಾಗಿ ಕಾಣಿಸಿದರು. ಹೀಗಿರಲು, ಮತ್ತೆ ವಿರುದ್ಧದ ಗುಳಿಗೆ ಅಂಜನಗಳನ್ನು ಹಚ್ಚಿದಾಗ ಸಹಜವಾದ ತಮ್ಮ ಹಿಂದಿನ ರೂಪಗಳನ್ನು ತಾಳಿದವರಾಗಿದ್ದರು. ಆಗ ರಾಜನಿಗೆ ನಂಬುಗೆಯಾಯಿತು. "ಇವನು ಸ್ಪಷ್ಟವಾಗಿ ಕಳ್ಳನಾಗಿರುತ್ತಾನೆ. ಇವನನ್ನು ದಂಡಿಸು" ಎಂದು ರಾಜನು ಯಮದಂಡನಿಗೆ ಆಜ್ಞೆಮಾಡಿದನು. ತಳಾರನು 'ಹಾಗೆಯೇ ಮಾಡುವೆನು' ಎಂದು ವಿದ್ಯುಚ್ಚೋರನನ್ನು ತನ್ನ ಮನೆಗೆ ಕರೆದುಕೊಂಡು ಹೋದನು. ಮಾಘಮಾಸದ ಚಳಿಯಳ್ಳ ರಾತ್ರಿಯಲ್ಲಿ ಕಡುತಂಪಿನಲ್ಲಿ ಭಯಂಕರವಾದ ಮೂವತ್ತೆರಡು ವಿಧದ ಶಿಕ್ಷೆಗಳಿಂದ ಅತಿಶಯವಾಗಿ ದಂಡಿಸಿದನು. ಕಳ್ಳನು ಅವೆಲ್ಲವನ್ನೂ ಜೀವಿಸುತ್ತಿದ್ದಂತೆಯೇ ಸುಲಭವಾಗಿ ಸಹಿಸಿಕೊಂಡು- "ಅಯ್ಯೋ, ನಾನು ಕಳ್ಳನಲ್ಲದವನಾಗಿರುವೆನು. ತಳಾರನು ನನ್ನನ್ನು ತನ್ನ ಬಲದರ್ಪದಿಂದ ಕೊಲ್ಲುತ್ತಿದ್ದಾನೆ !" ಎಂದು ಕೂಗಿ ಬೊಬ್ಬಿಡುತ್ತಿದ್ದನು. ಇದರಿಂದ ಈತನು ಕಳ್ಳನಲ್ಲವೆಂದು ತಳಾರನಿಗೆ ನಂಬಿಕೆಯುಂಟಾಗಿ ಸೂರ್ಯೋದಯವಾದೊಡನೆ ಅರಮನೆಗೆ ಹೋಗಿ ಅರಸನಿಗೆ ಹೀಗೆ ಬಿನ್ನವಿಸಿದನು- 'ದೇವಾ, ನಾನು ಕಳ್ಳನನ್ನು ಮೂವತ್ತೆರಡು ಬಗೆಯ ಉಗ್ರಶಿಕ್ಷೆಗಳಿಂದ ದಂಡಿಸಿ ನೋಡಿದೆನು. ಆತನು ನಿಶ್ಚಯವಾಗಿಯೂ ಕಳ್ಳನಲ್ಲ. ಪ್ರಭುವು ನನ್ನನ್ನು ಬೇಕಾದಂತೆ ಮಾಡಬಹುದು' ಎಂದನು. ಆಗ ರಾಜನು "ಯಮದಂಡನನ್ನು ಶ್ಮಶಾನದ ಶೂಲಕ್ಕೆ ಹಾಕಿ" ಎಂದು ಸೇವಕರಿಗೆ ಆಜ್ಞೆ ಮಾಡಿದನು. ಅವರು ಯಮದಂಡನನ್ನು ಶ್ಮಶಾನಕ್ಕೆ ಎಳೆದುಕೊಂಡು ಹೋದರು. ಶೂಲದ ಮೊಳೆಯನ್ನು ಹರಿತಮಾಡಿ, ಶೂಲದಲ್ಲಿ ಅವನನ್ನು ಹಾಕುವಾಗ ತೊನ್ನನೂ ಅವರೊಡನೆ ಹೋಗಿ

ಸೂಲದೊಳಿಕ್ಕುವಾಗಳವರೊಡವೋಗಿ ತೊನ್ನಂ ರೂಪಪರಾವರ್ತನಂಗೆಯ್ದು ತನ್ನ ಸ್ವಾಭಾಮಿಕಮಪ್ಪ ವಿದ್ಯುಚ್ಚೋರನಪ್ಪ ದಿವ್ಯರೂಪಂ ಕೈಕೊಂಡು ಸೂಲದೊಳಿಕ್ಕಲೀಯದೆ ಅಡ್ಡಮಾಗಿರ್ದರಸನ ಕಾಪಿನವರನೆಂದನೆಲೆಯಣ್ಣಗಳಿರಾ ನೀಮೀತನಂ ಕೊಂದಿರೀತನುಂ ಸೂಲದೊಳಿಕ್ಕಪಟ್ಟನಾಗಿ ಸತ್ತವನೆಂದವರೊಳ್ ನುಡಿದು ತಳಾಱನನಿಂತೆಂಡನೆಲೆ ಗಳಾ ಯಮಡಂಡಾ ನೀನುಮಾನುಂ ಕಿಱಿಯಂದೊರ್ವರುಪಾಧ್ಯಾಯರ ಪಕ್ಕದೊಳೋದುವಂದು ನಂದನವನದೊಳಗೆ ನೀನೆನ್ನ ಪೂಣ್ಮ ಪ್ರತಿಜ್ಞೆಯಂ ನೆನೆದಾ ಒಂದುಂ ದೋಷಮಿಲ್ಲದೆ ನಿನ್ನಂ ಕೊಲಿಸಿದೆನೊ ಕೊಲಿಸೆನೊ ಪೂಣ್ಮ ಪ್ರತಿಜ್ಞೆಯಂ ನೆನೆವೆಯೊ ನೆನೆಯೆಯೊ ಎನೆ ಯಮಡಂಡನೊಳ್ಳಿತ್ತಾಗಿ ನೆನೆದೆನೆಂದೊಡೆ ವಿದ್ಯುಚ್ಚೋರನಿಂತೆಂದಂ ಮತ್ತೀಗಳ್ ನೀನೇನ್ ಸತ್ತೆಯೊ ಸಾಯೆಯೊ ಮತ್ತೇನೊ ಎಂದಾಗಳ್ ಯಮಡಂಡನೆಂದಂ ದೇವ ನೀಂ ಗೆಲ್ದೆಯಾಂ ಸೋಲ್ತೆನುಂ ಸತ್ತೆನುಮಂದಿರ್ವರ್ ಪದಿರಿನಿಂ ನುಡಿವ ಸೂಟ್ಮಾತುಗಳಂ ಕಾಪಿನವರುಂ ಪೊಬಲ ಜನಮುಂ ಕೇಳ್ದು ಚೋದ್ಯಂಬಟ್ಟು ಬೆಱಗಾಗಿರ್ದೊಡೆ ವಿದ್ಯುಚ್ಚೋರಂ ಕಾಪಿನವರನಿಂತೆಂದನೆನ್ನಮನೀತನುಮನರಸನಲ್ಲಿಗೆ ಕೊಂಡು ಪೋಗಿಮರಸನ ಮುಂದೀತಂಗಮೆನಗಂ ಮಾತುಂಟಲ್ಲಿ ನುಡಿದ ಬಟಿಕ್ಕರಸನೀತನಂ ಮೆಚ್ಚುಕೆಯ್ಗೆ ಎಂತುಂ ಕೊಲವೇಟಿಟ್ಟೊಡಂ ಮೂಱು ಸೂಟ್ ಬೆಸಗೊಂಡಲ್ಲದೆ ಕೊಲಲಾಗದೆಂದು ನೀತಿಶಾಸ್ತ್ರದೊಳ್

ರೂಪಾಂತರ ವಿದ್ಯೆಯಿಂದ ತನ್ನ ರೂಪವನ್ನು ಪರಿವರ್ತನಗೊಳಿಸಿ ತನ್ನ ಸ್ವಾಭಾವಿಕವಾದ ವಿದ್ಯುಚ್ಚೋರನಾಗಿರುವ ದಿವ್ಯರೂಪವನ್ನು ತಾಳಿಕೊಂಡು ಬಂದು ಯಮದಂಡನನ್ನು ಶೂಲಕ್ಕೆ ಹಾಕಲು ಬಿಡದಂತೆ ಅಡ್ಡವಾಗಿ ನಿಂತು ರಾಜನ ಕಾವಲುಗಾರರೊಡನೆ ಹೀಗೆ ಹೇಳಿದನು - "ಎಲ್ಲೆ ಅಣ್ಣಂದಿರಾ ನೀವು ಇವನನ್ನು ಕೊಂದಿರಿ. ಈತನು ಶೂಲಕ್ಕೆ ಹಾಕಲ್ಪಟ್ಟವನಾಗಿ ಸತ್ತವನಾಗಿದ್ದಾನೆ" ಎಂದು ಅವರಲ್ಲಿ ಹೇಳಿ,ತಳಾರನೊಡನೆ ಹೀಗೆಂದನು - "ಎಲ್ಲೆ ತಿಳಿಯಿತೇ ಯಮದಂಡಾ, ನೀನೂ ನಾನೂ ಚಿಕ್ಕಂದಿನಲ್ಲಿ ಒಬ್ಬರೇ ಉಪಾಧ್ಯಾಯರ ಬಳಿ ವಿದ್ಯಾಭ್ಯಾಸ ಮಾಡುವಂದು ನಂದನವೆಂಬ ಉದ್ಯಾನದಲ್ಲಿ ನಾನು ಶಪಥ ಮಾಡಿದುದನ್ನು ನೀನು ನೆನಪಿಟ್ಟಿರುವೆಯಾ? ಅದರಂತೆ ಒಂದೂ ದೋಷವಿಲ್ಲದೆ ನಿನ್ನನ್ನು ನಾನು ಕೊಲಿಸಿದೆನೊ ಕೊಲಿಸಲಿಲ್ಲವೊ? ಮಾಡಿದ ಪ್ರತಿಜ್ಞೆಯನ್ನು ಸ್ಮರಿಸುವೆಯೋ? ಸ್ಮರಿಸೆಯೋ?" ಎಂದು ಕೇಳಿದನು. ಯಮದಂಡನು "ಚೆನ್ನಾಗಿ ನೆನಪಿಟ್ಟಿರುವೆನು" ಎಂದನು. ಆಗ ವಿದ್ಯುಚ್ಚೋರನು - "ಮತ್ತೆ ಈಗ ನೀನೇನು ಸತ್ತೆಯೋ ? ಸಾಯೆಯೋ? ಮತ್ತೇನು?" ಎಂದಾಗ ಯಮದಂಡನು ಹೀಗೆಂದನು - "ದೇವಾ, ನೀನು ಗೆದ್ದವನಾಗಿರುವೆ. ನಾನು ಸೋತವನೂ ಸತ್ತವನೂ ಆಗಿರುವೆನು" - ಎಂದು ಇಬ್ಬರೂ ಒಗಟಿನಂತಹ ರೀತಿಯಿಂದ ಹೇಳುವ ಉತ್ತರ ಪ್ರತ್ಯುತ್ತರಗಳನ್ನು ಕಾವಲಿನವರೂ ಪಟ್ಟಣದ ಜನರೂ ಕೇಳಿ, ಆಶ್ಚರ್ಯಪಟ್ಟು ಬೆರಗಾಗಿದ್ದರು. ವಿದ್ಯುಚ್ಚೋರನು ಕಾವಲುಗಾರರೊಡನೆ - "ನೀವು ನನ್ನನ್ನೂ ಇವನನ್ನೂ ಅರಸರಲ್ಲಿಗೆ ಕೊಂಡುಹೋಗಿರಿ. ಅರಸನ ಮುಂದೆ ಈತನಿಗೂ ನನಗೂ ಹೇಳತಕ್ಕ ಮಾತಿದೆ. ಅಲ್ಲಿ ನಾವು ಮಾತಾಡಿದನಂತರ ರಾಜನು ಇವನನ್ನು ತನಗೆ ಮೆಚ್ಚಿದಂತೆ ಮಾಡುವನು. ಹೇಗಿದ್ದರೂ, ಕೊಲ್ಲಲು ಆಜ್ಞಾಪಿಸಿದರೂ ಮೂರು ಬಾರಿ ಕೇಳದೆ ಕೊಲ್ಲಬಾರದೆಂದು ನೀತಿಶಾಸ್ತ್ರದಲ್ಲಿ ಹೇಳಿರುವುದರಿಂದ, ನಮ್ಮಿಬ್ಬರನ್ನೂ ಅರಮನೆಗೆ

ಪೇಲ್ದುದಜೆಂದೆಮ್ಮಿರ್ವರುಮನರಮನೆಗೆ ಕೊಂಡು ಪೋಗಿ ಅರಸಂಗೆ ತೋಜೆಮೆಂದೊಡಾ ಕಾಪಿನವರಿರ್ವರುಮನರಸನಲ್ಲಿಗೆ ಕೊಂಡು ಪೋಗಿ ಇಂತೆಂದು ಬಿನ್ನಪಂಗೆಯ್ದರ್ ದೇವಾ ಈತಂ ಯಮದಂಡನಂ ಕೊಲಲೀಯದೆ ಬಾರಿಸಿದನೆಂದು ವಿದ್ಯುಚ್ಚೋರನಂ ತೋಜೆ ನುದಿದೊಡರಸನೇಕೆ ನೀಂ ಬಾರಿಸಿದೆಯೆಂದು ಬೆಸಗೊಂಡೊಡೆ ವಿದ್ಯುಚ್ಚೋರನೆಂದಂ ಯಮದಂಡಂಗೇನುಂ ಪೊಲ್ಲಮೆಯುಂ ದೋಷಮುಮಿಲ್ಲ ನಿಮ್ಮ ದೇವತಾರಕ್ಷಿತಮಪ್ಪ ಸರ್ವರುಜಾಪಹಾರಮೆಂಬುದು ಮೊದಲಾಗಿ ಪೊಬಲ ಕಸವರಮನಿರುಳೀ ರೂಪಿನೊಳ್ ಕಳ್ದು ಪಗಲೆಲ್ಲಂ ತೊನ್ನನಾಗಿ ಪಾಟ್ಟೀಗುಲದೊಳಿರ್ಪನದಜೆಂದೆನ್ನಂ ಕೊಲ್ಲಿಮೀತಂಗೇನುಂ ದೋಷಮಿಲ್ಲೆಂದೊಡರಸನೆಂದನಾ ಕಳ್ದ ಕಸವರಮನೆಲ್ಲಮನೇಗೆಯ್ದೆಮೆಂದು ಬೆಸಗೊಂಡೊಡನಿತುವಿರ್ದುವಯ್ನೂಸಿರಮಱುಸಾಸಿರ ದೀನಾರಮೆನ್ನ ಸೂಳೆಗೆ ಬಯಮಾದುದುಟೆದುವೆಲ್ಲಂ ವಣ್ಣಂ ಚಳಿಯದಿರ್ದುದೆಂದೊಡರಸಂ ವಿದ್ಯುಚ್ಚೋರನಂ ಹಾರಮಂ ಕೊಂಡು ಬಾ ಪೊಬಲವರ್ಗ್ಗಂ ಕಸವರಮಂ ಮುಡಗಿದೆಡೆಯಂ ತೋಱಿಂದಾತನೊಡನೆ ಪೂಬಲ ಜನಮುಮನಟ್ಪೆ ಕಾಪುವೆರಸು ಪೋಗಿ ಪೊಬಲ್ಗೆ ನಾಡೆಯಂತರದೊಳ್ ಪಿರಿದೊಂದು ಪರ್ವತಮುಂಟಲ್ಲಿಯೊಂದು ವಿಸ್ತೀರ್ಣ ಗುಹೆಯುಂಟದಱ ಬಾಗಿಲಂ ಮುಚ್ಚರ್ದ ಪಿರಿಯ ಸಿಲೆಯಂ ಕಳೆದದಱೊಳಗೆ ಪೊಕ್ಕು [illegible]ಮಂ ಕೊಂಡು ಪೊಬಲ ಜನಮೆಲ್ಲಮನೆಂದಂ ನಿಮ್ಮ ನಿಮ್ಮ ಕಸವರಮಪ್ಪುದನಾರಯ್ದು ಪಲ್ಲಟಿಸಲೀಯದೆ

ಕೊಂಡುಹೋಗಿ ಅರಸನಿಗೆ ತೋರಿಸಿ" ಎಂದನು. ಅದರಂತೆ ಕಾವಲುಗಾರರು ಇಬ್ಬರನ್ನೂ ಅರಸನಲ್ಲಿಗೆ ಕೊಂಡುಹೋಗಿ ಈ ರೀತಿಯಾಗಿ ವಿಜ್ಞಾಪನೆ ಮಾಡಿದರು - "ದೇವಾ ಈತನು ಯಮದಂಡನನ್ನು ಕೊಲ್ಲಲು ಬಿಡದೆ, ನಮ್ಮನ್ನು ತಡೆಧನು" ಎಂದು ವಿದ್ಯುಚ್ಚೋರನನ್ನು ತೋರಿಸಿ ಹೇಳಿದರು. ಆಗ 'ರಾಜನು ನೀನು ಯಾಕೆ ತಡೆದೆ?' ಎಂದು ಕೇಳಲು ವಿದ್ಯುಚ್ಚೋರನು ಹೀಗೆ ಹೇಳಿದನು - "ಯಮದಂಡನಲ್ಲಿ ಯಾವುದೊಂದು ತಪ್ಪಾಗಲೀ ದೋಷವಾಗಲೀ ಇಲ್ಲ. ನಿಮ್ಮದಾಗಿರುವ ದೇವತೆಗಳಿಂದ ರಕ್ಷಿಸಲ್ಪಡುವ ಸರ್ವರುಜಾಪಹಾರವೆಂಬ ಮಾಲೆಯೇ ಮುಂತಾಗಿ ಪಟ್ಟಣದ ಹೊನ್ನನ್ನು ರಾತ್ರಿಯಲ್ಲಿ ಈ ರೂಪದಲ್ಲಿ ನಾನೇ ಕಳವು ಮಾಡಿ ಹಗಲೆಲ್ಲ ತೊನ್ನು ರೋಗದವನಂತೆ ಕಾಣಿಸಿಕೊಂಡು ಪಾಳುಬಿದ್ದ ದೇವಾಲಯದಲ್ಲಿ ಇರುತ್ತೇನೆ. ಆದುದರಿಂದ ನನ್ನನ್ನು ಕೊಲ್ಲಿರಿ, ಈತನಲ್ಲಿ ಏನೂ ದೋಷವಿಲ್ಲ" - ವಿದ್ಯುಚ್ಚೋರನು ಹೀಗೆನ್ನಲು ರಾಜನು - ಅವನೊಡನೆ - "ಆ ಕದ್ದ ಹೊನ್ನನ್ನೆಲ್ಲ ಏನು ಮಾಡಿದೆ" ಎಂದು ಕೇಳಿದನು. ವಿದ್ಯುಚ್ಚೋರನು - "ಅಷ್ಟೂ ಇದ್ದುವು. ಅವುಗಳಲ್ಲಿ ಐದು ಸಾವಿರ ಅರುಸಾವಿರ ದೀನಾರನಾಣ್ಯ ನನ್ನ ಸೂಳೆಗೆ ಕೊಟ್ಟು ವೆಚ್ಚವಾಗಿದೆ. ಉಳಿದುದೆಲ್ಲ ಬಣ್ಣವಳಿಯದೆಯೇ ಇದೆ" ಎಂದು ಹೇಳಿದನು. ರಾಜನು ವಿದ್ಯುಚ್ಚೋರನೊಂದಿಗೆ - 'ಹಾರವನ್ನು ತೆಗೆದುಕೊಂಡು ಬಾ, ಪಟ್ಟಣಿಗರಿಗೆ ಹೊನ್ನನ್ನು ಇಟ್ಟ ಸ್ಥಳವನ್ನು ತೋರಿಸು, ಎಂದು ಹೇಳಿ, ಆತನೊಂದಿಗೆ ಪಟ್ಟಣದ ಜನರನ್ನು ಕಳುಹಿಸಿದನು. ವಿದ್ಯುಚ್ಚೋರನು ಕಾವಲಿನವರೊಂದಿಗೆ ಹೋದನು. ಆ ಪಟ್ಟಣಕ್ಕೆ ಬಹಳ ದೂರದಲ್ಲಿ ದೊಡ್ಡದೊಂದು ಬೆಟ್ಟವಿದೆ. ಆ ಬೆಟ್ಟದಲ್ಲಿ ಒಂದು ವಿಶಾಲವಾದ ಗವಿಯಿದೆ. ಅದರ ಬಾಗಲನ್ನು ದೊಡ್ಡ ಕಲ್ಲಿನಿಂದ ಮುಚ್ಚಿತ್ತು. ವಿದ್ಯುಚ್ಚೋರನು ಆ ಕಲ್ಲನ್ನು ತೆಗೆದು ಅದರ ಒಳಗೆ ಹೊಕ್ಕು ಮಾಲೆಯನ್ನು ತಂದು, ಪಟ್ಟಣದ ಜನರನ್ನೆಲ್ಲ ಸಂಬೋಧಿಸಿ ಹೇಳಿದನು - "ನಿಮ್ಮ ನಿಮ್ಮದಾಗಿರುವ ದ್ರವ್ಯ ಯಾವುದೆಂದು ಪರಿಶೀಲಿಸಿ, ಒಬ್ಬರದು

ನೋಡಿಕೊಳ್ಳಿಮೆಂದು ತೋಱೆದೊಡವರುಂ ತಂತಮ್ಮ ಕಸವರಮನೆಲ್ಲಮನಾರಯ್ದು ಕೊಂಡರ್ ಮತ್ತೆ ವಿದ್ಯುಚ್ಚೋರನುಂ ಹಾರಮಂ ಕೊಂಡು ಪೋಗಿಯರಸಂಗೊಪ್ಪಿಸಿದೊಡರಸನಿಂತೆಂದು ವಿದ್ಯುಚ್ಚೋರನಂ ಬಿಸಗೊಂಡಂ ಮಾಘಮಾಸದಿರುಳಿನ ಶೀತಮೊಳ್ ನಾಲ್ಕು ಜಾವಮುಂ ಮೂವತ್ತೆರಡು ಘೋರಮಪ್ಪ ದಂಡನೆಯನೆಂತು ಸೈರಿಸಿದೆಯೆಂದೊಡಾತನಿಂತೆಂದರಸಂಗೆ ಪೇಟ್ಪುಂ ದೇವಾ ಒಂದು ದಿವಸಂ ಸಹಸ್ರಕೂಟ ಚೈತ್ಯಾಲಯಕ್ಕೆ ಕಿಱೆಯಂದೆನ್ನನೋದಿಸುವೋಜರುಮಾನುಂ ಪೋಗಿ ಓಜಂ ದೇವರಂ ಬಂದಿಸುವನ್ನೆಗಂ ಚರಿತಪುರಾಣಂಗಳಂ ವಖ್ಯಾನಿಸುತ್ತಿರ್ದ ಶಿವಗುಪ್ತರೆಂಬಾಚಾರ್ಯರ ವಕ್ಕದೆ ಕುಳ್ಳಿರ್ದು ವಖ್ಯಾನೆಯಂ ಕೇಳುತ್ತಿರ್ದನ್ನೆಗಂ ನರಕವ್ಯಾವರ್ಣನೆಯನಾ ಭಟ್ಟಾರರಿಂತೆಂದು ಪೇಟ್ಪುದಂ ಕೇಳ್ದೆಂ ವ್ರತ ಶೀಲ ಚಾರಿತ್ರ ಗುಣಂಗಳನಿಲ್ಲದವರುಂ ಜೀವಂಗಳಂ ಕೊಲ್ವರುಂ ಬೇಂಟೆಯಾಡುವರುಂ ರಾಗದ್ವೇಷಲೋಭಂ ಕಾರಣಮಾಗಿ ಪುಸಿ ನುಡಿದು ಜೀವಂಗಳ್ಗೆ ಸಂತಾವಮಂ ವಧೆಯುಮಂ ಮಾಡಿಸುವರುಮಾಜಿದಿಗೊಳ್ವರುಂ ಕಳ್ಳೊರುಂ ಪಿಜಿರ ಪೆಂಡಿರೊಳ್ ಮಜಿವಾಟ್ಟರುಮವರಿಮಿತ ಪರಿಗ್ರಹಮಂ ನೆರಪುವರುಂ ಮತ್ತಂ ಮಧುಮದ್ಯ ಮಾಂಸಂಗಳುಮಯ್ದು ಪಾಲ್ಮರದ ಪಣ್ಗಳುಮಾಳಂಬೆಯುಂ ಸಣಂಬಿನ ಪೂವುಮೆಂದಿವಂ ಸೇವಿಸುವರುಂ ಮತ್ತಮಮೋಘಮಪೇಯ

ಮತ್ತೊಬ್ಬರಿಗಾಗದಂತೆ ನೋಡಿಕೊಳ್ಳಿ" ಎಂದು ತೋರಿಸಿದನು. ಅವರು ತಮ್ಮ ತಮ್ಮ ದ್ರವ್ಯವೆಲ್ಲವನ್ನೂ ಪರೀಕ್ಷಿಸಿ ನೋಡಿ ತೆಗೆದುಕೊಂಡರು. ಆಮೇಲೆ ವಿದ್ಯುಚ್ಚೋರನು ಮಾಲೆಯನ್ನು ತೆಗೆದುಕೊಂಡು ಹೋಗಿ ರಾಜನಿಗೆ ಒಪ್ಪಿಸಿದನು. ಆಗ ರಾಜನು ವಿದ್ಯುಚ್ಚೋರನೊಡನೆ - "ನೀನು ಮಾಘಮಾಸದ ರಾತ್ರಿಯ ಶೀತದಲ್ಲಿ ನಾಲ್ಕು ಜಾವದಷ್ಟು ಹೊತ್ತು ಮೂವತ್ತೆರಡು ವಿಧವಾದ ಕಠಿನವಾದ ಶಿಕ್ಷೆಯನ್ನು ಹೇಗೆ ಸಹಿಸಿಕೊಂಡೆ?" ಎಂದು ಕೇಳಲು, ಅವನು ಅರಸನಿಗೆ ಹೀಗೆಂದನು - "ದೇವಾ, ನಾನು ಚಿಕ್ಕವನಾಗಿದ್ದಾಗ ನನಗೆ ಕಲಿಸುವ ಉಪಾಧ್ಯಾಯರೂ ನಾನೂ ಸಹಸ್ರಕೂಟ ಜಿನಾಲಯಕ್ಕೆ ಹೋಗಿದ್ದೆವು, ನನ್ನ ಉಪಾಧ್ಯಾಯರು ದೇವರನ್ನು ನಮಸ್ಕರಿಸುತ್ತಿದ್ದಾಗ, ಚರಿತಗಳನ್ನೂ ಪುರಾಣಗಳನ್ನೂ ವ್ಯಾಖ್ಯಾನಮಾಡುತ್ತಿದ್ದ ಶಿವಗುಪ್ತರೆಂಬ ಆಚಾರ್ಯರ ಬಳಿಯಲ್ಲಿ ನಾನು ಕುಳಿತು ವ್ಯಾಖ್ಯಾನವನ್ನು ಕೇಳುತ್ತಿದ್ದೆನು. ಆ ಸಂದರ್ಭದಲ್ಲಿ ಆ ಋಷಿಗಳು ನರಕದ ವಿಶೇಷ ವರ್ಣನೆಯನ್ನು ಈ ರೀತಿಯಾಗಿ ಹೇಳುವುದನ್ನು ಕೇಳಿದೆನು - "ವ್ರತ - ಶೀಲ - ಚಾರಿತ್ರ್ಯ - ಗುಣಗಳಿಲ್ಲದವರೂ ಪ್ರಾಣವಧೆಯನ್ನು ಮಾಡುವವರೂ ಬೇಟೆಯಾಡುವವರೂ ಒಲವು ಹಗೆತನ-ಜಿಪುಣತನಗಳೇ ಕಾರಣವಾಗಿ ಸುಳ್ಳು ಹೇಳಿ ಜೀವಿಗಳಿಗೆ ದುಃಖವನ್ನುಂಟು ಮಾಡುವವರೂ ಹತ್ಯೆಮಾಡುವವರೂ ಹಿಂಸೆಮಾಡುವವರೂ ಕಳವು ಮಾಡುವವರೂ ಪರಸ್ತ್ರೀಯರಲ್ಲಿ ಜಾರತ್ವದಿಂದ ರಹಸ್ಯವಾಗಿ ಬಾಳುವವರೂ ಮಿತಿಯಿಲ್ಲದೆ ವಸ್ತುಸಂಗ್ರಹವನ್ನು ಕೂಡಿಡುವವರೂ ಅದಲ್ಲದೆ, ಸಾರಾಯಿ - ಹೆಂಡ-ಮಾಂಸಗಳನ್ನು, ಆಲ-ಅಶ್ವತ್ಥ-ಅತ್ತಿ-ಇಪ್ಪೆ-ಗೋಳಿ ಎಂಬ ಐದು ಬಗೆಯ ಹಾಲು ಮರಗಳ ಹಣ್ಣುಗಳನ್ನು, ಅಣಬೆಯನ್ನು, ಸಣಬಿನ ಹೂವನ್ನು ಸೇವನೆ ಮಾಡುವವರೂ ಇವೂ ಅಲ್ಲದೆ ಕುಡಿಯಬಾರದುದನ್ನು ಕುಡಿಯುವುದು, ತಿನ್ನಬಾರದುದನ್ನು ತಿನ್ನುವುದು ಎಂಬಿವನ್ನು

ಪೇಯಮಭಕ್ಷ್ಯ ಭಕ್ಷಮೆಂದಿವಱೊಳ್ ನೆಗಟ್ಟಿರುಂ ಪಂಚಮಹಾಪಾತಕಂಗಳಂ ಗೆಯ್ದೊರುಮಿವರೆಲ್ಲಂ ನಿವೃತ್ತಿಪರಿಣಾಮಮಿಲ್ಲದೆ ಕಾಲಂಗೆಯ್ದೇಟುಂ ನರಕಂಗಳೊಳ್ ಪುಟ್ಟಿ ದುಃಖಂಗಳನೆಯ್ದುವರ್

ಗಾಹೆ ॥ ಅಚ್ಚಣಿಮೀಳಣ ಮೆತ್ತಂ ಣತ್ಥಿಸುಹಂ ಮಚ್ಚುಮೇವ ಅಣುಬದ್ಧಂ
ಣಿರಯೇ ಣಿರಯಿಯಾಣಂ ಅಹಣ್ಣಿಸಂ ಪಚ್ಚಮಾಣಾಣಂ ॥

ವೃ ॥ ಕರಜನಿವೇಶಿತ ತೀಕ್ಷ್ಣಶಲಾಕಾಃ
ಕ್ರಕಚ ವಿಪಾಟಿತ ಭಿನ್ನ ಶರೀರಾಃ
ನರಕ ಭವೇ ವಿರಸಾ ವಿಷಹಂತೇ
ಚರಮಪಿ ತತ್‌ಕ್ಷಣ ದುಃಖವಿಷಾದಂ ॥

ಮತ್ತಂ

ಕಂದ ॥ ಇಜೆಕಿಜೆದನೊಡಜೆ ಕೈರಂ
ದಜೆ ಮುಜೆ ನಿಟ್ಟೆಲ್ದನರಿದು ನೆಜನೆಡೆಗಳ್ ಬಾ
ಯ್ದೆಜ್ಜೆಯೆ ಪೊಸವುಣ್ಗಳೊಳ್ ಪೊಯ್
ಮಜುಗುವಿನಂ ಲೋಹವಾರಿಯಂ ಮಜುಗುವಿನಂ ॥

ಕಡಿ ಕಟಪಮನುಡಿ ಕೊಡೆಯಂ
ನಡನಡನದುಗುವಿನಮಡಸಿ ತಡೆಯದೆ ಖಳನಂ
ಪಿಡಿದುಡಿಯೆ ಕಟ್ಟು ಮಿಡ ಮಿಡ
ಮಿದುಕುವಿನಂ ಬಡಿಯೊಳೊಡೆಯೆ ಪೊದೆ ಪೆದತಲೆಯಂ ॥

ಮಾಡುವವರೂ ಬ್ರಹ್ಮಹತ್ಯೆ, ಸುರಾಪಾನ, ಸ್ತೇಯ, ಗುರುಪತ್ನೀ ಗಮನ, ಮತ್ತು ಈ ಪಾಪಗಳನ್ನು ಮಾಡಿದವರ ಒಡನಾಟ - ಎಂಬ ಪಂಚ ಮಹಾಪಾತಕಗಳನ್ನು ಮಾಡಿದವರೂ - ಇವರೆಲ್ಲರೂ ಹಿಂದಿರುಗವ ಅವಕಾಶವೇ ಇಲ್ಲದೆ ಸತ್ತು, ಏಳು ನರಕಗಳಲ್ಲಿ ಹುಟ್ಟಿ ದುಃಖಿಗಳನ್ನು ಹೊಂದುವರು. (ನರಕದಲ್ಲಿ ಹಗಲೂ ರಾತ್ರಿಯೂ ಬೇಯಿಸಲ್ಪಡುತ್ತಿರುವ ನರಕಜೀವಿಗಳಿಗೆ ಕಣ್ಣರೆಪ್ಪೆ ಹೊಡೆಯುವಷ್ಟು ಕಾಲ ಕೂಡ ಸುಖವಿಲ್ಲ. ಅವರಿಗೆ ಕಟ್ಟಿಟ್ಟದ್ದು ದುಃಖವೊಂದೇ.) ನರಕದಲ್ಲಿ ಹುಟ್ಟಿಬಂದವರ ಉಗುರುಗಳಲ್ಲಿ ಹರಿತವಾದ ಸಲಾಕೆಗಳನ್ನು ಹೊಗಿಸುತ್ತಾರೆ. ಶರೀರವನ್ನು ಕತ್ತರಿಸಿ ಗರಗಸದಿಂದ ಸೀಳುತ್ತಾರೆ. ನಾರಕಿಗಳು ಸಂತೋಷವಿಲ್ಲದವರು. ಒಡನೆಯೇ ಉಂಟಾದ ದುಃಖೋದ್ವೇಗಗಳನ್ನು ಬಹುಕಾಲ ಅನುಭವಿಸುತ್ತಾರೆ. ಅದಲ್ಲದೆ, ತಿವಿದು ಕೆರೆದು ಒದರಿ ಕಾಜಿನಂತೆ ಚೂರುಚೂರು ಮಾಡಿ, ಮುರಿದು, ನೀಳವಾದ ಮೂಳೆಗಳನ್ನು ತುಂಡು ಮಾಡಿ ಮರ್ಮಸ್ಥಳಗಳು ಬಾಯಿ ತೆರೆಯುವಂತೆ ಹೊಸಹುಣ್ಣುಗಳ ಮೇಲೆ ಹೊಯಿ ಎನ್ನುತ್ತ ನರಕದಲ್ಲಿ ಶಿಕ್ಷಿಸುತ್ತಾರೆ. 'ಸೊಂಟವನ್ನು ಕತ್ತರಿಸು. ತೊಡೆಯನ್ನು ಮುರಿ. ಗಡಗಡ ನಡುಗುವಂತೆ ಮೇಲೆ ಬಿದ್ದು ತಡಮಾಡದೆ ಪಾಪಿಯನ್ನು ಹಿಡಿದು ಮುರಿಯುವ ಹಾಗೆ ತಟ್ಟು. ವಿಲಿವಿಲಿ ಒದ್ದಾಡಲು ಹೆಡತಲೆ ಒಡೆಯುವಂತೆ ಮೊಣ್ಣೆಯಲ್ಲಿ ಬಡಿ' ಎನ್ನುತ್ತಾರೆ. 'ಬಡಿ, ಕೊಲ್ಲು, ಕಟ್ಟು, ತಿವಿ, ಮುರಿ, ಕಡಿ, ಸೊಂಟ ಕತ್ತರಿಸು, ಕುತ್ತಿ ಕರುಳನ್ನು ಹೊರ ತೆಗೆ, ಮುಖಕ್ಕೆ ಬೆಂಕಿ ಹಾಕು, ಹಿಡಿ, ಹೊಡೆ, ನೇರವಾಗಿ ತಿವಿ, ಬಯ್ಯು, ಉತ್ಸಾಹದಿಂದ

ಬಡಿ ಕೊಲ್ ಕಟ್ಟಲೆ ಮುಟ್ಟೆ ಕಡಿ
ನಡುವಂ ಕೊಯ್ ಕುತ್ತಿಕರುಳ್ಗಳಂ ತೆಗೆ ಮೊಗಮಂ
ಸುದು ಪಿಡಿ ಬಡಿ ನಿಮಿರ್ದಿಟ್ಟೆ ಬಯ್
ಕದಂಗಿ ನುಂಗೆಂದು ಮುಸುಟ್ಟೆ ನಾರಕರಾಗಳ್ ॥

ಮತ್ತಂ ಕೊಂತಂಗಳಿಂದಮಿಟ್ಟಗಳಿಂದಂ ಕುತ್ತಿಸಿಜೆಂದಂ ಕರುಳ್‌ಮಾಲೆಗಳ್ ನೆಲದೊಳ್ ಸುರಿಯೆ ಕುತ್ತುವುದುಂ ಮುಟ್ಟಗೆಗಳೊಳಿಟ್ಟು ತೆಗಪುವುದುಂ ಕರಗಸಂಗಳಿಂದಂ ಮರಸಂ ಪೋಟ್ಟಂತೆ ಕೆಯ್ಯಂ ಕಾಲನಗಲ್ದಿ ಪಿಡಿದಡಸಿ ಕಟ್ಟಯುದ್ದಂಬಿದಿದು ಪೋಟ್ಟುದುಮಿಂತಿವು ಮೊದಲಾಗೊಡೆಯ ದುಃಖಂಗಳಂ ಕಣ್ಗೆಮೆಯಿಕ್ಕುವನಿತು ಪೊಬ್ಬಿಪ್ಪೊದಮುಸಿರ್ ಪತ್ತಿಲ್ಲದುತ್ಕೃಷ್ಟದಿಂದಮೇಟಿನೆಯ ನರಕದೊಳ್ ಮೂವತ್ತುಮೂಱು ಸಾಗರೋಪಮಕಾಲಂಬರೆಗಂ ದುಃಖಂಗಳನೆಯ್ದುವರ್ ಮತ್ತಂ ದಾನ ಪೂಜೆ ಶೀಲೋಪವಾಸಮೆಂದಿಂತು ಚತುರ್ವಿಧಮಪ್ಪ ಶ್ರಾವಕಧರ್ಮದೊಳ್ ನೆಗಟ್ಟವರುಂ ತಪಂಗೆಯ್ವರುಂ ಸ್ವರ್ಗಾಪವರ್ಗ ಸುಖಂಗಳನೆಯ್ದುವರೆಂದಿಂತು ಪೇಟೆ ಕೇಳ್ದು ಭಟಾರರ ಪಕ್ಕದೆ ಆಣುವ್ರತ ಗುಣವ್ರತ ಶಿಕ್ಷಾವ್ರತಮೆಂದಿಂತು ದ್ವಾದಶವಿಧಮಪ್ಪ ಶ್ರಾವಕಧರ್ಮಮುಮನರ್ಹಂತ ಪರಮದೇವರೆ ದೇವರ್ ಕೊಲ್ಲದುದೆ ಧರ್ಮಂ ಬಾಹ್ಯಾಭ್ಯಂತರ ಪರಿಗ್ರಹಮಿಲ್ಲದುದೆ ತಪಮರ್ಹಂತ ಪರಮ ದೇವರಾಗಮದೊಳ್ ಪೇಟೆಪಟ್ಟು ಜೀವಾಜೀವ ಪುಣ್ಯಪಾಪಾಸ್ರವ ಸಂವರ ನಿರ್ಜರ ಬಂಧ

ನುಂಗಿಬಿಡು' - ಎಂದು ನರಕದವರು ಮುತ್ತಿಕೊಳ್ಳುತ್ತಾರೆ. ಅದಲ್ಲದೆ, ಒನಕೆಗಳಿಂದ ಈಟಿಗಳಿಂದ ಚುಚ್ಚುವ ಕೋಡುಗಳಿಂದ ಕರುಳಿನ ಮಾಲೆಗಳು ನೆಲದಲ್ಲಿ ಸುರಿಯುವಂತೆ ಕುತ್ತುವುದು, ಸೌದೆಗಳಿಂದ ಹೊಡೆದು ಎಳೆಯುವುದು ಕರಗಸಗಳಿಂದ ಮರವನ್ನು ಸೀಳುವಂತೆ ಕೈಯನ್ನೂ ಕಾಲನ್ನೂ ಅಗಲಿಸಿ ಹಿಡಿದು ಬಿಗಿಯಾಗಿ ಕಟ್ಟಿ ಉದ್ದಕ್ಕೆ ಹಿಡಿದು ಸೀಳುವುದು - ಇಂತು ಇವೇ ಮೊದಲಾಗಿ ಉಳ್ಳ ದುಃಖಿಗಳನ್ನು ಕಣ್ಣುರೆಪ್ಪೆ ಮುಚ್ಚಿ ತೆರೆಯುವಷ್ಟು ಹೊತ್ತು ಕೂಡ ದುಃಖವಿಲ್ಲದ ಉಸಿರು ಬಿಡಲು ಅವಕಾಶವಿಲ್ಲದಿರುವ ಅತ್ಯಂತ ಕಠಿನಕರವಾದ ವಿಳನೆಯ ನರಕದಲ್ಲಿ ಮೂವತ್ತಮೂರು ಸಾಗರ ಸಮಾನವಾದ ಕಾಲದವರೆಗೆ ನಾರಕಿಗಳು ದುಃಖವನ್ನು ಅನುಭವಿಸವರು. ಮತ್ತೇನೆಂದರೆ, ದಾನ-ಪೂಜೆ-ಶೀಲ-ಉಪವಾಸ ಎಂದು ಈ ರೀತಿ ನಾಲ್ಕು ವಿಧವಾಗಿರುವ ಶ್ರಾವಕಧರ್ಮದಲ್ಲಿ ವರ್ತಿಸುವವರೂ ತಪವನ್ನು ಆಚರಿಸುವವರೂ ಸ್ವರ್ಗ-ಮೋಕ್ಷಗಳ ಸುಖಕ್ಕೆ ಭಾಗಿಗಳಾಗುವರು ಎಂದು ಈ ರೀತಿಯಾಗಿ ಶಿವಗುಪ್ತಾಚಾರ್ಯರು ಹೇಳುತ್ತಿದ್ದರು. ಅದನ್ನು ನಾನು ಕೇಳಿ ಋಷಿಗಳ ಬಳಿಯಲ್ಲಿ ಅಣುವ್ರತ (ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ, ಅಪರಿಗ್ರಹ) ಗುಣವ್ರತ (ದಿಗ್ವ್ರತ, ದೇಶವ್ರತ, ಅನರ್ಥದಂಡವ್ರತ), ಶಿಕ್ಷಾವ್ರತ (ಸಾಮಾಯಿಕವ್ರತ ಪ್ರೋಷಧೋಪವಾಸವ್ರತ, ಭೋಗ ಪರಿಭೋಗ ಪರಮಾಣುವ್ರತ, ಅತಿಥಿಸಂವಿಭಾಗವ್ರತ)- ಎಂಬೀ ಹನ್ನೆರಡು ಬಗೆಯ ಶ್ರಾವಕ ಧರ್ಮವನ್ನೂ ಜಿನೇಶ್ವರನೇ ದೇವರು, ಕೊಲ್ಲದಿರುವುದೇ (ಅಹಿಂಸೆಯೇ) ಧರ್ಮ, ಹತ್ತು ಬಗೆಯ ಬಾಹ್ಯ ಪರಿಗ್ರಹವೂ ಹತ್ತು ಬಗೆಯ ಅಂತರಂಗ ಪರಿಗ್ರಹವೂ ಇಲ್ಲದಿರುವುದೇ ತಪಸ್ಸು, ಜೈನಧರ್ಮ ಶಾಸ್ತ್ರದಲ್ಲಿ ಹೇಳಿರುವ ಜೀವ-ಅಜೀವ-ಪುಣ್ಯ-ಪಾಪ-ಆಸ್ರವ- ಸಂವರ-ನಿರ್ಜರ-ಬಂಧ- ಮೋಕ್ಷ

ಮೋಕ್ಷಮೆಂದಿಂತು ನವಪದಾರ್ಥಂಗಳುಮುಂ ಪಂಚಾಸ್ತಿಕಾಯಂಗಳುಮುಂ ಷಡ್ದ್ರವ್ಯಂಗಳುಮುಂ ನಂಬುವುದು ಸಮ್ಯಕ್ತ್ವಮೆಂಬುದಕ್ಕುಮಾ ಸಮ್ಯಕ್ತ್ವದತಿಚಾರಂಗಳ್ ಶಂಕಾದ್ಯಷ್ಟಮಳಂಗಳುಮೆಂಟು ಮದಂಗಳುಂ ಮೂಱುಮೂಢಮುಮಾಜಿನಾಯತನ ಸೇವೆಗಳುಮೆಂದಿಂತಿರ್ಪತ್ತಱ್ಕುಮವಂ ಪಿಂಗಿಸಿ ನಿಶ್ಶಂಕಾದ್ಯಷ್ಟಗುಣಂಗಳಿಂ ಕೂಡಿದ ಶುದ್ಧಮಪ್ಪ ಸಮ್ಯಕ್ತ್ವಪೂರ್ವಕಂ ವ್ರತಂಗಳನೇಜೆಸಿಕೊಂಡು ಮತ್ತೆ ನರಕಂಗಳ ದುಃಖಂಗಳಂ ಕೇಳ್ದವಱ ಶತಸಹಸ್ರಭಾಗಕ್ಕಪ್ಪೊಡಮೀ ದುಃಖಮಿಲ್ಲೆಂದು ಮನದೊಳ್ ಬಗೆದು ಮೂವತ್ತೆರಡುಂ ದಂಡನೆಗಳಂ ಸೈರಿಸಿದನೆಂದೊಡರಸಂ ಕೇಳ್ದು ನಿನಗೊಸೆದೆಂ ಬೇಡಿಕೊಳ್ ನಿನ್ನ ಬೇಡಿದುದೆಲ್ಲಮಂ ಕುಡುವೆನೆಂದೊಡೆ ಪೆಜತೇನುಮನೊಲ್ಲೆನೆನ್ನ ಕೆಳೆಯನಪ್ಪ ಯಮದಂಡಂಗೆ ಕ್ಷಮಿಯಿಸುವುದನೆ ಬೇಡಿದೆನೆಂದೊಡರಸನಿಂತೆಂದು ಬೆಸಗೊಂದಂ ಯಮದಂಡಂ ನಿನಗೆಂತು ಕೆಳೆಯನಾದಂ ಮತ್ತೆ ನೀಂ ಶ್ರಾವಕವ್ರತಂಗಳಂ ಕೈಕೊಂಡೆಯಪ್ಪೊಡೇಕೆ ಕಳ್ವೆಯೆಂದು ಬೆಸಗೊಂಡೊಡಾತನಿಂತೆಂದಂ ಯಮದಂಡನೆನಗೆ ಕೆಳೆಯನಪ್ಪುಮಮಂ ನಿಮ್ಮ ಪೊಬಲ ಕಸವರಮಂ ಕಳ್ದುದರ್ಕೆ ಕಾರಣಮುಮಂ ಪೇಱ್ದೆಂ ಕೇಳರಸಾ ಎಂಮ ವಿದ್ಯುಚ್ಚೋರನಿಂತೆಂದು ಪೇಬಲ್‌ತೊಡಂಗಿದಂ ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ತಿಲಕಮನೆ ಪೋಲ್ವುದು ದಕ್ಷಿಣಾಪಥದೊಳಾಭೀರಮೆಂಬುದು ನಾದಲ್ಲಿ ವರ್ಣೆಯೆಂಬ ತೊಱೆಯಾ ತದಿಯೊಳ್ ವೇಣಾತಟವೆಂಬುದು ಪೊಬಲದು ಪೊಬಲಗುಣಂಗಳಿನಾದವಮಾನುಂ ರಮ್ಯಮಪ್ಪುದು ಸ್ವರ್ಗಮನೆ ಪೋಲ್ವುದದನಾಳ್ವೊಂ

ಎಂಬೀ ಒಂಬತ್ತು ಪದಾರ್ಥಗಳನ್ನೂ ಪಂಚಾಸ್ತಿಕಾಯಗಳನ್ನೂ ಆರು ಬಗೆಯ ದ್ರವ್ಯಗಳನ್ನೂ ನಂಬುವುದು ಸಮ್ಯಕ್ತ್ವವೆನಿಸುವುದು. ಆ ಸಮ್ಯಕ್ತ್ವದ ಉಲ್ಲಂಘನೆಯ ಪರ್ತನೆಗಳು - ಶಂಕೆ ಮೊದಲಾದ ಎಂಟು ಮಲಗಳು, ಎಂಟು ಮದಗಳು, ಮೂರು ಮೂಢಗಳು, ಆರು ಅನಾಯತನ ಸೇವೆಗಳು - ಎಂಬೀ ಇಪ್ಪತ್ತೈದಾಗಿವೆ. ಅವನ್ನೆಲ್ಲ ಹಿಂಗಿಸಿ ನಿಶ್ಶಂಕೆ ಮೊದಲಾದ ಎಂಟು ಗುಣಗಳಿಂದ ಕೂಡಿದ ಶುದ್ಧವಾದ ಸಮ್ಯಕ್ತ್ವದೊಡನೆ ವ್ರತಗಳನ್ನು ಸ್ವೀಕರಿಸಿ, ನರಕಗಳ ದುಃಖಿಗಳನ್ನು ಕೇಳಿ ಅವುಗಳ ಲಕ್ಷದಲ್ಲಿ ಒಂದು ಭಾಗದಷ್ಟು ಕೂಡ ದುಃಖಿವು ಇಲ್ಲವೆಂದು ಮನಸ್ಸಿನಲ್ಲಿ ಭಾವಿಸಿ ಮೂವತ್ತೆರಡು ಶಿಕ್ಷೆಗಳನ್ನು ನಾನು ಸಹಿಸಿದೆನು" ಎಂದು ವಿದ್ಯುಚ್ಚೋರನು ಹೇಳಿದನು. ಅದನ್ನು ಕೇಳಿ ರಾಜನು "ನಿನಗೆ ನಾನು ಒಲಿದಿದ್ದೇನೆ. ಬೇಡಿಕೋ ; ನೀನು ಬೇಡಿದುದೆಲ್ಲವನ್ನೂ ಕೊಡುವೆನು" ಎಂದು ಹೇಳಿದನು. "ನನಗೆ ಬೇರೆ ಯಾವುದೂ ಬೇಕಾಗಿಲ್ಲ, ನನ್ನ ಗೆಳೆಯನಾದ ಯಮದಂಡನಿಗೆ ಕ್ಷಮೆಕೊಡಬೇಕು ಎಂಬುದಾಗಿ ಬೇಡಿದ್ದೇನೆ" ಎಂದು ವಿದ್ಯುಚ್ಚೋರನು ಕೇಳಲು, ರಾಜನು ಹೀಗೆ ಹೇಳಿದನು - "ಯಮದಂಡನು ನಿನಗೆ ಹೇಗೆ ಗೆಳೆಯನಾದ? ಅಲ್ಲದೆ, ನೀನು ಶ್ರಾವಕವ್ರತಗಳನ್ನು ಸ್ವೀಕರಿಸಿರುವೆಯಾದರೆ ಏಕೆ ಕಳವು ಮಾಡುತ್ತಿ?" ಹೀಗೆ ಕೇಳಿದಾಗ ಅವನು - "ಯಮದಂಡನು ನನಗೆ ಗೆಳೆಯನಾದುದನ್ನೂ ನಿಮ್ಮ ಪಟ್ಟಣದ ಹೊನ್ನನ್ನು ಕಳವು ಮಾಡಿದುದಕ್ಕೆ ಕಾರಣವನ್ನೂ ಹೇಳುವೆನು. ಅರಸನೇ ಕೇಳು" ಎಂದು ವಿದ್ಯುಚ್ಚೋರನು ಹೀಗೆ ಹೇಳತೊಡಗಿದನು - ಈ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ದಕ್ಷಿಣದೇಶದಲ್ಲಿ ಬೊಟ್ಟನ್ನು ಹೋಲುವಂತಿರುವ (ಶ್ರೇಷ್ಠವಾದ) ಆಭೀರವೆಂಬ ನಾಡು ಇದೆ. ಅಲ್ಲಿ ವರ್ಣೆ ಎಂಬ ನದಿಯ ತೀರದಲ್ಲಿ ವೇಣಾತಟ ಎಂಬ ಪಟ್ಟಣವಿದೆ. ಅದು ಪಟ್ಟಣದ ಗುಣಗಳಿಂದ ಅತ್ಯಂತ ರಮಣೀಯವಾಗಿದ್ದು ಇಂದ್ರಲೋಕವನ್ನೇ ಹೋಲುವುದು. ಅದನ್ನು ಜಿತಶತ್ರು

ಜಿತಶತ್ರುವೆಂಬೊನರಸನಾತನ ಮಹಾದೇವಿ ವಿಜಯಮತಿಯೆಂಬೊಳಾ ಇರ್ವರ್ಗ್ಗಂ ಮಗನೆನಾಂ ವಿದ್ಯುಚ್ಚೋರನೆಂಬೆಂ ಮತ್ತಾ ಪೊಟಲೊಳ್ ಯಮಪಾಶನೆಂಬೊಂ ತಳಾಜನಾತನ ಪೆಂಡತಿ ನಿಜಗುಣದೇವತೆಯೆಂಬೊಳಾ ಇರ್ವರ್ಗ್ಗಂ ಮಗನೀತಂ ಯಮದಂಡನೆಂಬೊಂ ಮತ್ತಾಮಿರ್ವೆಮುಂ ಸಮಾನವಯಸರೆಮಯ್ದಾಜು ವರ್ಷದ ಪ್ರಾಯದಂದು ಶ್ರಾವಕನಪ್ಪ ಸಿದ್ಧಾರ್ಥನೆಂಬುಪಾಧ್ಯಾಯನ ಪಕ್ಕದೆ ಇರ್ವರುಮನೋದಲಿಟ್ಟೊದೇಲಿಂಟು ವರುಷದೊಳಗೆ ವ್ಯಾಕರಣಂ ಪ್ರಮಾಣಂ ಛಂದಮಲಂಕಾರಂ ನಿಘಂಟು ಕಾವ್ಯಂ ನಾಟಕಂ ಸಾಮುದ್ರಿಕಂ ವಾತ್ಸ್ಯಾಯನಂ ಶಾಲಿಹೋತ್ರಂ ಪಾಲಕಾಪ್ಯಂ ಚಾಣಕ್ಯಂ ವೈದ್ಯಂ ಮೊದಲಾಗೊಡೆಯ ಶಾಸ್ತ್ರಂಗಳನೆಲ್ಲಮನಿರ್ವರುಂ ಕಲ್ತು ಬಟಿಕ್ಕೀತಂ ತಳಾಜನ ಮಗನಪ್ಪುದಱಿಂ ತನಗೆ ತಕ್ಕ ಕಳ್ಳರನಾರಯ್ದು ತೆಱನಂ ಪೇಳ್ದು ಸುರಖಮೆಂಬೋದಂ ಕಲ್ತೊನಾನುಂ ಕಳ್ವುಪಾಯಮಂ ಪೇಳ್ದು ಕರಪಟಶಾಸ್ತ್ರಮಂ ಕಲ್ತನಿಂತೆಮಗನ್ಯೋನ್ಯ ಪ್ರೀತಿಯಿಂದಂ ಕಾಲಂ ಸಲೆ ಮತ್ತೊಂದು ದಿವಸಮಿರ್ವರುಂ ವನಕ್ರೀಡೆಯಾಡಲೆಂದಿಂದ್ರೋಪಮಮೆಂಬ ವನಕ್ಕೆ ಪೋಗಿಯಲ್ಲಿಯಶೋಕ ಪುನ್ನಾಗ ವಕುಳ ತಿಳಕ ತಮಾಳ ಚಂಪಕ ಕ್ರಮುಕ ನಾಳಿಕೇರ ಖರ್ಜೂರ ಜಂಬು ಜಂಬೀರ ವನಸ ದಾಡಿಮ ಕದಳೀ ದ್ರಾಕ್ಷಾ ಸಹಕಾರಂ ಮೊದಲಾಗೊಡೆಯ ಪಲವುಂ ತೆಱದ ವೃಕ್ಷಜಾತಿಗಳಿಂದಂ ಕಿಕ್ಕಿಱಿಗಿತೆದಿರ್ದ ನಂದನವನದೊಳಿರ್ವರುಮುಳಿಸೆಂಡನಾಡುತ್ತಿರಲೋಕನ

ಎಂಬ ಅರಸನು ಆಳುತ್ತಿದ್ದನು. ಅರನಿಗೆ ವಿಜಯಮತಿ ಎಂಬ ರಾಣಿಯಿದ್ದಳು. ಆ ಇಬ್ಬರಿಗೆ ನಾನು ಮಗನಾಗಿರುವೆನು, ವಿದ್ಯುಚ್ಚೋರನೆಂಬವನಾಗಿರುವೆನು. ಆ ಪಟ್ಟಣದಲ್ಲಿ ಯಮಪಾಶನೆಂಬ ನಗರರಕ್ಷಕ (ತಳಾರ)ನಿದ್ದನು. ಅವನ ಹೆಂಡತಿ ನಿಜಗುಣದೇವತೆ ಎಂಬವಳು. ಆ ಇಬ್ಬರಿಗೂ ಯಮದಂಡನೆಂಬ ಈತನು ಮಗನು. ನಾವಿಬ್ಬರೂ ಸಮಾನ ವಯಸ್ಸಿನವರಾಗಿದ್ದೇವೆ. ನಮಗಿಬ್ಬರಿಗೂ ಐದು ಆರು ವರ್ಷ ಪ್ರಾಯವಾದಾಗ ಜೈನಸದ್ಗೃಹಸ್ಥನಾದ ಸಿದ್ಧಾರ್ಥನೆಂಬ ಉಪಾಧ್ಯಾಯನ ಬಳಿಯಲ್ಲಿ ಇಬ್ಬರನ್ನೂ ವಿದ್ಯಾಭ್ಯಾಸಕ್ಕೆ ಇಟ್ಟರು. ಏಳೆಂಟು ವರ್ಷದೊಳಗಾಗಿ ನಾವಿಬ್ಬರೂ ವ್ಯಾಕರಣ, ಪ್ರಮಾಣ, ಛಂದಸ್ಸು, ಅಲಂಕಾರ, ನಿಘಂಟು, ಕಾವ್ಯ, ನಾಟಕ, ಸಾಮುದ್ರಿಕ, ವಾತ್ಸ್ಯಾಯನ, ಶಾಲಿಹೋತ್ರ, ಪಾಲಕಾಪ್ಯ, ಚಾಣಕ್ಯ, ವೈದ್ಯ - ಮೊದಲಾಗಿ ಉಳ್ಳ ಶಾಸ್ತ್ರಗಳೆಲ್ಲವನ್ನೂ ಕಲಿತೆವು. ಆಮೇಲೆ, ಇವನು ತಳಾರನ ಮಗನಾದುದರಿಂದ ತನಗೆ ಯೋಗ್ಯವಾದ ಕಳ್ಳರನ್ನು ಕಂಡುಹಿಡಿವ ಕ್ರಮವನ್ನು ಹೇಳತಕ್ಕ 'ಸುರಖಿ' ಎಂಬ ವಿದ್ಯೆಯನ್ನು ಕಲಿತನು. ನಾನು ಕಳವು ಮಾಡುವ ಉಪಾಯವನ್ನು ತಿಳಿಸುವ ಕರಪಟಶಾಸ್ತ್ರವನ್ನು ಕಲಿತೆನು. ಹೀಗೆ ನಮ್ಮೊಳಗೆ ಪರಸ್ಪರ ಪ್ರೀತಿಯಿಂದ ಕಾಲ ಕಳೆಯುತ್ತಿತ್ತು. ಒಂದು ದಿವಸ ನಾವಿಬ್ಬರೂ ಕಾಡಿನಲ್ಲಿ ಆಟವಾಡಲೆಂದು 'ಇಂದ್ರೋಪಮ' ಎಂಬ ಕಾಡಿಗೆ ಹೋದೆವು. ಅಲ್ಲಿ ಅಶೋಕ, ಪುನ್ನಾಗ, ರೆಂಜೆ, ತಿಲಕ, ಹೊಂಗೆ, ಸಂಪಗೆ, ಅಡಕೆಮರ, ತೆಂಗಿನಮರ, ಖರ್ಜೂರ, ಜಂಬು, ನಿಂಬೆ, ಹಲಸು, ದಾಳಿಂಬ, ಬಾಳೆ, ದ್ರಾಕ್ಷೆ, ಮಾವು - ಮುಂತಾಗಿರತಕ್ಕ ಹಲವು ಬಗೆಯ ಮರಗಳ ಜಾತಿಗಳಿಂದ ಒತ್ತೊತ್ತಾಗಿರುವ ನಂದನದ ಉದ್ಯಾನದಲ್ಲಿ ಇಬ್ಬರೂ ಉಳಿಚೆಂಡಾಟವನ್ನು ಆಡುತ್ತಿದ್ದೆವು. ಈತನು ಅದೃಶ್ಯವಾಗತಕ್ಕ ವಿದ್ಯೆಯನ್ನು ಕಲಿತವನಾದುದರಿಂದ ಎಲ್ಲಿದ್ದರೂ ಕಾಣದ ರೀತಿಯಲ್ಲಿರಲು ಈತನನ್ನು ಬಹಳವಾಗಿ

ವಿದ್ಯೆಯನೀತಂ ಕಲ್ತನಪ್ಪುದಱಿಂದೆಲ್ಲಿಯುಳಿದೊಡಂ ಕಾಣಲಾಗದೀತನಂ ನೀಡುಮಱಸಿ ಕಾಣದೆ ದೆಸೆಗೆಟ್ಟು ಬೇಸತ್ತಾನಿಂತೆಂದೆನಕ್ಕುಂ ಮಗನೆ ನೀಂ ತಳಾಜಿನಪ್ಪಂದು ನಿನ್ನ ಕಾಪಿನೊಳ್ ಕಳ್ದು ನಿನ್ನಂ ಕೊಲಿಸದಾಗಳೇನಾಯ್ತೆಂದು ನುಡಿದೊಡೀತನುಮಿಂತೆಂದನಕ್ಕುಂ ಮಗನೆ ನೀನೆನ್ನ ತಳಾಜುಗೆಯ್ವುದು ಕಳ್ಪೊಡೆ ನಿನ್ನಂ ಒಡಿದುಡಿಯೆ ಕಟ್ಟಿ ಕಳ್ಳರ ದಂಡಣೆಯಿಂ ದಂಡಿಸದಾಗಳೇನಾಯ್ತೆಂದು ನುಡಿದೊಡೀ ನುಡಿಯಂ ಮಱಿಯಲ್ವೇಡೆಂದಿರ್ವರುಮೋರೊರ್ವರಂ ಮೂದಲಿಸಿ ಪ್ರತಿಜ್ಞೆಗೆಯ್ದು ಕೆಲಕಾಲದಿಂದೆನ್ನ ತಂದೆಯೆನಗೆ ರಾಜ್ಯಪಟ್ಟಂಗಟ್ಟಿ ಶ್ರುತಸಾಗರರೆಂಬ ಭಟಾರರ ಪಕ್ಕದೆ ತಪಂಬಟ್ಟನೀತನ ತಂದೆಯುಂ ತನ್ನ ಸಂತಾನಮನೀತಂಗೆ ಕೊಟ್ಟರಸನೊಡನೆ ತಪಂಬಟ್ಟಂ ಮತ್ತಾನುಂ ರಾಜ್ಯಂಗೆಯ್ಯುತ್ತಿರೆ ಈತನುಮಾ ಪೊಟಲೊಳ್ ತಳಾಜುಗೆಯ್ಯುತ್ತಿರ್ಕುಮಿಂತು ಸುಖದೊಳಿರ್ವರ್ಗ್ಗಂ ಕಾಲಂ ಸಲೆ ಮತ್ತೊಂದು ದಿವಸಮೀತಂ ತನ್ನ ಮನದೊಳಿಂತೆಂದು ಬಗೆದನೆನ್ನರಸಂ ಕಳ್ಳನಾನುಮೀ ಪೊಟಲೊಳ್ ತಳಾಜು ಗೆಯ್ವೆನಿದು ಕಜ್ಜಮೊಳ್ಳಿತ್ತಲ್ತೆಂದೆನಗಂಜಿ ನಾಡಂ ಬಿಟ್ಟು ಬಂದು ನಿಮಗಾಳಾದನಾನುಮೀತನನೆನ್ನಾಳ್ವ ನಾಡೆಂಟುದೆಸೆಯು ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳೊಳಾರಯ್ದುಯುಂ ಕಾಣದೆ ಪರಮಂಡಲಂಗಳೊಳಮಾರಯ್ದುಯುಂ ಕಾಣದಿಲ್ಲಿಗಾರಯ್ಯಲಟ್ಟದೊಡೆ ಚರಪುರುಷರಾರಯ್ದು ಕಂದು ಬಂದೆನಗಿಂತೆಂದು ಪೇೞ್ದರ್ ದೇವಾ

ಹುಡುಕಿದೆನು. ಆದರೂ ಕಾಣದೆ ದಿಕ್ಕುಕಾಣದೆ ಬೇಸರಗೊಂಡು ಹೀಗೆ ಹೇಳಿದೆನು - "ಮಗನೇ, ನೀನು ಪಟ್ಟಣದ ಕಾವಲುಗಾರನಾದಾಗ ನಗರ ನಿನ್ನ ರಕ್ಷಣೆಯಲ್ಲಿದ್ದಾಗಲೇ ನಾನು ಕದ್ದು ನಿನ್ನನ್ನು ಕೊಲ್ಲಿಸದಿದ್ದರೆ ಪಂಥವೇನು?" ಎಂದು ನಾನು ಹೇಳಿದಾಗ ಈತನು "ಮಗನೇ, ನಾನು ತಳಾರ ಕೆಲಸ ಮಾಡುವಾಗ ನೀನು ಕದ್ದರೆ ನಿನ್ನನ್ನು ಹಿಡಿದು ಮುರಿಯುವ ಹಾಗೆ ಕಟ್ಟಿ ಕಳ್ಳರಿಗೆ ವಿಧಿಸತಕ್ಕ ಶಿಕ್ಷೆಯಿಂದ ದಂಡಿಸದಿದ್ದರೆ ಏನಾಯ್ತು?" ಎಂದು ಹೇಳಿದನು. 'ಈ ಶಪಥದ ಮಾತನ್ನು ಮರೆಯಬೇಡ' ಎಂದು ನಾವು ಒಬ್ಬರೊಬ್ಬರನ್ನು ಮೂದಲಿಸಿ ಪ್ರತಿಜ್ಞೆ ಮಾಡಿದೆವು. ಕೆಲವು ಕಾಲದ ನಂತರ ನನ್ನ ತಂದೆ ನನಗೆ ರಾಜ್ಯಾಧಿಕಾರವನ್ನು ಕೊಟ್ಟು ಶ್ರುತಸಾಗರರೆಂಬ ಋಷಿಗಳ ಬಳಿಯಲ್ಲಿ ತಪಸ್ಸನ್ನು ಕೈಗೊಂಡನು. ಈ ಯಮದಂಡನ ತಂದೆಯೂ ತನ್ನ ವಂಶಕ್ರಮದಿಂದ ಬಂದ ತಳವಾರಿಕೆಯನ್ನು ಇವನಿಗೆ ಕೊಟ್ಟು ರಾಜನೊಡನೆ ತಪಸ್ಸನ್ನು ಸ್ವೀಕರಿಸಿದನು. ಆಮೇಲೆ ನಾನು ಅರಸನಾಗಿ ರಾಜ್ಯವಾಳುತ್ತಿದ್ದಾಗ ಈತನು ಆ ಪಟ್ಟಣದಲ್ಲಿ ತಳವಾರ ಕೆಲಸವನ್ನು ಮಾಡುತ್ತಿದ್ದನು. ಹೀಗೆಯೇ ಇಬ್ಬರಿಗೂ ಸುಖದಲ್ಲಿ ಕಾಲ ಕಳೆಯುತ್ತಿತ್ತು. ಅನಂತರ ಒಂದು ದಿವಸ ಈತನು ತನ್ನ ಮನಸ್ಸಿನಲ್ಲಿ ಈ ರೀತಿಯಾಗಿ ಯೋಚಿಸಿದನು - "ನನ್ನ ರಾಜನು ಕಳ್ಳನಾಗಿರುವನು. ನಾನು ಈ ಪಟ್ಟಣದಲ್ಲಿ ಕಾವಲುಗಾರಿಕೆ ಮಾಡುತ್ತಿದ್ದೇನೆ. ಈ ಕೆಲಸ ಒಳ್ಳೆಯದಲ್ಲ" ಎಂದು ನನಗೆ ಹೆದರಿ ನಾಡನ್ನು ತ್ಯಜಿಸಿ ಬಂದು ನಿಮ್ಮ ಸೇವಕನಾದನು. ನಾನು ಇವನನ್ನು ನಾನಾಳುವ ನಾಡಿನ ಎಂಟೂ ದಿಕ್ಕುಗಳಲ್ಲಿರುವ ಗ್ರಾಮ-ನಗರ-ಖೇಡ-ಖರ್ವಡ-ಮಡಂಬ-ಪಟ್ಟಣ-ದ್ರೋಣಾಮುಖ-ಎಂಬ ಭೂಭಾಗಗಳಲ್ಲಿ ವಿಚಾರಿಸಿಯೂ ಕಾಣಲು ಸಿಗಲಿಲ್ಲ. ಅನ್ಯರ ರಾಜ್ಯಗಳಲ್ಲಿ ವಿಚಾರಿಸಿಯೂ ಕಾಣಸಿಗಲಿಲ್ಲ. ಆದುದರಿಂದ ಇಲ್ಲಿ ಹುಡುಕಿಸುವುದಕ್ಕಾಗಿ ಇಲ್ಲಿಗೆ ಚಾರಕರನ್ನು ಕಳುಹಿಸಿದೆನು. ಅವರು ಹುಡುಕಿ ಕಂಡು ಬಂದು ನನಗೆ ಹೀಗೆ ಹೇಳಿದರು - "ದೇವಾ, ಮಿಥಿಳೆ ಎಂಬ ಪಟ್ಟಣವಿದೆ. ಅದನ್ನು ವಾಮರಥನೆಂಬ ರಾಜನು ಆಳುತ್ತಿದ್ದಾನೆ.

ಮಿಥಿಳೆಯೆಂಬುದು ಪೊಬಲದನಾಳ್ವೊಂ ವಾಮರಥನೆಂಬರಸಂಗೆ ಯಮದಂಡಂ ಪೋಗಿಯಾಳಾಗಿ ಪೊಬಲ ಕಾಪಂಬೆತ್ತು ತಳಾಱನಾಗಿ ಸುಬದೊಳಿರ್ದೊನೆಂದು ಪೇಬೊಡಾ ಮಾತಂ ಕೇಳ್ದು ಪುರುಷೋತ್ತಮನೆಂಬ ಮಂತ್ರಿಗೆ ಮಿಥಿಳೆಯೆಂಬ ಪೊಬಲ್ಗಾನಾರುಮಱೆಯದಂತಿರೆ ಪೋಗಿ ಯಮದಂಡನೊಡಗೊಂಡು ಬಂದಪೆನೆಂದು ಪೇಬ್ದು ವಜ್ರಸೇನನೆಂಬ ಪೆರ್ಗಡೆಯಂ ಕರೆಯಿಸಿ ಆನೊಂದು ಮನೆವಾಬಿಗೆ ಪೋಗಿ ಬಂದಪೆನೆನ್ನ ಬರ್ಪನ್ನೆಗಂ ರಾಜ್ಯಮಂ ಪ್ರತಿಪಾಲಿಸುತ್ತಿರೆಂದು ಕಲ್ಪಿಸಿ ಸಮಸ್ತರಾಜ್ಯಭಾರಮಂ ಸಮರ್ಪಿಸಿ ಅರ್ಧರಾತ್ರದಾಗಳ್ ಕವ್ಪಡಮಂ ಪಱೆದುಟ್ಟು ಬಟೆಕಾರು ಮಱೆಯಲೀಯದೊರ್ವನೆ ಪೊಱಮಟ್ಟು ಬಂದೀ ಪೊಬಲಂ ಪೊಕ್ಕು ಪ್ರತಿಜ್ಞೆ ಕಾರಣಮಾಗಿ ಕಸವರಮಂ ಕಳ್ದೀತನಂ ಕೊಲಿಸುವಂತು ಮಾಡಿದೆನಿದು ಕಳ್ದುದರ್ಕೆ ಕಾರಣಮೀತನುಮೆನಗೀ ಪಾಂಗಿನೊಳ್ ಮಿತ್ರನೆಂದು ಪೇಬ್ದು ಮತ್ತಮಿಂತೆಂದಂ ನಿಮ್ಮ ದೇವತಾಧಿಷ್ಠಿತಮಪ್ಪ ಸರ್ವರುಜಾಪಹಾರಮೆಂಬ ಹಾರಮಧಿಗಮಸಮ್ಯಗ್‌ದೃಷ್ಟಿಯೆನಪ್ಪುದಱಿಂದೆನ್ನ ಕೆಯ್ಗೆವಂದುದುಬಿದ ಮಿಥ್ಯಾದೃಷ್ಟಿಗಳ ಕೆಯ್ಗೆವಾರದೆಂದೊಡರಸಂ ತನ್ನ ಸಭೆಯೊಳಿರ್ದ ನೆರವಿಗೆಲ್ಲಂ ಹಾರಂ ಬಂದ ತೞನನಿಂತೆಂದು ವೇಬಲ್ ತೊಡಗಿದೊಂ ಧನ್ವಂತರಿ ವಿಶ್ವಾನುಲೋಮರ್ಕಳ ಕಥೆಯಂ ಮೊದಲಿಂ ತಗುಳ್ದು ಪೇಬುತ್ತುಮಿಂತೆಂದನೆಮ್ಮ ಸಂತತಿಯ ಪದ್ಮರಥನೆಂಬರಸನೊಂದು ದಿವಸಂ ವಾಸುಪೂಜ್ಯತೀರ್ಥಕರ ಪರಮದೇವರಂ ಬಂದಿಸಲ್ ಪೋಗುತ್ತಿರ್ದೊನನೆಡೆಯೊಳ್ ಅಚ್ಯುತೇಂದ್ರನುಂ

ಯಮದಂಡನು ಅಲ್ಲಿಗೆ ಹೋಗಿ ಅವನ ಸೇವಕನಾಗಿ ಪಟ್ಟಣದ ರಕ್ಷಣೆಯ ಕೆಲಸವನ್ನು ಪಡೆದು ತಳವಾರನಾಗಿ ಸುಖದಿಂದ ಇದ್ದಾನೆ"- ಎಂದು ಚಾರಕರು ಹೇಳಲು, ಆ ಮಾತನ್ನು ನಾನು ಕೇಳಿ 'ಮಿಥಿಳೆಯೆಂಬ ಪಟ್ಟಣಕ್ಕೆ ನಾನು ಯಾರೊಬ್ಬರೂ ತಿಳಿಯದ ಹಾಗೆ ಹೋಗಿ ಯಮದಂಡನನ್ನು ಕೂಡಿಕೊಂಡು ಬರುತ್ತೇನೆ' ಎಂದು ಪುರುಷೋತ್ತಮನೆಂಬ ಮಂತ್ರಿಗೆ ಹೇಳಿದೆನು. ಆ ಮೇಲೆ ವಜ್ರಸೇನನೆಂಬ ಹೆಗ್ಗಡೆಯನ್ನು ಕರೆಯಿಸಿ, 'ನಾನು ಒಂದು ಗೃಹಕೃತ್ಯದ ಸಂಬಂಧದಲ್ಲಿ ಹೋಗಿ ಬರುತ್ತೇನೆ. ನಾನು ಬರುವವರೆಗೆ ರಾಜ್ಯಪಾಲನೆ ಮಾಡುತ್ತಿರು' ಎಂದು ಹೇಳಿ ಎಲ್ಲ ರಾಜ್ಯಭಾರವನ್ನೂ ಅವನಿಗೆ ಒಪ್ಪಿಸಿಕೊಟ್ಟು ನಡುವಿರುಳಿನಲ್ಲಿ ಬಟ್ಟೆಯನ್ನು ಹರಿದು ಉಟ್ಟುಕೊಂಡು, ಆಮೇಲೆ ಯಾರೊಬ್ಬರೂ ತಿಳಿಯದ ರೀತಿಯಲ್ಲಿ ಒಬ್ಬನೆ ಹೊರಟುಬಂದು, ಈ ಪಟ್ಟಣವನ್ನು ಪ್ರವೇಶಿಸಿದೆನು. ಇಲ್ಲಿ ನನ್ನ ಪ್ರತಿಜ್ಞೆಯೇ ಕಾರಣವಾಗಿ ದ್ರವ್ಯವನ್ನು ಕಳವು ಮಾಡಿ, ಈ ಯಮದಂಡನನ್ನು ಕೊಲ್ಲಿಸುವ ಹಾಗೆ ಮಾಡಿದ್ದೇನೆ. ಇದೇ ನಾನು ಕಳ್ಳತನ ಮಾಡಲು ಕಾರಣ. ಈತನು ನನಗೆ ಈ ರೀತಿಯಲ್ಲಿ ಮಿತ್ರನಾಗಿದ್ದಾನೆ". ವಿದ್ಯುಚ್ಚೋರನು ಹೀಗೆ ಹೇಳಿ, ಮತ್ತೆ ಹೀಗೆಂದನು - "ದೇವಶಕ್ತಿಯುಳ್ಳ ನಿಮ್ಮ ಸರ್ವರುಜಾಪಹಾರ ಎಂಬ ಮಾಲೆ ಸಮ್ಯಗ್‌ದೃಷ್ಟಿಯುಳ್ಳವನಾದ ಕಾರಣದಿಂದ ನನ್ನ ಕೈಗೆ ಬಂದಿದೆ. ಇನ್ನುಳಿದ ಮಿಥ್ಯಾದೃಷ್ಟಿಯುಳ್ಳವರ ಕೈಗೆ ಇದು ಬರಲಿಕ್ಕಿಲ್ಲ" - ಎಂದಾಗ ರಾಜನು ತನ್ನ ಕೈಗೆ ಹಾರ ಬಂದ ಸಂಗತಿಯನ್ನು ತನ್ನ ಸಭೆಯ ಜನ ಸಮೂಹಕ್ಕೆಲ್ಲ ಹೀಗೆ ಹೇಳತೊಡಗಿದನು - ವಾಮರಥ ರಾಜನು ತನ್ನ ಕಥೆಯನ್ನು ಧನ್ವಂತರಿ ವಿಶ್ವಾನುಲೋಮ ಎಂಬ ಪೂರ್ವಿಕರಿಂದಲೇ ಪ್ರಾರಂಭಿಸಿ ಹೇಳುತ್ತ ಮತ್ತೆ ಹೀಗೆಂದನು - ನಮ್ಮ ವಂಶದ ಪದ್ಮರಥನೆಂಬ ರಾಜನು ಒಂದು ದಿವಸ ವಾಸುಪೂಜ್ಯ ತೀರ್ಥಂಕರ ದೇವರನ್ನು ವಂದಿಸುವುದಕ್ಕಾಗಿ ಹೋಗುತ್ತಿದ್ದನು. ನಡುವಿನಲ್ಲಿ ಅವನನ್ನು ಅಚ್ಯುತೇಂದ್ರನೂ

ವಿಶ್ವಾನುಲೋವುಚರನಪ್ಪ ವಾಹನದೇವನುಮಿಂತಿರ್ವರುಂ ಕಂಡು ಅಚ್ಯುತೇಂಜ್ರ ವಾಹನದೇವನನಿಂತೆಂದನೀತಂ ಅಧರ್ಮಿಯಿಂದೆ ಧರ್ಮಮಂ ಕೆಯ್ಕೊಂಡು ವಾಸುಪೂಜ್ಯ ತೀರ್ಥಕರ ಪರಮದೇವರಂ ಬಂದಿಸಿದಲ್ಲದುಣ್ಣೆನೇಂದಾಗ್ರಹಂ ಗೊಂಡು ಚಂಪಾನಗರಕ್ಕೆವೋದಪೊನೀತನಂ ಪೋಗಲೀಯದೆ ಮಗುಚ್ಚಲಾಪ್ಪೊಡೆ ಮಗುಚ್ಚಿಂದು ನುಡಿದೊಡೆ ವಾಹನದೇವನುಂ ತನ್ನಾರ್ಪ ತೆಱದಿಂದೆಲ್ಲಮೆನಿತಾನುಂ ತೆಱದುಪಸರ್ಗಂಗೆಯ್ದು ಮಗುಚ್ಚಲಾಜದೆ ಬೇಸತ್ತುಟಿದೊಡೆ ಅಚ್ಯುತೇಂದ್ರಂ ಪದ್ಮರಥಂಗೊಸೆದು ನತ್ನ ತೊಟ್ಟ ಸರ್ವರುಜಾಪಹಾರ ಮೆಂಬ ಹಾರಮನಾತನ ಕೊರಳೊಲ್ ತಾನೆ ಕಟ್ಟಿ ಪೊಗಟ್ಟು ಪೂಜಿಸಿ ಪೋದೊನಿಂತೀ ಹಾಂಗಿನೊಳಿಮಗೀ ಹಾರಂ ಸಂತತಿಯಿಂ ಬಂದುದೆಂದು ಪೇಟ್ಟೆರ್ದ ತದನಂತರಂ ಇರ್ವರ್ ಪರಿವೊಟ್ಟೆಯವರೋಲೆಯಂ ಕೊಂಡು ಬಂದರಸನ ಮನೆಯ ಬಾಗಿಲೊಳ್ ನಿಂದು ಪಡಿಯಱಂಗೆ ಪೇಱಿಸ್ಪೊಡೆ ಪಡಿಯಱಂ ತಮ್ಮರಸಂಗೆ ವೇಱಿಸ್ದೊಡರಸನನುಮತದಿಂದರಮನೆಯಂ ಪೊಕ್ಕಾಸ್ಥಾನಮಂಟಪ ದೊಳಿರ್ದ ವಿದ್ಯುಚ್ಚೋರನಂ ಕಂಡು ಪೊಡೆವಟ್ಟಾತನ ಮುಂದೋಲೇಯನಿಕ್ಕಿದಾಗಳ್ ಸಂಧಿವಿಗ್ರಹಿ ಓಲೆಯಂ ಕೊಂದರಸನ ಮುಂದಿಂತೆಂದು ಬಾಚಿಸಿದಂ ವಿದ್ಯುಚ್ಚೋರ ಪರಮಸ್ವಾಮಿಗೆ ಮಂತ್ರಿ ಪುರುಷೋತ್ತಮನುಂ ಪೆರ್ಗಡೆ ವಜ್ರಸೇನನುಂ ಸಾಷ್ಟಾಂಗವೆಱಗಿ ಪೊಡೆವಟ್ಟು ಕಾರ್ಯಮಂ ಬನ್ನವಿಪ್ಪರ್ ತಾಮುಂ ಪಲವು ದಿವಸಂ ಪೋಗಿರ್ದರ್

ವಿಶ್ವವನ್ನು ಸಹಜ ರೀತಿಯಲ್ಲಿ ಸಂಚರಿಸತಕ್ಕ ವಾಹನದೇವನೂ ಹೀಗೆ ಇಬ್ಬರೂ ಕಂಡರು. ಅಚ್ಚುತೇಂದ್ರನು ವಾಹನದೇವನೊಡನೆ "ಈತನು ಅಧರ್ಮಿಯಿಂದ ಧರ್ಮವನ್ನು ಸ್ವೀಕರಿಸಿ ವಾಸುಪೂಜ್ಯ ತೀರ್ಥಂಕರ ಪರಮದೇವರನ್ನು ವಂದಿಸಿದಲ್ಲದೆ ಊಟ ಮಾಡುವುದಿಲ್ಲವೆಂದು ಹಟತೊಟ್ಟುಕೊಂಡು ಚಂಪಾನಗರಕ್ಕೆ ಹೋಗುತ್ತಿದ್ದಾನೆ. ಇವನನ್ನು ಹೋಗಲಿಕ್ಕೆ ಬಿಡದೆ ಹಿಂದಿರುಗಿಸಲು ನೀನು ಸಮರ್ಥನಾದರೆ ಹಿಂದಿರುಗಿಸು" ಎಂದು ಹೇಳಿದನು. ವಾಹನದೇವನು ತನ್ನಿಂದ ಸಾಧ್ಯವಾಗುವಷ್ಟು ರೀತಿಯಲ್ಲಿ ಎಲ್ಲ ಬಗೆಯಲ್ಲಿ ಎಷ್ಟೆಷ್ಟೋ ವಿಧದಲ್ಲಿ ಉಪಸರ್ಗವನ್ನು ಉಂಟುಮಾಡಿ ಹಿಂದಿರುಗಿಸಲಾರದೆ ಬೇಸರಗೊಂಡವನಾಗಿ ಬಿಟ್ಟು ಬಿಟ್ಟನು. ಅಚ್ಯುತೇಂದ್ರನು ಪದ್ಮರಥನಿಗೆ ಮೆಚ್ಚಿ ತಾನು ಧರಿಸಿದ್ದ ಸರ್ವರುಜಾಪಹಾರವೆಂಬ ಹಾರವನ್ನು ಅವನ ಕೊರಳಿಗೆ ತಾನೇ ಕಟ್ಟಿ, ಹೊಗಳಿ, ಪೂಜಿಸಿ ತೆರಳಿದನು. ಈ ರೀತಿಯಲ್ಲಿ ಈ ಮಾಲೆ ನನಗೆ ನಮ್ಮ ವಂಶಾನುಗತವಾಗಿ ಬಂದಿದೆ ಎಂದು ವಾಮರಥನು ಹೇಳಿದನು. ಅಮೇಲೆ, ಒಂಟೆಯನ್ನೇರಿಕೊಂಡು ಬರುವ ದೂತರಿಬ್ಬರು ಪತ್ರವನ್ನು ತೆಗೆದುಕೊಂಡು ಬಂದು ಅರಸನ ಮನೆಯ ಬಾಗಿಲಲ್ಲಿ ನಿಂದು ತಮಗೆ ರಾಜನನ್ನು ಕಾಣಬೇಕಾಗಿದೆಯೆಂದು ದ್ವಾರಪಾಲಕನಿಗೆ ತಿಳಿಸಿದರು. ದ್ವಾರಪಾಲನು ಇದನ್ನು ರಾಜನಿಗೆ ಹೇಳಲು, ರಾಜನು ಅನುಮತಿಯಿತ್ತನು. ಅದರಂತೆ ದೂತರು ಅರಮನೆಯನ್ನು ಹೊಕ್ಕು ಆಸ್ಥಾನಮಂಟಪದಲ್ಲಿದ್ದ ವಿದ್ಯುಚ್ಚೋರನನ್ನು ಕಂಡು ಸಾಷ್ಟಾಂಗವಂದನೆ ಮಾಡಿ, ಆತನ ಮುಂದೆ ಪತ್ರವನ್ನು ಇಟ್ಟರು. ಆಗ ರಾಜನ ಅಧಿಕಾರಿ (ಮಂತ್ರಿ)ಯೊಬ್ಬನು ಪತ್ರವನ್ನು ತೆಗೆದುಕೊಂಡು ರಾಜನ ಮುಂದೆ ಈ ರೀತಿಯಾಗಿ ಓದಿದನು - "ವಿದ್ಯುಚ್ಚೋರ ಮಹಾರಾಜರಿಗೆ ಮಂತ್ರಿಯಾದ ಪುರುಷೋತ್ತಮನೂ ಹೆಗ್ಗಡೆಯಾದ ವಜ್ರಸೇನನೂ ಸಾಷ್ಟಾಂಗ ವಂದನೆ ಮಾಡಿ ಕಾರ್ಯವನ್ನು ವಿಜ್ಞಾಪಿಸುವರು - ತಾವು ಹೋಗಿ ಹಲವು ದಿವಸವಾಯಿತು. ಹಿಂದಿನ ಗೃಹಕೃತ್ಯವನ್ನು ಮರೆತಿದ್ದೀರಿ. ತಾವು ಇಲ್ಲದೆ,

ಪೊಱತಣ ಮನೆವಾಟಿಸಿಯಂ ಮುಱಿದಿರ್ದರ್ ತಾಮಿಲ್ಲದೆ ರಾಜ್ಯಮಂ ಪ್ರತಿಪಾಲಿಸುವೊರಾರುಮಿಲ್ಲೀಯೋಲೆಯಂ ಕಾಣಲೊಡಂ ತದೆಯದೆ ಪೊಱಮಟ್ಟು ಬೇಗಂ ಬರ್ಕೆಂದು ಬಾಚಸಿದುದಂ ವಾಮರಥಂ ಕೇಳ್ದು ಮುನ್ನೀತನ ಪೇಟ್ದುದುಮೋಲೆಯ ಮಾತುಮೊಂದಾದುದೆಂದು ಸಂದೇಹಮಿಲ್ಲದಾಗಳ್ ನಂಬಿ ಈತಂ ಮಂಡಳಿಕನೆಂದಱಿದು ತನ್ನ ಸಿಂಹಾಸನದೊಳೋರಂತಪ್ಪಾಸನ ಮನಿಕ್ಕಲ್ವೇಟ್ಟಿರಿಸಿ ಇಂತೆಂದನೆನ್ನ ತಂಗೆಯ ಮಗನಯ್ ಸೋದರಳಿಯನಯ್ ನಿನಗೆನ್ನ ಮಕ್ಕಳಂ ಶ್ರೀಮತಿ ವಸುಮತಿ ಗುಣಮತಿ ಸುಲೋಚನೆ ಸುಪ್ರಭೆ ಸುಕಾಂತೆ ಸುಶೀಲೆ ಮನೋಹರಿಯೆಂಬೆಣ್ಬರುಂ ಕನ್ನೆಯರತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿ ಹಾವ ಭಾವ ವಿಲಾಸ ವಿಭ್ರಮಂಗಳನೊಡೆಯರ್ ನವಯೌವನೆಯರಕ್ಷರಾಲೇಖ್ಯ ಗಣಿತ ಗಾಂಧರ್ವ ನೃತ್ಯ ಚಿತ್ರಕರ್ಮ ಪತ್ರಚ್ಛೇದ್ಯಮೆಂದಿವು ಮೊದಲಾಗೊಡೆಯ ಚತುಷ್ಷಷ್ಟಿ ಕಲೆಗಳೊಳಾದವಱಾನುಂ ಕುಶಲೆಯರ್ ಪರಮಂಡಲಿಕರ್ ಪಲರ್ ಪಾಗುಡಂಗಳುಮೋಲೆಗಳುಂ ಪೆರ್ಗದೆಗಳುಮನನವರತಂ ಕೂಸುಗಳಂ ಬೇಡಿಯಟ್ಟುತ್ತಿರ್ಪರವರಾರುಮಂ ನಾಂ ಮೆಚ್ಚದೆ ಕುಡದಿನ್ನೆಗಮಿಂತಿವರ್ಗಳಂ ತಾಂಗಿರ್ದೆನೀ ಕನ್ಯಾರತ್ನಂಗಳ್ಗೆ ನೀನೆ ಯೋಗ್ಯನಯ್ ನಿನಗೆಣ್ಬರುಮಂ ಕೊಟ್ಟೆನ್ ಮದುವೆನಿಲ್ದೆಂದೊಡಾತನಿಂತೆಂದನಾನೊರ್ವಳ್ಗೆ ಬೇಂಟುಂಗೊಂಡಿರ್ದೆನಿವರಂ ಕೊಂದೇವೆನೆಂದೊಡರಸನಾರ್ಗೆ ಬೇಂಟುಂಗೊಂಡಿರ್ದೆಯೆಂದು ಬೆಸಗೊಂದೊಡೆ ಮುಕ್ತಿಶ್ರೀಯೆಂಬೊಳ್ ಪೆಂಡತಿಗೆ ಬೇಂಟುಂ ಗೊಂಡಿರ್ದೆನಾಕೆಯಂ ಮದುವೆನಿಲಲ್ವೇಟ್ಕುಮೆಂದು ಪರಿಚ್ಛೇದಿಸಿ ನುಡಿದು

ರಾಜ್ಯಪರಿಪಾಲನೆ ಮಾಡುವವರು ಯಾರೂ ಇಲ್ಲ. ಈ ಪತ್ರವನ್ನು ಕಂಡ ಕೂಡಲೇ ತಡವಿಲ್ಲದೆ ಹೊರಟು ಬೇಗನೆ ಬರಬೇಕು". ಹೀಗೆ ಓದಿದುದನ್ನು ವಾಮರಥನು ಕೇಳಿ 'ಮೊದಲು ಈತನು ಹೇಳಿದುದೂ ಪತ್ರದ ಮಾತೂ ಒಂದೇ ಆಯಿತು' ಎಂದು ಸಂಶಯವಿಲ್ಲದೆ ಆಗ ವಿಶ್ವಾಸಪಟ್ಟನು. ಈತನು ತನ್ನ ಸಾಮಂತರಾಜನು ಎಂದು ತಿಳಿದು ಸಿಂಹಾಸನದಂತೆಯೇ ಇರತಕ್ಕ ಪೀಠವನ್ನು ಇಡಲು ಹೇಳಿ ಇರಿಸಿ ಹೀಗೆಂದನು - "ನೀನು ನನ್ನ ತಂಗಿಯ ಮಗನಯ್ಯಾ, ಸೋದರಳಿಯನಯ್ಯಾ. ನಿನಗೆ ನನ್ನ ಹೆಣ್ಣುಮಕ್ಕಳನ್ನು ಕೊಡುತ್ತೇನೆ. ಈ ಕನ್ಯೆಯರು ಅತ್ಯಂತ ರೂಪ-ಲಾವಣ್ಯ -ಸೌಭಾಗ್ಯ-ಕಾಂತಿ-ಹಾವ-ಭಾವ-ವಿಲಾಸ- ವಿಭ್ರಮಗಳಿಂದ ಕೂಡಿದವರು. ಶ್ರೀಮತಿ, ವಸುಮತಿ, ಗುಣಮತಿ, ಸುಲೋಚನೆ, ಸುಪ್ರಭೆ, ಸುಕಾಂತೆ, ಸುಶೀಳೆ, ಮನೋಹರಿ - ಎಂದು ಹೆಸರುಳ್ಳ ಎಂಟು ಮಂದಿ ಕನ್ಯೆಯರಿವರು. ಹೊಸ ಜವ್ವನೆಯರು. ಬರಹ, ಚಿತ್ರವಿದ್ಯೆ, ಗಣಿತ, ಗಾನ, ನೃತ್ಯ, ಚಿತ್ರಕಲೆ, ಭೂರ್ಜಾದಿ ಪತ್ರಗಳನ್ನು ಒಂದೇ ರೀತಿ ಕತ್ತರಿಸುವುದು, ಎಂದಿವೇ ಮೊದಲಾಗಿ ಉಳ್ಳ ಅರುವತ್ತನಾಲ್ಕು ಕಲೆಗಳಲ್ಲಿ ಅತ್ಯಂತ ಪ್ರವೀಣೆಯರಾಗಿದ್ದಾರೆ. ಬೇರೆ ರಾಜರುಗಳಲ್ಲಿ ಹಲವರು ಉಡುಗೊರೆ- ಕಾಣಿಕೆಗಳನ್ನೂ ಪತ್ರಗಳನ್ನೂ ಅಧಿಕಾರಿಗಳನ್ನೂ ಕಳುಹಿಸಿ ಕನ್ಯೆಯರನ್ನು ಕೇಳುತ್ತಿದ್ದಾರೆ. ಕನ್ಯೆಯರನ್ನು ಕೊಡದೆ ಇದುವರೆಗೂ ಇವರನ್ನು ಸಲಹಿಕೊಂಡಿದ್ದೆನು. ಈ ಕನ್ಯಾರತ್ನಗಳಿಗೆ ನೀನೇ ಯೋಗ್ಯನಯ್ಯಾ. ಈ ಎಂಟು ಮಂದಿಯನ್ನೂ ನಿನಗೆ ಕೊಡುತ್ತೇನೆ, ಮದುವೆಯಾಗು" ಎಂದು ಹೇಳಿದನು. ಆಗ ಅವನು ಹೀಗೆಂದನು -"ನಾನು ಒಬ್ಬಳ ಮೇಲೆ ಪ್ರೀತಿಪಟ್ಟಿದ್ದೇನೆ. ಇವರನ್ನು ಸ್ವೀಕರಿಸಿ ಏನು ಮಾಡುವೆನು?" ಹೀಗೆಂದಾಗ ರಾಜನು 'ಯಾರಿಗಾಗಿ ಪ್ರೀತಿಪಟ್ಟಿದ್ದೀ?' ಎಂದು ಕೇಳಲು, "ಮುಕ್ತಿಶ್ರೀ ಎಂಬ ಹೆಂಡತಿಯ ಮೇಲೆ ಪ್ರೀತಿಪಟ್ಟಿದ್ದೇನೆ. ಅವಳನ್ನು ಮದುವೆಯಾಗಬೇಕು"

ಮತ್ತಮಿಂತೆಂದನೆನ್ನ ಕೆಳೆಯನನೆನಗೊಪ್ಪಿಸಲ್ವೇಡುಮೆಂದೊದರಸನುಮೊಪ್ಪಿಸಿದೆನೆಂದೊಡೆ ಅರಸನಂ ಬೀಳ್ಕೊಂಡು ಯಮದಂಡ ಪುರಸ್ಸರಮಿರ್ವರುಮೊಟ್ಟೆಯನೇಱಿ ತುರಿಪದಿಂ ಕತಿಪಯ ದಿವಸಂಗಳಿಂ ವೇಣಾತಟಮನೆಯ್ದಿ ಪೊಱವೊಱಲೊಳಿರ್ದು ಪೇಟ್ಟಟ್ಟಯಷ್ಟಶೋಭೆಯಂ ಮಾಡಿಸಿ ಮಂತ್ರಿಮಹತ್ತರ ಪರಿವಾರ ಸಾಮಂತ ಮಹಾಸಾಮಂತರುಂ ಪೆಂಡವಾಸದ ಸೂಳೆಯರುಂ ಪೊಬಲ ಜನಮೆಲ್ಲಮಿದಿರಂ ಬಂದು ಕಂಡು ಪೊಡೆವಟ್ಟು ಸೇಸೆಗಳನಿಕ್ಕಿವ ಬಟಿಕೆ ಪಟ್ಟವರ್ಧನಮನಿರ್ವರುಮೇಱಿ ಬೆಳ್ಗೊಡೆ ಮೊದಲಾಗೊಡೆಯ ರಾಜಚಿಹ್ನಂಗಳ್ ಮುಂದೆ ಪರಿಯೆ ಪಂಚಮಹಾಶಬ್ದಂಗಳುಂ ಬದ್ಧವಣದ ಪಱೆಗಳುಂ ಬಾಜಿಸೆ ಅರಮನೆಯುಂ ಪೊಕ್ಕು ಮಱುದಿವಸಮಾಸ್ಥಾನಮಂಡಪದೊಳ್ ಸಿಂಹಾಸನಮಸ್ತಕಸ್ಥನಾಗಿ ಸಾಮಂತ ಮಹಾಸಾಮಂತರ್ಕಳಂ ಮಂತ್ರಿಮಹತ್ತರ ಪುರೋಹಿತ ಪರಿವಾರದವರ್ಗಳಮರಸಿಯರ್ಕಳಂ ಬಟೆಯಟ್ಟಿ ಬರಿಸಿ ಇಂತೆಂದು ನುದಿದನಾನೀ ಸಂಸಾರದೊಳಪ್ಪ ಭೋಗೋಪಭೋಗಂಗಳ್ಗೆ ಪೇಸಿ ವಿರಕ್ತನಾಗಿ ತಪಂಬಡಲ್ ಬಗೆದಪ್ಪೆನೆಂದೊಡನಿಬರುಂ ನೆರೆದಿಂತೆಂದರಿನ್ನುಮಾವುದು ಕಾಲಂ ತಪಂಬದಲಿನ್ನುಂ ನೀ ಕೂಸನಯ್ ನವಯೌವನನಯ್ ಕೆಲಕಾಲಮರಸುಗೆಯ್ದು ಪಶ್ಚಾತ್ಕಾಲದೊಳ್ ತಪಂಬದಲಕ್ಕುಮೆಂದೊದರಸನಿಂತೆಂತನೆಂತಱೆಯಲಕ್ಕು ಮನ್ನೆಗಂ ಸಾವರೊ ಬಾೞ್ವರೊ ಎಂದೀ ಪ್ರಸ್ತುತಂಗಳನವರ್ಗ್ಗಾದಿ ಪೇೞಲ್ ತೊಡಂಗಿದಂ

ಎಂದು ನಿಶ್ಚಯವಾಗಿ ನುಡಿದನು. ಅನಂತರ- "ನನ್ನ ಗೆಳೆಯನನ್ನು ನನಗೆ ಒಪ್ಪಿಸಬೇಕು" ಎಂದು ಹೇಳಲು, ರಾಜನು, 'ಒಪ್ಪಿಸಿದ್ದೇನೆ' ಎಂದನು. ಅದರಂತೆ, ರಾಜನನ್ನು ಬಿಟ್ಟು ಹೊರಟು, ಯಮದಂಡನ ಸಮೇತವಾಗಿ ಇಬ್ಬರೂ ಒಂಟೆಯ ಮೇಲೆ ಕುಳಿತರು. ತ್ವರೆಯಾಗಿ ಹೋಗುತ್ತ ಕೆಲವು ದಿವಸಗಳಲ್ಲಿ ವೇಣಾತಟಕ್ಕೆ ಬಂದು, ಆ ಪಟ್ಟಣದ ಹೊರಗಿದ್ದು ಹೇಳಿಕಳುಹಿಸಿ, ಕಲಶ, ಕನ್ನಡಿ, ಬಾವುಟ, ತೋರಣ, ಧೂಪ, ದೀಪ, ಭೇರಿ, ಬೀಸಣಿಗೆ - ಎಂಬೀ ಎಂಟು ಬಗೆಯ ಅಲಂಕಾರಗಳನ್ನು ಮಾಡಿಸಿದನು. ಮಂತ್ರಿ, ಮೇಲಧಿಕಾರಿ, ಪರಿವಾರ, ಸಾಮಂತ, ಮಹಾಸಾಮಂತರೂ ರಾಣೀವಾಸದ ಸ್ತ್ರೀಯರೂ ಪಟ್ಟಣಿಗರೆಲ್ಲರೂ ಎದುರಿಗೆ ಬಂದು ವಂದಿಸಿ ಮಂತ್ರಾಕ್ಷತೆ ಹಾಕಿದನಂತರ ವಿದ್ಯುಚ್ಚೋರ-ಯಮದಂಡ ಇಬ್ಬರೂ ಪಟ್ಟದಾನೆಯನ್ನೇರಿದರು. ಮುಂದುಗಡೆಯಲ್ಲಿ ಶ್ವೇತಚ್ಛತ್ರ ಮುಂತಾದ ಅರಸುತನದ ಚಿಹ್ನೆಗಳು ಹೋಗುತ್ತಿದ್ದವು. ಪಂಚಮಹಾಶಬ್ದಗಳೂ ಮಂಗಳವಾದ್ಯಗಳೂ ಶಬ್ದಮಾಡುತ್ತಿರಲು ಅವರು ಅರಮನೆಯನ್ನು ಪ್ರವೇಶಿಸಿದರು. ಮಾರನೆಯ ದಿನ ವಿದ್ಯುಚ್ಚೋರನು ಆಸ್ಥಾನಮಂಟಪದಲ್ಲಿ ಸಿಂಹಾಸನದ ಮೇಲೆ ಕುಳಿತು ಸಾಮಂತರನ್ನೂ ಮಹಾಸಾಮಂತರನ್ನೂ ಮಂತ್ರಿ, ಅಧಿಕಾರಿ, ಪುರೋಹಿತ, ಪರಿವಾರದವರನ್ನೂ ಅರಸಿಯರನ್ನೂ ಕರೆ ಕಳುಹಿಸಿ ಬರಮಾಡಿ ಹೀಗೆ ಹೇಳಿದನು - "ನಾನು ಈ ಸಂಸಾರದಲ್ಲಿ ಉಂಟಾಗುವ ಸುಖಗಳಿಗೆಲ್ಲ ಅಸಹ್ಯಪಟ್ಟು ವೈರಾಗ್ಯವನ್ನು ತಾಳಿ ತಪಸ್ಸನ್ನು ಸ್ವೀಕರಿಸಬೇಕೆಂದು ಭಾವಿಸುತ್ತಿದ್ದೇನೆ" ಹೀಗೆನ್ನಲು ಅವರೆಲ್ಲರೂ ಒಟ್ಟು ಸೇರಿ ಹೀಗೆಂದರು - "ತಪಸ್ಸು ಮಾಡುವುದಕ್ಕೆ ಇನ್ನೂ ಕಾಲ ಯಾವುದು ? ನೀನಿನ್ನೂ ಚಿಕ್ಕವನಯ್ಯಾ ! ಈಗ ತಾನೇ ಯುವಕನಾಗಿದ್ದೀಯಷ್ಟೆ. ಕೆಲವು ಕಾಲದವರೆಗೆ ಅರಸುತನವನ್ನು ಮಾಡಿ, ಆಮೇಲೆ ತಪಸ್ಸನ್ನು ಸ್ವೀಕರಿಸಬಹುದು." ಆಗ ರಾಜನು ಹೀಗೆ ಹೇಳಿದನು. - "ಆ ವೇಳೆಗೆ ಸಾಯುವರೊ ಬದುಕಿರುವರೋ ತಿಳಿಯಲು ಹೇಗೆ ಸಾಧ್ಯ?" ಎಂದು ಈ ರೀತಿ ತಾತ್ಕಾಲಿಕವಾಗಿ

ಶ್ಲೋಕ ॥ ಡಿಂಡೀರಪಿಂಡಸಂಕಾಶಮಾಯುಃ ಸಂಸಾರವರ್ತಿನಾಂ
ಆಖಂಡಲ ಧನುಷ್ಕಾಂಡ ಸನ್ನಿಭಂ ರೂಪಯೌವನಂ ॥

ವೃತ್ತ ॥ ರೂಪಂ ಯೌವನಮಾಯುರಕ್ಷವಿಷಯಾ ಭೋಗೋಪಭೋಗಾ ವಪುಃ
ವೀರ್ಯಂ ಸ್ವೇಷ್ಟಸಮಾಗಮೋ ವಸುಮತಿಃ ಸೌಭಾಗ್ಯಭಾಗ್ಯೋದಯೋ
ಯೇಽನಿತ್ಯಾಃ ಸ್ಫುಟಮಾತ್ಮನಃ ಸಮುದಿತಾ ಜ್ಞಾನೇಕ್ಷಣಾಂ ಭೂಭೃತಾಂ
ಶೇಷಾ ಇತ್ಯನುಚಿಂತಯಂತು ಸುಧಿಯಃ ಸರ್ವೇಸದಾಽನಿತ್ಯತಾಂ ॥

ಯದಿ ಜಾತಿಜರಾಮರಣಂ ನ ಭವೇತ್
ಯದಿ ಚೇಷ್ಟ ವಿಯೋಗಭಯಂ ನ ಭವೇತ್
ಯದಿ ಸರ್ವಮನಿತ್ಯಮಿದಂ ನ ಭವೇತ್
ಇಹ ಜನ್ಮನಿ ಕಸ್ಯ ರತಿರ್ನಭವೇತ್ ॥

ಅದಱಿಂ ಮಾನಸರ ರೂಪುಂ ಯೌವನಮುಂ ತೇಜಮುಂ ಲಾವಣ್ಯಮುಂ ಸೌಭಾಗ್ಯಮುಂ ಆಯುಷ್ಯಮುಂ ಶ್ರೀಯುಂ ಸಂಪತ್ತುಂ ವಿಭವಮುಂ ನಲ್ಮೆಯುಂ ಎಂದಿವು ಮೊದಲಾಗೊಡೆಯವನಿತ್ಯಂಗಳ್ ಮತ್ತಂ ಮೆಯ್ಯೊಳ್ಪಿತ್ತೆಯೆಂದೊಡದುವುಂ ತಾನಿಂತುಟೆ

ಗಾಹೆ ॥ ಏದಂ ಸರೀರಮಸುಚಿಂ ಣಿಚ್ಚಂ ಕಲಿ ಕಲುಸಭಾಜಣಮಚೊಕ್ಖಂ
ಅಂತೋ ಬಾಹಿರದಿಟ್ಠಂ ಸಕ್ಕಿಬ್ಬಸ ಭರಿದಂ ತು ಅಮೇಜ್ಝಪುರಂ

ವಸಮಜ್ಜ ಮಾಂಸ ಸೇಣಿದ ಪುಪ್ಪುಸ ಕಾಲಿಜ್ಜ ಸೇಮ್ಮ ಸೀಹಾಣಂ
ಬಡಜಾಲ ಅಟ್ಠಸಕಲ (?) ಚಮ್ಮಾಣದ್ಧಂ (?) ಸರೀರಪುರಂ

ಅವರಿಗೆ ತಿಳಿಸಿ ಆಮೇಲೆ ಹೇಳಲು ತೊಡಗಿದನು - (ಸಂಸಾರದಲ್ಲಿ ಇರತಕ್ಕವರ ಆಯುಷ್ಯವು ನೊರೆಯ ಉಂಡೆಗೆ ಸಮಾನವಾಗಿರುತ್ತದೆ. ರೂಪವೂ ಯೌವನವೂ ಇಂದ್ರಧನುಸ್ಸಿನ ಕೋಲಿಗೆ ಸಮಾನವಾಗಿರುತ್ತದೆ) ರೂಪ ಯೌವನ, ಆಯುಸ್ಸು, ಇಂದ್ರಿಯಗೋಚರವಾದ ವಸ್ತುಗಳು, ಬಗೆ ಬಗೆಯ ಸುಖಿಗಳು, ಶರೀರ, ಶಕ್ತಿ, ಇಷ್ಟಜನರ ಸಹವಾಸ, ಭೂಮಿ (ರಾಜ್ಯದ ಒಡೆತನ), ಸೊಬಗು, ಸಂಪತ್ತುಗಳು ನಮಗೆ ಶಾಶ್ವತವಲ್ಲ. ಹೀಗೆಂದು ಉಳಿದ ಎಲ್ಲಾ ಬುದ್ಧಿಶಾಲಿಗಳೂ ತಮ್ಮಲ್ಲಿ ಉದಿಸಿದ ಜ್ಞಾನದ ಕಣ್ಣುಗಳಿಂದ ಇವು ಅಶಾಶ್ವತವೆಂಬುದನ್ನು ಸರಿಯಾಗಿ ಯೋಚಿಸಲಿ) ಹುಟ್ಟು, ಮುಪ್ಪು, ಸಾವುಗಳು ಉಂಟಾಗುವುದಿಲ್ಲವಾದರೆ, ಪ್ರೀತಿಯ ಜನರ ಅಗಲಿಕೆಯ ದುಃಖ ಉಂಟಾಗುವುದಿಲ್ಲವಾದರೆ, ಈ ಎಲ್ಲ ವಸ್ತುಗಳು ಅಶಾಶ್ವತವಾಗುವುದಿಲ್ಲವಾದರೆ, ಈ ಲೋಕದಲ್ಲಿ ಜನ್ಮವೆತ್ತಲು ಯಾರಿಗೆ ತಾನೇ ಒಲವಾಗದು !) ಅದುದರಿಂದ ಮನುಷ್ಯರ ರೂಪ, ಯೌವನ, ತೇಜಸ್ಸು, ಲಾವಣ್ಯ, ಸೌಭಾಗ್ಯ, ಆಯುಷ್ಯ, ಸಿರಿಸಂಪತ್ತು, ವೈಭವ, ಪ್ರೀತಿ - ಎಂದಿವೇ ಮೊದಲಾಗಿ ಉಳ್ಳವು ಶಾಶ್ವತಗಳಲ್ಲ. ಅದಲ್ಲದೆ, ಶರೀರ ಒಳ್ಳೆಯದೆ? ಎಂದು ಕೇಳಬಹುದು. ಅದು ಕೂಡ ಈ ರೀತಿಯದೇ ಆಗಿದೆ - ಈ ಶರೀರವು ಅಶುಚಿಯಾದುದು. ಯಾವಾಗಲೂ ರಾಗದ್ವೇಷಗಳಿಗೆ ಪಾತ್ರವಾದುದು, ಅಶುಭವಾದುದು - ಒಳಗೂ ಹೊರಗೂ ಚರ್ಮದಿಂದ ಮುಚ್ಚಲ್ಪಟ್ಟಿದು ಅಥವಾ ಕರುಳು ಮಾಂಸ ನರಗಳಿಂದ ಆವರಿಸಿದುದು. ಅಶುಚಿಯಾಗಿರುವ ಶುಕ್ಲಶೋಣಿತಗಳಿಂದ ತುಂಬಿದೆ. ಮೂತ್ರಮಲಾದಿಗಳ ಮನೆಯಾಗಿದೆ. ಶರೀರವೆಂಬ

ಅಟ್ಠಹಿ ಭಣ್ಣಂ ಣಾಳಿಹಿ ಬದ್ಧಂ ಕಲಿಮಲಭರಿದಂ ಕಿಮಿಕುಲಪುಣ್ಣಂ
ಮಾಂಸವಿಲಿತ್ತಂ ತಯಪಡಿಛಣ್ಣಂ ಸರೀರಪುರಂತಂ ಸಂತತಮಚೊಕ್ಖಂ

ಏದಾರಿಸೇ ಸರೀರೇ ದುಗ್ಗಂಧೇ ಕುಣಿಮಪೂತಿಏ ಯಚೊಕ್ಕೇ
ಪಡಣ ಪಡಣಯ ಸಾರೇ ರಾಗಂ ಣ ಕರೇಂತಿ ಸಪ್ಪುರಿಸಾ

ಛಾಯೇವ ಸಕದಕ್ಕಮ್ಮಂ ಅಣುಯಾದಿ ಕಾರಗಂ ಣ ಸೇಸಂ (?)
ಪಲಾಯಿದುಂ ದುಸ್ಸಕ್ಕಂ ಅಣ್ಣತ್ಥ ಜಿಣಸಾಸಣೇ (?)

ಶ್ಲೋಕ ॥ ದುರ್ಗಂಧೇ ದುರ್ಧರೇ ದುಃಖೇ ದುಃಸ್ವಭಾವೇ ಚ ನಶ್ವರೇ
ದುರ್ವಿಲೋಕೇ ವೃಥಾ ಕಾಯೇ ಕಿಂತು ಜ್ಞಾನಿ ತವಾಗ್ರಹಃ
ಆಚ್ಛೇದ್ಯೋನಂತ ಸೌಖ್ಯೋಹಂ ವೇತ್ತಾ ಪೂರ್ವೋನಿರಂಜನಃ
ಸರ್ವದುಃಖಾಕರಂ ದೇಹಂ ತ್ಯಜಾಮ್ಯೇತತ್ ಪರಿಸ್ಫುಟಂ

ವೃತ್ತ ॥ ಜಾತಿಕ್ಷಾ ಜ್ಞತತೇ ಕೃತಾಂತಕುಪಿತ ಕ್ರೂರೋರು ದುಃಶ್ವಾಪದೇ
ವ್ಯಾಧಿ ವ್ಯಾಧಭಯೇ ದುರಂತ ದುರಿತ ಸ್ಫೂರ್ಜ್ಜದವಾಗ್ನಿಚ್ಛದೇ
ನಿಸ್ತ್ರಾಣಸ್ಯ ವಿಚೇತಸೋ ದೃಢತೃಷಾ ದುಃಖಾಕುಳಸ್ಯಾಂಗಿನೋ
ಜೈನಂ ಶಾಸನಮೇಕಮೇವ ಶರಣಂ ಜನ್ಮಾಟವೀಸಂಕಟೇ

ಮನೆಯು ಕೊಬ್ಬು, ಮಜ್ಜೆ, ಮಾಂಸ, ರಕ್ತ, ಪುಪ್ಪುಸ, ಯಕೃತ್ತು, ಕಫ, ಸಿಂಬಳ, ರಕ್ತನಾಳ, ಮೂಳೆ ಇವುಗಳಿಂದ ತುಂಬಿದೆ. ಚರ್ಮದಿಂದ ಹೊದಿಸಲ್ಪಟ್ಟಿದೆ. ಯಾವಾಗಲೂ ಅಶುಚಿಯಾಗಿದೆ. ಆ ದೇಹವೆಂಬ ಮನೆ ಎಲುಬುಗಳಿಂದ ಆವರಿಸಿದೆ. ರಕ್ತನಾಳಗಳಿಂದ ಕಟ್ಟಲ್ಪಟ್ಟಿದೆ. ಕೆಟ್ಟ ಕೊಳಕುಗಳಿಂದ ತುಂಬಿದೆ. ಕ್ರಿಮಿಗಳಿಂದ ಪೂರ್ಣವಾಗಿದೆ. ಮಾಂಸದಿಂದ ಮೆತ್ತಲ್ಪಟ್ಟಿದೆ. ಚರ್ಮದ ಹೊದಿಕೆಯುಳ್ಳದು. ಯಾವಾಗಲೂ ಅಶುಚಿಯಾದುದು. ದುರ್ಗಂಧವುಳ್ಳ, ಕಶ್ಮಲ ತುಂಬಿದ, ಅಶುಚಿಯಾದ, ಸಡಿಲವಾಗಿ ಬಿದ್ದುಹೋಗತಕ್ಕ, ಸಾರವಿಲ್ಲದ ಇಂತಹ ಶರೀರದಲ್ಲಿ ಸತ್ಪುರುಷರು ಪ್ರೀತಿಯನ್ನು ಮಾಡುವುದಿಲ್ಲ. ತಾನು ಮಾಡಿದ ಕರ್ಮವು ತನ್ನ ನೆರಳಿನಂತೆ ಕರ್ತೃವನ್ನು ಅನುಸರಿಸಿಕೊಂಡು ಹೋಗುತ್ತದೆ, ಬೇರೆಯವನನ್ನಲ್ಲ. ಆದುದರಿಂದ ಜಿನಶಾಸನ ಮಾತ್ರ ಆಶ್ರಯವಲ್ಲದೆ, ಅದನ್ನು ಬಿಟ್ಟು ಬೇರೆ ಕಡೆಗೆ ಓಡಿಹೋಗುವುದು ಅತ್ಯಂತ ಅಸಾಧ್ಯ. ಎಲೌ ಜ್ಞಾನಿಯೇ, ಕೆಟ್ಟನಾತ, ತಾಳಲಾಗದ ದುಃಖ, ಕೆಟ್ಟ ಸ್ವಭಾವಗಳುಳ್ಳ, ನಾಶವುಳ್ಳ, ನೋಡಲು ಅಸಹ್ಯವಾಗುವಂಥ ಶರೀರದಲ್ಲಿ ನಿನ್ನ ಆಸಕ್ತಿ ವ್ಯರ್ಥ, ಅಲ್ಲದೆ ಬೇರೇನು? ನಾನು ಕತ್ತರಿಸಲಾಗದವನು. ಕೊನೆಯೇ ಇಲ್ಲದ ಸುಖವನ್ನುಳ್ಳವನು ; ಜ್ಞಾನಿ ; ಅನಾದಿ, ಕರ್ಮಲೇಪವಿಲ್ಲದವನು. ಎಲ್ಲಾ ದುಃಖಿಗಳಿಗೂ ಅಸರೆಯಾಗಿರುವ ಶರೀರವನ್ನು ತೊರೆಯುತ್ತೇನೆ - ಇದು ನಿಶ್ಚಯ. ಈ ಜನ್ಮವೆಂಬ ಕಾಡು -ಜಾತಿ ವೃಕ್ಷಗಳಿಂದ ಆವರಿಸಿದೆ. ಯಮನಂತೆ ಕೋಪಗೊಂಡ ಕ್ರೂರವಾದ ಹೆಚ್ಚು ದುಷ್ಟಜಂತುಗಳಿಂದ ಕೂಡಿದೆ. ರೋಗಗಳೆಂಬ ಬೇಡರ ಭಯವುಳ್ಳದು. ಅತಿಕಠಿನ ಪಾಪಗಳೆಂಬ ಉಜ್ಜ್ವಲವಾದ ಕಾಳ್ಕಿಚ್ಚಿನ ಹೊದಿಕೆಯುಳ್ಳದು. ಅಂತಹ ಕಾಡಿನ ಇಕ್ಕಟ್ಟಿನಲ್ಲಿ ಪ್ರಾಣ ಚೈತನ್ಯಗಳಿಲ್ಲದೆ ಬಲವಾದ ಆಶೆಯೆಂಬ ದುಃಖದಿಂದ ಪೀಡಿತರಾದ ದೇಹಿಗಳಿಗೆ ಜಿನಶಾಸನವೊಂದೇ ಆಶ್ರಯಸ್ಥಾನವಾಗಿದೆ. ಆದುದರಿಂದ - ಯಾವಲ್ಲಿಯವರೆಗೆ

ಅದಟೆಂ

ವೃತ್ತ ॥ ಯಾವತ್ ಸ್ವಸ್ಥಮಿದಂ ಶರೀರಮರುಜಂ ಯಾವಜ್ಜರಾ ದೂರತಃ
ಯಾವಚ್ಚೇಂದ್ರಿಯ ಶಕ್ತಿರಪ್ರತಿಹತಾ ಯಾವತ್ ಕ್ಷಯೋ ನಾಯುಷಃ
ಆತ್ಮಶ್ರೇಯಸಿ ತಾವದೇವ ವಿದುಷಾ ಕಾರ್ಯಃ ಪ್ರಯತ್ನೋ ಮಹಾನ್
ಪ್ರೋದ್ದೀಪ್ತೇ ಭವನೇ ತು ಕೂಪಜನನಂ ಪ್ರತ್ಯುದ್ಯಮಃ ಕೀದೃಶಃ

ಎಂದಿವು ಮೊದಲಾಗೊಡೆಯವನೋದಿಯವಜರ್ಧಮಂ ನೆರವಿಗೆಲ್ಲಂ ವಖ್ಯಾಣಿಸಿ ಪೇಟ್ದು ಮತ್ತಮಿಂತೆಂದಂ

ಕಂದ ॥ ಆನಾಳ್ದ ನಾಳ್ಗಳಿವರೆನ
ಗೇನಾಯ್ತೆಂದಜೆದುಮಜೆಯದುಜದಾಂ ನುಡಿದೊಂ
ದೇನಾನುಮೇವಮುಳ್ಕೊಡ
ಮಾ ನುಡಿಯಂ ಮಱೆಯಿಮೆಲ್ಲಮಿಂ ನಿಶ್ಯಲ್ಯಂ

ಗಾಹೆ ॥ ಖಮ್ಮಾಮಿ ಸವ್ವಜೀವಾಣಂ ಸವ್ವೇ ಜೀವಾ ಖಮಂತು ಮೇ
ಮೇತ್ತೀ ಮೇ ಸವ್ವಭೂದೇಸು ವೇರಂ ಮಜ್ಝಣ ಕೇಣ ಚ

ಎಂದೆಲ್ಲರುಮಂ ಕ್ಷಮೆಗೊಳಿಸಿ ನಿಶ್ಯಲ್ಯಂಗೆಯ್ದು ವಿದ್ಯುದಂಗನೆಂಬ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ರಾಜ್ಯಾಭಿಷೇಕಂಗೆಯ್ದೀತನಂ ಪಿಡಿದು ನೀಮೆಲ್ಲಂ ಸುಖಂ ಬಾಟಿಮೆಂದು ಕಲ್ಪಿಸಿ ಯಮದಂಡಂಗಂ

ಈ ಶರೀರವು ಕ್ಷೇಮವಾಗಿ ರೋಗವಿಲ್ಲದೆ ಇರುವುದೋ ಮುಪ್ಪು ಎಲ್ಲಿಯವರೆಗೆ ಹತ್ತಿರ ಬರುವುದಿಲ್ಲವೋ ಇಂದ್ರಿಯಗಳ ಶಕ್ತಿ ಎಲ್ಲಿಯತನಕ ಕುಗ್ಗದೆ ಇರುವುದೋ ಎಲ್ಲಿಯವರೆಗೆ ಆಯುಸ್ಸು ನಾಶವಾಗದೆ ಇರುವುದೋ ಅಷ್ಟರೊಳಗಾಗಿಯೇ ಬುದ್ಧಿವಂತನು ಆತ್ಮದ ಶ್ರೇಯಸ್ಸಿಗಾಗಿ ವಿಶೇಷ ಪ್ರಯತ್ನವನ್ನು ಮಾಡಬೇಕು. ಮನೆ ಬೆಂಕಿ ಹತ್ತಿ ಉರಿಯುತ್ತಿರುವಾಗ ಬಾವಿ ತೋಡುವ ಪ್ರಯತ್ನವು ಎಂತಹದು ? ಎಂದು ಇವೇ ಮುಂತಾಗಿ ಉಳ್ಳ ನೀತಿಗಳನ್ನು ಉಚ್ಚರಿಸಿ, ಅವುಗಳ ಅರ್ಥವನ್ನು ಜನಸಮೂಹಕ್ಕೆಲ್ಲ ವ್ಯಾಖ್ಯಾನಮಾಡಿ ಹೇಳಿ ಮತ್ತೆ ಹೀಗೆಂದನು - "ನಾನು ಆಳತಕ್ಕವನು, ರಾಜನು. ಇವರೆಲ್ಲ ನನಗೆ ಸೇವಕರು. ಹೀಗಿರುವಾಗ ಏನಾಗುತ್ತದೆ - ಎಂದು ತಿಳಿದೂ ತಿಳಿಯದೆ, ಲೆಕ್ಕಿಸದೆ, ನಾನು ಹೇಳಿದ ಯಾವುದಾದರೂ ಒಂದು ಮಾತಿನ ವಿಷಯದಲ್ಲಿ ನಿಮಗೆ ಮನಸ್ಸಿನಲ್ಲಿ ಕೋಪವಿದ್ದರೂ ಆ ಮಾತನ್ನು ಮರೆತುಬಿಡಿ. ಇನ್ನು ಮುಂದೆ ಎಲ್ಲವೂ ಪಾಪಾನುಷ್ಠಾನವಿಲ್ಲದುದಾಗಿ ಇರುವುದು. ಎಲ್ಲ ಜೀವಿಗಳನ್ನೂ ಕ್ಷಮಿಸುತ್ತೇನೆ. ಎಲ್ಲ ಜೀವಿಗಳೂ ನನ್ನನ್ನು ಕ್ಷಮಿಸಲಿ. ಸರ್ವಪ್ರಾಣಿಗಳಲ್ಲಿಯೂ ನನಗೆ ಮೈತ್ರಿಯಿದೆ. ಯಾರಲ್ಲಿಯೂ ನನಗೆ ವೈರವಿಲ್ಲ. ಹೀಗೆ ನುಡಿದು ಎಲ್ಲರನ್ನೂ ಕ್ಷಮೆಗೊಳಿಸಿ, ಮಾಯಾಶಲ್ಯ-ಮಿಥ್ಯಾಶಲ್ಯ,-ನಿದಾನಶಲ್ಯಗಳನ್ನು ಪರಿಹಾರಗೊಳಿಸಿದನು. ತನ್ನ ಹಿರಿಯ ಮಗನಾದ ವಿದ್ಯುದಂಗನಿಗೆ ರಾಜ್ಯದ ಅಧಿಕಾರಪಟ್ಟವನ್ನು ಕಟ್ಟಿ ರಾಜ್ಯಾಭಿಷೇಕವನ್ನು ಮಾಡಿದನು. "ನೀವೆಲ್ಲರೂ ಈತನನ್ನು ಆಶ್ರಯಿಸಿಕೊಂಡು ಸುಖವಾಗಿ ಬಾಳಿ" ಎಂದು ಹೇಳಿ, ಯಮದಂಡನಿಗೆ ಆ ಪಟ್ಟಣದ ತಳವಾರವೃತ್ತಿಯನ್ನು (ಕಾವಲುಗಾರಿಕೆಯ ಕೆಲಸವನ್ನು) ಕೊಟ್ಟನು. ಮಂಗಳಕರವಾದ ಅಲಂಕಾರವನ್ನು

ಪೊಬಲ ತಳಾಜೆಕೆಯಂ ಕೊಟ್ಟು ಮಂಗಳವಸದನಂಗೊಂಡು ಪಟ್ಟವರ್ಧನಮನೇಱೆ ಸತಿಯರ್ ಸಂಗದಂ ಬರೆ ಪೆಂದವಾಸದ ಸೂಳೆಯರಿರ್ಬರ್ ಪೆಜಗೇಜೆರ್ಕೆಲದೊಳಂ ಚಾಮರಂಗಳನಿಕ್ಕುತ್ತುಂ ಬರೆ ಬೆಳ್ಗೊಡೆಗಳುಂ ಪಾಳಿಧ್ವಜಂಗಳುಂ ತಜಿನೆವಬಯಿಗೆಗಳುಂ ಚಂದ್ರಾದಿತ್ಯರ್ಕಳುಂ ಸಿಂಹ ವ್ಯಾಘ್ರ ಮಕರ ಮತ್ಸ್ಯಂಗಳೆಂದಿವು ಮೊದಲಾಗೊಡೆಯ ರಾಜ್ಯಚಿಹ್ನಂಗಳ್ ಮುಂದೆ ಪರಿಯೆ ಪಂಚಮಹಾಶಬ್ದಂಗಳುಂ ಬದ್ದವಣದ ಪಜಿಗಳುಂ ಬಾಜಿಸೆ ವಂದಿ ಮಾಗಧ ಯಾಚಕ ಪ್ರಭೃತಿಗಳ್ಗಂ ದೀನಾನಾಥಾಂಧರ್ಕಳ್ಗಂ ತುಷ್ಟಿದಾನಮಂ ಕೊಡುತ್ತಂ ಪೋಗಿ ಸಹಸ್ರಕೂಟ ಚೈತ್ಯಾಲಯಮನೆಯ್ದಿ ಪಟ್ಟವರ್ಧನದಿಂದಿಜಿದು ಬಸದಿಯಂ ತ್ರಿಃ ಪ್ರದಕ್ಷಿಣಂಗೆಯ್ದು ದೇವರಂ ವಂದಿಸಿ ಗುಣಧರರೆಂಬಾಚಾರ್ಯರಂ ಗುರುಭಕ್ತಿಗೆಯ್ದು ವಂದಿಸಿ ಇಂತೆಂದಂ ಭಟಾರಾ ಸಂಸಾರಮೆಂಬ ಸಮುದ್ರದೊಳ್ ಮುಜುಗುತ್ತಿರ್ದೆನ್ನಂ ಮುಜುಗಲೀಯದೆತ್ತಿಮೆನಗೆ ದೀಕ್ಷೆಯಂ ಪ್ರಸಾದಂಗೆಯ್ಯಮೆಂದು ನುಡಿದೊಡಂಬಡಿಸಿ ಸಾಸಿರ್ವರರಸು ಮಕ್ಕಳ್ವೆರಸು ಕಟಕ ಕಟಸೂತ್ರ ಕುಂದಲಾಭರಣಾದಿಗಳಂ ಕಳೆದು ಬಾಹ್ಯಾಭ್ಯಂತರ ಪರಿಗ್ರಹಮೆಲ್ಲಮಂ ತೊಜೆದು ಗುಣಧರ ಭಟ್ಟಾರರ ಪಕ್ಕದೆ ತಪಂಬಟ್ಟಂ ಮತ್ತಂ ದೇವಗಣಿಕೆಯರನೆ ಪೋಲ್ವ ಸೌಂದರಿಮಹಾದೇವಿ ಮೊದಲಾಗೇಬ್ಭೂರ್ವರರಸಿಯರ್ಕಳ್ ಗುಣಧರ ಭಟಾರರೆ ಗುರುಗಳಾಗೆ ತಮ್ಮತ್ತೆವಿರಪ್ಪ ವಿಜಯಮತಿ ಕಂತಿಯರ್ ಕಂತಿಯರಾಗೆ ತಪಂಬಟ್ಟು ಗಿಡಿಗಿಡಿಜಂತ್ರಂ ಮಿಳಿಮಿಳಿ ನೇತ್ರಮಾಗಿ ಘೋರವೀರ ತಪಶ್ಚರಣದೊಳ್ ನೆಗಜುತ್ತಿರ್ದರ್ ಇತ್ತ ವಿದ್ಯುಚ್ಚೋರ ಮುನಿಯುಂ

ಮಾಡಿಕೊಂಡು ಪೂಜಾಗಜವನ್ನು ಹತ್ತಿದನು. ಆಗ ಅವನ ಹೆಂಡಿರು ಸಂಗಡದಲ್ಲಿ ಬಂದರು. ರಾಣಿವಾಸದ ಇಬ್ಬರು ದಾಸಿಯರು ಹಿಂದುಗಡೆ ಹತ್ತಿಕೊಂಡು ಎರಡು ಬದಿಗಳಲ್ಲಿಯೂ ಚಾಮರವನ್ನು ಬೀಸುತ್ತ ಬಂದರು. ಶ್ವೇತಚ್ಛತ್ರಗಳು, ಪಾಳಿಧ್ವಜಗಳು, ಬಾವುಟಗಳು, ಚಂದ್ರಸೂರ್ಯರು, ಸಿಂಹ ಹುಲಿ ಮೀನು - ಎಂದು ಇವೇ ಮೊದಲಾಗಿ ಉಳ್ಳ ರಾಜ್ಯಾಧಿಕಾರದ ಚಿಹ್ನೆಗಳು ಅವನ ಮುಂದೆ ಹೋದವು. ಶಂಖ, ಪಟಹ- ಮುಂತಾದ ಐದು ಬಗೆಯ ಮಹಾವಾದ್ಯ ಶಬ್ದಗಳೂ ಮಂಗಳವಾದ್ಯಗಳೂ ಶಬ್ದಮಾಡಿದವು. ವಂದಿಮಾಗಧರು (ಸ್ತುತಿಪಾಠಕರು), ಬೇಡುವವರು, ದೀನರು, ಅನಾಥರು, ಕುರುಡರು - ಇಂಥವರಿಗೆಲ್ಲ ಸಂತೋಷವಾಗುವಷ್ಟು ದಾನವನ್ನು ಕೊಡುತ್ತ ವಿದ್ಯುಚ್ಚೋರನು ಸಹಸ್ರಕೂಟವೆಂಬ ಜಿನಾಲಯಕ್ಕೆ ಹೋಗಿ ಪಟ್ಟದಾನೆಯಿಂದ ಇಳಿದನು. ಬಸದಿಗೆ ಮೂರುಸುತ್ತು ಬಲವಂದು ದೇವರಿಗೆ ವಂದನೆ ಸಲ್ಲಿಸಿದನು. ಗುಣಧರರೆಂಬ ಆಚಾರ್ಯರನ್ನು ಗುರುಭಕ್ತಿಯಿಂದ ಸಂದರ್ಶಿಸಿ ನಮಸ್ಕರಿಸಿ ಹೀಗೆಂದನು. "ಪೂಜ್ಯರೇ, ಸಂಸಾರವೆಂಬ ಸಮುದ್ರದಲ್ಲಿ ಮುಳುಗುತ್ತಿರುವ ನನ್ನನ್ನು ಮುಳುಗುವುದಕ್ಕೆ ಅವಕಾಶವೀಯದೆ ಎತ್ತಿರಿ. ನನಗೆ ಜಿನದೀಕ್ಷೆಯನ್ನು ಅನುಗ್ರಹಿಸಿರಿ!" - ಎಂದು ನುಡಿದು ಅವರು ದೀಕ್ಷೆ ಕೊಡಲು ಒಪ್ಪುವಂತೆ ಮಾಡಿದನು. ಸಾವಿರ ಮಂದಿ ರಾಜಕುಮಾರರು ಸಹಿತ ಬಳೆ, ಉಡಿದಾರ, ಕುಂಡಲ, ಆಭರಣ - ಮುಂತಾದುವನ್ನು ತೆಗೆದುಹಾಕಿ ಹೊರಗಿನ ಮತ್ತು ಒಳಗಿನ ಪರಿಗ್ರಹಗಳನ್ನೆಲ್ಲ ಬಿಟ್ಟು ಗುಣಧರ ಋಷಿಗಳ ಬಳಿ ತಪಸ್ಸನ್ನು ಸ್ವೀಕರಿಸಿದನು. ಆಮೇಲೆ, ಸುರಸ್ತ್ರೀಯರನ್ನು ಹೋಲತಕ್ಕ ಸೌಂದರಿ ಮಹಾದೇವಿ ಮುಂತಾದ ಏಳುನೂರು ಮಂದಿ ರಾಣಿಯರು ಗುಣಧರ ಋಷಿಗಳನ್ನೇ ಗುರುಗಳಾಗಿ ಕಲ್ಪಿಸಿ, ತಮ್ಮ ಅತ್ತೆಯವರಾದ ವಿಜಯಮತಿ ಕಂತಿಯವರೇ ತಮಗೆ ಮಾರ್ಗದರ್ಶನ ಮಾಡುವ ಸಂನ್ಯಾಸಿನಿಯರಾಗಿರಲು,

ಪನ್ನೆರಡುವರ್ಷಂಬರೆಗಂ ಗುರುಗಳನಗಲದೆ ದ್ವಾದಶಾಂಗ ಚತುರ್ದಶ ಪೂರ್ವಮಪ್ಪಾಗಮಮೆಲ್ಲಮಂ ಕಲ್ತುಗ್ರೋಗ್ರ ತಪಶ್ಚರಣದೊಳ್ ನೆಗಟುತ್ತುಮಾಚಾರ್ಯರಾಗಿ ಅಯ್ನೂರ್ವರ್ ಶಿಷ್ಯರ್ಕಳ್ವೆರಸು ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹರಿಸುತ್ತಂ ಪೋಗಿ ಪೂರ್ವದೇಶದೊಳ್ ಖಾಳಿಮಂಡಳವೆಂಬ ನಾಡೊಳ್ ತಾಮ್ರಲಿಪ್ತಿಯೆಂಬ ಪೊಬಲ ಪೊಱವೊಬಲನೆಯ್ದಿದಾಗಳಲ್ಲಿ ವರಾಂಗಾಯಿಯೆಂಬೊಳುಗ್ರದೇವತೆಗಜುದಿಂಗಳಜುದಿಂಗಳಿಂಗೆಲ್ಲಾ ಕಾಲಮುಂ ಜಾತ್ರೆಯಪ್ಪುದಾ ಜಾತ್ರೆಗೆ ನಾಡೆಯಷ್ಟಮಿಯಂದು ಬಂದು ನೆರೆದು ಜಾತ್ರೆಯಂ ಮಾಡೆ ದುರ್ಗಾದೇವತೆ ರಿಸಿಯರ ಬರವಂ ಗೆಂಟಱಿಂದಿರ್ದು ಕಂಡಿದಿರಂ ಪೋಗಿ ಇಂತೆಂದಳೆನ್ನ ಜಾತ್ರೆ ಸಮೆವನ್ನೆಗಂ ನೀಮೀ ಪೊಬಲಂ ಪುಗದಿರಿಮೆಂದು ಬಾರಿಸಿದೊಡೆ ಶಿಷ್ಯರ್ಕಳೆಂದರ್ ನಮ್ಮಂ ದೇವತೆಯೇಗೆಯ್ದಪ್ಪೊಳ್ ಪೋಪಂ ಭಟಾರಾ ಎಂಮ ಭಟಾರರನೊಡಗೊಂಡು ದೇವತೆ ಬಾರಿಸೆವಾರಿಸೆ ಪೊಬಲಂ ಪೊಕ್ಕು ಮತ್ತಿರುಳ್ ಪೊಬಲ ಪಡುವಣ ದೆಸೆಯ ಕೋಂಟೆಯಿಂ ಪೊಱಗಣ ದೆಸೆಯೊಳ್ ವಿದ್ಯುಚ್ಚೋರ ಭಟಾರರ್ ಪ್ರತಿಮಾಯೋಗಂ ನಿಂದೊಡೆ ದೇವತೆ ಮುಳಿದು ಪೊಜಿಸುಗಳನಿವಿರಿಯವು ದಂಸಮಸಂಕಂಗಳಂ ವಿಗುರ್ವಿಸಿ ಮೆಯ್ಯೆಲ್ಲಮನಿರುಳ್ ನಾಲ್ಕು ಜಾವಮುಂ ತಿನೆ ನರಕವೇದನೆಯಿಂದ

ತಪಸ್ಸನ್ನು ಸ್ವೀಕರಿಸಿದರು. ಅವರೆಲ್ಲರೂ ಸವೆದು ಸಣಕಲಾದ ದೇಹವನ್ನೂ ಗುಳಿಬಿದ್ದ ಕಣ್ಣುಗಳನ್ನೂ ಉಳ್ಳವರಾಗಿ ಉಗ್ರವೂ ಶ್ರೇಷ್ಠವೂ ಆದ ತಪವನ್ನು ಆಚರಿಸುತ್ತ ಇದ್ದರು. ಇತ್ತ ವಿದ್ಯುಚ್ಚೋರ ಋಷಿ ಹನ್ನೆರಡು ವರುಷಗಳವರೆಗೆ ಗುರುಗಳನ್ನಗಲದೆ ಹನ್ನೆರಡು ಅಂಗಗಳುಳ್ಳ ಮತ್ತು ಹದಿನಾಲ್ಕು ಪೂರ್ವಗಳುಳ್ಳ ಶಾಸ್ತ್ರಗಳನ್ನೆಲ್ಲ ಕಲಿತು ಅತ್ಯಂತ ಘೋರವಾದ ತಪಸ್ಸನ್ನು ಆಚರಣೆ ಮಾಡುತ್ತ ಆಚಾರ್ಯರಾದರು. ಐನೂರು ಮಂದಿ ಶಿಷ್ಯರನ್ನು ಕೂಡಿಕೊಂಡು ಗ್ರಾಮ-ನಗರ-ಖೇಡ-ಖರ್ವಡ- ಮಡಂಬ-ಪಟ್ಟಣ ದ್ರೋಣಾಮುಖಗಳಲ್ಲಿ ಸಂಚಾರ ಮಾಡುತ್ತ ಹೋದರು. ಅವರು ಪೂರ್ವದೇಶದಲ್ಲಿರತಕ್ಕ ಖಾಳಿಮಂಡಳವೆಂಬ ನಾಡಿನಲ್ಲಿ ತಾಮ್ರಲಿಪ್ತಿಯೆಂಬ ಪಟ್ಟಣದ ಹೊರಗಣ ಭಾಗಕ್ಕೆ ಹೋದರು. ಅಲ್ಲಿ ವರಾಂಗಾಯಿ ಎಂಬ ಉಗ್ರದೇವತೆಯಿದ್ದಳು. ಅವಳಿಗೆ ಆರುತಿಂಗಳಿಗೊಮ್ಮೆ ಪ್ರತಿವರ್ಷವೂ ಬಿಡದೆ ಜಾತ್ರೆಯಾಗುತ್ತಿತ್ತು. ಆ ಜಾತ್ರೆಗೆ ವಿಶೇಷವಾಗಿ ದುರ್ಗಾಷ್ಟಮಿಯಂದು ಜನರೆಲ್ಲ ಬಂದು ಸೇರಿ, ಜಾತ್ರೆಯನ್ನು ಆಗ ಮಾಡುತ್ತಿದ್ದರು. ಆ ದುರ್ಗಾದೇವತೆ ಋಷಿಗಳು ಬಂದಿರುವುದನ್ನು ದೂರದಿಂದಲೇ ಕಂಡು ಇದಿರಿಗೆ ಹೋಗಿ ಹೀಗೆಂದಳು -"ನನ್ನ ಜಾತ್ರೆ ಕೊನೆಗೊಳ್ಳುವವರೆಗೂ ನೀವು ಈ ಪಟ್ಟಣವನ್ನು ಪ್ರವೇಶಿಸದಿರಿ" - ಎಂದು ಆತಂಕಪಡಿಸಿದಳು. ಆಗ ಋಷಿ ಶಿಷ್ಯರು - "ಪೂಜ್ಯರೇ, ನಮ್ಮನ್ನು ಈ ದೇವತೆ ಏನು ಮಾಡುವಳು! ನಾವು ಹೋಗೋಣ" ಎಂದು - ವಿದ್ಯುಚ್ಚೋರ ಮುನಿಯನ್ನು ಕೂಡಿಕೊಂಡು, ದೇವತೆ ಅಡ್ಡಿಪಡಿಸಿದರೂ ಲೆಕ್ಕಿಸದೆ ಪಟ್ಟಣವನ್ನು ಹೊಕ್ಕರು. ಮತ್ತೆ ರಾತ್ರಿವೇಳೆ ವಿದ್ಯುಚ್ಚೋರ ಋಷಿಗಳು ಪಟ್ಟಣದ ಪಶ್ಚಿಮದಿಕ್ಕಿನ ಕೋಟೆಯ ಹೊರಗಿನ ಭಾಗದಲ್ಲಿ ಪ್ರತಿಮಾಯೋಗದಲ್ಲಿ ನಿಂತರು. ವರಾಂಗಾಯಿ ದೇವತೆ ಆಗ ಕೋಪಗೊಂಡು, ಪಾರಿವಾಳದಷ್ಟು ದೊಡ್ಡವುಗಳಾದ ಚಿಗಟುಗಳನ್ನೂ ಗುಂಗುರುಗಳನ್ನೂ (ಸೊಳ್ಳೆ ನೊಣಗಳನ್ನು) ಮಾಯೆಯಿಂದ ನಿರ್ಮಾಣಮಾಡಿದಳು. ಅವು ವಿದ್ಯುಚ್ಚೋರ ಋಷಿಗಳ ಶರೀರವನ್ನು ರಾತ್ರಿಯ ನಾಲ್ಕು ಜಾವ (ಹನ್ನೆರಡು ಗಂಟೆ) ಸಮಯವೂ ಕಚ್ಚಿ ತಿನ್ನುತ್ತ ನರಕದ ಯಾತನೆಗಿಂತ

ಮಗ್ಗುಳವೆ ವೇದನೆಯಪ್ಪಂತುಪಸರ್ಗಂಗೆಯ್ಯೆ ಅಂತಪ್ಪ ದುಃಖಮುಂ ವೇದನೆಯುಮುಂ ಮನದೊಳಿಲ್ಲದಂತಿರೆ ಸೈರಿಸಿ ಆಜ್ಞಾವಿಚಯಮಪಾಯವಿಚಯ ವಿಪಾಕವಿಚಯ ಸಂಸ್ಥಾನ ವಿಚಯಮೆಂಬೀ ನಾಲ್ಕು ಧರ್ಮ್ಯಧ್ಯಾನಂಗಳಂ ಧ್ಯಾನಿಸಿ ಬಟಿಕ್ಕೆ ಪೃಥಕ್ತ್ವ ವಿತರ್ಕ ವೀಚಾರಮೆಂಬ ಪ್ರಥಮ ಶುಕ್ಲಧ್ಯಾನಮಂ ಧ್ಯಾನಿಸುತ್ತಂ ಕ್ಷಪಕ ಶ್ರೇಣಿಯನೇಜೆ ಏಕತ್ವ ವಿತರ್ಕ ವೀಚಾರಂ ಸೂಕ್ಷ್ಮ ಕ್ರಿಯಾ ಪ್ರತಿಪಾತಿ ಸಮುಚ್ಛಿನ್ನ ಕ್ರಿಯಾನಿವೃತ್ತಿಯೆಂಬ ಶುಕ್ಲಧ್ಯಾನಂಗಳಂ ಧ್ಯಾನಿಸಿ ಘಾತಿಕರ್ಮಂಗಳಂ ಕಿಡಿಸಿ ಅಂತರ್ಗತಕೇವಳಿಯಾಗಿ ಅಘಾತಿಕರ್ಮಂಗಳಂ ಕಿಡಿಸಿ ಮೋಕ್ಷಕ್ಕೆ ವೋದರ್ ಮತ್ತೆ ಸಂನ್ಯಸನಂಗೆಯ್ಯುತ್ತಿರ್ದ ಭವ್ಯರ್ಕಳ್ ಪರಮ ಶುದ್ಧ ಸಹಜ ರತ್ನತ್ರಯಮನಾರಾಧಿಸುತ್ತಿರ್ದೊರ್ ವಿದ್ಯುಚ್ಚೋರ ಋಷಿಯರಂ ಮನದೊಳ್ ಬಗೆದು ದಂಡನೆಗಳುಮಂ ವೇದನೆಗಳುಮಂ ವ್ಯಾಧಿಗಳುಮಂ ಚತುರ್ವಿಧಮಪ್ಪುಪಸರ್ಗಮುಮಂ ಪಸಿವುಂ ನೀರಟ್ಟೆಯುಂ ಶೀತೋಷ್ಣವಾತ ದಂಸಮಸಕಂ ಮೊದಲಾಗೊಡೆಯವಱೆಂದಪ್ಪ ವೇದನೆಗಳುಂ ದುಃಖಂಗಳುಮಂ ಸೈರಿಸಿ ಪರಮ ಶುದ್ಧ ಸಹಜ ರತ್ನತ್ರಯಂಗಳಂ ಸಾಧಿಸಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

ಅಧಿಕವಾದ ನೋವನ್ನುಂಟುಮಾಡುವ ಉಪಸರ್ಗವನ್ನು ಮಾಡಿದವು. ಅಂತಹ ದುಃಖವೂ ನೋವೂ ಮನಸ್ಸಿನಲ್ಲಿ ಇಲ್ಲದ ರೀತಿಯಲ್ಲಿ ಅವನ್ನು ಸಹಿಸಿಕೊಂಡು ಆಜ್ಞಾವಿಚಯ, ಅಪಾಯವಿಚಯ, ವಿಪಾಕವಿಚಯ, ಸಂಸ್ಥಾನವಿಚಯ ಎಂಬ ಈ ನಾಲ್ಕು ವಿಧವಾದ ಧರ್ಮಧ್ಯಾನವನ್ನು ಧ್ಯಾನಿಸಿದರು. ಆಮೇಲೆ, ಪೃಥಕ್ತ್ವ, ವಿತರ್ಕ, ವೀಚಾರ - ಎಂಬ ಮೊದಲಿನ ಶುಕ್ಲಧ್ಯಾನವನ್ನು ಧ್ಯಾನಿಸುತ್ತ, ಕ್ಷಪಕಶ್ರೇಣಿಯನ್ನು ಏರಿ, ಏಕತ್ವ - ವಿತರ್ಕವಿಚಾರ-ಸೂಕ್ಷ್ಮಕ್ರಿಯಾ ಸಮುಚ್ಛಿನ್ನ ಕ್ರಿಯಾನಿವೃತ್ತಿ ಎಂಬ ಶುಕ್ಲಧ್ಯಾನಗಳನ್ನು ಧ್ಯಾನಿಸಿ, ಘಾತಿಕರ್ಮಗಳನ್ನು ನಾಶಗೊಳಿಸಿ, ಅಂತರ್ಗತ ಕೇವಲಿಯಾಗಿ ಅಘಾತಿಕರ್ಮಗಳನ್ನು ಕೆಡಿಸಿ ಮುಕ್ತಿಗೆ ಹೋದರು. ಸಂನ್ಯಾಸವನ್ನು ಆಚರಿಸುತ್ತಿರುವ ಭವ್ಯರು ಹಾಗೂ ಶ್ರೇಷ್ಠವೂ ಶುದ್ಧವೂ ಸಹಜವೂ ಆದ ರತ್ನತ್ರಯವನ್ನು ಆರಾಧಿಸುವವರು ವಿದ್ಯುಚ್ಚೋರ ಋಷಿಗಳನ್ನು ಮನಸ್ಸಿನಲ್ಲಿ ಭಾವಿಸಿಕೊಂಡು ದಂಡನೆಗಳನ್ನೂ ಯಾತನೆಗಳನ್ನೂ ರೋಗಗಳನ್ನೂ ನಾಲ್ಕು ವಿಧವಾದ ಉಪಸರ್ಗಗಳನ್ನೂ ಹಸಿವು, ಬಾಯಾರಿಕೆ, ಶೀತ-ಉಷ್ಣ-ವಾಯು-ಸೊಳ್ಳೆ-ನೊಣ- ಮುಂತಾಗಿರುವವುಗಳಿಂದ ಆಗತಕ್ಕ ಯಾತನೆಗಳನ್ನೂ ದುಃಖಿಗಳನ್ನೂ ಸಹಿಸಿಕೊಂಡು, ಶ್ರೇಷ್ಠವೂ ಶುದ್ಧವೂ ಸಹಜವೂ ಆದ ರತ್ನತ್ರಯವನ್ನು (ಸಮ್ಯಗ್ದರ್ಶನ, ಸಮ್ಯಗ್‌ಜ್ಞಾನ, ಸಮ್ಯಕ್ ಚಾರಿತ್ರ ಎಂಬಿವನ್ನು) ಸಾಧಿಸಿ ಸ್ವರ್ಗ - ಮೋಕ್ಷ ಸುಖಿಗಳನ್ನು ಪಡೆಯಲಿ.

೧೪. ಗುರುದತ್ತ ಭಟಾರರ ಕಥೆ

ಗುರುದತ್ತ ಭಟಾರರ ಕಥೆಯಂ ಪೇೞ್ದಂ :

ಗಾಹೆ ॥ ಹತ್ಥಿಣಪುರ ಗುರುದತ್ತೋ ಸಮ್ಮಲಿಘಾಲೀವ ದೊಣ್ಣಿಮಂತಮ್ಮಿ
ದಜ್ಝಂತೋ ಅಧಿಯಾಸಿಯ ವದಿವಣ್ಣೋ ಉತ್ತಮಂ ಅಟ್ಠಂ ॥

[ಹತ್ಥಿಣಪುರ-ಹಸ್ತಿನಾಪುರಮುಮಂ ಮುನ್ನಾಳ್ವ, ಗುರುದತ್ತೋ-ಗುರುದತ್ತರಿಸಿ, ಸಮ್ಮಲಿಘಾಲೀವ-ಸೂಡಿವೊತ್ತಿಸೆಪಟ್ಟನಂತೆ, ದೊಣ್ಣಿಮಂತಮ್ಮಿ-ದೋಣಿಮಂತಮೆಂಬ ಪರ್ವತದ ಸಾರೆ, ದಜ್ಝಂತೋ-ಬೇಯುತ್ತಿರ್ದೊಡಾಗಿ, ಅಧಿಯಾಸಿಯ-ಉಪಸರ್ಗಮಂ ಸೈರಿಸಿ, ಪಡಿವಣ್ಣೋ-ಪೊರ್ದಿದೊಂ, ಉತ್ತಮಂ ಅಟ್ಠಂ-ಮಿಕ್ಕ ದರ್ಶನಜ್ಞಾನಚಾರಿತ್ರಂಗಳಾರಾಧನೆಯಂ]

ಅದೆಂತೆಂದೊಡೆ : ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಕುಣಾಳಮೆಂಬುದು ನಾಡಲ್ಲಿ ಸಾವಸ್ತಿಯೆಂಬುದು ಪೊಲಲದನಾಳ್ವನುಪರಿಚರನೆಂಬೊನರಸನಾತನ ಮಹಾದೇವಿಯರ್ ಪದ್ಮಾವತಿ ಅಮಿತಪ್ರಭೆ ಸುಪ್ರಭೆ ಪ್ರಭಾವತಿ ಅಂತು ನಾಲ್ವರುಂ ಮಹಾದೇವಿಯರ್ ಮೊದಲಾಗಿ ಅರಸಿಯರ್ಕಳಯ್ನೂರ್ವರ್ ಪದ್ಮಾವತಿ ಮಹಾದೇವಿಯ ಮಗನನಂತವೀರ್ಯನಮಿತಪ್ರಭೆಯ ಮಗಂ ವಜ್ರಪಾಣಿ ಸುಪ್ರಭೆಯ ಮಗಂ ವಜ್ರಬಾಹು ಪ್ರಭಾವತಿಯ ಮಗಂ ವಜ್ರಧರನಿಂತೀ ನಾಲ್ವರುಂ ಮಹಾದೇವಿಯರ ಮಕ್ಕಳ್ ಉಳಿದರಸಿಯರ ಮಕ್ಕಳಯ್ನೂರ್ವರಂತವರ್ಗಳಿಷ್ಟವಿಷಯ ಕಾಮ ಭೋಗಂಗಳನನುಭವಿಸುತ್ತಂ ಪಲಕಾಲಂ ಸಲೆ ಮತ್ತೊಂದು ದಿವಸಂ ವಸಂತಕಾಲದೊಳ್ ಅಂಕುರಿತ ಪಲ್ಲವಿತ ಕೋರಕಿತ ಕುಸುಮಿತ ಫಲಿತಮಪ್ಪ ಮನೋಹರೋದ್ಯಾನಕ್ಕಯ್ನೂರ್ವರ

ಗುರುದತ್ತ ಭಟಾರರ ಕಥೆಯನ್ನು ಹೇಳುವೆನು - ಹಿಂದೆ (ಹಿಂದೆ, ಹಸ್ತಿನಾಪುರವನ್ನು ಆಳುತ್ತಿದ್ದ ಗುರುದತ್ತನೆಂಬ ಋಷಿ ದೋಣಿಮಂತವೆಂಬ ಬೆಟ್ಟದ ಸಮೀಪದಲ್ಲಿ ಸುಟ್ಟು ಹೋಗಿ, ಉಪಸರ್ಗವನ್ನು ಸಹಿಸಿಕೊಂಡು, ಶ್ರೇಷ್ಠವಾದ ದರ್ಶನ - ಜ್ಞಾನ - ಚಾರಿತ್ರಗಳೆಂಬ ರತ್ನತ್ರಯದ ಆರಾಧನೆಯನ್ನು ಮಾಡಿ ಅದರ ಫಲವನ್ನು ಪಡೆದನು.) ಅದು ಹೇಗೆಂದರೆ - ಈ ಜಂಬೂದ್ವೀಪದಲ್ಲಿರುವ ಭರತಕ್ಷೇತ್ರದಲ್ಲಿ ಕುಣಾಳ ಎಂಬ ನಾಡಿನಲ್ಲಿ ಶ್ರಾವಸ್ತಿ ಎಂಬ ಪಟ್ಟಣವಿದೆ. ಅದನ್ನು ಉಪರಿಚರನೆಂಬ ರಾಜನು ಆಳುತ್ತಿದ್ದನು. ಅವನಿಗೆ ಪದ್ಮಾವತಿ, ಅಮಿತಪ್ರಭೆ, ಸುಪ್ರಭೆ, ಪ್ರಭಾವತಿ - ಎಂಬ ನಾಲ್ವರು ಮಹಾ ರಾಣಿಯರು ಮುಂತಾಗಿ ಐನೂರು ಮಂದಿ ಅರಸಿಯರಿದ್ದರು. ಪದ್ಮಾವತೀ ಮಹಾದೇವಿಯ ಮಗ ಅನಂತವೀರ್ಯ ; ಅಮಿತಪ್ರಭೆಯ ಮಗ ವಜ್ರಪಾಣಿ ; ಸುಪ್ರಭೆಯ ಮಗ ವಜ್ರಬಾಹು ; ಪ್ರಭಾವತಿಯ ಮಗ ವಜ್ರಧರ. ಹೀಗೆ ಈ ನಾಲ್ಕು ಮಂದಿ ಮಹಾರಾಣಿಯರ ಮಕ್ಕಳೂ ಉಳಿದ ಅರಸಿಯರ ಮಕ್ಕಳೂ ಐನೂರು ಮಂದಿ ಇದ್ದರು. ಅಂತು ಅವರು ತಮಗೆ ಇಷ್ಟವಾದ ಕಾಮ ಸುಖಿಗಳನ್ನು ಅನುಭವಿಸುತ್ತ ಹಲವು ಕಾಲ ಕಳೆಯಿತು. ಅನಂತರ ಒಂದು ದಿನ ವಸಂತಋತುವಿನ ಕಾಲದಲ್ಲಿ, ಮನೋಹರ ಎಂಬ ಉದ್ಯಾನವು ಮೊಳಕೆ ಮೂಡಿ, ಚಿಗುರಿ, ಟಿಸಲುಗಳೊಡೆದು, ಹೂಬಿಟ್ಟು, ಹಣ್ಣುಗಳಿಂದ ತುಂಬಿರಲು - ಆ ಮನೋಹರೋದ್ಯಾನಕ್ಕೆ ಉಪರಿಚರ ರಾಜನು ಐನೂರು ಮಂದಿ ಅರಸಿಯರನ್ನೂ

ರಸಿಯರ್ಕಳುಮಣುಗರ್ಕಳುಂಬೆರಸು ಪೋಗಿ ಮಹಾವಿಭೂತಿಯಿಂ ವನಕ್ರೀಡೆಯಂ ಪಿರಿದು ಬೇಗಮಾಡಿ ಬಚಿಕ್ಕಾ ನಂದನವನದೊಳಗಣ ಸುದರ್ಶನಮೆಂಬ ಮಣಿಕುಟ್ಟಿಮಮಪ್ಪ ಬೊಡ್ಡಣ ಬಾವಿಯೊಳ್ ಕರ್ಪೂರ ಕಾಳಾಗರು ತುರುಷ್ಕ ಕುಂಕುಮ ಚಂದನಾದಿ ಸುಗಂಧದ್ರವ್ಯಂಗಳಿಂ ಬೆರಸೆ ಪಟ್ಟುದಱೊಳ್ ಮತ್ತಂ ನೀಲೋತ್ಪಲ ಕುವಳಯಂ ಮೊದಲಾಗೊಡೆಯ ನಾನಾಪ್ರಕಾರದ ಪುಷ್ಪಜಾತಿಗಳಿಂದಂ ಸಂಛನ್ನಮಪ್ಪುದಱೊಳ್ ಚಕ್ರವಾಕ ಬಕ ಬಳಾಕ ಹಂಸ ಮಂಡೂಕ ಜೀವಂ ಜೀವಕ ಚಕೋರಾದಿ ಜಲಚರ ಹಂಗವಿ ಸಮೂಹಂಗಳನೊಡೆಯದಱೊಳ್ ನಾಲ್ವರುಂ ಮಹಾದೇವಿಯರ್ ವೆರಸೊಂದೊರ್ವರಂ ನಾನಾಪ್ರಕಾರದ ಯಂತ್ರಂಗಳಿಂದಂ ಜೀರ್ಕೊಳವಿಗಳಿಂದಂ ತಳಿಯುತ್ತಂ ನೀರ್ಗಳಂ ಸೂಸುತ್ತಂ ಜಲಕ್ರೀಡೆಯಂ ಮನಕ್ಕೆ ವಂದರಸಿಯರ್ಕಳೊಡನೆ ನೀಡುಂ ಬೇಗಮಾಡುತ್ತಿರ್ಪನ್ನೆಗಂ ಮತ್ತಿತ್ತ ವಿಜಯಾರ್ಧಪರ್ವತದ ಉತ್ತರಶ್ರೇಣಿಯೊಳಳಕಾಪುರಮೆಂಬುದು ಪೊಟಲದನಾಳ್ವಂ ವಜ್ರದಾಡನೆಂಬ ವಿದ್ಯಾಧರನನೇಕ ವಿದ್ಯಾಬಲಗರ್ವಿತನಾತನ ಮಹಾದೇವಿ ಮದನವೇಗೆಯೆಂಬೊಳಂತವರಿರ್ವರುಮೊಂದು ದಿವಸಂ ರಮ್ಯ ಪ್ರದೇಶಂಗಳೊಳ್ ಕ್ರೀದಿಸಲ್ವೇಡಿ ಭೌಮವಿಹಾರಕ್ಕೆಂದು ವಿಚಿತ್ರಮಾಗುತ್ತಿರ್ದ ವಿಮಾನಮನೇಱಿಯಾಕಾಶಪಥದೊಳ್ ಪೋಗುತ್ತಿರ್ದವರ್ಗಳ್ ದೇವಸಮಾನರಪ್ಪ ಸಾಮಂತ ಮಹಾಸಾಮಂತರ್ಕಳಿಂದಂ ದೇವಗಣಿಕೆಯರಪ್ಸರೆಯರ್ಕಳಂ ಪೋಲ್ದಯ್ನೂರ್ವರರಸಿಯರ್ಕಳಿಂದಂ ಪೆಂಡವಾಸದೆಳವೆಂದಿರಿಂದಂ ಪರಿವಾರ ಜನಂಗಳಿಂದಮಿಂತು ದಿವ್ಯಮಪ್ಪ ಸಭೆಯಿಂದಂ ಪರಿವೇಷ್ಟಿತನಾಗಿ ಪಟುಪಟಹ ಪಣವ ತುಣವ ಭಂಭಾ ಮರ್ದಳ ಝಲ್ಲರಿ ಮುಕುಂದ ಶಂಖ ವಂಶ ತಾಳ ಭೇರೀ ಮೃದಂಗ ವೀಣಾ ಕಹಳಾದಿ ನಾನಾಪ್ರಕಾರದ

ಮಕ್ಕಳನ್ನೂ ಕೂಡಿಕೊಂಡು ಹೋದನು. ಅಲ್ಲಿ ಮಹಾವೈಭವದಿಂದ ಬಹಳ ಹೊತ್ತಿನವರೆಗೆ ವನಕ್ರೀಡೆಯನ್ನು ಆಡಿದನು. ಆಮೇಲೆ, ತನ್ನ ನಾಲ್ವರು ರಾಣಿಯರನ್ನು ಕೂಡಿಕೊಂಡು ಆ ನಂದನವನದಲ್ಲಿರುವ ಸುದರ್ಶನವೆಂಬ ಕೊಳಕ್ಕೆ ಜಲಕ್ರೀಡೆಗೆ ಹೋದನು. ಆ ಕೊಳವು ರತ್ನಖಚಿತವಾದ ನೆಲಗಟ್ಟಿನಿಂದ ಕೂಡಿದ್ದಿತು. ಕರ್ಪೂರ, ಕಾಳಾಗರು, ಲೋಬಾನ, ಕುಂಕುಮ, ಶ್ರೀಗಂಧ ಮುಂತಾದ ಸುವಾಸನೆಯ ವಸ್ತುಗಳಿಂದ ಮಿಶ್ರಿತವಾಗಿದ್ದಿತು. ನೀಲೋತ್ಪಲ, ಕನ್ನೈದಿಲೆ ಮುಂತಾಗಿ ಉಳ್ಳ ಹಲವಾರು ವಿಧದ ಯಂತ್ರಗಳಿಂದಲೂ ಪಿಚಕಾರಿಗಳಿಂದಲೂ ಪರಸ್ಪರವಾಗಿ ನೀರನ್ನು ಚಿಮುಕಿಸುತ್ತಲೂ ನೀರನ್ನು ಚೆಲ್ಲುತ್ತಲೂ ಬಹಳ ಹೊತ್ತಿನವರೆಗೆ ಜಲಕ್ರೀಡೆಯನ್ನು ಆಡುತ್ತಿದ್ದನು. ಈ ರೀತಿಯಾಗಿ ಆಡುತ್ತಿದ್ದಾಗ ಮುಂದಿನ ಘಟನೆ ನಡೆಯಿತು. ಇತ್ತ ವಿಜಯಾರ್ಧಪರ್ವತದ ಬಡಗಣ ಸಾಲಿನಲ್ಲಿ ಅಳಕಾಪುರವೆಂಬ ಪಟ್ಟಣವನ್ನು ವಜ್ರದಾಡನೆಂಬ ವಿದ್ಯಾಧರನು ಆಳುತ್ತಿದ್ದನು. ಅವನು ತನಗೆ ಅನೇಕ ವಿದ್ಯೆಗಳ ಸಾಮರ್ಥ್ಯವಿದೆಯೆಂದು ಗರ್ವಗೊಂಡಿದ್ದನು. ಅವನ ರಾಣಿ ಮದನವೇಗೆಯೆಂಬವಳು. ಅವರಿಬ್ಬರೂ ಒಂದು ದಿವಸ ಮನೋಹರವಾದ ಪ್ರದೇಶಗಳಲ್ಲಿ ಆಡಬೇಕೆಂದು ಭೂಮಿಯ ಸಂಚಾರಕ್ಕಾಗಿ ಆಶ್ಚರ್ಯಕರವಾಗಿರುವಂತಹ ಒಂದು ವಿಮಾನದಲ್ಲಿ ಕುಳಿತು ಆಕಾಶಮಾರ್ಗದಲ್ಲಿ ಹೋಗುತ್ತಿದ್ದರು. ಅವರಿಬ್ಬರೂ ಉಪರಿಚರನು ಜಲಕ್ರೀಡೆಯಾಡುವುದನ್ನು ಕಂಡರು. ಉಪರಿಚರನು ದೇವತೆಗಳಂತಿರುವ ಸಾಮಂತ-ಮಹಾಸಾಮಂತರಿಂದಲೂ ದೇವನರ್ತಕಿಯರನ್ನು ಹೋಲುವ ಐನೂರು ರಾಣಿಯರಿಂದಲೂ ಅಂತಃಪುರದ ಕೋಮಲೆಯರಿಂದಲೂ ಪರಿವಾರದವರಿಂದಲೂ ಇಂತಹ ದಿವ್ಯವಾದ ಸಭೆಯಿಂದ ಆವೃತನಾಗಿದ್ದನು. ಸಮರ್ಥವಾದ ಪಟಹ, ಪಣವ, ತುಣವ, ಭಂಭಾ, ಮದ್ದಳೆ, ಝಲ್ಲರಿ, ಮುಕುಂದ, ಶಂಖ, ಕೊಳಲು, ತಾಳ, ಭೇರಿ,

ತೂರ್ಯಧ್ವನಿಗಳ್ ದೇವದುಂದುಭಿ ಮೊಜಗುವಂತೆ ಭೋರ್ಗರೆದು ಮೊಜಗಿ ಮಹಾವಿಭೂತಿಯಿಂದಂ ಜಲಕ್ರೀಡೆಯನಾಡುತ್ತಿರ್ಪುಪರಿಚರ ಮಹಾನೃಪತಿಯನಿರ್ವರುಂ ಕಂಡು ವಿಮಾನಮಂ ನಿಱಿಸಿ ನೀಡುಂ ಬೇಗಂ ನೋಡಿ ಮದನವೇಗೆಯಿಂತೆಂದಳ್ ನಾಮಾಕಾಶದೊಳ್ ಕಾಗೆಗಳಂತಿರೆ ಪಾಱುವನಿತಲ್ಲದೆ ನಮಗಿನಿತು ವಿಭವಮುಮ್ಮೈಶ್ವರ್ಯಮುಂಟೆ ಶ್ರೀಯೊಳಂ ರೂಪಿನೊಳಂ ವಿಭವದೊಳಂ ನಾನಾಪ್ರಕಾರದ ವಿನೋದಂಗಳಿಂದಮುಪರಿಚರ ಮಹಾರಾಜನಿಂದಗ್ಗಳಂ ಪೆಱರಾರುಮಿಲ್ಲಮೀ ಸಂಸಾರದೊಳ್ ಬರ್ದ ಬಾಲನೀತನೆ ಬರ್ದನೆಂದು ಪೊಗಬಿೞ್ದೆ ವಜ್ರದಾಡಂ ಕೇಳ್ದು ಮನದೊಳ್ ಮುಳಿದು ಪುರುಡಿಸಿ ತನ್ನ ಪೊಬಲ್ಗೆವೋಗಿ ಮದನವೇಗೆಯನಲ್ಲಿಟ್ಟು ತಾನೊರ್ವನೆ ವಿಮಾನಮನೇಱಿ ತುರಿಪದಿಂ ಬಂದು ಜಲಕ್ರೀಡೆಯನಾಡುತ್ತಿರ್ಪುಪರಿಚರ ಮಹಾನೃಪತಿಯ ಮೇಗೆ ವಿದ್ಯೆಯಿಂದಂ ವಿಗುರ್ವಿಸಿ ಪಿರಿದೊಂದು ಶಿಲೆಯನೆತ್ತಿಕೊಂಡು ಬಂದು ಮಣಿಕುಟ್ಟಿಮಮಪ್ಪ ಸುದರ್ಶನಮೆಂಬ ಬಾವಿಯ ಬಾಗಿಲೆಲ್ಲಮಂ ನಿಶ್ಚಿದ್ರಮಾಗಿ ಮುಚ್ಚಿ ಕವಿದಿಕ್ಕಿ ಪೋದಂ ಪೋದೊಡೆ ಪದ್ಮಾವತಿ ಮೊದಲಾಗೊಡೆಯ ನಾಲ್ವರ್ ಮಹಾದೇವಿಯರುಂ ಮೋಹಿಸದ ಬುದ್ಧಿಯನೊಡೆಯರಧಿಗಮ ಸಮ್ಯಗ್‌ದೃಷ್ಟಿಗಳ್ ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಜಾವಜ್ಜೀವಂ ನಿವೃತ್ತಿಗೆಯ್ದು ಪಂಚನಮಸ್ಕಾರಮನುಚ್ಚಾರಿಸುತ್ತಂ ದೇವರಂ ಜಾನಿಸುತ್ತಂ ದರ್ಶನ ಜ್ಞಾನಚಾರಿತ್ರಂಗಳನಾರಾಧಿಸಿ ಮುಡಿಪಿ ಸೌಧರ್ಮಕಲ್ಪದೊಳ್

ಮೃದಂಗ, ವೀಣೆ, ತುತ್ತೂರಿ - ಮುಂತಾದ ಹಲವಾರು ವಿಧದ ವಾದ್ಯಧ್ವನಿಗಳು ದೇವ ಲೋಕದ ದುಂದುಭಿವಾದ್ಯ ಶಬ್ದಮಾಡುವಂತೆ ಭೋರೆಂದು ಶಬ್ದಮಾಡುತ್ತಿರಲು ಮಹಾವೈಭವದಿಂದ ಜಗಕ್ರೀಡೆಯಾಡುತ್ತಿದ್ದನು. ಅವನನ್ನು ಕಂಡು ವಜ್ರದಾಡನೂ ಮದನವೇಗೆಯೂ ವಿಮಾನವನ್ನು ನಿಲ್ಲಿಸಿ ಬಹಳ ಹೊತ್ತು ನೋಡಿದರು. ಮದನವೇಗೆ ಹೀಗೆಂದಳು -"ನಾವು ಆಕಾಶದಲ್ಲಿ ಕಾಗೆಗಳ ಹಾಗೆ ಹಾರಾಡುವಷ್ಟಲ್ಲದೆ, ನಮಗೆ ಇವರಷ್ಟು ವೈಭವವವೂ ಐಶ್ವರ್ಯವೂ ಇದೆಯೆ ? ಸಂಪತ್ತಿನಲ್ಲಿ ಸೌಂದರ್ಯದಲ್ಲಿ ವೈಭವದಲ್ಲಿ ಹಲವಾರು ರೀತಿಯ ವಿನೋದಗಳಲ್ಲಿ ಉಪರಿಚರ ಮಹಾರಾಜನಿಂದ ಶ್ರೇಷ್ಠನು ಬೇರೆ ಯಾರೂ ಇಲ್ಲ. ಈ ಸಂಸಾರದಲ್ಲಿದ್ದು ಬದುಕಲು ತಕ್ಕುದಾದ ಬಾಳನ್ನು ಬದುಕಿದವನು ಈತನೆ"- ಹೀಗೆ ಅವಳು ಹೊಗಳಿದಳು. ಇದನ್ನು ವಜ್ರದಾಡನು ಕೇಳಿ, ಮನಸ್ಸಿನಲ್ಲಿ ಕೋಪ ಮತ್ಸರಗಳನ್ನು ತಾಳಿ ತನ್ನ ಪಟ್ಟಣಕ್ಕೆ ತೆರಳಿ, ಮದನವೇಗೆಯನ್ನು ಅಲ್ಲಿ ನಿಲ್ಲಿಸಿದನು. ತಾನೊಬ್ಬನೇ ವಿಮಾನದಲ್ಲಿ ಕುಳಿತನು. ತ್ವರೆಯಾಗಿ ಬಂದು, ಜಲಕ್ರೀಡೆಯನ್ನಾಡುತ್ತಿದ್ದ ಉಪರಿಚರ ಮಹಾರಾಜನ ಮೇಲೆ, ತನ್ನ ಮಾಯಾವಿದ್ಯೆಯನ್ನು ಪ್ರಯೋಗಿಸಿದನು. ದೊಡ್ಡದೊಂದು ಬಂಡೆಕಲ್ಲನ್ನು ಎತ್ತಿಕೊಂಡು ಬಂದು ರತ್ನದ ನೆಲಗಟ್ಟುಳ್ಳ ಸುದರ್ಶನವೆಂಬ ಕೊಳದ ಬಾಗಿಲುಗಳೆಲ್ಲವನ್ನೂ ಎಲ್ಲಿಯೂ ರಂಧ್ರವುಳಿಯದ ಹಾಗೆ ಮುಚ್ಚಿ ಕವಿಯುವಂತೆ ಇಟ್ಟುಹೋದನು. ಅವನು ಹೋಗಲು, ಪದ್ಮಾವತಿ ಮೊದಲಾಗಿರುವ ನಾಲ್ಕು ಮಂದಿ ಮಹಾರಾಣಿಯರು ಯಾವ ಆಸೆಯನ್ನೂ ಮನಸ್ಸಿನಲ್ಲಿಡದೆ ಸಮ್ಯಕ್‌ದೃಷ್ಟಿಯನ್ನು ಹೊಂದಿದವರಾಗಿ ಜೀವವಿರುವಷ್ಟು ಕಾಲವೂ ಭಕ್ಷ್ಯ, ಭೋಜ್ಯ, ಚೋಷ್ಯ, ಲೇಹ್ಯ - ಎಂಬ ನಾಲ್ಕು ವಿಧದ ಆಹಾರಕ್ಕೂ ಶರೀರಕ್ಕೂ ನಿವೃತ್ತಿಯನ್ನು ಮಾಡಿ, ಐದು ವಿಧದ ನಮಸ್ಕಾರದ ಮಂತ್ರಗಳನ್ನು ಉಚ್ಚಾರಣೆ ಮಾಡುತ್ತ, ದೇವರನ್ನು ಧ್ಯಾನ ಮಾಡುತ್ತ, ಸಮ್ಯಗ್ದರ್ಶನ, ಸಮ್ಯಗ್‌ಜ್ಞಾನ , ಸಮ್ಯಗ್ ಚಾರಿತ್ರಗಳನ್ನು ಸರಿಯಾಗಿ ನಡೆಸಿ ದೇಹತ್ಯಾಗ

ಸ್ವಸ್ತಿಕಾವರ್ತಮಂಬ ವಿಮಾನದೊಳೊಂದು ಸಾಗರೋಪ ಮಾಯುಷ್ಯಮನೊಡೆಯರ್ ಸಾಮಾನಿಕದೇವರಾಗಿ ನಾಲ್ವರುಂ ಪುಟ್ಟಿದರ್ ಮತ್ತುಪರಿಚರನಪ್ಪರಸಂ ಮಿಥ್ಯಾದೃಷ್ಟಿಯಪ್ಪುದಱಿಂ ತನ್ನುದ್ಯಾನವನದೊಳ್ ರಾಜ್ಯವಿಭೂತಿಯೊಳಾದವಮಾನಂ ವೋಹಿಸಿದ ಬುದ್ಧಿಯನೊಡೆಯನಾರ್ತಧ್ಯಾನದಿಂ ಸತ್ತು ತನ್ನ ಮನೋಹರೋದ್ಯಾನವನದೊಳ್ ಪೆರ್ವಾವಾಗಿ ಪುಟ್ಟಿದಂ ಮತ್ತೆರಡನೆಯ ದಿವಸದಂದು ಸಾಮಂತ ಮಹಾಸಾಮಂತರ್ಕಳುಂ ಪರಿವಾರಮುಂ ನೆರೆದು ಅನಂತವೀರ್ಯನೆಂಬ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿದರ್ ಮೂಱನೆಯ ದಿವಸದಂದು ಸಾರಸ್ವತರೆಂಬಾಚಾರ್ಯರವಧಿಜ್ಞಾನಿಗಳಯ್ನೂರ್ವರ್ ಋಷಿಯರ್ವೆರಸು ಗ್ರಾಮನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಆ ಪೊೞಲ್ಗೆವಂದು ಮನೋಹರವೆಂಬ ನಂದನವನದೊಳಗಣ ಸ್ಫಟಕಶಿಳಾತಳದ ಮೇಗಿರ್ದೊರಂ ಋಷಿನಿವೇದಕಂ ಕಂಡು ಬಂದನಂತವೀರ್ಯ ನೃಪತಿಗೆ ಪೇೞ್ದೊಡಾತನುಂ ಸಪರಿವಾರಂ ಭಟಾರರಲ್ಲಿಗೆ ವಂದನಾಭಕ್ತಿಗೆ ವೋಗಿ ಬಲಗೊಂಡು ಗುರುಭಕ್ತಿಯಂ ವಂದಿಸಿಯುಚಿತ ರಿಸಿಯರೆಲ್ಲರುಮಂ ಗುರುಪರಿವಿಡಿಯಿಂದಂ ವಂದಿಸಿ ಪಿರಿದು ಬೇಗಂ ಧರ್ಮಮಂ ಕೇೞ್ದು ಬಟಿಕಂತೆಂದು ಬಿಸಗೊಂಡಂ ಭಟಾರಾ ಎಮ್ಮ ತಂದೆಗಂ ತಾಯ್ವರ್ಕಳ್ಗಮಾಕಸ್ಮಿಕಮೊರ್ವೊದಲನಿಬರ್ಗಮೇ ಕಾರಣಂ ಸಾವಾದುದಾರ್ ಕೊಂದರೆಂದು

ಮಾಡಿದರು. ಅವರು ಸೌಧರ್ಮ ಎಂಬ ಸ್ವರ್ಗದಲ್ಲಿ ಏಳು ಉಪ್ಪರಿಗೆಗಳುಳ್ಳ ಅರಮನೆಯಲ್ಲಿ ಒಂದು ಸಾಗರಕ್ಕೆ ಸಮಾನವಾಗುವ ಆಯಷ್ಯವುಳ್ಳವರಾದ ಸಾಮಾನಿಕದೇವತೆಗಳಾಗಿ ಆ ನಾಲ್ವರೂ ಹುಟ್ಟಿದರು. ಅನಂತರ ಆ ಉಪರಿಚರ ರಾಜನು ಮಿಥ್ಯಾದೃಷ್ಟಿಯುಳ್ಳವನಾದುದ ರಿಂದ ತನ್ನ ಉದ್ಯಾನವನದಲ್ಲಿ ಹುಟ್ಟಬೇಕಾಯಿತು. ಅವನು ರಾಜ್ಯೈಶ್ವರ್ಯದಲ್ಲಿ ಅತ್ಯಂತ ಮೋಹಗೊಂಡ ಬುದ್ಧಿಯವನಾಗಿ ಆರ್ತಧ್ಯಾನದಿಂದ ಸತ್ತು ತನ್ನ ಮನೋಹರವಾದ ಉದ್ಯಾನವನದಲ್ಲಿ ಒಂದು ಹೆಬ್ಬಾವಾಗಿ ಜನಿಸಿದನು. ಆಮೇಲೆ ಎರಡನೆಯ ದಿವಸದಂದು ಸಾಮಂತರಾಜರೂ ಮಹಾಸಾಮಂತರೂ ಪರಿವಾರದವರೂ ಒಟ್ಟಾಗಿ ಉಪರಿಚರನ ಹಿರಿಯ ಮಗನಾದ ಅನಂತವೀರ್ಯನಿಗೆ ರಾಜ್ಯಪಟ್ಟವನ್ನು ಕಟ್ಟಿದರು. ಮೂರನೆಯ ದಿವಸದಂದು ಅವಧಿ ಜ್ಞಾನಿಗಳಾದ ಸಾರಸ್ವತರೆಂಬ ಆಚಾರ್ಯರು ಐನೂರು ಮಂದಿ ಋಷಿಗಳನ್ನು ಕೂಡಿಕೊಂಡು ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖಗಳೆಂಬ ಭೂಭಾಗಗಳಲ್ಲಿ ಸಂಚಾರ ಮಾಡುತ್ತ ಆ ಪಟ್ಟಣಕ್ಕೆ ಬಂದರು. ಅಲ್ಲಿ ಮನೋಹರ ಎಂಬ ಉದ್ಯಾನದೊಳಗಿರತಕ್ಕ ಚಂದ್ರಕಾಂತಶಿಲೆಯ ಮೇಲೆ ಕುಳಿತಿದ್ದರು. ಆ ವೇಳೆಗೆ, ಋಷಿಗಳ ಆಗಮನವನ್ನು ವಿಜ್ಞಾಪಿಸತಕ್ಕ ಸೇವಕನು ಕಂಡು, ಅನಂತವೀರ್ಯನ ಬಳಿಗೆ ಬಂದು ತಿಳಿಸಿದನು. ಅನಂತವೀರ್ಯನು ಪರಿವಾರ ಸಹಿತನಾಗಿ ಋಷಿಗಳ ಬಳಿಗೆ ವಂದನಾಭಕ್ತಿಯನ್ನು ಸಲ್ಲಿಸುವುದಕ್ಕಾಗಿ ಹೋದನು. ಅವರಿಗೆ ಪ್ರದಕ್ಷಿಣೆ ಮಾಡಿ ಗುರುಭಕ್ತಿಯಿಂದ ನಮಸ್ಕರಿಸಿ, ಇತರ ಋಷಿಗಳೆಲ್ಲರಿಗೂ ಗುರುಪರಂಪರೆಗೆ ಅನುಸಾರವಾಗಿ ನಮಸ್ಕರಿಸಿ, ಬಹಳ ಸಮಯದವರೆಗೆ ಧರ್ಮಶ್ರವಣವನ್ನು ಮಾಡಿದನಂತರ ಹೀಗೆ ಪ್ರಶ್ನಿಸಿದನು - "ಪೂಜ್ಯರೇ, ನನ್ನ ತಂದೆಗೂ ತಾಯಂದಿರಿಗೂ ಅಕಸ್ಮಾತ್ತಾಗಿ ಅವರೆಲ್ಲರಿಗೂ ಒಟ್ಟಿಗೇ ಮರಣವಾಗಲು ಕಾರಣವೇನು? ಯಾರು ಕೊಂದರು?" ಎಂದು ಕೇಳಿದನು. ಆಗ ಸಾರಸ್ವತಾಚಾರ್ಯರು ಈ ರೀತಿಯಾಗಿ ಹೇಳಿದರು-

ಬೆಸಗೊಂಡೊಡೆ ಭಟಾರರಿಂತೆಂದು ಪೇೞ್ದರ್ ಸುದರ್ಶನಮೆಂಬ ಬೊಡ್ಡಣ ಬಾವಿಯೊಳ್ ನಿಮ್ಮ ತಂದೆಯುಂ ನಾಲ್ವರ್ ತಾಯ್ವಿರ್ಕಳುಂ ಜಳಕ್ರೀದೆಯನಾಡುತ್ತಿರ್ಪನ್ನೆಗಂ ಭೌಮವಿಹಾರಾರ್ಥಂ ವಿಮಾನಮನೇಱಿ ಪೋಗುತ್ತಿರ್ದ ವಜ್ರದಾಡನೆಂಬ ವಿದ್ಯಾಧರನುಮಾತನ ಮಹಾದೇವಿ ಮದನವೇಗೆಯೆಂಬೊಳಾಯಿರ್ವರುಂ ಕಂಡು ನಿಮ್ಮ ತಂದೆಯ ವಿಭವಮಂ ಮದನವೇಗೆ ಪೊಗೞ್ದೊಡೆ ವಜ್ರದಾಡಂ ಪುರುಡು ಪುಟ್ಟ ಬಾವಿಯ ಬಾಗಿಲಂ ನಿಶ್ಚಿದ್ರಮಾಗಿ ಮುಚ್ಚಿ ಮೇಗೆ ಪಿರಿದೊಂದು ಶಿಲೆಯನಿಕ್ಕಿ ಪೋದೊಡೀ ಪಾಂಗಿನೊಳವರ್ಗಳನಿಬರ್ಗಂ ಮೃತ್ಯುವಾದುದೆಂದು ಪೇೞ್ದೊಡೆ ಮತ್ತಮವರೆಲ್ಲಿ ಪುಟ್ಟಿದರೆಂದು ಬೆಸಗೊಂಡೊಡೆ ಭಟಾರರಿಂತೆಂದರ್ ನಿಮ್ಮ ತಾಯ್ವಿರ್ಕಳ್ ಬ್ರತಮಂ ಪರಿಪಾಲಿಸಿ ಸಾವ ಕಾಲದೊಳಾಹಾರಕ್ಕಂ ಶರೀರಕ್ಕಂ ಜಾವಜ್ಜೀವಂ ನಿವೃತ್ತಿಗೆಯ್ದು ಸಮಾಧಿಮರಣದಿಂದಂ ಮುಡಿಪಿ ಸೌಧರ್ಮಕಲ್ಪದೊಳ್ ಸ್ವಸ್ತಿಕಾವರ್ತಮೆಂಬ ವಿಮಾನದೊಳೊಂದು ಸಾಗರೋಪಮಾಯುಷ್ಯ ಮನೊಡೆಯರ್ ಕಾಂತನುಂ ಸುಕಾಂತನುಂ ನಂದನುಂ ಸುನಂದನುಮೆಂಬ ದೇವರ್ಕಳಾಗಿ ಪುಟ್ಟಿದವರ್ಗಳ್ ನಿಮ್ಮುಮಂ ನಿಮ್ಮ ತಂದೆಯುಮಂ ಪ್ರತಿಬೋಧಿಸಲ್ಕೀಗಳೆ ಬಂದಪ್ಪರೆಂದು ಪೇೞ್ದು ಮತ್ತೆ ನಿಮ್ಮ ತಂದೆಯುಂ ತನ್ನ ಪೆಂಡಿರ್ ಮಕ್ಕಳ್ ಪರಿವಾರಂ ಕಸವರಮೆಂದಿವಱೊಳ್ ಮೋಹಿಸಿದ ಬುದ್ಧಿಯನೊದೆಯನಾಗಿ ಅಲ್ಲಿಯ ನಂದನವನದೊಳಗಣ ಸರ್ಪಾಶ್ರಯಮೆಂಬ ಗುಹೆಯೊಳ್ ಮಹಾಕಾಯಂ ಪರ್ವಾವಾಗಿ ಪುಟ್ಟಿದನೆಂದೊಡೆ ಧರ್ಮಮಂ ಕೈಕೊಳ್ಗುಮೊ ಕೈಕೊಳ್ಗನೊ ಎಂದು

"ನಿಮ್ಮ ತಂದೆಯೂ ನಾಲ್ಕು ಮಂದಿ ತಾಯಿಯರೂ 'ಸುದರ್ಶನ' ಎಂಬ ಕೊಳದಲ್ಲಿ ನೀರಾಟವನ್ನು ಆಡುತ್ತಿದ್ದರು. ಆಗ ಭೂಮಿಯ ಸಂಚಾರಕ್ಕಾಗಿ ವಿಮಾನವನ್ನೇರಿ ಹೋಗುತ್ತಿದ್ದ ವಜ್ರದಾಡನೆಂಬ ವಿದ್ಯಾಧರನೂ ಅವನ ಮಹಾರಾಣಿ ಮದನವೇಗೆಯೂ ಇಬ್ಬರೂ ಕಂಡರು. ನಿಮ್ಮ ತಂದೆಯ ವೈಭವವನ್ನು ಮದನವೇಗೆ ಹೊಗಳಿದಳು. ಆಗ ವಜ್ರದಾಡನಿಗೆ ಅವರ ಮೇಲೆ ಅಸೂಯೆಯುಂಟಾಯಿತು. ಅವನು ಕೊಳದ ಬಾಗಿಲನ್ನು ರಂಧ್ರವುಳಿಯದಂತೆ ಮುಚ್ಚಿ, ಅದರ ಮೇಲೆ ದೊಡ್ಡದೊಂದು ಬಂಡೆಗಲ್ಲನ್ನು ಇಟ್ಟುಹೋದನು. ಈ ರೀತಿಯಾಗಿ ಅವರೆಲ್ಲರಿಗೂ ಮರಣವುಂಟಾಯಿತು." ಹೀಗೆ ಋಷಿಗಳು ಹೇಳಿದಾಗ ರಾಜನು "ಆ ಮೇಲೆ ಅವರೆಲ್ಲ ಎಲ್ಲಿ ಜನಿಸಿದರು?" ಎಂದು ಕೇಳಿದನು. ಆಗ ಋಷಿಗಳು ಹೀಗೆ ಹೇಳಿದರು - "ನಿಮ್ಮ ತಾಯಂದಿರು ಸಾಯುವ ಕಾಲದಲ್ಲಿ ವ್ರತವನ್ನು ಆಚರಿಸಿದ್ದಾರೆ. ಪ್ರಾಣವಿರುವರೆಗೂ ಆಹಾರಕ್ಕೂ ಲಕ್ಷ್ಯಕೊಡದೆ ಇದ್ದರು. ಸಮಾಧಿಮರಣದಿಂದ ದೇಹತ್ಯಾಗ ಮಾಡಿದ್ದಾರೆ. ಆದುದರಿಂದ ಸೌಧರ್ಮವೆಂಬ ಸ್ವರ್ಗದಲ್ಲಿ ಒಂದು ಸಾಗರದಷ್ಟು ಪರಿಮಾಣವುಳ್ಳವರಾಗಿ 'ಸ್ವಸ್ತಿಕಾವರ್ತ' ಎಂಬ ವಿಳುಪ್ಪರಿಗೆಯ ವಿಮಾನದಲ್ಲಿ ಕಾಂತ, ಸುಕಾಂತ, ನಂದ, ಸುನಂದ- ಎಂಬ ದೇವತೆಗಳಾಗಿ ಹುಟ್ಟಿದ್ದಾರೆ. ಅವರು ಈಗ ತಾನೆ ನಿಮಗೂ ನಿಮ್ಮ ತಂದೆಗೂ ಎಚ್ಚರಿಕೆ ಹೇಳುವುದಕ್ಕಾಗಿ ಬರುತ್ತಾರೆ. ಅದಲ್ಲದೆ ನಿಮ್ಮ ತಂದೆ ತನ್ನ ಹೆಂಡಿರು, ಮಕ್ಕಳು, ಪರಿವಾರ, ಚಿನ್ನ (ಸಂಪತ್ತು) ಎಂಬೀ ವಿಷಯಗಳಲ್ಲಿ ಮೋಹಗೊಂಡ ಬುದ್ಧಿಯುಳ್ಳವನಾಗಿ ಅದೇ ಸ್ಥಳದ ನಂದನೋದ್ಯಾನದಲ್ಲಿರುವ ಸರ್ಪಾಶ್ರಯವೆಂಬ ಗುಹೆಯಲ್ಲಿ ದೊಡ್ಡದಾದ ದೇಹವುಳ್ಳ ಹೆಬ್ಬಾವಾಗಿ ಹುಟ್ಟಿದ್ದಾನೆ"- ಎಂದು ಸಾರಸ್ವತಾಚಾರ್ಯರು ಹೇಳಿದರು. ಆಗ ಅನಂತವೀರ್ಯನು- "ಅವನು ಧರ್ಮವನ್ನು ಸ್ವೀಕರಿಸುವನೋ? ಸ್ವೀಕರಿಸನೊ?" ಎಂದು

ಬೆಸಗೊಂಡೊಡೆ ಭಟ್ಟಾರರಿಂತೆಂದರ್ ನೀನ್ ಪೇಜಿ ಧರ್ಮಮಂ ಕೈಕೊಳ್ಗುಮೆಂದೊಡೆ ತಮ್ಮಂದಿರುಂ ಪರಿವಾರಮುಂಬೆರಸು ಪೋಗಿ ಗುಹೆಯ ಬಾಗಿಲೊಳಿರ್ದಿಂತೆಂದನೆಲೆಯುಪರಿಚರ ಮಹಾರಾಜಾ ಪೆರ್ವಾವಾಗಿ ಪುಟ್ಟಿಯುಮಿಂತಪ್ಪವಸ್ಥೆಯೊಳಂ ಬಾಜಿಕೆಯೊಳಂ ಇನ್ನುಂ ನಿನಗಚ್ಚೆಯೆ ನಿನಗೆ ದೋಷ ಮಿಲ್ಲೇಕೆಂದೊಡೆ ಜೀವಂಗಳ ಸ್ವಭಾವಮಿಂತುಟು

ಶ್ಲೋಕ ॥ ಯತ್ರ ಯತ್ರೋಪಪದ್ಯಂತೇ ಜೀವಾಃ ಕರ್ಮವಶಾನುಗಾಃ
ತತ್ರ ತತ್ರ ರತಿಂ ಯಾಂತಿ ಸ್ವೇನ ಸ್ವೇನೈವ ಕರ್ಮಣಾ

ಎಂಬುದು ತಮ್ಮ ಕರ್ಮವಶದಿಂ ಸಂಸಾರಿ ಜೀವಂಗಳೆಲ್ಲಿ ಪುಟ್ಟುಗುಮಲ್ಲಿಯಲ್ಲಿಯಚ್ಚೆಯುಂ ಮೆಚ್ಚುಗೆಯುಮಕ್ಕುಂ ಮುನ್ನೆ ನೀನ್ ಕರುಮಾಡದೊಳ್ ಸಿಂಹಾಸನಮಸ್ತಕಸ್ಥಿತನಾಗಿ ಸಾಮಂತ ಮಹಾಸಾಮಂತರ್ಕಳಿಂದಮಯ್ಮೂರ್ವರರಸಿಯರ್ಕಳಿಂದಂ ಪೆಂಡವಾಸದಗ್ಗಳದ ಸೂಳೆಯರ್ಕಳಿಂದಂ ಪರಿವಾರದಿಂದಮಿಂತಪ್ಪ ದಿಬ್ಯಸಭೆಯಿಂವಂ ಪರಿವೇಷ್ಟಿತನಾಗಿ ಆಟಪಾಟ ವಿನೋದಂಗಳಂದಿರ್ಪಾತನಯ್ ಈಗಳ್ ಪೆರ್ವಾವುಗಳೊಡನೆ ನೆರೆದಿರಮಾಯ್ತು ಮತ್ತೆ ದಿವ್ಯಮಪ್ಪ ಶಯ್ಯಾತಳದೊಳ್ ನಿದ್ರೆಗೆಯ್ವಾತನಯ್ ಈಗಳ್ ಪೆಟ್ಟಿಗಳುಂ ಕಿಜುಗಲ್ಲಳುಮೊತ್ತೆ ನಿದ್ರೆಗೆಯ್ವೆಯಾದಯ್ ಮತ್ತಮ್ಮೃತೋಪಮಮಪ್ಪ ದಿಬ್ಯಾಹಾರ ಮನುಣ್ವಾತನಯ್ ಈಗಳ್ ಕಪ್ಪೆಗಳುಮೆಸಕುಗಳುಮಿಲಿಗಳುಮೊಂತಿಗಳುಂ ಮೊದಲಾಗೊದಯ ಜೀವರಾಶಿಗಳಂ ಕೊಂಪು ತಿನ್ಪೆಯಾದಯ್ ಇನ್ನವಂ ತಿಂದು ನರಕಂಬುಗಲಾಟಿಸಿದಪ್ಪಯ್ ಎಂದು

ಕೇಳಿದನು. "ನೀನು ಹೇಳಿದರೆ ಧರ್ಮವನ್ನು ಸ್ವೀಕರಿಸುವನು" ಎಂದು ಋಷಿಗಳು ಹೇಳಲು, ಅನಂತವೀರ್ಯನು ತನ್ನ ತಮ್ಮಂದಿರನ್ನೂ ಪರಿವಾರವನ್ನೂ ಕೂಡಿಕೊಂಡು ಹೋಗಿ ಗುಹೆಯ ಬಾಗಿಲಲ್ಲಿ ಇದ್ದುಕೊಂಡು ಹೀಗೆಂದನು - "ಎಲೈ ಉಪರಿಚರ ಮಹಾರಾಜನೇ, ಪೆರ್ವಾವಾಗಿ ಹುಟ್ಟಿ ಈ ರೀತಿಯ ಅವಸ್ಥೆಯಲ್ಲಿಯೂ ಜೀವನದಲ್ಲಿಯೂ ಇನ್ನೂ ನಿನಗೆ ಇಷ್ಟವೇ? ನಿನಗೆ ಏನೂ ದೋಷವಿಲ್ಲ. ಏಕೆಂದರೆ ಜೀವಗಳ ಸ್ವಭಾವವೇ ಈ ರೀತಿಯದು - (ಕರ್ಮಕ್ಕೆ ವಶರಾಗಿ ಹೋಗತಕ್ಕ ಜೀವರು ಎಲ್ಲೆಲ್ಲಿ ಹುಟ್ಟುವರೋ ಅಲ್ಲಲ್ಲೇ ತಮ್ಮ ತಮ್ಮ ಕರ್ಮಗಳಿಂದ ಆಸಕ್ತಿಯನ್ನು ಹೊಂದುತ್ತಾರೆ. ತಮ್ಮ ಕರ್ಮವಶದಿಂದ ಸಂಸಾರಿಜೀವಿಗಳು ಎಲ್ಲಿ ಜನಿಸುತ್ತಾರೋ ಅಲ್ಲಲ್ಲಿ ಅವರಿಗೆ ಪ್ರೀತಿಯೂ ಮೆಚ್ಚುಗೆಯೂ ಆಗುವುದು. ಹಿಂದೆ ನೀನು ಅರಮನೆಯಲ್ಲಿ ಸಿಂಹಾಸನದ ಮೇಲೆ ಕುಳಿತುಕೊಂಡು ಸಾಮಂತ ಮಹಾ ಸಾಮಂತರಿಂದಲೂ ಏನೂರು ಮಂದಿ ರಾಣಿಯರಿಂದಲೂ ಅಂತಃಪುರದ ಶ್ರೇಷ್ಠರಾದ ಸ್ತ್ರೀಯರಿಂದಲೂ ಪರಿವಾರದಪರಿಂದಲೂ ಇಂತಹ ದಿವ್ಯವಾದ ಸಭೆಯಿಂದಲೂ ಆವೃತನಾಗಿ ಆಟ-ಪಾಟ-ವಿನೋದಗಳಿಂದ ಇರತಕ್ಕವನಾಗಿದ್ದೆ. ಈಗ ಪೆರ್ವಾವುಗಳೊಡನೆ ಸೇರಿಕೊಂಡಿರುವ ಸ್ಥಿತಿ ಎಗಿಹೋಯಿತು ! ಅದಲ್ಲದೆ, ದಿವ್ಯವಾಗಿರುವ ಹಾಸಿಗೆಯ ಮೇಲೆ ನಿದ್ದೆಮಾಡುವವನಾಗಿದ್ದಿ ! ಈಗ ನೀನು ಮಣ್ಣಿಗಚ್ಚಿಗಳೂ ಪಣ್ಣಿ ಕಲ್ಲುಗಳೂ ದೇಹಕ್ಕೆ ಒತ್ತುತ್ತಿರುವಾಗ ನಿದ್ದೆಮಾಡುವುವನಾಗಿರುತ್ತಿ ! ಪೂತ್ರವಷ್ಟಲ್ಲದೆ, ಅಮೃತಕ್ಕೆ ಸಮಾನವಾದ ದಿವ್ಯವಾಗಿರುವ ಆಹಾರವನ್ನು ಉಣ್ಣುತ್ತಿರುವವನಾಗಿದ್ದಿ, ಈಗ ಕಪ್ಪೆಗಳು, ಏಡಿ (ನಳಿ)ಗಳು, ಇಲಿಗಳು, ಓತಿಗಳು - ಮುಂತಾಗಿರತಕ್ಕ ಜೀವರಾಶಿಗಳನ್ನು ಕೊಂದು ತಿನ್ನುವವನಾಗಿದ್ದೀಯೆ! ಇಂತಹವನ್ನು ತಿಂದು ನರಕಕ್ಕೆ ಹೋಗಲು ಇಷ್ಟಪಡುತ್ತೀಯಾ?" ಎಂದು ಹೇಳಲು ಆ ಪೆರ್ವಾವಿಗೆ ಜಾತಿಸ್ಮರಣೆ ಬಂತು. ಅದು

ಪೇಱ್ ಜಾತಿಸ್ಮರನಾಗಿ ಗುಹೆಯ ಬಾಗಿಲೊಳ್ ಬಂದಿರ್ದು ಧರ್ಮಮಂ ಕೇಳುತ್ತಿರ್ಪನ್ನೆಗಮಾ ಸೌಧರ್ಮಕಲ್ಪದೊಳ್ ಪುಟ್ಟಿರ್ದ ನಾಲ್ವರುಂ ದೇವರ್ಕಳ್ ತಮ್ಮ ಮುನ್ನಿನ ಪೆಣ್ಣ ರೂಪಂಗಳಂ ಕೈಕೊಂಡು ಬಂದು ಮುಂದೆ ನಿಂದಾಗಳ್ ಮಕ್ಕಳ್ ತಮ್ಮ ತಾಯ್ವರ್ಕಳ್ಗೆ ಕ್ಷೇಮಂಗುಡಲೆಂದು ಪೋದೊಡನ್ನೆಗಂ ಅವರ್ ಮುಟ್ಟದೆ ಮೇಗಣ್ಗೆ ನೆಗೆದಿರ್ದೊಡಿದೇನೆಂದು ಬೆಸಗೊಂಡೊಡವರ್ ವಜ್ರದಾಡಂ ಕೊಲೆ ಸತ್ತು ತಮ್ಮ ದೇವಗತಿಯೊಳ್ ಪುಟ್ಟಿದ ತೆಱನೆಲ್ಲಮಂ ಪೇೞ್ದು ಉಪರಿಚರ ಮಹಾನೃಪತಿಯಂ

ವೃತ್ತ ॥ ಏತತ್‌ಕ್ಷೇತ್ರಂ ಮದೀಯಂ ಗೃಹಮಿದಮಪರಂ ಮಾತೃಭಾರ್ಯಾಮಮೈತಾಃ
ಪುತ್ರೋಮೇಯಂ ಸುಕಾಂತ ಸ್ವಸೃ ದುಹಿತೃಜನೋ ಮಾನುಷೋ ಬಂಧುವರ್ಗಃ

ಅಶ್ವಾದಾಸಾ ಮನುಷ್ಯಾ ಮಮ ವರಮಹಿತಾ ದ್ರವ್ಯಗಾವೋ ಮಹಿಷ್ಯಃ
ಇತ್ಯೇವಂ ಮೇ ಬ್ರುವಾಣೋ ನರಪಶುರನಿಶಂ ನಾಶಯತ್ಯಾತ್ಮಕಾರ್ಯಂ

ಆರ್ಯೆ ॥ ಅರ್ಘೋ ಮೇ ಭಾರ್ಯಾ ಮೇ ಪುತ್ರೋ ಮೇ ಸ್ವಜನಬಂಧುವರ್ಗೋ ಮೇ
ಇತಿಮೇ ಮೇ ಕುರ್ವಾಣಂ ಪುರುಷಂ ಪಶುಂ ಹಂತಿ ಕಾಲವ್ಯಕಃ

ಎಂದಿವರರ್ಥಮನಿಂತೆಂದು ಪೇೞ್ದೊಡೆ ಎನ್ನ ಮಾಡಮೆನ್ನ ಪೊಲೆಲೆನ್ನ ನಾಡೆನ್ನ ತಾಯೆನ್ನ ಪೆಂಡಿರೆನ್ನ ಮಕ್ಕಳೆನ್ನ ತಂಗೆಯರೆನ್ನ ಮಾವಂದಿರೆನ್ನ ಬಂಧುವರ್ಗಮೆನ್ನಾನೆಗಳೆನ್ನ ಕುದುರೆಗಳೆನ್ನೆಮ್ಮೆಗಳೆನ್ನ ಪಶುಗಳೆನ್ನ

ಗುಹೆಯ ಬಾಗಿಲಿಗೆ ಬಂದು, ಅಲ್ಲಿದ್ದುಕೊಂಡು ಧರ್ಮವನ್ನು ಕೇಳುತ್ತಿದ್ದಿತು. ಅಷ್ಟರಲ್ಲಿ ಸೌಧರ್ಮವೆಂಬ ಸ್ವರ್ಗದಲ್ಲಿ ಹುಟ್ಟಿದ್ದ ನಾಲ್ಕು ಮಂದಿ ದೇವತೆಗಳು ತಮ್ಮ ಹಿಂದಿನ ಸ್ತ್ರೀರೂಪಗಳನ್ನು ಧರಿಸಿಕೊಂಡು ಬಂದು ಎದುರಿಗೆ ನಿಂತರು. ಆಗ ಮಕ್ಕಳು ತಮ್ಮ ತಾಯಂದಿರಿರಿಗೆ ಕ್ಷೇಮವನ್ನು ಸಲ್ಲಿಸುವುದಕ್ಕೆಂದು ಅವರ ಸಮೀಪಕ್ಕೆ ಹೋದರು. ಆದರೆ, ಮುಟ್ಟದೆಯೆ ಆಕಾಶದ ಕಡೆಗೆ ಏರಿದರು. ಇದೇಕೆ ಹೀಗೆ? - ಎಂದು ಕೇಳಿದಾಗ ಅವರು ವಜ್ರದಾಡನು ತಮ್ಮನ್ನು ಕೊಂದುದರಿಂದ ಸತ್ತು ತಾವೆಲ್ಲರೂ ದೇವತೆಗಳಾಗಿ ಹುಟ್ಟಿದ ವೃತ್ತಾಂತವನ್ನೆಲ್ಲ ಹೇಳಿದರು. ಆಮೇಲೆ ಉಪರಿಚರ ಮಹಾರಾಜನೊಡನೆ ಹೀಗೆಂದರು - ಈ (ನೆಲ ನನ್ನದು. ಈ ಮನೆ ಬೇರೆಯವರದಲ್ಲ (ನನ್ನದೇ). ಈ ತಾಯಿ, ಹೆಂಡಿರು ನನ್ನವರು. ಈ ಮಗನು, ಈ ಸುಂದರಿಯರಾದ ಸೊಸೆಯರು, ಹೆಣ್ಣುಮಕ್ಕಳು, ಮನುಷ್ಯರು, ನಂಟರ ಸಮುದಾಯ ನನ್ನವು. ಕುದುರೆಗಳು, ಸೇವಕರು, ನನ್ನ ಅತಿಹಿತವರು, ಹಣ-ಹಸು-ಎಮ್ಮೆಗಳು ನನ್ನವು- ಹೀಗೆ ನನ್ನವೆಂದು ಹೇಳಿಕೊಳ್ಳುವ ಮನುಷ್ಯರೂಪದ ಪ್ರಾಣಿ ಯಾವಾಗಲೂ ಆತ್ಮೋನ್ನತಿಯ ಕಾರ್ಯವನ್ನು ಕೆಡಿಸಿಕೊಳ್ಳುತ್ತಾನೆ.) ಐಶ್ವರ್ಯವು ನನಗೆ, ಹೆಂಡತಿ ನನಗೆ, ಮಗನೂ ನನಗೆ, ಸ್ವಜನರು ಬಂಧುವರ್ಗದವರು ನನಗೆ. ಈ ರೀತಿಯಾಗಿ ನನಗೆ ನನಗೆ (ಮೇ ಮೇ) ಎಂದು ಮಾಡಿಕೊಳ್ಳತಕ್ಕ ನರಜಂತುವನ್ನು (ಮನುಷ್ಯನೆಂಬ ಆಡನ್ನು) ಯಮನೆಂಬ ತೋಳನು ಕೊಲ್ಲುತ್ತದೆ.) ಹೀಗೆಂದು ಈ ಪದ್ಯಗಳ ಅರ್ಥವನ್ನು ಹೇಳಿದರು - "ನನ್ನ ಮನೆ, ನನ್ನ ಪಟ್ಟಣ, ನನ್ನ ನಾಡು, ನನ್ನ ತಾಯಿ, ನನ್ನ ಹೆಂಡತಿ, ನನ್ನ ಮಕ್ಕಳು, ನನ್ನ ತಂಗಿಯರು, ನನ್ನ ಮಾವಂದಿರು, ಬಂಧುವರ್ಗ, ಆನೆಗಳು, ಕುದುರೆಗಳು, ನನ್ನ ಎಮ್ಮೆಗಳು ಪಸುಗಳು, ನನ್ನ ಪರಿವಾರ, ನನ್ನ ಸೇವಕರು, ನನ್ನ

ಪರಿವಾರಮೆನ್ನ ತೊಟ್ಟಿರೆನ್ನ ಮಾಣಿಕಭಂಡಾರಂ ಸುವರ್ಣಭಂಡಾರಂ ಪಟ್ಟಸಭಂಡಾರಮೆಂದಿವಱೊಳ್ ಮೋಹಿಸಿದ ಬುದ್ಧಿಯನೊಡೆಯನಾಗಿಯಾರ್ತಧ್ಯಾನದಿಂ ಸತ್ತು ಪೆರ್ವಾವಾಗಿ ಪುಟ್ಟರ್ದೊಡೀಗಳಾಮುಂ ಪೆಂಡಿರಾಗಿಯುಮಿನಿವಿರಿದು ಶ್ರೀಯುಂ ವಿಭವಮುಮನೆಯ್ದಿದೆಮೆಂದು ಪೇಟ್ಟುಂ ತಮ್ಮ ದೇವತ್ವಮಂ ತೋಱಲ್ವೇಡಿ ಆಕಾಶಮೆಲ್ಲಂ ಚಿತ್ರಪಟಂಗೆದಱೆದಂತೆ ವಿಮಾನಂಗಳಿಂ ಸಂಛನ್ನಮಾಗಿ ವ್ಯಾಪಿಸೆ ಪರಿವಾರ ದೇವಿಯರ್ಕಳಿಂದಂ ದೇವರ್ಕಳಿಂದಂ ಗಣಿಕೆಯರ್ಕಳಿಂದಮಪ್ಸರೆಯರ್ಕಳಿಂದಂ ಪರಿವೇಷ್ಟಿತರಾಗಿ ನಾಲ್ವರುಂ ದೇವರ್ಕಳ್ ಘಂಟಾಜಾಳ ಮುಕ್ತಾಜಾಳ ಸಮನ್ವಿತಮಪ್ಪ ರತ್ನಮಯಮಾಗುತ್ತಿರ್ದ ವಿಚಿತ್ರಮಪ್ಪ ವಿಮಾನಂಗಳನೇಱೆ ದೇವಿಯರ್ಕಳ್ ಚಾಮರವಿಂಕೈಯಾಟಪಾಟವಿನೋದಂಗಳಿಂದಿಂತು ತಮ್ಮೈಶ್ವರ್ಯಮೆಲ್ಲಮಂ ತೋಱೆ ಇಂತೆಂದರ್ ಇದೆಲ್ಲಮೆಮಗೆ ಜಿನಧರ್ಮದ ಪರಮಸತ್ವದ ಪ್ರಸಾದದಿನಾದುದು ಮತ್ತುಪರಿಚರಮಹಾರಾಜಂ ಪುರುಷನಾಗಿಯುಂ ಮಹಾಸತ್ವಮು ನೊಡೆಯನಾಗಿಯುಂ ಮಿಥ್ಯಾತ್ವಂ ಕಾರಣಮಾಗಿಯಾರ್ತಧ್ಯಾನದಿಂ ಸತ್ತು ಪೆರ್ವಾವಾಗಿ ಪುಟ್ಟದನೆಂದು ಪೇಟ್ಟು ಮಕ್ಕಳಂ ಪೆರ್ವಾವುಮಂ ಪ್ರತಿಬೋಧಿಸಿ ತಮ್ಮ ಸ್ವರ್ಗಲೋಕಕ್ಕೆ ವ್ಪೋದರ್ ಮತ್ತೆ ಪೆರ್ವಾವೆನ್ನರಸಿಯರ್ಕಳ್ ದೇವರಾಗಿ ಪುಟ್ಟದರೆಂದಾದಮಾನುಂ ಸಂತೋಷಂಬಟ್ಟು ಪರಿಣಾಮದೊಳ್ ಕೂಡಿರ್ದುದಂ ಸಾರಸ್ವತಭಟ್ಟಾರರಱಿದು ಋಷಿಸಮುದಾಯಂಬೆರಸು ಪೆರ್ವಾವಿರ್ದೆಡೆಗೆ ಪೋಗಿ ಇಂತೆಂದು ಧರ್ಮಮಂ ಪೇಟ್ಟಪರ್

ಮಾಣಿಕ್ಯ ಭಂಡಾರ, ಹೊನ್ನ ಭಂಡಾರ, ರೇಷ್ಮೆವಸ್ತ್ರಭಂಡಾರ - ಎಂದು ಇವುಗಳಲ್ಲಿ ಮೋಹಗೊಂಡು ಬುದ್ಧಿಯುಳ್ಳವನಾಗಿ ಆರ್ತ ಧ್ಯಾನದಿಂದ ಸತ್ತು ಹೆಬ್ಬಾವಾಗಿ ನೀನು ಹುಟ್ಟಿರುವಿ. ನಾವು ಹೆಂಡಿರಾಗಿಯೂ ಇಷ್ಟೊಂದು ಹೆಚ್ಚಿನ ಐಶ್ವರ್ಯ ವೈಭವವನ್ನು ಹೊಂದಿದೆವು" ಎಂದು ಹೇಳಿ, ತಮ್ಮದೇವತ್ವವನ್ನು ಪ್ರದರ್ಶಿಸಿಬೇಕೆಂಬ ಉದ್ದೇಶದಿಂದ ಆಕಾಶವನ್ನೆಲ್ಲ ಚಿತ್ರಪಟಗಳನ್ನು ಕೆದರಿದಂತೆ ವಿಮಾನಗಳಿಂದ ಮುಚ್ಚಿ ಆವರಿಸಿದರು. ಪರಿವಾರದೇವಿಯರಿಂದಲೂ ದೇವತೆಗಳಿಂದಲೂ ವೇಶ್ಯೆಯರಿಂದಲೂ ದೇವತಾಸ್ತ್ರೀಯರಿಂದಲೂ ಆವೃತರಾಗಿ ಆ ನಾಲ್ಕು ಮಂದಿ ದೇವತೆಗಳು ಗಂಟೆಗಳ ಮತ್ತು ಮುತ್ತುಗಳ ಸಮೂಹದಿಂದ ಕೂಡಿ ರತ್ನಮಯವಾಗಿದ್ದ ಆಶ್ಚರ್ಯಕರವಾದ ವಿಮಾನಗಳನ್ನೇರಿದರು. ದೇವಿಯರು ಚಾಮರವನ್ನು ಬೀಸುತ್ತಿರಲು ಆಟ ಪಾಟ ವಿನೋದಗಳಿಂದ ತಮ್ಮ ಐಶ್ವರ್ಯವನ್ನೆಲ್ಲ ತೋರಿಸಿ ಹೀಗೆಂದರು - "ನಮಗೆ ಇವೆಲ್ಲವೂ ಜೈನಧರ್ಮದ ಪರಮಸತ್ವದ ಅನುಗ್ರಹದಿಂದ ಆಗಿವೆ. ಉಪರಿಚರ ಮಹಾರಾಜನು ಗಂಡುಸಾಗಿಯೂ ಮಹಾ ಸತ್ವವುಳ್ಳವನಾಗಿಯೂ ಮಿಥ್ಯಾತ್ವದಿಂದ ಆರ್ತಧ್ಯಾನದಿಂದ ಸತ್ತು ಹೆಬ್ಬಾವಾಗಿ ಹುಟ್ಟಿದನು." ಹೀಗೆ ಹೇಳಿ, ಮಕ್ಕಳನ್ನೂ ಹೆಬ್ಬಾವನ್ನೂ ಬೋಧನೆ ಮಾಡಿ ತಮ್ಮ ಸ್ವರ್ಗಲೋಕಕ್ಕೆ ಹೋದರು. ಆನಂತರ, ಆ ಹೆಬ್ಬಾವು ನನ್ನ ಹೆಂಡಿರು ದೇವತೆಗಳಾಗಿ ಹುಟ್ಟಿದರೆಂದು ಅತ್ಯಂತ ಸಂತೋಷಪಟ್ಟು ಧರ್ಮದ ಪರಿಣಾಮವನ್ನು ಹೊಂದಿದೆಯೆಂಬುದನ್ನು ಸಾರಸ್ವತ ಋಷಿಗಳು ತಿಳಿದು ಋಷಿಗಳ ಸಮೂಹವನ್ನೂ ಕೂಡಿಕೊಂಡು ಆ ಹೆಬ್ಬಾವಿದ್ದಲ್ಲಿಗೆ ಹೋಗಿ, ಈ ರೀತಿಯಾಗಿ ಧರ್ಮೋಪದೇಶವನ್ನು

ಗಾಹೆ ॥ ಸೋ ಧಮ್ಮೋ ಜತ್ಥ ದಯಾ ಸೋವಿ ತಓ ವಿಸಯಣಿಗ್ಗಹೋ ಜತ್ಥ
ದಸ ಅಟ್ಠದೋಸರಹಿಓ ಸೋ ದೇವ್ವೋ ಣತ್ಥಿ ಸಂದೇಹೋ

ಮತ್ತಂ

ವೃತ್ತ ॥ ಯತ್ನೇನ ಪಾಪಾನಿ ಸಮಾಚರಂತಿ
ಧರ್ಮಂ ಪ್ರಸಂಗಾದಪಿ ನಾಚರಂತಿ
ಆಶ್ಚರ್ಯಮೇತದ್ಧಿ ಮನುಷ್ಯಲೋಕೇ
ಕ್ಷೀರಂ ಪರಿತ್ಯಜ್ಯ ವಿಷಂ ಪಿಬಂತಿ

ಸಮಾಗಮಾಃ ಸ್ವಾವಸಮಾಹಿ ಸರ್ವೇ
ವಿಭೂತಯೋಪಿ ಪ್ರತಿಭಂಗುರಾಃ ಸ್ಯುಃ
ಧರ್ಮೋಽರ್ಹತಾಮೇವ ಸುಶಾಸ್ವತೋಽಯ
ಮಿತಿ ಪ್ರಜಂತ್ಯಾತ್ಮರತಿರ್ಬಭೂವ

ನಿಶ್ಚಯಮುದಿತಸ್ಯ ರವೇಃ
ಪತನಂ ಜಾತಸ್ಯ ಮರಣಮಪಿ ಸರ್ವಸ್ಯ
ತಸ್ಮಾದ್ವಿದುಷಾ ಭಾವ್ಯಂ
ಸದೈವ ಜಾತೇನ ಧರ್ಮಕರ್ಮರತೇನ

ಮಾಡಿದರು - ಎಲ್ಲಿ ದಯೆ ಇದೆಯೋ ಅದು ಧರ್ಮವು ಮತ್ತು ಎಲ್ಲಿ ಇಂದ್ರಿಯ ನಿಗ್ರಹವಿದೆಯೋ ಅದು ಕೂಡ ಧರ್ಮವು. ಹದಿನೆಂಟು ದೋಷಗಳಿಲ್ಲದವನೇ ದೇವನು. ಇದರಲ್ಲಿ ಸಂದೇಹವಿಲ್ಲ. ಅದುವಲ್ಲದೆ, ಪ್ರಯತ್ನದಿಂದ ಪಾಪಗಳನ್ನು ಮಾಡುತ್ತಾರೆ. ಸಂದರ್ಭವಶದಿಂದಾದರೂ ಧರ್ಮವನ್ನು ಮಾಡುವುದಿಲ್ಲ. ಇದು ಮಾನವಲೋಕದಲ್ಲಿ ಆಶ್ಚರ್ಯವಲ್ಲವೆ ? ಹಾಲನ್ನು ಬಿಟ್ಟು ವಿಷವನ್ನು ಕುಡಿಯುತ್ತಾರೆ. ಎಲ್ಲಾ ಒಡನಾಟಗಳು ತನ್ನ ವಶದಲ್ಲಿ ಇಲ್ಲವಷ್ಟೆ ? ಐಶ್ವರ್ಯಗಳು ಕೂಡ ಅಲ್ಪಕಾಲದಲ್ಲಿಯೇ ನಾಶವಾಗುವುವಲ್ಲವೆ? ಅರ್ಹಂತರು ಉಪದೇಶಿಸಿರುವ ಈ ಜಿನಧರ್ಮವೇ ಅತ್ಯಂತ ಶಾಶ್ವತವಾದುದು - ಹೀಗೆಂದು ವಿಶೇಷವಾಗಿ ಚಿಂತಿಸಿಕೊಂಡರೆ ಆತ್ಮನಲ್ಲಿ ಆಸಕ್ತಿ ಹುಟ್ಟೀತು. ಉದಯಿಸಿದ ಸೂರ್ಯನು ಮುಳುಗುವುದು ನಿಶ್ಚಯ. ಹುಟ್ಟಿಬಂದಿರುವ ಎಲ್ಲಕ್ಕೂ ಸಾವು ಕೂಡ ನಿಶ್ಚಯ. ಆದುದರಿಂದ ಹುಟ್ಟಿಬಂದವನೂ ಧರ್ಮಕರ್ಮದಲ್ಲಿ ಆಸಕ್ತಿಯುಳ್ಳವನೂ ಆದ ವಿದ್ವಾಂಸನು ಇದನ್ನು ಭಾವಿಸಬೇಕಾದುದು ಅವಶ್ಯವಾಗಿದೆ. ಯೌವನ, ಶಕ್ತಿ, ವೈಭವ, ರೂಪ, ಸೌಭಾಗ್ಯಗಳು ಹೂ ಹಣ್ಣುಗಳ ಭಾರವುಳ್ಳ ಮರದಂತೆ. ಎಲ್ಲರ ಬದುಕೂ ಬೆಟ್ಟದ ಝರಿಯ ನೀರಿನಂತೆ ವೇಗ ಓಡುತ್ತದೆ. ಜೀವನು ಒಬ್ಬನಾಗಿಯೇ ಸಾಯುತ್ತಾನೆ. ಒಬ್ಬನೇ ಹುಟ್ಟುತ್ತಾನೆ. ಜೀವಿಗಳ ಜನ್ಮಜನ್ಮಗಳಲ್ಲಿ ಬೇರೆ ಬೇರೆಯಾದವರು ಯಾರ ತಾಯಿಯೋ ಯಾರ ತಂದೆಯೋ ಯಾರ ಹೆಂಡತಿಯೋ ಮತ್ತೆ ಯಾರ ಮಗನೋ ಆಗುವರಲ್ಲವೇ ? ದ್ರವ್ಯಗಳು ಮನೆಗಳಲ್ಲಿ ನಿಲ್ಲುತ್ತವೆ. ಬಂಧುಗಳು ಮಸಣದವರೆಗೆ ಬಂದು ನಿಲ್ಲುತ್ತಾರೆ. ದೇಹವು ಬೆಂಕಿಯ ಮಾಲೆಯಲ್ಲಿ ನಿಲ್ಲುತ್ತದೆ. ಪುಣ್ಯವೂ ಪಾಪವೂ ಮಾತ್ರ ಜೊತೆಯಲ್ಲಿ

ಪುಷ್ಪ ಫಲಭಾರಾ ತರುವದ್ಭೌವನ ಬಲವಿಭವರೂಪ ಸೌಭಾಗ್ಯಾನಿ
ಗಿರಿಸರಿದಂಭಃ ಪ್ರತಿಮಂ ಸರ್ವೇಷಾಂ ಜೀವಿತಂ ಚ ಧಾವತಿ ಶೀಘ್ರಮ್

ಗಾಹೆ ॥ ಏಗೋ ಯ ಮರದಿ ಜೀವ್ವೋ ಏಗೋ ಯ ದಿವಂ ಉವವಜ್ಜ ಇ
ಏಗೋ ಸ ಜಾ ಇ ಮರಣಂ ಏಗೋ ಸಜ್ಜಾ ಇ ಣಿರಯಂ ವಾ

ಶ್ಲೋಕ ॥ ಕಸ್ಯ ಮಾತಾ ಪಿತಾ ಕಸ್ಯ ಕಸ್ಯ ಭಾರ್ಯಾ ಸುತೋಪಿ ವಾ
ಜಾತೌ ಜಾತೌ ಹಿ ಜೀವಾನಾಂ ಭವಿಷ್ಯಂತಿ ಪರೇ ಪರೇ

ಅರ್ಥಾ ಗೃಹೇಷು ತಿಷ್ಠಂತಿ ಶ್ಮಶಾನೇಷು ಚ ಬಾಂಧವಾಃ
ಶರೀರ ಜ್ವಾಲಾಮಾಲಾಯಾಂ ಸುಕೃತಂ ದುಷ್ಕೃತಂ ವ್ರಜೇತ್

ಎಂದಿಂತು ಪಿರಿದು ಬೇಗಂ ಧರ್ಮಮಂ ಪೇಟ್ದು ಶ್ರಾವಕವ್ರತಂಗಳನೇಜಿಸಿ ಮತ್ತಮಿಂತೆಂದರ್ ನಿನಗಾಯುಷ್ಯಂ ಪದಿನಯ್ದು ದಿವಸಮೆಂದು ಪೇಟ್ದೊಡಾ ಮಾತಂ ಕೇಳ್ದು ಆಹಾರ ಶರೀರಕ್ಕಂ ಜಾವಜ್ಜೀವಂ ನಿವೃತ್ತಿಗೆಯ್ದು ಸಂನ್ಯಸನಂಗೆಯ್ದಿರ್ದೊಡದಂ ಭಟಾರರಜಿತಸೇನಂತವೀರ್ಯಂಗೆ ಪೇೞ್ದರಿದು ಸಂನ್ಯಸನಂಗೆಯ್ದರ್ದುದಿದರ್ಕೆ ಪೂಜೆಯಂ ಮಾಡಿಮೆನೆ ಅತನುಂ ಪರಿಯ ಪಂವರಂ ಮಾಡಿಸಿಯಲ್ಲಿ ನಾನಾಪ್ರಕಾರದ ನೇತ್ರ ಪಟೆಯುಲ್ಲವಂಗಳುದುಂ ಧ್ವಜಂಗಳುಮಂ ಕಟ್ಟಿಸಿ ದೇವತಾಪ್ರತಿಮೆಯಂ

ಬರುತ್ತವೆ. ಈ ರೀತಿಯಾಗಿ ಬಹಳ ಬೇಗನೆ ಸಾರಸ್ವತ ಋಷಿಗಳು ಧರ್ಮೋಪದೇಶ ಮಾಡಿ, ಶ್ರಾವಕಗಳನ್ನು ಸ್ವೀಕಾರಮಾಡಿಸಿ - "ನಿನಗೆ ಹದಿನೈದು ದಿವಸಗಳ ಆಯುಷ್ಯವಿದೆ" ಎಂದರು. ಆ ಮಾತನ್ನು ಕೇಳಿ ಹೆಬ್ಬಾವು ಜೀವಿಸಿರುವವರೆಗೂ ಆಹಾರವನ್ನು ಬಿಟ್ಟು ಸಂನ್ಯಾಸವನ್ನು ಕೈಗೊಂಡಿತು. ಇದನ್ನು ಋಷಿಗಳು ತಿಳಿದು ಅನಂತವೀರ್ಯನೊಡನೆ - "ಇದು ಸಂನ್ಯಾಸವನ್ನು ಮಾಡಿಕೊಂಡಿದೆ. ಇದಕ್ಕೆ ನೀವು ಪೂಜೆ ಮಾಡಿ" ಎಂದು ಹೇಳಿದರು. ಅದರಂತೆ ಅನಂತವೀರ್ಯನು ದೊಡ್ಡದೊಂದು ಚಪ್ಪರವನ್ನು ಮಾಡಿಸಿದರು. ಅಲ್ಲಿ ಹಲವಾರು ವಿಧವಾದ ನೇತ್ರವೆಂಬ ಹೆಸರುಳ್ಳ ರೇಷ್ಮೆವಸ್ತ್ರದ ಮೇಲ್ಕಟ್ಟುಗಳನ್ನೂ ಪತಾಕೆಗಳನ್ನೂ ಕಟ್ಟಿಸಿದನು. ಅಲ್ಲಿ ದೇವತಾಪ್ರತಿಮೆಯನ್ನು ಇಟ್ಟು ಅಭಿಷೇಕವನ್ನು ಮಾಡುತ್ತ ಮೂರು ಹೊತ್ತೂ ಮಹಾಮಹಿಮೆಯನ್ನೂ ಪೂಜೆಗಳನ್ನೂ ನಡೆಸುತ್ತ ನಮಸ್ಕಾರಗಳನ್ನು ಮಾಡಿಸುತ್ತ ಇರಲು, ಋಷಿಗಳು ಆರಾಧನಾ ಎಂಬ ಗ್ರಂಥವನ್ನು ಪೂಜೆಮಾಡಿ ವ್ಯಾಖ್ಯಾನವನ್ನು ಮಾಡತೊಡಗಿದರು - ಪ್ರಾಣವು ಗಂಟಲಿಗೆ ಬಂದಾಗ ಕೂಡ ಯಾವನು ಸಂನ್ಯಾಸದಲ್ಲಿ ಮನಸ್ಸುಳ್ಳವನಾಗಿರುವನೋ ಅವನು ಹಿಂದಿರುಗಿ ಬರುವುದೆಂಬುದು ಇಲ್ಲದ ಮೋಕ್ಷವೆಂಬ ಮನೆಗೆ ಹೋಗುತ್ತಾನೆ. ಈ ಜನ್ಮದಲ್ಲಿ ಮಾಡಿದ ಪಾಪವು, ಹಿಂದೆ ಮಾಡಿದ ಪಾಪವು ಯಾವುದೋ ಅದೆಲ್ಲ ಅಗ್ನಿಯಿಂದ ಸೌದೆ ಹೇಗೋ ಹಾಗೆ, ಸಂನ್ಯಾಸದಿಂದ ಸುಟ್ಟುಹೋಗುತ್ತದೆ. ಹೃದಯದಲ್ಲಿಯೂ ಹಣೆಯಲ್ಲಿಯೂ (ಹುಬ್ಬುಗಳ ನಡುವೆಯೂ), ಆತ್ಮವನ್ನೂ ಕೈಯನ್ನೂ ಒಂದು ಮುಹೂರ್ತಕಾಲವಾದರೂ ಇಟ್ಟುಕೊಂಡು ಸಮತ್ವದಿಂದ ನಿಂತಿರುವವನ ಅಜ್ಞಾನತೆಯಿಂದಾಗಿ ಮಾಡಲ್ಪಟ್ಟು ಪುಣ್ಯರೂಪವಾದ ಕರ್ಮಗಳ ಭಾರವು ಸಂನ್ಯಾಸದಿಂದ ಒಳ್ಳೆಯ ವಿನಾಶವನ್ನು ಹೊಂದುತ್ತದೆ. ಊರ್ಧ್ವಲೋಕ(ಸ್ವರ್ಗ)ದಲ್ಲಿ,

ನಿಜೆಸಿಯಭಿಷೇಕಂಗೆಯ್ಯುತ್ತಂ ಮೂಱು ಪೊೞ್ತುಂ ಮಹಾಮಹಿಮೆಯಂ ಪೂಜೆಗಳುಮಂ ಪೊಡೆಮಡಿಸುತ್ತಿರೆಭಟ್ಟಾರರುಮಾರಾಧನೆಯನರ್ಚಿಸಿ ಸ್ವಾಧ್ಯಾಯಂಗೊಂಡಿತೆಂದಾರಾಧನೆಯಂ ವಕ್ಕಾಣಿಸಲ್ ತಗುಳ್ದರ್

ಶ್ಲೋಕ॥ ಸಂನ್ಯಸನೇಸ್ತಿ [ಮತಿರ್ಯೋ?] ಪಾಣ್ಯೈಃ ಕಂಠಗತೈರಪಿ
ಸ ಗಚ್ಛೇನ್ನೋಕ್ಷಸದನಂ ಪುನರಾಗಮವರ್ಜಿತಮ್

ಇಹ ಜನ್ಮಕೃತಂ ಪಾಪಂ ಯಚ್ಚ ಪಾಪಂ ಪುರಾಕೃತಂ
ಸಂನ್ಯಸನೇನ ತತ್ಸರ್ವಂ ದಹತ್ಯಗ್ನಿರಿವೇಂಧನಂ

ಅಜ್ಞಾನಾಭ್ಭಾವಾತ್ ಕೃತ ಕರ್ಮಭಾರಃ
ಸಂನ್ಯಾಸನಾತ್ ಸತ್‌ಪುರುಯಂ ಪ್ರಯಾತಿ
ಮುಹೂರ್ತ ಕಾಲೇ ಹೃದಯೇ ಲಲಾಟೇ
ಜೀವಂ ಕರಂ ನ್ಯಸ್ಯ ಸಮಸ್ಥಿತಸ್ಯ

ಗಾಹೆ॥ ಉಡ್ಢಮಹೇ ತಿರಿಯಮ್ಮಿಯ ಮದಾಣಿ ಯಕಾಮಗಾಣಿ ಮರಣಾಣಿ
ದಂಸಣ ಣಾಣ ಸಮಗ್ಗೋ ಪಂಡಿಯ ಮರಣಂ ಅಣುಮಲಿಸ್ಸಂ

ಉವ್ವೆಯ ಮರಣಂ ಜಾ ಈ ಮರಣಂ ಣಿರಯೇ ಸುವೇದಣಾ ಓ ಯ
ಏದಾಣಿ ಸಂಚರಂತೋ ಪಂಡಿಯ ಮರಣಂ ಅಣುಮಲಿಸ್ಸಂ

ಏಕ್ಕಂ ಪಂಡಿಯ ಮರಣಂ ಛಿಂದ ೇ ಜಾಈಸದಾಣಿ ಬಹುಗಾಣಿ
ತಂ ಮರಣಂ ಮರಿದವ್ವಂ ಜೇಣ ಮದಂ ಸುಮ್ಮದಂ ಹೋ ೇ

ಕೆಳಗಿನ ಲೋಕಗಳಾದ ನರಕಭವನ ವ್ಯಂತರ ಜ್ಯೋತಿಷ್ಕಲೋಕಗಳಲ್ಲಿ ಏಕೇಂದ್ರಿಯಾದಿ ಜೀವಜಾತಿಗಳಲ್ಲಿ ಅನೇಕ ಬಾಲಮರಣಗಳನ್ನು ಪಡೆದಿದ್ದೇನೆ ಇನ್ನುಮೇಲೆ ಸಮ್ಯಗ್ದರ್ಶನ ಜ್ಞಾನಗಳಿಂದ ಕೂಡಿದ ಪಂಡಿತಮರಣವನ್ನು ಪಡೆಯುತ್ತೇನೆ. ಉದ್ವೇಗಯುಕ್ತ ಮರಣ, ಜಾತಿಮರಣ (ಹುಟ್ಟುವಾಗಲೇ ಸಾಯುವುದು), ನರಕಗಳಲ್ಲಿ ನೋವು ಹಿಂಸೆಗಳು, ಇವನ್ನು ಚೆನ್ನಾಗಿ ಸ್ಮರಿಸಿಕೊಳ್ಳುತ್ತ ನಾನು ಪಂಡಿತಮರಣವನ್ನು ಹೊಂದುತ್ತೇನೆ, ಒಂದು ಪಂಡಿತಮರಣವು ನೂರು ಜನ್ಮಗಳನ್ನೂ ಅನೇಕವಾದವುಗಳನ್ನೂ ನಾಶಗೊಳಿಸುತ್ತದೆ. ಯಾವುದರಿಂದ ಸಾವು ಒಳ್ಳೆಯ ಮರಣವಾಗುತ್ತದೋ ಆ ಮರಣವೇ ಪಡೆಯಬೇಕಾದ ಮರಣ. ಸಂನ್ಯಾಸಕಾಲದಲ್ಲಿ ಉತ್ಪನ್ನವಾಗುವ ಹಸಿವು ಮುಂತಾದ ಹಿಂಸೆಗಳು ನರಕದುಃಖದ ಸ್ವರೂಪವನ್ನು ತೋರಿಸುತ್ತವೆ. ಹೀಗಿರುವಾಗ ಸಂಸಾರದಲ್ಲಿ ಸುತ್ತುತ್ತಿರುವ ನನಗೆ ದುಃಖ ಬಾರದಿರುವುದೇ ?- ಎಂದು ಚಿಂತಿಸಬೇಕು. ಸಂಸಾರವೆಂಬ ಚಕ್ರದಲ್ಲಿ ಸುತ್ತುತ್ತಿರುವ ನಾನು ಎಷ್ಟೋ ಬಾರಿ ಅನೇಕ ರೀತಿಯ. ಪುದ್ಗಲಗಳನ್ನು (ಮೊಸರು, ಸಕ್ಕರೆ, ಬೆಲ್ಲ ಮುಂತಾದ ಭೋಗ್ಯವಸ್ತುಗಳನ್ನು) ತಿಂದು ಜೀರ್ಣಿಸಿದ್ದೇನೆ. ಆದರೂ ತೃಪ್ತಿಯಾಗಲಿಲ್ಲ - ಎಂದು ಚಿಂತಿಸತಕ್ಕುದು. ಮೀನುಗಳು ಆಹಾರಕ್ಕಾಗಿ ಏಳನೆಯ ಪೃಥ್ವಿ (ಅವಧಿಸ್ಥಾನ)ಯನ್ನು ಪ್ರವೇಶಿಸುತ್ತವಲ್ಲವೆ ? ಚೇತನದಿಂದ ಕೂಡಿದ (ಪ್ರಾಣಿ ಹಿಂಸೆಯಿಂದ ಬಂದ) ಅಯೋಗ್ಯ

ಜ ಇ ಉಪ್ಪಜ್ಜ ಇ ದುಕ್ಖಂ ತೋ ವಟ್ಟವ್ವೋ ಸಭಾವದೋ ಣಿರಯೇ
ಕದಮಂ ಮವಿ ಣ ಪತ್ತಂ ಸಂಸಾರೇ ಸಂಸರಂತೇಣ

ಸಂಸಾರಚಕ್ಕವಾಳಮ್ಮಿ ಮ ವಿ ಸವ್ವೇ ಪೊಗ್ಗಳಾ ಬಹುಸೋ
ಆಹಾರಿದಾ ಯ ಪರಿಣಾಮಿದಾಯ ಣ ಚ ಮೇ ಗದಾ ತಿತ್ತೀ

ಆಹಾರಣಿಮಿತ್ತಂ ಕಿರ ಮಚ್ಛಾ ಗಚ್ಛಂತಿ ಸತ್ತಮಂ ಪುಢವಿಂ
ಸಚ್ಚತ್ತೋ ಆಹಾರೋ ಣಖಮದಿ ಮಣಸಾ ವಿ ಪತ್ಥೇದುಂ

ತಣಕಟ್ಠೇಣ ಅಗ್ಗೀ ಲವಣ ಸಮುದ್ದೋ ಣದೀ ಸಹಸ್ಸೇಹಿಂ
ಣ ಇಮೋ ಜೀವೋ ಸಕ್ಕೋ ತಪ್ಪೇದುಂ ಕಾಮಭೋಗೇಹಿಂ

ಜಹ ಜಹ ಭುಂಜ ಇ ಭೋಗೇ ತಹತಹ ಭೋಗೇಸು ವಡ್ಢದೇ ತಣ್ಹಾ
ಅಗ್ಗೀವ ಇಂಧಣಾಇಂ ತಣಂ ದ್ವೀವಂತಿ ಸೇ ಭೋಗಾ

ವೃತ್ತ ॥ ಸ ಲವಣರಸಮಂಭೋ ಭುಜ್ಯಮಾನಂ ತೃಷಾರ್ತ್ತೈ
ರಧಿಕತರ ತೃಷಾರ್ತಾನ್ ದುಃಖಿತಾನೇನ ಕುರ್ಯಾತ್
ವಿಷಯ ಸುಖಮಪೀದಂ ಭುಜ್ಯಮಾನಂ ತೃಷಾರ್ತ್ತೈ
ರಧಿಕತರ ತೃಷಾರ್ತಾನ್ ದುಃಖಿತಾನೇನ ಕುರ್ಯಾತ್

ಆರ್ಯ ॥ ಯದ್ಯ ಪಿ ನಿಷೇವ್ಯಮಾಣಾ
ಮನಸಸ್ತುಷ್ಟಿಕಾರಕಾ ವಿಷಯಾಃ

ಆಹಾರವು ಮನಸ್ಸಿನಲ್ಲಿಯೂ ಬಯಸಲು ಯೋಗ್ಯವೆನಿಸುವುದಿಲ್ಲ. ಹುಲ್ಲುಕಟ್ಟಿಗೆಗಳಿಂದ ಬೆಂಕಿ ಹೇಗೆ ತೃಪ್ತಿಗೊಳ್ಳುವುದಿಲ್ಲವೋ ಉಪ್ಪುಗಡಲು ಸಾವಿರಾರು ನದಿಗಳಿಂದಲೂ ಹೇಗೆ ತುಂಬುವುದಿಲ್ಲವೋ ಹಾಗೆಯೇ, ಈ ಜೀವನು ಕಾಮಭೋಗದಿಂದ (ಸ್ತ್ರೀವಸ್ತ್ರಾದಿ ಭೋಗವಸ್ತುಗಳಿಂದ) ತೃಪ್ತಿಪಡಿಸಲು ಸಾಧ್ಯವಾಗದವನು. ಭೋಗಗಳು ಹೇಗೆ ಹೇಗೆ ಭೋಗಿಸಲ್ಪಡುವುವೋ ಹಾಗೆ ಹಾಗೆ ಭೋಗಗಳಲ್ಲಿ ಆಸೆ ಹೆಚ್ಚಾಗುತ್ತದೆ. ಸೌದೆಗಳಿಂದ ಬೆಂಕಿಯ ಹಾಗೆ ಆ ಭೋಗಗಳು ತೃಷ್ಣೆಯನ್ನು (ಆಸೆಯನ್ನು) ಉದ್ದೀಪನಗೊಳಿಸುತ್ತವೆ. ಬಾಯಾರಿಕೆಯಿಂದ ಪೀಡಿತರಾದವರು ಉಪ್ಪುನೀರನ್ನು ಕುಡಿದರೆ ಅದು ಅವರ ಬಾಯಾರಿಕೆಯನ್ನು ಅಧಿಕಗೊಳಿಸಿ ಪೀಡಿಸುವುದು, ದುಃಖಿತರನ್ನಾಗಿ ಮಾಡುವುದು. ಈ ವಿಷಯಸುಖವು ಕೂಡ, ಆಶಾಪೀಡಿತರಾದವರಿಂದ ಸೇವಿತವಾಗಿದ್ದು ಹೆಚ್ಚಾದ ಆಶೆಯಿಂದ ಪೀಡಿತರನ್ನಾಗಿಯೂ ದುಃಖಿತರನ್ನಾಗಿಯೂ ಮಾಡುತ್ತದೆ. ಮನಸ್ಸಿಗೆ ಸಂತೋಷವನ್ನುಂಟುಮಾಡುವ ವಸ್ತುಗಳು ಸೇವಿಸಲ್ಪಡುವವಾದರೂ ಅನಂತರ ಅವು, ಕಿಂಪಾಕಫಲವನ್ನು (ಹೆಮ್ಮುಟ್ಟಿ ಹಣ್ಣನ್ನು) ತಿಂದಹಾಗೆ ಬಹಳ ಕೆಟ್ಟಪರಿಣಾಮಕರವಾಗಿ ಪರಿಣಮಿಸುತ್ತವೆ. - ಈ ಹಣ್ಣು ಕಾಣಲು ಚೆಲುವು, ತಿನ್ನಲು ರುಚಿ, ತಿಂದರೆ ಪ್ರಾಣಹಾನಿ, ಮೃತ್ಯುದೇವತೆ ಮೇಲೆ ಹಾಯ್ದು ಬಂದಾಗ ರಕ್ಷಿಸತಕ್ಕವು ಯಾವುವೂ ಇಲ್ಲ. ಅಂತಹ ಸಂದರ್ಭದಲ್ಲಿ ಔಷಧಿ, ಮಂತ್ರ, ಇಷ್ಟದೇವತೆಗಳು, ಶ್ರೇಷ್ಠವಾದ ಬಾಣಗಳು, ಕೋಟೆ,

ಕಿಂಪಾಕಫಲಾರ್ಜನವದ್
ಭವಂತಿ ಪಶ್ಚಾದತಿ ದುರಂತಾಃ

ವೃತ್ತ ॥ ಮದ್ದುಂ ಮಂತ್ರಮುಮಿಷ್ಟದೇವತೆಗಳುಂ ದಿವ್ಯಾಸ್ತ್ರಮುಂ ಕೋಂಟೆಯುಂ
ಗುರ್ದುಂ ಪೊರ್ದಿದ ಚಾತುರಂಗಬಲಮುಂ ಮೆಯ್ಗಾಪುಮಾ ವೇಳಿಗೊಂ
ದಿರ್ದನ್ನುಗ್ರ ಭಟರ್ಕಳುಂ ಕಪಟಮುಂ ಮಿತ್ರರ್ಕಳುಂ ಮಿಚ್ಚು ಮೇ
ಲಿರ್ದಾಗಳ್ ಸಮಣಪ್ಪೊಡೇಕೆ ಮಡಿವರ್ ಪನ್ನಿರ್ವರುಂ ಚಕ್ರಿಗಳ್

ಸಾವನಿತೊಂದವಸ್ಥೆ ತನಗಾದೆಡೆಯೊಳ್ ತಜಿಸಂದು ತತ್ವಮಂ
ಭಾವಿಸಿ ಬಾಹ್ಯವಸ್ತುಗಳೊಳೊಂದದೆ ತನ್ನೊಳೆ ನಿಂದು ಕರ್ಮವಿ
ದ್ರಾವಣಮಂ ವಿರೋಧಿ ಮೊರೆಕೊಂಡಿರೆ ಗೆಲ್ದು ಪರೀಷಹಂಗಳಂ
ಜೀವಮನಿಂತು ಸಂತಮೊದಲಿಂ ಕಳೆಗೆಂಬುದು ಜೈನಶಾಸನಂ

ಆರೊಳಮಿಲ್ಲ ಮೋಹಮೆನಗೆನ್ನೆ ಜಿನೇಂದ್ರಪದಂಗಳುಗ್ರ ಸಂ
ಸಾರಹರಂಗಳೆನ್ನೆ ಪೆಱತಿಲ್ಲೆನಗೆನ್ನಜೆವಲ್ಲದೆನ್ನೆ ನಿಂ
ದಾರಯೆ ಧರ್ಮಮೊಂದೆ ಶರಣೆನ್ನೆ ಪಲಾಲಮನೊಲ್ಲೆನಿನ್ ನಮ
ಸ್ಕಾರಮೆ ಸಾಲ್ಗುಮೆನ್ನಿನಿತನೆನ್ನೆನಲಾಪ್ರೊಡೆ ಜೀವಿತಾಂತ್ಯದೊಳ್

ಗುದ್ದು (ಮುಷ್ಟಿಯಿಂದ ತಿವಿತ), ಸೇರಿರುವ ಚತುರಂಗ ಸೈನ್ಯ, ಅಂಗರಕ್ಷಕರು, ಒಡೆಯನು ಸಾಯುತ್ತಲೇ ತಾವೂ ಸಾಯುತ್ತೇವೆ ಎಂಬ ಸಮಯಪಾಲನೆಯ ಪ್ರತಿಜ್ಞೆಮಾಡಿದ ಅತಿ ಭಯಂಕರ ಯೋಧರು, ಕಪಟ, ಸ್ನೇಹಿತರು - ಇಂಥವು ಆಶ್ರಯವಾಗುವುದಾದರೆ, ಹನ್ನೆರಡು ಮಂದಿ ಚಕ್ರವರ್ತಿಗಳು ಏಕೆ ಸತ್ತರು?. ಸಾಯುವ ಒಂದು ಸ್ಥಿತಿ ತನಗುಂಟಾದ ಸಂದರ್ಭದಲ್ಲಿ ನಿಶ್ಚಯ ಮಾಡಿಕೊಂಡು, ಜೈನತತ್ತ್ವವನ್ನು ಧ್ಯಾನಿಸಿ, ಹೊರಗಿನ ವಿಷಯಗಳಲ್ಲಿ ಸೇರಿಕೊಳ್ಳದೆ, ತನ್ನಲ್ಲಿಯೇ ಮನಸ್ಸನ್ನು ನಿಲ್ಲಿಸಬೇಕು. ಕರ್ಮಕಳಚಿ ಹೋಗುವುದರಿಂದ ನಿರ್ಮಲತ್ವವು ಲಭ್ಯವಾಗಿರಲು ಇಪ್ಪತ್ತೆರಡು ಪರೀಷಹಗಳನ್ನು ಜಯಿಸಿ, ಶಾಂತರೀತಿಯಲ್ಲಿ ಪ್ರಾಣವನ್ನು ಶರೀರದಿಂದ ಹೊರಪಡಿಸಲಿ - ಎಂದು ಜೈನಶಾಸನವು ಹೇಳುತ್ತದೆ. ನನಗೆ ಯಾರಲ್ಲಿಯೂ ಪ್ರೀತಿಯಿಲ್ಲ ಎನ್ನಲಿ. ಜಿನೇಶ್ವರನ ಪಾದಗಳು ಭಯಂಕರವಾದ ಜನನ ಮರಣಗಳನ್ನು ಪರಿಹಾರಮಾಡುವುವು ಎನ್ನಲಿ. ನನಗೆ ನನ್ನ ಜ್ಞಾನವಲ್ಲದೆ ಬೇರೆ ಇಲ್ಲ ಎನ್ನಲಿ. ನಿಂತು ವಿಚಾರಮಾಡಿದರೆ ಧರ್ಮವೊಂದೇ ಆಶ್ರಯಸ್ಥಾನವು, ಜೊಳ್ಳಾದುದನ್ನು ಒಪ್ಪಲಾರೆನು, ಇನ್ನು ಜೀವನದ ಕೊನೆಗಾಲದಲ್ಲಿ ಬಾಯಿಂದ ಹೇಳುವಷ್ಟು ಶಕ್ತಿಯಿದ್ದರೆ, ಪಂಚನಮಸ್ಕಾರಗಳೇ ಸಾಕು ಎನ್ನುವ ಇಷ್ಟನ್ನು ಹೇಳಲಿ. ಈ ಜಿನನ ಉಪದೇಶವು ವಿಷಯಸುಖಗಳಿಗೆ ವಿರೇಚನಪ್ರಾಯವಾದ ಔಷಧವಾಗಿದೆ. ಅಮೃತಸ್ವರೂಪವಾಗಿದೆ. ಎಲ್ಲಾ ಜೀವಿಗಳ ಮುಪ್ಪು, ಸಾವು, ಜನ್ಮ ವೇದನೆಗಳನ್ನು ಕ್ಷಯಮಾಡುವಂಥದಾಗಿದೆ. ಒಂದೇ ಆದ ಜನ್ಮಧಾರಣೆಯಲ್ಲಿ ಜೀವಾತ್ಮನು 'ಸಮಾಧಿಮರಣ' ಎಂಬ ಸಾವನ್ನು ಯಾವಾಗ ಪಡೆಯುವನೋ ಆ ಮೇಲಿನ ಏಳೆಂಟು ಹುಟ್ಟುಗಳಲ್ಲಿ ಅತಿಶ್ರೇಷ್ಠವಾದ ಮೋಕ್ಷವನ್ನು ಪಡೆಯುತ್ತಾನೆ. 'ಣಮೋ ಅರಹಂತಾಣಂ'

ಗಾಹೆ॥ ಜಿಣವಯಣ ಮೋಸಹಮಿಣಂ ಮಿಸಯಸುಹ ವಿರೇಯಣಂ ಅಮದಭೂವಂ
ಜರಮರಣ ಜಮ್ಮವಾಹಿ ಸುಹಕರಣಂ ಸವ್ವಜೀವಾಣಂ

ಎಕ್ಕಮ್ಮಿ ಭವಗ್ಗಹಣೇ ಸಮಾಹಿ ಮರಣಂ ಮರೇಜ ಜದಿ ಜೀವ್ವೋ
ಸತ್ತಟ್ಠ ಭವಗ್ಗಹಣೇ ಣಿವ್ವಾಣಮಣುತ್ತರಂ ಲಹಇ

ಸತ್ತಕ್ಖರ ಸಜ್ಝಾಯಂ ಅರಹಂತಾಣ ಣಮೋ ತ್ತಿಭಾವೇಣಂ
ಜೋ ಕುಣಇ ಅಣ್ಣಮ ಈ ಸೋ ಪಾವಇ ಸವ್ವಕಲ್ಲಾಣಂ

ಏಸೋ ಪಂಚಣಮೊಕ್ಕಾರೋ ಸವ್ವ ಪಾವ ಪಣಾಸಣೋ
ಮಂಗಳೇಸು ಯ ಸವ್ವೇಸು ಪಢಮಂ ಹವಇ ಮಂಗಳಂ

ಭಾವಣಮೊಕ್ಕಾರಗದೋ ಝಾಯಂ ಜೋಣೆಯಮಿಯಮ್ಮಿ ಚಿತ್ತಮ್ಮಿ
ಏ ಅಗ್ಗೇಣ ಏಸುದ್ದೋ ತೋ ಹೋಹಿಸಿ ಮೋಕ್ಖ ಸುಹ ಭಾ ಈ

ಆರ್ಯೆ ॥ ಗುರುಮೂಲೇ ಯತಿನಿಕಟೇ
ಚೈತ್ಯೇ ಸಿದ್ಧಾಂತವಾರ್ಧಿಸದ್ಘೋಷೇ
ಮಮ ಭವತು ಜನ್ಮಜನ್ಮನಿ
ಸಂನ್ಯಸನಸಮನ್ವಿತಂ ಮರಣಂ

ಎಂಬ ಸಪ್ತಾಕ್ಷರ ಮಂತ್ರದ ಪಠನವನ್ನು ಮನೋವಾಕ್ಕಾಯ ಎಂಬ ಮೂರು ಭಾವಗಳಿಂದ ಅನನ್ಯಮತಿಯಾದ ಯಾವನು ಮಾಡುವನೋ ಅವನು ಸಮಸ್ತಕಲ್ಯಾಣಗಳನ್ನೂ ಪಡೆಯುತ್ತಾನೆ. ಸರ್ವ ಪಾಪಗಳನ್ನೂ ನಾಶಮಾಡತಕ್ಕ ಈ ಪಂಚನಮಸ್ಕಾರಗಳು ಎಲ್ಲ ಮಂಗಳಗಳಲ್ಲಿಯೂ ಮೊದಲನೆಯ ಮಂಗಳವಾಗಿರುತ್ತದೆ. ಯಾವನು ಮನಸ್ಸಿನಲ್ಲಿಯೇ ಧ್ಯಾನಿಸುವ (ಪಂಚಪರಮೇಷ್ಠಿಗಳಾದ ಅರ್ಹಂತರು, ಸಿದ್ಧರು, ಆಚಾರ್ಯರು, ಉಪಾಧ್ಯಾಯರು, ಸಾಧುಗಳು - ಎಂಬೀ ಐವರ ಕುರಿತು ಮಾಡುವ) ಪಂಚನಮಸ್ಕಾರಗಳನ್ನು ಉಳ್ಳವನಾಗಿ ನಿಯತ ಮನಸ್ಸಿನಿಂದ ಧ್ಯಾನಿಸುತ್ತ ಏಕಾಗ್ರತೆಯಿಂದ ನಿರ್ಮಲನಾಗಿರುವನೋ ಅವನು ಮೋಕ್ಷಸುಖಕ್ಕೆ ಭಾಗಿಯಾಗಿ ಪರಿಣಮಿಸುವನು. ಗುರುಗಳ ಸಾನ್ನಿಧ್ಯದಲ್ಲಿಯೇ ಯತಿಗಳ ಸಮೀಪದಲ್ಲಿ, ಜಿನಾಲಯದಲ್ಲಿ, ತತ್ವಸಿದ್ಧಾಂತವೆಂಬ ಸಮುದ್ರದ ಒಳ್ಳೆಯ ನಾದದಲ್ಲಿ, ಪ್ರತಿಯೊಂದು ಜನ್ಮದಲ್ಲಿಯೂ ಸನಗೆ ಸಂನ್ಯಾಸ ಸಮೇತವಾದ ಮರಣವು ಪ್ರಾಪ್ತವಾಗಲಿ. ಈ ರೀತಿಯಾಗಿ ಹದಿನೈದು ದಿವಸಗಳವರೆಗೆ ಆರಾಧನೆಯ ಶಾಸ್ತ್ರವನ್ನು ಸಾರಸ್ವತಾಚಾರ್ಯರು ವ್ಯಾಖ್ಯಾನ ಮಾಡಲು ಧರ್ಮದ ಮೇಲಿನ ಪ್ರೀತಿಯಿಂದ ಅದನ್ನು ಕೇಳಿ ಸಾಯುವ ವೇಳೆಯಲ್ಲಿ ದುಷ್ಟನಾಗಿರುವ ವಜ್ರದಾಡನು ಕಾರಣವಿಲ್ಲದೆಯೇ ನನ್ನನ್ನು ಕೊಂದನು ಎಂದು ಮನಸ್ಸಿನಲ್ಲಿ ಸಿಟ್ಟನ್ನು ಭಾವಿಸಿಕೊಂಡು ಆ ಹೆಬ್ಬಾವು ಸತ್ತಿತು. ಆ ಜೀವನು ಮನೆಗಳಲ್ಲಿ ವಾಸ ಮಾಡತಕ್ಕವರಾದ ಅಸುರಾದಿಗಳ ಲೋಕದಲ್ಲಿ ನೂರು ಪಳಿತಗಳಿಗೆ ಸಮಾನವಾದ ಆಯುಷ್ಯವನ್ನುಳ್ಳ ನಾಗೇಂದ್ರ ದೇವನಾಗಿ ಜನಿಸಿದನು. ಆಮೇಲೆ ಅನಂತವೀರ್ಯನು ಸಾರಸ್ವತಮುನಿಗಳು ಹೇಳಿದ

ಎಂದಿಂತಾರಾಧನೆಯಂ ಪದಿನಯ್ದು ದಿವಸಂ ವಕ್ಕಾಣಿಸೆ ಧರ್ಮಾನುರಾಗದಿಂ ಕೇಳ್ದು ಮುಡಿಪುವಾಗಳ್ ವಜ್ರದಾಡಂ ದುರಾತ್ಮಂ ನಿಷ್ಕಾರಣಮೆನ್ನಂ ಕೊಂದನೆಂದು ಮನದೊಳ್ ರೋಷಮಂ ಬಗೆದು ಮುಡಿಪಿ ಭವನವಾಸಿಗ ಲೋಕದೊಳ್ ನೂಱು ಪಳಿತೋಪಮಾಯುಷ್ಯಮನೊಡೆಯೊಂ ನಾಗೇಂದ್ರ ದೇವನಾಗಿ ಪುಟ್ಟಿದೊಂ ಮತ್ತನಂತವೀರ್ಯನುಂ ಭಟಾರರ್ ಪೇೞ್ದ ಧರ್ಮಶ್ರವಣಮಂ ಕೇಳ್ದು ಧರ್ಮದ ಫಲದಿಂದಂ ತಮ್ಮ ತಾಯ್ಗಿರ್ಕಳ್ ದೇವಗತಿಯೊಳ್ ಪಿರಿದು ವಿಭೂತಿಯನೊಡೆಯೊರ್ ದೇವರ್ಕಳಾಗಿ ಪುಟ್ಟಿದುದುಮಂ ಕಂಡು ರಾಜ್ಯವಿಮೋಹದಿಂ ತಂದೆಯ ಪೊಲ್ಲಗತಿಯೊಳ್ ಪುಟ್ಟಿದುದುಮಂ ಕಂಡು ಮನುಷ್ಯಜನ್ಮದುರ್ಲಭತ್ವಮುಮಂ ಭೋಗೋಪಭೋಗಂಗಳೊಳಪ್ಪನಿತ್ಯತ್ವಮುಮಂ ಮನದೊಳ್ ಬಗೆದು ಸಂಸಾರ ಶರೀರಭೋಗದೊಳಪ್ಪ ವೈರಾಗ್ಯಮನೊಡೆಯನಾಗಿ ಸುಬಾಹುವೆಂಬ ತನ್ನ ಪಿರಿಯ ಮಗಂ ತನ್ನೊದನೆ ತೊೞಿಯಲ್ ಬಗೆದಿರ್ದೊನಂ ಬಾರಿಸಿ ಬಲ್ಲಾಳ್ತನದಿಂ ರಾಜ್ಯಪಟ್ಟಂಗಟ್ಟಿ ಸಂಕ್ಷೇವದಿಂ ರಾಜ್ಯನೀತಿಯನಿಂತೆಂದು ಕಲ್ಪಿಸಿದಂ

ವೃತ್ತ ॥ ತೃಷ್ಣಾಂ ಛಿಂದಿ ಭಜ ಕ್ಷಮಾಂತ್ಯಜಮದಂ ಪಾಪೇ ರತಿಂ ಮಾ ಕೃಥಾಃ
ಸತ್ಯಂ ಬ್ರೂಹ್ಯನುಯಾಹಿ ಸಾಧು ಪದವೀಂ ಸೇವಸ್ವ ವಿದ್ವಜ್ಜನಂ
ಮಾನ್ಯಾನ್ ಮಾನಯ ವಿದ್ವಿಷೋಽಪ್ಯನುನಯ ಪ್ರಚ್ಛಾದಯಸ್ವಾನ್ ಗುಣಾನ್
ಕೀರ್ತಿಂ ಪಾಲಯ ದುಃಖಿತೇ ಕುರು ದಯಾಮೇತತ್ ಸತಾಂ ಚೇಷ್ಟಿತಂ

ಎಂದಿಂತು ಮಗನಂ ಕಲ್ಪಿಸಿ ಎಲ್ಲರೊಳಂ ನಿಶ್ಮಲ್ಯಂಗೆಯ್ದು ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊೞಿದು ಪಲಂಬರರಸುಮಕ್ಕಳ್ವೆರಸು ಸಾರಸ್ವತಭಟಾರರ ಪಕ್ಕದೆ ತಪಂಬಟ್ಟು ಉಗ್ರೋಗ್ರ ಘೋರವೀರ

ಧರ್ಮವಿಚಾರವನ್ನು ಕೇಳಿ, ಧರ್ಮದ ಫಲದಿಂದ ತನ್ನ ತಾಯಂದಿರು ದೇವತ್ವದ ಗತಿಯನ್ನು ಪಡೆದು ಬಹಳ ವೈಭವವುಳ್ಳ ದೇವತೆಗಳಾಗಿ ಹುಟ್ಟಿದುದನ್ನು ಕಂಡು, ರಾಜ್ಯದ ಮೇಲಿನ ಹೆಚ್ಚಿನ ಆಸೆಯಿಂದಾಗಿ ತನ್ನ ತಂದೆ ದುರ್ಗತಿಯಲ್ಲಿ (ಹಾವಾಗಿ) ಹುಟ್ಟಿದುದನ್ನು ಕಂಡು, ಈ ಮನುಷ್ಯಜನ್ಮವು ದೊರೆಯುವಂಥದಲ್ಲವೆಂದು ಭಾವಿಸಿದನು. ಭೋಗ ಉಪಭೋಗಗಳೆಲ್ಲ ಅಶಾಶ್ವತವೆಂದು ಮನಸ್ಸಿನಲ್ಲಿ ಭಾವಿಸಿಕೊಂಡನು. ಸಂಸಾರದ ಸುಖ ಭೋಗದಲ್ಲಿ ವೈರಾಗ್ಯವುಳ್ಳವನಾದನು. ತನ್ನೊಂದಿಗೆ ರಾಜ್ಯಭೋಗವನ್ನೆಲ್ಲ ಬಿಟ್ಟು ಬಿಡಲು ಯೋಚಿಸಿದ ತನ್ನ ಹಿರಿಯ ಮಗನಾದ ಸುಬಾಹುವನ್ನು ತಡೆದು ಬಲಾತ್ಕಾರದಿಂದ ಅವನಿಗೆ ಸಾಮ್ರಾಜ್ಯದ ಪಟ್ಟಾಭಿಷೇಕವನ್ನು ಮಾಡಿ, ಅವನಿಗೆ ಸಂಕ್ಷೇಪವಾಗಿ ಈ ರೀತಿಯಲ್ಲಿ ರಾಜನೀತಿಯನ್ನು ಹೇಳಿಕೊಟ್ಟನು - ಆಸೆಯನ್ನು ಕತ್ತರಿಸು. ಕ್ಷಮಾಗುಣವನ್ನು ಭಜಿಸು. ಮದವನ್ನು ಬಿಡು. ಪಾಪದಲ್ಲಿ ಪ್ರೀತಿಯನ್ನು ಮಾಡಬೇಡ. ಸತ್ಯವನ್ನು ಹೇಳು. ಸಾಧುಗಳ ಪದವಿಯನ್ನು ಅನುಸರಿಸಿ ಹೋಗು. ವಿದ್ವಾಂಸರನ್ನು ಸೇವೆ ಮಾಡು. ಮಾನ್ಯರಾದವರನ್ನು ಗೌರವಿಸು ಶತ್ರುಗಳನ್ನು ಕೂಡ ಆದರಿಸು. ಸ್ವಕೀಯವಾದ ಸದ್ಗುಣಗಳನ್ನು ಮುಚ್ಚಿಡು (ಆತ್ಮಶ್ಲಾಘನೆ ಮಾಡದಿರು) ಕೀರ್ತಿಯನ್ನು ಪಾಲಿಸು. ದುಃಖಿತನಾದವನಲ್ಲಿ ದಯೆಯನ್ನು ಮಾಡು, ಈ ರೀತಿಯದು ಸತ್ಪುರುಷರ ಆಚರಣೆಯೆನಿಸುವುದು ಈ ರೀತಿಯಾಗಿ ಮಗನಿಗೆ ನೀತಿಯನ್ನು ಕಲಿಸಿ, ಎಲ್ಲರಲ್ಲಿಯೂ ಪಾಪದ ವರ್ತನೆಯಿಲ್ಲದವನಾಗಿ ಮಾಡಿ, ಬಾಹ್ಯ ಮತ್ತು ಅಭ್ಯಂತರವೆನಿಸುವ ಪರಿಗ್ರಹಗಳನ್ನು ತ್ಯಜಿಸಿ. ಹಲವು ರಾಜಕುಮಾರರೊಂದಿಗೆ ಸಾರಸ್ವತಮುನಿಗಳ ಬಳಿ ತಪಸ್ಸನ್ನು ಸ್ವೀಕರಿಸಿ ಅತಿ ಘೋರವಾದ ತಪಸ್ಸನ್ನು ಮಾಡಿ,

ತಪಶ್ಚರಣಂಗೆಯ್ದು ಸಮ್ಮೇದಪರ್ವತದ ಮೇಗಿರ್ದೆಂಟು ಕರ್ಮಂಗಳಂ ಕಿಡಿಸಿ ಮೋಕ್ಷಕ್ಕೆ ಪೋದನ್ ಮತ್ತಿತ್ತ ಧರಣೇಂದ್ರನೊಂದು ದಿವಸಂ ಜಿನೇಂದ್ರ ಚೈತ್ಯಾಲಯಂಗಳಂ ಬಂದಿಸಲ್ಬೇಡಿ ಮಂದರಗಿರಿಗೆ ವಿಮಾನಮನೇಱಿ ಪೋಪಾಗಳ್ ವಜ್ರದಾಡಂ ಮತ್ತಗ್ಗಳಮಪೂರ್ವಮಪ್ಪ ವಿದ್ಯೆಗಳಂ ಸಾಧಿಸಲ್ಬೇಡಿ ಕಳತ್ರಸಹಿತಂ ವಿಮಾನಮನೇಱಿ ಮಂದರಗಿರಿಗೆವಂದಾತನಂ ಕಂಡು ತನ್ನ ವಿಭಂಗಜ್ಞಾನದಿಂದೆನ್ನ ಪಗೆವನೀತನೆಂದಱೆದೆಲವೊ ಪಾಪಕರ್ಮಾ ನಿಷ್ಕಾರಣಮೆನ್ನಂ ಜಲಕ್ರೀಡೆಯಾಡುವೊನಂ ಕಳತ್ರಸಹಿತಂ ಕೊಂಡೆಯೆಂದು ಮೂದಲಿಸಿಯಾತನ ವಿದ್ಯೆಯೆಲ್ಲಮಂ ಕೊಱೆದಿಕ್ಕಿ ಕಳತ್ರಸಹಿತಂ ಪಿಡಿದೆತ್ತಿಕೊಂಡುಪೋಗಿ ಸಮುದ್ರದೊಳ್ ಮಹಾಪಾತಾಳದ ಮೊದಲೊಳಿಕ್ಕಿ ಪುದುಕುನೀರನಟ್ಟುತ್ತಂ ಪಿರಿದುಂ ಬೇಗಂ ದುಃಖಮನೆಯ್ದಿಸಿ ಕಾಡಿ ಕೊಲೆಯಾತಂ ಸತ್ತು ಪ್ರಥಮನರಕದೊಳತಿ ಘೋರಮಪ್ಪುದಜಿಘೊಳ್ ಖಳಖಳಮೆಂಬ ನರಕಬಿಲದೊಳ್ ಮೂರುಪಳಿತೋಪಮಾಯುಷ್ಯ ಮನೊಡೆಯೊಂ ನಾರಕನಾಗಿ ಪುಟ್ಟಿಯಲ್ಲಿಯ ದುಃಖಂಗಳೆಲ್ಲಮನನುಭವಿಸಿಯಾಯುಷ್ಕಾಂತದೊಳ್ ಪೊಱಮಟ್ಟು ಬಂದು ಪಿರಿದಪ್ಪ ನೀಲಗಿರಿಯೆಂಬ ಪರ್ವತದೊಳ್ ಪುಲಿಯಾಗಿ ಪುಟ್ಟಿದೊಂ ಧರಣೇಂದ್ರನುವಮಾಯುಷ್ಕಾಂತದೊಳ್ ಬಂದು ಕುರುಜಾಂಗಣವೆಂಬ ನಾಡೊಳ್ ಹಸ್ತಿನಾಪುರಮೆಂಬುದು ಪೊಲಲದನಾಳ್ವೊನಿಕ್ಷ್ವಾಕುವಂಶದ ವಿಜಯದತ್ತನೆಂಬರಸಂಗಂ ವಿಜಯಮತಿ

ಸಮ್ಮೇದಪರ್ವತದ ಶಿಖರದಲ್ಲಿದ್ದು ಎಂಟು ಕರ್ಮಗಳನ್ನು ನಾಶಮಾಡಿ ಮುಕ್ತಿಗೆ ಹೋದನು. ಆ ಮೇಲೆ ಇತ್ತ ಧರಣೇಂದ್ರನು ಒಂದು ದಿವಸ ಜಿನೇಂದ್ರರಿಂದ ಕೂಡಿದ ಬಸದಿಗಳಿಗೆ ಹೋಗಿ ವಂದಿಸುವುದಕ್ಕಾಗಿ ವಿಮಾನವನ್ನೇರಿ ಮಂದರಪರ್ವತದ ಕಡೆಗೆ ಹೋದನು. ಆಗ ವಜ್ರದಾಡನು ಇನ್ನಷ್ಟು ಶ್ರೇಷ್ಠವೂ ಅಪೂರ್ವವೂ ಆದ ವಿದ್ಯೆಗಳನ್ನು ಸಾಧಿಸುವುದಕ್ಕಾಗಿ ಪತ್ನಿ ಸಮೇತ ವಿಮಾನವನ್ನೇರಿ ಮಂದರಗಿರಿಗೆ ಬಂದನು. ಅವನನ್ನು ಧರಣೇಂದ್ರನು ಕಂಡು, ತನ್ನ ಮುರುಕಾದ ಜ್ಞಾನದಿಂದ ಈತನು ತನ್ನ ಶತ್ರುವೆಂದು ತಿಳಿದು, "ಎಲೋ ಪಾಪಕರ್ಮನೇ, ಜಲಕ್ರೀಡೆಯಲ್ಲಿದ್ದ ನನ್ನನ್ನು ನನ್ನ ಪತ್ನಿಯರ ಸಮೇತ ನಿಷ್ಕಾರಣವಾಗಿ ಕೊಂದಿರುವೆ" ಎಂದು ಮೂದಲಿಸಿದನು. ಅವನ ವಿದ್ಯೆಯನ್ನೆಲ್ಲ ಕತ್ತರಿಸಿಹಾಕಿದನು. ಅವನನ್ನೂ ಅವನ ಹೆಂಡತಿಯನ್ನೂ ಕೂಡ ಹಿಡಿದು ಎತ್ತಿಕೊಂಡು ಹೋಗಿ ಸಮುದ್ರದಲ್ಲಿ ಮಹಾ ಪಾತಾಳದ ಅಡಿಯಲ್ಲಿ ಹಾಕಿ, ಕುದಿಯುತ್ತಿರುವ ನೀರನಲ್ಲಿ ಅದ್ದಿ ಬಹಳ ಹೊತ್ತಿನವರೆಗೆ ದುಃಖಿಕ್ಕೆ ಈಡುಮಾಡಿ ತೊಂದರೆಗೊಳಿಸಿ ಕೊಂದನು. ಆ ವಜ್ರದಾಡನು ಸತ್ತು, ಮೊದಲನೆಯ ನರಕದಲ್ಲಿ ಅತ್ಯಂತ ಭಯಂಕರವಾಗಿರುವ ಖಳ ಖಳ ಎಂಬ ನರಕಕೂಪದಲ್ಲಿ ಮೂರು ಪಳಿತಕ್ಕೆ ಸಮಾನವಾದ ಆಯಷ್ಯವುಳ್ಳ ನರಕ ಜೀವಿಯಾಗಿ ಹುಟ್ಟಿದನು. ಅಲ್ಲಿಯ ದುಃಖಿಗಳನ್ನೆಲ್ಲ ಅನುಭವಿಸಿ ಆಯಷ್ಯವು ಕೊನೆಯಾದಾಗ ಅಲ್ಲಿಂದ ಹೊರಟು ಬಂದು, ಹಿರಿದಾಗಿರತಕ್ಕ ನೀಲಗಿರಿ ಎಂಬ ಬೆಟ್ಟದಲ್ಲಿ ಹುಲಿಯಾಗಿ ಹುಟ್ಟಿದನು. ಧರಣೇಂದ್ರನು ತನ್ನ ಆಯುಷ್ಯವು ಕೊನೆಯಾದಾಗ ಬಂದು ಕುರುಜಾಂಗಣವೆಂಬ ನಾಡಿನಲ್ಲಿ ಹಸ್ತಿನಾಪುರ ಎಂಬ ಪಟ್ಟಣದಲ್ಲಿ ಆಳುತ್ತಿರುವ ಇಕ್ಷ್ವಾಕುವಂಶದ ವಿಜಯದತ್ತನೆಂಬ ಅರಸನಿಗೂ ವಿಜಯಮತಿ ಎಂಬ ಮಹಾರಾಣಿಗೂ ಗುರುದತ್ತನೆಂಬ ಮಗನಾಗಿ ಹುಟ್ಟಿದನು. ಮಗನನ್ನು ಬಯಸುತ್ತಿದ್ದ ವಿಜಯಮತಿ ಮಹಾದೇವಿ ಒಂದು ದಿನ ಗುರುಗಳೆಂಬ

ಮಹಾದೇವಿಗಂ ಗುರುದತ್ತನಾಗಿ ಪುಟ್ಟಿದೊಂ ಒಂದು ದಿವಸಂ ಪುತ್ರಾರ್ಥಿಯಪ್ಪ ವಿಜಯ ಮಹಾದೇವಿಯಿಂ ಬೆಸಗೊಳಿಪಟ್ಟ ಗುರುಗಳೆಂಬ ಋಷಿಯರಾದೇಶದಿಂ ಪುಟ್ಟಿದೊಂ ಗುರುಗಳಿತ್ತರಪ್ಪುದಱಿಂದಾತಂಗೆ ಪಿತ್ರಮಾತೃಗಳ್ ಗುರುದತ್ತನೆಂದು ಪೆಸರನಿಟ್ಟರ್ ಮತ್ತೇಱು ವರ್ಷದೊಳಗೆ ಚತುಷ್ಷಷ್ಟಿ ಕಳೆಗಳುಂ ದ್ವಾಸಪ್ತತಿ ವಿಜ್ಞಾನಂಗಳುಮನೆಲ್ಲಮುಂ ನಿರವಶೇಷಂ ಕಲ್ಪಾವಮಾನುಂ ರೂಪುಂ ತೇಜಮುಂ ಗಾಂಭೀಯುಂ ಸೌಭಾಗ್ಯಮನೊಡೆಯನಾಗಿರ್ದಂಟನೆಯು ವರುಷದಂದು ಗುರುದತ್ತಂಗೆ ವಿಜಯದತ್ತನ್ಯಪತಿ ರಾಜ್ಯಪಟ್ಟಂಗಟ್ಟಿ ಸುಧರ್ಮರೆಂಬ ಭಟಾರರ ಪಕ್ಕದೆ ತಪಂಬಟ್ಟನಿತ್ತ ಗುರುದತ್ತಕುಮಾರನರಸನಾಗಿ ಸಿಂಹಾಸನಮಸ್ತಕಸ್ಥಿತನಾಗಿ ತಂದೆಗೆಂತಪ್ಪೊದಂ ಕಪ್ಪುಗೊಡದ ಮಂಡಳಿಕರ್ಕಳ ಮೇಗೆತ್ತಿ ಪೊಟ್ಟಯಿಸಿಜೆನು ಮಂಡಲಂಗಳುಂ ದುರ್ಗವಸ್ತು ವಾಹನಂಗಳಂ ಸಮಸ್ತ ಕಪ್ಪಂಗೊಂಡೆಲ್ಲರುಮನಂಜಿಸಿ ಯಶಮುಂ ಕೀರ್ತಿಯುಮನೊಡೆಯನಾಗಿ ಇಂತು ಪೃಥಿವೀ ರಾಜ್ಯಂಗೆಯ್ಯುತ್ತಿರ್ಪನ್ನೆಗಂ ಒಂದು ದಿವಸಂ ಪುಲಿಯುಪದ್ರವಮಂ ನಾಡವರ್ವಂದಿಂತೆಂದು ಪೇೞ್ದರ್ ದೇವಾ ನೀಲಗಿರಿಯೆಂಬ ಪರ್ವತದ ಬಳಸಿಯುಮಿರ್ದ ನಾಡೆಲ್ಲಂ ಪಾಟುಗಾದುದಾ ಪರ್ವತದ ಗುಹೆಯೊಳಿರ್ಂದು ಪೆರ್ಬುಲಿಯಿರ್ದುದು ನಾಡೆಲ್ಲರುಮುಂ ಜವನ ರೂಪಿನೊಳ್ ಕೊಂಮದಪ್ಪುದಾರಪ್ಪೊದಂ ನಾಡೊಳಿರಲಱ್ಱೆಂದೊಡಾ ಮಾತಂ ಕೇಳ್ದು ಪೂರ್ವವೈರಂ ಕಾರಣಮಾಗಿ ಕ್ರೋಧಾಗ್ನಿ ಪೆರ್ಚಿ ಕಡು ಮುಳಿದು ಪುಲಿಯಂ ಕೊಲಲೆಂದು ಪಯಣಂಬೋಗಿ ಪುಲಿಯಿರ್ದ

ಋಷಿಗಳನ್ನು ಕೇಳಿ, ಅವರ ಭವಿಷ್ಯವಾಣಿಯಂತೆ ಹುಟ್ಟಿದುದರಿಂದ ಗುರುಗಳೇ ಕೊಟ್ಟರೆಂದು ಆ ಮಗುವಿಗೆ ತಂದೆತಾಯಿಗಳು ಗುರುದತ್ತ ಎಂದು ನಾಮಕರಣ ಮಾಡಿದರು. ಅನಂತರ ಏಳು ವರ್ಷಗಳೊಳಗೆ ಗುರುದತ್ತನು ಅರುವತ್ತನಾಲ್ಕು ಕಲೆಗಳನ್ನೂ ಎಪ್ಪತ್ತೆರಡು ವಿಜ್ಞಾನಗಳನ್ನೂ ಎಲ್ಲವನ್ನೂ ಸ್ವಲ್ಪವೂ ಉಳಿಯದಂತೆ ಕಲಿತನು ಅತಿಶಯವಾದ ರೂಪ, ಕಾಂತಿ, ಸೌಂದರ್ಯ, ಸೌಭಾಗ್ಯವುಳ್ಳವನಾದನು. ಎಂಟನೆಯ ವರ್ಷವಾದಾಗ ವಿಜಯದತ್ತ ರಾಜನು ಗುರುದತ್ತನಿಗೆ ರಾಜ್ಯಪಟ್ಟವನ್ನು ಕಟ್ಟಿ, ಸುಧರ್ಮರೆಂಬ ಋಷಿಗಳ ಬಳಿಯಲ್ಲಿ ತಪಸ್ಸನ್ನು ಸ್ವೀಕರಿಸಿದನು. ಇತ್ತ ಗುರುದತ್ತಕುಮಾರನು ರಾಜನಾಗಿ ಸಿಂಹಾಸನದ ಮೇಲಿದ್ದು ತನ್ನ ತಂದೆಗೆ ಹೇಗೂ ಕಪ್ಪವನ್ನು ಕೊಡದ ಸಾಮಂತರಾಜರ ಮೇಲೆ ದಂಡೆತ್ತಿ ಪ್ರತಿಭಟಿಸಿ ಕಾದಾಡಿ ನಾಡು, ದುರ್ಗ, ವಸ್ತುವಾಹನಗಳು ಮುಂತಾದ ಕಪ್ಪಗಳನ್ನು ಪಡೆದು ಎಲ್ಲರನ್ನೂ ಹೆದರಿಸಿ ಖ್ಯಾತಿವಂತನಾಗಿ ಹೀಗೆ ಭೂಮಿಯ ರಾಜ್ಯಭಾರವನ್ನು ಮಾಡುತ್ತಿದ್ದನು. ಹೀಗಿರಲು ಒಂದು ದಿವಸ ನಾಡ ಜನರು ಬಂದು ಹುಲಿಯ ಉಪದ್ರವವನ್ನು ಈ ರೀತಿಯಾಗಿ ಹೇಳಿದರು - "ಪ್ರಭುವೇ, ನೀಲಗಿರಿ ಎಂಬ ಪರ್ವತದ ಸುತ್ತಲೂ ಇದ್ದ ನಾಡೆಲ್ಲವೂ ಹಾಳಾಯಿತು. ಆ ಪರ್ವತದ ಗುಹೆಯಲ್ಲಿ ಒಂದು ಹೆಬ್ಬುಲಿಯಿದೆ. ಅದು ಯಮನ ರೂಪದಲ್ಲಿ ನಾಡಿನವರನ್ನೆಲ್ಲ ಕೊಲ್ಲುತ್ತಿದೆ. ಯಾರೊಬ್ಬರೂ ನಾಡಿನಲ್ಲಿ ನೆಲಸಿರುವುದಕ್ಕೆ ಕೂಡ ಸಮರ್ಥರಾಗರು." ಹೀಗೆ ಹೇಳಲು ಆ ಮಾತನ್ನು ಗುರುದತ್ತನು ಕೇಳಿ, ಪೂರ್ವಜನ್ಮದ ದ್ವೇಷವೇ ಕಾರಣವಾಗಿ ಕೋಪಾಗ್ನಿ ಹೆಚ್ಚಾಗಿ ಬಹಳ ಸಿಟ್ಟಾಗಿ ಹುಲಿಯನ್ನು ಕೊಲ್ಲುವುದಕ್ಕಾಗಿ ಪ್ರಯಾಣ ಹೊರಟನು. ಹುಲಿ ವಾಸಮಾಡತಕ್ಕ ಗುಹೆಯಿದ್ದಲ್ಲಿಗೆ ಬಂದು ಅದರ ಸುತ್ತಲೂ

ಗುಹೆಯನೆಯ್ದುಯದಂ ಬಳಸಿಯುಂ ಮುತ್ತೆ ಮಹಾಸಮುದ್ರದ ಗರ್ಜನೆಯನೆ ಪೋಲ್ವ ಜನರವಮುಂ ಪಟುಪಟಹ ಶಂಖ ತಾಳ ಮರ್ದಳ ಕಹಳಾದಿ ಧ್ವನಿಗಳುಮನೆನಿತೆನಿತನಾ ಪುಲಿ ಕೇಳ್ದುಮನಿತನಿತಂಜಿ ಗುಹೆಯೊಳಡಂಗಿರ್ದತ್ತು ಪೊಜಿಮವಲೊಲ್ಲದಿರ್ದೊಡಾ ಗುಹೆಯ ಬಾಗಿಲೊಳೆನಿತಾನುಂ ಪುಲ್ಲುಂ ಪುಳ್ಳಿಯುಮನೊಟ್ಟಿ ಕಿಚ್ಚುಂ ತಗುಳ್ಚಿ ಪುಲಿಯುಂ ಸುಟ್ಟು ಕೊಂದು ತನ್ನ ಪೊಟಲ್ಗೆ ಪೋಗಿ ಅರಸುಗೆಯ್ಯುತ್ತಿರ್ದನಾ ಪುಲಿಯುಂ ಕರ್ನಿರ್ಜರೆಯುಂ ಸತ್ತಾ ಸುರಾಷ್ಟ್ರವಿಷಯದೊಳ್ ದ್ರೋಣೀಮಂತಮೆಂಬ ಪರ್ವತದ ಸಾರೆ ಪಲ್ಲಿವೇದಮೆಂಬೂರೊಳ್ ಸಲಿದಾಭರಣನೆಂಬ ಪಾರ್ವಂಗಂ ಕಟುಕಿಯೆಂಬ ಪಾರ್ವಂತಿಗಂ ಹಳಮುಖನೆಂಬೊಂ ಮಗನಾಗಿ ಪುಟ್ಟಿದೊಂ ಮತ್ತಿತ್ತಂಗಮೆಂಬುದು ನಾಡಲ್ಲಿ ಚಂಪಾನಗರಮೆಂಬುದು ಪೊಟಲದನಾಳ್ವೊಂ ಧಾತ್ರಿವಾಹನನೆಂಬರಸನಾತನ ಮಹಾದೇವಿ ಶ್ರೀಮತಿಯೆಂಬೊಳಾಯಿರ್ವರ್ಗ್ಗಂ ಮಗಳಭಯಮತಿಯೆಂಬೊಳಾಕೆಯತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿ ಹಾವ ಭಾವ ವಿಲಾಸ ವಿಭ್ರಮಂಗಳನೊರೆಯೊಳಾಕೆಯಂ ಗುರುದತ್ತನೆನಿತಾನುಂ ಸೂಜ್ ಚೇದಿಯಟ್ಟದೊಡರಸಂ ಕುದಲೊಲ್ಲನಂತದರ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಂ ಕಾಲಂ ಸಲೆ ಮತ್ತೊಂದು ದಿವಸಂ ಧಾತ್ರಿವಾಹನ ನೃಪತಿ ತನ್ನ ಬದಗಿಗಳ್ ವಿಶ್ವಕರ್ಮನುಂ ವಿಶ್ವಮತಿಯುಮೆಂಬಿರಂ ಕರೆಯಿಸಿಯಿಂತೆಂದನಜುದಿಂಗಳೊಳಗೆ ನೀವಿರ್ವರುಮೋರೋರ್ವರಯ್ನೂಱು

ಮುತ್ತಿಗೆ ಹಾಕಿದನು. ಮಹಾಸಾಗರದ ಗರ್ಜನೆಯಂತಿರುವ ಜನಶಬ್ದವನ್ನೂ ಸಮರ್ಥವಾದ ಪಟಹ, ಶಂಖ, ತಾಳ, ಮದ್ದಳೆ, ತುತ್ತೂರಿ ಮುಂತಾದ ವಾದ್ಯಗಳ ರವಗಳನ್ನು ಆ ಹುಲಿ ಎಷ್ಟೆಷ್ಟು ಕೇಳಿತೋ ಅಷ್ಟಷ್ಟು ಹೆದರಿಕೊಂಡು ಗುಹೆಯೊಳಗೆ ಅಡಗಿದ್ದಿತು, ಹೊರಗೆ ಬರಲೊಲ್ಲದೆ ಇದ್ದಿತು. ಆಗ ಗುರುದತ್ತನು ಆ ಗುಹೆಯ ಬಾಗಿಲಲ್ಲಿ ಎಷ್ಟೋ ಹುಲ್ಲನ್ನೂ ಕಟ್ಟಿಗೆಯನ್ನೂ ರಾಶಿ ಹಾಕಿ ಉರಿಯನ್ನು ಹಚ್ಚಿ ಹುಲಿಯನ್ನು ಸುಟ್ಟು ಕೊಂದು, ತನ್ನ ಪಟ್ಟಣಕ್ಕೆ ಹೋಗಿ ರಾಜ್ಯಭಾರ ಮಾಡುತ್ತ ಇದ್ದನು. ಆ ಹುಲಿ ಕರ್ಮಗಳು ನಾಶವಾದುದರಿಂದ ಸತ್ತು ಸುರಾಷ್ಟ್ರವೆಂಬ ನಾಡಿನಲ್ಲಿ ದ್ರೋಣೀಮಂತವೆಂಬ ಪರ್ವತದ ಬಳಿಯ ಪಲ್ಲಿವೇಡವೆಂಬ ಊರಿನಲ್ಲಿ ಸಲಿದಾಭರಣನೆಂಬ ಬ್ರಾಹ್ಮಣನಿಗೂ ಕಟುಕಿಯೆಂಬ ಬ್ರಾಹ್ಮಣಿತಿಗೂ ಹಳಮುಖನೆಂಬ ಹೆಸರುಳ್ಳ ಮಗನಾಗಿ ಹುಟ್ಟಿತು. ಅನಂತರ, ಇತ್ತ ಅಂಗವೆಂಬ ನಾಡಿನಲ್ಲಿ ಚಂಪಾನಗರವೆಂಬ ಪಟ್ಟಣವಿದ್ದಿತು. ಅದನ್ನು ಧಾತ್ರಿವಾಹನನೆಂಬ ರಾಜನು ಆಳುತ್ತಿದ್ದನು. ಅವನ ಮಹಾರಾಣಿ ಶ್ರೀಮತಿಯೆಂಬುವಳು. ಆ ದಂಪತಿಗಳಿಗೆ ಮಗಳು ಅಭಯಮತಿಯೆಂಬುವಳು. ಆಕೆ ಅತ್ಯಂತ ರೂಪ, ಲಾವಣ್ಯ, ಸೌಭಾಗ್ಯ, ಕಾಂತಿ, ಹಾವ, ಭಾವ, ವಿಲಾಸ, ವಿಭ್ರಮಗಳುಳ್ಳವಳಾಗಿದ್ದಳು. ಗುರುದತ್ತನು ಆಕೆಯನ್ನು ಮದುವೆಯಾಗಲು ಬಯಸಿ ಆಕೆಯನ್ನು ಕೊಡುವಂತೆ ಎಷ್ಟೋ ಬಾರಿ ಜನ ಕಳುಹಿಸಿದರೂ ಧಾತ್ರಿವಾಹನ ರಾಜನು ಕೊಡಲು ಒಪ್ಪಲಿಲ್ಲ. ಅಂತು ಅವರು ತಮ್ಮ ಇಷ್ಟವಾದ ಸಂಗತಿಯ ಕಾಮ ಸುಖಗಳನ್ನು ಅನುಭವಿಸುತ್ತ ಇದ್ದು ಹೀಗೆಯೇ ಕಾಲ ಕಳೆಯುತ್ತಿತ್ತು. ಆಮೇಲೆ, ಒಂದು ದಿವಸ ಧಾತ್ರಿವಾಹನರಾಜನು ತನ್ನ ಬದಗಿಗಳಾದ ವಿಶ್ವಕರ್ಮ ವಿಶ್ವಮತಿ ಎಂಬಿಬ್ಬರನ್ನು ಕರೆಯಿಸಿ ಅವರೊಡನೆ ಹೀಗೆ ಹೇಳಿದನು- "ನೀವಿಬ್ಬರಲ್ಲಿ ಒಬ್ಬೊಬ್ಬರೂ ಐನೂರು ರಥಗಳನ್ನು ಬೇಗನೆ ಆರು ತಿಂಗಳೊಳಗೆ ರಚಿಸಿ, ನನಗೆ ಒಪ್ಪಿಸಬೇಕು." ಹೀಗೆ ಹೇಳಲು 'ಹಾಗೆಯೇ ಮಾಡುವೆವು' ಎಂದು ರಥಗಳನ್ನು ಮಾಡತೊಡಗಿದರು. ಅವರಂತೆ

ರಥಂಗಳಂ ಬೇಗಂ ಮಾಡಿಯನಗೊಪ್ಪಿಸವೇಱ್ಕುಮೆಂದು ಪೇಱ್ದೊಡವರುಮಂತೆಗೆಯ್ವೆಮೆಂದು ರಥಂಗಳಂ ಮಾಡಲ್ ತಗುಳ್ದು ಅಱುದಿಂಗಳೊಳಾ ಅಯ್ನೂರು ರಥಮಂ ಸಮೆದು ವಿಶ್ವಮತಿಯರಸಂಗೆ ತಂದು ತೋಱೆದೊಡರಸಂ ಕಂಡಾದಮಾನುಮಾತಂಗೊಸೆದು ತುಷ್ಟಿದಾನಂಗೊಟ್ಟಂ ಮತ್ತೆ ವಿಶ್ವಕರ್ಮನಱುದಿಂಗಳೊಳ್ ರಥದೊಂದು ಗಾಲಿಯಂ ಸಮೆಯಿಸಿ ತಂದು ತೋಱೆದೊಡರಸಂ ಕಂಡು ಮುಳಿದಾತನಂ ಕೊಲಲ್ ಬಗೆದೊಡಂಜಿ ಆತನುಮಾ ಗಾಲಿಯನರಸನ ಮುಂದೆ ಮಣಿಕುಟ್ಟಿಮಮಪ್ಪ ಭೂಮಿಯೊಳಿತ್ತಿಕ್ಕಿ ಪ್ರಾಣಭಯದಿಂದೋಡಿ ಗುರುದತ್ತ ನೃಪತಿಯಲ್ಲಿಗೆ ಪೋದೊನಾ ಗಾಲಿಯುಂ ಪದಿನಯ್ದುದಿವಸಂಬರೆಗುಂ ತನಗೆ ತಾನೆಯಂತರಿಕ್ಷದೊಳ್ ನಿಲನಂ ಮುಟ್ಟದೆ ತಿಱ್ದನೆ ತಿರಿಯುತ್ತಿರ್ದುದಂ ಕಂಡರಸಂ ವಿಶ್ವಕರ್ಮಂಗೊಸೆದಾತನಂ ಬೇಗಮಾರಯ್ದುಕೊಂಡು ಬನ್ನಿಮೆಂದೊಡೆ ಕೆಲದವರೆಂದರಾತಂ ನಿಮಗಂಜಿಯೋಡಿ ಪೋಗಿ ಗುರುದತ್ತಂಗಾಳಾಗಿರ್ದೊನೆನೆ ಕೇಳ್ದರಸಂ ಗುರುದತ್ತನಲ್ಲಿಗೆ ತನ್ನ ಪೆರ್ಗಡೆಗಳನಿಂತೆಂದು ಕಲ್ಪಿಸಿಯಟ್ಟದೊಂ ಕಪ್ಪಂಬೆರಸೆಮ್ಮ ಬಡಗಿಯಂ ಬೇಗಮಟ್ಟುಗೆಂದು ಪೋಗಿ ಪೇಟೆಮೆಂದೊಡವರುಂ ಪೋಗಿಯಾ ಮಾತಂ ಗುರುದತ್ತನೃಪತಿಗೆ ತಮ್ಮರಸಂ ಕಲ್ಪಿಸಿದಂತೆ ನುಡಿದೊಡಾ ಮಾತಂ ಗುರುದತ್ತನೃಪತಿ ಕೇಳ್ದಾದಮಾನುಂ ಮುಳಿದಿಂತೆಂದಂ ಮಂಡಳಮನಾಳ್ವರಸನಾಗಿಯುಂ ಪೞಗೆ ಕಪ್ಪಂಗುದುವೊದೀ ಸಿಂಹಾಸನಮುಂ ಬೆಳ್ಗೊಡೆಗಳುಂ ಚಾಮರಂಗಳುಂ ಪಾಳಿಧ್ವಜಂಗಳುಂ ಪಂಚಮಹಾಶಬ್ದಂಗಳುಂ ಸೊಕ್ಕಾನೆಗಳುಂ ಜಾತ್ಯಶ್ವಂಗಳುಮೆಂಬೀ ಬಲಂಗಳಂ ಕಜ್ಜಮೇನೆಂದು

ಆರು ತಿಂಗಳುಗಳಲ್ಲಿ ವಿಶ್ವಮತಿಯು ಅಯ್ನೂರು ರಥಗಳನ್ನು ಪೂರ್ತಿಯಾಗಿ ಮಾಡಿ ತಂದು ರಾಜನಿಗೆ ತೋರಿಸಿದನು. ಆಗ ರಾಜನು ಕಂಡು ಅವನ ಮೇಲೆ ಬಹಳ ಪ್ರೀತಿಪಟ್ಟು ಅವನಿಗೆ ತೃಪ್ತಿಯಾಗುವ ದಾನವನ್ನಿತ್ತನು. ಅನಂತರ, ವಿಶ್ವಕರ್ಮನು ಆರು ತಿಂಗಳುಗಳಲ್ಲಿ ರಥದ ಒಂದು ಗಾಲಿಯನ್ನು ಮಾಡಿ ತಂದು ತೋರಿಸಿದನು. ರಾಜನು ನೋಡಿ ಕೋಪಗೊಂಡು ಅವನನ್ನು ಕೊಲ್ಲಲು ಯೋಚಿಸಿದನು. ಆಗ ವಿಶ್ವಕರ್ಮನು ಹೆದರಿ, ಆ ಗಾಲಿಯನ್ನು ರಾಜನ ಎದುರಿನಲ್ಲಿ ರತ್ನಮಯವಾದ ಜಗಲಿಯ ನೆಲದ ಮೇಲೆ ಎತ್ತಿ ಹಾಕಿ, ಪ್ರಾಣದ ಭಯದಿಂದ ಓಡಿ ಗುರುದತ್ತರಾಜನಲ್ಲಿಗೆ ಹೋದನು. ಆ ಗಾಲಿ ಹದಿನೈದು ದಿವಸಗಳವರೆಗೆ ತಾನೇ ತಾನಾಗಿ ಆಕಾಶದಲ್ಲಿದ್ದುಕೊಂಡು ನೆಲವನ್ನು ಮುಟ್ಟದೆ ತಿರ್ರನೆ ತಿರುಗುತ್ತಾ ಇತ್ತು. ಅದನ್ನು ಧಾತ್ರಿವಾಹನನು ಕಂಡು ವಿಶ್ವಕರ್ಮನ ಮೇಲೆ ಸಂತೋಷಗೊಂಡು 'ಅವನನ್ನು ಬೇಗನೆ ವಿಚಾರಿಸಿಕೊಂಡು ಬನ್ನಿ' ಎಂದು ಹೇಳಲು, ಅವನ ಬಳಿಯಲ್ಲಿದ್ದವರು ಹೀಗೆಂದರು - "ಆತನು ನಿಮಗೆ ಹೆದರಿ ಓಡಿಹೋಗಿ ಗುರುದತ್ತನ ಸೇವಕನಾಗಿದ್ದಾನೆ". ಇದನ್ನು ರಾಜನು ಕೇಳಿ ಗುರುದತ್ತನಲ್ಲಿಗೆ ಅಧಿಕಾರಿಗಳನ್ನು ಕಳುಹಿಸಿದನು. "ಕಪ್ಪ ಸಮೇತವಾಗಿ ನಮ್ಮ ಬಡಗಿಯನ್ನು ಬೇಗನೆ ಕಳುಹಿಸಿಕೊಡಲಿ - ಎಂದು ಹೋಗಿ ಹೇಳಿ" ಎಂದು ತಿಳಿಸಲು, ಆ ಅರಮನೆಯ ಅಧಿಕಾರಿಗಳು ಗುರದತ್ತನಲ್ಲಿಗೆ ಹೋಗಿ, ತಮ್ಮ ರಾಜನು ಹೇಳಿದಂತೆ ಆ ಮಾತನ್ನು ತಿಳಿಸಿದರು. ಅದನ್ನು ಗುರುದತ್ತರಾಜನು ಕೇಳಿ ಬಹಳವಾಗಿ ಕೋಪಗೊಂಡು ಹೀಗೆಂದನು - "ನಾನು ಮಂಡಲವನ್ನಾಳುವ ರಾಜನಾಗಿದ್ದು ಬೇರೆಯವರಿಗೆ ಕಪ್ಪ ಕೊಡುವುದಾದರೆ, ಈ ಸಿಂಹಾಸನ, ಶ್ವೇತಚ್ಛತ್ರಗಳು, ಚಾಮರಗಳು, ಪಾಳಿಧ್ವಜಗಳು, ಪಂಚಮಹಾಶಬ್ದಗಳು, ಸೊಕ್ಕಿದ ಆನೆಗಳು, ಜಾತಿಯ ಕುದುರೆಗಳು, ಎಂಬೀ ಬಲಗಳಿಂದ ಏನು ಕೆಲಸವಿದೆ ? - ಎಂದು ನಿಮ್ಮೊಡೆಯನಿಗೆ ಹೇಳಿ. ತನ್ನ ಮಗಳಾದ ಅಭಯಮತಿ ಕನ್ಯೆಸಮೇತ ತನ್ನ ಪಟ್ಟದಾನೆಯನ್ನೂ ಶ್ರೇಷ್ಠ

ನಿಮ್ಮರಸಂಗೆ ಪೇಟೆಂ ತನ್ನ ಮಗಳಭಯಮತಿ ಕನ್ನೆವೆರಸು ತನ್ನ ಪಟ್ಟವರ್ಧಮುಮುಗ್ಗಳ ವಸ್ತುವಾಹನಂಗಳುಮಂ ಬೇಗಮಟ್ಟುಗಟ್ಟದಾಗಳ್ ತನ್ನ ತಲೆವೆರಸು ಕೊಳ್ವೆನೆಂದು ಪೇಟೆಮೆಂದವರ ಪೆರ್ಗದೆಗಳೊಳ್ ನುಡಿದು ನಿಮ್ಮ ಬಟೆಯನೆ ಆನುಂ ಪಯಣಂ ಬಂದಪ್ಪೆನೆಂದು ನುಡಿದವರ್ಗಳಂ ಪೋಗಲ್ಪೇೞ್ದವರ ಬಟೆಯನೆ ಪರಿದು ವಿಭೂತಿಯಿಂ ಚಾತುರ್ವರ್ಣಂಬೆರಸು ಪೊಱಮಟ್ಟು ಪಯಣಂಬೋಗಿ ಕತಿಪಯ ದಿವಸಂಗಳಿಂ ಚಂಪಾನಗರಮನೆಯ್ದಿ ಪೊಱಲಂ ಮೂವಳಸು ಬಳಸಿ ಮುತ್ತಿದಾಗಳ್ ಧಾತ್ರಿವಾಹನಂ ತನ್ನ ಸಮಸ್ತ ಸಾಧನಂಬೆರಸು ಪೊಱಮಟ್ಟೊಡ್ಡಣಮನೊಡ್ಡೆ ಬಿಲ್ ಬಿಲ್ಲೊಳ್ ಕುದುರೆ ಕುದುರೆಯೊಳ್ ರಥಂ ರಥದೊಳಣಿ ಯಣಿಯೊಳ್ ಘಟಿಯಾನೆ ಘಟಿಯಾನೆಯೊಳ್ ತಳ್ತು ತಾಗಿ ಪಲವು ದಿವಸಂ ಕಾದೆಯೊಂದು ದಿವಸಂ ಗುರುದತ್ತನೃಪತಿಯಂ ಪ್ರಧಾನನಪ್ಪ ಮಹಾಸಾಮಂತಂ ಮಹೇಂದ್ರದತ್ತನೆಂಬರಸನಾತನ ಮುಂಗಯ್ ಧಾತ್ರಿವಾಹನನ ಯೋಧನಿಂ ಚಕ್ರಪಾಣಿಯಿಂ ಬಂದಿಸೆ ಪಟ್ಟುದಾಗಿ ನೆಲದೊಳ್ ಬರ್ದುದಂ ಪರ್ದು ಕಂದು ಕೊಂಡಾಕಾಶದೊಳ್ ಪಾಱಿಪೋಗುತ್ತಮಭಯಮತಿ ತನ್ನ ಕನ್ಯಾಮಾಡದೆರದನೆಯ ನೆಲೆಯ ಮುಂದಣ ಚವುಕಿಗೆಯ ಮೇಲೆ ದಾದಿಯುಂ ಸಖೀಜನಂಗಳ್ ಬೆರಸು ನಡಪಾದುತ್ತಿರ್ದಳ ಮುಂದಾ ಕೆಯ್ಯಂ ಪರ್ದು ತಂದಿಕ್ಕಿದೊದದು ವಜ್ರ ವೈಡೂರ್ಯ ಪದ್ಮರಾಗ ಪುಷ್ಪರಾಗ ಸಸ್ಯ ಕರ್ಕೇತನ ಇಂದ್ರನೀಲಂ ಮೊದಲಾಗೊಡೆಯ ಅನರ್ಘ್ಯಮಪ್ಪ ಮಾಣಿಕದಿಂ ಸಮೆದ ಪಲವುಂ ನಾನಾಪ್ರಕಾರದ ಕಂಕಣಂಗಳುಮಂ

ವಸ್ತುವಾಹನಗಳನ್ನೂ ಬೇಗ ಕಳುಹಿಕೊಡಲಿ. ಕಳುಹದಿದ್ದರೆ ಅವನ ತಲೆ ಸಹಿತವಾಗಿ ಅವನನ್ನು ತೆಗೆದುಕೊಳ್ಳುತ್ತೇನೆ - ಎಂದು ತಿಳಿಸಿರಿ.” ಹೀಗೆ ಅಧಿಕಾರಿಗಳಿಗೆ ಹೇಳಿ “ನಿಮ್ಮೊಡನೆಯೇ ನಾನೂ ಪ್ರಯಾಣ ಬರುತ್ತೇನೆ’ ಎಂದು ನುಡಿದು, ಅವರಿಗೆ ತೆರಳಲು ಅಜ್ಞೆ ಮಾಡಿದನು. ಅವರ ಒಟ್ಟಿಗೇ ಹೆಚ್ಚಿನ ವೈಭವದಿಂದ ಚತುರಂಗಸೇನೆಯೊಂದಿಗೆ ಹೊರಟು ಹೋಗಿ ಕೆಲವು ದಿನಗಳಲ್ಲಿ ಚಂಪಾನಗರಕ್ಕೆ ತಲುಪಿ, ಪಟ್ಟಣವನ್ನು ಮೂರು ಬಳಸಾಗುವಂತೆ ಮುತ್ತಿದನು. ಆಗ ದಾತ್ರಿವಾಹನನು ತನ್ನ ಎಲ್ಲಾ ಸೈನ್ಯವನ್ನೂ ಕೂಡಿ ಹೊರಟು, ಸೈನ್ಯವನ್ನು ಎದುರಿಗೆ ನಿಲ್ಲಿಸಿದನು. ಆಗ ಬಿಲ್ಲುಗಾರರು ಬಿಲ್ಲುಗಾರರೊಂದಿಗೂ ಕುದುರೆ ಕುದುರೆಯೊಂದಿಗೂ ರಥವು ರಥದೊಂದಿಗೂ ಸೈನ್ಯವು ಸೈನ್ಯದೊಂದಿಗೂ ಆನೆಗಳ ಸೈನ್ಯವು ಆನೆಗಳ ಸೈನ್ಯದೊಂದಿಗೂ ಮೇಲೆ ಬಿದ್ದು ಹಲವು ದಿವಸ ಕಾದಾಡಿದವು. ಒಂದು ದಿವಸ ಗುರುದತ್ತರಾಜನ ಪ್ರಧಾನ ಸಾಮಂತರಾಜನಾದ ಮಹೇಂದ್ರದತ್ತನ ಮುಂಗೈಯನ್ನು ಧಾತ್ರಿವಾಹನನ ಯೋಧನಾದ ಚಕ್ರಪಾಣಿ ಎಂಬವನು ತುಂಡರಿಸಿದನು. ತುಂಡಾದ ಮುಂಗೈ ನೆಲದ ಮೇಲೆ ಬಿದ್ದಿತು ಆದನ್ನು ಹದ್ದು ಕಂಡು, ತೆಗೆದುಕೊಂಡು ಆಕಾಶದಲ್ಲಿ ಹಾರಿಹೋಯಿತು. ಆಗ ಅಭಯಮತಿ ತನ್ನ ಕನ್ನೆವಾಡದ ಎರಡನೆಯ ಉಪ್ಪರಿಗೆಯ ಎದುರಿನ ಅಂಗಳದಲ್ಲಿ ದಾದಿಯರನ್ನೂ ಗೆಳತಿಯರನ್ನೂ ಕೂಡಿಕೊಂಡು ನಡೆದಾಡುತ್ತಿದ್ದಳು. ಅವಳ ಮುಂದೆ ಆ ಕೈಯನ್ನು ಹದ್ದು ತಂದಿಕ್ಕಿತು. ಆ ಕೈ ವಜ್ರ, ವೈಡೂರ್ಯ, ಪದ್ಮರಾಗ, ಪುಷ್ಯರಾಗ, ಸಸ್ಯ (?) ಕರ್ಕೇತನ (ಒಂದು ಬಗೆಯ ಸ್ಫಟಿಕಮಣಿ). ಇಂದ್ರನೀಲ - ಮೊದಲಾಗುಳ್ಳ ಅಮೂಲ್ಯವಾದ ಮಾಣಿಕ್ಯಗಳಿಂದ ಮಾಡಿದ ಹಲವು ಬೇರೆ ಬೇರೆ ರೀತಿಯ ಕೈ ಬಳೆಗಳನ್ನು ಧರಿಸಿಕೊಂಡಿರುವ ಮುಂಗೈಯೂ ಬೆರಳುಗಳೂ ಇದ್ದು ಶಂಖ, ಚಕ್ರ,

ತೊಟ್ಟ ಮುಂಗಯ್ಯುಂ ಬೆರಲ್ಗಳುಂ ಶಂಖ ಚಕ್ರ ಪದ್ಮಾಂಕುಶ ಚಾಮರ ತೋರಣ ಪತಾಕಾದಿ ಶುಭ ಲಕ್ಷಣಾಂಕಿತಮಾಗಿ ಕೆಂದಾವರೆಯ ಬಣ್ಣವಂತಪ್ಪ ತಳಮುಮಂ ಕಂಡೀ ತಳಮನೊಡೆಯಾತಂ ಸಾಮಾನ್ಯ ಪುರುಷನಲ್ಲಂ ಪಿರಿಯರಸನಾಗಲೆವೇಬ್ಕುಮೆಂದು ಮತ್ತೀ ಕೆಯ್ಯೇಕೆ ಬಂಡಿಸಿ ಬರ್ದುದಬ್ಬಾ ಎಂದು ದಾದಿಯಂ ಬೆಸಗೊಂಡೊಡಾಕೆಯಿಂತೆಂದಳ್ ಮಗಳೆ ನೀಂ ಕಾರಣವಾಗಿ ಇಂತಪ್ಪವಯವಂಗಳನೊಡೆಯ ಅರಸುಗಳ್ ಪಲಂಬರುಂ ಸತ್ತಪರೆಂದೊಡಾಂ ಕಾರಣಮಾಗಿ ಏಕೆ ಸತ್ತಪರೆನಗದನಜೆಯೆ ಪೇಬಬ್ಬಾ ಎಂದೊಡಾ ದಾದಿಯಿಂತೆಂದು ಪೇಟ್ಪುಂ ಕುರುಜಾಂಗಣಮೆಂಬುದು ನಾಡದರ್ಕೆ ತಿಲಕಮನೆ ಪೋಲ್ಮುದು ಹಸ್ತಿನಾಪುರವೆಂಬುದು ಪೊಬಲದಾದವಮಾನುಂ ಸೇವ್ಯಮಪ್ಪುದದನಾಳ್ವುಂ ಗುರುದತ್ತನೆಂಬೊನರಸನಾ ತನತ್ಯಂತ ರೂಪ ಲಾವಣ್ಯ ಸೌಭಾಗ್ಯಕಾಂತಿ ದೀಪ್ತಿ ಧೃತಿ ಕೀರ್ತಿ ಶೌರ್ಯ ವೀರ್ಯ ಬಳಪರಾಕ್ರಮನೊಡೆಯೊಂ ನವಯೌವನನು ಸಾಕ್ಷಾತ್ ಕಾಮದೇವನೆ ಆದಪನಾನುಂ ಪ್ರಚಂಡ ದೋರ್ದಂಡನುಂ ಬಲಗರ್ವಿತನುಂ ಪರಮಂಡಲಂಗಳಂ ಪಲವ್ರಮನಿಜೆದೊಟ್ಟಯಿಸಿ ಕೊಂಡಾಳ್ಪೊನಂತಪ್ಪಾತಂ ನಿನ್ನಂ ಬೇಡಿ ಪಾಗುದಂಗಳುಂ ಪೆರ್ಗಡೆಗಳುಮಂ ಪಲವು ಸೂಬಟ್ಟದೊಡಂ ನಿಮ್ಮಮ್ಮಂ ನಿನ್ನಂ ಕುಡಲೊಲ್ಲದಿರ್ದೊಡೆ ಮುನಿದಾತನ ತಲೆದೆರಸು ಕೂಸಂ ಕೊಳ್ಬೆನೆಂದು ಗರ್ಜಿಸಿ ಪ್ರಳಯಕಾಲದ ಸಮುದ್ರಂ ಮೇರೆವಪ್ಪಿದಂತೆ ಚಾತುರ್ದಂತುಲಂಬೆರಸು ಬಂದು ಪೊಬಲಂ ಮೂಪಳಸಾಗಿ ಮುತ್ತಿದೊಡೆ ನಿಮ್ಮರಸಂ ತನ್ನುಳ್ಳ ಬಲಂಬೆರಸು ಪೊಱಮಟ್ಟೊಡ್ಡಿ ನಿಂವನಿಂತೆರದುಂ ಪಡೆಗಳಿಂದಿಂಗೇಬು ದಿವಸಂ ಕಾದಿದಪ್ಪುದು ಸಾಮಂತ ಮಹಾಸಾಮಂತರ್

ತಾವರೆ, ಅಂಕುಶ, ಚಾಮರ, ತೋರಣ, ಧ್ವಜ ಮುಂತಾದ ಶುಭಲಕ್ಷಣಗಳ ಗುರುತುಗಳುಳ್ಳುದಾಗಿದ್ದಿತು. ಕೆಂಪುತಾವರೆಯ ಬಣ್ಣದ ಪಾಗಿರುವ ಅಂಗೈಯನ್ನೂ ಕಂಡು "ಈ ಅಂಗೈಯನ್ನುಳ್ಳವನು ಸಾಮಾನ್ಯನಾದ ಮನುಷ್ಯನಲ್ಲ ಶ್ರೇಷ್ಠನಾದ ರಾಜನೇ ಆಗಿರಬೇಕು" ಎಂದುಕೊಂಡಳು. ಅಮೇಲೆ "ಅಮ್ಮಾ ಈ ಕೈ ಯಾಕೆ ತುಂಡಾಗಿ ಬಿದ್ದಿದೆ?" ಎಂದು ಅಭಯಮತಿಯ ದಾದಿಯನ್ನು ಪ್ರಶ್ನಿಸಿದಳು. ಆಗ ದಾದಿಯು "ಮಗಳೇ, ನಿನ್ನ ಕಾರಣದಿಂದಲೇ, ಈ ರೀತಿಯ ಅಂಗೋಪಾಂಗಗಳಿರುವ ಹಲವರು ರಾಜರು ಸಾಯುತ್ತಿದ್ದಾರೆ" ಎನ್ನಲು ಅವಳು "ನನ್ನ ಕಾರಣದಿಂದ ಯಾಕೆ ಸಾಯುತ್ತಿದ್ದಾರೆ ? ನನಗೆ ಅದನ್ನು ತಿಳಿಯುವಂತೆ ಹೇಳು, ತಾಯೇ" ಎಂದಳು. ಆಗ ದಾದಿಯು ಈ ರೀತಿಯಾಗಿ ಹೇಳಿದಳು - ಕುರುರಾಜಾಂಗಣವೆಂಬ ನಾಡಿದೆ. ಆ ನಾಡಿನ ತಿಲಕದಂತೆ ಇರತಕ್ಕ ಹಸ್ತಿನಾಪುರವೆಂಬ ಪಟ್ಟಣವು ಅತಿಶಯವಾಗಿ ಸೇವ್ಯವಾಗಿದೆ. ಅದನ್ನು ಗುರುದತ್ತನೆಂಬ ರಾಜನು ಆಳುತ್ತಿರುವನು. ಅವನು ಅತಿಶಯವಾದ ರೂಪ, ಲಾವಣ್ಯ, ಕಾಂತಿ, ತೇಜಸ್ಸು, ಧೈರ್ಯ, ಗುಣ, ಕೀರ್ತಿ, ಶೂರತ್ವ, ವೀರತ್ವ, ಬಲ, ಪರಾಕ್ರಮಗಳುಳ್ಳವನಾಗಿ ಹೊಸ ತಾರುಣ್ಯದಿಂದ ಪ್ರತ್ಯಕ್ಷವಾದ ಮನ್ಮಥನಂತೆ ಇದ್ದಾನೆ. ಬಹಳ ಭಯಂಕರವಾದ ಭುಜದಂಡವುಳ್ಳವನೂ ಶಕ್ತಿಯಿದೆಯೆಂಬ ಗರ್ವದಿಂದ ಕೂಡಿದವನೂ ಶತ್ರುಗಳೊಡನೆ ಕಾದಿ ಅವರ ರಾಜ್ಯಗಳನ್ನು ಒಂದುಗೂಡಿಸಿ ಆಳುತ್ತಿರುವವನೂ ಆದಂತಹ ಆತನು ನಿನ್ನನ್ನು ಅಪೇಕ್ಷಿಸಿ ಪಾಣಿಕೆಗಳ ಸಮೇತ ಅಧಿಕಾರಿಗಳನ್ನು ಹಲವು ಬಾರಿ ಕಳುಹಿಸಿದರೂ ನಿಮ್ಮ ತಂದೆ ನಿನ್ನನ್ನು ಅವನಿಗೆ ಕೊಡಲು ಒಪ್ಪಲಿಲ್ಲ. ಇದರಿಂದ ಗುರುದತ್ತನು ಕೋಪಗೊಂಡು ಆತನ (ನಿನ್ನ ತಂದೆಯ) ತಲೆ

ಮೊದಲಾಗಿ ಪಲಂಬರುಮರಸುಮಕ್ಕಳ್ ಸತ್ತರಾನೆ ಕುದುರೆ ಪದಾತಿ ಸತ್ತುದರ್ಕೆ ಪ್ರಮಾಣಂ ಮೇರೆಯುಮಿಲ್ಲ ಮಹಾಘೋರತರಂ ಕಾಳಿಗಮಾಗಿರ್ಕುಮೆಂದು ಪೇಳ್ದೊಡದಂ ಕೇಳ್ದಂತಪ್ಪೊದಬ್ಬಾ ನೀಮರಸನಲ್ಲಿಗೆ ಪೋಗಿ ಇಂತೆಂದು ನುಡಿಯಿಂ ನಿಮ್ಮ ಮಗಳಿಂತೆಂದು ಪೇಳ್ದಿಟ್ಟದೊಳೆನ್ನಂ ಗುರುದತ್ತಂಗೆ ಕುಡುವೊಡೆ ಕುಡುಗೆಯುಟೆದ ಪುರುಷರ್ಕಳೆಲ್ಲಂ ಮೊಱೆಯಲ್ಲದವರೆನಗೆ ತಮ್ಮ ಮೆಚ್ಚಲ್ಲದಾಳೀಗಳಿ ತಪುಂಬಡುವೆನೆಂದಟ್ಟದೊಳೆಂದಭಯಮತಿ ಕಲ್ಪಿಸಿದ ಮಾತೆಲ್ಲಮನರಸಂಗೆ ದಾದಿ ಪೇಳ್ದೊಡೆ ಅರಸನುಂ ಕೇಳ್ದು ತನ್ನ ಪ್ರಧಾನರಪ್ಪ ನಾಲ್ವರುಂ ಪೆರ್ಗದೆಗಳಂ ಕಲ್ಪಿಸಿ ಗುರುದತ್ತನಲ್ಲಿಗೆ ಕೂಪಂ ಕೊಟ್ಪೆನೆಂದಟ್ಟದೊಡಾತನುಂ ತನ್ನ ಬಲಮಂ ಕಾದಲೀಯದೆ ಬಾರಿಸಿದಂ ಧಾತ್ರಿವಾಹನನುಂ ತನ್ನ ಬಲಮಂ ಬಾರಿಸಿದನಿಂತೆರಡುಂ ಪಡೆಗಳ್ ಸಂಗ್ರಾಮಮನುಪಸಂಹರಿಸಿ ಸತ್ತವರ್ಗ್ಗೆ ನೊಂದವರ್ಗ್ಗೆ ತಕ್ಕ ವಿಧಿಯಂ ಮಾಡಿದ ಬಟಿಕ್ಕೆ ಕೆಲವು ದಿವಸದಿಂ ಪ್ರಶಸ್ತ ದಿವಸ ವಾರ ನಕ್ಷತ್ರದಿಂ ಹೋರಾಮುಹೂರ್ತದೊಳ್ ಕೂಸಿನನುಕೂಲದೊಳ್ ಮಹಾವಿಭೂತಿಯಿಂ ಪಾಣಿಗ್ರಹಣ ಪುರಸ್ಸರಮಭಯಮತಿ ಕನ್ನೆಯಂ ಗುರುದತ್ತ ನೃಪತಿಗೆ ಕೊಟ್ಟು ಸನ್ಮಾನದಾನಾದಿಗಳಿಂದಾತನಂ ಪೂಜಿಸಿದನಾತನುಂ ಚಂಪಾನಗರದೊಳ್ ಪಲವು ದಿವಸಮಿರ್ದ್ದಿನ್ನೆಮ್ಮ ನಾಟ್ಕ್ಕೆ ಪೋಪಮೆಂದರಸನಂ ಬೆಸಗೊಳಲಟ್ಟದೊದರಸನುಂ ಕೂಸಿಂಗೆ ತಕ್ಕ ಪೆಂಡವಾಸದ ಪಲಂಬರುಮಗ್ಗಳದ ಸೂಳೆಯರ್ಕಳುಮಂ

ಸಮೇತ ಕನ್ಯೆಯನ್ನು (ನಿನ್ನನ್ನು) ವಶಮಾಡುವೆನೆಂದು ಗರ್ಜಿಸಿ ಪ್ರಳಯಕಾಲದ ಸಮುದ್ರವೇ ಮೇರೆದಪ್ಪಿ ಹರಿಯಿತೋ ಎಂಬಂತೆ ಚತುರಂಗ ಸೈನ್ಯಸಮೇತನಾಗಿ ಬಂದು ಪಟ್ಟಣವನ್ನು ಮೂರು ಸುತ್ತಾಗಿ ಮುತ್ತಿಗೆ ಹಾಕಿದ್ದಾನೆ. ನಿಮ್ಮ ರಾಜನು (ತಂದೆ) ತನ್ನಲ್ಲಿರತಕ್ಕ ಸೈನ್ಯದೊಡನೆ ಹೊರಟು ಯುದ್ಧಕ್ಕೆ ಸೈನ್ಯವನ್ನೊಡ್ಡಿ ನಿಂತಿದ್ದಾನೆ. ಹೀಗೆ ಎರಡೂ ಸೈನ್ಯಗಳು ಇಂದಿಗೆ ಏಳು ದಿವಸಗಳಿಂದ ಕಾದಾಡುತ್ತಿವೆ. ಸಾಮಂತರೂ ಮಹಾಸಾಮಂತರು ಮೊದಲಾಗಿ ಹಲವರು ರಾಜ ಕುಮಾರರು ಸತ್ತುಹೋದರು. ಆನೆ, ಕುದುರೆ, ಕಾಲಾಳುಗಳು ಸತ್ತುದಕ್ಕೆ ಲೆಕ್ಕವೂ ಇಲ್ಲ, ಮೇರೆಯೂ ಇಲ್ಲ. ಬಹಳ ಭಯಂಕರವಾದ ಯುದ್ಧವಾಗುತ್ತಿದೆ - ಎಂದು ದಾದಿ ಹೇಳಿದಳು. ಅದನ್ನು ಆಕೆ ಕೇಳಿ, ಅವ್ವಾ, ನೀವು ರಾಜನ ಬಳಿಗೆ ಹೋಗಿ ಹೀಗೆನ್ನಿರಿ - "ನಿಮ್ಮ ಮಗಳು ನನ್ನೊಡನೆ ಹೀಗೆ ಹೇಳಿ ಕಳುಹಿಸಿರುತ್ತಾಳೆ - ನನ್ನನ್ನು ಗುರುದತ್ತನಿಗೆ ಕೊಡುವುದಾದರೆ ಕೊಡಲಿ. ಉಳಿದ ಗಂಡಸರೆಲ್ಲರೂ ನಂಟತನಕ್ಕೆ ಆಗದವರು. ನನಗೆ ಅವನು ತಮ್ಮ ದೃಷ್ಟಿಯಿಂದ ಮೆಚ್ಚಲ್ಲವಾದರೆ, ಈಗಲೇ ತಪಸ್ಸನ್ನು ಕೈಗೊಳ್ಳುವೆನು - ಎಂದು ಹೇಳಿ ನನ್ನನ್ನು ಕಳುಹಿಸಿದ್ದಾಳೆ". ಹೀಗೆ ಅಭಯಮತಿ ಹೇಳಿಕೊಟ್ಟ ಮಾತನ್ನೆಲ್ಲ ದಾದಿಯು ಅರಸನಿಗೆ ಹೇಳಿದಳು. ಅರಸನು ಕೇಳಿ, ತನ್ನ ಮುಖ್ಯಸ್ಥರಾದ ನಾಲ್ಕು ಮಂದಿ ಅಧಿಕಾರಿಗಳಿಗೆ ಸಂಗತಿಯನ್ನು ತಿಳಿಸಿ, 'ಕನ್ಯೆಯನ್ನು ಗುರುದತ್ತನಿಗೆ ಕೊಡುತ್ತೇನೆ' ಎಂದು ಅವರನ್ನು ಗುರುತ್ತನಲ್ಲಿಗೆ ಕಳುಹಿಸಿದನು. ಇದರಿಂದ ಗುರುದತ್ತನು ತನ್ನ ಸೈನ್ಯವು ಯುದ್ಧಮಾಡದಂತೆ ತಡೆದನು. ಧಾತ್ರಿವಾಹನನೂ ತನ್ನ ಸೈನ್ಯವನ್ನು ತಡೆದನು. ಹೀಗೆ ಎರಡೂ ಸೈನ್ಯಗಳು ಯುದ್ಧವನ್ನು ನಿಲ್ಲಿಸಿ, ಸತ್ತವರಿಗೂ ನೊಂದವರಿಗೂ ತಕ್ಕುದಾದ ವಿಧಿಯನ್ನು ಮಾಡಿದನಂತರ ಕೆಲವು ದಿವಸಗಳು ಕಳೆಯಲು ಧಾತ್ರಿವಾಹನನು ಶುಭಕರವಾದ ದಿನ, ವಾರ, ನಕ್ಷತ್ರ, ಹೋರೆ, ಮುಹೂರ್ತದಲ್ಲಿ ಕನ್ಯೆಯ ಅನುಕೂಲದಂತೆ ಬಹಳ ವೈಭವದಿಂದ ಕರಗ್ರಹಣ ಪೂರ್ವಕವಾಗಿ ಅಭಯಮತಿ ಕನ್ಯೆಯನ್ನು ಗುರುದತ್ತ

ಕರಿಕರಿಣಿ ತುರಗಾಶ್ವ ರಥ ಶಿಬಿಕಾದ್ಯನೇಕ ವಾಹನಂಗಳುಮಂ ಮುತ್ತಿನ ಮಾಣಿಕದ ಪೊನ್ನ ಮೂದೆಱದ ವಲವುಂ ನಾನಾಪ್ರಕಾರದನರ್ಘ್ಯಮಪ್ಪ ತುದುಗೆಗಳುಮಂ ಬಟೆವಟೆಗೊಟ್ಟರ್ವರುಮಂ ಪರಸಿಯವರ ನಾಬ್ಕಿ ಕಟೆಪಿದಂ ಮತ್ತೆ ಗುರುದತ್ತನ್ಕಪತಿಯುಂ ಕತಿಪಯ ದಿವಸಂಗಳಿಂ ತನ್ನ ಪೊಬಲಂ ಹಸ್ತಿನಾಪುರಮನೆಯ್ದಿ ಮಹಾವಿಭೂತಿಯಿಂ ಪೊಕ್ಕರ್ದಿಷ್ಟವಿಷಯ ಕಾಮಭೋಗಂಗಳಂ ಪಲಕಾಲಮಭಯಮತಿಯೊಳ್ ಅನುನಯದಿಂದನುಭವಿಸುತ್ತಿರೆಯಾಕೆಗೆ ಸುವರ್ಣಭದ್ರನೆಂಬೊಂ ಮಗಂ ಪುಟ್ಟದನಿಂತು ಸಂತೋಷದಿಂ ಕಾಲಂ ಸಲೆ ಮತ್ತೊಂದು ದಿವಸಂ ಹಸ್ತಿನಾಪುರದ ಸಾರೆ ಧರಣಿಭೂಷಣವೆಂಬ ಪರ್ವತದೊಳಮೃತಾಸ್ರವರೆಂಬ ಗುರುಗಳುಂ ಅಯ್ನೂರ್ವರ್ ಋಷಿಯರಿರ್ದರೆಂಬುದಂ ಕೇಳ್ದು ಪುತ್ರ ಮಿತ್ರ ಕಳತ್ರ ಪರಿವಾರ ಸಮೇತಂ ವಂದನಾಭಕ್ತಿಗೆ ಪೋಗಿ ಗೆಂಟಱೊಳ್ ವಾಹನಂಗಳಿಂದಿಟೆದು ಬಲಗೊಂದು ಬಂದರ್ಚಿಸಿ ಗುರುಭಕ್ತಿಯುಂ ಭಟಾರರಂ ಬಂದಿಸಿಯುಟೆದ ಋಷಿಯರ್ಕಳುಮಂ ಗುರುಪರಿವಿಡಿಯಿಂದಂ ಬಂದಿಸಿ ಪಿರಿದು ಬೇಗಂ ಧರ್ಮಮಂ ಕೇಳ್ದು ತದನಂತರಮಿಂತೆಂದು ಬಿಸಗೊಂಡಂ ಭಟಾರಾ ಎನ್ನ ಮುನ್ನಿನ ಭವಂಗಳಿನಗಱಿಯೆ ಬಿಸಸಿಮೆನೆ

ರಾಜನಿಗೆ ಕೊಟ್ಟನು. ಅವನನ್ನು ಸನ್ಮಾನ ದಾನ ಮುಂತಾದವುಗಳಿಂದ ಸತ್ಕರಿಸಿದನು. ಗುರುದತ್ತನು ಚಂಪಾನಗರದಲ್ಲಿ ಹಲವು ದಿವಸ ಇದ್ದು "ಇನ್ನು ನಮ್ಮ ನಾಡಿಗೆ ಹೋಗೋಣ" ಎಂದು ಧಾತ್ರಿವಾಹನ ರಾಜನನ್ನು ಕೇಳಿ ಅನುಮತಿ ಪಡೆಯಲು ಹೇಳಿ ಕಳುಹಿಸಿದನು. ರಾಜನು ತನ್ನ ಮಗಳಿಗೆ ಯೋಗ್ಯವಾದ ರಾಣೀವಾಸದ ಹಲವರು ಶ್ರೇಷ್ಠದಾಸಿಯರನ್ನೂ ಆನೆ, ಹೆಣ್ಣಾನೆ, ವೇಗವಾಗಿ ಓಡುವ ಕುದುರೆ, ರಥ, ಪಲ್ಲಕ್ಕಿ - ಮುಂತಾದ ಅನೇಕ ವಾಹನಗಳನ್ನೂ ಮುತ್ತು, ಮಾಣಿಕ್ಯ, ಚಿನ್ನ - ಈ ಮೂರು ವಿಧದ ಹಲವು ಹಲವಾರು ರೀತಿಯ ಅಮೂಲ್ಯವಾದ ಆಭರಣಗಳನ್ನೂ ಬಳುವಳಿ ಕೊಟ್ಟು ಇಬ್ಬರನ್ನೂ ಆಶೀರ್ವದಿಸಿ, ಅವರ ನಾಡಿಗೆ ಕಳುಹಿಸಿದನು. ಆಮೇಲೆ, ಗುರುದತ್ತ ರಾಜನು ಕೆಲವು ದಿವಸಗಳಲ್ಲಿ ತನ್ನ ಪಟ್ಟಣವಾದ ಹಸ್ತಿನಾಪುರಕ್ಕೆ ಹೋಗಿ ಬಹಳ ವೈಭವದಿಂದ ಪ್ರವೇಶಿಸಿ, ಅಭಯಮತಿಯೊಂದಿಗೆ ಮೆಚ್ಚುಗೆಯಾದ ವಿಷಯದ ಇಚ್ಛೆಯ ಸುಖಿಗಳನ್ನು ಹಲವು ಕಾಲ ಮನಸ್ಸಿಗೊಪ್ಪುವಂತೆ ಅನುಭವಿಸುತ್ತ ಇದ್ದನು. ಹೀಗಿರಲು ಆಕೆಗೆ ಸುವರ್ಣಭದ್ರನೆಂಬ ಮಗನು ಹುಟ್ಟಿದನು. ಹೀಗೆ ಸಂತೋಷದಿಂದ ಕಾಲ ಕಳೆಯುತ್ತಿದ್ದಿತು. ಅನಂತರ, ಒಂದು ದಿವಸ ಹಸ್ತಿನಾಪುರದ ಬಳಿಯ ಧರಣಿ ಭೂಷಣವೆಂಬ ಪರ್ವತದಲ್ಲಿ ಅಮೃತಾಸ್ರವರೆಂಬ ಗುರುಗಳೂ ಐನೂರು ಮಂದಿ ಋಷಿಗಳೂ ಇದ್ದಾರೆ ಎಂಬುದನ್ನು ಕೇಳಿ, ಗುರುದತ್ತರಾಜನು ತನ್ನ ಪುತ್ರ ಮಿತ್ರ ಪತ್ನೀ ಪರಿವಾರವನ್ನು ಕೂಡಿಕೊಂಡು ಭಕ್ತಿಯಿಂದ ವಂದಿಸುವುದಕ್ಕಾಗಿ ಹೋದನು. ದೂರದಲ್ಲಿಯೇ ವಾಹನಗಳಿಂದ ಇಳಿದು ಪ್ರದಕ್ಷಿಣೆ ಬಂದು ಪೂಜಿಸಿ, ಗುರುಭಕ್ತಿಯನ್ನು ಮಾಡಿ, ಋಷಿಗಳನ್ನು ವಂದಿಸಿ ಉಳಿದ ಋಷಿಗಳನ್ನೂ ಗುರುತ್ವದ ಅನುಕ್ರಮದಿಂದ ನಮಸ್ಕರಿಸಿ ಬಹಳ ಹೊತ್ತಿನವರೆಗೆ ಧರ್ಮಶ್ರವಣವನ್ನು ಮಾಡಿದನು. ಆಮೇಲೆ ಅವರೊಡನೆ - "ಪೂಜ್ಯರೇ, ನನ್ನ ಹಿಂದಿನ ಜನ್ಮಗಳ ವಿಚಾರವನ್ನು ನನಗೆ ತಿಳಿಯುವಂತೆ ಅಪ್ಪಣೆ ಕೊಡಿ" ಎಂದನು. ಆಗ ಋಷಿಗಳು ಹೀಗೆಂದರು. "ನೀನು ಈ ಜನ್ಮದಿಂದ ತೊಡಗಿ ಹಿಂದೆ ನಾಲ್ಕನೆಯ ಜನ್ಮದಲ್ಲಿ ಸಾವಸ್ತಿ ಎಂಬ ಪಟ್ಟಣದಲ್ಲಿ

ಭಟಾರರಿಂತೆಂದು ಪೇಳ್ದರೀ ಭವದಿಂ ತೊಟ್ಟು ನಾಲ್ಕನೆಯ ಭವದಂದು ನೀಂ ಸಾವಸ್ತಿಯೆಂಬ ಪೊಲಲೊಳ್ ಉಪರಿಚರನೆಂಬ ಮಂಡಳಿಕನಯ್ ಜಲಕ್ರೀಡೆಯಾಡುತ್ತಿರ್ಪನ್ನೆಗಂ ವಜ್ರದಾಡನೆಂಬ ವಿದ್ಯಾಧರನಿಂ ಕೊಲೆಪಟ್ಟೆಯಾಗಿ ಸತ್ತಾ ಪೊಲಲೊಳ್ ಪೆರ್ಮಾವಾಗಿ ಪುಟ್ಟದೆಯಲ್ಲಿಂದಂ ಸತ್ತು ಭವನವಾಸಿಗಲೋಕದೊಳ್ ಧರಣೀಂದ್ರನಾಗಿ ಪುಟ್ಟದೆಯಲ್ಲಿಂ ಬಂದೀಗಳ್ ಗುರುದತ್ತನೆಯಾದೆಯೆಂದು ಆತನ ನಾಲ್ಕು ಭವಂಗಳಂ ಸವಿಸ್ತರಂ ಭಟಾರರ್ ಪೇಟೆ ಕೇಳ್ದಾದಮಾನುಂ ವೈರಾಗ್ಯಮನೊಡೆಯೊನಾದೊಂ ಮತ್ತಭಯಮತಿಯುಂ ಎನ್ನ ಭವಮುಮಂ ಭಟಾರಾ ಎನಗೆ ಬೆಸಸಿಮೆಂದು ಬೆಸಗೊಂಡೊಡೆ ಭಟಾರರಿಂತೆಂದು ಪೇಟ್ಪರ್ ಚಂಪಾನಗರದೊಳೊರ್ವಂ ಪುಳುಂಗಾಜಂ ಗರುಡವೇಗನೆಂಬೊನಾತಂಗೆ ನೀಂ ಮುನ್ನಿನ ಭವದೊಳ್ ಪೆಂಡತಿಯಯ್ ಗೋಮತಿಯೆಂಬೆಯೊಂದು ದಿವಸಂ ಸಮಾಧಿಗುಪ್ತರೆಂಬ ಭಟಾರರ್ ವಲಂಬರ್ ರಿಸಿಯರ್ವೆರಸು ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಚಂಪಾನಗರಕ್ಕೆಂದಂದೊಡವರ ವಕ್ಕದೆ ನೀಂ ಪೋಗಿ ಧರ್ಮಮಂ ಕೇಳ್ದು ಕೊಲ್ಲದ ಕಳ್ಳದ ಮಧು ಮದ್ಯಮಾಂಸಗಳುಮಯ್ದು ಪಾಲ್ಮರನ ಪಣ್ಣುಂ ಗಿಣ್ಣುಮಾಳಂಬೆಯುಂ ಇಂತಿವೆಲ್ಲಮಂ ತಿನ್ನದ ಬ್ರತಗಳುಮಂ ಕೈಕೊಂಡು ಭಟಾರರಂ ವಂದಿಸಿ ಮನೆಗೆ ಪೋಗೆಯನ್ನೆಗಂ ನಿನ್ನ ಭರ್ತಾರಂ ಬೇಂಟೆಯಾಡಿ ಪಲವುಂ ಲಾವುಗೆಯುಂಕೆ ಕೊರಸುಂ ಮೊದಲಾಗೊಡೆಯ ಪಕ್ಷಿಜಾತಿಗಳಂ ಬಲೆಯನೊಡ್ಡಿ ಪಿಡಿದು ಕಟ್ಪ ಬಾಟಿವಾಟಿ ಮನೆಯೊಳ್ ತಂದಿಟ್ಪು ಮತ್ತೆ

ಉಪರಿಚರನೆಂಬ ಮಾಂಡಳಿಕನಾಗಿದ್ದಿ. ನೀನು ನೀರಿನಲ್ಲಿ ಆಡುತ್ತಿದ್ದ ವೇಳೆಯಲ್ಲಿ ವಜ್ರದಾಡನೆಂಬ ವಿದ್ಯಾಧರನು ನಿನ್ನನ್ನು ಕೊಂದನು. ಹಾಗೆ ಸತ್ತು ಆ ಪಟ್ಟಣದಲ್ಲಿ ಹೆಬ್ಬಾವಾಗಿ ನೀನು ಹುಟ್ಟಿದೆ. ಆಮೇಲೆ ಸತ್ತು ಭವನವಾಸಿಗಳ ಲೋಕದಲ್ಲಿ ಧರಣೇಂದ್ರನಾಗಿ ಹುಟ್ಟಿರುತ್ತೀಯೆ. ಅಲ್ಲಿಂದ ಬಂದು ಈಗ ಈ ಜನ್ಮದಲ್ಲಿ ನೀನು ಗುರುದತ್ತನೆಂಬವನಾಗಿರುವೆ". ಋಷಿಗಳು ಈ ರೀತಿಯಾಗಿ ಅವನ ನಾಲ್ಕು ಜನ್ಮಗಳ ಸಂಗತಿಯನ್ನು ವಿಸ್ತಾರವಾಗಿ ತಿಳಿಸಿದರು. ಅದನ್ನು ಕೇಳಿ ಗುರುದತ್ತನು ಅತ್ಯಂತ ವೈರಾಗ್ಯವುಳ್ಳವನಾದನು. ಆಮೇಲೆ ಅಭಯಮತಿ ಅಮೃತಾಸ್ರವ ಮುನಿಗಳೊಡನೆ, "ಪೂಜ್ಯರೇ, ನನ್ನ ಪೂರ್ವ ಜನ್ಮ ವೃತ್ತಾಂತವನ್ನೂ ನನಗೆ ತಿಳಿಸಿರಿ" ಎಂದು ಕೇಳಲು, ಋಷಿಗಳು ಹೀಗೆಂದರು - "ಚಂಪಾನಗರದಲ್ಲಿ ಗರುಡವೇಗನೆಂಬ ಹಕ್ಕಿಗಳನ್ನು ಹಿಡಿವವನೊಬ್ಬನು ಇದ್ದನು. ಹಿಂದಿನ ಜನ್ಮದಲ್ಲಿ ನೀನು ಗೋಮತಿ ಎಂಬವಳಾಗಿದ್ದು ಗರುಡವೇಗನ ಹೆಂಡತಿಯಾಗಿದ್ದೆ. ಒಂದು ದಿವಸ ಸಮಾಧಿಗುಪ್ತರೆಂಬ ಋಷಿಗಳು ಹಲವು ಮಂದಿ ಋಷಿಗಳನ್ನು ಕೂಡಿಕೊಂಡು ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖಗಳಲ್ಲಿ ಸಂಚಾರಮಾಡುತ್ತ ಚಂಪಾನಗರಕ್ಕೆ ಬಂದರು. ನೀವು ಅವರ ಬಳಿಗೆ ಹೋಗಿ ಅವರ ಸಮೀಪ ಧರ್ಮವಿಚಾರವನ್ನು ಕೇಳಿದೆ. ಕೊಲ್ಲದಿರುವ, ಕಳವು ಮಾಡದಿರುವ, ಜೇನು-ಹೆಂಡ-ಮಾಂಸಗಳು ಐದು ಬಗೆಯ ಹಾಲುಮರಗಳ ಹಣ್ಣು, ಹಸು ಕರುಹಾಕಿದ ಹೊಸತರಲ್ಲಿ ಕೊಡತಕ್ಕ ಗಿಣ್ಣಿನ ಹಾಲು, ಅಳಂಬೆ (ನಾಯಿಕೊಡೆ) - ಇವೆಲ್ಲವನ್ನು ತಿನ್ನದಿರುವ ವ್ರತಗಳನ್ನು ಸ್ವೀಕರಿಸಿ ಋಷಿಗಳನ್ನು ವಂದಿಸಿ ಮನೆಗೆ ಹೋಗಿರುವ ವೇಳೆಗೆ ನಿನ್ನ ಗಂಡನು ಬೇಟೆಯಾಡಿ ಮನೆಗೆ ಬಂದಿದ್ದನು. ಅವನು ಹಲವು ಲಾವಗೆ, ಉಂಕೆ (ಒಂದು ಬಗೆಯ ಹಕ್ಕಿ), ಕೊರಸು - ಮುಂತಾದ ಹಕ್ಕಿಯ ಜಾತಿಗಳನ್ನು

ಬೇಂಟೆಗೆ ವೋದನನ್ನೆಗಂ ನೀನವಂ ಕಂಡು ಕಾರುಣ್ಯಭಾವದಿಂದನಿತುಮಂ ಬಟ್ಟು ಕಳಿದೊಡವು ಪಾಱೆ ಪೋದವು ಮತ್ತೆ ನಿನ್ನ ಭರ್ತಾರಂ ಬಂದು ಪಕ್ಕಗಳಂ ಕಾಣದೆ ಬಟ್ಟು ಕಳಿದರಾರೆಂದು ಬೆಸಗೊಂಡೊಡಾಂ ಬಟ್ಟು ಕಳಿದೆನೆಂದೊಡೆ ಇಂತಪ್ಪ ಧರ್ಮಾರ್ಥಿಯೆನ್ನ ಮನೆಯೊಳಿರಲ್ಪೇಡೆಂದು ಬಯ್ದು ಪೊಯ್ದಟ್ಟಿಕಳಿದೊಂ ನೀನುಂ ಮನೆಯಿಂದಂ ಪೊಱಮಟ್ಟು ಪೋಗಿ ನಂಟರ ಮನೆಯೊಳಿರ್ದೆಯನ್ನೆಗಮೊಂದು ದಿವಸಮಾ ಚಂಪಾಪುರವನಾಳ್ವಂ ಧಾತ್ರಿವಾಹನನೆಂಬೊನರಸನು ಮಾತನ ಮಹಾದೇವಿ ಶ್ರೀಮತಿಯುಮಂತಿರ್ವರುಂ ಮಹಾವಿಭೂತಿಯಿಂ ಪೊಱಲಂ ಪೊಱಮಟ್ಟವರ ಶ್ರೀಯುಂ ವಿಭೂತಿಯುಮಂ ಕಂಡಿವರ್ಗಾಂ ಪುಟ್ಟದೊಡೊಳ್ಳಿತ್ತೆಂದು ಮನದೊಳ್ ಬಗೆದಿರ್ದು ಕೆಲವು ದಿವಸದಿಂ ಸತ್ತು ಶ್ರೀಮತಿಯ ಗರ್ಭದೊಳ್ ನೆಲೆಸಿರೆಯಾಕೆಗೆಲ್ಲಾ ಜೀವಂಗಳಂ ದಯೆಗೆಯ್ವ ಬಯಕೆಯಾದುದರಸಂ ಕೇಳ್ದು ತನ್ನ ಪೊಱಲೊಳಂ ನಾಡೊಳಮಾರಪ್ಪೊಡಂ ಜೀವಂಗಳಂ ಕೊಲ್ಲದಂತು ಗೋಸನೆಗಳಿಯಿಸಿದನದು ಕಾರಣದಿಂ ನಿನಗಭಯಮತಿಯೆಂದಾ ತಾಯುಂ ತಂದೆಯುಂ ಪೆಸರನಿಟ್ಟು ಬಾಬ್ದರ್ ಎಂದಿರ್ವರ ಭವಂಗಳುಮಂ ಭಟಾರರ್ ಪೇೞ್ದೊದರಸನುಮರಸಿಯುಂ ಕೇಳ್ದು ಸಂಸಾರ ಶರೀರ ಭೋಗ ವೈರಾಗ್ಯಮನೊಡೆಯರಾಗಿ ಶ್ರೀದತ್ತನೆಂಬ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ಪಲಂಬರರಸುವಕ್ಕಳ್ವೆರಸವ್ಯತಾಸ್ರವ ಭಟಾರರ ಪಕ್ಕದೆ ಗುರುದತ್ತ ಮಹಾರಾಜಂ

ಬಲೆಹಾಕಿ ಹಿಡಿದು, ಕಟ್ಟಿ ಬದುಕಿಕೊಂಡಿದ್ದ ಹಾಗೆಯೇ ಮನೆಗೆ ತಂದು ಇಟ್ಟು ಮತ್ತೆ ಬೇಟೆಗೆ ಹೋದನು. ಅಷ್ಟರಲ್ಲಿ ನೀನು ಆ ಹಕ್ಕಿಗಳನ್ನು ಕಂಡು ದಯಾಭಾವನೆಯಿಂದ ಅವಷ್ಟನ್ನೂ ಬಿಟ್ಟು ಬಿಟ್ಟೆ. ಆಗ ಅವು ಹಾರಿಹೋದವು. ಅಮೇಲೆ ನಿನ್ನ ಗಂಡನು ಬಂದನು. ಹಕ್ಕಿಗಳನ್ನು ಕಾಣದೆ ಅವನ್ನು ಬಿಟ್ಟುಬಿಟ್ಟವರು ಯಾರೆಂದು ಕೇಳಿದನು. 'ನಾನು ಬಿಟ್ಟು ಬಿಟ್ಟೆ'ನೆಂದು ನೀನು ಹೇಳಿದೆ. ಆಗ ಗರುಡವೇಗನು - 'ಈ ರೀತಿಯ ಧರ್ಮಾರ್ಥಿಯಾದವಳು ನನ್ನ ಮನೆಯಲ್ಲಿ ಇರುವುದು ಬೇಡ' ಎಂದು ಬೈದು, ಹೊಡೆದು ಹೊರಗೆ ಅಟ್ಟಿಬಿಟ್ಟನು. ನೀನು ಮನೆಯಿಂದ ಹೊರಟುಹೋಗಿ ನಂಟರ ಮನೆಯನ್ನು ಸೇರಿಕೊಂಡಿದ್ದೆ. ಹೀಗಿರಲು ಒಂದು ದಿವಸ ಚಂಪಾಪುರವನ್ನು ಆಳತಕ್ಕ ಧಾತ್ರಿವಾಹನನೆಂಬ ರಾಜನು ಮತ್ತು ಅವನ ಮಹಾರಾಣಿ ಶ್ರೀಮತಿ - ಅಂತು ಇಬ್ಬರೂ ಬಹಳ ವೈಭವದಿಂದ ಪಟ್ಟಣದ ಹೊರಗೆ ಹೊರಟಿದ್ದರು. ಅವರ ಶ್ರೀಮಂತಿಕೆಯನ್ನೂ ವೈಭವವನ್ನೂ ಕಂಡು, ನಾನು ಇವರಿಗೆ ಹುಟ್ಟಿದರೆ ಒಳ್ಳೆಯದಿತ್ತೆಂದು ಮನಸ್ಸಿನಲ್ಲಿ ಭಾವಿಸಿದೆ. ಕೆಲವು ದಿವಸಗಳಲ್ಲಿ ನೀನು ಸತ್ತು ಶ್ರೀಮತಿಯ ಬಸಿರಲ್ಲಿ ನೆಲಸಿದೆ. ಇದರಿಂದ ಆಕೆಗೆ ಎಲ್ಲಾ ಜೀವಿಗಳಲ್ಲಿಯೂ ದೆಯೆಯನ್ನು ತೋರಿಸುವ ಅಪೇಕ್ಷೆಯುಂಟಾಯಿತು. ಈ ಸಂಗತಿಯನ್ನು ರಾಜನು ಕೇಳಿ, ತನ್ನ ಪಟ್ಟಣದಲ್ಲಿಯೂ ನಾಡಿನಲ್ಲಿಯೂ ಯಾರೇ ಆಗಲಿ, ಜೀವಿಗಳನ್ನು ಕೊಲ್ಲಕೂಡದು - ಎಂದು ಡಂಗುರ ಸಾರಿಸಿದನು. ಆ ಕಾರಣದಿಂದ ನಿನಗೆ ಆ ತಾಯಿಯೂ ತಂದೆಯೂ ಅಭಯಮತಿ ಎಂದು ಹೆಸರನ್ನಿಟ್ಟು ಬಾಳಿದರು" - ಎಂದು ಋಷಿಗಳು ಅವರಿಬ್ಬರ ಜನ್ಮವೃತ್ತಾಂತಗಳನ್ನು ಹೇಳಿದರು. ರಾಜನೂ ರಾಣಿಯೂ ಇದನ್ನು ಕೇಳಿ ಸಂಸಾರದಲ್ಲಿಯೂ ಶರೀರ ಸುಖದಲ್ಲಿಯೂ ವೈರಾಗ್ಯವುಳ್ಳವರಾದರು. ಶ್ರೀದತ್ತನೆಂಬ ಹಿರಿಯ ಮಗನಿಗೆ ರಾಜ್ಯದ ಪಟ್ಟವನ್ನು ಕಟ್ಟಿ ಹಲವು ಮಂದಿ ರಾಜಕುಮಾರರೊಂದಿಗೆ ಅಮೃತಾಸ್ರವ ಋಷಿಗಳ ಬಳಿಯಲ್ಲಿ ಗುರುದತ್ತಮಹಾರಾಜನು ತಪಸ್ಸನ್ನು ಸ್ವೀಕರಿಸಿದನು. ಅಭಯಮತಿಯು ಆ

ತಪಂಬಟ್ಟನಭಯಮತಿಯುಮಾ ಭಟಾರರೆ ಗುರುಗಳಾಗೆ ಸುವ್ರತೆಯೆಂಬ ಕಂತಿಯರೆ ಕಂತಿಯರಾಗೆ ತಪಂಬಟ್ಟು ಸಮ್ಯಕ್ತ್ವಪೂರ್ವಕಂ ಮಹಾವ್ರತಂಗಳಂ ಕೈಕೊಂಡಾಚಾರಮಾರಾಧನೆ ಮೊದಲಾಗೊಡೆಯ ಚರಣಗ್ರಂಥಂಗಳಂ ಕಲ್ತು ಪಲಕಾಲಮುಗ್ರೋಗ್ರ ತಪಶ್ಚರಣಂಗೆಯ್ದು ನೋಂಪಿಗಳಿಂದಂ ಗಿಡಿಗಿಡಿಜಂತ್ರಂ ಮಿಳಿಮಿಳಿನೇತ್ರಮಾಗಿ ತಮ್ಮ ಮೆಯ್ಯಂ ತವಿಸಿ ಪಶ್ಚಾತ್ಕಾಲದೊಳ್ ಸಂನ್ಯಸನಂಗೆಯ್ದು ಸಮಾಧಿಮರಣದಿಂ ಮುಡಿಪಿ ಕಾಪಿಷ್ಠಮೆಂಬೆಂಟನೆಯ ಸ್ವರ್ಗದೊಳ್ ಸ್ವಯಂಪ್ರಭಮೆಂಬ ವಿಮಾನದೊಳ್ ಪದಿನಾಲ್ಕು ಸಾಗರೋಪಮಾಯುಷ್ಯಮನೊಡೆಯನಮಿತಕಾಂತನೆಂಬೊಂ ದೇವನಾಗಿ ಪುಟ್ಟಿದೊಳಿತ್ತ ಗುರುದತ್ತ ಭಟಾರರುಂ ಪನ್ನೆರದುವರುಷಂಬರೆಗಂ ಗುರುಗಳನಗಲದಿರ್ದು ದ್ವಾದಶಾಂಗ ಚತುರ್ದಶ ಪೂರ್ವಮಪ್ಪಾಗಮಮೆಲ್ಲಮಂ ಕಲ್ತು ಗುರುಗಳಂ ಬೆಸಗೊಂದವರನುಮತದಿಂದೇಕ ವಿಹಾರಿಯಾಗಿ ಘೋರ ವೀರ ತಪಶ್ಚರಣಂಗೆಯ್ಯುತ್ತಂ ಗ್ರಾಮೇಕರಾತ್ರಂ ನಗರೇ ಪಂಚರಾತ್ರಂ ಅಟವ್ಯಾಂ ದಶರಾತ್ರಮೆಂಬೀ ನ್ಯಾಯದಿಂ ಗ್ರಾಮ ನಗರ ಖೇಡ ಖರ್ವಡ ಮದಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಕ್ರಮದಿಂ ಸುರಾಷ್ಟ್ರಮನೆಯ್ದಿಯಲ್ಲಿ ದ್ರೋಣಿಮಂತಮೆಂಬ ಪರ್ವತದ ಸಾರೆ ಹಳಮುಖನೆಂಬ ಪಾರ್ವನಿರ್ಪ ಪಲ್ಲಿಖೇಡಮೆಂಬೂರನೆಯ್ದುವನ್ನೆಗಮೆಡೆಯೊಳ್ ನೇಸರ್ಪಟ್ಟೊಡೆ ಯತ್ಸಾಸ್ತಮಿತವಾಸಿಗಳೆಲ್ಲ ನೇಸರ್ಪಟ್ಟಿತ್ತಲ್ಲಿಯೆ ನಿಲ್ವರಪ್ಪುದಱಿಂದೂರ ಪೊಱ ಪೊಬಲ ಪೊಲದೊಳ್ ಬಟ್ಟೆಯ ಕಣ್ಗೊಳ್

ಋಷಿಗಳೇ ಗುರುಗಳಾಗಿರಲು ಸುವ್ರತೆ ಎಂಬ ಕಂತಿಯರೇ ತಪಸ್ಸಿಗೆ ದಾರಿ ತೋರುವವರಾಗಿರಲು ತಪಸ್ಸನ್ನು ಕೈಗೊಂಡಳು. ಅವಳು ಜೈನಧರ್ಮತತ್ವಪೂರ್ವಕ ಮಹಾವ್ರತಗಳನ್ನು ಸ್ವೀಕರಿಸಿ, ಆಚಾರ - ಆರಾಧನೆ ಮುಂತಾಗಿರತಕ್ಕ ಚರಣಗ್ರಂಥಗಳನ್ನು ಕಲಿತು ಹಲವು ಕಾಲ ಕಠೋರವಾದ ತಪಸ್ಸನ್ನು ಮಾಡಿ ಉಪವಾಸಾದಿ ವ್ರತಗಳಿಂದ ಅತ್ಯಂತ ಕೃಶರಾಗಿ ಗುಳಿಬಿದ್ದ ಕಣ್ಣುಳ್ಳವರಾದರು. ತಮ್ಮ ಶರೀರವನ್ನು ಕ್ಷೀಣಗೊಳಿಸಿ ಅನಂತರದ ಕಾಲದಲ್ಲಿ ಸಂನ್ಯಾಸವನ್ನು ಆಚರಿಸಿ ಸಮಾಧಿಮರಣದಿಂದ ಸತ್ತು ಕಾಪಿಷ್ಠವೆಂಬ ಎಂಟನೆಯ ಸ್ವರ್ಗದಲ್ಲಿ ಸ್ವಯಂಪ್ರಭವೆಂಬ ವಿಳಂತಸ್ತಿನ ವಿಮಾನದಲ್ಲಿ ಹದಿನಾಲ್ಕು ಸಾಗರದಷ್ಟು ಆಯಷ್ಯವುಳ್ಳ ಅಮಿತಕಾಂತನೆಂಬ ದೇವನಾಗಿ ಜನಿಸಿದಳು. ಇತ್ತ ಗುರುದತ್ತ ಋಷಿಗಳು ಹನ್ನೆರಡು ವರ್ಷಗಳವರೆಗೆ ಗುರುಗಳೊಡನೆಯೇ ಇದ್ದು ಹನ್ನೆರಡು ಅಂಗಗಳೂ ಹದಿನಾಲ್ಕು ಪೂರ್ವಗಳೂ ಉಳ್ಳ ಶಾಸ್ತ್ರಗಳನ್ನೆಲ್ಲ ಕಲಿತು ಗುರುಗಳನ್ನು ಕೇಳಿ ಅವರ ಒಪ್ಪಿಗೆ ಪಡೆದು ಒಬ್ಬರೇ ಸಂಚಾರ ಮಾಡುವವರಾಗಿ ಉಗ್ರವೂ ಶ್ರೇಷ್ಠವೂ ಆದ ತಪಸ್ಸನ್ನು ಮಾಡುತ್ತ "ಗ್ರಾಮದಲ್ಲಿ ಒಂದು ರಾತ್ರಿಯಿದ್ದರೆ, ನಗರದಲ್ಲಿ ಐದು ರಾತ್ರಿ ಕಾಡಿನಲ್ಲಿ ಹತ್ತು ರಾತ್ರಿ" ಎಂಬ ನ್ಯಾಯದಂತೆ ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖ - ಎಂಬ ಭೂಭಾಗಗಳಲ್ಲಿ ಸಂಚಾರಮಾಡುತ್ತ ಕ್ರಮವಾಗಿ ಸುರಾಷ್ಟ್ರ ಎಂಬ ದೇಶವನ್ನು ಸೇರಿ ಅಲ್ಲಿ ದ್ರೋಣಿಮಂತವೆಂಬ ಪರ್ವತದ ಹತ್ತಿರ ಹಳಮುಖನೆಂಬ ಬ್ರಾಹ್ಮಣನು ಇರತಕ್ಕ ಪಲ್ಲಿಖೇಡವೆಂಬ ಊರಿಗೆ ಬರುತ್ತಿದ್ದರು. ಎಡೆಯಲ್ಲಿ ಸೂರ್ಯಾಸ್ತವಾಯಿತು. ಎಲ್ಲಿ ಕತ್ತಲಾಯಿತೋ ಅಲ್ಲಿ ವಾಸಮಾಡುವವರೆನಿಸಿದ ಸಂನ್ಯಾಸಿಗಳು ಸೂರ್ಯನು ಅಸ್ತವಾದಾಗ ಇದ್ದಲ್ಲೇ ನಿಲ್ಲುವರಾದ್ದರಿಂದ ಊರಿನ ಪಟ್ಟಣದ ಹೊರಗಿರುವ ಹೊಲದಲ್ಲಿ ದಾರಿಯ ಎದುರಿನಲ್ಲಿಯೇ ರಾತ್ರಿಯು ಹೊತ್ತು

ರಾತ್ರಿ ಪ್ರತಿಮೆನಿಂದೊರನ್ನೆಗಮಿರುಳ್ ನಾಲ್ಕು ಜಾವಮುಂ ಭೋರೆಂದು ಪೆರ್ಮಳೆ ಕೊಂಡು ಕೆಸಱಾದೊಡೆ ನೇಸರ್ಮೂಡಿದೊಡಪ್ಪಾಸುಕಂ ಬಟ್ಪೆಯೆಂದು ಕೈಯನೆತ್ತಿಕೊಳ್ಳದೆ ಮತ್ತಂತೆ ಸೂರ್ಯಪ್ರತಿಮೆನಿಂದೊರನ್ನೆಗಂ ಹಳಮುಖನೆಂಬ ಪಾರ್ವಂ ತನ್ನ ಮೂಡಣ ಕೆಯ್ಯನುಬಲೆಂದು ಪೋಗಿ ಕೆಸಱಾದುದಂ ಕಂಡುಬಲ್ ಪದನಲ್ತೆಂದು ಬೆಟ್ಟದ ಪಡುವಣ ಕೆಯ್ಯನುಬಲ್ ಪೋಗುತ್ತಂ ತನ್ನ ಕೆಯ್ಯಾರೆ ಸೂರ್ಯಪ್ರತಿಮೆನಿಂದ ಭಟಾರರಂ ಕಂಡಿಂತೆಂದನಜ್ಜಾ ಎನ್ನ ಪೆಂಡತಿ ಕೂಬಿನಿಲ್ಲಿಗೆ ಕೊಂಡು ಬಂದೊಡೆ ಪಡುವಣ ಕೆಯ್ಗೆ ವೋದನೆಂದು ಪೇೞ್ದಟ್ಟುಂ ಗದಿಮೆಂದು ಪಡುವಣಕೆಯ್ಗೆ ವೋದನನ್ನೆಗಮಾತನ ಪಾರ್ವಂತಿಯುಂ ಪಗಲಪ್ಪಾಗಳ್ ಕೂಬಂ ಕೊಂಡು ಬಂದು ಕೆಯ್ಯೊಳಗಲಮಱಿಸಿ ಕಾಣದೆ ಸೂರ್ಯಪ್ರತಿಮೆನಿಂದ ಭಟಾರರಂ ಬೆಸಗೊಂಡಳಜ್ಜಾ ಎನ್ನ ಭಟ್ಟನೀ ಕೆಯ್ಯುನುಬಲ್ ಬಂದಾತನೆತ್ತವೋದಂ ಪೇೞಮೆಂದು ಬೆಸಗೊಂಡೊಡಾ ಭಟಾರರ್ ಮೌನವ್ರತಂಗೊಂಡು ನುಡಿಯದ ಕೆಮ್ಮಗಿರ್ದೊಡೆ ಪಿರಿದುಂ ಬೇಗಮಿರ್ದು ಬೇಸತ್ತು ಕೂಬಂ ಮನೆಗೆ ಕೊಂದು ಪೋದಳನ್ನೆಗಮಿತ್ತ ಹಳಮುಖನುಂ ಕೆಯ್ಯಂ ಪಿರಿದು ಬೇಗಮುಟ್ಟು ಪೇದೆಗೆಟ್ಟು ಪಸಿದು ನೀರದಿಸಿ ಬಸಮಟೆದು ಕೂಬಂ ತರ್ಪುದಂ ಪಿರಿದು ಬೇಗಂ ಪಾರುತ್ತಿರ್ದು ತಾರದಿರ್ದೊಡೆ ಬೇಸತ್ತು ಮುಳಿದು ಮನೆಗೆ ವೋಗಿ ಎಲೆಗೆ ಕೂಬಂ ತಂದೆಯಿಲ್ಲೆಂದು ಪೆಂಡತಿಯಂ ಸೊಪ್ಪುನಾರಾಗಿ ಬಡಿಯೆ ಆಕೆಯಿಂತೆಂದಳೀಕೆ

ಪ್ರತಿಮಾಯೋಗದಲ್ಲಿ ನಿಂತರು. ಆಗ ರಾತ್ರಿಯ ನಾಲ್ಕು ಜಾವವೂ (ಹನ್ನೆರಡು ಗಂಟೆಯೂ) ಭೋರೆಂದು ಶಬ್ದಮಾಡುತ್ತ ದೊಡ್ಡ ಮಳೆ ಸುರಿದು ಕೆಸರಾಯಿತು. ಸೂರ್ಯೋದಯವಾದಾಗ, ದಾರಿಯು ಜೀವಜಂತುಗಳಿಂದ ತುಂಬಿಹೋಗಿದೆಯೆಂದು, ಇಳಿಬಿಟ್ಟಿದ್ದ ಕೈಗಳನ್ನು ಮೇಲಕ್ಕೆತ್ತದೆ ಹಾಗೆಯೇ ಬಿಸಿಲಿನಲ್ಲಿ ಪ್ರತಿಮೆಯಂತೆ ನಿಂತಿದ್ದರು. ಆ ವೇಳೆಗೆ ಹಳಮುಖನೆಂಬ ಬ್ರಾಹ್ಮಣನು ತನ್ನ ಮೂಡಣ ಹೊಲವನ್ನು ಉಳುವುದಕ್ಕೆಂದು ಹೋಗಿ ಗದ್ದೆ ಕೆಸರಾದುದನ್ನು ಕಂಡು, ಉಳುವುದಕ್ಕೆ ಹೋಗುತ್ತ, ತನ್ನ ಹೊಲದ ಬಳಿಯಲ್ಲಿ ಬಿಸಿಲಿಗೆ ಪ್ರತಿಮೆಯಂತೆ ನಿಂತಿದ್ದ ಋಷಿಗಳನ್ನು ಕಂಡನು. ಅವರೊಡನೆ - "ಅಜ್ಜಾ, ನನ್ನ ಹೆಂಡತಿ ಊಟವನ್ನು ಇಲ್ಲಿಗೆ ತೆಗೆದುಕೊಂಡು ಬಂದರೆ ನನ್ನನ್ನು ಪಶ್ಚಿಮದ ಹೊಲಕ್ಕೆ ಹೋದನೆಂದು ಹೇಳಿ, ಅವಳನ್ನು ನನ್ನಲ್ಲಿಗೆ ತಳುಹಿಸಿರಿ, ತಿಳಿಯತೇ?" ಎಂದು ಹೇಳಿ ಪಡುವಣ ಹೊಲಕ್ಕೆ ಹೋದನು. ಹೀಗಿರಲು ಅವನ ಬ್ರಾಹ್ಮಣಿತಿ ಹಗಲಾಗಿದ್ದಾಗಲೇ ಅನ್ನವನ್ನು ತೆಗೆದುಕೊಂಡು ಬಂದಳು. ಹೊಲದ ವಿಸ್ತಾರವನ್ನೆಲ್ಲ ಸುತ್ತಿ ಹುಡುಕಿದರೂ ಕಾಣದಿರಲು ಬಿಸಿಲಿನಲ್ಲಿ ಪ್ರತಿಮೆಯಾಗಿ ನಿಂತಿದ್ದ ಋಷಿಗಳನ್ನು ಕುರಿತು - "ಅಜ್ಜಾ, ನನ್ನ ಭಟ್ಟನು ಈ ಹೊಲವನ್ನು ಉಳುವುದಕ್ಕಾಗಿ ಬಂದವನು ಯಾವ ಕಡೆಗೆ ಹೋದನು? ಹೇಳಿ" ಎಂದು ಕೇಳಿದಳು. ಆಗ ಆ ಋಷಿಗಳು ಮೌನದ ವ್ರತವನ್ನು ಸ್ವೀಕರಿಸಿ, ಮಾತಾಡದೆ ಸುಮ್ಮಗಿರಲು ಹೆಚ್ಚು ಹೊತ್ತು ಇದ್ದು ಬೇಸರಗೊಂಡು ಅನ್ನವನ್ನು ಮನೆಗೆ ಕೊಂಡುಹೋದಳು. ಋಷಿಗಳಲ್ಲಿ ಆತ್ಮ ಹಳಮುಖನು ಬಹಳ ಹೊತ್ತಿನವರೆಗೆ ಗದ್ದೆಯನ್ನು ಉತ್ತು, ಆಯಾಸಪಟ್ಟು, ಪಸಿವಾಗಿ, ಬಾಯಾರಿ, ಶಕ್ತಿಕುಂದಿ, ಹೆಂಡತಿ ಅನ್ನ ತರುವುದನ್ನು ಬಹಳಹೊತ್ತು ಎದುರು ನೋಡುತ್ತಿದ್ದು ತಾರದಿರಲು ಬೇಸರಗೊಂಡು, ಕೋಪಗೊಂಡು, ಮನೆಗೆ ಹೋದನು. "ಎಲೇ ನೀನು ಅನ್ನವನ್ನು ಏಕೆ ತರಲಿಲ್ಲ!" ಎಂದು ಹೆಂಡತಿಯನ್ನು ಸೊಪ್ಪುನಾರುಗಳನ್ನು

ಬಡಿವೆಯಾಂ ಕೂಬಂ ಕೊಂಡು ಪೋಗಿ ಕೆಯ್ಯೊಳಱಸಿ ಪಿರಿದು ಬೇಗಮಿರ್ದು ಪಾರ್ದು ನಿಮ್ಮಂ ಕಾಣದೆ ಮನೆಗೆ ಕೂಬಂ ತಂದೆನೆಂದೊಡೇಕಲ್ದಿರ್ದ ಕ್ಷಪಣಕನಂ ಬೆಸಗೊಂಡೆಯಿಲ್ಲಾತಂಗಾಂ ಮೂಡಣ ಕೆಯ್ಗೆ ನೀಂ ಬಂದೊಡೆ ಪಡುವಣ ಕೆಯ್ಗೆ ಕೂಬಂ ಕೊಂಡು ಬರ್ಪಂತಿರೆ ಪೇಟ್ದು ಪೋದೆನೆಂದೊಡಾಕೆಯಿಂತೆಂದಳಿನಿತಾನುಂ ಸೂಬುಾಂ ಬೆಸಗೊಂಡೊಡಂ ಪೇಟ್ದನಿಲ್ಲಂದೊದಂತಪ್ಪೊಡೆ ನಿನಗೇನುಂ ದೋಷಮಿಲ್ಲೆನ್ನನಾತನುಣ್ಗಪಡಿಸಿ ಕೊಂದನೆಂದು ಪೆಂಡತಿಯ ಮೇಗಣ ಮುಳಿಸನುಟಿದು ಋಷಿಯರ ಮೇಗೆ ಮುನಿಸಾಗಿ ಭವಸಂಬಂಧಿಯಪ್ಪ ವೈರಂ ಕಾರಣಮಾಗಿ ಕ್ರೋಧಾಗ್ನಿ ಪೆರ್ಚಯೆನ್ನಂ ಪಸಿವಿನಿಂ ಸುಟ್ಗೊನಂ ಕಿಚ್ಚಿನಿಂ ಸುಟ್ಟಲ್ದುಣ್ಗೆನೆಂದು ಪ್ರತಿಜ್ಞೆಗೆಯ್ದು ಪುಲ್ಲಬೆಂಟಿಯಂ ಪೊಸೆದು ಕಿಚ್ಚುಮೆಣ್ಣೆಯ ಕೊದನುಂ ಬೆಂಟಿಯುಮಂ ಕೊಂಡು ಪೋಗಿ ಭಟಾರರ ಮುಂದಿಟ್ಟಿಲವೊ ಸವಣಾ ನೀನೆನ್ನಂ ಪಸಿವಿನಿಂದಂ ಸುಟ್ಟೆಯಂತೆಯಾನುಂ ನಿನ್ನಂ ಕಿಚ್ಚಿನಿಂದಂ ಸುಟ್ಪಪ್ಪೆಂ ಕಾವೊರಾರೆಂದು ಮುಟ್ಟಿ ಮೂದಲಿಸಿದಾಗಳ್ ಭಟಾರರಿಂತೆಂದು ಬಗೆದರೀತಂಗೇನುಂ ದೋಷಮಿಲ್ಲಮ್ಮ ಮುನ್ನಿನ ಗೆಯ್ದ ಕರ್ಮದುದಯಕಾಲಂ ಬಂದುದಕ್ಕುಮದೆಮ್ಮಂ ಸುಟ್ಟಪ್ಪುದೀತನೆಮ್ಮಂ ಸುಟ್ಟಪ್ಪೊನಲ್ಲಂ ಸುಡುವೊಡಂ ಕಿಡುವೊದಲನೆ ಸುಡುಗುಮೆಮ್ಮ ದರ್ಶನ ಜ್ಞಾನ ಚಾರಿತ್ರಂಗಳಂ ಸುಡಲ್ ನೆಱಯನೀತನೆಮಗೆ ಕಲ್ಯಾಣಮಿತ್ರನೆಂದು ಬಗೆದಿಂತೆಂದು ಭಾವಿಸಲ್ ತಗುಬ್ದರ್

ಜಜ್ಜುವ ಹಾಗೆ ಹೊಡೆದನು. ಆಗ ಆಕೆ "ಯಾಕೆ ನನಗೆ ಹೊಡೆಯುತ್ತಿ ? ನಾನು ಅನ್ನವನ್ನು ಕೊಂಡು ಹೋಗಿ ಹೊಲದಲ್ಲಿ ಹುಡುಕಿ ಬಹಳ ಹೊತ್ತು ಇದ್ದು ನಿಮ್ಮನ್ನು ಎದುರು ನೋಡಿದೆ. ಆದರೆ ಕಾಣದೆ, ಅನ್ನವನ್ನು ಮನೆಗೆ ತಂದೆನು" ಎಂದು ಹಳಮುಖಿನಿಗೆ ಹೇಳಿದಳು. ಅದಕ್ಕೆ ಅವನು "ಅಲ್ಲಿದ್ದ ಜೈನಸಂನ್ಯಾಸಿಯನ್ನು ನೀನು ಯಾಕೆ ಕೇಳಲಿಲ್ಲ? ನೀನು ಪೂರ್ವದಿಕ್ಕಿನ ಹೊಲಕ್ಕೆ ಬಂದರೆ, ಪಶ್ಚಿಮ ದಿಕ್ಕಿನ ಹೊಲಕ್ಕೆ ಅನ್ನ ತೆಗೆದುಕೊಂಡು ಬರುವಂತೆ ನಾನು ಹೇಳಿ ಹೋಗಿದ್ದೆನು" ಎಂದನು. ಆಗ ಆಕೆ ಹೀಗೆಂದಳು - "ನಾನು ಎಷ್ಟು ಬಾರಿ ಕೇಳಿದರೂ ಅವನು ಹೇಳಲಿಲ್ಲ" ಹೀಗೆಂದಾಗ ಹಳಮುಖಿನು - "ಹಾಗಾದರೆ ನಿನ್ನದೇನೂ ತಪ್ಪಿಲ್ಲ. ನನ್ನನ್ನು ಅವನು ಉಣ್ಣದೆ ಬೀಳುವಂತೆ ಮಾಡಿ ಕೊಂದನು" ಎಂದು ಹೇಳಿ ಹೆಂಡತಿಯ ಮೇಲಿನ ಕೋಪವನ್ನು ತ್ಯಜಿಸಿ, ಋಷಿಗಳ ಮೇಲೆ ಕೋಪಗೊಂಡನು. ಪೂರ್ವಜನ್ಮದ ಸಂಬಂಧದ ದ್ವೇಷವು ಕಾರಣವಾಗಿ ಕೋಪಾಗ್ನಿ ಹೆಚ್ಚಾಗಿ 'ನನ್ನನ್ನು ಹಸಿವಿನಿಂದ ಸುಟ್ಟವನನ್ನು ಬೆಂಕಿಯಿಂದ ಸುಟ್ಟಲ್ಲದೆ ಉಣ್ಣೆನು' ಎಂದು ಪ್ರತಿಜ್ಞೆಮಾಡಿದನು. ಅದರಂತೆ, ಹುಲ್ಲಿನ ಹಗ್ಗವನ್ನು ಹುರಿಮಾಡಿ ಬೆಂಕಿ, ಎಣ್ಣೆಯ ಕೊಡ, ಹುಲ್ಲಿನ ಹಗ್ಗ ಇವನ್ನು ತೆಗೆದುಕೊಂಡು ಹೋಗಿ ಋಷಿಗಳ ಮುಂದೆ ಇಟ್ಟು "ಎಲವೋ ಸವಣ (ಸಂನ್ಯಾಸಿಯೇ) ನೀನು ನನ್ನನ್ನು ಹಸಿವಿನಿಂದ ಸುಟ್ಟೆ. ಹಾಗೆಯೇ ನಾನು ನಿನ್ನನ್ನು ಬೆಂಕಿಯಿಂದ ಸುಡುತ್ತೇನೆ. ಆಗ ನಿನ್ನನ್ನು ಯಾರು ಕಾಪಾಡುತ್ತಾರೆ ?" ಎಂದು ಮುಟ್ಟಿ ಮೂದಲಿಸಿದನು. ಆಗ ಋಷಿಗಳು ಹೀಗೆ ಭಾವಿಸಿದರು-"ಈತನಲ್ಲಿ ಏನೂ ತಪ್ಪಿಲ್ಲ. ನಾನು ಹಿಂದೆ ಮಾಡಿದ ಕರ್ಮದ ಫಲ ಮೂಡಿ ಬರುವ ಕಾಲ ಬಂದಿದೆ. ಅದು ನಮ್ಮನ್ನು ಸುಡುತ್ತಿದೆ. ಈತನು ನಮ್ಮನ್ನು ಸುಡುತ್ತಾ ಇಲ್ಲಾ. ಸುಡುವುದಾದರೂ ನಾಶವಾಗತಕ್ಕ ದೇಹವನ್ನು ಸುಡುತ್ತಾನೆ. ನಮ್ಮ ದರ್ಶನ ಜ್ಞಾನ ಚಾರಿತ್ರಗಳನ್ನು ಸುಡಲಾರನು. (ನಿಂದಿಸುವವನನ್ನೂ, ಶ್ಲಾಘಿಸುವವನ್ನೂ, ಶತ್ರುವನ್ನೂ, ಮಿತ್ರನನ್ನೂ ಯಾವನು ಹಾಗೆಯೇ ಸಮತೆಯಿಂದ

ಗಾಹೆ ॥ ಣಿಂದಂತಂ ಸಿಳಹಂತಂ ಸತ್ತುಂ ಮಿತ್ತುಂ ತಹೇವ ಸುಹದಕ್ಖಂ
ಜೋ ಸಮಭಾವೇ ಪೆಚ್ಚ ೇ ಸೋ ಸಮಣೋ ಸೋಯಪವ್ವಯಓ

ದುಜ್ಜಣವಯಣ ಸಡಗರಂ ಸಂಹತಿ ಉಚ್ಚೋಡಣಂ ಚ ಪಹರಂ ಚ
ಣ ಯ ಕುಪ್ಪಂತಿ ಮಹಾರಿಸಿ ಸಮಣ ಗುಣ ವಿಜಾಣಗಾ ಸಮಣಾ

ಜೀವಿದ ಮರಣೇ ಲಾಭಾಲಾಭೇ ರಂಜೋಗವಿಪ್ಪ ಜೋಗೇ ಯ
ಬದ್ದಂ (?) ಸುಹದುಕ್ಖಾದಿಸು ಸಮದಾ ಸಾಮಾಯಿಗಂ ಣಾಮ

ಖಮ್ಮಾಮಿ ಸವ್ವಜೀವಾಣಂ ಸವ್ವೇ ಜೀವಾ ಖಮಂತು ಮೇ
ಮೆತ್ತೀ ಮೇ ಸವ್ವ ಭೂದೇಸು ವೇರಂ ಮಜ್ಝ ಣ ಕೇಣ ಚ

ಎಂದಿತು ಕ್ಷಮೆಯಂ ಭಾವಿಸುತ್ತಿರ್ಪನ್ನೆಗಂ ಹಳಮುಖನುಂ ಬೆಂಟಿಯಸಿಗ್ಗೆಯೊಳ್ ತೊಯ್ದು ನಖಾಗ್ರದಿಂ ತೊಟ್ಟು ನೆತ್ತಿವರೆಗಂ ಬಳಸಿಯುಂ ಮೆಯ್ಯಂ ಸುತ್ತಿ ಎಲ್ಲಾ ಎಡೆಗಳೊಳಂ ಕಿಚ್ಚಂ ತಗುಳ್ಚಿಯೆಣ್ಣೆಯಂ ತಳಿಯುತ್ತಿರಲುರಿ ಕೊಂಡೇಕಜ್ವಾಲೆಯಾಗಿ ಸುಡೆಯಾ ಕಿಚ್ಚು ಮೆಯ್ಯಂ ಪೊರ್ದದನ್ನೆಗಂ ಭಟಾರರಾಜ್ಞಾವಿಚಯಮಪಾಕವಿಚಯ ವಿಪಾಕವಿಚಯ ಸಂಸ್ಥಾನವಿಚಯಮೆಂಬೀ ನಾಲ್ಕು ಧರ್ಮ್ಯಧ್ಯಾನಂಗಳಂ ಧ್ಯಾನಿಸುತ್ತು ಬಳಿಕ್ಕೆ ಪೃಥಕ್ತ್ವ ವಿತರ್ಕ ವಿಚಾರಮೆಂಬ ಪ್ರಥಮ ಶುಕ್ಲಧ್ಯಾನಮಂ ಧ್ಯಾನಿಸಿ ಸೂಕ್ಷ್ಮ ಸಾಂಪರಾಯ ಗುಣಸ್ಥಾನದೊಳ್ ಮೋಹನೀಯದಕಾಂಡಕ ಘಾತಂ ತೀರ್ದು ಚರಮ ಕಾಂಡಕದ ಚರಮ ಪಾಳಿ

ಭಾವಿಸುವನೋ ನೋಡುವನೋ ಅವನು ಸವಣನು. ದುರ್ಜನರ ಮಾತುಗಳೆಂಬ ಚಟಚಟ ಎಂದು ಸಿಡಿವ ಕಿಡಿಗಳ ಹಾಗೆ ಸಂತಾಪಕರವಾದುದನ್ನು ಸಹಿಸುತ್ತಾರೆ. ಚಾಡಿಮಾತುಗಳನ್ನೂ ಅಥವಾ ಕೋಲು ಬಡಿಗೆಗಳ ಏಟುಗಳನ್ನೂ ಶಸ್ತ್ರಪ್ರಹಾರಗಳನ್ನೂ ಸೈರಿಸುತ್ತಾರೆ. ಮಹಾಋಷಿಗಳು ಸಿಟ್ಟಾಗುವುದಿಲ್ಲ. ಸವಣರು (ಸಾಧುಗಳು) ಕ್ಷಮಾಗುಣವನ್ನು ಬಲ್ಲವರು. ಬದುಕು ಸಾವುಗಳಲ್ಲಿಯೂ ಲಾಭನಷ್ಟಗಳಲ್ಲಿಯೂ ಇಷ್ಟವಸ್ತುವಿನ ಸಂಯೋಗ ವಿಯೋಗಗಳಲ್ಲಿಯೂ ಬಂಧುಗಳು ಶತ್ರುಗಳು ಇವರಿಗೆ ಸಂಬಂಧಿಸಿದ ಸುಖದುಃಖಗಳಲ್ಲಿಯೂ ಹಸಿವು ಬಾಯಾರಿಕೆ ಶೀತೋಷ್ಣಾದಿಗಳಲ್ಲಿಯೂ ಸಮತೆಯು ಸಾಮಾಯಿಕ ಎಂಬ ಹೆಸರುಳ್ಳುದಾಗಿದೆ. ಎಲ್ಲ ಜೀವಗಳನ್ನೂ ಕ್ಷಮಿಸುತ್ತೇನೆ, ಎಲ್ಲ ಜೀವಗಳೂ ನನ್ನನ್ನು ಕ್ಷಮಿಸಲಿ. ಎಲ್ಲ ಜೀವಗಳಲ್ಲಿಯೂ ನನಗೆ ಸ್ನೇಹವಿದೆ. ನನಗೆ ಎಲ್ಲಿಯೂ ವೈರವಿಲ್ಲ) ಎಂದೀ ರೀತಿಯಾಗಿ ಕ್ಷಮೆಯನ್ನೇ ಭಾವಿಸುತ್ತ ಗುರುದತ್ತ ಋಷಿಗಳು ಇದ್ದರು. ಹೀಗಿರಲು ಹಳಮುಖನು ಆ ಹುಲ್ಲಿನ ಹಗ್ಗವನ್ನು ಎಣ್ಣೆಯಲ್ಲಿ ನೆನೆಸಿದನು. ಅದನ್ನು ಋಷಿಗಳ ಉಗುರಿನಿಂದ ತೊಡಗಿ ನೆತ್ತಿಯವರೆಗೂ ಆವರಿಸುವಂತೆ ಶರೀರಕ್ಕೆ ಸುತ್ತಿ ಎಲ್ಲಾ ಕಡೆಗಳಲ್ಲಿಯೂ ಬೆಂಕಿ ಹಚ್ಚಿ ಎಣ್ಣೆಯನ್ನು ಸಿಂಪಡಿಸುತ್ತಿರಲು ಬೆಂಕಿ ಹಿಡಿದು ಒಂದೇ ಜ್ವಾಲೆಯಾಗಿ ಸುಡತೊಡಗಿತು. ಆ ಬೆಂಕಿ ದೇಹವನ್ನು ಮುಟ್ಟುವ ಮೊದಲೇ ಋಷಿಗಳು ಆಜ್ಞಾವಿಚಯ, ಅಪಾಕವಿಚಯ, ವಿಪಾಕ ವಿಚಯ, ಸಂಸ್ಥಾನ ವಿಚಯ - ಎಂಬ ಈ ನಾಲ್ಕು ಧರ್ಮಧ್ಯಾನಗಳನ್ನು ಧ್ಯಾನಿಸಿದರು. ಆಮೇಲೆ ಪೃಥಕ್ತ್ವ, ವಿತರ್ಕ, ವಿಚಾರ- ಎಂಬ ಮೊದಲನೆಯ ಶುಕ್ಲಧ್ಯಾನವನ್ನು ಧ್ಯಾನಿಸಿದರು. ಸೂಕ್ಷ್ಮಸಾಂಪರಾಯದ ಗುಣಸ್ಥಾನದಲ್ಲಿ ಮೋಹನೀಯದ ಕಾಂಡಕ ಘಾತವು ಮುಗಿದು ಚರಮಕಾಂಡಕದ

ಬರ್ದನಂತರ ಸಮಯಂ ಮೊದಲ್ಗೊಂಡು ಜಾನಿಸಿಯಲ್ಲಿಂ ಬಟೆಯದೇಕತ್ವ ವಿತರ್ಕ ವಿಚಾರಮೆಂಬೆರಡನೆಯ ಶುಕ್ಲಧ್ಯಾನಮಂ ಕ್ಷೀಣಕಷಾಯನಾಗಿ ಜಾನಿಸಿ ಬಟೆಯಂ ಚರಮಸಮಯದೊಳ್ ನಾಲ್ಕು ಕರ್ಮಮಂ ಕಿಡಿಸುವ ಸಮಯದೊಳ್ ರಸ ರುಧಿರ ಮಾಂಸ ಮೇದೋಸ್ಥಿಮಜ್ಜ ಶುಕ್ಲಮೆಂಬ ಸಪ್ತಧಾತುಗಳುಮವಱೊಡನೆ ಕೆಟ್ಟುವು ಮತ್ತೆ ಘಾತಿಕರ್ಮಂಗಳುವಾವುವೆಂದೊಡೆ ಆಯ್ದು ತೆಱದ ಜ್ಞಾನಾವರಣೀಯಮೊಂಬತ್ತು ತೆಱದ ದರ್ಶನಾವರಣೀಯಮಂತೆರಡುಂ ಕರ್ಮಂಗಳ ಕೇಡಿನೊಳ್ ಲೋಕಾಲೋಕದೊಳಗಣ ಸೂಕ್ಷ್ಮ ವ್ಯವಹಿತ ದೂರ ಪದಾರ್ಥವಸ್ತುಗಳೆಲ್ಲಮಂ ಕ್ರಮ ಕರಣ ವ್ಯವಧಾನರಹಿತವಾಗಿ ಬಗೆಯದೆ ತಡೆಯದೆ ಸುಟಿಯದೆ ವೋಹಿಸದೆ ಎಲ್ಲಾ ವಸ್ತುಗಳನೊರ್ಮೊದಲಱೆವ ಕಾಣ್ಬನಂತಜ್ಞಾನಮುಮನಂತದರ್ಶನಮುಮನೊಡೆಯರಾದರ್ ಮತ್ತಿರ್ಪತ್ತೆಂಟು ತೆಱದ ಮೋಹನೀಯವೆಂಬ ಕರ್ಮದ ಕೇಡಿನಿಂ ಅನಂತಸುಖಿಗಳಾದರ್ ಮತ್ತಮಯ್ದು ತೆಱದಂತರಾಯಮೆಂಬ ಕರ್ಮದ ಕೇಡಿನಿಂದಮನಂತ ವೀರ್ಯಮನೊಡೆಯರಾದರ್ ಅಂತೊರ್ಮೊದಲೆ ಘಾತಿಕರ್ಮಂಗಳ ನಾಲ್ಮಱ ಕೇಡಿನಿಂದಮನಂತಚತುಷ್ಟಯಮನೊಡೆಯರ್ ಮುಂಡಕೇವಳಿಗಳಾಗಿರ್ದರ್

ಚಮರಪಾಳಿ ಬಿದ್ದನಂತರ ಸಮಯ ಮೊದಲಾಗಿ ಧ್ಯಾನಿಸಿದರು. ಆಮೇಲೆ ಏಕತ್ವ, ವಿತರ್ಕ, ವಿಚಾರ - ಎಂಬ ಎರಡನೆಯ ಶುಕ್ಲಧ್ಯಾನವನ್ನು ಧ್ಯಾನಿಸಿ ಕಷಾಯವನ್ನು ಕ್ಷೀಣಗೊಳಿಸಿದರು. ಆಮೇಲೆ ಚರಮಸಮಯದಲ್ಲಿ ನಾಲ್ಕು ಕರ್ಮಗಳನ್ನು ನಾಶಗೊಳಿಸುವ ಸಂದರ್ಭದಲ್ಲಿ ರಸ, ರಕ್ತ, ಮಾಂಸ, ಮೇದಸ್ಸು, ಎಲುಬು, ಕೊಬ್ಬು, ಶುಕ್ಲ- ಎಂಬ ಏಳು ಬಗೆಯ ಧಾತುಗಳೂ ಅವುಗಳೊಂದಿಗೆ ನಾಶವಾದವು. ಆಮೇಲೆ ಘಾತಿಕರ್ಮಗಳು ಯಾವುವೆಂದರೆ - ಮತಿ, ಶ್ರುತ, ಅವಧಿ, ಮನಃಪರ್ಯಯ ಮತ್ತು ಕೇವಲ ಜ್ಞಾನ - ಎಂಬ ಐದು ಬಗೆಯ ಜ್ಞಾನಾವರಣೀಯಗಳೂ ಚಕ್ಷು, ಅಚಕ್ಷು, ಅವಧಿ, ಕೇವಲದರ್ಶನ, ನಿದ್ರಾ, ನಿದ್ರಾನಿದ್ರೆ, ಪ್ರಚಲಾ, ಪ್ರಚಲಾಪ್ರಚಲಾ, ಸ್ತ್ಯಾನಗೃದ್ಧಿ - ಎಂಬೀ ಒಂಬತ್ತು ಬಗೆಯ ದರ್ಶನಾವರಣೀಯ ಕರ್ಮಗಳೂ ಅಂತೂ ಘಾತಿ ಅಘಾತಿ ಎಂಬ ಎರಡು ಬಗೆಯ ಕರ್ಮಗಳು ನಾಶವಾದವು. ಲೋಕದ ಮತ್ತು ಲೋಕವಲ್ಲದ ಇತರ ಕಡೆಯ ಸೂಕ್ಷ್ಮವಾದ, ನಿಗೂಢವಾದ, ದೂರದಲ್ಲಿರುವ - ಪದಾರ್ಥಗಳು ವಸ್ತುಗಳೆಲ್ಲವನ್ನೂ ಕ್ರಮ-ಕರಣ-ವ್ಯವಧಾನಗಳಿಲ್ಲದೆಯೆ, ಬಗೆಯದೆ, ತಡೆಯದೆ, ಸುತ್ತಾಡದೆ, ಪ್ರೀತಿಸದೆ, ಎಲ್ಲಾ ವಸ್ತುಗಳನ್ನು ಒಮ್ಮೆಗೇ ತಿಳಿಯತಕ್ಕ ಕಾಣತಕ್ಕ ಅನಂತ ಜ್ಞಾನವನ್ನೂ ಅನಂತದರ್ಶನವನ್ನೂ ಉಳ್ಳವರಾದರು. ಅನಂತರ ಇಪ್ಪತ್ತೆಂಟು ವಿಧದ ಉತ್ತರ ಪ್ರಕೃತಿಗಳಿಂದ ಕೂಡಿದ ಮೋಹನೀಯವೆಂಬ ಕರ್ಮನಾಶವಾಗಿ ಅನಂತಸುಖಿವುಳ್ಳವರಾದರು. ಆಮೇಲೆ ದಾನಾಂತರಾಯ, ಲಾಭಾಂತರಾಯ, ಭೋಗಾಂತರಾಯ, ಉಪಭೋಗಾಂತರಾಯ, ವೀರ್ಯಾಂತರಾಯ - ಎಂಬ ಐದು ಬಗೆಯ ಅಂತರಾಯ ಕರ್ಮವು ನಾಶವಾಗಿ ಅನಂತವೀರ್ಯವುಳ್ಳವರಾದರು. ಅಂತೂ ಒಮ್ಮೆಯೇ ನಾಲ್ಕು ಬಗೆಯ ಘಾತಿಕರ್ಮಗಳು ನಾಶವಾಗಿ ಅನಂತಸುಖ - ಎಂಬ ನಾಲ್ಕು ಅಂತಗಳುಳ್ಳವರೂ ಹತ್ತು ಬಗೆಯ ಮಂಡನ (ವಶಪಡಿಸುವಿಕೆ)ವುಳ್ಳ ಮುಂಡಕೇವಲಿಗಳಾಗಿ ಇದ್ದರು. ಆ ವೇಳೆಗೆ ಇಂದ್ರನ ಆಜ್ಞೆಯಂತೆ ಕುಬೇರನು ಮಾಡಿದ ನೆಲದ ಮೇಲ್ಗಡೆ ಐದು ಸಾವಿರ ಬಿಲ್ಲಿನಷ್ಟು ದೂರದಲ್ಲಿ ಆಕಾಶದಲ್ಲಿ ಒಂದು ಏಕಶಿಲೆಯಾಗಿರತಕ್ಕ ಇಂದ್ರನೀಲದ ರತ್ನದ

ಅನ್ನೆಗಮಿಂದ್ರನ ಬಿಸದಿಂ ಧನದಂ ಮಾಡಿದ ನೆಲದ ಮೇಗ್ಗೆಸಾಸಿರ ಬಲ್ಲುತ್ಸೇಧದೊಳಂತರಿಕ್ಷದೊಳೊಂದು ಯೋಜನ ವಿಸ್ತೀರ್ಣಮೇಕಶಿಲೆಯಪ್ಪಿಂದ್ರನೀಲ ಮಣಿಕುಟ್ಟಿಮ ಭೂಮಿಯಕ್ಕುಮವಱ ಮೇಗೆ ಏಕಯೋಜನ ವಿಸ್ತೀರ್ಣ ರತ್ನಮಯಮಪ್ಪ ಶ್ರೀಮಂಟಪಮಕ್ಕುಂ ಮತ್ತಂ ನಾಲ್ಕು ದೆಸೆಯೊಳಂ ಕನಕಮಯಮಪ್ಪ ನಾಲ್ಕುಂ ಸೋಪಾನಪಂಕ್ತಿಗಳ ನೊಡೆಯ ಭೂಮಿಯ ಮೇಗೆ ಸಿಂಹಾಸನಮಕ್ಕುಂ ಅದಱ ಮೇಗಲರ್ದ್ದ ಪೊಂದಾಮರೆಯಕ್ಕುಮದಂ ನಾಲ್ವೆರಲಂ ಮುಟ್ಟದೆ ಅದಱ ಮೇಗೆ ಪಲ್ಯಂಕದೊಳಿರ್ದೊಂದು ಬೆಳ್ಗೊಡೆಯನೊಡೆಯೊನಾಗಿ ಮೂವತ್ತೆರಡುಂ ಚಾಮರಂಗಳಿಂ ದೇವರ್ಕಳ್ ಬೀಸುತ್ತಮಿಂತಿರ್ಪನ್ನೆಗಂ

ಗಾಹೆ ।। ಸವ್ವೇ ಹಿ ಭವಣವಾಸೀವೆಂತರ ದೇವಾಯ ಪಳಹಪಳುತಸಿಯಾ
ಪುಂಟಿಹ ಕಪ್ಪವಾಸೀ ಸಿಹಣೆಣಾ ಎ ೞ ಜೋ ೞಸಿಯಾ

ಎಂದೀ ಪೇೞ್ದ ಚಿಹ್ನಂಗಳಿಂದಱಿದು ಚತುರ್ವಿಧ ದೇವನಿಕಾಯಂ ತಂತಮ್ಮ ಪರಿವಾರಂ ಬೆರಸುಬಂದು ದಿವ್ಯಮಪ್ಪ ಗಂಧ ಪುಷ್ಪ ಧೂಪ ದೀಪಾಕ್ಷತಂಗಳಿಂದರ್ಚಿಸಿ ವಂದಿಸಿ ಸಮವಸರಣ ಕೋಷ್ಠಂಗಳೊಳ್ ತಂತಮಿರ್ಪ ಸ್ಥಾನಂಗಳೊಳ್ ದೇವರ್ಕಳುಂ ದೇವಿಯರ್ಕಳುಂ ಚಾತುರ್ವರ್ಣ್ಯ ಸಂಘಮುಂ ಮೃಗಂಗಳುಂ ಬಳಸಿಯುಂ ಬಂದು ಧರ್ಮಮಂ ಕೇಳುತ್ತಿರ್ದರನ್ನೆಗಂ ಹಳಮುಖನುಂ ಧರ್ಮಮಂ ಕೇಳ್ದು ನಿಂದಿರ್ದಿಂತೆಂದು ಬಿನ್ನಪಂಗೆಯ್ದುಂ ಭಟಾರಾ ನಿಮಗಾಂ ಪೊಲ್ಲಕೆಯ್ದನದನೆನಗೆ ಕ್ಷಮಿಯಿಸಿಮೆಂದಱಿಗಿ

ಜಗಲಿಯ ನೆಲವಾಗಿದ್ದಿತು. ಅದರ ಮೇಲೆ ಒಂದು ಯೋಜನ ವಿಸ್ತಾರವಾದ, ರತ್ನಗಳಿಂದೊಪ್ಪುವ ಕಾಂತಿಯುಕ್ತವಾದ ಮಂಟಪವಿದ್ದಿತು. ಅದಲ್ಲದೆ, ನಾಲ್ಕು ದಿಕ್ಕುಗಳಲ್ಲಿಯೂ ಚಿನ್ನದಿಂದ ಕೂಡಿದ ನಾಲ್ಕು ಮೆಟ್ಟಿಲುಗಳ ಸಾಲುಗಳಿರುವ ನೆಲದ ಮೇಲೆ ಸಿಂಹಾಸನವಿದ್ದಿತು. ಆ ಸಿಂಹಾಸನದ ಮೇಲೆ ಅರಳಿರುವ ಹೊಂದಾವರೆಯಿದ್ದಿತು. ಅದು ನಾಲ್ಕು ಬೆರಳನ್ನೂ ಮುಟ್ಟದ ಹಾಗೆ ಅದರ ಮೇಲುಗಡೆಯಲ್ಲಿ ಪದ್ಮಾಸನದಲ್ಲಿದ್ದುಕೊಂಡು ಒಂದು ಶ್ವೇತಚ್ಛತ್ರವುಳ್ಳವನಾಗಿ ದೇವತೆಗಳು ಮೂವತ್ತೆರಡು ಚಾಮರಗಳನ್ನು ಬೀಸುತ್ತಿರಲು, ಹೀಗೆ ಗುರುದತ್ತ ಋಷಿಗಳು ಇರುತ್ತಿದ್ದರು. ಆ ಸಂದರ್ಭದಲ್ಲಿ - ಎಲ್ಲ ಭವನವಾಸಿಗಳು ಮತ್ತು ವ್ಯಂತರ ದೇವತೆಗಳು ಪಟಹಗಳ ಶಬ್ದದಿಂದ ಹೆದರಿದರು. ಕಲ್ಪವಾಸಿಗಳು ಗಂಟೆಯ ಶಬ್ದದಿಂದಲೂ ಜ್ಯೋತಿಷ್ಕದೇವತೆಗಳು ನವಿಲುಗಳ ಕೇಗುವಿಕೆಗಳಿಂದಲೂ ಹೆದರಿದರು. ಹೀಗೆ ಹೇಳಿದ ಚಿಹ್ನೆಗಳಿಂದ ತಿಳಿದುಕೊಂಡು ನಾಲ್ಕು ವಿಧದ ದೇವತಾ ಸಮೂಹದವರು ತಮ್ಮ ತಮ್ಮ ಪರಿವಾರ ಸಮೇತ ಬಂದು ದಿವ್ಯವಾದ ಗಂಧ ಪುಷ್ಪ ಧೂಪ ದೀಪ ಅಕ್ಷತೆಗಳಿಂದ ಪೂಜಿಸಿ ನಮಸ್ಕರಿಸಿ ಜಿನನು ಉಪದೇಶಮಾಡತಕ್ಕ ಸಭಾಭವನದ ಪ್ರದೇಶಗಳಲ್ಲಿ ತಾವು ತಾವು ಇರತಕ್ಕ ಸ್ಥಳಗಳಲ್ಲಿ ದೇವರುಗಳೂ ದೇವಿಯರುಗಳೂ ನಾಲ್ಕು ವರ್ಣಗಳ ಸಂಘವೂ ಮೃಗಗಳೂ ಸುತ್ತಲೂ ಕವಿದುಕೊಂಡು ಬಂದು ಧರ್ಮವನ್ನು ಕೇಳುತ್ತಿದ್ದವು. ಆ ವೇಳೆಯಲ್ಲಿ ಹಳಮುಖನೂ ಧರ್ಮವನ್ನು ಕೇಳಿಕೊಂಡು ನಿಂತಿದ್ದು ಈ ರೀತಿಯಾಗಿ ವಿಜ್ಞಾಪಿಸಿದನು - "ಋಷಿಗಳೇ, ನಿಮಗೆ ನಾನು ಕೆಟ್ಟದನ್ನು ಮಾಡಿದೆನು. ಅದನ್ನು ನೀವು ಕ್ಷಮಿಸಬೇಕು" ಎಂದು ಸಾಷ್ಟಾಂಗ ವಂದನೆ

ಪೊಡವಟ್ಟೊದೆ ಭಟಾರರೆಂದರ್ ನಿನಗೇನುಂ ದೋಷಮಿಲ್ಲೆಂದಾತನ ತಮ್ಮ ಭವಂಗಳುಂ ಪೇಳ್ದೊಡೆ ಕೇಳ್ದೀ ಗೆಯ್ದ ಪಾಪಮಿಂತಲ್ಲದೆ ಪಿಂಗದೆನಗೆ ದೀಕ್ಷೆಯಂ ದಯೆಗೆಯ್ಯಮೆಂದು ಬೇಡಿ ತಪಂಬಟ್ಟು ಶಿಷ್ಯನಾಗಿ ಆಗಮಂಗಳನೋದುತ್ತಿರ್ದನಿತ್ತ ಗುರುದತ್ತ ಕೇವಳಿಯುಂ ಗ್ರಾಮ ನಗರ ಖೇಡ ಖರ್ವಡ ಮಡಂಬ ವತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಭವ್ಯವರ ಪುಂಡರೀಕರ್ಕಳ್ಗೆ ಧರ್ಮಾಮೃತಮಂ ಕಜಿಯುತ್ತಂ ಪಲಂಬರುಮಂ ಧರ್ಮಂಗೊಳಿಸುತ್ತಂ ಮತ್ತಮಾ ಪಲ್ಲಿಖೇಡಮೆಂಬೂರ್ಗೆ ಬಂದು ಯೋಗನಿರೋಧಂಗೆಯ್ದು ಅಯೋಗಿ ಭಟಾರರಾಗಿ ಪಂಚ ಹ್ರಸ್ವಾಕ್ಷರೋಚ್ಚಾರಣ ಮಾತ್ರ ಕಾಲದಿಂದಾಯುರ್ನಾಮಗೋತ್ರ ವೇದನೀಯಮೆಂಬ ನಾಲ್ಕುಮಘಾತಿಕರ್ಮಂಗಳನೊರ್ಮೊದಲೆ ಕಿಡಿಸಿ ಏಕ ಸಮಯದೊಳಗೆ ಮೋಕ್ಷಸ್ಥಾನದೊಳ್ ನೆಲಸಿ ಜಾತಿ ಜರಾಮರಣಂಗಳುಂ ಪಸಿವುಂ ನೀರಟ್ಟಿ ಶೀತೋಷ್ಣವಾತಂ ಮೊದಲಾಗೊಡೆಯ ಆವ ಬಾಧೆಗಳಿಲ್ಲದ ಅನಂತಜ್ಞಾನಮನಂತ ದರ್ಶನಮನಂತಸುಖಮನಂತವೀರ್ಯದೊಳ್ ಕೂಡಿ ಎಲ್ಲಾ ಕಾಲಮುಂ ಸುಖಿಯಾಗಿರ್ದರ್

ಗಾಹೆ ॥ ಆರುಜಮಮರಣಂ ಮಧುರಂ ಅಕ್ಖಯ ಸೊಕ್ಖಂ ಅಣೋವಮಂ ಪತ್ತಾ
ಅವ್ವಾಬಾಧಮಣಂತಂ ಅಣಗಾರಾ ಕಾಲಮಚ್ಛಂತಿ

ಮತ್ತೆ ಹಳಮುಖರಿಸಿಯರುಮಾಗಮಂಗಳೆಲ್ಲಮಂ ಕಲ್ತು ಏಕವಿಹಾರಿಯಾಗಿ ಗ್ರಾಮ ನಗರ ಖೇಡ ಖರ್ವಡ ಮದಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಕೊಂಕಣವಿಷಯಮನೆಯ್ದಿಯಾ

ಮಾಡಲು, ಋಷಿಗಳು "ನಿನಗೇನೂ ದೋಷವಿಲ್ಲ" - ಎಂದು ಆತನ ಜನ್ಮವೃತ್ತಾಂತವನ್ನು ಹೇಳಲು ಕೇಳಿ "ನಾನು ಮಾಡಿದ ಈ ಪಾಪಗಳು ಹೀಗಲ್ಲದೆ ಪರಿಹಾರವಾಗವು. ನನಗೆ ದೀಕ್ಷೆಯನ್ನು ದಯಪಾಲಿಸಿರಿ" ಎಂದು ಬೇಡಿ ತಪಸ್ಸನ್ನು ಉಪದೇಶ ಪಡೆದು ಶಿಷ್ಯನಾಗಿ ಶಾಸ್ತ್ರಗಳನ್ನು ಅಭ್ಯಾಸಮಾಡುತ್ತಿದ್ದನು. ಇತ್ತ ಗುರುದತ್ತರು ಕೇವಲ ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖಿಗಳಲ್ಲಿ ಸಂಚಾರ ಮಾಡುತ್ತ ಭವ್ಯರೆಂಬ ಶ್ರೇಷ್ಠರಾದ ತಾವರೆಗಳಿಗೆ ಧರ್ಮಾಮೃತವನ್ನು ಸುರಿಸುತ್ತ ಹಲವರನ್ನು ಧರ್ಮನಿಷ್ಠರನ್ನಾಗಿ ಮಾಡುತ್ತ ಆಮೇಲೆ ಪಲ್ಲಿಖೇಡವೆಂಬ ಊರಿಗೆ ಬಂದು ಯೋಗವನ್ನು ಬಲವಂತದಿಂದ ಮಾಡಿ, ಯೋಗಿಸಂನ್ಯಾಸಿಗಳಾಗಿ ಐದು ಹ್ರಸ್ವಾಕ್ಷರಗಳನ್ನು ಉಚ್ಚರಿಸಿದ ಮಾತ್ರಾಕಾಲದಿಂದ ಆಯುಸ್ಸು, ನಾಮ, ಗೋತ್ರ, ವೇದನೀಯ - ಎಂಬ ನಾಲ್ಕು ಬಗೆಯ ಅಘಾತಿಕರ್ಮಗಳನ್ನು ಏಕಕಾಲದಲ್ಲೇ ನಾಶಮಾಡಿ ಒಮ್ಮೆಗೇ ಮೋಕ್ಷಸ್ಥಾನದಲ್ಲಿ ನಿಂತು- ಜನ್ಮ, ಮುಪ್ಪು, ಸಾವು, ಹಸಿವು, ಬಾಯಾರಿಕೆ, ಶೀತ, ಉಷ್ಣ, ವಾಯು - ಮುಂತಾಗಿರುವ ಯಾವ ತೊಂದರೆಗಳೂ ಇಲ್ಲದ ಅನಂತಜ್ಞಾನ, ಅನಂತದರ್ಶನ, ಅನಂತಸುಖ, ಅನಂತವೀರ್ಯ- ಎಂಬ ಅನಂತ ಚತುಷ್ಟಯದಲ್ಲಿ ಸೇರಿ ಎಲ್ಲಾ ಕಾಲವೂ ಸುಖದಿಂದ ಇದ್ದರು. (ಮುಕ್ತರಾದವರು ರೋಗವಿಲ್ಲದ, ಮರಣವಿಲ್ಲದ, ಮಧುರವಾದ, ಅಸದೃಶವಾದ ಯಾವ ಕಡೆಯೂ ಇಲ್ಲದ ಅಕ್ಷಯ ಸುಖವನ್ನು ಅನಂತವಾದ ಭವಿಷ್ಯತ್ತಿನವರೆಗೂ ಪಡೆಯುತ್ತಾರೆ.) ಆಮೇಲೆ ಹಳಮುಖಿ ಋಷಿಗಳು ಶಾಸ್ತ್ರಗಳೆಲ್ಲವನ್ನೂ ಕಲಿತು ಒಬ್ಬರೇ ಸಂಚಾರ ಮಾಡುವವರಾಗಿ ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖಿಗಳೆಂಬ ಭೂ ಭಾಗಗಳಲ್ಲಿ ಸಂಚಾರ ಮಾಡುತ್ತ ಕೊಂಕಣ ದೇಶಕ್ಕೆ ಹೋದರು. ಆ ನಾಡಿನಲ್ಲಿ ಹೋಗುತ್ತ

ನಾಡೊಳ್ ಪೋಗುತ್ತಂ ಊರನೆಯ್ದದೆಡೆಯೊಳ್ ಪೊಲದೊಳ್ ನೇಸರ್ಪಟ್ಟೊಡೆ ಯತ್ಥಾಸ್ತಮಿತವಾಸಿಯೆಲ್ಲಿ ನೇಸರ್ಪಟ್ಟೊದಲ್ಲಿಯೆ ನಿಲ್ದರಪ್ಪುದಱಿಂ ಕುಮ್ಕರಿಯಂ ಸುಡಲೆಂದು ಕಡಿದೊಟ್ಟಿದ ಮರಂಗಳ ಮೇಗಿರುಳ್ ದೇವರಂ ಬಂದಿಸಿ ನಿಯಮಂಗೆಯ್ದು ಜೋಗಭಕ್ತಿಯಿಂದಿರ್ದರನ್ನೆಗಂ ಕುಮ್ಕರಿಯಂ ಸುಡಲೆಂದು ತುಂಗಭದ್ರನೆಂಬ ಪೋದುಂಗಾಱಿಂ ಸೊರ್ಕಿ ತೂಂಕಡಿಂದಿರುಳ್ ಕಟ್ಟೆಂಗಳ್ ಕಡುಗತ್ತಲೆಯೊಳ್ ಬಂದು ಕಿಚ್ಚು ತಗುಳ್ಚಿಪೋದೊನಾ ಕಿಚ್ಚಿನಿಂದಂ ಹಳಮುಖರಿಸಿಯುಂ ಬೇಯುತ್ತುಂ ಧರ್ಮ್ಮಧ್ಯಾನಗಳಂ ಧ್ಯಾನಿಸಿ ಶುಭ ಪರಿಣಾಮದಿಂ ಮುಡಿಪಿ ಪದಿನಾಱನೆಯಚ್ಯುತ ಕಲ್ಪದೊಳ್ ಇರ್ಪತ್ತೆರಡು ಸಾಗರೋಪಮಾಯುಷ್ಯಮನೊಡೆಯೊನಚ್ಯುತೇಂದ್ರನಾಗಿ ಪುಟ್ಟಿದೊಂ ಮತ್ತಿತ್ತ ತುಂಗಭದ್ರನೆಂಬೊಂ ಪೋಡುಂಗಾಱಿಂ ನೇಸರ್ಮೂಡೆ ಕುಮ್ಕರಿಯುಂ ನೋಡಲೆಂದು ಪೋದನನ್ನೆಗಂ ಸತ್ತಿರ್ದ ರಿಸಿಯಂ ಕಂಡು ಪಂಚಮಹಾಪಾತಕನೆಂ ನಿಷ್ಕಾರಣಮಱಿಯದೆ ರಿಸಿಯರಂ ಕೊಂದೆನೆಂದು ನಿಂದಣೆ ಗರುಹಣೆಗೆಯ್ದು ತಾನುಮಲ್ಲಿಯೆ ಕಿಚ್ಚುಂ ಪೊಕ್ಕು ಸತ್ತು ವ್ಯಂತರದೇವನಾಗಿ ಪುಟ್ಟಿ ಆಯುಷ್ಕಾಂತದೊಳ್ ಬಂದಿಲ್ಲಿ ವಿಂಧ್ಯಾಟವಿಯೊಳಾದಮಾನುಂ ರೌದ್ರಮಪ್ಪ ಬಿಳಿಯ ಪೇರಾನೆಯಾಗಿ ಪುಟ್ಟಿ ಬಟ್ಟೆಯೊಳ್ ಪೋಪ ಬರ್ಪ ಜನಂಗಳನೆಬ್ಬಟ್ಟಿ ಕೊಲುತ್ತಮಿರ್ಪುದಂ ಹಳಮುಖಚರನಪ್ಪ ಅಚ್ಯುತೇಂದ್ರನವಧಿಜ್ಞಾನದಿಂ ದಱಿದು ಬಂದು ಧರ್ಮಮಂ ಪೇೞ್ದು ಪ್ರತಿಬೋಧಿಸಿ ಶ್ರಾವಕವ್ರತಂಗಳ ಫಲಮಂ ಪೇೞ್ದು

ಊರಿಗೆ ಹೋಗದೆ ಮಧ್ಯದಲ್ಲಿ ಒಂದು ಹೊಲಕ್ಕೆ ತಲುಪಿದಾಗ ಸೂರ್ಯನು ಮುಳುಗಿದನು. ಯತ್ರಾಸ್ತಮಿತವಾಸಿಯಾದ ಸಂನ್ಯಾಸಿಗಳು ಎಲ್ಲಿ ಸೂರ್ಯಾಸ್ತವಾಯಿತೋ ಅಲ್ಲಿಯೇ ನಿಲ್ಲುವರಾದುದರಿಂದ ಕುಮ್ಕರಿಯನ್ನು ಸುಡುವುದಕ್ಕಾಗಿ ಕಡಿದು ರಾಶಿ ಹಾಕಿದ ಮರಗಳ ಮೇಲೆ ರಾತ್ರಿಯಲ್ಲಿ ದೇವರನ್ನು ವಂದಿಸಿ ನಿಯಮಗಳನ್ನುಆಚರಿಸಿ ಯೋಗಯುಕ್ತವಾದ ಭಕ್ತಿಯಿಂದ ಇದ್ದರು. ಹೀಗಿರಲು, ಕಾಡುಕತ್ತರಿಸುವವನಾದ ತುಂಗಭದ್ರನೆಂಬವನು ಕುಮ್ಕರಿಯನ್ನು ಸುಡುವುದಕ್ಕಾಗಿ ಅಮಲೇರಿದ್ದ ನಿದ್ದೆಯಿಂದ, ರಾತ್ರಿ ಅಮಾವಾಸ್ಯೆಯ ತೀವ್ರವಾದ ಕತ್ತಲೆಯಲ್ಲಿ ಬಂದು ಮರದ ರಾಶಿಗೆ ಬೆಂಕಿಯನ್ನು ಹಚ್ಚಿ ಹೋದನು. ಆ ಬೆಂಕಿಯಿಂದ ಹಳಮುಖಿ ಋಷಿ ಬೇಯುತ್ತಿರುವಾಗಲೇ ಆಜ್ಞಾವಿಚಯ, ಅಪಾಯ ವಿಚಯ, ವಿಪಾಕ ವಿಚಯ, ಸಂಸ್ಥಾನ ವಿಚಯ - ಎಂಬ ಧರ್ಮಧ್ಯಾನಗಳನ್ನು ಧ್ಯಾನಿಸಿ ಶುಭ ಪರಿಣಾಮದಿಂದ ಸತ್ತು, ಹದಿನಾರನೆಯ ಅಚ್ಯುತವೆಂಬ ಸ್ವರ್ಗದಲ್ಲಿ ಇಪ್ಪತ್ತೆರಡು ಸಾಗರವನ್ನು ಹೋಲುವ ಪರಿಮಾಣವುಳ್ಳ ಆಯುಷ್ಯವಿರತಕ್ಕ ಅಚ್ಚುತೇಂದ್ರನಾಗಿ ಹುಟ್ಟಿದರು. ಆಮೇಲೆ ಇತ್ತ ಕಾಡುಕಡಿವವನಾದ ತುಂಗಭದ್ರನು ಸೂರ್ಯೋದಯವಾಗಲು ಕುಮ್ಕರಿಯನ್ನು ನೋಡುವುದಕ್ಕಾಗಿ ಹೋದನು. ಆಗ ಸತ್ತು ಹೋಗಿದ್ದ ಋಷಿಯನ್ನು ಕಂಡು, "ಪಂಚಮಹಾಪಾಪ ಮಾಡಿದವನಾಗಿದ್ದೇನೆ. ಏನೂ ಕಾರಣವಿಲ್ಲದೆ, ತಿಳಿಯದೆ ಋಷಿಗಳನ್ನು ಕೊಂದೆನು" ಎಂದು ನಿಂದನೆ ಗರ್ಹಣೆ (ಬೈಗುಳು)ಗಳನ್ನು ಮಾಡಿಕೊಂಡು, ತಾನೂ ಅಲ್ಲಿಯೇ ಅಗ್ನಿಪ್ರವೇಶ ಮಾಡಿ ಸತ್ತು ವ್ಯಂತರ ದೇವನಾಗಿ ಹುಟ್ಟಿದನು. ಅಲ್ಲಿ ಆಯುಷ್ಯತೀರಲು ಭೂಲೋಕಕ್ಕೆ ಬಂದು ವಿಂಧ್ಯೆಯ ಕಾಡಿನಲ್ಲಿ ಅತ್ಯಂತ ಭಯಂಕರವಾದ ಬಿಳಿಯ ಮಹಾಗಜವಾಗಿ ಹುಟ್ಟಿ, ಆ ಅನೆ ದಾರಿಯಲ್ಲಿ ಹೋಗುವ ಬರುವ ಜನರನ್ನು ಎಬ್ಬಿಸಿ ಓಡಿಸಿ ಕೊಲ್ಲುತ್ತ ಇದ್ದಿತು. ಇದನ್ನು ಹಳಮುಖಿನಾಗಿ ಹಿಂದೆ ವರ್ತಿಸಿದ್ದ ಅಚ್ಯುತೇಂದ್ರನು ಅವಧಿಜ್ಞಾನದಿಂದ ತಿಳಿದು ಬಂದು, ಧರ್ಮವನ್ನು ತಿಳಿಸಿ, ಉಪದೇಶಿಸಿ ಶ್ರಾವಕವ್ರತಗಳಿಂದಾಗತಕ್ಕ ಫಲವನ್ನು ಹೇಳಿ ಜೈನಧರ್ಮದಲ್ಲಿ ಪರಿಪೂರ್ಣವಾದ

ಸಮ್ಯಕ್ತ್ವಪೂರ್ವಕಂ ಬ್ರತಂಗಳಂ ಕೈಕೊಳಿಸಿ ಪೋದನಾನೆಯುಂ ಕೊಲೆಯನುಟೆದು ಮಧು ಮದ್ಯಮಾಂಸಂಗಳಂ ತೊಱೆದು ಪಷ್ಠಾಷ್ಟಮ ದಶಮ ದ್ವಾದಶಾದಿ ನೋಂಪಿಗಳಂ ನೋನುತ್ತಂ ಪಾರಿಸುವ ದಿವಸಂ ಪ್ರಾಸುಕಮಾಗುತಿರ್ದ ತಱಗೆಲೆಗಳಂ ಮೇದು ಗಜಯೂಥಮುಂದು ಪೋದ ಬಟೆಕ್ಕೆ ಕದಡಿದ ನೀರ್ಗಳನುಂಡಿಂತು ಪಲಕಾಲಂ ಸಂಯಮಮೆಂಬ ಬ್ರತಮಂ ಸಲಿಸುತ್ತಮಿರ್ಪನ್ನೆಗಂ ಮತ್ತೊಂದು ದಿವಸಮಡವಿಯೊಳ್ ಬೇಸಗೆಯ ದಿನಂ ಕಾಟ್ಕಿಚ್ಚು ತಗುಳ್ದೊಡೆ ಕಿಚ್ಚುಂಗಂಜಿ ಪಿರಿದೊಂದಾಲದ ಮರದ ಕೆಟಗೆ ಗಜಯೂಥದೊಡನೆ ಬಂದಿರ್ದುದಾ ಮರಡೊಣಗಿದ ಕೊಂಬುಗಳೊಳ್ ಕಿಚ್ಚು ತಗುಳ್ದು ತನ್ನಂ ಸುದುವನ್ನೆಗಮೊಂದು ಮೊಲಂ ಕಿಚ್ಚಿನಿಂದಂ ಬೆಂದುರಿಯ ಬಣ್ಣಮಾಗಿ ಪರಿತಂದು ತನ್ನ ಕಾಲ ಕೆಟಗೆ ಪೊಕ್ಕೊದದಂ ಕಂಡು ದಯೆಯಿಂದಕ್ಕಟ ಅಯ್ಯೋ ಎಂದು ಕಾರುಣ್ಯಮಪ್ಪ ಮನದೊಳ್ ಕೂಡಿ ಸತ್ತು ಪನ್ನೆರಡನೆಯ ಸಹಸ್ರಾರ ಕಲ್ಪದೊಳ್ ಪದ್ಮಗುಲ್ಮಮೆಂಬ ವಿಮಾನದೊಳ್ ಪದಿನೆಂಟು ಸಾಗರೋಪಮಾಯಷ್ಕಮನೊಡೆಯೊಂ ಸಾಮಾನಿಕ ದೇವನಾಗಿ ಪುಟ್ಟಿದೊಂ ಪುಟ್ಟಿ ದೇವಲೋಕದ ಸುಖಮಂ ಪಲಕಾಲಮನುಭವಿಸಿಯಾಯುಷ್ಕಾಂತದೊಳ್ ಬಟ್ಟೆ ಬಂದಿಲ್ಲಿ ಜಂಬೂದ್ವೀಪದ ಭರತಕ್ಷೇತ್ರದೊಳ್ ಮಗಧೆಯೆಂಬುದು ನಾದಲ್ಲಿ ರಾಜಗೃಹಮೆಂಬುದು ಪೊಜಲದನಾಳ್ವೊಂ ಶ್ರೇಣಿಕ ಮಹಾರಾಜನೆಂಬೊನರಸಂ ಮಹಾಮಂಡಳಿಕನೆಣ್ಣಾಸಿರಮಕುಟಬದ್ಧರ್ಕಳ್ಗ

ನಂಬಿಕೆಯೊಂದಿಗೆ ವ್ರತಗಳನ್ನು ಸ್ವೀಕಾರಗೊಳಿಸಿ ತೆರಳಿದನು. ಆನೆಯು ಕೊಲೆ ಮಾಡುವುದನ್ನು ಬಿಟ್ಟು, ಮಧು ಮದ್ಯ ಮಾಂಸ ಸೇವನೆಯನ್ನೂ ಬಿಟ್ಟು ಆರನೆಯ ಎಂಟನೆಯ ಹತ್ತನೆಯ ಹನ್ನೆರಡನೆಯದೇ ಮುಂತಾದ ವ್ರತಗಳನ್ನು ಆಚರಿಸುತ್ತ ಪಾರಣೆ ಮಾಡುವ ದಿವಸ ಜೀವರಹಿತ (ನಿರ್ಮಲ)ವಾಗಿದ್ದ ತರಗೆಲೆಗಳನ್ನು ಮೇದು ಆನೆಗಳ ಹಿಂಡು ಸೇವಿಸಿ ಹೋದನಂತರ ಕದಡಿದ ನೀರುಗಳನ್ನು ಸೇವಿಸಿ - ಹೀಗೆ ಹಲವು ಕಾಲದ ತನಕ ಸಂಯಮ ವ್ರತವನ್ನು ನಡೆಸುತ್ತಾ ಇದ್ದಿತು. ಆನಂತರ ಒಂದು ದಿವಸ ಕಾಡಿನಲ್ಲಿ ಬೇಸಗೆಯ ದಿನದಂದು ಕಾಡುಗಿಚ್ಚು ಅಟ್ಟಿಕೊಂಡು ಬಂದಿತು. ಆ ಕಾಡುಗಿಚ್ಚಿಗೆ ಹೆದರಿ ಆನೆಯು ದೊಡ್ಡದಾದ ಒಂದು ಆಲದ ಮರದ ಕೆಳಗೆ ಆನೆಗಳ ಹಿಂಡಿನೊಡನೆ ಬಂದಿದ್ದಿತು. ಆ ಮರದ ಒಣಗಿದ ಕೊಂಬೆಗಳಿಗೆ ಬೆಂಕಿ ತಗಲಿ ಅಲ್ಲಿದ್ದ ಒಂದು ಮೊಲದ ಮೈಸುಡುತ್ತಿರಲು, ಆ ಮೊಲವು ಬೆಂಕಿಯಿಂದ ಬೆಂದು ಬೆಂಕಿಯ ಬಣ್ಣವಾಗಿ ಬಂದು ಆ ಆನೆಯ ಕಾಲ ಕೆಳಗಡೆ ಹೊಕ್ಕಿತು. ಅದನ್ನು ಆನೆ ಕಂಡು, ಕರುಣೆಯಿಂದ "ಅಕ್ಕಟಾ, ಅಯ್ಯೋ" ಎಂದು ದಯೆಯಿಂದ ಕೂಡಿದ ಮನಸ್ಸು ಉಳ್ಳದಾಗಿ ಸತ್ತು ಹನ್ನೆರಡನೆಯ ಸಹಸ್ರಾರ ಕಲ್ಪದಲ್ಲಿ ಪದ್ಮಗುಲ್ಮವೆಂಬ ಏಳು ಅಂತಸ್ತಿನ ಅರಮನೆಯಲ್ಲಿ ಹದಿನೆಂಟು ಸಾಗರಕ್ಕೆ ಸಮಾನವಾದ ಆಯುಷ್ಯವನ್ನುಳ್ಳ ಸಾಮಾನಿಕ ದೇವನಾಗಿ ಹುಟ್ಟಿದನು. ಹಾಗೆ ಹುಟ್ಟಿ ದೇವಲೋಕದ ಸುಖವನ್ನು ಹಲವು ಕಾಲದವರೆಗೆ ಅನುಭವಿಸಿ ಆಯುಷ್ಯವು ತೀರಿದಾಗ ಕೆಳಕ್ಕೆ ಜಾರಿ ಬಂದನು. ಇಲ್ಲಿ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ಮಗಧೆ ಎಂಬ ನಾಡಿನ ರಾಜಗೃಹವೆಂಬ ಪಟ್ಟಣದಲ್ಲಿ ಆಳತಕ್ಕ ಶ್ರೇಣಿಕ ಮಹಾರಾಜನೆಂಬ ಅರಸನು ಮಹಾಮಾಂಡಳಿಕನಾಗಿ ಎಂಟು ಸಾವಿರ ಮಂದಿ ಕಿರೀಟಧಾರಿ ರಾಜರಿಗೂ ಎಂಟು ಸಾವಿರ ಮಂದಿ ರಾಣಿಯರಿಗೂ ಒಡೆಯನಾಗಿದ್ದಾನೆ. ಅತನಿಗೆ ಎಂಟು ಮಂದಿ

ಮೆಣ್ಣಾಸಿರ್ವರ್ ಅರಸಿಯರ್ಕಳ್ಗಮೆಜಿಯನಪ್ಪೊನಾತಂಗೆ ಎಣ್ಬರ್ ಮಹಾದೇವಿಯರವರೊಳಗೆ ಧನಶ್ರೀಯೆಂಬ ಮಹಾದೇವಿಯ ಗರ್ಭದೊಳ್ ನೆಲಸಿದನ್ ಆಕೆಗಮಿಂತಪ್ಪುದೊಂದು ಬಯಕೆಯಾದಪುದು ಮಳೆಗಾಲದೊಳಾನೆಯನೇಱೆಯೆಲ್ಲಾ ಪಡೆಯೊಡನೆಯದವಿಗೆ ಪೋಗಿಯಾಲದ ಮರದ ಪಣ್ಗಳಂ ಕೊಯ್ದಂತಪ್ಪ ಮತ್ತೆ ಬಯ್ಕುರುಳಿನ ಮನೋಹರಿಯೆಂಬ ಜಾವದಾಗಳ್ ಬಳಿದಱ್ಪ ಕಾಡಾನೆಯಂ ಕಾಣ್ಬುದುಮಿಂತೀ ಬಯಕೆಯುಂ ಕನಸುಮನರಸಂಗೆ ಪೇೞ್ದೊದರಸಂ ಕಾಲಮಲ್ಲದ ಕಾಲದೊಳ್ ಮೞೆಗಾಲಮನೆಂತು ಪಡೆಯಲಕ್ಕುಮೀ ಬಯಕೆಯಂ ತೀರ್ಚುಪುದರಿದೆಂದು ಚಿಂತಾಕುಳಿತಮನದವನಾಗಿರ್ದು ತನ್ನ ಮಗನಪ್ಪಭಯಕುಮಾರಂಗೆ ಬೞಿಯಟ್ಟ ಬರಿಸಿಯರಸಿಯ ಬಯಕೆಯ ಪಾಂಗೆಲ್ಲಮಂ ಪೇೞ್ದಿವರ್ಕೇಗೆಯ್ವುಮೆಂದರಸಂ ಬೆಸಗೊಂಡೊಡಭಯಕುಮಾರನುಪಾಯಮಂ ಬಗೆಯಲಕ್ಕುಂ ನೀಮೇನುಂ ಚಿಂತಿಸಲ್ವೇಡ ನಿಶ್ಚಿಂತರಾಗಿರಿಮೆಂದರಸನಂ ಸಂತವಿಸಿ ಪೋದನ್ ಅನ್ನೆಗಮಿತ್ತ ವಿಜಯಾರ್ಧಪರ್ವತದ ದಕ್ಷಿಣ ಶ್ರೇಣಿಯೊಳ್ ಗಗನತಿಲಕಮೆಂಬುದು ಪೊಲಲದನಾಳ್ವಂ ಮನೋಗತಿಯೆಂಬ ವಿದ್ಯಾಧರನಾತನ ಮಹಾದೇವಿ ಕನಕಮಾಳೆಯೆಂಬೊಳಾಯಿರ್ವರ್ಗ್ಗಂ ಮಗಳ್ ಕನಕಚಿತ್ರೆಯೆಂಬೊಳ್ ಕನ್ನೆಯಾಕೆಯೊಂದು ದಿವಸಂ ಪೇರದವಿಗೆ ವ್ಪೋಗಿ ವಿದ್ಯೆಯಂ ಸಾಧಿಸುತ್ತಿರ್ಪನ್ನೆಗಂ ಚಿಂತಾಗತಿಯೆಂಬ ವಿದ್ಯಾಧರನಾಕೆಯ ರೂಪ ಲಾವಣ್ಯ ಸೌಭಾಗ್ಯ ಕಾಂತಿತ್ವಮಂ ಕಂಡಾಟಿಸಿ ನೀನೆನಗೆ ಪೆಂಡತಿಯಾಗೆಂದು ಕೈಯಂ ಪಿಡಿದು ಕಾಡುತ್ತಿರ್ಪನ್ನೆಗಮಾಕೆಯ ತಂದೆ ಮಗಳ್ ಪರಿದುಂ ಬೇಗಂ ತಡೆದಳಿಂದವಳೋಕನೀ ವಿದ್ಯೆಯಂ ನೋಡಲಟ್ಟದೊಡದು ನೋಡಿ ಬಂದು ಕೂಸಂ ಚಿಂತಾಗತಿಯೆಂಬ

ಮಹಾರಾಣಿಯರು. ಅವರಲ್ಲಿ ಧನಶ್ರೀ ಎಂಬ ಮಹಾರಾಣಿಯ ಬಸುರಲ್ಲಿ ದೇವಲೋಕದಿಂದ ಜಾರಿಬಂದ ಜೀವನು ಹುಟ್ಟಿದನು. ಧನಶ್ರೀಗೆ ಈ ರೀತಿಯ ಬಯಕೆಯಾಯಿತು - ಮಳೆಗಾಲದಲ್ಲಿ ಆನೆಯ ಮೇಲೆ ಕುಳಿತು ಎಲ್ಲಾ ಸೈನ್ಯದೊಡನೆ ಕಾಡಿಗೆ ಹೋಗಿ ಆಲದ ಮರದ ಹಣ್ಣುಗಳನ್ನು ಕೊಯ್ಯುವಂತಹ, ಆಮೇಲೆ ಸಂಜೆಯನಂತರದ ರಾತ್ರಿಯ ಮನೋಹರಿಯೆಂಬ ಜಾವದಲ್ಲಿ ಬಿಳಿಯಾದ ಕಾಡಾನೆಯನ್ನು ಕಾಣುವುದು - ಇಂತಹ ಈ ಬಯಕೆಯನ್ನೂ ಕನಸನ್ನೂ ಅವಳು ರಾಜನಿಗೆ ಹೇಳಿದಳು. ಆಗ ರಾಜನು ಕಾಲವಲ್ಲದ ಕಾಲದಲ್ಲಿ ಮಳೆಗಾಲವನ್ನು ಹೇಗೆ ಪಡೆಯಬಹುದು ? ಈ ಬಯಕೆಯನ್ನು ಈಡೇರಿಸುವುದು ಅಸಾಧ್ಯವೆಂದು ಬೆಂಕಿಯಿಂದ ಕದಡಿದ ಮನಸ್ಸಿನವನಾಗಿದ್ದುಕೊಂಡು ತನ್ನ ಮಗನಾದ ಅಭಯಕುಮಾರನ ಬಳಿಗೆ ಜನ ಕಳುಹಿಸಿ ಅವನನ್ನು ಬರಮಾಡಿ ರಾಣಿಯ ಬಯಕೆಯ ರೀತಿಯನ್ನು ಎಲ್ಲವನ್ನೂ ತಿಳಿಸಿ 'ಇದಕ್ಕೆ ಏನು ಮಾಡೋಣ?'- ಎಂದು ಅರಸನು ಕೇಳಿದನು. ಅದಕ್ಕೆ ಅಭಯಕುಮಾರನು - "ಇದಕ್ಕೆ ಉಪಾಯವನ್ನು ಯೋಚಿಸಲು ಸಾಧ್ಯವಿದೆ. ನೀವು ಏನೂ ಚಿಂತಿಸಬೇಕಾಗಿಲ್ಲ, ನಿಶ್ಚಿಂತರಾಗಿರಿ" ಎಂದು ರಾಜನನ್ನು ಸಮಾಧಾನಪಡಿಸಿ ಹೋದನು. ಹೀಗಿರಲು, ಇತ್ತ ವಿಜಯಾರ್ಧ ಪರ್ವತದ ದಕ್ಷಿಣದ ಶ್ರೇಣಿಯಲ್ಲಿ ಗಗನತಿಲಕವೆಂಬ ಪಟ್ಟಣವಿದೆ. ಅದನ್ನು ಮನೋಗತಿಯೆಂಬ ವಿದ್ಯಾಧರನು ಆಳುತ್ತಿದ್ದನು. ಅವನಿಗೆ ಕನಕಮಾಲೆಯೆಂಬ ಮಹಾರಾಣಿಯಿದ್ದಳು. ಆ ದಂಪತಿಗಳಿಗೆ ಕನಕಚಿತ್ರೆ ಎಂಬ ಕನ್ಯೆ ಮಗಳಾಗಿದ್ದಳು. ಆಕೆ ಒಂದು ದಿವಸ ದೊಡ್ಡ ಕಾಡಿಗೆ ಹೋಗಿ ಅಲ್ಲಿ ವಿದ್ಯಾಸಾಧನೆಯನ್ನು ಮಾಡುತ್ತಿದ್ದಳು. ಆ ಸಂದರ್ಭದಲ್ಲಿ ಚಿಂತಾಗತಿಯೆಂಬ ವಿದ್ಯಾಧರನು ಅವಳ ರೂಪವನ್ನೂ ಲಾವಣ್ಯವನ್ನೂ

ವಿದ್ಯಾಧರಂ ಕಾಡಿದಪ್ಪೊನೆಂದು ಪೇಟ್ಟೊದದಂ ಕೇಳ್ದು ಮನೋಗತಿ ಪ್ರಭೃತಿ ವಿದ್ಯಾಧರರ್ಕಳೆಲ್ಲಂ ಕೂಡಿ ಪೋಗಿಯಾತನ ವಿದ್ಯೆಯೆಲ್ಲಮಂ ಕೊಜೆದಿಕ್ಕಿ ಪನ್ನೆರಡುವರುಷಂಬರಂ ಭೂಮಿಗೋಚರನಾಗಿರೆಂದು ಶಾಪಂಗೊಟ್ಟೊಡಾತನುಮದಂ ನೀಗಲ್ವೇಡಿ ರಾಜಗೃಹಕ್ಕೆ ವಂದು ಪೆಂಡವಾಸದಗ್ಗಳದ ಸೂಳೆ ಕಾಮಲತೆಯೆಂಬೊಳಾಕೆಯೊಡನೆ ಬಾಳುತ್ತಮಾಕೆಯ ಮನೆಯೊಳ್ ಪನ್ನೆರದು ವರುಷಂಬರೆಗಮಿರ್ದು ಅವಧಿಯ ವರ್ಷಂ ನೆಜೆ ದೊಡೆ ತನ್ನ ವಿದ್ಯಾಧರಶ್ರೇಣಿಗೆ ವೋಗಲ್ ಬಗೆದೊಂದು ದಿವಸಂ ಶ್ಮಶಾನಕ್ಕೆ ವೋಗಿ ಇರುಳ್ ವಿದ್ಯೆಗಳೆಲ್ಲಂ ಸಾಧಿಸುವಲ್ಲಿಯಾಕಾಶಕ್ಕೆ ನೆಗೆಯುತುಂ ಬೀಳುತುಮಿರ್ಪನ್ನೆಗಮಭಯಕುಮಾರಂ ತಂದೆಯ ಬೆಸನಂ ತೀರ್ಚಲೆಂದುಪಾಯಮಂ ಬಗೆಯಲ್ವೇಡಿ ಕಟ್ಟಿಂಗಳೊಳ್ ನಟ್ಟನಡುವಿರುಳೊಳ್ ಮಣಿಪೀಟಮನುರದೊಳ್ ಸಾರ್ಚ ಕಿಪ್ಪ ಬಾಳ್ದೆರಸು ಪೊಜಿಮಟ್ಟು ಪೊಬಲೊಳಿಲ್ಲಂ ತೊಬಲ್ದು ಪೊಜಿವೊಬಲಂ ತೊಬಲ್ದನ್ನೆಗಂ ಶ್ಮಶಾನದೊಳ್ ಮೇಗಣ್ಗೊಗೆಯುತ್ತಂ ಬೀಬುತ್ತಮಿರ್ದ ಪುರುಷನಂ ಕಂದು ನೀನಾರ್ಗೇನೆಂಬೆಯೆಲ್ಲಿರ್ಪೆಯಾಕಾಶಕ್ಕೆ ನೆಗೆದು ಮತ್ತಂ ನೆಲದೊಳೀಕೆ ಬೀಬ್ಪಿಯೆಂದು ಬೆಸಗೊಂಡೊಡಾತನಿಂತೆಂದಂ ಆಂ ವಿದ್ಯಾಧರನೆಂಬೆಂ

ಸೌಭಾಗ್ಯವನ್ನೂ ಕಾಂತಿಯುಕ್ತತೆಯನ್ನೂ ಕಂಡು ಅವಳ ಮೇಲೆ ಮೋಹಗೊಂಡನು. 'ನೀನು ನನ್ನ ಹೆಂಡತಿಯಾಗು' ಎಂದು ಅವಳ ಕೈಯನ್ನು ಹಿಡಿದು ಕಾಡತೊಡಗಿದನು. ಹೀಗಿರಲು ಅವಳ ತಂದೆಯು ತನ್ನ ಮಗಳು ಬಹಳ ಹೊತ್ತು ಏಕೆ ತಡಮಾಡಿದಳು ?- ಎಂದು ಕೊಂಡು ಅವಲೋಕಿನೀ ವಿದ್ಯೆಯನ್ನು ಈ ಸಂಗತಿಯನ್ನು ನೋಡಲಿಕ್ಕಾಗಿ ಕಳುಹಿಸಿಕೊಟ್ಟನು. ಆ ವಿದ್ಯೆಯು ಹೋಗಿ ನೋಡಿ ಬಂದು' ನಿನ್ನ ಮಗಳನ್ನು ಚಿಂತಾಗತಿ ಎಂಬ ವಿದ್ಯಾಧರನು ಕಾಡುತ್ತಿದ್ದಾನೆ. ಎಂದು ತಿಳಿಸಿತು. ಅದನ್ನು ಕೇಳಿ, ಮನೋಗತಿ ಪ್ರಮುಖರಾದ ವಿದ್ಯಾಧರರೆಲ್ಲರೂ ಒಟ್ಟುಗೂಡಿ ಹೋಗಿ ಚಿಂತಾಗತಿಯ ವಿದ್ಯೆಯನ್ನೆಲ್ಲ ಕತ್ತರಿಸಿ ಹಾಕಿ "ನೀನು ಹನ್ನೆರಡು ವರ್ಷಗಳವರೆಗೆ ಭೂಮಿಯಲ್ಲಿ ಕಾಣಿಸುತ್ತಿರುವವನಾಗು" ಎಂದು ಶಾಪವನ್ನು ಕೊಟ್ಟರು. ಚಿಂತಾಗತಿಯು ಆ ಶಾಪವನ್ನು ಪರಿಹರಿಸಲಿಕ್ಕಾಗಿ ರಾಜಗೃಹಕ್ಕೆ ಬಂದು ರಾಣಿವಾಸದಲ್ಲಿರತಕ್ಕ ಶ್ರೇಷ್ಠ ದಾಸಿಯಾದ ಕಾಮಲತೆ ಎಂಬಾಕೆಯೊಡನೆ ಬಾಳುತ್ತ, ಅವಳ ಮನೆಯಲ್ಲಿ ಹನ್ನೆರಡು ವರ್ಷಗಳವರೆಗೆ ಇದ್ದನು. ಶಾಪದ ಅವಧಿಯ ವರ್ಷವು ಪೂರ್ಣವಾದಾಗ ತನ್ನ ವಿದ್ಯಾಧರ ಶ್ರೇಣಿಗೆ ಹೋಗಬೇಕೆಂದು ಭಾವಿಸಿಕೊಂಡು, ಒಂದು ದಿವಸ ಶ್ಮಶಾನಕ್ಕೆಹೋಗಿ ರಾತ್ರಿಯಲ್ಲಿ ವಿದ್ಯೆಗಳನ್ನೆಲ್ಲ ಸಾಧಿಸುವ ಸಂದರ್ಭದಲ್ಲಿ ಆಕಾಶಕ್ಕೆ ನೆಗೆಯುತ್ತಲೂ ಬೀಳುತ್ತಲೂ ಇದ್ದನು. ಹೀಗಿರಲು ಅಭಯಕುಮಾರನು ತಂದೆಯ ಅಪ್ಪಣೆಯನ್ನು ನೆರವೇರಿಸುವುದಕ್ಕೆ ಒಂದು ಉಪಾಯವನ್ನು ಭಾವಿಸಿಕೊಂಡನು. ಅಮಾವಾಸ್ಯೆಯ ನಟ್ಟನಡುವಿನ ರಾತ್ರಿಯಲ್ಲಿ ರತ್ನಖಚಿತವಾದ ಗುರಾಣಿಯನ್ನು ಎದೆಗೆ ಅವಚಿಕೊಂಡು, ಒರೆಯಿಂದ ಹೊರಕ್ಕೆಳೆದ ಖಡ್ಗದೊಡನೆ ಹೊರಗೆ ಬಂದು ಪಟ್ಟಣದಲ್ಲೆಲ್ಲ ಸುತ್ತಾಡಿ ಪಟ್ಟಣದ ಹೊರಗಿನ ಪ್ರದೇಶದಲ್ಲಿ ಸುತ್ತಾಡುತ್ತಿದ್ದನು. ಅಷ್ಟರಲ್ಲಿ ಸ್ಮಶಾನದಲ್ಲಿ ಮೇಲೆ ಆಕಾಶಕ್ಕೆ ಹಾರುತ್ತಲೂ ಬೀಳುತ್ತಲೂ ಇದ್ದ ಗಂಡು ವ್ಯಕ್ತಿಯನ್ನು ಕಂಡು "ನೀನು ಯಾರು? ಏನೆನ್ನುತ್ತಿರುವೆ? ಎಲ್ಲಿ ಇರುತ್ತಿ? ಆಕಾಶಕ್ಕೆ ಹಾರಿ ಆಮೇಲೆ ನೆಲದ ಮೇಲೆ ಏಕೆ ಬೀಳುತ್ತಿ? ಎಂದು ಕೇಳಿದನು. ಆಗ ಅವನು ಹೀಗೆಂದನು - 'ನಾನು ವಿದ್ಯಾಧರನು

ಚಿಂತಾಗತಿ ನಾಮಧೇಯನೆನೆಂದು ತನ್ನ ವೃತ್ತಾಂತಮೆಲ್ಲಮಂ ಪೇಟ್ಪೊಡೆ ಮತ್ತೀಗಳ್ ನೀನೇಗೆಯ್ವಪ್ಪೆಯೆಂದು ಬೆಸಗೊಂಡೊಡಾತನಿಂತೆಂದಂ ನಾಂ ವಿದ್ಯೆಗಳಂ ಸಾಧಿಸಿಯೆನ್ನ ವಿದ್ಯಾಧರಲೋಕಕ್ಕೆ ಪೋಗಲ್ ಬಗೆದಪ್ಪೆಂ ವಿದ್ಯೆಗಳ್ ಸಾಧನೆಗೆ ಸಲ್ಲವಾಗಪ್ಪುದಱಿಂದಾಕಾಶಕ್ಕೊಗೆದು ಮತ್ತಂ ನೆಲದೊಳ್ ಬೀೞ್ವೆನೆಂದೊಡಾ ವಿದ್ಯಾಮಂತ್ರಂಗಳನೆನಗೆ ಪೇೞೆಂದಭಯಕುಮಾರಂ ಬೆಸಗೊಂದು ಮಂತ್ರ ವ್ಯಾಕರಣದೊಳಾದಮಾನುಂ ಕುಶಲನಪ್ಪುದಱಿಂ ಪ್ರಸ್ತಾರಿಸಿ ನೋಟ್ಪುಗಳ್ ಮಂತ್ರಂಗಳ್ ಹೀನಾಧಿಕಾಕ್ಷರ ಸಹಿತಂಗಳೆಂದಱಿದು ಹೀನಮಪ್ಪಲ್ಲಿಯಕ್ಷರಂಗಳನಿಟ್ಟಧಿಕಮಪ್ಪಲ್ಲಿಯಕ್ಷರಂಗಳಂ ಕಳೆದು ತಿರ್ದೀ ಪಾಂಗಿನೊಳ್ ಮಂತ್ರಂಗಳನೋದೆಂದು ಪೇೞ್ದೊಡಾತನುಮಾ ಪಾಂಗಿನೊಳ್ ಮಂತ್ರಂಗಳನೋದಿದೊಡೆ ವಿದ್ಯೆಗಳ್ ಸಾಧನೆಗೆ ಸಂದುವು ಸಂದೊಡೆ ವಿದ್ಯಾಧರನೆಂದನೆನಗುಪಕಾರಿಯಯ್ ವರಮಿತ್ರನಯ್ ನಿನಗಾಂ ಬೆಸಕೆಯ್ವೆನೆನಗೇನಪ್ಪೊಡಮೊಂದು ಬೆಸನಂ ಪೇೞೆಂದೊಡೆ ಅಭಯಕುಮಾರನೆಂದಂ ಎಮ್ಮಬ್ಬೆಯ ಬಯಕೆಯಂ ತೀರ್ಚೆಂದೊಡಾತನುಂ ಬಯಕೆಯಂ ಬೆಸಗೊಂಡು ನೇಸರ್ಮೂಡಿದೊಡೆ ವಿದ್ಯೆಗಳಿಂದಮೆ ಬೇಸಗೆಯನೆ ಮೞೆಗಾಲಂ ಮಾಡಿ ಬಳಿಯಾನೆಯನರಸಿಯನೇಱಿಸಿ ಪರಿವಾರಮುಂ ಪಡೆಯುಂ ಬೆರಸು ಗಂಧಪುಷ್ಪವೃಷ್ಟಿಯಂ ಕಱೆಯುತ್ತುಂ ಪಟು ಪಟಹ ಪಣವ ತುಣವ ಭಂಭಾ

ಎನ್ನುತ್ತಿದ್ದೇನೆ; ಚಿಂತಾಗತಿ ಎಂಬ ಹೆಸರುಳ್ಳವನಾಗಿರುವೆನು' ಎಂದು ಅವನು ತನ್ನ ವೃತ್ತಾಂತವನ್ನೆಲ್ಲ ಹೇಳಿದನು. ಆಗ ಅಭಯ ಕುಮಾರನು - "ಮತ್ತೆ ನೀನೀಗ ಏನು ಮಾಡುತ್ತಿರುವೆ" ಎಂದು ಕೇಳಿದನು. ಆಗ ಅವನು - "ನಾನು ವಿದ್ಯೆಗಳನ್ನು ಸಾಧನೆಮಾಡಿ ನನ್ನ ವಿದ್ಯಾಧರ ಲೋಕಕ್ಕೆ ಹೋಗಲು ಇಚ್ಛಿಸುತ್ತಿದ್ದೇನೆ. ವಿದ್ಯೆಗಳನ್ನು ಸಾಧನೆಮಾಡಿ ನನ್ನ ಸಾಧನೆಗೆ ವಶವಾಗದೆ ಇರುವುದರಿಂದ ಆಕಾಶಕ್ಕೆ ಹಾರಿ ಮತ್ತೆ ನೆಲದಲ್ಲಿ ಬೀಳುತ್ತಿದ್ದೇನೆ" ಎಂದನು. "ಆ ವಿದ್ಯಾಮಂತ್ರಗಳನ್ನು ನನಗೆ ತಿಳಿಸು" ಎಂದು ಅಭಯ ಕುಮಾರನು ಅವನನ್ನು ಕೇಳಿದನು. ಅವನು ಹೇಳಿದಾಗ - ಅಭಯಕುಮಾರನು ಸ್ವತಃಮಂತ್ರ ವ್ಯಾಕರಣಗಳಲ್ಲಿ ಅತ್ಯಂತ ಕುಶಲನಾಗಿದ್ದುದರಿಂದ ಆ ಮಂತ್ರಕ್ಕೆ ಪ್ರಸ್ತಾರ ಹಾಕಿ ನೋಡಿದನು. ಆ ಮಂತ್ರಗಳು ಕೆಲವೆಡೆ ಕಡಮೆ ಅಕ್ಷರದಿಂದಲೂ ಕೆಲವೆಡೆ ಹೆಚ್ಚಿನ ಅಕ್ಷರದಿಂದಲೂ ಕೂಡಿ ತಪ್ಪಾಗಿರುವುದನ್ನು ತಿಳಿದು, ಕಡಮೆಯಿರುವಲ್ಲಿ ಅಕ್ಷರಗಳನ್ನು ಸೇರಿಸಿ ಅಧಿಕವಿರುವಲ್ಲಿ ಅಕ್ಷರಗಳನ್ನು ಕಳೆದು ತಿದ್ದಿ, 'ಈ ರೀತಿಯಾಗಿ ಅಕ್ಷರಗಳನ್ನು ಓದು' ಎಂದು ಹೇಳಿದನು. ಚಿಂತಾಗತಿ ಆ ರೀತಿಯಲ್ಲಿ ಮಂತ್ರಗಳನ್ನು ಉಚ್ಚಾರಣೆ ಮಾಡಲು ಅವನಿಗೆ ವಿದ್ಯೆಗಳು ಸಿದ್ಧಿಯಾದವು. ಸಿದ್ಧಿಯಾಗಲು ವಿದ್ಯಾಧರನು ಹೀಗೆ ಹೇಳಿದನು - "ನೀನು ನನಗೆ ಉಪಕಾರ ಮಾಡಿದವನಾಗಿರುವೆ. ಶ್ರೇಷ್ಠ ಮಿತ್ರನಾಗಿರುವೆ. ನಿನಗೆ ನಾನು ಆಜ್ಞಾಧಾರಕನಾಗುವೆನು. ನನಗೇನಾದರೂ ಒಂದು ಕೆಲಸವನ್ನು ಹೇಳು." ಹೀಗೆ ಹೇಳಿದಾಗ, ಅಭಯಕುಮಾರನು "ನನ್ನ ತಾಯಿಯ ಬಯಕೆಯನ್ನು ಈಡೇರಿಸು" ಎಂದನು. ಆತನು ಬಯಕೆ ಏನೆಂಬುದನ್ನು ಕೇಳಿಕೊಂಡು, ಸೂರ್ಯನು ಉದಯಿಸಿದೊಡನೆ ತನ್ನ ವಿದ್ಯೆಗಳಿಂದಲೇ ಬೇಸಗೆಯನ್ನು ಮಳೆಗಾಲವನ್ನು ಮಾಡಿದನು. ಬಿಳಿಯಾದ ಆನೆಯ ಮೇಲೆ ರಾಣಿಯನ್ನು ಕುಳ್ಳಿರಿಸಿ ಪರಿವಾರವನ್ನೂ ಸೈನ್ಯವನ್ನೂ ಕೂಡಿ ಸುವಾಸನೆಯ ಹೂಗಳ ಮಳೆಯನ್ನು ಸುರಿಸುತ್ತಾ,

ಮರ್ದಳೆ ಝಲ್ಲರಿ ಮೃದಂಗ ಶಂಖ ವಂಶ ಕಹಳಾದಿಗಳುಂ ಮುಂದೆ ಬಾಜಿಸೆ ಪೊಬಲಂ ಪೊಱಮಟ್ಟು ವಿಂಧ್ಯಾಟವಿಗೆ ಪೋಗಿಯಡವಿಯೆಲ್ಲಮಂ ತೊಬಲ್ದುನೋಡಿಯಾಲದ ಪಣ್ಗಳಂ ತಾನೆಯಾಯ್ದು ಸೋಂಕಿಲಂ ತೀವಿಕೊಂಡಾಗಳ್ ಬಯಕೆ ನೆಱೆದೊಡೆ ಮತ್ತಾ ಪೊಬಲ್ಗರಸಿಯಂ ತಂದು ಕರುಮಾಡಮಂ ಪುಗಿಸಿದ ಬಬಿಕ್ಕಭಯಕುಮಾರಂಗಿಂತೆಂದನಾನಿಂ ಪೋಪೆನೆಂದಾನುಂ ನಿನಗೆ ಬಾಬಿತ್ತಿಯಾದಂದೆನ್ನಂ ನೆನೆವುದೆಂದಭಯಕುಮಾರನಂ ಬೀಬಿಕ್ಕೊಂಡು ಕಾಮಲತೆಗಂ ಪೇಬ್ದು ತನ್ನ ವಿದ್ಯಾಧರಲೋಕಕ್ಕೆ ಪೋದಂ ಮತ್ತೆ ಧನಶ್ರೀ ಮಹಾದೇವಿಯುಂ ನವಮಾಸಂ ನೆಱೆದು ಬೆಸಲೆಯಾಗಿ ಮಗಂ ಪುಟ್ಟದೊಡಾತಂಗೆ ತಾಯುಂ ತಂದೆಯುಂ ಗಜಕುಮಾರನೆಂದು ಪೆಸರನಿಟ್ಟರ್ ಇಂತಿಷ್ಟ ವಿಷಯ ಕಾಮ ಭೋಗಂಗಳನನುಭವಿಸುತ್ತಂ ಪಲಕಾಲಂ ಸಲೆ ಮತ್ತೊಂದುದಿವಸಂ ರಾಜಗೃಹದ ನೈಋತಿಯ ದೆಸೆಯೊಳ್ವಿಪುಳಗಿರಿಯೆಂಬ ಪರ್ವತದ ಮೇಗೆ ವರ್ಧಮಾನ ಭಟಾರರ ಸಮವಸರಣಂ ಬಂದಿರ್ದೊಡೆ ಋಷಿನಿವೇದಕಂ ಕಂಡು ಪೋಗಿ ಶ್ರೇಣಿಕ ಮಹಾರಾಜಂಗೆ ಭಟಾರರ ಬರವಂ ಪೇಬ್ದೊಡಾತನುಂ ಸಿಂಹಾಸನದಿಂದೆರ್ದಾ ದೆಸೆಯತ್ತೇಬಡಿಯಂ ನಡೆದು ಸಾಷ್ಟಾಂಗಮೆಱಗಿ ಪೊಡವಟ್ಟು ಪೇಬ್ದಾತಂಗೆ ತುಷ್ಟಿದಾನಂಗೊಟ್ಟು ಆನಂದಭೇರಿಯಂ ಪೊಯ್ಸು ಪುತ್ರ ಪೌತ್ರ ಕಳತ್ರ ಮಿತ್ರ ಪರಿವಾರ ಸಹಿತಂ ವಂದನಾಭಕ್ತಿಗೆ ಪೋಗಿ ಸ್ಫಟಿಕಮಣಿಮಯಮಪ್ಪ ಸೋಪಾನಪಂಕ್ತಿಗಳಿಂದೇಱಿ

ಸಮರ್ಥವಾದ ಪಟಹ, ಪಣವ, ತುಣವ, ಭಂಭಾ, ಮದ್ದಳೆ, ಝಲ್ಲರಿ, ಮೃದಂಗ, ಶಂಖ, ಕೊಳಲು, ಕಹಳೆ - ಮುಂತಾದವುಗಳು ಶಬ್ದ ಮಾಡುತ್ತ ಮುಂದೆ ಬರುತ್ತಿರಲು, ಪಟ್ಟಣವನ್ನು ಹೊರಟು ವಿಂಧ್ಯಪರ್ವತದ ಕಾಡಿಗೆ ಹೋಗಿ, ಕಾಡನ್ನೆಲ್ಲ ಸುತ್ತಾಡಿ ನೋಡಿ ಆಲದ ಹಣ್ಣುಗಳನ್ನು ತಾನೇ ಆಯ್ದುಕೊಂಡು ಮಡಿಲಲ್ಲಿ ತುಂಬಿಸಿಕೊಂಡಳು. ಆಗ ಅವಳ ಬಯಕೆ ಪೂರ್ಣವಾಯಿತು. ಆಮೇಲೆ ಆ ಪಟ್ಟಣಕ್ಕೆ ರಾಣಿಯನ್ನು ಕರೆತಂದು ಅರಮನೆಯನ್ನು ಪ್ರವೇಶಗೊಳಿಸಿದ ನಂತರ ಚಿಂತಾಗತಿ ವಿದ್ಯಾಧರನು ಅಭಯಕುಮಾರನಿಗೆ ಹೀಗೆಂದನು - "ನಾನೀಗ ಹೋಗುತ್ತೇನೆ. ಎಂದಾದರೂ ನಿನಗೆ ಉಪಯುಕ್ತವಾದಂದು ನನ್ನನ್ನು ಸ್ಮರಿಸುವುದು" ಹೀಗೆ ಹೇಳಿ, ಅಭಯಕುಮಾರನನ್ನು ಬೀಳ್ಕೊಂಡು ಕಾಮಲತೆಗೂ ಹೇಳಿ, ತನ್ನ ವಿದ್ಯಾಧರಲೋಕಕ್ಕೆ ತೆರಳಿದನು. ಆಮೇಲೆ ಧನಶ್ರೀ ಮಹಾದೇವಿಗೆ ಒಂಬತ್ತು ತಿಂಗಳು ತುಂಬಿ, ಹೆರಿಗೆಯಾಗಿ ಮಗನು ಹುಟ್ಟಲು ಅವನಿಗೆ ತಾಯಿಯೂ ತಂದೆಯೂ ಗಜಕುಮಾರನೆಂದು ಹೆಸರಿಟ್ಟರು. ಈ ರೀತಿಯಾಗಿ ಇಷ್ಟವಿಷಯದ ಕಾಮಸುಖಗಳನ್ನು ಅನುಭವಿಸುತ್ತ ಹಲವು ಕಾಲ ಕಳೆಯಲು ಮತ್ತೊಂದು ದಿವಸ ರಾಜಗೃಹದ ನೈಋತ್ಯದಿಕ್ಕಿನ ವಿಪುಳಗಿರಿಯೆಂಬ ಪರ್ವತದ ಮೇಲೆ ವರ್ಧಮಾನತೀರ್ಥಂಕರರ ಧರ್ಮೋಪದೇಶದ ಸಭೆ ಬಂದಿರಲು ಋಷಿನಿವೇದಕನು ಕಂಡು, ಶ್ರೇಣಿಕ ಮಹಾರಾಜನ ಬಳಿಗೆ ಹೋಗಿ ತೀರ್ಥಂಕರರ ಬರವನ್ನು ತಿಳಿಸಿದನು. ಶ್ರೇಣಿಕನು ಸಿಂಹಾಸನದಿಂದ ಎದ್ದು ಆ ದಿಕ್ಕಿನ ಕಡೆಗೆ ಏಳು ಹೆಜ್ಜೆಯನ್ನು ನಡೆದು ಸಾಷ್ಟಾಂಗವಂದನೆಯನ್ನು ಮಾಡಿ, ಈ ಸಂಗತಿಯನ್ನು ಹೇಳಿದವನಿಗೆ ಸಂತೃಪ್ತಿಯಾಗತಕ್ಕ ದಾನವನ್ನು ಕೊಟ್ಟು ಆನಂದಭೇರಿಯನ್ನು ಹೊಡೆಸಿದನು. ಮಕ್ಕಳು, ಮೊಮ್ಮಕ್ಕಳು, ಹೆಂಡತಿ, ಗೆಳೆಯರ ಪರಿವಾರ ಸಮೇತವಾಗಿ ಭಕ್ತಿಯ ವಂದನೆ

ಸಮವಸರಣಂಬೊಕ್ಕು ಗಂಧ ಕುಟಿ ಪ್ರಾಸಾದಮಂ ತ್ರಿಪ್ರದಕ್ಷಿಣಂಗೆಯ್ದು ಮುಂದೆ ನಿಂದು ಸ್ತುತಿಶತಸಹಸ್ರಂಗಳಿಂ ಸ್ತುತಿಯಿಸಿ ಬಂದಿಸಿ ಗಂಧ ಪುಷ್ಪ ದೀಪ ಧೂಪಾಕ್ಷತಂಗಳಿಂದರ್ಚಿಸಿ ಗಣಧರದೇವರ್ ಮೊದಲಾಗೊಡೆಯ ರಿಸಿಯರ್ಕಳುಮಂ ಗುರು ಪರಿವಿದಿಯಿಂದಂ ವಂದಿಸಿ ತಮ್ಮಿಪ್ಪೋವೆರಿಯೊಳಿರ್ದು ಪಿರಿದು ಬೇಗಂ ಧರ್ಮಮಂ ಕೇಳ್ದು ತದನಂತರಮೆ ಗಜಕುಮಾರಂ ತನ್ನ ಭವಾಂತರಂಗಳಂ ಬೆಸಗೊಂಡೊಡೆ ಗಣಧರದೇವರಿಂತೆಂದು ಪೇೞ್ದರೀ ಭವದಿಂ ತೊಟ್ಟು ಅಯ್ದನೆಯ ಭವದಂದು ನೀಂ ಕೊಂಕಣ ನಾಡೊಳ್ತುಂಗಭದ್ರನೆಂಬ ಪೋಡುಂಗಾಜನಯ್ ನೀಂ ಕುಮ್ಮರಿಯಂ ಸುಟ್ಟು ಪೋಗಿ ಪೊಬ್ಬಡೆ ಬಂದು ನೋಡುವನ್ನೆಗಮಾ ಕಿರ್ಬನೊಳ್ ಸತ್ತ ಋಷಿರೂಪಂ ಕಂದು ಕರುಣೆಸಿಯಲ್ಲಿಯೆ ಕಿರ್ಬಂ ಪೊಕ್ಕು ಸತ್ತು ವ್ಯಂತರದೇವನಾಗಿಯಾಯುಷ್ಯಾಂತದೊಳ್ ವಿಂಧ್ಯಾಟವಿಯೊಳ್ ಬಿಳಿಯಾನೆಯಾಗಿ ಪುಟ್ಟಿಯಚ್ಚುತೇಂದ್ರಂ ಪ್ರತಿಬೋಧಿಸೆ ಸಮ್ಯಕ್ತ್ವ ಪೂರ್ವಕಂ ಶ್ರಾವಕವ್ರತಂಗಳಂ ಕೈಕೊಂಡು ಪ್ರತಿಪಾಳಿಸಿಯಾಯುಷ್ಯಾಂತದೊಳ್ ಪದಿನೆಂಟು ಸಾಗರೋಪಮಾಯುಷ್ಯಮನೊಡೆಯ ಸಹಸ್ರಾರಕಲ್ಪದೊಳ್ ದೇವನಾಗಿ ಪುಟ್ಟಿ ಅಲ್ಲಿಂ ಬಂದೀಗಳ್ ಗಜಕುಮಾರನೆ ಅದೆಯೆಂದು ಪೇೞ್ದೊಡೆ ತನ್ನ ಭವಂಗಳಂ ಕೇಳ್ದು ವೈರಾಗ್ಯಮನೊಡೆಯನಾಗಿ ಎರ್ದು ವರ್ಧಮಾನ ಭಟಾರರ್ಗಿದಿರಂ ನಿಂದು ಕೈಗಳಂ ಮುಗಿದು ದೀಕ್ಷಾಪ್ರಸಾದಂಗೆಯ್ಯಿಮೆಂದು ಬೇಡಿ ತಪಂಬಟ್ಟಾಗಮಂಗಳೆಲ್ಲಮಂ ಕಲ್ತೇಕವಿಹಾರಿಯಾಗಿ ಗ್ರಾಮೇಕರಾತ್ರಂ ನಗರೇ ಪಂಚರಾತ್ರಂ

ನಲ್ಲಿಸಲು ಹೋಗಿ ಸ್ಫಟಿಕ ರತ್ನಮಯವಾದ ಮೆಟ್ಟಿಲುಗಳ ಸಾಲುಗಳನ್ನು ಪತ್ತಿ ಧರ್ಮಸಭೆಯನ್ನು ಹೊಕ್ಕನು. ಗಂಧಕುಟಿಯ ಮಹಾಗೃಹವನ್ನು ಮೂರು ಪ್ರದಕ್ಷಿಣೆ ಹಾಕಿ ಮುಂದೆ ನಿಂತು ಸಾವಿರಾರು ಸ್ತುತಿಗಳಿಂದ ಸ್ತುತಿಸಿ, ವಂದಿಸಿ, ಗಂಧ ಪುಷ್ಪ ದೀಪ ಧೂಪ ಅಕ್ಷತೆಗಳಿಂದ ಪೂಜಿಸಿ ಗಣಧರ ದೇವರೇ ಮುಂತಾಗಿ ಉಳ್ಳ ಋಷಿಗಳನ್ನು ಗೌರವಾನುಕ್ರಮದಿಂದ ನಮಿಸಿ ತಾವು ಇರಬೇಕಾದ ಕೊಠಡಿಯಲ್ಲಿದ್ದು ಬಹಳ ಹೊತ್ತು ಧರ್ಮವನ್ನು ಕೇಳಿ, ಆಮೇಲೆ ಗಜಕುಮಾರನು ತನ್ನ ಜನ್ಮಾಂತರದ ಸಂಗತಿಗಳನ್ನು ಕೇಳಿದನು. ಆಗ ಗಣಧರದೇವರು ಈ ರೀತಿಯಾಗಿ ಹೇಳಿದರು - "ಈ ಜನ್ಮದಿಂದ ಹಿಂದಿನ ಐದನೆಯ ಜನ್ಮದಲ್ಲಿ ನೀನು ಕೊಂಕಣ ನಾಡಿನಲ್ಲಿ ತುಂಗಭದ್ರನೆಂಬ ಕಾಡು ಕಡಿವವನಾಗಿದ್ದಿ. ನೀನು ಕುಮ್ಮರಿಯನ್ನು ಸುಟ್ಟು ಹೋಗಿ, ಹೊತ್ತಾರೆ ಬಂದು ನೋಡುವಾಗ ಆ ಬೆಂಕಿಯಲ್ಲಿ ಸತ್ತಿದ್ದ ಋಷಿರೂಪವನ್ನು ಕಂಡು ದುಃಖಿತನಾಗಿ ಅಲ್ಲಿಯೇ ಬೆಂಕಿಯನ್ನು ಹೊಕ್ಕು ಸತ್ತು ವ್ಯಂತರದೇವನಾದೆ. ಅಲ್ಲಿ ಆಯುಷ್ಯವು ಕೊನೆಗೊಂಡಾಗ ವಿಂಧ್ಯೆಯ ಕಾಡಿನಲ್ಲಿ ಬಿಳಿಯ ಆನೆಯಾಗಿ ಹುಟ್ಟಿದೆ. ಅಚ್ಯುತೇಂದ್ರನ ಉಪದೇಶದಿಂದ ಸಮ್ಯಕ್ತ್ವಪೂರ್ವಕವಾಗಿ ಶ್ರಾವಕ ವ್ರತಗಳನ್ನು ಸ್ವೀಕರಿಸಿ, ನಡೆಸಿ, ಆಯುಷ್ಯ ಕೊನೆಯಾಗಲು ಹದಿನೆಂಟು ಸಾಗರವನ್ನು ಹೋಲುವ ಆಯುಷ್ಯವುಳ್ಳ ಸಹಸ್ರಾರಕಲ್ಪದಲ್ಲಿ ದೇವನಾಗಿ ಹುಟ್ಟಿ ಅಲ್ಲಿಂದ ಬಂದು ಈ ಗಜಕುಮಾರನಾಗಿರುವೆ" - ಎಂದು ಗಣಧರರು ಹೇಳಿದಾಗ ಗಜಕುಮಾರನು ತನ್ನ ಹಿಂದಿನ ಜನ್ಮಗಳ ಸಂಗತಿಯನ್ನು ಕೇಳಿ ವೈರಾಗ್ಯವುಳ್ಳವನಾದನು. ಎದ್ದು ವರ್ಧಮಾನತೀರ್ಥಂಕರರ ಎದರಿನಲ್ಲಿ ನಿಂತು ಕೈಗಳನ್ನು ಮುಗಿದು 'ದೀಕ್ಷೆಯನ್ನು ಅನುಗ್ರಹಿಸಿರಿ' ಎಂದು ಬೇಡಿಕೊಂಡನು. ತಪಸ್ಸನ್ನು ಸ್ವೀಕರಿಸಿದನು. ಶಾಸ್ತ್ರಗಳೆಲ್ಲವನ್ನೂ ಕಲಿತು ಪರಿವ್ರಾಜಕರಾಗಿ 'ಗ್ರಾಮದಲ್ಲಿ ಒಂದು ರಾತ್ರಿ, ನಗರದಲ್ಲಿ ಐದು ರಾತ್ರಿ, ಕಾಡಿನಲ್ಲಿ ಹತ್ತು ರಾತ್ರಿ' ಎಂಬೀ

ಅಟವ್ಯಾಂ ದಶರಾತ್ರಮೆಂಬೀ ನ್ಯಾಯದಿಂ ಗ್ರಾಮ ನಗರ ಬೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಕಳಿಂಗನಾಡನೆಯ್ದಿಯಲ್ಲಿ ದಂತಪುರಮೆಂಬ ಪೊಬಲ ಪಡುವಣ ಬೆಟ್ಟದ ಮೇಗೇಕಶ್ಮಿರ ಯೋಗಂಗೊಂಡು ಕಲ್ನೆಲೆನಿಂದರನ್ನೆಗಂ ಆ ಪೊಬಲನಾಳ್ವಂ ನರಸಿಂಹನೆಂಬರಸನಾತನ ಮಹಾದೇವಿ ವಸುಮತಿಯೆಂಬೊಳಾಯಿರ್ವ್ವರ್ಗ್ಗಂ ಮಗಂ ನರಪಾಳನೆಂಬೊಂ ಮಂತ್ರಿ ಬುದ್ಧದಾಸನೆಂಬೊನಂತವರ್ಗಳ್ವೆರಸೊಂದು ದಿವಸಂ ಕರುಮಾದದ ಮೇಗಣ ನೆಲೆಯೊಳಿರ್ದರಸಂ ದಿಶಾವಳೋಕನಂ ಗೆಯ್ಯುತ್ತಿರ್ದಾತಂ ಬೆಟ್ಟದ ಮೇಗಾ ತಪಮಿರ್ದ ಋಪಿಯರಂ ಕಂಡೀ ತಪಸ್ವಿ ಬೇಸಗೆಯೊಳ್ ಬೆಟ್ಟದ ಮೇಗಿರ್ದ್ದೇಕೆ ಬಸಿಲ್ಗಾಯ್ವಪ್ಪೊನೆಂದು ಮಂತ್ರಿಯಪ್ಪ ಬುದ್ಧದಾಸನಂ ಬೆಸಗೊಂಡೊಡಾತಂ ಕೌಟಲ್ಯ ಭಾವದಿಂದಿಂತೆಂದನೀ ತಪಸ್ವಿಗೆ ಮಹಾವಾತಂ ತಗುಳ್ದುದರಿಂದಂ ನಿಂದಿರ್ದೊನೆಂದೊದರಸನಿದರ್ಕೆ ಮರ್ದೇನೆಂದು ಬೆಸಗೊಂಡೊಡಾತನಿಂತೆಂದನಾ ತಪಸ್ವಿಯೇಱಿರ್ದ ಶಿಲೆಯಂ ಕಾಸುವುದೆಂದೊದಂತಪ್ಪೊಡೆ ನೀಂ ಪಕ್ಕದಿರ್ದು ಕಾಸೆಂದು ಬೆಸವೇಱ್ದೊಡಾತನಂತೆ ಗೆಯ್ದೆನೆಂದು ಪೋಗೆಯಾ ಋಪಿಯರ್ ಚರಿಗೆವೋದರನ್ನೆಗಂ ಯೋಗಪೀಠದ ಶಿಲೆಯಂ ಕಿಚ್ಚಿನ ಬಣ್ಣದಂತಾಗಿ ಕಾಸಿ ಪೋದನನ್ನೆಗಂ ಚರಿಗೆವುಗುತ್ತಿರ್ದ ರಿಸಿಯರಂ ದೇವತೆ ಕಂಡಿಂತೆಂದಳ್ ನಿಮಗಾಯುಷ್ಯಮಿಲ್ಲೇಕೆ ಚರಿಗೆ ಮಾಡಲ್ ಪೋಪಿರೆಂದೊಡೆ ಚರಿಗೆವ್ಕಗದಂತೆ ಮಗುಚ್ಚು ಬರ್ಪೊರನ್ನೆಗಂ

ನ್ಯಾಯದಂತೆ ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖಗಳನ್ನು ಸಂಚಾರಮಾಡುತ್ತ ಕಳಿಂಗನಾಡಿಗೆ ಹೋದರು. ಅಲ್ಲಿ ದಂತಪುರ ಎಂಬ ಪಟ್ಟಣದ ಪಶ್ಚಿಮದ ಬೆಟ್ಟದ ಮೇಲೆ ಒಂದೇ ಆದ ಸ್ಥಿರವಾದ ಯೋಗವನ್ನು ಕೈಕೊಂಡು ಕಲ್ಲಿನಂತೆ ನೆಲೆನಿಂತರು. ಆ ಪಟ್ಟಣವನ್ನು ನರಸಿಂಹನೆಂಬ ರಾಜನು ಆಳುತ್ತಿದ್ದನು. ಅವನಿಗೆ ವಸುಮತಿ ಎಂಬವಳು ಮಹಾರಾಣಿಯಾಗಿದ್ದಳು. ಆ ದಂಪತಿಗಳಿಗೆ ನರಪಾಳನೆಂಬವನು ಮಗನು. ಬುದ್ಧದಾಸನು ಮಂತ್ರಿ. ಒಂದು ದಿವಸ ನರಸಿಂಹ ರಾಜನು ಅವರನ್ನೆಲ್ಲ ಕೂಡಿಕೊಂಡು ಅರಮನೆಯ ಮೇಲಣ ಉಪ್ಪರಿಗೆಯಲ್ಲಿ ಇದ್ದುಕೊಂಡು ದಿಕ್ಕುಗಳನ್ನು ನೋಡುತ್ತಾ ಇದ್ದನು. ಆತನು ಬೆಟ್ಟದ ಮೇಲುಗಡೆ ತಪಸ್ಸನ್ನು ಮಾಡುತ್ತಿದ್ದ ಋಷಿಗಳನ್ನು ಕಂಡು - 'ಈ ತಪಸ್ವಿಯು ಬೇಸಗೆಯಲ್ಲಿ ಬೆಟ್ಟದ ತುದಿಯಲ್ಲಿದ್ದು ಯಾಕೆ ಬಿಸಿಲನ್ನು ಕಾಯಿಸುತ್ತ ಇದ್ದಾನೆ?' ಎಂದು ಮಂತ್ರಿಯಾದ ಬುದ್ಧದಾಸನನ್ನು ಕೇಳಿದನು. ಆಗ ಅವನು ಕುಹಕದ ಭಾವನೆಯಿಂದ ಹೀಗೆಂದನು - "ಈ ಋಷಿಗೆ ಮಹತ್ತರವಾದ ವಾತರೋಗ ಸೇರಿದೆ. ಅದರಿಂದ ಬಿಸಿಲಲ್ಲಿ ನಿಂತಿದ್ದಾನೆ "- ಎಂದಾಗ ರಾಜನು 'ಇದಕ್ಕೆ ಮದ್ದೇನಿದೆ ?' ಎಂದು ಕೇಳಿದನು. ಬುದ್ಧದಾಸನು ಆಗ ಹೀಗೆ ಹೇಳಿದನು - 'ಆ ತಪಸ್ವಿ ಕುಳಿತುಕೊಂಡಿರುವ ಶಿಲೆಯನ್ನು ಕಾಯಿಸುವುದೇ ಮದ್ದು' ಎಂದಾಗ ರಾಜನು 'ಹಾಗಾದರೆ ನೀನು ಬಳಿಯಲ್ಲಿದ್ದು ಕಾಯಿಸು' ಎಂದು ಆಜ್ಞೆಮಾಡಿದನು : ಮಂತ್ರಿಯು 'ಹಾಗೆಯೇ ಮಾಡುವೆನು' ಎಂದುಕೊಂಡು ತೆರಳಿದನು. ಋಷಿಗಳು ಭಿಕ್ಷೆಗೆ ಹೋದ ವೇಳೆಗೆ ಅವರ ಯೋಗಪೀಠದ ಶಿಲೆಯನ್ನು ಬೆಂಕಿಯ ಬಣ್ಣದ ಹಾಗೆ ಆಗುವಂತೆ ಕಾಯಿಸಿ ಹೋದನು. ಆ ವೇಳೆಗೆ ಭಿಕ್ಷಾಟನೆ ಮಾಡುತ್ತಿದ್ದ ಋಷಿಗಳಿಗೆ ದೇವತೆ ಕಂಡು "ನಿಮಗೆ ಆಯುಷ್ಯವಿಲ್ಲ ಏಕೆ ಭಿಕ್ಷೆಗೆ ಹೋಗುತ್ತೀರಿ?" ಎನ್ನಲು ಮತ್ತೆ ಭಿಕ್ಷೆಗೆ ಹೋಗದೆ ಹಾಗೆಯೇ ಹಿಂದೆರಳಿ

ಕಚ್ಚಿನ ಬಣ್ಣಮಾಗಿ ಕಾಯ್ಬುರ್ದ ಶಿಲೆಯಂ ಕಂಡೆಮಗಿನಿತೆಯಾಯುಷ್ಯಮೆಂದು ಪರಿಚ್ಛೇದಿಸಿ ಸಿದ್ಧಭಕ್ತಿ ಜೋಗಭಕ್ತಿಗೆಯ್ದು ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಯಾವಜ್ಜೀವಂ ನಿವೃತ್ತಿಗೆಯ್ದಾಚಾರ್ಯ ಭಕ್ತಿಗೆಯ್ದು ಕಾಯ್ದುರ್ದ ಯೋಗಪೀಠಮನೇಱೆ ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆದು ಸಮತ್ವೀ ಭಾವನೆಯಂ ಭಾವಿಸಿ ಕಿಚ್ಚನುಪಸರ್ಗಮಂ ಸೈರಿಸಿ ಚತುರ್ವಿಧಮಪ್ಪ ಧರ್ಮ್ಯಧ್ಯಾನಮುಂ ನಾಲ್ಕುಂ ತೆಱದ ಶುಕ್ಲಧ್ಯಾನಂಗಳುಮಂ ಧ್ಯಾನಿಸಿ ಎಂಟು ಕರ್ಮಂಗಳನೊರ್ಮೊದಲೆ ಕಿಡಿಸಿ ಮೋಕ್ಷಕ್ಕೆ ವ್ಪೋವರ್ ಅನ್ನೆಗಂ ಚತುರ್ವಿಧ ದೇವನಿಕಾಯಂ ಬಂದು ದಿವ್ಯಮಪ್ಪ ಗಂಧ ಪುಷ್ಪ ದೀಪಧೂಪಾಕ್ಷತಂಗಳಿಂ ಶ್ರೀಪಾದಮನರ್ಚಿಸಿ ಪೊಡೆವಟ್ಟು ಮತ್ತೆ ಬುದ್ಧದಾಸನಂ ದೇವರ್ಕಳ್ ಜಡಿದು ನುಡಿದೊಡವನಂಜಿಯೆಂದನಾನಱಿಯದೆ ಪಂಚಮಹಾಪಾತಕನೆಂ ಪೊಲ್ಲಕೆಯ್ದೆನೆನಗೊರ್ಮೆಂಗೆ ಕ್ಷಮಿಯಿಸಿಮೆಂದು ನುಡಿದೊಡೆ ದೇವರ್ಕಳ್ ಕ್ಷಮಿಯಿಸಿ ತಂತಮ್ಮ ಸ್ಥಾನಂಗಳ್ಗೆ ಪೋದರ್ ಇತ್ತ ಬುದ್ಧದಾಸನುಮಾ ರಿಸಿಯರ ತಪದ ಮಹಾತ್ಮ್ಯಮುಮಂ ದೇವರ್ಕಳ್ ಬಂದು ಪೂಜಿಸಿದುದುಮಂ ಕಂಡಿದುವೆ ಧರ್ಮಮಿದುವೆ ತಪಮೆಂದು ನಂಬ ಸಮ್ಯಕ್ತ್ವಪೂರ್ವಕಂ ಶ್ರಾವಕವ್ರತಂಗಳಂ ಕೈಕೊಂಡು ನೆಗಳ್ದಂ ಮತ್ತಾ ನರಸಿಂಹನೃಪತಿಯುಂ ಪಶ್ಚಾತ್ತಾಪಮಾಗಿ ಋಷಿವಧೆಗೆಯ್ದ ಪಾಪಮಿಂತಲ್ಲದೆ ನೀಗದೆಂದು ನರಪಾಳನೆಂಬ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ಪಲಂಬರರಸು ಮಕ್ಕಳ್ವೆರಸು ಸುಧರ್ಮರೆಂಬ

ಬರುತ್ತಿದ್ದರು. ಆಗ ಬೆಂಕಿಯ ಬಣ್ಣವಾಗಿ ಕಾಯ್ದ ಶಿಲೆಯನ್ನು ಕಂಡು, ನಮಗೆ ಇಷ್ಟೇ ಆಯುಷ್ಯವಿರುವುದೆಂದು ನಿಶ್ಚಯ ಮಾಡಿಕೊಂಡು ಸಿದ್ಧಭಕ್ತಿ ಯೋಗಭಕ್ತಿಯನ್ನು ಮಾಡಿ ನಾಲ್ಕು ವಿಧದ ಆಹಾರಕ್ಕೂ ಶರೀರಕ್ಕೂ ಪ್ರಾಣವಿರುವವರೆಗೂ ನಿವೃತ್ತಿಮಾಡಿ, ಆಚಾರ್ಯರಲ್ಲಿ ಭಕ್ತಿಯನ್ನು ಮಾಡಿ ಕಾಯ್ದಿದ್ದ ಯೋಗಪೀಠದ ಮೇಲೆ ಕುಳಿತು ಭೂಮಿ, ಮನೆ, ಧನ, ಧಾನ್ಯ - ಮುಂತಾದ ಬಾಹ್ಯ ಪರಿಗ್ರಹಗಳನ್ನೂ ಮಿಥ್ಯಾತ್ವ, ರಾಗ, ದ್ವೇಷ-ಮುಂತಾದ ಆಂತರಿಕ ಪರಿಗ್ರಹಗಳನ್ನೂ ತ್ಯಜಿಸಿ ಸಮತ್ವದ ಭಾವನೆಯನ್ನು ಭಾವಿಸಿ ಅಗ್ನಿಯಿಂದಾದ ಉಪಸರ್ಗವನ್ನು ಸಹಿಸಿ ನಾಲ್ಕು ವಿಧವಾದ ಧರ್ಮ್ಯಧ್ಯಾನಗಳನ್ನೂ ನಾಲ್ಕು ರೀತಿಯ ಶುಕ್ಲಧ್ಯಾನಗಳನ್ನೂ ಧ್ಯಾನಿಸಿ ಘಾತಿ-ಅಘಾತಿರೂಪದ ಎಂಟು ಕರ್ಮಗಳನ್ನು ಒಮ್ಮೆಗೇ ನಾಶಪಡಿಸಿ ಮೋಕ್ಷಕ್ಕೆ ಹೋದರು. ಅಷ್ಟರಲ್ಲಿ ನಾಲ್ಕು ವಿಧದ ದೇವತಾ ಸಮೂಹವು ಬಂದು ದಿವ್ಯವಾದ ಗಂಧ, ಪುಷ್ಪ, ದೀಪ, ಧೂಪ, ಅಕ್ಷತೆಗಳಿಂದ ಋಷಿಗಳ ಶ್ರೀಪಾದವನ್ನು ಪೂಜಿಸಿ ಸಾಷ್ಟಾಂಗವಂದನೆ ಮಾಡಿದರು. ಆಮೇಲೆ ಬುದ್ಧದಾಸನನ್ನು ದೇವತೆಗಳು ಗದರಿಸಿ ನುಡಿಯಲು ಅವನು ಹೆದರಿ - "ಪಂಚಮಹಾಪಾತಕನಾದ ನಾನು ತಿಳಿಯದೆ ಕೆಟ್ಟುದನ್ನು ಮಾಡಿದೆನು. ನನಗೆ ಒಮ್ಮೆಗೆ ಕ್ಷಮೆಯನ್ನು ಕೊಡಿ" ಎಂದು ಹೇಳಲು ದೇವತೆಗಳು ಅವನನ್ನು ಕ್ಷಮಿಸಿ ತಂತಮ್ಮ ಸ್ಥಳಗಳಿಗೆ ಹೋದರು. ಇತ್ತ ಬುದ್ಧದಾಸನು ಈ ಋಷಿಗಳ ತಪಸ್ಸಿನ ಮಹಿಮೆಯನ್ನೂ ದೇವತೆಗಳು ಬಂದು ಪೂಜಿಸಿದುದನ್ನೂ ಕಂಡು - "ಇದೇ ಧರ್ಮವು, ಇದೇ ತಪಸ್ಸು" ಎಂದು ನಂಬಿ ಜೈನಧರ್ಮದಲ್ಲಿ ಪೂರ್ಣವಾದ ನಂಬಿಕೆಯೊಂದಿಗೆ ಶ್ರಾವಕಧರ್ಮವನ್ನು ಸ್ವೀಕರಿಸಿ, ಅವುಗಳನ್ನು ಆಚರಿಸಿದನು. ಅನಂತರ ಆ ನರಸಿಂಹರಾಜನು ಪಶ್ಚಾತ್ತಾಪಗೊಂಡವನಾಗಿ ಋಷಿಯನ್ನು ಕೊಂದ ಪಾಪವು ಈ ರೀತಿಯಿಂದಲ್ಲದೆ ಪರಿಹಾರವಾಗದೆಂದು ನರಪಾಳನೆಂಬ ಹಿರಿಯ ಮಗನಿಗೆ ರಾಜ್ಯಪಟ್ಟವನ್ನು ಕಟ್ಟಿ ಹಲವರು ರಾಜಕುಮಾರರೊಂದಿಗೆ ಸುಧರ್ಮರೆಂಬ ಋಷಿಗಳ

ಭಟಾರರ ಪಕ್ಕದೆ ತಪಂಬಟ್ಟು ಪಲಕಾಲಮುಗ್ರೋಗ್ರ ತಪಶ್ಚರಣಂ ಗೆಯ್ದು ಸಮಾಧಿ ಮರಣದಿಂದಂ ವಿಒಕ್ಕ ರತ್ನಂಗಳಂ ಸಾಧಿಸಿ ಸರ್ವಾರ್ಥಸಿದ್ಧಿಯೊಳ್ ಮೂವತ್ತುಮೂಜು ಸಾಗರೋಪ ಮಾಯುಷ್ಯಮನೊಡೆಯೊನಹಮಿಂದ್ರದೇವನಾದೊನ್ ಇಂತೀ ಕಥೆಗಳೆಲ್ಲಂ ಗುರುದತ್ತ ಭಟಾರರ ಕಥೆಗೆ ಪ್ರತಿಬದ್ಧಂಗಳ್ ಮತ್ತಂ ಪೆಱರ್ ಸಂನ್ಯಸನಂಗೆಯ್ದ ಭವ್ಯರ್ಕಳ್ ಗುರುದತ್ತ ಭಟಾರರುಮಂ ಹಳಮುಖ ಋಷಿಯರುಮಂ ಗಜಕುಮಾರ ಭಟಾರರುಮನಿಂತಿವರ್ಗಳಂ ಮನದೊಳ್ ಬಗೆದುಪಸರ್ಗಂಗಳುಮಂ ಪಸಿವುಂ ನೀರಬ್ಬಿ ಮೊದಲಾಗೊಡೆಯ ಇರ್ಪತ್ತೆರಡು ಪರೀಷಹಂಗಳಂ ಸೈರಿಸಿ ಸಮಾಧಿ ಮರಣದಿಂದಂ ಪರಮ ಶುದ್ಧ ಸಹಜ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

ಬಳಿಯಲ್ಲಿ ತಪಸ್ಸನ್ನು ಸ್ವೀಕಾರಮಾಡಿ, ಅತ್ಯಂತ ಘನಘೋರವಾದ ತಪಸ್ಸನ್ನು ಆಚರಿಸಿ ಸಮಾಧಿ ಮರಣದಿಂದ ಶ್ರೇಷ್ಠವಾದ ದರ್ಶನ ಜ್ಞಾನ ಚರಿತ್ರಗಳೆಂಬ ರತ್ನತ್ರಯವನ್ನು ಸಾಧಿಸಿ ಸರ್ವಾರ್ಥಸಿದ್ಧಿಯೆಂಬ ಉನ್ನತವಾದ ಸ್ವರ್ಗದಲ್ಲಿ ಮೂವತ್ತಮೂರು ಸಾಗರವನ್ನು ಹೋಲುವ ಆಯುಃ ಪರಿಮಾಣವುಳ್ಳ ಅಹಮಿಂದ್ರದೇವನಾದನು. ಹೀಗೆ ಈ ಕಥೆಗಳೆಲ್ಲವೂ ಗುರುದತ್ತಭಟಾರರ ಕಥೆಗೆ ಅನುಬಂಧಗಳಾಗಿವೆ. ಮತ್ತು ಸಂನ್ಯಾಸ ಮಾಡಿದ ಇತರ ಭಟ್ಟರು ತಮ್ಮ ಮನಸ್ಸಿನಲ್ಲಿ ಗುರುದತ್ತ ಋಷಿಗಳನ್ನೂ ಹಳಮುಖ ಋಷಿಗಳನ್ನೂ ಸುಕುಮಾರಭಟಾರರನ್ನೂ ಹೀಗೆ ಇವರನ್ನು ಭಾವಿಸಿಕೊಂಡು ಉಪಸರ್ಗಗಳನ್ನೂ ಹಸಿವು ಬಾಯಾರಿಕೆ ಮುಂತಾಗಿರುವ ಇಪ್ಪತ್ತೆರಡು ಪರೀಷಹಗಳನ್ನೂ ಸಹಿಸಿಕೊಂಡು ಸಮಾಧಿಮರಣದಿಂದ ಶ್ರೇಷ್ಠವೂ ಪವಿತ್ರವೂ ಸಹಜವೂ ಆದ ದರ್ಶನಜ್ಞಾನ - ಚಾರಿತ್ರಗಳನ್ನು ಸಾಧಿಸಿ ಸ್ವರ್ಗ-ಮೋಕ್ಷ ಸುಖಿಗಳನ್ನು ಪಡೆಯಲಿ !

೧೫. ಚಿಲಾತಪುತ್ರನ ಕಥೆ

ಚಿಲಾತಪುತ್ರನ ಕಥೆಯಂ ಪೇೞ್ದೆಂ :

ಗಾಹೆ ॥ ಗಾಢಪ್ಪಹಾರ ವಿದ್ಧೋ ಮೂಢಂ ಗಾಳೀಹಿ ಚಾಳಿಣೆ ಕದೊ ವಾ
ತದವಿಯ ಚಿಲಾತಪುತ್ತೋ ಪಡಿವನ್ನೋ ಉತ್ತಮಂ ಅಟ್ಠಂ ॥

[ಗಾಢಪ್ಪಹಾರ-ಆದಮಾನುಂ ಸೈರಿಸಲ್ಕರಿಯವಪ್ಪೇಜುಗಳಿಂದಂ, ವಿದ್ಧೋ-ಉರ್ದೆ ಪಟ್ಟೊನಾಗಿ, ಮೂಢಂಗಾಳೀಹಿ-ಕಟ್ಟಜುಂಪೆಗಳಿಂದಂ, ಚಾಳಿಣೆಕದೋ ವಾ-ಒನಲಿಯವೊಲ್ ಛಿದ್ರಂ ಮಾಡಪಟ್ಟ ಮೆಯ್ಯನೊಡೆಯನಾಗಿ, ತದವಿಯ-ಅಂತು, ಚಿಲಾತಪುತ್ತೋ-ಚಿಲಾತಪುತ್ರನೆಂಬ ರಿಸಿ, ಪಡಿವನ್ನೋ-ಪೊರ್ದಿದೊಂ, ಉತ್ತಮಂ ಅಟ್ಠಂ-ಮಿಕ್ಕ ದರ್ಶನಜ್ಞಾನ ಚಾರಿತ್ರಂಗಳಾರಾಧನೆಯಂ]

ಅದೆಂತೆಂದೊಡೆ : ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಮಗಧೆಯೆಂಬುದು ನಾದಲ್ಲಿ ರಾಜಗೃಹಮೆಂಬುದು ಪೊಬಲದನಾಳ್ವಂ ಉಪಶ್ರೇಣಿಕನೆಂಬೊನರಸನಾತಂಗೆ ಜಯಾವತಿ ಮಹಾದೇವಿ ಮೊದಲಾಗಿ ಮೂಸಾಸಿರರಸಿಯರ್ಕಳಂತವರಿಷ್ಟವಿಷಯ ಕಾಮ ಭೋಗಂಗಳನನುಭವಿಸುತ್ತಂ ಪಲಕಾಲಂ ಸಲೆ ಮತ್ತೊಂದುದಿವಸಂ ಉಪಶ್ರೇಣಿಕಂ ಬೇಂಟೆಯಾಡಲ್ಪೋಗಿಯಡವಿಯೊಳ್ ಮಪ್ಪಾಳ್ಪಮನೀಜೆ ಪಂದಿಯ ಬಟೆಯಂ ತಗುಳ್ದೊಡಮ ಗಾಳಿಗೊಂದೊಂದು ದೆಸೆಗೆವರಿದು ವಿಂಧ್ಯಾಟವಿಯ ನಟ್ಟನಡುವೆ ಸುರಮ್ಯಮೆಂಬ ಬೇಡವಳ್ಳಿಯ ಸಾರೆ ತೊಱೆಯ ತಡಿಯೊಳ್ ಕುದುರೆ ತನ್ನಂ ತಾನೆ ಸೇದೆಗೆಟ್ಟು ನಿಂದಾಗಳ್ ಕುದುರೆಯಿಂದಿಟಿದು ಪಲ್ಲಣಮಂ ಚದುರಸಿಗೆಯುಮಂ ಕೀಬುಮಂ ಕಳೆದು ಕುಮರೆಯಂ ನೀರೂದಿ ಮೈದೊಳೆದು ಕಟ್ಟಿ ತಾನುಂ ನೀರಂ ಕುಡಿದೊಂದು ಪುರದ ಕೆಬಗೆ ಚದುರಸಿಗೆಯಂ

ಚಿಲಾತಪುತ್ರನ ಕಥೆಯನ್ನು ಹೇಳುವೆನು : (ಅತ್ಯಂತ ಅಸಹನೀಯವಾದ ಗಾಯಗಳಿಂದ ಛೇದಿಸಲ್ಪಟ್ಟವನಾಗಿಯೂ ಕಟ್ಟಿರುವೆಗಳಿಂದ ಜರಡೆಯ ಹಾಗೆ ತೂತು ಮಾಡಲ್ಪಟ್ಟ ಶರೀರವುಳ್ಳವನಾಗಿಯೂ ಅಂತು ಚಿಲಾತಪುತ್ರನೆಂಬ ಋಷಿ ಶ್ರೇಷ್ಠವಾದ ದರ್ಶನ ಜ್ಞಾನ ಚಾರಿತ್ರಗಳ ಆರಾಧನೆಯನ್ನು ಮಾಡಿದನು.) ಅದು ಹೇಗೆಂದರೆ : ಈ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ಮಗಧೆ ಎಂಬ ನಾಡಿನಲ್ಲಿ ರಾಜಗೃಹವೆಂಬ ಪಟ್ಟಣವನ್ನು ಉಪಶ್ರೇಣಿಕನೆಂಬ ರಾಜನು ಆಳುತ್ತಿದ್ದನು. ಅವನಿಗೆ ಜಯಾವತಿ ಮಹಾದೇವಿ ಮೊದಲಾದ ಮೂರು ಸಾವಿರ ಮಂದಿ ರಾಣಿಯರಿದ್ದರು. ಅಂತು ಅವರು ಇಷ್ಟವಿಷಯದ ಕಾಮಸುಖಗಳನ್ನು ಅನುಭವಿಸುತ್ತ ಹಲವು ಕಾಲ ಕಳೆಯಿತು. ಅನಂತರ ಒಂದು ದಿವಸ ಉಪಶ್ರೇಣಿಕನು ಬೇಟೆಯಾಡಲು ಹೋದನು. ಕಾಡಿನಲ್ಲಿ ತುಂಟ ಕುದುರೆಯನ್ನೇರಿ ಒಂದು ಹಂದಿಯನ್ನು ಅದರ ದಾರಿಯಲ್ಲಿ ಬೆನ್ನಟ್ಟಿಕೊಂಡು ಹೋದನು. ಆ ಕುದುರೆ ಗಾಳಿಯ ಮೂಲಕ ವಾಸನೆ ಹಿಡಿದು ಒಂದು ದಿಕ್ಕಿಗೆ ಓಡುತ್ತ ವಿಂಧ್ಯೆಯ ಕಾಡಿನ ನಟ್ಟನಡುವೆ ಸುರಮ್ಯವೆಂಬ ಬೇಡರ ಹಳ್ಳಿಯ ಸಮೀಪ ಹೊಳೆಯ ದಡದಲ್ಲಿ ಆಯಾಸ ಪಟ್ಟು ನಿಂತಿತು. ಆಗ ಉಪಶ್ರೇಣಿಕನು ಕುದುರೆಯಿಂದ ಇಳಿದು ಅದರ ಹಲ್ಲಣವನ್ನೂ ಜೀನಿನ ಮೇಲೆ ಹಾಕಿದ ಬೌಕದ ವಸ್ತ್ರವನ್ನೂ ಕಡಿವಾಣವನ್ನೂ ತೆಗೆದುಹಾಕಿ, ಕುದುರೆಗೆ ನೀರನ್ನು ಕುಡಿಸಿ ಅದರ ಮೈಯನ್ನು ತೊಳೆದು ಅದನ್ನು ಕಟ್ಟಿ ಹಾಕಿದನು. ತಾನೂ ನೀರನ್ನು ಕುಡಿದು

ಪಾಸಿ ಪಟ್ಟರ್ದನ್ ಆನ್ನೆಗಮಾ ಬೇಡವಳ್ಳಿಯರಸು ಮಹಾಕಾಳನೆಂಬೊನಾತು ಕುಲದೊಳರಸುಕುಲಂ ದಾಯಿಗರಿಂದವುಬ್ಬಾಟಿಸಿ ಕಳೆಯೆಂಪಟ್ಟೊನಾಗಿ ಬಂದಲ್ಲಿ ಪೊಟಲಂ ಮಾಡಿ ಪಲಕಾಲವಿರ್ದೊನಾತನರಸಿ ಸೌಂದರಿಯೆಂಬೊಳಾಯಿರ್ವರ್ಗ್ಗಂ ಮಂಗಳ್ ಗುಣಸೌಂದರಿಯೆಂಬೊಳತ್ಯಂತ ರೂಪಲಾವಣ್ಯ ಸೌಭಾಗ್ಯಕಾಂತಿ ಹಾವ ಭಾವ ವಿಲಾಸ ವಿಭ್ರಮಂಗಳನೊಡೆಯೊಳಾಕೆ ಪಲರುಂ ಕನ್ನೆಯರ್ಕಳುಂ ಕಾಪಿನವರುಂ ಬೆರಸುದ್ಯಾನವನದೊಳ್ ವನಕ್ರೀಡೆಯನಾಡಿ ಬರ್ಪಾಕೆ ಉಪಶ್ರೇಣಿಕನ ರೂಪಂ ಕಂಡಾಟಿಸಿ ನೋಡೆ ಆತನುಮಾಕೆಗಾಟಿಸಿ ಸೋಲ್ತು ನೋಡಿ ಬಸಮಟೆದು ನೀಡುಮೊಲ್ತು ನೋಡೆ ಕಾಪಿನವರ್ ಜಡಿದು ಕೊಂದು ಪೋಪಾಗಳೊಂದೋಲೆಯನಿಂತೆಂದು ಬರೆದಳ್ ನೀನಲ್ಲದೆನಗುಚಿತ ಪುರುಷರ್ ಮೊರೆಯಲ್ಲರೆಂದು ಬಗೆದು ಬರೆದು ಪೆಱಗಣೆಂದೋಲೆಯನಿಕ್ಕಿ ಪೋದಾಗಳೋಲೆಯಂ ಬಾಚಿಸಿ ನೋಡಿ ಸಂತುಷ್ಟಚಿತ್ತನಾಗಿರ್ದನನ್ನೆಗಂ ಪೆಱಗಣೆಂದದಿವಚ್ಚಿಯಂ ನೋಡಿ ತೇನತೇನದಿಂ ತಂತ್ರಮೆಲ್ಲಂ ನೆರೆದು ಬಂದು ಪಱಿಯ ಕಹಳೆಯ ಶಂಖಧ್ವನಿಗಳೊರ್ಮೊದಲೆ ಬಾಜಿಸೆ ಬೇಡರಸಂ ಕೇಳ್ದು ದಾಟಿ ಬಂದುದೆಂದಂಜಿ ತ್ರಸ್ತಾಭಭೂತನಾಗಿಯೋದಲ್ ತಗುಳ್ದೊದುಪಶ್ರೇಣಿಕಂ ತನ್ನ ಪೆರ್ಗಡೆಗಳನಟ್ಟಿಯೋದಲೀಯದೆ ಸಂತವಿಸಿದೊಡಾತನುಂ ಆನೆಗಳ ದಂತಂಗಳುಂ ಮುತ್ತುಗಳುಂ

ಒಂದು ಮರದ ಕೆಳಗೆ ಚೌಕವಸ್ತ್ರವನ್ನು ಹಾಸಿ ಮಲಗಿದ್ದನು. ಆ ಬೇಡರ ಹಳ್ಳಿಯ ಅರಸನು ಮಹಾಕಾಳನೆಂಬವನು. ಅವನು ಕುಲದಲ್ಲಿ ರಾಜಕುಲದವನು ; ದಾಯವಾದಿಗಳಿಂದ ಬುಡಸಹಿತ ಕಿತ್ತು ಅಟ್ಟಲ್ಪಟ್ಟವನಾಗಿ, ಬಂದು ಅಲ್ಲಿ ಪಟ್ಟಣವನ್ನು ನಿರ್ಮಾಣ ಮಾಡಿ ಹಲವು ಕಾಲದಿಂದಲೇ ಇದ್ದನು. ಅವನ ರಾಣಿ ಸೌಂದರಿಯೆಂಬವಳು. ಆ ಇಬ್ಬರಿಗೂ ಗುಣಸೌಂದರಿ ಎಂಬವಳು ಮಗಳಾಗಿದ್ದಳು. ಅವಳು ಅತಿಶಯವಾದ ರೂಪ, ಲಾವಣ್ಯ, ಸೌಭಾಗ್ಯ, ಕಾಂತಿ, ಹಾವ, ಭಾವ, ವಿಲಾಸ, ವಿಭ್ರಮಗಳನ್ನುಳ್ಳವಳಾಗಿದ್ದಳು. ಆಕೆ ಹಲವು ಮಂದಿ ಕನ್ಯೆಯರನ್ನೂ ಕಾವಲುಗಾರರನ್ನೂ ಕೂಡಿಕೊಂಡು ಅಪ್ಪರಲ್ಲಿ ಆ ಉದ್ಯಾನವನದಲ್ಲಿ ಕ್ರೀಡೆಗಳನ್ನಾಡಿ ಬರುತ್ತಿದ್ದಳು. ಹಾಗೆ ಬರುವಾಗ ಉಪಶ್ರೇಣಿಕನ ರೂಪವನ್ನು ಕಂಡು ಪ್ರೀತಿಸಿ ನೋಡಿದಳು. ಉಪಶ್ರೇಣಿಕನೂ ಆಕೆಯ ಮೇಲೆ ಮೋಹಪಟ್ಟು ಸೋತು ನೋಡಿ ಪರವಶನಾಗಿ ಬಹಳ ಹೊತ್ತಿನವರೆಗೆ ಪ್ರೀತಿಯಿಂದ ನೋಡಿದನು. ಆಗ ಕಾವಲಿನವರು ಗುಣಸೌಂದರಿಯನ್ನು ಬೈದು ಕರೆದುಕೊಂಡು ಹೋಗುವಾಗ ಆಕೆ ಒಂದು ಓಲೆಯನ್ನು ಈ ರೀತಿಯಾಗಿ ಬರೆದಳು - "ನೀನಲ್ಲದೆ ನನಗೆ ಬೇರೆ ಗಂಡುಸರು ಯಾರೂ ನಂಟಾಗಲಾರರು". ಹೀಗೆ ಭಾವನಾಪೂರ್ಣವಾಗಿ ಬರೆದು ಹಿಂದುಗಡೆಯಿಂದ ಓಲೆಯನ್ನು ಬಿಸಾಡಿ ಹೋದಳು. ಉಪಶ್ರೇಣಿಕನು ಆ ಓಲೆಯನ್ನು ವಾಚಿಸಿ ನೋಡಿ ಸಂತಸಗೊಂಡ ಮನಸ್ಸಿನವನಾಗಿ ಇದ್ದನು. ಹೀಗಿರಲು ಹಿಂದಿನಿಂದ ಪಾದದ ಗುರುತುಗಳನ್ನು ನೋಡಿಕೊಂಡು ಮೇಲೆ ಮೇಲಾಗಿ ರಾಜನ ಸೈನ್ಯವೆಲ್ಲವೂ ಬಂದು ಸೇರಿದವು. ತಂಬಟೆ, ಕಹಳೆ, ಶಂಖಗಳು ಒಟ್ಟಿಗೇ ಶಬ್ದಮಾಡುತ್ತಿರಲು, ಬೇಡರ ರಾಜನು ಕೇಳಿ ದಾಳಿ ಬಂದಿದೆ ಎಂದು ಹೆದರಿ ಭಯಪೀಡಿತನಾಗಿ ಓಡಲು ಉಪಕ್ರಮಿಸಿದಾಗ ಉಪಶ್ರೇಣಿಕನು ತನ್ನ ಅಧಿಕಾರಿಗಳನ್ನು ಕಳುಹಿಸಿ ಓಡುವುದಕ್ಕೆ ಬಿಡದೆ ಸಮಾಧಾನ ಪಡಿಸಿದನು. ಅವನು ಆನೆಗಳ ದಂತಗಳು, ಮುತ್ತುಗಳು, ಹುಲಿದೊಗಲುಗಳು, ಚಮರೀ ಮೃಗಗಳು - ಇವನ್ನೆಲ್ಲ

ಪುಲಿಯ ತೊವಲ್ಗಳುಮಂ ಚಮರಿಗಳುಮಂ ಕೊಂಮ ಬಂದು ಕಂದು ಕ್ಷೇಮ ಕುಶಲಂಗಳಂ ಬಿಸಗೊಂಡ ಬಟಿಕ್ಕೆ ನಿಮ್ಮ ಕುಲಮೇನೆಂದು ಬಿಸಗೊಂಡೊಡಾತನರಸುಕುಲಮೆಂದು ಪೇಟಿಂದೆ ಕೇಳ್ದು ಸಂತೋಷಂಬಟ್ಟರ್ದೊಡಾತನುಂ ಅರಸಂಗೆ ಬಿರ್ದು ಮಾಡಿರ್ದ ಬಟಿಕ್ಕೆ ಕೂಸಂ ಬೇಡಿಯಟ್ಟಿ ಪೆತ್ತು ಪ್ರಶಸ್ತ ದಿವಸ ವಾರ ನಕ್ಷತ್ರ ಮುಹೂರ್ತದೊಳ್ ಮದುವೆ ನಿಂದು ಕೂಸನೊಡಗೊಂದು ತನ್ನ ಪೊಲಿಲ್ಗೆ ಪೋಗಿ ಚಿಳಾತ ಮಹಾದೇವಿಯೆಂದು ಪೆಸರನಿಟ್ಟು ಇಂತಿಷ್ಟವಿಷಯ ಕಾಮ ಭೋಗಂಗಳನನುಭವಿಸುತ್ತಂ ಪಲಕಾಲಂ ಸಲೆ ಮತ್ತಿತ್ತಾ ನಾಡೊಳ್ ಸಾರ್ಥಾಧಿಪತಿ ನಂದಿಮಿತ್ರನೆಂಬೊಂ ಸಟ್ಟಸಾರ್ಥಂ ಬೆರಸು ಪರದಿಂಗೆ ಪೋಗುತ್ತಿರ್ದಾತನೆಡೆಯೊಳೊಂದೂರೊಳ್ ಬಟ್ಟರ್ದನನ್ನೆಗಂ ತಪೋವರರೆಂಬ ರಿಸಿಯರೇಕವಿಹಾರಿಗಳ್ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪೊರಾ ಸಾರ್ಥಾಧಿಪತಿಯ ಬಟ್ಟರ್ದೂರ್ಗೆ ಬಂದು ಪಂಥಾತಿಚಾರ ನಿಯಮಂಗೆಯ್ದು ಪಗಲ್ ದೇವರಂ ವಂದಿಸಿಯೂರ್ಗೆ ಚರಿಗೆ ವೋಗಿಯೂರೆಲ್ಲಮಂ ತಿಱ್ದನೆ ತಿರಿದು ತೊಟಲ್ದಾರುಂ ನಿಜೆಸದಿರ್ದೊಡೆ ಊರಿಂ ಪೊಱಮಟ್ಟು ಪೋಪ ರಿಸಿಯರಂ ನಂದಿಮಿತ್ರಂ ಕಂಡು ಕಾರುಣ್ಯದಿಂ ನಿಱಿಸಿ ಎಳ್ಕುಂಡೆಯನಿಕ್ಕಿದೊಡದಂ ಚರಿಗೆ ಮಾಡಿ ಪ್ರಾಸುಕಮಪ್ಪ

ಕಾಣಿಕೆಯಾಗಿ ತಂದು ರಾಜನನ್ನು ಕಂಡನು. ಕ್ಷೇಮ ಕುಶಲಗಳನ್ನು ಕೇಳಿದ ನಂತರ 'ನಿಮ್ಮ ಕುಲ ಯಾವುದು ?' ಎಂದು ರಾಜನು ಕೇಳಿದನು. ಆತನು 'ನನ್ನದು ಕ್ಷತ್ರಿಯ ಕುಲ' ಎಂದನು. ಅದನ್ನು ಕೇಳಿ ಉಪಶ್ರೇಣಿಕನು ಸಂತೋಷಪಟ್ಟುಕೊಂಡಿದ್ದನು. ಬೇಡರ ರಾಜನು ಅರಸನಿಗೆ ಔತಣ ಮಾಡಿದನು. ಆಮೇಲೆ ಉಪಶ್ರೇಣಿಕನು ಬೇಡರರಸನ ಮಗಳನ್ನು ಅಪೇಕ್ಷಿಸಿ ಅದಕ್ಕಾಗಿ ಜನ ಕಳುಹಿಸಿ, ಸಮ್ಮತಿ ಪಡೆದನು. ಶುಭ ದಿವಸ, ವಾರ, ನಕ್ಷತ್ರ, ಮುಹೂರ್ತದಲ್ಲಿ ಮದುವೆಯಾಗಿ ಕನ್ಯೆಯನ್ನು ಕೂಡಿಕೊಂಡು ತನ್ನ ಪಟ್ಟಣಕ್ಕೆ ಹೋಗಿ ಅವಳಿಗೆ ಚಿಳಾತ ಮಹಾದೇವಿ (ಚಿಳಾತ = ಕಿರಾತ) ಎಂದು ಹೆಸರನ್ನಿಟ್ಟು ಹೀಗೆಯೇ ಇಷ್ಟವಾದ ವಿಷಯದ ಕಾಮಸುಖಗಳನ್ನು ಅನುಭವಿಸುತ್ತ ಹಲವು ಕಾಲ ಕಳೆಯಿತು. ಅನಂತರದಲ್ಲಿ ಇತ್ತ ಆ ನಾಡಿನಲ್ಲಿ ಸರಕು ಗಾಡಿಗಳಿಗೆ ಯಜಮಾನನಾದ ನಂದಿಮಿತ್ರಸೆಟ್ಟಿ ವ್ಯಾಪಾರದ ಸರಕಿನೊಂದಿಗೆ ವ್ಯಾಪಾರಕ್ಕಾಗಿ ಹೋಗುತ್ತಿದ್ದನು. ಆತನು ಎಡೆಯಲ್ಲಿ ಒಂದು ಊರಲ್ಲಿ ತಂಗಿದ್ದನು. ಹೀಗಿರಲು ತಪೋವರರೆಂಬ ಒಂಟಿಯಾಗಿ ಸಂಚರಿಸುವ ಜೈನಯತಿಗಳು ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖ ಎಂಬ ಭೂಭಾಗಗಳಲ್ಲಿ ಸಂಚಾರ ಮಾಡುತ್ತ ಬರತಕ್ಕವರು ಆ ವರ್ತಕನು ತಂಗಿದ್ದ ಊರಿಗೆ ಬಂದು ಪಂಥಾತಿಚಾರ (ದಾರಿ ನಡೆವಾಗ ಆಗುವ ಪ್ರಾಣಿಹಿಂಸೆ ಮುಂತಾದ ಅತಿಚಾರಗಳಿಗೆ ಪ್ರಾಯಶ್ಚಿತ್ತ) ನಿಯಮವನ್ನು ಮಾಡಿ ಹಗಲು ಹೊತ್ತಿನಲ್ಲಿ ದೇವರನ್ನು ವಂದಿಸಿ ಊರಿಗೆ ಭಿಕ್ಷೆಗಾಗಿ ಹೋದರು. ಊರೆಲ್ಲವನ್ನೂ ತಿರ್ರನೆ ತಿರುಗಿ ಸುತ್ತಾಡಿದರೂ ಯಾರೂ ಊಟಕ್ಕೆ ನಿಲ್ಲಿಸಲಿಲ್ಲ. ಊರಿನಿಂದ ಹೊರಟು ಹೋಗತಕ್ಕ ಋಷಿಗಳನ್ನು ನಂದಿಮಿತ್ರನು ಕಂಡು ದಯೆಯಿಂದ ನಿಲ್ಲಿಸಿಕೊಂಡು ಎಳ್ಳಿನ ಉಂಡೆಗಳನ್ನು ಕೊಟ್ಟನು. ಋಷಿಗಳು ಅದನ್ನು ಭಿಕ್ಷೆಯಾಗಿ ಮಾಡಿ ಜೀವಜಂತುವಿಲ್ಲದೆ ನಿರ್ಮಲವಾದ ನೀರನ್ನು

ನೀರಂ ಕುಡಿದು ಪರಸಿ ಪೋದರಾ ನಂದಿಮಿತ್ರನುಂ ಪಲಕಾಲಂ ಬರ್ದಾಯುಷ್ಯಾಂತದೊಳ್ ಜಂಬೂದ್ವೀಪದ ಹೈಮವತಮೆಂಬ ಜಘನ್ಯಭೋಗಭೂಮಿಯೊಳೊಂದು ಪಳಿತೋಪಮಾಯುಷ್ಯ ಮನೊಡೆಯೊಂ ಭೋಗಭೂಮಿಜನಾಗಿ ಪುಟ್ಟಿದೊಂ ಪುಟ್ಟಿಯಲ್ಲಿ

ವೃತ್ತ ॥ ಮದ್ಯಾಂಗ ತೂರ್ಯಾಂಗ ವಿಭೂಷಣಾಂಗಾ
ಜ್ಯೋತಿರ್ಗೃಹಾ ಭೋಜನ ಭಾಜನಾಂಗಾಃ
ಪ್ರದೀಪ ವಸ್ತ್ರಾಂಗ ವರಸ್ರಜಾಂಗಾ
ದಶಪ್ರಕಾರಾಸ್ತರವಸ್ತು ತತ್ರ ॥

ಅಂತು ಪತ್ತುಂ ತೆಱದ ವೃಕ್ಷಂಗಳ್ ಭೋಗಂಗಳಂ ಕುಡೆ ಪಲಕಾಲಂ ಭೋಗೋಪಭೋಗಂಗಳನನುಭವಿಸಿಯಾಯುಷ್ಯಾಂತದೊಳ್ ಮಂದರದ ನಂದನಮೆಂಬ ವನದೊಳ್ ವ್ಯಂತರದೇವನಾಗಿ ಪುಟ್ಟಿ ಅಲ್ಲಿಂ ಬಟ್ಟೆ ಬಂದು ರಾಜಗೃಹದೊಳ್ ಉಪಶ್ರೇಣಿಕಂಗಂ ಚಿಲಾತ ಮಹಾದೇವಿಗಂ ಚಿಲಾತಪುತ್ರನೆಂಬೊಂ ಪಿರಿಯ ಮಗನಾಗಿ ಪುಟ್ಟಿದನಲ್ಲಿಂ ಬಟೆಯಂ ಜಯಾವತಿಯೆಂಬ ಪಿರಿಯ ಮಹಾದೇವಿಗೆ ಶ್ರೇಣಿಕನೆಂಬೊಂ ಮಗನಾಗಿ ಪುಟ್ಟಿದನುಟೆದರಸಿಯರ್ಕಳ್ಗಂ ಮಕ್ಕಳ್ ಪುಟ್ಟಿದರಂತೆಲ್ಲಮುಪಶ್ರೇಣಿಕಂಗೆ ಮಕ್ಕಳಯ್ನೂರ್ವರಂತುಪಶ್ರೇಣಿಕನಯ್ನೂರ್ವರ್ ಮಕ್ಕಳ್ವೆರಸು ಭೋಗೋಪಭೋಗಂಗಳನನುಭವಿಸುತ್ತುಂ ಕಾಲಂ ಸಲೆ ಮತ್ತೊಂದು ದಿವಸಂ ನೈಮಿತ್ತಿಕನನರಸಂ ಬೆಸಗೊಂಡನೆನ್ನ ಮಕ್ಕಳೊಳಗೆ ರಾಜ್ಯಾರ್ಹರಾರೆಂದು ಬೆಸಗೊಂಡೊಡಾತನಿಂತೆಂದನಯ್ನೂರ್ವರ್

ಕುಡಿದು ಆಶೀರ್ವಾದ ಮಾಡಿ ತೆರಳಿದರು. ಆ ನಂದಿಮಿತ್ರನು ಹಲವು ಕಾಲ ಬಾಳಿ ಆಯುಷ್ಯ ಕೊನೆಗೊಳ್ಳಲು ಜಂಬೂದ್ವೀಪದ ಹೈಮವತವೆಂಬ ನೀಚವಾದ ಭೋಗ ಭೂಮಿಯಲ್ಲಿ ಒಂದು ಪಳಿತಕ್ಕೆ (ಪಳಿತ ಎಂಬುದು ಒಂದು ದೊಡ್ಡ ಸಂಖ್ಯೆ) ಸಮಾನವಾದ ಆಯುಷ್ಯವುಳ್ಳವನಾಗಿ ಭೋಗ ಭೂಮಿಯವನಾಗಿ ಹುಟ್ಟಿದನು. (ಆ ಭೋಗಭೂಮಿಯಲ್ಲಿ ಮದ್ಯವನ್ನು, ವಾದ್ಯಗಳನ್ನು, ಆಭರಣಗಳನ್ನು, ಬೆಳಕನ್ನು, ಮನೆಯನ್ನು, ಊಟವನ್ನು, ಪಾತ್ರೆಗಳನ್ನು, ದೀಪವನ್ನು, ವಸ್ತ್ರವನ್ನು, ಹೂಮಾಲೆಗಳನ್ನು ಕೊಡುವ ಹತ್ತು ಬಗೆಯ ಮರಗಳು ಇರುತ್ತವೆ.) ಅಂತು ಹತ್ತು ಬಗೆಯ ಮರಗಳು ಸುಖಗಳನ್ನು ಕೊಡಲು ಹಲವು ಕಾಲದವರೆಗೆ ಭೋಗ ಉಪಭೋಗಗಳನ್ನು ಅನುಭವಿಸಿ ಆಯುಷ್ಯ ಕೊನೆಗೊಂಡಾಗ ಮಂದರ ಪರ್ವತದ ನಂದನವೆಂಬ ಕಾಡಿನಲ್ಲಿ ವ್ಯಂತರ ದೇವನಾಗಿ ಹುಟ್ಟಿದನು. ಅಲ್ಲಿಂದ ಜಾರಿ ಬಂದು ರಾಜಗೃಹದಲ್ಲಿ ಉಪಶ್ರೇಣಿಕ ಮಹಾರಾಜನಿಗೂ ಚಿಲಾತ ಮಹಾರಾಣಿಗೂ ಚಿಲಾತಪುತ್ರನೆಂಬ ಹಿರಿಯ ಮಗನಾಗಿ ಹುಟ್ಟಿದನು. ಅದರ ನಂತರ ಜಯಾವತಿಯೆಂಬ ಹಿರಿಯ ಮಹಾರಾಣಿಗೆ ಶ್ರೇಣಿಕನೆಂಬವನು ಮಗನಾಗಿ ಜನಿಸಿದನು. ಉಳಿದ ರಾಣಿಯರಿಗೂ ಮಕ್ಕಳು ಹುಟ್ಟಿದರು. ಅಂತು ಎಲ್ಲ ಸೇರಿ, ಉಪಶ್ರೇಣಿಕನಿಗೆ ಐನೂರು ಮಂದಿ ಮಕ್ಕಳಾದರು. ಅಂತು ಉಪಶ್ರೇಣಿಕನು ಐನೂರು ಮಂದಿ ಮಕ್ಕಳನ್ನು ಕೂಡಿಕೊಂಡು ಭೋಗೋಪಭೋಗಗಳನ್ನು ಅನುಭವಿಸುತ್ತಿದ್ದನು. ಹೀಗೆಯೇ ಕಾಲ ಕಳೆಯುತ್ತಿತ್ತು. ಆಮೇಲೆ ಒಂದು ದಿವಸ ಉಪಶ್ರೇಣಿಕ ರಾಜನು ಜೋಯಿಸನನ್ನು ತನ್ನ ಮಕ್ಕಳ ಕುರಿತಾಗಿ ಪ್ರಶ್ನೆಮಾಡಿದನು. "ನನ್ನ ಮಕ್ಕಳಲ್ಲಿ ರಾಜ್ಯಾಧಿಕಾರಕ್ಕೆ ತಕ್ಕವರಾದವರು ಯಾರು?" ಎಂದು

ಮಕ್ಕಳೊಂದೆ ಪಂತಿಯೊಳ್ ತುಯ್ಯಲಂ ಬಡ್ಡಿಸಿಯಯ್ನೂಱು ನಾಯನವರ ಮೇಗೆ ಬಿಟ್ಪೊಡಾವನೊರ್ವನಂಜದುಣ್ಗುಮಾತನಕ್ಕುಂ ಮತ್ತರಮನೆಯೊಳ್ ಕಿರ್ಚಿರ್ದೊಡಾವನೊರ್ವಂ ಸಿಂಹಾಸನಮುಂ ಬೆಳ್ಗೊಡೆಯುಂ ಪಾಳಿದ್ವಜಂ ಮೊದಲಾಗೊಡೆಯ ರಾಜಚಿಹ್ನಂಗಳಂ ಕೈಕೊಳ್ಗುಮಾತಂ ರಾಜ್ಯಕ್ಕರ್ಹನಕ್ಕುಮೆಂದು ಪೇೞ್ದೊಡದಂ ಕೇಳ್ದೊಂದು ದಿವಸಮರಸನವರ್ಗುಣಲಿಕ್ಕವೇೞ್ದು ಪರೀಕ್ಷಿಸಿ ನೋಡಿದೊಡೆ ಶ್ರೇಣಿಕಂ ನಾಯ್ಗಳ್ಗೆ ತುಯ್ಯಲನಿಕ್ಕಿ ತಾನುಮುಂಡೊನುಟಿದರೆಲ್ಲರುಮೋಡಿದರ್ ಮತ್ತೊಂದುದಿವಸಮರಮನೆಯೊಳ್ ಕಿರ್ಚಿರ್ದೊಡುಟಿದ ಮಕ್ಕಳೆಲ್ಲಂ ಭಂಡಾರಂಗಳುಮಾನೆಗಳುಂ ಕುದುರೆಗಳುಂ ಜಯನಶಾಲೆಯುಮುಂ ಕೈಕೊಂಡರ್ ಶ್ರೇಣಿಕಂ ರಾಜ್ಯಚಿಹ್ನಂಗಳಂ ಕೈಕೊಂಡದಱಿಂದರಸನೀತಂ ರಾಜ್ಯಕ್ಕರ್ಹನಕ್ಕುಮಿಲ್ಲಿರ್ದೊಡೆ ಪಲಂಬರುಂ ಮುನಿವರ್ ಪ್ರಮಾದಮಕ್ಕುಮೆಂದು ಬಗೆದು ನೀಂ ನಾಯೊಡನುಂಡೆಯೆಮ್ಮ ರಾಜ್ಯಚಿಹ್ನಂಗಳಂ ಕೈಕೊಂಡೆಯೆಮ್ಮ ಬಾಬುತ್ತಿರೆಯರಸಿಂಗಾಟಸಿದೆಯೆಂದು ನೆವಮಿಟ್ಟಟ್ಟಿ ಕಳೆದನ್ ಆತನುಂ ದಕ್ಷಿಣ ಮಧುರೆಗೆ ವೋಗಿ ಇಂದ್ರದತ್ತನೆಂಬ ಸೆಟ್ಟಗಂ ಶ್ರೀಕಾಂತೆಯೆಂಬ ಪರದಿಗಂ ಮಗಳಭಯಮತಿಯೆಂಬೊಳಾಕೆಯಂ ಮದುವೆನಿಂದನಾಕೆಗಭಯಕುಮಾರನೆಂಬೊಂ ಮಗಂ ಪುಟ್ಟಿಯಿಂತಿಪ್ಪವಿಷಯ ಕಾಮಭೋಗಂಗಳನನುಭವಿಸುತ್ತಿರೆ ಮತ್ತಿತ್ತುಪಶ್ರೇಣಿಕಂ ಮಾರುಗಮೆಂಬ ಪೊಬಲನಾಳ್ವೊದ್ದಾಯನನೆಂಬ

ಕೇಳಲು ಜೋಯಿಸನು ಹೀಗೆಂದನು - "ಐನೂರು ಮಂದಿ ಮಕ್ಕಳಿಗೆ ಒಂದೇ ಪಂಕ್ತಿಯಲ್ಲಿ ಪಾಯಸವನ್ನು ಬಡಿಸಿ ಐನೂರು ನಾಯಿಗಳನ್ನು ಅವರ ಮೇಲೆ ಬಿಟ್ಟರೆ ಯಾವಾತನೊಬ್ಬನು ಹೆದರದೆ ಊಟಮಾಡುವನೋ ಅವನು ತಕ್ಕವನಾಗುವನು. ಅದಲ್ಲದೆ, ಅರಮನೆಯಲ್ಲಿ ಬೆಂಕಿ ಮೇಲೆದ್ದಾಗ ಯಾವನೊಬ್ಬನು ಸಿಂಹಾಸನ, ಶ್ವೇತಚ್ಛತ್ರ, ಪಾಳಿಧ್ವಜ ಮೊದಲಾಗುಳ್ಳ ರಾಜಚಿಹ್ನೆಗಳನ್ನು ಹಿಡಿದುಕೊಳ್ಳುವನೋ ಅವನು ರಾಜ್ಯಕ್ಕೆ ಅರ್ಹನಾಗುವನು" ಎಂದು ಹೇಳಿದನು. ಅದನ್ನು ಕೇಳಿ ಉಪಶ್ರೇಣಿಕನು ಒಂದು ದಿವಸ ಅವರೆಲ್ಲರಿಗೂ ಊಟವನ್ನಿಕ್ಕಲು ಹೇಳಿ ಪರೀಕ್ಷಿಸಿ ನೋಡಿದಾಗ, ಶ್ರೇಣಿಕನು ಮಾತ್ರ ನಾಯಿಗಳಿಗೆ ಪಾಯಸವನ್ನು ಇಕ್ಕಿ ತಾನೂ ಊಟಮಾಡಿದನು. ಉಳಿದವರೆಲ್ಲರೂ ಓಡಿಹೋದರು. ಆಮೇಲೆ ಒಂದು ದಿವಸ ಅರಮನೆಯಲ್ಲಿ ಬೆಂಕಿ ಮೇಲೆದ್ದಿತು. ಆಗ ಇತರ ಮಕ್ಕಳೆಲ್ಲರೂ ಭಂಡಾರದವರೂ ಆನೆಗಳೂ ಕುದುರೆಗಳೂ ಆಯುಧಾಗಾರವನ್ನು ಸೇರಿಕೊಂಡರು. ಶ್ರೇಣಿಕನು ರಾಜ್ಯಚಿಹ್ನಗಳನ್ನು ಹಿಡಿದುಕೊಂಡನು. ಆದುದರಿಂದ ಉಪಶ್ರೇಣಿಕ ರಾಜನು "ಈತನು ರಾಜ್ಯಾಧಿಕಾರಕ್ಕೆ ತಕ್ಕವನಾಗಿರುವನು. ಇವನು ಇಲ್ಲಿದ್ದರೆ ಹಲವರು ಸಿಟ್ಟಾಗುವರು. ತಪ್ಪುಗೆಲಸ ನಡೆದು ಹೋದೀತು" ಎಂದು ಭಾವಿಸಿ "ನೀನು ನಾಯಿಯೊಡನೆ ಊಟ ಮಾಡಿದೆ, ಮತ್ತು ನಮ್ಮ ರಾಜ್ಯಚಿಹ್ನೆಗಳನ್ನು ಹಿಡಿದುಕೊಂಡೆ, ನಾನು ಬದುಕಿರುವಾಗ ಅರಸುತನಕ್ಕೆ ಅಪೇಕ್ಷೆ ಮಾಡಿದೆ" ಎಂದು ನೆಪವನ್ನಿಟ್ಟು ಓಡಿಸಿಬಿಟ್ಟನು. ಶ್ರೇಣಿಕನು ದಕ್ಷಿಣ ಮಧುರೆಗೆ ಹೋದನು. ಇಲ್ಲಿ ಇಂದ್ರದತ್ತನೆಂಬ ಸೆಟ್ಟಿಗೂ ಶ್ರೀಕಾಂತೆಯೆಂಬ ಸೆಟ್ಟಿತಿಗೂ ಅಭಯಮತಿ ಎಂಬ ಮಗಳಿದ್ದಳು. ಶ್ರೇಣಿಕನು ಅವಳನ್ನು ಮದುವೆಯಾದನು. ಆಕೆಯಲ್ಲಿ ಅಭಯಕುಮಾರನೆಂಬ ಮಗನು ಹುಟ್ಟಿದನು. ಹೀಗೆ ಅವರು ಇಷ್ಟವಿಷಯದ ಕಾಮಭೋಗಗಳನ್ನು ಅನುಭವಿಸುತ್ತ ಇದ್ದರು. ಆಮೇಲೆ,ಇತ್ತ ಉಪಶ್ರೇಣಿಕನು ಮಾರುಗವೆಂಬ ಪಟ್ಟಣವನ್ನು ಆಳುವ ಒದ್ದಾಯನನೆಂಬ ಮಹಾಸಾಮಂತನಿಗೆ ಈ

ಮಹಾಸಾಮಂತಂಗಿಂತೆಂದು ಪೇಟ್ಟಟ್ಟದನುಜ್ಞೇನಿಯನಾಳ್ದ ಪ್ರದ್ಯೋತನೆಂಬರಸನೀಗಳೆಮ್ಮನುಱದಿ ರ್ಪೊನಾತನಂ ಪಿಡಿದು ಕಟ್ಟಕೊಂಡು ಬರ್ಕೆಂದು ಬೆಸವೇಟ್ಟಟ್ಟದೊಡಾತನುಂ ತನ್ನುಳ್ಳ ಚಾತುರ್ದಂತ ಬಲಮೆಲ್ಲಮಂ ಕೂಡಿಕೊಂಡು ಆತನ ಮೇಗೆಟ್ಟು ಕಾದಿದೊಡೆ ಪ್ರದ್ಯೋತಂ ಕಾಳಿಗಮಂ ಗೆಲ್ದೊದ್ದಾಯನನಂ ಪಿಡಿದು ಕಟ್ಟ ಸೆಱೆಯಿಟ್ಟಂ ಮತ್ತೆ ವಿಜಯನೆಂಬ ಕುಮಾರನುಂ ಪಿರಿದು ತಂತ್ರಂ ಬೆರಸು ಪೋಗಿ ಏನಾನುಮೊಂದುವಾಯದಿಂದೊದ್ದಾಯನನ ಸೆಱೆಯಂ ಬರ್ಮಂಕಿಸಿ ರಾಜಗೃಹಕ್ಕೊಡಗೊಂಡು ಪೋದೊಡೆ ಪ್ರದ್ಯೋತಂ ಮುಳಿದವರ ನಾಡಂ ಸೂಱೆಗೊಳುತ್ತಂ ಸುಡುತ್ತಂ ಕಿಡಿಸುತ್ತಂ ಉಪಶ್ರೇಣಿಕನ ಮೇಗೆ ಪೋಗೆಯಾತನ ಬರವನಱೆದುಪಶ್ರೇಣಿಕಂ ತನ್ನ ಪೊಬಲೊಳ್ ಘೋಷಣೆಯನಿಂತೆಂದು ತೊಬಲ್ಚಿದನಾವನೊರ್ವಂ ಪ್ರದ್ಯೋತನಂ ಪಿಡಿದು ಕಟ್ಟಕೊಂಡು ಬರ್ಕುಮಾತಂಗಾತನ ಬೇದಿದೊಸಗೆಯಂ ಕುಡುವೆನೆಂದು ತೊಬಲ್ಚ ಗೋಸನೆಯಂ ಚಿಲಾತಪುತ್ರಂ ಕೇಳ್ದು ಪಿಡಿದರಸಂಗೆ ಪೇಟ್ದು ಪಿರಿದುಂ ತಂತ್ರಂ ಬೆರಸು ಪೋಗಿ ಚರಪುರುಪರನಟ್ಟಿ ಬೇಗಂ ದಾಟಿಪೋಗಿ ಜಲಕ್ರೀಡೆಯಾಡುವನನಿಱೆದು ಪಿಡಿದು ಕಟ್ಟಕೊಂಡುಪಶ್ರೇಣಿಕಂಗೊಪ್ಪಿಸಿದೊಡಾತನು ಮಾವಮಾನುಂ ಮೆಚ್ಚಿಯೊಸಗೆಯಂ ಬೇಡಿಕೊಳ್ ನಿನ್ನ ಬೇಡಿದುದೆಲ್ಲಮನೀವೆನೆಂದರಸಂ ನುಡಿದೊಡಾತನಿಂತೆಂದಂ ನಿಮ್ಮ ಪ್ರಸಾದದಿಂದೆನಗೆಲ್ಲಮುಂಟು ಒಂದಂ ಬೇಡುವೆಂ ನಿಮ್ಮಂತಃಪುರಮುಟೆಯೆ ಪನ್ನೆರಡು ವರ್ಷಂಬರೆಗಂ ಪೆಂಡಿರ್ಕಳೊಳಿಲ್ಲಮೆನ್ನ ಮೆಚ್ಚದಂತೆ ಸಯ್ತಂ

ರೀತಿಯಾಗಿ ಹೇಳಿ ಕಳುಹಿಸಿದನು - "ಉಜ್ಜಯನಿಯನ್ನು ಆಳುತ್ತಿರುವ ಪ್ರದ್ಯೋತನೆಂಬ ರಾಜನು ನನ್ನನ್ನು ಅಲಕ್ಷ್ಯಮಾಡುತ್ತಿದ್ದಾನೆ. ಅವನನ್ನು ಹಿಡಿದು ಬಂಧಿಸಿಕೊಂಡು ಬನ್ನಿ" ಎಂದು ಆಜ್ಞೆ ಮಾಡಿ ಕಳುಹಿಸಲು, ಆತನು ತನ್ನಲ್ಲಿದ್ದ ಚತುರಂಗ ಸೈನ್ಯವೆಲ್ಲವನ್ನೂ ಕೂಡಿಕೊಂಡು ಪ್ರದ್ಯೋತನ ಮೇಲೆ ಬಿದ್ದು ಕಾದಾಡಿದನು. ಆಗ ಪ್ರದ್ಯೋತನು ಯುದ್ಧದಲ್ಲಿ ಗೆದ್ದು ಒದ್ದಾಯನನನ್ನು ಹಿಡಿದು ಸೆರೆಮನೆಯಲ್ಲಿ ಇಟ್ಟನು. ಅಮೇಲೆ ವಿಜಯನೆಂಬ ಕುಮಾರನು ಹೆಚ್ಚು ಸೈನ್ಯವನ್ನು ಕೂಡಿಕೊಂಡು ಹೋಗಿ, ಯಾವುದೋ ಒಂದು ಉಪಾಯದಿಂದ ಒದ್ದಾಯನನನ್ನು ಸೆರೆಯಿಂದ ಪಾರು ಮಾಡಿ, ಅವನನ್ನು ಕೂಡಿಕೊಂಡು ರಾಜಗೃಹಕ್ಕೆ ಹೋದನು. ಆಗ ಪ್ರದ್ಯೋತನು ಕೋಪಗೊಂಡು ಮಗಧೆಯ ನಾಡನ್ನು ಸೂರೆಮಾಡುತ್ತ ಸುಡುತ್ತ ಕೆಡಿಸುತ್ತ ಉಪಶ್ರೇಣಿಕನ ಮೇಲೆ ದಂಡೆತ್ತಿ ಹೋದನು. ಪ್ರದ್ಯೋತನ ಬರುವಿಕೆಯನ್ನು ತಿಳಿದು ಉಪಶ್ರೇಣಿಕನು ತನ್ನ ಪಟ್ಟಣದಲ್ಲಿ ಈ ರೀತಿಯಾಗಿ ಘೋಷಣೆಯನ್ನು ಸಾರಿಸಿದನು. "ಯಾವಾತನೊಬ್ಬನು ಪ್ರದ್ಯೋತನನ್ನು ಹಿಡಿದು ಕಟ್ಟಿಕೊಂಡು ಬರುವನೋ ಆತನಿಗೆ ಅವನು ಬಯಸಿದ ಮೆಚ್ಚನ್ನು ಕೊಡುವೆನು" ಈ ರೀತಿಯಾಗಿ ಪಟ್ಟಣದಲ್ಲಿ ಸುತ್ತುವ ಡಂಗುರವನ್ನು ಚಿಲಾತಪುತ್ರನು ಕೇಳಿ ಅದನ್ನು ತಾನು ಕೈಗೊಂಡು ರಾಜನಿಗೆ ತಿಳಿಸಿ ದೊಡ್ಡದಾದ ಸೈನ್ಯವನ್ನು ಕೂಡಿಕೊಂಡು ಹೋದನು. ದೂತರನ್ನು ಕಳುಹಿಸಿದನು. ಬೇಗನೆ ದಂಡೆತ್ತಿಕೊಂಡು ಹೋಗಿ ಜಲಕ್ರೀಡೆಯಾಡುತ್ತಿದ್ದ ಪ್ರದ್ಯೋತನನ್ನು ತಿವಿದು ಹಿಡಿದು ಬಂಧಿಸಿಕೊಂಡು ಉಪಶ್ರೇಣಿಕನಿಗೆ ಒಪ್ಪಿಸಿದನು. ಉಪಶ್ರೇಣಿಕನು ಬಹಳವಾಗಿ ಮೆಚ್ಚಿ, "ನಿನಗೆ ಪ್ರಿಯವಾದುದನ್ನು ಬೇಡಿಕೋ. ನೀನು ಬೇಡಿದುದೆಲ್ಲವನ್ನೂ ಕೊಡುವೆನು" - ಎಂದು ರಾಜನು ಹೇಳಿದಾಗ ಆತನು ಹೀಗೆಂದನು - "ನಿಮ್ಮ ಅನುಗ್ರಹದಿಂದ ನನಗೆ ಎಲ್ಲವೂ ಉಂಟು. ಒಂದನ್ನು ಮಾತ್ರ ನಿಮ್ಮಲ್ಲಿ ಬೇಡುತ್ತೇನೆ. ನಿಮ್ಮ ಅಂತಃಪುರದ ಸ್ತ್ರೀಯರನ್ನು ಮಾತ್ರ ಬಿಟ್ಟು ಹನ್ನೆರಡು ವರ್ಷಗಳವರೆಗೆ ಇತರ

ಬಾಲ್ಟಿನಿದಂ ಬೇಡಿದೆನಿದನೆನಗೆ ದಯೆಗೆಯ್ದು ಸಲಿಸುವುದೆಂದೊಡೆ ಅರಸನುಮಂತೆಗೆಯ್ಯೆಂದೊಡೊ ಸಗೆಯಂ ಪೆತ್ತು ಪ್ರಸಾದಮೆಂದು ಪೊಡೆಮಟ್ಟು ಸಾಮಂತ ಮಹಾಸಾಮಂತ ಪರಿವಾರದೆಱತನಿಗರ ಪಾರ್ವರ ಪರದರೊಳ್ದಂದಿರ್ಕಳಿಲ್ಲರುಮನೆಱೆದು ಬಗ್ಗಿಸಿಯುಮೊಟ್ಟಯಿಸಿಯುಂ ಕೊಂಡವರೊಳ್ ಬಾಬುತ್ತಮಿಂತು ಪನ್ನೆರಡು ವರುಷಂ ಬರೆಗಂ ತನ್ನಿಚ್ಛೆಯೊಳ್ ಬಲ್ದವಧಿಯ ದಿವಸಂ ನೆಱೆದೊದರಸನಿಂತಪ್ಪ ಗೊಡ್ಡಮನಿನ್ನಾಡಲ್ ಸಲ್ದೆಂದು ಬಾರಿಸಿದೊಡಂ ಉಟೆಯದೆ ತನ್ನ ಮೆಚ್ಚದಂತೆ ಬಾಱೆ ಅರಸಂ ಮುಳಿದು ನಾಡಿಂದಿರದಟ್ಟಿ ಕಳಿದೊಡಾತನುಮಡವಿಯೊಳ್ ಮಹೇಂದ್ರನೆಂಬ ತಾಪಸನ ಪಕ್ಕಕ್ಕೆವ್ಪೋಗಿಯಲ್ಲಿಯ ದುರ್ಗಮಮಪ್ಪೆಡೆಯೊಳ್ ಪೊಬಲಂ ಮಾಡಿಯದರ್ಕೆ ಬಳಸಿಯುಂ ಕೊಂಟೆಯುಂ ಗೋಪುರದ್ವಾರಮುಮುಂ ಮಾಡಿ ಕೆಲದೂರ್ಗಳನೊಟ್ಟಯಿಸಿಯು ಮೋದಿಸಿಯುಮೆಱೆದು ಸೂಱೆಗೊಂಡುಮಿಂತು ಪಲವು ಕಾಲಂ ಸುಖದಿಂ ಬಾಬುತ್ತಿರ್ಪನ್ನೆಗಂ ಇತ್ತಲುಪಶ್ರೇಣಿಕಂ ಕರ್ಮಂಗಳುಪಶಮಂ ಕಾರಣಮಾಗಿ ಯಮಧರ ಭಟ್ಟಾರರ ಪಕ್ಕದೆ ಧರ್ಮಮಂ ಕೇಳ್ದು ಶ್ರಾವಕವ್ರತಂಗಳಂ ಕೈಕೊಂದು ವೈರಾಗ್ಯಪರಾಯಣನಾಗಿ ಶ್ರೇಣಿಕಂಗಂ ಬಟೆಯಟ್ಟಿ ಬರಿಸಿ ರಾಜ್ಯಪಟ್ಟಂಗಟ್ಟಿ ಯಮಧರ ಭಟಾರರ ಪಕ್ಕದೆ ತಪಂಬಟ್ಟು ಪಲಕಾಲಂ ತಪಮೊಳ್ ನೆಗಟ್ಟು

ಹೆಂಗುಸರೊಡನೆ ನನಗೆ ಮೆಚ್ಚಿಕೆಯಾದಂತೆ ನೇರವಾಗಿ (ಮುಚ್ಚುಮರೆಯಿಲ್ಲದೆ) ಬಾಳ್ವೆ ನಡೆಸುವೆನು. ಇದನ್ನು ನಿಮ್ಮಲ್ಲಿ ಬೇಡಿದ್ದೇನೆ. ಇದನ್ನು ನನಗೆ ದಯೆ ಮಾಡಿ ಸಲ್ಲಿಸಬೇಕು" ಎಂದು ಹೇಳಲು, ಅರಸನು 'ಹಾಗೆಯೇ ಮಾಡು' ಎಂದು ಹೇಳಿದನು. ಚಿಲಾತಪುತ್ರನು ತಾನು ಬಯಸಿದ ಮೆಚ್ಚನ್ನು ಪಡೆದು, 'ಪ್ರಸಾದ' ಎಂದು ಸಾಷ್ಟಾಂಗ ವಂದಿಸಿ, ಸಾಮಂತ ಮಹಾಸಾಮಂತರು, ಪರಿವಾರದವರು, ಪ್ರಭುತ್ವವುಳ್ಳವರು, ಬ್ರಾಹ್ಮಣರು, ವರ್ತಕರು - ಇವರ ಒಳ್ಳೊಳ್ಳೆಯ ಪತ್ನಿಯರನ್ನೆಲ್ಲ ಎಳೆದು, ವಿಧೇಯರನ್ನಾಗಿ ಮಾಡಿ, ಒಡಗೂಡಿ, ಅವರೊಡನೆ ಬಾಳುತ್ತ, ಹೀಗೆ ಹನ್ನೆರಡು ವರ್ಷಗಳವರೆಗೆ ತನ್ನ ಇಚ್ಛೆಯ ಪ್ರಕಾರ ಬಾಳುವೆ ನಡೆಸಿದನು. ಅವಧಿಯ ದಿವಸ ಬಂದಾಗ, ರಾಜನು - "ಇಂತಹ ಚೇಷ್ಟೆಗಳನ್ನು ಅಡಲು ಸಲ್ಲದು" ಎಂದು ತಡೆದರೂ ಬಿಟ್ಟು ಬಿಡದೆ, ತನಗೆ ಮೆಚ್ಚಿಕೆಯಾದಂತೆ ಬಾಳುತ್ತಿದ್ದನು. ಆಗ ರಾಜನು ಕೋಪಗೊಂಡು ಅವನನ್ನು ನಾಡಿನಿಂದಲೇ ಒಡನೆಯೇ ಅಟ್ಟಿಬಿಟ್ಟನು. ಅತನು ಕಾಡಿನಲ್ಲಿ ಮಹೇಂದ್ರನೆಂಬ ತಪಸ್ವಿಯ ಬಳಿಗೆ ಹೋಗಿ, ಅಲ್ಲಿ ಇತರರಿಗೆ ಬರಲು ಸಾಧ್ಯವಾಗದ ಕಡೆಯಲ್ಲಿ ಪಟ್ಟಣವನ್ನು ನಿರ್ಮಿಸಿ, ಅದಕ್ಕೆ ಸುತ್ತಲಾಗಿ ಕೋಟೆಯನ್ನೂ ಗೋಪುರದ ಬಾಗಿಲನ್ನೂ ಮಾಡಿ, ಸಮೀಪದ ಊರುಗಳನ್ನು ಗೆದ್ದು ಸೇರಿಸಿಕೊಳ್ಳುತ್ತ, ಎದುರಿಸಿದವರನ್ನು ಓಡಿಸಿಯೂ ಎಳೆದು ಸೂರೆಮಾಡಿಯೂ ಹೀಗೆ ಹಲವು ಕಾಲ ಸುಖದಿಂದ ಬಾಳುತ್ತಿದ್ದನು. ಹೀಗಿರಲು ಇತ್ತ ಉಪಶ್ರೇಣಿಕನು ಕರ್ಮಗಳ ಉಪಶಮನವೇ ಕಾರಣವಾಗಿ ಯಮಧರರೆಂಬ ಋಷಿಗಳ ಬಳಿಯಲ್ಲಿ ಧರ್ಮವನ್ನು ಕೇಳಿ ಶ್ರಾವಕವ್ರತಗಳನ್ನು ಸ್ವೀಕರಿಸಿ ವೈರಾಗ್ಯದಲ್ಲಿ ತತ್ಪರನಾಗಿ ಶ್ರೇಣಿಕನ ಬಳಿಗೆ ಜನ ಕಳುಹಿಸಿ ಬರಮಾಡಿ ಅವನಿಗೆ ರಾಜ್ಯದ ಪಟ್ಟವನ್ನು ಕಟ್ಟಿದನು. ಆಮೇಲೆ ಯಮಧರ ಋಷಿಗಳ ಬಳಿಯಲ್ಲಿ ತಪೋದೀಕ್ಷೆಯನ್ನು ಸ್ವೀಕರಿಸಿ ಹಲವು ಕಾಲ ತಪಸ್ಸನ್ನು ಆಚರಿಸಿ ಸಮಾಧಿಮರಣದಿಂದ ಸ್ವರ್ಗಲೋಕದಲ್ಲಿ ಜನಿಸಿದನು. ಆಮೇಲೆ ಇತ್ತ ಶ್ರೇಣಿಕ ಮಹಾರಾಜನು ಅರಸುತನ

ಸಮಾಧಿಮರಣದಿಂದಂ ಸ್ವರ್ಗದೊಳ್ ಪುಟ್ಟದೊಂ ಮತ್ತಿತ್ತ ಶ್ರೇಣಿಕ ಮಹಾರಾಜನರಸುಗೆಯ್ಯುತ್ತಿರ್ಪನ್ನೆಗಂ ಚಿಲಾತಪುತ್ರನಾಳ್ ಭಟ್ಟಮಿತ್ರನೆಂಬೊನಾತನ ಸೋದರಮಾವಂ ರುದ್ರಮಿತ್ರನೆಂಬೊಂ ರಾಜಗೃಹದೊಳಿರ್ಪೊನಾತನ ಮಗಳ್ ಸುಭದ್ರೆಯೆಂಬೊಳಾಕೆಯಂ ಭಟ್ಟಮಿತ್ರಂ ಬೇಡಿದೊಡಾಕೆಯನಾತಂಗೆ ಕುಡದೆ ಪೆಱರ್ಗೆ ಕುಡಲ್ ತಗುಳ್ದೊಡಾತನುಂ ತಮ್ಮರಸಂಗಿಂತೆಂದು ಪೇೞ್ದನೆನ್ನ ಸೋದರಮಾವಂ ತನ್ನ ಮಗಳನೆನಗೆ ಕೆಱೆಯಂದೆ ಕುಡುವೆನೆಂದು ನುಡಿದನೀಗಳ್ ಪೆಱರ್ಗೆ ಕೊಟ್ಪೆನ್ನಿಂದುಂ ಮದುವೆ ನೆರೆವುದೆಂದು ಪೇೞ್ದೊಡಾತನುಮಯ್ನೂರ್ವರ್ ಸುಭಟರನಾಯ್ದುಕೊಂದು ಪೊಱಮಟ್ಟಿವಂದು ಮೊಗವಡಂಗವಿದಿರ್ದ ಕೂಸಂ ಭಟ್ಟಮಿತ್ರಂಗೆ ಕುದಿಮೆಂದು ಕೀೞ್ ಚಿಲಾತಪುತ್ರಂ ಬೇಡಿದೊಡಂ ಕುಡದಿರ್ದೊಡೆ ಮುಳಿದೆೞ್ದುಕೊಂದು ಪೋದೊಡೆ ಶ್ರೇಣಿಕ ಮಹಾರಾಜಂಗೆ ಪುಯ್ಕಲಿಟ್ಟೊಡಾತನುಮಾ ಪುಯ್ಕಲಂ ಕೇೞ್ದು ಅನ್ಯಾಯದೊಳ್ ನೆಗೞ್ದಾತನಂ ಕೊಂದು ಕೂಸಂ ಕೊಂದು ಬನ್ನಿಮೆಂದು ಸಾಮಂತ ಮಹಾಸಾಮಂತ ಮಕುಟಬದ್ಧರ್ಕಳ್ಗೆ ಬಿಸವೇೞ್ದೊಡವರುಂ ಬಟೆಯನೆ ತಗುಳ್ದರನ್ನೆಗಂ ಪೋಗಲ್ ಪಾಂಗಿಲ್ಲದೆ ಚಿಲಾತಪುತ್ರಂ ಕನ್ನೆಯಂ ಕೊಂಡನಾಕೆಯುಂ ಸತ್ತಾ ಪೊಱಲೊಳ್ ವ್ಯಂತರದೇವತೆಯಾಗಿ ಪುಟ್ಟಿರ್ದಳ್ ತಾನುಂ ಬೇಗಂ ಪೋಗಿ ವೈಭಾರಮೆಂಬ ಪರ್ವತಮನೇಱಿದೊನಾ ಪರ್ವತದ ಮೇಗೆ ಸರ್ವಗುಪ್ತರೆಂಬಾಚಾರ್ಯರವಧಿ ಜ್ಞಾನಿಗಳ್ ಅಯ್ನೂರ್ವರ್ ಶಿಷ್ಯರ್ಕಳ್ವೆರಸಿರ್ದೊಂ ಕಂದು ಬೇಗಮೆನಗೆ ಸಂಕ್ಷೇಪದಿಂ ಧರ್ಮಮಂ ಪೇೞಿಮೆಂದೊಡೆ ಭಟಾರರಿಂತೆಂದು ಪೇೞ್ದರ್

ನಡೆಸುತ್ತಿದ್ದಾಗ - ಚಿಲಾತಪುತ್ರನ ಸೇವಕನಾದ ಭಟ್ಟಿಮಿತ್ರನೆಂಬವನಿದ್ದನು. ಭಟ್ಟಿಮಿತ್ರನ ಸೋದರಮಾವ ರುದ್ರಮಿತ್ರನು ರಾಜಗೃಹದಲ್ಲಿದ್ದನು. ರುದ್ರಮಿತ್ರನ ಮಗಳು ಸುಭದ್ರೆಯೆಂಬವಳು. ಆಕೆಯನ್ನು ತನಗೆ ಕೊಡಬೇಕೆಂದು ಭಟ್ಟಿಮಿತ್ರನು ಕೇಳಿದಾಗ, ಆಕೆಯನ್ನು ಅವನಿಗೆ ಕೊಡದೆ ಬೇರೆಯವರಿಗೆ ಕೊಡಲು ಮುಂದೆ ಬಂದುದರಿಂದ ಭಟ್ಟಿಮಿತ್ರನು ತಮ್ಮ ಅರಸನಾದ ಚಿಲಾತಪುತ್ರನಿಗೆ ಹೀಗೆ ಹೇಳಿದನು - "ನನ್ನ ಸೋದರಮಾವನು ತನ್ನ ಮಗಳನ್ನು ನನಗೆ ಕೊಡುವೆನೆಂದು ಚಿಕ್ಕಂದಿನಲ್ಲಿಯೇ ಹೇಳಿದ್ದಾನೆ. ಈಗ ಬೇರೆಯವರಿಗೆ ಕೊಡುತ್ತಿದ್ದಾನೆ. ಈ ದಿನ ಮದುವೆ ಏರ್ಪಡುವದು." ಎಂದ ಹೇಳಿದನು. ಆಗ ಚಿಲಾತಪುತ್ರನು ಐನೂರು ಮಂದಿ ಯೋಧರನ್ನು ಆರಿಸಿಕೊಂಡು ಪಟ್ಟಣಕ್ಕೆ ಬಂದು 'ಮುಖವಾಡವನ್ನು ಹಾಕಿಕೊಂಡಿದ್ದ ಕನ್ಯೆಯನ್ನು ಭಟ್ಟಿಮಿತ್ರನಿಗೆ ಕೊಡಿ' ಎಂದು ಕೂಗಿ ಹೇಳಿದನು. ಅದರೂ ಭಟ್ಟಿಮಿತ್ರನಿಗೆ ಕೊಡದಿದ್ದುದರಿಂದ ಅವನು ಕೋಪಗೊಂಡು ಆ ಕನ್ಯೆಯನ್ನು ಎಳೆದುಕೊಂಡು ಹೋದನು. ರುದ್ರಮಿತ್ರನು ಮಹಾರಾಜನಿಗೆ ದೂರು ಕೊಟ್ಟನು. ರಾಜನು ಆ ದೂರನ್ನು ಕೇಳಿ - "ಅನ್ಯಾಯದಲ್ಲಿ ಪ್ರವರ್ತಿಸಿದವನನ್ನೂ ಕೊಂದು ಕನ್ಯೆಯನ್ನು ಕೊಂದು ಬನ್ನಿ" ಎಂದು ಸಾಮಂತ ಮಹಾಸಾಮಂತ ಕಿರೀಟಾಧಿಪತಿಗಳಿಗೆ ಆಜ್ಞೆ ಮಾಡಿದನು. ಆಗ ಅವರು ಹಿಂದೆಯೇ ಅಟ್ಟಿಕೊಂಡು ಹೋದರು. ಅಷ್ಟರಲ್ಲಿ ಹೋಗಲು ಅವಕಾಶವಿಲ್ಲದೆ ಚಿಲಾತಪುತ್ರನು ಆ ಕನ್ಯೆಯನ್ನು ಕೊಂದನು. ಆಕೆ ಸತ್ತು ಆ ಪಟ್ಟಣದಲ್ಲಿ ವ್ಯಂತರ ದೇವತೆಯಾಗಿ ಹುಟ್ಟಿದ್ದಳು. ಚಿಲಾತಪುತ್ರನು ಬೇಗ ಹೋಗಿ ವೈಭಾರವೆಂಬ ಪರ್ವತವನ್ನೇರಿದನು. ಆ ಪರ್ವತದ ಮೇಲೆ ಅವಧಿಜ್ಞಾನಿಗಳಾದ ಸರ್ವಗುಪ್ತರೆಂಬ ಆಚಾರ್ಯರು ಐನೂರು ಮಂದಿ ಶಿಷ್ಯರೊಡನಿದ್ದರು. ಅವರನ್ನು ಕಂಡು 'ಬೇಗ ನನಗೆ ಸಂಕ್ಷೇಪವಾಗಿ ಧರ್ಮವನ್ನು ಹೇಳಿರಿ' ಎನ್ನಲು ಋಷಿಗಳು ಹೀಗೆ ಹೇಳಿದರು,

ಗಾಹೆ ॥ ಜಂ ಇಚ್ಛಸಿ ತಂ ಣಂತಂ ಜಂಪುಣ ಣೇಚ್ಛಸಿ ತಂ ತುಮಪ್ಪಂ
ಪುರಿಸ ಏಹ ತಂ ಇಚ್ಛಸು ಸಂಸಾರ ಮಹಣ್ಣವಂ ತರಿದುಂ

ಮತ್ತು ಅಭಾವಿದಂ ಭಾವೇಮಿ ಭಾವಿದಂ ಭಾವೇಮಿ ಎಂದಿಂತು ಸಂಕ್ಷೇಪದಿಂದಂ ಧರ್ಮಮಂ ಪೇಟ್ದು ಮತ್ತಮಿಂತೆಂದರ್ ನಿನಗಾಯುಷ್ಯಂ ಕಿಜೆದೆಯೆಂದು ಪೇಬ್ಗೊಡಾತನುಮಂತಪ್ಪೊದೆನಗೆ ದೀಕ್ಷಾಪ್ರಸಾದಂಗೆಯ್ಯಮೆಂದು ಬೇಡಿ ಬಾಹ್ಯಾಭ್ಯಂತರ ಪರಿಗ್ರಹಗಳೆಲ್ಲಮಂ ತೊಱೆದು ತಪಂಬಟ್ಟು ಸವ್ವಂ ಸಾವಜ್ಜ ಜೋಗಂ ವಿರದೋಮಿಯೆಂದು ಬಾಜ್ದನ್ನೆಗಮಾಹಾರಶರೀರಕ್ಕೆ ನಿವೃತ್ತಿಗೆಯ್ದು ಚಲಾತಪುತ್ರಂ ತಪಂಬಟ್ಟು ಕಾಯೋತ್ಸರ್ಗಂ ಗೆಯ್ದುರ್ದೊರ್ ಅನ್ನೆಗಂ ಪೆಜಗಣಿಂ ಬಲಂ ಕೇಳ್ದು ಬಂದು ಕಾಯೋತ್ಸರ್ಗಂ ನಿಂದೊನಂ ಕಂಡೇನುಂ ಗೆಯ್ಯಲಱೆಯದೆ ಶ್ರೇಣಿಕಮಹಾರಾಜಂಗೆ ಚಲಾತಪುತ್ರಂ ತಪಂಬಟ್ಟು ಕಾಯೋತ್ಸರ್ಗಂ ಗೆಯ್ದುರ್ದೊನಿನ್ನೆಮಗೆ ಬೆಸನೇನೆಂದು ಬಿನ್ನಪಂಗೆಯ್ದಟ್ಟದೊಡಾತನಿಂತೆಂದಂ ತಪಂಬಟ್ಟನಪ್ಪೊಡೊಳ್ಳಿಕೆಯುಂ ತನ್ನ ಮುಂಗೆಯ್ದ ಪಾಪಮುಮಯಶಮುಂ ಪಟೆಯುಂ ಪೊಲ್ಲಮೆಯುಮುಂ ನೀಗಿದನೆಂದು ನುಡಿದು ಪೋದ ಬಲಕ್ಕೆ ಬಟೆಯಟ್ಟದೊಡವರುಂ ಚಲಾತ ರಿಸಿಯಂ ಬಲಗೊಂಡು ಬಂದರ್ಚಿಸಿ ಪೊಡೆವಟ್ಟು ಪೊಬಲ್ಗೆ ವೋದರ್ ಮತ್ತಿತ್ತ ಸುಭದ್ರೆಯಪ್ಪ ವ್ಯಂತರದೇವತೆ

- (ಎಲ್ಲೈ ಪುರುಷಸಿಂಹನೇ, ಯಾವುದನ್ನು ಇಷ್ಟಪಡುವೆಯೋ ಅದು ಅನಂತವಾದುದು. ಮತ್ತೆ ಯಾವುದನ್ನು ಇಷ್ಟ ಪಡುವುದಿಲ್ಲವೋ ಅದು ನಿನಗೆ ಅಲ್ಪವಾದುದು. ಸಂಸಾರವೆಂಬ ಮಹಾಸಾಗರವನ್ನು ದಾಟುವುದಕ್ಕೆ ಇಚ್ಛೆಪಡು) ಆನಂತರ, "ಆಗದಿರುವುದನ್ನು ಭಾವಿಸುತ್ತೇನೆ, ಆಗುತ್ತಿರುವುದನ್ನು ಭಾವಿಸುತ್ತೇನೆ" ಎಂದು ಈ ರೀತಿಯಾಗಿ ಸಂಕ್ಷೇಪದಿಂದ ಧರ್ಮವನ್ನು ಹೇಳಿ ಆಮೇಲೆ ಹೀಗೆ ಹೇಳಿದರು - "ನಿನಗೆ ಆಯುಷ್ಯವಿರುವುದು ಸ್ವಲ್ಪವೆ". ಹೀಗೆನ್ನಲು ಚಿಲಾತಪುತ್ರನು "ಹಾಗಾದರೆ ನನಗೆ ದೀಕ್ಷೆಯನ್ನು ಅನುಗ್ರಹ ಮಾಡಿ" ಎಂದು ನುಡಿದು ಕೇಳಿ ಪಡೆದುಕೊಂಡು ಬಾಹ್ಯ ಪರಿಗ್ರಹಗಳನ್ನೂ ಆಂತರಿಕ ಪರಿಗ್ರಹಗಳನ್ನೂ ತ್ಯಜಿಸಿ ತಪಸ್ಸನ್ನು ಕೈಗೊಂಡನು. "ಎಲ್ಲಾ ದೋಷಯುಕ್ತವಾದ ಯೋಗದಿಂದ ವಿರತನಾಗಿದ್ದೇನೆ" ಎಂದುಕೊಂಡು ಬಾಳುತ್ತ ಆಹಾರಕ್ಕೂ ಶರೀರಕ್ಕೂ ನಿವೃತ್ತಿಯನ್ನು ಮಾಡಿ ಚಿಲಾತಪುತ್ರ ಋಷಿಗಳು ತಪಸ್ಸನ್ನು ಮಾಡಿ ದೇಹಾಭಿಮಾನ ತ್ಯಾಗವನ್ನು ಮಾಡಿದರು. ಅಷ್ಟರಲ್ಲಿ ಹಿಂದಿನಿಂದ ಸಂಗತಿಯನ್ನು ಕೇಳಿ, ಸೈನ್ಯವು ಬಂದು ದೇಹೋತ್ಸರ್ಗಕ್ಕಾಗಿ ನಿಂದಾತನನ್ನು ಕಂಡು ಏನೂ ಮಾಡಲಾರದೆ ಶ್ರೇಣಿಕ ಮಹಾರಾಜನ ಬಳಿಗೆ ಕಳುಹಿಸಿ "ಚಿಲಾತಪುತ್ರನು ತಪಸ್ಸನ್ನು ಪಡೆದು ದೇಹತ್ಯಾಗ ಮಾಡಿದ್ದಾನೆ. ಇನ್ನು ನಮಗೆ ಅಪ್ಪಣೆಯೇನು?" ಎಂದು ವಿಜ್ಞಾಪನವನ್ನು ಮಾಡಲು ಶ್ರೇಣಿಕನು ಹೀಗೆಂದನು "ತಪಸ್ಸನ್ನು ಕೈಗೊಂಡನಾದರೆ ಒಳ್ಳೆಯದು ಮಾಡಿದನು. ತಾನು ಹಿಂದೆ ಮಾಡಿದ ಪಾಪವನ್ನೂ ಅಪಕೀರ್ತಿಯನ್ನೂ ನಿಂದೆಯನ್ನೂ ಕೆಟ್ಟುದನ್ನೂ ನೀಗಿದನು" ಎಂದು ಹೇಳಿ, ಹೋಗಿದ್ದ ಸೈನ್ಯಕ್ಕೆ ಜನ ಕಳುಹಿಸಲು ಆ ಸೈನ್ಯದವರು ಚಿಲಾತ ಋಷಿಯನ್ನು ಪ್ರದಕ್ಷಿಣೆ ಮಾಡಿ ಪೂಜಿಸಿ ಸಾಷ್ಟಾಂಗ ನಮಸ್ಕಾರ ಮಾಡಿ ಪಟ್ಟಣಕ್ಕೆ ತೆರಳಿದರು. ಆಮೇಲೆ ಇತ್ತ ಸುಭದ್ರೆಯಾಗಿದ್ದ ವ್ಯಂತರ ದೇವತೆ ವಿಭಂಗಜ್ಞಾನದಿಂದ ತಿಳಿದು ಚಿಲಾತ ಋಷಿಗಳನ್ನು ಕಂಡು ಶತ್ರುತ್ವವನ್ನು ಜ್ಞಾಪಿಸಿ ಹದ್ದಿನ ರೂಪವನ್ನು ತಾಳಿ ಬಂದು ಚಿಲಾತಋಷಿಯ

ವಿಭಂಗಜ್ಞಾನದಿಂದಱೆದು ಚಿಲಾತರಿಸಿಯರಂ ಕಂಡು ಪಗೆಯಂ ನೆನೆದು ಪರ್ದಿನ ರೂಪಂ ಕೈಕೊಂಡು ಬಂದು ನೆತ್ತಿಯ ಮೇಗಿರ್ದ ಕಣ್ಗಳಂ ತೋದಿ ತಿನೆ ಪರ್ದಲೆಯ ಕಟ್ಟಜುಂಪೆಗಳುಮಾಗಿ ಮೆಯ್ಯೆಲ್ಲಮನುರ್ಬಿಯುಂ ಸಟ್ಟುಗದಂತೆ ಬಳಸಿಯುಂ ಛಿದ್ರಂ ಮಾಡಿ ಕಾಡೆ ಎರಮ ದಿವಸಮಿರುಳುಂ ಪಗಲುಂ ನಿರಂತರಂ ದೇವೋಪಸರ್ಗಮಂ ಸೈರಿಸಿ ಶುಭ ಪರಿಣಾಮದಿಂ ಮುಡಿಪಿ ಸರ್ವಾರ್ಥ ಸಿದ್ಧಿಯೊಳ್ ಮೂವತ್ತುಮೂಱು ಸಾಗರೋಪಮಾಯುಷ್ಯಮನೊಡೆಯೊನಹಮಿಂದ್ರ ದೇವನಾಗಿ ಪುಟ್ಟಿದಂ ಮತ್ತಂ ಪೆಜರ್ ಸಂನ್ಯಸನಂಗೆಯ್ದ ಭವ್ಯರ್ಕಳ್ ಚಿಲಾತರಿಸಿಯರಂ ಮನದೊಳ್ ಬಗೆದು ಚತುರ್ವಿಧಮಪ್ಪುಪಸರ್ಗಮುಂ ಪಸಿವು ನೀರಜ್ಜಿ ಮೊದಲಾಗೊಡೆಯ ದುಃಖಂಗಳುಮಂ ಸೈರಿಸಿ ಪರಮ ಶುದ್ಧ ಸಹಜ ದರ್ಶನ ಜ್ಞಾನ ಚಾರಿತ್ರಂಗಳುಮಂ ಸಾಧಿಸಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

ನೆತ್ತಿಯ ಮೇಲೆ ಕುಳಿತು ಕಣ್ಣುಗಳನ್ನು ತೋಡಿ ತಿನ್ನುತ್ತಿರಲು, ದೊಡ್ಡ ತಲೆಯುಳ್ಳ ಕಟ್ಟಿರುವೆಗಳು ಶರೀರಪನ್ನೆಲ್ಲ ಬಗಿದು ಸವುಟಿನಂತೆ ತೊಳಸಿಯೂ ತೂತುಗಳನ್ನು ಮಾಡಿ ಪೀಡಿಸುತ್ತಿರಲು ಎರಡು ದಿವಸ ರಾತ್ರಿಯೂ ಹಗಲೂ ಎಡೆಬಿಡದೆ ದೇವೋಪಸರ್ಗಪನ್ನು ಸಹಿಸಿ, ಶುಭ ಪರಿಣಾಮದಿಂದ ಸತ್ತು ಸರ್ವಾರ್ಥಸಿದ್ಧಿ ಎಂಬ ಸ್ವರ್ಗದಲ್ಲಿ ಮೂವತ್ತಮೂರು ಸಾಗರದಂತಹ ಅಯುಷ್ಯವುಳ್ಳ ಅಹಮಿಂದ್ರ ದೇವನಾಗಿ ಹುಟ್ಟಿದರು. ಅನಂತರ, ಸಂನ್ಯಾಸವನ್ನು ಮಾಡಿದ ಇತರ ಭವ್ಯರು ಕೂಡ ಚಿಲಾತ ಋಷಿಗಳನ್ನು ಮನಸ್ಸಿನಲ್ಲಿ ಭಾವಿಸಿಕೊಂಡು ನಾಲ್ಕು ವಿಧವಾದ ಉಪಸರ್ಗಗಳನ್ನೂ ಹಸಿವು ನೀರಡಿಕೆ ಮೊದಲಾಗಿ ಉಳ್ಳ ದುಃಖಿಗಳನ್ನೂ ಸಹಿಸಿ ಶ್ರೇಷ್ಠವೂ ನಿರ್ಮಲವೂ ಸಹಜವೂ ಆದ ದರ್ಶನ ಜ್ಞಾನ ಚಾರಿತ್ರಗಳನ್ನು ಸಾಧಿಸಿ ಸ್ವರ್ಗ ಮೋಕ್ಷಸುಖಿಗಳನ್ನು ಪಡೆಯಲಿ!

೧೬. ದಂಡಕನೆಂಬ ರಿಸಿಯ ಕಥೆ

ದಂದಕನೆಂಬ ರಿಸಿಯ ಕಥೆಯಂ ಪೇಟ್ಟಿಂ :

ಗಾಹೆ ॥ ದಂಡೋ ಯಮುಣಾವಂಕೇಣ ತಿಕ್ಖ ಕಂಡೇಣ ಪೂರಿವಂಗೋ ವಿ
ತಂ ವೇದಣಮಗಣಿತ್ತಾ ಪಡಿವಣ್ಣೋ ಉತ್ತಮಂ ಅಟ್ಠಂ ॥

[ದಂಡೋ-ದಂಡಕನೆಂಬ ರಿಸಿ, ಯಮುಣಾವಂಕೇಣ-ಯಮುನಾವಂಕನೆಂಬರಸಿನಿಂದಂ, ತಿಕ್ಖ ಕಂಡೇಣ-ಕೂರಿದವಪ್ಪಂಬುಗಳಿಂದಂ, ಪೂರಿದಂಗೋ ವಿ-ತೀವೆ ಪಟ್ಟ ಮೆಯ್ಯನೊಡೆಯನಾಗಿಯುಂ, ತಂ ವೇದಣಂ-ಆ ದೇದನೆಯಂ, ಅಗಣಿತ್ತಾ-ಬಗೆಯದೆ, ಪಡಿವಣ್ಣೋ-ಪೊರ್ದಿದೊಂ, ಉತ್ತಮಂ ಅಟ್ಠಂ-ಮಿಕ್ಕ ದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯಂ]

ಅದೆಂತೆಂದೊಡೆ : ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಅಮಳಕಂಡಮೆಂಬುದು ಪೊಬಲಡನಾಳ್ವೊಂ ಅವಿಷ್ಣಸೇನನೆಂಬೊನರಸನಾತನ ಮಹಾದೇವಿ ನಂದಿನಿಯೆಂಬೊಳಾಯಿರ್ವರ್ಗರ್ಂ ಮಗು ದಂಡಕನೆಂಬೊಂ ಪುಟ್ಟಿದನಾತಂ ಗರ್ಭದೊಳಿರ್ದಂದು ನಂದಿನಿ ಮಹಾದೇವಿಗಿಂತುಟೊಂದು ಬಯಕೆಯಾದುದೆಲ್ಲಾ ಜನಂಗಳುಮಂ ದಂಡಿಸುವಂತಿರೆಯದಜೆಂದಾತಂಗೆ ತಾಯುಂ ತಂದೆಯುಂ ದಂದಕನೆಂದು ಪೆಸರನಿಟ್ಟೊರಾತನಿಂ ಕಿಜಿಯೊಳ್ ನಂದವತಿಯೆಂಬೊಳ್ ಕೂಸಾಕೆಯನರ್ಧಚಕ್ರವರ್ತಿಯಪ್ಪ ವಿಷ್ಣುವಿಂಗೆ ಕೊಟ್ಟು ದಂಡಕನುಂ ವಿಷ್ಣುವಿಂಗಾದಮಾನುಂ ಪ್ರಿಯನಪ್ಪ ಸೇನಾಪತಿಯಾದನಂತನಿಬರುಮಿಷ್ಟವಿಷಯ ಕಾಮ ಭೋಗಂಗಳನನುಭವಿಸುತ್ತಂ ಪಲಕಾಲಂ ಸಲೆ ಮತ್ತೊಂದು ದಿವಸಂ ವಿಷ್ಣು ಅರಿಷ್ಟನೇಮಿ ಭಟಾರರಂ ಬಂದಿಸಲ್ಕೆಂದು ಬಲದೇವಂ ಬೆರಸು ಪುತ್ರ ಕಳತ್ರ ಮಿತ್ರ ಸಪರಿವಾರಂ ಪೋಗಿ

ದಂಡಕನೆಂಬ ಋಷಿಯ ಕಥೆಯನ್ನು ಹೇಳುವೆನು - [ದಂಡಕನೆಂಬ ಋಷಿ ಯಮುನಾವಂಕನೆಂಬ ಅರಸನಿಂದ ಹರಿತವಾದ ಬಾಣಗಳಿಂದ ತುಂಬಿದ ಅಂಗಗಳುಳ್ಳವನಾಗಿ ಆ ವೇದನೆಯನ್ನು ಬಗೆಯದೆ ಶ್ರೇಷ್ಠವಾದ ದರ್ಶನ ಜ್ಞಾನ ಚಾರಿತ್ರಗಳ ಆರಾಧನೆಯನ್ನು ಮಾಡಿದನು] ಅದು ಹೇಗೆಂದರೆ - ಈ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ಅಮಳಕಂಡವೆಂಬ ಪಟ್ಟಣವನ್ನು ಅವಿಷ್ಣಸೇನನೆಂಬ ರಾಜನು ಆಳುತ್ತಿದ್ದನು. ಅವನ ಮಹಾರಾಣಿ ನಂದಿನಿಯೆಂಬವಳು. ಆ ಇಬ್ಬರಿಗೂ ದಂಡಕನೆಂಬ ಮಗನು ಹುಟ್ಟಿದನು. ಆತನು ಗರ್ಭದಲ್ಲಿದ್ದಾಗ ನಂದಿನಿ ಮಹಾದೇವಿಗೆ ಎಲ್ಲಾ ಜನರನ್ನೂ ದಂಡಿಸಬೇಕೆಂಬ ಒಂದು ಬಯಕೆಯುಂಟಾಯಿತು. ಆದುದರಿಂದ ಆತನಿಗೆ ತಾಯಿಯೂ ತಂದೆಯೂ ದಂಡಕನೆಂದು ಹೆಸರನ್ನಿಟ್ಟರು. ಅವನಿಗಿಂತ ಕಿರಿಯವಳು ನಂದವತಿಯೆಂಬ ಹುಡುಗಿ. ಆಕೆಯನ್ನು ಅರ್ಧಚಕ್ರವರ್ತಿಯಾದ ವಿಷ್ಣುವಿಗೆ ಕೊಟ್ಟು ದಂಡಕನು ವಿಷ್ಣುವಿಗೆ ಅತ್ಯಂತ ಪ್ರೀತಿಯವನಾದ ಸೇನಾಪತಿಯಾದನು. ಅಂತು ಅವರೆಲ್ಲರೂ ಇಷ್ಟವಿಷಯದ ಕಾಮಸುಖಗಳನ್ನು ಅನುಭವಿಸುತ್ತ ಹಲವು ಕಾಲ ಕಳೆಯಿತು. ಹೀಗಿರುವಾಗ ಮತ್ತೊಂದು ದಿವಸ ವಿಷ್ಣುವು ಅರಿಷ್ಟನೇಮಿ ತೀರ್ಥಂಕರರನ್ನು ವಂದಿಸುವುದಕ್ಕಾಗಿ ಬಲದೇವನ ಸಮೇತವಾಗಿ ಪುತ್ರಪತ್ನಿ ಪರಿವಾರ ಸಹಿತ ಹೋದನು. ತೀರ್ಥಂಕರರ ಧರ್ಮಸಭೆಗೆ

ಸಮವಸರಣಮನೆಯಿ ಸ್ಫಟಿಕಮಯಮಪ್ಪ ಸೋಪಾನಪಂಕ್ತಿಗಳಿಂದೊಪ್ಪುವುದನೇಜೆ ಗಂಧಕುಟಿ ಪ್ರಾಸಾದಮಂ ತ್ರಿಃಪ್ರದಕ್ಷಿಣಂಗೆಯ್ದು ಬಂದಭಿಮುಖನಾಗಿರ್ದು ಸ್ತುತಿಶತಸಹಸ್ರಂಗಳಿಂ ಸ್ತುತಿಯಿಸಿ ಗಂಧಪುಷ್ಪ ದೀಪ ಧೂಪಾಕ್ಷತಂಗಳಿಂದರ್ಚಿಸಿ ಗಣಧರದೇವರ್ ಮೊದಲಾಗೊದೆಯ ಋಷಿ ಸಮುದಾಯಮಂ ಗುರುಪರಿವಿಡಿಯಿಂದಂ ವಂದಿಸಿ ತಮ್ಮಿಪ್ಪೋವರಿಯೊಳಿರ್ದು ಧರ್ಮಮಂ ಕೇಳ್ದು ತದನಂತರಂ ವಿಷ್ಣುವಿಂತೆಂದು ಬಿಸಗೊಂಡಂ ಭಟಾರಾ ಈ ಅತಿ ರೌದ್ರನಪ್ಪ ದಂಡಕಂ ನರಕಂ ಬುಗುವಂತಿರೆ ಪಿರಿದುಂ ಪಾಪಮಂ ನೆರಪಿದನೀತನ ಪಾಪಕರ್ಮದುಪಶಮಮೆನಿತು ಕಾಲದಿಂದಕ್ಕುಂ ಮತ್ತಮೀತನ ಮುನ್ನಿನ ಭವಮೇನೆಂದು ಬಿಸಗೊಂಡೊಡೆ ಸಕಲ ವಿಮಲ ಕೇವಲಜ್ಞಾನವಿರಾಜಿತರಪ್ಪ ಅರಿಷ್ಟನೇಮಿಭಟಾರರಿಂತೆಂದು ಪೇಟ್ದರ್ ಈ ಜಂಬೂದ್ವೀಪದ ಪೂರ್ವವಿದೇಹದೊಳ್ ವೀತಶೋಕಮೆಂಬುದು ಪೊಲಿಲುಂಟು ಅದನಾಳ್ವೊನ್ ಅಶೋಕನೆಂಬೊನರಸನಾತನ ಮಹಾಸಾಮಂತಂ ಸುಧಾಮಕನೆಂಬೊಂ ತೀವ್ರಲೋಭದೊನತಿ ರೌದ್ರಮಪ್ಪಾರಂಭ ಕರ್ಮದೊಳ್ ಕೂಡಿದೊಂ ತನ್ನಾರಂಭದ ಕೆಯ್ಗಳನೊಕ್ಕುವೆಟ್ಟುಗಳ ಬಾಯಂ ಕಟ್ಟಯೊಕ್ಕಿಸುಗುಂ ಮತ್ತಡುವ ಬಡ್ತಿಸುವ ಬಿಸಕೆಯ್ವ ಪೆಂಡಿರ ಮೊಲೆಗಳಂ ಸೀರೆಯಿಂ ಕಟ್ಟಿಸಿ ಕೂಸುಗಳಂ ಮೊಲೆಯುಣಲೀಯದೆ ಬಿಸಕೆಯ್ಸುಗುಂ ಮತ್ತಂ ಕೊಲೆಯುಂ ಪಿರಿದಾರಂಭಮುಂ ಪೆರ್ವರದುಮೆಂಬವು ಕಾರಣಮಾಗಿ ನರಕಾಯುಷ್ಯಂ ಕಟ್ಟಿ ಕಾಲಂ ಸಲೆ ಅತಂಗೆ ಶಿರೋರೋಗಮುಂ ಮುಖರೋಗಮುಮಾಗಿ ವೇದನಾಭಿಭೂತನಾಗಿರ್ಪನ್ನೆಗಂ ವೈದ್ಯರಂ

ಹೋಗಿ, ಬಿಳಿಯ ಶಿಲೆಯ ಮೆಟ್ಟಿಲುಗಳ ಸಾಲುಗಳಿಂದ ಒಪ್ಪುವುದನ್ನು ಹತ್ತಿ ಗಂಧಕುಟಿಯ ಮಹಾಸೌಧವನ್ನು ಮೂರು ಸುತ್ತು ಬಲಬಂದು ಎದುರಾಗಿದ್ದುಕೊಂಡು ನೂರು ಸಾವಿರ ಸ್ತುತಿಗಳಿಂದ ಸ್ತುತಿಸಿ ಗಂಧ ಪುಷ್ಪ ದೀಪ ಧೂಪ ಅಕ್ಷತೆಗಳಿಂದ ಪೂಜಿಸಿ ಗಣಧರ ದೇವರು ಮೊದಲಾಗುಳ್ಳ ಋಷಿಗಳ ಸಮೂಹವನ್ನು ಗೌರವಾನುಕ್ರಮದಿಂದ ನಮಸ್ಕರಿಸಿ ತಾನಿರತಕ್ಕ ಕೊಠಡಿಯಲ್ಲಿದ್ದು ಧರ್ಮಶ್ರವಣವನ್ನು ಮಾಡಿದನಂತರ ವಿಷ್ಣು ಈ ರೀತಿಯಾಗಿ ಪ್ರಶ್ನಿಸಿದನು - "ಪೂಜ್ಯರೆ ಈ ಅತ್ಯಂತ ಉಗ್ರರೂಪನಾಗಿರುವ ದಂಡಕನು ನರಕವನ್ನು ಪ್ರವೇಶಿಸುವ ಹಾಗೆ ಹೆಚ್ಚು ಪಾಪವನ್ನು ಕೂಡಿಸಿಕೊಂಡಿದ್ದಾನೆ. ಇವನ ಪಾಪದ ಪರಿಹಾರ ಎಷ್ಟು ಕಾಲದಿಂದ ಆದೀತು ? ಮತ್ತು ಇವನ ಹಿಂದಿನ ಜನ್ಮ ಏನಾಗಿದ್ದಿತು?" ಎಂದು ಕೇಳಿದನು. ಆಗ ಪರಿಪೂರ್ಣವೂ ಶುದ್ಧವೂ ಆದ ಕೇವಲಜ್ಞಾನದಿಂದ ಶೋಭಿಸತಕ್ಕ ಅರಿಷ್ಟನೇಮಿ ಭಟಾರರು ಈ ರೀತಿಯಾಗಿ ಹೇಳಿದರು - ಈ ಜಂಬೂದ್ವೀಪದ ಪೂರ್ವವಿದೇಹದಲ್ಲಿ ವೀತಶೋಕವೆಂಬ ಪಟ್ಟಣವಿದೆ. ಅದನ್ನು ಅಶೋಕನೆಂಬ ರಾಜನು ಆಳುತ್ತಿದ್ದನು. ಅವನ ಮಹಾಸಾಮಂತನಾದ ಸುಧಾಮಕನೆಂಬವನು ಅತ್ಯಂತ ದುರಾಶೆಯವನು. ಬಹಳ ಘೋರವಾದ ವ್ಯವಸಾಯಗಾರನು. ತನ್ನ ವ್ಯವಸಾಯದ ಹೊಲ ಗದ್ದೆಗಳನ್ನು ಒಕ್ಕಲು ಮಾಡುವ ಎತ್ತುಗಳ ಬಾಯನ್ನು ಕಟ್ಟಿ ಒಕ್ಕಿಸುತ್ತಿದ್ದನು ಮತ್ತು ಅಡಿಗೆ ಮಾಡುವ, ಬಡಿಸುವ, ಸೇವೆಮಾಡುವ ಹೆಂಡಿರ ಮೊಲೆಗಳನ್ನು ವಸ್ತ್ರದಿಂದ ಕಟ್ಟಿಸಿ ಶಿಶುಗಳನ್ನು ಮೊಲೆಯುಣ್ಣಲು ಬಿಡದೆ ಸೇವೆ ಮಾಡಿಸುತ್ತಿದ್ದನು. ಆಮೇಲೆ, ಕೊಲೆಯೂ ದೊಡ್ಡ ವ್ಯವಸಾಯವೂ ದೊಡ್ಡ ವ್ಯಾಪಾರವೂ ಕಾರಣವಾಗಿ ನರಕಕ್ಕೆ ಆಯುಷ್ಯವನ್ನು ಕಟ್ಟಿ (ಪಾಪಮಾಡಿ) ಕಾಲಕಳೆಯಲು ಅವನಿಗೆ ತಲೆಯ ರೋಗವೂ ಮುಖದ ರೋಗವೂ ಉಂಟಾಗಿ ನೋವಿನಿಂದ ಪೀಡಿತನಾಗಿದ್ದನು. ವೈದ್ಯರನ್ನು ಕೇಳಿದಾಗ ಅವರು ಹೇಳಿದಂತೆ

ಬೆಸಗೊಂಡೊಡದರ್ಕೆ ಪ್ರತೀಕಾರವೊಂದು ದಿವಸಂ ತನಗೆ ಮರ್ದುವೆರಸಿಯುಟ್ಟ ಕೂಬನುಣಲೆಂದಿರ್ಪನ್ನೆಗಂ ಸಮಾಧಿಗುಪ್ತರೆಂಬ ಭಟಾರರ್ ಚರಿಗೆವೊಕ್ಕರವರನತಿಭಕ್ತಿಯಿಂದಂ ನಿಜೆಸಿ ತನಗುಳ್ಳ ವ್ಯಾಧಿಯವರ್ಗುಂಟೆಂಬುದನಱೆದು ತನಗೆಂದು ಮಾಡಿದ ಮರ್ದಿನ ಕೂಬನವರ್ಗೆ ಬಡ್ಡಿಸಿದೊಡವರ್ ಚರಿಗೆ ಮಾಡಿ ಪರಸಿ ಪೋದರ್ ಪನ್ನೆರಡು ವರುಷದ ಶಿರೋರೋಗಮುಂ ಮುಖರೋಗಮುಮಾ ರಿಸಿಯರ್ಗ್ಗೆ ಕೆಟ್ಟತ್ತಾ ಸುಧಾಮಕನುಂ ದಾನದ ಫಲದಿಂದಂ ಕಿಜೆದು ಪುಣ್ಯಮಂ ನೆರಪಿಕೊಂಡಂ ಮತ್ತಂ ಬದ್ಧಾಯುಷ್ಯನಪ್ಪುದಱಿಂ ಮೂರನೆಯ ನರಕದೊಳೀಱು ಸಾಗರೋಪಮಾಯುಷ್ಯಮನೊಡೆಯೊಂ ನಾರಕನಾಗಿ ಪುಟ್ಟಿ

ಗಾಹೆ ॥ ಅಚ್ಛಿಣಿಮೀಳಣ ಮೇತ್ತಂ ಣತ್ಥಿಸುಹಂ ದುಪ್ಪಮೇವ ಅಣುಬದ್ಧಂ
ಣಿರಯೇ ಣಿರಯೇ ಯಾಣಂ ಅಹಣ್ಣಿಸಂ ಪಚ್ಚಮಾಣಾಣಂ ॥

ಇಂತು ನರಕಲೋಕದೊಳ್ ಕಣ್ಣೆಮೆಯಿಕ್ಕುವನಿತು ಪೊೞ್ತುಪ್ಪೊೞಂ ಸುಖಮಿಲ್ಲದೆ ಪಲಕಾಲಂ ದುಃಖಮನನುಭವಿಸಿ ಬಂದಿಲ್ಲಿ ದಂಡಕನಾದಂ ಮುನ್ನಿನ ಭವದೊಳ್ ಪ್ರಾಣಿಗಳಂ ದಂಡಿಸಿದ ತನ್ನ ಪೂರ್ವದಭ್ಯಾಸಮನೆ ನಂದಿನಿ ಮಹಾದೇವಿಯ ಗರ್ಭದೊಳಿರ್ದು ತೋಱೆದನಪ್ಪುದಱಿಂ ದಂಡಕನೆಂಬ ಪೆಸರಾಯ್ತಂತಪ್ಪ ಸ್ವಾನುಭೂತಮಪ್ಪ ನರಕಲೋಕದ ಮಹಾದುಃಖಮಂ ಸರ್ವಜ್ಞರ್ ಪೇೞೆ ನಂಬ ನರಕದ ಮಹಾದುಃಖಕ್ಕಂಜಿ ದಂಡಕಂ ತಪಂಬಟ್ಟೋದುಗಳೆಲ್ಲಮಂ ಕಲ್ತು ರಿಸಿಯರ್ಕಳೊಡನೆ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ

ಪರಿಹಾರಕ್ಕಾಗಿ ಒಂದು ದಿವಸ ತನಗಾಗಿ ಔಷಧಿಯನ್ನು ಬೆರಸಿ ಬೇಯಿಸಿದ ಅನ್ನವನ್ನು ಉಣ್ಣುವುದಕ್ಕೆಂದು ಸಿದ್ಧನಾದಾಗ ಸಮಾಧಿಗುಪ್ತರೆಂಬ ಋಷಿಗಳು ಭಿಕ್ಷಕ್ಕಾಗಿ ಬಂದರು. ಅವರನ್ನು ಭಕ್ತಿಯಿಂದ ನಿಲ್ಲಿಸಿ ತನಗೆ ಇರತಕ್ಕ ರೋಗವು ಅವರಿಗೆ ಉಂಟೆಂಬುದಾಗಿ ತಿಳಿದು ತನಗಾಗಿ ಮಾಡಿದ ಮದ್ದಿನ ಅನ್ನವನ್ನು ಅವರಿಗೆ ಬಡಿಸಿದನು. ಅವರು ಭಿಕ್ಷೆಯನ್ನು ಸ್ವೀಕರಿಸಿ ಆಶೀರ್ವದಿಸಿ ತೆರಳಿದರು, ಋಷಿಗಳಿಗೆ ಹನ್ನೆರಡು ವರುಷದಿಂದ ಇದ್ದ ತಲೆಯ ರೋಗವೂ ಮುಖದ ರೋಗವೂ ನಾಶವಾದವು. ಆ ಸುಧಾಮಕನೂ ದಾನದ ಫಲದಿಂದ ಸ್ವಲ್ಪ ಪುಣ್ಯವನ್ನು ಕೂಡಿಸಿಕೊಂಡು ಬದ್ಧಾಯುಷ್ಯನಾದುದರಿಂದ ಮೂರನೆಯ ನರಕದಲ್ಲಿ ಏಳು ಸಾಗರ ಸಮಾನವಾದ ಆಯುಷ್ಯವನ್ನುಳ್ಳ ನರಕಜೀವಿಯಾಗಿ ಹುಟ್ಟಿದನು. [ನರಕದಲ್ಲಿ ಅಹರ್ನಿಶವೂ ಬೇಯಿಸಲ್ಪಡುತ್ತಿರುವ ನರಕಜೀವಿಗಳಿಗೆ ಕಣ್ಣುರೆಪ್ಪೆ ಹೊಡೆಯುವಷ್ಟು ಕಾಲ ಕೂಡ, ಸುಖವಿಲ್ಲ. ಕಟ್ಟಿಟ್ಟಿರುವುದು ದುಃಖವೊಂದೇ] ಹೀಗೆ ನರಕಲೋಕದಲ್ಲಿ ಕಣ್ಣೆವೆಯಿಕ್ಕುವಷ್ಟು ಹೊತ್ತಾದರೂ ಸುಖವಿಲ್ಲದೆ ಹಲವು ಕಾಲ ದುಃಖವನ್ನು ಅನುಭವಿಸಿ ಬಂದು ಇಲ್ಲಿ ದಂಡಕನಾಗಿದ್ದಾನೆ. ಹಿಂದಿನ ಜನ್ಮದಲ್ಲಿ ಪ್ರಾಣಿಗಳನ್ನು ದಂಡಿಸಿದ ತನ್ನ ಹಿಂದಿನ ಅಭ್ಯಾಸವನ್ನೇ ನಂದಿನಿ ಮಹಾದೇವಿಯ ಬಸಿರಲ್ಲಿದ್ದಾಗ ತೋರಿಸಿದನಾದುದರಿಂದ ದಂಡಕನೆಂಬ ಹೆಸರು ಇವನಿಗಾಯಿತು. ಇಂತಹ ಸ್ವಾನುಭವವುಳ್ಳ ನರಕಲೋಕದ ಮಹಾದುಃಖವನ್ನು ಸರ್ವಜ್ಞರಾದ ಅರಿಷ್ಟನೇಮಿ ಭಟಾರರು ಹೇಳಿದರು. ದಂಡಕನು ಅದನ್ನು ನಂಬಿ, ನರಕದ ಮಹಾದುಃಖಕ್ಕೆ ಹೆದರಿ, ತಪಸ್ಸನ್ನು ಕೈಗೊಂಡು ಎಲ್ಲಾ ಶಾಸ್ತ್ರಗಳನ್ನೂ ಕಲಿತು ಋಷಿಗಳೊಡನೆ ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖಗಳಲ್ಲಿ ಸಂಚಾರಮಾಡುತ್ತ ಭಿಕ್ಷೆಗೆ ಹೋದಾಗ ಯಾರೂ ನಿಲ್ಲಿಸುವವರಿಲ್ಲ,

ಚರಿಗೆವೊಕ್ಕೊಡಾರುಂ ನಿಜೆಸುವೊರಿಲ್ಲಮೂಜೆತ್ತು ನಿಜೆಸಿದೊದಂ ಛರ್ದಿಯಕ್ಕುಂ ರಿಸಿಯರ್ಕಳೊಡನೆ ಚರಿಗೆವೊಕ್ಕೊಡನಿಬರ್ಗಮಲಾಭಮಕ್ಕುಂ ಮತ್ತಂ ವಾತ ಪಿತ್ತ ಶ್ಲೇಷ್ಮ ಖಾಸ ಶ್ವಾಸ ಜ್ವರಾರುಚ ಛರ್ದಿ ಅತಿಸಾರಾಕ್ಷಿ ಕುಕ್ಷಿ ವೇದನಾ ಸ್ಫೋಟಕ ಪಿಟಕ ಶೂಲ ಭಗಂವರ ಕುಷ್ಠ ಕ್ಷಯ ಗಂದ ಶಿರೋವೇದನಾದಿ ವ್ಯಾಧಿಗಳಾಗಿ ರೂಪಜೆಯಲಾಗದಂತಿರೆ ವ್ಯಾಧಿಗಳಿಂದ ಮೊಟ್ಟಯಿಸೆ ಪಟ್ಟನಾಗಿ ಮಗುಬ್ದು ವಿಹಾರಿಸುತ್ತಂ ರಿಸಿಯರ್ಕಳೊಡನೆ ದ್ವಾರಾವತಿಗೆ ಬಂದಿರ್ದೊರ್ ಅನ್ನೆಗಮೊಂದು ದಿವಸಂ ವಿಷ್ಣು ಬಂದು ರಿಸಿಯರ್ಕಳಂ ವಂದಿಸಿಯವರೊಳಗೆ ದಂಡಕರಿಸಿಯಾರೆಂದೊಡೆ ಕೆಲದ ರಿಸಿಯರ್ ತೋಱೆದೊಡವರಂ ವಂದಿಸಿ ನೋಡಿ ವ್ಯಾಧಿಯ ಪ್ರಬಲತ್ವಮಂ ಕಂಡು ವೈಯಾವೃತ್ಯಂಗೆಯ್ವುದರ್ಕಾದಮಾನುಮಟ್ತೆಯೊಡೆಯನಾಗಿ ಪೊಡೆವಟ್ಟಂತೆಂದಂ ಭಟಾರಾ ನಿಮ್ಮನೊಂದಂ ಬೇಡಿವಪ್ಪೆಂ ದಂಡಕರಿಸಿಯೀ ವರ್ಷಾಕಾಲಮನೆನ್ನ ದೇಹಾರದೊಳಿರ್ದಂತಃಪುರದ ಮನೆಗಳೊಳ್ ಚರ್ಯಾ ಮಾರ್ಗಂಬುಗುವುದನೆನಗೆ ದಯೆಗೆಯ್ಯಲ್ವೇಱುಮೆಂದೊದವರುಮಂತೆಗೆಯ್ವೆಮೆಂದು ವಿಷ್ಣುವ ದೇಹಾರದೊಳ್ ಜೀಗುಗೊಂಡಿರ್ದೊಡೆ ವಿಷ್ಣು ತನ್ನ ಪ್ರಧಾನನಪ್ಪ ಜಯನೆಂಬ ವೈದ್ಯನಂ ಕರೆದಿಂತೆಂದಂ ನಮ್ಮ ದಂಡಕರಿಸಿಯ ಕುತ್ತಮನೆಂತು ಬಲ್ಲೆಯಂತೆ ತೀರ್ಚೆಂದು ಪೇಳ್ದೊಡಾತನುಮಂತೆಗೆಯ್ವೆನೆಂದು ದಿವ್ಯೌಷಧಿಗಳಿಂದಂ ಪಿಟ್ಟನೊಳ್ ಮಾಡಿದುಂಡೆಗಳಂ ಸಾಸಿರ್ವರರಸಿಯರ್ಕಳ ಮನೆಗಳೊಳ್ ಪ್ರಯೋಗಿಸಿಯಾ ರುಷಿಯರಂ ಮರ್ದನೂಡಿದಂ ಮತ್ತಂ ಪೊಬಲೊಳಗೆಲ್ಲಂ ಉಂಡೆಯ ಪರ್ವಮಂ

ಒತ್ತಾಯದಿಂದ ನಿಲ್ಲಿಸಿದರೆ ಉಂಡುದು ವಾಂತಿಯಾಗುತ್ತದೆ. ಋಷಿಗಳೊಡನೆ ಭಿಕ್ಷೆಗೆ ಹೋದರೆ ಯಾರೊಬ್ಬರಿಗೂ ಭಿಕ್ಷೆ ಸಿಗುವುದಿಲ್ಲ. ಅದಲ್ಲದೆ, ವಾತ, ಪಿತ್ತ, ಕಫ, ಖಾಸ, ಉಬ್ಬಸ, ಜ್ವರ, ಅರುಚಿ, ವಾಂತಿ, ಭೇದಿ, ಕಣ್ಣುನೋವು, ಹೊಟ್ಟೆನೋವು, ಒಡೆಯುವಿಕೆ, ಬೊಕ್ಕೆ, ಸಿಡಿತ, ಭಗಂದರ, ಕುಷ್ಠ, ಕ್ಷಯ, ಗಂಡ, ತಲೆನೋವು - ಮುಂತಾದ ರೋಗಗಳಾಗಿ ರೂಪವೇ ತಿಳಿಯದ ಹಾಗೆ ರೋಗಗಳಿಂದ ಪೀಡಿತನಾಗಿ ಮರಳಿ ಸಂಚಾರ ಮಾಡುತ್ತ ಋಷಿಗಳೊಡನೆ ದ್ವಾರಾವತಿಗೆ ಬಂದಿದ್ದರು. ಹೀಗಿರಲು ಒಂದಿ ದಿವಸ ವಿಷ್ಣು ಬಂದು ಋಷಿಗಳಿಗೆ ನಮಸ್ಕರಿಸಿ, ಅವರಲ್ಲಿ ದಂಡಕ ಋಷಿ ಯಾರೆಂದು ಕೇಳಿದನು. ಬಳಿಯಲ್ಲಿದ್ದ ಋಷಿಗಳು ತೋರಿಸಲು, ಅವರನ್ನು ನಮಸ್ಕರಿಸಿ ನೋಡಿ, ರೋಗವು ಪ್ರಬಲವಾದುದನ್ನು ಕಂಡು ಉಪಚಾರಾದಿ ಚಿಕಿತ್ಸೆಯನ್ನು ಮಾಡುವುದಕ್ಕೆ ಅತ್ಯಂತ ಆಸಕ್ತಿಯುಳ್ಳವನಾಗಿ ಸಾಷ್ಟಾಂಗ ವಂದನೆ ಮಾಡಿ ಹೀಗೆಂದನು - "ಪೂಜ್ಯರೇ, ನಿಮ್ಮಲ್ಲಿ ಒಂದನ್ನು ಬೇಡುತ್ತಿದ್ದೇನೆ. ದಂಡಕಋಷಿಯು ಈ ಮಳೆಗಾಲದಲ್ಲಿ ನನ್ನ ಮನೆಯ ದೇವರ ಕೋಣೆಯಲ್ಲಿದ್ದು ನನ್ನ ರಾಣೀವಾಸದ ಮನೆಗಳಲ್ಲಿ ಭಿಕ್ಷಾದಿಗಳನ್ನು ಮಾಡಿಕೊಂಡು ಇರುವುದನ್ನು ಕರುಣಿಸಬೇಕು"- ಎಂದು ಹೇಳಲು ಅವರು 'ಹಾಗೆಯೇ ಮಾಡುವೆವು' ಎಂದು ವಿಷ್ಣುವಿನ ದೇಗುಲದಲ್ಲಿ ಯೋಗಸ್ಥರಾಗಿ ಇದ್ದರು. ವಿಷ್ಣು ತನ್ನ ಪ್ರಧಾನ ವೈದ್ಯನಾದ ಜಯನನ್ನು ಕರೆದು "ನಮ್ಮ ದಂಡಕಋಷಿಯ ರೋಗವನ್ನು ನಿನಗೆ ಹೇಗೆ ಸಾಧ್ಯವೋ ಹಾಗೆ ಪರಿಹಾರಮಾಡು" ಎಂದು ಹೇಳಿದನು. ಅವನು 'ಹಾಗೆಯೇ ಮಾಡುವೆನು' ಎಂದು ದಿವ್ಯವಾದ ಔಷಧಿಗಳಿಂದ ಹಿಟ್ಟಿನಲ್ಲಿ ಮಾಡಿ ಉಂಡೆಗಳನ್ನು ಸಾವಿರ ಮಂದಿ ರಾಣಿಯರ ಮನೆಗಳಲ್ಲಿ ಪ್ರಯೋಗ ಮಾಡಿದ ದಂಡಕ ಋಷಿಗೆ ಔಷಧಿ ಕೊಡಿಸಿದನು. ಅದಲ್ಲದೆ, ಪಟ್ಟಣದಲ್ಲೆಲ್ಲ ಉಂಡೆಯ ಹಬ್ಬವನ್ನು ಮಾಡಿಸಿದನು. ಹೀಗೆ ಮಳೆಗಾಲದ

ಮಾಡಿಸಿದನಿಂತು ವರ್ಷಾಕಾಲದ ನಾಲ್ಕುತಿಂಗಳೊಳಂ ಮರ್ದನೂಡಿ ಕುತ್ತಮನಿಂಬುಮಾಡಿದೊಡೆ ವೈಯಾಪೃತ್ಯಂ ಗೆಯ್ದುದಱಿಂದಾದಮಾನುಂ ಉದ್ಯೋಗಪರನಪ್ಪುದಱಿಂ ವಿಷ್ಣುವಿಂಗೆ ತೀರ್ಥಂಕರನಾಮಂ ಕಟ್ಟಿತ್ತು ಮತ್ತಂ ದಂಡಕರಿಸಿಯರ ಮೆಯ್ಯ ತೊಗಲ್ ಪಾವಿನ ಪರೆ ಸುಲಿವಂತೆ ಸುಲಿದು ಪೋಗಿ ನಿರ್ವ್ಯಾಧಿತದೇಹರಾಗಿ ಮೆಯ್ಯ ತೇಜಂ ತೊಳಗುತ್ತಿರ್ದುದಂ ವಿಷ್ಣು ಕಂಡು ವ್ಯಾಧಿ ಕೆಟ್ಟುದೆಂದಱಿದು ಆದಮಾನುಂ ಹರ್ಷಚಿತ್ತನಾಗಿ ಆ ರುಷಿಯರ ಪಕ್ಕದೆ ವೈದ್ಯಜಯನಂ ಪೊಗಟ್ಟೊಡವರ್ ಕೆಮ್ಮಗಿರ್ದೊಡೆ ವೈದ್ಯನಿವರೆನ್ನಂ ಪೊಗಟ್ಪರಿಲ್ಲೆಂದು ಮನದೊಳಾ ರಿಸಿಯರೊಳಪ್ಪ ಮುಳಿಸಂ ತಳಿದು ಆರ್ತಧ್ಯಾನದಿಂ ಕೆಲಕಾಲದಿಂ ಕಾಲಂಗೆಯ್ದು ವಿಂಧ್ಯಾಟವೀ ಮಧ್ಯಸ್ಥಮಪ್ಪ ನರ್ಮದಾ ನದೀ ತೀರದೊಳ್ ಕೋಡಗಮಾಗಿ ಪುಟ್ಟಿದೊಂ ಮತ್ತಿತ್ತ ದಂಡಕರಿಸಿಯರ್ ತಮ್ಮ ಪಕ್ಕವೆ ವಿಷ್ಣು ಜಯನಂ ಪೊಗಟ್ಟುದಱಿಂದಮರಸನ ಬಿಸದಿಂ ವೈದ್ಯನನವರತಂ ತಮ್ಮನೋಲಗಿಸುವುದಱಿಂ ತಮಗೆಂಮಂ ಮಾಡಿದ ವೈಯಾಪೃತ್ಯಮನಱಿದು ನಿಂವಣ ಗರುಹಣಂಗೆಯ್ದು ಅದರ್ಕೆ ತಕ್ಕ ಪ್ರಾಯಶ್ಚಿತ್ತಮಂ ಕೊಂಡು ಸಿಂಹನಿಷ್ಕ್ರೀಡಿತಮೆಂಬ ನೋಂಪಿಯಂ ನೋಂತು ವಿಹಾರಿಸುತ್ತಂ ಪೋಗಿ ನರ್ಮದೆಯ ತಡಿಯೊಳ್ ಮಾಮರದ ಕೆಲಗೆ ಸ್ವಾಧ್ಯಾಯಂಗೆಯ್ಯುತ್ತಿರ್ದರನ್ನೆಗಂ ಆ ಕೋಡಗನವರಂ ಕಂಡು ಜಾತಿಸ್ಮರನಾಗಿ ಪೂರ್ವಭವ ವೈರಸಂಬಂಧಮನಱಿದು ಮುಳಿಸಿನಿಂ ಶಕ್ತಿಯೆಂಬಾಯುಧದೊಳೋರಂತಾಗುತ್ತಿರ್ದ ಮಾವಿನ ಕೊಂಬಂ ಮುನಿವರನ ತೊಡೆಯನುರ್ಚಿ ಪೋಗೆ ನೂಂಕಿತ್ತಾಗಳಾ ಮುನಿಯುಂ ತ್ಯಕ್ತಶರೀರನಾಗಿ ಸಮತ್ವೀ

ನಾಲ್ಕು ತಿಂಗಳಲ್ಲಿಯೂ ಔಷಧಿ ಕೊಟ್ಟು ರೋಗವನ್ನು ಮಾಸಿ ಮಾಡಲು ಋಷಿಗೆ ಚಿಕಿತ್ಸೆ ಮಾಡುವುದರಲ್ಲಿ ಅತ್ಯಂತವಾಗಿ ಉದ್ಯುಕ್ತನಾದುದರಿಂದ ವಿಷ್ಣುವಿಗೆ ತೀರ್ಥಂಕರ ಎಂಬ ಹೆಸರು ಕಟ್ಟಿಕೊಂಡಿತು (ಬಂತು). ಅನಂತರ, ದಂಡಕಋಷಿಗಳ ಶರೀರದ ಚರ್ಮವು ಹಾವಿನ ಪೊರೆ ಸುಲಿದುಹೋಗುವಂತೆ ಸುಲಿದು ಹೋಗಿ ರೋಗವಿಲ್ಲದ ಶರೀರದವರಾಗಿ ದೇಹಕಾಂತಿ ಹೊಳೆಯುತ್ತಿತ್ತು. ಇದನ್ನು ವಿಷ್ಣು ನೋಡಿ ರೋಗ ಪರಿಹಾರವಾಯಿತೆಂದು ತಿಳಿದು ಬಹಳ ಸಂತೋಷಗೊಂಡ ಮನಸ್ಸಿನವನಾಗಿ ಆ ಋಷಿಗಳ ಬಳಿಯಲ್ಲಿ ಜಯ' ವೈದ್ಯನನ್ನು ಹೊಗಳಿದನು. ಆಗ ಋಷಿಗಳು ಸುಮ್ಮನಿರಲು, ವೈದ್ಯನು 'ಈ ಋಷಿಗಳು ನನ್ನನ್ನು ಹೊಗಳಲಿಲ್ಲ' ಎಂದು ಮನಸ್ಸಿನಲ್ಲಿ ಕೋಪಗೊಂಡು ಆರ್ತಧ್ಯಾನದಿಂದ ಕೆಲವು ಕಾಲದಲ್ಲೇ ಸತ್ತು ವಿಂಧ್ಯೆಯ ಕಾಡಿನ ನಡುವೆ ಇರುವ ನರ್ಮದಾನದಿಯ ತೀರದಲ್ಲಿ ಕೋತಿಯಾಗಿ ಹುಟ್ಟಿದನು. ಆಮೇಲೆ ಇತ್ತ ದಂಡಕಋಷಿಗಳು ತಮ್ಮ ಬಳಿಯಲ್ಲಿ ವಿಷ್ಣುವು ಜಯನನ್ನು ಹೊಗಳಿದ್ದರಿಂದಲೂ ಅರಸನ ಅಪ್ಪಣೆಯಂತೆ ವೈದ್ಯನು ಯಾವಾಗಲೂ ತಮ್ಮ ಸೇವೆ ಮಾಡುತ್ತಿದ್ದುದರಿಂದಲೂ ತಮಗೆ ಯಾವಾಗಲೂ ಮಾಡಿದ ಚಿಕಿತ್ಸೆಯ ಸಂಗತಿಯನ್ನು ತಿಳಿದು ತಮ್ಮನ್ನು ತಾವೇ ನಿಂದಿಸಿಕೊಂಡರು. ಅದಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಸ್ವೀಕರಿಸಿ ಸಿಂಹ ನಿಷ್ಕ್ರೀಡಿತ ಎಂಬ ವ್ರತವನ್ನು ಆಚರಿಸಿ, ಸಂಚಾರಮಾಡುತ್ತ ಹೋಗಿ ನರ್ಮದಾ ನದಿಯ ತೀರದಲ್ಲಿ ಮಾವಿನ ಮರದ ಕೆಳಗೆ ಶಾಸ್ತ್ರಪಠನವನ್ನು ಮಾಡುತ್ತಿದ್ದರು. ಆ ವೇಳೆಗೆ ಆ ಕೋತಿ ಅವರನ್ನು ಕಂಡು ಜನ್ಮಸಂಗತಿಯನ್ನು ತಿಳಿದು, ಹಿಂದಿನ ಜನ್ಮದ ದ್ವೇಷಸಂಬಂಧವನ್ನು ತಿಳಿದು ಕೋಪದಿಂದ ಶಕ್ತ್ಯಾಯುಧಕ್ಕೆ ಸಮಾನವಾಗುತ್ತಿದ್ದ ಮಾವಿನ ಕೊಂಬೆಯನ್ನು ದಂಡಕಋಷಿಯ ತೊಡೆ ಸೀಳಿಹೋಗುವಂತೆ ಬೀಳಿಸಿತು. ಆಗ ಮುನಿಯು ದೇಹಾಭಿಮಾನವನ್ನು ತ್ಯಜಿಸಿದವನಾಗಿ ಸಮತ್ವದ ಭಾವನೆಯಲ್ಲಿ ಕೂಡಿದ್ದನು. ಹಾಗೆ ಇರುವುದನ್ನು ಕಂಡು ಕೋಡಗನು - "ಈ ಋಷಿಗೆ ತನ್ನ ಶರೀರವೂ ಪ್ರಯೋಜನವಿಲ್ಲ

ಭಾವನೆಯೊಳ್ ಕೂಡಿರ್ದೊನಂ ಕಂಡು ತನ್ನ ಮೆಯ್ಯುಮೀತಂಗೆ ಬಾಟ್ತಿಯಲ್ತೆನ್ನದೇವನೆಂದು ಸಲೆ ನಂಬಿ ಪಶ್ಚಾತ್ತಾಪಮಾಗಿ ಮರ್ಕಟವ್ಯೂಹಮಂ ನೆರಪಿಕೊಂಡು ಬಂದದಂ ಕಿಟ್ಟು ಮರ್ದಂ ತಂದು ಪೊಯ್ದು ಯತಿವರನ ಕಾಲ್ಗೆಱಗಿರ್ದುದುಮಂ ಕಂಡು ಮುನಿಯುಮೀ ಪ್ರಾಣಿ ಭವ್ಯನೆಂದಱಿದು ಧರ್ಮಮಂ ಪೇಟ್ದು ಸಮ್ಯಕ್ತ್ವಪೂರ್ವಕಂ ಬ್ರತಂಗಳಂ ಕೊಟ್ಟರ್ ಅದುವುಂ ಕೈಕೊಂಡು ಧರ್ಮದೊಳ್ ಕೂಡಿ ತನ್ನಂ ನಿಂದಿಸುತಂ ಬ್ರತೋಪವಾಸಂಗಳಿಂ ಮೆಯ್ಯಂ ದಂಡಿಸುತಂ ಸಲ್ದುದೊಂದು ದಿವಸಂ ಪರ್ವತಶಿಖರದಿಂ ಪಾಯ್ದು ಬಂದು ಬರ್ದುಂಕಿ ಮುನಿವರರ ಪಕ್ಕದೆ ಬರ್ದತ್ಯಾಗಳವರುಂ ಸಂನ್ಯಸನಪೂರ್ವಕಂ ಪಂಚನಮಸ್ಕಾರಮಂ ಕೊಟ್ಟರ್ ಅದುವುಂ ಸತ್ತುಪ್ಪೋಗಿ ಸನತ್ಕುಮಾರಮೆಂಬ ಕಲ್ಪದೊಳ್ ಎರಡು ಸಾಗರೋಪಮಾಯುಷ್ಕಮನೊಡೆಯೊಂ ಸಾಮಾನಿಕ ದೇವನಾಗಿ ಪುಟ್ಟಿದೊಂ ತನ್ನವಧಿಜ್ಞಾನದಿಂದಮಱಿದು ಮಹಾವಿಭೂತಿಯಿಂದಂ ಬಂದು ಧ್ವಜ ಮಕುಟ ಸಿತಾತಪತ್ರಾದಿಗಳೊಳ್ ಮಣಿಮಯಮಪ್ಪ ಮರ್ಕಟ ಚಿಹ್ನದೊಳ್ ಮುನಿವರನಂ ಪೂಜಿಸಿ ಪೊಡೆವಟ್ಟಂತೆಂದನೀ ದೇವತ್ವಮುಂ ವಿಭೂತಿಯುಮಂ ಪಶುಜಾತಿಯಪ್ಪೆನಗೆ ನೀಮಿತ್ತಿರ್ ಭಟಾರಾ ಎಂದು ತನ್ನ ಪೂರ್ವಭವ ಸಂಬಂಧಮೆಲ್ಲಮಂ ಪೇಟ್ದು ತನ್ನೊಡಲುಮಂ ಪೂಜಿಸಿ ಪೋದನಾಯೆಡೆ ಲೋಕದೊಳಮರೇಶ್ವರಮೆಂಬ ತೀರ್ಥಮಾಯ್ತು ಮತ್ತಿತ್ತ ದಂಡಕರಿಸಿಯುಂ ಗ್ರಾಮ ನಗರ ಖೇಡ ಖರ್ವಡ ಮದಂಬ ಪಟ್ಟಣ

(ಇವನು ದೇಹಾಭಿಮಾನವಿಲ್ಲದವನು). ನನ್ನ ದೇಹವನ್ನು ಏನು ಮಾಡಲಿ !" ಎಂದು ವಿಶೇಷವಾಗಿ ಯೋಚಿಸಿ ಪಶ್ಚಾತ್ತಾಪವುಂಟಾಗಿ ಕಪಿಗಳ ಸಮೂಹವನ್ನು ಕೂಡಿಕೊಂಡು ಬಂದು ಆ ಕೊಂಬೆಯನ್ನು ಕಿತ್ತು ಮದ್ದನ್ನು ತಂದು ಹೊಯಿದು ಯತೀಶ್ವರನ ಪಾದಕ್ಕೆ ವಂದಿಸಿತು. ಇದನ್ನು ಕಂಡು ದಂಡಕ ಮುನಿಯು "ಇದು ಭವ್ಯಜೀವಿ" ಎಂದು ತಿಳಿದು ಧರ್ಮವನ್ನು ತಿಳಿಸಿ ಜೈನತತ್ವದಲ್ಲಿ ವಿಶ್ವಾಸಪೂರ್ವಕವಾಗಿ ವ್ರತಗಳನ್ನು ಕೊಟ್ಟರು. ಅದು ಅವನ್ನು ಸ್ವೀಕರಿಸಿ ಧರ್ಮದಲ್ಲಿ ಸೇರಿ ತನ್ನನ್ನು ನಿಂದಿಸಿಕೊಳ್ಳುತ್ತ ವ್ರತ ಉಪವಾಸಗಳಿಂದ ದೇಹವನ್ನು ದಂಡಿಸುತ್ತ ಕಾಲಕಳೆಯುತ್ತ ಒಂದು ದಿವಸ ಬೆಟ್ಟದ ತುದಿಯಿಂದ ಹಾರಿ ಬಿದ್ದಿತು. ಅದು ತಪ್ಪಿ ದಂಡಕ ಋಷಿಯ ಬಳಿಯಲ್ಲಿ ಬಿದ್ದಿತು. ಋಷಿಗಳು ಆ ಕೋತಿಗೆ ಸಂನ್ಯಾಸದೊಂದಿಗೆ ಪಂಚನಮಸ್ಕಾರಗಳನ್ನು ಉಪದೇಶಿಸಿದರು. ಅದು ಸತ್ತುಹೋಗಿ ಆ ಜೀವನು ಸನತ್ಕುಮಾರ ಎಂಬ ಸ್ವರ್ಗದಲ್ಲಿ ಎರಡು ಸಾಗರವನ್ನು ಹೋಲುವ ಆಯುಷ್ಯವಿರತಕ್ಕ ಸಾಮಾನಿಕದೇವನಾಗಿ ಹುಟ್ಟಿದನು. ಆ ಸಾಮಾನಿಕದೇವನು ತನ್ನ ಅವಧಿಜ್ಞಾನದಿಂದ ತಿಳಿದುಕೊಂಡು ದೊಡ್ಡ ವೈಭವದಿಂದ ಬಂದು ಪತಾಕೆ, ಕಿರೀಟ, ಶ್ವೇತಚ್ಛತ್ರಾದಿಗಳಿಂದ ರತ್ನಮಯವಾದ ವಾನರ ಚಿಹ್ನೆಯಲ್ಲಿ ಮುನಿಶ್ರೇಷ್ಠನನ್ನು ಪೂಜಿಸಿ ಸಾಷ್ಟಾಂಗ ನಮಸ್ಕಾರಮಾಡಿ ವಂದಿಸಿ ಹೀಗೆಂದನು - "ಋಷಿವರ್ಯರೇ, ಈ ದೇವತ್ವವೂ ವೈಭವವೂ ಪ್ರಾಣಿಜಾತಿಯವನಾದ ನನಗೆ ನೀವು ಕೊಟ್ಟರಿ"- ಎಂದು ತನ್ನ ಹಿಂದಿನ ಜನ್ಮದ ಸಂಬಂಧವನ್ನೆಲ್ಲ ಹೇಳಿ ತನ್ನ ಶರೀರವನ್ನು ಪೂಜಿಸಿ ತೆರಳಿದನು. ಆ ಸ್ಥಳವು ಲೋಕದಲ್ಲಿ ಅಮರೇಶ್ವರವೆಂಬ ತೀರ್ಥವಾಯಿತು. ಅನಂತರ ಇತ್ತ ದಂಡಕಋಷಿ ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖಗಳಲ್ಲಿ ಸಂಚಾರಮಾಡುತ್ತ ಕ್ರಮವಾಗಿ ಉತ್ತರಮಧುರೆಗೆ ಹೋಗಿ ಅಲ್ಲಿ ಸೂರ್ಯನ ಬಿಸಿಲಿನಲ್ಲಿ ಪ್ರತಿಮಾಯೋಗದಿದ

ದ್ರೋಣಾಮುಖಂಗಳಂ ವಿಹಾರಿಸುತ್ತಂ ಕ್ರಮದಿಂದುತ್ತರ ಮಧುರೆಯನೆಯ್ದಿಯಲ್ಲಿ ಸೂರ್ಯಪ್ರತಿಮೆ ನಿಂದರನ್ನೆಗಂ ಆ ಪೊಬಲನಾಳ್ವಂ ಯಮುನಾವಂಕನೆಂಬೊನರಸನಾತಂ ದಂಡಕನಿಂದಂ ಪಲವು ಸೂಬ್ ದಂಡನೆಗಳನೆಯ್ದಿದನಪ್ಪುದಱಿಂದಂ ದಂಡಕಂ ಬಂದನೆಂಬ ವಾರ್ತೆಯಂ ಕೇಳಲೊಡಂ ಜಾತ್ಯಶ್ವಮನೇಱಿ ಓಡುವವನ ಬಟೆಯಂ ಮಂತ್ರಿ ತಗುಳ್ದೋಡಲೀಯದೆ ಮಾಣಿಸಿಯಿಂತೆಂದಂ ದಂಡಕಂ ತಪಂಬಟ್ಟು ಬಂದನೆಂದಱೆಯೆ ಪೇಬ್ಬಾಗಳ್ ಮಗುಳ್ದು ಬಂದತಿಕ್ರೋಧದಿಂದಂ ಕಾಸಿದ ಮೊನೆಯಂಬುಳ್ಳವನವಱ ಮೆಯ್ಯನನೇಕ ಶರಸಂಘಾತಂಗಳಿಂದಮೆಚ್ಚೊದವರುಮಾ ವೇದನೆಯುಂ ಸೈರಿಸಿ ಸಮತ್ವೀಭಾವನೆಯಂ ಭಾವಿಸಿ ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಯಾವಜ್ಜೀವಂ ನಿವೃತ್ತಿಗೆಯ್ದು ಶುಕ್ಲಧ್ಯಾನಂಗಳಂ ಧ್ಯಾನಿಸಿ ಕರ್ಮಕ್ಷಯಂಗೆಯ್ದು ಮೋಕ್ಷಕ್ಕೆ ಪೋದರ್ ಅನ್ನೆಗಂ ಇತ್ತ ಚತುರ್ವಿಧ ದೇವನಿಕಾಯಂ ತಂತಮ್ಮ ಜ್ಞಾನಂಗಳಿಂದಱೆದು ಚಿತ್ರಪಟಮಂ ಕೆದಱೆದಂತೆಯಾಕಾಶಮೆಲ್ಲಮಂ ವ್ಯಾಪಿಸಿ ನಾನಾ ವಿಧ ವಾಹನಾರೂಢರ್ಕಳ್ ಜ್ವಲನ್ಮಣಿಮಯಮಕುಟಾಗ್ರವಿನ್ಯಸ್ತಹಸ್ತರ್ಕಳಾಗಿ ಇಂದ್ರಾದಿ ದೇವರ್ಕಳುಂ ಜಯಜಯಶಬ್ದಂಗಳಿಂದಂ ಮುನಿವರೇಣ್ಯನ ಗುಣಂಗಳಂ ನೆಗಱ್ತಿಯುಂ ಪೊಗಟ್ತುತಂ ಬರ್ಪೊರಂ ಕಂಡು ಭಯಂ ಕಾರಣಮಾಗಿಯುಂ ಕರ್ಮಂಗಳುಪಶಮಂ ಕಾರಣಮಾಗಿಯುಂ ಯಮುನಾವಂಕಂ ತಪಂಬಟ್ಟಂ ತಪಂಬಟ್ಟೊದಮಾ ರಿಸಿಯಂ ಕೊಂದ ಪಾಪದ ಫಲದಿಂದನೇಕ

ನಿಂತರು. ಆಗ ಆ ಪಟ್ಟಣವನ್ನಾಳುವ ಯಮುನಾವಂಕನೆಂಬ ರಾಜನು ದಂಡಕನು ಬಂದುದನ್ನು ತಿಳಿದನು. ಯಮುನಾವಂಕನು ದಂಡಕನಿಂದ ಹಲವು ಬಾರಿ ದಂಡನೆಗೆ ಗುರಿಯಾಗಿದ್ದನು. ಅವನು ಈಗ ಜಾತಿಯ ಕುದುರೆಯನ್ನೇರಿ ಹೆದರಿ ಓಡತೊಡಗಿದನು. ಮಂತ್ರಿ ಅವನ ಬೆನ್ನ ಹಿಂದೆಯೇ ಬಂದು ಓಡಲು ಬಿಡದೆ, ತಡೆದು ಹೀಗೆಂದನು - "ದಂಡಕನು ಈಗ ತಪಸ್ವಿಯಾಗಿ ಬಂದಿದ್ದಾನೆ" - ಎಂದು ತಿಳಿಯುವಂತೆ ಹೇಳಿದಾಗ ಯಮುನಾವಂಕನು ಹಿಂದೆ ಬಂದು, ಬಹಳ ಕೋಪದಿಂದ ಕಾಯಿಸಿ ಹರಿತಮಾಡಿದ ಚೂಪಾದ ಬಾಣಗಳುಳ್ಳವನಾಗಿ ಅವುಗಳಿಂದ (ಅನೇಕ ಬಾಣಗಳ ಸಮೂಹದಿಂದ) ಮುನಿಗೆ ಹೊಡೆದನು. ಅವರು ಆ ನೋವನ್ನು ಸಹಿಸಿ ಸಮತ್ವದ ಭಾವನೆಯನ್ನು ಭಾವಿಸಿ ನಾಲ್ಕು ವಿಧವಾದ ಆಹಾರಕ್ಕೂ ಶರೀರಕ್ಕೂ ಜೀವವಿರುವವರೆಗೂ ನಿವೃತ್ತಿಮಾಡಿ ಶುಕ್ಲಧ್ಯಾನಗಳನ್ನು ಧ್ಯಾನಿಸಿ ಕರ್ಮವನ್ನು ನಾಶಮಾಡಿ ಮೋಕ್ಷಕ್ಕೆ ಹೋದರು. ಅಷ್ಟರಲ್ಲಿ ಇತ್ತ ಭವನವಾಸಿ, ವ್ಯಂತರ, ಜ್ಯೋತಿಷ್ಕ, ವೈಮಾನಿಕ - ಎಂಬ ನಾಲ್ಕು ವಿಧದ ದೇವತೆಗಳ ಸಮೂಹಕ್ಕೆ ಸೇರಿದವರೆಲ್ಲ ತಂತಮ್ಮ ಜ್ಞಾನಗಳಿಂದ ಸಂಗತಿಯನ್ನು ತಿಳಿದ ಚಿತ್ರಪಟಗಳನ್ನು ಕೆದರಿದ ಹಾಗೆ ಆಕಾಶವನ್ನೆಲ್ಲ ವ್ಯಾಪಿಸಿಕೊಂಡು ಹಲವಾರು ರೀತಿಯ ವಾಹನಗಳ ಮೇಲೆ ಕುಳಿತವರಾಗಿ ಹೊಳೆಯುವ ರತ್ನಮಯವಾದ ಕಿರೀಟಗಳ ಮೇಲೆ ಇಟ್ಟ ಕೈಯುಳ್ಳವರಾಗಿ (ನಮಸ್ಕರಿಸುತ್ತ)- ಇಂದ್ರನೇ ಮುಂತಾದ ದೇವತೆಗಳೂ ಜಯಜಯ ಎಂಬ ಶಬ್ದಗಳಿಂದ ಮುನಿಶ್ರೇಷ್ಠನ ಗುಣಗಳನ್ನು ಆಚರಣೆಗಳನ್ನೂ ಹೊಗಳುತ್ತ ಬರುತ್ತಿದ್ದರು. ಅವರನ್ನು ಯಮುನಾವಂಕನು ನೋಡಿ ಹೆದರಿಕೆಯ ಕಾರಣದಿಂದಲೂ ಕರ್ಮಗಳು ನಾಶವಾದ ಕಾರಣದಿಂದಲೂ ತಪಸ್ಸನ್ನು ಸ್ವೀಕರಿಸಿಕೊಂಡನು. ತಪಃಸ್ವೀಕಾರ ಮಾಡಿದರೂ ಆ ಋಷಿಯನ್ನು ಕೊಂದ ಪಾಪದ ಫಲದಿಂದ ಅವನಿಗೆ ಅನೇಕ ಮಹಾವ್ಯಾಧಿಗಳಾದವು.

ಮಹಾವ್ಯಾಧಿಗಳುಮಾದವು ಮತ್ತಮಾ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತಮಂ ನೆಗಬ್ದು ವಲಕಾಲಮುಗ್ರೋಗ್ರ ಘೋರ ವೀರ ತಪಶ್ಚರಣಂಗೆಯ್ಯುತಂ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತಂ ಬರ್ಪೊರ್ ಸಜ್ಜಾತಗಿರಿಯನೆಯ್ದಿಯಲ್ಲಿಯೆ ರಾತ್ರಿ ಪ್ರತಿಮೆನಿಂದೊರನ್ನೆಗಂ ಕಾಡ್ಕಿಚ್ಚು ಮೂವಳಸು ಬಳಸಿಯುಂ ತಗುಳ್ದು ತಮ್ಮಂ ಸುಡೆ ಚತುರ್ವಿಧಮಪ್ಪಾಹಾರಕ್ಕಂ ಜಾವಜ್ಜೀವಂ ನಿವೃತ್ತಿಗೆಯ್ದು ಶುಭಮಪ್ಪ ಶುಕ್ಲಧ್ಯಾನಂಗಳಂ ಜಾನಿಸಿ ಘಾತಿಕರ್ಮಂಗಳಂ ಕಿಡಿಸಿಯಂತರ್ಗತ ಕೇವಲಿಯಾಗಿ ಯೆಂಟು ಕರ್ಮಂಗಳಂ ಕಿಡಿಸಿ ತಪೋಗ್ನಿಯಂ ಸುಟ್ಟು ಮೋಕ್ಷಕ್ಕೆ ವೋದರ್ ಮತ್ತೆ ಪಿಱರುಂ ಸಂನ್ಯಸನಂಗೆಯ್ದಿರ್ದ ಕ್ಷಪಣಕರುಂ ದಂಡಕರಿಸಿಯರಂ ಕಾಸಿದ ಮೊನೆಯಂಬುಗಳಿಂದೆಚ್ಚು ಮಾಡಿದುಪಸರ್ಗಮುಮಂ ಯಮುನಾವಂಕರಿಸಿಯರ್ ಕಿಚ್ಚಿನಿಂ ಬೆಂದುವಸರ್ಗಮುಮಂ ಮನದೊಳ್ ಬಗೆದು ಹಸಿವುಂ ನೀರಬ್ಬಿ, ಮೊದಲಾಗೊಡೆಯವಿರ್ವತ್ತೆರಡು ಪರೀಷಹಂಗಳುಮಂ ವ್ಯಾಧಿಗಳೊಳಪ್ಪ ವೇದನೆಗಳುಮಂ ಸೈರಿಸಿ ಪರಮ ಶುದ್ಧ ಸಹಜ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗಸುಖಂಗಳನೆಯ್ದುಗೆ

ಮತ್ತೆ ಆ ಪಾಪಕ್ಕೆ ತಕ್ಕುದಾದ ಪ್ರಾಯಶ್ಚಿತ್ತವನ್ನು ಮಾಡಿ ಹಲವು ಕಾಲದವರೆಗೆ ಅತ್ಯಂತ ಕಠಿನವೂ ಶ್ರೇಷ್ಠವೂ ಆದ ತಪಸ್ಸನ್ನು ಆಚರಿಸುತ್ತ ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖಗಳಲ್ಲಿ ಸಂಚಾರಮಾಡುತ್ತ, ಬರುತ್ತಿದ್ದವರು ಸಜ್ಜಾತವೆಂಬ ಬೆಟ್ಟವನ್ನು ಸೇರಿ ಅಲ್ಲಿಯೇ ರಾತ್ರಿ ಪ್ರತಿಮಾಯೋಗದಲ್ಲಿ ನಿಂತರು. ಆ ವೇಳೆಗೆ ಕಾಡುಗಿಚ್ಚು ಮೂರು ಸುತ್ತಾಗಿ ಆವರಿಸಿ ಹತ್ತಿರ ಬಂದು ಅವರನ್ನು ಸುಡತೊಡಗಿತು. ಆಗ ಅವರು ಜೀವವಿರುವರೆಗೂ ನಾಲ್ಕು ವಿಧವಾದ ಆಹಾರದಲ್ಲಿ (ಭಕ್ಷ್ಯ, ಭೋಜ್ಯ, ಚೋಷ್ಯ, ಲೇಹ್ಯ ಇವುಗಳಲ್ಲಿ) ಯಾವುದೊಂದನ್ನೂ ಸೇವಿಸದೆ ಶುಭವಾದ ಶುಕ್ಲಧ್ಯಾನಗಳನ್ನು ಧ್ಯಾನಿಸಿ ಘಾತಿಕರ್ಮಗಳನ್ನು ನಾಶಪಡಿಸಿ ಅಂತರ್ಗತ ಕೇವಲಿಯಾಗಿ ಎಂಟು ಕರ್ಮಗಳನ್ನು ನಾಶಪಡಿಸಿ ತಪಸ್ಸೆಂಬ ಅಗ್ನಿಯಿಂದ ದಹಿಸಿಕೊಂಡು ಮೋಕ್ಷಕ್ಕೆ ಹೋದರು. ಆಮೇಲೆ ಸಂನ್ಯಾಸಮಾಡಿದ ಇತರ ಸವಣರೂ ದಂಡಕ ಋಷಿಗಳನ್ನು ಕಾಸಿದ ಮೊನೆಯ ಬಾಣಗಳಿಂದ ಹೊಡೆದು ಮಾಡಿದ ಉಪಸರ್ಗವನ್ನೂ ಯಮುನಾವಂಕ ಋಷಿಗಳು ಬೆಂಕಿಯಿಂದ ಸುಟ್ಟುಹೋದ ಉಪಸರ್ಗವನ್ನೂ ಮನಸ್ಸಿನಲ್ಲಿ ಭಾವಿಸಿಕೊಂಡು, ಹಸಿವು ಬಾಯಾರಿಕೆ ಮುಂತಾಗಿ ಉಳ್ಳ ಇಪ್ಪತ್ತೆರಡು ಪರೀಷಹಗಳನ್ನೂ ರೋಗಗಳಿಂದಾಗುವ ನೋವುಗಳನ್ನೂ ಸಹಿಸಿ, ಶ್ರೇಷ್ಠವೂ ನಿರ್ಮಲವೂ ಸಹಜವೂ ಆದ ದರ್ಶನ ಜ್ಞಾನ ಚಾರಿತ್ರಗಳನ್ನು ಸಾಧಿಸಿ ಸ್ವರ್ಗ ಮೋಕ್ಷಗಳ ಸುಖಗಳಿಗೆ ಭಾಗಿಗಳಾಗಲಿ !

೧೭. ಮಹೇಂದ್ರದತ್ತಾಚಾರ್ಯರ್ ಮೊದಲಾದ ಅಯ್ನೂರ್ವರ್ ರಿಸಿಯರ್ಕಳ ಕಥೆ

ಮಹೇಂದ್ರದತ್ತಾಚಾರ್ಯರ್ ಮೊದಲಾಗೊಡೆಯ ಅಯ್ನೂರ್ವರ್ ರಿಸಿಯರ್ಕ್ಕಳ ಕಥೆಯಂ ಪೇೞ್ದಿಂ:

ಗಾಹೆ ॥ ಣಗರೇ ಮಹೇಂದ್ರ ದತ್ತಾದೀಣಂ ಪಂಚಸದಾಕುಂಭಕಾರಘಡೇ
ಆರಾಧಣಂ ಪವಣ್ಣೋ ಪೀಳಿಜ್ಜಂತಾವಿ ಜಂತೇ ಹಿಂ ॥

[ಣಗರೇ-ಪೊಟಲೊಳ್, ಮಹೇಂದ್ರದತ್ತಾದೀಣಂ-ಮಹೇಂದ್ರದತ್ತರೆಂಬಾಚಾರ್ಯರ್ ಮೊದಲಾಗೊಡೆಯ ರಿಸಿಯರ್ಕಳ್, ಪಂಚಸದಾ-ಅಯ್ನೂರ್ವರ್, ಕುಂಭಕಾರಘಡೇ-ಕುಂಭಕಾರಘಟಮೆಂಬುದಱೊಳ್, ಆರಾಧಣಂ-ಸಹಜ ದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯಂ, ಪವಣ್ಣಾ-ಪೊರ್ದಿದೊರ್, ಪೀಳಿಜ್ಜಂತಾವಿ-ಪಿಳಿಯೆಪಟ್ಟರಾಗಿಯುಂ, ಜಂತೇಹಿಂ-ಗಾಣಂಗಳಿಂದಂ]

ಅದೆಂತೆಂದೊದೆ : ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ವಿದೇಹಮೆಂಬುದು ನಾಡಲ್ಲಿ ಸಾವಸ್ತಿಯೆಂಬುದು ಪೊಟಲುಂಟದನಾಳ್ವೊಂ ಜಿತಶತ್ರುವೆಂಬೊನರಸನಾತನ ಮಹಾದೇವಿ ಧಾರಿಣಿಯೆಂಬೊಳಾಯಿರ್ವರ್ಗ್ಗಂ ಮಗಂ ಸ್ಕಂದಕುಮಾರನೆಂಬೊನಾತನಿಂ ಕಿಱಿಯೊಳ್ ಪುಂದ್ರಯಶೆಯೆಂಬೊಳಾಕೆಯುಂ ದಕ್ಷಿಣಾಪಥದೊಳ್ ಕುಂಭಕಾರಘಟಮೆಂಬ ಪೊಟಲದನಾಳ್ವೊಂ ದಂದಕನೆಂಬರಸಂಗೆ ಕೊಟ್ಟದಂತವರ್ಗ್ಗಳಿಷ್ಟವಿಷಯ ಕಾಮ ಭೋಗಂಗಳನನುಭವಿಸುತ್ತಂ ಕಾಲಂ ಸಲೆ ಮತ್ತಿತ್ತ ಮುನಿಸುವ್ರತ ತೀರ್ಥಕರ ಪರಮದೇವರ ಪಕ್ಕದೆ ಮಹೇಂದ್ರದತ್ತನುಂ ಜಿತಶತ್ರುವ ಮಗನಪ್ಪ ಸ್ಕಂದಕುಮಾರನುಂ ಮೊದಲಾಗೊಡೆಯ ಅಯ್ನೂರ್ವರ್ರಾಜಪುತ್ರರ್ಕಳ್ ತಪಂ ಬಟ್ಟೋದುಗಳೆಲ್ಲಮಂ ಕಲ್ತು ಅಭಿನಂದನರೆಂಬ ಗಣಧರರೊದನೆ ಗ್ರಾಮ ನಗರ ಖೇಡ ಖರ್ವಡ

ಮಹೇಂದ್ರದತ್ತಾಚಾರ್ಯರು ಮೊದಲಾಗುಳ್ಳ ಐನೂರು ಮಂದಿ ಋಷಿಗಳ ಕಥೆಯನ್ನು ಹೇಳುವೆನು [ನಗರದಲ್ಲಿ ಮಹೇಂದ್ರದತ್ತರೆಂಬ ಆಚಾರ್ಯರೇ ಮೊದಲಾದ ಐನೂರು ಮಂದಿ ಋಷಿಗಳು ಕುಂಭಕಾರಘಟವೆಂಬ ಪಟ್ಟಣದಲ್ಲಿ ಗಾಣಗಳಿಂದ ಹಿಂಡಲ್ಪಟ್ಟವರಾಗಿ ಶ್ರೇಷ್ಠವಾದ ದರ್ಶನ ಜ್ಞಾನ ಚಾರಿತ್ರಗಳ ಆರಾಧನೆಯನ್ನು ಮಾಡಿದರು.] ಈ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ವಿದೇಹವೆಂಬ ನಾಡಿದೆ. ಅಲ್ಲಿ ಸಾವಸ್ತಿ ಎಂಬ ಪಟ್ಟಣವಿದೆ. ಅದನ್ನು ಜಿತಶತ್ರು ಎಂಬ ರಾಜನು ಆಳುತ್ತಿದ್ದನು. ಅವನ ಮಹಾರಾಣಿ ಧಾರಿಣಿಯೆಂಬವಳು. ಆ ಇಬ್ಬರಿಗೂ ಸ್ಕಂದಕುಮಾರನೆಂಬವನು ಮಗನು. ಅವನಿಂದ ಕಿರಿಯಳು ಪುಂಡ್ರಯಶೆ. ಆಕೆಯನ್ನು ದಕ್ಷಿಣ ಭಾರತದಲ್ಲಿರುವ ಕುಂಭಕಾರಘಟ ಎಂಬ ಪಟ್ಟಣವನ್ನು ಆಳತಕ್ಕ ದಂಡಕನೆಂಬ ರಾಜನಿಗೆ ಕೊಡಲಾಗಿತ್ತು. ಅಂತು ಅವರೆಲ್ಲರೂ ಇಷ್ಟವಿಷಯದ ಕಾಮಸುಖಗಳನ್ನು ಅನುಭವಿಸುತ್ತ ಇದ್ದರು. ಹೀಗೆಯೇ ಕಾಲಕಳೆಯುತ್ತಿತ್ತು. ಆಮೇಲೆ ಇತ್ತ ಮುನಿಸುವ್ರತ ತೀರ್ಥಂಕರ ಮಹಾದೇವರ ಬಳಿಯಲ್ಲಿ ಮಹೇಂದ್ರದತ್ತನೂ ಜಿತಶತ್ರುವಿನ ಮಗನಾದ ಸ್ಕಂದಕುಮಾರ ಮೊದಲಾಗಿ ಉಳ್ಳ ಐನೂರು ಮಂದಿ ರಾಜಕುಮಾರರು ತಪಸ್ಸನ್ನು ಮಾಡಲು ಉಪದೇಶ ಪಡೆದು, ವಿದ್ಯೆಗಳೆಲ್ಲವನ್ನೂ ಕಲಿತು ಅಭಿನಂದನರೆಂಬ ಗಣಧರರೊಂದಿಗೆ ಗ್ರಾಣ, ನಗರ, ಖೇಡ, ಖರ್ವಡ, ಮಡಂಬ,

ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪೊರ್ ಕಳಿಂಗ ದೇಶದೊಳ್ ದಂತಪುರಮೆಂಬ ಪೊಬಲನೆಯ್ದಿ ಅಲ್ಲಿ ಕೆಲವು ದಿವಸಮಿರ್ಪನ್ನೆಗಂ ಆ ಪೊಬಲನಾಳ್ದಂ ಜನಾರ್ದನ ಮಹಾರಾಜನೆಂಬೊನರಸನಾತನ ಪುರೋಹಿತಂ ವ್ಯಾಳನೆಂಬೊನಾತಂ ಸ್ಕಂದಕುಮಾರ ಋಷಿಯರೊಡನೆ ಅರಸನ ಮುಂದೆ ಪಂಡಿತರ್ಕಳ ನಡುವೆ ವಾದುಗೆಯ್ದು ಸೋಲ್ತೊದರಸನಾತನನಟ್ಟ ಕಳಿದೊಡಾತನುಂ ಪೋಗಿ ದಂಡಕನೆಂಬರಸಂಗಾಳಾಗಿಯಲ್ಲಿ ಮಂತ್ರಿಪದಮಂ ಪೆತ್ತಿರ್ಪನ್ನೆಗಂ ಮತ್ತಿತ್ತ ಋಷಿಯರ್ಕಳುಂ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪೊರ್ ಕುಂಭಕಾರಘಟಮೆಂಬ ಪೊಬಲ್ಗವಂದೊಡಾ ಪೊಬಲನಾಳ್ದ ದಂಡಕನೃಪತಿ ಬಚ್ಚುವರ್ಗೆ ಭಕ್ತನಾಪ್ತಾತಂ ರಿಸಿಯರ್ಕಳ ಬರವಂ ಕೇಳ್ದು ಬಂದು ಬಂದಿಸಿಯಭಿನಂದನ ಭಟಾರರ ಪಕ್ಕದೆ ವಿಚಾರಿಸಿ ಧರ್ಮಮಂ ಕೇಳ್ದು ಮೆಚ್ಚ ನಂಬಿ ಶ್ರಾವಕಬ್ರತಂಗಳಂ ಕೈಕೊಂಡು ಶ್ರಾವಕನಾಗಿ ಅಯ್ನೂರ್ವರ್ ರಿಸಿಯರ್ಕಳುಮಂ ಪ್ರತಿದಿವಸಕ್ಕಂ ಅತಿಭಕ್ತಿಯಿಂದಂ ನಿಱಿಸಿ ತಾಂ ಪಕ್ಕದಿರ್ದು ದಿವ್ಯಾಹಾರಂಗಳನೂಡುತಿಂತು ಋಷಿಯರ್ಕಳ್ಗೆ ಬೆಸಕೆಯ್ಯುತ್ತಮಿರೆ ಸ್ಕಂದಕುಮಾರ ಋಷಿಯೊಡನೆ ವಾದುಗೆಯ್ದು ಸೋಲ್ತೊದೆ ತನ್ನನಟ್ಟ ಕಳಿದುದು ಕಾರಣಮಾಗಿ ವ್ಯಾಳನೆಂಬಂ ಮಂತ್ರಿ ಋಷಿಯರ್ಕಳನಟ್ಟ ಕಳೆವುಪಾಯಮನೆ ಬಗೆಯುತ್ತಿರ್ಪೊನ್ ಒಂದು ದಿವಸಂ ಅಡವಿಗೆ ಪೋಗಿ ರಿಸಿಯರ್ಕಳ್ ಸಿದ್ಧಾಂತಮಂ ಪರಿವಿಡಿಗೆಯ್ದುದಂ ಕೇಳ್ದು ಪೊಬಲ್ಗವಂದ ಬಟಿಕ್ಕೆ ಅವರೋದುವ ಕ್ಷೇತ್ರದ ಸಾರೆಯೊಂದು ಗಿಡುವಿನ ಕೆಟಗೆ ಕೆಲವುಮಾಯುಧಂಗಳಂ

ಪಟ್ಟಣ, ದ್ರೋಣಾಮುಖಿಗಳಲ್ಲಿ ಸಂಚಾರಮಾಡುತ್ತ ಬರುತ್ತಿದ್ದವರು ಕಳಿಂಗ ದೇಶದಲ್ಲಿ ದಂತಪುರವೆಂಬ ಪಟ್ಟಣಕ್ಕೆ ಬಂದು ಅಲ್ಲಿ ಕೆಲವು ದಿವಸ ಇದ್ದರು. ಆ ಪಟ್ಟಣವನ್ನು ಜನಾರ್ದನ ಮಹಾರಾಜನೆಂಬ ರಾಜನು ಆಳುತ್ತಿದ್ದನು. ಅವನ ಪುರೋಹಿತನಾದ ವ್ಯಾಳನೆಂಬವನು ಸ್ಕಂದಕುಮಾರ ಋಷಿಗಳೊಂದಿಗೆ ರಾಜರ ಮುಂದೆ ಪಂಡಿತರುಗಳ ನಡುವೆ ವಾದಮಾಡಿ ಸೋತುಹೋದನು. ಇದರಿಂದ ರಾಜನು ಅವನನ್ನು ಓಡಿಸಿಬಿಟ್ಟನು. ವ್ಯಾಳನು ಹೋಗಿ ದಂಡಕನೆಂಬ ರಾಜನ ಸೇವಕನಾಗಿ ಅಲ್ಲಿ ಮಂತ್ರಿಪದವಿಯನ್ನು ಪಡೆದುಕೊಂಡಿದ್ದನು. ಹೀಗಿರಲು ಅನಂತರ ಋಷಿಗಳು ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖಿಗಳಲ್ಲಿ ಸಂಚಾರ ಮಾಡುತ್ತ ಬರುತ್ತಿದ್ದವರು ಕುಂಭಕಾರಘಟವೆಂಬ ಪಟ್ಟಣಕ್ಕೆ ಬಂದರು. ಆ ಪಟ್ಟಣವನ್ನು ಆಳುವ ದಂಡಕರಾಜನು ಜೈನಯತಿಗಳ ಭಕ್ತನಾಗಿದ್ದು ಋಷಿಗಳು ಬಂದುದನ್ನು ಕೇಳಿ ಬಂದು ವಂದಿಸಿ ಅಭಿನಂದನ ಋಷಿಗಳ ಬಳಿಯಲ್ಲಿ ವಿಚಾರಿಸಿ ಧರ್ಮವನ್ನು ಕೇಳಿ ಮೆಚ್ಚಿ ನಂಬಿ ಶ್ರಾವಕವ್ರತಗಳನ್ನು ಸ್ವೀಕರಿಸಿ ಶ್ರಾವಕನಾದನು. ಅವನು ಐನೂರು ಮಂದಿ ಋಷಿಗಳನ್ನೂ ಪ್ರತಿಯೊಂದು ದಿವಸವೂ ಅತ್ಯಂತ ಭಕ್ತಿಯಿಂದ ಭಿಕ್ಷೆಕ್ಕೆ ನಿಲ್ಲಿಸಿ ತಾನೂ ಬಳಿಯಲ್ಲಿದ್ದು ದಿವ್ಯವಾದ ಆಹಾರವನ್ನು ಊಟಮಾಡಿಸುತ್ತ ಋಷಿಗಳ ಆಜ್ಞೆಯಂತೆ ನಡೆದುಕೊಳ್ಳುತ್ತಿದ್ದನು. ಹೀಗಿರಲು ವ್ಯಾಳನೆಂಬ ಮಂತ್ರಿ ಹಿಂದೆ ಸ್ಕಂದಕುಮಾರ ಋಷಿಯೊಂದಿಗೆ ವಾದಮಾಡಿ ಸೋತಾಗ ತನ್ನನ್ನು ಓಡಿಸಿದುದೇ ಕಾರಣವಾಗಿ ಋಷಿಗಳನ್ನೆಲ್ಲ ಹೇಗೆ ಅಟ್ಟಿಬಿಡುವುದೆಂಬ ಉಪಾಯವನ್ನೇ ಯೋಚಿಸುತ್ತಿದ್ದನು. ಅವನು ಒಂದು ದಿವಸ ಕಾಡಿಗೆ ಹೋಗಿ ಅಲ್ಲಿ ಋಷಿಗಳು ಸಿದ್ಧಾಂತವನ್ನು ಅನುಕ್ರಮವಾಗಿ ಪಠನಮಾಡಿದುದನ್ನು ಕೇಳಿ ಪಟ್ಟಣಕ್ಕೆ ಬಂದ ನಂತರ ಆ ಋಷಿಗಳು ಪಠನ ಮಾಡುವ ಸ್ಥಳದ ಹತ್ತಿರದಲ್ಲಿ ಒಂದು ಗಿಡದ ಕೆಳಗೆ

ಪೂಬ್ದು ಬಂದರಸಂಗಿಂತೆಂದನೀಯಯ್ನೂರ್ವರುಂ ರಿಸಿಯರ್ಕಳುಮರಸು ಮಕ್ಕಳ ಮಹಾಬಲ ಪರಾಕ್ರಮಮನೊಡೆಯರೀ ರೂಪಂ ತೋಜೆ ನಂಬಿಸಿ ನಿಮ್ಮ ಪ್ರಾಣಕ್ಪಾಯಮಂ ಮಾಡಲ್ ಬಗೆದು ಬಂದರದಱೆಂ ಬಿಡದವರಲ್ಲಿಗೆ ಪೋಗಲ್ಬೇಡ ಅವರುಮಂ ನಂಬಲ್ಬೇಡೆಂದೇಕಾಂತದೊಳ್ ಪೇಬ್ದು ಮತ್ತಮಿಂತೆಂದನೆಂತಱೆಯಲಕ್ಕುಮವರಾಯುಧಂಗಳಂ ಪೂಟ್ಟೆರ್ದರಪ್ಪುದಱೆಂ ಕೂರ್ಪರನಟ್ಟಿ ಅವರೋದುವ ಕ್ಷೇತ್ರದೆ ಬಳಸಿಯುಂ ನೋದಿಸುವುದೆಂದು ಪೇಬ್ದೊಡರಸನುಮಾಳ್ಗಳಂ ನೋದಿಮೆಂದು ಬೆಸವೇಬ್ದೊಡವರುಂ ಪೋಗಿಯವರೋದುವ ಕ್ಷೇತ್ರದೊಳ್ ನೋದಿ ಗಿಡುವಿನ ಕೆಲಗೆ ಪೂಟ್ಟೆರ್ದಾಯುಧಂಗಳಂ ತಂದರಸಂಗೆ ತೋಱೆದೊಡೆ ಅರಸನೆಂದಂ ರಿಸಿಯರೊಂದಿಜುಪೆಗಪ್ಪೊದಂ ಪೊಲ್ಲದಂ ಬಗೆಯದವರೆನಗಹಿತಮಂ ಬಗೆವರೆ ಪೊಲ್ಲದೊರಾರಾನುಂ ಋಷಿಯರ್ಗೆ ಮುಳಿವರ್ ಪೂಟ್ಟೆಟ್ಟರಕ್ಕುಮೆಂದರಸನದಂ ಕಡೆಗಣಿಸಿ ಕೆಮ್ಮಗಿರ್ದಂ ಮತ್ತೆ ಕೆಲವು ದಿವಸದಿಂ ಭಂಡಾರದ ಮನೆಯೊಳ್ ಕನ್ನಮಿಕ್ಕಿಸಿ ಭಂಡಾರದ ಪುದುಕೆಗಳಂ ಪೋಬ್ದು ದ್ರಮ್ಮಮಂ ಪೊನ್ನುಂ ತುದುಗೆಗಳುಮಂ ಸಾಲಿಟ್ಟಂತಿರೆಯುಗುತ್ತಂ ನಡುವಿರುಳ್ ಕೊಂಡು ಪೋಗಿಯವರಿರ್ಪ ಬಸದಿಯೊಳಗೊಂದು ಕೋಣೆಯೊಳೊಟ್ಟರಿಸಿ ಬಂದು ಪೊಬ್ದಡೆ ಅರಸಂಗಿಂತೆಂದು ಪೇಬ್ದಂ ದೇವಾ ಭಂಡಾರದ ಮನೆಯೊಳ್ ಕನ್ನಮನಿಕ್ಕಿ ಭಂಡಾರಮೆಲ್ಲಮಂ ಕಳ್ದುಕೊಂಡು ಪೋದರೆಂದು ಪೇಬ್ದೊಡರಸನಾರ್ ಕೊಂಡರಾರಯ್ಯೆಂದು ತಳಾಬಿಂಗೆ ಬೆಸವೇಬ್ದೊಡಾತನುಮಾರಯ್ದು ಬಂದು ದೇವಾ ರಿಸಿಯರ್ ಕನ್ನಮಿಕ್ಕಿ ತಮ್ಮ ಬಸದಿಯೊಳ್ ಕಸವರವನೊಟ್ಟಟ್ಟು ಸಾಲಿಟ್ಟಂತಿರೆ ಬಸದಿವರೆಗಂ ದ್ರವ್ಯಮುಂ ಪೊನ್ನುಂ ಸಾರಬೀದಿಯಾಗಿಯುಮುಗುತ್ತಂ ಪೋದುವೆಂದು ಪೇಬ್ದೊಡರಸನೆಂದಂ ಋಷಿಯರ್ ಶ್ರಾವಕರ್ಗೆ

ಕೆಲವು ಆಯುಧಗಳನ್ನು ಹೂಳಿಟ್ಟು ಬಂದು ಮಹಾರಾಜನೊಡನೆ ಹೀಗೆಂದನು. "ಈ ಐನೂರು ಮಂದಿ ಋಷಿಗಳು ರಾಜಕುಮಾರರೇ ಆಗಿದ್ದಾರೆ. ಇವರು ಮಹತ್ತರವಾದ ಶಕ್ತಿ-ಪರಾಕ್ರಮಗಳುಳ್ಳವರು. ಈ ಋಷಿರೂಪವನ್ನು ತೋರಿಸಿ, ನಂಬಿಸಿ, ನಿಮ್ಮ ಪ್ರಾಣಕ್ಕೆ ಅಪಾಯವನ್ನು ಉಂಟುಮಾಡಬೇಕೆಂದು ಯೋಚಿಸಿ ಬಂದಿರುತ್ತಾರೆ. ಆದುದರಿಂದ ಅವರ ಬಳಿಗೆ ನೀನು ಆಗಾಗ ಹೋಗಬೇಡ. ಅವರನ್ನು ನಂಬಲೇಬೇಡ"- ಈ ರೀತಿಯಾಗಿ ಏಕಾಂತದಲ್ಲಿ ಹೇಳಿದನು. ಆಮೇಲೆ ಹೀಗೆಂದನು- "ಹೇಗೆ ಗೊತ್ತು ಮಾಡಿಕೊಳ್ಳುವುದು? ಅವರು ಆಯುಧಗಳನ್ನು ಹೂತು ಇಟ್ಟಿದ್ದಾರೆ - ಆದುದರಿಂದ ಸ್ನೇಹಿತರಾದವರನ್ನು ಅವರಿರುವಲ್ಲಿಗೆ ಕಳುಹಿಸಿ ಅವರು ಪಠಿಸುವ ಸ್ಥಳದಲ್ಲಿ ಸುತ್ತಲೂ ಪರೀಕ್ಷಿಸಬೇಕು" ಎಂದು ಹೇಳಲು ರಾಜನು ಪರೀಕ್ಷಿಸುವುದಕ್ಕಾಗಿ ಸೇವಕರಿಗೆ ಆಜ್ಞೆ ಮಾಡಿದನು. ಅವರು ಹೋಗಿ ಋಷಿಗಳು ಪಠನಮಾಡುವ ಕ್ಷೇತ್ರದಲ್ಲಿ ಪರೀಕ್ಷಿಸಿ ಗಿಡದ ಕೆಳಗಡೆ ಹೂತು ಇಟ್ಟಿದ್ದ ಆಯುಧಗಳನ್ನು ತಂದು ರಾಜನಿಗೆ ತೋರಿಸಿದರು. ಆಗ ರಾಜನು ಹೀಗೆಂದನು- "ಋಷಿಗಳು ಒಂದು ಇರುವೆಗಾದರೂ ಕೆಟ್ಟದನ್ನು ಬಗೆಯುವವರಲ್ಲ. ಅವರು ನನಗೆ ಅಹಿತವಾದುದನ್ನು ಯೋಚಿಸುವರೆ? ಋಷಿಗಳ ಮೇಲೆ ಕೋಪಿಸತಕ್ಕ ಯಾರಾದರೂ ಅಲ್ಲಿ ಆಯುಧಗಳನ್ನು ಹೂಳಿ ಇಟ್ಟಿರಬಹುದು." ಈ ರೀತಿಯಾಗಿ ಹೇಳಿ ರಾಜನು ಆ ಸಂಗತಿಯನ್ನು ಅಲಕ್ಷ್ಯಮಾಡಿ ಸುಮ್ಮನೆ ಇದ್ದನು. ಆಮೇಲೆ, ವ್ಯಾಳಮಂತ್ರಿ ಕೆಲವು ದಿನಗಳ ನಂತರ ಕೋಶಾಗಾರದ ಮನೆಯಲ್ಲಿ ಕನ್ನ ಹಾಕಿಸಿ ಭಂಡಾರದ ದ್ರವ್ಯಗಳ ಪೆಟ್ಟಿಗೆಗಳನ್ನು ಒಡೆದು ದ್ರಮ್ಮನಾಣ್ಯಗಳನ್ನೂ ಚಿನ್ನವನ್ನೂ ಆಭರಣಗಳನ್ನೂ ದಾರಿಯುದ್ದಕ್ಕೂ ಸಾಲಾಗಿ ಸುರಿಯುತ್ತ ನಟ್ಟಿರುಳಲ್ಲಿ ಕೊಂಡುಹೋಗಿ ಋಷಿಗಳಿರುವ ಬಸದಿಯೊಳಗೆ ಒಂದು

ಕಳ್ಳದಿರಿಂ ಪೆಱರ ವಸ್ತುವಂ ಕೊಳ್ಳದಿರಿಮೆಂದು ಬ್ರತಂಗಳಂ ಕುಡುವರ್ ತಾಮೆ ಕಳ್ಳರೆ ಆರಾನುಮವರ್ಗೆ ಮುಳಿವರಿದಂ ಮಾಡಿದರೆಂದದುವಂ ಕಡೆಗಣಿಸಿ ಕೆಮ್ಮಗಿರ್ದಂ ಮತ್ತೆ ಕೆಲವು ದಿನದಿಂ ಮೇಲೆ ಸುವ್ರತೆಯೆಂಬ ಮಹಾದೇವಿಯೊಡನೆ ಮಂತ್ರಿ ಕಜ್ಜಮಂ ಸಮಕಟ್ಟಿಯೊಂದು ದಿವಸಮೊರ್ವ ಬೂತಿಂಗೆ ದ್ರಮ್ಮಮಂ ಕೊಟ್ಟೊಡಂಬಡಿಸಿ ತಲೆಯಂ ಕಿರಿಸಿ ಕರಿಯ ಕೋವಣಮನುಡಿಸಿ ಪಲ್ಲಕ್ಕಿಯೊಳ್ ಕವಡಿಕೆಯಂ ಕಟ್ಟಿಸಿ ಕುಂಚಮಂ ಕೊಟ್ಟುಂತೆಂದಂ ನೀಂ ಮಹಾದೇವಿಯ ಮಂಚಮನಂಜದೇಜೆ ಆಕೆಯೊಡನೆ ನಗುತ್ತಂ ತೆಗಬುತ್ತಮಿರೆಂದು ಕಲ್ಪಿಸಿದನನ್ನೆಗಮಿತ್ತರಸಂ ಋಷಿಯರ್ಕಳೆಲ್ಲರುಮನೂಡಿ ಕಟೆಪಿದ ಬಟೆಕೆ, ಬರ್ಪೊನನ್ನೆಗವುಂ ಬೂತುವುಂ ಪ್ರಸ್ತಾವದೊಳ್ ಪೋಗಿ ಮಹಾದೇವಿಯ ಮಂಚಮನೇಟಿರ್ದಾಗಳ್ ಅರಸಿ ಮಂಚದಿಂದಿಟೆದು ಕೈಗಳಂ ಮುಗಿದು ನಮೋಸ್ತುದೇನೆಂದು ನುಡಿದೊಡಾತನಿಂತೆಂದಂ ನಿನಗಾಟಿಸಿ ಬೇಂಟಿಂಗೊಂಡು ಬಂದೆಂ ಪೆಱತೇನುಮಂ ನುಡಿಯದಿರಿತ್ತ ಬಾ ಎಂದು ಮಂಚದತ್ತ ಕರೆವುದನಿತೆಲ್ಲಮಂ ನೃಪತಿಗೆ ಮಂತ್ರಿ ತೋಜೆ ಇಂತೆಂದಂ ನೋಡರಸಾ ನಿಮ್ಮ ಸವಣರ ಗೊಡ್ಡಮಂ ನಿನ್ನಂ ಕೊಲಲ್ ನೆಜೆದಾಯುಧಂಗಳಂ ಪೂಟ್ಟಿಟ್ಟೊರೆಂದೊಡಂ ನಂಬದೆಯಿಲ್ಲ ಭಂಡಾರಮಂ ಕಳ್ದರೆಂದೊಡದಂ ನಂಬದೆಯಿಲ್ಲಮೀಗಳ್ ಪ್ರತ್ಯಕ್ಷಂ ನೋಡು ನಿನ್ನ ಮಹಾದೇವಿಯೊಡನೆ ಗೊಡ್ಡಮಾಡುವುದಂ ನಿನ್ನ ಪೆಂಡಿರುಮಂ ಬರ್ದುಂಕಲಿತ್ತಪ್ಪೊರಿಲ್ಲಿಂದು ತೋಜೆ ನುಡಿದೊಡರಸಂ ಮುನ್ನ ಕಟೆದ ದೋಷಮೆಲ್ಲಮನಿವರೆ ಮಾಡಿದರೆಂಬೊಂದು ನಂಬುಗೆ ಮನದೊಳಾಗಿ

ಕೋಣೆಯಲ್ಲಿ ರಾಶಿ ಹಾಕಿಟ್ಟು ಬಂದು, ಹೊತ್ತಾರೆ ರಾಜನಿಗೆ ಈ ರೀತಿಯಾಗಿ ಹೇಳಿದನು- "ಪ್ರಭು, ನಿಮ್ಮ ದ್ರವ್ಯಾಗಾರದ ಮನೆಯಲ್ಲಿ ಕನ್ನ ಹಾಕಿ ಭಂಡಾರವನ್ನೆಲ್ಲ ಕದ್ದುಕೊಂಡು ಹೋಗಿದ್ದಾರೆ." ಹೀಗೆ ಹೇಳಿದಾಗ ರಾಜನು "ಯಾರು ತೆಗೆದುಕೊಂಡರು, ವಿಚಾರಿಸು" ಎಂದು ತಳಾರ (ಪಟ್ಟಣದ ಕಾವಲುಗಾರ)ನಿಗೆ ಆಜ್ಞೆಮಾಡಿದನು. ತಳಾರನು ವಿಚಾರಮಾಡಿ ಬಂದು, "ಪ್ರಭುವೇ ಋಷಿಗಳು ಕನ್ನ ಹಾಕಿ ತಮ್ಮ ಬಸದಿಯಲ್ಲಿ ಚಿನ್ನವನ್ನೆಲ್ಲ ರಾಶಿ ಹಾಕಿದ್ದಾರೆ. ದ್ರಮ್ಮನಾಣ್ಯವೂ ಚಿನ್ನವೂ ಬಸದಿಯವರೆಗೂ ಉದುರುತ್ತ ಹೋಗಿ ದಾರಿಯು ಈ ಸಂಗತಿಯನ್ನು ಸಾರುವ ಬೀದಿಯಂತಾಗಿದೆ" ಎಂದು ಹೇಳಿದನು. ಆಗ ರಾಜನು ಹೀಗೆಂದನು - "ಋಷಿಗಳು ಶ್ರಾವಕರಿಗೆ - ಕಳವು ಮಾಡದಿರಿ ಬೇರೆಯವರ ವಸ್ತುವನ್ನು ತೆಗೆದುಕೊಳ್ಳದಿರಿ ಎಂದು ವ್ರತಗಳನ್ನು ಕೊಡತಕ್ಕವರು. ಅವರು ಸ್ವತಃ ಕಳ್ಳತನ ಮಾಡುವರೆ? ಯಾರಾದರೂ ಅವರ ಮೇಲೆ ಕೋಪಗೊಳ್ಳುವವರು ಇದನ್ನು ಮಾಡಿದ್ದಾರೆ" - ಎಂದು ಅದನ್ನೂ ಕಡೆಗಣಿಸಿ ಸುಮ್ಮನಿದ್ದನು. ಮತ್ತೆ ಕೆಲವು ದಿನಗಳಾದ ಮೇಲೆ, ಸುವ್ರತೆಯೆಂಬ ಮಹಾರಾಣಿಯೊಂದಿಗೆ ಮಂತ್ರಿಯು ಕಾರ್ಯವನ್ನು ವ್ಯವಸ್ಥೆಗೊಳಿಸಿ ಒಂದು ದಿವಸ ಒಬ್ಬ ವ್ಯಕ್ತಿಗೆ ಹಣವನ್ನು ಕೊಟ್ಟು ಒಪ್ಪುವಂತೆ ಮಾಡಿ ಅವನ ತಲೆಯನ್ನು ಬೋಳು ಮಾಡಿಸಿದನು. ಕಪ್ಪಾದ ಕೌಪೀನವನ್ನು ಉಡಿಸಿ, ಹಲ್ಲುಗಳಿಗೆ ಕವಡೆಗಳನ್ನು ಕಟ್ಟಿಸಿದನು. ನವಿಲುಗರಿಯ ಗೊಂಡೆಯನ್ನು ಕೈಗೆ ಕೊಟ್ಟು ಹೀಗೆಂದನು - "ನೀನು ಹೆದರದೆ ಮಹಾರಾಣಿಯ ಮಂಚವನ್ನೇರಿ ಆಕೆಯೊಂದಿಗೆ ನಗುತ್ತ ಬಯ್ಯುತ್ತ ಇರು" ಎಂದು ಹೇಳಿಕೊಟ್ಟನು. ಹೀಗಿರಲು ಇತ್ತ ರಾಜನು ಋಷಿಗಳಿಗೆಲ್ಲ ಭೋಜನವನ್ನಿತ್ತು ಕಳುಹಿಸಿ ಮೇಲೆ ಬರುತ್ತಿದ್ದನು. ಆ ವೇಳೆಗೆ, ಆ ವ್ಯಕ್ತಿ ಅದೇ ಸಂದರ್ಭದಲ್ಲಿ ಹೋಗಿ ಮಹಾರಾಣಿಯ ಮಂಚದ ಮೇಲೇರಿದನು. ಆಗ ರಾಣಿಯು ಮಂಚದಿಂದ ಇಳಿದು ಕೈಗಳನ್ನು ಮುಗಿದು "ನಮಸ್ಕಾರ, ಇದೇನು?" ಎಂದು ಹೇಳಿದಾಗ ಆತನು "ನಿನ್ನನ್ನು ನಾನು ಬಯಸಿ ಪ್ರೇಮವನ್ನು ಹೊಂದಿ ಬಂದಿದ್ದೇನೆ.

ಋಷಿಯರ್ಕಳ್ಗೆ ಕಡುಮುಳಿದು ಮಂತ್ರಿಯನಿಂತೆಂದನಿವರ್ಗೇ ತಕ್ಕ ನಿಗ್ರಹಮಂ ನೀನಱಿದು ಮಾಡೆಂದು ಪೇೞ್ದೊಡಾತನುಮಂತೆಗೆಯ್ದೆನೆಂದೆೞ್ಕ ಗಾಣಂಗಳೊಳಿಟ್ಟಯ್ನೂರ್ವರ್ ಋಷಿಯರ್ಕಳಂ ಪಿಟಿದು ಕೊಂದನವರುಂ ಶುಕ್ಲಧ್ಯಾನಂಗಳೊಳ್ ಕೂಡಿ ಮುಡಿಪಿಯನಿಬರುಂ ಸ್ವರ್ಗಂಗಳೊಳ್ ಪುಟ್ಟಿದರ್ ಮತ್ತವರೊಳಗೆ ಸ್ಕಂದಕುಮಾರನೆಂಬ ಋಷಿ ನಿರಪರಾಧಿಗಳಂ ನಿರ್ದೋಷಿಗಳಂ ನಿರರ್ಥಕಮೀ ಪಾತಕಂ ಕೊಂದನೆಂದು ತನ್ನಂತರಂಗದಲ್ಲಿ ಸೈರಿಸಲಾಱದೆ ತೀವ್ರ ಕೋಪಂ ಪುಟ್ಟ ಕೈಮಿಗೆ ಆ ಪುಸ್ತಾವದೊಳ್ ತೇಜೋಋದ್ಧಿ ಪುಟ್ಟೆ ಫನರವದಿಂ ಬಂದರಸನುಂ ವ್ಯಾಳನೆಂಬ ಮಂತ್ರಿ ಮೊದಲಾಗಿ ಪೊಬಲೆಲ್ಲಾ ಪ್ರಜೆಯುಮಂ ಮತ್ತಮಾತನ ನಾದ ಸಮಸ್ತ ಜೀವರಾಶಿಗಳೆಲ್ಲಮನೆಯ್ದೆ ಸುಟ್ಟು ತನ್ನ ಶರೀರಮುಮಂ ಭಸ್ಮಂ ಮಾಡಿ ಸುಟ್ಟು ಸತ್ತೇೞನೆಯ ನರಕಂಬೊಕ್ಕಂ ಮತ್ತಿತ್ತ ದಂದಕನೃಪತಿಯುಮೇೞನೆಯ ನರಕದೊಳ್ ಮೂವತ್ತಮೂಱು ಸಾಗರೋಪಮಾಯುಷ್ಯಮನೊಡೆಯೊಂ ನಾರಕನಾಗಿ ಪುಟ್ಟಿಯಲ್ಲಿಂದಂ ಬಂದು ಸ್ವಯಂಭೂರಮಣ ಸಮುದ್ರದೊಳ್ ಝಹಾಮತ್ಸ್ಯಮಾಗಿ

ಬೇರೇನನ್ನೂ ಮಾತಾಡದೆ ಇತ್ತ ಬಾ" ಎಂದು ಮಂಚದ ಕಡೆಗೆ ಕರೆದನು. ಅದೆಲ್ಲವನ್ನೂ ರಾಜನಿಗೆ ಮಂತ್ರಿ ತೋರಿಸಿ ಹೀಗೆಂದನು - "ಎಲೈ ಅರಸನೇ, ನಿಮ್ಮ ಜೈನಯತಿಗಳ ಚೇಷ್ಟೆಯನ್ನು ನೋಡು. ನಿನ್ನನ್ನು ಕೊಲ್ಲುವುದಕ್ಕಾಗಿ ಸಮರ್ಥರಾಗಿ ಆಯುಧಗಳನ್ನು ಹೂಳಿ ಇಟ್ಟಿದ್ದಾರೆ ಎಂದು ನಾನು ಹೇಳಿದರೂ ನೀನು ನಂಬಲಿಲ್ಲ. ದ್ರವ್ಯಾಗಾರದಲ್ಲಿ ಕಳವು ಮಾಡಿದರೆಂದು ಹೇಳಿದಾಗ ಅದನ್ನೂ ನಂಬಲಿಲ್ಲ. ಈಗ ನಿನ್ನ ಮಹಾರಾಣಿಯೊಂದಿಗೆ ಚೇಷ್ಟೆ ಮಾಡುವುದನ್ನು ಪ್ರತ್ಯಕ್ಷವಾಗಿ ನೋಡು. ನಿನ್ನ ಹೆಂಡಿರನ್ನು ಬದುಕಲಿಕ್ಕೆ ಇವರು ಬಿಡುವವರಲ್ಲ" - ಎಂದು ತೋರಿಸಿ ಹೇಳಿದನು. ಆಗ ರಾಜನು ಮುಂಚೆ ಆಗಿಹೋದ ತಪ್ಪನ್ನೆಲ್ಲ ಈ ಜೈನಯತಿಗಳೇ ಮಾಡಿದರೆಂಬ ನಂಬಿಕೆ ತನ್ನ ಮನಸ್ಸಿನಲ್ಲಿ ಆಗಲು, ಋಷಿಗಳ ಮೇಲೆ ಬಹಳ ಸಿಟ್ಟುಗೊಂಡು ಮಂತ್ರಿಯೊಡನೆ ಹೀಗೆಂದನು - "ಇವರಿಗೆ ಯೋಗ್ಯವಾದ ದಂಡನೆಯನ್ನು ನೀನು ತಿಳಿದುಕೊಂಡು ಬೇಕಾದಂತೆ ಮಾಡು" ಎಂದು ರಾಜನು ಹೇಳಲು, 'ಹಾಗೆಯೇ ಮಾಡುವೆನು' ಎಂದು ಮಂತ್ರಿ ಹೇಳಿದನು. ಅದರಂತೆ ಮಂತ್ರಿಯು ಐನೂರು ಮಂದಿ ಋಷಿಗಳನ್ನೂ ಎಳ್ಳಿನ ಗಾಣಗಳಲ್ಲಿ ಇಟ್ಟು ಅವರನ್ನೆಲ್ಲ ಹಿಂಡಿ ಕೊಂದನು. ಅವರು ಶುಕ್ಲಧ್ಯಾನಗಳಲ್ಲಿ ಕೂಡಿದವರಾಗಿ ಸತ್ತರು. ಅವರೆಲ್ಲರೂ ಸ್ವರ್ಗಗಳಲ್ಲಿ ಜನಿಸಿದರು. ಅನಂತರ, ಅವರಲ್ಲಿ ಸ್ಕಂದಕುಮಾರನೆಂಬ ಋಷಿಯು - "ಈ ಪಾಪಿ ಅಪರಾಧ ಮಾಡದವರನ್ನೂ ದೋಷವಿಲ್ಲದವರನ್ನೂ ನಿಷ್ಪ್ರಯೋಜಕವಾಗಿ ಕೊಂದನು" ಎಂದು ತನ್ನ ಮನಸ್ಸಿನಲ್ಲಿ ಸಹಿಸಲಾರದೆ ಹೆಚ್ಚಾದ ಕೋಪವುಂಟಾಗಿ ಅದು ಮಿತಿಮೀರಲು, ಆ ಸಂದರ್ಭದಲ್ಲಿ ತೇಜದ ಉನ್ನತಿಯುಂಟಾಗಿ ಗುಡುಗಿನ ಶಬ್ದದೊಂದಿಗೆ ಬಂದು ರಾಜನನ್ನೂ ವ್ಯಾಳನೆಂಬ ಮಂತ್ರಿ ಮೊದಲಾಗಿ ಪಟ್ಟಣದ ಎಲ್ಲ ಪ್ರಜೆಗಳನ್ನೂ ಅವನ ನಾಡಿನ ಎಲ್ಲ ಜೀವರಾಶಿಗಳನ್ನೂ ವಿಶೇಷವಾಗಿ ಸುಟ್ಟು ತನ್ನ ದೇಹವನ್ನೂ ಬೂದಿಮಾಡಿ ಸುಟ್ಟು ಸತ್ತು ಏಳನೆಯ ನರಕವನ್ನು ಪ್ರವೇಶಿಸಿದನು. ಆಮೇಲೆ ಇತ್ತ ದಂಡಕ ರಾಜನು ಏಳನೆಯ ನರಕದಲ್ಲಿ ಮೂವತ್ತಮೂರು ಸಾಗರದಷ್ಟು ಆಯುಷ್ಯವುಳ್ಳ ನರಕಜೀವಿಯಾಗಿ ಹುಟ್ಟಿದನು. ಅಲ್ಲಿಂದ ಬಂದು ಸ್ವಯಂಭೂರಮಣ ಸಮುದ್ರದಲ್ಲಿ ಒಂದು ದೊಡ್ಡ ಮೀನಾಗಿ ಹುಟ್ಟಿ ಹಲವು ಪ್ರಾಣಿಗಳನ್ನು ಕೊಂದು ತಿಂದು ಸತ್ತು ಆರನೆಯ ನರಕದಲ್ಲಿ ಇಪ್ಪತ್ತೆರಡು ಸಾಗರಕ್ಕೆ

ಪುಟ್ಟಿ ಪಲವು ಜೀವಂಗಳಂ ಕೊಂದು ತಿಂದು ಸತ್ತಾಜಿನೆಯ ನರಕದೊಳ್ ಇರ್ಪತ್ತೆರಡು ಸಾಗರೋಪಮಾಯುಷ್ಯಮನೊಡೆಯೊಂ ನಾರಕನಾಗಿ ಪುಟ್ಟಿ ಸತ್ತು ಬಂದಿಲ್ಲಿ ಸಿಂಹಮಾಗಿ ಪುಟ್ಟಿ ಸತ್ತಯ್ದನೆಯ ನರಕದೊಳ್ ಪದಿನಯ್ದು ಸಾಗರೋಪಮಾಯುಷ್ಯಮನೊಡೆಯ ನಾರಕನಾಗಿ ಪುಟ್ಟಿ ಸತ್ತು ಬಂದಿಲ್ಲಿ ಪೆರ್ಮಾವಾಗಿ ಪುಟ್ಟಿ ಸತ್ತು ನಾಲ್ಕನೆಯ ನರಕದೊಳ್ ಪತ್ತುಸಾಗರೋಪಮಾಯುಷ್ಯಮನೊಡೆಯ ನಾರಕನಾಗಿ ಪುಟ್ಟಿ ಸತ್ತು ಬಂದಿಲ್ಲಿ ಪುಲಿಯಾಗಿ ಪುಟ್ಟಿ ಸತ್ತು ಮೂಜಿನೆಯ ನರಕದೊಳ್ ಏಱುಸಾಗರೋಪಮಾಯುಷ್ಯಮನೊಡೆಯ ನಾರಕನಾಗಿ ಪುಟ್ಟಿ ಸತ್ತು ಬಂದಿಲ್ಲಿ ಭೇರುಂಡವಕ್ಕಿಯಾಗಿ ಪುಟ್ಟಿ ಸತ್ತು ಎರಡನೆಯ ನರಕದೊಳ್ ಮೂಱು ಸಾಗರೋಪಮಾಯುಷ್ಯಮನೊಡೆಯ ನಾರಕನಾಗಿ ಪುಟ್ಟಿ ಸತ್ತು ಬಂದಿಲ್ಲಿ ಕೊಂಕನಾಗಿ ಪುಟ್ಟಿ ಪಾಪಂಗೆಯ್ದು ಸತ್ತು ಪ್ರಥಮ ನರಕದೊಳೊಂದು ಸಾಗರೋಪಮಾಯುಷ್ಯಮನೊಡೆಯ ನಾರಕನಾಗಿ ಪುಟ್ಟಿ ಸತ್ತು ಬಂದಿಲ್ಲಿ ತ್ರಸಸ್ಥಾವರಂಗಳೊಳ್ ಪುಟ್ಟಿ ಪಲಕಾಲಂ ಸಂಸಾರದುಃಖಮನನುಭವಿಸಿ ನೀಡಜೆಂದೆತ್ತಾನುಂ ಬಂದಿಲ್ಲಿ ಜಟಾಯುವೆಂಬ ಪಕ್ಷಿಯಾಗಿ ಪುಟ್ಟಿ ರಾಮದೇವನ ಸಂಸರ್ಗದಿಂ ಜಿನಧರ್ಮಮಂ ಪೆತ್ತು ಪಂಚನಮಸ್ಕಾರದೊಳ್ ಕೂಡಿ ಸತ್ತು ಸ್ವರ್ಗದೊಳ್ ಪುಟ್ಟಿತ್ತು ಮತ್ತೆ ಪೆಱರುಂ ಸಂನ್ಯಸನಂಗೆಯ್ದಿರ್ದ ಭವ್ಯರ್ಕಳ್ ಮಹೇಂದ್ರದತ್ತಂ ಮೊದಲಾಗೊಡೆಯ ಅಯ್ನೂರ್ವರ್ ಋಷಿಯರ್ಕಳ್ ಗಾಣದೊಳ್ ಪಿಚಿಸಿಕೊಂಡುದಂ ಮನದೊಳ್ ಬಗೆದು ಪಸಿವುಂ ನೀರಟ್ಟಿ ಮೊದಲಾಗೊಡೆಯ ಪರೀಷಹಂಗಳಂ ಸೈರಿಸಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

ಸಮಾನವಾದ ಆಯುಷ್ಯವುಳ್ಳ ನರಕಜೀವಿಯಾಗಿ ಹುಟ್ಟಿತು. ಅದು ಅಲ್ಲಿ ಸತ್ತು ಇಲ್ಲಿಗೆ ಬಂದು ಸಿಂಹವಾಗಿ ಹುಟ್ಟಿ ಸತ್ತಿತು. ಮತ್ತೆ ಐದನೆಯ ನರಕದಲ್ಲಿ ಹದಿನೈದು ಸಾಗರಕ್ಕೆ ಸಮಾನವಾದ ಆಯುಷ್ಯವುಳ್ಳ ನರಕಜೀವಿಯಾಗಿ ಹುಟ್ಟಿ ಸತ್ತ ಮೇಲೆ ಇಲ್ಲಿ ಬಂದು ಹೆಬ್ಬಾವಾಗಿ ಹುಟ್ಟಿತು. ಅದು ಸತ್ತು ನಾಲ್ಕನೆಯ ನರಕದಲ್ಲಿ ಹತ್ತು ಸಾಗರವನ್ನು ಹೋಲುವ ಆಯುಷ್ಯವನ್ನುಳ್ಳ ನರಕಜಂತುವಾಗಿ ಹುಟ್ಟಿ ಸತ್ತ ಮೇಲೆ ಇಲ್ಲಿಗೆ ಬಂದು ಹುಲಿಯಾಗಿ ಹುಟ್ಟಿ ಸತ್ತು ಮೂರನೆಯ ನರಕದಲ್ಲಿ ಏಳು ಸಾಗರೋಪಮ ಆಯುಷ್ಯವಿರತಕ್ಕ ನರಕಜೀವಿಯಾಗಿ ಹುಟ್ಟಿ ಸತ್ತು ಬಂದು ಇಲ್ಲಿ ಭೇರುಂಡ ಪಕ್ಷಿಯಾಯಿತು. ಅದು ಸತ್ತು ಎರಡನೆಯ ನರಕದಲ್ಲಿ ಮೂರುಸಾಗರ ಆಯುಷ್ಯವುಳ್ಳ ನಾರಕನಾಗಿ ಹುಟ್ಟಿ ಸತ್ತು ಇಲ್ಲಿ ಬಂದು ಡೊಂಕುಳ್ಳವನಾಗಿ ಹುಟ್ಟಿ ಪಾಪವನ್ನು ಮಾಡಿ ಸತ್ತು ಮೊದಲನೆಯ ನರಕದಲ್ಲಿ ಒಂದು ಸಾಗರ ಆಯುಷ್ಯವುಳ್ಳ ನಾರಕನಾಗಿ ಹುಟ್ಟಿ ಸತ್ತಿತು. ಆ ಜೀವಿ ಇಲ್ಲಿ ಬಂದು ಚಲನವುಳ್ಳ ಮತ್ತು ಚಲನವಿಲ್ಲದ ಜೀವಿಗಳ ಜನ್ಮದಲ್ಲಿ ಬಂದು ಹಲವು ಕಾಲ ಸಂಸಾರದ ದುಃಖವನ್ನು ಅನುಭವಿಸಿ ದೀರ್ಘಕಾಲವಾದ ಮೇಲೆ ಹೇಗೋ ಬಂದು ಇಲ್ಲಿ ಜಟಾಯುವೆಂಬ ಪಕ್ಷಿಯಾಗಿ ಹುಟ್ಟಿತು. ಅದು ಶ್ರೀರಾಮದೇವರ ಒಡನಾಟದಿಂದ ಜೈನಧರ್ಮವನ್ನು ಪಡೆದು ಅರ್ಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸಾಧು - ಇವರಿಗೆ ಮಾಡತಕ್ಕ ಐದು ನಮಸ್ಕಾರಗಳನ್ನು ಆಚರಿಸಿ ಸತ್ತು ಸ್ವರ್ಗದಲ್ಲಿ ಹುಟ್ಟಿತು. ಅದಲ್ಲದೆ, ಸಂನ್ಯಾಸವನ್ನು ಮಾಡಿದ ಇತರ ಭವ್ಯರು ಕೂಡ, ಮಹೇಂದ್ರದತ್ತ ಮೊದಲಾಗಿ ಉಳ್ಳ ಐನೂರು ಮಂದಿ ಋಷಿಗಳು ಗಾಣದಲ್ಲಿ ಹಿಂಡಲ್ಪಟ್ಟುದನ್ನು ಮನಸ್ಸಿನಲ್ಲಿ ಭಾವಿಸಿ, ಹಸಿವು ಬಾಯಾರಿಕೆ ಮೊದಲಾಗಿ ಉಳ್ಳ ಪರೀಷಹಗಳನ್ನು ಸಹಿಸಿಕೊಂಡು ಸ್ವರ್ಗ ಮೋಕ್ಷಗಳ ಸುಖಿಗಳನ್ನು ಪಡೆಯಲಿ!

೧೮. ಚಾಣಾಕ್ಯ ರಿಸಿಯ ಕಥೆ

ಚಾಣಾಕ್ಯರಿಸಿಯ ಕಥೆಯಂ ಪೇಳ್ದಿಂ :

ಗಾಹೆ ॥ ಗೊಟ್ಠೇ ಪಾಓವಗದೋ ಸುಬಂಧುಣಾ ಗೊಬ್ಬರೇ ಪಳಿವಿದಹ್ಮಿ
ದಜ್ಝಂತೋ ಚಾಣಕ್ಕೋ ಪವಣ್ಣೋ ಉತ್ತಮಂ ಅಟ್ಠಂ ॥

[ಗೊಟ್ಠೇ-ತುಲುಪಟ್ಟಿಯೊಳ್, ಪಾಓವಗದೋ-ಪ್ರಾಯೋಪಗಮನಕೆ, ಸಂದೊನಾಗಿ, ಸುಬಂಧುಣಾ-ಸುಬಂಧುವೆಂಬೊಂ ಮಂತ್ರಿಯಿಂದಂ, ಗೊಬ್ಬರೇ-ಗೊಬ್ಬರದೊಳ್, ಪಳಿವಿದಹ್ಮಿ-ಉರಿಪೆ ಪಟ್ಟುದಾದೊಡೆ, ದಜ್ಝಂತೋ-ಬೇಯುತ್ತಿರ್ದೊನಾಗಿಯುಂ, ಚಾಣಕ್ಕೋ-ಚಾಣಾಕ್ಯನೆಂಬ ರಿಸಿ, ಪವಣ್ಣೋ ಉತ್ತಮಂ ಅಟ್ಠಂ-ಮಿಕ್ಕ ದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯಂ ಪೊರ್ದಿದೊಂ]

ಅದೆಂತೆಂದೊಡೆ : ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಮಗಧೆಯೆಂಬುದು ನಾಡಲ್ಲಿ ಪಾಟಳೀಪುತ್ರಮೆಂಬುದು ಪೊಬಲದನಾಳ್ವೊಂ ನಂದವಂಶದೊಂ ಪದ್ಮನೆಂಬೊನರಸನಾತನ ಮಹಾದೇವಿ ಸುಂದರಿಯೆಂಬೊಳಾಯಿರ್ವರ್ಗಂ ಮಗಂ ಮಹಾಪದ್ಮನೆಂಬೊಂ ಮಂತ್ರಿ ಕಾಪಿಯೆಂಬೊ ನಾತಂಗೆರಡನೆಯ ಪೆಸರ್ ವಿಶ್ವಸೇನನೆಂಬುದಂತವರ್ಗಳಿಷ್ಟವಿಷಯ ಕಾಮಭೋಗಂಗಳನನು ಭವಿಸುತ್ತಿರೆಯಿರೆ ಮತ್ತೊಂದು ದಿವಸಂ ಕಾಪಿಯೆಂಬ ಮಂತ್ರಿ ಸುಂದರಿಮಹಾದೇವಿಗೆ ಕಣ್ಣೇಟಂಗೊಂಡು ಅರಸನಂ ಕೊಂದರಸಿಯೊಳ್ ಬಾಳ್ವೆನೆಂಬ ಬಗೆಯಿಂದಂ ಪರಚಕ್ರದರಸುಗಳಂ ಪದ್ಮನ ಮೇಗೇಳ್ಚಂತಿರೆ ಮಾಡಿಯರಸನನಿಂತೆಂದಂ ದೇವಾ ನಿಮ್ಮ ಸಾರಮಪ್ಪ ದ್ರವ್ಯಮನಾರುಮಱಿಯದಲ್ಲಿ ಮಡಗಿ ನಾಮುಚ್ಚವಿಗ್ರಹದೊಳ್ ನಿಂದು ಕಾದುವಮೆಂದು ಪೇೞ್ದು ದ್ರವ್ಯಮನಿಡುವ ಪ್ರದೇಶಮಂ ತೋರ್ಪ ನೆವದಿಂದರಸನಂ ಬಯ್ಗುರುಳಿನ ಜಾವದಾಗಳ್ ಉದ್ಯಾನವನಕ್ಕೊಡಗೊಂಡು ಪೋಗಿ ಗುಂಡಿತಪ್ಪುದೊಂದು

ಚಾಣಾಕ್ಯ ಋಷಿಯ ಕಥೆಯನ್ನು ಹೇಳುವೆನು - ಚಾಣಾಕ್ಯನೆಂಬ ಋಷಿ ಆಕಳ ಹಟ್ಟಿಯಲ್ಲಿ ಪ್ರಾಯೋಪಗಮನಕ್ಕೆ ಸಂದವನಾಗಿ ಸುಬಂಧುವೆಂಬ ಮಂತ್ರಿಯಿಂದ ಬೆರಣಿಯಲ್ಲಿ ಉರಿಸಲ್ಪಟ್ಟು ಬೇಯುತ್ತ ಶ್ರೇಷ್ಠ ದರ್ಶನ ಜ್ಞಾನ ಚಾರಿತ್ರಗಳ ಆರಾಧನೆಯನ್ನು ಮಾಡಿದನು. ಅದು ಹೇಗೆಂದರೆ - ಈ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ಮಗಧೆ ಎಂಬ ನಾಡಿನಲ್ಲಿ ಪಾಟಲೀಪುತ್ರವೆಂಬ ಪಟ್ಟಣವುಂಟು. ಅದನ್ನು ನಂದವಂಶದವನಾದ ಪದ್ಮನೆಂಬ ಅರಸನು ಆಳುತ್ತಿದ್ದನು. ಅವನ ಮಹಾರಾಣಿ ಸುಂದರಿ ಎಂಬವಳು. ಆ ಇಬ್ಬರಿಗೂ ಮಹಾಪದ್ಮನೆಂಬವನು ಮಗನು. ಕಾಪಿ ಎಂಬವನು ಮಂತ್ರಿ. ಕಾಪಿಗೆ ಎರಡನೆಯ ಹೆಸರು ವಿಶ್ವಸೇನನೆಂದು. ಅಂತು ಅವರು ಇಷ್ಟ ವಿಷಯಗಳಾದ ಕಾಮಸುಖಗಳನ್ನು ಅನುಭವಿಸುತ್ತ ಇದ್ದರು. ಅನಂತರ, ಒಂದು ದಿವಸ ಕಾಪಿ ಎಂಬ ಮಂತ್ರಿ ಸುಂದರಿ ಮಹಾದೇವಿಯನ್ನು ನೋಡಿ ಮೋಹಿತನಾಗಿ ಅರಸನನ್ನು ಕೊಂದು ಅರಸಿಯೊಂದಿಗೆ ಬಾಳುವೆನೆಂಬ ಭಾವನೆಯಿಂದ, ಶತ್ರುರಾಜ್ಯದ ರಾಜರನ್ನು ಪದ್ಮನ ಮೇಲೆ ದಂಡೆತ್ತಿ ಬರುವಂತೆ ಮಾಡಿದನು. ರಾಜನೊಡನೆ ಹೀಗೆ ಹೇಳಿದನು - "ದೇವಾ, ನಿಮ್ಮ ಬೆಲೆಬಾಳುವ ವಸ್ತುಗಳನ್ನು ಯಾರೂ ತಿಳಿಯದ ಕಡೆಯಲ್ಲಿ ಇಟ್ಟು ನಾವು ಭಾರೀ ಯುದ್ಧದಲ್ಲಿ ನಿಂದು ಕಾದಾಡೋಣ". ಹೀಗೆ ಹೇಳಿ, ಅಮೂಲ್ಯವಸ್ತುಗಳನ್ನು ಬಚ್ಚಿಡುವ

ನಾಡೆ ಕೆಸಱನೊಡೆಯ ಪಬವಾವಿಯ ತಡಿಯೊಳಿಱದು ಕೊಂದು ಬಾವಿಯೊಳ್ ನೂಂಕಿ ದೆಸೆಗಳಂ ನೋಬ್ಪನನ್ನೆಗಂ ಮರನ ಮೇಗಿರ್ದು ಪೂಗೊಯ್ವ ವಸಂತಕನೆಂಬ ಮಾಲೆಗಾಱನರಸನ ಸಾವಂ ಕಂದು ತನಗಂಜಿ ಪಾಯ್ದೋಡುವ ಭರದಿಂ ಮರದಲುಗುವ ಕೊಂಬಂ ಕಂಡಾದಮಾನುಂ ಭಯಸ್ಥನಾಗಿ ವಿಶ್ವಸೇನನಿಂತೆಂದಂ

ಶ್ಲೋಕ॥ ಯೇನೇಯಂ ಕಂಪಿತಾ ಶಾಖಾ ವಾನರೇಣ ನರೇಣ ವಾ
ಅಪಿ ವರ್ಷ ಸಹಸ್ರಾಂತಾತ್ ಮದ್ದೋಷಂ ಕಥಯಿಷ್ಯತಿ ॥

ಎಂದಿಂತು ಹೃದಯ ಸಂತಾಪ ಪರನಾಗಿ ತನ್ನ ಮನೆಗೆ ವೋಗಿ ನೇಸರ್ಮೂದಿದೊಡೆ ಸಾಮಂತ ಮಹಾಸಾಮಂತರ್ಕಳೊಡನೆ ಅರಮನೆಯ ಓಲಗಕ್ಕೆ ಪೋಗಿ ಎಲ್ಲಾ ವೋಳಿಯುಮಱಿಯಱಿಯರಸನಂ ಕಾಣದೆ ಕೃತಕಮುಖಮನಾದಮಾನುಂ ಗೆಯ್ದು ಕೆಲದಿವಸಮಂತಿರ್ದು ಮತ್ತೆ ಪ್ರಶಸ್ತ ದಿನ ವಾರ ನಕ್ಷತ್ರ ಮುಹೂರ್ತದೊಳ್ ಮಹಾಪದ್ಮಂಗೆ ರಾಜ್ಯಾಭಿಷೇಕಂಗೆಯ್ದು ಪಟ್ಟಂಗಟ್ಟಿ ಸುವ್ರತೆಯೆಂಬರಸಿಗೆ ಮಹಾದೇವಿ ಪಟ್ಟಂಗಟ್ಟಿ ಸುಂದರಿ ಮಹಾದೇವಿಯೊಡನೆ ಮಱೆವಾಯ್ತುತ್ತಿರ್ಕುಮಿಂತು ಪಲಕಾಲಂ ಸಲೆ ಮತ್ತೊಂದು ದಿವಸಂ ಮಹಾಪದ್ಮನಿಂತೆಂದು ಬಗೆವನೆನ್ನ ತಂಡೆಯ ಸಾವನಿನಿತೊಂದು ಮಹಾನಗರದೊಳ್ ಆವನೊರ್ವನಱಿಯದಿರ್ಕುಮೆ ಆತನನಾರಯ್ದೆನೆಂದರಮನೆಯಂ ಪೊಱಮಟ್ಟು

ಸ್ಥಳವನ್ನು ತೋರಿಸುವ ನೆವದಿಂದ ರಾಜನನ್ನು ಮುಂಜಾನೆಯ ಹೊತ್ತಿನಲ್ಲಿ ಉದ್ಯಾನವನಕ್ಕೆ ಒಡಗೂಡಿಕೊಂಡು ಹೋದನು. ಅಲ್ಲಿ ಆಳವಾಗಿರುವ ಮತ್ತು ಬಹಳ ಕೆಸರನ್ನುಳ್ಳ ಹಳೆಯ ಬಾವಿಯ ದಡದಲ್ಲಿ ತಿವಿದು ಕೊಂದು ಬಾವಿಗೆ ನೂಕಿದನು. ಆಮೇಲೆ ದಿಕ್ಕುಗಳ ಕಡೆಗೆ ನೋಡುತ್ತಿದ್ದನು. ಆ ವೇಳೆಗೆ ಮರದ ಮೇಲಿದ್ದು ಹೂವನ್ನು ಕೊಯ್ಯುವ ವಸಂತಕನೆಂಬ ಮಾಲೆಗಾರನು ಅರಸನ ಮರಣವನ್ನು ಕಂಡು, ವಿಶ್ವಸೇನನಿಗೆ ಹೆದರಿ ಹಾರಿ ಓಡುವ ಭರದಲ್ಲಿ ಮರದ ಕೊಂಬೆ ಅಲುಗಾಡಿತು. ಅದನ್ನು ಕಂಡು ಬಹಳವಾಗಿ ಹೆದರಿದವನಾಗಿ ವಿಶ್ವಸೇನನು ಹೀಗೆಂದನು - ಯಾವ ಕಪಿಯಿಂದ ಅಥವಾ ಮನುಷ್ಯನಿಂದ ಈ ಮರದ ಕೊಂಬೆ ಅಲುಗಾಡಿತೋ ಅದು ಸಾವಿರ ವರ್ಷಗಳ ಕೊನೆಯವರೆಗಾದರೂ ನನ್ನ ಅಪರಾಧವನ್ನು ಹೇಳುತ್ತದೆ. ಎಂದೀ ರೀತಿಯಾಗಿ ಮನಸ್ಸಿನಲ್ಲಿ ದುಃಖವಶನಾಗಿ ತನ್ನ ಮನೆಗೆ ಹೋದನು. ಸೂರ್ಯೋದಯವಾದೊಡನೆ ಸಾಮಂತರು ಮಹಾಸಾಮಂತರುಗಳೊಂದಿಗೆ ಅರಮನೆಯ ರಾಜಸಭೆಗೆ ಹೋದನು. ರಾಜನನ್ನು ಎಲ್ಲಾ ಸಾಲುಗಳಲ್ಲಿಯೂ ಹುಡುಕಿ ಹುಡುಕಿ ಕಾಣದೆ, ಅತಿಶಯವಾಗಿ ಕೃತಕಶೋಕವನ್ನು ಪ್ರದರ್ಶಿಸಿದನು. ಕೆಲವು ದಿವಸ ಹಾಗೆಯೇ ಇದ್ದು ಆಮೇಲೆ ಪ್ರಶಸ್ತವೆನಿಸಿದ ದಿನ, ವಾರ, ನಕ್ಷತ್ರ ಮುಹೂರ್ತದಲ್ಲಿ ಮಹಾಪದ್ಮನಿಗೆ ರಾಜ್ಯಾಭಿಷೇಕಮಾಡಿ ರಾಜ್ಯಪಟ್ಟವನ್ನು ಕಟ್ಟಿ ಸುವ್ರತೆ ಎಂಬ ರಾಣಿಗೆ ಪಟ್ಟದ ರಾಣಿಯ ಸ್ಥಾನವನ್ನು ಕೊಟ್ಟು ವಿಶ್ವಸೇನನ ಸುಂದರಿ ಮಹಾದೇವಿಯೊಂದಿಗೆ ರಹಸ್ಯ ಸಂಬಂಧವಿಟ್ಟು ಬಾಳುತ್ತಿದ್ದನು. ಹೀಗೆ ಹಲವು ಕಾಲ ಕಳೆಯಿತು. ಒಂದು ದಿವಸ ಮಹಾಪದ್ಮನು ಈ ರೀತಿಯಾಗಿ ಯೋಚಿಸಿದನು - "ಇಷ್ಟೊಂದು ದೊಡ್ಡದಾದ ನಗರದಲ್ಲಿ ನನ್ನ ತಂದೆಯ ಮರಣದ ವಿಚಾರವನ್ನು ಯಾವನೊಬ್ಬನೂ ತಿಳಿಯದೆ ಇರಬಹುದೇ !

ಪೋಗಿ ನಟ್ಟನಡುವಿರುಳ್ ಮಣಿಪೀಟಕಮನುರದೊಳಮರ್ಚ ಕಟ್ಟಿ ಬಾಳ್ವೆರಸು ಮನೆಮನೆಯ ಜನಂಗಳ ನುಡಿಯಂ ಕೇಳುತ್ತಮಂತೆ ಪೋಪನ್ನೆಗಂ ವಸಂತಕನೆಂಬ ಮಾಲೆಗಾಱನ ಮನೆಯನೆಯ್ದಿ ನುಡಿಯಂ ಕೇಳಲಿರ್ದನನ್ನೆಗಂ ಆತಂ ವನಮಾಳೆಯೆಂಬ ತನ್ನ ಪೆಂಡತಿಯ ವಿಯೋಗದಿಂ ಕದುದುಃಖದಿಂದಂ ಪೇಳ್ದುದಂ ಸಾಭಿಪ್ರಾಯ ಸಂಬಂಧಮಪ್ಪ ವಚನಮಂ ಕೇಳ್ದನದೆಂತೆನೆ

ಶ್ಲೋಕ ॥ ನೀಲೋತ್ಪಲದಳ ಶ್ಯಾಮೇ ಬಾಲೇ ನೀ ಲಸರೋರುಹೇ
ದಹ್ಯೇಽಹಂ ತ್ವದ್ವಿರ್ಹಾಗ್ನೇರ್ಭದ್ರೇ ವಿಶ್ವಂ ಶಾಖೀನ ಕಂಪಿತಾ (?) ॥

ಈ ವಾಕ್ಯಾರ್ಥಮಂ ಕೇಳ್ದರಸನರಮನೆಗೆ ಪೋಗಿ ನೇಸರ್ಮೂಡೆ ಸಭಾಮಂಟಪದೊಳ್ ಸಿಂಹಾಸನಾಸೀನನಾಗಿ ಸಾಮಂತ ಮಹಾಸಾಮಂತರ್ಕಳಿಂ ಪರಿವೇಷ್ಟಿತನಾಗಿರ್ದ್ದು ಮಾಲೆಗಾಱಂಗೆ ಬಟೆಯಟ್ಟಿ ಬರಿಸಿ ಎಮ್ಮರಸನಂ ಕೊಂದವನಂ ನೀನಱಿವೆಯಂಜದೆ ಪೇೞಲ್ಲದಿರ್ದೊಡೆ ನಿನ್ನಂ ಕೊಲಿಸಿದಪ್ಪೆನೆಂದೊಡೆ ಭಯದಿಂ ಪಿಡಿಪೆತ್ತುಮಾತನಿಂತೆಂದು ಪೇೞ್ದಂ ದೇವಾ ಬಯ್ಗುಱಿನ ಜ ವದಾಗಳ್ ವಿಶ್ವಸೇನನೆಂಬ ಮಂತ್ರಿಯರಸನನುದ್ಯಾನವನಕ್ಕೊಡಗೊಂಡು ಪೋಗಿ ಬಾವಿಯ ತಡಿಯೊಳಿರ್ದಿಜಿದು ಕೊಂದು ಬಾವಿಯೊಳ್ ನೂಂಕುವುದಂ ಮರನನೇಜೆ ಪೂಗೊಯ್ಯತಿರ್ದಾಂ ಕಂಡೆತ್ತಾನುಮೆನ್ನುಮಂ ಕೊಲ್ಲುಮೆಂದು ಭಯದಿಂ ಪಾಯ್ದೋದಿ ಕೆಟ್ಟೆನಿದೆನ್ನ ಕಂಡ ವೃತ್ತಾಂತಮೆಂದಾಗಳಾತಂಗೆ ಮೆಚ್ಚ ಬಿಚ್ಚಳಿಸಿ ತನ್ನಂಗಚತ್ತಮುಮಂ ಕೆಲವು ಬಾಯುಮಂ ಕೊಟ್ಟಾತನಂ ಸಂತಸಂಬಡಿಸಿ ಮಂತ್ರಿಯ

ತಿಳಿದವನು ಯಾವನಿದ್ದಾನೆಂದು ವಿಚಾರಿಸುವೆನು" ಎಂದು ಅರಮನೆಯಿಂದ ಹೊರಟನು. ಮಧ್ಯರಾತ್ರಿಯಲ್ಲಿ ರತ್ನಖಚಿತವಾದ ಗುರಾಣಿಯನ್ನು ಎದೆಯಲ್ಲಿ ಸೇರಿಸಿಟ್ಟುಕೊಂಡು ಒರೆಯಿಂದ ಹೊರತೆಗೆದ ಖಡ್ಗದೊಂದಿಗೆ ಇದ್ದು, ಮನೆಮನೆಯ ಜನರ ಮಾತುಗಳನ್ನು ಕೇಳುತ್ತ ಹಾಗೆಯೇ ಹೋಗುವಾಗ ವಸಂತಕನೆಂಬ ಮಾಲೆಗಾರನ ಮನೆಯ ಕಡೆಗೆ ಹೋಗಿ ಮಾತುಗಳನ್ನು ಕೇಳುವುದರಲ್ಲಿದ್ದನು.ಅಷ್ಟರಲ್ಲಿ ವಸಂತಕನು ವನಮಾಲೆ ಎಂಬ .ತನ್ನ ಹೆಂಡತಿಯ ಅಗಲಿಕೆಯಿಂದ (ಸಾವಿನಿಂದ) ಉಂಟಾದ ಬಹಳ ದುಃಖದಿಂದ ಹೇಳಿದಂತಹ ವಿಶೇಷಾರ್ಥದ ಸಂಬಂಧವುಳ್ಳ ಮಾತನ್ನು ಕೇಳಿದನು. ಅದು ಹೇಗೆಂದರೆ - ಕನ್ನೆಯ್ದಿಲೆಯ ಎಸಳಿನಂತೆ ಶ್ಯಾಮಲವಾಗಿರುವವಳೇ, ನೀಲಿಬಣ್ಣದ ತಾವರೆಯೇ, ಬಾಲೆಯೇ, ಮಂಗಳಾಂಗಿಯೇ, ನಿನ್ನ ಗುಣಗಳಿಂದಾಗಿ ನಾನು ಸಂತಾಪಗೊಳ್ಳುತ್ತಿದ್ದೇನೆ. ಪ್ರಪಂಚವು (ವಿಶ್ವಸೇನನು) ಮರದ ಕೊಂಬೆಯಿಂದ ನಡುಕಗೊಂಡಿದೆ (ನಡುಕಗೊಂಡನು). ಈ ವಾಕ್ಯಾರ್ಥವನ್ನು ಕೇಳಿ ಮಹಾಪದ್ಮನು ಅರಮನೆಗೆ ಹೋಗಿ ಸೂರ್ಯೋದಯವಾದೊಡನೆ ಸಭಾಮಂಟಪದಲ್ಲಿ ಸಿಂಹಾಸನದ ಮೇಲೆ ಕುಳಿತು ಸಾಮಂತ ಮಹಾಸಾಮಂತರಿಂದ ಸುತ್ತುವರಿದವನಾಗಿದ್ದು ಮಾಲೆಗಾರನ ಬಳಿಗೆ ದೂತರನ್ನು ಕಳುಹಿಸಿ, ಅವನನ್ನು ಬರಿಸಿದನು. "ನಮ್ಮ ರಾಜನನ್ನು ಯಾರು ಕೊಂದರೆಂದು ನೀನು ತಿಳಿದಿರುವೆ, ಹೆದರದೆ ಹೇಳು. ಅಲ್ಲವಾದರೆ ನಿನ್ನನ್ನು ಕೊಲ್ಲಿಸುತ್ತೇನೆ" ಎಂದು ಹೇಳಿದನು. ಮಾಲೆಗಾರನು ಭಯಗ್ರಸ್ತನಾಗಿ ಈ ರೀತಿಯಾಗಿ ಮಾತನ್ನು ಹೇಳಿದನು - "ದೇವಾ, ಮುಂಜಾನೆಯ ಹೊತ್ತಿನಲ್ಲಿ ವಿಶ್ವಸೇನನೆಂಬ ಮಂತ್ರಿಯು ಅರಸನನ್ನು ಉದ್ಯಾನವನಕ್ಕೆ ಒಡಗೂಡಿಕೊಂಡು ಹೋಗಿ ಬಾವಿಯ ದಡದಲ್ಲಿದ್ದು ತಿವಿದು ಕೊಂದು ಬಾವಿಗೆ ನೂಕಿದ್ದಾನೆ. ಮರ ಹತ್ತಿ

ಪೊಲ್ಲಮೆಯನೆಲ್ಲರ್ಗಜೆಯೆ ಪೇಟ್ಪಾತನ ಪುತ್ರ ಮಿತ್ರ ಕಳತ್ರ ಸ್ವಜನ ಬಾಂಧವ ಸಹಿತಂ ಕೊಲಿಸಲ್ಬಗೆದೊಡೆ ಸಾಮಂತಾದಿಗಳ್ ಬಾರಿಸಿದೊಡನಿಬರುಮಂ ನೆಲಮನೆಯೊಳಿಕ್ಕಿ, ಮಲ್ಲಲ್ ಪುಗುವನಿತು ಬಾಗಿಲಂ ಮಾಡಿ ಪ್ರತಿದಿನಕ್ಕೊಂದು ಮಲ್ಲಲ ಕೂಲುಮನೊಂಮ ಮೊಗಪೆ ನೀರುಮಂ ನೆಲಮನೆಯೊಳಗನ್ಕೆ ನೀದಿದೊಡನಿಬರುಂ ಪಟ್ಟುಗೊಂಡುಣ್ಬರಿಂತು ಪಲದಿವಸಂಗಳ್ ಸಲೆ ಮತ್ತೊಂದು ದಿವಸಂ ಕಾಪಿ ತನ್ನವರನಿಂತೆಂದಂ ನಾಮಿನಿಬರುಂ ಸಾವರುಮಲ್ಲ ಣುಬ್ಬರುಮಲ್ಲೆಮ್ಮೊಳಾವನೊರ್ವಂ ನಮ್ಮ ಪಗೆಯನಿಜೆಯಲುಂ ನಂದನ ವಂಶಮಂ ನಿರ್ಮೂಲಂ ಮಾಡಿ ಕಡಿಸಲುಮಾರ್ಕುಮಾತನೀ ಮಲ್ಲಲ ಕೂಲಿನುಣ್ಕೆಂದೊಡೆ ಕಾಪಿಯ ಮಗಂ ಸುಬಂಧುವೆಂಬೊನಾತನಿಂತೆಂದಂ ನಮ್ಮ ಪಗೆಯ ನಿಜೆಯಲುಂ ನಂದನ ವಂಶಮಂ ನಿರ್ಮೂಲಿಸಲಾನಾರ್ಪೆನೆಂದು ಪೂಣ್ದೊಡಾತನನುಣಲ್ಬೇಟ್ಟು ಉಟವವರೆಲ್ಲಮುಣ್ಣಪಟ್ಟು ಸತ್ತರ್ ಸುಬಂಧುವೊರ್ವನುಂಡು ಬರ್ದೊನ್ ಇಂತು ಮೂಱುವರ್ಷಂ ಪೋದಿಂ ಬಳಿಕ್ಕೆ ಮತ್ತತ್ತ ಪ್ರತ್ಯಂತವಾಸಿಗಳಪ್ಪರಸುಗಳ್ ಮಸಗಿದೊಡೆ ಮಂತ್ರಿಯ ಗುಣಮಂ ನೆನೆದು ಬೆಸಗೊಂದಂ ಮಲ್ಲಲ

ಹೊಗಳುತ್ತಿದ್ದ ನಾನು ಅವನ್ನು ಕಂಡು ಎಲ್ಲಿಯಾದರೂ ನನ್ನನ್ನೂ ಕೊಲ್ಲುವನು ಎಂದು ಹದರಿಕೆಯಿಂದ ಹಾರಿ ನಿಡಿ ತಪ್ಪಿಸಿಕೊಂಡೆನು. ಇದು ನಾನು ಕಂಡ ಸಂಗತಿ" ಎಂದು ಹೇಳಿದನು. ಹಾಗ ಹೇಳಿದ ಗಾಂಭೆಗಾರನಿಗೆ ರಾಜನು ಮೆಚ್ಚಿ, ವಿಶೇಷವಾಗಿ ಹೊಗಳಿ, ಸ್ವತಃ ಧರಿಸಿದ ಅಭರಣ ವಸ್ತ್ರಾದಿಗಳನ್ನು ಕೊಟ್ಟು ಹಲವು ಕ್ಷೇತ್ರ (ಜಮೀನು)ಗಳನ್ನೂ ಕೊಟ್ಟು ಅವನನ್ನು ಸಂತೋಷಗೊಳಿಸಿದನು. ಮಂತ್ರಿಯು ದುಷ್ಟಕೃತ್ಯವನ್ನು ಎಲ್ಲರೂ ತಿಳಿಯುವಂತೆ ಹೇಳಿ ಅವನ ಮಕ್ಕಳು, ಗಳೆಯರು, ಹೆಂಡಿರು, ಸ್ವಜನರು, ಬಂಧುಗಳು ಸಮೇತವಾಗಿ ಅವನನ್ನು ಕೊಲ್ಲಬೇಕೆಂದು ಯೋಚಿಸಿದನು. ಆಗ ಸಾಮಂತಾದಿಗಳು ತಡೆಯಲು, ಅವರನ್ನೆಲ್ಲ ನೆಲಮನೆಯಲ್ಲಿರಿಸಿದನು. ಒಂದು ಮಣ್ಣಿನ ಮುಚ್ಚಳ (ಶ್ರಾವೆ) ಹೋಗುವಷ್ಟು ದೊಡ್ಡ ಬಾಗಿಲನ್ನು ಮಾಡಿ, ಪ್ರತಿದಿನಕ್ಕೆ ಒಂದು ಶ್ರಾವೆ ತುಂಬ ಅನ್ನವನ್ನೂ ಒಂದು ಮೊಗೆ (ಮಣ್ಣಿನ ಕುಡಿಕೆ) ನೀರನ್ನೂ ಆ ನೆಲಮನೆಯೊಳಕ್ಕೆ ಕೊಡುವಂತೆ ಮಾಡಿದನು. ಹಾಗೆ ಕೊಟ್ಟದ್ದನ್ನು ಅವರು ಅಷ್ಟು ಮಂದಿ ಪಾಲುಮಾಡಿಕೊಂಡು ಉಣ್ಣುತ್ತಿದ್ದರು. ಹೀಗೆಯೇ ಹಲವು ದಿವಸಗಳು ಕಳೆದವು. ಆಮೇಲೆ ಒಂದು ದಿವಸ ಕಾಪಿ ತನ್ನವರೊಡನೆ ಹೀಗೆಂದನು- "ನಾವು ಇಷ್ಟೊಂದು ಮಂದಿಯೂ ಸಾಯುವವರೂ ಅಲ್ಲ ಬದುಕುವವರೂ ಅಲ್ಲ. ನಮ್ಮಲ್ಲಿ ಯಾವನೊಬ್ಬನು ನಮ್ಮ ವಿರೋಧಿಯನ್ನು ಘಾತಿಸಲೂ ನಂದನ ವಂಶವನ್ನು ನಿರ್ಮೂಲ ಮಾಡಿ ನಾಶಗೊಳಿಸಲೂ ಸಮರ್ಥನಾಗುವನೋ ಅವನು ಈ ಶ್ರಾವೆ (ಮುಚ್ಚಳ) ಅನ್ನವನ್ನು ಉಣ್ಣಲಿ." ಈ ಮಾತಿಗೆ ಕಾಪಿಯ ಮಗನಾದ ಸುಬಂಧುವೆಂಬಾತನು, "ನಮ್ಮ ಶತ್ರುವನ್ನು ಘಾತಿಸಲೂ ನಂದನ ವಂಶವನ್ನು ನಿರ್ಮೂಲನ ಮಾಡಲೂ ನಾನು ಸಮರ್ಥನಾಗುವನು" ಎಂದು ಶಪಥ ಮಾಡಿದನು. ಕಾಪಿಯು ಅವನನ್ನು ಉಣ್ಣಲು ಹೇಳಿದನು. ಉಳಿದವರೆಲ್ಲ ಉಣ್ಣದೆ ಮಲಗಿ ಸತ್ತರು. ಸುಬಂಧುವೊಬ್ಬನು ಮಾತ್ರ ಊಟಮಾಡಿ ಬದುಕಿದನು. ಹೀಗೆ ಮೂರುವರ್ಷಗಳು ಕಳೆದವು. ಆಮೇಲೆ ಇತ್ತ ರಾಜ್ಯದ ಎಲ್ಲೆಗಳಲ್ಲಿ ಸಾಸಮಾಡುವ ರಾಜರು ಕೆರಳಿ ಮೇಲೆ ಬಿದ್ದರು. ಆಗ ರಾಜನು ಮಂತ್ರಿಯ ಶೌರ್ಯಗುಣವನ್ನು ನೆನಪು

ಕೂಲಿನಾರಾನುಮಿನ್ನುಮುಣ್ಬರೊಳರೆ ಎಂದು ಬೆಸಗೊಂಡೊಡೊಳರೆಂದು ಪೇಟ್ಪೊಡೆ ಸುಬಂಧುವಂ ನೆಲಮನೆಯಿಂ ತೆಗೆಯಿಸಿ ಸನ್ಮಾನದಾನಂಗಳಿಂದಾತನಂ ಸತ್ಕರಿಸಿ ಕ್ಷಮೆಗೊಳಿಸಿ ಮಂತ್ರಿಪದಮಂ ಕೊಟ್ಟನಾತನುಂ ಪರಚಕ್ರಮಂ ಮಸಗಲೀಯದೆ ತನ್ನ ಬುದ್ಧಿಕ್ರಮದಿಂ ಪೂರ್ವಕ್ರಮದೊಳ್ ನಿಱಿಸಿದೊಡರಸನಾತಂಗಾದಮಾನುಮೊಸೆದು ತಂದೆಯ ಬಾಟಿಂದಗ್ಗಳ ಬಾಟಿಮೆಯಂ ಮಾಡಿದಂ ಮತ್ತೆರಡನೆಯ ಮಂತ್ರಿ ಶಕಟಾಳನೆಂಬೊನಾತನ ಮಗಳ್ ನಂದವತಿಯೆಂಬೊಳಾಕೆಯಂ ಸುಬಂಧು ಮದುವೆನಿಂದು ಪ್ರಧಾನಮಂತ್ರಿಯಾಗಿ ಇಷ್ಟವಿಷಯ ಕಾಮಭೋಗಂಗಳನನುಭವಿಸುತ್ತಂ ಪಲಕಾಲಂ ಸಲೆ ಮತ್ತಿತ್ತ ಮಗಧೆಯೆಂಬ ನಾಡೊಳ್ ಶಾಲ್ಮಲಿಯೆಂಬಗ್ರಹಾರದೊಳ್ ಸೋಮಶರ್ಮನೆಂಬ ಪಾರ್ವಂಗಂ ಕಪಿಳೆಯೆಂಬ ಪಾರ್ವಂತಿಗಂ ಮಗಂ ನಾಲ್ಕುದಾಡೆವೆರಸು ಪುಟ್ಟದೊಡಾತಂಗೆ ತಾಯುಂ ತಂದೆಯುಂ ಚಾಣಾಕ್ಯನೆಂಬ ಪೆಸರನಿಟ್ಟರ್ ಮತ್ತೆ ದಾಡೆವೆರಸು ಪುಟ್ಟದನೆಂಬುದಂ ನೈಮಿತ್ತಿಕಂ ಶ್ರಾವಕಂ ವಸಂತಕನೆಂಬೊಂ ಕೇಳ್ದಿಂತೆಂದಾದೇಶಂಗೆಯ್ದಂ

ಶ್ಲೋಕ ॥ ಸ ಚಾಣಾಕ್ಯಶ್ಚತುರ್ದಂಷ್ಟ್ರೋ ಹ್ಯೇಷೋ ನಂದಾನ್ವಯಕ್ಷಯಃ
ರಾಜೋ ವಾ ರಾಜಮರ್ತ್ಯೋ ವಾ ಭವಿಷ್ಯತಿ ನ ಸಂಶಯಃ ॥

ಎಂದಾದೇಶಂಗೆಯ್ದುದಂ ಚಾಣಕ್ಯನ ತಂದೆ ಕೇಳ್ದು ಕೈಸಾಣೆಗಳಿಂದಂ ನಾಲ್ಕುಂ ದಾಡೆಗಳನುರ್ದಿಸಿ ಕಳೆದು ಮಟ್ಟುಂ ಮಾಡಿದೊಂ ಮತ್ತಂ ಚಾಣಾಕ್ಯನುಂ ಬಳೆದು ನಾಲ್ಕುವೇದಮುಮಾಱಿಂಗಮುಂ

"ಶ್ರಾವೆಯಲ್ಲಿ ಕೊಡುತ್ತಿದ್ದ ಅನ್ನವನ್ನು ಉಣ್ಣುತ್ತ ಬದುಕಿರುವವರು ಯಾರಾದರೂ ಇನ್ನೂ ಇರುವರೆ?" ಎಂದು ಕೇಳಿದನು. 'ಇರುವರು' ಎಂದು ಹೇಳಲು, ಸುಬಂಧುವನ್ನು ನೆಲಮನೆಯಿಂದ ತೆಗೆಯಿಸಿ ಸನ್ಮಾನ ದಾನಗಳಿಂದ ಅವನನ್ನು ಸತ್ಕರಿಸಿ ಕ್ಷಮೆಗೊಳಿಸಿ, ಅವನಿಗೆ ಮಂತ್ರಿಪದವಿಯನ್ನು ಕೊಟ್ಟನು. ಸುಬಂಧು ಶತ್ರುರಾಜ್ಯಗಳು ಉದ್ರಿಕ್ತವಾಗಲು ಬಿಡದೆ, ತನ್ನ ಬುದ್ಧಿಪ್ರಯೋಗದಿಂದ ಅವನ್ನು ಹಿಂದಿನ ರೀತಿಯಲ್ಲಿಯೇ ನಿಲ್ಲಿಸಿದನು. ಅರಸನು ಅವನ ಮೇಲೆ ಬಹಳವಾಗಿ ಪ್ರೀತಿಸಿ, ಅವನ ತಂದೆಯ ವೃತ್ತಿಗಿಂತ ಅತಿಶಯವಾದ ವೃತ್ತಿಯನ್ನು ಅವನಿಗೆ ಮಾಡಿಕೊಟ್ಟನು. ಅನಂತರ, ಎರಡನೆಯ ಮಂತ್ರಿಯಾದ ಶಕಟಾಳನೆಂಬವನ ಮಗಳಾದ ನಂದವತಿ ಎಂಬವಳನ್ನು ಸುಬಂಧು ಮದುವೆಯಾಗಿ ಪ್ರಧಾನಮಂತ್ರಿಯಾಗಿ ಇಷ್ಟವಾದ ಕಾಮಸುಖಗಳನ್ನು ಅನುಭವಿಸುತ್ತ ಇರಲು ಹಲವುಕಾಲ ಕಳೆಯಿತು. ಅನಂತರ, ಇತ್ತ ಮಗಧೆ ಎಂಬ ನಾಡಿನಲ್ಲಿ ಶಾಲ್ಮಲಿ ಎಂಬ ಅಗ್ರಹಾರದಲ್ಲಿ ಸೋಮಶರ್ಮನೆಂಬ ಬ್ರಾಹ್ಮಣನಿಗೂ ಕಪಿಳೆ ಎಂಬ ಬ್ರಾಹ್ಮಣೆತಿಗೂ ನಾಲ್ಕು ದಾಡೆ ಹಲ್ಲುಗಳೊಂದಿಗೆ ಒಬ್ಬ ಮಗನು ಹುಟ್ಟಿದನು. ಅವನಿಗೆ ತಾಯಿತಂದೆಗಳು ಚಾಣಾಕ್ಯನೆಂದು ಹೆಸರಿಟ್ಟರು. ದಾಡೆಗಳೊಂದಿಗೆ ಮಗನು ಹುಟ್ಟಿದನೆಂಬುದನ್ನು ಜ್ಯೋತಿಷ್ಯನಾದ ಶ್ರಾವಕನಾದ ವಸಂತಕನೆಂಬವನು ಕೇಳಿ ಈ ರೀತಿಯಾಗಿ ಭವಿಷ್ಯ ಹೇಳಿದನು - (ನಾಲ್ಕು ದಾಡೆಹಲ್ಲುಗಳುಳ್ಳ ಆ ಚಾಣಾಕ್ಯನಾದ ಇವನು ನಂದವಂಶಕ್ಕೆ ನಾಶಕಾರಿಯಾದವನು, ಅಲ್ಲವೆ ? ಇವನು ರಾಜನಾಗಲಿ, ರಾಜನನ್ನು ಕೊಲ್ಲುವವನಾಗಲಿ (ಅಥವಾ ಮಂತ್ರಿಯಾಗಲಿ) ಆಗುತ್ತಾನೆ, ಸಂದೇಹವಿಲ್ಲ. ಹೀಗೆ ಭವಿಷ್ಯ ಹೇಳಿದುದನ್ನು ಚಾಣಾಕ್ಯನ ತಂದೆ ಸೋಮಶರ್ಮನು ಕೇಳಿ ಕೈಸಾಣೆಗಳಿಂದ ನಾಲ್ಕು ದಾಡೆಗಳನ್ನೂ ಉಜ್ಜಿಸಿ ತೆಗೆದು

ಪದಿನೆಂಟು ಧರ್ಮಶಾಸ್ತ್ರಂಗಳುಂ ಮೀಮಾಂಸಾ ವ್ಯಾಕರಣಂ ಪ್ರಮಾಣಂ ಛಂದಮಲಂಕಾರಂ ನಿಘಂಟು ಕಾವ್ಯನಾಟಕಂ ಶಾಲಿಹೋತ್ರಂ ವೈದ್ಯ ಸಾಮುದ್ರಿಕಂ ನೀತಿಶಾಸ್ತ್ರಂ ಮೊದಲಾಗೊಡೆಯ ಶಾಸ್ತ್ರಂಗಳೆಲ್ಲಮಂ ಕಲ್ತು ಋಷಿಯರ ಪಕ್ಕದ ಧರ್ಮಮಂ ಕೇಳ್ದು ಶ್ರಾವಕ ವ್ರತಂಗಳಂ ಕೈಕೊಂಡು ಸಮ್ಯಗ್‌ದೃಷ್ಟಿಯಾಗಿ ಪಲಕಾಲಂ ಸಲೆ ಮತ್ತೆ ಪಾಟಳೀಪುತ್ರಪುರಕ್ಕೆ ಪೋದೊಡಾತನ ಪಾಂಡಿತ್ಯಮುಂ ಸಮ್ಯಗ್‌ದೃಷ್ಟಿಯಪ್ಪುದುಮಂ ಭವ್ಯಾಕಾರಮುಮಂ ಶಕಟಾಳಂ ಕಂಡು ತನ್ನ ಕಿಱಿಯ ಮಗಳಂ ಯಶೋಮತಿಯೆಂಬೊಳಂ ಕೊಟ್ಟನಾತನುಮಾಕೆಯಂ ಮದುವೆ ನಿಂದು ಸುಖದಿಂ ಕಾಲಂ ಸಲೆ ಮತ್ತೊಂದು ದಿವಸಂ ಶೋಣೆಯೆಂಬ ತೊಱೆಯ ತಡಿಯೊಳ್ ತನ್ನ ಕಾಲಂ ದರ್ಭಾಂಕುರಂ ನೆತ್ತರ್ವರಿ ಕೊಂಡೊಡೆ ಮುಳಿದದನಗುಟ್ಟು ಸುಡುವೊನಂ ಸುಬಂಧು ಕಂಡು ತತ್ಸಂಬಂಧಮೆಲ್ಲಮಂ ಬಿಸಗೊಂಡೊಡೆ ಸ್ವವೈರಿ ವಿಧ್ವಂಸನಂ ಗೆಯ್ವಪ್ಪೆನೆಂದಜೆಯೆ ಪೇಳ್ದೊಡೆ ಸುಬಂಧು ಮುನ್ನಾದೇಶಮಂ ಕೇಳ್ದನಪ್ಪುದಱಿಂದಿಂತೆಂದಂ

ಶ್ಲೋಕ ॥ ಸ ಚಾಣಾಕ್ಯಶ್ಚತುರ್ದಂಷ್ಟ್ರೋಹ್ಯೇಷೋ ನಂದಾನ್ವಯಕ್ಷಯಃ
ರಾಜೋ ವಾ ರಾಜಮಂತ್ರ್ಯೋ ವಾ ಭವಿಷ್ಯತಿ ನ ಸಂಶಯಃ

ಎಂಬ ಶ್ಲೋಕಾರ್ಧಮಂ ಮನದೊಳ್ ಬಗೆದು ಸಖಾಯನಂ ಪೆತ್ತೆನೆಂದೊಸೆದುಮಾತನ ಬುದ್ಧಿಯಂ ಪರೀಕ್ಷಿಸಲ್ವೇಡಿ ಭಟ್ಟಮಂಡಪದೊಳೀ ಶ್ಲೋಕಮಂ ಬರೆದು ಪೋದಂ

ಮಟ್ಟಮಾಡಿದನು. ಆಮೇಲೆ ಚಾಣಾಕ್ಯನು ದೊಡ್ಡವನಾಗಿ ನಾಲ್ಕು ವೇದಗಳು, ಆರು ವೇದಾಂಗಗಳು, ಹದಿನೆಂಟು ಧರ್ಮಶಾಸ್ತ್ರಗಳು, ಮೀಮಾಂಸೆ, ವ್ಯಾಕರಣ, ಪ್ರಮಾಣಶಾಸ್ತ್ರ, ಛಂದಸ್ಸು, ಅಲಂಕಾರ, ನಿಘಂಟು,ಕಾವ್ಯ, ನಾಟಕ, ಶಾಲಿಹೋತ್ರ, ವೈದ್ಯ, ಸಾಮುದ್ರಿಕ, ನೀತಿಶಾಸ್ತ್ರ - ಮೊದಲಾಗುಳ್ಳ ಶಾಸ್ತ್ರಗಳೆಲ್ಲವನ್ನೂ ಕಲಿತು ಋಷಿಗಳ ಬಳಿಯಲ್ಲಿ ಧರ್ಮವನ್ನು ಕೇಳಿ ಶ್ರಾವಕವ್ರತಗಳನ್ನು ಸ್ವೀಕರಿಸಿ ಸರಿಯಾದ ವಿಚಾರದೃಷ್ಟಿಯುಳ್ಳವನಾದನು. ಹೀಗೆ ಹಲವು ಕಾಲ ಕಳೆಯಿತು. ಆಮೇಲೆ ಅವನು ಪಾಟಲೀಪುತ್ರ ಪಟ್ಟಣಕ್ಕೆ ಹೋದನು. ಅವನ ಪಾಂಡಿತ್ಯವನ್ನೂ ಸರಿಯಾದ ವಿಚಾರದೃಷ್ಟಿಯುಳ್ಳವನಾದುದನ್ನೂ ಉದಾತ್ತವಾದ ರೂಪವನ್ನೂ ಶಕಟಾಳನು ಕಂಡು ತನ್ನ ಚಿಕ್ಕ ಮಗಳಾದ ಯಶೋಮತಿ ಎಂಬವಳನ್ನು ಅವನಿಗೆ ಕೊಟ್ಟನು. ಚಾಣಾಕ್ಯನು ಆಕೆಯನ್ನು ಮದುವೆಯಾಗಿ, ಸುಖದಿಂದ ಕಾಲ ಕಳೆಯುತ್ತಿದ್ದನು. ಅನಂತರ, ಒಂದು ದಿವಸ ಶೋಣೆಯೆಂಬ ನದಿಯ ತೀರದಲ್ಲಿ ಚಾಣಾಕ್ಯನ ಕಾಲನ್ನು ಒಂದು ಎಳೆಯ ದರ್ಭೆ ಚುಚ್ಚಿ ರಕ್ತ ಸುರಿಯಿತು. ಆಗ ಅವನು ಕೋಪಗೊಂಡು ಅದನ್ನು ಕಿತ್ತು ಸುಟ್ಟು ಹಾಕಿದನು. ಇದನ್ನು ಸುಬಂಧು ಕಂಡು ಅದರ ಸಂಬಂಧವನ್ನೆಲ್ಲ ಕೇಳಿದಾಗ, ಚಾಣಾಕ್ಯನು ತನ್ನ ವೈರಿಯನ್ನು ನಾಶಮಾಡುತ್ತೇನೆ - ಎಂದು ತಿಳಿಯುವ ಹಾಗೆ ಹೇಳಲು ಸುಬಂಧು ಹಿಂದೆ ಭವಿಷ್ಯವನ್ನು ಕೇಳಿದ್ದನಾದುದರಿಂದ ಹೀಗೆಂದನು- (ನಾಲ್ಕು ದಾಡೆಹಲ್ಲುಳ್ಳವನೂ ನಂದವಂಶನಾಶಕನೂ ಆದ ಆ ಚಾಣಾಕ್ಯನು ಇವನು. ರಾಜ ಅಥವಾ ಮಂತ್ರಿಯಾಗುವನು, ಸಂದೇಹವಿಲ್ಲ. ಈ ಶ್ಲೋಕದ ಅರ್ಥವನ್ನು ಮನಸ್ಸಿನಲ್ಲಿ ಭಾವಿಸಿ, 'ಸ್ನೇಹಿತನನ್ನು ಪಡೆದೆನು' ಎಂದು ಸಂತೋಷಪಟ್ಟನು. ಅವನ ಬುದ್ಧಿಶಕ್ತಿಯನ್ನು ಪರೀಕ್ಷಿಸಬೇಕೆಂದು ರಾಜನ ಸಭಾಮಂದಿರದಲ್ಲಿ ಈ ಕೆಳಗಿನ ಒಂದು ಶ್ಲೋಕವನ್ನು ಬರೆದು ಹೋದನು. ರಾಜನೀತಿಶಾಸ್ತ್ರದಲ್ಲಿ ಪಾರಂಗತರಾದವರಿಂದ, ಸಾವಿರಾರು ಶಕ್ತಿಗಳಿಂದ,

ಶ್ಲೋಕ ॥ ಶಕ್ಯಾ ಶಕ್ತಿಸಹಸ್ರೇಣ ನೀತಿಶಾಸ್ತ್ರ ವಿಶಾರದೈಃ
ವ್ಯವಸಾಯ ದ್ವಿತೀಯೇನ ಕೃತ್ವಾ ಜೇತುಂ ವಸುಂಧರಾ॥

ಈ ಬರೆದ ಶ್ಲೋಕಮಂ ಚಾಣಾಕ್ಯನೊಂದು ದಿವಸಂ ಕಂಡಿದು ನೀತಿಶಾಸ್ತ್ರದ ಬಲ್ಮೆಯಲ್ತೆಂದದಂ ಸೀಂಟಿ ತಾನಿಂತೆಂದು ಬರೆದಂ

ಶ್ಲೋಕ ॥ ಶಕ್ಯಾಹ್ಯೇಕಶರೀರೇಣ ನೀತಿಶಾಸ್ತ್ರ ವಿಶಾರದೈಃ
ವ್ಯವಸಾಯ ದ್ವಿತೀಯೇನ ಕೃತ್ವಾ ಜೇತುಂ ವಸುಂಧರಾ * ॥

ಅದಂ ಸುಬಂಧು ಕಂಡು ಇದನಾರ್ವರೆದರೆಂದು ಬೆಸಗೊಂಡೊಡೆ ಚಾಣಕ್ಯಂ ಬರೆದನೆಂದು ಪೇಳ್ದೊಡೆಯದಂ ಕೇಳ್ದಿರ್ವರ್ಕನುಸಾರಿಯಪ್ಪ ಬುದ್ಧಿಯುಂಟೆಂದು ಮನದೊಳ್ ಬಗೆದೊಂದು ದಿವಸಂ ತನ್ನ ಮಗಳಾ ಚೋಳಂಗಿಯೊಳ್ ಸ್ವಜನ ಬಾಂಧವಜನ ಪರಿಜನರ್ಕಳಿಲ್ಲರುಮಂ ಬರಿಸಿ ದಿವ್ಯಾಹಾರಂಗಳನೂಡಿ ವಸ್ತ್ರಾದ್ಯಾಭರಣಂಗಳಿಂ ಪೂಜಿಸಿ ಚಾಣಾಕ್ಯಂಗಂ ಯಶೋಮತಿಗಂದಿರ್ವರ್ಗ್ಗಂ ನಿಶ್ಶಾವಮಂ ತನ್ನ ಭಾರ್ಯೆಯಪ್ಪ ನಂದವತಿಯ ಕೆಯ್ಯೊಳಿಟ್ಟದೊಡೆ ಆಕೆಯುಂ ಕೊಂದು ಪೋಗಿ ನಿಮಗಿರ್ವರ್ಗ್ಗಂ ನಿಶ್ಶಾವಮೆಂದು ಪೇಳ್ದು ಯಶೋದುತಿಗೆ ಕೊಟ್ಟು ಪೋದೊಡೆ ಚಾಣಾಕ್ಯಂ

ಉದ್ಯಮವನ್ನು ಎರಡನೆಯದಾಗಿ ಉಳ್ಳವರಿಂದ, ಪೂರ್ಣವಾಗಿ ಭೂಮಿಯನ್ನು ಗೆಲ್ಲಲು ಸಾಧ್ಯ. ಈ ಬರೆದ ಶ್ಲೋಕವನ್ನು ಚಾಣಾಕ್ಯನು ಒಂದು ದಿನ ಕಂಡನು. ಇದು ರಾಜನೀತಿಶಾಸ್ತ್ರದ ಪ್ರೌಢಿಮೆಯೇನೂ ಅಲ್ಲ - ಎಂದು ಅವನು ಅದನ್ನು ಒರಸಿ, ಈ ರೀತಿಯಾಗಿ ಬರೆದನು. ರಾಜನೀತಿ ಪಾರಂಗತನಾದವನಿಂದ ಒಬ್ಬ ವ್ಯಕ್ತಿಯಿಂದ, ಉದ್ಯಮವನ್ನು ಎರಡನೆಯದಾಗಿ ಉಳ್ಳವನಿಂದ ಪೂರ್ಣವಾಗಿ ಭೂಮಿಯನ್ನು ಗೆಲ್ಲಲು ಸಾಧ್ಯ. ಅದನ್ನು ಸುಬಂಧು ಕಂಡು ಇದನ್ನು ಯಾರು ಬರೆದರು? - ಎಂದು ಕೇಳಿದನು. 'ಚಾಣಾಕ್ಯನು ಬರೆದನು' ಎಂದು ಹೇಳಿದರು. ಅದನ್ನು ಕೇಳಿ - ಹೀಗೆ ಬರೆಯಬೇಕಾದರೆ ಇದಕ್ಕೆ ಅನುಗುಣವಾದ ಬುದ್ಧಿಯೂ ಆತನಿಗೆ ಇರಬೇಕು - ಎಂದು ಸುಬಂಧು ಭಾವಿಸಿದನು. ಒಂದು ದಿವಸ ತನ್ನ ಮಗಳ ರವಿಕೆ ಶಾಸ್ತ್ರದ ಸಮಾರಂಭದಲ್ಲಿ ಸುಬಂಧು ತನ್ನ ಜನರನ್ನೂ ಬಂಧುಗಳನ್ನೂ ಪರಿಜನರನ್ನೂ ಬರಮಾಡಿ, ಅವರಿಗೆಲ್ಲ ಶ್ರೇಷ್ಠವಾದ ಭೋಜನವನ್ನು ಕೊಟ್ಟು ವಸ್ತ್ರ ಆದಿಯಾಗಿ ಆಭರಣಗಳಿಂದ ಅವರನ್ನು ಪೂಜಿಸಿ (ಸತ್ಕರಿಸಿ)ದನು. ಚಾಣಾಕ್ಯನಿಗೆ ಯಶೋಮತಿಗೆ ಎಂದಿಬ್ಬರಿಗೂ ಅನ್ನವ ಗಂಜಿಯ ಕೆನೆಯನ್ನು ತನ್ನ ಮಡದಿಯಾದ ನಂದವತಿಯ ಕೈಯಲ್ಲಿ ಕಳುಹಿಸಿದನು. ಆಕೆ ತೆಗೆದುಕೊಂಡು ಹೋಗಿ "ನಿಮಗಿಬ್ಬರಿಗೂ ಗಂಜಿಯ ಕೆನೆಯಿದೆ" ಎಂದು ಹೇಳಿ, ಅದನ್ನು ಯಶೋಮತಿಗೆ ಕೊಟ್ಟು ಹೋದಳು. ಆಗ ಚಾಣಾಕ್ಯನು ತನ್ನ ಮನಸ್ಸಿನಲ್ಲಿ ಹೀಗೆ ಭಾವಿಸಿದನು - "ಲೋಕದಲ್ಲಿ ಬಡತನಕ್ಕೆ ಹೊರತಾಗಿ ಮಣಿಕರವಾದುದು ಯಾವುದೊಂದೂ ಇಲ್ಲ. ಬಡತನವೇ

* ಇದೇ ಶ್ಲೋಕವು ಹರಿಷೇಣನ ಬೃಹತ್ಕಥಾಕೋಶದಲ್ಲಿಯೂ ಇದೆ (೧೪೨-೩೭)
ನರೇಣೈಕಶರೀರೇಣ ನಯಶಾಸ್ತ್ರಯುತೇನ ಚ
ಪ್ರವಸಾಯೇನ ಯುಕ್ತೇನ ಜೇತುಂ ಶಕ್ಯಾವಸುಂಧರಾ ॥

ಮನದೊಳಿಂತೆಂದು ಬಗೆದಂ ಲೋಕದೊಳ್ ದಾರಿದ್ರ್ಯದಿಂ ಬಟ್ಟು ಕಷ್ಟತಿಕೆಯೊಂದುಮಿಲ್ಲ ಅದುವೆ ಲೋಕದೊಳ್ ಮಹಾಪಾತಕಮೆಂತುಮಿಂತೆಂಬುದಲ್ತೆ

ವೃತ್ತ ॥ ಸಂಗಂ ನೈವ ಹಿ ಕಶ್ಚಿದೇವ ಕುರುತೇ ನಾ ಭಾಷತೇ ಬಾಂಧವಾತ್
ಸಂಪ್ರಾಪ್ತೇ ಗೃಹಮುತ್ಸವೇಽಪಿ ಗೃಹಿಭಃ ಸಾಮಾನ್ಯಮಾಲೋಕ್ಯತೇ
ದೂರಾದೇವ ಮಹಾಜನಃ ಪರಿಹರತ್ಯಲ್ಪಚ್ಛದಂ ಲಜ್ಜಯಾ
ಮನ್ಯೇ ನಿರ್ಧನತಾ ಪ್ರಕಾಶಮಪರಂ ಕಷ್ಟಂ ಮಹಾಪಾತಕಂ ॥

ಅದಱಿಂ ದ್ರವ್ಯಾರ್ಜನೆಗೆಯ್ದೆನೆಂಬಭಿಪ್ರಾಯದಿಂದಿರ್ಪಾತನಂ ಸುಬಂಧು ಕೇಳ್ದಱಿದೊಂದು ದಿವಸಂ ಚಾಣಾಕ್ಯನಂ ಕಂದಿಂತೆಂದಂ ನಿಮಗೆ ದಾರಿದ್ರ್ಯದೋಕ್ಕಮಕ್ಕುಂ ಪಶ್ಚಿಗ್ರಾಮ ಸಮನ್ವಿತಮಪ್ಪ ಅಗ್ರಾಸನಮನರಸನಂ ಬೇಡಿಕೊಂಡೊಡೆ ಸುಖದಿಂ ಬಾೞ್ವೆರೆನೆ ಆತನುಮಂತೆಗೆಯ್ದೆನೆಂವರಸನಂ ಕಂಡುಪಶ್ಲೋಕಿಸಿಯಗ್ರಾಸನಮಂ ಬೇಡಿಕೊಂಡೊಪರಸನುಂ ಮೆಚ್ಚಿ ಕೊಟ್ಟನಿಂತಗ್ರಾಸನಮನುಣುತ್ತ ಮಱುವತ್ತು ಬಾಡಮನಾಳುತ್ತಂ ಸುಖಸಂಕಥಾವಿನೋದದಿಂ ಕಾಲಂ ಸಲೆ ಮತ್ತೊಂದು ದಿವಸಂ ಸುಬಂಧು ಮಹಾಪದ್ಮನಂ ಕಿಡಿಸುವ ಬಗೆಯಿಂವಂ ನಂದನ ಕ್ರಮಾಗತರಪ್ಪ ಬ್ರಾಹ್ಮಣರ್ಕಳನಿಂತೆಂದಂ ನಿಮ್ಮೀ ಪದಮೆಂಬುದು ನಂದಮಹಾರಾಜಂ ವಿಜಯಂ ನಂದನಂ ಸುನಂದನಂ ನಂದಿವರ್ಧನಂ ನಂದಂ ಶ್ರೀನಂದನಂ ಪದ್ಮಂ ಮಹಾಪದ್ಮನೆಂದಿಂತು ಒಂಬತ್ತು ತಲೆವರೆಗಂ ಕ್ರಮಾಗತಂ ನಿಮಗೆ

ಲೋಕದಲ್ಲಿ ಮಹಾಪಾಪವು. ಹೇಗಿದ್ದರೂ ನೀತಿ ಹೀಗೆನ್ನುವುದಲ್ಲವೆ ? - ಬಡವನ ಸ್ನೇಹವನ್ನು ಯಾರೂ ಮಾಡುವುದಿಲ್ಲ. ವಿಶೇಷ ಸಮಾರಂಭದಲ್ಲಿ ಇತರರ ಮನೆಗೆ ಹೋದಾಗ ಆ ಮನೆಯವರು ಸಾಮಾನ್ಯನನ್ನಾಗಿ ನೋಡುತ್ತಾರೆ. ಅಲ್ಪವಾದ ಉಡುಪುಳ್ಳವನಾದ ಬಡವನನ್ನು ಕಂಡ ಮಹಾಜನರು ನಾಚಿಕೆಯಿಂದ ದೂರದಿಂದಲೇ ತೊಲಗಿಸಿಬಿಡುತ್ತಾರೆ. ಬಡತನವನ್ನು ಪ್ರಕಾಶಪಡಿಸುವುದು ಎಣೆಯಿಲ್ಲದ ದುಃಖವು ಮತ್ತು ಮಹಾಪಾಪವೆಂದು ಭಾವಿಸುತ್ತೇನೆ. ಆದುದರಿಂದ ಹಣಸಂಪಾದನೆಯನ್ನು ಮಾಡುವೆನು - ಎಂಬ ಅಭಿಪ್ರಾಯದಿಂದ ಇರತಕ್ಕ ಅವನ ವಿಷಯವಾಗಿ ಸುಬಂಧು ಕೇಳಿ ತಿಳಿದು ಒಂದು ದಿವಸ ಚಾಣಾಕ್ಯನನ್ನು ಕಂಡು ಹೀಗೆಂದನು -"ನಿಮಗೆ ಬಡತನದಿಂದ ಬಿಡುಗಡೆಯಾಗುವುದು. ನೀವು ಅರುವತ್ತು ಗ್ರಾಮಗಳಿಂದ ಕೂಡಿದ ಬ್ರಾಹ್ಮಣವೃತ್ತಿಯನ್ನು ಅರಸನನ್ನು ಬೇಡಿ ಪಡೆದುಕೊಂಡರೆ, ಸುಖದಿಂದ ಬಾಳುವಿರಿ" ಎಂದು ಹೇಳಿದನು. ಚಾಣಾಕ್ಯನು 'ಹಾಗೆಯೇ ಮಾಡುವೆನು' ಎಂದುಕೊಂಡು, ರಾಜನನ್ನು ಕಂಡು ಸ್ತುತಿಮಾಡಿ ಬ್ರಾಹ್ಮಣವೃತ್ತಿಯನ್ನು ಬೇಡಿದನು. ರಾಜನು ಮೆಚ್ಚಿ ಅದನ್ನು ಕೊಟ್ಟನು. ಹೀಗೆ ಚಾಣಾಕ್ಯನು ಬ್ರಾಹ್ಮಣವೃತ್ತಿಯನ್ನು ಅನುಭವಿಸುತ್ತ ಅರುವತ್ತು ಗ್ರಾಮಗಳಿಗೆ ಅಧಿಪತಿಯಾಗಿ ಸುಖ ಸಂಕಥೆಗಳ ವಿನೋದದಿಂದ ಕಾಲವನ್ನು ಕಳೆಯುತ್ತಿದ್ದನು. ಆಮೇಲೆ ಒಂದು ದಿವಸ ಸುಬಂಧು ಮಹಾಪದ್ಮನನ್ನು ನಾಶಮಾಡುವ ಯೋಚನೆಯಿಂದ ಮಕ್ಕಳ ಕಟ್ಟಿನಿಂದ ಬಂದಿರತಕ್ಕ ಬ್ರಾಹ್ಮಣರನ್ನು ಕುರಿತು ಹೀಗೆ ಹೇಳಿದನು - "ನಿಮ್ಮ ಈ ಪದವಿಯೆಂಬುದು ಅನುಕ್ರಮವಾಗಿ ನಂದಮಹಾರಾಜ, ವಿಜಯ, ನಂದನ, ಸುನಂದನ, ನಂದಿವರ್ಧನ, ನಂದ, ಶ್ರೀನಂದನ, ಪದ್ಮ, ಮಹಾಪದ್ಮ - ಎಂದೀ ರೀತಿಯಾಗಿ ಒಂಬತ್ತು ತಲೆಗಳವರೆಗೆ ಬಂದಿದೆ. ಹೀಗೆ ಬಂದಿರತಕ್ಕ ಅಗ್ರಹಾರ (ಬ್ರಾಹ್ಮಣರಿಗೆ ಬಿಟ್ಟ ದತ್ತಿಯ ಗ್ರಾಮ)ವನ್ನು

ಬಂದಗ್ರಹಾರಮಂ ಪೆಱರ್ ಕೊಂಡು ಬಾಬುತ್ತಿರೆ ನಿಮಗೆ ಕಮ್ಮನೆ ನೋಡುತ್ತಿರ್ಪುದೇಂ ಕಾರಣಂ ಪಾಟಲಿಯೆಂದೊದವರ್ಗಳಿಂತೆಂದರ್ ನಿಮ್ಮ ಬಲದಿಂದಮಾಮೆಮ್ಮ ಪದಮುಂ ಪಡೆವೆಮೆಂದೊಡೆ ಅಂತೆಗೆಯ್ಮಿಮೆಂದೊಡವರುಮರಸಂಗಿಂತೆಂದು ಬನ್ನಪ್ಪುಗೆಯ್ದರ್ ಮಹಾರಾಜಾ ಕುಲಕ್ರಮಾಗತರೆಮುಂ ನಿಮ್ಮ ಪ್ರಸಾದದಿಂ ಬಾೞ್ದಿಮುಂ ಕ್ರಮದಿಂ ಬಂದುದೆಮ್ಮ ಪದಮಂ ನಿಮಗೆ ಕಿಡಿಸಲಾಗದೆಂದಾಗಳ್ ಸುಬಂಧುವಿಂತೆಂದಂ ಕ್ಷತ್ರಿಯರ್ಗೆ ಪೂರ್ವಕ್ರಮಾಗತಮಂ ಕಿಡಿಸದೆ ಸಲಿಪುದೆ ಧರ್ಮಮೆಂದೊದರಸ ನಗ್ರಾಸನದಿಂ ಚಾಣಾಕ್ಯನಂ ಪಿಂಗಿಸೆಂದೊಡಂತೆಗೆಯ್ವೆನೆಂದು ಪೋಗಿಯಗ್ರಾಸನದೊಳುಣಲೆಂದು ಬಂದು ಮಣೆಯನೇಱೆರ್ದೊನನಿಂತೆಂದಂ ನಿಮಗಾದಮಾನುಂ ಮುಳಿದರಸನಿಂತೆಂದಂ ಮದವಿಹ್ವಳೆಯರಪ್ಪ ವೇಶ್ಯಾಂಗನಾಸಕ್ತ ವಿಟಜನನಿವಾಸಿ ಎನ್ನಗ್ರಾಸನಮನುಣಲ್ಕೆ ಯೋಗ್ಯನಲ್ಲದಱೆಂದಾತನನಟ್ಟಕಳೆಯಿ ಪೆಂದಟ್ಟಿದನೆಂದು ಪೇೞ್ದು ಪಡಿಯಜಿನಿಂದಪೆಱಿಯಿಸಿ ಪೆಡತಲೆಯಂ ಪಿಡಿದು ನೂಂಕುತ್ತಮರಮನೆಯಿಂದಂ ಪೊಱಮಡಿಸಿಯಟ್ಟೆ ಕಳಿದೊಡಾದಮಾನುಂ ಮುಳಿದಿಂತೆಂದಂ

ಬೇರೆಯವರು ಪಡೆದು ಬಾಳುತ್ತಿದ್ದರೆ ಅದನ್ನು ನೋಡಿಕೊಂಡು ಸುಮ್ಮನೆ ಇರುತ್ತಿರುವುದು ಯಾವ ಧರ್ಮ (ಸರಿಯಾದ ಕ್ರಮ)?" ಎಂದು ಹೇಳಿದಾಗ ಅವರು ಹೀಗೆಂದರು - "ನಿಮ್ಮ ಬಲದಿಂದ ನಾವು ನಮ್ಮ ಪದವಿಯನ್ನು ಪಡೆಯುವೆವು". ಹೀಗೆ ಹೇಳಿದಾಗ 'ಹಾಗೆಯೇ ಮಾಡಿ' ಎಂದು ಸುಬಂಧುವು ಹೇಳಿದನು. ಆ ಬ್ರಾಹ್ಮಣರು ಆಗ ರಾಜನಿಗೆ ಹೀಗೆ ವಿಜ್ಞಾಪನೆ ಮಾಡಿದರು - "ಎಲೈ ಮಹಾರಾಜನೇ, ನಾವು ಕುಲಪರಂಪರೆಯಿಂದ ಬಂದವರಾಗಿದ್ದೇವೆ ; ಮತ್ತು ಬಾಳುವೆ ನಡೆಸುವವರಾಗಿದ್ದೇವೆ. ಅಲ್ಲದೆ, ಅನುಕ್ರಮದಿಂದ ಬಂದಿರುವ ನಮ್ಮ ಪದವಿಯನ್ನು (ಸ್ಥಿತಿಯನ್ನು) ನೀವು ಕೆಡಿಸಬಾರದು." ಆಗ ಸುಬಂಧು ಹೀಗೆ ಹೇಳಿದನು - "ಪೂರ್ವದಿಂದಲೇ ಪರಂಪರೆವಿಡಿದು ಬಂದ ಅಧಿಕಾರವನ್ನು ಕೆಡಿಸದೆ ಸಲ್ಲಿಸುವುದೇ ಕ್ಷತ್ರಿಯರ ಧರ್ಮ" ಎಂದನು. ಆಗ ಮಹಾಪದ್ಮರಾಜನು 'ಚಾಣಾಕ್ಯನನ್ನು ಅವನ ದತ್ತಿಯ ಗ್ರಾಮಗಳ ಅಧಿಕಾರದಿಂದ ತೊಲಗಿಸು" ಎಂದು ಆಜ್ಞೆ ಮಾಡಿದನು. "ಹಾಗೆಯೇ ಮಾಡುವೆನು" ಎಂದುಕೊಂಡು ಸುಬಂಧು ಹೋದನು. ಆಗ ಚಾಣಾಕ್ಯನು ತನ್ನ ದತ್ತಿಯ ಗ್ರಾಮಗಳ ಅಧಿಕಾರದಲ್ಲಿದ್ದುಕೊಂಡು, ಊಟಮಾಡುವುದಕ್ಕಾಗಿ ಬಂದು ಮಣೆಯ ಮೇಲೆ ಕುಳಿತಿದ್ದನು. ಆಗ ಅವನೊಡನೆ ಸುಬಂಧು ಹೀಗೆ ಹೇಳಿದನು - "ಅರಸನು ನಿಮ್ಮ ಮೇಲೆ ಬಹಳವಾಗಿ ಕೋಪಗೊಂಡು ಹೀಗೆಂದಿರುವನು - ಸೊಕ್ಕಿನಿಂದ ಕದಡಿದವರಾದ ಸೂಳೆಹೆಣ್ಣುಗಳಲ್ಲಿ ಆಸಕ್ತರಾಗಿರುವ ವಿಟಜನರೊಂದಿಗೆ ವಾಸಮಾಡುವವನು (ಚಾಣಾಕ್ಯನು) ನಾನು ಕೊಟ್ಟ ಬ್ರಾಹ್ಮಣವೃತ್ತಿಯನ್ನು (ದತ್ತಿ ಭೂಮಿಯನ್ನು) ಅನುಭವಿಸಲಿಕ್ಕೆ ಯೋಗ್ಯನಲ್ಲ! ಆದುದರಿಂದ ಅವನನ್ನು ಓಡಿಸಿ ಕಳೆದು ಬಿಡಿ - ಎಂದು ಹೇಳಿ ನನ್ನನ್ನು ಕಳುಹಿಸಿರುತ್ತಾನೆ" ಹೀಗೆ ಹೇಳಿ ಸುಬಂಧುವು ಬಾಗಿಲು ಕಾಯುವವನಿಂದಲೇ ಚಾಣಾಕ್ಯನನ್ನು ಎಳೆಯಿಸಿದನು. ಅವನ ಹಿಂದಲೆಯನ್ನು ಹಿಡಿದು ತಳ್ಳುತ್ತ, ಅರಮನೆಯಿಂದ ಹೊರಡಿಸಿ ಅಟ್ಟಿಬಿಟ್ಟನು. ಆಗ ಚಾಣಾಕ್ಯನು ಕೋಪಿಸಿ ಹೀಗೆಂದನು. "ನಂದನನ್ನು ನಂದನಲ್ಲದವನನ್ನಾಗಿ ಮಾಡುವೆನು (ಅಂದರೆ,

ನಂಡನನಂದನಾಗೆ ಮಾಡುವೆಂ ಸುಬಂಧುವನಬಂಧು ಮಾಡುವೆನೆಂದು ಪ್ರತಿಜ್ಞೆಗೆಯ್ದು ಪೊಬಲಿಂ ಪೋಜಮಟ್ಟು ಪೋಗಿ ಪನ್ನೆರಡು ವರುಷದೊಳಗೆ ಮಹಾಪದ್ಮನಂ ಕಿಡಿಸಿವಲ್ಲದೆ ಕಾಸೆಗಳಂ ಕಳಿಯೆನೆಂದು ಜಾದಿನ ಸೇಲೆಗಳನುಟ್ಟು ಭಗವಂತ ವೇಷಮಂ ಕೈಕೊಂಡು ಮಹೋದಕಮೆಂಬ ಪೊಬಲ್ಗೆ ವೋಗಿ ಅಲ್ಲಿರ್ದಂ ಅನ್ನೆಗಮಾ ಪೊಬಲನಾಳ್ವಂ ಮಯೂರವಂಶದರಸಂ ಕುಮುದನೆಂಬೊನಾತನ ಮಹಾದೇವಿ ಮಂದೆಯೆಂಬೊಳಾಕೆಗೆ ಗರ್ಭಮಾಗಿ ಚಂದ್ರನಂ ನುಂಗುವ ಬಯಕೆಯಾಗಿ ಬಡವಾದೊದರಸಂ ಬೆಸಗೊಂಡಾಕೆಯ ಬಯಕೆಯಂ ತೀರ್ಚಲಾಱದೆ ಚಿಂತಾಕುಳಿತನಾಗಿರ್ಪಿನಮದಂ ಚಾಣಾಕ್ಯಂ ಕೇಳ್ದು ಅರಸನಂ ಕಂಡಾನರಸಿಯ ಬಯಕೆಯಂ ನೆರಪುವೆನಾಯರಸಿಗೆ ಪುಟ್ಟಿದ ಕೂಸನೆನಗೀಯಲಾರ್ಪೊಡೆಂದೊಡರಸನೀವೆನೆಂದೊಡರಸಿಯುಮಂ ನನ್ನಿಗೊಂಡಾಱುಮಱೆಯದಂತಿರೆ ನೃಪತಿಯ ಪ್ರಾಸಾದದ ಶಿಖರದ ಮಧ್ಯಪ್ರದೇಶಮಂ ಬಾದಣದಂತಿರೆ ಛಿದ್ರಂ ಮಾಡಿ ಚಂದ್ರನಿರುಳ್ ಮಧ್ಯಾಹ್ನಮಪ್ಪ ಪೊಟ್ಪಱಿಲೊಳಾ ಛಿದ್ರಕ್ಕಭಮುಖಮಾಗೆ ಪಿರಿದೊಂದು ಕಾಜಿನ ಬಟ್ಟಲೊಳ್ ಕಮ್ಮಿತಪ್ಪ ನೀರಂ ತೀವಿ ಚಂದ್ರಬಿಂಬಮಂ ನೀರೊಳ್ ಕಾಣ್ಬಂತಿರೆ ಮಾಡಿಯರಸಿಯಂ ತೃಷ್ಣಾಭವ್ಯದ್ಧಿಯ ಪ್ಪಾಪಾರಮನೂಡೆ ನೀರಡಸಿದೊಡೆ ಚಾಣಾಕ್ಯನಿಂತೆಂದಂ ಮಂತ್ರದಿಂದಾಹ್ವಾನಂಗೆಯ್ದು ತಂದೆ ಚಂದ್ರನಂ

ನಾಶಮಾಡುವೆನು) ಸುಬಂಧುವನ್ನು ಬಂಧುವಲ್ಲದವನನ್ನಾಗಿ ಮಾಡುವೆನು (ಅಂದರೆ, ನಿಸ್ಸಹಾಯಕಸ್ಥಿತಿಯಲ್ಲಿ ಇರುವಂತೆ ಮಾಡುವೆನು") ಹೀಗೆ ಪ್ರತಿಜ್ಞೆ ಮಾಡಿ ಪಟ್ಟಣದಿಂದ ಹೊರಟು ಹೋದನು. "ಹನ್ನೆರಡು ವರ್ಷದೊಳಗಾಗಿ ಮಹಾಪದ್ಮನನ್ನು ನಾಶಮಾಡದೆ ಕಚ್ಚೆಯನ್ನೇ ತೆಗೆಯೆನು" ಎಂದುಕೊಂಡು ಕಾವಿಬಣ್ಣದ ವಸ್ತ್ರಗಳನ್ನು ಧರಿಸಿ ಸಂನ್ಯಾಸಿಯ ವೇಷವನ್ನು ತಾಳಿ ಮಹೋದಕ ಎಂಬ ಪಟ್ಟಣಕ್ಕೆ ಹೋಗಿ ಅಲ್ಲಿದ್ದನು. ಆ ವೇಳೆಗೆ ಆ ಪಟ್ಟಣವನ್ನು ಮಯೂರವಂಶದವನಾದ ಕುಮುದನೆಂಬ ರಾಜನು ಆಳುತ್ತಿದ್ದನು. ಅವನ ಮಹಾರಾಣಿ ಮಂದೆಯೆಂಬವಳು. ಆಕೆ ಗರ್ಭಿಣಿಯಾಗಿ ಅವಳಿಗೆ ಚಂದ್ರನನ್ನು ನುಂಗಬೇಕೆಂಬ ಬಸುರಿ ಬಯಕೆ ಉಂಟಾಯಿತು. ಈ ಬಯಕೆಯಿಂದಲೇ ಆಕೆ ಬಡವಾಗಲು, ರಾಜನು ಕೇಳಿ, ಆಕೆಯ ಬಯಕೆಯನ್ನು ತೀರಿಸಲಾರದೆ ಚಿಂತೆಯಿಂದ ಕದಡಿದ ಮನಸ್ಸಿನವನಾದನು. ಹೀಗಿರಲು ಅದನ್ನು ಚಾಣಾಕ್ಯನು ಕೇಳಿ, ರಾಜನನ್ನು ಕಂಡು "ಆ ರಾಣಿಗೆ ಹುಟ್ಟಿದ ಮಗುವನ್ನು ನನಗೆ ಕೊಡುವುದಾದರೆ, ನಾನು ರಾಣಿಯ ಬಯಕೆಯನ್ನು ಈಡೇರಿಸುವೆನು" ಎಂದು ಹೇಳಿದನು. ಆಗ ರಾಜನು 'ಮಗುವನ್ನು ಕೊಡುವೆನು' ಎನ್ನಲು, ರಾಣಿಯ ಒಪ್ಪಿಗೆಯ ಶಪಥವನ್ನು ತೆಗೆದುಕೊಂಡನು. ಚಾಣಾಕ್ಯನು ಆಮೇಲೆ ಅರಮನೆಯ ತುದಿಯ ಭಾಗದ ಮಧ್ಯದ ಸ್ಥಳವನ್ನು ಗವಾಕ್ಷದ ಹಾಗೆ ರಂಧ್ರಮಾಡಿ, ರಾತ್ರಿ ಚಂದ್ರನು ನಡುನೆತ್ತಿಯ ಮೇಲೆ ಬರುವ ಹೊತ್ತಿನಲ್ಲಿ ಆ ರಂಧ್ರಕ್ಕೆ ಎದುರಾಗಿ ದೊಡ್ಡದಾದ ಒಂದು ಗಾಜಿನ ಬಟ್ಟಲಲ್ಲಿ ಸುಗಂಧಯುಕ್ತವಾದ ನೀರನ್ನು ತುಂಬಿ ಆ ನೀರಿನಲ್ಲಿ ಚಂದ್ರಬಿಂಬವು ಕಾಣುವಂತೆ ಮಾಡಿದನು. ರಾಣಿಗೆ ಬಾಯಾರಿಕೆ ಹೆಚ್ಚಾಗತಕ್ಕ ಆಹಾರವನ್ನು ಉಣಿಸಿ, ಆಕೆಗೆ ಬಾಯಾರಿಕೆಯಾದಾಗ ಚಾಣಕ್ಯನು ಹೀಗೆಂದನು - "ನಾನು ಮಂತ್ರದ ಮೂಲಕ ಚಂದ್ರನನ್ನು ಕರೆದು ತಂದಿರುತ್ತೇನೆ, ನುಂಗು ಬಾ" ಎಂದು ರಾಣಿಯ

ನುಂಗು ಬಾಯೆಂದರಸಿಯಂ ಕಣ್ಣಂ ಕಟ್ಟಿಯೊಡಗೊಂಡು ಪೋಗಿ ಕಣ್ಣ ಕಟ್ಟಂ ಬಿಟ್ಟು ಚಂದ್ರನಂ ನುಂಗೆಂಮ ತೋಱಿದೊಡಾಕೆಯುಂ ಕಂಮ ರಾಗಿಸಿಯಾ ನೀರಂ ಕುಡಿದು ಬಯಕೆ ನೆಱಿದತ್ತು ಮತ್ತಂ ಕೆಲವು ದಿವಸದಿಂ ನವಮಾಸಂ ನೆಱಿದು ಬೆಸಲೆಯಾದ ಕೂಸಂ ದಾದಿಯನಿಟ್ಟು ಚಾಣಾಕ್ಯಂಗೆ ಕೊಟ್ಟರಾತನುಂ ಚಂದ್ರಭುಕ್ತನೆಂದು ಪೆಸರನಿಟ್ಟು ಬಾಯ್ಬೆಣ್ಣೆಯೊಡನೆ ಕಿಱಿಕಿಱಿದೆ ನಂಜನೂದಿ ಬಟಿಕೆ ಬಳೆದೊಡಾಹಾರದೊಳೂಡಲ್ ತಗುಳ್ದೊಂ ಮತ್ತೆ ಪದಿನಾಱನೆಯ ಬರಿಸದಾದಂದು ಸಾಮಂತರ್ಕಳ್ಗಮಲ್ಲಿಯ ಮಂತ್ರಿಯರ್ಕಳ್ಗಮರಸು ಮಕ್ಕಳ್ಗಂ ತಳವಱಿರ್ಕಳ್ಗಮಿಂತೆಂದು ನುಡಿದೊಂ ಚಂದ್ರಭುಕ್ತಂಗೆ ಪೃಥ್ವಿಯೆಲ್ಲಮನಾಳ್ವ ಲಕ್ಷಣಂಗಳೊಳವು ಈತಂಗರಸುಮಾದಿದಪ್ಪೆಂ ನಿಮಗೆಲ್ಲಮಿಲ್ಲಿಯ ಬಾಟೆಂ ಪದಿರ್ಪ್ರಿ ಬಾಟಂ ಮಾಡುವೆನೆಂದು ಬೋಧಿಸಿಯೊದಗೊಂಡು ಪೋಗಿ ಮತ್ತಂ ಪೆಱರುಮಂ ನೆರಪಿ ಪಿರಿದು ತಂತ್ರಮಂ ಮಾಡಿ ಶ್ರೀಪರ್ವತದ ಮೇಗನಿಬರುಮನಿರಿಸಿ ತಾನೊರ್ವನೆ ಪೋಗಿ ಪೊನ್ನಂ ಮಾಟ್ಪ ಬಗೆಯಿಂದಂ ಮರ್ದುಗಳನಱಿಸಿ ಸುತ್ತಂ ತೊಬಲ್ದನನ್ನೆಗಂ ಪರ್ವತದ ತಟ್ಪಲೊಳಾದ ಮಾನುಂ ಗುಂದಿತಪ್ಪ ರಸದ ಬಾವಿಯಂ ಮೊದೆನಾರ್ಪುದಂ ಕಂದು ಮುಚ್ಚಿದ ಶಿಲೆಯಂ ಕಳೆದು ನೋಟ್ಪನನ್ನೆಗಮದಱೊಳೊರ್ವಂ ಬಾಬುತ್ತಿರ್ದ ಪುರುಷನಂ ಕಂದು ನೀನೇಕಿಲ್ಲಿ ಪೊಕ್ಕಿರ್ದೆಯೆಂದು ಬೆಸಗೊಂಡೊದಾತನೆಂದನೊರ್ವ ರಸವಾವಕನೆಂಬ ಬಚ್ಚುವನೀ ಬಾವಿಯೊಳಗಿಟೆದು ನೀನೀ ರಸಮಂ ಮೊಗೆದು ಕೊಟ್ಟೊಡದಱೊಳ್ ಮಾಡಿದ ಪೊನ್ನುಂ ನಿನಗಮೆನಗಂ ಸಮಭಾಗಮಕ್ಕುಮೆಂದೊಡಾಂ ಪೊನ್ನ ಲೋಭದಿಂದಂ ಬಾವಿಯಂ ಪೊಕ್ಕು ರಸಮಂ ಸೋರೆಯಿಂ ತೀವಿ ಬೇಟ್ಪನಿತುಮಂ

ಕಣ್ಣಿಗೆ ಬಟ್ಟೆ ಕಟ್ಟಿ, ಕರೆದುಕೊಂಡು ಹೋದನು ಬಟ್ಟಲ ಬಳಿಯಲ್ಲಿ ಕಣ್ಣಿನ ಕಟ್ಟನ್ನು ಬಿಡಿಸಿದನು. "ಚಂದ್ರನನ್ನು ನುಂಗು" ಎಂದು ಬಟ್ಟಲಲ್ಲಿ ಚಂದ್ರನನು ತೋರಿಸಲು ಅಕೆ ಕಂಡು ಸಂತೋಷಪಟ್ಟು ನೀರನ್ನು ಕುಡಿದಳು. ಅವಳ ಬಯಕೆ ನೆರವೇರಿತು. ಆಮೇಲೆ ಕೆಲವು ದಿವಸಗಳಿಗೆ ಆಕೆಯ ಗರ್ಭಕ್ಕೆ ಒಂಬತ್ತು ತಿಂಗಳು ತುಂಬಿ ಪ್ರಸವವಾಯಿತು. ಹಾಗೆ ಪೆತ್ತ ಮಗುವನ್ನು ನೋಡಲು ದಾದಿಯನ್ನು ನೇಮಿಸಿ ಚಾಣಾಕ್ಯನಿಗೆ ಕೊಟ್ಟರು. ಅವನು ಮಗುವಿಗೆ ಚಂದ್ರಭುಕ್ತನೆಂದು ಹೆಸರಿಟ್ಟು ತಿನ್ನಿಸುವ ಬೆಣ್ಣೆಯೊಡನೆ ಕೊಂಚ ಕೊಂಚವಾಗಿಯೇ ವಿಷವನ್ನು ತಿನ್ನಿಸಿ, ಆಮೇಲೆ ದೊಡ್ಡವನಾದಾಗ ಆಹಾರದೊಂದಿಗೆ ಸ್ವಲ್ಪ ಸ್ವಲ್ಪ ವಿಷವನ್ನು ತಿನ್ನಿಸಲು ತೊಡಗಿದನು. ಆಮೇಲೆ ಹದಿನಾರನೆಯ ವರ್ಷ ವಯಸ್ಸಾದಾಗ ಸಾಮಂತರುಗಳಿಗೂ ಅಲ್ಲಿಯ ಮಂತ್ರಿಗಳಿಗೂ ರಾಜಕುಮಾರರಿಗೂ ನಗರರಕ್ಷಕರಿಗೂ ಈ ರೀತಿಯಾಗಿ ಹೇಳಿದನು - "ಚಂದ್ರಭುಕ್ತನಿಗೆ ಭೂಮಿಯನ್ನೆಲ್ಲ ಆಳುವ ಲಕ್ಷಣಗಳಿವೆ. ಈತನನ್ನು ರಾಜನಾಗಿ ಮಾಡುತ್ತೇನೆ"- ನಿಮಗೆಲ್ಲ ಇಲ್ಲಿಯ ಜೀವಿತಕ್ಕಿಂತ ಹತ್ತರಷ್ಟು ಮಿಗಿಲಾದ ಜೀವಿಕೆಯನ್ನು ಮಾಡುವೆನು" - ಎಂದು ಬೋಧಿಸಿ ಅವರನ್ನು ಕೂಡಿಕೊಂಡು ಹೋದನು. ಆಮೇಲೆ ಬೇರೆಯವರನ್ನೂ ಒಟ್ಟುಗೂಡಿಸಿ ದೊಡ್ಡ ಸೈನ್ಯವನ್ನು ಸಿದ್ಧಗೊಳಿಸಿದನು. ಅವರನ್ನೆಲ್ಲ ಶ್ರೀಪರ್ವತದ ಮೇಲೆ ನಿಲ್ಲಿಸಿದನು. ತಾನೊಬ್ಬನೆ ಹೋಗಿ ಚಿನ್ನವನ್ನು ಮಾಡಬೇಕೆಂಬ ಮನಸ್ಸಿನಿಂದ ಮೂಲಿಕೆ ಮದ್ದುಗಳನ್ನು ಹುಡುಕುತ್ತ ಸುತ್ತಲೂ ಅಲೆದಾಡುತ್ತಿದ್ದನು. ಆ ಸಂದರ್ಭದಲ್ಲಿ ಪರ್ವತದ ತಪ್ಪಲಿನಲ್ಲಿ ತುಂಬಾ ಆಳವಾಗಿರುವ ಸಿದ್ಧರಸದ (ಮುಟ್ಟಿದ್ದನ್ನೆಲ್ಲ ಚಿನ್ನವಾಗಿ ಮಾಡುವ ರಸದ) ಬಾವಿಯನ್ನು ಕಂಡನು. ಅದು ಹುಳಿಮಜ್ಜಿಗೆಯಂತೆ ನಾತ ಬಡಿಯುತ್ತಿತ್ತು. (ಹಳಸಿದ ಮಾಂಸದ

ಮೊಗೆದು ಕೊಟ್ಟೊಡಾತನೆನ್ನಂ ತೆಗೆಯದೆ ಪೋದನಂತೆ ಮುನ್ನಂ ಪಲಂಬರುಮನೀ ಮಾರ್ಗದಿಂ ಬಾವಿಯೊಳಗೆ ಪುಗಿಸಿ ರಸಮಂ ಕೊಂಡವರಂ ತೆಗೆಯದೆ ಕೊಂದನೆಂದು ಪೇಱೊಡಾಂ ನಿನ್ನಂ ತೆಗೆದು ಬಾಟಿಪೆನೆನಗೆ ರಸಮಂ ಮೊಗೆದು ಕುಡೆಂದು ನಿದುನೇಣಂ ಪಲವುಂ ಸೋರೆಗಳುಮಂ ತಂದು ತೀವಿಸಿ ಕೊಂಡಾತನುಮಂ ತೆಗೆದು ರಸಂ ತಿಂದ ಮೆಯ್ಗೆ ತಕ್ಕ ಪ್ರತೀಕಾರದ ಮರ್ದುಗಳಂ ಮಾಡಿಯಾತನಂ ಬಾಟಿಸಿ ಕಟಿಪಿಡಂ ಮತ್ತಾ ರಸದಿಂದೆನಿತಾನುಂ ಪೊನ್ನ ರಾಶಿಯಂ ಮಾಡಿ ಇಂತೆಂದನಾರೊರ್ವರೊಂದು ಪೇಱು ಮಣ್ಣಂ ಶ್ರೀಪರ್ವತದ ಮೇಗೊಟ್ಟುವರವರ್ಗೊಂದು ಪೇಱು ಪೊನ್ನಂ ಕುಡುವೆನೆಂದಾ ನಾಡೊಳ್ ಘೋಷಣೆಯಂ ಪೊಯ್ಸಿದೊಡದಂ ಕೇಳ್ದೊರ್ವನೊಕ್ಕಲಿಗನೊಂದು ಪೇಱು ಮಣ್ಣಂ ತಂದು ಶ್ರೀಪರ್ವತದ ಮೇಗೊಟ್ಟದೊಡಾತಂಗೊಂದು ಪೇಱು ಪೊನ್ನಂ ಕೊಟ್ಟೊಡದಂ ಕೇಳ್ದಾ ನಾಡೊಕ್ಕಲಿಗರೆಲ್ಲಂ ಮಣ್ಣ ಪೇಱಂ ತಂದು ಶ್ರೀಪರ್ವತದ ಮೇಗೆ ಬಳಸಿಯುಂ ಪಿರಿಮಂ ರಾಶಿಯಾಗೊಟ್ಟ ಚಾಣಾಕ್ಯನಂ ಪೊನ್ನಂ ಬೇಡಿದೊಡಿಂತೆಂದಂ ನಿಮ್ಮ ತರವೇಳ್ದೊರಾರೆಮಗೊಂದು

ನಾತವುಳ್ಳುದಾಗಿತ್ತು). ಅದನ್ನು ಕಂಡು, ಮುಚ್ಚಿದ ಶಿಲೆಯನ್ನು ತೆಗೆದು ಹಾಕಿ ನೋಡಿದನು. ಆಗ ಅದರಲ್ಲಿ ಬದುಕಿದ್ದ ಒಬ್ಬ ಮನುಷ್ಯನನ್ನು ಕಂಡು, "ನೀನು ಇಲ್ಲಿ ಯಾಕೆ ಹೊಕ್ಕಿದ್ದೆ?" ಎಂದು ಕೇಳಿದಾಗ ಆತನು ಹೀಗೆ ಹೇಳಿದನು - "ರಸವಾದಕನೆಂಬ ಒಬ್ಬ ಸಂನ್ಯಾಸಿಯು ನನ್ನೊಡನೆ- ಈ ಬಾವಿಯೊಳಗಿಳಿದು ನೀನು ಈ ರಸವನ್ನು ಮೊಗೆದು ಕೊಟ್ಟರೆ ಅದರ ಸಹಾಯದಿಂದ ಮಾಡಿದ ಚಿನ್ನವು ನಿನಗೂ ನನಗೂ ಸಮವಾದ ಪಾಲಾಗುವುದು - ಎಂದನು. ಆಗ ನಾನು ಚಿನ್ನದ ದುರಾಶೆಯಿಂದ ಬಾವಿಗಿಳಿದು ರಸವನ್ನು ಸೋರೆಬುರುಡೆಯಲ್ಲಿ ತುಂಬಿಸಿ ಬೇಕಾದಷ್ಟನ್ನು ಮೊಗೆದು ಕೊಟ್ಟೆನು. ಆಮೇಲೆ ಅವನು ನನ್ನನ್ನು ಮೇಲೆ ತೆಗೆಯದೆ ಹೋದನು, ಹಾಗೆಯೇ ಹಿಂದೆಯೂ ಹಲವರನ್ನು ಈ ರೀತಿಯಿಂದ ಬಾವಿಯೊಳಗಿಳಿಸಿ ರಸವನ್ನು ತೆಗೆದುಕೊಂಡು, ಮತ್ತೆ ಅವರನ್ನು ತೆಗೆಯದೆ ಕೊಂದಿದ್ದಾನೆ" ಎಂದು ಹೇಳಿದನು. "ನಾನು ನಿನ್ನನ್ನು ತೆಗೆದು ಬದುಕಿಸುತ್ತೇನೆ. ನನಗೆ ರಸವನ್ನು ಮೊಗೆದು ಕೊಡು" ಎಂದು ಚಾಣಾಕ್ಯನು ಉದ್ದವಾದ ಹಗ್ಗವನ್ನೂ ಹಲವು ಸೋರೆಬುರುಡೆಗಳನ್ನೂ ತಂದು ಸಿದ್ಧರಸವನ್ನು ತುಂಬಿಸಿಕೊಂಡನು. ಆತನನ್ನು ಬಾವಿಯಿಂದ ಮೇಲೆತ್ತಿ, ಸಿದ್ಧರಸವು ಕೊರೆದು ಗಾಸಿಮಾಡಿದ ಶರೀರಕ್ಕೆ ಯೋಗ್ಯವಾದ ಪರಿಹಾರ ಕೊಡತಕ್ಕ ಔಷಧಿಗಳನ್ನು ಮಾಡಿ, ಅವನನ್ನು ಬದುಕಿಸಿ ಕಳುಹಿಸಿದನು. ಆಮೇಲೆ ಆ ಸಿದ್ಧರಸದಿಂದ ಎಷ್ಟೋ ಚಿನ್ನದ ರಾಶಿಯನ್ನು ಮಾಡಿ, ಹೀಗೆ ಹೇಳಿದನು -"ಯಾರೊಬ್ಬರು ಒಂದು ಹೇರು ಮಣ್ಣನ್ನು ಶ್ರೀಪರ್ವತದ ಮೇಲೆ ತಂದು ರಾಶಿಹಾಕುವರೋ ಅವರಿಗೆ ಒಂದು ಹೇರು ಚಿನ್ನವನ್ನು ಕೊಡುವೆನು." ಈ ರೀತಿಯಾಗಿ ಆ ನಾಡಿನಲ್ಲಿ ಡಂಗುರವನ್ನು ಹೊಡೆಯಿಸಿದನು. ಅದನ್ನು ಕೇಳಿ, ಒಬ್ಬ ಒಕ್ಕಲಿಗನು ಒಂದು ಹೇರು ಮಣ್ಣನ್ನು ತಂದು ಶ್ರೀಪರ್ವತದ ಮೇಲೆ ರಾಶಿ ಹಾಕಿದನು. ಚಾಣಾಕ್ಯನು ಅವನಿಗೆ ಒಂದು ಹೇರು ಚಿನ್ನವನ್ನು ಕೊಟ್ಟನು. ಅದನ್ನು ಕೇಳಿದ ಆ ನಾಡಿನ ಒಕ್ಕಲಿಗರೆಲ್ಲರೂ ಮಣ್ಣಿನ ಹೊರೆಗಳನ್ನು ತಂದು ಶ್ರೀಪರ್ವತದ ಮೇಲೆ ಸುತ್ತಲೂ ದೊಡ್ಡ ರಾಶಿಯಾಗಿ ಹಾಕಿ, ಚಾಣಾಕ್ಯನೊಡನೆ - ಚಿನ್ನವನ್ನು ಕೊಡು ಎಂದು ಕೇಳಿದರು. ಆಗ ಚಾಣಾಕ್ಯನು - "ನಿಮ್ಮನ್ನು ಮಣ್ಣು ತರಲು

ಪೇಱು ಮಣ್ಣು ಬಾಟ್ತಿಯಾಗೆ ತರಿಸಿಕೊಂಡೆವೀಯುಟೆದ ಮಣ್ಣಮಗೆ ಬಾಟ್ತಿಯಲ್ತು ನಿಮ್ಮ ನಿಮ್ಮ ತಂದ ಮಣ್ಣಂ ಕೊಂಡು ಪೋಗಿಮೆಂದೊದವರ್ಗಳ್ ನಿರಾಶೆಯಾಗಿ ಬಿಸುಟ್ಟು ಪೋದರ್ ಮತ್ತಾ ಮಣ್ಣಿಂದಂ ಬಳಸಿಯುಂ ಕೋಂಟೆಯಂ ಮಾಡಿ ಮಾಟ ಕೂಟ ಪ್ರಾಸಾದ ಸಹಿತಂ ಪೊಬಲಂ ಮಾಡಿ ಪೊನ್ನಂ ಕೊಟ್ಟು ಪಲವುಂ ಕುದುರೆಗಳುಮಂ ಕಟ್ಟಯಾಳ್ಗಳ್ಗೆ ಕೊಟ್ಟು ಪಿರಿದುಂ ತಂತ್ರಮಂ ಮಾಡಿ ಚಂದ್ರಭುಕ್ತನನೊದಗೊಂಡು ಪೋಗಿ ಮಹಾಪದ್ಮನ ಮೇಗೆರ್ದಾತನೊಳ್ ಕಾದಿ ಕಾಳಿಗಮಂ ಸೋಲ್ತೋದಿ ಬರ್ದುಂಕಿ ಮತ್ತಂ ತಂತ್ರಮಂ ಮಾಡಿ ವರುಷ ವರುಪಕ್ಕಂ ಪೋಗಿ ಕಾದಿ ಸೋಲ್ತು ಬರ್ಕುಂ ಮತ್ತೊರ್ಮೆ ಮೇಲೆಟ್ಟು ಬವರಮಂ ಕಾದಿ ಸೋಲ್ದ ಕಾಳಿಗಮನಟೆದು ಚಂದ್ರಭುಕ್ತನಂ ಪೋಗಲ್ವೇಟ್ಟು ತಾನುಂ ನೀಡುಂ ಬೇಗಂ ಕಾದಿ ಕಾಳಿಗಮಂ ಸೋಲ್ತು ಕೊಳ್ಗುಳದೊಳಗಿರ್ದಾಗಳ್ ಪೋಗಲ್ ಪಾಂಗಿಲ್ಲದೆ ಸಾರೆಯೊಂದು ತಾಮರೆಗೆಱೆಯುಂಟದಂ ಪೊಕ್ಕು ನೆರವಿಯೆಲ್ಲಂ ಪೋಪನ್ನೆಗಮಿರ್ದು ಇರುಳ್ ಪೊಱಮಟ್ಟು ಪಾಟಳೀಪುತ್ರಮಂ ಪೊಕ್ಕು ಪಸಿದು ಸಾಲಿಗರ ಮನೆಯಂ ಪೊಕ್ಕು ಸಾಲಿಗರ ಬರ್ದ್ದಿಯನುಣಲ್ದೇಡಿದೊಡಾಕೆಯುಂ ಕುಳ್ಳಿರು ಮಗನೆಯೆಂದೇಱಲಿಕ್ಕಿ ಕುಳ್ಳಿರಿಸಿ ಕಂಚನಿಟ್ಟು ಬಿಸಿಯಂಬಲಿಯಂ ಬದ್ದಿಸಿದೊಡಾತನುಂ ಪಸಿದಲಂಪಿನಿಂದಂ ಬಿಸಿಯಂಬಲಿಯಂ ಬಾಯೊಳಿಟ್ಟಾಗಳ್ ಕಯ್ಯುಂ ಬಾಯುಂ ಬೆಂದೊಡೆ ಮೆಯ್ಯನದಿರ್ದು ಕೈಯಂ ಬಿದಿರ್ದವನಂ

ಹೇಳಿದವರು ಯಾರು? ನಮಗೆ ಒಂದು ಹೊರೆ ಮಣ್ಣು ಉಪಯೋಗಕ್ಕೆ ಬೇಕಾಯಿತೆಂದು ತರಿಸಿಕೊಂಡಿದ್ದೇವೆ. ಈ ಉಳಿದ ಮಣ್ಣು ನಮಗೆ ಉಪಯೋಗವಿಲ್ಲ. ನೀವು ನೀವು ತಂದ ಮಣ್ಣನ್ನು ತೆಗೆದುಕೊಂಡು ಹೋಗಿ" ಎಂದು ಹೇಳಿದನು. ಆಗ ಅವರು ನಿರಾಶೆಗೊಂಡು ಮಣ್ಣನ್ನು ಅಲ್ಲೇ ಬಿಸಾಡಿ ಹೋದರು. ಅನಂತರ ಆ ಮಣ್ಣಿನಿಂದ ಶ್ರೀಪರ್ವತದ ಸುತ್ತಲೂ ಕೋಟೆಯನ್ನು ಮಾಡಿ, ಮಾಟ - ಕೂಟ - ಅರಮನೆಗಳ ಸಮೇತವಾಗಿ ಪಟ್ಟಣವನ್ನು ನಿರ್ಮಿಸಿ, ಚಿನ್ನವನ್ನು ಕೊಟ್ಟು ಹಲವು ಕುದುರೆಗಳನ್ನೂ ತಂದು ಕಟ್ಟಿ ಹಾಕಿ, ಭಟರಿಗೆ ಕೊಟ್ಟು ದೊಡ್ಡ ಸೈನ್ಯವನ್ನು ಸಿದ್ಧಮಾಡಿದನು. ಚಂದ್ರಭುಕ್ತನನ್ನು ಕೂಡಿಕೊಂಡು ಹೋಗಿ ಮಹಾಪದ್ಮನ ಮೇಲೆ ದಾಳಿಯಿಟ್ಟನು. ಅವನೊಂದಿಗೆ ಕಾದಾಡಿ ಯುದ್ಧದಲ್ಲಿ ಸೋತು ಓಡಿಹೋಗಿ, ಬದುಕಿಕೊಂಡು ಪುನಃ ಸೈನ್ಯವನ್ನು ಸಿದ್ಧಗೊಳಿಸಿ ಪ್ರತಿವರ್ಷವೂ ಹೋಗಿ ಕಾದಾಡಿ ಸೋತು ಬರುತ್ತಿದ್ದನು. ಹೀಗೆ ಮತ್ತೊಮ್ಮೆ ಮೇಲೆದ್ದು ಹೋರಾಡಿ ಸೋಲತಕ್ಕ ಯುದ್ಧ ಪರಿಸ್ಥಿತಿಯನ್ನರಿತು ಚಾಣಾಕ್ಯನು ಚಂದ್ರಭುಕ್ತನನ್ನು ಹೋಗಲಿಕ್ಕೆ ಹೇಳಿ ತಾನು ಬಹಳ ಹೊತ್ತು ಯುದ್ಧ ಮಾಡಿ ಸೋತು, ಯುದ್ಧರಂಗದಲ್ಲಿ ಇದ್ದಾಗ ಹೋಗಲು ಅವಕಾಶವಿಲ್ಲದೆ ಸಮೀಪದಲ್ಲೇ ಇದ್ದ ಒಂದು ತಾವರೆಯ ಕೆರೆಗೆ ಹೋದನು. ಸೈನ್ಯಸಮೂಹವೆಲ್ಲವೂ ಹೋಗುವವರೆಗೆ ಅಲ್ಲೇ ಇದ್ದನು. ರಾತ್ರಿಯಲ್ಲಿ ಅಲ್ಲಿಂದ ಹೊರಟನು. ಪಾಟಲೀಪುತ್ರ ನಗರವನ್ನು ಹೊಕ್ಕು ಹಸಿದವನಾಗಿ ನೇಕಾರರ ಮನೆಗೆ ಪ್ರವೇಶಿಸಿ ಅಲ್ಲಿದ್ದ ನೇಕಾರರ ಮುದುಕಿಯನ್ನು ಕುರಿತು 'ಅವ್ವಾ ಹಸಿದಿದ್ದೇನೆ, ಊಟವನ್ನು ಬಡಿಸು' ಎಂದು ಬೇಡಿಕೊಂಡನು. ಆಗ ಆಕೆ 'ಮಗನೇ, ಕುಳಿತುಕೋ' ಎಂದು ಹೇಳಿ, ಕುಳಿತುಕೊಳ್ಳಲು ಮಣೆ ಹಾಕಿ ಅವನನ್ನು ಕುಳ್ಳಿರಿಸಿದಳು. ಆಮೇಲೆ ಕಂಚಿನ ತಟ್ಟೆಯಿಟ್ಟು ಬಿಸಿಯಾದ ಅಂಬಲಿ (ಗಂಜಿ)ಯನ್ನು ಬಡಿಸಿದಳು. ಚಾಣಾಕ್ಯನು ಹಸಿದವನಾಗಿದ್ದು ಸಂತೋಷದಿಂದ ಆ ಬಿಸಿಗಂಜಿಯನ್ನು ಬಾಯಿಗಿಟ್ಟಾಗ ಅವನ ಕೈಯೂ ಬಾಯೂ

ಬಿರ್ದಿ ಕಂಡು ನಕ್ಕಿಂತೆಂದಳ್ ಈ ಲೋಕದೊಳ್ ಮೂವರ್ ಮೂರ್ಖರಂ ಕಂಡೆನೆಂದೊಡೆ ಚಾಣಾಕ್ಯನವರಾರಬ್ಬಾಯೆಂದು ಬೆಸಗೊಂಡೊಡಾಕೆಯೆಂದಳ್ ನೀನುಂ ನಂದನುಂ ಚಾಣಾಕ್ಯನುಮೆಂದು ಪೇಟಿಂದಾತನೆಂತು ಮೂರ್ಖನೆಂದು ಬೆಸಗೊಂಡೊಡೆ ಮಗನೆ ಬುದ್ಧಿಯೊಡೆಯೊನ್ ಬಿಸಿಯಂಬಲಿಯುಂ ಕಂಚಿನ ಕಡೆ ಕಡೆಯೊಳ್ ಕಿಱಿಕಿಱಿದನೆ ಆಱಿಸುತ್ತಮುಣ್ಗುಂ ನೀನಂತುಣಲಱಿಯದುದಱಿಂ ಮೂರ್ಖನೆನಿ ನಂದನೇಂ ಮೂರ್ಖನೆಂದೊಡೆ ನಂದನೆಂದೊಡಂ ಮಹಾಪದ್ಮನೆಂದೊಡಮೊರ್ವನ ಪೆಸರೆ ಆತಂ ತನ್ನ ಕೊಟ್ಟ ದಾನಮುಂ ಕುಡದುದಱಿಂ ಪಗೆಗೊಂಡು ಪೋಪನಂ ತನ್ನಾರ್ವಂಡೆ ಕೊಲ್ಲುದುದಱಿಂದಂ ನಂದಂ ಮೂರ್ಖಂ ಚಾಣಾಕ್ಯನೆಂತು ಮೂರ್ಖನೆಂಡೊಡಿಂತೆಂದಳ್ ಚಾಣಾಕ್ಯಂ ತನ್ನ ಮುಳಿಸನೆ ನೋಟ್ಟುಂ ಕಜ್ಜಮನಱಿಯಂ ಮೂಲತಂತ್ರಮನೊಡೆಯನುಂ ಕ್ಷತ್ರಿಯನುಮಲ್ಲಂ ಪೃಥ್ವೀಶ್ವರನೊಡನೆ ಕಾದಲ್ ಬರ್ಕುಮಾತಂಗೆ ಬುದ್ಧಿಯುಳ್ಳೊಡೆ ತನ್ನ ಪಗೆವನ ನಾಡಂ ಕಿಡಿಸುವುದು ಪ್ರತಿಪಕ್ಷಮಂ ತನಗೆ ಮಾಡುವುದು ಸಾಮಂತ ಮಹಾಸಾಮಂತರ್ಕಳಂ ದ್ರವ್ಯಮಂ ಕೊಟ್ಟು ಭೇದಿಸುವುದು ತತ್ಸಂಬಂಧಿಗಳಂ ಪ್ರತಿಪಕ್ಷದಿಂದಂ ಕಿಡಿಸುವುದುಮಿಂತು ಮಾಡಿದೊಡೆ ನೃಪತಿಯೊರ್ವನೆಯುಟೆಗುಮಾಗಳ್ ತನ್ನ ಬಗೆದ

ಬೆಂದುಹೋದವು. ಆಗ ಅವನು ಮೈಯನ್ನು ಅಲುಗಾಡಿಸುವುದನ್ನೂ ಕೈ ಕೊಡುವುವುದನ್ನೂ ಮುದುಕಿ ಕಂಡು ನಕ್ಕು ಹೀಗೆ ಹೇಳಿದಳು. 'ಈ ಲೋಕದಲ್ಲಿ ಮೂರು ಮಂದಿ ಮೂರ್ಖರನ್ನು (ತಿಳಿಗೇಡಿಗಳನ್ನು) ಕಂಡಿದ್ದೇನೆ' - ಎಂದಾಗ ಚಾಣಾಕ್ಯನು 'ಅವರು ಯಾರು ತಾಯೇ?' ಎಂದು ಪ್ರಶ್ನಿಸಿದನು. ಅದಕ್ಕೆ ಮುದುಕಿಯು 'ನೀನೂ ನಂದನೂ ಚಾಣಾಕ್ಯನೂ' ಎಂದು ಮೂವರನ್ನು ಸೂಚಿಸಿದಳು. ಆಗ ಚಾಣಾಕ್ಯನು "ನಾನು ಹೇಗೆ ಮೂರ್ಖನು?" ಎಂದು ಕೇಳಿದಾಗ ಅವಳು - 'ಮಗನೆ ಬುದ್ಧಿಯುಳ್ಳವನು ಬಿಸಿಯಾದ ಅಂಬಲಿಯನ್ನು ತಟ್ಟೆಯ ಕಡೆಕಡೆಯಲ್ಲಿ ಸ್ವಲ್ಪ ಸ್ವಲ್ಪವನ್ನೇ ತಣಿಸಿಕೊಳ್ಳುತ್ತ ಊಟ ಮಾಡುತ್ತಾನೆ. ನಿನಗೆ ಹಾಗೆ ಊಟ ಮಾಡಲು ತಿಳಿಯದಿರುವುದರಿಂದ ನೀನು ಮೂರ್ಖನು" ಎಂದಳು. "ನಂದನು ಹೇಗೆ ತಾನೇ ಮೂರ್ಖನು ?" ಎಂದು ಕೇಳಿದಾಗ ಮುದುಕಿಯು "ನಂದನೆಂದರೂ ಮಹಾಪದ್ಮನೆಂದರೂ ಒಬ್ಬನ ಹೆಸರೇ ಆಗಿರುತ್ತದೆ. ಅತನು ತಾನು ಕೊಟ್ಟ ದಾನವನ್ನು ಕೊಡದುದರಿಂದ (ದತ್ತಾಪಹಾರ ಮಾಡಿದ್ದರಿಂದ) ಮತ್ತು ದ್ವೇಷವನ್ನಿಟ್ಟುಕೊಂಡು ಹೋಗತಕ್ಕವನನ್ನು ತಾನು ಸಮರ್ಥನಾಗಿರುವಾಗಲೇ ಕೊಲ್ಲದುದರಿಂದ ನಂದನು ಮೂರ್ಖನು" ಎಂದು ಹೇಳಿದಳು. "ಚಾಣಾಕ್ಯನು ಹೇಗೆ ಮೂರ್ಖನು"? ಎಂದಾಗ ಹೀಗೆಂದಳು - "ಚಾಣಾಕ್ಯನು ಕೋಪವನ್ನು ಮಾತ್ರ ನೋಡುತ್ತಾನೆ, ಕಾರ್ಯವನ್ನು ತಿಳಿಯನು. ಮೂಲಸೈನ್ಯವುಳ್ಳವನೂ ಅಲ್ಲ, ಕ್ಷತ್ರಿಯನೂ ಅಲ್ಲ. ಆದರೆ ಮಹಾರಾಜನೊಂದಿಗೆ ಕಾದಾಡಲು ಬರುತ್ತಾನೆ. ಅವನಿಗೆ ಬುದ್ಧಿಯಿದ್ದರೆ, ತನ್ನ ಶತ್ರುವಿನ ರಾಜ್ಯವನ್ನು ನಾಶಪಡಿಸುತ್ತಿದ್ದನು. ತನ್ನ ವಿರೋಧಪಕ್ಷದವರನ್ನು ತನ್ನವರನ್ನಾಗಿ ಮಾಡುತ್ತಿದ್ದನು. ಸಾಮಂತ ಮಹಾಸಾಮಂತರಿಗೆಲ್ಲ ಹಣವನ್ನು ಕೊಟ್ಟು ಭೇದೋಪಾಯವನ್ನು ಮಾಡುತ್ತಿದ್ದನು. ಹೀಗೆ ಮಾಡಿದ್ದರೆ ರಾಜನೊಬ್ಬನೇ ಉಳಿಯುತ್ತಿದ್ದನು. ಆಗ ತಾನು ಭಾವಿಸಿದ ಕಾರ್ಯವು ಕೈಗೊಡುತ್ತಿತ್ತು." ಹೀಗೆ ಮುದುಕಿ ಹೇಳಿದಾಗ ಚಾಣಾಕ್ಯನು - "ಅವ್ವಾ, ನೀವು ಹೇಳಿದ

ಕಾರ್ಯಸಿದ್ಧಿಯಕ್ಕುಮೆಂದೊಡಬ್ಪಾ ನಿಮ್ಮ ಪೇಟ್ಟಂತುಟೆ ಕಜ್ಜಮೆಂದುಂದು ಪೊಱಮಟ್ಟು ಶ್ರೀಪರ್ವತಕ್ಕೆ ಪೋಗಿ ಪಿರಿದು ತಂತ್ರಮಂ ಮಾಡಿ ನಾಲಿಗರ ಬರ್ದಿಯ ಪೇಟ್ಟಂತೆ ನಂದನ ನಾಡಂ ಕಿಡಿಸಿ ಸಾಮಂತ ಮಹಾಸಾಮಂತರ್ಕಳಂ ದ್ರವ್ಯದಿಂ ಭೇದಿಸಿ ತತ್ಪತಿಪಕ್ಷಮಂ ತನ್ನಂತೆ ಮಾಡಿ ತತ್ಸಂಬಂಧಿಗಳಂ ಪ್ರತಿಪಕ್ಷದಿಂದಂ ಕಿಡಿಸಿ ನಂದನೊರ್ವನೆ ಉಟೆದಾಗಳ್ ಚಂದ್ರಭುಕ್ತಂ ಬೆರಸು ಸಮಸ್ತಬಲಮೆಲ್ಲಮಂ ಕೂಡಿಕೊಂಡು ಮೇಲೆರ್ದು ಕಾಮುವಾಗಳ್ ಮಹಾಪದ್ಮನ ಸಾಮಂತ ಮಹಾಸಾಮಂತರೊಡ್ಡಾಮನೊಡ್ಡಿ ದ್ರೋರಂ ಕಾದವೇಟ್ಟೊಡಂ ಕಾದಲೊಲ್ಲದೆ ಕೆಮ್ಮಗಿರೆ ಮಹಾಪದ್ಮಂ ಭೇದಕ್ಕೆ ಪಡೆ ಸಂದು ದೆಂಬುದನಱೆದಂಜಿಯಾರುಮಱೆಯದಂತಿರೆ ಓಡಿ ಕೆಟ್ಟಂ ಮತ್ತಿತ್ತ ಸುಬಂಧು ಪಿರಿದು ಬೇಗಂ ಕಾಳೆಗಮಂ ಕಾದಿ ಸೋಲ್ತೊಡಾತನಂ ಪಿಡಿದು ಕಟ್ಟಿ ಸಂಕಲೆಯನಿಕ್ಕಿ ಸೆಱೆಯೊಳಿಟ್ಟಂ ಮತ್ತೆ ಚಾಣಾಕ್ಯಂ ಕಾಳೆಗಮಂ ಗೆಲ್ದು ಪಾಟಳೀಪುತ್ರಮಂ ಪೊಕ್ಕು ಮಹಾಪದ್ಮನರಸಿಯರ್ಕಳ್ಗಂ ಭಂಡಾರಕ್ಕಂ ಕಾಪನಿಟ್ಟು ಪೊಬಲ ಪ್ರಜೆಯಂ ಸಂತೈಸಿ ಮತ್ತಂ ಪ್ರಶಸ್ತ ದಿನ ವಾರ ನಕ್ಷತ್ರ ಮುಹೂರ್ತದೊಳ್ ಚಂದ್ರಭುಕ್ತಂಗೆ ರಾಜ್ಯಾಭಿಷೇಕಂಗೆಯ್ದು ಪಟ್ಟಂಗಟ್ಟಿ ಮಹಾಪದ್ಮನರಸಿ ಚಂದ್ರಮತಿ ಮಹಾದೇವಿಯಂ ಚಂದ್ರಭುಕ್ತಂಗೆ ಮಹಾದೇವಿ ಮಾಡಿ ಮತ್ತೆ ನಂದನ ಭಂಡಾರದೊಳಂ ತಮ್ಮ ಭಂಡಾರದೊಳಂ ದ್ರವ್ಯಮಿಲ್ಲದುದನಱೆದು ಪಾಟಳೀಪುತ್ರದ ಪ್ರಜೆಗಳಂ ನಾಡ ವ್ರಜೆಗಳಂ ಬಟೆಯಟ್ಟಿ

ಹಾಗೆಯೆ ಮಾಡತಕ್ಕುದು" ಎಂದು ಹೇಳಿದನು. ಅವನು ಊಟ ಮಾಡಿ ಹೊರಟು ಶ್ರೀಪರ್ವತಕ್ಕೆ ಹೋಗಿ ದೊಡ್ಡಸೈನ್ಯವನ್ನು ಸಿದ್ಧಮಾಡಿದನು. ನೇಕಾರರ ಮುದುಕಿ ಹೇಳಿದ ಹಾಗೆ ನಂದನ ರಾಜ್ಯವನ್ನು ಕೆಡಿಸಿದನು. ಸಾಮಂತ ಮಹಾಸಾಮಂತರನ್ನು ಹಣ ಕೊಟ್ಟು ಬೇರ್ಪಡಿಸಿದನು. ಶತ್ರುಪಕ್ಷದವರನ್ನು ತನ್ನ ವಶ ಮಾಡಿಕೊಂಡನು. ಅವರ ಸಂಬಂಧದವರನ್ನು ಶತ್ರುಪಕ್ಷದವರಿಂದಲೇ ನಾಶಗೊಳಿಸಿದನು. ನಂದನೊಬ್ಬನೆ ಉಳಿದಾಗ ಚಂದ್ರಭುಕ್ತನನ್ನು ಕೂಡಿಕೊಂಡು, ಸಕಲಸೈನ್ಯಸಮೇತನಾಗಿ ದಾಳಿಮಾಡಿ ಯುದ್ಧಮಾಡುವ ಸಂದರ್ಭದಲ್ಲಿ, ಎದುರಿಗೆ ಸೈನ್ಯವನ್ನು ನಿಲ್ಲಿಸಿ ಕಾದಲು ಅಣಿಯಾಗಿದ್ದ ಮಹಾಪದ್ಮನ ಸಾಮಂತ ಮಹಾಸಾಮಂತರಿಗೆ ಕಾದಾಡಲು ಆಜ್ಞೆ ಬಂದರೂ ಅವರು ಕಾದಾಡಲೊಪ್ಪದೆ ಸುಮ್ಮನಿದ್ದರು. ತನ್ನ ಸೈನ್ಯವು ಭೇದೋಪಾಯಕ್ಕೆ ಒಳಗಾಯಿತೆಂದು ಮಹಾಪದ್ಮನು ತಿಳಿದು ಹೆದರಿ, ಯಾರೂ ತಿಳಿಯದ ಹೇಗೆ ಓಡಿ ಕೇಡನ್ನು ಹೊಂದಿದನು. ಅನಂತರ, ಇತ್ತ ಸುಬಂಧು ಬಹಳ ಹೊತ್ತು ಯುದ್ಧವನ್ನು ಮಾಡಿ ಸೋತನು. ಚಾಣಾಕ್ಯನು ಅವನನ್ನು ಹಿಡಿದು ಬಂಧಿಸಿ ಸಂಕೋಲೆ ತೊಡಿಸಿ, ಸೆರೆಮನೆಯಲ್ಲಿಟ್ಟನು. ಆಮೇಲೆ ಚಾಣಾಕ್ಯನು ಯುದ್ಧದಲ್ಲಿ ಜಯವನ್ನು ಗಳಿಸಿ, ಪಾಟಳೀಪುತ್ರನಗರವನ್ನು ಹೊಕ್ಕು ಮಹಾಪದ್ಮನ ರಾಣಿಯರಿಗೂ ಭಂಡಾರಕ್ಕೂ ಕಾವಲನ್ನಿಟ್ಟನು. ಪಟ್ಟಣದ ಪ್ರಜೆಗಳನ್ನೆಲ್ಲ ಸಮಾಧಾನಪಡಿಸಿದನು. ಆಮೇಲೆ ಮಂಗಳಕರವಾದ ದಿನ, ವಾರ, ನಕ್ಷತ್ರ, ಮುಹೂರ್ತದಲ್ಲಿ ಚಂದ್ರಭುಕ್ತನಿಗೆ ರಾಜ್ಯಾಭಿಷೇಕವನ್ನು ಮಾಡಿ ಪಟ್ಟಗಟ್ಟಿದನು. ಮಹಾಪದ್ಮನ ರಾಣಿಯಾದ ಚಂದ್ರಮತಿ ಮಹಾದೇವಿಯನ್ನು ಚಂದ್ರಭುಕ್ತನಿಗೆ ಮಹಾರಾಣಿಯಾಗಿ ಮಾಡಿದನು. ಅನಂತರ, ನಂದನ ಕೋಶಾಗಾರದಲ್ಲಾಗಲೀ ತನ್ನ ಕೋಶಾಗಾರದಲ್ಲಾಗಲೀ ಹಣವಿಲ್ಲದುದನ್ನು ತಿಳಿದು ಪಾಟಳೀಪುತ್ರದ ಪ್ರಜೆಗಳನ್ನೂ ನಾಡಿನ ಪ್ರಜೆಗಳನ್ನೂ ದೂತರನ್ನು

ಬರಿಸಿಯವರ್ಗೆಲ್ಲಮುಣಿಸಂ ಮಾಡಿ ಸೊರ್ಕಪ್ಪಾಹಾರಮನೂಡಿ ನಿಮ್ಮ ನಿಮ್ಮ ದ್ರವ್ಯಂಗಳರ್ದೆಡೆಯಂ ತೋಱಿಮೆಂಮ ಬಿಸಗೊಂಡೊಡವರ್ಗಳ್ ಸೊರ್ಕ ಮೆಯ್ಯಱಿಯವನಿಬರುಂ ತಂತಮ್ಮ ದ್ರವ್ಯದೆಡೆಗಳಂ ತೋಱಿ ಪೇಱ್ದು ಕೊಟ್ಟರಿಂತನೇಕಸಹಸ್ರಕೋಟಿದ್ರವ್ಯಮಂ ಚಾಣಾಕ್ಯಂ ವದೆದು ಚಂದ್ರಭುಕ್ತಂಗೆ ತೋಱಿ ಭಂಡಾರಮಂ ತೀವಿಯರಮನೆ ಮುಂದಣಂಗಳದೊಳ್ ಇಂತೆಂದು ಪೇಳ್ದಾಡಿದಂ ಪನ್ನಿರದು ವರ್ಷದಿಂದಂ ನಂದನ ವಂಶಮಂ ನಿರ್ಮೂಲಂ ಮಾಡಿ ಕಡಿಸುವನೆಂದೆನ್ನ ಪೂರ್ವ ಪ್ರತಿಜ್ಞೆ ನೆಱೆದತ್ತು ಮತ್ತೆನಗೆ ಜಾದಿನೊಳೂಡಿದವೆರಡು ವಸ್ತ್ರದೊಳವು ಪೊನ್ನ ಗುಂದಿಗೆಯುಮುಂಟು ಮೂಱುದಂಡಮುಮೊಳವು ಮಗಧೆನಾಡ ದ್ರವ್ಯಮೆಲ್ಲಮಂ ತಂದು ಭಂಡಾರಮಂ ತೀವಿದೆಂ ಗುಣವಿಶೇಷಮನಱಿವರಸನುಮೆನಗೆ ಬಸಮಾದಂ ಪೊಡೆ ಪಱಿಯನೆಂದು ಪಱಿಯಂ ಪೊಯ್ಸುಯೊಸೆದು ರಾಗಿಸಿ ತ್ರಿದಂಡಮನೆತ್ತಿ ಸೊರ್ಕಿದ ಪ್ರಜೆವೆರಸು ಲಟಹದಿಂದಾಡಿದೊಂ ಮತ್ತಂ ಶ್ರೀಪರ್ವತಮೊಳಿರ್ದ ತನ್ನ ಪಾರ್ವಂತಿ ಯಶೋಮತಿಗೆ ಬಱೆಯಟ್ಟಿ ಬರಿಸಿಯಾಕೆಯೊಡನೆ ಭೋಗೋಪಭೋಗಂಗಳನನುಭವಿಸುತ್ತಂ ಸಾಮಂತ ಮಹಾಸಾಮಂತರ್ಕಳ್ಗಂ ಜೀವಿತಂಗೆಯ್ದು ತಳವರ್ಗಮುಮಂ ಸಂತವಿಸಿ ಮಗಧವಿಷಯಮನಾಳುತ್ತಮಿಷ್ಟವಿಷಯಕಾಮಭೋಗಂಗಳನನುಭವಿಸುತ್ತಂ ಪಲಕಾಲಂ ಸಲೆ ಮತ್ತಂ ಚಂದ್ರಮತಿ ಮಹಾದೇವಿಗೆ ಗರ್ಭಮಾಗಿಯೊಂದು ದಿವಸಂ ರಥಮನೇಱಿದೊಡಾ ರಥದ ಚಕ್ರದ

ಕಳುಹಿಸಿ ಬರಮಾಡಿ, ಅವರಿಗೆಲ್ಲ ಭೋಜನವನ್ನು ಸಿದ್ಧಪಡಿಸಿ ಸೊಕ್ಕನ್ನು ಉಂಟುಮಾಡುವ ಆಹಾರವನ್ನು ಕೊಟ್ಟು ನಿಮ್ಮ ನಿಮ್ಮ ದ್ರವ್ಯಗಳು ಎಲ್ಲಿವೆಯೆಂಬುದನ್ನು ತೋರಿಸಿರಿ ಎಂದು ಅವರನ್ನು ಕೇಳಿದನು. ಆಗ ಅವರು ಸೊಕ್ಕೇರಿ ಮೈಮೇಲೆ ಎಚ್ಚರವಿಲ್ಲದವರಾಗಿ ಅವರೆಲ್ಲರೂ ತಮ್ಮ ತಮ್ಮ ಹಣವಿರುವ ಸ್ಥಳಗಳನ್ನು ತೋರಿಸಿ, ಹೇಳಿ, ಕೊಟ್ಟುಬಿಟ್ಟರು. ಹೀಗೆ ಅನೇಕ ಸಾವಿರ ಕೋಟಿ ಧನವನ್ನು ಚಾಣಾಕ್ಯನು ಪ್ರಜೆಗಳಿಂದಲೇ ಪಡೆದು ಚಂದ್ರಭುಕ್ತನಿಗೆ ತೋರಿಸಿ, ಭಂಡಾರವನ್ನು ಹಣದಿಂದ ತುಂಬಿಸಿ ಅರಮನೆಯ ಮುಂದುಗಡೆ ಇರತಕ್ಕ ಅಂಗಣದಲ್ಲಿ ಈ ರೀತಿಯಾಗಿ ಹೇಳುತ್ತ ಕುಣಿದಾಡಿದನು. "ಹನ್ನೆರಡು ವರ್ಷಗಳಲ್ಲಿ ನಂದನ ವಂಶವನ್ನು ಬೇರಿಲ್ಲದಂತೆ ಕಿತ್ತು ನಾಶಮಾಡುವೆನೆಂದು ಪ್ರತಿಜ್ಞೆ ಮಾಡಿದ್ದೆನು. ಆ ಪ್ರತಿಜ್ಞೆ ಈಗ ಈಡೇರಿತು. ಇನ್ನು ನನಗೆ ಕಾವಿಯನ್ನು ಬಳಿದಿರುವ ಎರಡು ಬಟ್ಟೆಗಳಿವೆ. ಚಿನ್ನದ ಕಮಂಡಲು (ಜಲಪಾತ್ರೆ) ಇದೆ. ಮೂರು ಕೋಲುಗಳನ್ನು ಒಟ್ಟಿಗೆ ಕಟ್ಟಿರುವ ತ್ರಿದಂಡವಿದೆ. ಮಗಧನಾಡಿನ ಧನವನ್ನೆಲ್ಲ ತಂದು ರಾಜಭಂಡಾರವನ್ನು ಭರ್ತಿಮಾಡಿದ್ದೇನೆ. ವಿಶೇಷವಾದ ಗುಣವನ್ನು ತಿಳಿಯತಕ್ಕ ರಾಜನೂ ನನಗೆ ವಶವಾಗಿದ್ದಾನೆ. ಹರೆ (ತಂಬಟೆ)ಯನ್ನು ಬಾರಿಸು" - ಎಂದು ಹರೆಯನ್ನು ಹೊಡೆಯಿಸಿದನು. ಸಂತೋಷಗೊಂಡು ಪ್ರೀತಿಪಟ್ಟು ತನ್ನ ತ್ರಿದಂಡವನ್ನು ಎತ್ತಿಕೊಂಡು ವಿಜಯದ ಸೊಕ್ಕೇರಿದ ತನ್ನ ಪ್ರಜೆಗಳೊಂದಿಗೆ ರಮ್ಯವಾಗಿ ನರ್ತನಮಾಡಿದನು. ಆಮೇಲೆ ಶ್ರೀಪರ್ವತದಲ್ಲಿದ್ದ ತನ್ನ ಪತ್ನಿಯಾದ ಯಶೋಮತಿಯ ಬಳಿಗೆ ದೂತರನ್ನು ಕಳುಹಿಸಿ ಆಕೆಯನ್ನು ಬರಮಾಡಿದನು. ಆಕೆಯೊಂದಿಗೆ ಅನೇಕ ವಿಧದ ಸುಖಿಗಳನ್ನು ಅನುಭವಿಸುತ್ತ ಸಾಮಂತರಿಗೂ ಮಹಾಸಾಮಂತರಿಗೂ ಜೀವನೋಪಾಯದ ವ್ಯವಸ್ಥೆಯನ್ನು ಮಾಡಿದನು. ನಗರ ರಕ್ಷಕರ ವರ್ಗವನ್ನು ಸಮಾಧಾನಪಡಿಸಿ ಮಗಧದ ನಾಡನ್ನು ಆಳುತ್ತ ಪ್ರಿಯವಿಷಯದ ಬಯಸಿದ ಸುಖಿಗಳನ್ನೆಲ್ಲ ಅನುಭವಿಸುತ್ತ ಹೀಗೆಯೇ [illegible] ಕಾಲಗಳೆಯುತ್ತು. ಅನಂತರ ಚಂದ್ರಮತಿ ಮಹಾರಾಣಿ ಗರ್ಭಿಣಿಯಾದಳು. ಆಕೆ

ಪೊಬಿಲ್ಗೆ ಪೋದಂ ಮತ್ತೆ ಗೊಬ್ಬರದ ಕಿಚ್ಚು ಬಳಸಿಯುಂ ತಮ್ಮಂ ಸುದೆ ಚಾಣಾಕ್ಯ ಋಷಿಯರ್ ಮೊದಲಾಗೊಡೆಯ ರಿಸಿಯರ್ಕಳೆಲ್ಲಂ

ಗಾಹೆ ॥ ಛಿಜ್ಜಉ ಭಿಜ್ಜಉ ಜಾಉ ಬಉ ಜೋ ಇಯ ವಿಹು ಸರೀರು
ಅಪ್ಪಾ ಭಾವಹಿ ಣಿಮ್ಮಲಉ ಜೇಂ ಪಾವಹಿ ಭವತೀರು ॥

ಖಮ್ಮಾಮಿ ಸವ್ವಜೀವಾಣಂ ಸವ್ವೇ ಜೀವಾ ಖಮಂತು ಮೇ
ಮೆತ್ತೀ ಮೇ ಸವ್ವಭೂದೇಸು ವೇರಂ ಮಜ್ಝಣ ಕೇಣಚಿ ॥

ಎಂದಿಂತು ಕ್ಷಮೆಯಂ ಭಾವಿಸಿ ಚತುರ್ವಿಧಮಪ್ಪಾಹಾರಶರೀರಮುಮಂ ತೊಱೆದಿಂಗಿನೇಮರಣದಿಂ ಶುಭಪರಿಣಾಮದೊಳ್ ಕೂಡಿ, ಮಿಕ್ಕ ರತ್ನತ್ರಯಮನಾರಾಧಿಸಿ ಸನತ್ಕುಮಾರಕಲ್ಪದೊಳ್ ಸರ್ವಾರ್ಥಮೆಂಬ ವಿಮಾನದೊಳ್ ಚಾಣಾಕ್ಯ ರಿಸಿಯರ್ ಪುಟ್ಟಿದರ್ ಮತ್ತುಳಿದ ಋಷಿಯರ್ಕಳೆಲ್ಲಂ ಸೌಧರ್ಮಕಲ್ಪಂ ಮೊದಲಾಗೊಡೆಯ ಕಲ್ಪಂಗಳೊಳ್ ಪುಟ್ಟಿದರ್ ಮತ್ತೆ ಪೆಜಉಂ ಸಂನ್ಯಸನಂಗೆಯ್ದರ್ದ ಕ್ಷಪಣಕರುಂ ಚಾಣಾಕ್ಯರಿಸಿಯರಂ ಮನದೊಳ್ ಬಗೆದು ಚತುರ್ವಿಧಮಪ್ಪುಪಸರ್ಗಮುಮಂ ಪಸಿವುಂ ನೀರಟ್ಟಿ ಮೊದಲಾಗೊಡೆಯ ಇಪ್ಪತ್ತೆರಡು ಪರೀಷಹಂಗಳುಂ ವ್ಯಾಧಿಗಳೊಳಪ್ಪ ವೇದನೆಗಳುಮಂ ಸೈರಿಸಿ ಶುಭಪರಿಣಾಮದಿಂ ಮಿಕ್ಕ ದರ್ಶನ ಜ್ಞಾನ ಚಾರಿತ್ರಂಗಳನಾರಾಧಿಸಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

ಋಷಿಗಳು ಮೊದಲಾಗುಳ್ಳ ಋಷಿಗಳೆಲ್ಲರೂ ಈ ರೀತಿ ಪೇಳಿಕೊಂಡರು - ಈ ಶರೀರವು ಕತ್ತರಿಸಲ್ಪಡಲಿ, ಸೀಳಲ್ಪಡಲಿ, ಅಥವಾ ನಾಶವಾಗಲಿ ಎಲ್ಲೆ ಯೋಗಿಯೇ, ಯಾವುದರಿಂದ ಸಂಸಾರ ಸಮುದ್ರದ ಅಚೆಯ ತೀರವನ್ನು ಪಡೆಯುವೆವೋ, ಆ ನಿರ್ಮಲನಾದ ಆತ್ಮನನ್ನು ಧ್ಯಾನಮಾಡು. ನಾನು ಎಲ್ಲ ಜೀವಗಳನ್ನು ಕ್ಷಮಿಸುತ್ತೇನೆ. ಎಲ್ಲ ಜೀವಗಳೂ ನನ್ನನ್ನು ಕ್ಷಮಿಸಲಿ. ಸರ್ವಭೂತಗಳಲ್ಲಿಯೂ ನನಗೆ ಮೈತ್ರಿಯಿದೆ. ನನಗೆ ವೈರವು ಎಲ್ಲಿಯೂ ಇಲ್ಲ. ಈ ರೀತಿ ಹೇಳಿ ಕ್ಷಮೆಯನ್ನು ಯೋಚಿಸಿ, ನಾಲ್ಕುವಿಧದ ಆಹಾರದ ಶರೀರವನ್ನು ತೊರೆದು ಇಂಗಿನೀಮರಣದಿಂದ ಶುಭವಾದ ಪರಿಣಾಮದಲ್ಲಿ ಕೂಡಿ ಶ್ರೇಷ್ಠವಾದ ರತ್ನತ್ರಯವನ್ನು ಆರಾಧಿಸಿ ಸನತ್ಕುಮಾರ ಎಂಬ ಸ್ವರ್ಗದಲ್ಲಿ ಸರ್ವಾರ್ಥವೆಂಬ ಬಳು ಅಂತಸ್ತಿನ ಅರಮನೆಯಲ್ಲಿ ಚಾಣಾಕ್ಯ ಋಷಿಗಳು ಹುಟ್ಟಿದರು. ಅಮೇಲೆ ಉಳಿದ ಋಷಿಗಳೆಲ್ಲರೂ ಸೌಧರ್ಮಕಲ್ಪವೇ ಮೊದಲಾಗುಳ್ಳ ಸ್ವರ್ಗಗಳಲ್ಲಿ ಹುಟ್ಟಿದರು. ಅನಂತರ, ಸಂನ್ಯಾಸವನ್ನು ಹಿಡಿದ ಇತರ ಜೈನ ಯತಿಗಳು ಕೂಡ, ಚಾಣಾಕ್ಯ ಋಷಿಗಳನ್ನು ಮನಸ್ಸಿನಲ್ಲಿ ಭಾವಿಸಿಕೊಂಡು ನಾಲ್ಕು ವಿಧಗಳಾದ ಉಪಸರ್ಗವನ್ನೂ ಹಸಿವು ಬಾಯಾರಿಕೆ ಮೊದಲಾಗಿ ಉಳ್ಳ ಇಪ್ಪತ್ತೆರಡು ಬಗೆಯ ಪರೀಷಹಗಳನ್ನೂ ರೋಗಗಳು ಬಂದು ಉಂಟಾಗುವ ನೋವುಗಳನ್ನೂ ಸಹಿಸಿಕೊಂಡು ಶುಭಕರವಾದ ಪರಿಣಾಮದಿಂದ ಶ್ರೇಷ್ಠವಾದ ದರ್ಶನ - ಜ್ಞಾನ- ಚಾರಿತ್ರಗಳೆಂಬ ರತ್ನತ್ರಯವನ್ನು ಆರಾಧಿಸಿ, ಸ್ವರ್ಗ - ಮೋಕ್ಷ ಸುಖಗಳಿಗೆ ಹೋಗಲಿ !

ಸನ್ಮಾನದಾನಾದಿಗಳಿಂದಾತನಂ ಪೂಜಿಸಿ ಬಂದುಸಾಗರಂಗೆ ಮಂತ್ರಿ ಮಾಡಿಯರಸನಂ ಬೆಸಂಗೊಂಡೊಂಡಬಡಿಸಿಯೆಲ್ಲರುಮಂ ಕ್ಷಮೆಗೊಳಿಸಿ ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆದು ಮತಿವರರೆಂಬಾಚಾರ್ಯರ ಪಕ್ಕದೆ ತಪಂಬಟ್ಟಾಗಮಮೆಲ್ಲಮಂ ಕಲ್ತಾಚಾರ್ಯರಾಗಿ ಪಲಂಬರ್ ಶಿಷ್ಯರ್ಕಳಂ ಮಾಡಿ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಪಲಕಾಲಮುಗ್ರೋಗ್ರ ತಪಶ್ಚರಣಂಗೆಯ್ದು ಮತ್ತೆ ಪಾಟಳೀಪುತ್ರದ ಸಾರೆ ಸೋಣೆಯೆಂಬ ತೊಱೆಯ ತಡಿಯ ತುಱುಪಟ್ಟಯೊಳ್ ವಿಹಾರಿಸುತ್ತಂ ಬಂದಿರ್ದರಾ ಬರವಂ ಸುಬಂಧು ಕೇಳ್ದು ಮಹಾಪದ್ಮನ ರಾಜ್ಯಮಂ ಕೊಂಡುದುಮಂ ತನ್ನಂ ಸಂಕಲೆಯೊಳಿಟ್ಟು ಸೆಱೆಗೆಯ್ದು ಪಲಕಾಲಂ ನಮೆಯಿಸಿದ ಪಗೆಯುಮಂ ನೆನೆದು ಸಂಜೆವೊಯ್ತಾದಾಗಳ್ ಬಂದಿಸುವ ನೆವದಿಂದಂ ಪಿರಿದುಮರ್ಚನೆಯಂ ಕೊಂಡು ಪೋಗಿ ಚಾಣಾಕ್ಯಋಷಿಯರ್ ಮೊದಲಾಗೊಡೆಯ ಋಷಿಯರ್ಕಳನರ್ಚಿಸಿ ಗುರುಪರಿವಿಡಿಯಿಂದಂ ಬಂದಿಸಿ ಪಿರಿದು ಬೇಗಂ ಚಾಣಾಕ್ಯರಿಸಿಯೊಡನೆ ಗೋಷ್ಠಿಯಿರ್ದು ಪೋಪಾಗಳ್ ತನ್ನವರ್ಗ್ಗೆಂದಂ ಮಾಗಿಯ ದಿವಸಂ ರಿಸಿಯರ್ಕಳ್ ಸೀತದೊಳ್ ಸೆದೆಗುಂ ನೇದೆಗೆದುವರದಱಿಂ ಬಳಸಿಯುಂ ಪಿರಿದುಂ ಗೊಬ್ಬರಮನೊಟ್ಟಮೆಂದು ಪಕ್ಕದಿರ್ದೊಟ್ಟಿಸಿ ಬಳಸಿಯುಂ ಕಿಚ್ಚುಂ ತಗುಳ್ದಟ್ಟೇಟ್ಟು

ಸತ್ಕಾರಮಾಡಿ, ಅವನನ್ನು ಬಿಂದುಸಾಗರನಿಗೆ ಮಂತ್ರಿಯಾಗಿ ಮಾಡಿದನು. ಅಮೇಲೆ ಅರಸನನ್ನು ಕೇಳಿ ಅವನು ಒಪ್ಪುವಂತೆ ಮಾಡಿ, ಎಲ್ಲರಿಗೂ ಕ್ಷಮೆಯನ್ನಿತ್ತು ಬಾಹ್ಯ ಮತ್ತು ಅಭ್ಯಂತರ ಎಂಬ ಭೇದಗಳುಳ್ಳ ಪರಿಗ್ರಹಗಳನ್ನು ಬಿಟ್ಟು ಮತಿವರರೆಂಬ ಆಚಾರ್ಯರ ಬಳಿಯಲ್ಲಿ ತಪಸ್ಸಿಗೆ ಉಪದೇಶವನ್ನು ಪಡೆದನು. ಶಾಸ್ತ್ರಗಳೆಲ್ಲವನ್ನೂ ಕಲಿತು ಆಚಾರ್ಯರಾಗಿ ಅವರು ಹಲವು ಮಂದಿ ಶಿಷ್ಯರುಗಳನ್ನು ನಿರ್ಮಾಣಮಾಡಿದರು. ಅನಂತರ ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖಗಳೆಂಬ ಭೂಭಾಗಗಳಲ್ಲಿ ಸಂಚಾರಮಾಡುತ್ತ ಹಲವು ಕಾಲ ಅತ್ಯಂತ ಕಠಿನವಾದ ತಪಸ್ಸನ್ನು ಆಚರಿಸಿ ಅಮೇಲೆ ಪಾಟಳೀಪುತ್ರದ ಸಮೀಪ ಸೋಣೆ ಎಂಬ ನದಿಯ ದಡದಲ್ಲಿರುವ ಅಕಳ ಹಟ್ಟಿಗೆ ಸಂಚಾರ ಮಾಡಿಕೊಂಡು ಬಂದು ಅಲ್ಲಿದ್ದರು. ಆ ಬರವನ್ನು ಸುಬಂಧು ಕೇಳಿ, ಚಾಣಾಕ್ಯನು ಮಹಾಪದ್ಮನ ರಾಜ್ಯವನ್ನು ತೆಗೆದುಕೊಂಡದ್ದನ್ನೂ ತನ್ನನ್ನು ಸಂಕಲೆಯಲ್ಲಿ ಬಂಧಿಸಿ ಸೆರೆಮನೆಯಲ್ಲಿಟ್ಟು ಹಲವು ಕಾಲ ಯಾತನೆಪಡಿಸಿದ ಶತ್ರುತ್ವವನ್ನೂ ನೆನೆದು, ಸಂಜೆಯ ಸಮಯವಾದಾಗ ನಮಸ್ಕಾರ ಮಾಡುವ ನೆವದಿಂದ ಹೆಚ್ಚಿನ ಪೂಜಾದ್ರವ್ಯಗಳನ್ನು ತೆಗೆದುಕೊಂಡು ಹೋದನು. ಚಾಣಾಕ್ಯ ಋಷಿಗಳು ಮೊದಲಾಗುಳ್ಳ ಋಷಿಗಳನ್ನು ಪೂಜಿಸಿ ಗುರುಗೌರವಾನುಕ್ರಮದಿಂದ ವಂದಿಸಿ ಬಹಳ ಹೊತ್ತು ಚಾಣಾಕ್ಯ ಋಷಿಯೊಡನೆ ಕೂಟದಲ್ಲಿದ್ದು, ಹೋಗುವಾಗ ತನ್ನವರೊಡನೆ ಹೀಗೆಂದನು - "ಚಳಿಗಾಲದ ದಿವಸದಲ್ಲಿ ಋಷಿಗಳು ಶೀತದಲ್ಲಿ ಮುದುಡಿಕೊಳ್ಳುವರು. ಆಯಾಸಗೊಂಡು ಕೆಡುವರು. ಆದುದರಿಂದ ಸುತ್ತಲೂ ಹೆಚ್ಚು ಕಾಡುಬೆರಣಿಯನ್ನು ರಾಶಿಹಾಕಿರಿ", ಹೀಗೆ ಹೇಳಿ ಹತ್ತಿರದಲ್ಲಿದ್ದು ರಾಶಿ ಹಾಕಿಸಿ, ಸುತ್ತಲೂ ಬೆಂಕಿಯನ್ನು ಹೊತ್ತಿಸುವಂತೆ ನೇಮಿಸಿ ಪಟ್ಟಣಕ್ಕೆ ಹೋದನು. ಅನಂತರ ಆ ಬೆರಣಿಯ ಬೆಂಕಿ ಸುತ್ತಲೂ ಆವರಿಸಿ ತಮ್ಮನ್ನು ಸುಡಲು ತೊಡಗಿತು. ಆಗ ಚಾಣಾಕ್ಯ

ವೃಷಭಸೇನಾಚಾರ್ಯರೊಡನೆ ವಾದುಗೆಯ್ದು ನೆರವಿಯೊಳ್ ಸೋಲ್ತು ಸಗ್ಗಿಗಿ ಪೋಗಿ ನಟ್ಟನಡುವಿರುಳ್ ಬಂದು ಕಿಚ್ಚಂ ತಗುಳ್ಚಿ ಪೋದಂ ಮತ್ತಂ ವೃಷಭಸೇನಾಚಾರ್ಯರ್ ಮೊದಲಾಗೊಡೆಯ ರಿಸಿಯರ್ಕಳ್ ಕ್ಷಮೆಯಂ ಭಾವಿಸಿ ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಯಾವಜ್ಜೀವಂ ನಿವೃತ್ತಿಗೆಯ್ದು ಶುಭಪರಿಣಾಮದಿಂದಂ ಮಿಕ್ಕ ರತ್ನತ್ರಯಂಗಳಂ ಸಾಧಿಸಿ ಮುಡಿಪಿಯಲ್ಲಿ ವೃಷಭಸೇನಾಚಾರ್ಯರ್ ಪದಿನಾಲ್ಕನೆಯ ಪ್ರಾಣತವೆಂಬ ಕಲ್ಪದೊಳ್ ಪುಷ್ಪಕವೆಂಬ ವಿಮಾನದೊಳಿರ್ದತ್ತು ಸಾಗರೋಪಮಾಯುಷ್ಯಮನೊಡೆಯ ದೇವನಾಗಿ ಪುಟ್ಟಿದರ್ ಮತ್ತುಟಿದ ಋಷಿಯರ್ಕಳುಂ ತಂತಮ್ಮ ತಪೋನುಷ್ಠಾನಕ್ಕೆ ತಕ್ಕಂತು ಸೌಧರ್ಮಕಲ್ಪಂ ಮೊದಲಾಗೊಡೆಯ ಸ್ವರ್ಗಂಗಳೊಳ್ ಪುಟ್ಟಿದರ್ ಮತ್ತಂ ಪೆಱರುಂ ಸಂನ್ಯಸನಂಗೆಯ್ದಿರ್ದ ಕ್ಷಪಣಕರುಂ ವೃಷಭಸೇನಾಚಾರ್ಯರ್ ಮೊದಲಾಗೊಡೆಯ ರಿಸಿಯರ್ಕಳಂ ಮನದೆ ಬಗೆದು ಚತುರ್ವಿಧಮಪ್ಪುಪಸರ್ಗಮುಮಂ ಪಸಿವುಂ ನೀರಟ್ಟೆ ಮೊದಲಾಗೊಡೆಯ ಪರೀಷಹಂಗಳುಂ ವ್ಯಾಧಿಗಳೊಳಪ್ಪ ವೇದನೆಗಳುಮಂ ಸೈರಿಸಿ ಕ್ಷಮೆಯಂ ಭಾವಿಸಿ ಶುಭಪರಿಣಾಮದಿಂದಂ ಪರಮ ಶುದ್ಧ ಸಹಜ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗಸುಖಂಗಳನೆಯ್ದುಗೆ

ಈ ಪೇೞ್ದ ಪತ್ತೊಂಬತ್ತು ಕಥೆಗಳಂ ಶಿವಕೋಟ್ಯಾಚಾರ್ಯರ್ ಪೇೞ್ದಾರ್
ವಡ್ಡಾರಾಧನೆ ಸಂಪೂರ್ಣಂ

ಮಾಡಿ ಸಭೆಯಲ್ಲಿ ಸೋತು ನಾಚಿಕೆಪಟ್ಟನು. ಅವನು ಹೋಗಿ ನಟ್ಟನಡುವಿನ ರಾತ್ರಿಯಲ್ಲಿ ಬಂದು ಬಸದಿಗೆ ಬೆಂಕಿ ಹಚ್ಚಿ ಹೋದನು. ವೃಷಭಸೇನಾಚಾರ್ಯರು ಮೊದಲಾದ ಋಷಿಗಳು ವಿಷ್ಣುಮತ್ಸ್ಯನ ಮೇಲೆ ಕೋಪಗೊಳ್ಳದೆ ಕ್ಷಮೆಯನ್ನು ಭಾವಿಸಿಕೊಂಡು ನಾಲ್ಕು ವಿಧವಾದ ಆಹಾರಕ್ಕೂ ಶರೀರಕ್ಕೂ ಜೀವವಿರುವ ತನಕವೂ ಪರಿಹಾರ ಮಾಡಿ (ಅರ್ಥಾತ್ ಆಹಾರ ಸೇವಿಸದೆ ಮತ್ತು ಶರೀರವನ್ನು ಲಕ್ಷ್ಯಮಾಡದೆ), ಶುಭವಾದ ಪರಿಣಾಮದಿಂದ ಶ್ರೇಷ್ಠವಾದ ದರ್ಶನ - ಜ್ಞಾನ- ಚಾರಿತ್ರ ಎಂಬ ರತ್ನತ್ರಯವನ್ನು ಸಾಧಿಸಿ ಸತ್ತರು. ಅಲ್ಲಿ ವೃಷಭಸೇನಾಚಾರ್ಯರು ಹದಿನಾಲ್ಕನೆಯ ಪ್ರಾಣತವೆಂಬ ಸ್ವರ್ಗದಲ್ಲಿ ಪುಷ್ಪಕವೆಂಬ ವಿಳು ಅಂತಸ್ತಿನ ವಿರಮನೆಯಲ್ಲಿ ಇಪ್ಪತ್ತುಸಾಗರಕ್ಕೆ ಹೋಲಿಕೆಯಾಗುವ ಆಯುಷ್ಯವುಳ್ಳ ದೇವರಾಗಿ ಹುಟ್ಟಿದರು. ಆಮೇಲೆ ಉಳಿದ ಋಷಿಗಳೂ ತಮ್ಮ ತಮ್ಮ ತಪಸ್ಸಿನ ಆಚರಣೆಗೆ ತಕ್ಕ ಹಾಗೆ ಸೌಧರ್ಮಕಲ್ಪ ಮುಂತಾಗಿ ಉಳ್ಳ ಸ್ವರ್ಗಗಳಲ್ಲಿ ಹುಟ್ಟಿದರು. ಅನಂತರ, ಸಂನ್ಯಸನ ಮಾಡಿರುವ ಇತರ ಜೈನಯತಿಗಳೂ ವೃಷಭಸೇನಾಚಾರ್ಯರೇ ಮೊದಲಾಗುಳ್ಳ ಋಷಿಗಳನ್ನು ಮನಸ್ಸಿನಲ್ಲಿ ಧ್ಯಾನಿಸಿಕೊಂಡು ನಾಲ್ಕು ವಿಧಗಳಾದ ಉಪಸರ್ಗಗಳನ್ನೂ ಹಸಿವು ನೀರಡಿಕೆ ಮೊದಲಾಗಿರತಕ್ಕ ಪರೀಷಹಗಳನ್ನೂ ರೋಗಗಳಿಂದ ಉಂಟಾಗತಕ್ಕ ನೋವುಗಳನ್ನೂ ಸಹಿಸಿಕೊಂಡು ಕ್ಷಮಾಗುಣವನ್ನೇ ಭಾವಿಸಿ ಶುಭಪರಿಣಾಮದಿಂದ ಶ್ರೇಷ್ಠವೂ ನಿರ್ಮಲವೂ ಸಹಜವೂ ಆದ ದರ್ಶನ ಜ್ಞಾನ ಚಾರಿತ್ರಗಳನ್ನು ಸಾಧಿಸಿ ಸ್ವರ್ಗ ಮೋಕ್ಷ ಸುಖಗಳನ್ನು ಪಡೆಯಲಿ ! ಈಗ ಹೇಳಿದ ಹತ್ತೊಂಬತ್ತು ಕಥೆಗಳನ್ನು ಶಿವಕೋಟ್ಯಾಚಾರ್ಯರು ಹೇಳಿದರು. ವಡ್ಡಾರಾಧನೆ ಸಂಪೂರ್ಣವಾಯಿತು.

೧೯. ವೃಷಭಸೇನರೆಂಬ ರಿಸಿಯರ ಕಥೆ

ವೃಷಭಸೇನರೆಂಬ ರಿಸಿಯರ ಕಥೆಯಂ ಪೇೞ್ವೆಂ :

ಗಾಹೆ ॥ ವಸಈಏ ಪಳಿದಾಏ ವಿಟ್ಠಾಮಚ್ಛೇಣ ಉಸಹಸೇಣೋ ಏ
ಆರಾಧಣಂ ಪವಣ್ಣೋ ಸಂಘ ಪರಿಸಾ ಎ ಕುಣಾಳಹ್ಮಿ ॥

[ವಸಈಏ-ಬಸದಿ, ಪಳಿದಾಏ-ಉರಿಪೆಪಟ್ಟುದಾದೊಡೆ, ಏಟ್ಠಾಮಚ್ಛೇಣ-ವಿಷ್ಣಮತ್ಸ ನಿಂದಂ, ಉಸಹಸೇಣೋಏ-ವೃಷಭಸೇನಾಚಾರ್ಯರ್, ಆರಾಧಣಂ-ಮಿಕ್ಕ ದರ್ಶನ ಜ್ಞಾನಚಾರಿತ್ರಂಗಳಾರಾಧನೆಯಂ, ಪವಣ್ಣೋ - ಪೊರ್ದಿದೊಂ, ಸಂಘಪರಿಸಾಎ-ತಮ್ಮ ರಿಸಿಸಮುದಾಯಂ ಬೆರಸು, ಕುಣಾಳಹ್ಮಿ-ಕುಣಾಳಮೆಂಬ ಪೊಬಲೊಳ್]

ಅದೆಂತೆಂದೊಡೆ : ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ದಕ್ಷಿಣಾಪಥದೊಳ್ ಕರಹಟಮೆಂಬುದು ನಾಡಲ್ಲಿ ಕುಣಾಳವೆಂಬ ಪೊಬಲದನಾಳ್ವಂ ಧನದನೆಂಬೊನರಸನಾತನ ಮಹಾದೇವಿ ಪದ್ಮಶ್ರೀಯೆಂಬೊಳ್ ಮಂತ್ರಿ ವಿಷ್ಣಮತ್ಸ ನೆಂಬೊಂ ಪಿರಿಯ ಪಂಡಿತನಂತವರ್ಗಳಿಷ್ಟವಿಷಯ ಕಾಮ ಭೋಗಂಗಳನನುಭವಿಸುತ್ತಂ ಪಲಕಾಲಂ ಸಲೆ ಮತ್ತೊಂದು ದಿವಸಂ ವೃಷಭಸೇನರೆಂಬಾಚಾರ್ಯರ್ ಪಿರಿದು ರಿಸಿಸಮುದಾಯಂ ಬೆರಸು ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಮಾ ಪೊಬಲ್ಗೆ ಬಂದೊಂದು ಬಸದಿಯೊಳಿರ್ದರವರ ಬರವನರಸನುಂ ಪೊಬಲವರುಂ ಕೇಳ್ದು ಪಿರಿದುಂ ಪೂಜೆಯಂ ಕೊಂದು ಪೋಗಿಯರ್ಚಿಸಿ ಪೂಜಿಸಿ ಪೊಡೆವಡುವುದಂ ವಿಷ್ಣಮತ್ಸ ಂ ಕಂಡು ಸೈರಿಸಲಾಱದೆ ಮಾತ್ಸರ್ಯದಿಂದಂ ತನ್ನ ಪಾಂಡಿತ್ಯದ ಗರ್ವದಿಂದಂ

ವೃಷಭಸೇನರೆಂಬ ಋಷಿಗಳ ಕಥೆಯನ್ನು ಹೇಳುವೆನು - ಕುಣಾಳವೆಂಬ ಪಟ್ಟಣದಲ್ಲಿ ವಿಷ್ಣಮತ್ಸ್ಯನಿಂದ ಬಸದಿ ಉರಿಸಲ್ಪಟ್ಟಾಗ, ವೃಷಭಸೇನಾಚಾರ್ಯರು ತಮ್ಮ ಋಷಿ ಸಮುದಾಯದೊಡನೆ ಶ್ರೇಷ್ಠವಾದ ದರ್ಶನ ಜ್ಞಾನ ಚಾರಿತ್ರಗಳ ಆರಾಧನೆಯನ್ನು ಮಾಡಿದರು. ಅದು ಹೇಗೆಂದರೆ - ಈ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ದಕ್ಷಿಣಾಪಥದಲ್ಲಿ ಕರಹಟವೆಂಬ ನಾಡಿದೆ. ಅಲ್ಲಿ ಕುಣಾಳವೆಂಬ ಪಟ್ಟಣವಿದೆ. ಅದನ್ನು ಧನದನೆಂಬ ರಾಜನು ಆಳುತ್ತಿದ್ದನು. ಅವನ ಮಹಾರಾಣಿ ಪದ್ಮಶ್ರೀ ಎಂಬವಳು. ಮಂತ್ರಿ ವಿಷ್ಣಮತ್ಸ್ಯನೆಂಬವನು. ಅವನು ದೊಡ್ಡ ವಿದ್ವಾಂಸನಾಗಿದ್ದನು. ಅಂತು ಅವರೆಲ್ಲರೂ ತಾವು ಬಯಸಿದ ವಿಷಯದ ಕಾಮಸುಖಗಳನ್ನು ಅನುಭವಿಸುತ್ತಿದ್ದರು. ಹೀಗೆ ಕಾಲ ಕಳೆಯುತ್ತಿತ್ತು. ಆಮೇಲೆ, ಒಂದು ದಿವಸ ವೃಷಭಸೇನರೆಂಬ ಆಚಾರ್ಯರು ಋಷಿಗಳ ದೊಡ್ಡ ಸಮೂಹವನ್ನು ಕೂಡಿಕೊಂಡು ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖ ಎಂಬ ಭೂವಿಭಾಗಗಳಲ್ಲಿ ಸಂಚಾರಮಾಡುತ್ತ ಆ ಕುಣಾಳ ಪಟ್ಟಣಕ್ಕೆ ಬಂದು ಒಂದು ಬಸದಿಯಲ್ಲಿದ್ದರು. ವೃಷಭಸೇನಾಚಾರ್ಯರ ಆಗಮನವನ್ನು ರಾಜನೂ ಪಟ್ಟಣಿಗರೂ ಕೇಳಿ ಹೆಚ್ಚಿನ ಪೂಜಾವಸ್ತುಗಳನ್ನು ಕೊಂಡು ಹೋಗಿ, ಅರ್ಚನೆ ಮಾಡಿ, ಪೂಜಿಸಿ ಸಾಷ್ಟಾಂಗ ಪ್ರಣಾಮ ಮಾಡುವುದನ್ನು ವಿಷ್ಣಮತ್ಸ್ಯನು ಕಂಡು ಸಹಿಸಲಾರದೆ ಹೊಟ್ಟೆಕಿಚ್ಚಿನಿದ ಕೂಡಿದವನಾಗಿ, ತನ್ನ ಪಾಂಡಿತ್ಯದ ಗರ್ವದಿಂದ ವೃಷಭಸೇನಾಚಾರ್ಯರೊಡನೆ ವಾದ

ಇಪ್ಪತ್ತೆರಡು ಪರೀಷಹಗಳು – ಹಸಿವು, ಬಾಯಾರಿಕೆ, ಚಳಿ, ಬಿಸಿ, ಕ್ರಿಮಿ ಕೀಟಗಳ ಕಡಿತ, ಬತ್ತಲೆಯಿಂದಾದ ತೊಂದರೆ, ಅರತಿಯ ಬಾಧೆ, ಸ್ತ್ರೀಯರಿಂದ ತೊಂದರೆ, ಓಡಾಡುವಾಗ ಆಗುವ ತೊಂದರೆ, ಮಲಗುವಾಗ ಆಗುವ ಬಾಧೆ, ಕುಳಿತಿರುವಾಗ ಆಗುವ ಬಾಧೆ, ಬೈಗುಳು, ಪೆಟ್ಟು, ಭಿಕ್ಷೆ ಬೇಡುವಾಗ ಬರುವ ಕಷ್ಟನಿಷ್ಠುರ, ಭಿಕ್ಷೆ ದೊರೆಯದ ದುಃಖ, ತಪೋಮಹಿಮೆಗಳು ಕಾಣದಿರುವುದರಿಂದ ಆದ ವ್ಯಥೆ, ರೋಗ, ಕಲ್ಲುಮುಳ್ಳಿನ ಬಾಧೆ, ತನ್ನ ಪ್ರಜ್ಞೆಗಾಗಿ ಆಹಂಕಾರ ಪಡುವಿಕೆ, ಉತ್ತಮ ಜ್ಞಾನವನ್ನಪೇಕ್ಷಿಸಿ ಅಜ್ಞಾನಕ್ಕಾಗಿ ಕೊರಗುವುದು, ಸ್ನಾನ ಮಾಡದಿರುವುದರಿಂದ ಆಗುವ ಬಾಧೆ, ಜನರು ಗೌರವಿಸಲಿಲ್ಲವೆಂಬ ಕೊರಗು - ಹೀಗೆ ಇವು ಇಪ್ಪತ್ತೆರಡು ಬಗೆಯ ತೊಂದರೆಗಳು.

ಇಪ್ಪತ್ತೈದು ದೋಷಗಳು – ಎಂಟು ಮಲಗಳು, ಎಂಟು ಮದಗಳು, ಮೂರು ಮೂಢಗಳು, ಆರು ಅನಾಯತನ ಸೇವೆಗಳು.

ಈರ್ಯಾಪತ್ತಿ - ನಿರ್ಮಲವಾದ ಮಾರ್ಗದಲ್ಲಿ ಸೂಕ್ಷ್ಮಪ್ರಾಣಿಗಳಿಗೆ ಕೂಡ, ಬಾಧೆಯಾಗದಂತೆ ಅವನ್ನು ಪರಿಹರಿಸಿಕೊಂಡು ನಡೆಯುವುದು.

ಉವಸರ್ಗಗಳು – ದೇವ, ಮಾನವ, ತಿರ್ಯಕ್, ನಾರಕ - ಎಂಬೀ ನಾಲ್ಕು ಬಗೆಯವರಿಂದ ಬರುವ ತಪೋವಿಘ್ನಗಳು.

ಏಳು ಗುಣಗಳು – ಶ್ರದ್ಧೆ, ಭಕ್ತಿ, ಪ್ರೇಮ, ದಯೆ, ಉದಾತ್ತಶೀಲ, ಕ್ಷಮೆ, ಶೌಚ.

ಐವರು ದಾದಿಗಳು – ಕ್ಷೀರಧಾತ್ರಿ, ಮಂಡನಧಾತ್ರಿ, ಮಜ್ಜನಧಾತ್ರಿ, ಕಳವನ (ಕ್ರೀಡೆಯ)ಧಾತ್ರಿ, ಅಂಕಧಾತ್ರಿ - ಈ ಐದು ಬಗೆ.

ಒಂಬತ್ತು ಸತ್ಕಾರಗಳು – ಎದುರುಗೊಳ್ಳುವುದು, ಏರಲಿಕ್ಕುವುದು, ಪಾದ ಪ್ರಕ್ಷಾಳನ, ಅರ್ಚನೆ, ಭಕ್ತಿ ನಮಸ್ಕಾರ, ಮನಶ್ಶುದ್ಧಿ, ಮೃದುವಾದ ಮಾತು, ಶುದ್ಧವಾದ ಮಾತು, ಇವುಗಳಿಂದ ಕೂಡಿದ ಶುದ್ಧವಾದ ಆಹಾರವನ್ನು ಕೊಡುವುದು ಹೀಗೆ ಒಂಬತ್ತು.

ಕಲ್ಪಗಳು – (ಸ್ವರ್ಗಗಳು) ಸೌಧರ್ಮ, ಈಶಾನ, ಸನತ್ಕುಮಾರ, ಮಾಹೇಂದ್ರ, ಬ್ರಹ್ಮ ಲಾಂತವ,ಮಹಾಶುಕ್ರ, ಸಹಸ್ರಾರ, ಆನತ, ಪ್ರಾಣತ, ಆರಣ, ಅಚ್ಯುತ - ಹೀಗೆ ಹನ್ನೆರಡು ಬಗೆಯವು.

ಕರಣಗ್ರಂಥಗಳು – ಶ್ರುತ ಸ್ಕಂದವೆಂಬ ದಿಗಂಬರ ಗ್ರಂಥ ಸಮುದಾಯದಲ್ಲಿ ಎರಡನೆಯ ವರ್ಗವಾದ ಕರಣಾನುಯೋಗಕ್ಕೆ ಸೇರಿದ ಗ್ರಂಥಗಳು. ಇವು ಲೋಕಾಕಾರ, ಜ್ಯೋತಿಷ ಮುಂತಾದ ವಿಷಯಗಳನ್ನು ತಿಳಿಸುತ್ತವೆ.

ಕಷಾಯಗಳು – ಕ್ರೋಧ, ಮಾನ, ಮಾಯಾ, ಲೋಭ -ಎಂಬೀ ನಾಲ್ಕು ಬಗೆಯ ಕಲುಷತೆಗಳು.

ಗುಣಸ್ಥಾನಗಳು – ಮಿಥ್ಯೆಯಲ್ಲಿ ಮುಳುಗಿರುವವನು ಕರ್ಮಕ್ಷಯ ಮಾಡಿ, ಮೇಲಕ್ಕೇರುವ ಹದಿನಾಲ್ಕು ಮೆಟ್ಟಿಲುಗಳು.

ಗೋಚಾರನಿಯಮ – ಹಸುವು ವನದ ಚೆಲುವಿನ ಕಡೆಗೆ ಲಕ್ಷವಿಡದೆ ಆಹಾರಕ್ಕಾಗಿ ಚರಿಸುವಂತೆ ಸಂನ್ಯಾಸಿಯು ದಾತಾರನ ಕುರಿತು ಏನನ್ನೂ ಲಕ್ಷಿಸದೆ ಭಿಕ್ಷಕ್ಕೆ ಮಾತ್ರ ಲಕ್ಷವಿಡುವಿಕೆ.

ಘಾತಿಕರ್ಮ – ಜೀವನ ಅನಂತ ಚತುಷ್ಟಯದ ಸಾಧನೆಗೆ ಘಾತಿಯನ್ನು ಮಾಡುವ ನಾಲ್ಕು ಬಗೆಯ ಕರ್ಮಗಳು : ೧. ಜ್ಞಾನಾವರಣೀಯ, ೨. ದರ್ಶನಾವರಣೀಯ, ೩. ಅಂತರಾಯ, ೪. ಮೋಹನೀಯ.

ಚತುರ್ನಿಕಾಯಾಮರರು – ಭವನಪತಿ, ವ್ಯಂತರಿಕ, ಜ್ಯೋತಿಷ್ಕ, ವಿಮಾನವಾಸಿ - ಈ ನಾಲ್ಕು ಬಗೆಯ ದೇವತೆಗಳು.

ಚತುರ್ದಶ ಪೂರ್ವಗಳು – ಉತ್ಪಾದ, ಆಗ್ರಾಯಣಿ, ವೀರ್ಯಾನುವಾದ, ಆಸ್ತಿ ನಾಸ್ತಿ ಪ್ರವಾದ, ಜ್ಞಾನಪ್ರವಾದ, ಸತ್ಯಪ್ರವಾದ, ಆತ್ಮಪ್ರವಾದ, ಕರ್ಮಪ್ರವಾದ, ಪ್ರತ್ಯಾಖ್ಯಾನುವಾದ, ವಿದ್ಯಾನುವಾದ, ಕಲ್ಯಾಣವಾದ, ಪ್ರಾಣವಾದ, ಕ್ರಿಯಾ ವಿಶಾಲ ತ್ರಿಲೋಕಬಿಂದುಸಾರ - ಈ ಹದಿನಾಲ್ಕು ಆಗಮ ವಿಚಾರಗಳು.

ಅನುಬಂಧ - ೧

ಜೈನ ಪಾರಿಭಾಷಿಕ ಶಬ್ದಗಳ ಮತ್ತು ಸಂಖ್ಯಾರ್ಥಗಳ ಟಿಪ್ಪಣಿ

ಅಘಾತಿಕರ್ಮ - ಜೈನಸಿದ್ಧಾಂತದ ಪ್ರಕಾರ ಕರ್ಮಗಳು ಎಂಟು ವಿಧ. ಘಾತಿಕರ್ಮಗಳು ನಾಲ್ಕು, ಅಘಾತಿಕರ್ಮಗಳು ನಾಲ್ಕು. ಅಘಾತಿಕರ್ಮಗಳಿವು : ೧. ಆಯುಃಕರ್ಮ (ಜೀವಿಯ ಆಯುಸ್ಸನ್ನು ನಿರ್ಧರಿಸುವಂಥದು), ೨. ನಾಮಕರ್ಮ (ದೇಹ, ಎತ್ತರ, ಆಕಾರ, ಬಣ್ಣ ಮುಂತಾಗಿ ವ್ಯಕ್ತಿತ್ವವನ್ನು ಗೊತ್ತು ಮಾಡುವಂಥದು), ೩. ಗೋತ್ರಕರ್ಮ (ಕುಲ, ಜಾತಿ, ದೇಶಾದಿಗಳನ್ನು ನಿರ್ಣಯಿಸುವಂಥದು), ೪. ವೇದನೀಯ (ಜೀವನದಲ್ಲಿ ಸುಖದುಃಖಿಗಳಿಗೆ ಕಾರಣವಾದುದು.)

ಅಣುವ್ರತ - ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ - ಈ ಐದು. ಇವನ್ನು ಪಂಚಾಣುವ್ರತವೆಂದೂ ಮಹಾವ್ರತವೆಂದೂ ಹೇಳುತ್ತಾರೆ.

ಅನಂತ ಚತುಷ್ಟಯ - ೧. ಅನಂತಜ್ಞಾನ, ೨. ಅನಂತ ದರ್ಶನ, ೩. ಅನಂತ ವೀರ್ಯ, ೪. ಅನಂತ ಸುಖ - ಈ ನಾಲ್ಕು.

ಅನಾಯತನ ಸೇವೆ - ಕುದೇವ, ಕುಗುರು, ಕುಧರ್ಮ, ಕುದೇವಪೂಜಕ, ಕುಗುರುಪೂಜಕ, ಕುಧರ್ಮಪೂಜಕ - ಇವರ ಸಹವಾಸ.

ಅಭಕ್ಷಗಳು - ತಿನ್ನಬಾರದವು ; ಜೇನು, ಅತ್ತಿ, ಅರಳಿ, ಅಲ, ಹಲಸು, ಬಸರಿ ಮರ ಇವುಗಳ ಹಣ್ಣುಗಳು. ಹೀಗೆ ಅಭಕ್ಷಗಳು ಆರು ಬಗೆ.

ಅವಧಿ ಜ್ಞಾನ - ಕಾಲ, ದೇಶ ಯಾವುದಿದ್ದರೂ ತಿಳಿಯಬಲ್ಲ ಜ್ಞಾನ.

ಅವಲೋಕಿನೀ ವಿದ್ಯೆ - ಪರೋಕ್ಷದಿಂದಲೇ ಸಂಗತಿಗಳನ್ನು ತಿಳಿವ ವಿದ್ಯೆ.

ಅಷ್ಟಕರ್ಮ - ಘಾತಿಕರ್ಮ ನಾಲ್ಕು, ಅಘಾತಿಕರ್ಮ ನಾಲ್ಕು - ಹೀಗೆ ಎಂಟು.

ಅಷ್ಟಮದ - ಕುಲ, ರೂಪ, ವಯಸ್ಸು, ತೋಳು, ತಪಸ್ಸು, ಕಲೆ, ದೈವಬಲ, ರಾಜ್ಯ - ಈ ಎಂಟರಿಂದ ಉಂಟಾಗುವ ಸೊಕ್ಕು.

ಅಷ್ಟಮಲ - ಶಂಕೆ, ಆಕಾಂಕ್ಷೆ, ವಿಚಿಕಿತ್ಸೆ, ಅನ್ಯದೃಷ್ಟಿ, ಪ್ರಶಂಸೆ, ಸಂಸ್ತವ, ಸಮ್ಯಗ್‌ದೃಷ್ಟಿ, ಅತಿಚಾರ - ಈ ಎಂಟು.

ಅಷ್ಟಾಂಗ ನಿಮಿತ್ತ - ಲಕ್ಷಣ, ಅಂಗ, ಸ್ವರ, ವ್ಯಂಜನ, ಭೌಮ, ಅಂತರಿಕ್ಷ, ಸ್ವಪ್ನ, ಛಿನ್ನ - ಈ ಎಂಟು ಅಂಗಗಳುಳ್ಳ ಶಕುನಶಾಸ್ತ್ರ.

ಅಷ್ಟಾಂಗ ಭೋಗ - ಅನ್ನ, ನೀರು, ತಾಂಬೂಲ, ಪುಷ್ಪ, ಚಂದನ, ವಸ್ತ್ರ, ಶಯ್ಯೆ, ಆಲಂಕಾರ - ಈ ಎಂಟು ಬಗೆಯ ಸುಖಿಗಳು.

ಅಷ್ಟಶೋಭೆ - ಕಲಶ, ಕನ್ನಡಿ, ಬಾವುಟ, ತೋರಣ, ಧೂಪ, ದೀಪ, ಭೇರಿ, ಬೀಸಣಿಗೆ - ಎಂಬೀ ಎಂಟು ಅಲಂಕಾರಗಳು.

ಆಚಾಮ್ಲವರ್ಧನ - ಒಂದು ಬಗೆಯ ವ್ರತ.

ಆಮೋಷಧಿ ಋದ್ಧಿ - ತಪಸ್ಸಿನಲ್ಲಿ ಸಿದ್ಧಿ ಪಡೆದವರಿಗೆ ಉಂಟಾಗುವ ಮಹಿಮೆಗಳಲ್ಲಿ ಇದು ಒಂದು. ಈ ಋದ್ಧಿಯನ್ನು ಪಡೆದ ಮುನಿಯ ಪಾದಸ್ಪರ್ಶದಿಂದ ಪ್ರಚಂಡ ರೋಗಗಳು ವಾಸಿಯಾಗುವುವು.

ಆರ್ತಧ್ಯಾನ - ನಾಲ್ಕು ಬಗೆಯಲ್ಲಿ ಧ್ಯಾನಗಳಲ್ಲಿ ಒಂದು. ಇಷ್ಟಾಕಾಂಕ್ಷಿಯಾಗಿ ಕೊರಗುವುದು ಆರ್ತಧ್ಯಾನ.

ಆಸನ್ನಭವ್ಯ - ಬೇಗನೆ ಮೋಕ್ಷವನ್ನೈದಲಿರುವ ಜೀವ.

ಇಂಗಿಣೀ ಮರಣ - ಅನ್ನ, ಪಾನ, ಖಾದ್ಯ, ಲೇಹ್ಯ ಎಂಬ ನಾಲ್ಕು ವಿಧದ ಆಹಾರವನ್ನು ಬಿಟ್ಟು, ಉಪಸರ್ಗಗಳನ್ನು ಸಹಿಸಿ, ಸಾಯುವುದು.

ಚರಣ ಗ್ರಂಥಗಳು – ಜೈನ ಯತಿಗಳ ಮತ್ತು ಶ್ರಾವಕರ ಆಚಾರಗಳನ್ನು ನಿರೂಪಿಸುವ ಗ್ರಂಥಗಳು.

ತ್ರಿಷಷ್ಟಿ ಶಲಾಕಾಪುರುಷರು – ೨೪ ತೀರ್ಥಂಕರರು, ೧೨ ಚಕ್ರವರ್ತಿಗಳು, ೯ ವಾಸುದೇವರು, ೯ ಪ್ರತಿವಾಸುದೇವರು, ೯ ಬಲಭದ್ರರು - ಹೀಗೆ ೬೩ ಮಂದಿ.

ದ್ರವ್ಯಾನುಯೋಗ – ಶ್ರುತಸ್ಕಂದದಲ್ಲಿ ಮೂರನೆಯ ಭಾಗ. ಇದರಲ್ಲಿ ಸಪ್ತ ತತ್ತ್ವಗಳು, ನವಪದಾರ್ಥಗಳು, ಷಡ್ದ್ರವ್ಯಗಳು ಮುಂತಾದ ತಾತ್ತ್ವಿಕ ವಿಚಾರಗಳಿವೆ.

ದ್ವಾದಶ ತಪಸ್ಸುಗಳು – ಇವುಗಳಲ್ಲಿ ಬಾಹ್ಯತಪಗಳು ಆರು, ಆಭ್ಯಂತರ ತಪಗಳು ಆರು.

ಬಾಹ್ಯತಪಗಳಿವು : ಅನಶನ, ಅವಮೋದರ್ಯ (ಹೊಟ್ಟೆ ತುಂಬಲು ಬೇಕಾದುದಕ್ಕಿಂತ ಕಡಮೆ ತೆಗೆದುಕೊಳ್ಳುವುದು), ವೃತ್ತಿಸಂಖ್ಯಾನ (ಭಿಕ್ಷೆಗೆ ರೀತಿ ಮತ್ತು ಮಿತಿ ಹಾಕಿಕೊಳ್ಳುವುದು), ರಸತ್ಯಾಗ, ಕಾಯಕ್ಲೇಶ, ವಿವಿಕ್ತ ಶಯನಾಸನ.

ಆಭ್ಯಂತರ ತಪಸ್ಸುಗಳಿವು : ಪ್ರಾಯಶ್ಚಿತ್ತ, ವಿನಯ, ವೈಯ್ಯಾಪೃತ್ಯ (ವೃದ್ಧ - ಆಶಕ್ತ - ರೋಗಿ ಯತಿಗಳ ಸೇವೆ), ಸ್ವಾಧ್ಯಾಯ, ವ್ಯುತ್ಸರ್ಗ (ಶರೀರದ ಆಸೆಯನ್ನು ಬಿಟ್ಟ, ಸಮಚಿತ್ತತೆ), ಧ್ಯಾನ.

ದ್ವಾದಶಾಂಗಗಳು – ಆಚಾರಾಂಗ, ಸೂತ್ರಕೃತಾಂಗ, ಸ್ಥಾನಾಂಗ, ಸಮವಾಯಾಂಗ, ವ್ಯಾಖ್ಯಾಪ್ರಜ್ಞಪ್ತಿ, ಜ್ಞಾತೃಧರ್ಮಕೃತಾಂಗ, ಉಪಾಸಕಾಧ್ಯಯಾಂಗ, ಅಂತಕೃದ್ದಶಾಂಗ, ಅನುತ್ತರೋಪಪಾದಕದಶಾಂಗ, ಪ್ರಶ್ನವ್ಯಾಕರಣಾಂಗ, ವಿಪಾಕಸೂತ್ರಾಂಗ, ದೃಷ್ಟಿಪ್ರವಾದಾಂಗ - ಈ ಹನ್ನೆರಡು.

ಧ್ಯಾನಗಳು – ಇವು ನಾಲ್ಕು ವಿಧ : ೧. ಆರ್ತಧ್ಯಾನ (ಪ್ರಿಯ - ಅಪ್ರಿಯ ವಸ್ತುಗಳ ಪ್ರಾಪ್ತಿ ವಿಯೋಗಗಳಿಂದಾಗುವ ಚಿಂತೆ), ೨. ರೌದ್ರ ಧ್ಯಾನ (ಹಿಂಸೆ, ಅಸತ್ಯ, ಕಳವು ಕಾಮಭೋಗಗಳನ್ನು ಉಳಿಸಿಕೊಳ್ಳುವ ಚಿಂತೆಯಿಂದ ಕೂಡಿದ್ದು), ೩. ಧರ್ಮಧ್ಯಾನ (ಇದು ಆಜ್ಞಾವಿಚಯ, ಅಪಾಯ ವಿಚಯ, ವಿಪಾಕವಿಚಯ, ಸಂಸ್ಥಾನ ವಿಚಯ ಎಂದು ನಾಲ್ಕು ವಿಧ. ಜಿನೋಪದಿಷ್ಟವಾದ ಶಾಸ್ತ್ರಗಳ ಚಿಂತನೆ, ಕರ್ಮವನ್ನು ದೂರಮಾಡುವ ಚಿಂತನೆ, ಸ್ವರ್ಗನರಕ ಫಲಚಿಂತನೆ, ಲೋಕಾಕಾರ ಚಿಂತನೆ - ಇವೆಲ್ಲ ಧರ್ಮಧ್ಯಾನಗಳು. ೪. ಶುಕ್ಲಧ್ಯಾನ - ಇದು ಪೃಥಕ್ತ್ವ ವಿತರ್ಕವಿಚಾರ, ಏಕತ್ವ ವಿತರ್ಕ, ಸೂಕ್ಷ್ಮಕ್ರಿಯಾ ಪ್ರತಿಪಾತಿ, ವ್ಯುಪರತ ಕ್ರಿಯಾನಿವೃತ್ತಿ - ಎಂದು ನಾಲ್ಕು ಬಗೆ. ಇದು ಅತ್ಯಂತ ಶ್ರೇಷ್ಠವಾದ ಧ್ಯಾನ.

ನಂದೀಶ್ವರ – ಕಾರ್ತಿಕ, ಫಾಲ್ಗುಣ, ಆಷಾಢಗಳ ಅಂತ್ಯದ ವಾರಗಳಲ್ಲಿ ಸೌಧರ್ಮಾದಿ ಇಂದ್ರರ ಸಾನ್ನಿಧ್ಯದಲ್ಲಿ ಮಾಡುವ ಪೂಜೆ.

ನರಕಗಳು – (ಸಪ್ತನರಕಗಳು) ರತ್ನಪ್ರಭೆ, ಶರ್ಕರಾಪ್ರಭೆ, ವಾಳುಕಾಪ್ರಭೆ, ಪಂಕಪ್ರಭೆ, ಧೂಮಪ್ರಭೆ,ತಮಃಪ್ರಭೆ, ಮಹಾತಮಃಪ್ರಭೆ - ಎಂಬೀ ಏಳು.

ನವಪದಾರ್ಥಗಳು – ಜೀವ, ಅಜೀವ, ಪುಣ್ಯ, ಪಾಪ, ಆಸ್ರವ, ಸಂವರ, ನಿರ್ಜರ, ಬಂಧ, ಮೋಕ್ಷ - ಈ ಒಂಬತ್ತು.

ಪಂಚನಮಸ್ಕಾರ – ಅರ್ಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸಾಧು - ಈ ಐವರಿಗೆ ಸಲ್ಲಿಸುವ ನಮಸ್ಕಾರಗಳು.

ಪಂಚಮಹಾಪಾತಕ – ಬಾಲ, ಸ್ತ್ರೀ, ಗೋವು, ಬ್ರಾಹ್ಮಣ, ಋಷಿ - ಇವರನ್ನು ಕೊಲ್ಲುವುದು. ಇನ್ನೊಂದು ಬಗೆಯಾಗಿ ಬ್ರಹ್ಮಹತ್ಯೆ, ಸುರಾಪಾನ, ಸ್ವರ್ಣಸ್ತೇಯ, ಗುರುತಲ್ಪ ಗಮನ, ತತ್ಸಂಯೋಗಿ - ಹೀಗೆ ಐದು ಮಹಾಪಾಪಗಳು.

ಪಂಚಮಹಾಶಬ್ದ – ಶೃಂಗ (ಕೊಂಬು), ತಂಬಟೆ,ಶಂಖ, ಭೇರಿ, ಜಯಘಂಟೆ(ಜಾಗಟೆ) - ಎಂಬೀ ಐದು ವಾದ್ಯಗಳ ಶಬ್ದ.

ಪಂಚರತ್ನ – ನೀಲ, ವಜ್ರ, ಪದ್ಮರಾಗ, ಮುತ್ತು, ಹವಳ - ಈ ಐದು ಬಗೆಯ ರತ್ನಗಳು.

ಪಂಥಾತಿಚಾರನಿಯಮ – ಭಿಕ್ಷೆಯಿಂದ ಹಿಂದಿರುಗಿ ಬರುವಾಗ ದಾರಿಯಲ್ಲಿ ಆದ ಅತಿಚಾರಗಳ ಶುದ್ಧಿಗೆ ಮಾಡುವ ನಿಯಮ.

ಪಡಿಕಮಣ – ಮಾಡಿದ ದೋಷಗಳಿಗಾಗಿ ಪಶ್ಚಾತ್ತಾಪ. ಇದು ಏಳು ಬಗೆ : ೧. ದೈವಸಿಕ (ಹಗಲು ಮಾಡಿದ ದೋಷಕ್ಕೆ), ೨. ರಾತ್ರಿಕ (ರಾತ್ರಿ ಮಾಡಿದ ದೋಷಕ್ಕೆ), ೩. ಐರ್ಯಾಪಥಿಕ (ಚರಿಗೆಗೆ

ಹೋಗುವಾಗ ಆದ ದೋಷಕ್ಕೆ), ೪. ಪಾಕ್ಷಿಕ (ಹದಿನೈದು ದಿವಸಗಳಲ್ಲಿ ನಡೆದ ದೋಷಕ್ಕೆ), ೫. ಚಾತುರ್ಮಾಸಿಕ (ನಾಲ್ಕು ತಿಂಗಳಲ್ಲಿ ನಡೆದ ದೋಷಕ್ಕೆ, ೬. ಸಾಂವತ್ಸರಿಕ ೭. ಉತ್ತಮಾರ್ಥ (ಸಮಾಧಿ ಮರಣ ಸಮಯದಿಂದ ಜೀವನ ಪರ್ಯಂತ ನಡೆದ ದೋಷಕ್ಕೆ).

ಪದಿನೆಂಟು ದೋಷಗಳು - ಹಸಿವು, ಬಾಯಾರಿಕೆ, ಭಯ, ದ್ವೇಷ, ರಾಗ, ಮೋಹ, ಚಿಂತೆ, ಜರೆ, ರೋಗ, ಮರಣ, ಬೆವರು, ಖೇದ, ಮದ, ರತಿ, ಆಶ್ಚರ್ಯ, ಜನ್ಮ ನಿದ್ರಾ, ವಿಷಾದ - ಈ ಹದಿನೆಂಟು ದೋಷಗಳಿಲ್ಲದವನು ಅರ್ಹಂತನು.

ಪದಿನೆಂಟು ಧರ್ಮಶಾಸ್ತ್ರಗಳು - ಮನು, ಯಮ, ಗೌತಮ, ವಸಿಷ್ಠ, ಅತ್ರಿ, ದಕ್ಷ, ವಿಷ್ಣು, ಆಂಗಿರಸ್, ಉಶನಾ,ವಾಕ್ಪತಿ, ವ್ಯಾಸ, ಆಪಸ್ತಂಬ, ಗೌತಮ, ಕಾತ್ಯಾಯನ, ನಾರದ, ಯಾಜ್ಞವಲ್ಕ್ಯ, ಪರಾಶರ, ಸಂವರ್ತ, ಶಂಖ, ಹಾರೀತ, ಲಖಿತ - ಇವರಿಂದ ಧರ್ಮಶಾಸ್ತ್ರಗಳು ರಚಿತವಾಗಿವೆ. ಅವುಗಳಲ್ಲಿ ಹದಿನೆಂಟು.

ಪರಿಗ್ರಹಗಳು - ಇವು ಇಪ್ಪತ್ತನಾಲ್ಕು. ಅವುಗಳಲ್ಲಿ ಕ್ಷೇತ್ರ, ವಸ್ತು, ಹಿರಣ್ಯ, ಸುವರ್ಣ, ಧನ, ಧ್ಯಾನ, ದಾಸ, ದಾಸಿ, ಕುಪ್ಯ, ಭಾಂಡ - ಎಂಬೀ ಹತ್ತು **ಬಾಹ್ಯ ಪರಿಗ್ರಹಗಳು**. ಮಿಥ್ಯಾತ್ವ, ಮೋದ (ಸ್ತ್ರೀಪುರುಷನಪುಂಸಕರೊಡನೆ ಕಾಮಕ್ರೀಡೆಯ ಅಭಿಲಾಷೆ), ರಾಗ, ದ್ವೇಷ, ಹಾಸ್ಯ, ರತಿ, ಅರತಿ, ಶೋಕ, ಭಯ, ಜಿಗುಪ್ಸೆ, ಕ್ರೋಧ, ಮಾನ, ಮಾಯಾ, ಲೋಭ- ಎಂಬೀ ಹದಿನಾಲ್ಕು **ಅಂತರಂಗ ಪರಿಗ್ರಹಗಳು**. ಈ ೨೪ ಪರಿಗ್ರಹಗಳನ್ನು ತೊರೆದ ನಿರ್ಗ್ರಂಥ ಮುನಿಗಳೇ ಗುರುಗಳು.

ಭುಕ್ತಪ್ರತ್ಯಾಖ್ಯಾನ ವಿಧಿ - ಕ್ರಮವಾಗಿ ಆಹಾರ ಪಾನೀಯಗಳನ್ನು ಬಿಟ್ಟುಬಿಡುವುದು.

ಮಿಥ್ಯಾತ್ವ - ತತ್ತ್ವದಲ್ಲಿ ನಂಬಿಕೆಯಾಗಲೀ ಶ್ರದ್ಧೆಯಾಗಲೀ ಇಲ್ಲದೆ ಮೋಕ್ಷಮಾರ್ಗದಿಂದ ಪರಾಙ್ಮುಖವಾಗುವಿಕೆ.

ಮುಂಡಕೇವಲಿ - ಮುಂಡನ ಎಂದರೆ ವಶಪಡಿಸುವುದು. ಇದು ಹತ್ತು ವಿಧ : ಐದು ವಿಧದ ಸ್ಪರ್ಶನಮುಂಡ, ವಚನಮುಂಡ (ಮಾತಾಡದಿರುವುದು), ಹಸ್ತಮುಂಡ (ಕುಚೇಷ್ಟೆಯಿಂದ ಕೈಯಾಡಿಸದಿರುವುದು), ಪಾದಮುಂಡ (ಆಸನದಲ್ಲಿ ಸೇರಿಸದಿರುವುದು), ಮನೋಮುಂಡ (ಕೆಟ್ಟುದನ್ನು ಯೋಚಿಸದಿರುವುದು), ಶರೀರಮುಂಡ (ದೇಹವನ್ನು ಹತೋಟಿಯಲ್ಲಿಡುವುದು)- ಈ ಹತ್ತು ಮುಂಡಗಳನ್ನು ಆಚರಿಸಿದ ಜಿನಮುನಿ.

ಮೂರು ಮೂಢಗಳು - ದೇವತಾ ಮೂಢ (ಮಿಥ್ಯಾದೇವತೆಗಳ ಪೂಜೆ), ಲೋಕ ಮೂಢ (ಮಿಥ್ಯಾಕ್ಷೇತ್ರಗಳಲ್ಲಿ ನಂಬಿಕೆ), ಪಾಷಂಡಿಮೂಢ (ಮಿಥ್ಯಾಗುರುಗಳನ್ನು ನಂಬುವುದು).

ರತ್ನತ್ರಯ - ಮೋಕ್ಷಸಾಧನಗಳಾದ ಮೂರು ಶ್ರೇಷ್ಠ ಗುಣಗಳು - ೧. ಸಮ್ಯಗ್ದರ್ಶನ (ಜೈನ ತೀರ್ಥಂಕರರು ಉಪದೇಶಿಸಿರುವ ತತ್ತ್ವದಲ್ಲಿ ನಂಬಿಕೆ), ೨. ಸಮ್ಯಗ್‌ಜ್ಞಾನ (ನಂಬಿದುದನ್ನು ಚೆನ್ನಾಗಿ ಗ್ರಹಣ ಮಾಡಿರುವುದು), ೩. ಸಮ್ಯಕ್ ಚಾರಿತ್ರ (ನಂಬಿ ತಿಳಿದುದನ್ನು ಸರಿಯಾಗಿ ಆಚರಿಸುವುದು).

ವ್ಯಂತರ ದೇವತೆ - ಬೇರೆ ಬೇರೆ ದೇಶಗಳಲ್ಲಿರುವ ಸ್ಥಳಿಕ ದೇವತೆಗಳು. ಇವು ಎಂಟು ಬಗೆ : ಕಿನ್ನರ, ಕಿಂಪುರುಷ, ಮಹೋರಗ, ಗಂಧರ್ವ, ಯಕ್ಷ, ರಾಕ್ಷಸ, ಭೂತ, ಪಿಶಾಚ.

ಶಲ್ಯಗಳು - ಇವು ವ್ರತಕ್ಕೆ ಭಂಗ ತರುವಂಥವು - ಮಾಯಾ ಶಲ್ಯ, ಮಿಥ್ಯಾಶಲ್ಯ, ನಿದಾನಶಲ್ಯ, ಎಂದು ಮೂರುವಿಧ. ಮಾಯಾಶಲ್ಯ - ಕಪಟ ವಂಚನೆಗಳ ಆಚರಣೆ. ಮಿಥ್ಯಾಶಲ್ಯ - ತಾನು ಆಚರಿಸುವ ವ್ರತದಲ್ಲಿ ಮತ್ತು ಜಿನೋಪದಿಷ್ಟ ಧರ್ಮತತ್ತ್ವದಲ್ಲಿ ಶ್ರದ್ಧೆಯಿಲ್ಲದುದು. ನಿದಾನಶಲ್ಯ - ಮುಂದೆ ವಿಷಯ ಭೋಗಗಳನ್ನು ಅನುಭವಿಸುವ ಅಪೇಕ್ಷೆಯಿಡುವುದು. ವ್ರತಿಯಾದವನು ಈ ಮೂರು ಬಗೆಯ ಶಲ್ಯಗಳನ್ನು ಬಿಟ್ಟಿರಬೇಕು.

ಶಿಕ್ಷಾವ್ರತ - ಸಾಮಾಯಿಕ (ಪಾಪಕ್ರಿಯಾ ಪರಿತ್ಯಾಗ), ದೇಶಾವಕಾಶಿಕ, ಪ್ರೌಷಧೋಪವಾಸ, ಅತಿಥಿ ಸಂವಿಭಾಗ - ಹೀಗೆ ನಾಲ್ಕು ಬಗೆ.

ಶ್ರಾವಕ ಧರ್ಮ - ಐದು ಅಣುವ್ರತಗಳು, ಮೂರು ಗುಣವ್ರತಗಳು (ದಿಗ್‌ವ್ರತ, ದೇಶವ್ರತ, ಧಂಡವಿರತಿವ್ರತ, ನಾಲ್ಕು ಶಿಕ್ಷಾವ್ರತಗಳು - ಹೀಗೆ ಶ್ರಾವಕಧರ್ಮ ಹನ್ನೆರಡು ಬಗೆ.

ಷಡಂಗಗಳು – (ಆರು ಅಂಗಗಳು) - ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ - ಇವು ಆರೂ ವೇದದ ಅಂಗಗಳಾಗಿವೆ.

ಷಡ್ದ್ರವ್ಯಗಳು – ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲ.

ಸಪ್ತ ಋದ್ಧಿಗಳು – ಬುದ್ಧಿ, ತಪ, ವೈಕುರ್ವಣ, ಔಷಧ, ರಸ, ಬಲ, ಅಕ್ಷೀಣ - ಹೀಗೆ ಏಳು ಬಗೆ.

ಸಪ್ತವ್ಯಸನಗಳು - ಜೂಜು, ವೇಶ್ಯಾಸಕ್ತಿ, ಪರಸ್ತ್ರೀಗಮನ, ಚೌರ್ಯ, ಮಾಂಸ ಭಕ್ಷಣ, ಮದ್ಯಪಾನ, ಮೃಗಯಾ (ಬೇಟೆ) - ಈ ಏಳು.

ಸಿಂಹ ನಿಷ್ಕ್ರೀಡಿತ – ಎಂಬತ್ತು ದಿನಗಳಲ್ಲಿ ಅರುವತ್ತು ಉಪವಾಸ ಮತ್ತು ಇಪ್ಪತ್ತು ಪಾರಣೆಗಳನ್ನು ಮಾದತಕ್ಕ ವ್ರತ.

ಸಾಮಾನಿಕ ದೇವ – ಇಂದ್ರನಿಗಿರತಕ್ಕ ಆಜ್ಞೆ ಐಶ್ವರ್ಯ ಶಕ್ತಿಗಳಿಲ್ಲದೆ, ಅವನ ಹಾಗೆಯೇ ಆಯಷ್ಯ, ವೀರ್ಯ, ಪರಿವಾರ, ಭೋಗೋಪಭೋಗಗಳುಳ್ಳವನು. ಗುರು, ತಂದೆ, ಉಪಾಧ್ಯಾಯರಂತೆ ಪೂಜ್ಯನಾದ ದೇವತೆ.

ಸ್ಥವಿರ ಕಲ್ಪ – ಏಕವಿಹಾರಿಯಾಗಲು ದೈಹಿಕ ಶಕ್ತಿಯಿಲ್ಲದೆ, ಋಷಿಸಂಘದಲ್ಲಿದ್ದು ಸಂಘದ ರೀತಿಯನ್ನು ಹಾಗೂ ಋಷಿಗಳ ಪರಂಪರೆಯ ರೀತಿಯನ್ನು ತಿಳಿಸತಕ್ಕ ಸಾಧು.

ವಿಶೇಷ ಟಿಪ್ಪಣಿಗಳು

೧. ಗ್ರಾಮ, ನಗರ, ಖೇಡ .... ಇತ್ಯಾದಿ

ಗ್ರಾಮ – ನೂರಕ್ಕೆ ಕಡಿಮೆಯಾಗದೆ ಐನೂರಕ್ಕೆ ಹೆಚ್ಚಾಗದೆ ಕೃಷಿಕ ಕುಟುಂಬಗಳು ವಾಸಮಾಡುವ ಹಳ್ಳಿ.

ನಗರ– ರಾಜಧಾನಿ (ರಾಜನು ವಾಸಮಾಡುವ ದೊಡ್ಡ ಪಟ್ಟಣ)

ಖೀಡ - ಎತ್ತರವಾದ ಕೋಟೆಯುಳ್ಳ ಊರು.

ಖರ್ವಡ – ಚಿಕ್ಕಪ್ರಾಕಾರವಿರುವ ಊರು.

ಮಡಂಬ – ದೂರಸ್ಥಳ, ಸೀಮೆಯ ಕೊನೆಯಲ್ಲಿರುವ ಪುರ.

ಪತ್ತನ (ಪಟ್ಟಣ) – ಬಂಡಿಗಳಲ್ಲಾಗಲಿ, ನಾವೆಗಳಲ್ಲಾಗಲಿ, ಪ್ರಯಾಣ ಮಾಡಿ ಸೇರಬಹುದಾದ ಪುರ.

ದ್ರೋಣಾಮುಖ – ಜಲಮಾರ್ಗ, ಸ್ಥಳಮಾರ್ಗ ಎರಡೂ ಉಳ್ಳ ಪುರ.

(ಇದರ ವಿವರ ಪಂಪನ ಆದಿಪುರಾಣ ಆ. ೮-೬೩ ವಚನದಲ್ಲಿ ಬರುತ್ತದೆ)

ಪಾಳಿಧ್ವಜ – ಒಂದು ಬಗೆಯ ಧ್ವಜ ವ್ಯೂಹ. ಹಾರ, ವಸ್ತ್ರ, ನವಿಲು, ಕಮಲ, ಹಂಸ, ಮೀನು, ಸಿಂಹ, ವೃಷಭ, ಆನೆ, ಚಕ್ರ - ಈ ಲಾಂಛನಗಳುಳ್ಳ ಬಾವುಟಗಳು.

ಲೋಹಾಸನ – ಒಂದು ಬಗೆಯ ಪೀಠ. ಅದರ ಲಕ್ಷಣವನ್ನು ಹೀಗೆ ಹೇಳಿದೆ -

ಪಂಚಭಿಃ ಸಪ್ತಭಿರ್ವಾಪಿ ನವಭಿರ್ಲೋಹಜೈಃ ಪದೈಃ
ಲೋಹಪಟ್ಟೈ ಕೃತಾಧಾರೈರ್ಲೋಹ ಜಾಲಕ ಮೂರ್ಧನಿ ॥
ಛದಿಕಾ ಪಟ್ಟ ಗರ್ಭಸ್ಥಂ ಹಾರ್ಪಾಸೇನ ವಿಮಿಶ್ರಿತಂ
ಲೋಹಾಸನಮಿದಂ ಪ್ರೋಕ್ತಮುಪರಿಷ್ಟಾತ್ಸು ಕೀಲಿತಂ ॥

(ದಿ.ಎಲ್.ಎನ್. ವಡ್ಡಾರಾಧನೆ. ಪುಟ ೨೦೦)

ಅನುಬಂಧ - ೨

ಶಬ್ದಕೋಶ

ಅಂಕುರ-ಮೊಳಕೆ
ಅಂಗಡಿಯ ಲವಡಂ-ಅಂಗಡಿ ಬೀದಿಗಳಲ್ಲಿ ಅಲೆದಾಡುವವನು
ಅಗರು-ಸುಗಂಧದ್ರವ್ಯ
ಅಗುಬ್ದಿ-ತೋಡಿ, ನಾಟಿಕೊಂಡು
ಅಗ್ಗಳ-ಶ್ರೇಷ್ಠ
ಅಗ್ರಾಸನ-ಬ್ರಾಹ್ಮಣವೃತ್ತಿ
ಅಚ್ಚಿಗ-ಡುಃಖಿತ
ಅಜ-ಆಡು
ಅಡಿವೊಣರ್-ಪಾದಯುಗಳ
ಅಣ್ಮ-ಪ್ರಯತ್ನಿಸು, ಸಮರ್ಥನಾಗು
ಅಣೆ-ಪದಾತಿ ಸೈನ್ಯ
ಅದಿರ್-ಅಲುಗಾಡು
ಅರ್ದು-ಅದ್ದು, ನೀರಲ್ಲಿ ಮುಳುಗಿಸು
ಅರ್ಧಚಕ್ರಿ-ಭರತಕ್ಷೇತ್ರದ ಆರು ಖಂಡಗಳಲ್ಲಿ ಮೂರು ಖಂಡಗಳ ಅಧಿಪತಿ
ಅಧಿಗಮ-ಸಂಪಾದಿಸಿದ
ಅಧಿರೂಡ-ಹತ್ತಿರದ
ಅನವರತ-ಯಾವಾಗಲೂ
ಅನಿಬರ್-ಅಷ್ಟುಜನರು
ಅನುನಯ-ಪ್ರೀತಿ, ಸ್ನೇಹ
ಅಪಣ-ಅಂಗಡಿ, ಮಳಿಗೆ
ಅಪರಂ-ಎಣೆಯಿಲ್ಲದ
ಅಪವರ್ಗ-ಮೋಕ್ಷ
ಅಪುತ್ರಿಕೆ-ಮಕ್ಕಳಿಲ್ಲದವಳು
ಅಪ್ರತ್ಯಯ-ಅವಿಶ್ವಾಸ
ಅಭಿಮಾನ-ಗರ್ವ
ಅಮ್ಮ-ತಂದೆ, ಅಪ್ಪ
ಅಮೋಘ-ವ್ಯರ್ಥವಲ್ಲದ, ನಿಶ್ಚಿತ, ತಪ್ಪದುಡು
ಅಯ್ಮಿಲ್-ಹಿಮ
ಅರಿ-ಕತ್ತರಿಸು
ಅರಿಯವು-ಅಸಾಧ್ಯವಾದವು
ಅಱುನೀರ್-ಬತ್ತಿದ ನೀರು
ಅಲಾಭಂಮಾಡು-ಭಿಕ್ಷೆ ಇಲ್ಲದಂತೆ ಆಚರಿಸು
ಅಲೇಖ್ಯ-ಚಿತ್ರವಿದ್ಯೆ
ಅಲೋಕನವಿದ್ಯೆ-ಅದೃಶ್ಯವಾಗುವ ವಿದ್ಯೆ
ಅವಯವದಿಂ-ಶ್ರಮವಿಲ್ಲದೆ, ಸುಲಭವಾಗಿ
ಅವಸರ-ವೇಳೆ, ಸಮಯ
ಅಷ್ಟೋಪವಾಸ-ಎಂಟು ದಿನಗಳ ಉಪವಾಸ
ಅಸಿಪೇಟಕ-ಕತ್ತಿ ಗುರಾಣಿ
ಅಳಂಬೆ-ಅಣಬೆ, ನಾಯಿಕೊಡೆ
ಅಳಿಕಮನಂ-ಕಪಟ ಮನದವನು
ಅಳಿಜು-ಕೆಸರು
ಅಳಿಪು-ಡುರಾಶೆಪಡು
ಅಳೆ-ಮಜ್ಜಿಗೆ
ಅಟ್ಟೂಡು - ಹಾಳುಮಾಡು, ಪೂರ್ಣವಾಗಿ ತುಂಬಿಕೊಳ್ಳು
ಅಟ್ಟೆ-ಪ್ರೀತಿ
ಅಟ್ಟು-ಅಳು
ಆಂದೆ-ಗೂಗೆ
ಆಖಿಂಡಲ-ಇಂದ್ರ
ಆಟಿಸು-ಬಯಸು
ಆಡು-ನರ್ತಿಸು
ಆತ್ಮ-ಮನಸ್ಸು
ಆದಮಾನುಂ-ವಿಶೇಷವಾಗಿ
ಆದೇಶಂಗೆಯ್-ಭವಿಷ್ಯವನ್ನು ಹೇಳು
ಆಪ್ಯಾಯನ-ಹಿತ
ಆರಂಭ-ವ್ಯವಸಾಯ
ಆರವೆ-ತೋಟ, ಉದ್ಯಾನ
ಆರಾಧನೆ-ಸಾಧನೆ
ಆರೋಗಿಸು-ಊಟಮಾಡು
ಆಱಡಿಗೊಳ್-ಹಿಂಸೆಮಾಡು, ತೊಂದರೆ ಪಡಿಸು
ಆಱೆಸು-ಶಮನಮಾಡು
ಆಸ್ಫೋಟಕ-ಬಾವು, ಒಡೆಯುವಿಕೆ
ಇಂಬು-ವಾಸಿ, ಲೇಸು
ಇಟ್ಟಿ-ಈಟಿ
ಇನಿಸು-ಇಷ್ಟು, ಸ್ವಲ್ಪ
ಇನಿಯ-ಸವಿಯಾದ, ಪ್ರಿಯ
ಇನ್ನರ್-ಇಂಥವರು
ಇಳಿಸು-ಹೀನಯಿಸು
ಈದೃಗ್ವಿಧ-ಈ ರೀತಿಯ
ಈಡಾಡು-ಬಿಸಾಡು
ಉಕ್ಕೆವ (ಉರ್ಕೆವ)-ಕಪಟ

ಉಗುರಿಸು-ಉಗುರಿನಿಂದ ಕೆರೆ
ಉಡಿ-ಮುರಿದುಬೀಳು
ಉಣ್ಣಪಡಿಸು-ಉಣ್ಣದೆ ಬೀಳಿಸು, ಉಪವಾಸ ಬೀಳಿಸು
ಉತ್ತವಳ-ಉತ್ಕಂಠ ; ಕುತೂಹಲ
ಉದ್ದಂತ-ಉಬ್ಬು ಹಲ್ಲುಳ್ಳವ
ಉನ್ಮಾರ್ಗ-ದುಷ್ಪಮಾರ್ಗ
ಉಪಶಮ-ಶಾಂತಿ, ಸಮತೆ
ಉಪಶ್ಲೋಕಿಸು-ಸ್ತುತಿಸು
ಉಪಾಸಕ-ಜೈನಗೃಹಸ್ಥ
ಉಬ್ಬಿಗ-ಉದ್ವೇಗ, ದುಃಖ
ಉರ-ಎದೆ
ಉಜಿದೆ-ಲಕ್ಷ್ಯಮಾಡದೆ, ಹೊಂದಿಕೊಳ್ಳದೆ
ಉರ್ಬು-ಜಾರು,ಬಗಿ, ಸೀಳು, ಹಿರಿ
ಊಡು-ಊಟಕೊಡು, ಬಳಿ
ಎಚ್ಚೆ-ಹಚ್ಚೆ, ಬಳಿದು
ಎಡೆ-ಸ್ಥಳ, ನಡುವೆ
ಎತ್ತಾನುಂ-ಎಲ್ಲಾದರೂ
ಎರ್ಮೆ-ಎಮ್ಮೆ
ಎಯ್ದು-ಪಡೆದುಕೊಳ್ಳು, ಸೇರು
ಎರಲೆ-ಜಿಂಕೆ
ಎಜಿತನಿಗ-ಪ್ರಭುತ್ವವುಳ್ಳವ
ಎಱೆ-ಹೊಯ್ಯು ; ಹಾಕು
ಎಱೆಯ-ಒಡೆಯ
ಎಸಡಿ-ಏಡಿ
ಏಳಿದು-ತಿರಸ್ಕಾರ
ಎಬಿಲು-ನೇತುಬೀಳು
ಎಟ್ಟಿನ್ನಿಂ-ಬನ್ನಿರಿ
ಏಟ್ಟು-ಓಡಿಸು
ಏಕವಿಹಾರಿ-ಒಂಟಿಯಾಗಿ ಸಂಚರಿಸುವವ, ಪರಿವ್ರಾಜಕ
ಏಕಸಜೆ-ಒಂದು ಬಂಡೆ
ಏರಣಿಗ-ಆಕ್ಕಸಾಲಿಗ
ಏರಿಸು (ಏಜೆಸು) - ಹತ್ತಿಸು, ಕೈಗೊಳಿಸು, ಧರಿಸು
ಏಜು-ಪೆಟ್ಟು, ಗಾಯ
ಒಂತಿ-ಸಣ್ಣಕಲ್ಲು
ಒಂದು-ಸೇರು
ಒಟ್ಟು-ರಾಶಿಮಾಡು
ಒಟ್ಟೆ-ಒಂಟೆ
ಒಡೆಯ-ಉಳ್ಳ
ಒಡ್ಡಣ-ಸೈನ್ಯ
ಒದಜು-ಕೂಗು
ಒಯ್ಯನೆ-ಮೆಲ್ಲನೆ
ಒರ್ಮೊದಲ್-ಏಕಕಾಲದಲ್ಲಿ
ಒಲ್ಲಣಿಗೆ-ಒದ್ದೆಬಟ್ಟೆ ; ಆರ್ದ್ರಪಟ್ಟಿಕಾ
ಒಸಗೆ-ಸಂತೋಷ ; ಮೆಚ್ಚು
ಒಸೆ-ಸಂತೋಷಪಡು
ಒಳನ್-ಇರುವನು
ಓಗರ-ಅನ್ನ
ಓಜ-ಉಪಾಧ್ಯಾಯ
ಓರಂತಪ್ಪ-ಸಮಾನವಾಗಿರುವ
ಓಲಗ-ಆಸ್ಥಾನ
ಓಲಗಿಸು-ಸೇವೆಮಾಡು
ಓವರಿ-ಕೋಣೆ
ಓಳಿ-ಸಾಲು
ಕಂಚುಕ-ರವಕೆ
ಕಂತಿ-ಜೈನಸಂನ್ಯಾಸಿನಿ
ಕಚ್ಚುಟ-ಕೌಪೀನ
ಕಟಕ-ಕಡಗ, ಸೈನ್ಯ
ಕಟಿವ-ಸೊಂಟ
ಕಟ್ಟಿಜುಂಪೆ-ಕಟ್ಟಿರುವೆ
ಕಡಂಗು-ಉತ್ಸಾಹಿಸು
ಕಡವರ-ಚಿನ್ನ, ಐಶ್ವರ್ಯ
ಕಡಿದು-ತೀವ್ರವಾದ
ಕತಿಪಯ-ಕೆಲವು
ಕನತ್ಕನಕ-ಹೊಳೆಯುವ ಚಿನ್ನ
ಕಪ್ಪಡ-ಹರಕು ಬಟ್ಟೆ
ಕಮ್ಮಿತ್ತು-ಸುವಾಸನೆಯುಳ್ಳ
ಕರಜ-ಉಗುರು
ಕರಂ-ವಿಶೇಷವಾಗಿ
ಕರಗ-ಗಿಂಡಿ, ಬಿಂದಿಗೆ
ಕರಭ-ಒಂಟೆ
ಕಱಮೆಯಾಗಿ-ಬಲಿತು ; ಪಕ್ವವಾಗಿ
ಕರಿಣಿ-ಹೆಣ್ಣಾನೆ
ಕರ್ಕೇತನ-ಒಂದು ಬಗೆಯ ಸ್ಫಟಿಕಮಣಿ
ಕರ್ಚು-ತೊಳೆ
ಕರ್ದಿಂಗಳ್-ಅಮಾವಾಸ್ಯೆ
ಕಲಿಲ-ಪಾಪ, ಕಲ್ಮಷ
ಕಲ್ಪ-ಸ್ವರ್ಗ
ಕಲ್ಪಿಸು-ಕಲಿಸು, ಹೇಳಿಕೊಡು
ಕವರ್-ಸುಲಿಗೆಮಾಡು

ಕಷ್ಪತಿಕೆ-ದುಃಖಿಕರವಾದುದು
ಕಸವರ-ಚಿನ್ನದ ನಾಣ್ಯ
ಕಳೆ-ತೆಗೆ, ಬಿಸಾಡು
ಕಱಮೆಯ ಕೂಟು-ಶಾಲ್ಯನ್ನ
ಕಱೆ-ಗಂಜಿ ; ಸಾಯು
ಕಾದಲ-ಪ್ರಿಯ
ಕಾದಲಿಸು-ಪ್ರೀತಿಸು
ಕಾಪು-ಕಾವಲು ; ರಕ್ಷಣೆ
ಕಾಯೋತ್ಸರ್ಗ-ದೇಹಾಭಿಮಾನ ತ್ಯಾಗ
ಕಾರಂಡ-ನೀರುಕೋಳಿ
ಕಾಲಂಗೆಯ್-ಸಾಯು
ಕಾಷ್ಠಕರ್ಮ-ಮರಗೆಲಸ
ಕಾಸೆ-ಕಚ್ಚೆ, ಚಡ್ಡಿ
ಕಿತ್ತಯ್ಯ-ಚಿಕ್ಕಸ್ವಾಮಿ, ಬ್ರಹ್ಮಚಾರಿ
ಕಿನಿಸು-ಕೆರಳು
ಕೀಲ್-ಮೊಳೆ
ಕೀಱು-ಕೂಗು, ಕಿರಿಚು
ಕೀಟು-ಕಡಿವಾಣ
ಕುಂಚ-ನೆವಿಲುಗರಿಯ ಕುಚ್ಚು
ಕುಂಡ-ಹಾದರಕ್ಕೆ ಹುಟ್ಟಿದವ
ಕುತ್ತ-ರೋಗ
ಕುತ್ಸಿತ-ನೀಚ
ಕುಮತಿ-ಕೆಟ್ಟಬುದ್ಧಿ
ಕುಮ್ಮರಿ-ತಾತ್ಕಾಲಿಕ ಬೇಸಾಯಕ್ಕಾಗಿ ಕಾಡನ್ನು
ಕಡಿದು ಸುಟ್ಟು ಬಿಡಿಸಿದ ನೆಲ
ಕುಱುವಡಿ-ಚಿಕ್ಕ ಮಡಿ ಬಟ್ಟೆ
ಕುರ್ಕು-ಒಂದು ಬಗೆಯ ನೀರು ಹಕ್ಕಿ
ಕುವಳಯ-ಕನ್ನೈದಿಲೆ
ಕುಶಲಿಕೆ-ನೈಪುಣ್ಯ
ಕೂಪ-ಬಾವಿ
ಕೂರಿತು-ಹರಿತವಾದ
ಕೂರ್ಮೆ-ಪ್ರೀತಿ
ಕೂಸು-ಮಗು, ಮಗಳು, ವಿವಾಹಕನ್ಯೆ
ಕೃತ್ನ-ಪೂರ್ಣವಾಗಿ
ಕೆಂದು-ಮಲಗು
ಕೆತ್ತು-ಅಲುಗು, ನೆಡುಗು
ಕೆಮ್ಮಗೆ, ಕೆಮ್ಮನೆ-ಸುಮ್ಮನೆ
ಕೆಯ್-ಹೊಲ, ಬತ್ತದ ಗದ್ದೆ
ಕೆಯ್ಮಿಗು-ಮಿತಿಮೀರು
ಕೆರಕು-ತುರಿ, ಚರ್ಮರೋಗ
ಕೆರ್ಪು-ಎಕ್ಕಡ
ಕೆಳದಿ-ಗೆಳತಿ
ಕೇರ್-ಗೋಡೆ
ಕೈಗೆಯ್-ಸಿಂಗರಿಸು
ಕೊಂಕು-ವಕ್ರತೆ
ಕೊತಂ-ಒನೆಗೆ, ಬರ್ಚಿ
ಕೊರಸು-ಒಂದು ಬಗೆಯ ಹಕ್ಕಿ
ಕೊಳ್ಗುಳ-ಯುದ್ಧ, ಯುದ್ಧಭೂಮಿ
ಕೋಡು-ಶೀತವಾಗು, ಕೊಂಬೆ
ಕೋಣ್-ಮೂಲೆ
ಕೋರಕಿತ-ಟಿಸಿಲೊಡೆದ
ಕೋವಣ-ಕೌಪೀನ
ಕೋಱಿಳ್-ಕೊಂಬುಗಳು
ಕೋಳ್ಪಡು-ಸುಲಿಗೆಗೆ ಒಳಗಾಗು
ಕ್ರಕಚ-ಗರಗಸ
ಕ್ರಮುಕ-ಅಡಕೆ
ಕ್ಷಪಣಕ-ಜೈನಸಂನ್ಯಾಸಿ
ಖನನ-ತೋಡುವುದು
ಖಿಳಾಂತಕ-ದುಷ್ಟನಾದ ಯಮ
ಖಾಸ-ಕೆಮ್ಮು
ಗಂಡ-ಗಂಡಮಾಲೆ
ಗಂಡಗುಣ-ಪೌರುಷ
ಗಂಧಹಸ್ತಿ-ಸೊಕ್ಕಿದ ಆನೆ
ಗಳಂತಿಗೆ-ನೀರು ತುಂಬುವ ಕಳಶ ; ಹೂಜಿ
ಗಾಡಿ-ಸೌಂದರ್ಯ
ಗಾಮುಂಡ-ಗೌಡ
ಗಾವುಂಡಿ-ಗೌಡಿ
ಗಾಳಿಗೊಳ್-ಗಾಳಿಯ ಮೂಲಕ ವಾಸನೆ ತಿಳಿ
ಗಿಣ್ಣು-ಗಿಣ್ಣಿನ ಹಾಲು ; ಹಸು ಈದ
ಹೊಸದರಲ್ಲಿ ಕೊಡುವ ಹಾಲು
ಗುಂಡಿಗೆ-ಕಮಂಡಲ
ಗುಂಡಿತು-ಆಳವಾದ
ಗುಜ್ಜಿ-ಕುಳ್ಳಿ
ಗುಡ್ಡ-ಶಿಷ್ಯ
ಗೃಧ್ರ-ಹದ್ದು
ಗೆಂಟಱ್-ದೂರ
ಗೊಟ್ಟಿ-ಗೋಷ್ಠಿ ; ಜೊತೆ
ಗೊಡ್ಡ-ಚೇಷ್ಟೆ
ಗೋಮಂಡಳ-ಹಸುಗಳ ಮಂದೆ
ಗೋಶೀರ್ಷ-ಒಂದು ಬಗೆಯ ಶ್ರೀಗಂಧ
ಗೋಸಣೆ-ಡಂಗುರ(ಘೋಷಣೆ)
ಗ್ರೈವೇಯಕ-ಕೊರಳ ಮಾಲೆ ; ಆನೆಯ ಕೊರಳ

ಸರಪಳಿ
ಘನರವ-ಗುಡುಗಿನ ಶಬ್ದ
ಘಟಿಕಾ-ಗುಳಿಗೆ
ಘೃತ-ತುಪ್ಪ
ಚದುರಸಿಗೆ-ನಾಲ್ಕು ಮೂಲೆಯುಳ್ಳ ವಸ್ತ್ರ (ಚತುರಶ್ರಕ)
ಚರಪುರುಷ-ದೂತ
ಚರಮಪಾಳಿ-ಕೊನೆಯ ಕರ್ಮಬಂಧ
ಚರಿಗೆ-ಭಿಕ್ಷೆ
ಚೌಕಿ-ಅಂಗಳ
ಚಾತುರ್ದಂತಬಳ-ಚತುರಂಗಸೇನೆ
ಚಾರು-ಮನೋಹರ
ಚಿಕ್ಕುಟ-ಚಿಗಟ, ಸೊಳ್ಳೆ
ಚೋಳಂಗಿ-ರವಿಕೆ ; ರವಿಕೆ ಶಾಸ್ತ್ರ
ಛದ-ಹೊದಿಕೆ
ಛರ್ದಿ-ವಾಂತಿ ; ಭೇದಿ
ಛಿದ್ರ-ರಂಧ್ರ
ಛಿದ್ರಿಸು-ವಂಚಿಸು
ಛೇದನ-ಕತ್ತರಿಸುವಿಕೆ
ಜಂಬೀರ-ನಿಂಬೆ
ಜಡಿ-ಗದರಿಸು
ಜಯನಶಾಲೆ-ಆಯುಧಾಗಾರ
ಜಾತಿ-ಜನ್ಮ
ಜಾವ-ಯಾಮ ; ೭ ೧/೨ ಗಳಿಗೆ ಕಾಲ
ಜೀವವಿದ್ಧ-ಜೀವಂತ ಶಿಲ್ಪಪ್ರತಿಮೆ
ಜೇರ್ಕೊಳವಿ-ಪಿಚಕಾರಿ
ಜೂದು-ಜೂಜು
ಜೃಂಭನಿ-ಪ್ರತ್ಯಕ್ಷವಾಗುವುದು ಮತ್ತು ಮಾಯವಾಗುವುದು
ಜೋಗು-ಯೋಗ
ಝಣಂಬ-ಮೇಲುಹೊದಿಕೆ
ಝಲ್ಲರಿ-ಒಂದು ವಾದ್ಯ
ಡಂಬಿಸು-ಮೋಸಮಾಡು
ಡಿಂಡೀರ-ನೊರೆ
ತಗುಳ್-ಆರಂಭಿಸು ; ಒತ್ತಾಯಪಡಿಸು ; ಅನುಸರಿಸು; ಸೇರಿಸು
ತಡಿ-ದಡ
ತಣಿಪು-ತೃಪ್ತಿಪಡಿಸು
ತನ್ನನಿಕ್ಕು-ತನ್ನನ್ನು ಬೀಳಿಸು ; ವಂದಿಸು
ತಮಾಳ-ಹೊಂಗೆಮರ
ತಮಿರ್ವ್ವರ್-ತಾವಿಬ್ಬರೂ
ತಱಿಸಲ್-ನಿಶ್ಚಯಿಸು
ತವಸು-ನಾಶಮಾಡು
ತವು-ಕ್ಷಯವಾಗು ; ನಾಶವಾಗು
ತವನಿಧಿ-ಅಕ್ಷಯವಾದ ನಿಧಿ
ತಸ್ಕರ-ಚೋರ
ತಳಾಜಿ-ನಗರದ ರಕ್ಷಕ ; ಕೊತವಾಲ
ತಳಿ-ಚಿಮುಕಿಸು
ತಳಿಗೆ-ತಟ್ಟೆ
ತಱಿಕ್ಕಿಸು-ಅಪ್ಪು
ತಾಂಗು-ಆಧಾರವಾಗು ; ತಡೆ
ತಾಳೋದ್ಘಾಟಿನಿ ವಿದ್ಯಾ-ಬೀಗ ತೆಗೆಯಲು ಉಪಯೋಗಿಸುವ ಮಂತ್ರವಿದ್ಯೆ
ತಿಂಬಡಂ-ತಿನ್ನುವ ಪದಾರ್ಥ
ತಿರಿ-ತೊಳಲು
ತಿರುಡು-ಕದಿ
ತಿರುವಾಯು-ಹೆದೆಯ ಬಾಯಿ
ತಿಳಕ-ಒಂದು ಬಗೆಯ ಹೂವಿನ ಮರ
ತೀವು-ತುಂಬು
ತುಂಗ-ಎತ್ತರ
ತುಡುಗೆ-ಆಭರಣ
ತುಯ್ಯಲ್-ಪಾಯಸ
ತುರಗಾಶ್ವ-ವೇಗವಾಗಿ ಓಡುವ ಕುದುರೆ
ತುರಿಪ-ತ್ವರೆ
ತುಜುಪಟ್ಟಿ-ದನಗಳ ಹಟ್ಟಿ
ತುಟಿಲ್-ನಮಸ್ಕಾರ
ತೂಂಕಡು-ನಿದ್ದೆ
ತೂಂತು-ತೂಬು ; ರಂಧ್ರ
ತೂರ್ಯಾಂಗ-ವಾದ್ಯಗಳನ್ನು ಕೊಡುವ ಕಲ್ಪವೃಕ್ಷ
ತೆಕ್ಕನೆ ತೀವಿ-ಭರ್ತಿಯಾಗಿ ತುಂಬಿ
ತೆಗಲೆ-ಎದೆ
ತೇನತೇನ-ಮೇಲೆ ಮೇಲೆ
ತೊಟ್ಟನೆ-ಬೇಗನೆ
ತೊಟ್ಟು-ಪ್ರಾರಂಭವಾಗಿ, ಮೊದಲಾಗಿ
ತೊಡಂಗು-ತೊಡಗು
ತೊವಲ್-ತೊಗಲು ; ಚಿಗುರು
ತೋಟಿಲ್-ಸುತ್ತಾಡು
ತೊಟ್ಟಿ- ಸೇವಕ ; ಸೇವಕಿ
ತೋರ-ದಪ್ಪ
ತ್ರಸ-ಚಲನವಿರುವ
ತ್ರಸ್ತಾಭಿಭೂತ-ಭಯವಶ
ತ್ರಿಕಾಲಪ್ರಜ್ಞಪ್ತಿ-ಲೋಕಾಕಾರಾದಿಗಳನ್ನು

ನಿರೂಪಿಸುವ ಶಾಸ್ತ್ರಗ್ರಂಥ
ದಂಶ-ಸೊಳ್ಳೆ
ದಾಯ-ಬಹುಮಾನ ; ಸಲುಗೆ ; ಅವಕಾಶ
ದಾಯಿಗಂ-ದಾಯಾದಿ
ದಾರ-ಹೆಂಡತಿ
ದಾಷ್ಟಿಕ-ಕಬ್ಬಲ್ಬಟ್ಟವ
ದೀಪನೀಯ-ಸುಡುವ
ದುರ್ಭಗತ್ವ-ಹೀನಭಾಗ್ಯ
ದುರ್ಧರ-ತಾಳಲಾಗದ
ದುಷ್ಕೃತಂ - ಕೇಡಿಗ
ದೇಸಿಗ-ದಿಕ್ಕಿಲ್ಲದವನು; ನಿರ್ಗತಿಕ
ದೇಹಾರ-ದೇವರ ಕೋಣೆ
ದೋರ್ದಂಡ-ಭುಜಾದಂಡ
ದ್ರಮ್ಮ-ಒಂದು ಬಗೆಯ ನಾಣ್ಯ
ದ್ರವ್ಯ ತಪ-ಕಪಟ ತಪಸ್ಸು
ದ್ರುಮಷಂಡ-ಮರಗಳ ಸಮೂಹ
ಧನದ-ಕುಬೇರ
ಧೃತಿ-ಧೈರ್ಯ ; ಸ್ಥಿರತೆ
ನಡಪಾದು-ಅಡ್ಡಾಡು
ನಡಪು-ಸಾಕು
ನನ್ನಿ-ಸತ್ಯ
ನವಿರು-ಕೂದಲು
ನಾಗ-ಆನೆ; ಹಾವು
ನಾಗ ಠಾಣ-ನಾಗರ ಸ್ಥಾನ
ನಾಗವಲ್ಲಿ-ವೀಳೆಯದೆಲೆ
ನಾಣಲಿ-ಲಜ್ಜೆಯಿಲ್ಲದ
ನಾರಕ-ನರಕಜೀವಿ
ನಾಳಿಬಿರ್ದು-ಉದ್ದನೆಯ ಹಳ್ಳವಾಗಿ
ನಿಗ್ರಹ-ದಂಡನೆ, ಶಿಕ್ಷೆ
ನಿಚ್ಚ-ನಿತ್ಯ
ನಿಟ್ಟೆಲ್ದು-ಉದ್ದವಾದ ಮೂಳೆ
ನಿದಾನ-ಸಂಕಲ್ಪ, ಪ್ರತಿಜ್ಞೆ
ನಿಪಾತಿಸು-ಕೊಲ್ಲು
ನಿಮಿರ್-ನೆಟ್ಟಗಾಗು
ನಿಯೋಗಿ-ಅಧಿಕಾರಿ
ನಿರುತ-ದಿಟ, ನಿಜ
ನಿಱೆಸು-ಊಟಕ್ಕೆ ನಿಲ್ಲಿಸು
ನಿರ್ಗ್ರಂಥಯತಿ-ದಿಗಂಬರ ಯತಿ
ನಿರ್ವಾಣ, ನಿರ್ವೃತಿ-ಮೋಕ್ಷ
ನಿರ್ವೇಗ-ವಿರಕ್ತಿ
ನಿಶ್ಯಲ್ಯ-ಪಾಪಾಚರಣೆಯಿಲ್ಲದ
ನಿಶ್ರಾವ-ಅನ್ನದ ಗಂಜಿಯ ಕೆನೆ
ನಿಷಣ್ಣ-ಕುಳಿತ
ನಿಸಿಧ್ಧಿ, ನಿಸಿದಿಗೆ-ಸಮಾಧಿ
ನಿಃಶ್ರೇಯಸ-ಮೋಕ್ಷ
ನೀಡಱೆಂ-ದೀರ್ಘಕಾಲದಿಂದ
ನೀಡುಂ-ಬಹಳ
ನೀರಟ್ಟಿ-ಬಾಯಾರಿಕೆ
ನೀರಿಱೆ-ಸ್ನಾನಮಾಡು
ನೀರೂಡು-ನೀರು ಕುಡಿಸು
ನೆಗಪು-ಮೇಲೆತ್ತು
ನೆಗಟ್ಚು-ಮೊಸಳೆ
ನೆಗಟ್ಟಿ-ಮಾಡಿದುದು, ಕೀರ್ತಿ
ನೆರಂ-ಸಹಾಯ
ನೆರಪು-ಕೂಡಿಹಾಕು
ನೆರವಿ-ಸಭೆ, ಸಮೂಹ
ನೆಱನೆಡೆ-ಮರ್ಮಸ್ಥಾನ
ನೆಱಪು-ಪೂರೈಸು
ನೆಱೆ-ತುಂಬು, ಸಮರ್ಥನಾಗು
ನೆಱೆಯೆ-ಪೂರ್ಣವಾಗಿ
ನೇತ್ರಪಟೆ-ನೇತ್ರವೆಂಬ ರೇಷ್ಮೆವಸ್ತ್ರ
ನೇಸಱು-ಸೂರ್ಯ
ನೈಮಿತ್ತಿಕ-ಜೋಯಿಸ
ನ್ಯಾಯವಿಸ್ತರ-ತರ್ಕಶಾಸ್ತ್ರ
ಪಂಗು-ಹೆಳವ
ಪಂದರ-ಚಪ್ಪರ
ಪಂದೆ-ಹೇಡಿ
ಪಂದೊವಲ್-ಹಸಿತೊಗಲು
ಪಗರಣಿಗ-ಪಗರಣ ಎಂಬ ಆಟವಾಡುವವನು
ಪಚ್ಚುಗೊಡು-ಪಾಲು ಮಾಡಿಕೊಡು
ಪಟಹ-ತಮಟೆವಾದ್ಯ
ಪಟ್ಟವರ್ಧನ-ಪಟ್ಟದಾನೆ
ಪಡಿಯಱ-ಪ್ರತೀಹಾರಿ, ದ್ವಾರಪಾಲಕ
ಪಣ್ಣು-ಮಾಡು
ಪದಿರ್-ಒಗಟೆ, ಗೂಢಾರ್ಥವುಳ್ಳ ಮಾತು
ಪನಸ-ಹಲಸು
ಪಯನ್-ಹಸು
ಪರಚಕ್ರ-ಶತ್ರುಮಂಡಲ
ಪರದ-ವ್ಯಾಪಾರಿ
ಪರದಿ-ವರ್ತಕನ ಹೆಂಡತಿ
ಪರದು-ವ್ಯಾಪಾರ
ಪರವಶತೆ-ಮೂರ್ಛೆ, ಮೈಮರೆಯುವಿಕೆ

ಪರಿಗ್ರಹ-ಸ್ವೀಕಾರ
ಪರಿನಿರ್ವಾಣ-ಮುಕ್ತಿ
ಪರಿಭವ-ತಿರಸ್ಕಾರ, ಅವಮಾನ
ಪರಿಯಣ-ತಟ್ಟೆ, ಹರಿವಾಣ
ಪರಿವಡಿಗೆ-ಅನುಕ್ರಮ
ಪರಿವೇಷ್ಟಿತ-ಬಳಸಿದ
ಪರಿವ್ರಾಜಕ-ಸಂನ್ಯಾಸಿ
ಪರಿಸ್ಫುಟ-ಅತಿಸ್ಪಷ್ಟ
ಪಜೆ-ಕತ್ತರಿಸಿಹೋಗು
ಪರೆ-ಹರಡು
ಪಱಿವೊಚ್ಚು-ಸಂಜೆ
ಪಱಿ-ತಂಬಟೆ, ಹರೆ ಎಂಬ ಚರ್ಮವಾದ್ಯ
ಪರ್ಚಿಗೊಡು-ಹಂಚಿಕೊಡು
ಪರ್ವ-ಹಬ್ಬ
ಪಲಾಲ-ಜೊಳ್ಳು, ನಿಸ್ಸಾರವಾದ ಮಾತು
ಪಲ್ಲಣ-ಜೀನು
ವಲ್ಲವ-ಬಿಗುರು
ಪಲ್ಯಂಕ-ಪದ್ಮಾಸನ
ಪಸದನ-ಅಲಂಕಾರ
ಪಸರ-ಸಲಿಗೆ
ಪಸುಂಬೆ-ಹಸುಬೆ ಬೀಲ
ಪಳಿತ-ಒಂದು ಬಗೆಯ ಕಾಲಮಾನ
ಪಾಂಗು-ರೀತಿ
ಪಾಗುಡ-ಕಾಣಿಕೆ
ಪಾಟ-ಹಾಡು
ಪಾಡು-ಸ್ಥಿತಿ
ಪಾಣ್ಬ-ಜಾರ
ಪಾದರಿಗ-ಹಾದರಿಗ, ಜಾರ
ಪಾಪೆ-ಬೊಂಬೆ
ಪಾಯ್ತರು-ಹರಿದುಬರು
ಪಾರಕು-ಹಾರಕದ ಅಕ್ಕಿ
ಪಾರಾವತ-ಪಾರಿವಾಳ
ಪಾರ್ವ-ಬ್ರಾಹ್ಮಣ
ಪಾರ್ವಂತಿ-ಬ್ರಾಹ್ಮಣಿತಿ
ಪಾರಾವಾರಗ-ಪ್ರವೀಣ
ಪಾರಿಸು-ಪಾರಣೆಮಾಡು
ಪಾಲ್ಮರ-ಹಾಲು ಬರುವ ಮರ
ಪಾಷಾಣ-ಕಲ್ಲು
ಪಾಳಕಾವ್ಯ-ಗಜಶಾಸ್ತ್ರ
ಪಿಂಗು-ಹಿಂಜರಿ, ತೊಲಗು
ಪಿಡಿ-ಹೆಣ್ಣಾನೆ
ಪಿಡಿಪೆತ್ತು-ಹಿಡಿತಕ್ಕೆ ಸಿಕ್ಕಿ
ಪಿಶಿತ-ಮಾಂಸ
ಪಿಜೆ-ಹಿಂಡು
ಪೀಡನ-ಹಿಂಸೆ
ಪುಂಡರೀಕ-ಬಿಳಿಯ ತಾವರೆ
ಪುಗುಟು್ಓಡೆ-ಬೊಕ್ಕೆಯಾಗು
ಪುಡುಕೆ-ಪೆಟ್ಟಿಗೆ, ಸಂಪುಟ, ಭರಣಿ, ಬುಟ್ಟಿ
ಪುದ್ಗಲ-ಮೊಸರು, ಸಕ್ಕರೆ, ಬೆಲ್ಲ, ಅನ್ನ, ನೀರು
ಮುಂತಾದ ದ್ರವ್ಯಗಳು
ಪುನ್ನಾಗ-ಸರಗಿಯ ಮರ
ಪುರುಡು-ಸ್ಪರ್ಧೆ
ಪುರುಷವ್ರತ-ಬ್ರಹ್ಮಚರ್ಯ
ಪುರುಳಿ-ಸಾರಿಕೆ, ಹೆಣ್ಣುಗಿಳಿ
ಪುಳಿನ-ಮರಳು
ಪುಚೆತು-ಹುಳುವಾಗಿ
ಪುಳು-ಹಕ್ಕಿ
ಪುಳ್ಳಿ-ಸೌದೆ
ಪುಳುಂಗಾಱಿ-ಹಕ್ಕಿಗಳನ್ನು ಹಿಡಿಯುವವನು
ಪೂಣ್ಕೆ-ಪ್ರತಿಜ್ಞೆ
ಪೂರ-ಪ್ರವಾಹ
ಪೂರಣ-ತುಂಬುವಿಕೆ
ಪೆಂಗರು-ಒಂದು ಬಗೆಯ ದೊಡ್ಡ ಬಕಹಕ್ಕಿ
ಪೆಂಡವಾಸ-ಅಂತಃಪುರ
ಪೆಟ್ಟೆ-ಹೆಂಟೆ
ಪೆಱಿಗು-ಹಿಂದೆ
ಪೆಱಿವುಳಿ-ಬೇರೆ ಎಡೆ
ಪೆಱು-ಹೆರು, ಪಡೆ
ಪೆಱುಕು-ಹೆಕ್ಕು
ಪೇಪಂದಿ-ಹೇಲು ಹಂದಿ
ಪೇಱು-ಹೇರು, ಹೊರೆ
ಪೊಟ್ಟಳಿಗೆ-ಪೊಟ್ಟಣ
ಪೊಡೆವಡು-ನಮಸ್ಕರಿಸು
ಪೊರ್ದು-ಹೊಂದು, ಪಡೆ
ಪೊಲ್ಲದು-ಕೆಟ್ಟದು
ಪೊಲ್ಲಮೆ-ದುಷ್ಟತೆ, ಕೇಡಿಗತನ, ಹೊಲಸು,
ಹೇಸಿಗೆ
ಪೊಳಿಯಿಸು-ಹೊರಳಿಸು, ತಿರುಗಿಸು
ಪೊಬಿಲ್-ಪಟ್ಟಣ, ಪೊಟರೆ
ಪೊಬ್ತಿಡೆ, ಪೊಬ್ತಿಜು-ಹೊತ್ತಾರೆ
ಪೊಬ್ತಿ-ಚಿನ್ನ, ಚಿನ್ನದ ಪಾತ್ರೆ, ಶ್ರೇಷ್ಠ
ಪೋಡುಂಗಾಱಿ-ಕಾಡನ್ನು ಕತ್ತರಿಸುವವ

ಪ್ರಚ್ಛನ್ನ-ಮರೆಯಾದ
ಪ್ರಣವ-ಓಂಕಾರ
ಪ್ರತಿಪತ್ತಿ-ಸತ್ಕಾರ
ಪ್ರತಿಬೋಧಿಸು-ಎಚ್ಚರಿಸು, ತಿಳಿಯ ಹೇಳು
ಪ್ರತಿಮಾಯೋಗ-ಪ್ರತಿಮೆಯಂತೆ ನಿಂತು ತಪಸ್ಸುಮಾಡುವುದು
ಪ್ರತಿಮುಖ-ಮೊಗವಾಡ
ಪ್ರತೀಕಾರ-ಚಿಕಿತ್ಸೆ
ಪ್ರಮಾಣ-ಅವಧಿ, ಅಳತೆ, ಕಾರಣ
ಪ್ರಸ್ತುತ-ತಾತ್ಕಾಲಿಕ
ಪ್ರಳಾಪ-ರೋದನ
ಪ್ರಾಣಘಾತಿ-ಜೀವಹಿಂಸಕ
ಪ್ರಾಸುಕ-ಜೀವರಹಿತ, ನಿರ್ಮಲ
ಬಂದಿಸು-ವಂದಿಸು
ಬಂಬಳಂ ಬಾಡಿ- ಬಹಳ ಬಾಡಿ
ಬಗ್ಗಿಸು-ಬೈ, ವಿಧೇಯಗೊಳಿಸು
ಬಟ್ಟಾಟ-ಬಿಲ್ಲೆಯಾಟ
ಬಡ್ಡಿಸು-ಬಡಿಸು (ವರ್ಧಿಸು)
ಬಧಿರ-ಕಿವುಡ
ಬಯ್ಗಿರುಳಿನ ಜಾವ-ಮುಂಜಾನೆ
ಬರ, ಬರವು-ಆಗಮನ
ಬಱಿಸಿಡಿಲ್-ಮಳೆಯಿಲ್ಲದೆ ಬರುವ ಸಿಡಿಲು
ಬರುಂಟು-ಬೆರಳಿನಿಂದ ಚುಚ್ಚು
ಬರ್ದಿ-ನವೆದು, ಕೃಶವಾಗಿ
ಬಲಗೊಳ್-ಪ್ರದಕ್ಷಿಣೆ ಬರು
ಬಲ್ಲಾಳ್ತನ-ಬಲಾತ್ಕಾರ
ಬಲ್ಮೆ-ಪ್ರೌಢಿಮೆ
ಬಸ-ವಶ
ಬಸಮಟೆ-ಬಸವಳಿ, ವಶತಪ್ಪು, ಶಕ್ತಿ ಕುಂದು
ಬಟೆಯನಟ್ಟು-ದೂತನನ್ನು ಹೇಳಿ ಕಳುಹಿಸು
ಬಳಾಕ-ನೀರುಹಕ್ಕಿ
ಬಟ್ಟು-ಕೆಳಗೆ ಜಾರು
ಬಟೆಕ್ಕಂ-ಅನಂತರ
ಬಟೆಯನೆ-ಹಿಂದೆಯೇ
ಬಳ್ಳಿಮಾಡ-ಲತಾಗೃಹ,ಮನೆಗಳ ಸದಲು
ಬಟ್ಟೆದ-ಬದುಕಿದ, ಸತ್ತ
ಬಾಚಿಸು, ಬಾಜಿಸು-ಓದು, ಓದಿಸು
ಬಾಡು-ಕಾಯಿಪಲ್ಯ
ಬಾದಣ-ಗವಾಕ್ಷ
ಬಾರಿ-ಆನೆಗಳನ್ನು ಹಿಡಿಯಲು ಕಟ್ಟಿದ ಕೋಟೆ, ಬೋನು
ಬಾರಿಸು-ನಿವಾರಿಸು, ತಡೆ
ಬಾಲವದ್ದೆ-ಬಾಣಂತಿ
ಬಾಳ್-ಕತ್ತಿ
ಬಾಬ್,ಬಾಟೆಮೆ-ಜೀವಿಕೆ, ವೃತ್ತಿ, ಕ್ಷೇತ್ರ ಜಮೀನು
ಬಾಬ್ತಿ-ಪ್ರಯೋಜನ
ಬಾಹಲ-(ಬಾಹಟ-ವಾಗ್ಭಟ) ವೈದ್ಯಗ್ರಂಥ
ಬಿಚ್ಚಳಿಸು-ವಿಸ್ತರಿಸು, ದೊಡ್ಡದು ಮಾಡು
ಬಿಚ್ಚುವ-ಭಿಕ್ಷು, ಜೈನಯತಿ
ಬಿದಿರ್-ಕೊಡವು
ಬಿನ್ನನೆ-ಶೂನ್ಯವಾಗಿ
ಬಿಯ-ವ್ಯಯ, ವೆಚ್ಚ
ಬಿರ್ದಿ-ಮುದುಕಿ
ಬಿರ್ದು-ಔತಣ
ಬೂತು-ಭೂತ, ವ್ಯಕ್ತಿ
ಬೆಂಟೆ-ಹುಲ್ಲಿನ ಹಗ್ಗ
ಬೆಸ-ಅಪ್ಪಣೆ
ಬೆಸಕೆಯ್-ಅಪ್ಪಣೆಯಂತೆ ನಡೆ, ಸೇವೆಮಾಡು
ಬೆಸಲೆಯಾಗು-ಪ್ರಸವಿಸು
ಬೆಳ್ಕಾಡು-ನಿರ್ಜನಾರಣ್ಯ
ಬೇಗ-ಹೊತ್ತು, ಸಮಯ
ಬೇಂಟ-ಪ್ರೇಮ
ಬೈಕ-ಭಿಕ್ಷ
ಬೈಕಂಗುಳಿ-ಭಿಕ್ಷೆ ಬೇಡುವುದೇ ಶೀಲವಾಗಿರುವವನು
ಬೈಕಂದಿರಿ-ಭಿಕ್ಷೆಗಾಗಿ ತಿರುಗಾಡು
ಬೋನಮೆತ್ತು-ಭೋಜನ ಬಡಿಸು
ಬ್ರಹ್ಮಯ್ಯ-ಬ್ರಹ್ಮಚಾರಿ
ಬ್ಯಾದಿ-ವ್ಯಾಧಿ, ರೋಗ
ಭಂಡ-ವ್ಯಾಪಾರದ ಸರಕು
ಭಂಭಾ-ಒಂದು ಬಗೆಯ ಭೇರಿ
ಭಗಂದರ-ಮೂಲವ್ಯಾಧಿ
ಭರ್ತಾರ-ಗಂಡ
ಭಾಗಸ-ಭಾಗ್ಯ
ಭೂರಿ-ಅತಿಶಯ
ಮಂಡಗೆ-ಒಂದು ಭಕ್ಷ್ಯ
ಮಂಡೂಕ-ಕಪ್ಪೆ
ಮಂತಣ-ಮಂತ್ರಾಲೋಚನೆ
ಮಗುಟ್ಟು-ತಿರುಗಿ, ಮತ್ತೆ
ಮುಟ್ಟಿಗೆ-ಒಂದು ಆಯುಧ
ಮಣಿಪೇಟಕ-ರತ್ನಖಚಿತವಾದ ಗುರಾಣಿ

ಮದ್ಯಾಂಗ-ಮದ್ಯವನ್ನು ಕೊಡುವ ಕಲ್ಪವೃಕ್ಷ
ಮದಿವಳ್-ಮದುಮಗಳು, ವಿವಾಹ ಕನ್ಯೆ
ಮನ್ಯು-ದುಃಖ
ಮನೆವಾಟ್ತಿ-ಮನೆಗೆಲಸ
ಮರಮೊಗ-ಮರದ ಮೊಗವಾಡ
ಮರುಳ್ಗೊಂಡು-ಭ್ರಾಂತನಾಗಿ
ಮಱಿಲುಂದು-ಮೈಮರೆ, ನಿದ್ರಿಸು
ಮಱುಗು-ಕುದಿ
ಮಱುಭವ-ಪುನರ್ಜನ್ಮ
ಮಲಚ್ಚು-ಮಗುಚಿ ಮಲಗಿಸು
ಮಲ್ಲಲ್-ಮಣ್ಣಿನ ಸವುಟು
ಮರಕ-(ಮಶಕ) ಗುಂಗಾರು
ಮಸಗು-ಕೆರಳು
ಮಹಾವಿಭೂತಿ-ಮಹೈಶ್ವರ್ಯ
ಮಾಂಸಾಶಿ-ಮಾಂಸ ತಿನ್ನುವವ
ಮಾಡ-ಮನೆ, ಅರಮನೆಯಂತಹದು
ಮಾಣಿ-ಬಾಹ್ಮಣರ ಹುಡುಗ
ಮಾಣಿಸು-ನಿಲ್ಲಿಸು, ತಡೆ
ಮಾದುಫಲ- ಮಾದಳದ ಹಣ್ಣು
ಮಾದೆಗಿ-ಹೊಲತಿ
ಮಾನಸ-ಮನುಷ್ಯ
ಮಾಱುಗೊಳ್-ಬೆಲೆಗೆ ಕೊಳ್ಳು
ಮಾಱುಲಿ-ಪ್ರತಿಧ್ವನಿ
ಮಾರ್ಕೊಳ್-ಪ್ರತಿಭಟಿಸು, ಮೀರು
ಮಿಕ್ಕ-ಶ್ರೇಷ್ಠವಾದ
ಮಿಸಿಸು-ಮೀಯಿಸು
ಮೀಂಗುಲಿಗ-ಬೆಸ್ತ
ಮುಂಗುರಿ-ಮುಂಗುಸಿ
ಮುಂಜಿಗಟ್ಟು-ಉಪನಯನ ಮಾಡು
ಮುಕುಂದ-ಮದ್ದಳೆ
ಮುಟ್ಟಿಗೆ-ಕೊಡತಿ
ಮುಟ್ಟು-ಉಪಕರಣ
ಮುಡಿಪು-ಸಾಯು
ಮುನ್ನ-ಮೊದಲು
ಮೃತಕ-ಹೆಣ
ಮೆಯ್ಗಾಪು-ಅಂಗರಕ್ಷಣೆ
ಮೇಲ್ಕೊಳ್-ಧರಿಸು
ಮೊಟ್ಟಯಿಸು-ಎದುರಿಸು, ಪ್ರತಿಭಟಿಸು
ಮೊಱೆ-ನಂಟತನ, ಸಂಬಂಧ
ಮೋದಗೆ-ಕಡುಬು
ಮೋನ-ಮೌನ
ಮೋಹಿಸು-ಮೂರ್ಛೆಯುಂಟುಮಾಡು
ಯಮ-ಇಂದ್ರಿಯ ನಿಗ್ರಹ
ಯಮ್ಮ-ಕೋಲು, ದೊಣ್ಣೆ
ಯಾವಜ್ಜೀವ-ಜೀವವಿರುವವರೆಗೆ (ಜಾವಜ್ಜೀವ ಎಂತಲೂ ಇದೆ)
ಯೂಥ-ಹಿಂಡು
ಯೋಷಿದ್-ಹೆಂಗುಸು
ರತಿ-ಆಸಕ್ತಿ
ರಾಗ-ಕೆಂಪು, ಪ್ರೀತಿ
ರೂಕ್ಷ-ಒರಟು
ಲಂಗಿಗ-ಡೊಂಬರಾಟದವನು
ಲಾವಣಿಗೆ-ಉಪ್ಪಿನಕಾಯಿ
ಲುಂದು-ಮಲಗು, ನಿದ್ರಿಸು
ಲೋಗಾಣಿ-ಲೋಕಾಕಾರವನ್ನು ತಿಳಿಸುವ ಗ್ರಂಥ
ಲೋಚು-ಕೂದಲನ್ನು ಕೀಳುವಿಕೆ
ಲೆಪ್ಪ-ಮಯಣ, ಲೇಪ್ಯವಸ್ತು
ವಂಶ-ಕೊಳಲು; ಬಿದಿರು
ವಕ್ಕಾಣಿಸು-ವ್ಯಾಖ್ಯಾನಮಾಡು
ವಪು-ಶರೀರ
ವರಿಸು-ಬರಮಾಡು(ಬರಿಸು)
ವಶಗಾ-ವಶವಾಗಿರುವವಳು
ವಸುಮತಿ-ನೆಲ, ರಾಜ್ಯ
ವಾದುಗೆಯ್-ವಾದಮಾಡು
ವಾಸಿಸು-ವಾಸನೆ ಕಟ್ಟು
ವಿಕಳ-ವ್ಯಥೆಗೊಂಡ
ವಿಗ್ರಹ-ಯುದ್ಧ
ವಿಗುರ್ವಿಸು-ಮಾಯೆಯಿಂದ ಸೃಷ್ಟಿಸು
ವಿಜಾತಿ-ಕುಲವಿಲ್ಲದವನು
ವಿದಾರಿಸು-ಸೀಳು
ವಿದ್ಯಾಧರಕರಣ-ವಿದ್ಯಾಧರ ವಿದ್ಯೆ
ವಿಪಾಟಿತ-ಸೀಳಿದ
ವಿಭೀಷಣ-ಅತಿಭಯಂಕರ
ವಿಭೂತಿ-ಐಶ್ವರ್ಯ
ವಿಮಾನ-ಆಕಾಶಯಾನ, ಏಳು ಅಂತಸ್ತಿನ ಅರಮನೆ, ಮಂಟಪ (ಶವಮಂಟಪ)
ವಿಶೋಧಿ-ನೈರ್ಮಲ್ಯ
ವಿಷಯ-ದೇಶ
ವೀಚೀಮರಣ-ಕ್ಷಿಪ್ರಮರಣ
ವೈಯಾಪೃತ್ಯಉಪಚಾರ ; ಚಿಕಿತ್ಸೆ
ವ್ಯಾವರ್ಣಿಸು - ವಿಸ್ತಾರವಾಗಿ ವರ್ಣಿಸು
ವ್ಯಾಳ-ತುಂಟಾಟಮಾಡುವ

ವೇಡಿ-ಬಯಸಿ, ಉದ್ದೇಶಿಸಿ
ಶಾಕಟಿಕ-ಸರಕು ಬಂಡಿಯುಳ್ಳವನು
ಶಾಲಿಹೋತ್ರ-ಅಶ್ವಶಾಸ್ತ್ರ
ಶಿವಸುಖಿ-ಮಂಗಳಕರ ಸುಖ
ಶೀಕರ-ತುಂತುರುಹನಿ
ಶೂಲ-ನೋವು, ಶೂಲೆ
ಶ್ರಾವಕ-ಜೈನಗೃಹಸ್ಥ
ಶ್ರುತ-ಜ್ಞಾನ ; ಶಾಸ್ತ್ರ
ಶ್ರುತಕೇವಲ-ಜೈನಾಗಮದಲ್ಲಿ ಪೂರ್ಣ ಜ್ಞಾನವುಳ್ಳವ
ಸಂಗಾಣಿ-ಸಪ್ತ ಪದಾರ್ಥಗಳ ಸ್ವರೂಪ ನಿರೂಪಣ ಗ್ರಂಥ
ಸಘಾಂತ-ಸಮೂಹ
ಸಂಛನ್ನ-ದಟ್ಟವಾದ
ಸಂತಂ-ಶಾಂತವಾಗಿ ; ಸಮಾಧಾನವಾಗಿ
ಸಂಬಂಳ-ಬುತ್ತಿ
ಸಗರ್ಭವಚನ-ಅಂತರಾರ್ಥವುಳ್ಳ ಮಾತು
ಸಪ್ತದಳಪ್ರಾಸಾದ-ಏಳು ಉಪ್ಪರಿಗೆಯುಳ್ಳ ಅರಮನೆ
ಸಮನಿಸು-ಒದಗು
ಸಮಂತು-ಚೆನ್ನಾಗಿ
ಸಮಯ-ಮತಧರ್ಮ, ಸಂಪ್ರದಾಯ
ಸಮವಸರಣ-ಜಿನೇಂದ್ರರ ಉಪದೇಶ ಸಭೆ
ಸಮೆ-ಮಾಡು, ಮುಗಿಸು
ಸಮ್ಯಕ್ತ್ವ-ಜೈನತತ್ವದಲ್ಲಿ ನಂಬಿಕೆ, ತಿಳಿವಳಿಕೆ ಮತ್ತು ಆಚರಣೆ
ಸಯಿಸತ್ತಮ-ಅತ್ಯಂತ ಶ್ರೇಷ್ಠ
ಸಯ್ದು-ನೇರವಾಗಿ
ಸರವಣ-ಜೊಂಡುಹುಲ್ಲು
ಸರುಸಪ (ಸರ್ಷಪ)-ಸಾಸವೆ
ಸರ್ವಾರ್ಥಸಿದ್ಧಿ-ಒಂದು ಸ್ವರ್ಗದ ಹೆಸರು
ಸಲವಣರಸಮಂಭ-ಉಪ್ಪುನೀರು
ಸವಣ(ಶ್ರಮಣ)-ಜೈನಯತಿ
ಸಹಕಾರ-ಸಿಹಿಮಾವು
ಸಸ್ಯ (ಶಸ್ಯ)-ಒಂದು ಬಗೆಯ ರತ್ನ
ಸಾಗರ - ಒಂದು ದೊಡ್ಡ ಸಂಖ್ಯೆ (೧೦ ಕೋಟಿ x ೧ ಕೋಟಿ ಪಲ್ಯಗಳು)
ಸಾರ-ಬೆಲೆ
ಸಾರೆ-ಸಮೀಪ
ಸಾರ್ಬು-ಹತ್ತಿರ ಹೋಗು, ಹತ್ತಿರಕ್ಕೆ ಸೇರಿಸು
ಸಾರ್ಥಾಧಿಪತಿ-ಬೆಲೆಬಾಳುವ ಸರಕಿನ ಬಂಡಿಗಳ ಶ್ರೇಣಿಗೆ ಒಡೆಯ
ಸಾಲಿಗ-ನೇಕಾರ
ಸಿಗ್ಗು-ನಾಚಿಕೆ
ಸಿತಾತಪತ್ರ-ಬಿಳಿಯ ಕೊಡೆ
ಸಿದ್ಧಕೂಟ-ಸಿದ್ಧರಿರುವ ಪರ್ವತ
ಸಿದ್ಧಸೇಸೆ-ಸಿದ್ಧರನ್ನು ಅರ್ಚಿಸಿದ ಅಕ್ಷತೆ
ಸಿದ್ಧಾಯತನ-ಸಿದ್ಧರ ಕ್ಷೇತ್ರ
ಸಿದ್ಧಾರ್ಥ-ಬಿಳಿಸಾಸಿವೆ
ಸಿಬಿಗೆ, ಶಿಬಿಕೆ-ಪಲ್ಲಕ್ಕಿ
ಸೀಂಟು-ಅಳಿಸು, ಒರಸು
ಸೀಗುರಿ-ಒಂದು ಬಗೆಯ ಕೊಡೆ
ಸೀರ್ನಾಯ್-ಕಾಡುನಾಯಿ, ನೀರುನಾಯಿ
ಸುಭದ್ರೆ-ಆನೆಗಳಲ್ಲಿ ಉತ್ಕೃಷ್ಟವಾದ ಒಂದು ತಳಿ
ಸುರಿಗೆ(ಸುರಿಕಾ)-ಕತ್ತಿ
ಸುವರ್ಣಕಾರ-ಅಕ್ಕಸಾಲಿ
ಸೂರುಳ್-ಪ್ರತಿಜ್ಞೆ
ಸೂಳೆ-ದಾಸಿ
ಸೆಂಡು-ಚೆಂಡು
ಸೆಟ್ಟೆ-ಹೆಂಟೆ
ಸೆಡೆ-ಮುರುಟು
ಸೇದ-ಅಯಾಸ
ಸೇಸೆ-ಮಂತ್ರಾಕ್ಷತೆ
ಸೊಡರು-ದೀಪ
ಸೋಂಕಿಲ್-ಉಡಿ
ಸೋದಿಗೆ-ಗೋಧಿಯಿಂದ ಮಾಡಿದ ಒಂದು ಭಕ್ಷ್ಯ
ಸ್ಕಂದ-ಹೆಗಲು
ಸ್ತಂಭಿನಿ-ಗತಿನಿರೋಧ
ಸ್ವಾಧ್ಯಾಯ-ಅಭ್ಯಾಸ ;ಓದು
ಸರ್ಣ್ವಪಾಷಾಣ-ಚಿನ್ನವಿರುವ ಕಲ್ಲು, ಚಿನ್ನದ ಅದಿರು
ಸ್ಫೂರ್ಜತ್-ಪ್ರಕಾಶಮಾನ
ಹರಿಚಂದನ-ಶ್ರೀಗಂಧ
ಹಸ್ತ-ಮೊಳ
ಹಾನಿತ-ವೈದ್ಯಶಾಸ್ತ್ರ
ಹ್ರೀ-ಲಜ್ಜೆ
ಹೇಮ-ಚಿನ್ನ



ಕನ್ನಡ ಸಾಹಿತ್ಯ ಪರಿಷತ್ತಿನಿಂದ
ಮರುಮುದ್ರಣಗೊಳ್ಳುತ್ತಿರುವ ಮತ್ತು ಹೊಸದಾಗಿ
ಮುದ್ರಿತವಾಗುತ್ತಿರುವ ವಿವಿಧ ಪ್ರಕಾರಗಳ
ಪುಸ್ತಕಗಳನ್ನು ಸಹೃದಯರು ಮೆಚ್ಚಿ ಸ್ವೀಕರಿಸಲು
ಯೋಗ್ಯವಾಗುವಂತೆ ಆಕರ್ಷಕ ವಿನ್ಯಾಸಗಳಲ್ಲಿ
ಸಿದ್ಧಪಡಿಸಿದ ಮೇಲೆ ಅವುಗಳ ಮಾರಾಟದ ಪ್ರಮಾಣ
ಹೆಚ್ಚುತ್ತಿರುವುದನ್ನು ಕಂಡು ನನಗೆ ಸಂತೋಷವಾಗಿದೆ.
ಓದುಗರು ಬಯಸುವ ಪುಸ್ತಕಗಳನ್ನು ಅವರ ಕೈಗೆ
ತಲಪುವಂತೆ ಮಾಡುವುದೇ ಪುಸ್ತಕೋದ್ಯಮದ
ಪ್ರಾಥಮಿಕ ಆಶಯ.

ಈ ಉದ್ಯಮವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ,
ಕಾಲಕಾಲಕ್ಕೆ ಬದಲಾಗುತ್ತಿರುವ ಓದುಗರ ಅಭಿರುಚಿಗೆ
ಸ್ಪಂದಿಸುತ್ತ, ಆ ಕ್ಷೇತ್ರದಲ್ಲಿ ಬಹುವೇಗವಾಗಿ
ಸಾಗುತ್ತಿರುವ ಪ್ರಕಾಶಕರ ನಡುವೆ ಕನ್ನಡ ಸರಸ್ವತಿಯ
ಆರಾಧನೆ ಮಾಡುತ್ತಿದ್ದೇವೆಂದು ಭಾವಿಸುವುದರ
ಜೊತೆಗೆ ಹೊಸಕಾಲದ ಅಗತ್ಯಕ್ಕೆ ಅನುಗುಣವಾಗಿ
ಬದಲಾಗುವುದೇ ಜೀವಂತಿಕೆಯ ಲಕ್ಷಣ ಎಂದು
ಕನ್ನಡ ಸಾಹಿತ್ಯ ಪರಿಷತ್ತು ಪರಿಗಣಿಸಿದೆ.

ಪುಂಡಲೀಕ ಹಾಲಂಬಿ
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦೦೧೮

ರೂ. ೧೪೦/-